ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

(B) 025218

ಅಧಿಕೃತ ವರದಿ

OFFICIAL REPORT

ಹತ್ತನೆಯ ವಿಧಾನಸಭೆಯ ಎಂಟನೇಯ ಅಧಿವೇಶನ

EIGHTH SESSION OF THE TENTH ASSEMBLY

ಸಂಪುಟ ೩ (ಕ್ರಮಾಂಕ ೧ ರಿಂದ ೫)

Volume 3 (No. 1 to 5)

(೨೪ನೇ ಮಾರ್ಚ್ ೧೯೯೯ ರಿಂದ ೨೭ನೇ ಮಾರ್ಚ್ ೧೯೯೯ ಹಾಗೂ ೩೦ನೇ ಮಾರ್ಚ್)

(24th March 1999 to 27th March 1999 and 30th March 1999)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ ಬೆಂಗಳೂರು

arnataka Legislature Secretariat, Bangalore

CONTENTS TO THE

KARNATAKA LEGISLATIVE ASSEMBLY DEBATES

ವಿಷಯಾನುಕ್ರಮಣಿಕೆ

(೨೪ನೇ ಮಾರ್ಚ್ ೧೯೯೯ ರಿಂದ ೨೭ನೇ ಮಾರ್ಚ್ ೧೯೯೯ ಹಾಗೂ ೩೦ನೇ ಮಾರ್ಚ್ ೧೯೯೯)

ಬುಧವಾರ, ೨೪ನೇ ಮಾರ್ಚ್ ೧೯೯೯

1. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರ. .... ೧..೪೩

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. .... ೪೩..೧೦೫

2. ವರದಿಯನ್ನೊಪ್ಪಿಸುವುದು

3. ಅಧ್ಯಕ್ಷರ ಅಪ್ಪಣೆ ಮೇರೆಗೆ :

ಅ) ಕುಣಿಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ .... ೧೦೫..೧೦೫
— ಶ್ರೀ ಎಸ್.ಪಿ. ಮುದ್ದಹನುಮೇಗೌಡ

ಆ) ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ .... ೧೦೬..೧೦೭
— ಶ್ರೀ ಯು.ಜಿ. ಬಣಕಾರ್

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅನಾಥಾಶ್ರಮಗಳಿಗೆ ಅನುದಾನ ಬಿಡುಗಡೆ .... ೧೦೮..೧೦೮
— ಶ್ರೀ ಎನ್. ಯೋಗೀಶ್ ಭಟ್

ಈ) ಮಂಗಳೂರು ತಾಲ್ಲೂಕಿನಲ್ಲಿ ಅನಧಿಕೃತ ಮನೆ ಹೊಂದಿದವರಿಗೆ ಹಕ್ಕು ಪತ್ರ ನೀಡುವುದು .... ೧೦೮..೧೧೦
— ಶ್ರೀ ಕೆ. ಜಯರಾಮಶೆಟ್ಟಿ

ಉ) ಪುತ್ತೂರು ಪುರಸಭೆಯ ಮುಖ್ಯ ಅಧಿಕಾರಿಯಿಂದ ನಡೆದಿರುವ ಅವ್ಯವಹಾರ .... ೧೧೦..೧೧೧
— ಶ್ರೀ ಡಿ.ವಿ. ಸದಾನಂದಗೌಡ

ಊ) ವಿಟ್ಲನಗರ ಪಂಚಾಯತಿ ಪ್ರದೇಶಗಳಲ್ಲಿ ಕುಡಿಯುವ .... ೧೧೧..೧೧೨
ನೀರಿನ ತೊಂದರೆ

— ಶ್ರೀ ಎ. ರುಕ್ಮಯ್ಯ ಪೂಜಾರಿ

ಎ) ಮೈಸೂರು ನಗರದಲ್ಲಿ ಗೋಪಾಲಕೃಷ್ಣ ಎನ್ನುವರ .... ೧೧೨..೧೧೪
ಮೇಲೆ ಸುಳ್ಳು ಕೇಸನ್ನು ದಾಖಲು ಮಾಡಿರುವುದು

— ಶ್ರೀ ಇ. ಮಾರುತಿರಾವ್ ಪವಾರ್

ಏ) ಹುಬ್ಬಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ .... ೧೧೪..೧೧೫
ಮುದ್ರಣಾಯದ ಕುರಿತು

— ಶ್ರೀ ಜಗದೀಶ್ ಶೆಟ್ಟರ್

ಐ) ಹುಬ್ಬಳ್ಳಿ-ಧಾರವಾಡ ನಗರಕ್ಕೆ ಕೊಡುವಂಥ ಆಕ್ಟ್ರಾಯ್.... ೧೧೫..೧೧೬
ಗ್ರಾಂಟನ್ನು ಇನ್ನು ಬಿಡುಗಡೆ ಮಾಡದಿರುವುದು

— ಶ್ರೀ ಅಶೋಕ್ ಖಾಟ್ವೆ

ಒ) ಹಾಸನ ಜಿಲ್ಲಾ ಉಸ್ತುವಾರಿ ಸಚಿವರ .... ೧೧೬..೧೧೯
ಗೈರುಹಾಜರಿ ಬಗ್ಗೆ

— ಶ್ರೀ ಬಿ.ಬಿ. ಶಿವಪ್ಪ

ಓ) ಆಳಂದ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ .... ೧೧೯..೧೨೦
ಫ್ಲೋರೈಡ್ ಅಂಶ ಜಾಸ್ತಿ ಇರುವ ಬಗ್ಗೆ

— ಶ್ರೀ ಶುಭಾಶ್ ರುಕ್ಮಯ್ಯ ಗುತ್ತೇದಾರ್

ಔ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ .... ೧೨೦..೧೨೧
ದರ್ಶನಪೂಜ್ಯರ ಹಣ ನೀಡಿದ ರೈತರನ್ನು
ಕರೆದುಕೊಂಡು ಹೋಗದೇ ಇರುವ ಬಗ್ಗೆ

— ಶ್ರೀ ಕೆ. ವಿಶ್ವೇಶ್ವರ ಹೆಗಡೆ

ಅಂ) ಉರ್ದು ಪತ್ರಿಕೆಗಳಿಗೆ ಜಾಹೀರಾತು ನೀಡುವ ಬಗ್ಗೆ .... ೧೨೧..೧೨೨

— ಶ್ರೀ ಸೈಯದ್ ಜುಲ್ಫಿಕರ್ ಹುಸ್ಸೆ

ಅಃ) ಹಾಸ್ಟಾಮ್ಸ್‌ನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ .... ೧೨೩..೧೨೫

— ಶ್ರೀ ಜಿ.ವಿ. ಶ್ರೀರಾಮರೆಡ್ಡಿ

— ಶ್ರೀ ವಾಟಾಳ್ ನಾಗರಾಜ್

ಕ) ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಚುನಾವಣೆ ಬಗ್ಗೆ .... ೧೨೯..೧೩೧

— ಶ್ರೀ ಬಿ.ಆರ್ ಯಾವಗಲ್

ಖ) ಕರ್ನಾಟಕ - ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಪಟ್ಟಂತೆ ಮಹಾಜನ್ ವರದಿ ಜಾರಿ ಗೊಳಿಸಲು ಒತ್ತಾಯ .... ೧೩೧..೧೩೭

— ಶ್ರೀ ವಾಟಾಳ್ ನಾಗರಾಜ್

— ಶ್ರೀ ಬಿ.ಎಸ್. ಯಡಿಯೂರಪ್ಪ

— ಶ್ರೀ ನಾರಾಯಣರಾವ್ ತರಳೆ

— ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

— ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು)

4. ಮಂತ್ರಿಗಳ ಹೇಳಿಕೆ

ದಿನಗೂಲಿ ನೌಕರರ ಮುಷ್ಕರದ ಬಗ್ಗೆ .... ೧೩೭..೧೩೯

— ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು)

5. ವಿತ್ತೀಯ ಕಾರ್ಯ ಕಲಾಪ

1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದು) .... ೧೩೯..೧೭೫

— ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

— ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ)

6. ಅಧ್ಯಕ್ಷರ ಅನುಮತಿ ಮೇರೆಗೆ

ವಿಷಯ: ಬೆಂಗಳೂರ್ - ಸೀಮೆನ ಕ್ಯಾಬಿನೆಟ್ ನೋಟುಗಳ ಬಗ್ಗೆ .... ೧೭೫..೧೮೩

— ಶ್ರೀ ಹೆಚ್.ಎನ್. ನಂಜೇಗೌಡ

7. ವಿತ್ತೀಯ ಕಾರ್ಯಕಲಾಪ

1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ .... ೧೮೩...೨೩೨

— ಶ್ರೀ ಎಸ್. ಸುರೇಶ್‌ಕುಮಾರ್

ಗುರುವಾರ, ೨೫ನೇ ಮಾರ್ಚ್ ೧೯೯೯

1. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. .... ೨೩೩..೨೭೫

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. .... ೨೭೫..೩೨೬

2. ಅಧ್ಯಕ್ಷರ ಅಪ್ಪಣೆ ಮೇರೆಗೆ :

ಅ) ಗಡಿನಾಡು ಕನ್ನಡಿಗರಿಗೆ ಅಧ್ಯಾಪಕರ ಹುದ್ದೆಗೆ ಸಿಂಧುತ್ವ ಪತ್ರ ನೀಡುವ ಬಗ್ಗೆ .... ೩೨೬..೩೨೭

— ಶ್ರೀ ಕೆ. ಜಯರಾಮಶೆಟ್ಟಿ

ಆ) ಹ್ಯಾಮ್ಲೆಟ್ ಯೋಜನೆಯಡಿಯಲ್ಲಿ ವಿದ್ಯುದ್ದೀಕರಣ ಕಾಮಗಾರಿ .... ೩೨೭..೩೨೮

— ಶ್ರೀ ಡಿ.ವಿ. ಸದಾನಂದಗೌಡ

ಇ) ಕಮಾಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳ ಡಾಂಬರೀಕರಣ .... ೩೨೮..೩೨೯

— ಶ್ರೀ ರೇವುನಾಯಕ್ ಬೆಳಮಾಗಿ

ಈ) ಸಿರಸಿಯಲ್ಲಿ ದರೋಡೆ, ಕೊಲೆ ಪ್ರಕರಣಗಳನ್ನು ತಡೆಗಟ್ಟಿರುವ ಬಗ್ಗೆ .... ೩೨೯..೩೩೦

— ಶ್ರೀ ಕೆ. ವಿಶ್ವೇಶ್ವರ ಹೆಗಡೆ

ಉ) ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಮಹಾನಗರ ಪಾಲಿಕೆಯವರು ಗುಡಿಸಲುಗಳನ್ನು ಕೆಡುವುತ್ತಿರುವುದು .... ೩೩೧..೩೩೧

— ಶ್ರೀ ಇ. ಮಾರುತಿರಾವ್ ಪವಾರ್

ಊ) ಆಶ್ರಯ ಸಮಿತಿ ಸದಸ್ಯರುಗಳಿಗೆ ದಿನಾಪ್ರಯಾಣ ಭತ್ಯೆ ನೀಡುವ ಬಗ್ಗೆ .... ೩೩೨..೩೩೨

— ಶ್ರೀ ಜೆ.ಸಿ. ಮಾಧುಸ್ವಾಮಿ

ಋ) ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ .... ೩೩೨..೩೩೩

— ಶ್ರೀ ಸುಮ್ಮದ್ ಖಂಡ್ರೀಕರ್ ಹುಮ್ನಾ

ಎ) ಕೆ.ಜಿ.ಎಫ್.ನಲ್ಲಿರುವ ಸುಭಾಷಿಣಿ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲರನ್ನು ಸಸ್ಪೆಂಡ್ ಮಾಡಿರುವುದು ..... ೩೩೩...೩೩೪

— ಶ್ರೀ ಎಸ್. ರಾಜೇಂದ್ರನ್

ಏ) ಮೈಸೂರು ವಲಯದಲ್ಲಿ ನಿರ್ಮಿಸಿರುವ ಜಾಕಿ ಸಾಗಾಣಿಕಾ ಕೇಂದ್ರಗಳನ್ನು ಉಪಯೋಗ ಮಾಡಿಕೊಳ್ಳುವುದು ..... ೩೩೪...೩೩೬

— ಶ್ರೀ ಎಸ್.ಪಿ. ಮುದ್ದಹನುಮೇಗೌಡ

ಐ) ಟಿಪ್ಪು ಸುಲ್ತಾನ್ ಮರಿಮಗನ ವಿಚಾರದ ಬಗ್ಗೆ ..... ೩೩೬...೩೩೭

— ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ

ಒ) ಮೈಸೂರಿನಲ್ಲಿ ಪೋಲೀಸರ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿರುವುದು ..... ೩೩೭...೩೪೬

— ಶ್ರೀ ಕೆ.ಎಸ್. ಈಶ್ವರಪ್ಪ

— ಶ್ರೀ ಹೆ.ಚ್.ಎಸ್. ಶಂಕರಲಿಂಗೇಗೌಡ

— ಶ್ರೀ ಇ. ಮಾರುತಿರಾವ್ ಪವಾರ್

— ಶ್ರೀ ಪಿ.ಜಿ.ಆರ್. ಸಿಂಧ್ಯಾ
(ಗೃಹ ಸಚಿವರು)

ಓ) ಶಿರಾ ಪಟ್ಟಣದಲ್ಲಿ ಶೇಂಗಾ ಬೆಲೆ ವ್ಯತ್ಯಾಸದಿಂದ ಉಂಟಾದ ಗಲಭೆಯಲ್ಲಿ ಮೃತಪಟ್ಟ ಕುಟುಂಬದವರಿಗೆ ಪರಿಹಾರ ..... ೩೪೬...೩೪೭

— ಶ್ರೀ ಆರಗ ಜ್ಞಾನೇಂದ್ರ

ಅಂ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೇಳು ಅನಾಥಾಶ್ರಮಗಳಿಗೆ ಅನುದಾನ ಬಿಡುಗಡೆ ಮಾಡದಿರುವುದು ..... ೩೪೮..೩೪೮

— ಶ್ರೀ ಎನ್. ಯೋಗೀಶ್ ಭಟ್

ಕ) ಬಿಂಬೋಳಿ ಕ್ಷೇತ್ರದಲ್ಲಿ ತೊಗರಿ ಬೆಳೆ ಹಾನಿಯಿಂದ ಹಾನಿಗೊಳಗಾದವರಿಗೆ ಪರಿಹಾರ ಕೊಡಿಸಲೆಂದು ನಿರ್ಣಯ ತೆಗೆದುಕೊಳ್ಳಲು ಇನ್ನೂ ಆಗುವುದು ..... ೩೪೯..೩೪೯

— ಶ್ರೀ ವೆಂಕಪ್ಪ ನಾಯಕ್

ಖ) ಕಾಪುವಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ .... ೩೪೯..೩೫೦
ಮಾನ್ಯತೆಯನ್ನು ರದ್ದುಗೊಳಿಸಬಾರದೆಂಬ ಬಗ್ಗೆ

— ಶ್ರೀ ವಸಂತ ವಿ. ಸಾಲಿಯಾನ

ಗ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಚಿಪ್ಪನ್ನು .... ೩೫೦..೩೫೧
ತೆಗೆಯುವ ಗತ್ತಿಗೆಯನ್ನು ಮುಂದುವರಿಸುವ ಬಗ್ಗೆ

— ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ

ಚ) ಸಜಿಪ-ಹುನ್ನೂರು ಏತನೀರಾವರಿ ಯೋಜನೆ .... ೩೫೧..೩೫೧

— ಶ್ರೀ ಎ. ರುಕ್ಕಯ್ಯ ಪೂಜಾರಿ

ಜ) ಕಾನ್ಸರ್, ಹೃದ್ರೋಗ ಚಿಕಿತ್ಸೆ ಮತ್ತು ಕಿಡ್ನಿ .... ೩೫೨..೩೫೨
ಫೇಲಾದಂತಹ ರೋಗಿಗಳಿಗೆ ಮುಖ್ಯಮಂತ್ರಿಗಳ
ಪರಿಹಾರ ನಿಧಿಯಿಂದ ಸಹಾಯಧನ

— ಶ್ರೀ ಕೆ.ಎಸ್. ಪುಟ್ಟಣ್ಣಯ್ಯ

ಞ) ರಾಯಚೂರು ಉಪ - ವಿಭಾಗದ ಲೋಕೋಪಯೋಗಿ.... ೩೫೩...೩೫೭
ಇಲಾಖೆಯಲ್ಲಿ ಕೆಲಸ ಸ್ಥಗಿತಗೊಂಡಿರುವುದು

— ಶ್ರೀ ಜಿ.ವಿ. ಶ್ರೀರಾಮರೆಡ್ಡಿ

ಟ) ಚಾಮರಾಜನಗರ - ಪುಣಜೂರು ರಸ್ತೆಯ ದುರಸ್ತಿ .... ೩೫೭...೩೬೦

— ಶ್ರೀ ವಾಟಾಳ್ ನಾಗರಾಜ್

ಠ) ಹುಣಸೂರು ಕ್ಷೇತ್ರದಲ್ಲಿ ಹೊಗೇಸೊಪ್ಪಿನ .... ೩೬೦..೩೬೩
ಬೆಳೆಗಾರರ ಸಮಸ್ಯೆ ಬಗ್ಗೆ

— ಶ್ರೀ ಜಿ.ಟಿ. ದೇವೇಗೌಡ

ಡ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ .... ೩೬೩...೩೭೧
ಹೆಚ್ಚಿನ ಅನುದಾನ ನೀಡುವ ಬಗ್ಗೆ

— ಶ್ರೀ ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

— ಶ್ರೀ ಸಿದ್ಧರಾಮಯ್ಯ
(ಉಪ ಮುಖ್ಯಮಂತ್ರಿಗಳು)

— ಶ್ರೀ ಬಿ. ಸೋಮಶೇಖರ್
ಕಂದಾಯ ಸಚಿವರು)

3. <u>ಸಚಿವರಿಂದ ಹೇಳಿಕೆ :</u>

ವಿಷಯ : ಉಳ್ಳಾಳ ಕ್ಷೇತ್ರದಲ್ಲಿ ಮನೆ ನಿವೇಶನ ಹೊಂದಿರುವವರಿಗೆ ಹಕ್ಕು ಪತ್ರ ನೀಡುವ ಬಗ್ಗೆ .... ೩೭೨..೩೭೪

— ಶ್ರೀ ಬಿ. ಸೋಮಶೇಖರ್
ಕಂದಾಯ ಸಚಿವರು)

4. <u>ಅಧ್ಯಕ್ಷರ ಅಪ್ಪಣೆ ಮೇರೆಗೆ :</u>

ವಿಷಯ : ಬೆಂಗಳೂರು ಜಲ ಮಂಡಳಿ ವಿಚಾರ (ಬೈವಾಟರ್ ಕಂಪನಿಗೆ ಸಂಬಂಧಿಸಿದಂತೆ) .... ೩೭೪..೩೭೬

5. <u>ವಿತ್ತೀಯ ಕಾರ್ಯಕಲಾಪ :—</u>

1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ ಮುಂದುವರಿದುದು. .... ೩೭೬..೪೬೦

— ಶ್ರೀ ಜೆ.ಎ. ಫರ್ನಾಂಡೀಸ್
— ಶ್ರೀ ಎಂ.ವೈ ಘೋರ್ಪಡೆ
— ಶ್ರೀ ಹೆಚ್.ಡಿ. ಬಸವರಾಜ್
— ಶ್ರೀ ಜಿ.ವಿ. ಶ್ರೀರಾಮರೆಡ್ಡಿ
— ಶ್ರೀ ಸಯ್ಯದ್ ಜುಲ್ಫೀಕರ್ ಹುಸ್ಮಿ
— ಶ್ರೀ ಎನ್. ರಾಜಣ್ಣ

ಶುಕ್ರವಾರ, ೨೬ನೇ ಮಾರ್ಚ್ ೧೯೯೯

1. <u>ಪ್ರಶ್ನೋತ್ತರ</u>

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. .... ೪೬೧..೪೯೦

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. .... ೪೯೧..೫೬೦

2. <u>ಅಧ್ಯಕ್ಷರ ಅಪ್ಪಣೆ ಮೇರೆಗೆ :</u>

ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿ ಶಿಕ್ಷಕರ ಕೊರತೆ .... ೫೬೦..೫೬೧

— ಶ್ರೀ ಎಸ್.ಪಿ. ಮುದ್ದಹನುಮೇಗೌಡ

ಆ) ಸುರತ್ಕಲ್ ಕ್ಷೇತ್ರದ ಪಿಲಿಕುಳ ಎಂಬ ನಿಸರ್ಗ ಧಾಮ ಕುರಿತು .... ೫೬೧..೫೬೨

— ಶ್ರೀ ಕುಂಬ್ಳೆ ಸುಂದರರಾವ್

ಇ) ರಾಜ್ಯದಲ್ಲಿ ಲಿಕ್ಕರ್ ಮಾರುವುದರ ಕುರಿತು .... ೫೬೨..೫೬೪

— ಶ್ರೀ ಜೆ.ಸಿ. ಮಾಧುಸ್ವಾಮಿ

ಈ) ಹೊನ್ನಾವರ ಪಟ್ಟಣ ಪಂಚಾಯಿತಿ ಗೋಕರ್ಣ ಪತ್ತೆಗಾಳಿಮಠ ದೇವಸ್ಥನದಿಂದ ಭೂಸ್ವಾಧೀನಪಡಿಸಿಕೊಂಡಿರುವುದು .... ೫೬೪..೫೬೬

— ಡಾ : ಎಂ.ಪಿ. ಕರ್ಕಿ

ಉ) ಕುದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ಉಚ್ಚನ್ಯಾಯಾಲಯದ ಆದೇಶದ ಉಲ್ಲಂಘನೆ .... ೫೬೬..೫೬೯

— ಶ್ರೀ ಯು.ಬಿ. ಬಣಕಾರ್

ಊ) ಉಳ್ಳಾಲ ಕ್ಷೇತ್ರಕ್ಕೆ ಮೂಲಭೂತ ಸೌಲಭ್ಯ .... ೫೬೯..೫೭೧

— ಶ್ರೀ ಕೆ. ಜಯರಾಮಶೆಟ್ಟಿ

ಎ) ಬಿಜಾಪುರದಲ್ಲಿ ಕೇಂದ್ರಿಯ ಮಹಾವಿದ್ಯಾಲಯ .... ೫೭೧..೫೭೩

— ಶ್ರೀ ಶಿವಾನಂದ ಸಿದ್ಧರಾಮಪ್ಪ ಪಾಟೀಲ್

ಏ) ಬೆಂಗಳೂರು ದಕ್ಷಿಣ ಭಾಗದಲ್ಲಿ ಸರ್ವೆ ನಂ: 29ರಲ್ಲಿ ಅಟ್ಲಾಂಟಿಕ್ ಗ್ರೂಪ್ ಆಫ್ ಕಂಪನಿಗೆ ಜೆಲ್ಲಿ ತೆಗೆಯುವುದಕ್ಕೆ ಸರ್ಕಾರ ಅವಕಾಶ ಕಲ್ಪಿಸಿರುವುದು. .... ೫೭೩..೫೭೪

— ಶ್ರೀ ಬಿ.ಬಿ. ಶಿವಪ್ಪ

ಐ) ಮಂಗಳೂರು ಬಂದರಿನ ಅಳಿವೆಯಲ್ಲಿ ಸರಕು ತುಂಬಿದ ಯಾಂತ್ರೀಕೃತ ನೌಕೆ ಮುಳುಗಿರುವುದು .... ೫೭೪..೫೭೫

— ಶ್ರೀ ಎನ್. ಯೋಗೀಶ್ ಭಟ್

ಒ) ಬಾಗೂರು ನವಿಲೆ ಸುರಂಗ ವಿಷಯ .... ೫೭೫..೫೭೬

— ಶ್ರೀ ಕೆ.ಎಸ್. ಪುಟ್ಟಣ್ಣಯ್ಯ

ಅಂ) ಪುತ್ತೂರು ತಾಲ್ಲೂಕಿನ ಹೊಸ ಮಠ ಸೇತುವೆ ಕಾಮಗಾರಿಯಲ್ಲಿ ಅವ್ಯವಹಾರ .... ೫೭೬..೫೭೭

— ಶ್ರೀ ಡಿ.ವಿ. ಸದಾನಂದಗೌಡ

ಅ) ಕುಂದಾಪುರ ಕ್ಷೇತ್ರದಲ್ಲಿರುವ ಶಂಕರನಾರಾಯಣ .... ೫೭೭..೫೭೮
ಪೋಲೀಸ್ ಠಾಣೆ ಕುರಿತು

— ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ

ಆ) ಸ್ಪೈಸೆಂಡರಿ ಪದವೀಧರರನ್ನು ಖಾಯಂಗೊಳಿಸುವುದು .... ೫೭೮..೫೭೯

— ಶ್ರೀ ಎ. ರುಕ್ಮಯ್ಯಪೂಜಾರಿ

ಇ) ಅಕ್ರಮ ಸಾಗುವಳಿಯನ್ನು ಸಕ್ರಮ ಕುರಿತು .... ೫೭೯..೫೮೪

— ಶ್ರೀ ಬಿ.ಬಿ. ಜಯಚಂದ್ರ
— ಶ್ರೀ ಜೆ.ಸಿ. ಮಾಧುಸ್ವಾಮಿ
— ಶ್ರೀ ಸಿ. ಬೆನ್ನಿಗಪ್ಪ

ಗ) ಯಾದಗಿರಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳು .... ೫೮೪..೫೮೫
ಒಡೆದು ಹೋಗಿರುವುದು

— ಶ್ರೀ ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಘ) ಏಳನೇ ತರಗತಿಯ ಪರೀಕ್ಷೆಯ .... ೫೮೫..೫೮೮
ಮೌಲ್ಯಮಾಪನ ಸ್ಥಗಿತಗೊಂಡಿರುವುದು

— ಶ್ರೀ ಎಸ್. ಸುರೇಶ್‌ಕುಮಾರ್

ಚ) ಔಷಧಿ ವ್ಯಾಪಾರದಲ್ಲಿ ಅವ್ಯವಹಾರ .... ೫೮೮..೫೯೧

— ಶ್ರೀ ಜೆ.ವಿ. ಶ್ರೀರಾಮರೆಡ್ಡಿ
— ಶ್ರೀಮತಿ ಪ್ರಮೀಳಾ ನೇಸರ್ಗಿ
— ಶ್ರೀ ಸಿ.ಆರ್. ಸಗೀರ್ ಅಹಮದ್

ಛ) ಅಂಕೋಲ ಕ್ಷೇತ್ರದಲ್ಲಿ ಹಾಲೆ ಹಾಲೇಕಲ್ಲಿಗೆ .... ೫೯೧..೫೯೨
ಸ್ವಂತ ಕಟ್ಟಡ

— ಶ್ರೀ ಕೆ. ವಿಶ್ವೇಶ್ವರ ಹೆಗಡೆ

ಜ) ಗುಲ್ಬರ್ಗದಲ್ಲಿ ಸಾರಿಗೆ ಸಂಸ್ಥೆಯ ಕಛೇರಿ .... ೫೯೨..೫೯೩
ಪ್ರಾರಂಭಿಸುವುದು

— ಶ್ರೀ ರೇವುನಾಯಕ್ ಬೆಳಮಗಿ

ಝ) ಭದ್ರ ಅರಣ್ಯ ಯೋಜನೆಯಡಿಯಲ್ಲಿ 736 .... ೫೯೩..೫೯೪
ಕುಟುಂಬಗಳನ್ನು ಸ್ಥಳಾಂತರಿಸುವುದು

— ಶ್ರೀ ಸಿ.ಆರ್. ಸಗೀರ್ ಅಹಮದ್

ಟ) 1998-99 ರಲ್ಲಿ ಡ್ರಿಪ್ ಇರಿಗೇಷನ್‌ಗಾಗಿ .... ೫೯೪..೫೯೬
ಬಿಡುಗಡೆ ಮಾಡಿರುವ ಹಣ
— ಶ್ರೀ ಬಿ. ಶಿವರಾಮ್

ಠ) ಕೂಟ್ನೂರು ಕ್ಷೇತ್ರಕ್ಕೆ ಹೈಸ್ಕೂಲ್ ಮಂಜೂರಾತಿ .... ೫೯೬..೫೯೬
— ಶ್ರೀಮತಿ ಭಾಗೀರತಮ್ಮ ಮರಳ ಸಿದ್ದಗೌಡ

ಡ) ಬೀದರ್ ಪಟ್ಟಣದಲ್ಲಿ ಆಶ್ರಯ ಸಮಿತಿಯಿಂದ .... ೫೯೬..೫೯೭
ಮನೆಗಳ ಮಂಜೂರಾತಿ
— ಶ್ರೀ ಸಯ್ಯದ್ ಜುಲ್ಫೀಕರ್ ಹುಸ್ಮಿ

3. ಗಮನ ಸೆಳೆಯುವ ಸೂಚನೆ:

1) ಗುಬ್ಬಿ ಹಾಗೂ ಹೆಬ್ಬೂರು ನೀರಾವರಿ .... ೫೯೮..೬೦೫
ಉಪವಿಭಾಗಗಳೆರಡಕ್ಕೂ ಸೇರಿದ ಡಿಸ್ಟ್ರಿಬ್ಯೂಟರ್
(ಡಿ-2ಯು) ಕಾಲುವೆಯನ್ನು ನಿರ್ಮಾಣ
ಮಾಡುವುದರ ಬಗ್ಗೆ
— ಶ್ರೀ ಬಿ. ಶಿವರಾಮ್
— ಶ್ರೀ ಶಿವನಂಜಪ್ಪ ಜಿ.ಎಸ್.

4. ವಿತ್ತೀಯ ಕಾರ್ಯಕಲಾಪ:

1) 1999-2000ನೇ ಸಾಲಿನ ಆಯವ್ಯಯದ .... ೬೦೫..೬೧೦
ಮೇಲಿನ ಚರ್ಚೆ
— ಶ್ರೀ ಎ.ಟಿ. ರಾಮಸ್ವಾಮಿ
— ಶ್ರೀ ಡಿ.ವಿ. ಸದಾನಂದಗೌಡ
— ಶ್ರೀ ಕೆ.ಎಸ್ ಪುಟ್ಟಣ್ಣಯ್ಯ
— ಶ್ರೀ ಸಿ.ಆರ್. ಸಗೀರ್ ಅಹಮದ್

ಗುರುವಾರ, ೨೭ನೇ ಮಾರ್ಚ್ ೧೯೯೯

1. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ .... ೬೧೧..೬೪೬
ಮೂಲಕ ನೀಡಲಾದ ಉತ್ತರಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ .... ೬೪೭..೬೭೩
ಮೂಲಕ ನೀಡಲಾದ ಉತ್ತರಗಳು.

2. <u>ವಿತ್ತೀಯ ಕಾರ್ಯಕಲಾಪ:</u>

1) 1998-1999ನೇ ಸಾಲಿನ ಪೂರಕ ಅಂದಾಜುಗಳನ್ನು .... ೮೭೩..೮೭೩
(ಅಂತಿಮ ಕಂತು) ಮಂಡಿಸುವುದು.

— ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

3. <u>ನಿಯಮ 69ರ ಮೇರೆಗೆ :</u>

(1) ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ .... ೮೭೩..೯೭೦
ದೌರ್ಜನ್ಯ ಹಾಗೂ ವರದಕ್ಷಿಣೆ ಸಾವಿನ ಕುರಿತು.

— ಶ್ರೀಮತಿ ಪ್ರಮಿಳಾ ನೇಸರ್ಗಿ
— ಶ್ರೀಮತಿ ಬಿ.ಟಿ. ಲಲಿತಾ ನಾಯಕ್
— ಶ್ರೀಮತಿ ಎನ್. ಜ್ಯೋತಿರೆಡ್ಡಿ
— ಶ್ರೀ ಜಿ.ವಿ. ಶ್ರೀರಾಮರೆಡ್ಡಿ
— ಶ್ರೀ ಕೆ.ಎಸ್. ಪುಟ್ಟಣ್ಣಯ್ಯ
— ಶ್ರೀ ಎಸ್. ಸುರೇಶ್ ಕುಮಾರ್
— ಶ್ರೀ ಮಾಟಾಳ್ ನಾಗರಾಜ್
— ಶ್ರೀ ಟಿ.ಬಿ. ಜಯಚಂದ್ರ
— ಶ್ರೀ ಪಿ.ಜಿ.ಆರ್ ಸಿಂಧ್ಯ
(ಗೃಹಸಚಿವರು)

(2) ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ .... ೯೭೦..೯೯೩
ಹೆಚ್ಚಿನ ಹಣ ನೀಡುವ ಬಗ್ಗೆ

— ಶ್ರೀ ಜೆ.ಸಿ. ಮಾಧುಸ್ವಾಮಿ
— ಶ್ರೀ ಜಿ.ವಿ. ಶ್ರೀರಾಮರೆಡ್ಡಿ
— ಶ್ರೀ ಎಂ. ವೀರಪ್ಪ ಮೊಯಿಲಿ
— ಶ್ರೀ ಬಿ. ಚಂದ್ರಣ್ಣ
— ಶ್ರೀ ಸಿ. ಜಯಿಗಪ್ಪ
— ಶ್ರೀ ಎಸ್.ಪಿ. ಮುದ್ದಹನುಮೇಗೌಡ
— ಶ್ರೀ ಆರ್.ಜಿ. ವೆಂಕಟಾಚಲಯ್ಯ
— ಶ್ರೀ ವಿ. ಮುನಿಯಪ್ಪ
— ಶ್ರೀಮತಿ ಎನ್. ಜ್ಯೋತಿರೆಡ್ಡಿ
— ಶ್ರೀ ಹೆಚ್.ಸಿ. ಬಾಲಕೃಷ್ಣ
— ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು)
— ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು

4. ವಿತ್ತೀಯ ಕಾರ್ಯಕಲಾಪಗಳು

1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದು) .... ೯೯೩..೧೦೪೪

— ಶ್ರೀ ಜೆ.ಸಿ. ಮಾಧುಸ್ವಾಮಿ
— ಶ್ರೀ ಟಿ.ಬಿ. ಜಯಚಂದ್ರ
— ಶ್ರೀ ಬಿ.ಬಿ. ಶಿವಪ್ಪ
— ಶ್ರೀ ಎನ್. ಯೋಗೇಶ್ ಭಟ್
— ಶ್ರೀ ವಿ. ಮುನಿಯಪ್ಪ

ಮಂಗಳವಾರ, ೩೦ನೇ ಜುಲೈ ೧೯೯೯

1. ವಿತ್ತೀಯ ಕಾರ್ಯಕಲಾಪಗಳು

ಅ) 1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ - ..೧೦೪೫..೧೦೬೬

— ಶ್ರೀ ಮಾಡಾಳ್ ನಾಗರಾಜ್

ಆ) 1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಹಣಕಾಸಿನ ಸಚಿವರಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು .... ೧೦೬೬..೧೧೩೫

— ಶ್ರೀ ಸಿದ್ದರಾಮಯ್ಯ
(ಉಪ ಮುಖ್ಯಮಂತ್ರಿಗಳು)

ಇ) 1998-99ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತಿನ) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು ೧೧೩೫

— ಶ್ರೀ ಸಿದ್ದರಾಮಯ್ಯ
(ಉಪ ಮುಖ್ಯಮಂತ್ರಿಗಳು)

2. ಶಾಸನ ರಚನೆ:

ವಿಧೇಯಕಗಳ ಮಂಡನೆ:

ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1999. ....೧೧೩೫..೧೧೩೬

ಆ) ಕರ್ನಾಟಕ ಧನವಿನಿಯೋಗ ವಿಧೇಯಕ, 1999. .... ೧೧೩೬

ಇ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999. .... ೧೧೩೬

ಈ) ಕರ್ನಾಟಕ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 1999. ....೧೧೩೬..೧೧೩೭

ಉ) ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 1999. .... ೧೧೩೭

ಊ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1999. ....೧೧೩೭..೧೧೩೮

ಪರ್ಯಾಲೋಚನಾ ಪ್ರಸ್ತಾವ:

ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1999. ....೧೧೩೯..೧೧೩೯

ಅ) ಕರ್ನಾಟಕ ಧನವಿನಿಯೋಗ ವಿಧೇಯಕ, 1999. ....೧೧೩೯..೧೧೪೦

ಇ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999. ....೧೧೪೦..೧೧೪೧

ಈ) ಕರ್ನಾಟಕ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 1999. ....೧೧೪೧..೧೧೪೨

ಉ) ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 1999. ....೧೧೪೨..೧೧೪೩

ಊ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1999. ಅಂಗೀಕರಿಸಲಾಯಿತು ....೧೧೪೩...೧೧೪೪

3. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. ...೧೧೪೪..೧೧೭೩

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. ...೧೧೭೩..೧೨೪೫

4. ವರದಿಯನ್ನೊಪ್ಪಿಸುವುದು: ೧೨೪೫

5. ಅಧ್ಯಕ್ಷರ ಅನುಮತಿ ಮೇರೆಗೆ:

ಅ) ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಗೋದಾವರಿ ಡೈವರ್ಷನ್ ಸ್ಕೀಂ ಕುರಿತು ಹೇಳಿಕೆ ನೀಡಿರುವುದು. ....೧೨೪೬..೧೨೪೯

— ಶ್ರೀ ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

ಅ) ಟಿ.ಸಿ.ಹೆಚ್. ತೇರ್ಗಡೆಯಾದಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ವಿತರಣೆಯಾಗದಿರುವುದು. ....೧೨೪೯..೧೨೫೦

— ಶ್ರೀ ಅರಗ ಜ್ಞಾನೇಂದ್ರ

ಇ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಸ್ಥಾಪನೆ ಬಗ್ಗೆ ವಕೀಲರು ಅಮರಣ ಉಪವಾಸ ಕುಳಿತಿರುವುದು. ....೧೨೫೦..೧೨೫೬

— ಶ್ರೀ ಅಶೋಕ್ ಕಾಟ್ಟೆ

— ಶ್ರೀ ಚಂದ್ರಕಾಂತ್ ಬೆಲ್ಲದ್

— ಶ್ರೀ ಮಂಜುನಾಥ್ ಸಿ. ಕುನ್ನೂರ್

— ಶ್ರೀ ಶಿವಾನಂದ ಎಸ್. ಪಾಟೀಲ್

— ಶ್ರೀ ಪಿ.ಹೆಚ್. ಪೂಜಾರಿ

— ಶ್ರೀ ಗೋವಿಂದ ಎಂ. ಕಾರಜೋಳ

ಈ) ಉಳ್ಳಾಲ ಕ್ಷೇತ್ರದ ತುಕ್ಕೋಟಿನ್ ಶ್ರೀಮತಿ ಫತಿಜಾಬ್ ಮಹಮದ್ ಮುಂತಾದವರು ವಿವಮೋಗ್ಗದ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ ಬರುವಾಗ ಮಂಡಿಗದ್ದೆ ಬಳಿ ಆರಣ್ಯ ಸಿಬ್ಬಂದಿಗಳು ಗುಂಡು ಹಾರಿಸಿರುವುದು. ....೧೨೫೬..೧೨೫೮

— ಶ್ರೀ ಕೆ. ಜಯರಾಮಶೆಟ್ಟಿ

ಉ) ಕಮಲಾಪುರದಲ್ಲಿ ಗಂಡೋರಿ ನಾಲಾ ಯೋಜನೆ ಕುರಿತು ....೧೨೫೮..೧೨೫೯

— ಶ್ರೀ ರೇವುನಾಯಕ್ ಬೆಳಮಗಿ

ಊ) ಕೃಷ್ಣ ಮೇಲ್ದಂಡೆ ಯೋಜನೆಯ ನಾರಾಯಣಪುರ ಆಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ ಗ್ರಾಮಗಳಿಗೆ ಸೌಲಭ್ಯ ....೧೨೫೯..೧೨೬೦

— ಶ್ರೀ ಹಾಶಪ್ಪನಮರ್

ಎ) ಸಮುದ್ರದ ಕೊರೆತಕ್ಕೆ ನದಿ ತಟ ಗೋಡೆ ಹೂಳು ಎತ್ತುವುದರ ಕುರಿತು ....೧೨೬೧..೧೨೬೨

— ಶ್ರೀ ಪ್ರತಾಪಚಂದ್ರ ಶೆಟ್ಟಿ

ಎ) ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಿ ೧೨೬೨-೧೨೬೯
ಚುನಾವಣೆ ಕುರಿತು.

— ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ

— ಶ್ರೀ ಕೆ. ಶ್ರೀನಿವಾಸಗೌಡ

ಐ) ರಾಜ್ಯದಲ್ಲಿ ಒಂದಂಕಿ ಲಾಟರಿ ನಿಷೇಧ ಕುರಿತು. ೧೨೬೯-೧೨೭೧

— ಶ್ರೀ ಎಸ್. ಸುರೇಶ್ ಕುಮಾರ್

— ಶ್ರೀ ಜೆ.ವಿ. ಶ್ರೀರಾಮರೆಡ್ಡಿ

ಒ) ಸವಣೂರಿನಲ್ಲಿ ಕುದಿಯುವ ನೀರಿನ ಸಮಸ್ಯೆ ೧೨೭೧-೧೨೭೨

— ಶ್ರೀ ಮಂಜುನಾಥ್ ಸಿ. ಕುನ್ನೂರ್

ಓ) ಎಟ್ಟಿ ಕ್ಷೇತ್ರದಲ್ಲಿ ಟ್ರಾಫಿಕ್ ಜಾಮ್ ತೆರೆಯುವುದು ೧೨೭೨-೧೨೭೩

— ಶ್ರೀ ಎ. ರುಕ್ಮಯ್ಯ ಪೂಜಾರಿ

ಔ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಡಿಲ ಗಲಭೆಯಿಂದ ೧೨೭೩
ನೊಂದ ಜನರಿಗೆ ಸಮಪರ್ಕವಾಗಿ ಪರಿಹಾರ
ಕಾರ್ಯ ನಡೆದಿಲ್ಲದಿರುವ ಬಗ್ಗೆ

— ಶ್ರೀ ಎನ್. ಯೋಗೀಶ್ ಭಟ್

ಅಂ) ಮಿರಜಿಂ ಹೋಗಬೇಲಾಗಬಹು ಬ್ಯಾಂದಿ ಮತ್ತು ೧೨೭೩-೧೨೭೫
ವಿಕ್ಕಿ ಮಾರಾಟ ಮಾಡಲು ಲೈಸೆನ್ಸ್
ಹೆಗೆದುಕೊಳ್ಳಬೇಕೆಂದೂ ಮತ್ತು ಇಂತಿಷ್ಟೇ
ಸಮಯದೊಳಗೆ ಮಾರಾಟ ಮಾಡಬೇಕೆಂದು
ನಿಗದಿ ಮಾಡುವುದು.

— ಶ್ರೀ ಬಿ.ಬಿ. ಶಿವಪ್ಪ

— ಶ್ರೀ ಮಾಡಾಳ್ ವಿರೂಪಾಕ್ಷ

ಕ) ಬೀದರ್‌ನಿಂದ ಹೊಸಪೇಟೆಯವರೆಗೆ ರೈಲಿನಲ್ಲಿರುವಷ್ಟೂ ೧೨೭೬-೧೨೭೮
ಪ್ರಯಾಣಿಕರಿಗೆ ಅವರು ಟ್ರಾವೆಸ್ಟ್ ಮಾಡುವುದಕ್ಕೆ
ಮತ್ತು ಊಟಕ್ಕಾಗಿ ಬಿಟ್ಟಲು ಪ್ರತ್ಯೇಕವಾಗಿ ಸೌಲಭ್ಯ
ಬಂದಿರುವುದು

— ಶ್ರೀ ಶಿವಾನಂದ ಪಾಟೀಲ್

— ಶ್ರೀ ಬಸವರಾಜ ರಾ. ಪಾಟೀಲ್

ಖ) ಜನವಾಹಿನಿ ಪತ್ರಿಕೆಯಲ್ಲಿ ಕಾರ್ಮಿಕರ ಭವನದ ಬಗ್ಗೆ ....೧೨೭೮..೧೨೭೯ ಬರೆದಿರುವುದು.

— ಶ್ರೀ ಜಿ.ಸಿ. ಮಾಧುಸ್ವಾಮಿ

ಗ) ಕೇಂದ್ರ ಸರ್ಕಾರ ರೇಷ್ಮೆ ಆಮದು ನೀತಿಯಿಂದ ....೧೨೭೯..೧೨೮೧ .. ರಾಜ್ಯದ ಕೃಷಿಯ ಮೇಲೆ ಬೀರಿರುವ ಪರಿಣಾಮ.

— ಶ್ರೀ ಎಸ್.ಪಿ. ಮುದ್ದಹನುಮೇಗೌಡ

6. ಮಂತ್ರಿಗಳ ಹೇಳಿಕೆ :

ಟಿ.ಸಿ.ಹೆಚ್. ವಿದ್ಯಾರ್ಥಿಗಳ ಛಲಿತಾಂಶವನ್ನು ಪ್ರಕಟಿಸುವುದು ....೧೨೮೧-೧೨೮೨ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ

— ಶ್ರೀ ಟಿ. ಜಯಪ್ರಕಾಶ್ ಹೆಗಡೆ
(ಬಂದರು ಮತ್ತು ಮೀನುಗಾರಿಕೆ ಸಚಿವರು)

7. ಸಹಬಂಧ - I, II, III, IV, V, VI. ....೧೨೮೩..೧೩೭೬

****

ಕರ್ನಾಟಕ ವಿಧಾನಸಭೆ

ಶನಿವಾರ 27ನೇ ಮಾರ್ಚ್ 1999ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪಶುಸಂಗೋಪನೆ ವಿಶ್ವವಿದ್ಯಾಲಯ.

43(553) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) :— ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಎರಡು ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುತ್ತಿರುವ ಪಶುಸಂಗೋಪನೆ ಭೋದಿಸುವ ಮಹಾವಿದ್ಯಾಲಯಗಳ ಹಾಗೂ ಡಿಪ್ಲೋಮೊ ಕಾಲೇಜುಗಳ ಮತ್ತು ಜೆ.ಓ.ಸಿ. ಬೋಧಿಸುವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಪಸುಸಂಗೋಪನೆ ವಿಶ್ವವಿದ್ಯಾಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :—

ಅ) ಬೆಂಗಳೂರು ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಅಡಿಯಲ್ಲಿ ಬೆಂಗಳೂರು ಪಶುವೈದ್ಯಕೀಯ ಮಹಾವಿದ್ಯಾನಿಲಯ ಹಾಗೂ ಬೀದರ್ ಪಶು ವೈದ್ಯಕೀಯ ಮಹಾವಿದ್ಯಾನಿಲಯ ಹೀಗೆ 2 ಕಾಲೇಜುಗಳು ಕಾರ್ಯ ನಿರ್ವಹಿಸಿರುತ್ತಿವೆ. ಈ ಮೇಲ್ಕಂಡ ವಿಶ್ವವಿದ್ಯಾಲಯಗಳಲ್ಲಿ ಡಿಪ್ಲೋಮ ಕಾಲೇಜುಗಳು ಮತ್ತು ಜೆ.ಓ.ಸಿ. ಬೋಧಿಸುವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ.

ಆ) ಬಂದಿದೆ.

ಇ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಚಂದ್ರಕಾಂತ ಬೆಲ್ಲದ್ :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿದ್ದು, ಅವುಗಳ ಅಧೀನದಲ್ಲಿ ಕೇವಲ ಎರಡೇ ಎರಡು ಪಶುವೈದ್ಯಕೀಯ ಮಹಾ ವಿದ್ಯಾನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಇಡೀ ಭಾರದ ದೇಶದಲ್ಲೇ ಇತರ ರಾಜ್ಯಗಳಿಗಿಂತ ಪಶು ಸಂಗೋಪನಾ ಬೆಳವಣಿಗೆಗೆ ಉತ್ತಮ ಹವಾಮಾನವನ್ನು ಹೊಂದಿರತಕ್ಕ ರಾಜ್ಯ ನಮ್ಮದಾಗಿದೆ. ಆ ದೃಷ್ಟಿಯಿಂದ ಇವತ್ತು ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಲಿಕ್ಕೆ, ನಿಸರ್ಗ ಸಂಪನ್ಮೂಲವನ್ನು ಬಳಸಿಕೊಳ್ಳಲಿಕ್ಕೆ, ಸ್ವಾವಲಂಬಿಯಾದಂತಹ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಮೇಲ್ಕಂಡ ವಿಶ್ವವಿದ್ಯಾನಿಲಯಗಳಲ್ಲಿ ಡಿಪ್ಲೋಮಾ ಮತ್ತು ಜೆ.ಓ.ಸಿ. ಬೋಧಿಸುವಂತಹ ಶಿಕ್ಷಣದ ಅವಶ್ಯಕತೆಯೂ ಕೂಡ ನಮ್ಮ ರಾಜ್ಯಕ್ಕಿದೆ ಎಂದರೆ ತಪ್ಪಾಗಲಾರದು. ಆ ದಿಸೆಯಲ್ಲಿ ತಾವೇನು ಕ್ರಮ ಕೈಗೊಳ್ಳುತ್ತಿದ್ದೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಉತ್ತಮ ಹವಾಗುಣವನ್ನು ಹೊಂದಿರುವಂತಹ ರಾಜ್ಯದಲ್ಲಿ ಪ್ರತ್ಯೇಕವಾದಂತಹ ಪಶುಸಂಗೋಪನಾ ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ. ಗುಜರಾತ್ ಮುಂತಾದ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಉತ್ತಮವಾದಂತಹ ಹವಾಗುಣವನ್ನು ಹೊಂದಿದೆ. ಆ ದೃಷ್ಟಿಯಿಂದ ರಾಜ್ಯದಲ್ಲಿ ಪಶು ಸಂಗೋಪನಾ ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡುವುದು ಅವಶ್ಯಕವಾಗಿದೆ. ಸರ್ಕಾರ ಈ ದಿಸೆಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನೂ ಕೇಳುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮೊದಲನೆಯ ಪ್ರಶ್ನೆಗೆ ಉತ್ತರಿಸುವುದಾದರೆ, ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಅವುಗಳ ಅಧೀನದಲ್ಲಿ ಬೆಂಗಳೂರು ಪಶುವೈದ್ಯಕೀಯ ಮಹಾ ವಿದ್ಯಾನಿಲಯ ಮತ್ತು ಬೀದರ್ ಪಶು ವೈದ್ಯಕೀಯ ಮಹಾವಿದ್ಯಾನಿಲಯಗಳೆಂಬ ಎರಡು ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಎರಡೂ ಕಾಲೇಜುಗಳಲ್ಲಿ ಪ್ರತಿ ವರ್ಷ ನೂರು ಜನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶ ಇದೆ. ಪ್ರತಿ ಐದು ವರ್ಷಕ್ಕೊಮ್ಮೆ ಸುಮಾರು 100 ಜನ ಪದವೀಧರರು ಈ ಕಾಲೇಜುಗಳಿಂದ ಹೊರ ಬರುತ್ತಿದ್ದಾರೆ. ತಾವು ಹೇಳಿದಂತೆ ಇವತ್ತು ಪಶುಸಂಗೋಪನೆ ದಿನೇದಿನೇ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಪಶುವೈದ್ಯಕೀಯ ಕಾಲೇಜುಗಳು ಹೆಚ್ಚು ಬೇಕೆಂಬ ಬೇಡಿಕೆಗಳು ಕೂಡ ಬರುತ್ತಿವೆ. ಈ ಕಾಲೇಜುಗಳ ಜೊತೆಗೆ ಡಿಪ್ಲೋಮಾ ಮತ್ತು ಜೆಓಸಿ ಕೋರ್ಸ್‌ಗಳನ್ನು ಆರಂಭಿಸುವ ಆಲೋಚನೆ ಸರ್ಕಾರದ ಮುಂದಿದೆಯೇ? ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ....

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ತಾವೇನು ತಪ್ಪು ತಿಳಿದುಕೊಳ್ಳುವುದಿಲ್ಲ ಎನ್ನುವುದಾದರೆ ಒಂದು ಮಾತನ್ನು ಹೇಳುತ್ತೇನೆ. ಈ ಪ್ರಶ್ನೆಯನ್ನು ಮಾನ್ಯ ಕೃಷಿ ಮತ್ತು ತೋಟಗಾರಿಕಾ ಸಚಿವರು ಉತ್ತರಿಸಬೇಕಾಗಿತ್ತು ಎಂದೆನಿಸುತ್ತದೆ. ಈ ಪ್ರಶ್ನೆಗೆ ಸಂಬಂಧಪಟ್ಟ ವಿಷಯ ಅವರ ಖಾತೆಯ ಆಡಳಿತಾತ್ಮಕ ಕಂಟ್ರೋಲ್‌ಗೆ ಬರುತ್ತದೆ.

ಇದೊಂದು ಕೆಟ್ಟ ಸಂಪ್ರದಾಯವಾಗುವುದು ಬೇಡ. ಕೃಷಿ ವಿಶ್ವವಿದ್ಯಾನಿಲಯಗಳು ಯಾವಾಗಲೂ ಮಾನ್ಯ ಕೃಷಿ ಖಾತೆ ಸಚಿವರ ಅಧೀನದಲ್ಲೇ ಬರುತ್ತವೆ.

ಅಧ್ಯಕ್ಷರು :— ಪಶುಸಂಗೋಪನಾ ಕುರಿತ ವಿಷಯ ಇದರಲ್ಲಿದೆ. ಮಾನ್ಯ ಪಶುಸಂಗೋಪನಾ ಸಚಿವರು ಅವರ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರಿಸಲಿ ಬಿಡಿ.

ಶ್ರೀ ಬಿ.ಬಿ. ನಿಂಗಯ್ಯ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಡಿಪ್ಲೋಮಾ ಮತ್ತು ಜಿ.ಓ.ಸಿ. ಕೋರ್ಸ್‌ಗಳನ್ನು ಆರಂಭಿಸಬೇಕೆಂಬ ಒಂದು ಒಳ್ಳೆಯ ಸಲಹೆಯನ್ನು ಸರ್ಕಾರಕ್ಕೆ ನೀಡಿದ್ದಾರೆ. ಸರ್ಕಾರ ಆ ವಿಚಾರವನ್ನು ಪರಿಶೀಲನೆ ಮಾಡುತ್ತದೆ ಎಂದು ನಾನು ತಿಳಿಸಬಯಸುತ್ತೇನೆ. ವಿಶ್ವವಿದ್ಯಾನಿಲಯದ ಪ್ರೋ-ಚಾನ್ಸಲರ್ ಆದ ಹಾಗೂ ಹಿರಿಯ ಸಚಿವರಾಗಿರತಕ್ಕ ಮಾನ್ಯ ಬೈರೇಗೌಡರ ಜೊತೆಯಲ್ಲಿ ನಾನು ಈ ವಿಚಾರವಾಗಿ ಮಾತನಾಡಿ ಆದಷ್ಟು ಬೇಗ ಈ ಕೋರ್ಸ್‌ಗಳನ್ನು ತೆರೆಯುವುದರ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಮಾನ್ಯ ಅಧ್ಯಕ್ಷರೇ, ನಾನು ಪಶು ಸಂಗೋಪನಾ ವಿಶ್ವವಿದ್ಯಾನಿಲಯವನ್ನು ತೆರೆಯುವುದರ ಬಗ್ಗೆ ಕೂಡ ಕೇಳಿದ್ದೆ. ಅದರ ಬಗ್ಗೆ ಸಂಬಂಧಿಸಿದ ಮಂತ್ರಿಗಳು ಚಿಂತನೆ ಮಾಡಿದ್ದಾರೆಯೇ?

ಅಧ್ಯಕ್ಷರು :— ಮಾನ್ಯ ಬೆಲ್ಲದ್‌ರವರೇ, ತಾವು ಆಮೇಲೆ ಸ್ವಲ್ಪ ನನ್ನ ಕೊಠಡಿಗೆ ಬನ್ನಿ, ನನಗೆ ಈ ವಿಷಯ ಬಹಳ ಇಷ್ಟವಾದುದು. ನಾವಿಬ್ಬರೂ ಇದರ ಬಗ್ಗೆ ಚರ್ಚೆ ಮಾಡೋಣ.

ರಾಜ್ಯದಲ್ಲಿ ಆಶ್ರಯ ಯೋಜನೆ.

49(571) ಶ್ರೀ ಬಿ. ಶಿವರಾಮು (ಗಂಡಸಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯ ಮನೆಗಳನ್ನು ತಾಲ್ಲೂಕ್‌ವಾರು ಅಥವಾ ಕ್ಷೇತ್ರವಾರು ಹಂಚಲಾಗುವುದೇ;

ಆ) ಮನೆ ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ತಾಲ್ಲೂಕುವಾರು ಹಾಗೂ ಕ್ಷೇತ್ರವಾರು ಹಂಚಲಾಗಿದೆ.

ಆ) ಬೇಡಿಕೆ ಆಧಾರದ ಮೇಲೆ ಕೆಲವು ತಾಲ್ಲೂಕು ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿನ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಇ) ಕಡಿಮೆ ಮನೆಗಳ ಗುರಿಯನ್ನು ಕೊಟ್ಟಿರುವ ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚುವರಿಯಾಗಿ ಮನೆಗಳ ಗುರಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು :— ಮಾನ್ಯ ವಸತಿ ಸಚಿವರು ಕೇಂದ್ರ ವಸತಿ ಸಚಿವರ ಜೊತೆಗೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಬೇಕಾಗಿರುವುದರಿಂದ ಮೊದಲು ಮಾನ್ಯ ವಸತಿ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ. ಮಾನ್ಯ ಡಿ.ಆರ್. ಪಾಟೀಲ್‌ರವರೇ, ತಮ್ಮ ಪ್ರಶ್ನೆ ಮತ್ತು ಮಾನ್ಯ ಶಿವರಾಮುರವರ ಪ್ರಶ್ನೆಗಳನ್ನು ಕಂಬೈನ್ ಮಾಡಲಾಗಿದೆ. ತಮ್ಮ ಪ್ರಶ್ನೆಗೆ ಉತ್ತರ ನೀಡಲು ಇಡೀ ರಾಜ್ಯದ ಡೀಟೈಲ್ಸ್ ಕಲೆಕ್ಟ್ ಮಾಡಬೇಕಾಗುತ್ತದೆ. ಈಗ 19 ಜಿಲ್ಲೆಗಳಿಂದ ಮಾಹಿತಿ ಬಂದಿದೆ, ಇನ್ನು ಉಳಿದ ಜಿಲ್ಲೆಗಳಿಂದ ಇನ್ನೂ ಮಾಹಿತಿ ಬಂದಿಲ್ಲವೆಂದು ಮಾನ್ಯ ವಸತಿ ಸಚಿವರು ನನಗೆ ದಾಖಲೆಗಳನ್ನು ತೋರಿಸಿದರು. ಆದುದರಿಂದ ತಮ್ಮ ಪ್ರಶ್ನೆಗೆ ಉತ್ತರಿಸಲು ಸ್ವಲ್ಪ ಕಾಲಾವಕಾಶ ನೀಡಿದ್ದೇನೆ. ಮಾನ್ಯ ಶಿವರಾಮುರವರೇ, ತಾವು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಬಿ. ಶಿವರಾಮು :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಷಯದ ಬಗ್ಗೆ ಸದನದಲ್ಲಿ ದೀರ್ಘವಾಗಿ ಚರ್ಚೆಯಾಗಿ ಆಗಿರುವ ತಾರತಮ್ಯವನ್ನು ಬಗೆಹರಿಸುತ್ತೇವೆಂದು ಸರ್ಕಾರ ಆಶ್ವಾಸನೆ ನೀಡಿತ್ತು. ಅದಕ್ಕನುಗುಣವಾಗಿ ಇವತ್ತು ತಾರತಮ್ಯ ಹೋಗಲಾಡಿಸುವಂತೆ ಮನೆಗಳನ್ನು ಹಂಚಿಕೆಮಾಡಲಾಗಿದೆ ಎಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದೆ. ನನಗೆ ಬಹಳ ಸಂತೋಷವಾಯಿತು. ಈಗ ಇನ್ನೊಂದು ರೀತಿಯ ತಾರತಮ್ಯವನ್ನು ಹೋಗಲಾಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ವಸತಿ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಾನು ಪ್ರತಿನಿಧಿಸುವಂತಹ ಕೆಲವೊಂದು ವಿಧಾನಸಭಾ ಕ್ಷೇತ್ರಗಳಿಗೆ ತಾಲ್ಲೂಕು ಕೇಂದ್ರಗಳು ಇರುವುದಿಲ್ಲ. ಮನೆಗಳ ಹಂಚಿಕೆಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಮತ್ತು ನಗರ ಪ್ರದೇಶಗಳಿಗೆ ಇಂತಿಷ್ಟು ಎಂದು ಹಂಚಿಕೆ ಮಾಡುವ ವ್ಯವಸ್ಥೆ ಇದೆ. ನನ್ನಂತಹ ವಿಧಾನಸಭಾ ಕ್ಷೇತ್ರಗಳಿಗೆ ಕೇವಲ ಗ್ರಾಮೀಣ ಪ್ರದೇಶಗಳಿಗೆ ಹಂಚಿಕೆ ಮಾಡುವ ಮನೆಗಳಷ್ಟೇ ದೊರೆಯುತ್ತವೆ. ಆದರೆ ಬೇರೆ ಇತರ ಕ್ಷೇತ್ರಗಳಿಗೆ ನಗರ ಮತ್ತು ಗ್ರಾಮಾಂತರ ಪ್ರದೇಶದ ಕೋಟಾಗಳೆರಡರಲ್ಲೂ ಮನೆಗಳು ಹಂಚಿಕೆಯಾಗಿ ಸಹಜವಾಗಿ ಅವರಿಗೆ ಹಂಚಿಕೆಯಾಗುವ ಮನೆಗಳ ಸಂಖ್ಯೆ ಜಾಸ್ತಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಕ್ಷೇತ್ರದ ವ್ಯಾಪ್ತಿಗೂ ಸಮಾನವಾಗಿ ಮನೆಗಳ ಹಂಚಿಕೆಯಾಗಬೇಕೆನ್ನುವ ದೃಷ್ಟಿಯಿಂದ ಗ್ರಾಮಾಂತರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿಗೆ ಮನೆಗಳನ್ನು ಹಂಚಿಕೆ ಮಾಡಿ ಈ ತಾರತಮ್ಯವನ್ನು

ಬಗೆಹರಿಸಬೇಕೆಂದು ನಾನು ಮಾನ್ಯ ವಸತಿ ಸಚಿವರನ್ನು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣಕ್ಕೆ ಶೇಕಡ 50 ರಷ್ಟು ಸಬ್ಸಿಡಿ ಮತ್ತು ಶೇಕಡ 50ರಷ್ಟು ಸಾಲದ ರೂಪದಲ್ಲಿ ಹಣವನ್ನು ಕೊಡಲಾಗುತ್ತಿದೆ. ಆದರೆ ನಗರ ಪ್ರದೇಶಗಳಲ್ಲಿ ನೂರಕ್ಕೆ ನೂರರಷ್ಟು ಸಾಲದ ರೂಪದಲ್ಲಿ ಕೊಡುತ್ತಿದ್ದೇವೆ. ಇವರಿಗೆ ಯಾವ ಸಬ್ಸಿಡಿಯನ್ನೂ ಸಹ ಕೊಡುವುದಿಲ್ಲ. ಫಲಾನುಭವಿಗಳು ಐದು ಸಾವಿರ ರೂ.ಗಳನ್ನು ಭರಿಸಿದರೆ ಬಾಕಿ 25 ಸಾವಿರ ರೂ.ಗಳನ್ನು ಸಾಲವಾಗಿ ಕೊಡಲಾಗುತ್ತಿದೆ. ಆದುದರಿಂದ ಇದರಲ್ಲಿ ಏನೂ ವ್ಯತ್ಯಾಸ ಬರುವುದಿಲ್ಲ. ಈ ಮನೆಗಳ ಹಂಚಿಕೆಯ ತರಲೆ, ತಾಪತ್ರಯವೇ ನನಗೆ ಬೇಡವೆಂದು ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಯಾರಿಗೆ ಬೇಕೋ ಅವರಿಗೆ ಮನೆಗಳ ಹಂಚಿಕೆ ಮಾಡಲಿ ಎಂದು ಸಚಿವ ಸಂಪುಟ ಸಭೆಗೆ ಟಿಪ್ಪಣಿಯೊಂದನ್ನು ಕಳುಹಿಸಿದ್ದೆ. ನಾನು ಮನೆಗಳ ಹಂಚಿಕೆ ಮಾಡುವುದರಿಂದ ತಾನೇ ನನ್ನ ಮೇಲೆ ಭ್ರಷ್ಟಾಚಾರ ಅಥವಾ ಇತರ ಅಪಾದನೆಗಳು ಬರುವುದು. ಆದ್ದರಿಂದ ನನಗೆ ಇದರ ಸಹವಾಸವೇ ಬೇಡ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನೆಗಳ ಹಂಚಿಕೆ ಅಧಿಕಾರ ನೀಡಿ ಸಚಿವ ಸಂಪುಟ ಸಭೆಗೆ ಟಿಪ್ಪಣಿಯೊಂದನ್ನು ಕಳುಹಿಸಿದ್ದೆ. ಅದರಂತೆ ನಿನ್ನೆ ತೀರ್ಮಾನವಾಗಿದೆ. ನನಗೆ ಬಹಳ ಸಂತೋಷವಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರೇ ನನಗೆ ಈ ತರಲೆ ತಾಪತ್ರಯ ಬೇಡ ಎಂದು ವಿಧಾನ ಸಭೆಯಲ್ಲಿ ಬಹಿರಂಗವಾಗಿ ಹೇಳಿದರೆ ಹೇಗೆ?....

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಸಚಿವರೇ, ಇದುವರೆಗೂ ತಾವೇನು ಮನೆಗಳ ಹಂಚಿಕೆ ಮಾಡಿದ್ದೀರಿ, ಇದು ನಿಮಗೆ ತೃಪ್ತಿ ತಂದಿದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ :— ಸಂಬಂಧಪಟ್ಟ ಖಾತೆ ಸಚಿವರು ಈ ತರಲೆ ತಾಪತ್ರಯ ನನಗೆ ಬೇಡ ಎಂದು ಈ ಸಭೆಯಲ್ಲಿ ಹೇಳಿದರೆ, ನಾವು ಯಾರಿಗೆ ಕೇಳಬೇಕು? ನೀವು ಮುಖ್ಯಮಂತ್ರಿಗಳಿಗಾದರೂ ಕೊಡಿ, ಯಾರಿಗಾದರೂ ಕೊಡಿ ಅದು ನಿಮ್ಮ ವ್ಯವಸ್ಥೆ.

ಶ್ರೀ ಹೆಚ್.ಡಿ. ರೇವಣ್ಣ :— ನಾನು ಈ ಸಮಸ್ಯೆಯನ್ನು ಮುಖ್ಯಮಂತ್ರಿಯವರಿಗೆ ತಿಳಿಸುತ್ತೇನೆ.

ಶ್ರೀ ಬಿ. ಶಿವರಾಮು :— ಸಹಾಯಧನದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಕೊಡುತ್ತೇವೆ, ಸಾಲದ ರೂಪದಲ್ಲಿ ಪಟ್ಟಣಗಳಿಗೆ ಮತ್ತು ನಗರಗಳಿಗೆ ಕೊಡುತ್ತೇವೆಂದು ಹೇಳಿದರು.

ನೀವು ಯಾವುದೇ ರೂಪದಲ್ಲಿ ಕೊಡಿ, ತಾರತಮ್ಯ ಇಲ್ಲದೆ, ರಾಜ್ಯದ ಎಲ್ಲಾ 224 ಕ್ಷೇತ್ರಗಳಿಗೂ ಮನೆಗಳ ಹಂಚಿಕೆಯಾಗಲಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಕ್ಷೇತ್ರಗಳು ನಮ್ಮಂತಹ ಕೆಲವು ಇವೆ, ತಾಲ್ಲೂಕು ಕೇಂದ್ರಗಳು ಇರುವುದಿಲ್ಲ. ಇಲ್ಲಿ ತಾಲ್ಲೂಕು ಕೇಂದ್ರಗಳು ಇರತಕ್ಕಂತಹ ಕ್ಷೇತ್ರಗಳಿಗೆ ಗ್ರಾಮಾಂತರ ಪ್ರದೇಶಗಳಿಂದಲೂ ಮನೆಗಳು ಬರುತ್ತವೆ, ನಗರ ಪ್ರದೇಶದ ಯೋಜನೆಯ ಮನೆಗಳೂ ಬರುತ್ತವೆ. ಆಗ ಅಲ್ಲಿ ಸಂಖ್ಯೆ ಹೆಚ್ಚಾಗುತ್ತದೆ. ನಾನು ಅದಕ್ಕೆ ಒಂದು ನಿದರ್ಶನ ಇಟ್ಟುಕೊಂಡು ಹೇಳಿದೆ. ಆ ರೀತಿಯ ತಾರತಮ್ಯ ಆಗತಕ್ಕಂಥದ್ದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ತಾಲ್ಲೂಕು ಕೇಂದ್ರಗಳಿಗೆ ಹೆಚ್ಚು ಮನೆಗಳನ್ನು ಕೊಡುವುದರ ಮೂಲಕ ತಾರತಮ್ಯ ಬಗೆಹರಿಸಬೇಕು ಎಂದು ನಾನು ಅವರಿಗೆ ಹೇಳಿದ್ದು.

ಶ್ರೀ ಹೆಚ್.ಡಿ. ರೇವಣ್ಣ :— ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಅವರು ಎಷ್ಟು ಕೊಡುತ್ತಾರೆ ಕೊಡಲಿ.

ಅರಕಲಗೂಡು ತಾಲ್ಲೂಕು ಚಿಕ್ಕಳ್ಳಿ ಗ್ರಾಮದ ನಿವೇಶನದ ಅಭಿವೃದ್ಧಿಗಾಗಿ ಇಡಲಾದ ಹಣದ ದುರುಪಯೋಗ.

51(450) ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅರಕಲಗೂಡು ತಾಲ್ಲೂಕ್ ಚಿಕ್ಕಳ್ಳಿ ಗ್ರಾಮದ ಸ.ನಂ. 141 : 2ರಲ್ಲಿ ಎರಡೆರಡು ಬಾರಿ ನಿವೇಶನ ಅಭಿವೃದ್ಧಿಪಡಿಸಲು ಹಣ ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಉದ್ದೇಶಕ್ಕಾಗಿ ಖರ್ಚು ಮಾಡಿದ ಒಟ್ಟು ಹಣ ಎಷ್ಟು;

ಇ) ಇದರಲ್ಲಿ ಹಣ ದುರುಪಯೋಗ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ದುರುಪಯೋಗ ಆದ ಹಣ ಎಷ್ಟು ಮತ್ತು ಹಣ ದುರುಪಯೋಗ ಮಾಡಿದ ಅಧಿಕಾರಿಗಳ ವಿರುದ್ಧ ಸರಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಬಂದಿದೆ.

ಆ) ರೂ. 38,450.00

ಇ) ಬಂದಿದೆ.

ಈ) ದುರುಪಯೋಗವಾದ ಹಣ ರೂ. 8450.00 ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸು ಈಗಾಗಲೇ ನೀಡಲಾಗಿದೆ. ಮುಂದಿನ ಶಿಸ್ತಿನ ಕ್ರಮವನ್ನು ಕಾನೂನು ರೀತಿ ಜರುಗಿಸಲಾಗುವುದು.

ಶ್ರೀ ಎ.ಟಿ. ರಾಮಸ್ವಾಮಿ :— ಸನ್ಮಾನ್ಯ ಅಧ್ಯಕ್ಷರೆ, ಹಣದ ದುರುಪಯೋಗ ಆಗಿದೆ ಎನ್ನತಕ್ಕಂತಹ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದು ಹಣವೂ ಕೂಡ ದುರುಪಯೋಗವಾಗಿದೆ ಎಂದು ಗೊತ್ತಾಗಿ ಇಲಾಖೆಯವರೇ ಈ ಪ್ರಕರಣ ಮುಚ್ಚಿ ಹಾಕಿಬೇಕೆಂದು ಶಾಮೀಲಾದರೆ ಈ ಸದನದ ಸದಸ್ಯನಾಗಿ ನಾನು ಏನು ಮಾಡಬೇಕು? ತಾವು ದಯಮಾಡಿ ಮೊದಲು ಮಾರ್ಗದರ್ಶನ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ :— ಮುಖ್ಯವಾದ ಪ್ರಕರಣ ಏನಾದರೂ ಇದ್ದರೆ ಹೇಳಬೇಕು. ಯಾವ ವಿಷಯ ಹೇಳುತ್ತಿದ್ದಾರೆ?

ಶ್ರೀ ಎ.ಟಿ. ರಾಮಸ್ವಾಮಿ :— ಸದನದ ಸದಸ್ಯನಾಗಿ ನಾನು ಏನು ಮಾಡಬೇಕು? ಒಂದೇ ಸ್ಥಳವನ್ನು ಮೊದಲು 8,450 ರೂಪಾಯಿ ಖರ್ಚು ಮಾಡಿ ನಿವೇಶನ ರಚನೆ ಮಾಡಿದರು. ಮತ್ತು ಅದೇ ಸ್ಥಳಕ್ಕೆ ಮತ್ತೊಂದು ಸಾರಿ ರಚನೆ ಮಾಡಿದ್ದೇವೆ ಎಂದು 30,000 ರೂ. ಖರ್ಚಾಯಿತು, ಸುಮಾರು ಒಂದೂವರೆ ವರ್ಷದಿಂದ ಐದು ಸಾರಿ ಈ ಪ್ರಕರಣದ ಬಗ್ಗೆ ಚರ್ಚೆ ಮಾಡಿದ್ದೇವೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಕೂಡ ಈ ಸದನದಲ್ಲಿ ಚರ್ಚೆ ಮಾಡಿದಾಗ ಉಪ ಮುಖ್ಯಮಂತ್ರಿಗಳು ನಿಂತು ಉತ್ತರ ಹೇಳಿದರು. ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋದಾಗ ತಾವೇ ಹೇಳಿದಿರಿ, ಆ ಕಡತ ಇಲ್ಲಿಯೇ ಇದೆ. ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇವತ್ತಿನವರೆಗೂ ಕ್ರಮ ತೆಗೆದುಕೊಳ್ಳಲಿಲ್ಲ. ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟರು. ಎರಡನೇ ಸಾರಿ ಹಣ ಪೇಮೆಂಟ್ ಮಾಡಿಲ್ಲ ಎಂದು ಹೇಳಿ ಮುಚ್ಚಿ ಹಾಕತಕ್ಕಂತಹ ಪ್ರಯತ್ನ ಮಾಡಿದರು. ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಈಗ ಪ್ರಶ್ನೆ ಕೇಳಿದ ಮೇಲೆ ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಇಷ್ಟು ದಿವಸ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ನೀವು ಕ್ರಮ ತೆಗೆದುಕೊಳ್ಳುವ ಬಗ್ಗೆ ಹೇಳಿ. ನೀವು ಬರೀ ಕ್ರಮ ತೆಗೆದುಕೊಳ್ಳುತ್ತೇವೆಂದು ಬರೀ ಇದನ್ನು ಹೇಳಿಕೊಂಡು ಹೋಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ :— ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ಯಾವ ಮುಚ್ಚು ಮರೆ ಇಲ್ಲ. ಈಗಾಗಲೇ ಏನಾಗಿದೆ, ಎಂದು ತಾವು ಹೇಳಿದ ಮೇಲೆ ಇದು ತನಿಖೆ ಮಾಡಿಸಿ ಎರಡೂ ಕಡೆ ಪೇಮೆಂಟ್ ಆಗಿದೆ ಎಂದು ತಿಳಿದುಬಂದಿದೆ. ನನಗೆ ಯಾವುದನ್ನೂ ಮುಚ್ಚಿ ಹಾಕುವ ಪ್ರಮೇಯ ಇಲ್ಲ. ಈಗಾಗಲೇ ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟು ಅವರಿಗೆ ಟೈಮ್ ಕೊಡಬೇಕು. ಕಾನೂನು ರೀತಿ ಮಾಡಿದ್ದೇವೆ. ಮುಚ್ಚಿ ಹಾಕುವ

ಪ್ರಮೇಯ ಇಲ್ಲ. ಈ ವಿಷಯವನ್ನು ಸಭೆಯಲ್ಲಿ ಒಂದೇ ಸಾರಿ ಎತ್ತಿರುವುದು. ಕಳೆದ ಸಾರಿ ವಿಷಯ ರೈಸ್ ಆದ ತಕ್ಷಣ ನಾನು ಎನ್‌ಕ್ವೈರಿ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಯವರಿಗೆ ಪತ್ರ ಬರೆದಿದ್ದೇನೆ. ಅದರ ಮೇಲೆ ಈಗಾಗಲೇ ನೋಟೀಸ್ ಕೊಟ್ಟಿದ್ದೇನೆ. ಆ ನೋಟೀಸ್‌ಗೆ ಅವರು ಏನು ಉತ್ತರ ಕೊಡುತ್ತಾರೆ ನೋಡಿ ಕಾನೂನು ರೀತಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ :— ಅಧಿಕಾರಿಗಳು ಉತ್ತರ ಕೊಟ್ಟಿರುವುದೂ ಕೂಡ ಇಲ್ಲಿ ಇದೆ. ಎರಡು ಸಾರಿ ಹಣ ಪಾವತಿ ಮಾಡಿಲ್ಲ ಎಂದು ಆರ್‌ಡಿಪಿಆರ್ ಮಂತ್ರಿಗಳು ನನಗೆ ಬರೆದಿದ್ದಾರೆ. ಇವರ ಜೆಡಿಪಿ ಸಭೆಯಲ್ಲಿ ಕೂಡ ಚರ್ಚೆ ಮಾಡಿದ್ದೇನೆ, ಸದನದಲ್ಲಿ ಎರಡು ಸಾರಿ ಚರ್ಚೆ ಮಾಡಿದ್ದೇನೆ. ಅವರಿಗೂ ಕೂಡ ಪತ್ರ ಬರೆದಿದ್ದೇನೆ. ಒಂದೂವರೆ ವರ್ಷವಾಗಿದೆ, ಸದನದಲ್ಲಿ ಚರ್ಚೆ ಮಾಡಿದ ಮೇಲೆ ನೋಟೀಸ್ ಕೊಟ್ಟಿದ್ದಾರೆ. ಇದನ್ನು ಇವರ ಗಮನಕ್ಕೆ ತಂದು ಒಂದೂವರೆ ವರ್ಷದಿಂದ ಏನು ಮಾಡುತ್ತಿದ್ದರು? ಅದಕ್ಕಾಗಿ ನಾನು ಹೇಳುವುದು, ಭ್ರಷ್ಟಾಚಾರದ ಪ್ರಕರಣ ತಮ್ಮ ಗಮನಕ್ಕೆ ತಂದ ತಕ್ಷಣ ಚುರುಕಾಗಿ ನಿಂತು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ನೀವು ಏನು ಕ್ರಮ ತಗೆದುಕೊಂಡಿದ್ದೀರಿ, ಅದನ್ನು ಹೇಳಿ. ಅಧಿಕಾರಿಗಳು ಮುಚ್ಚಿ ಹಾಕುವುದಕ್ಕೆ ಪೇಮೆಂಟ್ ಮಾಡಿಲ್ಲವೆಂದು ತಪ್ಪು ಉತ್ತರ ಕೊಟ್ಟರು.

ಶ್ರೀ ಹೆಚ್.ಡಿ. ರೇವಣ್ಣ :— ತಾವು ಪತ್ರಿಕೆಗೋಸ್ಕರ ಪ್ರಚಾರಕ್ಕೋಸ್ಕರ ಏನೇನೋ ಹೇಳಬೇಡಿ. ಕಾನೂನು ರೀತಿ ಕ್ರಮ ತೆಗೆದುಕೊಂಡಿದ್ದೇವೆ. ನಾವು ಈಗಾಗಲೇ ನೋಟಿಸ್ ಕೊಟ್ಟಿದ್ದೇವೆ. ಇದು ನನ್ನ ಇಲಾಖೆಯಲ್ಲಿ ಏನಾಗಿದೆ ಎಂದರೆ, ಆಶ್ರಯ ಮನೆ ಇರಬಹುದು, ಆಶ್ರಯ ನಿವೇಶನ ಇರಬಹುದು ಇದು ಎರಡೂ ಇಲಾಖೆಯಲ್ಲಿ ಆಗುತ್ತದೆ. ಆರ್‌ಡಿಪಿಆರ್ ಮುಖ್ಯ ಕಾರ್ಯದರ್ಶಿ ಇರಬಹುದು, ಜಿಲ್ಲಾಧಿಕಾರಿಗಳಿರಬಹುದು, ಒಂದು ರೀತಿಯಲ್ಲಿ ಇಲಾಖೆಗೆ ಬರುತ್ತದೆ. ನಿವೇಶನ ಮಾಡುವುದು ಕಂದಾಯ ಇಲಾಖೆ. ಜಿಲ್ಲಾಧಿಕಾರಿಗಳ ಮುಖೇನ ಎಸಿ ಮತ್ತು ರೀತಿಯಲ್ಲಿ ಇಲಾಖೆಯವರು ಮಾಡುತ್ತಾರೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನೋಟಿಸ್ ಕೊಡಬೇಕಾಗುತ್ತೆ. ಜಿಲ್ಲಾಧಿಕಾರಿಗಳು ನೋಟಿಸ್ ಕೊಟ್ಟಿದ್ದಾರೆ. ಕೂಡಲೇ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನು 15 ದಿವಸದಲ್ಲಿ ಮಾಡುವುದಕ್ಕೆ ಕಂದಾಯ ಸಚಿವರಿಗೆ ನಾನು ಪತ್ರ ಬರೆಯುತ್ತೇನೆ. ಇದಕ್ಕಿಂತ ನಾನು ಇನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ :— ಎರಡು ಸಾರಿ ಹಣ ಪಾವತಿ ಮಾಡಿಲ್ಲವೆಂದು ಮೊದಲು ಉತ್ತರ ಕೊಟ್ಟು. ಆಮೇಲೆ ಮತ್ತೆ ಒತ್ತಾಯ ಮಾಡಿದ ಮೇಲೆ ಪೇಮೆಂಟ್ ಮಾಡಿದ್ದೇವೆ ದುರುಪಯೋಗವಾಗಿದೆ ಎಂದು ಹೇಳಿದರು. ಹಾಗೆ ಹೇಳಿ ಒಂದು ವರ್ಷ ಆದರೂ ಕೂಡ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇಲ್ಲಿ ಸದನದಲ್ಲಿ ಪ್ರಶ್ನೆ ತಂದಾಗ ಮಾತ್ರ ನೋಟೀಸ್ ಕೊಟ್ಟಿದ್ದೇವೆಂದು ಹೇಳುತ್ತಾರೆ. ಸರ್ಕಾರಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ

ಇಚ್ಛೆ ಇಲ್ಲವೆಂದು ವ್ಯಕ್ತವಾಗುತ್ತದೆ. ಅದಕ್ಕೆ ನಾನು ಹೇಳುವುದು ಮಂತ್ರಿಗಿರಿ ಎಂದರೆ ಹುಡುಗಾಟಿಕೆ ಅಲ್ಲ, ಇದು ಜವಾಬ್ದಾರಿ ಹುದ್ದೆ. ಮಾಡುವುದಕ್ಕೆ ಆದರೆ ಮಾಡಬೇಕು, ಮಾಡುವುದಕ್ಕೆ ಆಗದೇ ಇದ್ದರೆ ಬಿಟ್ಟು ಹೋಗಬೇಕು. ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿಕೊಂಡು ಹೋದರೆ ಅದನ್ನು ನಾವು ಕೇಳಿಕೊಂಡು ಹೋಗಬೇಕಾ? ನಾನು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಹಿಡಿದು ಒಂದೂವರೆ ವರ್ಷವಾಯಿತು. ತಪ್ಪು, ಆಗಿದೆ ಎಂದು ಹೇಳಿ ಅಧಿಕಾರಿಗಳೂ ಕೂಡ ಮುಚ್ಚಿ ಹಾಕುವುದಕ್ಕೆ ಎರಡು ಸಾರಿ ಹಣ ಪಾವತಿಯಾಗಿಲ್ಲ ಎಂದು ತಪ್ಪು ಉತ್ತರ ಕೊಟ್ಟಿದ್ದಾರೆ. ನಾನು ಬೇಕಾದರೆ ಆ ಪತ್ರಗಳನ್ನು ತಂದಿಕೊಡುತ್ತೇನೆ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಅದು ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಇದು ಕ್ರಿಮಿನಲ್ ಆಫೆನ್ಸ್ ಕ್ರಮ ತೆಗೆದುಕೊಳ್ಳಬೇಕು. ದುರುಪಯೋಗವಾಗಿದೆ ಬರೆದಿದ್ದೇವೆ ಎಂದರೆ ಏನು ಅರ್ಥ?

ಶ್ರೀ ಹೆಚ್.ಡಿ. ರೇವಣ್ಣ :— ನಾನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ಕೊಟ್ಟಿದ್ದಾರೆ. ನೋಟಿಸ್ ಕೊಟ್ಟ ಅಧಿಕಾರಿ ಏನು ಉತ್ತರ ಕೊಡುತ್ತಾರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಡೈರೆಕ್ಟಾಗಿ ತೆಗೆದುಕೊಳ್ಳಲು ಆಗುತ್ತದೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ದುರುಪಯೋಗವಾಗಿರುವ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಶೀಲನೆ ಮಾಡಿ ತಾವು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ.

ಶ್ರೀ ಹೆಚ್.ಡಿ. ರೇವಣ್ಣ :— ಸಂಬಂಧಪಟ್ಟ ಕಾರ್ಯದರ್ಶಿಯವರು ಇದ್ದಾರೆ. ಅವರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಹೇಳಿದ್ದೇನೆ. ಮತ್ತೆ ಇನ್ನೊಂದು ಸಾರಿ ತಿಳಿಸಿ 15 ದಿವಸದ ಒಳಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ :— ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ 24.5.98ರಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ತೆಗೆದುಕೊಳ್ಳುತ್ತಾರೆ ಬಿಡಿ ರಾಮಸ್ವಾಮಿಯವರೇ ಎಂದು ನೀವೂ ಕೂಡ ಹೇಳಿದ್ದೀರಿ.

ಅಧ್ಯಕ್ಷರು :— ನಿಯಮಾವಳಿ ಪ್ರಕಾರ ನೋಟಿಸ್ ಕೊಡಬೇಕು, ನೋಟಿಸ್‌ಗೆ ಉತ್ತರ ಕೊಡಬೇಕು. ನೋಟಿಸ್‌ಗೆ ಉತ್ತರ ಕೊಟ್ಟ ಮೇಲೆ ಏನು ಉತ್ತರ ಕೊಡುತ್ತಾರೆ ಅದನ್ನು ಅವಲಂಬಿಸಿ ಕ್ರಮ ಜರುಗಿಸುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ :— ನೋಟಿಸ್ ಯಾವಾಗ ಕೊಟ್ಟರು, ಅದನ್ನು ಕೇಳಿ.

ಅಧ್ಯಕ್ಷರು :— ನೋಟಿಸ್ ಕೊಟ್ಟಿರತಕ್ಕಂಥದ್ದು ನೀವು ಪ್ರಶ್ನೆ ಕೊಟ್ಟ ಮೇಲೆ ಎಂದು ನೀವು ಹೇಳಿದ ಮೇಲೆ ಮೇಲ್ನೋಟಕ್ಕೆ ನೀವು ಮಾಡತಕ್ಕಂತಹ ಅಪಾದನೆ ಸಾಬೀತಾಗಿದೆ. ನೀವು ಹೇಳಿದ್ದು ಇಲ್ಲವೆಂದು ಹೇಳುತ್ತಿಲ್ಲ. ಆಡಳಿತ ಯಂತ್ರದಲ್ಲಿ ಆ ಇಲಾಖೆ ಈ ಇಲಾಖೆ ಇವರಿಗೆ ಕೇಳುವುದು, ಅವರಿಗೆ ಕೇಳುವುದು ಯಾರೋ ಒಬ್ಬರು ಅವರಿಗೆ ರಕ್ಷಣೆ ಕೊಡಬೇಕೆಂದು ಇದ್ದರೂ ಕೂಡ ಮಂತ್ರಿಗಳು ಮಾಡಬೇಕೆಂದು ಇಲ್ಲ. ಇಡೀ ವ್ಯವಸ್ಥೆಯಲ್ಲಿ ಯಾರಿಗೋ ಒಬ್ಬರಿಗೆ ಆಸಕ್ತಿ ಇದ್ದರೂ ಕೂಡ ಈ ಫೈಲ್ ಮುಚ್ಚಿಡುವುದು ಮಾಡುತ್ತಾರೆ, ತಪ್ಪಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ :— ಅಧಿಕಾರಿಗಳು ಎರಡನೇ ಸಾರಿ ಹಣಪಾವತಿ ಮಾಡಿಲ್ಲವೆಂದು ಉತ್ತರ ಕೊಟ್ಟರು. ಅದನ್ನು ಮುಚ್ಚಿ ಹಾಕತಕ್ಕಂತಹ ಪ್ರಯತ್ನ ಇದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇದು ಭರವಸೆ ಸಮಿತಿ ಮುಂದೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಿ ಎಂದು ಆ ಕಾರ್ಯದರ್ಶಿಯವರಿಗೆ ಹೇಳಿ ಮೂರು ತಿಂಗಳಾಯಿತು. ಇದು ಹೊಸ ವಿಷಯವೇನೂ ಅಲ್ಲ. ಎರಡು ಸಾರಿ ಏಕೆ ಪೇಮೆಂಟ್ ಮಾಡುವುದಕ್ಕೆ ಬಿಟ್ಟಿದ್ದೀರಿ, ತಹಶೀಲ್ದಾರ್ ತಪ್ಪು ಮಾಡಿದ್ದಾರೆ, ಇಲ್ಲ ಬಿಡಿಒ ತಪ್ಪು ಮಾಡಿದ್ದಾರೆ. ಇಬ್ಬರಲ್ಲಿ ಒಬ್ಬರ ಮೇಲೆ ಕ್ರಮ ಜರುಗಿಸಿ ಎಂದು ನಾವು ಅವರಿಗೆ ಜಂಟಿಯಾಗಿ ಕೇಳಿ ಮೂರು ತಿಂಗಳಾಯಿತು.

ಅಧ್ಯಕ್ಷರು :— ಇಡೀ ಪ್ರಶ್ನೆಯನ್ನು ಎರಡು ಭಾಗವಾಗಿ ವಿಂಗಡಿಸಿ. ಒಂದು ತಪ್ಪಿತಸ್ತರ ಮೇಲೆ ಕ್ರಮ ಜರುಗಿಸತಕ್ಕಂಥದ್ದು. ನೋಟಿಸ್ ಕೊಟ್ಟಿದ್ದಾರೆ, ತಡವಾಗಿ ಕೊಟ್ಟಿದ್ದಾರೆ, ಉತ್ತರ ಬಂದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ಒಂದು. ಎರಡನೆಯದು ನೋಟೀಸ್ ಕೊಡುವುದಕ್ಕೆ ಏಕೆ ಇಷ್ಟು ದಿವಸ ತಡ ಮಾಡಿದರು. ಈ ಕ್ರಮ ಜರುಗಿಸದೇ ಇರುವುದಕ್ಕೆ ಯಾರು ಕಾರಣ ಎನ್ನತಕ್ಕಂಥದ್ದನ್ನು ನಾನು ಮಂತ್ರಿಗಳಿಗೆ ಆದೇಶ ಕೊಡುತ್ತೇನೆ. ದಯಮಾಡಿ ಇಡೀ ಕಡತ ತರಿಸಿ ಯಾರ ಸಂಬಂಧದಲ್ಲಿ ಇದನ್ನು ಇಟ್ಟಿದ್ದರು, ಅವರ ಮೇಲೆ ಕ್ರಮ ಜರುಗಿಸಿ. ಕ್ರೈಮ್ ಕಮಿಟ್ ಮಾಡುವುದಕ್ಕಿಂತ ಕ್ರೈಮ್ ಅಡಿಟ್ ಮಾಡತಕ್ಕಂಥದ್ದು ಇನ್ನು ದೊಡ್ಡ ಕ್ರೈಮ್ ಆಗುತ್ತದೆ. ತಪ್ಪು ಮಾಡಿದವನದ್ದು ಒಂದು ಅಪರಾಧವಾದರೆ ಇದನ್ನು ಮುಚ್ಚಿಡುವುದಕ್ಕೆ ಪ್ರಯತ್ನಪಟ್ಟಿದ್ದು ಇನ್ನೂ ದೊಡ್ಡ ಅಪರಾಧವಾಗುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ :— ಅಧ್ಯಕ್ಷರೆ, ಈ ಸದನ ಮುಗಿಯುವುದರೊಳಗೆ ತೆಗೆದುಕೊಂಡ ಕ್ರಮದ ಬಗ್ಗೆ ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು :— ನಾನು ತರಿಸಿಕೊಡುತ್ತೇನೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನನ್ನು ಕಬಳಿಸುತ್ತಿರುವುದು.

44(82) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಕೇಂದ್ರಗಳ ಸುತ್ತಮುತ್ತ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ಬೆಲೆಯ ಸರ್ಕಾರಿ ಜಮೀನನ್ನು ಕಬಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ರೀತಿ ಅಕ್ರಮವಾಗಿ ಕಬಳಿಸಿದ ಜಮೀನಿನ ವಿಸ್ತೀರ್ಣವೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಹೌದು

ಆ) ಒಟ್ಟು 2760.21 ಎಕರೆ

<u>ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.</u>

1) ಬೆಂಗಳೂರು ನ.ಜಿ.	2722-21	ಎಕರೆ
2) ಮೈಸೂರು ಜಿಲ್ಲೆ	32-24	"
3) ದ.ಕನ್ನಡ ಜಿಲ್ಲೆ	5-16	"

ಉಳಿದ ಜಿಲ್ಲೆಗಳಲ್ಲಿ ಭೂಕಬಳಿಕೆ ಆಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 136 (3)ರಡಿಯಲ್ಲಿ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡು ಜಮೀನನ್ನು ಸರ್ಕಾರದ ಹೆಸರಿಗೆ ಪುನರ್ ಸ್ಥಾಪಿಸಲು ಹಾಗೂ ಆರೋಪಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಸಹ ಹೂಡಲು ಕ್ರಮ ಜರುಗಿಸಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಅಧ್ಯಕ್ಷರೆ, ತಾವು ಸ್ವಲ್ಪ ಗಮನಿಸಬೇಕು. ನಾನು ಪ್ರಶ್ನೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಕೇಂದ್ರಗಳ ಸುತ್ತಮುತ್ತ ನಕಲಿ ದಾಖಲೆಗಳನ್ನು

ಸೃಷ್ಟಿಸಿ ಕೋಟ್ಯಾಂತರ ರೂ.ಗಳು ಬೆಲೆ ಬಾಳುವ ಜಮೀನುಗಳನ್ನು ಕಬಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಆ ರೀತಿಯಲ್ಲಿ ಕಬಳಿಸಿರುವ ಜಮೀನಿನ ವಿಸ್ತೀರ್ಣವೆಷ್ಟು ಎಂದು ಕೇಳಿರುವುದಕ್ಕೆ ಸರ್ಕಾರದ ಪ್ರಕಾರ 2760.21 ಎಕರೆಗಳಾಗಿದೆ. ನನ್ನ ಪ್ರಕಾರ ಇವರ ಅಂಕಿ ಅಂಶ ನಿಜಕ್ಕೂ ಕಾಲು ಭಾಗವು ಕೂಡ ಇಲ್ಲ. ಇಂದು ಕರ್ನಾಟಕದ ಮೈಸೂರು, ಬೆಂಗಳೂರು ಮತ್ತು ಪ್ರಮುಖ ಪಟ್ಟಣ ಪ್ರದೇಶಗಳಲ್ಲಿ ಸರ್ಕಾರಿ ಜಮೀನನ್ನು ಕಬಳಿಸುವ ಲ್ಯಾಂಡ್ ಮಾಫಿಯಾದವರು ಎನಿದ್ದಾರೆ ಇವರು ಸಾವಿರಾರು ಕೋಟಿ ರೂ.ಗಳನ್ನು ನುಂಗಿಬಿಟ್ಟಿದ್ದಾರೆ. ಸರ್ಕಾರ ಕೊಟ್ಟಿರುವ ಅಂಕಿಅಂಶಗಳ ಪ್ರಕಾರವೇ ತೆಗೆದುಕೊಂಡರೂ ಕೂಡ ಇವುಗಳನ್ನು ಸ್ಟೇಟ್‌ಗಳನ್ನಾಗಿ ಸರ್ಕಾರ ಮಾಡಿದರೆ ಒಂದೊಂದು ಎಕರೆಗೂ ಕನಿಷ್ಠ 2 ಕೋಟಿ ರೂ.ಗಳು ಬರುತ್ತದೆ. ಕೇವಲ ಇದರಿಂದಲೇ 5400 ಕೋಟಿ ರೂ.ಗಳು ಬರುತ್ತದೆ. ಹೆಚ್ಚು ಕಡಿಮೆ ನಮ್ಮ ರಾಜ್ಯದ ಬಜೆಟ್‌ನಲ್ಲಿ ಅಲೊಕೇಟ್ ಮಾಡಿರುವ 5,888 ಕೋಟಿ ರೂ.ಗಳೇ ಬರುತ್ತದೆ. ಹೀಗಿರುವಾಗ ಇಂದು ಲ್ಯಾಂಡ್ ಮಾಫಿಯಾಗಳವರು ಎನಿದ್ದಾರೆ ಇವರು ಸಾವಿರಾರು ಕೋಟಿ ನುಂಗಿ ಇಂದು ರೆಸಾರ್ಟ್ ಕಟ್ಟಿಕೊಂಡಿದ್ದಾರೆ, ಕಾಂಪ್ಲೆಕ್ಸ್‌ಗಳನ್ನು ಮಾಡಿದ್ದಾರೆ. ಲೆಕ್ಕವಿಲ್ಲದಷ್ಟೂ ಕೋಟಿ ರೂ.ಗಳನ್ನು ನುಂಗಿದ್ದಾರೆ. ಯಾರೋ ಒಬ್ಬ ಬಡವ ಒಂದು ಗುಡಿಸಲು ಕಟ್ಟಿಕೊಂಡಿದ್ದರೆ ಸರ್ಕಾರದವರು ಅದನ್ನು ಕಿತ್ತು ಎಸೆಯಬಿಡುತ್ತಾರೆ. ನಾನು ನೇರವಾಗಿ ಕೇಳುವ ಪ್ರಶ್ನೆಯೆಂದರೆ ಇಂದು ಲ್ಯಾಂಡ್ ಮಾಫಿಯಾಗಳು ಎನಿದ್ದಾರೆ ಅವರಲ್ಲಿ ಎಷ್ಟು ಜನರನ್ನು ಸರ್ಕಾರ ಅರೆಸ್ಟ್ ಮಾಡಿದೆ? ಎಷ್ಟು ಜನರ ಮೇಲೆ ಕೇಸ್ ಹಾಕಿದೆ? ಮತ್ತು ಎಷ್ಟು ಜನರಿಂದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದೆ ಎಂಬ ಬಗ್ಗೆ ತಿಳಿಸಬೇಕು. ಇದನ್ನು ಕಂಟ್ರೋಲ್ ಮಾಡುವ ಸಲುವಾಗಿ ವಿಶೇಷ ಕಾನೂನನ್ನು ಮಾಡಲಾಗಿದೆಯೇ ಅಥವಾ ಸಮಿತಿಯನ್ನೇನಾದರೂ ನೇಮಕ ಮಾಡಲಾಗಿದೆಯೇ ಎಂಬ ಬಗ್ಗೆ ಸರ್ಕಾರ ತಿಳಿಸಬೇಕು. ಏಕೆಂದರೆ ಸರ್ಕಾರವೇ ಲ್ಯಾಂಡ್ ಮಾಫಿಯಾಗಳಿಗೆ ಗುತ್ತಿಗೆ ಕೊಟ್ಟಿದೆಯೇನೋ ಎನ್ನುವ ಭಯ ನಮಗೆ ಆಗುತ್ತಿದೆ. ಆದಕಾರಣ ದಯವಿಟ್ಟು ಉತ್ತರವನ್ನು ಕೊಡಬೇಕು.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ ಸರ್ಕಾರವೇ ಲ್ಯಾಂಡ್ ಮಾಫಿಯಾಗಳಿಗೆ ಗುತ್ತಿಗೆ ಕೊಟ್ಟಿದೆ ಎಂದರು. ದಯವಿಟ್ಟು ಆ ರೀತಿಯಲ್ಲಿ ಅವರು ಹೇಳಬಾರದು. ಈ ಸರ್ಕಾರ ಯಾವುದೇ ಮಾಫಿಯಾಗಳಿಗಾಗಲಿ ಅಥವಾ ಅಥವಾ ಯಾವುದೇ ಪಟ್ಟಭದ್ರ ಹಿತಾಸಕ್ತಿಗಳಿಗಾಗಲಿ ಮಣಿಯುವ ಪ್ರಶ್ನೆಯೇ ಇಲ್ಲ. ನಾನು ಆದರ ಬಗ್ಗೆ ಸ್ಪಷ್ಟಪಡಿಸುತ್ತಿದ್ದೇನೆ. ನಾನು ಮಂತ್ರಿಯಾಗಿ ಅಧಿಕಾರಿಕ್ಕೆ ಬಂದ ಮೇಲೆ ಬೆಂಗಳೂರಿನ ಸುತ್ತಮುತ್ತ ಸುಮಾರು ಒಂದೂವರೆ ಸಾವಿರ ಎಕರೆ ಸರ್ಕಾರಿ ಜಮೀನು ಮಧ್ಯೆ ಮಧ್ಯೆ ಬೆಲೆಬಾಳುವಂಥದ್ದು ಇದೆಯೆಂದು ನನಗೆ ತಿಳಿದಿದೆ. ಇನ್ನು ಕೆಲವು ಜಮೀನುಗಳಲ್ಲಿ ಲ್ಯಾಂಡ್ ಮಾಫಿಯಾಗಳವರೇನಿದ್ದಾರೆ ಅವರು ಲೈಸನ್ಸ್‌ಗಳು ಇಲ್ಲದೇ ಸಂಕೀರ್ಣಗಳನ್ನು ಕಟ್ಟಿಕೊಂಡಿದ್ದಾರೆ ಎನ್ನುವ ವರದಿಯೂ ಕೂಡ ಬಂದಿದೆ. ಹೀಗಾಗಿ ನಾನು ಕೆಲವು ಪ್ರದೇಶಗಳಿಗೆ ಒಂದು ಬಾರಿ ಭೇಟಿ ಕೊಟ್ಟಿದೇನೆ. ಅದೇ ರೀತಿ

ಇನ್ನೊಂದು ಬಾರಿ ಅಧಿಕಾರಿಗಳ ಜೊತೆ ಭೇಟಿ ಕೊಡಬೇಕೆಂದು ಅಂದುಕೊಂಡಿದ್ದೇನೆ. ಇದರ ಬಗ್ಗೆ ಅಧಿಕಾರಿಗಳಿಗೂ ಕೂಡ ಸೂಚನೆ ಕೊಟ್ಟು ಎಲ್ಲೆಲ್ಲಿ ಸ್ಥಳೀಯ ಅಧಿಕಾರಿಗಳ ಸಹಕಾರದಿಂದ ಖಾತೆಗಳನ್ನು ಬದಲಾವಣೆ ಮಾಡಿ, ಮ್ಯುಟೇಶನ್ ಬದಲಾವಣೆ ಮಾಡಿ ಕೆಲವು ಕಾನೂನುಗಳನ್ನು ಉಲ್ಲಂಘನೆ ಮಾಡಿ ಮಾಫಿಯಾಗಳ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದರೆ ಅಂಥವರ ಹೆಸರುಗಳನ್ನು ಸೆಕ್ಷನ್ 136ರ ಅಡಿಯಲ್ಲಿ ಪಟ್ಟಿ ಮಾಡಬೇಕೆಂದು ಹೇಳಲಾಗಿದೆ. ಅದರಲ್ಲಿಯೂ ಬೆಂಗಳೂರಿನಲ್ಲಿ ಸಾವಿರಾರು ಎಕರೆ ಅಂಥದ್ದು ಇರತಕ್ಕಂಥದ್ದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಇದು ಕೇವಲ ಒಂದೇ ತಿಂಗಳಿನಲ್ಲಿ ನಡೆದುಕೊಂಡು ಬಂದಿರುವುದಲ್ಲ, ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ನಾನು ಮಂತ್ರಿಯಾಗಿ ಕೇವಲ ಒಂದು ವರ್ಷವಾಗಿದೆ. ಆದರೂ ಈಗಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಸಲುವಾಗಿ ಮೊದಲನೇ ಹಂತವಾಗಿ ಅಧಿಕಾರಿಗಳಿಗೆ ಪಟ್ಟಿ ಮಾಡಲು ಹೇಳಲಾಗಿದೆ. ಸಂಪೂರ್ಣ ಕಟ್ಟಿದ್ದರೆ ಅದನ್ನು ಹರಾಜು ಹಾಕಿದರೆ ನೂರಾರು ಕೋಟಿ ರೂ.ಗಳನ್ನು ಸರ್ಕಾರಕ್ಕೆ ಬರುವ ಹಾಗೆ ಮಾಡುವುದಕ್ಕೆ ಸರ್ಕಾರದ ಕಾನೂನಿನಲ್ಲಿ ಅವಕಾಶವಿದೆ. ಅದೇ ರೀತಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ ಕಾನೂನಿನಲ್ಲಿ ಅವಕಾಶವಿದೆ. ನಾನು ಈ ಸದನದಲ್ಲಿ ಎಲ್ಲರಿಗೂ ಕೇಳಿಕೊಳ್ಳುವುದಿಷ್ಟೆ. ಇಂದು ಯಾವ ಅಧಿಕಾರಿಗಳೇ ಆಗಲಿ ಈ ಲ್ಯಾಂಡ್ ಮಾಫಿಯಾದಲ್ಲಿ ಶಾಮೀಲಾಗಿದ್ದರೆ ಅವರು ವಿಲೇಜ್ ಅಕೌಂಟೆಂಟ್ ಇರಬಹುದು, ರೆವಿನ್ಯೂ ಇನ್ಸ್‌ಪೆಕ್ಟರ್ ಇರಬಹುದು, ತಹಸೀಲ್ದಾರ್ ಇರಬಹುದು ಅಥವಾ ಅಸಿಸ್ಟೆಂಟ್ ಕಮಿಶನರ್ ಇರಬಹುದು ಅಥವಾ ಯಾರೇ ಇರಬಹುದು, ಅಂಥವರ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕಾದರೆ ಯಾರೂ ಕೂಡ ರಾಜಕೀಯ ಒತ್ತಡವನ್ನು ತರಬಾರದು. ಆ ರೀತಿ ರಾಜಕೀಯ ಒತ್ತಡ ಬಂದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಈಗಾಗಲೇ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಕಳಕಳಿ ಸರ್ಕಾರಕ್ಕೂ ಕೂಡ ಇದೆ. ಸರ್ಕಾರಿ ಜಮೀನನ್ನು ಬೇರೆಯವರು ಕಬಳಿಸುವುದಕ್ಕೆ ಬಿಡುವುದಿಲ್ಲ. ಇನ್ನು ಮುಂದುವರಿದು ನಾವು ಇಂದು ಕಂದಾಯ ಜಮೀನುಗಳನ್ನು ರಕ್ಷಣೆ ಮಾಡುವ ಸಲುವಾಗಿ ರೆವಿನ್ಯೂ ಲ್ಯಾಂಡ್ ಪ್ರೊಟೆಕ್ಷನ್ ಅಥಾರಿಟಿಯನ್ನು ಬೆಂಗಳೂರಿನಲ್ಲಿ ಮಾಡಬೇಕೆಂದು ಚಿಂತನೆ ನಡೆಯುತ್ತಿದೆ. ಇದಕ್ಕೆ ಜುಡಿಷಿಯಲ್ ಅಧಿಕಾರವನ್ನು ಕೊಡಬೇಕೆನ್ನುವ ಚಿಂತನೆ ಕೂಡ ಸರ್ಕಾರಕ್ಕಿದೆ. ಇಂದು ಕರ್ನಾಟಕದ ಬಿಜಾಪುರ ಮತ್ತು ಶಿವಮೊಗ್ಗ ಅಥವಾ ಇನ್ನಾವುದಾದರೂ ಭಾಗದಿಂದ ಬಡವರು ಕೂಲಿ ಮಾಡುವುದಕ್ಕೆ ಬೆಂಗಳೂರಿಗೆ ಬಂದು ಇಲ್ಲಿ ಎಲ್ಲೋ ಕೆಲವು ಕಡೆಗಳಲ್ಲಿ 10x20, 20x20 ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಅವರನ್ನು ಹೊರಗೆ ಕಳುಹಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ಬಡವರಾಗಿರುವುದರಿಂದ ಅವರು ಎಲ್ಲಿಗೂ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಂಥವರ ಮನೆಗಳನ್ನು ರೆಗ್ಯುಲರೈಸ್ ಮಾಡಬೇಕೆಂಬ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡಲಾಗುತ್ತಿದೆ. ಆದರೆ ಯಾರು ಹಣ ಮಾಡಬೇಕೆನ್ನುವ ದೃಷ್ಟಿಯಿಂದ ರೆಸಾರ್ಟ್‌ಗಳನ್ನು, ಕಾಂಪ್ಲೆಕ್ಸ್‌ಗಳನ್ನು ಕಟ್ಟಿದ್ದಾರೆ ಅಂಥವರ ಮೇಲೆ ನಿರ್ದಾಕ್ಷಿಣ್ಯವಾಗಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದುದರಿಂದ ತಾವು ಅದರ ಬಗ್ಗೆ ಚಿಂತೆ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಈ ಹಿಂದೆ ಮೈಸೂರು ನಗರದ ಸುತ್ತಮುತ್ತ ಭೂ ಹಗರಣ ನಡೆದಿದೆಯೆಂದು ಹೇಳಿ ಅದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡಲಾಗಿತ್ತು. ಆ ಸಮಿತಿ ವರದಿಯನ್ನೂ ಕೂಡ ಸರ್ಕಾರಕ್ಕೆ ಕೊಟ್ಟಿದೆ. ಆ ವರದಿ ಬಂದು ಈಗಾಗಲೇ ಒಂದೂವರೆ ವರ್ಷವಾಗಿದೆ. ಅದನ್ನು ಸರ್ಕಾರ ಕಾರ್ಯರೂಪಕ್ಕೆ ತರುತ್ತದೆಯೇ ಅಥವಾ ಅದು ಮೂಲೆ ಗುಂಪಾಗಿ ಉಳಿಯುತ್ತದೆಯೇ ಎಂಬ ಬಗ್ಗೆ ಸರ್ಕಾರ ಬೆಳಕು ಚೆಲ್ಲಬೇಕು. ಅದರಲ್ಲಿ ಏನು ಹೇಳಲಾಗಿದೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಬಿ. ಸೋಮಶೇಖರ್ :— ಈಗತಾನೇ ಆ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನನ್ನ ಬಳಿ ತಕ್ಷಣಕ್ಕೆ ಮಾಹಿತಿಯಿಲ್ಲ. ಈ ಬಗ್ಗೆ ಬೇರೆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಸಂಬಂಧಪಟ್ಟಂತೆ ಕಡತವನ್ನು ತರಿಸಿಕೊಂಡು ಸಮಂಜಸ ಉತ್ತರವನ್ನು ಹೇಳುತ್ತೇನೆ. ಆದರೆ ಒಂದು ಆಶ್ವಾಸನೆಯನ್ನು ನಾನು ಕೊಡಬಯಸುತ್ತೇನೆ. ಮಾನ್ಯ ಸದಸ್ಯರು ಎತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಕಡತವನ್ನು ತರಿಸಿಕೊಂಡು ಅಧ್ಯಯನ ಮಾಡಿ ಕಾನೂನು ರೀತಿಯಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಬಹುದೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಂದಮೇಲೆ ವಿದ್ಯುತ್ ದರ, ಬಸ್ ದರ ಮತ್ತು ಇತರ ದರಗಳನ್ನು ಏರಿಸುತ್ತಲೇ ಬಂದಿದೆ. ನಾನು ಹೇಳುವುದೇನೆಂದರೆ ಲ್ಯಾಂಡ್ ಮಾಫಿಯಾಗಳ ಮೇಲೆ ಬಿಗಿಯಾದ ಹಿಡಿತವಿಟ್ಟುಕೊಂಡರೆ ಇಂದು ಬಜೆಟ್‌ನಲ್ಲಿ 5888 ಕೋಟಿ ರೂ.ಗಳ ಪ್ಲಾನ್ ಏನು ಇಟ್ಟುಕೊಂಡಿದ್ದಾರೆ ಅದಕ್ಕೂ ಹಣ ಒದಗಿಸಿಕೊಳ್ಳುವುದಲ್ಲದೇ ಒಂದು ವರ್ಷ ಯಾವ ವಸ್ತುಗಳ ಮೇಲೂ ತೆರಿಗೆ ಹಾಕದೇ ಸರ್ಕಾರವನ್ನು ನಡೆಸಬಹುದು. ಒಂದು ರೀತಿಯಲ್ಲಿ ಇಂದು ಆರ್ಥಿಕ ದಾಂಧಲೆ ನಡೆಯುತ್ತಿದೆ. ಹೀಗಿರುವ ಕಾರಣದಿಂದಲೇ ನಾನು ಕೇಳುವ ಪ್ರಶ್ನೆಯೆಂದರೆ ಇದುವರೆಗೆ ಎಷ್ಟು ಜನ ಅಧಿಕಾರಿಗಳನ್ನು ಸರ್ಕಾರ ಸಸ್ಪೆಂಡ್ ಮಾಡಿದೆ, ಭೂಮಿ ಲೂಟಿ ಮಾಡಿರುವ ವ್ಯಕ್ತಿಗಳಲ್ಲಿ ಎಷ್ಟು ಜನರನ್ನು ಜೈಲಿಗೆ ಕಳುಹಿಸಿದೆ, ಒಂದು ವೇಳೆ ಶಿಕ್ಷೆ ಕೊಡುವಾಗ ರಾಜಕೀಯ ಒತ್ತಡ ತರುವ ವ್ಯಕ್ತಿಗಳಿದ್ದರೆ ಅಂಥವರ ಹೆಸರುಗಳನ್ನು ಮಂತ್ರಿಗಳು ಬಹಿರಂಗ ಮಾಡಬೇಕು. ಆ ರೀತಿ ಬಹಿರಂಗಪಡಿಸದಿದ್ದರೆ ಮಂತ್ರಿಗಳು ರಾಜಕೀಯ ಒತ್ತಡಕ್ಕೆ ಮಣಿಯುತ್ತಾರೆ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ನಾನು ಅದಕ್ಕೇ ಹೇಳುತ್ತಿರುವುದು, ಒಂದು ಬಾರಿ ಅಂಥ ವ್ಯಕ್ತಿಗಳಿಗೆ ಶಿಕ್ಷೆಯಾದರೆ ಇನ್ನು ಮುಂದೆ ಯಾರೂ ಕೂಡ ಆ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ. ಸರ್ಕಾರಿ ಭೂಮಿಗೆ ಸಂಬಂಧಪಟ್ಟಂತೆ ದಾವಲೆಯನ್ನು ತಿದ್ದಿರುವ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆಯೇ? ಇನ್ನು ರೆಸಾರ್ಟ್ ಮತ್ತು ಕಾಂಪೌಂಡ್‌ಗಳನ್ನು ಸರ್ಕಾರಿ ಜಮೀನಿನಲ್ಲಿ ಕಟ್ಟಿಕೊಂಡಿರುವ ವ್ಯಕ್ತಿಗಳ ಮೇಲೆ ಕೇಸ್ ಹಾಕುವ ಪ್ರಯತ್ನ ಸರ್ಕಾರದಿಂದ ಇಲ್ಲಿಯವರೆಗೆ ನಡೆದಿದೆಯೇ? ಇದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು.

ಶ್ರೀ ಬಿ. ಸೋಮಶೇಖರ್ :— ಯಾರು ಯಾರು ಶಾಮೀಲಾಗಿದ್ದಾರೆ ಎಂಬುದನ್ನು ತಿಳಿಯುವ ಸಲುವಾಗಿ ಆಡಳಿತಾತ್ಮಕ ಪ್ರಕ್ರಿಯೆಗಳು ಪ್ರತ್ಯೇಕವಾಗಿ ನಡೆಯುತ್ತಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಸರ್ಕಾರ ಉತ್ತರ ಕೊಡುತ್ತದೆ. ಆದರೆ ಸರ್ಕಾರ ಯಾವ ಅಧಿಕಾರಿಗೂ ರಕ್ಷಣೆ ಕೊಡತಕ್ಕಂಥ ಕೆಲಸವನ್ನು ಮಾಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿರುವುದು ಬಹಳ ಕಡಿಮೆ. ಇವರೇ ರಾಜಕೀಯ ಒತ್ತಡ ಬರುತ್ತದೆ ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಇಂದು ಇದೇ ಬದುಕನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಅಧಿಕಾರಿಗಳಿಗೆ ರಕ್ಷಣೆ ಬರುತ್ತಿರುವುದರಿಂದಲೇ ಇನ್ನೂ ಸಾವಿರಾರು ಎಕರೆಗಳು ಜಾಸ್ತಿಯಾಗಿ ಹೋಗುತ್ತಿದೆ.

ಶ್ರೀ ಬಿ. ಸೋಮಶೇಖರ್ :— ರಾಜಕೀಯ ಒತ್ತಡ ಎಂದು ಹೇಳಿದ್ದು ವ್ಯವಸ್ಥೆಯ ಬಗ್ಗೆ ಹೇಳುವಾಗ ಹೇಳಿದೆ. ಈ ಒಂದು ವ್ಯವಸ್ಥೆ ಕೇವಲ ಒಂದು ಪಕ್ಷಕ್ಕೆ ಮಾತ್ರ ಸೀಮಿತವಾದ ವ್ಯವಸ್ಥೆಯಿಲ್ಲ. ಕಾಂಗ್ರೆಸ್ ಸರ್ಕಾರವಿರಲಿ, ಬಿ.ಜೆ.ಪಿ. ಸರ್ಕಾರವಿರಲಿ, ಜನತಾದಳ ಸರ್ಕಾರವಿರಲಿ, ರಾಜಕೀಯ ಒತ್ತಡದಿಂದ ಪೋಸ್ಟಿಂಗ್ಸ್ ಮಾಡಿಸಿರತಕ್ಕಂಥದ್ದು, ಅಧಿಕಾರಿಗಳಿಗೆ ಆ ಮೂಲಕ ರಕ್ಷಣೆ ಮಾಡುವ ವ್ಯವಸ್ಥೆ ಬಂದುಬಿಟ್ಟಿದೆ. ಇದಕ್ಕೆ ನಾವು ಅಥವಾ ನೀವು ಕಾರಣಕರ್ತರಲ್ಲ. ಆದುದರಿಂದಲೇ ನಾನು ಹೇಳುವುದೇನೆಂದರೆ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡುವಾಗ ಯಾವುದೇ ರಾಜಕೀಯ ಒತ್ತಡವನ್ನು ತರಬಾರದು. ಇದರ ಬಗ್ಗೆ ನಾವೆಲ್ಲರೂ ತೀರ್ಮಾನ ಮಾಡಬೇಕು. ಇಂದು ಪಾಲಿಸಿ ಮಾಡುವುದನ್ನು ಅಧಿಕಾರಿಗಳಿಗೆ ಬಿಟ್ಟು ನಾವು ಪೋಸ್ಟಿಂಗ್ಸ್ ಮಾಡುವುದನ್ನು ತೆಗೆದುಕೊಂಡಿದ್ದೇವೆ. ನ್ಯಾಯವಾಗಿ ನಾವು ಪಾಲಿಸಿಯನ್ನು ಮಾಡಬೇಕು. ಏಕೆಂದರೆ ನಾವು ಹಳ್ಳಿಗಾಡುಗಳಿಂದ ಬರುವವರಾದ್ದರಿಂದ ನಮಗೆ ಜನಗಳ ಕಷ್ಟಸುಖಗಳ ಬಗ್ಗೆ ನಮಗೆ ಚೆನ್ನಾಗಿ ಗೊತ್ತಿರುತ್ತದೆ. ಯಾವ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ಏನು ಯೋಜನೆಯನ್ನು ಹಾಕಬೇಕು ಎಂಬ ವಿಚಾರ ನಮಗೆ ಗೊತ್ತಿರುತ್ತದೆ. ಆದುದರಿಂದ ನಾವು ಪಾಲಿಸಿಯನ್ನು ಮಾಡಬೇಕು. ಆದರೆ ಅದನ್ನು ಬಿಟ್ಟು ನಾವು ಪೋಸ್ಟಿಂಗ್ಸ್ ಮಾಡುತ್ತೇವೆ. ಆದುದರಿಂದ ಇದರ ಬಗ್ಗೆ ತೀರ್ಮಾನ ಮಾಡಲು ನಾವೆಲ್ಲರೂ ಒಂದು ಸಮಿತಿಯನ್ನು ಮಾಡಿಕೊಂಡರೆ ಆ ಮೂಲಕ ಪಾರದರ್ಶಕವಾದ ತೀರ್ಮಾನವನ್ನು ತೆಗೆದುಕೊಂಡರೆ ಸ್ವಲ್ಪಮಟ್ಟಿಗೆ ಶಿಸ್ತನ್ನು ತರಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ರಾಜಕೀಯ ಒತ್ತಡಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಪಕ್ಷದ ಹೆಸರನ್ನೂ ಹೇಳಲಿಲ್ಲ. ತಾವೂ ಕೂಡ ಗಮನಿಸಿರಬಹುದು. ಮಂತ್ರಿಗಳೇ ರಾಜಕೀಯ ಒತ್ತಡ ತರುತ್ತಾರೆ ಎಂದು ಹೇಳಿದ ಕಾರಣ ನಾನು ಅದರ ಬಗ್ಗೆ ಹೆಸರುಗಳನ್ನು ಬಹಿರಂಗ ಮಾಡಿ ಎಂದೆ. ಇಂದು ರಾಜಕೀಯ ಒತ್ತಡದಿಂದ ಅಧಿಕಾರಿಗಳಿಗೆ ರಕ್ಷಣೆ ಸಿಗುತ್ತಿದೆ. ಯಾರು ರೆಸಾರ್ಟ್, ಕಾಂಪ್ಲೆಕ್ಸ್‌ಗಳನ್ನು ಕಟ್ಟಿದ್ದಾರೋ ಅವರು ಇನ್ನೂ ಬೆಳೆಯುತ್ತಲೇ ಹೋಗುತ್ತಿದ್ದಾರೆ. ಅವರಿಗೆ ಸರ್ಕಾರದ ಭಯವೇ

10.20 ಎ.ಎಂ.

ಇಲ್ಲದಂತಾಗಿದೆ. ಅಧಿಕಾರಿಗಳಿಗೆ ರಕ್ಷಣೆ, ಲೂಟಿ ಮಾಡುತ್ತಿರುವಂತಹ ವ್ಯಕ್ತಿಗಳಿಗೆ ಸಾಕಷ್ಟು ರಕ್ಷಣೆ ಸಿಗುತ್ತಿದೆ. ಅದಕ್ಕೋಸ್ಕರ ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುವುದು ಇಷ್ಟೆ, ಕನಿಷ್ಟ ಒಂದು ವಾರದಲ್ಲಿಯಾದರೂ ಕೂಡ ತಾವು ಎಷ್ಟು ಜನಕ್ಕೆ ಕೇಸ್ ಹಾಕಿದ್ದೀರಿ? ಎಷ್ಟು ಜನರನ್ನು ಜೈಲಿಗೆ ಹಾಕಿದ್ದೀರಿ? ಅದೇರೀತಿ ಅಧಿಕಾರಿಗಳ ಮೇಲೆ ಎಷ್ಟೆಷ್ಟು ಆ್ಯಕ್ಷನ್ ತೆಗೆದುಕೊಂಡಿದ್ದೀರಿ ಎಂಬುದನ್ನು ಸ್ಪಷ್ಟಮಾಡಿದರೆ ಈ ಸದನ ಮುಂದಿನ ವಾರದಲ್ಲಿ ಸೇರಿದಾಗ ತಿಳಿಸಿದರೆ, ನಿಮ್ಮ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ ಎಂದು ಅನ್ನಿಸುತ್ತದೆ. ಇಲ್ಲದೆ ಇದ್ದರೆ ಅನೇಕ ವರ್ಷಗಳಿಂದ ನಡೆದಿದೆ, ಇದು ಹೀಗೆ ಮುಂದುವರೆಯುತ್ತದೆ ಎಂದು ಈ ಸಬ್ಜೆಕ್ಟ್ ಅನ್ನು ಹೀಗೆ ರೈಟ್ ಮಾಡಿಕೊಂಡು, ನಮ್ಮ ಮೇಲೆ ಯಾರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಭಾವನೆ ಬರುತ್ತದೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ಅದಕ್ಕೆ ಒಂದು ಪ್ರತ್ಯೇಕವಾದ ಸಮಯವನ್ನು ಗುರುತಿಸಿದರೆ ಅದಕ್ಕೆ ಬೇಕಾದರೆ ನಾನು ಮಾಹಿತಿಯನ್ನು ಪಡೆದು ಚರ್ಚೆ ಮಾಡಬಹುದು.

ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳನ್ನು ಪ್ರಾರಂಭಿಸುವುದು.

46(440) ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಮಹಿಳೆಯರಿಗಾಗಿ ಇರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಆ) ಮಹಿಳೆಯರ ಹೆಸರಿನಲ್ಲಿ ಪುರುಷರೇ ಅವುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಈ) ರಾಯಚೂರು ಜಿಲ್ಲೆಯಲ್ಲಿ ಬರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು? ಹಾಗೂ ಇನ್ನೂ ಸ್ಥಾಪಿಸಲು ಉದ್ದೇಶಿಸಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಉ) ಅವು ಲಾಭದಾಯಕವಾಗಿ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ರಾಜ್ಯದಲ್ಲಿ 31-3-1998 ರ ಅಂತ್ಯಕ್ಕೆ 826 ಮಹಿಳಾ ಸಹಕಾರ ಸಂಘಗಳಿರುತ್ತವೆ.

ಆ) -ಇಲ-

ಇ) ಉದ್ಭವಿಸುವುದಿಲ್ಲ.

ಈ) ರಾಯಚೂರು ಜಿಲ್ಲೆಯಲ್ಲಿ 41 ಮಹಿಳಾ ಸಹಕಾರ ಸಂಘಗಳ ಇರುತ್ತವೆ. ಈ ಸದ್ಯ ಯಾವುದೇ ಪ್ರಸ್ತಾವನೆಯು ನೋಂದಣಿಗಾಗಿ ಬಾಕಿ ಇರುವುದಿಲ್ಲ.

ಉ) ಬಂದಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮಹಿಳೆಯರಿಗಾಗಿ ಇರುವಂತಹ ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಬಂದಿದೆ ಎಂದು ಹೇಳುತ್ತಾರೆ. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ದಯವಿಟ್ಟು ತಿಳಿಸಬೇಕು. ಏಕೆಂದರೆ ಮಹಿಳೆಯರು ಬಹಳಷ್ಟು ಜನ ನಡೆಸುತ್ತಿರುವುದನ್ನು ಪುರುಷರು ವಹಿಸಿಕೊಂಡಿರುತ್ತಾರೆ. ಅದಕ್ಕೆ ಹಲವಾರು ಕಾರಣಗಳಿರಬಹುದು. ತಾವು ಸಂಬಂಧಪಟ್ಟ ಮಂತ್ರಿಗಳಾಗಿ ಅದರ ಬಗ್ಗೆ ತಿಳಿದುಕೊಂಡಿದ್ದೀರಾ? ತಾವು ತಿಳಿದುಕೊಂಡಿದ್ದರೂ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದೀರಿ. ತಮ್ಮ ಗಮನಕ್ಕೆ ಬಂದಿರುತ್ತದೆ, ಆದರೆ ತಾವು ಹೇಳುತ್ತಿಲ್ಲ, ಅದಕ್ಕೆ ಏನಾದರೂ ಪರಿಹಾರ ಕಂಡುಕೊಂಡಿದ್ದೀರಾ?

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಅವರ ಪ್ರಶ್ನೆ ಮಹಿಳೆಯರು ನಡೆಸತಕ್ಕಂಥ ಸಹಕಾರ ಸಂಘಗಳು ಏನಿವೆ ಅವುಗಳನ್ನು ಪುರುಷರು ನಡೆಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದಾರೆ. ಪುರುಷರು ಏನು ನಡೆಸುತ್ತಾರೆ ಅದನ್ನು ತಾವೇ ಮಹಿಳೆಯರು, ಪುರುಷರು ನಡೆಸುವುದಕ್ಕೆ ಬಿಡಬೇಡಿ ಎಂದು ಹೇಳಬೇಕು. ನಾವು ಕೊಟ್ಟಿರುವುದು ಮಹಿಳೆಯರು ನಡೆಸಲಿ ಎನ್ನುವ ದೃಷ್ಟಿಯಿಂದ, ನಮಗೆ ತಿಳಿದಮಟ್ಟಿಗೆ ಮಹಿಳೆಯರೇ ನಡೆಸುತ್ತಾರೆ. ಎಲ್ಲಾದರೂ ಅಂತಹ ಪ್ರಕರಣಗಳು ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅಂತಹ ಸಂಘಗಳನ್ನು ಲಿಕ್ವಿಡೇಟ್ ಮಾಡುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಅವುಗಳು ಲಾಭದಾಯಕವಾಗಿ ನಡೆಯುತ್ತಿಲ್ಲ ಎಂದು ತಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಲಾಭದಾಯಕವಾಗಿ ನಡೆಯದೆ ಇರುವಂತಹ ಸಂಘಗಳಿಗೆ ಪ್ರೋತ್ಸಾಹದಾಯಕವಾಗಿ ಅವುಗಳಿಗೆ ದಾಸ್ತಾ ಯೋಜನೆಯಡಿ ಸೌಲಭ್ಯ ಮಾಡಿದ್ದೇವೆ.

ಹಾಗೂ ಮಹಿಳೆಯರಿಗೆ ಈ ಹೈನು ದನಗಳನ್ನು ಕೊಡಿಸುವ ಎಲ್ಲಾ ವ್ಯವಸ್ಥೆ ಮಾಡಿ ಅವುಗಳನ್ನು ಲಾಭದಾಯಕವಾಗಿ ಬರುವ ಹಾಗೆ ಮಾಡುತ್ತಿದ್ದೇನೆ. ಆದರೂ ಕೂಡ ಮಹಿಳೆಯರು ಮುಂದೆ ಬಂದು ಸ್ವಂತ ಶಕ್ತಿಯಿಂದ ಮಾಡಬೇಕಾಗುತ್ತದೆ.

ತೋಟಗಾರಿಕೆ ಇಲಾಖೆಯ ದಿನಗೂಲಿ ನೌಕರರಿಗೆ ಜೀವನ ನಿರ್ವಹಣಾ ಭತ್ಯೆ.

47(435) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳಿಗೆ ಜೀವನ ನಿರ್ವಹಣಾ ಭತ್ಯೆಯನ್ನು ನೀಡದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಇತರೆ ಇಲಾಖೆಗಳ ದಿನಗೂಲಿ ನೌಕರುಗಳಿಗೆ ಜೀವನ ನಿರ್ವಹಣಾ ಭತ್ಯೆ ನೀಡುತ್ತಿದ್ದರೂ ತೋಟಗಾರಿಕೆ ಇಲಾಖೆಯ ನೌಕರರುಗಳಿಗೆ ಜೀವನ ನಿರ್ವಹಣಾ ಭತ್ಯೆ ನೀಡದಿರಲು ಕಾರಣವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಹೌದು.

ಆ) ದಿನಾಂಕ: 28-3-94ರ ಅಧಿಸೂಚನೆ ಸಂಖ್ಯೆ ಸಕಾ 8, ಎಲ್‌ಎಂಡಬ್ಲ್ಯೂ 90ರ ಪ್ರಕಾರ ಜೀವನ ನಿರ್ವಹಣಾ ಭತ್ಯೆಯನ್ನು ನೀಡಲು ಅವಕಾಶ ಇರುವುದಿಲ್ಲ. ಆದ್ದರಿಂದ ತೋಟಗಾರಿಕೆ ಇಲಾಖೆಯಲ್ಲಿ ನೀಡಲಾಗುತ್ತಿದ್ದ ಜೀವನ ನಿರ್ವಹಣಾ ಭತ್ಯೆಯನ್ನು ದಿನಾಂಕ: 1-4-98 ರಿಂದ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಈಗಿರುವ ಕನಿಷ್ಠ ದಿನಗೂಲಿಯಾದ ದಿನಕ್ಕೆ 25-00 ರೂ.ಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ನೇಮಕಮಾಡಿಕೊಳ್ಳಲಾಗಿತ್ತು. ಈ ಮಧ್ಯದಲ್ಲಿ ಜೀವನ ನಿರ್ವಹಣಾ ವೆಚ್ಚವನ್ನು ಅವರಿಗೆ ಕೊಡುತ್ತಿದ್ದರು. ಆದರೆ ದಿನಾಂಕ: 1-4-98 ರಿಂದ ಅದನ್ನು ನಿಲ್ಲಿಸಿದ್ದೀರಿ. ಅವರಿಗೆ ಕೊಡುತ್ತಿರುವಂತಹ ದಿನಗೂಲಿ 26 ರೂಪಾಯಿ ತೆಗೆದುಕೊಂಡು ಒಬ್ಬ ದಿನಗೂಲಿ ನೌಕರ ಜೀವನ ನಿರ್ವಹಣೆ ಮಾಡುವುದಕ್ಕಾಗುತ್ತದೆಯೇ ಎಂದು ಕೇಳುತ್ತಿದ್ದೇನೆ. ಅವನು ಒಬ್ಬನಿಗೆ ಅದು ಸಾಲುವುದಿಲ್ಲ. ಅವನ ಮನೆಯಲ್ಲಿ ಹೆಂಡತಿ, ಮಕ್ಕಳು ಏನು ಮಾಡಬೇಕು? ಆ ಬಗ್ಗೆ ಸ್ಪಷ್ಟವಾದಂತಹ ಭರವಸೆ ಕೊಡಬೇಕು.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಕಾನೂನುಗಳು ಇವೆ. ಕನಿಷ್ಟ ಕೂಲಿ ಯಾರ್ಯಾರಿಗೆ ಯಾವ್ಯಾವ ಕೆಲಸಕ್ಕೆ ಎಷ್ಟೆಷ್ಟು ಕೊಡಬೇಕೆಂದು ಕಾನೂನು ಇದೆ. ಆ ಕಾನೂನು ಪ್ರಕಾರ ಏನು ಕೊಡಬೇಕು ಅಷ್ಟು ಕೊಡುತ್ತಿದ್ದೇವೆ. ಮನೆ ಮಕ್ಕಳು ಎಲ್ಲರಿಗೂ ಕೂಡ ಮನೆಯಲ್ಲಿ 50 ಜನ ಸಂಸಾರದಲ್ಲಿ ಇದ್ದರೆ ಆ 50 ಜನರಿಗೆ ಜೀವನ ನಿರ್ವಹಣೆ ಆಗುವಂತೆ ಕೊಡಬೇಕೆಂದು ಕಾನೂನಿನಲ್ಲಿ ನನಗೆ ತಿಳಿದ ಹಾಗೆ ಇಲ್ಲ. ಕಾನೂನಿನಲ್ಲಿ ಏನು ಕೊಡುವುದಕ್ಕೆ ಸಾಧ್ಯವಿದೆ ಅದನ್ನು ಕೊಡುತ್ತಿದ್ದೇವೆ.

ಶ್ರೀ ಸಿ.ಎಂ. ಲಿಂಗಪ್ಪ :— ಸರ್ಕಾರಿ ನೌಕರರಿಗೆ ಮಾತ್ರ ಮನೆಮಂದಿ ವೆಚ್ಚವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನೀವು ವೇತನವನ್ನು ಕೊಡುತ್ತಿದ್ದೀರಿ. ಆದರೆ ಅವರೊಬ್ಬರಿಗೆ ಮಾತ್ರ ಕೊಡುತ್ತಿದ್ದೀರಾ ನೀವು?

ಶ್ರೀ ಸಿ. ಬೈರೇಗೌಡ :— ಅದಕ್ಕೂ ಕೂಡ ಕಾನೂನು ಇದೆ. ಯಾರಿಗೆ ಏನೇ ವೇತನ ಕೊಡಬೇಕಾದರೂ ಕೂಡ ಅದಕ್ಕೆ ಒಂದು ಕಾನೂನು ಇದೆ. ಆ ಕಾನೂನಿನ ಪ್ರಕಾರ ಸರ್ಕಾರಿ ನೌಕರರಿಗೆ ಕೊಡುವುದು. ಕಾನೂನು ಇಟ್ಟುಕೊಂಡೇ ಮಾಡುತ್ತೇವೆ.

ಶ್ರೀ ಸಿ.ಎಂ. ಲಿಂಗಪ್ಪ :— ಕಾನೂನು ಮಾಡತಕ್ಕಂಥವರು ಸರ್ಕಾರ. ನೀವು ಈ ರೀತಿ ಹೇಳಿದರೆ ಬಡವರ ಗತಿ ಏನಾಗಬೇಕು? ಇತರೆ ಇಲಾಖೆಯಲ್ಲಿ ಜೀವನ ನಿರ್ವಹಣೆ ಭತ್ಯವನ್ನು ಕೂಡ ಕೊಡುತ್ತಿದ್ದಾರೆ. ಅದು ತಮ್ಮ ಗಮನಕ್ಕೆ ಹೋಗಲಿ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ದಯವಿಟ್ಟು ತಾವು ಭರವಸೆ ಕೊಡಿ.

ಶ್ರೀ ಸಿ. ಬೈರೇಗೌಡ :— ಈ ರೀತಿ ಭರವಸೆ ಕೊಡುವುದಕ್ಕಾಗುವುದಿಲ್ಲ. ಅದು ಬಹಳ ಮೇಲಿನ ಹಂತದಲ್ಲಿ ಪರಿಶೀಲನೆ ಮಾಡಿ ತೀರ್ಮಾನ ಮಾಡಿದ್ದಾರೆ. ಅವರಿಗೆ ಕಾನೂನಿನ ಪ್ರಕಾರ ಏನು ಕೊಡಿಸಬೇಕಾಗಿತ್ತು, ಅದನ್ನು ಖಂಡಿತವಾಗಿ ಒಂದು ನಯಾ ಪೈಸೆ ಕಡಿಮೆ ಇಲ್ಲದೆ ಇರುವ ರೀತಿಯಲ್ಲಿ ಕೊಡುವುದಕ್ಕೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿನ ಎ.ಪಿ.ಎಂ.ಸಿ.ಯಲ್ಲಿರುವ ಹಣ.

48(652) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ಅನೇಕ ಎ.ಪಿ.ಎ.ಸಿಂ.ಗಳಲ್ಲಿದ್ದ ಹೆಚ್ಚುವರಿ ಹಣದಲ್ಲಿ ಎಪಿಎಂ.ಸಿ.ಗಳು ಇರುವ ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಅ) ಕೆಲವು ಎಪಿಎಂಸಿ. ಗಳಿಗೆ ಬೇರೆ ತಾಲ್ಲೂಕುಗಳಿಂದ ಕೂಡ ಉತ್ಪನ್ನ ಮಾರಾಟವಾಗಿ ಲಾಭಾಂಶದಲ್ಲಿ, ಅದರ ಭಾಗ ಕೂಡ ಸೇರಿಲ್ಲವೇ?

ಇ) ಹಾಗಿದ್ದಲ್ಲಿ ಅಂತಹ ತಾಲ್ಲೂಕುಗಳು ಇಂತಹ ಅಭಿವೃದ್ಧಿ ಕೆಲಸಗಳಿಗೆ ಹಣ ಕೊಡುವುದು ಉಚಿತವಲ್ಲವೆ;

ಈ) ಇಲ್ಲದಿದ್ದಲ್ಲಿ ಆಯಾ ತಾಲ್ಲೂಕುಗಳಿಂದ ಬರುವ ಉತ್ಪನ್ನದ ಮಾರುಕಟ್ಟೆ ಸೆಸ್ ಕೂಡ ಆಯಾ ತಾಲ್ಲೂಕುಗಳ ಎಪಿಎಂಸಿಗೆ ವರ್ಗಾವಣೆ ಮಾಡುವುದು ಉಚಿತವಲ್ಲವೆ;

ಉ) ಹಾಗಿದ್ದಲ್ಲಿ, ಇದಕ್ಕಾಗಿ ಸೂಕ್ತ ನಿಯಮ ರಚಿಸಲಾಗುವುದೆ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ರಾಜ್ಯದಲ್ಲಿ ಒಟ್ಟು 139 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿ ಜೊತೆಯಲ್ಲಿ ಅವುಗಳಲ್ಲಿರುವ ಹೆಚ್ಚುವರಿ ನಿಧಿಯಿಂದ ಸಂಪರ್ಕ ರಸ್ತೆ ಅಭಿವೃದ್ಧಿ ಕಾರ್ಯವನ್ನು ಮಾರುಕಟ್ಟೆ ಕ್ಷೇತ್ರಗಳಲ್ಲಿ ಕೈಗೆತ್ತಿಕೊಂಡಿರುತ್ತವೆ.

ಆ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಸೇವಾ ಸಂಸ್ಥೆಗಳಾಗಿದ್ದು, ಲಾಭಾಂಶದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾಯ್ದೆ ಬದ್ಧವಾದ ಸ್ಥಳೀಯ ಸಂಸ್ಥೆಗಳಾಗಿದ್ದು, ಸದರಿ ಸಂಸ್ಥೆಗಳ ನಿಧಿಯನ್ನು ಸೇವೆಗನುಗುಣವಾಗುವಂತೆ ಮಾರುಕಟ್ಟೆ ಶುಲ್ಕವನ್ನು ಆಕರಿಸುವುದರಿಂದ ವರ್ಗಾವಣೆ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಎಪಿಎಂಸಿಗಳಲ್ಲಿ ರಸ್ತೆ ಮಾಡುವುದು ಎಂದು ಹೇಳಿ ಅನೇಕ ಕಾರ್ಯಕ್ರಮಗಳನ್ನು ಇವರು ಎಪಿಎಂಸಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂದು ಹೇಳಿ ಆ ಕಾರ್ಯಕ್ರಮದ ಕೆಳಗಡೆ ಕೊಡುತ್ತೇವೆಂದು ಹೇಳಿದ್ದಾರೆ. ಎಪಿಎಂಸಿಗೆ ಒಂದೇ ತಾಲ್ಲೂಕಿನಿಂದ ಪ್ರೊಡ್ಯೂಸ್ ಅನ್ನು ರೈತರು ತೆಗೆದುಕೊಂಡು ಹೋಗುತ್ತಾರೆ ಎಂದು ಇವರು ಭಾವಿಸುವುದು ತಪ್ಪಾಗುತ್ತದೆ. ನಮ್ಮ ತಾಲ್ಲೂಕುಗಳಲ್ಲಿ ನಾವೆಲ್ಲಾ ಕೊಬ್ಬರಿ ಬೆಳೆಗಾರರು ನಮ್ಮ ಪ್ರೊಡ್ಯೂಸ್ ಎಲ್ಲಾ ತಿಪಟೂರು ಎಪಿಎಂಸಿಗೆ ಮಾಡಬೇಕಾಗುತ್ತದೆ. ನಮ್ಮ ಸುತ್ತ 5-6 ತಾಲ್ಲೂಕಿಗೆ ಒಂದೊಂದು ಎಪಿಎಂಸಿ

ನಡೆಯುತ್ತಿರುವುದರಿಂದ ಭಾರಿ ಲಾಭಾಂಶ ಫ್ಲಶ್ ಸೈಡ್‌ನಲ್ಲಿ ಇರುವುದು ದುಡ್ಡು ಇಟ್ಟುಕೊಂಡಿರುವ ಎಪಿಎಂಸಿಗಳಿಗೆ ಒಂದೇ ತಾಲ್ಲೂಕಿನ ಗಡಿಯನ್ನು ಸೀಮಿತ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೋಟ್ಯಾಂತರ ರೂಪಾಯಿ ನೀವು ಖರ್ಚು ಮಾಡಬೇಕಾದರೆ ಸರಿಯಲ್ಲ. ನಾನು ನಿಮ್ಮನ್ನು ಕೇಳುವುದಿಷ್ಟೇ, ಆಯಾಯ ತಾಲ್ಲೂಕಿನಿಂದ ಮಾಲು ಹೋಗುವುದು ಎಷ್ಟು ಎಂದು ಹೇಳಿ ನೀವು ಲೆಕ್ಕ ಹಾಕಿ ಅದಕ್ಕೆ ಅನುಗುಣವಾಗಿ ಈ ಕಾರ್ಯಕ್ರಮವನ್ನೂ ಮಾಡುವುದಕ್ಕೆ ಹಣ ಕೊಡಬೇಕಾಗುತ್ತದೆ. ಇಲ್ಲ ಬೇರೆ ತಾಲ್ಲೂಕಿನ ಮಾಲನ್ನು ತೆಗೆದುಕೊಂಡರೆ ನಿರ್ಬಂದ ಹಾಕಬೇಕಾಗುತ್ತದೆ. ಇಲ್ಲ ನಮ್ಮ ಎ.ಪಿ.ಎಂಸಿ.ಯನ್ನು ಬೆಳೆಸಲ್ಲ. ಯಾವ ತಾಲ್ಲೂಕಿನಲ್ಲಿ ಎಪಿಎಂಸಿ ಇದೆ ಆ ತಾಲ್ಲೂಕಿಗೆ ನೀವು ಡೆವಲಪ್‌ಮೆಂಟ್‌ಗೆ ಹೇರಳವಾಗಿ ಹಣ ಕೊಡುತ್ತಾ ಹೋದರೆ ಇಂಬ್ಯಾಲೆನ್ಸ್‌ನ್ನು ಸೃಷ್ಟಿ ಮಾಡುತ್ತಿದ್ದೀರಿ. ಮಾನ್ಯ ರಾಜಶೇಖರಮೂರ್ತಿಯವರು ಇದ್ದಾಗ ಒಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡಿದ್ದರು. ಎಲ್ಲಾ ಎಪಿಎಂಸಿ ಹಣವನ್ನು ಕ್ರೋಢೀಕರಿಸಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೂ ಇಷ್ಟಿಷ್ಟು ಎಂದು ಹಣ ಕೊಟ್ಟಿದ್ದರು. ತಾವು ಹಾಗಾದರೂ ಮಾಡಿ. ಇಲ್ಲವೆಂದರೆ ನಮಗೆ ಅನುಪಾತ ಎಂದರೆ ಯಾವ್ಯಾವ ತಾಲ್ಲೂಕಿನಿಂದ ಎಷ್ಟೆಷ್ಟು ಸರಕು ಬರುತ್ತದೆ ಅದರ ಆಧಾರದ ಮೇಲೆಯಾದರೂ ನಮಗೆ ಅಭಿವೃದ್ಧಿ ಮಾಡುವುದಕ್ಕೆ ಹಣವನ್ನು ತಾವು ಕೊಡಬೇಕು. ಇಲ್ಲವೆಂದರೆ ನಮ್ಮ ಎಪಿಎಂಸಿ ಏರಿಯಾದಿಂದ ಆಚೆ ಉತ್ಪಾದನೆ ಹೋಗುವುದನ್ನು ತಾವು ತಡೆಯಬೇಕು. ನಾವೇ ನಮ್ಮ ಎಪಿಎಂಸಿಗೆ ಲಾಭ ಮಾಡಿಕೊಳ್ಳುತ್ತೇವೆ. ಇದರಲ್ಲಿ ಎಂ.ಎಲ್.ಎಗಳ ಪಾತ್ರವೇ ಇಲ್ಲ. ರಸ್ತೆ, ಕೆರೆಗಳನ್ನು ಎ.ಪಿ.ಎಂ.ಸಿ ಡೈರೆಕ್ಟರ್ ಕುಳಿತು ನಮ್ಮ ರಸ್ತೆ ಕೆಲಸಗಳನ್ನು ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಏನು ಮಾಡಬೇಕು ಎಂದು ಅರ್ಥವಾಗುತ್ತಿಲ್ಲ. ನಾವು ನಮ್ಮನ್ನು ಡೈರೆಕ್ಟರ್ ಮಾಡಿ ಎಂದು ಕೇಳಿದೆವು. ನಮಗೆ ಗೊತ್ತಿಲ್ಲದೆ ನಮ್ಮ ಕ್ಷೇತ್ರಗಳಲ್ಲಿ ಇವತ್ತು ಕೆಲಸವಾಗುವುದು ಒಂದು. ಒಂದೇ ಕಡೆ ಕೆಲಸವಾಗಿ ಒಂದೊಂದು ವಲಯದಲ್ಲಿ ನೀವು ಇಂಬ್ಯಾಲೆನ್ಸ್ ಕ್ರಿಯೇಟ್ ಮಾಡುತ್ತಿದ್ದೀರಿ. ತಿಪಟೂರು ಎಪಿಎಂಸಿ ಒಂದಕ್ಕೆ ಒಂದು ಕೋಟಿ 67 ಕೋಟಿ ರೂಪಾಯಿ ರಿಲೇಜ್ ಮಾಡಿದ್ದಾರೆ. ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಚನ್ನರಾಯಪಟ್ಟಣ, ಗುಬ್ಬಿ ಅವರು ಸಫರ್ ಆಗುತ್ತಿದ್ದಾರೆ. ಇದನ್ನೇನಾದರೂ ಸರಿಪಡಿಸುತ್ತೀರಾ? ತಾವು ಸ್ಟಾಂಪ್ ಡ್ಯೂಟಿ ಅರಿಯರ್ಸ್‌ನಲ್ಲಿ ಮಾಡಿದಿರಿ. ಬೆಂಗಳೂರಿನಲ್ಲಿ ಬರುವಂತಹ ಸ್ಟಾಂಪ್ ಡ್ಯೂಟಿ ದುಡ್ಡನ್ನೆಲ್ಲಾ ಎಲ್ಲಾ ಕ್ಷೇತ್ರಕ್ಕೆ ಹಂಚಿಕೊಟ್ಟು ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಹಾಯ ಮಾಡಿದ್ದೀರಿ. ಇದೇ ರೀತಿ ಎಪಿಎಂಸಿ ಗ್ರಾಂಟ್‌ಅನ್ನು ಪೂಲ್‌ಮಾಡಿ ಎಲ್ಲರಿಗೂ ಹಂಚಿಕೊಡುವುದಕ್ಕೆ ತಾವು ಕಾರ್ಯಕ್ರಮ ರೂಪಿಸುತ್ತೀರಾ ಇಲ್ಲವೇ ಎಂದು ಕೇಳುತ್ತಿದ್ದೇನೆ.

ಶ್ರೀಹೆಚ್. ನಾಗಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಧುಸ್ವಾಮಿ ಹೇಳುವುದು ಎಲ್ಲಾ ನಿಜ ಸಂಗತಿ ಇದೆ. ತಿಪಟೂರಿಗೆ ಎಲ್ಲಾ ಕಡೆಯಿಂದಲೂ ಮಾರಾಟಕ್ಕೆ ಕೊಬ್ಬರಿ ಬರುತ್ತದೆ. ಒಳ್ಳೆಯ ಬೆಲೆ ಸಿಗುತ್ತದೆ ಎಂದು ಮತ್ತು ಅಲ್ಲಿ ಒಳ್ಳೆಯ ವ್ಯಾಪಾರಿಗಳು ಸಿಗುತ್ತಾರೆ ಎಂದು ಬಹಳ ಜನ ಅಲ್ಲಿ ಬಂದು ಕೊಬ್ಬರಿ ಮಾರತಕ್ಕಂಥಾದ್ದು ನಿಜ. ಮತ್ತು ಮಾರುಕಟ್ಟೆಯಲ್ಲಿ ಉತ್ಪತ್ತಿ ಜಾಸ್ತಿಯಾಗಿರುವುದು ನಿಜ. ಅದನ್ನು ಬೇರೆ ಕಡೆಗೆ ಹಂಚಿಕೊಡಿ

ಎಂದು ಕೇಳುತ್ತಿದ್ದಾರೆ. ಅದು ಸಹ ಸರ್ಕಾರದ ಗಮನದಲ್ಲಿದ್ದು, ಅದನ್ನು ಪರಿಗಣಿಸುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ತೆಂಗಿನ ರೋಗ ಬಂತು. ಅಲ್ಲಿ 400 ಲೀಟರ್ ಪಿ.ಬಿ. ಕೆಮಿಕಲ್ಸ್ ಇತ್ತು. ನಾವು ಅವರಿಗೆ ಪತ್ರ ಬರೆದುಕೊಂಡು ಸರ್ಕಾರ ಸ್ವಲ್ಪ ಕಷ್ಟದಲ್ಲಿ ಇದೆ ಎಪಿಎಂಸಿ ಹಣದಲ್ಲಿ ಸ್ವಲ್ಪ ಹಣವನ್ನು ಇಂತಹ ನಿರ್ವಹಣೆ ಕಾರ್ಯಕ್ರಮಗಳಿಗೆ ಕೊಡಿ. ಎಂದು ಹೇಳಿದೆವು. ತೆಂಗಿನ ಬೆಳೆಗಾರರು ಪಂಪ್‌ಸೆಟ್‌ಗಳಿಗೆ ಏನಾದರು ಸಬ್ಸಿಡಿಕೊಡಿ 7-8 ಕೋಟಿ ರೂಪಾಯಿಗಳನ್ನು ಎಪಿಎಂಸಿಯವರು ಇಟ್ಟುಕೊಂಡಿದ್ದಾರೆ. ಹೋದಸಲ ನಾವು ಇಲ್ಲಿ ಮಾತನಾಡುವಾಗ ಹೇಳಿದ್ದೇವೆ, ಒಂದೆರಡು ಪರ್ಸೆಂಟ್ ನಮ್ಮ ರೀಸರ್ಚ್ ಸ್ಟೇಷನ್‌ಗೆ ಅಸಿಸ್ಟ್ ಮಾಡಿ, ಇಂತಹ ಕಾರ್ಯಕ್ರಮಗಳು ಏನಾದರೂ ಮಾಡಿ, ಎಲ್ಲಾ ರಸ್ತೆ ಮಾಡುವ ಕಾರ್ಯಕ್ರಮಕ್ಕೆ ಬಂದರೆ ಹೇಗೆ? ತಾವು ಆ ಕಡೆ ಯೋಚನೆ ಮಾಡಬೇಕು. ಅಯಾಯ ಎ.ಪಿ.ಎಂ.ಸಿ.ಗೆ ಬರುವ ಪ್ರೊಡ್ಯೂಸ್ ಸಂಬಬುಂಧಪಟ್ಟ ಬೆಳೆ ಎನು ಇರುತ್ತದೆ, ಆ ಬೆಳೆ ಇಂಪ್ರೂವ್ ಮಾಡುವುದಕ್ಕೆ ಆದರೂ ನೀವು ಸ್ವಲ್ಪ ಸೆಸ್ ಅನ್ನು ಆ ಕಡೆ ಡೈವರ್ಟ್ ಮಾಡಿಕೊಡಬೇಕು. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕು. ಅದಕ್ಕೆ ಸಂಬಂಧಪಟ್ಟ ಆರ್ ಅಂಡ್ ಡಿ ಡೆವಲಪ್‌ಮೆಂಟ್ ಮಾಡುವುದಕ್ಕೆ ಎ.ಪಿ.ಎಂ.ಸಿಯವರು ಸಹಾಯ ಮಾಡಬೇಕು. ಉಗ್ರಾಣಗಳಲ್ಲಿ 15 ದಿವಸ ಒಂಡೆರಡು ತಿಂಗಳುಗಳವರೆಗೆ ಮಾಲು ಇಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಆ ಭಾಗದಲ್ಲಿ ಕೊಬ್ಬರಿ ಬೆಳೆಯುತ್ತೇವೆ, ಏನಾದರೂ ಬೆಳೆ ಬೆಳೆಯುತ್ತೇವೆ. ಅದಕ್ಕೆ ಖರ್ಚು ಮಾಡುವಂತಹ ದುಡ್ಡನ್ನು ನೀವು ರೋಡಿಗೆ ಖರ್ಚು ಮಾಡುವುದು ಸಮಯೋಚಿತ ಇದಕ್ಕೆ ಸರಿಯಾದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆಯೇ ಎಂದು ಪುನ: ಪರಿಶೀಲನೆ ಮಾಡಬೇಕು. ಮತ್ತು ಸಮಗ್ರವಾಗಿ ಹಂಚಿಕೆ ಮಾಡಿಕೊಡುವ ಬಗ್ಗೆ ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್. ನಾಗಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳತಕ್ಕಂಥ ವಿಚಾರ ನಿಜವಾಗಿದೆ. ಇದನ್ನು ನಾವು ಮುಂದೆ ತಿದ್ದುಪಡಿ ಮಾಡತಕ್ಕಂಥ ಸಮಯದಲ್ಲಿ ಅದನ್ನೆಲ್ಲಾ ಯೋಚನೆ ಮಾಡಿ ತಿದ್ದುಪಡಿ ಮಾಡುತ್ತೇವೆನ್ನುವ ಭರವಸೆ ಕೊಡುತ್ತೇವೆ.

ಬೆಂಗಳೂರಿನಲ್ಲಿರುವ ರೇಡಿಯೋ ಟ್ಯಾಕ್ಸಿಗಳಿಗೆ ಪರವಾನಗಿ.

52(174) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ನೀಡಿರುವ ರೇಡಿಯೋ ಟ್ಯಾಕ್ಸಿಗಳ ಪರವಾನಗಿ ಸಂಖ್ಯೆ ಎಷ್ಟು?

ಅ) ಇವುಗಳಿಗೆ ಸರ್ಕಾರ ನಿಗಧಿಪಡಿಸಿರುವ ದರಗಳೆಷ್ಟು?

ಇ) ಇವುಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು?

ಈ) ಈ ಪರವಾನಗಿಗಾಗಿ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು?

ಉ) 1999 ರಲ್ಲಿ ಬೆಂಗಳೂರು ನಗರದಲ್ಲಿ ಹೊಸದಾಗಿ ಎಷ್ಟು ಪರವಾನಗಿಗಳನ್ನು ನೀಡಲಾಗುವುದು.

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಏಳು ಪರವಾನಗಿಗಳು

ಅ) 4 ಕಿ.ಮಿ.ವರೆಗೆ ಕನಿಷ್ಠ ರೂ.30.00 ನಂತರ ಪ್ರತಿ ಕಿ.ಮಿ. ರೂ.8.00 ರಂತೆ ನಿಗಧಿಪಡಿಸಲಾಗಿದೆ.

ಇ) ರೂ.43,992.00 (ವಾಹನ ತೆರಿಗೆ ರೂಪದಲ್ಲಿ).

ಈ) 95 ಅರ್ಜಿಗಳು

ಉ) ಪರವಾನಗಿ ಸಂಖ್ಯೆಯ ಬಗ್ಗೆ ಯಾವುದೇ ನಿಬಂಧನೆ ಇರುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ನಾನು ರೇಡಿಯೋ ಟ್ಯಾಕ್ಸಿಗಳ ಪರವಾನಗಿಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇ. ಅದಕ್ಕೆ 7 ಟ್ಯಾಕ್ಸಿಗಳಿಗೆ ಪರರವಾನಗಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ 40-50 ಲಕ್ಷ ಜನ ಸಂಖ್ಯೆ ಏನು ಇದೆ ಅದಕ್ಕೆ ಈಗ ಇರತಕ್ಕಂಥಾದ್ದು ಸಾಕಾಗುವುದಿಲ್ಲ. ಅದುದರಿಂದ ಈಗ ದೆಹಲಿಯಲ್ಲಿ ಅಲ್ಲಲ್ಲಿ ಏನು ಸ್ಟ್ಯಾಂಡ್‌ಗಳು ಮಾಡಿದ್ದಾರೆ ಆ ರೀತಿಯಾಗಿ ಮಾಡಿ, ಮತ್ತೆ ಈ ಲೈಸನ್ಸ್ ಕೊಡುವಾಗ ನಿರುದ್ಯೋಗಿ ಪದವಿಧರರು ಯಾರಿದ್ದಾರೆ ಅವರಿಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ನಾವು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಈ ಟ್ಯಾಕ್ಸಿಗಳನ್ನು ಪ್ರಾರಂಭ ಮಾಡಿದ್ದೇವೆ. ನಾವು 7 ರೇಡಿಯೋ ಟ್ಯಾಕ್ಸಿಗಳನ್ನು ಕೊಟ್ಟಿದ್ದೆವು, ಈಗ ಅದನ್ನು 25 ಟ್ಯಾಕ್ಸಿಗಳಿಗೆ ಹೆಚ್ಚಿಸಿದ್ದೇವೆ. ಈಗ ಒಟ್ಟು 32 ಟ್ಯಾಕ್ಸಿಗಳನ್ನು ಕೊಟ್ಟಿದ್ದೇವೆ. ನಮಗೆ ಬಂದಿರುವಂತಹ ಅರ್ಜಿಗಳು ಒಟ್ಟು 90; ಈಗ ನಾವು ಎಷ್ಟು ಬೇಕಾದರೂ ಟ್ಯಾಕ್ಸಿಗಳನ್ನು ಕೊಡುತ್ತೇವೆ. ನಾವು ಬೆಂಗಳೂರಿಗೆ 1000 ಟ್ಯಾಕ್ಸಿಗಳನ್ನು ಕೊಡಬೇಕೆಂದು ಇದೆ. ಅದರಲ್ಲಿ ಮಾರುತಿ 1000, ಕಾರು ಅವುಗಳು

ಒಂದು ವರ್ಷದೊಳಗೆ ಬಂದಿರುವಂಥಾದ್ದಕ್ಕೆ ಬೇಡಿಕೆ ಇರುತ್ತದೆ ಎಂದು ನಾವು ಕೊಟ್ಟಿದ್ದೇವೆ. ಅವರಿಗೆ ಒಂದು ಕಂಟ್ರೋಲ್ ರೂಮ್ ಎಂದು ಇರುತ್ತದೆ. ಅಲ್ಲಿಂದ ಅವರಿಗೆ ವೈರ್‌ಲೆಸ್ ರೇಡಿಯೊ ಸೆಟ್ ಇರುತ್ತದೆ. ಅವರಿಗೆ ತಿಳಿಸಿದಾಗ ಅವರು ಮನೆಯ ಬಾಗಿಲಿಗೆ ಬಂದು ಸರ್ವಿಸ್ ಕೊಡುವಂಥಾದ್ದು, ಆ ದೃಷ್ಟಿಯಲ್ಲಿ ಇದು ಬಹಳ ಚೆನ್ನಾಗಿ ಇದೆ. ಇದನ್ನು ಬಹಳ ಜನ ನಿರುದ್ಯೋಗಿ ಯುವಕರು ಇದು ಚೆನ್ನಾಗಿದೆ ಎಂದು ಹೇಳಿದ್ದಾರೆ. ನಮಗೆ ಸಂಪಾದನೆ ಚೆನ್ನಾಗಿದೆ, ಮತ್ತು ಬೇಡಿಕೆ ಇದೆ ಮತ್ತು ಸರ್ವಿಸ್ ಕೊಡುತ್ತೇವೆಂದು ಹೇಳಿದ್ದಾರೆ. ನಾವು ಬೆಂಗಳೂರಿನಲ್ಲಿ ಎಷ್ಟು ಕೇಳಿದರೂ ನಾವು ಕೊಡುತ್ತೇವೆ. ಅದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಿದ್ದೇವೆ. ಅವರು ಅದನ್ನು ಯಾವ್ಯಾವ ರೀತಿಯಲ್ಲಿ ಕೊಡಬೇಕೆಂದು ಇದೆ, ಆದುದರಿಂದ ನಾವು ಕೊಡುವಂಥಾದ್ದಕ್ಕೆ ಏನು ಅಡ್ಡಿಯಿಲ್ಲ, ಎಷ್ಟು ಬೇಕಾದರೂ ಕೊಡುತ್ತೇವೆ. ನಾವು ಉತ್ತರದಲ್ಲಿ 7 ರೇಡಿಯೋ ಟ್ಯಾಕ್ಸಿ ಎಂದು ಹೇಳಿದ್ದೆವು, ಅದು ಇತ್ತೀಚೆಗೆ 25ಕ್ಕೆ ಹೆಚ್ಚಿಸಿದ್ದೇವೆ. ಇದರಲ್ಲಿ ಬಂದಿರುವಂತಹ ಆದಾಯ 43,992 ರೂಪಾಯಿಗಳು, ಈಗ 1,92,000 ರೂಪಾಯಿಗಳು ಬಂದಿದೆ.

ಗುಳ್ಳೇದಗುಡ್ಡ ಕ್ಷೇತ್ರದ ಗುಡೂರ ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್‌ನಿಲ್ದಾಣದ ನಿರ್ಮಾಣ.

53(364) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳ್ಳೇದಗುಡ್ಡ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತಕ್ಷೇತ್ರದ ಗುಡೂರ ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು;

ಇ) ಗುಡೂರು ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್ ನಿಲ್ದಾಣಕ್ಕಾಗಿ ಗ್ರಾಮಸ್ಥರು ಉಚಿತವಾಗಿ ಜಾಗ ನೀಡಲು ಸಿದ್ದರಿದ್ದರೂ ಸರ್ಕಾರ ಈ ಬಗ್ಗೆ ನಿರ್ಲಕ್ಷಿಸುತ್ತಿರಲು ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬಂದಿದೆ.

ಆ) ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಜಾಗವನ್ನು ಪಡೆಯಲು ಸಂಸ್ಥೆಯು ಪರಿಶೀಲಿಸುತ್ತಿದೆ.

ಇ) ಗುಡೂರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅತ್ಯಾವಶ್ಯಕವಿರುವ 1 ಎಕರೆ 21 ಗುಂಟೆ ಜಮೀನನ್ನು ದಾನದ ರೂಪದಲ್ಲಿ ನೀಡಲು ಗ್ರಾಮಸ್ಥರು ಈಗ ಮುಂದೆ ಬಂದಿದ್ದು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಮುಂದಿನ ಕ್ರಮ

ಜರುಗಿಸಲಾಗುವುದು. ಐಹೊಳೆ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು 175X70 ನಿವೇಶನವನ್ನು, ಗ್ರಾಮಪಂಚಾಯಿತಿ ನೀಡಲು ಮುಂದೆ ಬಂದಿದ್ದು ಈ ಸ್ಥಳವು ಬಸ್ ನಿಲ್ದಾಣ ನಿರ್ಮಿಸಲು ಸೂಕ್ತವಾಗಿಲ್ಲ. ಅಲ್ಲದೆ ಈ ಗ್ರಾಮ ಪ್ರದೇಶದ ಬಹುತೇಕ ಭಾಗವು ಭಾರತೀಯ ಪುರಾತತ್ವ ಭೂಮಾನ ಇಲಾಖೆಯ ಅಧೀನದಲ್ಲಿದ್ದು ಸೂಕ್ತ ಜಮೀನು ಹಂಚಿಕೆ ಮಾಡಲು ಆ ಇಲಾಖೆಯೊಂದಿಗೆ ಸಂಪರ್ಕಿಸಲಾಗಿದೆ.

ಶ್ರೀ ಬಿ.ಬಿ. ಶಿವಪ್ಪ (ಶ್ರೀ ರಾಜಶೇಖರ ಶೀಲವಂತ ವೀರಣ್ಣನವರ ಪರವಾಗಿ):— ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರದಲ್ಲಿ ಸದರಿ ಗ್ರಾಮಗಳಲ್ಲಿ ಬಸ್‌ನಿಲ್ದಾಣವನ್ನು ನಿರ್ಮಿಸಲು ಜಾಗವನ್ನು ಪಡೆಯಲು ಸಂಸ್ಥೆಯು ಪರಿಶೀಲಿಸುತ್ತಿದೆ, ಎಂದು ಹೇಳಿದ್ದಾರೆ. ಮತ್ತೆ ಗುಡೂರ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲು ಒಂದು ಎಕರೆ 21 ಗುಂಟೆ ಜಮೀನನ್ನು ದಾನದ ರೂಪದಲ್ಲಿ ನೀಡಲು ಗ್ರಾಮಸ್ಥರು ಮುಂದೆ ಬಂದಿದ್ದಾರೆಂದು ಹೇಳಿದ್ದಾರೆ. ಅಂದರೆ ಈ ಗ್ರಾಮಸ್ಥರು ಈ ಒಂದು ಎಕರೆ 21 ಗುಂಟೆ ಜಾಗವನ್ನು ಕೊಡಲು ಮುಂದೆ ಬಂದಿದ್ದು ಯಾವಾಗ? ಮತ್ತೆ ಈ ಕಾರ್ಯಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಇದನ್ನು ಈ ವರ್ಷದಲ್ಲೇ ಅಂದರೆ 1999-2000ನೇ ಇಸ್ವಿಯಲ್ಲಿ ನಿರ್ಮಿಸಿ ಕೊಡುತ್ತೀರಾ? ಮತ್ತೊಂದು ಪ್ರಶ್ನೆ ಐಹೊಳೆ, ಪಟ್ಟದಕಲ್ಲು, ಬಾದಾಮಿ, ಇವೆಲ್ಲಾ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿಗೆ ಯಾರು ಬಂದರೂ ಹೋಗುವಂಥಾದ್ದು ಇದೆ. ಆದರೆ ಅಲ್ಲಿ ಸರಿಯಾಗಿ ಬಸ್ ನಿಲ್ದಾಣ ಇಲ್ಲ, ಮತ್ತೆ ಜಾಗವೂ ಸಾಲದು, ಪ್ರಾಚ್ಯವಸ್ತು ಇಲಾಖೆಯವರೊಡನೆ ಪತ್ರ ವ್ಯವಹಾರ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದು ಅತ್ಯಾವಶ್ಯಕವಾಗಿ ಬೇಕಾಗಿದೆ ಎಂಬುದು ತಮಗೂ ಗೊತ್ತಿದೆ. ಇದರ ಬಗ್ಗೆ ತಾವು ಯಾವಾಗ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಯವರು ದಯಮಾಡಿ ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಈ ಗುಡೂರ ಹಾಗೂ ಐಹೊಳೆ ಗ್ರಾಮಗಳು ಆರ್ಕಿಲಾಜಿಕಲ್‌ನವರ ಕಂಟ್ರೋಲ್‌ನಲ್ಲಿದೆ. ಅವರು ಗುಡೂರದಲ್ಲಿ ಮೊದಲು ನಮಗೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದರು. ಅವರು ಮೊದಲು ಒಂದು ಎಕರೆ 21 ಗುಂಟೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದರು, ನಂತರ ಒಂದು ಎಕರೆಯನ್ನು ಕೊಡುತ್ತೇವೆಂದು ಹೇಳಿದರು. ಈಗ ಅವರು ಜಾಗವನ್ನು ಮುಂದೆ ಕೊಡುವುದಿಲ್ಲ, ಹಿಂದೆ ಕೊಡುತ್ತೇವೆ ನೀವು ಅಲ್ಲಿ ಬಸ್‌ಸ್ಟ್ಯಾಂಡ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಅದು ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮಗೆ ಭೂಮಿಯನ್ನು ಕೊಟ್ಟರೆ ಮಾಡುವುದಕ್ಕೆ ಏನೂ ಅಡ್ಡಿಯಿಲ್ಲ. ಐಹೊಳೆಯಲ್ಲಿ 175X70ಕೊಟ್ಟಿದ್ದಾರೆ, ಅಷ್ಟು ಸಾಕಾಗುವುದಿಲ್ಲ. ಈಗ ಆರ್ಕಿಲಾಜಿಕಲ್ ಸರ್ವೆ ಆಫ್ ಇಂಡಿಯಾದವರೊಡನೆ ಸರ್ವೆ ಮಾಡಿದ್ದೇವೆ, ಜಾಗವನ್ನು ನಮಗೆ ಕೊಡಿ ಎಂದು ಕರೆಸ್ಪಾಂಡೆನ್ಸ್ ಆಗಿದೆ. ನಮ್ಮ ಸದಸ್ಯರು ಆ ಭೂಮಿಯನ್ನು ಒಪ್ಪಿಕೊಂಡರೆ ನಾವು ಪ್ರತ್ಯೇಕವಾಗಿ ಮಾತನಾಡಿ ಬಸ್

ಸ್ಟ್ಯಾಂಡ್ ಮಾಡುತ್ತೇವೆ, ಅದರಲ್ಲಿ ಏನೂ ಅಡ್ಡಿ ಇಲ್ಲ. ಇವರು ಮೊದಲು ಕೊಡುತ್ತೇವೆಂದು ಹೇಳಿದ ಜಾಗವನ್ನು ಕೊಡದೇ ಈಗ ಒಂದು ಎಕರೆಯನ್ನು ಅದು ಹಿಂದಕ್ಕೆ ಬಸ್ ಸ್ಟ್ಯಾಂಡ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ನಮಗೆ ಆ ಗುಡೂರ ಗ್ರಾಮಕ್ಕೆ ಒಂದು ಎಕರೆ ಜಾಗ ಸಾಕಾಗುವುದಿಲ್ಲ. ಇನ್ನು ಐಹೊಳೆ ಅದಕ್ಕೆ ನಾವು ಮಾಡುತ್ತೇವೆ. ಈ ಎರಡು ಜಾಗಕ್ಕೂ ಬಸ್ ಸಂಚಾರವಿದೆ, ನಾವು ಇದನ್ನು ಮಾಡುತ್ತೇವೆ. ಮುಖ್ಯವಾಗಿ ನಮಗೆ ಭೂಮಿ ಬೇಕಾಗಿದೆ,

ಶ್ರೀ ಬಿ.ಬಿ. ಶಿವಪ್ಪ :— ಈಗ ಖಾಸಗಿಯವರು ಒಂದೂವರೆ ಎಕರೆ ಜಾಗವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಆ ಬಸ್ ನಿಲ್ದಾಣದ ಕೆಲಸವನ್ನು ತೆಗೆದುಕೊಳ್ಳಬಹುದಲ್ಲವೆ? ಆ ಜಾಗ ಸಿಕ್ಕರೆ ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಮೊದಲು ಅವರು ಒಂದು ಎಕರೆ 21 ಗುಂಟೆ ಜಾಗವನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ನಾವು ಮುಂದೆ ಅಂಗಡಿಗಳನ್ನು ಹಾಕಿಕೊಳ್ಳುತ್ತೇವೆ, ಹಿಂದೆ ಒಂದು ಎಕರೆ ಜಾಗವನ್ನು ಕೊಡುತ್ತೇವೆ, ನೀವು ಅಲ್ಲಿ ಬಸ್ ನಿಲ್ದಾಣವನ್ನು ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಒಳಗಡೆ ಹೋಗುವುದಕ್ಕಾಗುವುದಿಲ್ಲ, ನಮ್ಮವರು ಅಲ್ಲಿ ಹೋಗಿ ನೋಡಿಕೊಂಡು ಬಂದು ನಮಗೆ ರಿಪೋರ್ಟ್ ಕೊಟ್ಟಿದ್ದಾರೆ. ನಾವು ಮೊದಲು ಕೇಳಿದ ಹಾಗೆ ಒಂದು ಎಕರೆ 21 ಗುಂಟೆ ಭೂಮಿಯನ್ನು ಕೊಟ್ಟರೆ ಅಲ್ಲಿ ಮಾಡಬಹುದು.

ಶ್ರೀ ಬಿ.ಬಿ. ಶಿವಪ್ಪ :— ನಾವು ಈಗಲೇ ಕೊಟ್ಟರೆ ಕೆಲಸ ಪ್ರಾರಂಭ ಮಾಡುತ್ತಿರಾ?

ಶ್ರೀ ಬಿ.ಎನ್. ಬಚ್ಚೇಗೌಡ :— ನಾವು ಇದನ್ನು 1999-2000ನೇ ಇಸ್ವಿಯಲ್ಲಿ ತೆಗೆದುಕೊಂಡು ಮಾಡುತ್ತೇವೆ.

ಪಾಂಡವಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣ.

50(299) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಪಾಂಡವಪುರ ಜಿಲ್ಲೆ ಉಪ ವಿಭಾಗದ ಮುಖ್ಯ ಕೇಂದ್ರವಾಗಿದ್ದು ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಪಾಂಡವಪುರದಲ್ಲಿ ಪುರಸಭೆಯವರು ಬಸ್ ನಿಲ್ದಾಣದ ಸೌಕರ್ಯವನ್ನು ಒದಗಿಸಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೆ, ಪಾಂಡವಪುರ ಉಪವಿಭಾಗದ ಮುಖ್ಯ ಕೇಂದ್ರವಾಗಿದ್ದು ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದರೆ ಪಾಂಡವಪುರದ ಪುರಸಭೆಯವರು ಬಸ್ ನಿಲ್ದಾಣದ ಸೌಲಭ್ಯವನ್ನು ಒದಗಿಸಿರುತ್ತಾರೆ. ಎಂದು ಉತ್ತರದಲ್ಲಿ ಹೇಳಿದ್ದಾರೆ. ಈಗ ನನಗೆ ಏನು ಅನಿಸುತ್ತದೆ ಎಂದರೆ ಬಸ್ ಸ್ಟ್ಯಾಂಡ್ ಎಲ್ಲಿದೆ ಎಂಬುದು ನನಗೇ ಗೊತ್ತಿಲ್ಲ ಎನ್ನುವ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಅದು ಪುರಸಭೆಯ ಖಾಲಿ ಜಾಗ, ಅಲ್ಲಿ ಬಸ್ ನಿಂತುಕೊಳ್ಳುತ್ತಿದೆ. ಈಗ ನಾನು ಪಾಂಡವಪುರದಲ್ಲಿ ಬಸ್ ನಿಲ್ದಾಣ ಕಾಣೆಯಾಗಿದೆ ಎಂದು ದೂರು ಕೊಡಬೇಕಾಗಿದೆ. ಅದಕ್ಕೆ ಯಾವ ರೀತಿಯಾಗಿ ಬಸ್ ನಿಲ್ದಾಣ ಕಾಣೆಯಾಗಿದೆ ಎಂಬ ಬಗ್ಗೆ ದೂರು ಕೊಡುವುದಕ್ಕೆ ಸಹಾಯಕ್ಕೆ ಬರಬೇಕು. ಅಲ್ಲಿ ಬಸ್ ನಿಲ್ದಾಣ ಇಲ್ಲ, ಈಗ ನಮ್ಮ ಪ್ರಶ್ನೆ ಇರುವಂಥಾದ್ದು ಪಾಂಡವಪುರ ಉಪವಿಭಾಗದ ಮುಖ್ಯ ಕೇಂದ್ರವಾಗಿದೆ. ಅದಕ್ಕೆ ಹೊಸ ಬಸ್ ನಿಲ್ದಾಣ ಮಾಡುವ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಬಸ್‌ನಿಲ್ದಾಣದ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಹಣವನ್ನು ಒದಗಿಸುವ ವಿಚಾರವನ್ನು ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಅಲ್ಲಿ ಪುರಸಭೆಯ ಒಡತನದಲ್ಲಿ ಹಿಂದಿನ ಚಿಕ್ಕ ಬಸ್ ನಿಲ್ದಾಣವಿದೆ. ನ್ಯಾಷನಲೈಜ್ ಬಸ್‌ಗಳು ಬರುತ್ತವೆ, ಸುಮಾರು 85 ಬಸ್‌ಗಳು ಬಂದು ಹೋಗುತ್ತವೆ. ನಮ್ಮ ಎರಡು ಬಸ್‌ಗಳು ಅಲ್ಲಿಂದಲೇ ಪ್ರಾರಂಭವಾಗುತ್ತವೆ. ಅದುದರಿಂದ ನಾವು ಅಲ್ಲಿ ಹೊಸ ಬಸ್‌ನಿಲ್ದಾಣ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಕೃಷಿ ಮಾರ್ಕೆಟಿಂಗ್‌ಗೆ ಸೇರಿರತಕ್ಕಂಥ ಮತ್ತು ಆರೋಗ್ಯ ಇಲಾಖೆಗೆ ಸೇರಿದಂತಹ ಜಾಗವನ್ನು ತಾವು ಕೊಡಿಸುತ್ತೇವೆಂದು ಹೇಳಿದ್ದೀರಿ. ತಾವು ಎರಡು ಎಕರೆ ಜಾಗವನ್ನು ಕೊಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಅಲ್ಲಿ ಮನೆಗಳು ಇವೆ. ಆ ಮನೆಗಳವರು ಬೇರೆ ಕಡೆಗೆ ಹೋಗುವಂತಹ ವ್ಯವಸ್ಥೆಯಾಗಬೇಕು. ನಂತರ ನಾವು ಆ ಜಾಗವನ್ನು ನಮಗೆ ಕೊಟ್ಟರೆ ನಾವು ಅಲ್ಲಿ ಬಸ್ ನಿಲ್ದಾಣದ ಕೆಲಸವನ್ನು ಈ ವರ್ಷದಲ್ಲೇ ತೆಗೆದುಕೊಳ್ಳುತ್ತೇವೆ. ತಾವು ಮಾತನಾಡಿ ಆ ಜಾಗವನ್ನು ನಮಗೆ ಕೊಡಿಸಿದರೆ ಮಾಡುತ್ತೇವೆ, ಅದರಲ್ಲಿ ಏನೂ ಅಡ್ಡಿ ಇಲ್ಲ. ಈಗಾಗಲೇ ಜಿಲ್ಲಾಧಿಕಾರಿಯವರೂ ಸಹ ಕರೆಸ್ಪಾಂಡೆನ್ಸ್ ಮಾಡಿ ನಮ್ಮನ್ನು ಕೇಳಿದ್ದಾರೆ. ತಾವು ಆ ಮನೆಗಳನ್ನು ನೀವೇ ಕಟ್ಟಿಸಿಕೊಡಿ ಎಂದು ಹೇಳಿದ್ದೀರೆಂದು ಸುದ್ದಿ ಇದೆ. ನಾವು ಆ ರೀತಿಯಾಗಿ ಮಾಡುವುದಾಗುವುದಿಲ್ಲ. ಆ ಮನೆಗಳನ್ನು ತೆರವು ಮಾಡಿ

ಬೇರೆ ಮನೆಗಳನ್ನು ಕಟ್ಟಿಸಿಕೊಡಿ ಎಂದು ಹೇಳಿದರೆ ಲಕ್ಷಾಂತರ ರೂಪಾಯಿಗಳು ಬೇಕಾಗುತ್ತದೆ. ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುವುದಿಲ್ಲ. ತಾವು ನಮಗೆ ಭೂಮಿಯನ್ನು ಪುಕ್ಕಟೆಯಾಗಿ ಕೊಡಿಸಿ, ನಿಮಗೆ ನಾವು ಬಸ್ ನಿಲ್ದಾಣವನ್ನು ಕಟ್ಟಿಸಿ ಕೊಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ತಾವು ಲ್ಯಾಂಡ್ ವ್ಯಾಲ್ಯೂಯೇಷನ್ ಕೊಡುವಂತಹ ಆಲೋಚನೆಯನ್ನು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಲ್ಯಾಂಡ್ ವ್ಯಾಲ್ಯುಯೇಷನ್ ಕೊಡುತ್ತೇವೆ, ತಾವು ಕಡಿಮೆ ದರದಲ್ಲಿ ಕೊಡಿಸಿದರೆ ನಾವು ಕೊಡುತ್ತೇವೆ. ತಾವು ಉಚಿತವಾಗಿ ಕೊಡಿಸಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಆಯಿತು, ನಾವು ನೀವು ಮಾತನಾಡಿ ಮಾಡೋಣ.

ಗುಬ್ಬಿ ಕ್ಷೇತ್ರದ ಕೆ.ಜಿ.ಟೆಂಪಲ್, ಮಾವಿನಹಳ್ಳಿ, ಕಲ್ಲೂರು ಕ್ರಾಸ್ ಮತ್ತು ನಿಟ್ಟೂರು ಗ್ರಾಮಗಳಲ್ಲಿ ಉಪ ಮಾರುಕಟ್ಟೆಯ ಮಂಜೂರಾತಿ.

54(35) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಬ್ಬಿ ಕ್ಷೇತ್ರದ ಕೆ.ಜಿ. ಟೆಂಪಲ್, ಮಾವಿನಹಳ್ಳಿ, ಕಲ್ಲೂರು ಕ್ರಾಸ್ ಮತ್ತು ನಿಟ್ಟೂರ್ ಗ್ರಾಮಗಳಲ್ಲಿ, ಉಪ ಗ್ರಾಮಗಳಲ್ಲಿ ಉಪ ಮಾರುಕಟ್ಟೆಗಳನ್ನು ಮಂಜೂರು ಮಾಡಬೇಕೆಂದು 3-4 ವರ್ಷಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ಕೆ.ಜಿ. ಟೆಂಪಲ್ ಮತ್ತು ನಿಟ್ಟೂರುಗಳಲ್ಲಿ ಈಗಾಗಲೇ ಉಪ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಲಾಗಿದೆ. ಮತ್ತು ಅಭಿವೃದ್ಧಿಪಡಿಸಲಾಗುತ್ತಿದೆ. ಕಲ್ಲೂರು ಕ್ರಾಸ್‌ನಲ್ಲಿ ಗ್ರಾಮೀಣ ಮಾರುಕಟ್ಟೆಯನ್ನು (ಸಂತೆ) ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗಿದೆ. ಮಾವಿನಹಳ್ಳಿ ಗ್ರಾಮದಲ್ಲಿ ಉಪ ಮಾರುಕಟ್ಟೆ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲ.

ಆ) ಮಾವಿನಹಳ್ಳಿ ಗ್ರಾಮದಲ್ಲಿ ಉಪ ಮಾರುಕಟ್ಟೆ ಸ್ಥಾಪಿಸಲು ಪ್ರಸ್ತಾಪ ಬಂದಲ್ಲಿ ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಶಿವನಂಜಪ್ಪ :— ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರದಲ್ಲಿ ಕೆ.ಜಿ. ಟೆಂಪಲ್ ಮತ್ತು ನಿಟ್ಟೂರುಗಳಲ್ಲಿ ಈಗಾಗಲೇ ಉಪ ಮಾರುಕಟ್ಟೆಗಳನ್ನು ಸ್ಥಾಪನೆ

ಮಾಡಲಾಗಿದೆ ಎಂದು ಹೇಳಿದ್ದಾರೆ. ಅದು ಹೇಗೆ ಮತ್ತು ಅಭಿವೃದ್ಧಿಪಡಿಸಲಾಗುತ್ತದೆ ಎಂದು ಹೇಳಿದ್ದೀರಿ, ಏನು ಅಭಿವೃದ್ಧಿಪಡಿಸುತ್ತಿದ್ದೀರಿ? ಎರಡನೆಯದಾಗಿ ಕಲ್ಲೂರು ಕ್ರಾಸ್‌ನಲ್ಲಿ ಗ್ರಾಮೀಣ ಮಾರುಕಟ್ಟೆಯನ್ನು (ಸಂತೆ) ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗಿದೆ, ಎಂದು ಹೇಳಿದ್ದೀರಿ. ಏನು ಕ್ರಮ ಜರುಗಿಸಲಾಗಿದೆ? ಮೂರನೆಯದಾಗಿ, ಮಾವಿನ ಹಳ್ಳಿಗ್ರಾಮದ ಉಪ ಮಾರುಕಟ್ಟೆ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲವೆಂದು ಹೇಳಿದ್ದೀರಿ. ಹಿಂದೆ ಮಂತ್ರಿಗಳಾಗಿದ್ದಂತಹ ಶ್ರೀರಾಮಲಿಂಗಾರೆಡ್ಡಿಯವರು ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು. ಆಗ ನಾನು ಮತ್ತು ಸಾರ್ವಜನಿಕರು ಸೇರಿ ಡಿಮ್ಯಾಂಡ್ ಮಾಡಿದ್ದೆವು. ನಾವು ಅರ್ಜಿಯನ್ನು ಕೊಟ್ಟಿದ್ದೇವೆ, ಮತ್ತು ಪತ್ರವನ್ನು ಬರೆದಿದ್ದೇವೆ. ತಾವು ಇದರ ಬಗ್ಗೆ ಏನು ಮಾಡುತ್ತೀರೆಂದು ತಿಳಿಸಬೇಕು.

ಶ್ರೀ ಹೆಚ್. ನಾಗಪ್ಪ :— ಮಾನ್ಯ ಅಧ್ಯಕ್ಷರೆ, ಕೆ.ಜಿ. ಟಿಂಪಲ್‌ನಲ್ಲಿ ಈಗಾಗಲೇ ಮಾರುಕಟ್ಟೆಯನ್ನು ಮಾಡಿ 3 ಎಕರೆ ಜಮೀನನ್ನು ವಶಕ್ಕೆ ತೆಗೆದುಕೊಂಡಿದ್ದೇವೆ. ಮತ್ತೆ ಅಭಿವೃದ್ಧಿಕಾರ್ಯಕ್ಕಾಗಿ ಸುಮಾರು 7 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ನಿಟ್ಟೂರು ಉಪ ಮಾರುಕಟ್ಟೆಗೂ ಕೂಡ 10 ಎಕರೆ 27 ಸೆಂಟ್ ಜಾಗವನ್ನು ಕೂಡ ಅಕ್ವಾಯರ್ ಮಾಡಿಕೊಂಡು ಸುಮಾರು 22 ಲಕ್ಷ ರೂಪಾಯಿಗಳಲ್ಲಿ ಪ್ರಾಂಗಣದ ಸಮತಟ್ಟು ಮಾಡುವುದು. ಅದೇ ರೀತಿ ನಿಟ್ಟೂರು ಉಪ ಮಾರುಕಟ್ಟೆಯನ್ನು ಕೂಡ ಸುಮಾರು ಹತ್ತು ಎಕರೆ, ಇಪ್ಪತ್ತೇಳು ಸೆಂಟ್ ಜಾಗವನ್ನು ಸ್ವಾಧೀನಪಡಿಸಿಕೊಂಡು ಪ್ರಾಂಗಣವನ್ನು ಸಮತಟ್ಟು ಮಾಡುವುದು ಮತ್ತು ಜಂಗಲ್ ಕ್ಲಿಯರ್ ಮಾಡುವುದು, ಕಾಂಪೌಂಡ್ ಕಟ್ಟಿಸುವುದು, ರಸ್ತೆಗಳ ಅಭಿವೃದ್ಧಿ, ಹರಾಜುಕಟ್ಟೆ ನಿರ್ಮಾಣ, ನೀರು ಸರಬರಾಜು ಇವುಗಳಿಗೋಸ್ಕರವಾಗಿ ಸುಮಾರು ಇಪ್ಪತ್ತೆರಡು ಲಕ್ಷ ರೂಪಾಯಿಗಳನ್ನು ಈಗ ಖರ್ಚು ಮಾಡುತ್ತಿದ್ದೇವೆ. ಅದೇರೀತಿ ಕಲ್ಲೂರು ಕ್ರಾಸ್‌ನಲ್ಲೂ ಕೂಡ ಗ್ರಾಮೀಣ ಸಂತೆಯನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರವಾಗಿ ಅಲ್ಲಿಯ ಪಂಚಾಯಿತಿಯವರಿಂದ ಒಂದು ನಿವೇಶನವನ್ನೂ ಕೂಡ ಕೇಳಿದ್ದೇವೆ, ಸುಮಾರು 150 ಮತ್ತು 500 ಅಡಿ ಜಾಗವನ್ನು ಅವರು ಕೊಟ್ಟಿದ್ದಾರೆ ಅದರಲ್ಲಿ ನಾಲ್ಕು ಲಕ್ಷ ಎಪ್ಪತ್ತ ಮೂರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಆ ಸಂತೆಯ ಅಭಿವೃದ್ಧಿ ಕಾರ್ಯಗಳನ್ನು ಕೂಡ ತೆಗೆದುಕೊಳ್ಳುತ್ತೇವೆ. ಮತ್ತೆ ಮಾವಿನಹಳ್ಳಿಯಲ್ಲಿ ಯಾವುದೇ ಉಪ ಮಾರುಕಟ್ಟೆಯ ಸ್ಥಾಪನೆಗೆ ಪ್ರಸ್ತಾವನೆ ಬಂದಿಲ್ಲ, ಅದನ್ನು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ :— ಹಿಂದೆ, ಈ ಇಲಾಖೆಗೆ ಮಂತ್ರಿಗಳಾಗಿದ್ದಾಗ ರಾಮಲಿಂಗಾರೆಡ್ಡಿಯವರು ಸ್ಥಳಕ್ಕೆ ಬಂದಾಗ, ನಾನು ಕಾಗದವನ್ನು ಕೊಟ್ಟು ಆ ಊರಿನ ಜನ ಒತ್ತಾಯ ಮಾಡಿದ್ದರು, ಊರಿನವರೂ ಕೂಡ ಮಂತ್ರಿಗಳಿಗೆ ರೆಪ್ರಸೆಂಟೇಷನ್ ಮಾಡಿದ್ದಾರೆ. ಅದನ್ನು ಈಗಲಾದರೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ನಾಗಪ್ಪ :— ಸಭಾಧ್ಯಕ್ಷರೆ, ಇತ್ತೀಚೆಗೆ ಅವರೇನಾದರೂ ರೆಪ್ರಸೆಂಟೇಷನ್ ಕೊಟ್ಟಿರುವುದು ಇದ್ದರೆ, ನಾನು ಹುಡುಕಿಸಿ ಆ ಕಡತವನ್ನು ತೆಗೆಸುತ್ತೇನೆ. ಇಲ್ಲದಿದ್ದರೆ, ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ಸ್ಟೇಟ್ ಅಗ್ರೋಕಾರ್ನ್ ಪ್ರಾಡಕ್ಟ್ಸ್, ಲಿ. ಇದರಲ್ಲಿ ಭ್ರಷ್ಟಾಚಾರ.

56(96) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರ ಸ್ವಾಮ್ಯದ ಕರ್ನಾಟಕ ಸ್ಟೇಟ್ ಅಗ್ರೋಕಾರನ್ ಪ್ರಾಡಕ್ಟ್ಸ್, ಸಂಸ್ಥೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಪ್ರಕರಣವು ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಬಂದಿದೆ, ಈ ಪ್ರಕರಣವನ್ನು ಸಿ.ಓಡಿ ತನಿಖೆಗೆ ಒಪ್ಪಿಸಲಾಗಿದೆಯೇ ಸಿ.ಓಡಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ (ಸಲ್ಲಿಸಿದ್ದರೇ ವರದಿಯ ಪೂರ್ಣ ವಿವರ ನೀಡುವುದು.)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :—

ಅ) ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಡಾ: ಎಂ.ಎಸ್. ಪಾರ್ಥಸಾರಥಿ ಮೇಲೆ ಭ್ರಷ್ಟಾಚಾರ ಅಕ್ರಮ ವ್ಯವಹಾರ ಮತ್ತು ಆಡಳಿತ ಲೋಪಗಳ ಬಗ್ಗೆ ದೂರುಗಳು ಸರ್ಕಾರದಲ್ಲಿ ಸ್ವೀಕೃತವಾಗಿವೆ.

ಆ) ಈ ಬಗ್ಗೆ ದೂರುಗಳನ್ನು ಜುಲೈ 1998ರಲ್ಲಿ ಸ್ವೀಕರಿಸಿದ್ದು, ಹಿಂದಿನ ವ್ಯವಸ್ಥಾಪಕ ನಿರ್ದೇಶಕರನ್ನು ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲಾಗಿದೆ, ನಂತರ ಪ್ರಕರಣವನ್ನು ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸಲಾಗಿದೆ. ಸಿ.ಓ.ಡಿಯಿಂದ ತನಿಖಾ ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸಭಾಧ್ಯಕ್ಷರೆ, ಉತ್ತರದಲ್ಲಿ ಜುಲೈ 98ರಂದು ದೂರುಗಳನ್ನು ಸ್ವೀಕರಿಸಿದ್ದು ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿಚಾರಣೆ ಬಾಕಿ ಇದ್ದು, ಅಮಾನತ್ತಿನಲ್ಲಿಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ನಾನು ಕೃಷಿ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನೀವೂ ಕೂಡ ಇಲ್ಲಿ ಅನೇಕ ಹಗರಣಗಳನ್ನು ಪ್ರಸ್ತಾಪ ಮಾಡಿದ್ದೀರಿ, ಸರ್ಕಾರದ ವ್ಯವಸ್ಥೆಯನ್ನು ಸರಿಮಾಡಬೇಕೆಂದು ಪ್ರಯತ್ನಿಸಿದ್ದೀರಿ. ಇವತ್ತು ನಿಮ್ಮ ಮುಂದೆ ಸುಮಾರು 1997-98ನೇ ಇಸವಿನಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿದೆ ಎನ್ನುವ ದೂರು ಬಂದಿದೆ. ಏನೇನು ಎಂದರೆ

ಕಚ್ಚಾವಸ್ತುಗಳ ಖರೀದಿಯಲ್ಲಿ ಅವ್ಯವಹಾರ, ಸಾಲ ಮಾಡಿ ಬಂಡವಾಳ ಹಾಕಿ ದುಡಿಯದೆ ನಿಲ್ಲಿಸಿರುವ ಯಂತ್ರಗಳ ಬಗ್ಗೆ, ನೌಕರರ ನೇಮಕಾತಿಯಲ್ಲಿ ಅವ್ಯವಹಾರ, ನೌಕರರಿಗೆ ಬಡ್ತಿಯನ್ನು ನೀಡುವಲ್ಲಿ ತಾರತಮ್ಯ, ನಿಯಮಾವಳಿಗಳನ್ನೇ ಉಲ್ಲಂಘಿಸಿರುವುದು, ಕಾನೂನಿಗೆ ವಿರುದ್ಧವಾಗಿ ಹುದ್ದೆಗಳನ್ನು ಸೃಷ್ಟಿಸಿರುವುದು, ನೌಕರರ ನೇಮಕಾತಿಗೆ ಆಡಳಿತ ಮಂಡಳಿ ಅನುಮತಿ ನೀಡದೆ ನಿರಾಕರಿಸಿದಾಗ, ಅನುಮೋದನೆ ನೀಡಲಾಗಿದೆ ಎಂದು ದಾಖಲಾತಿಗಳನ್ನು ತಿದ್ದಲಾಗಿರುವುದು, ಕಚ್ಚಾವಸ್ತುಗಳ ಸಾಗಾಣಿಕೆಗೆ ಕಾನೂನುಬಾಹಿರವಾಗಿ ಕಮಿಷನ್ ಅನ್ನು ಬದಲಾವಣೆ ಮಾಡಿ ತೆಗೆದುಕೊಂಡಿರುವುದು, ಮೆಕ್ಕೆಜೋಳವನ್ನು 550 ರೂ. ಕೊಂಡು ಅಧಿಕೃತವಾಗಿ 440 ರೂ. ಎಂದು ದಾಖಲಿಸಿರುವುದು, ಟೆಂಡರ್ ಕರೆಯದೆ ಬೇಕಾಬಿಟ್ಟಿ ಮಾಡಿರುವುದು. ಇವತ್ತು ಇದನ್ನು 1998ರಲ್ಲಿ ಸಿಓಡಿ ತನಿಖೆಗೆ ಕೊಟ್ಟಿದ್ದೀರಿ ಈ ಆಯೋಗಗಳಿಗೆ ಮೂರು ತಿಂಗಳಲ್ಲಿ ವರದಿಯನ್ನು ಸಲ್ಲಿಸಬೇಕೆನ್ನುತ್ತಾರೆ. ಇವೆಲ್ಲಾ ನಿರ್ದಿಷ್ಟವಾದ ಅಪಾದನೆಗಳು, ಒಂದು ನಿರ್ದಿಷ್ಟವಾದ ಅವಧಿಯೊಳಗೆ ವರದಿಯನ್ನು ಕೊಡಬೇಕೆಂದು ನೀವು ಏತಕ್ಕೆ ತಿಳಿಸುವುದಿಲ್ಲ? ಅಥವಾ ಅವರು ನಿವೃತ್ತಿಯಾಗಬೇಕು ಅಥವಾ ಈ ಪ್ರಪಂಚದಿಂದಲೇ ಅವರು ಹೋಗಬೇಕು ಆವಾಗ ನೀವು ವರದಿಯನ್ನು ಕೊಡುತ್ತೀರಾ? ತನಿಖೆಯ ಬಗ್ಗೆ ಕೂಡ ಜನತೆಗೆ ವಿಶ್ವಾಸ ಬರಬೇಕು, ಸರ್ಕಾರಕ್ಕೆ ಅಪರಾಧಿಗಳನ್ನು ಶಿಕ್ಷಿಸುವ ಬಗ್ಗೆ ಒಂದು ದೃಢ ನಿಲುವು ಇರಬೇಕು, ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳಬಯಸುತ್ತೀರಿ?

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆಯ ಹಿತದೃಷ್ಟಿಯಿಂದ ಸಾರ್ವಜನಿಕರ ಹಿತವನ್ನು ಕಾಪಾಡುವುದಕ್ಕೆ ಮಾನ್ಯ ಸದಸ್ಯರು ಏನು ಹೇಳಿದರೂ ಕೂಡ ಸರ್ಕಾರ ಈ ನಿಮಿಷದಲ್ಲೇ ಅದಕ್ಕೆ ಒಪ್ಪಿಕೊಳ್ಳುತ್ತದೆ. ನೀವು ಹೇಳಿದ್ದನ್ನೆಲ್ಲಾ ಇಲ್ಲೇ ನಾನು ಒಪ್ಪಿದ್ದೇನೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇವತ್ತೆ ಸಂಬಂಧಪಟ್ಟವರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ.

ರಾಜ್ಯದ ಪ್ರತಿ ಹಳ್ಳಿಗಳಿಗೂ ಸ್ಮಶಾನ ಭೂಮಿ ಮಂಜೂರಾತಿ.

57(328) ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಪ್ರತಿ ಹಳ್ಳಿಗಳಲ್ಲೂ ಸ್ಮಶಾನಕ್ಕಾಗಿ ಸ್ಥಳವನ್ನು ಕಾಯ್ದಿರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಸ್ಮಶಾನಕ್ಕಾಗಿ ಸ್ಥಳ ಇಲ್ಲದ ಹಳ್ಳಿಗಳ ಸಂಖ್ಯೆ ಎಷ್ಟು?

ಇ) ಸ್ಮಶಾನಕ್ಕಾಗಿ ಸ್ಥಳವಿಲ್ಲದೇ ಶವಗಳನ್ನು ಹೂಳಲು ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಇದಕ್ಕೆ ಭೂಮಿ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1964ರ ಕಲಂ 71ರಡಿಯಲ್ಲಿ ಈ ಬಗ್ಗೆ ಅವಕಾಶವಿದೆ. ಬೇಡಿಕೆಗಳನ್ನು ಅನುಸರಿಸಿ ಜಿಲ್ಲಾಧಿಕಾರಿಗಳು ಸ್ಥಳಕಾಯ್ದಿರಿಸಲು ಕ್ರಮ ಕೈಗೊಳ್ಳುವರು.

ಆ) 7817

ಇ) ಬಂದಿದೆ.

ಈ) ಸರ್ಕಾರದ ಭೂಮಿ ಇಲ್ಲದ ಕಡೆ ಜಮೀನನ್ನು ಖರೀದಿಸುತ್ತಿದೆ. ಈ ಬಗ್ಗೆ ದಿನಾಂಕ 20-10-95 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಶ್ರೀ ಮಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದು 52 ವರ್ಷ ಕಳೆದರೂ ಕೂಡ ಇನ್ನು 2817 ಹಳ್ಳಿಗಳಿಗೆ ಸ್ಮಶಾನಕ್ಕೆ ಜಾಗವೇ ಇಲ್ಲ. ಒಂದು ಕಡೆ ನೀವು ಊಟ ಕೊಡದಿದ್ದರೂ ಚಿಂತೆಯಿಲ್ಲ, ಸತ್ತವರನ್ನು ಹೂಳುವುದಕ್ಕೆ ಜಾಗವಿಲ್ಲವೆಂದರೆ ಇದಕ್ಕಿಂತ ಬೇರೆ ಪ್ರಶ್ನೆ ಬೇಕೆ? ಈ ಸ್ಮಶಾನ ಜಾಗಗಳ ಬಗ್ಗೆ ನಿಮ್ಮ ಸರ್ಕಾರದ ನಿರ್ಧಾರವೇನು? ಅನೇಕ ಕಡೆ ಜಮೀನನ್ನು ಖರೀದಿ ಮಾಡಿ ಆಶ್ರಯ ಮನೆಗಳನ್ನು ಕೊಡುತ್ತೀರಿ, ಈ ಸ್ಮಶಾನಗಳು ಇಲ್ಲದಿರುವ ಕಡೆ ಕಡ್ಡಾಯವಾಗಿ ಸ್ಮಶಾನಗಳನ್ನು ಇಡುವುದಕ್ಕೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸಭಾಧ್ಯಕ್ಷರೆ, ಈ ಸ್ಮಶಾನಗಳಿಗೆ ಜಾಗವನ್ನು ಒದಗಿಸಿಕೊಡುವ ವಿಚಾರದಲ್ಲಿ ನಮ್ಮ ಸರ್ಕಾರದ ನೀತಿ ಸ್ಪಷ್ಟವಾಗಿದೆ. ಇದು ನಮ್ಮ ಕಂದಾಯ ಇಲಾಖೆಯ ಜವಾಬ್ದಾರಿ, ಜನನದಿಂದ ಮರಣದವರೆಗೆ ಜನನ ಬರೆಯತಕ್ಕಂತಹವರು ನಾವೇ. ಸಂಸ್ಕಾರವನ್ನು ಮಾಡತಕ್ಕಂಥವರು ನಾವೇ. We have to perform the last rituals. ಈ ಕೆಲವು ಕಡೆ ಸ್ಮಶಾನ ಜಾಗವನ್ನು ಪಟ್ಟಭದ್ರಹಿತಾಸಕ್ತಿಗಳು ಒತ್ತುವರಿ ಮಾಡಿಕೊಂಡಿದ್ದಾರೆ. ಕೆಲವು ಬಡವರಿಗೆ ಸ್ಮಶಾನಗಳೇ ಇಲ್ಲದೆ ರಸ್ತೆ ಬದಿಯಲ್ಲಿ ಹೆಣವನ್ನು ಹೂಳುವ ಪರಿಸ್ಥಿತಿ ಕೂಡ ಇದೆ. ಈ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಂಡು ನಮ್ಮ ಸರ್ಕಾರ ಈ ಒಂದು ಕಾರ್ಯಕ್ರಮವನ್ನು ಆದ್ಯತೆಯ ಮೇರೆಗೆ ತೆಗೆದುಕೊಂಡಿದ್ದೇವೆ. ನಮ್ಮ ಆದೇಶ ಏನಿದೆ ಎಂದರೆ ಈ ವರ್ಷದೊಳಗೆ ಎಲ್ಲಾ ಹಳ್ಳಿಗಳಿಗೆ ಸ್ಮಶಾನವನ್ನು ಒದಗಿಸಿಕೊಡಬೇಕೆಂದಿದೆ. ಸರ್ಕಾರದ ಜಮೀನು ಏನಾದರೂ ಇದ್ದರೆ ಅದನ್ನು ಮೀಸಲಿಡಬೇಕು, ಇಲ್ಲದಿದ್ದರೆ ಖಾಸಗಿ ಜಮೀನುಗಳನ್ನು ಖರೀದಿ ಮಾಡಿ

ಮೀಸಲಿಡಬೇಕು, ಅದು ಸಿಗಲಿಲ್ಲವೆಂದರೆ ಜಮೀನು ಸ್ವಾಧೀನಪಡಿಸಿಕೊಂಡಾದರೂ ಕೊಡಲೇಬೇಕು, ಇದು ನಮ್ಮ ಕರ್ತವ್ಯವಾಗಿದೆ. ಅದನ್ನು ನಾವು ಖಂಡಿತವಾಗಿ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಸಭಾಧ್ಯಕ್ಷರೆ, ಈ ಸ್ಮಶಾನಗಳ ಸಮಸ್ಯೆ ಕೇವಲ ಹಳ್ಳಿಗಳಲ್ಲಿ ಮಾತ್ರವಿಲ್ಲ ನಗರಪ್ರದೇಶದಲ್ಲೂ ಕೂಡ ಸ್ಮಶಾನಗಳ ಅಭಾವ ತುಂಬಾ ಇದೆ. ಬದುಕಿರುವವರಿಗೆ ನಿವೇಶನ ಸಿಗುವುದಿಲ್ಲ, ಸತ್ತವರಿಗೆ ಹೂಳುವುದಕ್ಕೆ ಜಾಗವಿಲ್ಲದಿರುವ ಪರಿಸ್ಥಿತಿ ಇದೆ. ಉದಾಹರಣೆಗೆ ಬೆಂಗಳೂರು ನಗರವನ್ನೇ ತೆಗೆದುಕೊಂಡರೆ ಇಷ್ಟೆಲ್ಲಾ ಬಡಾವಣೆಗಳು, ಹಳ್ಳಿಗಳು ಸೇರಿಕೊಂಡರೆ ಹೊಸದಾಗಿ ಇವತ್ತು ಒಂದೆ ಒಂದು ಸ್ಮಶಾನಕ್ಕೆ ಜಾಗವಿಲ್ಲ. ಸ್ಮಶಾನದಲ್ಲಿ ಹೆಣವನ್ನು ಹೂಳಲು ಒಂದು ಗುಂಡಿಯನ್ನು ತೆಗೆದರೆ ಮತ್ತೊಂದು ಹೆಣದ ಅವಶೇಷವಿರುತ್ತದೆ, ಅದನ್ನು ತೆಗೆದು ಹಾಕಿ ಹೆಣವನ್ನು ಹೂಳುವ ಪರಿಸ್ಥಿತಿ ಇದೆ. ಹೀಗೆ ಸ್ಮಶಾನಗಳು ಸುಡುಗಾಡಿನ ಪರಿಸ್ಥಿತಿಯನ್ನು ತಲುಪಿವೆ. ಅದಕ್ಕೋಸ್ಕರ ಸರ್ಕಾರದ ಏನೊಂದು ನಿಲುವಿದೆ, ಎಲ್ಲೆಲ್ಲಿ ಸ್ಮಶಾನಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅದನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿ ಸ್ಮಶಾನಗಳು ಅಗತ್ಯವಾದ ಭಾಗವೆನ್ನುವುದನ್ನು ಸರ್ಕಾರ ರುಜುವಾತು ಮಾಡಬೇಕು.

ಶ್ರೀ ಬಿ. ಸೋಮಶೇಖರ್:— ನಾನು ಈ ವಿಚಾರ ಹೇಳುವುದಕ್ಕೆ ಮೊದಲೇ ಉತ್ತರವನ್ನು ಹೇಳಿದ್ದೇನೆ, ಮತ್ತೆ ಹೇಳುವ ಪ್ರಶ್ನೆ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ:— ಸನ್ಮಾನ್ಯ ಅಧ್ಯಕ್ಷರೆ, ಸ್ಮಶಾನ ಒತ್ತುವರಿ ಮಾಡಿಕೊಂಡಿರುವುದನ್ನು ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕುತ್ತೇವೆಂದು ಕಂದಾಯ ಸಚಿವರು ಹೇಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಒಂದು ಪ್ರಕರಣವಿಲ್ಲ, ನಾವೇನಾದರು ಅಧಿಕಾರಿಗಳಿಗೆ ಹೋಗಿ ಸ್ಮಶಾನ ಖಿಲ್ಲಾ ಮಾಡಿ ಎಂದರೆ, ಶಾಸಕರು ನಿನ್ನ ವಿರುದ್ಧ ಹೀಗೆ ಹೇಳಿದ್ದಾರೆಂದು ಹೇಳಿಕೊಡುತ್ತಾರೆಯೇ ಹೊರತು ಅಧಿಕಾರಿಗಳಿಗೆ ಆ ಬದ್ಧತೆ ಇಲ್ಲ. ತಾವು ಸೂಚನೆಯನ್ನು ಕೊಡುತ್ತೀರಾ, ತಾವು ಎವಿಕ್ಷನ್ ಮಾಡಿಸುತ್ತೀರಾ, ಅಥವಾ ಎವಿಕ್ಷನ್ ಮಾಡಿಸದಿರುವ ಅಧಿಕಾರಿಗಳಿಗೆ ಏನು ಶಿಕ್ಷೆ ಕೊಡುತ್ತೀರೆನ್ನುವುದನ್ನು ಹೇಳಿ.

ಶ್ರೀ ಬಿ. ಸೋಮಶೇಖರ್:— ನಾವು ಈಗಾಗಲೇ ಅಧಿಕಾರಿಗಳಿಗೆ ನೀವು ಇಷ್ಟು ದಿವಸಗಳೊಳಗೆ ಇಷ್ಟು ಹಳ್ಳಿಗಳಿಗೆ ಇದನ್ನು ಒದಗಿಸಿಕೊಡಬೇಕೆಂದು ಗುರಿಯನ್ನು ನಿಗದಿಮಾಡಿದ್ದೇವೆ, ಪ್ರಗತಿ ಬಹಳ ವೇಗದಿಂದ ಆಗುತ್ತಿದೆ. ಎಲ್ಲಾದರೂ ಅಂಥ ಪ್ರಕರಣಗಳಿದ್ದರೆ, ಅದನ್ನು ನನ್ನ ಗಮನಕ್ಕೆ ತಗೆದುಕೊಂಡು ಬಂದರೆ ಇಲ್ಲಿಂದಲೆ ನಾವು ನಿರ್ದೇಶನವನ್ನು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಕಾಂತ್ ಬೆಲ್ಲದ್:— ಸನ್ಮಾನ್ಯ ಅಧ್ಯಕ್ಷರೆ, ಜನರಿಗೆ ಬಹಳ ಬೇಕಾಗಿದ್ದಾವೆ, ಅವಕ್ಕು ಇದನ್ನು ಅನ್ವಯಿಸಬೇಕು, ಇದನ್ನು ಮಂತ್ರಿಗಳು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ಸನ್ಮಾನ್ಯ ಸಭಾಧ್ಯಕ್ಷರೆ ನಗರಗಳೆಲ್ಲ ಸ್ಮಶಾನಕ್ಕೆ ಹತ್ತಾರು ಜಾಗವನ್ನು ಮೀಸಲಿಡತಕ್ಕಂಥದ್ದು ಅವಶ್ಯಕತೆಯಿದೆ. ನಗರಗಳಿಗೆ ಸಂಬಂಧಿಸಿದಂತೆ

ನಾವು ವೈಜ್ಞಾನಿಕವಾಗಿಯು ಚಿಂತನೆಯನ್ನು ಮಾಡಬೇಕಾಗುತ್ತದೆ. ಸತ್ತವರ ಸಂಖ್ಯೆ ಜಾಸ್ತಿಯಾಗುತ್ತಿರುತ್ತಾರೆ, ಎಲ್ಲಾ ಕಡೆ ಹೆಣ ಹೂಳುತ್ತಾ ಹೋದರೆ ವ್ಯವಸಾಯ ಮಾಡುವುದಕ್ಕು ಜಾಗವಿರುವುದಿಲ್ಲ. ಮನೆ ಕಟ್ಟುವುದಕ್ಕು ಜಾಗವಿರುವುದಿಲ್ಲ. ತಾವು ಚಿಂತನೆ ಮಾಡಬೇಕು, ಈ ನಗರಗಳಲ್ಲಿ ಏನಾದರೂ ಎಲೆಕ್ಟ್ರಿಕಲ್ ಚಿತಾಗಾರವನ್ನು ಮಾಡತಕ್ಕಂಥದ್ದನ್ನು ಯೋಚನೆ ಮಾಡಿದರೆ ಬಹಳ ಒಳ್ಳೆಯದು, ಅವಾಗ ಸ್ಥಳದ ಅಭಾವ ಜಾಸ್ತಿಯಾಗುವುದಿಲ್ಲ ಹಳ್ಳಿಗಾಡಿನಲ್ಲಿ ಇನ್ನು ಆ ರೀತಿ ಅಭಿವೃದ್ಧಿಯಾಗಿಲ್ಲ, ಜಾಗ ಒದಗಿಸಿಕೊಡುವುದು ನಮ್ಮ ಕರ್ತವ್ಯ ಆದನ್ನು ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :— ಅಧ್ಯಕ್ಷರೆ, 7817 ಹಳ್ಳಿಗಳಿಗೆ ಸ್ಮಶಾನಗಳನ್ನು ಗುರುತಿಸಿಕೊಡುವ ಕೆಲಸವನ್ನು ಸಮರೋಪಾದಿಯಲ್ಲಿ ಎಷ್ಟುದಿವಸದೊಳಗೆ ಸರ್ಕಾರ ಮಾಡಬಲ್ಲದು.

ಶ್ರೀ ಬಿ. ಸೋಮಶೇಖರ್ :— ಕಾರ್ಯಕ್ರಮವು ಆದ್ಯತೆಯನ್ನು ಪಡೆದುಕೊಂಡಿದೆ, 1999 ರೊಳಗೆ ಒದಗಿಸಿಕೊಡಬೇಕೆನ್ನುವ ಗುರಿಯನ್ನಿಟ್ಟುಕೊಂಡಿದ್ದೇವೆ, ಆ ದಿಕ್ಕಿನಲ್ಲಿ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :— ಅಧ್ಯಕ್ಷರೆ, ಜಮೀನಿರುವವರು ಆದರಲ್ಲೇ ಹೆಣವನ್ನು ಹೂಳುವುದಕ್ಕೆ ಅನುಕೂಲವಿರುತ್ತದೆ. ಕೆಲವು ಕಡೆ ಹೆಣ ಹೂಳುವುದಕ್ಕೆ ಜಾಗವಿಲ್ಲದೆ ಮೂರು ದಿವಸಗಳ ಕಾಲ ಹೆಣವನ್ನು ಹಾಗೆಯೇ ಇಟ್ಟುಕೊಂಡು ಅಶಾಂತ ವಾತಾವರಣ ನಿರ್ಮಾಣವಾಗಿದೆ, ಆದುದರಿಂದ ಇದನ್ನು ಅತ್ಯಂತ ಮೊದಲನೆ ಆದ್ಯತೆಯಾಗಿ ತೆಗೆದುಕೊಂಡು ಪ್ರಾಮಾಣಿಕವಾಗಿ ನಿಮ್ಮ ಅಧಿಕಾರಾವಧಿಯಲ್ಲಿ ಇದನ್ನು ಮಾಡುತ್ತೀರಾ ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸದಸ್ಯರೆ, ತಮ್ಮ ಕಳಕಳಿಯನ್ನು ನಾನು ಮೆಚ್ಚುತ್ತೇನೆ, ನಿಮ್ಮಷ್ಟೇ ಕಳಕಳಿಯನ್ನು ನಾನು ಇಟ್ಟುಕೊಂಡಿದ್ದೇನೆ. ನಾವು ಬೆಲ್ಲಾಧಿಕಾರಿಗಳಿಗೆ ಹತ್ತು ಕಾರ್ಯಕ್ರಮಗಳನ್ನು ಈ ವರ್ಷದೊಳಗೆ ಆದ್ಯತೆ ಮೇರೆಗೆ ಮಾಡಬೇಕೆಂದು ಕೊಟ್ಟಿದ್ದೇವೆ. ಅದರಲ್ಲಿ ರೆಗ್ಯುಲರೈಸೇಷನ್, ನಿವೇಶನ ಒದಗಿಸಿಕೊಡುವುದು ಇರಬಹುದು, ಅದರಲ್ಲಿ ಈ ಸ್ಮಶಾನ ಜಾಗವನ್ನು ಒದಗಿಸಿಕೊಡುವುದನ್ನೂ ಕೂಡ ಆದ್ಯತೆ ಮೇರೆಗೆ ಸೇರಿಸಿದ್ದೇವೆ.

10.50 ಎ.ಎಂ.

ಇವೆಲ್ಲವನ್ನೂ ಸಮರೋಪಾದಿಯಲ್ಲಿ ಮಾಡಬೇಕು. ನಮ್ಮ ಸರ್ಕಾರದ ಅವಧಿ ಮುಗಿಯುವುದರೊಳಗಾಗಿ ಎಲ್ಲಾ ಹಳ್ಳಿಗಳಿಗೂ ಸ್ಮಶಾನಕ್ಕೆ ಬೇಕಾದ ಜಾಗವನ್ನು ಸಾಕಾದಷ್ಟು ಒದಗಿಸಿಕೊಡಬೇಕೆನ್ನುವುದು ನಮ್ಮ ಉದ್ದೇಶ. ಅದನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಸ್ಮಶಾನಕ್ಕೆ ಜಾಗವಿಲ್ಲದಿರುವ ಎಲ್ಲಾ ಕಡೆಗೆ ಜಾಗವನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದಿಂದ ಹಣವನ್ನು ಕೊಡುತ್ತಾರೆ ಅಲ್ಲವೇ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಸರ್ಕಾರಿ ಜಮೀನು ಇಲ್ಲದಿದ್ದರೆ ಖಾಸಗಿ ಜಮೀನನ್ನು ಕೊಂಡುಕೊಂಡಾದರೂ ಸ್ಮಶಾನಕ್ಕಾಗಿ ಸ್ಥಳ ಕಾಯ್ದಿರಿಸಬೇಕೆಂಬ ನೀತಿ ಇದೆ. ಅದನ್ನು ಸರ್ಕಾರದ ವತಿಯಿಂದ ಮಾಡಲಾಗುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ಮಾನ್ಯ ಅಧ್ಯಕ್ಷರೆ, ಸ್ಮಶಾನಕ್ಕಾಗಿ ಜಾಗವನ್ನು ಕಾದಿರಿಸತಕ್ಕಂಥ ಸಂದರ್ಭದಲ್ಲಿ ಗ್ರಾಮಪಂಚಾಯಿತಿಗಳ ಮುಖಂಡರು ಜಾಗಗಳನ್ನು ಮಾಡಿದರೆ ಸ್ವಲ್ಪ ಒಳ್ಳೆಯದು. ಏಕೆಂದರೆ ತಾಲ್ಲೂಕು ಕಛೇರಿಯಲ್ಲಿ ಕುಳಿತುಕೊಂಡು ಯಾವುದೋ ಸರ್ವೆ ನಂಬರ್‌ನಲ್ಲಿ ಸ್ಮಶಾನಕ್ಕಾಗಿ ಸ್ಥಳ ಕೊಟ್ಟರೆ ಅದು ಜನರಿಗೆ ಉಪಯೋಗವಾಗುವುದಿಲ್ಲ. ಆದ್ದರಿಂದ ಸ್ಥಳೀಯ ಜನಪ್ರತಿನಿಧಿಗಳ ವಿಶ್ವಾಸವನ್ನುಗಳಿಸಿಕೊಂಡು ಎಲ್ಲಿ ಸರ್ಕಾರಿ ಸ್ಥಳ ಇದೆ ಅಂತ ಸ್ಥಳಗಳನ್ನು ಸ್ಮಶಾನಕ್ಕಾಗಿ ಕಾದಿರಿಸಬೇಕು. ಹಾಗೆಯೇ ಸ್ಮಶಾನಕ್ಕಾಗಿ ಜಾಗವನ್ನು ಕಾದಿರಿಸುವಂಥ ಸಂದರ್ಭದಲ್ಲಿ ಸಹ ವರ್ಣಾಶ್ರಮ ನೀತಿಯನ್ನು ಅನುಸರಿಸುವುದನ್ನು ನಾವು ಕಾಣುತ್ತಿದ್ದೇವೆ. ಕಾರ್ಕಳದ ಪುರಸಭೆಯಲ್ಲಿ ಶೂದ್ರರು, ಶೂದ್ರರೇತರರು ಎನ್ನುವಂಥ ನಿರ್ಣಯವನ್ನು ಕೈಗೊಂಡು ಸ್ಮಶಾನಕ್ಕಾಗಿ ಜಾಗವನ್ನು ಕಾದಿರಿಸತಕ್ಕಂಥದ್ದು ಕಾಣುತ್ತಿದ್ದೇನೆ. ಇದರ ಬಗ್ಗೆ ಅಲ್ಲಿಯ ಪುರಸಭೆಯ ನಿರ್ಣಯವನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಪ್ರಕಾಶ್ ಟಿ. ಹುಕ್ಕೇರಿ :— ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಸ್ಮಶಾನಕ್ಕಾಗಿ ಖಾಸಗಿ ಜಮೀನನ್ನು ತೆಗೆದುಕೊಳ್ಳುವಾಗ ಎಕರೆ ಒಂದಕ್ಕೆ ಎಷ್ಟು ಬೆಲೆಯನ್ನು ನಿಗದಿಪಡಿಸುತ್ತಾರೆ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಸರ್ಕಾರಿ ನಿಯಮದ ಪ್ರಕಾರ ಯಾವ ಯಾವ ಏರಿಯಾಗಳಲ್ಲಿ ಎಷ್ಟೆಷ್ಟು ಬೆಲೆ ನಿಗದಿಪಡಿಸಲಾಗಿದೆಯೋ ಅದರ ಪ್ರಕಾರ ಹಣ ಕೊಟ್ಟು ಕೊಂಡುಕೊಳ್ಳಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಸ್ಮಶಾನಕ್ಕಾಗಿ ಸ್ಥಳವನ್ನು ಕಾದಿರಿಸುವ ಬಗ್ಗೆ ಸರ್ಕಾರದ ನೀತಿಯನ್ನು ಹೇಳಿದರು. ಕೆಲವು ಹಳ್ಳಿಗಳ ದೊಡ್ಡ ದೊಡ್ಡ ಪ್ರದೇಶಗಳಲ್ಲಿ, ಈಗ ಚಿತಾಗಾರವನ್ನು ಮಾಡುತ್ತಿದ್ದಾರೆ. ಅದಕ್ಕೆ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆ ಅವರು ಯಥೇಚ್ಛವಾಗಿ ಹಣವನ್ನು ಕೊಡುತ್ತಿದ್ದಾರೆ ಮತ್ತು ಲೋಕಲ್ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಮಾಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ಏನಾದರೂ ಹಣ ಕೊಡುವುದಕ್ಕೆ ಸಾಧ್ಯವಿದೆಯೇ? ಆ ರೀತಿ ಇದ್ದರೆ ನನ್ನ ಕ್ಷೇತ್ರದಲ್ಲಿ ಬರುವಂಥ ಹುಯಾರ್ ಎನ್ನುವಂಥ ಊರಿನಲ್ಲಿ 10 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಚಿತಾಗಾರವನ್ನು ಕಟ್ಟುವುದಕ್ಕೆ ಶ್ರೀ ಧರ್ಮಸ್ಥಳ ವೀರೇಂದ್ರ ಹೆಗಡೆಯವರು ಲೋಕಲ್ ಕಾಂಟ್ರಿಬ್ಯೂಷನ್‌ನಿಂದ 4-5 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ. ಅದಕ್ಕೆ ಏನಾದರೂ ಸರ್ಕಾರದಿಂದ ಹಣಕಾಸಿನ ಸಹಾಯ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಚಿತಾಗಾರವನ್ನು ಕಟ್ಟಿಸುವುದಕ್ಕೆ ಸರ್ಕಾರದಲ್ಲಿ ಯಾವ ಯೋಜನೆಯೂ ಇಲ್ಲ. ಏನಿದ್ದರೂ ಖಾಸಗಿ ಸಂಘಸಂಸ್ಥೆಗಳು ನಿಂತುಕೊಂಡು, ಧಾರ್ಮಿಕ ಸಂಸ್ಥೆಗಳಿಂದ ಹಣ ಸಹಾಯವನ್ನು ಪಡೆದು ಮಾಡಬೇಕೇ ಹೊರತು ಸರ್ಕಾರದ ಈಗಿನ ನೀತಿಯಲ್ಲಿ ಅದು ಇಲ್ಲ. ಮುಂದೆ ಇದರ ಬಗ್ಗೆ ಚಿಂತನೆ ಮಾಡಬಹುದಾಗಿದೆ.

ಶ್ರೀ ಎಸ್. ರಾಜಣ್ಣ :—ಮಾನ್ಯ ಅಧ್ಯಕ್ಷರೆ, ಚಿತಾಗಾರವನ್ನು ಕಟ್ಟುವುದಕ್ಕೆ ಹೆಚ್ಚುಕಡಿಮೆ ಎರಡು ಕೋಟಿ ರೂಪಾಯಿ ಆಗುತ್ತದೆ. ಒಂದು ಹೆಣವನ್ನು ಸುಡಬೇಕಾದರೆ ಕರೆಂಟ್ ಮುಂತಾದವನ್ನು ಸೇರಿಸಿ ಸುಮಾರು 2 ಸಾವಿರ ರೂಪಾಯಿಗಿಂತಲೂ ಹೆಚ್ಚು ಖರ್ಚು ಆಗುತ್ತದೆ. ಹೆಣಗಳನ್ನು ಜಾಸ್ತಿ ಸುಡುವುದರಿಂದ ಕರೆಂಟ್ ಇಲ್ಲದಾಗ ಅಲ್ಲಿ ದುರ್ವಾಸನೆ ಆಗಿ ಚಿತಾಗಾರದ ಒಂದು ಕಿ.ಮೀ. ಸುತ್ತಲೂ ವಾಸನೆ ಬರುತ್ತದೆ. ಅದಕ್ಕೋಸ್ಕರ ಚಿತಾಗಾರ ಕಟ್ಟುವುದನ್ನು ಅವಾಯ್ಡ್ ಮಾಡಬೇಕು. ಚೈನಾದಲ್ಲಿ ಏನು ಮಾಡುತ್ತಾರೆಂದರೆ ಮನುಷ್ಯ ಸತ್ತುಹೋದ ಮೇಲೆ ಆ ಹಳ್ಳಿಯ ರಸ್ತೆಗಳ ಪಕ್ಕದಲ್ಲಿ ಹೂಳಿಬಿಟ್ಟು ಮೂರು ತಿಂಗಳು ಆದನಂತರ ಅದರ ಮೇಲೆ ಒಂದು ಗಿಡವನ್ನು ನೆಡುತ್ತಾರೆ. ಅದೇ ಕಾರ್ಯವನ್ನು ನಮ್ಮ ರಾಜ್ಯದಲ್ಲಿಯೂ ಮಾಡಿದರೆ ಬಹಳ ಒಳ್ಳೆಯದು. ಮತ್ತು ಅರಣ್ಯ ಸಂಪತ್ತು ಇದರಿಂದ ಅಭಿವೃದ್ಧಿಯಾಗುತ್ತದೆ ಎನ್ನುವ ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಲ್ಲಿ ಮಾರ್ಡನೈಜೇಶನ್ ಆಫ್ ದಿ ಕ್ರೆಮಟೋರಿಯಂ ಎನ್ನುವ ಸ್ಕೀಂ ಇದೆ. ಚಿತಾಗಾರವನ್ನು ಆಧುನೀಕರಣಗೊಳಿಸಲು ಅಲ್ಲಿಂದ ಹಣ ಬಿಡುಗಡೆ ಮಾಡುತ್ತಾರೆ. ಅಲ್ಲಿಂದ ಕರ್ನಾಟಕ ಸರ್ಕಾರ ಹಣವನ್ನು ತೆಗೆದುಕೊಂಡಿಲ್ಲ. ಬೇರೆ ರಾಜ್ಯದ ಸರ್ಕಾರಗಳಲ್ಲಿ ಈಗಾಗಲೇ ತೆಗೆದುಕೊಂಡು ಚಿತಾಗಾರವನ್ನು ಆಧುನೀಕರಣಗೊಳಿಸುವುದಕ್ಕೆ ಎಲ್ಲಾ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಆದರೆ ಕರ್ನಾಟಕ ಸರ್ಕಾರ ಈ ದಿಶೆಯಲ್ಲಿ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಸರ್ಕಾರ ಈಗಲಾದರೂ ಮಾರ್ಚ್ 31ನೇ ತಾರೀಖು ಆಗುವುದಕ್ಕೆ ಮುಂಚೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತದೋ ಅದನ್ನು ತರಿಸಿಕೊಂಡು ಚಿತಾಗಾರವನ್ನು ಆಧುನೀಕರಣಗೊಳಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ನಗರ ಪ್ರದೇಶಗಳಲ್ಲಿ ಚಿತಾಗಾರವನ್ನು ಆಧುನೀಕರಣಗೊಳಿಸುವ ಕೆಲಸವನ್ನು ಮುನ್ಸಿಪಾಲಿಟಿಯವರು, ಕಾರ್ಪೋರೇಷನ್ ನವರು ಮಾಡಬೇಕಾಗುತ್ತದೆ. ಚಿತಾಗಾರ ಆಧುನೀಕರಣಗೊಳಿಸುವುದಕ್ಕೆ ಕಂದಾಯ ಇಲಾಖೆಯಲ್ಲಿ ಯಾವುದೇ ಯೋಜನೆ ಇಲ್ಲ. ತಾವು ಹೇಳಿರತಕ್ಕಂಥದ್ದು ಒಳ್ಳೆಯ ಸೂಚನೆಯಾಗಿದ್ದು

ಅದನ್ನು ಪರಿಶೀಲನೆ ಮಾಡಬಹುದು. ಕೇಂದ್ರ ಸರ್ಕಾರದಿಂದ ಚಿತಾಗಾರ ಆಧುನೀಕರಣಕ್ಕಾಗಿ ಹಣವನ್ನು ಯಾವ ಇಲಾಖೆ ತೆಗೆದುಕೊಳ್ಳಬೇಕು, ಎಂಥ ಕಡೆ ಮಾಡಬೇಕು ಎನ್ನುವುದನ್ನು ನೋಡಬೇಕಾಗುತ್ತದೆ.

ಶ್ರೀ ಎನ್. ರಾಜಣ್ಣ:— ಮಾನ್ಯ ಅಧ್ಯಕ್ಷರೆ, Crematorium is man-made technology. It is nothing but a danger. It is better to bury the body. After three months excavate ಮಾಡಿ ಜನಗಳಿಗೆ ಎಂಕರೇಜ್ ಮಾಡಿ ಅಲ್ಲಿ ಒಂದು ಸಸಿ ನೆಟ್ಟರೆ ಅದರಿಂದ ಅರಣ್ಯ ಸಂಪತ್ತು ಅಭಿವೃದ್ಧಿ ಆಗುತ್ತದೆ. ಚಿತಾಗಾರ ಮಾಡುವುದು ಬೇಡ. We are already suffering.

ಅಧ್ಯಕ್ಷರು:— ಪ್ರಶ್ನೋತ್ತರ ವೇಳೆ ಮುಗಿಯಿತು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು):— ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ನಾಲ್ಕನೇ ಪಟ್ಟಿಯಲ್ಲಿರುವ 56 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬಳ್ಳಾರಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಕೈಗೊಂಡ ಕಾರ್ಯಕ್ರಮಗಳು.

113(20) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಳ್ಳಾರಿ ಜಿಲ್ಲೆಯಲ್ಲಿ 1998-99ರಲ್ಲಿ ತೋಟಗಾರಿಕೆ ಇಲಾಖೆ ಕೈಗೊಂಡ ವಿವಿಧ ಕಾರ್ಯಕ್ರಮಗಳು ಯಾವುವು? (ತಾಲ್ಲೂಕುವಾರು ವಿವರ ನೀಡುವುದು)

ಆ) ಇದಕ್ಕಾಗಿ ಸರ್ಕಾರದವರು ಖರ್ಚುಮಾಡಿರುವ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):—

ಅ) ಬಳ್ಳಾರಿ ಜಿಲ್ಲೆಯಲ್ಲಿ 1998-99ರಲ್ಲಿ ತೋಟಗಾರಿಕೆ ಇಲಾಖೆ ಕೈಗೊಂಡ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.

STATEMENT SHOWING THE FINANCIAL TARGET AND ACHIEVEMENT OF ALL THE SCHEMES OF BELLARYDISTRICT UPTO END OF FEBRUARY 1999

Sl. No.	Name of the Scheme	Bellary		Hospet		Sandur		Hadagalli	
		Tar.	Ach.	Tar.	Ach.	Tar.	Ach.	Tar.	Ach.
	DISTRICT SECTOR SCHEMES								
1.	Coconut Development Scheme	-	-	28735	27105	16460	15700	24480	23369
2.	Demonstration (Area Expansion of Horticultural crops)	8000	7894	8000	7990	6000	5968	10000	10000
3.	Seminars, Field Days and Exhibitions	26000	24000	13000	8911	18000	10000	19000	-
4.	Publicity & Literature	8000	7820	7000	7000	7000	7000	7000	7000
5.	Maintenance of Horticultural Farms	-	-	60000	52086	25000	15120	15000	2715
6.	Development of Infrastructure	-	-	100000	99819	100000	39915	25000	-
7.	Propagation of Horticultural crops	-	-	44000	22700	32000	8530	25000	7722
8.	Plant Protection Laboratory	50000	5600	-	-	-	-	-	-
9.	Horticultural Buildings	150000	-	30000	-	-	-	20000	-

STATEMENT SHOWING THE FINANCIAL TARGET AND ACHIEVEMENT OF ALL THE SCHEMES OF BELLARY DISTRICT UPTO END OF FEBRUARY 1999

Sl. No.	Name of the Scheme	Bellary		Hospet		Sandur		Hadagalli	
		Tar.	Ach.	Tar.	Ach.	Tar.	Ach.	Tar.	Ach.
10.	Training to Farmers	16000	-	14000	-	14000	-	14000	7000
11.	Development of show plants in front of Government Offices	30000	29980	20000	20000	20000	17000	20000	19000
12.	Supply of Plant Protection Chemicals to farmers on 50% Subsidy	29000	20000	29000	20000	28000	15000	28000	14796
13.	Special Componant Plan (State)	53850	-	62500	62499	60550	23490	49950	49945
14.	Special Componant Plan (Central)	81700	10875	71150	45095	50000	-	77150	44130
15.	Tribal Sub-plan (State)	52500	11700	16250	16170	16250	12972	16250	16244
16.	Tribal Sub-plan (Central)	52500	-	45000	35992	22500	-	52500	-

STATEMENT SHOWING THE FINANCIAL TARGET AND ACHIEVEMENT OF ALL THE SCHEMES OF BELLARY DISTRICT UPTO END OF FEBRUARY 1999

Sl. No.	Name of the Scheme	Kudligi		H.B. Halli		Siruguppa		Total	
		Tar.	Ach.	Tar.	Ach.	Tar.	Ach.	Tar.	Ach.
	DISTRICT SECTOR SCHEMES								
1.	Coconut Development Scheme	-	-	-	-	80325	2640	150000	68814
2.	Demonstration (Area Expansion of Horticultural crops)	6000	6000	6000	5617	6000	5990	50000	49459
3.	Seminars, Field Days nad Exhibitions	8000	-	8000	-	8000	-	100000	42911
4.	Publicity & Litreture	7000	7000	7000	7000	7000	7000	50000	49820
5.	Maintenance of Horticultural Farms	-	-	50000	32780	50000	22150	200000	124851
6.	Development of Infrastructure	-	-	100000	99919	75000	-	400000	239653
7.	Propogation of Horticultural crops	-	-	49000	32850	50000	1600	200000	73402
8.	Plant Protection Laboratory	-	-	-	-	-	-	50000	5600
9.	Horticultural Buildings	100000	100000	-	-	-	-	300000	100000

(B)C25218

1439/97

STATEMENT SHOWING THE FINANCIAL TARGET AND ACHIEVEMENT OF ALL THE SCHEMES OF BELLARY DISTRICT UPTO END OF FEBRUARY 1999

Sl. No.	Name of the Scheme	Kudligi		H.B. Halli		Siruguppa		Total	
		Tar.	Ach.	Tar.	Ach.	Tar.	Ach.	Tar.	Ach.
10.	Training to Farmers	14000	-	14000	7000	14000	-	100000	14000
11.	Development of show plants in front of Government Offices	20000	17600	20000	18945	20000	19990	150000	292515
12.	Supply of Plant Protection Chemicals to farmers on 50% Subsidy	29000	15000	29000	15000	28000	16000	200000	115796
13.	Special Componant Plan (State)	53800	53777	62550	62439	56700	56895	400000	309046
14.	Special Componant Plan (Central)	71500	42289	71800	46714	71150	39764	499950	229867
15.	Tribal Sub-plan (State)	16250	16250	16250	16249	16250	16250	150000	105835
16.	Tribal Sub-plan (Central)	52500	29098	52500	49000	22500	-	300000	114090

STATEMENT SHOWING THE FINANCIAL TARGET AND ACHIEVEMENT OF ALL THE SCHEMES OF BELLARY DISTRICT UPTO END OF FEBRUARY 1999

Sl. No.	Name of the Scheme	H.B. Halli		Siraguppa		Harapanahalli		Total	
		Tar.	Ach.	Tar.	Ach.	Tar.	Ach.	Tar.	Ach.
	CENTRAL SECTOR/ CENTRALLY SPONSORED SCHEMES								
1.	CSS for Development of Spices	22525	19209	21075	15803	22325	22317	101250	180009
2.	CSS for Establishment of Nutritional Gardens in Rural Areas	-	-	2500	2500	11500	11250	25000	24750
3.	CSS for use of plastics in Horticulture Drip Irrigation)	807300	220300	205000	74700	807000	546900	5683800	2408500
4.	CSS for Integrated Development of Tropical and Arid zone fruits.	94975	70399	68775	56463	90225	90094	633775	557541
5.	CSS for Production and supply of Vegetable Minikits.	8700	8616	8700	8700	8700	8700	69750	69571

STATEMENT SHOWING THE FINANCIAL TARGET AND ACHIEVEMENT OF ALL THE DISTRICT SCHEMES OF BELLARY UPTO END OF FEBRUARY 1999

Sl. No.	Name of the Scheme	Bellary		Hospet		Sandur		Hadagalli		Kudligi	
		Tar.	Ach.	Tar.	Ach.	Tar.	Ach.	Tar.	Ach.	Tar.	Ach.
	CENTRAL SECTOR/ CENTRALLY SPONSORED SCHEMES										
1.	CSS for Development of Spices	23025	16831	46325	46318	21575	21171	22825	16819	21575	21541
2.	CSS for Establishment of Nutritional Gardens in Rural Areas	3500	3500	5000	5000	2500	2500	-	-	-	-
3.	CSS for use of plastics in Horticulture Drip Irrigation)	2040000	949600	498500	188000	307000	-	512000	114100	507000	314900
4.	CSS for Integrated Development of Tropical and Arid zone fruits.	96025	92564	67625	60639	54500	23865	66825	68755	94825	94762
5.	CSS for Production and supply of Vegetable Minikits.	8700	8700	8700	8700	8850	8775	8700	8700	8700	8680

Sl. No.	Name of the Scheme	Bellary		Hospet		Sandur		Hadagali		Kudligi	
		Tar.	Ach.	Tar.	Ach.	Tar.	Ach.	Tar	Ach.	Tar.	Ach.
	STATE SECTOR SCHEMES										
1.	Tribal Sub-plan	23750	23075	23400	23344	8700	8617	9400	9400	8700	8660
2.	Special Component Plan (State)	36850	25221	30050	29969	27250	27077	37550	37535	50700	50683
3.	Namma Mane Namma Thota	10000	9992	40000	40000	20000	19946	40000	30060	40000	39984
4.	Propagation of Horticultural Crops	-	-	-	-	-	-	-	-	-	-
5.	Development of Undeveloped area and infrastructure in Horticultural Farms and Nurseries	-	-	-	-	-	-	-	-	-	-
6.	Extension and Training	-	-	-	-	-	-	-	-	-	-

Sl. No.	Name of the Scheme	H.B. Halli		Siruguppa		Harapanahalli		Total	
		Tar.	Ach.	Tar.	Ach.	Tar.	Ach.	Tar	Ach.
	STATE SECTOR SCHEMES								
1.	Tribal Sub-plan	9750	9742	9400	9400	9400	9400	102500	101638
2.	Special Component Plan (State)	50050	49944	28300	28222	30050	30042	290800	278693
3.	Namma Mane Namma Thota	10000	10000	20000	20000	20000	19900	200000	190782
4.	Propagation Horticultural Crops Development of	-	-	-	-	-	-	520000	373890
	Undeveloped area and infrastructure in Horticultural Farms and Nurseries	-	-	-	-	-	-	200000	199600
6.	Extension and Training	-	-	-	-	-	-	110000	18400
	Grand Total							11336825	6339033

ಸಾರಿಗೆ ಅದಾಲತ್.

115(7) ಶ್ರೀ ಉಜ್ಜಿನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಾರಿಗೆ ಅದಾಲತ್‌ನ್ನು ಯಾವ ದಿನಾಂಕಗಳಂದು ನಡೆಸಲಾಗಿದೆ;

ಆ) ಈ ಬಗ್ಗೆ ಪ್ರತಿ ತಾಲ್ಲೂಕುನಲ್ಲಿ ಬಂದ ಮನವಿಗಳ ಒಟ್ಟು ಸಂಖ್ಯೆ ಎಷ್ಟು;

ಇ) ಈ ಬಗ್ಗೆ ಪರಿಹಾರ ಮಾಡಿದ ಮನವಿಗಳ ಸಂಖ್ಯೆ ಎಷ್ಟು;

ಈ) ಉಳಿದವುಗಳ ಬಗ್ಗೆ ಯಾವಾಗ ಪರಿಹರಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ದಿನಾಂಕ:26-1-99 ರಿಂದ ದಿನಾಂಕ:28-2-99ರವರೆಗೆ ಎಲ್ಲಾ ತಾಲ್ಲೂಕುಗಳಲ್ಲಿ ಸಾರಿಗೆ ಅದಾಲತ್‌ನ್ನು ನಡೆಸಲಾಗಿದೆ.

ಆ) ಒಟ್ಟು 12125 ಮನವಿಗಳು ಬಂದಿದ್ದು ತಾಲ್ಲೂಕುವಾರು ಮನವಿಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಮೇಲ್ಕಂಡ ಸ್ವೀಕೃತ ಮನವಿಗಳ ಪೈಕಿ 2407 ಮನವಿಗಳ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಈ) ಮುಂದಿನ ಸಾರಿಗೆ ಅದಾಲತ್ ನಡೆಸುವುದರೊಳಗಾಗಿ ಬಾಕಿ ಮನವಿಗಳನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುವುದು.

DETAILS REGARDING TRANSPORT ADALATS HELD IN JANUARY/FEBRUARY 1999 AT ALL TALUKA HEADQUARTERS IN KARNATAKA

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
1. BANGALORE-URBAN DIST.						
1.	Anekal	28.1.99 Thursday	Bangalore (R)	32	6	26
2.	Bangalore (North)	26/27.1.99/4.2.99	BMTC	250	99	151
3	Bangalore (South)	6/9/13/.2.99 18/28.2.99	BMTC	347	155	192
2.BANGALORE RURAL DIST.						
4.	Channapatna	16.2.99 Tuesday	Bangalore(C)	58	15	43
5.	Devanahalli	9.2.99 Tuesday	Bangalore(C)	62	0	62
6.	Doddaballapur	29.199 Friday	Bangalore(C)	73	7	66
7.	Hoskote	27.1.99 Wednesday	Bangalore(C)	40	0	40
8.	Kanakapura	9.2.99 Tuesday	Bangalore(R)	92	33	59
9.	Magadi	2.2.99 Tuesday	Bangalore(C)	135	0	135
10.	Nelamangala	4.2.99 Thursday	Bangalore(C)	93	0	93
11.	Ramanagara	12.2.99 Friday	Bangalore(C)	89	0	89

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
3. BAGALKOT DIST.						
12.	Bagalkot	30.1.99 Saturday	Bagalkot	25	12	13
13.	Badami	4.2.99 Thursday	Bagalkot	28	13	15
14.	Bilgi	10.2.99 Wednesday	Bagalkot	21	14	7
15.	Hungund	18.2.99 Tuesday	Bagalkot	33	23	10
16.	Jamakhandi	12.2.99 Friday	Bijapur	54	24	30
17.	Mudhol	9.2.99 Tuesday	Bijapur	26	10	16
4.BELGAUM DIST.						
18.	Belgaum	10.2.99 Wednesday	Belgaum	32	8	24
19.	Athani	20.2.99 Saturday	Bijapur	49	23	20
20.	Chikkodi	16.2.99 Tuesday	Chikkodi	51	24	27
21.	Gokak	12.2.99 Friday	Chikkodi	49	28	21
22.	Hukkeri	18.2.99 Thursday	Chikkodi	38	5	33
23.	Khanapur	9.2.99 Tuesday	Belgaum	15	5	10

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
24	Raibhag	24.2.99 Wednesday	Belgaum	44	9	35
25	Ramadurga	6.2.99 Saturday	Belgaum	52	29	23
26	Sampangeon	11.2.99 Thursday	Belgaum	64	29	35
27	Soundatti	12.2.99 Friday	Belgaum	24	15	9
6. BELLARY DIST.						
28	Bellary	30.1.99 Saturday	Bellary	10	7	3
29	H.B. Halli	4.2.99 Thursday	Bellary	15	11	4
30.	Hospet	12.2.99 Firday	Bellary	16	8	8
31	Huvinahadagalli	3.2.99 Wednesday	Davangere			0
32	Kudligi	18.2.99 Thursday	Bellary	20	11	9
33	Sandur	23.2.99 Tuesday	Bellary	16	5	11
34	Siruguppa	26.2.99 Friday	Bellary	11	6	5

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
6 BIDAR DISTRICT						
35	bIDAR	4.2.99 Thursday	Bidar	32	25	7
36	Aurad	2.2.99 Tuesday	Bidar	47	26	21
37	Basavakalyana	6.2.99 Saturday	Bidar	97	39	58
38	Bhalki	11.2.22 Thursday	Bidar	107	8423	
39	Humnabad	18.2.99 Thursday	Bidar	107	66	41
40	Chincholi	9.2.99 Tuesday	Bidar	80	63	17
7. BIJAPUR DIST						
41	Bijapur	28.1.99 Thursday	Bijapur	25	13	12
42	Basavanabagewadi	20.02.99 Saturday	Bagalkot	27	10	17
43	Indi	2.2.99 Tuesday	Bijapur	39	9	30
44	Muddebihal	26.2.99 Thursday	Bagalkot	39	15	24
45	Sindagi	6.2.99 Saturday	Bijapur	28	8	10

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
8. CHAMARAJANAGAR DIST.						
46	Chamrajnagar	28.1.99 Thursday	Mysore	39	1	38
47	Gundlupet	29.1.99 Friday	Mysore	66	1	65
48	Kollegal	30.1.99 Saturday	Mysore	49	1	48
49	Yalendur	2.2.99 Tuesday	Mysore	41	1	40
9. CHIKMAGALUR DIST.						
50	Chikmagalur	16.2.99 Tuesday	Hassan	66	2	64
51	Kadur	18.2.99 Thursday	Hassan	70	10	60
52	Koppa	20.2.99Saturday	Hassan	9	1	8
53	N.R.PURA	23.2.99 Tuesday	Hassan	8	1	7
54	Sringeri	24.2.99 Wednesday	Hassan	1	0	1
55	Mudigere	27.2.99 Saturday	Hassan	76	0	76
56	Tarikere	19.2.99 Friday	Davangere	48	8	40

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
10. CHITRADURGA DISTRICT						
57	Chitradurga	20.2.99 Saturday	Davangere	65	5	6
58	Challakere	23.2.99 Tuesday	Davangere	72	6	66
59	Hiriyur	24.2.99 Wednesday	Davangere	57	10	47
60	Holalkere	25.2.99 Thursday	Davangere	25	0	25
61	Hosadurga	26.2.99 Friday	Davangere	59	2	57
62	Molakalmuru	27.2.99 Saturday	Davangere	89	0	89
11. DAVANGERE DISTRICT						
63	Davangere	28.1.99 Thursday	Davangere	20	5	15
64	Channagiri	29.1.99 Friday	Davangere	41	14	27
65	Harapanahalli	30.1.99 Saturday	Davangere	21	4	17
66	Honnali	2.2.99 Tuesday	Davangere	98	8	90
67	Harihar	4.2.99 Thursday	Davangere	18	6	12
68	Jagalur	5.2.99 Friday	Davangere	28	1	27

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
12 DHARWAR DIST.						
69	Dharwad	28.1.99 Thursday	Hubli	109	70	39
70	Hubli	2.2.99 Tuesday	Hubli	53	22	31
71	Kalaghatgi	9.2.99 Tuesday	Hubli	64	20	44
72	Kundagol	18.2.99 Thursday	Hubli	54	23	31
73	Navalgund	24.2.99 Wednesday	Hubli	70	39	31
13 GADAG DISTRICT						
74	Gadag	28.1.99 Thursday	Gadag	32	29	3
75	Mundargi	5.2.99 Friday	Gadag	34	33	1
76	Naragund	11.2.99 Thursday	Gadag	22	18	4
77	Ron	16.2.99 Tuesday	Gadag	33	27	6
78	Shirahatti	20.2.99 Saturday	Gadag	56	35	21

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
14 GULBARGA DIST						
79	Gulbarga	28.1.99 Thursday	Gulbarga	65	35	30
80	Afzalpur	30.1.99 Saturday	Gulbarga	49	42	7
81	Aland	4.2.99 Thursday	Gulbarga	37	18	19
82	Chittapur	11.2.99 Thursday	Gulbarga	43	10	33
83	Jewargi	18.2.99 Tuesday	Gulbarga	71	31	40
84	Sedam	20.2.99 Saturday	Gulbarga	55	22	33
85	Shahpur	27.2.99 Saturday	Gulbarga	58	24	34
86	Shorapur	24.2.99 Wednesday	Gulbarga	104	57	47
87	Yadgir	25.2.99 Thursday	Gulbarga	68	12	56
15 HASSAN DIST.						
88	Hassan	28.1.99 Thursday	Hassan	18	3	15
89	Alur	30.1.99 Saturday	Hassan	75	2	73
90	Arakalgudu	2.2.99 Tuesday	Hassan	157	3	154

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
91	Arsikere	4.2.99 Thursday	Hassan	60	0	60
92	Beluru	6.2.99 Saturday	Hassan	90	2	88
93	Channarayapatna	9.2.99 Tuesday	Hassan	59	20	39
94	Holenarasipur	10.2.99 Wednesday	Hassan	51	8	43
95	Sakleshpur	12.2.99 Friday	Hassan	62	0	62
16 HAVERI DIST						
96	Haveri	29.1.99 Friday	Haveri	89	16	73
97	Byadagi	4.2.99 Thursday	Haveri	71	10	61
98	Hangal	10.2.99 Wednesday	Haveri	75	10	65
99	Hirekerur	10.2.99 Tuesday	Haveri	107	19	88
100	Ranebennur	20.2.99 Saturday	Haveri	81	28	53
101	Savanur	23.2.99 Tuesday	Haveri	58	5	53
102	Shiggaon	26.2.99 Friday	Haveri	65	12	53

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
17 KODAGU DIST						
103	Madikeri	20.2.99 Saturday	Mangalore	36	13	23
104	Somwarpet	23.2.99 Tuesday	Mangalore	123	2	121
105	Virajpet	25.2.99 Thursday	Mangalore	10	0	10
18 KOLAR DIST.						
106	Kolar	29.1.99 Friday	Kolar	46	2	44
107	Bagepalli	2.2.99 Tuesday	Kolar	83	12	71
108	Bangarpet	4.2.99 Thursday	Kolar	88	5	83
109	Chickballapur	9.2.99 Tuesday	Kolar	92	12	80
110	Chintamani	12.2.99 Friday	Kolar	102	119	11
111	Gowribidnur	16.2.99 Tuesday	Kolar	41	7	34
112	Gudibande	20.2.99 Saturday	Kolar	99	4	95
113	Malur	23.2.99 Tuesday	Kolar	77	12	65
114	Mulbagalu	25.2.99 Thursday	Kolar	80	11	69
115	Shidlaghatta	26.2.99 Friday	Kolar	120	8	112
116	Srinivasapura	27.2.99 Saturday	Kolar	22	11	11
	K.G.F.	4.2.99	Kolar	83	12	71

7439/99

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
19 KOPPAL DIST.						
117	Koppal	28.1.99 Thursday	Koppal	46	4	42
118	Gangavathi	16.2.99 Tuesday	Koppal	46	2	44
119	Kushtagi	2.2.99 Tuesday	Koppa	28	3	25
120	Yelburga	10.2.99 Wednesday	Koppal	35	1	34
20 MANDYA						
121	Mandya	16.2.99 Tuesday	Mysore	65	1	64
122	K.R.Pet	4.2.99 Thursday	Mysore	92	1	91
123	Maddur	20.2.99 Saturday	Mysore	51	3	48
124	Malavalli	23.2.99 Tuesday	Mysore	81	2	79
125	Nagamangala	12.2.99 Friday	Mysore	71	3	68
126	Pandavapura	11.2.99 Thursday	Mysore	45	2	43
127	Srirangapatna	26.2.99 Friday	Mysore	24	1	23
	Bannur	27.2.99 Saturday	Mysore	13	1	12

BLANK PAGE

BLANK PAGE

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
153	Hosnagar	10.2.99 Wednesday	Davangere	30	0	30
154	Sagar	11.2.99 Thursday	Davangere	131	4	127
155	Shikaripura	12.2.99 Friday	Davangere	126	0	126
156	Sorab	16.2.99 Tuesday	Davangere	88	1	87
157	Thirthahalli	18.2.99 Thursday	Davangere	13	0	13
25 SOUTH KANARA DISTRICT (MNG)						
158	Mangalore	28.1.99 Thursday	Mangalore	39	5	34
159	Belthangadi	30.1.99 Saturday	Mangalore	58	12	46
160	Bantwal	2.2.99 Tuesday	Mangalore	114	13	101
161	Puttur	5.2.99 Friday	Mangalore	174	1	173
162	Sulya	9.2.99 Tuesday	Mangalore	192	5	187
25 TUMKUR DIST						
163	Tumkur	4.2.99 Thursday	Tumkur	62	0	62
164	Kunigal	6.2.99 Saturday	Tumkur	108	0	108

Sl. No	.Name of Taluk	Date and Day of Adalat	Division	No. of Suggestions Received	Action Taken	Action tobe taken
165	Chikkanaya-kanahalli	26.2.99 Friday	Tumkur	137	0	137
166	Gubbi	10.2.99 Wednesday	Tumkur	98	0	98
167	Koratagere	12.2.99 Friday	Tumkur	51	0	51
168	Madhugiri	16.2.99 Tuesday	Tumkur	105	0	105
169	Pavagada	20.2.99 Saturday	Tumkur	96	0	96
170	Sira	25.2.99 Thursday	Tumkur	59	0	59
171	Tiptur	29.1.99 Friday	Tumkur	79	0	79
172	Turuvekere	11.2.99 Thursday	Tumkur	151	0	151
27 UDIPI DISTRICT						
173	Udipi	14.2.99 Thursday	Mangalore	26	1	25
174	Karkala	16.2.99 Tuesday	Mangalore	10	0	10
175	Kundapura	18.2.99 Thursday	Mangalore	17	0	17
			Grand Total	11925	2214	9711

BLANK PAGE

BLANK PAGE

1	2	3	4	5	6	7
					ಆವಲಂಭಿಸಿದೆ. ಆದ್ದರಿಂದ ಕ.ರಾ.ರ.ಸಾ.ಸಂಸ್ಥೆ ಇವರ ಮತಿಯಿಂದ ಹೆಚ್ಚುವ ಸಾರಿಗೆ ಸೌಲಭ್ಯ ಒದಗಿಸುವರೆಗೆ ತಪಾಸಣೆಯನ್ನು ಮಾಡುವಾರದು ಎಂದು ಕೋರಿದರು.	
		ದೇವನಹಳ್ಳಿ	09-02.99	1) ವಾಣಿ ಬಸ್ಸು ದೇವನಹಳ್ಳಿ ಬಸ್ ನಿಲ್ದಾಣಕ್ಕೆ ಬಾರದಿರುವುದು.	ಸದರಿ ಪರವಾನಿಗಿದಾರರಿಗೆ ಸೂಕ್ತ ಸೂಚನೆ ನೀಡಲಾಗಿದೆ.	
				2) ಎಂ.ಎಂ. ಬಸ್ ದೇವನಹಳ್ಳಿಯಲ್ಲಿ ನಿಲುಗಡೆ ನೀಡಬೇಕು.	ತಡರಹಿತ ವಾಹನ ಅಲ್ಲದಿದ್ದರೆ ಕ್ರಮ ಕೈಗೊಳ್ಳಲಾಗುವುದು.	
				3) ಸರಕು ಸಾಗಣೆ ವಾಹನಗಳಲ್ಲಿ ಸಾರ್ವ-ಜನಿಕರನ್ನು ಸಾಗಿಸುವ ಬಗ್ಗೆ.	ತಪಾಸಣೆಯನ್ನು ಹೆಚ್ಚಿಸಲಾಗುವುದು.	
		ಉತ್ತರಹಳ್ಳಿ	28-02-99	ಮ್ಯಾಕ್ಸಿ ಕ್ಯಾಬ್‌ಗಳಲ್ಲಿ ನಿಗಧಿತ ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸುವ ಬಗ್ಗೆ.	1-3-99 ರಿಂದ ವಿಶೇಷ ತಂಡವನ್ನು ರಚಿಸಿ ತಪಾಸಣೆ ಮಾಡಲಾಗುತ್ತಿದೆ.	
		ಆನೇಕಲ್ಲು	28-01-99	1) ಮ್ಯಾಕ್ಸಿ ಕ್ಯಾಬ್ ವಾಹನಗಳು ಕೆ.ಎಸ್.ಆರ್‌ಟಿ.ಸಿ.ಗೆ ಸಮಾನಾಂತರವಾಗಿ ಓಡಾಡುತ್ತಿರುವ ಬಗ್ಗೆ.	1-3-99 ರಿಂದ ವಿಶೇಷ ತಂಡವನ್ನು ರಚಿಸಿ ತಪಾಸಣೆ ಮಾಡಲಾಗುತ್ತಿದೆ.	
				2) ಖಾಸಗಿ ಮಿನಿ ವಾಹನಗಳು ರಸ್ತೆ-ದಾರಿಯಲ್ಲಿ ಓಡಾಡುವ ಮಾರ್ಗಕ್ಕೆ ಬದಲು ನೇರ ಮಾರ್ಗದಲ್ಲಿ ನಡೆಸುತ್ತಿರುವ ಬಗ್ಗೆ.	-- ಡಿಟೋ --	

1	2	3	4	5	6	7
		ಕನಕಪುರ	09-02-99	ಮ್ಯಾಕ್ಸ್ ಕ್ಯಾಬ್‌ಗಳಲ್ಲಿ ನಿಗಧಿತ ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸುವ ಬಗ್ಗೆ.	1-3-99 ರಿಂದ ವಿಶೇಷ ತಂಡವನ್ನು ರಚಿಸಿ ತಪಾಸಣೆ ಮಾಡಲಾಗುತ್ತಿದೆ.	
		ಚನ್ನಪಟ್ಟಣ	16-02-99	ಕ್ಯಾಂಟೀಗೆ ಬರುವ ಸಾರಿಗೆ ಇಲಾಖೆ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಹಾಜರಾಗದಿರುವ ಬಗ್ಗೆ.	ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚನೆ ನೀಡಲಾಗಿದೆ.	
		ರಾಮನಗರ	12-02-99	1) ಮಂಚನಬೆಲೆ ಮಾರ್ಗದಲ್ಲಿ ಸಂಚರಿಸುವ ಮಜಲು ವಾಹನಗಳು ಸುಸ್ಥಿತಿಯಲ್ಲಿಲ್ಲದಿರುವುದು.	ವಿಶೇಷ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲಾಗುವುದು.	
				2) ಆಟೋರಿಕ್ಷಗಳು ರಹದಾರಿ ಮತ್ತು ಪರ್ಮಿಟ್ ಪತ್ರವಿಲ್ಲದೇ ಓಡಿಸುತ್ತಿರುವ ಬಗ್ಗೆ ಮತ್ತು ಹೆಚ್ಚಿನ ದರವನ್ನು ವಸೂಲಿ ಮಾಡುತ್ತಿರುವ ಬಗ್ಗೆ.	-- ಡಿಟೋ --	
	3.	ತುಮಕೂರು	04-02-99	1) ಸಾರಿಗೆ ಸಂಸ್ಥೆ ಬಸ್ ನಿಲ್ದಾಣದ ಒಳ ಪ್ರವೇಶಿಸಿ ಬಸ್‌ನವರು ಜನರನ್ನು ಹತ್ತಿಸಿಕೊಳ್ಳುವ ಬಗ್ಗೆ.	ಬಸ್ ನಿಲ್ದಾಣದಿಂದ 500 ಮೀ ಒಳಗೆ ವಾಹನ ನಿಲ್ಲಿಸಬಾರದೆಂದು ಅಧಿಸೂಚನೆ ಹೊರಡಿಸಲಾಗಿದೆ. ತುಮಕೂರು ಜಿಲ್ಲಾ ಬಸ್ ಮಾಲೀಕರು ಇತ್ತೀಚೆಗೆ ವಿಮೆಂಟರನ್ನು ನೇಮಕ ಮಾಡಿಕೊಳ್ಳುವುದನ್ನು ನಿಲ್ಲಿಸಿದ್ದಾರೆ.	
				2) ತುಮಕೂರು ಮತ್ತು ಮಧುಗಿರಿಯಲ್ಲಿ ಬಸ್ ನಿಲ್ದಾಣಗಳಲ್ಲಿ ವಿಮೆಂಟರ ಹಾವಳಿ ಬಗ್ಗೆ.		

1	2	3	4	5	6	7
		ಕುಣಿಗಲ್	06-02-99	1) ಖಾಸಗಿ ಬಸ್‌ಗಳ ಮೇಲೆ ಜನರನ್ನು ಸಾಗಿಸುವ ಬಗ್ಗೆ.	ಖಾಸಗೀ ಬಸ್‌ಗಳ ಮೇಲ್ಛಾವಣಿ ಮೇಲೆ ಪ್ರಯಾಣಿಕರನ್ನು ಸಾಗಿಸುವರೆಂದು ತಿಳಿಸಲಾಗಿದೆ. ಈ ಬಗ್ಗೆ ತಪಾಸಣೆ ಹೆಚ್ಚಿಸ-ಲಾಗುವುದು.	
		ಚಿಕ್ಕನಾಯಕನ ಹಳ್ಳಿ	26-02-99	1) ತಾಲ್ಲೂಕ್ ಕಛೇರಿ ಮತ್ತು ಹುಳಿಯೂರು ಗೇಟ್ ಬಳಿ ಬಸ್‌ಗಳ ನಿಲುಗಡೆ ಕುರಿತು.	ತಕ್ಷಣದಿಂದಲೇ ಕ್ರಮ ಕೈಗೊಳ್ಳ-ಲಾಗಿದೆ.	
				2) ರಸ್ತೆ ಮತ್ತು ಬಸ್ ನಿಲ್ದಾಣ ದುರಸ್ಥಿ.	ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದೆ.	
		ಗುಬ್ಬಿ	10-02-99	1) ಮ್ಯಾಕ್ಸಿಕ್ಯಾಬ್‌ಗಳ ರಹದಾರಿ ನಿಲ್ಲಿಸಿ ಅದೇ ಮಾರ್ಗದಲ್ಲಿ ಖಾಸಗಿ ಅಥವಾ ಸರ್ಕಾರಿ ಬಸ್ ಓಡಿಸಲು ಮನವಿ.	ಮ್ಯಾಕ್ಸಿಕ್ಯಾಬ್‌ಗಳಿಗೆ ನಿರ್ದಿಷ್ಟ ಮಾರ್ಗದಲ್ಲಿ ರಹದಾರಿ ಮಂಜೂರು ಮಾಡಿಲ್ಲ.	
				2) ಹೊಸದುರ್ಗ ಮತ್ತ ಬೆಂಗಳೂರು ನಡುವೆ ಸಂಚರಿಸುವ ಬಸ್‌ಗಳು ರಾಷ್ಟ್ರೀಕೃತ ಮಾರ್ಗದಲ್ಲಿ ಸಂಚರಿಸುವ ಬಗ್ಗೆ.	ತಪಾಸಣೆ ಮಾಡಲಾಗುತ್ತಿದೆ.	
		ಕೊರಟಗೆರೆ	12-02-99	1) ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಕುರಿತು.	ಆಗತ್ಯವಿರುವಕಡೆಗೆ ಮುಂದಿನ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ವಿಷಯವನ್ನು ಮಂಡಿಸಿ ಸಂಬಂಧಿಸಿದವರಿಗೆ ನಿರ್ದೇಶನ ನೀಡಲಾಗುವುದು.	

1	2	3	4	5	6	7
		ಮಧುಗಿರಿ	16-02-99	1) ಮಧುಗಿರಿ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಸಾರಿಗೆ ಸೌಲಭ್ಯ ನೀಡುವ ಬಗ್ಗೆ.	ಸದರಿ ಗ್ರಾಮಗಳಿಗೆ ರಹದಾರಿ ಕೋರಿ ಅರ್ಜಿಗಳು ಬಂದಲ್ಲಿ, ರಹದಾರಿ ಮಂಜೂರು ಮಾಡಲಾಗುವುದು.	
		ಪಾವಗಡ	20-02-99	1) ಪಾವಗಡ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಸಾರಿಗೆ ಸೌಲಭ್ಯ ನೀಡುವ ಬಗ್ಗೆ.	ಅರ್ಜಿದಾರರು ಮುಂದೆ ಬಂದಲ್ಲಿ, ರಹದಾರಿ ಮಂಜೂರು ಮಾಡಲಾಗುವುದು.	
		ಸಿರಾ	25-02-99	1) ಖಾಸಗಿ ಬಸ್ಸುಗಳು ಮತ್ತು ಮ್ಯಾಕ್ಸಿಕ್ಯಾಬ್‌ಗಳು ರಹದಾರಿಗಳನ್ನು ಹೊಂದಿರದೆ ಓಡಾಡುವ ಬಗ್ಗೆ.	ಅಂತಹ ವಾಹನಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಇನ್ನು ಮುಂದೆಯೂ ಸಹ ಕ್ರಮ ಕೈಗೊಳ್ಳಲಾಗುವುದು.	
				2) ಚಾಲಕರ ನಿರ್ವಾಹಕರ ಲೈಸನ್ಸ್ ನೀಡುವಲ್ಲಿ ವಿಳಂಬ.	ಈ ಕಛೇರಿಯಲ್ಲಿ ಯಾವುದೇ ವಿಳಂಬವಿಲ್ಲ.	
				3) ಆಂಧ್ರದ ಗಡಿಯವರಿಗೆ ಪರವಾನಗಿ ನೀಡುವಂತೆ ಕೋರಿಕೆ.	ಮುಂದಿನ ಸಭೆಯಲ್ಲಿ ಅವಕಾಶವಿದ್ದಲ್ಲಿ, ರಹದಾರಿ ನೀಡಲಾಗುವುದು.	
				4) ಅಪಘಾತಗಳ ವರದಿ ನೀಡುವ ಬಗ್ಗೆ.	ಪೋಲೀಸ್ ಇಲಾಖೆಯಿಂದ ವರದಿ ಬಂದ ತಕ್ಷಣ ಮೋಟಾರು ವಾಹನ ನಿರೀಕ್ಷಕರನ್ನು ಕಳುಹಿಸಿ ವರದಿ ನೀಡಲಾಗುವುದು.	
		ತಿಪಟೂರು	29-01-99	1) ಆಟೋರಿಕ್ಷಾದವರು ನಿಗಧಿತ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುತ್ತಾರೆ.	ದೂರುಗಳು ಬಾರದಂತೆ ಕ್ರಮ ತೆಗೆದುಕೊಳ್ಳಲಾಗುವುದು.	
				2) ತಿಪಟೂರಿನಲ್ಲಿ ಸಿರಾಗಳಲ್ಲಿ ಮೂರು ಭಾರಿ ಕ್ಯಾಂಪ್ ನಡೆಸಲು ಕೋರಿದರು.	ಈಗ ಪ್ರತಿ ತಿಂಗಳ 24ನೇ ತಾರಿಖು ಕ್ಯಾಪ್ ನಡೆಸಲಾಗುತ್ತಿದ್ದು ಇನ್ನು ಮುಂದೆ ಪ್ರತಿ ತಿಂಗಳ 10ನೇ ತಾರಿಖು ಸಹ ನಡೆಸಲಾಗುವುದು.	

1	2	3	4	5	6	7
		ತುರುವೇಕೆರೆ	11-02-99	ಮ್ಯಾಕ್ಸಿಕ್ಯಾಬ್ ಚಾಲಕರು ಲೈಸನ್ಸ್ ಇಲ್ಲದೆ ಚಾಲನೆ ಮಾಡುವ ಬಗ್ಗೆ.	ತಪಾಸಣೆ ಮಾಡಲಾಗುವುದು.	
4.	ಮಂಗಳೂರು (ದ.ಕ.)	ಮಂಗಳೂರು	28-1-99	ಖಾಸಗಿ ಬಸ್ಸುಗಳು ಸಮಯ ಪಾಲನೆ ಮಾಡುವ ಬಗ್ಗೆ.	ಸೂಕ್ತ ಕ್ರಮ ತೆಗೆದುಕೊಳ್ಳ-ಲಾಗುವುದು.	
		ಬಂಟವಾಳ	02-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಪುತ್ತೂರು	05-02-99	1) ಆಟೋರಿಕ್ಷಾ ಚಾಲಕರು ತಮ್ಮ ನಾಮಫಲಕ ಧರಿಸುವ ಬಗ್ಗೆ.	ನಾಮಫಲಕವನ್ನು ಧರಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗುವುದು.	
		ಸುಳ್ಯ	09-02-99	1) ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಬೆಳ್ತಂಗಡಿ	30-01-99	1) ಕ್ಯಾಂಟಿನಲ್ಲಿ ಅರ್ಹತಾ ಪತ್ರ ನೀಡಿಕೆ.	ಕ್ಯಾಂಟಿನಲ್ಲಿ ಅರ್ಹತಾ ಪತ್ರವನ್ನು ನವೀಕರಿಸಲಾಗುವುದು.	
				2) ಗುರುವಾಲುನಕೆರೆಯಿಂದ ಬೆಳ್ತಂಗಡಿಗೆ ಖಾಸಗಿ ಬಸ್ಸುಗಳಿಗೆ ಪರವಾನಗಿ ನೀಡುವ ಕುರಿತು.	ಮುಂದಿನ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ಮುಂದಿಟ್ಟು ಕ್ರಮ ಕೈಗೊಳ್ಳ-ಲಾಗುವುದು.	
5.		ಉಡುಪಿ	11-02-99	ಗ್ರಾಮಾಂತರ ಒಳ ರಸ್ತೆಯಲ್ಲಿ ಬಸ್ಸ್ ಸೌಕರ್ಯ ಇನ್ನು ಉತ್ತಮಪಡಿಸಬೇಕು.	ಹೆಚ್ಚಿನ ರಹದಾರಿ ಕೋರಿ ಅರ್ಜಿಗಳು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.	

1	2	3	4	5	6	7
		ಕಾರ್ಕಳ	16-02-99	ನಿಗಧಿತ ಸಮಯದೊಳಗೆ ಬಸ್ಸಿಗಳ ಓಡಾಟ.	ತಪಾಸಣೆ ಮಾಡಿ ನಿಗಧಿತ ಸಮಯದೊಳಗೆ ಬಸ್ಸ್ ಓಡಿಸಲು ತಿಳಿಸಲಾಗಿದೆ.	
		ಕುಂದಾಪುರ	18-02-99	ಆಟೋರಿಕ್ಷಾ ಪರವಾನಗಿ ನೀತಿ ಸಡಲಿಕೆ ಮಾಡುವುದು. ಡೀಸಲ್ ಬೆಲೆ ಇಳಿದಿರುವುದರಿಂದ ಟಿಕೇಟ್ ದರ ಇಳಿಸುವುದು.	ಸರ್ಕಾರ ನಿರ್ಧರಿಸಬೇಕು.	
6.	ಬೆಳಗಾವಿ	ಬೆಳಗಾವಿ	10-02-99	1) ಮ್ಯಾಟ್ಯಾಡೋರ್‌ಗಳನ್ನು ಬಸ್ ನಿಲ್ದಾಣದಿಂದ 500 ಮೀಟರ್ ದೂರ ನಿಲ್ಲಿಸುವ ಬಗ್ಗೆ.	ತಪಾಸಣೆ ನಡೆಸಲಾಗುವುದು.	
				2) ಹೊರ ರಾಜ್ಯದ ಲಾರಿಗಳು ಓವರ್ ಲೋಡ್ ಮಾಡುವುದರಿಂದ ಸ್ಥಳೀಯರಿಗೆ ತೊಂದರೆ.	ಓವರ್ ಲೋಡ್ ತಪಾಸಣೆ ಮಾಡಲಾಗುವುದು.	
		ಖಾನಾಪುರ	09-02-99	ಸಾರಿಗೆ ಸಂಸ್ಥೆಗೆ ಸಂಬಂಧಿಸಿದ ಯಾವುದೇ ಅಹವಾಲುಗಳು ಇರುವುದಿಲ್ಲ.		
		ಬೈಲಹೊಂಗಲ	11-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಸವದತ್ತಿ	12-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ರಾಯದುರ್ಗ	06-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		

1	2	3	4	5	6	7
		ಬೆಟ್ಟೋಡಿ	16-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಗೋಣಿ	12-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ..		
		ಹುಕ್ಕೇರಿ	18-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಅಥಣಿ	20-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ರಾಯಬಾಗ	24-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
7.	ಧಾರವಾಡ	ಧಾರವಾಡ	28-01-99	1) ಮಾಲಿನ್ಯ ತಪಾಸಣೆ ಸರಿಯಾಗಿದೆಯೇ ಪರಿಸರ ನಾಶಕ್ಕೆ ತಡೆಗೆ ಏನು ಕ್ರಮ.	ವಾಹನಗಳ ವಾಯು ಮಾಲಿನ್ಯ ಪ್ರಮಾಣವನ್ನು ತಪಾಸಣೆ ಮಾಡಲು ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳನ್ನು ತೆರೆಯಲಾಗಿದ್ದು ವಾಯು ಮಾಲಿನ್ಯ ಪ್ರಮಾಣವನ್ನು ತಪಾಸಣೆ ಮಾಡಲಾಗುವುದು.	
				2) ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಕೆ.	-ಮೀಟರ್ ಅಳವಡಿಸುವುದನ್ನು ಕಡ್ಡಾಯ ಮಾಡಲಾಗಿದೆ ಮೀಟರ್ ಅಳವಡಿಸದ ಇರುವ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು.	

1	2	3	4	5	6	7
		ಹುಬ್ಬಳ್ಳಿ	02-02-99	1) ಅರ್ಜಿಗಳನ್ನು ಸ್ವೀಕರಿಸಿ ಸಂಖ್ಯೆ ನೀಡಿ, ಸ್ವೀಕೃತಿ ನೀಡಿ ಸಮಯ ತಿಳಿಸಬೇಕು.	ಈಗಾಗಲೇ ವ್ಯವಸ್ಥೆ ಮಾಡಿದೆ.	
				2) ಆಟೋರಿಕ್ಷಾಗಳು ಮೀಟರ್‌ಗಿಂತ ಹೆಚ್ಚು ಬಾಡಿಗೆ ವಸೂಲಿ ಮಾಡುವ ಬಗ್ಗೆ.	ತಪಾಸಣೆ ಮಾಡಲಾಗುವುದು.	
				3) ಹಳೆ ವಾಹನಗಳ ಅರ್ಜಿಯಾ ಪತ್ರ ನವೀಕರಿಸದೇ ಇರುವ ಬಗ್ಗೆ.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ನಿರ್ಣಯ ತಿಳಿಸಲಾಗುವುದು.	
				4) ಹೆಬ್ಬುವಿ ಹುಲ್ಲಿನ ಕೌಂಟರ್ ತೆರೆಯುವ ಬಗ್ಗೆ.	ತೆರೆಯುವ ವಿಷಯಾಡು ಮಾಡಲಾಗುವುದು.	
				5) ಮಧ್ಯವರ್ತಿಗಳಿಗೆ ಅಧಿಕೃತ ಲೈಸನ್ಸ್ ನೀಡುವುದು.	ಕಾನೂನಿನಲ್ಲಿ ಅವಕಾಶವಿಲ್ಲ.	
		ಕಲಘಟಗಿ	09-02-99	ಸಾರಿಗೆ ಇಲಾಖೆಯ ಆಹವಾಲು ಇಲ್ಲ.		
		ಕುಂದಗೋಳ	09-02-99	1) ಬಸ್ ನಿಲ್ದಾಣದ ಸುತ್ತಮುತ್ತ ಟೆಂಪೊಗಳ ನಿಲ್ಲುವಿಕೆ.	ಬಸ್ ನಿಲ್ದಾಣದಿಂದ 500 ಕಿ.ಮೀ. ದೂರ ನಿಲ್ಲಿಸುವಂತೆ ಕಟ್ಟಾಜ್ಞೆ ಮಾಡಲಾಗಿದೆ.	
				2) ಕುಂದಗೋಳದಲ್ಲಿ ತೆರಿಗೆ ಪಾವತಿಸಲು ಅವಕಾಶ ನೀಡುವ ಬಗ್ಗೆ.	ಪ್ರತಿ ತಿಂಗಳು ನಡೆಯುವ ಕ್ಯಾಂಪ್‌ನಲ್ಲಿ ತೆರಿಗೆ ಪಾವತಿಗೆ ಅವಕಾಶ ಕಲ್ಪಿಸಬೇಕಾಗಿದೆ.	

1	2	3	4	5	6	7
8.	ಗದಗ	ಗದಗ	28-01-99	1)15 ವರ್ಷಕ್ಕೆ ಮೇಲ್ಪಟ್ಟ ಸಾರಿಗೆ ವಾಹನಗಳ ನೋಂದಣಿ ರದ್ದು.	ಇನ್ನೂ ಜಾರಿಗೆ ಬಂದಿಲ್ಲ.	
				2) ಹಿರಿಯ ಅಧಿಕಾರಿಗಳ ಜಾಲಿನ ಮೇಲಿನ ಕೆಂಪುದೀಪ ತೆಗೆಯುವ ಬಗ್ಗೆ.	ತೆಗೆಸಲಾಗುವುದು.	
				3) ಬಸ್ ನಿಲ್ದಾಣದ ಬಳಿ ಮ್ಯಾಕ್ಸಿಕ್ಯಾಬ್ ನಿಲ್ಲಿಸುವ ಬಗ್ಗೆ.	ನ್ಯಾಯಾಲಯದ ಆದೇಶದಂತೆ ಬಸ್ ನಿಲ್ದಾಣದಿಂದ 500 ಮೀಟರ್. ದೂರದವರೆಗೆ ನಿಲುಗಡೆ ನಿಷೇದಿಸಲಾಗಿದೆ.	
		ಮುಂಡರಗಿ	05-02-99	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
		ರೋಣ	16-02-99	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
		ನರಗುಂದ	11-02-99	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
		ಶಿರಹಟ್ಟಿ	20-02-99	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
9.	ಹಾವೇರಿ	ಹಾವೇರಿ ಬ್ಯಾಡಗಿ	29-01-99 04-02-99	1) ಖಾಸಗಿ ವಾಹನಗಳು ಮತ್ತು ಮ್ಯಾಕ್ಸಿ ಕ್ಯಾಬ್‌ಗಳ ಟಾಪ್ ಸರ್ವಿಸ್ ಮಾಡುವುದು ಬಾಗಿಲು ತೆಗೆದು ಅತೀ ಹೆಚ್ಚಿನ ಪ್ರಯಾಣಿಕರನ್ನು ಸಾಗಾಣಿ ಮಾಡುತ್ತಿದ್ದು ಏನು ಕ್ರಮ ತೆಗೆದು-ಕೊಂಡಿದ್ದೀರಿ?	ಅಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಂಡಿದೆ.	
				2) ಪ್ರಮಾಣ ಪತ್ರಗಳಲ್ಲಿ ಅಥವಾ ಜಿಲ್ಲಾ ಪಂಚಾಯತಿ ಚುನಾವಣಾ ಕೇಂದ್ರಗಳಲ್ಲಿ ಡ್ರೈವಿಂಗ್ ಲೈಸನ್ಸ್ ಕೊಡುವ ವ್ಯವಸ್ಥೆ ಆಗಬೇಕು.	ತ್ರೈಮಾಸಿಕ ಶಿಬಿರ ಏರ್ಪಡಿಸಲು ತೀರ್ಮಾನಿಸಲಾಯಿತು.	

1	2	3	4	5	6	7
		ಹಿರೇಕೆರೂರು	16-02-99	ಮಲ್ಲಿಕಾರ್ಜುನ ಬಸ್ಸಿಗೆ ಗಿಣಿವಾಲ ಗ್ರಾಮಕ್ಕೆ ರಹದಾರಿ ಇದ್ದು ಅದನ್ನು ಚಿಕ್ಕೆರೂ ಗ್ರಾಮಕ್ಕೆ ವಿಸ್ತರಿಸುವ ಬಗ್ಗೆ.	ದಿನಾಂಕ: 2-3-99ರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ತಾತ್ಕಾಲಿಕ ರಹದಾರಿ ನೀಡಿದೆ.	
				ಮ್ಯಾಕ್ಸಿಕ್ಯಾಬ್ ತಪಾಸಣೆ	---ಡಿಟೋ---	
		ಹಾನಗಲ್	10-02-99	ಮ್ಯಾಕ್ಸಿಕ್ಯಾಬ್‌ಗಳ ಮೇಲೆ ಜನರನ್ನು ಕೊಡಿಸಿಕೊಂಡು ಹೋಗುವುದನ್ನು ತಪ್ಪಿಸಬೇಕು.	ವಿಶೇಶ ತನಿಖಾ ತಂಡಗಳನ್ನು ರಚಿಸಿ, ತಪಾಸಣೆ ಮಾಡಲಾಗುವುದು.	
		ರಾಣೆಬೆನ್ನೂರು	20-02-99	ಆಟೋರಿಕ್ಷಾದವರಿಗೆ ದರ ನಿಗಧಿಪಡಿಸಿ ನಿಗಧಿತ ಪ್ರಯಾಣಿಕರನ್ನು ಬಯ್ಯುವಂತೆ ಮಾಡುತ್ತಾರೆ.	ವಿಶೇಶ ತನಿಖಾ ತಂಡಗಳನ್ನು ರಚಿಸಿ, ತಪಾಸಣೆ ಮಾಡಲಾಗುವುದು.	
		ಸವಣೂರು	23-02-99	ಮ್ಯಾಕ್ಸಿಕ್ಯಾಬ್ ತಪಾಸಣೆ	---ಡಿಟೋ---	
		ಶಿಗ್ಗಾವಿ	26-02-99	ಬಸ್ ನಿಲ್ದಾಣದಿಂದ 500 ಮೀಟರ್ ದೂರದಲ್ಲಿ ಟಿಂಪೊಗಳನ್ನು ನಿಲ್ಲಿಸಲು ವ್ಯವಸ್ಥೆ ಮಾಡುವುದು.	ಅಧಿಸೂಚನೆ ಹೊರಡಿಸಲಾಗಿದೆ.	
10.	ಬಿಜಾಪುರ	ಬಿಜಾಪುರ	28-01-99	1) ಆಕ್ಷೇಪಣಾ ಪೆಟ್ಟಿಗೆ ಒದಗಿಸುವ ಕುರಿತು.	ಒದಗಿಸಲಾಗಿದೆ.	
				2) ಪಬ್ಲಿಕ್ ಕ್ಯಾರಿಯರ್ ಟ್ರಾಕ್ಟರ್ ಓಡಿಸಲು ಪೋಲೀಸರ ಕಿರುಕುಳ.	ಪೋಲೀಸ್ ವರಿಷ್ಟರಿಗೆ ದೂರು ನೀಡಲು ತಿಳಿಸಲಾಯಿತು.	
		ಇಂಡಿ	02-02-99	ಯಾವುದೇ ಅಹವಾಲು ಬಂದಿಲ್ಲ.		

1	2	3	4	5	6	7
		ಸಿಂಧಗಿ	06-02-99	1) ಮ್ಯಾಕ್ಸಿಕ್ಯಾಬ್‌ಗಳನ್ನು ಬಸ್ ನಿಲ್ದಾಣದಿಂದ 300 ಮೀಟರ್ ಅಂತರದಲ್ಲಿ ನಿಲ್ಲಿಸುವ ಬಗ್ಗೆ.	ಕ್ರಮ ಜರುಗಿಸಲಾಗಿದೆ.	
		ಬಸವನ ಬಾಗೇವಾಡಿ	20-02-99	ಪ್ರತಿ ತಿಂಗಳು ಕ್ಯಾಂಪ್ ನಡೆಸುವ ಬಗ್ಗೆ.	ಪ್ರತಿ ತಿಂಗಳು ಕ್ಯಾಂಪ್ ನಡೆಸಲಾಗುತ್ತಿದೆ.	
		ಮುದ್ದೇಬಿಹಾಳ	22-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಯಾವ ಅಹವಾಲು ಬಂದಿಲ್ಲ.		
11.	ಬಾಗಲಕೋಟೆ	ಬಾಗಲಕೋಟಿ	30-01-99	ಯಾವುದೇ ಅಹವಾಲು ಬಂದಿರುವುದಿಲ್ಲ.		
		ಬಾದಾಮಿ	04-02-99	ಯಾವುದೇ ಅಹವಾಲು ಬಂದಿರುವುದಿಲ್ಲ.		
		ಬೀಳಗಿ	10-02-99	ಯಾವುದೇ ಅಹವಾಲು ಬಂದಿರುವುದಿಲ್ಲ.		
		ಹುನಗುಂದ	16-02-99	ಯಾವುದೇ ಅಹವಾಲು ಬಂದಿರುವುದಿಲ್ಲ.		
		ಜಮಖಂಡಿ	12-02-99	ನೋಂದಣಿಯಲ್ಲಿ ವಿಳಂಬ.	ವಾಹನ ನೋಂದಣಿ ಮಾಡಿ ಮಾಲೀಕರಿಗೆ ದಾಖಲೆ ಪಡೆಯುವಂತೆ ಹಿಂಬರಹ ನೀಡಿದೆ ವಿಳಂಬವಿಲ್ಲ.	
		ಮುಧೋಳ	09-02-99	ಯಾವುದೇ ಅಹವಾಲು ಬಂದಿಲ್ಲ.		
11.		ಹಾರವಾರ(ಉ.ಕ.)	30-01-99	1) ಅಪ್ರಾಪ್ತವಯಸ್ಕನವರು ವಾಹನ ಚಾಲನೆ ಮಾಡುವ ಬಗ್ಗೆ. 2) ಕಲಿಕೆ ಚಾಲನಾ ಲೈಸನ್ಸ್ ನಮೂನೆ ಸಿಗುತ್ತಿಲ್ಲ. 3) ಮ್ಯಾಕ್ಸಿಕ್ಯಾಬ್‌ಗಳಲ್ಲಿ ಹೆಚ್ಚಿನ ಜನರನ್ನು ತುಂಬಿ ಕೊಂಡು ಹೋಗುವ ಬಗ್ಗೆ.	ವಿಶೇಷ ತಪಾಸಣೆ ಮಾಡಲಾಗಿದೆ. ಎಲ್ಲರಿಗೂ ನಮೂನೆ ಒದಗಿಸಲು ವಿರ್ಪಾಡು ಮಾಡಲಾಗಿದೆ. ವಿಶೇಷ ತಪಾಸಣೆ ಮಾಡಿಸುತ್ತಿದೆ.	

1	2	3	4	5	6	7
		ಅಂಕೋಲಾ	02-02-99	1) ಕ್ಯಾಂಟಿನಲ್ಲಿ ಕಲಿಸಿ ಲೈಸನ್ಸ್ ನೀಡುವುದು ವಿಳಂಬ.	ವಿಷಯ ನಿರ್ವಾಹಕರನ್ನು ಬದಲಾಯಿಸಿದೆ.	
				2) ಪಕ್ಕ ಚಾಲನಾ ಲೈಸನ್ಸ್ ನೀಡುವುದು.	--ಡಿಟೋ--	
				3) ಚಲನ್ ಬರಿಯುವಾಗ ತಪ್ಪು ಬರೆಯುವದು.	--ಡಿಟೋ--	
				4) ಮೋಟಾರು ವಾಹನ ನಿರೀಕ್ಷಕರು ಕ್ಯಾಪಿಗೆ ವಿಳಂಬವಾಗಿ ಹೋಗುವುದು.	ಎಲ್ಲಾ ಮೋಟಾರು ವಾಹನ ನಿರೀಕ್ಷಕರಿಗೆ ಸೂಚನೆ ನೀಡಿದೆ.	
		ಭಟ್ಕಳ್	04-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಯಾವುದೇ ಅಹವಾಲು ಬಂದಿಲ್ಲ.		
		ಹೊನ್ನಾವರ	06-02-99	1) ಜಿಎ:01ಸಿ-2369ನ ಮರು ನೋಂದಣಿ.	ದಿನಾಂಕ: 8-2-99ರಂದು ಇತ್ಯರ್ಥಗೊಳಿಸಿದೆ.	
				2) ಬಸ್ಸು ನಿಲ್ದಾಣದ ಅಕ್ಕಪಕ್ಕ ವಾಹನ ನಿಲುಗಡೆ ಮಾಡಿ ಬಸ್ ನಿಲ್ದಾಣಕ್ಕೆ ಪ್ರವೇಶಿಸುವ ಮತ್ತು ಬರುವ ವಾಹನಗಳಿಗೆ ತೊಂದರೆಯಾಗಿದೆ.	ಪೋಲೀಸ್ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.	
				3) ಮ್ಯಾಕ್ಸಿಕ್ಯಾಬ್‌ಗಳ ಕಾನೂನುಬಾಹಿರ ಓಡಾಟ.	ತಪಾಸಣೆ ಮಾಡಲಾಗುವುದು.	
		ಕಮ್ಮಟ	09-02-99	ಕುಮಟ ಮತ್ತು ಹೆಗಡೆ ಮಧ್ಯೆ ಸಂಚರಿಸುವ ಖಾಸಗಿ ಬಸ್ಸುಗಳು ದುಸ್ಥಿತಿಯಲ್ಲಿದ್ದು ಈ ಬಗ್ಗೆ ಕ್ರಮ.	ಅರ್ಹತಾ ಪತ್ರ ನವೀಕರಿಸುವಾಗ ವಾಹನದ ದುರಸ್ಥಿಗೆ ಕ್ರಮ ಕೈಗೊಳ್ಳಲಾಗುವುದು.	
		ಸೂಪ		ಬಂದಿಲ್ಲ.		

1	2	3	4	5	6	7
		ಸಿರಸಿ	28-01-99	1) ಖಾಸಗಿ ಬಸ್ಸುಗಳು ಕಾನೂನು ಬಾಹಿರವಾಗಿ ಓಡಾಡುವಿಕೆ	ತಪಾಸಣೆ ಜಾಸ್ತಿ ಮಾಡಿ ಕ್ರಮ ಕೈಗೊಳ್ಳಲಾಗುವುದು.	
				2) ಆಟೋರಿಕ್ಷಾ ಚಾಲಕರಿಗೆ ಚಾಲನಾ ಅನುಜ್ಞಾ ಪತ್ರ ನೀಡಿಕೆ.		
				3) ಆಟೋರಿಕ್ಷಾ ಚಾಲಕರಿಂದ ಸಾರ್ವಜನಿಕರಿಗೆ ತೊಂದರೆ		
				4) ಮ್ಯಾಕ್ಸಿಕ್ಯಾಬ್‌ಗಳ ಕಾನೂನು ಬಾಹಿರ ಓಡಾಟ ಹಾಗೂ ವಿಜೆಂಟ್‌ಗಳ ಹಾವಳಿ 5) ವಾಯು ಮಾಲಿನ್ಯ 6) ಸಿಳುಕಿಲ್ಲಿ ವಾಹನಗಳ ನಿಲುಗಡೆ.		
		ಸಿದ್ದಾಪುರ	11-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಯಾವ ಅಹವಾಲು ಇಲ್ಲ.		
		ಯಲ್ಲಾಪುರ	18-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಯಾವ ಅಹವಾಲು ಇಲ್ಲ.		
		ಮುಂಡಗೂಡ	16-02-99	1) ಹೊರ ರಾಜ್ಯಗಳ ವಾಹನಗಳಿಗೆ ಮರು ನೋಂದಣಿ ಸಂಖ್ಯೆ ನೀಡುವ ಬಗ್ಗೆ.	ಶೀಘ್ರ ಕ್ರಮ ತೆಗೆದು-ಕೊಳ್ಳಲಾಗುವುದು.	
				2) ಮುಂಗೋಡಿನಲ್ಲಿ ಪ್ರತಿ ತಿಂಗಳಲ್ಲಿ 2 ಬಾರಿ ಕ್ಯಾಂಪ್ ಮಾಡುವ ಬಗ್ಗೆ.	ಒಪ್ಪಲಾಯಿತು.	
				3) ಆಟೋರಿಕ್ಷಾ ಪರವಾನಗಿ ನೀಡುವ ಬಗ್ಗೆ.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಮಂಡಿಸಲಾಯಿತು.	

1	2	3	4	5	6	7
		ಹಳಿಯಾಳ	23-02-99	1) ತಿಂಗಳಲ್ಲಿ 2 ಬಾರಿ ಕ್ಯಾಂಪ್ ಮಾಡಲು ಸಲಹೆ.	ಒಪ್ಪಲಾಯಿತು.	
				2) ಹಳಿಯಾಳದಲ್ಲಿ ಪ್ರತ್ಯೇಕ ಪ್ರಾದೇಶಿಕ ಸಾರಿಗೆ ಕಛೇರಿ ತೆರೆಯುವ ಬಗ್ಗೆ.	ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು.	
12.	ಗುಲ್ಬರ್ಗ	ಗುಲ್ಬರ್ಗ	28-01-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಅಫ್ಜಲ್ಪುರ	30-01-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಆಳಂದ	04-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಚಿಂಚೋಳಿ	09-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಚಿತ್ತಾಪುರ	11-02-99	ಬಸ್‌ನಿಲ್ದಾಣದ ಹೊರಗೆ ಮ್ಯಾಕ್ಸಿಕ್ಯಾಬ್‌ಗಳು ನಿಲ್ಲುವ ಬಗ್ಗೆ.	ಕ್ರಮ ತೆಗೆದುಕೊಳ್ಳಲಾಗುವುದು.	
		ಜೇವರ್ಗಿ	16-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಸೇಡಂ	20-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಶಹಪುರ	--	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		

1	2	3	4	5	6	7
		ಶೋರಾಪುರ	--	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಯಾದಗೀರ್	--	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
13.	ಬಳ್ಳಾರಿ	ಬಳ್ಳಾರಿ	30-02-99	38 ಆಟೋರಿಕ್ಷಾ ಪರವಾನಗಿಗಾಗಿ ಅರ್ಜಿಗಳು ಬಂದಿದೆ.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಮಂಡಿಸಲಾಗುವುದು.	
		ಶಿರಗುಪ್ಪ	26-02-99	8 ಆಟೋರಿಕ್ಷಾ ರಹದಾರಿಗಾಗಿ ಅರ್ಜಿಗಳು ಪಡೆದಿದೆ.	ಈ ಅರ್ಜಿಗಳಿಗೆ ರಹದಾರಿ ನೀಡಲು ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಅನುಮತಿ ಕೋರಲಾಗಿದೆ.	
		ಹೂವಿನ ಹಡಗಲಿ	17-02-99	ತಾಲ್ಲೂಕಿನಲ್ಲಿ ಓಡಾಡುವ ಮ್ಯಾಕ್ಸಿಕ್ಯಾಬ್‌ಗಳ ತಪಾಸಣೆ ಮಾಡುವಂತೆ ಕೋರಿಕೆ.	ತಪಾಸಣೆಯನ್ನು ಹೆಚ್ಚಿಸಲಾಗಿದೆ.	
		ಹೊಸಪೇಟೆ	12-02-99	ಬಸ್ ನಿಲುಗಡೆ ಕೋರಿಕೆ, ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಕೆ.	ಅಗತ್ಯಕ್ರಮ ತೆಗೆದು-ಕೊಳ್ಳಲಾಗುವುದು.	
		ಕೂಡ್ಲಗಿ	18-02-99	ಸಾರಿಗೆ ಇಲಾಖೆಯಲ್ಲಿ ಯಾವುದೇ ಅಹವಾಲು ಇಲ್ಲ.		
		ಸಂಡೂರು	23-02-99	ಆಟೋರಿಕ್ಷಾ ರಹದಾರಿ ಮಂಜೂರಾತಿಗಾಗಿ ಕೋರಿಕೆ.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಮಂಡಿಸಲಾಗಿದೆ.	
		ಹೆಚ್.ಬಿ.ಹಳ್ಳಿ	04-02-99	ಸಂಚಾರಿ ಚಿಹ್ನೆ ಅಳವಡಿಕೆ.	ಸಮೀಕ್ಷೆ ನಡೆಸಿ ಮುಂದಿನ ಕ್ರಮಕ್ಕೆಗೊಳ್ಳಲಾಗುವುದು.	

1	2	3	4	5	6	7
14.	ಕೊಪ್ಪಳ	ಕೊಪ್ಪಳ	29-02-99	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ 2 ಅಹವಾಲು ಮಾತ್ರ.		
		ಗಂಗಾವತಿ	---	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
		ಕುಷ್ಟಗಿ	---	ಸಾರಿ.ಗೆ ಇಲಾಖೆಯ ಅಹವಾಲು ಇಲ್ಲ.		
		ಯಲಬುರ್ಗಿ	---	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
15.	ಬಿದರ್	ಬೀದರ್	04-02-99	1) ಅಪ್ರಾಪ್ತ ವಯಸ್ಕರಿಗೆ ಚಾಲನಾ ಅನುಜ್ಞಾ ಪತ್ರ ನೀಡಬಾರದು.	ಕಾನೂನಿನಲ್ಲಿ ಅವಕಾಶ ಇಲ್ಲ.	
				2) ಮ್ಯಾಕ್ಸಿಕ್ಯಾಬ್‌ಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಅಳವಡಿಸಬೇಕು.	ಕಡ್ಡಾಯ ಮಾಡಲಾಗಿದೆ.	
				3) ಆಟೋರಿಕ್ಷಾದಲ್ಲಿ ಹೆಚ್ಚು ಶಾಲಾ ಮಕ್ಕಳನ್ನು ಸಾಗಿಸುವ ಬಗ್ಗೆ.	ತಪಾಸಣೆ ನಡೆಸಲಾಗುವುದು.	
				4) ಮ್ಯಾಕ್ಸಿಕ್ಯಾಬ್‌ಗಳಲ್ಲಿ ಆಸನ ಸಾಮರ್ಥ್ಯಕಿಂತ ಹೆಚ್ಚು ಜನರನ್ನು ಸಾಗಿಸುವ ಬಗ್ಗೆ.	ತಪಾಸಣೆ ನಡೆಸಲಾಗುವುದು.	
				5) ಕಛೇರಿಯಲ್ಲಿ ಮಧ್ಯವರ್ತಿಗಳ ಹಾವಳಿ.	ತಪಾಸಣೆ ನಡೆಸಲಾಗುವುದು.	
		ಬೀದರ್	13-02-99	ಮ್ಯಾಕ್ಸಿಕ್ಯಾಬ್‌ಗಳ ಅಕ್ರಮ ಓಡಾಟಕ್ಕೆ ತಡೆಗಟ್ಟಲು ಕ್ರಮ.	ತಪಾಸಣೆಯನ್ನು ಹೆಚ್ಚಿಸಲಾಗುವುದು.	
		ಹುಮನಾಬಾದ್	17-02-99	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		

1	2	3	4	5	6	7
		ಬಾಲ್ಕಿ	11-02-99	ಜೀಪ್‌ಗಳ ಸಂಖ್ಯೆ:ಕೆಎ-39:ಎಂ-149 ಮತ್ತು ಕೆಎ-39-:ಎ-71 ಬದಲಾವಣೆಯ ಬಗ್ಗೆ.	ಮ್ಯಾಕ್ಸಿಕ್ಯಾಬ್ ಆಗಿ ಪರಿವರ್ತಿಸಲು ಅನುಮತಿ ನೀಡಲಾಗುವುದು.	
		ಬಸವಕಲ್ಯಾಣ	06-02-99	1) ಬಸವಕಲ್ಯಾಣದಲ್ಲಿ ಆರ್.ಟಿ.ಓ ಕಛೇರಿ ತೆರೆಯುವ ಬಗ್ಗೆ.	09-02-99 ಪ್ರಾರಂಭಿಸಿದೆ.	
				2) ಕ್ಯಾಂಪ್‌ನಲ್ಲಿ ತೆರಿಗೆ ಮತ್ತು ಪೀಸ್ ಚಲನ್ ಬಳಸುವ ಬಗ್ಗೆ.		
				3) ಎಂಆರ್‌ಎಕ್ಸ್-4794ಗೆ ಎಂಎಸ್-155 ಇಂಜಿನ್ ಬದಲಾವಣೆ ಬಗ್ಗೆ.	ಇಂಜಿನ್ ಬದಲಾವಣೆಗೆ ಅನುಮತಿ ನೀಡಲಾಗಿದೆ.	
16.	ಕೋಲಾರ	ಚಿಕ್ಕಬಳ್ಳಾಪುರ	09-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಶಿಡ್ಲಘಟ್ಟ	26-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಗೌರಿಬಿದನೂರು	16-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಬಾಗೇಪಲ್ಲಿ	28-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಗುಡಿಬಂಡೆ	20-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		

1	2	3	4	5	6	7
		ಕೋಲಾರ	02-02-99	ವಿ.ಕೋಟಾ-ಬೆಂಗಳೂರು ನಡುವೆ ಸಂಚರಿಸುವ ಖಾಸಗಿ ಬಸ್ಸ್ ರಾಷ್ಟ್ರೀಕೃತ ಮಾರ್ಗದಲ್ಲಿ ಸಂಚರಿಸುವ ಬಗ್ಗೆ.	ತಪಾಸಣೆಯನ್ನು ಚುರುಕು-ಗೊಳಿಸಲಾಗುವುದು.	
		ಕೆ.ಜಿ.ಎಫ್	04-02-99	ಖಾಸಗಿ ಬಸ್ಸ್‌ಗಳ ಅನಧಿಕೃತ ಓಡಾಟ.	--ಡಿಟೋ--	
		ಮಾಲೂರು	04-02-99	1) ರಾಷ್ಟ್ರೀಕೃತ ಮಾರ್ಗಗಳ ವಿವರ.	ಒದಗಿಸಲಾಗಿದೆ.	
				2) ಖಾಸಗಿ ಬಸ್ಸ್‌ಗಳ ಅನಧಿಕೃತ ಓಡಾಟ.	ತಪಾಸಣೆಯನ್ನು ಮಾಡಲಾಗುವುದು.	
		ಮುಳಬಾಗಿಲು	--	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
	17.ಮೈಸೂರು	ಮೈಸೂರು	09-02-99	1) ಮೈಸೂರು ಬಸ್ಸ್ ನಿಲ್ದಾಣದಲ್ಲಿ ಬಸ್ಸ್ ಮುಂಗಡ ಏಜೆಂಟರ ಹಾವಳಿ.	ಈ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.	
		ಹೆಚ್.ಡಿ.ಕೋಟೆ	10-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಕೆ.ಆರ್. ನಗರ	24-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಬನ್ನೂರು	27-02-99	-- ಡಿಟೋ --		
		ಪಿರಿಯಪಟ್ಟಣ	13-02-99			

1	2	3	4	5	6	7
		ಟಿ.ನರಸೀಪುರ	06-02-99	1) ಬಸ್ಸ್ ನಿಲ್ದಾಣದ ಬಗ್ಗೆ 2) ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುವ ಕುರಿತು	ಸಂಬಂಧಪಟ್ಟವರಿಗೆ ಅಹವಾಲುವನ್ನು ಕಳುಹಿಸಲಾಗಿದೆ.	
		ಹುಣಸೂರು	18-02-99	ಪ್ರದೇಶಿಕ ಕಛೇರಿ ತೆರೆಯುವ ಬಗ್ಗೆ.	ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.	
		ನಂಜನಗೂಡು	25-02-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
18.	ಚಾಮರಾಜನಗರ	ಚಾಮರಾಜನಗರ	28-01-99	ಹಂಡರ ಹಳ್ಳಿ ಗ್ರಾಮಕ್ಕೆ ಬಸ್ ಸೌಲಭ್ಯ.	ಅರ್ಜಿ ಬಂದಲ್ಲಿ ಆ ಮಾರ್ಗಕ್ಕೆ ರಹದಾರಿ ಮಂಜೂರು ಮಾಡಲಾಗುವುದು.	
		ಗುಂಡ್ಲುಪೇಟೆ	29-01-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಕೊಳ್ಳೇಗಾಲ	30-01-99	ಕೊಳ್ಳೇಗಾಲ ಮತ್ತು ಸುತ್ತಮುತ್ತಲ ಗ್ರಾಮಕ್ಕೆ ಸಾರಿಗೆ ಸೌಲಭ್ಯ ನೀಡುವ ಬಗ್ಗೆ.	ಪರವಾನಿಗಾಗಿ ಅರ್ಜಿ ಬಂದಲ್ಲಿ ಮಂಜೂರು ಮಾಡಲಾಗುವುದು.	
		ಯಳಂದೂರು	2-2-99	ಸಾರಿಗೆ ಸೌಲಭ್ಯ ಉತ್ತಮ ಪಡಿಸುವುದಕ್ಕೆ ಸಂಬಂಧಿಸುದಂತೆ.	---"---	
19.	ಮಂಡ್ಯ	ಮಂಡ್ಯ	16-02-99	ಮಂಡ್ಯ-ನಾಗಮಂಗಲ ನಡುವೆ ಸಂಚರಿಸುವ ಬಸ್ಸುಗಳು ಬೀದರ್‌ಗುಲ ಮತ್ತು ಬಿ. ಹೊಸೂರುನಲ್ಲಿ ನಿಲ್ಲಿಸುವ ಬಗ್ಗೆ.	ಮನವಿ ಮಾಡಲಾಗುವುದು.	

1	2	3	4	5	6	7
		ಕೆ.ಆರ್.ಪೇಟೆ	4-2-99	(86 ಅಹವಾಲು ಅದರಲ್ಲಿ ಒಂದು ಮಾತ್ರ ಸಾರಿಗೆ ಇಲಾಖೆಗೆ ಸೇರಿದ್ದು ಪ್ರಾಣಬಿಳಗೊಳ ಮತ್ತು ಆಘಲಯ ಕ್ರಾಸ್ ಮಧ್ಯೆ ಸಂಚರಿಸುವ 15 ಅನಧಿಕೃತ ವಾಹನಗಳ ಮೇಲೆ ಕ್ರಮಕ್ಕೆ ಒತ್ತಾಯ.	ಮೊದಲ ಸುತ್ತಿನ ಕಾರ್ಯ-ಚರಣೆಯನ್ನು ದಿನಾಂಕ 5-2-99 ರಂದು ನಡೆಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.	
		ಮದ್ದೂರು	20-2-99	ರಹದಾರಿ ಇಲ್ಲದ ಆಟೋರಿಕ್ಷಾಗಳ ವಿರುದ್ಧ ಕ್ರಮ ಮದ್ದೂರು ಬಸ್ ನಿಲ್ದಾಣಕ್ಕೆ ಹಾಸಗಿ ಬಸ್ಸುಗಳು ಬರಬೇಕು. ದೊಡ್ಡ ಅರಸೀಕೆರೆ ಗ್ರಾಮಕ್ಕೆ ಬಸ್ಸು ಸೌಲಭ್ಯ ಒದಗಿಸುವ ಬಗ್ಗೆ.		
		ಮಳವಳ್ಳಿ	23-02-99	70 ಅರ್ಜಿಗಳು ಬಂದಿದ್ದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದವಾಗಿವೆ.		
		ನಾಗಮಂಗಲ	2-2-99	ಭಾವಣಿ ಮೇಲೆ ಕ್ರಯಾಣ, ಮಾಸ್ಟಿಕ್ಕಾಬ್ ಹಾವಳಿ, ಸಮಯ ಪಾಲನೆ.	ಈ ಬಗ್ಗೆ ತಪಾಸಣೆ ಮಾಡಲಾಗುವುದು.	
		ಪಾಂಡವಪುರ	11-02-99	ಭಾವಣಿ ಮೇಲೆ ಕ್ರಯಾಣ, ಮಾಸ್ಟಿಕ್ಕಾಬ್ ಹಾವಳಿ ಯೋಗ್ಯ ವಾಹನಗಳಿಗೆ ಅರ್ಹತಾ ಪತ್ರ ನೀಡುವ ಬಗ್ಗೆ.	ವಿಶೇಷ ತಪಾಸಣೆ ಹಮ್ಮಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳ-ಲಾಗುವುದು	

1	2	3	4	5	6	7
		ಶ್ರೀರಂಗಪಟ್ಟಣ	26-02-99	ಮಾಕ್ಸಿಕ್ಯಾಬ್ ಹಾಗೂ ಖಾಸಗಿ ಬಸ್‌ಗಳಲ್ಲಿ ಹೆಚ್ಚಿನ ಪ್ರಯಾಣಿಕರನ್ನು ಸಾಗಿಸುವ ಬಗ್ಗೆ.	ನಿಗಧಿತ ಪ್ರಯಾಣಿಕರಿಗಿಂತ ಹೆಚ್ಚಿನ ಪ್ರಯಾಣಿಕರನ್ನು ಒಯ್ಯುವ ವಾಹನಗಳ ವಿರುದ್ಧ ಕ್ರಮ ಜರುಗಿಸುತ್ತಿದ್ದು ಅದರ ಪರ್ಯಾಯ ವ್ಯವಸ್ಥೆ ಮಾಡಲು ವಾಹನಗಳ ಕೊರತೆ ಇರುವು-ದರಿಂದ ಇದು ಸಾಧ್ಯವಾಗುತ್ತಿಲ್ಲ.	
				ಕೃಷ್ಣರಾಜಸಾಗರಕ್ಕೆ ಬರುವ ಹೊರ ರಾಜ್ಯದ ಪ್ರಯಾಣಿಕರಿಗೆ ಕಿರುಕುಳದ ಬಗ್ಗೆ.	ಹೊರ ರಾಜ್ಯದಿಂದ ಬರುವ ವಾಹನಗಳು ಕರ್ನಾಟಕ ರಾಜ್ಯಕ್ಕೆ ತೆರಿಗೆ ಪಾವತಿಸದೇ ಇರುವುದರಿಂದ ತಪಾಸಣೆ ಮಾಡುತ್ತಿದ್ದು 22-2-99ರಂದು 1.5 ಲಕ್ಷ ರಾಜಸ್ವ.	
	ಕೊಡಗು	ಮಡಿಕೇರಿ	20-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಸೋಮವಾರ ಪೇಟೆ	23-02-99	--- " ---		
		ವಿರಾಜಪೇಟೆ	25-02-99	--- " ---		
	ಹಾಸನ	ಹಾಸನ	29-01-99	ಮಾಕ್ಸಿಕ್ಯಾಬ್‌ಗಳಲ್ಲಿ ಹೆಚ್ಚಿನ ಜನರನ್ನು ಕೊಂಡೊಯ್ಯುವ ಬಗ್ಗೆ.	ತಪಾಸಣೆ ಹೆಚ್ಚಿಸಲಾಗಿದೆ.	
		ಅಲೂರು	30-01-99	ಸರಕು ಸಾಗಾಣಿ ವಾಹನಗಳಲ್ಲಿ ಜನರನ್ನು ಕೊಂಡೊಯ್ಯುವ ಬಗ್ಗೆ.	-- " --	

1	2	3	4	5	6	7
		ಬೇಲೂರು	6-2-99	ಸರಕು ಸಾಗಾಣಿ ವಾಹನಗಳಲ್ಲಿ ಜನರನ್ನು ಸಾಗಿಸುವ ಬಗ್ಗೆ.	ತಪಾಸಣೆ ಹೆಚ್ಚಿಸಲಾಗಿದೆ.	
		ಅರಕಲಗೂಡು	2-2-99	ಮಾಕ್ಸಿಕ್ಯಾಬ್‌ಗಳಲ್ಲಿ ಹೆಚ್ಚಿನ ಜನರನ್ನು ಕೊಂಡೊಯ್ಯುವ ಬಗ್ಗೆ.	ತಪಾಸಣೆ ಹೆಚ್ಚಿಸಲಾಗುವುದು.	
		ಚನ್ನರಾಯಪಟ್ಟಣ	9-2-99	--- " ---	-- " --	
		ಹೊಳೇನರಸೀಪುರ	10-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಯಾವುದೇ ಅಹವಾಲು ಇಲ್ಲ.		
		ಸಕಲೇಶಪುರ	12-2-99	ಮಾಕ್ಸಿಕ್ಯಾಬ್‌ಗಳಲ್ಲಿ ಹೆಚ್ಚಿನ ಜನರನ್ನು ಸಾಗಿಸುವ ಬಗ್ಗೆ.	ತಪಾಸಣೆ ಹೆಚ್ಚಿಸಲಾಗುವುದು.	
		ಅರಸೀಕೆರೆ	4-2-99	ಅಪ್ರಾಪ್ತ ವಯಸ್ಸಿನವರು ಚಾಲನೆ ಮಾಡುವ ಬಗ್ಗೆ.	ತಪಾಸಣೆ ಮಾಡಲಾಗುತ್ತದೆ.	
	ಶಿವಮೊಗ್ಗ	ಶಿವಮೊಗ್ಗ	6-2-99	1) ಬಸ್ಸುಗಳಲ್ಲಿ ಟೇಪ್‌ರೇಕಾರ್ಡ್ ಬಳಸುವುದನ್ನು ನಿಲ್ಲಿಸಬೇಕು.		
				2) ಶಿವಮೊಗ್ಗ ನಗರದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿ ವಾಯು ಮಾಲಿನ್ಯ ಹೆಚ್ಚಾಗಿರುವ ಕಾರಣ ವಾಯುಮಾಲಿನ್ಯ ತಪಾಸಣೆ ಮಾಡುವಂತೆ ಕೋರಿದ್ದಾರೆ.		
				3) ರಾಷ್ಟ್ರ ರಸ್ತೆ ಸಾರಿಗೆ ಬಸ್ ನಿಲ್ದಾಣದ ಮತ್ತು ಸುತ್ತಮುತ್ತಲು ಜಾಗದಲ್ಲಿ ಪ್ರಯಾಣಿಕರನ್ನು ಟ್ಯಾಕ್ಷಿಯವರು ಕೊಂಡ್ಯೊಯುವುದನ್ನು ನಿಲ್ಲಿಸಬೇಕು.		
				4)ಅಕ್ರಮವಾಗಿ ಓಡಾಡುತ್ತಿರುವ ಟ್ಯಾಕ್ಷಿಗಳ ನಿಲುಗಡೆ.		

1	2	3	4	5	6	7
		ಭದ್ರಾವತಿ	9-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಯಾವುದೇ ಅಹವಾಲು ಇಲ್ಲ.		
		ತೀರ್ಥಪುರ	12-2-99	1) ಬಸ್ ನಿಲುಗಡೆ ಬಗ್ಗೆ 2) ಗೊಣ್ಣ ಗ್ರಾಮಕ್ಕೆ ಬಸ್ ಸೌಲಭ್ಯ ನೀಡುವ ಬಗ್ಗೆ. 3) ಸಂತೆಗೆ ಹೋಗಲು ಬಸ್ ಸೌಕರ್ಯ	ಕ್ರಮ ಕೈಗೊಂಡಿದೆ. ಸೆ.72(2)ರಲ್ಲಿ ಸಾರಿಗೆ ಸೌಲಭ್ಯ ನೀಡಲು ನಿರ್ದೇಶನ ನೀಡಲಾಗಿದೆ —"—
		ತೀರ್ಥಹಳ್ಳಿ	18-2-99	1) ವಿದ್ಯಾರ್ಥಿಗಳಿಗೆ ರಿಯಾಯಿತಿ ಪ್ರಯಾಣ ದರ 2) ಬಸ್ ನಿಲುಗಡೆ. 3) ಗ್ರಾಮಾಂತರ ಬಸ್ ಸೌಕರ್ಯ 4) ಟ್ರಾಫಿಕ್ ಬಾಡಿಗೆಗೆ ಓಡಿಸುವ ಬಗ್ಗೆ	ಮಾಲೀಕರುಗಳಿಗೆ ಭರವಸೆ ಮುಂದಿನ ಸಲ ಕ್ರಮ ತೆಗೆದು ಕೊಂಡಿದೆ, ನಿರ್ದೇಶನ ನೀಡಲಾಗಿದೆ. ತಪಾಸಣೆ ಮಾಡಲಾಗುವುದು.	
		ಸಾಗರ	11-2-99	ಬಸ್ ನಿಲುಗಡೆ ಗ್ರಾಮಾಂತರ ಪ್ರದೇಶಕ್ಕೆ ಸಾರಿಗೆ ಸೌಲಭ್ಯ. ಸಾಗರಕ್ಕೆ ಸಿಟಿ ಬಸ್ ಬೇಡದಿರುವ ಬಗ್ಗೆ.		
		ಸೊರಬ	16-2-99	ಗ್ರಾಮಾಂತರ ಬಸ್ ಸೌಲಭ್ಯ		
		ಹೊಸನಗರ	10-2-99	—"— ಆಟೋರಿಕ್ಷಾ ಪರವಾನಿಗೆ		

1	2	3	4	5	6	7
16.	ಚಿತ್ರದುರ್ಗ	ಚಿತ್ರದುರ್ಗ	20-2-99	ಅಹವಾಲುಗಳು ಇಲ್ಲ.		
		ಚಳ್ಳಕೆರೆ	23-2-99	1) ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ (ನಗರ ಸಾರಿಗೆ ರೂಪದಲ್ಲಿ)		
				2) ರಹದಾರಿಗೆ ನಿಗಧಿಪಡಿಸಿದ ವೇಳಾ ಪಟ್ಟಿಯಂತೆ ಬಸ್ಸು ಓಡಿಸಲು.		
		ಹಿರಿಯೂರು	24-2-99	--"--		
		ಹೊಳಲ್ಕೆರೆ	25-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ		
		ಹೊಸದುರ್ಗ	26-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ		
		ಮೊಳಕಾಲ್ಮೂರು	27-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ		
	ದಾವಣಗೆರೆ	ದಾವಣಗೆರೆ	28-1-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ		
		ಚನ್ನಗಿರಿ	29-1-99	ಚನ್ನಗಿರಿ ಸುತ್ತಮುತ್ತಲು 10 ಕಿ.ಮಿ. ದೂರದ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕುರಿತು.	ಖಾಸಗಿ ಮಾಲೀಕರಿಗೆ ರಹದಾರಿಗಾಗಿ ಅರ್ಜಿ ಸಲ್ಲಿಸಲು ತಿಳಿಸಿದ್ದು ಅರ್ಜಿ ಬಂದ ತಕ್ಷಣ ರಹದಾರಿ ಮಂಜೂರು ಮಾಡಲಾಗುವುದು.	

1	2	3	4	5	6	7
		ಹರಪನಹಳ್ಳಿ	8-2-99	ದ್ವಿಚಕ್ರ ವಾಹನಗಳ ಚಾಲಕರು ಲೈಸನ್ಸ್ ಇಲ್ಲದೇ ವಾಹನ ನಡೆಸುವ ಬಗ್ಗೆ.	ಕ್ಯಾಂಪ್‌ಗಳಲ್ಲಿ ಲೈಸನ್ಸ್ ಪಡೆಯಲು ತಿಳಿಸಲಾಯಿತು.	
		ಹೊನ್ನಾ.ಳಿ	15-2-99	ಮ್ಯಾಪ್ಸಿಕ್ಯಾಬ್ ಹಾವಳಿ ಬಗ್ಗೆ (ಮೌಖಿಕ)		
		ಹರಿಹರ	22-2-99	--"--		
		ಜಗಳೂರು	5-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
	ಚಿಕ್ಕಮಗಳೂರು	ಚಿಕ್ಕಮಗಳೂರು	16-2-99	ಮ್ಯಾಪ್ಸಿಕ್ಯಾಬ್ ಮತ್ತು ಟೆಂಪೊಗಳಿಂದಾಗುತ್ತಿರುವ ತೊಂದರೆ.	ತಪಾಸಣೆ ಮಾಡಲಾಗುವುದು.	
		ಕಡೂರು	18-2-99	ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಇಲ್ಲ.		
		ಕೊಪ್ಪ	20-2-99	1) ಕೊಪ್ಪದಿಂದ ತಲಮಕ್ಕಿ ಗ್ರಾಮಕ್ಕೆ ಬಸ್ ನಿಲುಗಡೆ 2) ಜಯಪುರದಿಂದ ಆಲಗೇಶ್ವರ ಕೊರಡಿ ಹಿತ್ತಲು ಮಾರ್ಗ ಕೊಪ್ಪಕ್ಕೆ ಬಸ್ಸು.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಇಟ್ಟು ತೀರ್ಮಾನ ತೆಗೆದು ಕೊಳ್ಳಲಾಗುವುದು.	
		ಎನ್.ಆರ್‌ಪುರ	23-2-99	ಸಾರಿಗೆ ಇಲಾಖೆಯ ಬಗ್ಗೆ ಅಹವಾಲು ಇಲ್ಲ.		
		ಶೃಂಗೇರಿ	24-2-99	ವಿಗಾ ಗ್ರಾಮಕ್ಕೆ ಬಸ್ ಸೌಲಭ್ಯ ಎಜೆಂಟ್ ಲೈಸನ್ಸ್‌ಗಾಗಿ ಕೋರಿಕೆ	ನಿಯಮಗಳನ್ವಯ ಅರ್ಜಿ ಸಲ್ಲಿಸಲು ತಿಳಿಸಲಾಯಿತು	

1	2	3	4	5	6	7
		ಮೂಡಿಗೆರೆ	27-2-99	ಸಾರಿಗೆ ಇಲಾಖೆಯ ಅಹವಾಲು ಇಲ್ಲ.		
		ತರೀಕೆರೆ	19-2-99	ದುಗ್ಲಾಪುರ ಗ್ರಾಮಕ್ಕೆ ಹೆಚ್ಚುವರಿ ಬಸ್ ಸೌಕರ್ಯ.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಮುಂದೆ ಮಂಡಿಸಿ ಕ್ರಮ ತೆಗೆದು ಕೊಳ್ಳಲಾಗುವುದು.	

ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳು.

113(7) ಶ್ರೀ ಉಚ್ಚೆಂಗೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 28-2-1999ರವರೆಗೆ ಆಶ್ರಯ ಅಂಬೇಡ್ಕರ್ ಯೋಜನೆಯನ್ನು ತಾಲ್ಲೂಕುವಾರು ನಿಗದಿ ಮಾಡಿದ ಗುರಿ ಎಷ್ಟು;

ಆ) 28-2-1999ರವರೆಗೆ ಬಿಡುಗಡೆ ಮಾಡಿದ ಹಣವೆಷ್ಟು; ಖರ್ಚಾದ ಹಣವೆಷ್ಟು;

ಇ) ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿಯಲ್ಲಿ ದಿನಾಂಕ :31-3-98 ರಿಂದ 28-2-1999ರವರೆಗೆ ತಾಲ್ಲೂಕುವಾರು ನಿಗದಿ ಮಾಡಿದ ಗುರಿಯನ್ನು ಅನುಬಂಧ - 1 ಮತ್ತು 2 ರಲ್ಲಿ ನೀಡಲಾಗಿದೆ.

ಆ)

ಲಕ್ಷ ರೂ.ಗಳಲ್ಲಿ

	ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ
ಆಶ್ರಯ	4528.00	4528.00
ಅಂಬೇಡ್ಕರ್	2386.00	130.83

ಇ) ಆದಷ್ಟು ಬೇಗನೆ ಬಿಡುಗಡೆ ಮಾಡಲಾಗುವುದು.

ಅನುಬಂಧ - 1

ASHRAYA HOUSES TARGET FOR THE YEAR 1998-99

I District : BANGALORE URBAN

Sl. No.	Taluk	Target for 1998-99
1	2	3
1.	BANGALORE URBAN DIST.	
1	Anekal	350
2	Bangalore(North)	350
3	Bangalore(South)	350
	Total	1050
II.	District : BANGALORE RURAL	
4	Channapatna	1175
5	Devanahalli	925
6	Doddaballapur	375
7	Hoskote	1025
8	Kanakapura	1025
9	Magadi	375
10	Nelamangala	725
11	Ramanagara	375
	Total	6000

1	2	3
III.	District : BELGAUM	
12	Athani	975
13	Belgaum	675
14	Chikkodi	1325
15	Gokak	975
16	Hukkeri	1025
17.	Khanapur	375
18	Parasgad	925
19	Ramadurga	675
20	Raibagh	375
21	Sampangaon	475
	Total	7800
IV	District : BELLARY	
22	Bellary	425
23	Hadagalli	975
24	Hagaribommanahalli	400
25	Hospet	575
26	Kudligi	1425
27	Sandur	375
28	Siraguppa	925
	Total	5100

1	2	3
V	District : BIDAR	
29	Aurad	375
30	Basavakalyana	925
31	Bhalki	375
32	Bidar	575
33	Humnabad	925
	Total	3175
VI	District : BIJAPUR	
34	Basavanabagewadi	875
35	Bijapur	1425
36	Indi	675
37	Muddebihal	1075
38	Sindagi	1025
	Total	5075
VII	District : BAGALKOT	
39	Bagalkot	425
40	Badami	375
41	Bilgi	375
42	Hungund	425
43	Jamakhandi	375
44	Mudhol	375
	Total	2350

1	2	3
VIII	District : CHIKMAGALUR	
45	Chikmagalur	475
46	Kadur	1525
47	Koppa	250
48	Mudigere	675
49	Narasimrajapura	250
50	Shringeri	250
51	Tarikere	725
	Total	4150
IX	District : CHITRADURGA	
52	Challakere	1025
53	Chitradurga	1525
54	Hiriyur	725
55	Holalkere	725
56	Hosadurga	725
57	Molakalmuru	675
	Total	5400
XI	District : DAVANGERE	
58	Davangere	525
59	Channagiri	1900
60	Honnali	400
61	Harihar	675
62	Harpanahalli	725
63	Jagalur	425
	Total	4650

1	2	3
XI	Distrrict : DAKSHINA KANNADA	
64	Mangalore	575
65	Bantwal	625
66	Beltangadi	725
67	Puttur	675
68	Sulya	375
	Total	2975
XII	District : UDUPI	
69	Udupi	875
70	Karkal	975
71	Kundapura	375
	Total	2225
XIII	District : DHARWAD	
72	Dharwad	350
73	Hubli	350
74	Kalaghatgi	675
75	Kundagol	675
76	Navalgund	375
	Total	2425
XIV	District : GADAG	
77	Gadag	375
78	Mundargi	1025
79	Naragund	375
80	Ron	1225
81	Shirahatti	675
	Total	3675

1	2	3
XV	District : HAVERI	
82	Haveri	725
83	Byadagi	375
84	Hangal	775
85	Hirekerur	425
86	Ranebennur	675
87	Savanur	375
88	Shiggaon	475
	Total	3825
XVI	District : GULBARGA	
89	Afzalpur	1675
90	Aland	1275
91	Chincholi	875
92	Chittapur	1025
93	Gulbarga	975
94	Jewargi	1275
95	Sedam	675
96	Shahpur	1025
97	Shorapur	1075
98	Yadgir	1175
	Total	11050

1	2	3
XVII	District : HASSAN	
99	Alur	250
100	Arakalgud	775
101	Arsikere	1025
102	Beluru	1025
103	Channarayapatna	2175
104	Hassan	1675
105	Holenarasipur	1825
106	Sakleshpur	675
	Total	9425
XVIII	District : KODAGU	
107	Madikeri	350
108	Somwarpet	375
109	Virajpet	375
	Total	1100
XIX	District : KOLAR	
110	Bagepalli	775
111	Bangarpet	675
112	Chickballapur	405
113	Chintamani	1125
114	Gowribidnur	925
115	Gudibanda	350

1	2	3
116	Kolar	1075
117	Malur	1025
118	Mulbagal	1275
119	Sidlaghatta	375
120	Srinivaspur	1275
	Total	9280
XX	District : MANDYA	
121	Krishnarajpet	1310
122	Maddur	925
123	Malavalli	1425
124	Mandya	1775
125	Nagamangala	1025
126	Pandavapura	775
127	Srirangapatna	1025
	Total	8260
XXI	District : MYSORE	
128	Mysore	1675
129	Heggadadevanakote	675
130	Hunsur	1675
131	Krishnarajanagara	1500
132	Nanjangud	1225
133	Periyapatna	1025
134	T.Narasipura	1275
	Total	9050

1	2	3
XXII	District : CHAMARAJANAGAR	
135	Chamrajnagar	1025
136	Gundlupet	750
137	Kollegal	675
138	Yalendur	375
	Total	2825
XXIII	District : RAICHUR	
139	Raichur	1275
140	Devadurga	1225
141	Lingasugur	1225
142	Manvi	2125
143	Sindhnur	775
	Total	6625
144	Gangavathi	525
145	Koppal	725
146	Kushtagi	825
147	Yelburga	675
	Total	4370
XXV	District : SHIMOGA	
148	Shimoga	575
149	Bhadravathi	1075
150	Hosnagar	375
151	Sagar	675
152	Shikaripura	775
153	Sorab	675
154	Thirthahalli	625
	Total	4775

1	2	3
XXVI	District : TUMKUR	
155	Chikkanayakanahalli	675
156	Gubbi	775
157	Koratagere	1075
158	Kunigal	1085
159	Madhugiri	775
160	Pavagada	775
161	Sira	1125
162	Tiptur	655
163	Tumkur	725
164	Turuvekere	1025
	Total	8690
XXVII	District : UTTARA KANNADA	
165	Ankola	375
166	Bhatkal	475
167	Haliyal	875
168	Honnaver	475
169	Karwar	1025
170	Kumta	375
171	Mundagod	250
172	Siddapur	375
173	Sirsi	775
174	Supa	300
175	Yellapura	375
	Total	5675
	Grand Total	141000

ಅನುಬಂಧ - 2

1998-99ನೇ ಸಾಲಿನ ಅಂಬೇಡ್ಕರ್ ವಸತಿ ಯೋಜನೆಯಲ್ಲಿ ನಿಗಧಿಪಡಿಸಿರುವ ತಾಲ್ಲೂಕುವಾರು ಗುರಿ.

I District : BANGALORE URBAN

Sl. No.	Taluk	Target for 1998-99
1	2	3
1.	BANGALORE URBAN DIST.	
1	Anekal	155
2	Bangalore(North)	137
3	Bangalore(South)	175
	Total	467
II.	District : BANGALORE RURAL	
4	Channapatna	77
5	Devanahalli	106
6	Doddaballapur	117
7	Hoskote	155
8	Kanakapura	146
9	Magadi	93
10	Nelamangala	85
11	Ramanagara	79
	Total	858

1	2	3
III.	District : BELGAUM DIST	
12	Athani	128
13	Belgaum	80
14	Chikkodi	151
15	Gokak	144
16	Hukkeri	107
17	Khanapur	44
18	Parasgad	73
19	Ramadurg	63
20	Raybag	117
21	Sampangaon	54
	Total	961
IV	District : BELLARY	
22	Bellary	130
23	Hadagalli	77
24	Hagaribommanahalli	63
25	Hospet	130
26	Kudligi	270
27	Sandur	135
28	Siraguppa	87
	Total	892

1	2	3
V	District : BIDAR	
29	Aurad	169
30	Basavakalyana	183
31	Bhalki	134
32	Bidar	138
33	Humnabad	196
	Total	820
VI	District : BIJAPUR	
34	Basavanabagewad	112
35	Bijapur	178
36	Indi	139
37	Muddebihal	86
38	Sindagi	156
	Total	671
VII	District : BAGALKOT	
39	Bagalkot	64
40	Badami	67
41	Bilgi	68
42	Hungund	69
43	Jamakhandi	94
44	Mudhol	82
	Total	464

1	2	3
VIII	District : CHIKMAGALUR	
45	Chikmagalur	112
46	Kadur	149
47	Koppa	42
48	Mudigere	120
49	Narasimrajapura	23
50	Shringeri	16
51	Tarikere	102
	Total	564
IX	District : CHITRADURGA	
52	Challakere	345
53	Chitradurga	279
54	Hiriyur	191
55	Holalkere	155
56	Hosadurga	122
57	Molakalmuru	138
	Total	1230
XI	District : DAVANGERE	
58	Davangere	213
59	Channagiri	358
60	Honnali	115
61	Harihar	100
62	Harpanahalli	189
63	Jagalur	153
	Total	1128

1	2	3
XI	Distrrict : DAKSHINA KANNADA	
64	Mangalore	33
65	Bantwal	83
66	Beltangadi	79
67	Puttur	100
68	Sulya	96
	Total	391
XII	District : UDUPI	
69	Udupi	82
70	Karkal	81
71	Kundapura	66
	Total	229
XIII	District : DHARWAD	
72	Dharwad	38
73	Hubli	25
74	Kalaghatgi	35
75	Kundagol	33
76	Navalgund	30
	Total	161
XIV	District : GADAG	
77	Gadag	60
75	Mundargi	96
76	Naragund	22
77	Ron	62
78	Shirahatti	65
	Total	305

1	2	3
XV	District : HAVERI	
82	Haveri	68
83	Byadagi	56
84	Hangal	109
85	Hirekerur	96
86	Ranebennur	122
87	Savanur	43
88	Shiggaon	41
	Total	535
XVI	District : GULBARGA	
89	Afzalpur	325
90	Aland	188
91	Chincholi	159
92	Chittapur	159
93	Gulbarga	168
94	Jewargi	124
95	Sedam	83
96	Shahpur	160
97	Shorapur	187
98	Yadgir	258
	Total	1811

1	2	3
XVII	District : HASSAN	
99	Alur	46
100	Arakalgudu	80
101	Arsikere	167
102	Beluru	180
103	Channarayapatna	58
104	Hassan	121
105	Holenarasipur	314
106	Sakleshpur	75
	Total	1041
XVIII	District : KODAGU	
107	Madikeri	37
108	Somwarpet	78
109	Virajpet	139
	Total	254
XIX	District : KOLAR	
110	Bagepalli	102
111	Bangarpet	165
112	Chickballapur	118
113	Chintamani	219
114	Gowribidnur	210
115	Gudibanda	36
116	Kolar	184

1	2	3
117	Malur	134
118	Mulbagal	159
119	Sidlaghatta	113
120	Srinivaspur	166
	Total	1606
XX	District : MANDYA	
121	Krishnarajpet	93
122	Maddur	111
123	Malavalli	156
124	Mandya	88
125	Nagamangala	92
126	Pandavapura	42
127	Srirangapatna	74
	Total	656
XXI	District : MYSORE	
128	Mysore	89
129	Heggadadevanakote	179
130	Hunsur	142
131	Krishnarajanagara	63
132	Nanjangud	155
133	Periyapatna	87
134	T.Narasipura	200
	Total	915

1	2	3
XXII	District : CHAMARAJANAGAR	
135	Chamrajnagar	158
136	Gundlupet	86
137	Kollegal	201
138	Yalendur	71
	Total	516
XXIII	District : RAICHUR	
139	Raichur	97
140	Devadurga	225
141	Lingasugur	137
142	Manvi	220
143	Sindhnur	143
	Total	822
144	Gangavathi	204
145	Koppal	142
146	Kushtagi	73
147	Yelburga	88
	Total	507
XXV	District : SHIMOGA	
148	Shimoga	113
149	Bhadravathi	142
150	Hosnagar	26

1	2	3
151	Sagar	34
152	Shikaripura	113
153	Sorab	99
154	Thirthahalli	53
	Total	600
XXVI	District : TUMKUR	
155	Chikkanayakanahalli	114
156	Gubbi	150
157	Koratagere	102
158	Kunigal	69
159	Madhugiri	219
160	Pavagada	258
161	Sira	205
162	Tiptur	71
163	Tumkur	164
164	Turuvekere	54
	Total	1406
XXVII	District : UTTARA KANNADA	
165	Ankola	13
166	Bhatkal	48
167	Haliyal	12
168	Honnavar	17

1	2	3
169	Karwar	6
170	Kumta	14
171	Mundagod	27
172	Siddapur	16
173	Sirsi	21
174	Supa	7
175	Yellapura	7
	Total	190
	Grand Total	20000

ನೆರೆ ಹಾವಳಿಯಿಂದ ಪೀಡಿತವಾದ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಹಣ.

118(428) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಇತ್ತೀಚೆಗೆ ನೆರೆ ಹಾವಳಿಯಿಂದ ಪೀಡಿತವಾದ ಜಿಲ್ಲೆಗಳಿಗೆ ಈವರೆಗೆ ಬಿಡುಗಡೆ ಮಾಡಿದ ಹಣ ಎಷ್ಟು? ಖರ್ಚಾದ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಕೇಂದ್ರ ಸರ್ಕಾರದಿಂದ ಪರಿಹಾರವಾಗಿ 50 ಕೋಟಿ ರೂಗಳನ್ನು ಪಡೆಯಲಾಗಿದೆಯೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

1) ರೂ. 74.68 ಕೋಟಿ ಬಿಡುಗಡೆ ಆಗಿದೆಯು ಬಿಡುಗಡೆ ಬಗ್ಗೆ ಹಾಗೂ ವೆಚ್ಚ ಬಗ್ಗೆ ವಿವರ ಅನುಬಂಧದಲ್ಲಿ ನೀಡಲಾಗಿದೆ.

2) ಹೌದು; ಪಡೆಯಲಾಗಿದೆ.

ANNEXURE

STATEMENT SHOWING THE DISTRICT-WISE DETAILS OF AMOUNT RELEASED AND EXPENDIFUTE INCURRED TOWARDS FLOOD RELIEF MEASURES IN 1998-99

RS. IN LAKHS

Sl. No.	Name of the District	Amt. Relsd.	Expr.incur As on 31.1.99
1.	Bangalore Urban	100.0	31.56
2.	Bangalore Rural	100.0	32.20
3	Kolar	100.0	101.40
4	Tumkur	100.0	74.75
5	Chitradurga	160.0	41.69
6	Davangere	150.0	97.00
7	Shimoga	123.0	66.76
8	Mysore	100.0	10.51
9	Chamarajanagar	100.0	37.12
10	Mandya	215.0	46.36
11	Chickmagalur	100.0	63.97
12	Hassan	100.0	79.87
13	Kodagu	200.0	243.76
14	D.Kannada	254.5	194.31

Sl. No.	Name of the District	Amt. Relsd.	Expr.incur As on 31.1.99
15	Udupi	155.5	115.31
16	Gulbarga	732.0	330.68
17	Bidar	433.0	295.31
18	Raichur	569.0	393.11
19	Koppal	271.0	257.99
20	Bellary	450.0	241.89
21	Belgaum	100.0	98.97
22	Bijapur	780.0	529.47
23	Bagalkote	110.0	146.47
24	Dharwad	110.0	136.59
25	Gadag	119.0	56.99
26	Haveri	100.0	59.98
27	U. Kannada	136.0	107.58
28	P.W.D	800.0	0
29	Minor Irrigation	600	0
30	Health & F.W.S.	100	0
	Total	7468.0	3871.61

ಮಾಗಡಿ-ಬೆಂಗಳೂರು ಸಾರಿಗೆ ವ್ಯವಸ್ಥೆ.

119(270) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನಿಂದ ಮಾಗಡಿಗೆ ಸಂಚರಿಸುತ್ತಿರುವ ಬಿ.ಎಂ.ಟಿ.ಸಿ. ಹಾಗೂ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಸಂಖ್ಯೆ ಎಷ್ಟು; ಸಾಕಷ್ಟು ಪ್ರಮಾಣದಲ್ಲಿ ಸಾರಿಗೆ ಸಂಸ್ಥೆಯ ಬಸ್ ಸಂಚಾರವಿಲ್ಲದೆ ಮಾಗಡಿ- ಬೆಂಗಳೂರು ಸಾರಿಗೆ ವ್ಯವಸ್ಥೆಯಲ್ಲಿ ಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳುಲಿರುವ ಕ್ರಮವೇನು?

ಇ) ಶೃಂಗೇರಿ, ಮಂಗಳೂರು, ಧರ್ಮಸ್ಥಳ ಹೊರನಾಡು ಮತ್ತು ಚಿಕ್ಕಮಗಳೂರು ಮುಂತಾದ ದೂರದ ಪ್ರದೇಶಗಳಿಗೆ ನೆಲಮಂಗಲ ಮಾರ್ಗವಾಗಿ ಸಂಚರಿಸುವಂತೆ ಮಾಡುವ ಯೋಜನೆ ಸರ್ಕಾರಕ್ಕಿದೆಯೆ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬಂದಿದೆ.

ಆ) ಬೆಂಗಳೂರು-ಮಾಗಡಿ ಮಾರ್ಗವು ರಾಷ್ಟ್ರೀಕೃತವಲ್ಲದ ವಲಯದಲ್ಲಿ ಇರುತ್ತದೆ. ಈ ವಲಯದಲ್ಲಿ ಖಾಸಗಿ ಬಸ್ ಮಾಲೀಕರು ಪ್ರಯಾಣಿಕರ ಒತ್ತಡಕ್ಕೆ ಅನುಗಣವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿರುತ್ತಾರೆ. ಪ್ರಯಾಣಿಕರ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಬೆಂಗಳೂರು-ಮಾಗಡಿ ನಡುವೆ ಪ್ರತ್ಯೇಕ 8 ಸಿಂಗಲ್ ಟ್ರಿಪ್‌ಗಳನ್ನು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 7 ಬಸ್ಸುಗಳಿಂದ ಒಟ್ಟು 38 ಏಕಮುಖ ಸುತ್ತುವಳಿಯ ಕಾರ್ಯಾಚರಣೆ ಮಾಡಲಾಗುತ್ತಿವೆ.

ಇ) ಇಲ್ಲ.

ಮಾಗಡಿ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳು.

120(271) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97, 97-98 ಮತ್ತು 1998-99 ನೇ ಸಾಲಿನವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಅಂಗನವಾಡಿ ಕಟ್ಟಡಗಳನ್ನು ಕಟ್ಟಲಾಗಿದೆ. ಅವುಗಳು ಯಾವುವು ಇವುಗಳಿಗೆ ವ್ಯಯಿಸಿದ ಹಣವೆಷ್ಟು; (ವಿವರ ನೀಡುವುದು)

ಆ) ಮಾಗಡಿ ಕ್ಷೇತ್ರದ ಹಲವಾರು ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಇವುಗಳ ಸಂಖ್ಯೆ ಎಷ್ಟು; ಈ ಬಗ್ಗೆ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :—

ಅ) 1996-97, 97-98 ಮತ್ತು 98-99ನೇ ಸಾಲಿನವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 19 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ಅಂಗನವಾಡಿ ಕಟ್ಟಡಗಳ ವಿವರಗಳನ್ನು ಹಾಗೂ ಇವುಗಳಿಗೆ ವ್ಯಯಿಸಲಾದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು. 106 ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ಇರುವುದಿಲ್ಲ. ಅಂಗನವಾಡಿ ಕಟ್ಟಡಗಳನ್ನು ಹಂತಹಂತವಾಗಿ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮಾಗಡಿಯ ಶ್ರೀರಂಗನಾಥಸ್ವಾಮಿ ದೇವಾಲಯದ ಅಭಿವೃದ್ಧಿ.

121(272) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಮಾಗಡಿ ಶ್ರೀ ರಂಗನಾಥಸ್ವಾಮಿ ದೇವಾಲಯದ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದವರು ಪರಿಶೀಲಿಸುವರೆ.

2) ಹಾಗಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1) ಈವರೆಗೆ ದೇವಾಲಯದ ಅಭಿವೃದ್ಧಿ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿರುವುದಿಲ್ಲ. ಸ್ಥಳೀಯ ಭಕ್ತಾದಿಗಳು ಮುಂದೆ ಒಂದು ದೇವಾಲಯದ ಅಭಿವೃದ್ಧಿಗೆ ಅನುದಾನ ಕೋರಿ ನಿಯಮಾನುಸಾರ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ, ಪರಿಶೀಲಿಸಲಾಗುವುದು.

2) ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಗಡಿ ಕ್ಷೇತ್ರಕ್ಕೆ ಕೃಷಿ ಇಲಾಖೆಯಿಂದ ಅಭಿವೃತಿ ಕಾಮಗಾರಿ.

122(273) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಕೃಷಿ ಹಾಗೂ ತೋಟಗಾರಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1994-1996ನೇ ಸಾಲಿನಿಂದ 1998-99ನೇ ಸಾಲಿನವರೆಗೆ ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ವಿವಿಧ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ. ಸದರಿ ಯೋಜನೆಗಳಿಗೆ ವ್ಯಯಿಸಿದ ಹಣವೆಷ್ಟು? (ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಹಾಗೂ ತೋಟಗಾರಿಕ ಸಚಿವರು) :—

ಅ) 1994-95ನೇ ಸಾಲಿನಿಂದ 1998-99ರ ಫೆಬ್ರವರಿ ಮಾಹೆಯವರೆಗೆ ಕೃಷಿ ಇಲಾಖೆಯ ವತಿಯಿಂದ ರಾಜ್ಯವಲಯ, ಜಿಲ್ಲಾವಲಯ, ಹಾಗೂ ಇತರ ಮೂಲಗಳಿಂದ

ಬೆಳೆ ಸಂಗೋಪನಾ ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಜಲಾನಯನ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಸದರಿ ಯೋಜನೆಗಳಿಗೆ ಮತ್ತು ಸದರಿ ಅವಧಿಯಲ್ಲಿ ರೂ. 337.933 ಲಕ್ಷಗಳನ್ನು ಮಾಡಲಾಗಿದೆ. ವಿವರಗಳನ್ನು ಅನುಬಂಧ-1 ಮತ್ತು 2 ರಲ್ಲಿ ನಮೂದಿಸಲಾಗಿದೆ.

ಅನುಬಂಧ-1

ಬೆಳೆ ಸಂಗೋಪನೆ ವಿವಿಧ ಯೋಜನೆಯಲ್ಲಿ ಸಾಧಿಸಿದ ಪ್ರಗತಿ ವಿವರ
1994-95 ರಿಂದ 1998-99ನೆ ಫೆಬ್ರವರಿ ಮಾಹೆಯವರೆಗೆ

ಕ್ರ.ಸಂ.	ಯೋಜನೆಯ ಹೆಸರು	ಸಾಧನೆ	
		ಬೌತಿಕ (ಸಂಖ್ಯೆ)	ಆರ್ಥಿಕ (ಲಕ್ಷ ರೂ.ಗಳಲ್ಲಿ)
	ಅ. ಜಿಲ್ಲಾವಲಯ ಯೋಜನೆಗಳು		
1)	ಹಸಿರು ಮತ್ತು ಮಿಶ್ರ ಗೊಬ್ಬರ	29	0.214
2)	ಸಸ್ಯ ಸಂರಕ್ಷಣೆ	989	1.975
3)	ಸಮಗ್ರ ಏಕದಳ ಅಭಿವೃದ್ಧಿ ಯೋಜನೆ	923	4.277
4)	ರಾಷ್ಟ್ರೀಯ ದ್ವಿದಳಧಾನ್ಯ ಅಭಿವೃದ್ಧಿ ಯೋಜನೆ	411	1.718
5)	ಎಣ್ಣೆಕಾಳು ಅಭಿವೃದ್ಧಿ ಯೋಜನೆ	1903	11.961
6)	ವಿಶೇಷ ಘಟಕ ಯೋಜನೆ	106	1.715
7)	ಗಿರಿಜನ ಉಪಯೋಜನೆ	25	0.198
	ಒಟ್ಟು	4386	22.658
	ಆ. ರಾಜ್ಯವಲಯ ಯೋಜನೆಗಳು		
1)	ವಿಶೇಷ ಘಟಕ ಯೋಜನೆ	83	1.084
2)	ಗಿರಿಜನ ಉಪಯೋಜನೆ	54	0.529
3)	ಪವರ್ ಟಿಲ್ಲರ್	7	1.050
4)	ಸಸ್ಯ ಸಂರಕ್ಷಣೆ	1181	1.752
5)	ಸಾವಯವ ಕೃಷಿ ಯೋಜನೆ	369	0.793
6)	ಕೃಷಿ ಪ್ರಶಸ್ತಿ	12	1.600
	ಒಟ್ಟು	1706	8.868
	ಇತರೆ ಬೆಳೆ ಯೋಜನೆ	--	6.251
	ಮಹಾ ಮೊತ್ತ	6092	35.117

ಅನುಬಂಧ - 2

ವಿವಿಧ ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಜಲಾನಯನ ಕಾರ್ಯಕ್ರಮಗಳಲ್ಲಿ 1994-95 ರಿಂದ 1998-99 ಫೆಬ್ರವರಿ ಮಾಹೆಯವರೆಗೆ ಸಾಧಿಸಿದ ಯೋಜನಾ ವಿವರ

ಭೌತಿಕ ಕಾಮಗಾರಿಗಳ ಸಂಖ್ಯೆ
ಆರ್ಥಿಕ ಲಕ್ಷ ರೂ.ಗಳಲ್ಲಿ

ಕ್ರ.ಸಂ.	ಯೋಜನೆಯ ಹೆಸರು	ಸಾಧನೆ ಕೃಷಿ ಇಲಾಖೆ		ಸಾಧನೆ ಮಿಷ್ಠಿ ಭೂ ಅಭಿವೃದ್ಧಿ ಮಂಡಳಿ		ಸಾಧನೆ ಬಯಲು ಸೀಮೆ ಅಭಿವೃದ್ಧಿ ಮಂಡಳಿ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ದಶಲಕ್ಷ ಬಾವಿ ಯೋಜನೆ	99	38.625	82	37.392	-	-
2	ಜವಹಾರ್ ರೋಜ್‌ಗಾರ್ ಯೋಜನೆ	06	2.986	-	-	-	-
3	ಉದ್ಯೋಗ ಭರವಸೆ ಯೋಜನೆ	90	39.925	43	19.547	-	-
4	ವಿಶೇಷ ಘಟಕ ಯೋಜನೆ (ಜಿಲ್ಲಾ ವಲಯ)	13	22.104	-	-	3	1.130
5	ಗಿರಿಜನ ಉಪ ಯೋಜನೆ (ಜಿಲ್ಲಾ ವಲಯ)	05	0.535	-	-	2	1.380
6	ವಿಶೇಷ ಘಟಕ ಯೋಜನೆ (ರಾಜ್ಯ ವಲಯ)	04	0.330	-	-	-	-
7	ಗಿರಿಜನ ಉಪ ಯೋಜನೆ (ರಾಜ್ಯ ವಲಯ)	07	0.386	-	-	-	-
8	ಗಿರಿಜನ ಉಪ ಯೋಜನೆ (ರಾಜ್ಯ ವಲಯ)	47	23.570				
9	ಮಳೆ ಆಶ್ರಿತ ರಾಷ್ಟ್ರೀಯ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ	4+200+19700	19.97	-	-	-	-
10	ವಿಶ್ವಬ್ಯಾಂಕ್ ನೆರವಿನ ಜಲಾನಯನ ಅಭಿವೃದ್ಧಿ ಯೋಜನೆ	-	-	243	31.345	-	-
11	ಗಿರಿಜನ ಉಪ ಯೋಜನೆ (ರಾಜ್ಯ ವಲಯ)	-	-	14	7.030	.	.
12	ಗಿರಿಜನ ಉಪ ಯೋಜನೆ (ರಾಜ್ಯ ವಲಯ)	-	-	14	4.350	-	-
	ಒಟ್ಟು	-	149.612		150.394	-	2.510

ಕೃಷಿ ಮಾರುಕಟ್ಟೆ ಇಲಾಖೆ ವತಿಯಿಂದ ಮಾಗಡಿ ತಾಲ್ಲೂಕಿಗೆ ಅಭಿವೃದ್ಧಿ ಕಾರ್ಯಕ್ರಮ.

123(276) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1997-98, 98-99ನೇ ಸಾಲಿನಲ್ಲಿ ಕೃಷಿ ಮಾರುಕಟ್ಟೆ ಇಲಾಖೆಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು; ಅದಕ್ಕಾಗಿ ವ್ಯಯಿಸಿದ ಹಣವೆಷ್ಟು; (ಕಾಮಗಾರಿಗಳ ವಿವರ ನೀಡುವುದು)

ಆ) 1996-97ನೇ ಸಾಲಿನ ಕಾಮಗಾರಿಗಳಿಗೆ ಈವರೆವಿಗೂ ಹಣ ಬಿಡುಗಡೆ ಮಾಡದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಕಾರಣವೇನು ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) 1997-98ನೇ ಸಾಲಿನಲ್ಲಿ ಯಾವುದು ಇರುವುದಿಲ್ಲ. 1998-99ನೇ ಸಾಲಿನಲ್ಲಿ ಮಾಗಡಿ ತಾಲ್ಲೂಕು ಕುದೂರು ಸಂತೆಮೈದಾನದಲ್ಲಿ ಹರಾಜುಕಟ್ಟೆಯನ್ನು 1.50 ಲಕ್ಷ ರೂ.ಗಳಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 1996-97ನೇ ಸಾಲಿನ ಅನುದಾನದ ಮೊತ್ತ ರೂ. 15.00 ಲಕ್ಷಗಳಲ್ಲಿ ಈಗಾಗಲೇ ರೂ.10.00 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ಇ) ಪ್ರಗತಿ ವರದಿ ಬಂದಿಲ್ಲದ ಕಾರಣ ಉಳಿದ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಿರುವುದಿಲ್ಲ.

ಪ್ರಗತಿ ವರದಿ ಪಡೆದು, ಉಳಿದ ರೂ. 5.00 ಲಕ್ಷಗಳು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ತೋಟಗಾರಿಕೆ ಬೆಳೆಗಳಿಗೆ ಸಬ್ಸಿಡಿ.

124(112) ಶ್ರೀಬಸವನಗೌಡ ರಾಮನಗೌಡ ಪಾಟೀಲ್ (ವಿಜಾಪುರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97,97-98 ಹಾಗೂ 98-99ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಸಬ್ಸಿಡಿ ರೂಪದಲ್ಲಿ ನಿಗಡಿಪಡಿಸಿದ ಹಣವೆಷ್ಟು? ಮಂಜೂರು ಮಾಡಿದ ಹಣವೆಷ್ಟು? ಹಾಗೂ ಖರ್ಚಾದ ಹಣವೆಷ್ಟು? (ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

STATEMENT SHOWING THE DISTRICTWISE ALLOCATION OF SUBSIDY AND THE EXPENDITURE DURING 1996-971997-98 AND 1998-99 (Rs. IN LAKHS)

Sl. No.	District	1996-97		1997-98		1998-99	
		Sanc-tioned amount earmrked	Expen-diture	Sanc-tioned amount earmrked	Expen-diture	Sanc-tioned amount earmrked	Expen-diture
1	2	3	4	5	6	7	8
1.	Bangalore (Urban)	95.68	73.68	99.167	75.59	100.58	32.633
2.	Bangalore(Rural)	139.78	135.201	165.890	162.02	140.86	97.180
3.	Chitradurga	465.19	432.830	420.65	417.41	298.466	235.970
4.	Kolar	123.05	96.29	105.15	80.80	124.854	56.020
5.	Shimoga	183.74	171.326	348.40	342.47	376.79	285.947
6.	Tumkur	265.53	233.39	380.38	378.08	301.359	234.558
7.	Belgaum	115.31	88.93	162.26	161.50	133.378	110.84
8.	Bijapur	306.45	290.85	365.16	355.17	305.906	294.050
9.	Dharwad	127.02	99.51	131.22	131.02	120.450	112.458
10.	Uttara Kannada	135.00	120.00	184.13	184.81	113.182	99.235

1	2	3	4	5	6	7	8
11.	Bellary	296.56	84.29	165.48	117.18	144.564	67.488
12.	Bidar	54.31	49.59	101.66	84.69	101.77	30.203
13.	Gulbarga	86.19	69.03	134.39	134.291	88.485	81.541
14.	Raichur	155.27	145.41	265.06	296.11	129.616	58.26
15.	Dakshina	186.26	158.82	104.58	96.89	148.013	122.343
16.	Chickmagalore	258.05	250.06	226.883	180.76	243.278	202.552
17.	Hassan	139.61	132.38	131.069	128.44	147.449	113.544
18.	Kodagu	73.72	53.16	61.021	56.57	81.714	20.511
19.	Mandya	128.61	95.05	97.73	85.86	198.66	54.367
20.	Mysore	307.04	259.583	277.61	268.56	260.811	125.407
21.	Davangere	-	-	-	-	27.56	
22.	Bagalkote	-	-	-	-	14.710	7.485
23.	Gadag	-	-	-	-	6.633	4.155
24.	Haveri	-	-	-	-	5.700	4.906
25.	Koppal	-	-	-	-	8.620	1.645
26.	Udupi	-	-	-	-	8.640	6.690
27.	Chamrajanagar	-	-	-	-	10.450	6.930
	Total	3642.37	3141.38	3930.84	3778.18	3925.58	2924.46

ಕೊಳಚೆ ನಿರ್ಮೂಲನಾ ಮಂಡಳಿ ಅಭಿವೃದ್ಧಿ ಕಾರ್ಯಕ್ರಮಗಳು.

126(433)ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಯಾತ್ನಾಳ್) (ವಿಜಾಪುರ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಎಷ್ಟು ಹಣ ಕಾದಿರಿಸಲಾಗಿದೆ; ರಾಜ್ಯದಲ್ಲಿ ಮಂಡಳಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ;

ಆ) ವಿಜಾಪುರ ಜಿಲ್ಲೆಯ ನಗರಸಭೆ ಪುರಸಭೆ ಹಾಗೂ ಪಟ್ಟಣ ಪಂಚಾಯತ್‌ಗಳಿಗೆ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಎಷ್ಟು ಹಣ ನೀಡಲಾಗಿದೆ;

ಇ) ವಿಜಾಪುರದಲ್ಲಿ ಎಷ್ಟು ಪ್ರದೇಶಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸಲಾಗಿದೆ; ಅವು ಯಾವುವು?

ಈ) ಹಾಲಿ ಕೈಗೊಳ್ಳುತ್ತಿರುವ ಕಾಮಗಾರಿಗಳಾವುವು ;

ಉ) ಸದರಿ ಮಂಡಳಿಯನ್ನು ವಿಸರ್ಜಿಸಿ ಸ್ಥಳೀಯ ಸಂಸ್ಥೆಗಳಿಗೆ ಅದರ ಹಣ ಬಿಡುಗಡೆಗೊಳಿಸಿ ಸ್ಥಳೀಯ ಸಂಸ್ಥೆಗಳ ತಾಂತ್ರಿಕ ವಿಭಾಗದಿಂದ ಅಭಿವೃದ್ಧಿಪಡಿಸುವುದು ಹೆಚ್ಚು ಸೂಕ್ತವಲ್ಲವೆ ಇಲ್ಲದಿದ್ದರೆ ಕಾರಣವೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) 1998-99ರ ಸಾಲಿಗೆ ಸರ್ಕಾರದ ಆಯವ್ಯಯದಲ್ಲಿ ಒಟ್ಟು 1837.50 ಲಕ್ಷ ರೂ.ಗಳನ್ನು ಮಂಡಳಿಗೆ ಕಾದಿರಿಸಲಾಗಿದೆ.

1. ಯೋಜನಾ ಬಾಬ್ತು 1700000 ಲಕ್ಷ
2. ಯೋಜನೇತರ ಬಾಬ್ತು 137.50 ಲಕ್ಷ

ಈ ಅನುದಾನದಿಂದ ಮಂಡಳಿಯು ಈ ಕೆಳಗಿನಂತೆ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

	ಯೋಜನೆ	ಒದಗಿಸಿರುವ ಹಣ
1.	ಮೂಲಭೂತ ಸೌಲಭ್ಯ ಯೋಜನೆ	615.00 ಲಕ್ಷ
2.	ವಸತಿ ಯೋಜನೆ	550.00 ಲಕ್ಷ
3.	ನಿವೇಶನ ಮತ್ತು ಸೇವೆ	22.00 ಲಕ್ಷ

4.	ತರಬೇತಿ ಮತ್ತು ಗಣಕೀಕರಣ	3.00 ಲಕ್ಷ
5.	ಹುಡ್ಕೋ ಸಾಲದ ಮರುಪಾವತಿ	450.00 ಲಕ್ಷ
6.	ಆಡಳಿತ ಮತ್ತು ಸಿಬ್ಬಂದಿ ವೆಚ್ಚ	
	ಅ. ಯೋಜನೆ	00.00 ಲಕ್ಷ
	ಆ. ಯೋಜನೇತರ	137.50 ಲಕ್ಷ

ಅ) ವಿಜಾಪುರ ಜಿಲ್ಲೆಯ ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಡುವ ಘೋಷಿತ ಪ್ರದೇಶಗಳ ಅಭಿವೃದ್ಧಿಗಾಗಿ 1998-99ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ 16.00 ಲಕ್ಷ ರೂ.ಗಳನ್ನು ನಿಗಧಿಪಡಿಸಲಾಗಿದೆ.

ಇ) ವಿಜಾಪುರ ನಗರದಲ್ಲಿ ಕಾಯಿದೆಯಡಿ ಒಟ್ಟು 22 ಕೊಳಚೆ ಪ್ರದೇಶಗಳು ಘೋಷಿತವಾಗಿದ್ದು, ಅವುಗಳೆಂದರೆ:-

1. ಖಿದಾನಪೂರಗಲ್ಲಿ
2. ಜೋರಾಪುರ ಗೇಟ್
3. ವೆಂಕಟರಮಣಗಲ್ಲಿ
4. ಕವಲಿಗಲ್ಲಿ
5. ರಂಗೀಮಸೀದಿ
6. ದನದ ದಾವಖಾನೆ ಹಿಂಭಾಗ
7. ಪತ್ತೆಭಾವುಡಿ
8. ರಚ್ಚಿನ ಮಹಲ್
9. ಫೈಲ್ವಾನ್‌ಗಲ್ಲಿ 1ನೇ ಹಂತ
10. ಗೊಲ್ಲರ ಓಣಿ, ಇಂಡಿ ರಸ್ತೆ
11. ಅಳವಿ ಮಸೀದಿ
12. ರಜಪೂತಗಲ್ಲಿ
13. ಜೋಡುಗುಂಬಜ್ ಪಶ್ಚಿಮ
14. ಬಡೇಕಮಾನ ಹತ್ತಿರ
15. ಪಾಶ್ಚಾಪುರ ರಸ್ತೆ
16. ಜಾಡರಗಲ್ಲಿ
17. ತಾಜಬಾವುಡಿ

18. ಕುಂಟಿಕೊರವರ ಓಣಿ
19. ಮಿನಿಮಾದರ ವಡ್ಡರ ಓಣಿ
20. ಪೈಲ್ವಾನ್‌ಗಲ್ಲಿ 2ನೇ ಹಂತ
21. ನೂತನ ಗಿರಣಿ ಹತ್ತಿರ
22. ಇಂದಿರಾನಗರ, ಮನಗೊಳಿ

ಈ ವಿಜಾಪುರ ನಗರ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಅ. ಖುದಾನಪುರಗಲ್ಲಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರು, ನೆಲಹಾಸು, ಬೀದಿ ದೀಪ ಒದಗಿಸುವುದು.

ಆ. ಗೊಲ್ಲರ ಓಣಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು, ಕುಡಿಯುವ ನೀರು ಬೀದಿ ದೀಪ ಒದಗಿಸುವುದು.

ಇ. ಜಾಡರಗಲ್ಲಿ ಕೊಳಚೆ ಪ್ರದೇಶದಲ್ಲಿ 1.50 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು, ಒಳಚರಂಡಿ ಮತ್ತು ಬೀದಿ ದೀಪ ಒದಗಿಸುವುದು.

ಈ. ಅಳವಿ ಮಸೀದಿ ಕೊಳಚೆ ಪ್ರದೇಶದಲ್ಲಿ 1.00 ಲಕ್ಷ ರೂ.ಗಳ ಅಂದಾಜಿನಲ್ಲಿ ನೆಲಹಾಸು ಒದಗಿಸುವುದು.

ಉ. ತಾಜಬಾವುಡಿ ಕೊಳಚೆ ಪ್ರದೇಶದಲ್ಲಿ 1.00 ಲಕ್ಷ ರೂ.ಗಳ ಅಂದಾಜಿನಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಚರಂಡಿ ವಿಸ್ತರಿಸುವುದು.

ಊ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿರುವುದರಿಂದ ವಿಸರ್ಜಿಸುವುದು ಸೂಕ್ತವಲ್ಲ. ಆದರೆ ಸ್ಥಳೀಯ ಸಂಸ್ಥೆಗಳು ಕೊಳಚೆ ನಿರ್ಮೂಲನಾ ಮಂಡಳಿ ಅಭಿವೃದ್ಧಿಪಡಿಸಿದ ಕೊಳಚೆ ಪ್ರದೇಶಗಳ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ.

ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಕಾರ್ಯಕ್ರಮಗಳು.

127 (551) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1995-96, 96-97 ಮತ್ತು 97-98ನೇ ಸಾಲುಗಳಲ್ಲಿ ರಾಜ್ಯದ ಎರಡು ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಿದ ಹಣ ಎಷ್ಟು; (ವಿಶ್ವವಿದ್ಯಾಲಯವಾರು ವಿವರ ಒದಗಿಸುವುದು)

ಅ) ಪ್ರತಿ ವಿಶ್ವವಿದ್ಯಾಲಯಗಳಿಗೆ ಮೇಲಿನ 5 ವರ್ಷಗಳಿಗೆ ಪ್ರಮುಖವಾಗಿ ವಿವಿಧ ವಿಭಾಗಗಳಲ್ಲಿಯ ಅದರ ಸಂಶೋದನೆಯ ಪ್ರಗತಿಯ ಲಾಭ ಯಾವ ಬೆಳೆಗಳಲ್ಲಿ ದೊರೆತಿದೆ ಅದರ ಸಲುವಾಗಿ ಪ್ರತಿ ವರ್ಷ ನೀಡಿರುವ ಹಣದ ವಿವರ ಕೊಡುವಿರಾ?

ಇ) ರಾಜ್ಯದ ರೈತರಿಗೆ ಬೇಕಾದ ವಿವಿಧ ಬೆಳೆಗಳ ಬೀಜಗಳು ಯಾವುವು ಹಾಗೂ ಅವುಗಳನ್ನು ಬೆಳೆಯಿಸಿ ಅದರಲ್ಲಿ ಎಷ್ಟು ಪ್ರಮಾಣದ ವಿತರಣೆ ಮಾಡಿದ ಪ್ರಮಾಣವೆಷ್ಟು? (ವಿವರ ಒದಗಿಸುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳಿಗೆ 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಿದ ಹಣ ಈ ಕೆಳಗಿನಂತಿದೆ.

	1995-96	1996-97	1997-98
ಯೋಜನೇತರ ಅನುದಾನ		(ರೂ.ಲಕ್ಷಗಳಲ್ಲಿ)	
ಬೆಂಗಳೂರು	1667.00	1792.00	1929.00
ಧಾರವಾಡ	629.00	676.00	826.00
ಯೋಜನೆ			
ಬೆಂಗಳೂರು	833.78	1145.48	1167.38
ಧಾರವಾಡ	909.96	1290.52	1181.625

ಆ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಒಟ್ಟು 22 ಹೊಸ ತಳಿಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಆಹಾರ ಧಾನ್ಯಗಳು, ಬೇಳೆಕಾಳು, ಎಣ್ಣೆಬೀಜ ಹಾಗೂ ವಾಣಿಜ್ಯ ಬೆಳೆಗಳು ಸೇರಿರುತ್ತವೆ.

ಧಾರವಾಡ ಕೃವಿವಿ ಹತ್ತಿ, ಕಬ್ಬು, ಗೋದಿ ಹಾಗೂ ತೋಟಗಾರಿಕೆ ಬೆಳೆಗಳಾದ ಮಾವು, ಸಪೋಟ, ಕರಿಬೇವು ಅಡಿಕೆ ಮುಂತಾದವುಗಳಲ್ಲಿ ಪ್ರಗತಿ ಕಂಡಿದೆ.

ಸದರಿ ಬೆಳೆಗಳ ಮೇಲೆ ಎರಡು ಕೃವಿವಿನಿಲಯಗಳು ಖರ್ಚು ಮಾಡಿರುವ ಹಣದ ವಿವರ ಈ ಕೆಳಗಿನಂತಿದೆ.

	1995-96	1996-97	1997-98
ಕೃವಿವಿ, ಬೆಂಗಳೂರು	1478 ಲಕ್ಷ	1504 ಲಕ್ಷ	1446 ಲಕ್ಷ
ಕೃವಿವಿ, ಧಾರವಾಡ	8.70 ಲಕ್ಷ	9.00 ಲಕ್ಷ	8.80 ಲಕ್ಷ

ಇ) ರಾಜ್ಯದ ರೈತರಿಗೆ ಬೇಕಾದ ವಿವಿಧ ಬೆಳೆಗಳ ಬೀಜಗಳು ಭತ್ತ, ರಾಗಿ, ಬೇಳೆಕಾಳು, ನೆಲೆಗಡೆ, ಸೂರ್ಯಕಾಂತಿ ಸೋಯ ಅವರೆ, ಹತ್ತಿ, ಕಬ್ಬು, ಗೋಧಿ, ಜೋಳ ಹಾಗೂ ತೋಟಗಾರಿಕೆ ಬೆಳೆಗಳು. ಈ ತಳಿವರ್ಧಕ ಬೀಜಗಳನ್ನು ಬೆಳೆದು ವಿವಿಧ ಸರ್ಕಾರ ಸಂಸ್ಥೆಗಳಾದ ಕೃಷಿ ಇಲಾಖೆ, ಕರ್ನಾಟಕ ರಾಜ್ಯ ಬೀಜ ನಿಗಮ ರಾಷ್ಟ್ರೀಯ ಬೀಜ ನಿಗಮ ಮತ್ತು ಕೆಲವು ಖಾಸಗಿ ಸಂಸ್ಥೆಗಳ ಮೂಲಕ ರೈತರಿಗೆ ಒದಗಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿರುವ ಸಹಕಾರಿ ಬ್ಯಾಂಕು ಕುರಿತು.

128(434) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಸಹಕಾರಿ ಬ್ಯಾಂಕು ಪಿಕಾರ್ಡ್ ಬ್ಯಾಂಕುಗಳಿಂದ ಕಳೆದ 3 ವರ್ಷಗಳಲ್ಲಿ ಸಾಲ ಪಡೆದ ರೈತರ ಸಂಖ್ಯೆ ಎಷ್ಟು? ಆ ಪೈಕಿ ಕಬ್ಬು ಬೆಳೆಗಾಗಿ ಸಾಲ ಪಡೆದ ರೈತರ ಸಂಖ್ಯೆ ಎಷ್ಟು?

ಆ) ಸಾಲ ಮರುಪಾವತಿ ಮಾಡಿದ ರೈತರ ಸಂಖ್ಯೆ ಎಷ್ಟು?

ಇ) ಸಾಲ ಮರುಪಾವತಿಯಲ್ಲಿನ ವಿಳಂಬ ತಪ್ಪಿಸಲು ಸಾಲ ಪಡೆದ ರೈತರ ಕಬ್ಬನ್ನು ಸಂಬಂಧಪಟ್ಟ ಕಾರ್ಖಾನೆಗಳಿಗೆ ಸಾಗಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಈ) ನಿಗದಿತ ವೇಳೆಯಲ್ಲಿ ಕಬ್ಬನ್ನು ಸಾಗಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ರೈತರ ಸಾಲವನ್ನು ಬಡ್ಡಿರಹಿತ ಸಾಲವೆಂದು ಸರ್ಕಾರ ಪರಿಗಣಿಸುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಬ್ಯಾಂಕ್, ಪಿಕಾರ್ಡ್ ಬ್ಯಾಂಕುಗಳಿಂದ ಸಾಲ ಪಡೆದ ರೈತರ ವಿವರ ಈ ಕೆಳಕಂಡಂತಿದೆ

ವರ್ಷ	ರೈತರ ಸಂಖ್ಯೆ	ಈ ಪೈಕಿ ಕಬ್ಬು ಬೆಳೆಗಾಗಿ ಸಾಲ ಪಡೆದ ರೈತರ ಸಂ.
1995-96	90,412	54,569
1996-97	1,02,618	67,598
1997-98	1,27.539	77, 527
ಜನವರಿ -99ರ ವರೆಗೆ	86,894	53,006

ಅ) ವರ್ಷ	ಸಾಲ ಮರುಪಾವತಿ ಮಾಡಿದ ರೈತರ ಸಂಖ್ಯೆ
1995-96	43,354
1996-97	57,990
1997-98	64,242
1998-99 ಜನವರಿ-99ರ ವರೆಗೆ	8,961

ಇ) ಜಿಲ್ಲೆಯಲ್ಲಿ ಪ್ರಸ್ತುತ ಸಹಕಾರಿ ವಲಯದಲ್ಲಿ 7 ಮತ್ತು 2 ಖಾಸಗಿ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾರ್ಖಾನೆಗಳು ತಮ್ಮ ಕಾರ್ಯ ಕ್ಷೇತ್ರದಲ್ಲಿಯ ರೈತರ ಕಬ್ಬುಗಳನ್ನು ನುರಿಯುತ್ತಿವೆ. ಅದಾಗ್ಯೂ ಹೆಚ್ಚಾಗಿ ಬೆಳೆದಿರುವ ಕಬ್ಬನ್ನು ನೆರೆಯ ರಾಜ್ಯಕ್ಕೆ ಸಾಗಿಸುವ ಪ್ರಯತ್ನ ನಡೆದಿದೆ.

ಈ) ಪ್ರಸ್ತಾವೆ ಸರ್ಕಾರದ ಮುಂದಿರುವುದಿಲ್ಲ.

ಗೋಕಾಕ್ ನಗರದಲ್ಲಿರುವ ಸರಕಾರಿ ಬಸ್ ನಿಲ್ದಾಣ.

129(512) ಶ್ರೀ ನಾಯಕ್ ಚಂದ್ರಶೇಖರ ಸದಾಶಿವ (ಗೋಕಾಕ್) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋಕಾಕ್ ನಗರದಲ್ಲಿರುವ ಸರಕಾರಿ ಬಸ್ ನಿಲ್ದಾಣ ತುಂಬಾ ಚಿಕ್ಕದಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ಬಸ್ ನಿಲ್ದಾಣವನ್ನು ವಿಸ್ತರಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಹೌದು

ಆ) ಗೋಕಾಕ್ ಪಟ್ಟಣದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಸೂಕ್ತ ನಿವೇಶನವನ್ನು ಗುರುತಿಸಲಾಗುತ್ತಿದ್ದು, ನಿವೇಶನ ದೊರೆತ ನಂತರ ಬಸ್ ನಿಲ್ದಾಣವನ್ನು ಕಟ್ಟಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಗೋಕಾಕ್ ಕ್ಷೇತ್ರದಲ್ಲಿ ನಾಡಕಛೇರಿ ಸ್ಥಾಪನೆ.

130(513) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋಕಾಕ್ ಮತಕ್ಷೇತ್ರದಲ್ಲಿ ಯಾವುದೇ ನಾಡಕಛೇರಿ ಇಲ್ಲದಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಗೋಕಾಕ್ ತಾಲ್ಲೂಕಿನ ಕಣಗಾಂವ ಮತ್ತು ಅಂಕಲಗಿ ಗ್ರಾಮಗಳಲ್ಲಿ ನಾಡ ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಹೌದು

ಆ) ಪ್ರಸ್ತುತ ಇರುವ ಆಧಿಕಾರಿ ನೌಕರರ ಸಂಖ್ಯೆಯನ್ನು ಶೇ. 5ರಷ್ಟು ಕಡಿತಗೊಳಿಸುವ ಬಗ್ಗೆ ವಿವರವಾಗಿ ಪರಿಶೀಲಿಸಲು ಸಚಿವಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಉಪ ಸಮಿತಿಯು ಇತ್ತೀಚಿನ ಸಭೆಯಲ್ಲಿ ಕಂದಾಯ ಇಲಾಖೆಗೆ ಸಲಹೆ ನೀಡಿ ಶೇ. 5ರಷ್ಟು ಹುದ್ದೆಗಳನ್ನು ಕಡಿತಗೊಳಿಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಕೆಲವೊಂದು ನಾಡಕಛೇರಿಗಳಲ್ಲಿ ಇಂತಹ ನಾಡ ಕಛೇರಿಗಳಿಂದ ಸಾರ್ವಜನಿಕರಿಗೆ ಅದರಲ್ಲೂ, ಗ್ರಾಮಾಂತರ ಜನರಿಗೆ ಯಾವುದೇ ಅನುಕೂಲವಾಗುತ್ತಿಲ್ಲದ ಕಾರಣ ಅಂತಹ ನಾಡಕಛೇರಿಗಳನ್ನು ಗುರ್ತಿಸಿ ರದ್ದುಮಾಡುವ ಬಗ್ಗೆ ಪರಿಶೀಲಿಸಲು ಸೂಚಿಸಿದೆ. ಅದಾಗ್ಯೂ ಮೇಲಿನ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಕಂದಾಯ ಇಲಾಖೆಯು ಮಾನ್ಯ ಸದಸ್ಯರು ಸೂಚಿಸಿರುವಂತೆ ನೂತನ ನಾಡ ಕಛೇರಿಗಳನ್ನು ತೆರೆಯಲು ಪರಿಶೀಲಿಸಲಾಗುವುದು.

ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣ.

131(52) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಗೆ 1996-97, 1997-98 ಹಾಗೂ 1998-99ನೇ ಸಾಲಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಸಹಾಯಧನ ಹಾಗೂ ಸಾಲದ ಮೊತ್ತವೆಷ್ಟು; ಹಾಗೂ ಖರ್ಚು ಮಾಡಲಾದ ಹಣ ಎಷ್ಟು? (ವರ್ಷವಾರು ವಿವರ ಒದಗಿಸುವುದು)

ಆ) ಇದನ್ನು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ; (ಜಿಲ್ಲಾವಾರು ಹಾಗೂ ವರ್ಷವಾರು ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :--

ಅ)	ಕೇಂದ್ರ ಸರ್ಕಾರ			ರಾಜ್ಯ ಸರ್ಕಾರ		
ವರ್ಷ	ಸಹಾಯಧನ	ಸಾಲ	ಖರ್ಚು	ಸಹಾಯಧನ	ಸಾಲ	ಖರ್ಚು
96-97	284.40	663.60	-	1137.48	-	1137.48
				1078.00	-	-
						(ಎಸ್‌ಸಿಸಿ)
97-98	94.40	221.20	-	1937.50	-	1937.50
				-	-	95.00
						(ಎಸ್‌ಸಿಸಿ)
98-99	--	--	836.00	1378.10	-	986.19
					-	273.00
						(ಎಸ್‌ಸಿಸಿ)
			(ಜನವರಿ ಅಂತ್ಯಕ್ಕೆ			ಫೆಬ್ರವರಿ ಅಂತ್ಯಕ್ಕೆ)
ಒಟ್ಟು	379.20	884.40	836.00	5531.08	-	4429.17

ಅ) 1) ಮೂಲಭೂತ ಸೌಲಭ್ಯ
2) ವಸತಿ ಯೋಜನೆ
3) ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ
4) ವಿಶೇಷ ಘಟಕ ಯೋಜನೆ (ಕ್ರೋಢೀಕೃತ ಹಣ)

ಜಿಲ್ಲಾವಾರು ಹಾಗೂ ವರ್ಷಾವಾರು ವಿವರವನ್ನು ಅನುಬಂಧ ನೀಡಿದೆ)

ಅನುಬಂಧ - ಅ

ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಖರ್ಚಾದ ಹಣದ ಜಿಲ್ಲಾವಾರು ವಿವರ.

ಕ್ರಮ ಸಂಖ್ಯೆ	ಜಿಲ್ಲೆ	ತೆಗೆದುಕೊಂಡ ಕೆಲಸಗಳ ಸಂಖ್ಯೆ	ಖರ್ಚಾಗಿರುವ ಹಣ
1.	ಬೆಂಗಳೂರು (ನಗರ)	12	37.50
2.	ಬೆಂಗಳೂರು (ಗ್ರಾ)	9	32.40
3.	ತುಮಕೂರು	10	48.16
4.	ಕೋಲಾರ	7	40.39
5.	ಮೈಸೂರು	13	54.43
6.	ಮಂಡ್ಯ	8	30.93
7.	ಶಿವಮೊಗ್ಗ	10	50.60
8.	ಚಿತ್ರದುರ್ಗ	9	34.29
9.	ಹಾಸನ	8	44.27
10.	ಚಿಕ್ಕಮಗಳೂರು	6	19.71
11.	ದಕ್ಷಿಣ ಕನ್ನಡ	6	13.70
12.	ಹುಬ್ಬಳ್ಳಿ	17	84.03
13.	ಉತ್ತರ ಕನ್ನಡ	5	21.74
14.	ಬಳ್ಳಾರಿ	6	25.12
15.	ರಾಯಚೂರು	8	47.26
16.	ಬಿಜಾಪುರ	12	59.89
17.	ಬೆಳಗಾಂ	10	45.38
18.	ಗುಲ್ಬರ್ಗ	10	52.10
19.	ಬೀದರ್	4	24.39
20.	ಕೊಡಗು	-	-
	ಒಟ್ಟು	170	7,66,29
	ಸಿಮೆಂಟ್ ಮತ್ತು ಕಬ್ಬಿಣ ಖರೀದಿ ಮಾಡಿದ ಹಣ		69.74
		ಒಟ್ಟು	8,36,03

ಅನುಬಂಧ - ಆ

ವಿಶೇಷ ಘಟಕ ಯೋಜನೆ ಕ್ರೋಡಿಕೃತ ಹಣದಿಂದ ಸ್ಥಳ ಲಭ್ಯತೆ ಹಾಗೂ ಫಲಾನುಭವಿಗಳ ಲಭ್ಯತೆ ಆಧರಿಸಿ ತೆಗೆದುಕೊಳ್ಳಲು ಉದ್ದೇಶಿಸುವ ಮನೆಗಳ ತಾತ್ಕಾಲಿಕ ಪಟ್ಟಿ.

ಕ್ರಮ ಸಂಖ್ಯೆ	ಸ್ಥಳದ ಹೆಸರು : ಜಿಲ್ಲೆ	ತೆಗೆದುಕೊಂಡ ಮನೆಗಳ ಸಂಖ್ಯೆ	ಸರ್ಕಾರದಿಂದ ಬಿಡುಗಡೆಯಾದ ಹಣ	ಖರ್ಚಾದ ಹಣ (ಲಕ್ಷ ರೂ.ಗಳಲ್ಲಿ)
1.	ಬೆಂಗಳೂರು ಗ್ರಾಮಾಂತರ ಜಿಲ್ಲೆ	200	1078	37.36
2.	ಚಾಮರಾಜನಗರ	93		7.64
3.	ಮೈಸೂರು	196		11.97
4.	ಮಂಡ್ಯ	346		102.00
5.	ಹಾಸನ	585		15.07
6.	ಧಾರವಾಡ	138		20.86
7.	ಗದಗ	94		17.95
8.	ಬಿಜಾಪುರ	200		25.00
9.	ರಾಯಚೂರು	150		35.74
10.	ಕೊಪ್ಪಳ	50		9.01
11.	ಕೋಲಾರ	450		35.65
12.	ದಾವಣಗೆರೆ	100		4.94
13.	ಬಳ್ಳಾರಿ	50		9.07
14.	ಗುಲ್ಬರ್ಗ	150		13.10
15.	ತುಮಕೂರು	32		-
16.	ಚಿತ್ರದುರ್ಗ	100		9.06
17.	ಶಿವಮೊಗ್ಗ	150		14.61
	ಒಟ್ಟು	3080		368.03

ಅನುಬಂಧ - ೩

1996-97ನೇ ಸಾಲಿನಲ್ಲಿ ಮಂಡಳಿ ವತಿಯಿಂದ ಮನೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಮೂಲಭೂತ ಸೌಕರ್ಯ ಜಿಲ್ಲಾವಾರು ಖರ್ಚಾದ ವಿವರ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮನೆಗಳಿಗೆ ನಿರ್ಮಾಣಕ್ಕೆ ಆದ ಖರ್ಚು ರಾಜ್ಯ ಸರ್ಕಾರದ ಅನುದಾನ ದಿಂದ ಆದ ಖರ್ಚು	ಅಭಿವೃದ್ಧಿ ಕಾಮಗಾರಿ ಗಳಿಗೆ ರಾಜ್ಯ ಸರ್ಕಾರದ ಅನುದಾನ ದಿಂದ ಆದ ಖರ್ಚು	ಒಟ್ಟು ಖರ್ಚು
1.	ಬೆಂಗಳೂರು (ನಗರ)	69.29	48.30	117.59
2.	ಬೆಂಗಳೂರು (ಗ್ರಾ)	7.82	7.31	15.13
3.	ತುಮಕೂರು	19.94	1.75	21.69
4.	ಚಿತ್ರದುರ್ಗ	22.61	12.71	35.32
5.	ಹಾಸನ	22.18	17.95	40.13
6.	ಕೋಲಾರ	18.19	20.83	39.02
7.	ಚಿಕ್ಕಮಗಳೂರು	3.03	14.27	17.30
8.	ಶಿವಮೊಗ್ಗ	-	9.75	9.75
9.	ಮೈಸೂರು	21.95	23.37	45.52
10.	ಮಂಡ್ಯ	22.20	6.49	28.69
11.	ದಕ್ಷಿಣ ಕನ್ನಡ	-	1.11	1.11
12.	ಧಾರವಾಡ	27.71	23.61	51.32
13.	ಉತ್ತರ ಕನ್ನಡ	14.04	1.19	15.23
14.	ಬಿಜಾಪುರ	20.21	35.76	55.97
15.	ಬೆಳಗಾಂ	24.71	14.16	38.87
16.	ಗುಲ್ಬರ್ಗಾ	24.68	28.87	53.55
17.	ಬೀದರ್	0.68	11.02	11.70
18.	ಬಳ್ಳಾರಿ	16.50	19.25	35.75
19.	ರಾಯಚೂರು	23.53	25.38	48.91
20.	ಕೊಡಗು	-	-	-
	ಒಟ್ಟು	360.00	323.08	683.08

ಅನುಬಂಧ - ಈ

1997-98ನೇ ಸಾಲಿನಲ್ಲಿ ಮಂಡಳಿ ವತಿಯಿಂದ ಮನೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಮೂಲಭೂತ ಸೌಕರ್ಯ ಜಿಲ್ಲಾವಾರು ಖರ್ಚಾದ ವಿವರ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮನೆಗಳಿಗೆ ನಿರ್ಮಾಣಕ್ಕೆ ಆದ ಖರ್ಚು ರಾಜ್ಯ ಸರ್ಕಾರದ ಅನುದಾನ ದಿಂದ ಆದ ಖರ್ಚು	ಅಭಿವೃದ್ಧಿ ಕಾಮಗಾರಿ ಗಳಿಗೆ ರಾಜ್ಯ ಸರ್ಕಾರದ ಅನುದಾನ ದಿಂದ ಆದ ಖರ್ಚು	ಒಟ್ಟು ಖರ್ಚು
1.	ಬೆಂಗಳೂರು (ನಗರ)	63.90	119.37	183.27
2.	ಬೆಂಗಳೂರು (ಗ್ರಾ)	4.05	11.50	15.55
3.	ತುಮಕೂರು	63.90	31.84	95.74
4.	ಚಿತ್ರದುರ್ಗ	82.80	40.38	123.18
5.	ಹಾಸನ	44.10	32.88	76.98
6.	ಕೋಲಾರ	72.00	31.07	103.97
7.	ಚಿಕ್ಕಮಗಳೂರು	-	10.18	10.18
8.	ಶಿವಮೊಗ್ಗ	-	32.81	32.81
9.	ಮೈಸೂರು	5.40	27.46	86.16
10.	ಮಂಡ್ಯ	-	17.60	17.60
11.	ದಕ್ಷಿಣ ಕನ್ನಡ	-	-	-
12.	ಧಾರವಾಡ	38.70	47.46	86.16
13.	ಉತ್ತರ ಕನ್ನಡ	91.35	9.10	100.45
14.	ಬಿಜಾಪುರ	36.00	25.50	61.50
15.	ಬೆಳಗಾಂ	-	18.01	18.01
16.	ಗುಲ್ಬರ್ಗಾ	150.75	30.23	180.98
17.	ಬೀದರ್	-	16.78	16.78
18.	ಬಳ್ಳಾರಿ	77.85	33.50	113.35
19.	ರಾಯಚೂರು	119.70	23.69	143.39
20.	ಕೊಡಗು	-	-	-
	ಒಟ್ಟು	850.00	560	1410

ಅನುಬಂಧ - ಉ

1998-99ನೇ ಸಾಲಿನಲ್ಲಿ ಮಂಡಳಿ ಮತಿಯಿಂದ ಮನೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಮೂಲಭೂತ ಸೌಕರ್ಯ ಜಿಲ್ಲಾವಾರು ಖರ್ಚಾದ ವಿವರ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮನೆಗಳಿಗೆ ನಿರ್ಮಾಣಕ್ಕೆ ಆದ ಖರ್ಚು ರಾಜ್ಯ ಸರ್ಕಾರದ ಅನುದಾನ ದಿಂದ ಆದ ಖರ್ಚು	ಅಭಿವೃದ್ಧಿ ಕಾಮಗಾರಿ ಗಳಿಗೆ ರಾಜ್ಯ ಸರ್ಕಾರದ ಅನುದಾನ ದಿಂದ ಆದ ಖರ್ಚು	ಒಟ್ಟು ಖರ್ಚು
1.	ಬೆಂಗಳೂರು (ನಗರ)	18.45	87.05	105.50
2.	ಬೆಂಗಳೂರು (ಗ್ರಾ)	4.95	15.79	20.74
3.	ತುಮಕೂರು	5.40	23.00	28.40
4.	ಚಿತ್ರದುರ್ಗ	-	14.96	14.96
5.	ಹಾಸನ	26.00	39.94	65.94
6.	ಕೋಲಾರ	-	7.00	7.00
7.	ಚಿಕ್ಕಮಗಳೂರು	-	15.60	15.60
8.	ಶಿವಮೊಗ್ಗ	-	25.19	25.19
9.	ಮೈಸೂರು	48.60	31.54	80.14
10.	ಮಂಡ್ಯ	-	8.50	8.50
11.	ದಕ್ಷಿಣ ಕನ್ನಡ	-	3.50	3.50
12.	ಧಾರವಾಡ	26.50	34.52	61.02
13.	ಉತ್ತರ ಕನ್ನಡ	2.70	11.50	14.20
14.	ಬಿಜಾಪುರ	40.95	7.01	47.96
15.	ಬೆಳಗಾಂ	-	14.52	14.52
16.	ಗುಲ್ಬರ್ಗಾ	30.88	13.46	44.34
17.	ಬೀದರ್	47.25	8.00	55.25
18.	ಬಳ್ಳಾರಿ	38.25	8.53	46.76
19.	ರಾಯಚೂರು	54.90	2.00	56.90
20.	ಕೊಡಗು	-	-	-
	ಒಟ್ಟು	344.83	356.03	700.86

ಅಂಡರ್ ವ್ಯಾಲ್ಯೂಏಷನ್ ಪ್ರಕರಣಗಳು.

133(75) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಸರ್ಕಾರದ ಗಮನಕ್ಕೆ ಬಂದ ಅಂಡರ್ ವ್ಯಾಲು ಯೋಜನೆ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಅವುಗಳಲ್ಲಿ ಒಳಗೊಂಡಿರುವ ಒಟ್ಟು ಮೊಬಲಗೆಷ್ಟು ;

ಇ) ಎಷ್ಟು ವರ್ಷಗಳಿಂದ ಈ ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ ;

ಈ) ಈ ರೀತಿ ಬಾಕಿ ಉಳಿಯಲು ಕಾರಣಗಳೇನು?

ಶ್ರೀ ಬಿ. ಸೇಮಶೇಖರ್ (ಕಂದಾಯ ಮಂತ್ರಿಗಳು) :—

ಅ) 1,18,589 (ಜಿಲ್ಲಾವಾರು ವಿವರ ಲಗತ್ತಿಸಿದೆ).

ಆ) 251.21 ಲಕ್ಷ ರೂಪಾಯಿಗಳು.

ಇ) ಕಳೆದ ಐದು ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಉಳಿದಿವೆ.

ಈ) ಈ ಪ್ರಕರಣಗಳು ಅರೆ-ನ್ಯಾಯಿಕ ಪ್ರಕರಣಗಳಾಗಿದ್ದು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಸೆಕ್ಷನ್ 45ಎ ಇದರಡಿ ರಚಿಸಿದ ನಿಯಮ ಕರ್ನಾಟಕ ಮುದ್ರಾಂಕ (ಲಿಖಿತಗಳ ಕಡಿಮೆ ಮೌಲ್ಯವನ್ನು ತಡೆಗಟ್ಟುವ) ನಿಯಮಗಳು 1977ರಲ್ಲಿ ವಿವರಿಸಿದ, ವಿಧಿ-ವಿಧಾನಗಳನ್ನು ಅನುಸರಿಸಿ ಅವಶ್ಯವಿದ್ದ ಕಡೆ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ಪ್ರಕರಣ ಇತ್ಯರ್ಥಪಡಿಸಬೇಕಾಗುತ್ತದೆ. ಕೆಲವು ಪ್ರಕರಣಗಳಲ್ಲಿ, ಸಂಬಂಧಪಟ್ಟ ಕಕ್ಷಿದಾರರು ಸಹಕರಿಸದೇ ಇರುವುದರಿಂದ ಈ ಪ್ರಕರಣವನ್ನು ಇತ್ಯರ್ಥಪಡಿಸುವಲ್ಲಿ ವಿಳಂಬವಾಗುತ್ತಿದೆ.

Government of Karnataka

Department of Stamps and Registration

Statement shwing the No. of documents referred and amount involved there on U/s.45-A(1) of the K.S.Act, 1957

Sl No.	Name of the District	1995-96		1996-97		1997-98	
		No. of docts.	Amount involved	No. of docts.	Amount involved	No. of docts.	Amount involved
1	2	3	4	5	6	7	8
1)	Belgaum	4962	8.76	5938	10.48	6393	11.92
2)	Bellary	649	0.06	337	0.49	132	0.49
3)	Bidar	1020	0.33	965	0.50	1184	0.79
4)	Bijapur	495	0.25	301	0.24	235	0.11
5)	Bagalkote					157	0.27
6)	C'mangalore	534	0.57	671	0.71	994	1.68
7)	C'durga	1376	1.17	1112	11.57	453	0.48
8)	Davangere						
9)	Dharwad	4562	0.69	4814		3316	
10)	Haveri					704	0.62
11)	Gadag					1643	3.10
12)	Gulbarga	885	0.69	1166	11.53	1359	1.23
13)	Hassan	368	0.43	453	0.48	504	0.65

1	2	3	4	5	6	7	8
14)	Karwar	33	0.04	81	0.10	70	0.16
15)	Kolar	537	2.45	729	0.17	620	0..62
16)	Mandya	1585	0.81	1074	0.67	623	0.60
17)	Mangalore	1004	0.01	560	0.93	1 99	0.23
18)	Udupi					266	0.45
19)	Kodagu	181		152	0.29	70	0.26
20)	Mysore	412		289		247	--
21)	Chamrajnagar					53	--
22)	Raichur	1050	0.82	1252	0.11	931	0.95
23)	Koppal					741	0.73
22)	Shimoga	1739	1.77	1978	0.25	2328	3.61
25)	Tumkur	2510		2299			1847 --
26)	Bangalore (R)	2198	1.75	1098	0.62	830	1.03
27)	Shivajinagar(DUS)	2212	14.06	1813	14.11	1860	2.48
28)	Rajajinagar(DUS)	1256	3.46	1318	8.77	3044	3.36
29)	Gandhinagar(DUS)	5939	17.18	3066	7.62	2936	14.94
30)	Jayanagar(DUS)	3195	2.42	2192	15.86	1645	2.73
31)	AIGR (AUD)	3510	3.34	3055	36.11	4340	14.52
	Total	42212	61.60	36653	121.61	39724	68.0057

ರಾಜ್ಯದಲ್ಲಿರುವ ಬಸ್ ಡಿಪೋಗಳು.

134(283) ಶ್ರೀ ಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ 6 ತಿಂಗಳುಗಳಲ್ಲಿ ಎಷ್ಟು ಬಸ್ ಡಿಪೋಗಳನ್ನು ಪ್ರಾರಂಭಿಸಲಾಗಿದೆ. (ಹೆಸರು ವಿವರಗಳನ್ನು ನೀಡುವುದು)

ಆ) ಮೇಲ್ಕಂಡ ಅವಧಿಯಲ್ಲಿ ಪ್ರಾರಂಭಿಸಲಾದ ಬಸ್ ಡಿಪೋಗಳಿಗೆ (ಪ್ರತಿಡಿಪೋಗೆ ಒದಗಿಸಲಾಗಿರುವ ಬಸ್ಸುಗಳ ಸಂಖ್ಯೆ ಎಷ್ಟು;

ಇ) ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ ಪ್ರದೇಶವಾದ ಬೀದರ್ ಜಿಲ್ಲೆಯ ಬೀದರ್‌ನಲ್ಲಿ ಬಸ್ ಡಿಪೋ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಹಾಗಿದ್ದಲ್ಲಿ ಅಲ್ಲಿ ಬಸ್ ಡಿಪೋವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಕಳೆದ 6 ತಿಂಗಳುಗಳಲ್ಲಿ ಈ ಕೆಳಕಂಡ ಬಸ್ ಘಟಕಗಳನ್ನು ಪ್ರಾರಂಭಿಸಲಾಗಿದೆ.

1) ಕೋರಮಂಗಲ (ಬೆಂ.ಮ.ನ.ಸಾ)

2) ಕಿಂಕೋ (ಬೆಂ.ಮ.ನ.ಸಾ)

3) ದೊಡ್ಡಬಳ್ಳಾಪುರ

4) ಶ್ರೀನಿವಾಸಪುರ

5) ಬೆಳಗಾಂ (ಮಿನಿಘಟಕ)

6) ರಾಣೆಬೆನ್ನೂರು

7) ಬಿಜಾಪುರ 2ನೇ ಘಟಕ

8) ಗುಲ್ಬರ್ಗಾ 3ನೇ ಘಟಕ.

ಅ) ಈ ಘಟಕಗಳಿಗೆ ಒದಗಿಸಿರುವ ವಾಹನಗಳ ಸಂಖ್ಯೆ ಕೆಳಕಂಡಂತಿದೆ :

1) ಕೋರಮಂಗಲ	-	78	ವಾಹನಗಳು
2) ಕಿಂಕೋ	-	52	"
3) ದೊಡ್ಡಬಳ್ಳಾಪುರ	-	41	"
4) ಶ್ರೀನಿವಾಸಪುರ	-	46	"
5) ಬೆಳಗಾಂ (ಮಿನಿಘಟಕ)	-	26	"
6) ರಾಣೆಬೆನ್ನೂರು	-	43	"
7) ಬಿಜಾಪುರ 2ನೇ ಘಟಕ	-	18	"
8) ಗುಲ್ಬರ್ಗಾ 3ನೇ ಘಟಕ	-	73	"

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರು.

136(219) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಗ್ರಾಮಗಳ ಒಟ್ಟು ಸಂಖ್ಯೆ ಎಷ್ಟು ; ಅವುಗಳ ಪೈಕಿ ಈಗಾಗಲೇ ಸ್ಮಶಾನ ಭೂಮಿಯನ್ನು ಒದಗಿಸಲಾದ ಗ್ರಾಮಗಳ ಸಂಖ್ಯೆ ಎಷ್ಟು?

ಆ) ಉಳಿದ ಗ್ರಾಮಗಳಿಗೆ ಸ್ಮಶಾನ ಭೂಮಿಯನ್ನು ಒದಗಿಸಲು ಎಂದಿನಿಂದ ಕ್ರಮ ತೆಗೆದುಕೊಳ್ಳಲಾಗುವುದು?

ಇ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸ್ಮಶಾನಗಳ ನಿರ್ಮಾಣಕ್ಕೆ ಸ್ಥಳ ಒದಗಿಸಲಾಗಿದೆ? (ಒದಗಿಸಿದ ಭೂಮಿಯ ವಿವರ, ಸಾಧಿಸಿದ ಪ್ರಗತಿ ತಿಳಿಸುವುದು)

ಈ) ಇನ್ನು ಸ್ಥಳ ಒದಗಿಸುವಂತೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಉ) ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 421 ಗ್ರಾಮಗಳಿದ್ದು, ಅವುಗಳ ಪೈಕಿ 389 ಗ್ರಾಮಗಳಲ್ಲಿ ರುದ್ರಭೂಮಿಗಳಿವೆ. ಉಳಿದ 32 ಗ್ರಾಮಗಳಲ್ಲಿ ಸದರಿ ಸೌಲಭ್ಯವನ್ನು ಕಲ್ಪಿಸಬೇಕಾಗಿದೆ.

ಆ) ಗ್ರಾಮಸ್ಥರ ಕೋರಿಕೆಯ ಮೇರೆಗೆ ರುದ್ರಭೂಮಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ 34 ಗ್ರಾಮಗಳಿದ್ದು, ಅವುಗಳಲ್ಲಿ 23 ಗ್ರಾಮಗಳಲ್ಲಿ 51.05 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗಿದೆ.

ಈ) ಒಂದೇ ಒಂದು ಅರ್ಜಿ ಬಾಕಿ ಇದ್ದು ಜಮೀನು ಕಾಯ್ದಿರಿಸಲು ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಉ) ಅಗತ್ಯತೆ ಗಮನಿಸಿ ಸರ್ಕಾರಿ ಜಮೀನು ಲಭ್ಯವಿದ್ದರೆ ಅದನ್ನು ಕಾಯ್ದಿರಿಸುವುದು ಹಾಗೂ ಲಭ್ಯವಿಲ್ಲದ ಕಡೆ ಜಮೀನು ಖರೀದಿಸಿ ಸ್ಮಶಾನ ಸೌಲಭ್ಯವನ್ನು ಕಲ್ಪಿಸಲು ಸರ್ಕಾರಿ ಆದೇಶಗಳಿದ್ದು ಅದರಂತೆ ಕಂದಾಯ ಅಧಿಕಾರಿಗಳು ಕ್ರಮ ಕೈಗೊಳ್ಳುವರು.

ಸುರತ್ಕಲ್ ಕ್ಷೇತ್ರಕ್ಕೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು.

137(231) *ಶ್ರೀ ಹುಂಬೆ ಸುಂದರ ರಾವ್ (ಸೂರತ್ಕಲ್)* :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ನಾಲ್ಕು ವರ್ಷಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಸೂರತ್ಕಲ್ ಕ್ಷೇತ್ರಕ್ಕೆ ಮಂಜೂರಾದ ಒಟ್ಟು ಮನೆಗಳು ಎಷ್ಟು;

ಆ) ಇತರೇ ವಸತಿ ಯೋಜನೆಯಡಿಯಲ್ಲಿ ಕ್ಷೇತ್ರಕ್ಕೆ ಮಂಜೂರಾದ ಮನೆಗಳು ಎಷ್ಟು?

ಇ) 1998-99ನೇ ಸಾಲಿನಲ್ಲಿ ನಿಗಧಿಪಡಿಸಿರುವ ಒಂದು ಲಕ್ಷ ಮನೆ ಯೋಜನೆಯಲ್ಲಿ ಸೂರತ್ಕಲ್ ಕ್ಷೇತ್ರಕ್ಕೆ ಮಂಜೂರಾದ ಮನೆಗಳು ಎಷ್ಟು ;

ಈ) 1995-96 ನೇ ಸಾಲಿನಲ್ಲಿ ಆಶ್ರಯ ಮನೆಗಳನ್ನು ನಿಗಧಿಗೊಳಿಸುವಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜಿಲ್ಲೆಯಲ್ಲಿ ಎಷ್ಟು ವಿಧಾನಸಭಾ ಕ್ಷೇತ್ರಗಳನ್ನು ಕೈಬಿಡಲಾಗಿದೆ;

ಉ) ಈ ರೀತಿ ಕೈಬಿಡಲು ಕಾರಣಗಳೇನು?

ಊ) ಈ ತಾರತಮ್ಯದಿಂದ ಉಂಟಾಗುವ ಅನಾನುಕೂಲತೆಯನ್ನು ಗಮನಿಸಿ ಪುನರ್‌ವ್ಯವಸ್ಥೆ ರೂಪಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) 1995-96 - 112
1996-97 - 16
1997-98 - 38
1998-99 - 30

ಆ)

ವರ್ಷ	ಅಂಬೇಡ್ಕರ್	ಇಂದಿರಾ ಆವಾಸ್
1995-96	59	36
1996-97	05	31
1997-98	17	15
1998-99	08	13

ಇ) 1998-99ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡಿದ ಒಂದು ಲಕ್ಷ ಮನೆಗಳ ಗುರಿಯಲ್ಲಿ ಮಂಗಳೂರು ತಾಲ್ಲೂಕಿಗೆ 200 ಮನೆಗಳು ಮಂಜೂರಾಗಿದ್ದು, ಈ ಮನೆಗಳಲ್ಲಿ ಈ ಕ್ಷೇತ್ರಕ್ಕೂ ಹಂಚುವ ಕ್ರಮ ತೆಗೆದುಕೊಳ್ಳಲಾಗುವುದು.

ಈ) 3 ವಿಧಾನಸಭಾ ಕ್ಷೇತ್ರಗಳು

ಉ) ಬೇಡಿಕೆ ಆಧಾರದ ಮೇಲೆ ಬಿಡುಗಡೆ ಮಾಡಲಾಗಿ ಆ ಮನೆಗಳು ಬಾಕಿ ಇಲ್ಲದ ಕಾರಣ ಕೈಬಿಟ್ಟಿದೆ.

ಊ) ವಿಧಾನಸಭಾ ಕ್ಷೇತ್ರವಾರು ಹಂಚಿಕೆಯಲ್ಲಿ ಕಡಿಮೆ ಗುರಿ ಕೊಟ್ಟಿರುವ ಕಡೆ ಹೆಚ್ಚುವರಿ ಮನೆಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು.

ಸುರತ್ಕಲ್ ಕ್ಷೇತ್ರದಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳು.

138(232) ಶ್ರೀ ಕುಂಪ್ಲ ಸುಂದರರಾವ್ (ಸುರತ್ಕಲ್) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸುರತ್ಕಲ್ ಕ್ಷೇತ್ರದಲ್ಲಿ ಖಾಲಿ ಇರುವ ಕೃಷಿ ಸಹಾಯಕರುಗಳ ಹುದ್ದೆ ಎಷ್ಟು?

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಜರೂರು ಕ್ರಮ ಕೈಗೊಳ್ಳಲಾಗುವುದೇ?

ಅ) ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :--

ಉ) 7 ಹುದ್ದೆಗಳು ಖಾಲಿ ಇರುತ್ತವೆ.

ಅ) ಇಲಾಖಾ ಪುನರ್ ಸಂಘಟನೆಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ : ಎಎಹೆಚ್ 278 ಎಎಂಎಲ್94. ದಿನಾಂಕ 31-05-1995ರ ಅನುಸಾರ ಮುಂದೆ ಕೃಷಿ ಸಹಾಯಕರ ಹುದ್ದೆಗಳಿಗೆ ಯಾವುದೇ ನೇಮಕಾತಿ ಇರುವುದಿಲ್ಲ. ಇನ್ನು ಮುಂದೆ ಖಾಲಿಯಾಗುವ ಕೃಷಿ ಸಹಾಯಕರ ಹುದ್ದೆಗಳಲ್ಲಿ, ಎರಡು ಕೃಷಿ ಸಹಾಯಕರ ಹುದ್ದೆಗೆ ಒಂದು ಪದವೀಧರ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳನ್ನಾಗಿ ಪರಿವರ್ತಿಸಿ, ಸದರಿ ಖಾಲಿ ಹುದ್ದೆಗಳನ್ನಾಗಿ ಪರಿವರ್ತಿಸಿ, ಸದರಿ ಖಾಲಿ ಹುದ್ದೆಗಳನ್ನು ಸಹಾಯಕ ಕೃಷಿ ಅಧಿಕಾರಿ ಹುದ್ದೆಯಿಂದಲೇ ತುಂಬಲಾಗುವುದು.

ಸುರತ್ಕಲ್ ಕ್ಷೇತ್ರದಲ್ಲಿ ನಿವೇಶನ ರಹಿತರು.

139(234) ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್) :--- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸುರತ್ಕಲ್ ಕ್ಷೇತ್ರದಲ್ಲಿ ಗುರುತಿಸಲಾಗಿರುವ ನಿವೇಶನ ರಹಿತರ ಒಟ್ಟು ಸಂಖ್ಯೆ ಎಷ್ಟು ;

ಆ) ಅವರಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ಒದಗಿಸಲಾಗಿದೆ ಉಳಿದವರಿಗೆ ಯಾವಾಗ ಒದಗಿಸಲಾಗುವುದು?

ಉ) 1789

ಅ) ಈ ತನಕ ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿ ಒಟ್ಟು 1679 ಜನ ನಿವೇಶನ ರಹಿತರಿಗೆ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ಒದಗಿಸಲಾಗಿದೆ. ಉಳಿದವರಿಗೆ ನಿವೇಶನ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ದೇವಸ್ಥಾನಗಳ ಅಭಿವೃದ್ಧಿ.

141(436) ಶ್ರೀಮತಿ ಬಿ.ಟಿ. ಲಲಿತನಾಯಕ್ (ದೇವದುರ್ಗ) :--- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೆ.

1) ರಾಜ್ಯದಲ್ಲಿರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು; 1997-98ನೇ ಸಾಲಿನಲ್ಲಿ ದೇವಸ್ಥಾನಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

2) 1997-98ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ದೇವಸ್ಥಾನಗಳಿಗಾಗಿ ಪ್ರತಿ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1. ರಾಜ್ಯದಲ್ಲಿ ಒಟ್ಟು 43,217 ಮುಜರಾಯಿ ದೇವಾಲಯಗಳು ಇವೆ.

1997-98ನೇ ಸಾಲಿನಲ್ಲಿ ಸರ್ಕಾರದಿಂದ ದೇವಾಲಯಗಳ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

ಕ್ರ. ಸಂ.	ಸಾಮಾನ್ಯ ಅನುದಾನ ಜೀರ್ಣೋದ್ಧಾರ	ನಿರ್ಮಾಣ	ಆರಾಧನಾ ಯೋಜನೆ
1)	1,76,00,000-00	1,55,00,000	5,00,00,000

2) "ಸಾಮಾನ್ಯ ಅನುದಾನ" ಅಡಿಯಲ್ಲಿ ಪ್ರಸ್ತಾವನೆಗಳ ಅನುಗುಣವಾಗಿ ಅನುದಾನ ಮಂಜೂರು ಮಾಡುವ ಪರಿಪಾಠವಿದ್ದು, ರಾಯಚೂರು ಜಿಲ್ಲೆಗೆ 1997-98ನೇ ಸಾಲಿನಲ್ಲಿ ಜೀರ್ಣೋದ್ಧಾರಕ್ಕೆ ರೂ.7,10,000-00 ಮತ್ತು ನಿರ್ಮಾಣಕ್ಕಾಗಿ ರೂ.29,55,000-00 ಬಿಡುಗಡೆ ಮಾಡಲಾಗಿದೆ. ಆರಾಧನಾ ಯೋಜನೆಯಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಸಮಾನವಾಗಿ ಅನುದಾನ ಬಿಡುಗಡೆ ಮಾಡುವ ಪರಿಪಾಠವಿದ್ದು, 1997-98ನೇ ಸಾಲಿನಲ್ಲಿ ರಾಯಚೂರು 6 ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 12,99,780-00 ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ದೇವದುರ್ಗ ತಾಲ್ಲೂಕಿನಲ್ಲಿ ಆಶ್ರಯ ಮನೆಗಳ ಮಂಜೂರಾತಿ.

142(441) ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1997-98ನೇ ಸಾಲಿನಲ್ಲಿ ರಾಜ್ಯದ ಬಡಜನರಿಗೆ ಹಂಚಿಕೆ ಮಾಡಲಾದ ಮನೆಗಳ ಒಟ್ಟು ಸಂಖ್ಯೆ ಎಷ್ಟು ;

ಆ) ಅವುಗಳ ಪೈಕಿ ರಾಯಚೂರು ಜಿಲ್ಲೆಗೆ ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ ಎಷ್ಟು ; ಹಾಗೂ ಇನ್ನೂ ಹಂಚಿಕೆ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು ;

ಇ) 1998-99ನೇ ಸಾಲಿನಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ ನೂರಾರು ಮನೆಗಳು ಬಿದ್ದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಪರಿಹಾರಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ಮತ್ತು ಎಷ್ಟು ಜನ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಹಾಗೂ ಯಾವ ಯಾವ ಯೋಜನೆಗಳ ಅಡಿಯಲ್ಲಿ ಹಂಚಿಕೆ ಮಾಡಲಾಗಿದೆ;

ಉ) ಕೊಳಚೆ ನಿರ್ಮೂಲನಾ ಮಂಡಳಿಯಿಂದ ದೇವದುರ್ಗ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಇದುವರೆವಿಗೂ ಯಾವ ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಆಶ್ರಯ - 70,633
ಅಂಬೇಡ್ಕರ್ - 21,100
ಇಂದಿರಾ ಆವಾಸ್ - 37,652

	97-98ನೇ ಸಾಲಿನಲ್ಲಿ ನೀಡಿದ ಮನೆಗಳ ಸಂಖ್ಯೆ	98-99ನೇ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವ ಮನೆಗಳ ಸಂಖ್ಯೆ
ಆಶ್ರಯ	1525	1125
ಅಂಬೇಡ್ಕರ್	629	679
ಇಂದಿರಾ ಆವಾಜ್	2535	1871

ಇ) ಬಂದಿದೆ.

ಈ) ವಸತಿ ಇಲಾಖೆಗೆ ಸಂಬಂಧಿಸಿದಂತೆ 1998-99ನೇ ಸಾಲಿನಲ್ಲಿ ಆಶ್ರಯ ಯೋಜನೆಯಲ್ಲಿ ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ದೇವದುರ್ಗ ತಾಲ್ಲೂಕಿಗೆ 500 ಮನೆಗಳ ಗುರಿಯನ್ನು ನೀಡಲಾಗಿದೆ.

ಊ) 1996-97ನೇ ಸಾಲಿನ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಮಂಡಳಿಗೆ ನೀಡಿದ ಅನುಧಾನದಲ್ಲಿ 6.75 ಲಕ್ಷ ರೂ.ಗಳನ್ನು ನಿಗಧಿಪಡಿಸಿ ಘೋಷಣೆಯು ತಡವಾದ ಕಾರಣ ನೇತಾಜಿ ಓಣಿ ಕೊಳಚೆ ಪ್ರದೇಶದಲ್ಲಿ ಮಳೆ ನೀರಿನ ಚರಂಡಿಯ ಕಾಮಗಾರಿಯನ್ನು ಡಿಸೆಂಬರ್ 98ರಲ್ಲಿ ಪ್ರಾರಂಭಿಸಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ.

1997-98ನೇ ಸಾಲಿನಲ್ಲಿ ರಾಷ್ಟ್ರಪತಿ ಓಣಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 1.00 ಲಕ್ಷಗಳನ್ನು ನಿಗಧಿಪಡಿಸಿದ್ದು ಘೋಷಣೆಯು ವಿಳಂಬವಾದ ಕಾರಣ ಕಾಮಗಾರಿಯನ್ನು ತೆಗೆದುಕೊಳ್ಳಲಾಗಲಿಲ್ಲ. ಪ್ರಸಕ್ತ ಸಾಲಿನ ಅಂದರೆ 1999-2000ರ ಮಂಡಳಿಯ ಕ್ರಿಯಾ ಯೋಜನೆಯಡಿ ಅನುದಾನ ನಿಗಧಿಪಡಿಸಿ ಕಾಮಗಾರಿಯನ್ನು ತೆಗೆದಕೊಳ್ಳಲಾಗುವುದು.

ಮೈಸೂರು ನಗರದ ಬನ್ನಿಮಂಟಪದ ಹೈವೇ ವೃತ್ತದ ಕೆ.ಎಸ್.ಆರ್.ಟಿ.ಸಿ. ಹಿಂಭಾಗದಲ್ಲಿ ಕೊಳಚೆ ಪ್ರದೇಶದಲ್ಲಿರುವ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ.

144(430) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದ ಬನ್ನಿಮಂಟಪದ ಪೈಪ್ ವೃತ್ತದ ಕೆಎಸ್ಆರ್‌ಟಿಸಿ ಹಿಂಭಾಗದಲ್ಲಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಆ) ಈ ಹಕ್ಕುಪತ್ರಗಳನ್ನು ಸಿದ್ಧಪಡಿಸಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಅವರಿಗೆ ಯಾವಾಗ ಅದನ್ನು ನೀಡಲಾಗುವುದು;

ಇ) ಚಾಮುಂಡೇಶ್ವರಿ ಸ್ಲಂ ಪ್ರದೇಶಗಳಲ್ಲಿ ಹುಡ್ಕೋ ಸಾಲದೊಂದಿಗೆ 168 ಮನೆಗಳ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು ಈ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಚಾಮುಂಡೇಶ್ವರಿ ಸ್ಲಂ ನಿವಾಸಿಗಳಿಗೆ ವಿತರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಯಾವುದೇ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಂಡಳಿ ವತಿಯಿಂದ ವಸತಿ ಯೋಜನೆ ಅ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿದ ನಂತರ ಹಕ್ಕುಪತ್ರಗಳನ್ನು ವಿತರಿಸುವ ಕಾರ್ಯಕ್ರಮವಿರುತ್ತದೆ. ಇಲ್ಲಿ ಮನೆಗಳ ನಿರ್ಮಾಣ ಯೋಜನೆ ತೆಗೆದುಕೊಂಡಿರುವುದಿಲ್ಲ.

ಆ) ಮನೆಗಳ ನಿರ್ಮಾಣ ಕೈಗೊಳ್ಳದಿರುವುದರಿಂದ ಹಕ್ಕುಪತ್ರ ಸಿದ್ಧಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಚಾಮುಂಡೇಶ್ವರಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಸತಿ ಯೋಜನೆ ಅಡಿ ಹುಡ್ಕೋ ಸಾಲದ ನೆರವಿನೊಡನೆ 168 ಮನೆಗಳನ್ನು ನಿರ್ಮಿಸಲು ಯೋಜಿಸಿದ್ದು ಗುತ್ತಿಗೆದಾರರನ್ನು ನೇಮಿಸಲು ದಿನಾಂಕ :28.1.99ರಂದು ಟೆಂಡರ್ ಕರೆದು ದಿನಾಂಕ :15.3.99ನ್ನು ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನವನ್ನಾಗಿ ನಿಗಧಿಪಡಿಸಲಾಗಿದೆ. ಗುತ್ತಿಗೆದಾರರನ್ನು ನಿಯಮಾನುಸಾರ ನೇಮಿಸಿದ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು. ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆಯ ನಿಯಮಾನುಸಾರ ವಿತರಿಸಲಾಗುವುದು.

ಕೇಂದ್ರ ಸರ್ಕಾರ ಕೊಳಗೇರಿ ಅಭಿವೃದ್ಧಿಗಾಗಿ ಎಸ್.ಸಿ.ಪಿ. ಯೋಜನೆ ಅಡಿ ಬಿಡುಗಡೆ ಮಾಡಿರುವ ಹಣ.

145(449) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 98-99 ರಲ್ಲಿ ಕೇಂದ್ರ ಸರ್ಕಾರ ಕೊಳಗೇರಿ ಅಭಿವೃದ್ಧಿಗಾಗಿ ಎಸ್.ಸಿ.ಪಿ. ಯೋಜನೆ ಅಡಿ ಬಿಡುಗಡೆ ಮಾಡಿರುವ ಹಣ ಎಷ್ಟು ಎಂದು ಬಿಡುಗಡೆ ಮಾಡಲಾಗಿದೆ.

ಆ) ಇದರಲ್ಲಿ ರಾಜ್ಯ ಸರ್ಕಾರ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಿದ ಹಣವೆಷ್ಟು? ಮತ್ತು ಎಂದು ಬಿಡುಗಡೆ ಮಾಡಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಕೇಂದ್ರ ಸರ್ಕಾರವು 1998-99ನೇ ಸಾಲಿನಲ್ಲಿ ಕೊಳಗೇರಿ ಅಭಿವೃದ್ಧಿಗಾಗಿ ಎಸ್.ಸಿ.ಪಿ. ಯೋಜನೆ ಅಡಿ ಮಂಡಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಸಾರಿಗೆ ಅದಾಲತ್.

146(178) ಶ್ರೀರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರಿಗೆ ಅದಾಲತ್‌ಗಳನ್ನು ನಡೆಸಲಾಗಿದೆ.

ಆ) ಈ ಅದಾಲತ್‌ಗಳಲ್ಲಿ ಬಂದ ಮನವಿಗಳೆಷ್ಟು ಹಾಗೂ ಅವುಗಳ ಪೈಕಿ ಎಷ್ಟು ಮನವಿಗಳನ್ನು ಪುರಸ್ಕರಿಸಲಾಯಿತು;

ಇ) ಈ ಸಾರಿಗೆ ಅದಾಲತ್‌ನಿಂದ ಹೊಸದಾಗಿ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚುವರಿ ಬಸ್‌ಗಳನ್ನು ಓಡಿಸಲಾಗುತ್ತಿದೆ?

ಈ) ಈ ಅದಾಲತ್‌ಗಳಲ್ಲಿ ಬರತಕ್ಕ ಮನವಿಗಳ ಇತ್ಯರ್ಥಕ್ಕಾಗಿ ಪ್ರತ್ಯೇಕ ವಿಭಾಗವನ್ನು ತೆರೆಯಲಾಗಿದೆಯೇ?

ಶ್ರೀ ಬಿ.ಎಸ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬೆಂಗಳೂರು ನಗರದ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರಿಗೆ ಆದಾಲತ್ ನಡೆಸಲಾಗಿದೆ.

1) ಜಯಮಹಲ್	2) ಶಾಂತಿನಗರ
3) ಭಾರತಿನಗರ	4) ರಾಜಾಜಿನಗರ
5) ಬಸವನಗುಡಿ	6) ಜಯನಗರ
7) ಉತ್ತರಹಳ್ಳಿ	

ಉಳಿದ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರಿಗೆ ಆದಾಲತ್ ನಡೆಸಲು ಕಾರ್ಯಕ್ರಮವು ಜಾರಿಯಲ್ಲಿದೆ.

ಆ) ಈ ಆದಾಲತ್ ಗಳಲ್ಲಿ ಒಟ್ಟು 574 ಮನವಿಗಳನ್ನು ಸ್ವೀಕೃತವಾಗಿದ್ದು, 113 ಮನವಿಗಳನ್ನು ಪುರಸ್ಕರಿಸಲಾಗಿದೆ.

ಇ) ಈ ಕೆಳಕಂಡ ಕ್ಷೇತ್ರಗಳಿಗೆ ಮುಂದೆ ತೋರಿಸಿದಂತೆ ಬಸ್ಸುಗಳನ್ನು ಓಡಿಸಲಾಗಿದೆ.

1)	ಶಾಂತಿನಗರ	-	3
2)	ಜಯಮಹಲ್	-	4
3)	ಭಾರತಿನಗರ	-	2
4)	ರಾಜಾಜಿನಗರ	-	2
5)	ಬಸವನಗುಡಿ	-	2
6)	ಜಯನಗರ	-	2
7)	ಉತ್ತರಹಳ್ಳಿ	-	3

ಈ) ಹೌದು

ಬೆಂಗಳೂರಿನ ಲಾಲ್‌ಬಾಗ್ ಕೆರೆಯ ಅಭಿವೃದ್ಧಿ.

147(176) ಶ್ರೀರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅರಣ್ಯ ಇಲಾಖೆ, ಲಾಲ್‌ಬಾಗ್ ಕೆರೆಯ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ 1995 ರಲ್ಲಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ ಆ ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಲಾಲ್‌ಬಾಗ್ ಕೆರೆಯನ್ನು ಆ ವರದಿಯ ಪ್ರಕಾರ ಶುದ್ಧೀಕರಣ ಅಭಿವೃದ್ಧಿಗೊಳಿಸಲು ಸರ್ಕಾರ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ?

ಈ) ಲಾಲ್‌ಬಾಗ್ ಕೆರೆಯನ್ನು ಶುದ್ಧೀಕರಣ ಅಭಿವೃದ್ಧಿಗೊಳಿಸಲು ಸರ್ಕಾರ 1998-99 ರಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) 1998-99ನೇ ಸಾಲಿನಲ್ಲಿ ಇಲ್ಲಿವರೆಗೆ ಹಣ ಖರ್ಚು ಮಾಡಿರುವುದಿಲ್ಲ.

ಜಯನಗರ ಬಸ್ ನಿಲ್ದಾಣದ ಅಭಿವೃದ್ಧಿ.

148(178) ಶ್ರೀರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಯನಗರ ಬಸ್ ನಿಲ್ದಾಣ ಬಹಳ ಕಿರಿದಾಗಿದ್ದು ಇದನ್ನು ಬೇರೆ ಜಾಗಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದವರ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಈಗಿರತಕ್ಕ ಬಸ್ ನಿಲ್ದಾಣವನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಗದ್ದಿಗೌಡರು ಹಾಗೂ ಹುಂಡೇಕಾರರ ತಾಲ್ಲೂಕು ಪುನರ್ವಿಂಗಡಣಾ ಸಮಿತಿಗಳು.

149(195) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದ್ದಿಗೌಡ್ರ ಹಾಗೂ ಹುಂಡೇಕಾರರ ತಾಲ್ಲೂಕು ಪುನರ್ವಿಂಗಡನಾ ಸಮಿತಿಗಳ ಶಿಫಾರಸ್ಸಿನಂತೆ ಗುಳೇದಕುಡ್ಡವನ್ನು ತಾಲ್ಲೂಕು ಕೇಂದ್ರವಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಜಿಲ್ಲಾ ಪುನರ್ವಿಂಗಡನೆ ಮಾಡಿದಾಗ ನಂತರದಲ್ಲಿ ತಾಲ್ಲೂಕು ಪುನರ್ವಿಂಗಡನೆ ಮಾಡಲಾಗುವುದೆಂಬ ಹೇಳಿಕೆಯಂತೆ ಸರ್ಕಾರವು ಪ್ರಕ್ರಿಯೆ ಏನಾದರೂ ಪ್ರಾರಂಭ ಮಾಡಿದೆಯೇ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ರಾಜ್ಯದಲ್ಲಿ ಸಧ್ಯಕ್ಕೆ ಯಾವುದೇ ತಾಲ್ಲೂಕುಗಳನ್ನು ರಚಿಸುವ ವಿಚಾರ ಸರ್ಕಾರದಲ್ಲಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಗುಳೇದಗುಡ್ಡ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳು.

150(357) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದ್‌ಗುಡ್ಡ) :— ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ಮಾಣಗೊಂಡ ಅಂಗನವಾಡಿ ಕಟ್ಟಡಗಳ ಸಂಖ್ಯೆ ಎಷ್ಟು ;

ಆ) ಅವುಗಳಿಗೆ ಒದಗಿಸಲಾದ ಅನುದಾನ ಎಷ್ಟು ;

ಇ) ಅಂಗನವಾಡಿ ಕಟ್ಟಡಗಳಲ್ಲಿ ಪೂರ್ಣಗೊಂಡ ಪ್ರಗತಿಯಲ್ಲಿರುವ ಕೆಲಸ ಪ್ರಾರಂಭವಾಗದೇ ಇರುವ ಕಟ್ಟಡಗಳ ಸಂಖ್ಯೆ ಎಷ್ಟು?

ಶ್ರೀಮತಿ ವಿಮಲಾಬಾಯಿ ಜಗದೇವ್ ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :—

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳಡಿಯಲ್ಲಿ 21 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

ಆ) ಒಟ್ಟು ರೂ. 23.10 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ.

ಇ) ನಿರ್ಮಾಣ ಮಾಡಲು ತೆಗೆದುಕೊಂಡ 21 ಅಂಗನವಾಡಿ ಕಟ್ಟಡಗಳಲ್ಲಿ 15 ಪೂರ್ಣಗೊಂಡಿದ್ದು, 6 ಕಟ್ಟಡಗಳು ಪ್ರಗತಿ ಹಂತದಲ್ಲಿದೆ. ಕೆಲಸ ಪ್ರಾರಂಭವಾಗದೇ ಇರುವ ಕಟ್ಟಡಗಳು ಯಾವುದು ಇರುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಭೂ ಸುಧಾರಣಾ ಪ್ರಕರಣಗಳು.

153(573) ಶ್ರೀ ಎಸ್ ಶಿವಣ್ಣ (ತುಮಕೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಚ್ಚನ್ಯಾಯಾಲಯದಿಂದ ತುಮಕೂರು ಜಿಲ್ಲೆಯಲ್ಲಿ ಎಷ್ಟು ಭೂ ಸುಧಾರಣಾ ಪ್ರಕರಣಗಳು ಮರು ಪರಿಶೀಲನೆಗಾಗಿ ಭೂ ಸುಧಾರಣಾ ಮಂಡಳಿಗೆ ಬಂದಿವೆ ಹಾಗೂ ಮುಕ್ತಾಯವಾದ ಪ್ರಕರಣಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ತುಮಕೂರು ತಾಲ್ಲೂಕಿನ ಭೂ ಸುಧಾರಣಾ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 658

(ತಾಲ್ಲೂಕುವಾರು ಮಾಹಿತಿ ಲಗತ್ತಿಸಿದೆ)

514

(ತಾಲ್ಲೂಕುವಾರು ಮಾಹಿತಿ ಲಗತ್ತಿಸಿದೆ)

ಆ) 54

ಅನುಬಂಧ

ವಿಧಾನಸಭೆ ಪ್ರಶ್ನೆ ಸಂಖ್ಯೆ 573 - ಶಾಸಕರು ಶ್ರೀ ಎಸ್. ಶಿವಣ್ಣ (ತುಮಕೂರು) ತಾಲ್ಲೂಕು

	ತಾಲ್ಲೂಕುವಾರು - ಪುನರ್ ವಿಚಾರಣಾ ಪ್ರಕರಣಗಳು					ತಾಲ್ಲೂಕುವಾರು -ಮುಕ್ತಾಯವಾದ ಪ್ರಕರಣಗಳು				
	ಕಲಂಗಳು					ಕಲಂಗಳು				
	48ಎ	66	ಇನಾಂ	ಇತರೆ	ಒಟ್ಟು	48ಎ	66	ಇನಾಂ	ಇತರೆ	ಒಟ್ಟು
ತುಮಕೂರು	52	-	9	-	61	7	-	-	-	7
ಗುಬ್ಬಿ	184	-	101	-	285	160	-	97	-	257
ಕುಣಿಗಲ್	16	-	-	-	16	-	-	-	-	-
ತಿಪಟೂರು	1	-	4	-	5	-	-	-	-	-
ತುರುವೇಕೆರೆ	1	-	-	-	1	1	-	-	-	1
ಚಿ.ನಾ.ಹಳ್ಳಿ	14	-	-	-	14	14	-	-	-	14
ಮಧುಗಿರಿ	8	-	-	-	8	-	-	-	-	-
ಕೊರಟಗೆರೆ	14	3	-	-	17	5	-	-	-	5
ಶಿರಾ	107	-	-	-	107	103	-	-	-	103
ಪಾವಗಡ	108	32	4	-	114	102	21	4	-	127
ಒಟ್ಟು	505	35	118	-	658	392	21	101	-	514

ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಮೇಲಿನ ಬಡ್ಡಿ ಇಳಿಸುವುದು.

154(269) ಶ್ರೀ ಬಿ.ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಹಕಾರ ಸಂಘಗಳ ಮೂಲಕ ರೈತರಿಗೆ ಎಷ್ಟು ಮೊತ್ತದ ಹಣವನ್ನು ನೀಡಲಾಗಿದೆ?

ಆ) ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಮೇಲಿನ ಬಡ್ಡಿದರವನ್ನು ಇಳಿಸುವ ಉದ್ದೇಶ ಏನಾದರೂ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) 1998-99ನೇ ಸಾಲಿನಲ್ಲಿ ಸಹಕಾರ ಸಂಘಗಳ ಮೂಲಕ ರೈತರಿಗೆ ಒಟ್ಟು ರೂ. 1055 ಕೋಟಿ ಸಾಲವನ್ನು ನೀಡಲಾಗಿದೆ.

ಆ) ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಮೇಲೆ ವಿಧಿಸುವ ಬಡ್ಡಿ ದರದ ಕ್ರಮವು ನಬಾರ್ಡ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಚೌಕಟ್ಟಿನೊಳಗೆ ಇರುವುದರಿಂದ, ರೈತರಿಗೆ ಯುಕ್ತ ದರದಲ್ಲಿ ದೊರೆಯುವಂತೆ ಮಾಡುವ ಉದ್ದೇಶ ಸರ್ಕಾರಕ್ಕೆ ಇರುತ್ತದೆ.

ಇ) ರೈತರಿಗೆ ಸಾಲವು ಯುಕ್ತ ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ ದೊರೆಯುವಂತಾಗಲೆಂಬ ದಿಸೆಯಲ್ಲಿ 1996 ಮತ್ತು 1997 ರಲ್ಲಿ ಸರ್ಕಾರವು ಸಂಬಂಧಪಟ್ಟ ಪುರಸಭೆಗಳನ್ನು ನಡೆಸಿರುತ್ತದೆ. ಇದೆಲ್ಲದರ ಪರಿಣಾಮವಾಗಿ 1996-97ರಲ್ಲಿ ರೂ. 25,000.00 ಸಾಲದ ವರೆಗೆ ಶೇಕಡಾ 18.5 ರೂ. 25,000.00 ಮೇಲ್ಪಟ್ಟ ಸಾಲಕ್ಕೆ ಶೇಕಡ 16 ಇದ್ದ ಬಡ್ಡಿ ದರವನ್ನು ಇಳಿಸಿ, ಪ್ರಸ್ತುತ ರೂ. 15,000.00 ರವರೆಗೆ ಶೇಕಡಾ 12.5 ರೂ 15,000.00 ರಿಂದ ರೂ. 25,000.00 ರವರೆಗೆ ಶೇಕಡಾ 18.5 ರೂ.25,000.00 ರಿಂದ 50.000.00 ರವರೆಗೂ ಶೇಕಡಾ 14.5 ಬಡ್ಡಿಯ ದರವನ್ನು ವಿಧಿಸುವಂತೆ ಸಲಹೆ ನೀಡಲಾಗಿದೆ. ಬಡ್ಡಿಯ ದರ ವಿಧಿಸುವ ಕ್ರಮವು ನಬಾರ್ಡ್ ಮತ್ತು ಆರ್.ಬಿ.ಐ. ಮಾರ್ಗಸೂಚಿಯ ವ್ಯಾಪ್ತಿಯಲ್ಲಿ ಬರುವುದರಿಂದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಕನಿಷ್ಟ ಶೇಕಡಾ 12 ಬಡ್ಡಿಯ ದರ ವಿಧಿಸುವ ಪರತ್ತಗೆ ಒಳಪಟ್ಟು ಅನಿಯಂತ್ರಣಗೊಳಿಸಿರುವುದರಿಂದ ಸರ್ಕಾರವು ತನ್ನ ಪರಿಮಿತಿಯೊಳಗೆ ಸಹಕಾರ ಸಂಸ್ಥೆಗಳ ಆರ್ಥಿಕ ಸಬಲತೆಯ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಕ್ರಮವಿಟ್ಟಿದೆ.

ರಾಜ್ಯದಲ್ಲಿ ಅತಿವೃಷ್ಟಿಯಿಂದ ತೊಂದರೆಗೊಳಗಾದ ಪ್ರದೇಶಗಳಿಗೆ ಪರಿಹಾರ.

155(274) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಅತಿವೃಷ್ಟಿಯಿಂದ ತೊಂದರೆಗೊಳಗಾದ ಪ್ರದೇಶವೆಷ್ಟು (ಜಿಲ್ಲಾವಾರು)

ಆ) ಅತಿವೃಷ್ಟಿಗೊಳಗಾದ ಪ್ರದೇಶಗಳಿಗೆ ಸರ್ಕಾರ ನೀಡಿದ ಪರಿಹಾರ ಧನವೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಇ) ಪ್ರಕೃತಿ ವಿಕೋಪಕ್ಕೆ (ಅತಿವೃಷ್ಟಿ : ಅನಾವೃಷ್ಟಿ) ಒಳಗಾದ ರೈತರಿಗೆ ಶಾಶ್ವತ ಪರಿಹಾರ ನೀಡಲು "ರೈತರ ಪರಿಹಾರ ನಿಧಿ" ಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಇದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಬಾರಿ ಮಳೆ : ಪ್ರವಾಹದಿಂದ ರಾಜ್ಯದ ಎಲ್ಲಾ ಜಿಲ್ಲೆಗಳು ತೊಂದರೆಗೊಳಗಾಗಿರುತ್ತವೆ.

ಆ) ಅನುಬಂಧ 'ಅ'ದಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ANNEXURE

STATEMENT SHOWING THE DISTRICT-WISE DETAILS OF AMOUNT RELEASED .

RS. IN LAKHS

Sl. No.	Name of the District	Amt. Released.
1.	Bangalore Urban	100.0
2.	Bangalore Rural	100.0
3	Kolar	100.0
4	Tumkur	100.0
5	Chitradurga	160.0
6	Davangere	150.0

1	2	3
7	Shimoga	123.0
8	Mysore	100.0
9	Chamarajanagar	100.0
10	Mandya	215.0
11	Chickmagalur	100.0
12	Hassan	100.0
13	Kodagu	200.0
14	D.Kannada	254.5
15	Udupi	155.5
16	Gulbarga	732.0
17	Bidar	433.0
18	Raichur	569.0
19	Koppal	271.0
20	Bellary	450.0
21	Belgaum	100.0
22	Bijapur	780.0
23	Bagalkote	110.0
24	Dharwad	110.0
25	Gadag	119.0
26	Haveri	100.0
27	U. Kannada	136.0
28	P.W.D	800.0
29	Minor Irrigation	600.0
30	Health & F.W.S.	100.0
	Total	7468.0

ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂ ಮಾಡುವುದು.

156(275) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂ ಮಾಡುವಂತೆ ಕೋರಿ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ;

ಆ) ಕಳೆದ 4 ವರ್ಷಗಳಿಂದ ಎಷ್ಟು ಭೂಮಿಯನ್ನು ಸಾಗುವಳಿದಾರರಿಗೆ ವಿತರಿಸಲಾಗಿದೆ; (ವರ್ಷವಾರು)

ಇ) ಸಕ್ರಮಗೊಳಿಸುವಂತೆ ಅರ್ಜಿ ಸಲ್ಲಿಸದೇ ಇರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು)

ಈ) ಅರ್ಜಿ ಸಲ್ಲಿಸದೇ ಇರುವವರಿಗೆ ಸಕ್ರಮ ಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 10,89,340

ಆ) ವರ್ಷವಾರು ವಿವರ ಕೆಳಗಿನಂತಿದೆ

ವರ್ಷ	ವಿತರಿಸಲಾಗಿರುವ ವಿಸ್ತೀರ್ಣ (ಎಕರೆಗಳಲ್ಲಿ)
1995-96	3,85,303
1996-97	4,58,839
1997-98	8,02,737
1998-99 (ಡಿಸೆಂಬರ್ 98ರ ಅಂತ್ಯಕ್ಕೆ)	3,69,973
ಒಟ್ಟು	20,16,852

ಇ) ಈ) ಸರ್ಕಾರವು ಈ ಹಿಂದೆ ನಿಗಧಿಪಡಿಸಿದ್ದ ದಿನಾಂಕ 19-9-91ರೊಳಗೆ ಅರ್ಜಿ ಸಲ್ಲಿಸದಿದ್ದ ಅನಧಿಕೃತ ಸಾಗುವಳಿದಾರರಿಗೆ 30-4-99 ದಿನಾಂಕದವರೆಗೆ ಅರ್ಜಿ ಸಲ್ಲಿಸಲು 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ ಹಾಗೂ 1966ರ ಕರ್ನಾಟಕ ಭೂ ಕಂದಾಯ ನಿಯಮಗಳಲ್ಲಿ ಅವಕಾಶ ಕಲ್ಪಿಸಿದೆ. ಇದರ ಅನುಸಾರ ಸ್ವೀಕರಿಸಬಹುದಾದ ಅರ್ಜಿಗಳನ್ನು ನಿರೀಕ್ಷಿಸಲಾಗುತ್ತಿದ್ದು 30-4-99ರವರೆಗೆ ಸ್ವೀಕರಿಸಬಹುದಾದಂತ ಅರ್ಜಿಗಳ ಸಂಖ್ಯೆಯ ವಿವರಗಳನ್ನು ಈ ಹಂತದಲ್ಲಿ ನೀಡಲು ಬರುವುದಿಲ್ಲ.

ತೊಗರಿ ಬೆಳೆಗೆ ಬೆಂಬಲಿತ ಬೆಲೆ.

157(277) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಚಾಗೇಪಲ್ಲಿ) :— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ತೊಗರಿ ಬೆಳೆಯನ್ನು ಎಷ್ಟು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ;

ಆ) ಕಳೆದ ನಾಲ್ಕು ವರ್ಷಗಳಿಂದ ವರ್ಷವಾರು ಎಷ್ಟು ಟನ್ ತೊಗರಿ ಬೆಳೆಯಾಗಿದೆ;

ಇ) ಇತ್ತೀಚಿನ ವರ್ಷಗಳಲ್ಲಿ ತೊಗರಿ ಬೆಳೆಗೆ ಬೆಂಬಲಿತ ಬೆಲೆ ಸಿಗದೆ ಬೆಳೆಗಾರರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ತೊಗರಿ ಬೆಳೆಗೆ ಯೋಗ್ಯ ಬೆಲೆ ಸಿಗುವಂತಾಗಲು ತೊಗರಿ ಮಂಡಳಿ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಉ) ಇದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ರಾಜ್ಯದಲ್ಲಿ ತೊಗರಿ ಬೆಳೆಯನ್ನು ಸುಮಾರು 4.00 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.

ಆ) ಕಳೆದ ನಾಲ್ಕು ವರ್ಷಗಳಿಂದ ತೊಗರಿ ಉತ್ಪಾದನೆ ಕೆಳಕಂಡಂತಿದೆ.

1994-95	1.19 ಲಕ್ಷ ಟನ್
1995-96	2.02 ಲಕ್ಷ ಟನ್
1996-97	2.29 ಲಕ್ಷ ಟನ್
1997-98	0.95 ಲಕ್ಷ ಟನ್ (ಅಂದಾಜು)

ಇ) ಇಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ದೇವಸ್ಥಾನಗಳ ಜೀರ್ಣೋದ್ಧಾರ.

161(157) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1 ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ ಬಾಕಿ ಉಳಿದಿರುವ ಹಣವನ್ನು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಯಾವಾಗ ಬಿಡುಗಡೆ ಮಾಡಲಾಗುವುದು ಬಾಕಿ ಉಳಿದಿರುವ ಹಣ ಎಷ್ಟು;

2 ಈಗಾಗಲೇ ಸರ್ಕಾರದಿಂದ ಅನುದಾನಕ್ಕಾಗಿ ಬಿಡುಗಡೆ ಕೋರಿ ಬಂದ ಅರ್ಜಿಗಳೆಷ್ಟು ; ಹಾಗೂ ಬಾಕಿ ಇರುವ ಅರ್ಜಿಗಳೆಷ್ಟು (ವಿವರ ನೀಡುವುದು).

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

ಅ) 1998-99ನೇ ಸಾಲಿಗೆ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಆಯವ್ಯಯದಲ್ಲಿ ರೂ. 1,26,00,000-00 ಒದಗಿಸಲಾಗಿದೆ. ಈ ಹಣವನ್ನು ಸದ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು, ಆದರಿಂದಾಗಿ ಬಾಕಿ ಹಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 1998-99ನೇ ಸಾಲಿನಲ್ಲಿ ಸರ್ಕಾರದ ಅನುದಾನ ಕೋರಿ ಬಂದ ಒಟ್ಟು ಪ್ರಸ್ತಾವನೆಗಳ ಸಂಖ್ಯೆ : 268 ಎಲ್ಲವು ಸದ್ಯಕ್ಕೆ ಬಾಕಿ ಇರುವುದು.

ಗುಬ್ಬಿ ಕ್ಷೇತ್ರಕ್ಕೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು.

162(24) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಬ್ಬಿ ಕ್ಷೇತ್ರದಲ್ಲಿ 95-96 ರಿಂದ ಇಲ್ಲಿಯವರೆಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು;

ಆ) ಇದಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಬಿಡುಗಡೆಯಾದ ಹಣದಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ಉಳಿದಿದೆ? (ಪೂರ್ಣ ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಮಂಜೂರಾದ ಮನೆಗಳ ಸಂಖ್ಯೆ ಈ ಕೆಳಕಂಡಂತಿದೆ

1995-96	-	367
1996-97	-	172
1997-98	-	275
1998-99	-	737

ಅ) ಇದಕ್ಕೆ ಬಿಡುಗಡೆಯಾದ ಹಣ ಈ ಕೆಳಕಂಡಂತಿದೆ.

1995-96	-	61.540	ಲಕ್ಷ
1996-97	-	28.380	ಲಕ್ಷ
1997-98	-	39.050	ಲಕ್ಷ
1998-99	-	6.600	ಲಕ್ಷ

ಇ) ವರ್ಷ	ಲಕ್ಷಗಳಲ್ಲಿ ಖರ್ಚಾದ ಹಣ	ಲಕ್ಷಗಳಲ್ಲಿ ಉಳಿಕೆ ಹಣ
1995-96	59.870	1.670
1996-97	28.380	--
1997-98	31.550	7.500
1998-99	-	6.600

ಸರಕಾರಿ ಜಮೀನು ಖಾಸಗಿ ಸಂಸ್ಥೆಗಳಿಗೆ ಪರಭಾರೆ ಮಾಡಿರುವುದು.

163(118) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ತಾಲ್ಲೂಕಿನ ಮಾವಿನಕುರ್ವೆ ಪಂಚಾಯತ್ ವ್ಯಾಪ್ತಿಯ ಕರಿಕಲ್ ಗ್ರಾಮದ ಸರ್ವೆ ನಂ.258ರಲ್ಲಿ ತಲಗೊಡದಲ್ಲಿ ಶಾಲೆ ಪ್ರಾರಂಭಿಸಲು ಖಾಸಗಿ ಸಂಸ್ಥೆಯವರಿಗೆ ಅನುಮತಿ ನೀಡಲಾಗಿದೆಯೇ;

ಅ) ಹಾಗಿದ್ದಲ್ಲಿ, ಖಾಸಗಿ ಸಂಸ್ಥೆಯವರಿಗೆ ಈ ಉದ್ದೇಶಕ್ಕಾಗಿ ಮಂಜೂರು ಮಾಡಲಾದ ಜಮೀನಿನ ವಿಸ್ತೀರ್ಣ ಎಷ್ಟು;

ಇ) ಸದರಿ ಜಮೀನು ಅವರಿಗೆ ಯಾವ ರೀತಿಯಿಂದ ಹಸ್ತಾಂತರವಾಗಿದೆ (ಮುಟೇಶನ ಎಂಟ್ರಿಯ ದಾಖಲೆ ಒದಗಿಸುವುದು);

ಈ) ಈ ಬಗ್ಗೆ ಸ್ಥಳೀಯ ಜನರ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಭಟ್ಕಳ ತಾಲ್ಲೂಕಿನ ಕರಿಕಲ್ ಗ್ರಾಮದಲ್ಲಿ ಯಾವುದೇ ಖಾಸಗಿ ಸಂಸ್ಥೆಯವರಿಗೆ ಶಾಲೆ ಪ್ರಾರಂಭಿಸಲು ಜಮೀನು ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಭಟ್ಕಳ ನಗರದಲ್ಲಿ ಮಂಜೂರು ಮಾಡಿರುವ ಹಂಗಾಮಿ ಲಾಗಣಿ ಜಮೀನು.

166(122) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ನಗರದಲ್ಲಿ ಇಲ್ಲಿಯವರೆಗೆ ಮಂಜೂರು ಮಾಡಿರುವ ಹಂಗಾಮಿ ಲಾಗಣಿ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಹಂಗಾಮಿ ಲಾಗಣಿ ಜಮೀನಿನ ಪಟ್ಟಾ ಕೊಡುವಲ್ಲಿ ಇಲಾಖೆ ಅನುಸರಿಸುತ್ತಿರುವ ನಿಯಮಗಳು ಯಾವುವು;

ಇ) ಹಂಗಾಮಿ ಲಾಗಣಿ ಜಮೀನಿನ ಪಟ್ಟಾ ಕೊಡುವಾಗ ಕಂದಾಯ ಇಲಾಖೆಯ ಜಮೀನಿಗೆ ಒಂದೇ ರೀತಿಯ ನಿಯಮಗಳಿವೆಯೇ;

ಈ) ಅರಣ್ಯ ಇಲಾಖೆಯ ಅನುಮತಿ ಇಲ್ಲದೆ ಭಟ್ಕಳ ಹಂಗಾಮಿ ಲಾಗಣಿ ಜಮೀನು ಮಂಜೂರು ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಭಟ್ಕಳ ನಗರದಲ್ಲಿ (ಸೂಸಗಡಿ ಗ್ರಾಮದಲ್ಲಿ) ಹಂಗಾಮಿ ಲಾಗಣಿ ಜಮೀನು ಮಂಜೂರಿ ಮಾಡಿದ್ದು ಇರುವುದಿಲ್ಲ. ಭಟ್ಕಳ ತಾಲ್ಲೂಕಿನಲ್ಲಿ ಹಂಗಾಮಿ ಲಾಗಣಿ ಜಮೀನು ಮಂಜೂರಿ ಆಗಿದ್ದು ಸರ್ಕಾರದ ಆದೇಶ ಕ್ರ:ಆರ್‌ಡಿ:31:ಎಲ್‌ಜಿಎನ್:87 (ಭಾಗ) ದಿನಾಂಕ:20-4-94ರ ಪ್ರಕಾರ ಒಟ್ಟು 1023 ಎಕರೆ ಜಮೀನು ಖಾಯಂ ಲಾಗಣಿ ಮಾಡಿದ್ದು ಇರುತ್ತದೆ.

ಅ) ಹಂಗಾಮಿ ಲಾಗಣಿ ಜಮೀನಿಗೆ ಈಗ ಪಟ್ಟಾ ಕೊಟ್ಟಿದ್ದು ಇರುವುದಿಲ್ಲ, ಸರ್ಕಾರದ ಆದೇಶ ಸಂ: ಆರ್‌ಡಿ:31:ಎಲ್‌ಜಿಎನ್:87 (ಭಾಗ) ದಿನಾಂಕ: 20-4-94ರ ಪ್ರಕಾರ ಜಿಲ್ಲಾಧಿಕಾರಿಗಳು ಖಾಯಂ ಲಾಗಣಿ ಆದೇಶ ಮಾಡಿದ ನಂತರ ಖಾಯಂ ಲಾಗಣಿದಾರರಿಂದ ಮಾಲ್ಕಿ ಆಕಾರ ಮೋಜಣಿ ಫೀ ಮಸೂಲಿ ಮಾಡಿ ಖಾಯಂ ಲಾಗಣಿ ಪಟ್ಟಾ ಕೊಡಲಾಗಿರುತ್ತದೆ.

ಇ) ಹಂಗಾಮಿ ಲಾಗಣಿ ಜಮೀನು ಸರ್ಕಾರದ ಆದೇಶದಂತೆ ಖಾಯಂ ಲಾಗಣಿ ಆದೇಶ ಮಾಡಿದ ಜಮೀನಿಗೆ ಭೂ ಮಂಜೂರಾತಿ ನಿಯಮದನ್ವಯ ಕಂದಾಯ ಇಲಾಖೆ ಜಮೀನಿನಂತೆ ಕ್ರಮ ಜರುಗಿಸಲಾಗಿದೆ. ಇವೆರಡು ಜಮೀನಿಗೆ ಒಂದೇ ನಿಯಮಗಳಿರುತ್ತವೆ.

ಈ) ಹಂಗಾಮಿ ಲಾಗಣಿ ಜಮೀನು 1980ರ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿಗೆ ಬರುವ ಪೂರ್ವ ಅರಣ್ಯ ಇಲಾಖೆಯಿಂದ ಬಿಡುಗಡೆ ಆಗಿ ಕಂದಾಯ ಇಲಾಖೆಗೆ ಹಸ್ತಾಂತರವಾದ ಜಮೀನು ಇದ್ದು ಹಂಗಾಮಿ ಲಾಗಣಿ ಮಂಜೂರಿಯಾದ ಪ್ರಕರಣಗಳಲ್ಲಿ ಕಾಯಿದೆ ಲಾಗಣಿ ಆದೇಶ ಮಾಡಲು ಅರಣ್ಯ ಇಲಾಖೆ ಅನುಮತಿ ಅವಶ್ಯವಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಸುತ್ತ ನಕ್ಷಲಿಯರು ಜಮೀನುಗಳನ್ನು ಖರೀದಿ ಮಾಡುತ್ತಿರುವುದು.

167(330) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಾಮರಾಜನಗರ ಜಿಲ್ಲೆಯಲ್ಲಿ ಸುತ್ತ ನಕ್ಷಲಿಯರು ಜಮೀನುಗಳನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು;

ಆ) ರಾಜ್ಯದಲ್ಲಿ ಚಾಮರಾಜನಗರದಲ್ಲಿ ಸೇರಿದಂತೆ ವಿವಿಧ ಕಡೆ ಬೇರೆ ರಾಜ್ಯದವರು ಜಮೀನನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರೀತಿ ಖರೀದಿ ಮಾಡಿರುವ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಯಾವುದೂ ಇರುವುದಿಲ್ಲ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಈ ರೀತಿ ಒಟ್ಟು 2977.05 ಎಕರೆ ಜಮೀನನ್ನು ಚಾಮರಾಜನಗರ ಜಿಲ್ಲೆಯಲ್ಲಿ ಖರೀದಿ ಆಗಿದೆ.

ವಿವರಗಳು :

1)	ಚಾಮರಾಜನಗರ ತಾ:	2822.05
2)	ಗುಂಡ್ಲುಪೇಟೆ ತಾ:	155.00
	ಒಟ್ಟು	2977.05

ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ದುರಸ್ಥಿ

168(331) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :-- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ಅವುಗಳಲ್ಲಿ ಮುಜರಾಯಿ ಇಲಾಖೆಗೆ ಸೇರಿರುವ ಮತ್ತು ಸೇರದೇ ಇರುವ ದೇವಸ್ಥಾನಗಳ ಸಂಖ್ಯೆ ಎಷ್ಟು;

2) ಆ ಪೈಕಿ ಹೆಚ್ಚಿನ ಆದಾಯ ಬರುವ ದೇವಸ್ಥಾನಗಳು ಯಾವುವು;

3) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ದುರಸ್ಥಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

4) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಹಾಗೂ ಸೇರದೇ ಇರುವ ದೇವಸ್ಥಾನಗಳಲ್ಲಿ ಇರುವ ಅರ್ಚಕರ ಸಂಖ್ಯೆ ಎಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟ ದೇವಸ್ಥಾನಗಳು 43,217. ಇಲಾಖೆಗೆ ಸೇರದೇ ಇರುವ ದೇವಸ್ಥಾನಗಳ ಬಗ್ಗೆ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ.

2) ಮುಜರಾಯಿ ಇಲಾಖೆಗೆ ಒಳಪಟ್ಟ ಪ್ರಮುಖ ದೇವಸ್ಥಾನಗಳ ಪೈಕಿ ವಾರ್ಷಿಕ ರೂ.10.00 ಲಕ್ಷಕ್ಕಿಂತಲೂ ಅಧಿಕ ಆದಾಯವಿರುವ ದೇವಸ್ಥಾನಗಳ ಪಟ್ಟಿಯನ್ನು ಲಗತ್ತಿಸಿದೆ.

3) ದುರಸ್ಥಿ : ಜೀರ್ಣೋದ್ಧಾರಕ್ಕಾಗಿ ಪ್ರತೀ ವರ್ಷವು ಆಯವ್ಯಯದಲ್ಲಿ ಒದಗಿಸುವ ಮೊತ್ತದಲ್ಲಿ ಮುಜರಾಯಿ ಹಾಗೂ ಮುಜರಾಯೇತರ ದೇವಾಲಯಗಳಿಗೆ ಮಂಜೂರು ಮಾಡಲಾಗುತ್ತಿದೆ.

4) ಮುಜರಾಯಿ ಇಲಾಖೆಗೆ ಸೇರಿರುವ ದೇವಸ್ಥಾನಗಳಲ್ಲಿ ಇರುವ ಅರ್ಚಕರು ಒಟ್ಟು 30,111, ಇಲಾಖೆಗೆ ಸೇರದೇ ಇರುವ ದೇವಸ್ಥಾನಗಳ ಬಗ್ಗೆ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ.

ರೂ. 10.00 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಇರುವ ದೇವಾಲಯಗಳ ವಿವರ ತಿಜ್ಞೆ.

ಕ್ರಮ ಸಂಖ್ಯೆ	ದೇವಾಲಯದ ಹೆಸರು
1)	ಶ್ರೀ ಮಲ್ಲೇಮಹದೇಶ್ವರ ದೇವಸ್ಥಾನ, ಕೊಳ್ಳೇಗಾಲ, ಚಾಮರಾಜನಗರ,
2)	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು,
3)	ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು ಮಂಗಳೂರು,
4)	ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಕುಕ್ಕೆ, ಮಂಗಳೂರು,
5)	ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಟೀಲು,
6)	ಶ್ರೀ ವೆಂಕಟರಮಣ ದೇವಸ್ಥಾನ, ರಥ ಬೀದಿ, ಮಂಗಳೂರು,
7)	ಶ್ರೀ ರೇಣುಕಾಯಲ್ಲಮ್ಮ ದೇವಸ್ಥಾನ, ಸೌಂದತ್ತಿ, ಬೆಳಗಾಂ,
8)	ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ ಮೈಸೂರು,
9)	ಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನ, ಯಡಿಯೂರು, ತುಮಕೂರು,
10)	ಶ್ರೀ ವಿನಾಯಕ ದೇವಸ್ಥಾನ, ಆನೆಗುಡ್ಡ, ಮಂಗಳೂರು,
11)	ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮಂದಾರ್ತಿ, ಮಂಗಳೂರು,
12)	ಶ್ರೀ ಕೃಷ್ಣ ದೇವಸ್ಥಾನ, ಉಡುಪಿ,
13)	ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಘಾಟಿ, ದೊಡ್ಡಬಳ್ಳಾಪುರ,
14)	ಶ್ರೀ ಬನಶಂಕರಿ ದೇವಸ್ಥಾನ, ಬನಶಂಕರಿ, ಬೆಂಗಳೂರು,
15)	ಶ್ರೀ ಮಂಜುನಾಥ ದೇವಸ್ಥಾನ, ಕದ್ರಿ, ಮಂಗಳೂರು,
16)	ಶ್ರೀ ಅನಂತಪದ್ಮನಾಭ ದೇವಸ್ಥಾನ, ಕಡಪ, ಮಂಗಳೂರು,
17)	ಶ್ರೀ ಮಹಾಗಣಪತಿ ದೇವಸ್ಥಾನ, ಸರವು, ಮಂಗಳೂರು,
18)	ಶ್ರೀ ಸೋದೆ ವಾದಿರಾಜ ಮಠ ಉಡುಪಿ,
19)	ಶ್ರೀ ಅಡಮಾರು ಮಠ ಉಡುಪಿ,
20)	ಶ್ರೀ ಜನಾರ್ಧನ ಮತ್ತು ಮಹಾಕಾಳಿ ದೇವಸ್ಥಾನ, ಅಂಬುಪಾದಿ,
21)	ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಪೊಳಲಿ,

22) ಶ್ರೀ ವಿರೂಪಾಕ್ಷಸ್ವಾಮಿ ದೇವಸ್ಥಾನ, ಹಂಪಿ, ಬಳ್ಳಾರಿ,

23) ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ಶ್ರೀರಂಗಪಟ್ಟಣ, ಮಂಡ್ಯ,

24) ಶ್ರೀ ಹುಲಿಗಮ್ಮ ದೇವಸ್ಥಾನ, ರಾಯಚೂರು,

25) ಶ್ರೀ ಕಳಸೇಶ್ವರ ದೇವಸ್ಥಾನ, ಮೂಡಗೆರೆ,

26) ಶ್ರೀ ದತ್ತಾತ್ರೇಯಸ್ವಾಮಿ ದೇವಸ್ಥಾನ, ಗಾಣಗಾಪುರ,

27) ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬಪ್ಪನಾಡು, ಮುಲ್ಕಿ

28) ಶ್ರೀ ಗೋಕರ್ಣನಾಥ ದೇವಸ್ಥಾನ, ಕುದ್ರೋಳಿ

29) ಶ್ರೀ ಮಂಗಳಾದೇವಿ ದೇವಸ್ಥಾನ, ಬೋಳಾರ,

30) ಶ್ರೀ ಯೋಗೀಶ್ವರ ಮಠ, ಖದ್ರಿ,

31) ಶ್ರೀ ಹೊಸ ಮಾರಿ ಗುಡಿ, ಕಾಪು,

32) ಶ್ರೀ ಹಳೆಮಾರಿ ಗುಡಿ, ಕಾಪು,

33) ಶ್ರೀ ಮಹಿಷ ಮರ್ಧನಿ ದೇವಸ್ಥಾನ ಕಡಿಯಾಳ,

34) ಶ್ರೀ ಕೃಷ್ಣಾಪುರ ಮಠ, ಉಡುಪಿ,

35) ಶ್ರೀ ಪುತ್ತಿಗೆ ಮಠ, ಉಡುಪಿ,

36) ಶ್ರೀ ಕಣಿಯೂರು ಮಠ, ಉಡುಪಿ,

37) ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನ, ಬೆಡಗಬೆಟ್ಟು, ಉಡುಪಿ,

38) ಶ್ರೀ ಗುರು ನರಸಿಂಹ ದೇವಸ್ಥಾನ, ಸಾಲಿಗ್ರಾಮ,

39) ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪುಡಬಿದ್ರೆ,

40) ಶ್ರೀ ಅನಂತೇಶ್ವರ ಮತ್ತು ಚಂದ್ರ ಮೌಳೇಶ್ವರ ದೇವಸ್ಥಾನ, ಉಡುಪಿ,

41) ಶ್ರೀ ವೆಂಕಟರಮಣ ದೇವಸ್ಥಾನ, ಕುಂದಾಪುರ,

42) ಶ್ರೀ ಬ್ರಹ್ಮ ದುರ್ಗಾಪರಮೇಶ್ವರಿ ದೇವಸ್ಥಾನ, ಕಮುಶಿರೆ, ಕುಂದಾಪುರ, ತಾಲ್ಲೂಕು,

43) ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನ, ಬಂಟ್ವಾಳ,

44) ಶ್ರೀ ಸಹಸ್ರಲಿಂಗೇಶ್ವರ ದೇವಸ್ಥಾನ, ಉಪ್ಪಿನಂಗಡಿ,

45) ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು,

ಅಧ್ಯಕ್ಷರು :— ಮಂಡಿಸಲಾಯಿತು.

(2) ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 1998-99ನೇ ಸಾಲಿನ ಪೂರಕ ಅಂದಾಜುಗಳನ್ನು (ಅಂತಿಮ ಕಂತು) ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಮಂಡಿಸಲಾಯಿತು.

ನಿಯಮ 69ರ ಮೇರೆಗೆ ಚರ್ಚೆ

ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ಚರ್ಚೆ ಆಗುವ ಮೊದಲು ಸರ್ಕಾರ ಹೊರಡಿಸಿದ್ದ ಇತ್ತೀಚಿನ ಮೀಸಲಾತಿ ಆದೇಶವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಿರ್ಧಾರ ಆಗಬೇಕಿತ್ತು. ಏಕೆಂದರೆ ಬೇರೆ ಇಂಟರೆಸ್ಟೆಡ್ ಪರ್ಸನನ್ಸ್ ಇರುತ್ತಾರೆ, ಅದೆಲ್ಲಕ್ಕಿಂತಲೂ ಇದು ಸ್ವಲ್ಪ ಡೀಪ್ ಆಗಿ ಎಲ್ಲವನ್ನೂ ಯೋಚನೆ ಮಾಡಿ ಮಾಡಬೇಕಾಗುತ್ತದೆ.

ಅಧ್ಯಕ್ಷರು :— ಇವತ್ತು ಸಾಯಂಕಾಲ ಮೀಟಿಂಗ್ ಕರೆಯುತ್ತೇನೆ. ಈ ಮೀಟಿಂಗ್‌ನಲ್ಲಿ ತಾವೇ ಇರುತ್ತೀರಿ, ನಾನು ಏನೂ ಮಾಡುವುದಿಲ್ಲ, ಎಲ್ಲಾ ಪಕ್ಷದ ಮುಖಂಡರುಗಳು, ಸರ್ಕಾರದ ಪ್ರತಿನಿಧಿಗಳು ಇರುತ್ತಾರೆ. ತಾವು ಅಲ್ಲಿ ತೀರ್ಮಾನ ಮಾಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏಕೆಂದರೆ ಹೀಗೆ ಡಿಲೇ ಆಗುತ್ತಾ ಹೋದರೆ ಈ ಅಧಿವೇಶನ ಮುಗಿದ ಮೇಲೆ ಪುನಃ ಅದರ ಪ್ರಾಮುಖ್ಯತೆ ಉಳಿಯುವುದಿಲ್ಲ. ಮತ್ತು ನಾವೆಲ್ಲಾ ಅದರ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲ ಅಂದರೆ ಪುನಃ ಹೊರಗಡೆ ಗಲಾಟೆ ಆಗುತ್ತದೆ.

ಅಧ್ಯಕ್ಷರು :— ಶ್ರೀ ಡಿ. ಮಂಜುನಾಥ್ ಅವರು ನನಗೆ ಬೆಳಿಗ್ಗೆ ಫೋನ್ ಮಾಡಿದ್ದರು. ಮಾನ್ಯ ಆರೋಗ್ಯ ಮಂತ್ರಿಯವರು ಈಗತಾನೇ ಪತ್ರ ಬರೆದು ಕಳುಹಿಸಿದರು. ನಾನು ಇವತ್ತೇ ಮಧ್ಯಾಹ್ನ ಮೂರೂವರೆಯಿಂದ ನಾಲ್ಕು ಗಂಟೆ ಸಮಯದಲ್ಲಿ ಮೀಟಿಂಗ್ ಫಿಕ್ಸ್ ಮಾಡಿ ತಮಗೆ ಹೇಳಿಕಳುಹಿಸುತ್ತೇನೆ. ಹಾಗೆಯೇ ಮುಖ್ಯಮಂತ್ರಿಗಳಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಉಪ ಮುಖ್ಯಮಂತ್ರಿಗಳು ಕೂಡ ಮೀಟಿಂಗ್‌ನಲ್ಲಿ ಇರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏಕೆಂದರೆ ಅಡ್ವೋಕೇಟ್ ಜನರಲ್‌ರವರು, ಎಲ್ಲಾ ಸೆಕ್ರೆಟರಿಗಳು, ಆಮೇಲೆ ಅದರಲ್ಲಿ ಆಸಕ್ತಿ ಇರತಕ್ಕಂಥ ಎಲ್ಲಾ ಶಾಸಕರುಗಳು ಆಗಲಿ, ಮಂತ್ರಿಗಳಾಗಲಿ ಅವರೆಲ್ಲ ಬಂದು ಅದನ್ನು ಮಾಡಬೇಕಾಗತ್ತದೆಯೇ ಹೊರತಾಗಿ, ಅದು ಸೂ-ಮೋಟೊ ಎಂದು ಬಹಳ ಸುಲಭ ಇದೆಯೆಂದು ಹೇಳಿ ನಿರ್ಲಕ್ಷ್ಯ ತಾಳಿದರೆ ಪುನಃ ನಾಳೆ ನಮ್ಮ ಇಡೀ ಸದನದಲ್ಲಿ ರಿಪ್ಲೆಕ್ಷನ್ ಆಗಬಾರದು.

ಅಧ್ಯಕ್ಷರು :— ನನಗೆ ಈಗಾಗಲೇ ಭಯ ಪ್ರಾರಂಭವಾಗಿದೆ. ನಾನು ಇಲ್ಲಿ ಡಿಸ್ಕಷನ್ ಅವಾಯ್ಡ್ ಮಾಡಿದೆ ಎಂದು ಯಾರೋ ಪೇಪರ್‌ನಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅವರು ಏನೋ ಅವರ ಅಭಿಪ್ರಾಯ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಸಬ್ಜೆಕ್ಟ್ ಡಿಸಕಷನ್‌ಗೆ ತೆಗೆದುಕೊಳ್ಳಲಿಲ್ಲ, ಬರೀ ಆದೇಶವನ್ನು ವಿತ್‌ಡ್ರಾ ಮಾಡಬೇಕಾಗಿತ್ತು. ಎಂದು ಅವರು ನಮಗೂ ಹೇಳುತ್ತಾರೆ. ಅದು ಹೇಳುವವರಿಗೆ ಏನು?

ಅಧ್ಯಕ್ಷರು :— ಅವರು ಹಾಗೆ ಹೇಳಿದರೂ ಕೂಡ ನಾವು ಅದನ್ನು ಅಲಕ್ಷಿಸುವ ಹಾಗಿಲ್ಲ. ನಾವು ಅವರು ಹೇಳಿದ್ದನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕಲ್ಲವೇ? We cannot be indifferent to those observations also. We must take cognisance of that also. ಇವತ್ತೇ ಮೀಟಿಂಗ್ ಕರೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮಗೆ ಅಲ್ಟಿಮೇಟಲಿ ಬೇಕಾಗಿರುವುದು ರಿಲೀಫ್. ಆ ದೃಷ್ಟಿಯಿಂದ ಮೀಸಲಾತಿ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೆವು. ಆದರೆ ಹೆಚ್ಚಿಗೆ ಅವಕಾಶ ಮಾಡಿಕೊಡಲಿಲ್ಲ. ಆ ರಿಲೀಫ್ ಸಿಗಲಿಲ್ಲವೆಂದರೆ ಕೊನೆಗೆ ಹೊರಗಿನವರು ಹೇಳಿದಹಾಗೆ ಮತ್ತೆ ಆಗುತ್ತದೆ. Then we will all be victims.

ಅಧ್ಯಕ್ಷರು :— ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸಂಜೆ ನಾಲ್ಕು ಗಂಟೆಗೆ ಸೇರೋಣ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ನಿಯಮ 69ರ ಪ್ರಕಾರ ಮಹಿಳೆಯರ ಸಮಗ್ರ ಚಿಂತನೆ ಬಗ್ಗೆ ಚರ್ಚೆ ಎಂದು ತಾವು ಹೇಳಿದ್ದೀರಿ. ಇದರಲ್ಲಿ ಪುರುಷರು ಭಾಗವಹಿಸಬಹುದಲ್ಲವೇ?

ಅಧ್ಯಕ್ಷರು :— ಅಗತ್ಯವಾಗಿ.

ಶ್ರೀ ವಾಟಾಳ್ ನಾಗರಾಜ್ :— ನಾವೆಲ್ಲಾ ಈ ಚರ್ಚೆಯಲ್ಲಿ ಭಾಗವಹಿಸಬಹುದೆಂದು ನಮ್ಮ ಕೈಯಿಂದ ಸೈನ್ ತೆಗೆದುಕೊಂಡಿದ್ದಾರೆ. ಭಾಗವಹಿಸುವ ಹಾಗಿಲ್ಲ ಎಂದರೆ ನಾವೆಲ್ಲಾ

ಹೊರಗಡೆ ಹೋಗುತ್ತೇವೆ. ತಾವು ಏನು ಹೇಳುತ್ತೀರೋ ಹಾಗೆ ಕೇಳುತ್ತೇವೆ. ಮಹಿಳೆಯರದ್ದು ಆ ತರಹ ಏನಾದರೂ ಮಡಿವಂತಿಕೆ ಆದರೆ ನಮ್ಮದೇನೂ ಅಭ್ಯಂತರವಿಲ್ಲ. ಮಹಿಳೆಯರ ಪರ ನಿಲ್ಲಬೇಕೆಂದು ಹೇಳಿ ನಾವು ಸೈನ್ ಹಾಕಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್‌ರವರ ಸಹಿಯನ್ನು ಮಾತ್ರ ತೆಗೆದುಕೊಂಡಿದ್ದಾರೆ ಅಂದರೆ ಉಳಿದವರ ಸಪೋರ್ಟ್ ಬೇಕಿಲ್ಲವೇ? ಶ್ರೀ ವಾಟಾಳ್ ನಾಗರಾಜ್‌ರವರು ಒಬ್ಬರು ಮಾತ್ರ ಮಹಿಳೆಯರ ಪರವಾಗಿರುವವರು ಬಾಕಿ ಇರುವವರು ಮಹಿಳೆಯರ ಪರವಾಗಿ ಇಲ್ಲ ಎಂದು ಅರ್ಥವೇ?

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ನಾನು ನೂರಕ್ಕೆ ನೂರು ಮಹಿಳೆಯರ ಪರವಾಗಿ ಇದ್ದೇನೆ. ಅದರಲ್ಲಿ ಅನುಮಾನವೇ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಮ್ಮ ಮೇಲೆ ಯಾರಿಗೂ ಅನುಮಾನ ಬೇಡ. ನಾವು ಏನಾದರೂ ಮಾತನಾಡುವುದಾದರೆ ನಿಮಗೋಸ್ಕರವೇ ಮಾತನಾಡುವುದು. ಇವತ್ತು ನಮ್ಮನ್ನು ತಿದ್ದಿಕೊಳ್ಳಬೇಕಾಗಿರುವುದು ಅಲ್ಲ, ಪುರುಷ ಸಮಾಜ ಯಾವ ರೀತಿಯಾಗಿ ಸ್ತ್ರೀಯನ್ನು ನೋಡುತ್ತದೆ ಎನ್ನುವುದರಿಂದ ನಿಮ್ಮನ್ನು ನಾವು ಹೆಚ್ಚುಗಳಿಮೆ ನೋಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ತಾವು ನಮಗೆ ರಕ್ಷಣೆ ಕೊಡಬೇಕಾಗುತ್ತದೆ ಏಕೆಂದರೆ ಪ್ರಾರಂಭದಲ್ಲಿಯೇ ಇವರು ನಮಗೆ ಭಯಭೀತಿ ಹುಟ್ಟುಹಾಕಿದ್ದಾರೆ. ನಮ್ಮ ಕೈಯಿಂದಲೇ ಸಹಿ ತೆಗೆದುಕೊಂಡು ನಾವು ಶುರು ಮಾಡುವುದು ನಿಮ್ಮ ಮೇಲೆ ಎಂದು ಹೇಳಿ ಪ್ರಾರಂಭ ಮಾಡುತ್ತಿದ್ದಾರೆ. ಈ ತರಹ ಆದರೆ ಮಾನ್ಯ ಅಧ್ಯಕ್ಷರೇ, ನಮ್ಮ ಸಹಾಯಕ್ಕೆ ತಾವು ಬರಬೇಕು. ಇತ್ತೀಚೆಗೆ ನೀವು ಮಹಿಳೆಯರ ಬಗ್ಗೆ ಏಕೆ ಮೃದುವಾಗಿರುತ್ತೀರಿ? ತಾವು ಬಹಳ ಉದ್ದುದ್ದ ಭಾಷಣ ಮಾಡುತ್ತಿದ್ದೀರಿ.

ಅಧ್ಯಕ್ಷರು :— ನನಗೆ ಇವತ್ತು ಬೆಳಿಗ್ಗೆ ಯಾರೋ ಒಬ್ಬ ಸ್ನೇಹಿತರು- ಏನ್ರೀ, ಪ್ರತಿ ದಿವಸ ನಿಮ್ಮ ಬಗ್ಗೆ ಏನಾದರೂ ಒಂದು ಪೇಪರ್‌ನಲ್ಲಿ ಸುದ್ದಿ ಇರುತ್ತದೆ. ಇವತ್ತು ಸೀಟು ಮಾಡಿಕೊಂಡು ಹೋಗಿದ್ದಾರೆ. ಎಂದು ಇದೆ. ಸುಮ್ಮನೆ ಕುಳಿತುಕೊಂಡು ಬರುವುದಕ್ಕೆ ನಿಮಗೆ ಆಗುವುದಿಲ್ಲವೇ ಎಂದು ಹೇಳಿದರು. ಅದಕ್ಕೆ ನಾನು ಸುಮ್ಮನಿದ್ದೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) :— ಮಾನ್ಯ ಅಧ್ಯಕ್ಷರೆ, ಇವತ್ತು, ಜಾತಿ, ಮತ, ಪಕ್ಷಭೇದ ಬಿಟ್ಟು ಎಲ್ಲರೂ ಸೇರಿಕೊಂಡು ಇವತ್ತಿನ ದಿವಸ ಈ ವಿಧಾನ ಸಭೆಗೆ ಮಾರ್ಗದರ್ಶನ ಮಾಡಬೇಕಾಗಿರತಕ್ಕಂಥ ಸಂದರ್ಭ ಒದಗಿಬಂದಿದೆ. ಮಹಿಳಾ ವಿಮೋಚನಾ ಸಂಸ್ಥೆಯು ಬೆಂಗಳೂರಿನಲ್ಲಿ, ರಾಜ್ಯದಲ್ಲಿ ಮಹಿಳೆಯರ ಮೇಲೆ ಆಗುತ್ತಿರತಕ್ಕಂಥ ಅತ್ಯಾಚಾರ, ವರದಕ್ಷಿಣೆ ಮುಂತಾದವುಗಳಿಂದ ಎಷ್ಟು ಜನ ಹೆಣ್ಣುಮಕ್ಕಳು

ಸಾಯುತ್ತಿದ್ದಾರೆ ಇತ್ಯಾದಿ ಅಂಕಿಗಳನ್ನು ಸಂಗ್ರಹಿಸಿ ತಮಗೆ ಒಂದು ಮನವಿಯನ್ನು ಕೊಟ್ಟು ಮತ್ತು ಇಲ್ಲಿ ಸದರಿ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದಕ್ಕೂಸ್ಕರ ನಾನು ಮೊಟ್ಟಮೊದಲನೆಯದಾಗಿ ಆ ಸಂಘವನ್ನು ಅಭಿನಂದಿಸುತ್ತಿದ್ದೇನೆ. ತಾವು ಮತ್ತು ಮೇಲ್ಮನೆಯ ಸಭಾಪತಿಗಳು, ಈ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಇದರ ವಿಷಯವಾಗಿ ಬಹಳ ಕೂಲಂಕುಷವಾಗಿ ಇವತ್ತು ಚರ್ಚೆಯಾಗಲು ಅವಕಾಶ ಕೊಟ್ಟದ್ದಕ್ಕೆ ನಾನು ಕರ್ನಾಟಕದ ಎಲ್ಲಾ ಮಹಿಳೆಯರ ಪರವಾಗಿ ತಮಗೂ ಕೂಡ ಅಭಿನಂದಿಸುತ್ತೇನೆ. 1848ರಲ್ಲಿ ವುಮೆನ್ಸ್ ರೈಟ್ಸ್ ಕನ್‌ವೆನ್‌ಷನ್ಸ್ ಮ್ಯಾನಿಫೆಸ್ಟೋದಲ್ಲಿ ಈ ರೀತಿ ಹೇಳಿದರು.

'The history of mankind is history of repeated injuries and usurpations on the part of man towards woman, having in direct object the establishment of a tyranny over her'.

ಇದನ್ನು ನಾನಲ್ಲ ಹೇಳಿದ್ದುದು. ಆಗ ಈ ಮಾತನ್ನು ಮ್ಯಾನಿಫೆಸ್ಟೋದಲ್ಲಿ ಸೆನೆಟ್‌ಫಾಲ್ಸ್‌ನಲ್ಲಿ ಹೇಳಿದರು. ಇದಾದನಂತರ, ಶ್ರೀ ಜವಾಹರಲಾಲ್ ನೆಹರೂರವರು ಇದೇ ವಿಷಯವನ್ನು ಪ್ರಸ್ತಾಪಿಸುತ್ತಾ, ಒಂದು ಮಾತು ಹೇಳಿದರು, ಏನೆಂದರೆ,

``I am quite sure that our real and basic growth will only come when women have a full chance to play their part in public life. Whenever they have had this chance, they have, as a whole, done well, better, if I may say so, than the average man. Our laws are man-made, our society dominated by man, and so most of us naturally take a very lopsided view of this matter. We cannot be objective, becuase we have grown up in certain grooves of thought and action. But the future of India will probably depend ultimately more upon the woman than the men...

ಇದನ್ನು ನಾನಲ್ಲ ಹೇಳಿದ್ದು. ಶ್ರೀ ಜವಾಹರಲಾಲ್‌ರವರು ಹೇಳಿದ ಮಾತಿದು. ಇವತ್ತು ಇಡೀ ಭಾರತ ದೇಶದಲ್ಲಲ್ಲ, ಇಡೀ ವಿಶ್ವದಲ್ಲಿ ಒಂದು ಟರನಿ ಆಗುತ್ತಿದೆ. ಇದರ ಬಗ್ಗೆ ಸುಸಂಸ್ಕೃತರಾದ ನಾವೆಲ್ಲರೂ ಯೋಚಿಸಬೇಕಾಗಿದೆ. ನನಗನ್ನಿಸುತ್ತದೆ, ಇದರ ಬಗ್ಗೆ ಹಲವಾರು ದೇಶಗಳು ಮಾರ್ಗದರ್ಶನ ಮಾಡಿವೆ. ಆಸ್ಟ್ರೇಲಿಯಾ, ಕೆನಡಾ, ಅಮೆರಿಕಾ ದೇಶಗಳಲ್ಲಿ ಇದರ ಬಗ್ಗೆ ದೊಡ್ಡ ಆಂದೋಲನವಾಗಿ, ವಿಚಾರಗಳಾಗಿ, ತೀರ್ಮಾನಗಳನ್ನು ಕೊಟ್ಟು, ಇದರ ಬಗ್ಗೆ ಸೂಕ್ತವಾದ ಕಾನೂನು ತರುವುದಕ್ಕೆ ವ್ಯವಸ್ಥೆ ಮಾಡಿದರು. ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ, ಇದೇ ರೀತಿಯಾದಾಗ, ಅಲ್ಲಿಯೂ ಕೂಡ ಇದೇ ರೀತಿ ಈ ಸಂದರ್ಭದಲ್ಲಿ ಯಾವ ರೀತಿ ನಾವು ತರುತ್ತಿದ್ದೇವೆಯೋ, ಹಾಗೆ ತೀರ್ಮಾನವಾಗಿ

ಅಲ್ಲಿ ರಿಪೋರ್ಟ್ಸ್ ಬಂತು. ಆದರೆ, ಕರ್ನಾಟಕದಲ್ಲಿ ಪ್ರಪ್ರಥಮವಾಗಿ ತಾವು ಇವತ್ತಿನ ದಿವಸ ನಮಗೆ ಅವಕಾಶ ಕೊಟ್ಟಿದ್ದೀರಿ. ನಾನಾದರೂ ಕೂಡ ಇದನ್ನು ಶುಭಲಕ್ಷಣವೆಂದು ತಿಳಿದುಕೊಂಡಿದ್ದೇನೆ. 5ನೇ ವರ್ಷವಿದ್ದು, ಅಸೆಂಬ್ಲಿಯ ಅವಧಿ ಮುಗಿಯುತ್ತಾ ಬಂದಿರುವ ಸಂದರ್ಭದಲ್ಲಿ ಈ ಒಂದು ಸಭೆ ಇವತ್ತು ಚಾರಿತ್ರಕವಾದ ತೀರ್ಮಾನವನ್ನು ತೆಗೆದುಕೊಂಡು, ಮಹಿಳೆಯ ಮೇಲಾಗುತ್ತಿರುವ ಆಘಾತ ಮತ್ತು ಅತ್ಯಾಚಾರಗಳನ್ನು ನಿಯಂತ್ರಣ ಮಾಡುವುದರಲ್ಲಿ ಯಾವ್ಯಾವ ಕಾನೂನುಗಳನ್ನು ರೂಪುಗೊಳಿಸಬೇಕು, ಯಾವ್ಯಾವ ಕಾನೂನಿನಲ್ಲಿ ಲೋಪದೋಷಗಳಿವೆ, ಅದನ್ನು ಹೇಗೆ ತಿದ್ದುಪಡಿ ಮಾಡಬೇಕು, ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರಗಳನ್ನು ಹೇಗೆ ನಿಲ್ಲಿಸಬೇಕೆಂಬ ಬಗ್ಗೆ ಸಮಗ್ರವಾಗಿ ಇವತ್ತಿನ ದಿವಸ ಎಲ್ಲಾ ಮಹನೀಯರೂ ಸೇರಿ ಚರ್ಚೆ ಮಾಡಿ, ಮಾರ್ಗದರ್ಶನ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು ಇಲ್ಲಿ ಚರ್ಚೆಯಾಗುತ್ತಿರುವಾಗ ತಾವು ಈ ಕಡೆ ಗಮನ ಕೊಡಬೇಕು.

ಅಧ್ಯಕ್ಷರು :— ಗಮನ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ಜೊತೆಗೆ ಬಹಳ ವಿಶೇಷವೆಂದರೆ, ಇದಕ್ಕೆ ಶ್ರೀ ಶ್ರೀರಾಮರೆಡ್ಡಿಯವರೂ ಸಹಿ ಹಾಕಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಏಕೆ ನೀವು ಗಮನಕೊಡಬೇಕೆಂದರೆ, ಈ ವಿಚಾರವನ್ನು ಹೇಳುತ್ತಿರುತ್ತೇವೆ, ತಾವು ಗಮನಿಸದಿದ್ದರೆ ಸರಿಯಲ್ಲ. ಬ್ರಹ್ಮಚಾರಿಯಾದ ಶ್ರೀ ರೆಡ್ಡಿಯವರು ಬಹಳ ಪ್ರಾಮುಖ್ಯವಾಗಿ ಇದಕ್ಕೆ ಸಹಿ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) :— ರೆಡ್ಡಿಯವರು ಹೆಂಗಸರೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇಲ್ಲಿ ಚರ್ಚೆ ಪ್ರಸ್ತಾಪ ಮಾಡುವುದಕ್ಕೆ ಹೇಳಿದ್ದೇ ನಾನು.

ಶ್ರೀ ವಾಟಾಳ್ ನಾಗರಾಜ್ :— ತಮಗೆ ಅರ್ಥವಾಯಿತಲ್ಲಾ. ಅವರು ಒಂದು ಹದಕ್ಕೆ ಬಂದಿದ್ದಾರೆ. ಆದ್ದರಿಂದ, ನಾವು ಅವರಿಗೆ ಮದುವೆ ಮಾಡಿಸುವುದಕ್ಕೆ ತೀರ್ಮಾನಿಸಿದ್ದೇವೆ. ಅದಕ್ಕೋಸ್ಕರ, ಬೇರೆ ಮಾತೇ ಇಲ್ಲ.

ಶ್ರೀ ಸಿ. ಬೈರೇಗೌಡ :— ಅವರೇನು ಹೆಂಗಸರೇ?

ಶ್ರೀ ವಾಟಾಳ್ ನಾಗರಾಜ್ :— ಅವರು ಗಂಡಸರೇ ಅದಕ್ಕೇ ಅವರಿಗೆ ಮದುವೆ ಮಾಡಿಸಬೇಕೆಂದು ಹೇಳಿದ್ದುದು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಬೈರೇಗೌಡರೆ, ಈ ರೀತಿ ಹೇಳುತ್ತೀರಲ್ಲಾ. ಅದನ್ನೇ ನಾವು ಪ್ರತಿಭಟಿಸುತ್ತಿರುವುದು. ಹೆಣ್ಣಿಂದ ಮಾತ್ರಕ್ಕೆ, ಕಡಿಮೆಯೇ ಅಥವಾ ಹೆಚ್ಚೆಂದು ಅಲ್ಲ. ಇದನ್ನು ನಾನು ನಿಜವಾಗಲೂ ಪ್ರತಿಭಟಿಸುತ್ತೇನೆ. ನಿಮ್ಮ ಈ ವಿಚಾರ, ಮನೋಭಾವನೆ ನಿಮ್ಮಲ್ಲಿ, ಬರಬಾರದು.

ಶ್ರೀ ಸಿ. ಬೈರೇಗೌಡ :— ಆ ದೃಷ್ಟಿಯಿಂದಲ್ಲ, ರಿದ್ದಿಯವರಿಗೇ ವಿಶೇಷವಾಗಿ ಹೇಳಿದರಲ್ಲಾ, ಅದಕ್ಕೇ ನಾನು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ :— ನೀವೇಕೆ ಹೆಂಗಸರೆಂದು ಹೇಳುವುದು?

ಶ್ರೀ ಸಿ. ಬೈರೇಗೌಡ :— ನೀವೇ ಹೇಳಿದ್ದಕ್ಕೆ ನನಗೆ ಅನುಮಾನ ಬಂತು.

ಶ್ರೀ ವಾಟಾಳ್ ನಾಗರಾಜ್ :— ಅದರಲ್ಲೇನು ಅನುಮಾನ? ಮಹಿಳೆಯರ ಬಗ್ಗೆ ವ್ಯಂಗ್ಯವಾಗಿ ಮಾತನಾಡುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ :— ಖಂಡಿತ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನ್ನನ್ನು ಪ್ರಸ್ತಾಪ ಮಾಡಿ, ನಿಜವಾಗಿ ವಿಷಯದ ದಿಕ್ಕು ತಪ್ಪಿಸುವುದು ಬೇಡ.

MR. SPEAKER: It is a serious matter..

ಶ್ರೀಮತಿ ಪ್ರಮೀಳಾ ನೇಸರ್ಗಿ :— ನೀವೆಲ್ಲಾ ಇದರ ಬಗ್ಗೆ ಯೋಚಿಸಬೇಕು. ಹಾಸ್ಯವಾಗಿ ತೆಗೆದುಕೊಂಡು ಲಘುವಾಗಿ ಮಾತನಾಡಬಾರದು.

MR. SPEAKER :— ಅಮ್ಮ I met the delegation.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಭಾರತದಲ್ಲಿ ಮಹಿಳೆಯರನ್ನು ಯಾವ ರೀತಿ ಚಿತ್ರಣ ಮಾಡುತ್ತಾರೆಂದರೆ, ದೇವಿ ಎನ್ನುತ್ತಾರೆ. ಆ ರೀತಿ ಕರೆದು, ಹೆಸರಿಗೆ ದೇವಿಯಷ್ಟೆ, ಆದರೆ, ಇವತ್ತು ಮನೆಯಲ್ಲಿ ಅವಳ ಪರಿಸ್ಥಿತಿ ಏನಾಗಿದೆಯೆಂಬುದನ್ನು ಯೋಚನೆ ಮಾಡಬೇಕು. ಏನಾಗಿದೆ ಎಂದರೆ ಬ್ಯಾಟರ್ಡ್ ವುಮನ್ ಎನ್ನುವುದಾದರೆ, ವಯಲೆನ್ಸ್ ಏನಾದರೂ ಆಗುವುದಾದರೆ ಏನು ಹೇಳುತ್ತಾರೆಂದರೆ, violence towards woman is due to power and control ಎಂದು ಹೇಳುತ್ತಾರೆ. ಇವತ್ತು ಗಂಡಿಗೆ ಮಹಿಳೆಯರ ಮೇಲೆ ಅಧಿಕಾರ ಮತ್ತು ಹತೋಟಿ ಇರಬೇಕಾಗಿರುವುದು, ಅದು ಅವನ ಕೈ ತಪ್ಪಿ ಹೋದಾಗ, ವಯಲೆನ್ಸ್ ಆಗುತ್ತದೆಂಬುದನ್ನು ನಾವು ಕೇಳಿದ್ದೇವೆ. ಈ ವಯಲೆನ್ಸ್ ಅಥವಾ ಹತೋಟಿ, ಈ ಅಧಿಕಾರ, ಇದನ್ನು ಅಹಂಕಾರವೆಂದು ಹೇಳಬಹುದು, ಅದು ಸ್ವಾಭಿಮಾನಕ್ಕೆ ಧಕ್ಕೆ ಬರುತ್ತದೆಂದು ಹೇಳಬಹುದು, ಈ ಪವರ್ ಮತ್ತು ಕಂಟ್ರೋಲ್ ಏನಿದೆ ಇದನ್ನು ತಪ್ಪಿಸಿ, ಮಹಿಳೆಯರ ಮೇಲಾಗುತ್ತಿರುವ ಅತ್ಯಾಚಾರ ತಪ್ಪಿಸುವುದಕ್ಕೆ ಏನು ಮಾಡಬೇಕೆಂಬುದರ

ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನನ್ನಲ್ಲಿರುವ ಮಾಹಿತಿಯ ಪ್ರಹಾರ ಭಾರತದಲ್ಲಿ on an average rape occurs every 54 minutes, a molestation every 26 minutes, a kidnapping every 23 minutes; and so called dowry death every 42 minutes; The case of female child abuse would perhaps be attributed to growing social and apathy cynicism which have gradually the earlier norms of conmunique and family. ಶರ್ಮಾರವರು ಸ್ಟಾಟಿಸ್ಟಿಕ್ಸ್ ಕೊಟ್ಟಿದ್ದಾರೆ. ನನಗೆ ದುಃಖವಾಗುವ ವಿಷಯವೆಂದರೆ, ಅದೂ ಕರ್ನಾಟಕದಲ್ಲಲ್ಲ, ವಿಶ್ವದಲ್ಲಿ ಎಲ್ಲೇ ಹೋದರೂ ನೋಡಿರುವುದು, ಮಹಿಳೆಯರ ಮೇಲೆ ಆಗುತ್ತಿರುವುದು ಅನ್ಯಾಯ ಭಾರತ ಮತ್ತು ಕರ್ನಾಟಕದಲ್ಲಿ ಮಾತ್ರವೆಂದು ನಾವಂದುಕೊಂಡಿರುವುದು ತಪ್ಪು. ಕೆನಡಾದಲ್ಲಿ, ಅಮೆರಿಕಾದಲ್ಲಿ, ಆಸ್ಟ್ರೇಲಿಯಾ, ಇಂಗ್ಲೆಂಡ್‌ನಲ್ಲಿ, ಪ್ರತಿಯೊಂದು ದೇಶದಲ್ಲಿಯೂ ಕೂಡ ಮಹಿಳೆಯರು ಇದನ್ನನುಭವಿಸಿಕೊಂಡು ಬರುತ್ತಿದ್ದಾರೆ- ಎನ್ನುವುದು ಅಲ್ಲಿರುವ ಸ್ಟಾಟಿಸ್ಟಿಕ್ಸ್ ಮತ್ತು ರಿಪೋರ್ಟ್ಸ್ ನೋಡಿದಾಗ ನಮಗೆ ತಿಳಿದು ಬರುತ್ತದೆ. ವಕೀಲಳಾಗಿ ನಾನು ನೋಡಿರುವ ಒಂದೆರಡು ದೃಶ್ಯಗಳನ್ನು ತಮ್ಮ ಮುಂದಿಡುವುದಕ್ಕಿಷ್ಟಪಡುತ್ತೇನೆ. ಒಂದು ಕೇಸ್‌ನಲ್ಲಿ ನಾನು ಹೆಸರು ಹೇಳಲು ಬಯಸುವುದಿಲ್ಲ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ಮಹಿಳೆಯಾಗಿದ್ದು, 18 ವರ್ಷದವಳಾಗಿದ್ದು, ಬಹಳ ಬುದ್ಧಿವಂತಳಾಗಿದ್ದು ಅಷ್ಟೇ ಅಲ್ಲ, ಬಹಳ ಖರ್ಚು ಮಾಡಿ ಅವಳನ್ನು ಹಣವಂತನೊಬ್ಬನಿಗೆ ಮದುವೆ ಮಾಡಿಕೊಟ್ಟಿದ್ದರು. ಮದುವೆಯಾಗಿ 6 ತಿಂಗಳು ಕೂಡ ಆಗಿರಲಿಲ್ಲ, ಆ ಮಹಿಳೆ ತವರು ಮನೆಗೆ ಬರುತ್ತಿರಲಿಲ್ಲ. ತಂದೆ ತಾಯಿ, ತಮ್ಮ ಮಗಳನ್ನು ಗಂಡನ ಮನೆಯವರು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಅದಕ್ಕೆ ಇವಳು ತಾಯಿ ಮನೆಗೆ ಬರುವುದಕ್ಕೆ ಇಷ್ಟಪಡುತ್ತಿಲ್ಲವೇನೋ ಎಂದುಕೊಂಡಿದ್ದರು. ಒಂದು ದಿವಸ ರಾತ್ರಿ 11.30ರ ಸಮಯದಲ್ಲಿ ಆ ಹುಡುಗಿ ನನ್ನ ಮನೆ ಬಾಗಿಲು ತಟ್ಟಿದಳು. ಕಾಲಲ್ಲಿ ಚಪ್ಪಲಿ ಕೂಡ ಇರಲಿಲ್ಲ. ಗೌನ್ ಹಾಕಿಕೊಂಡಿದ್ದಳು. ಮೈಯಿಂದ ರಕ್ತ ಹರಿಯುತ್ತಿತ್ತು. ನಾನು ವಿಷಯವೇನೆಂದು ಕೇಳಿದಾಗ, ಅವಳು ಹೇಳಿದ ಚಿತ್ರವನ್ನು ತಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ. ಅವಳು ಮದುವೆಯಾದ ನಂತರ, ಎಷ್ಟೇ ಹಣ ಕೊಟ್ಟಿದ್ದರೂ, ವರದಕ್ಷಿಣೆ ಸಾಲದೆಂದು ಆಕೆಯ ಹೆಸರಿನಲ್ಲಿದ್ದ ಒಂದು ಮನೆಯನ್ನು ತನ್ನ ಹೆಸರಿಗೆ ಬರೆದುಕೊಡಬೇಕೆಂದು ಮಾವನ ಮನೆಯವರು ಕೇಳಿದರು. ಅದಕ್ಕವಳು ತನ್ನ ತಂದೆತಾಯಿ ಎಷ್ಟೊಂದು ಕಷ್ಟಪಟ್ಟು ಮದುವೆ ಮಾಡಿಕೊಟ್ಟಿದ್ದಾರೆ, ಹಣ ಆಭರಣ ಕೊಟ್ಟಿದ್ದಾರೆ, ಇನ್ನೂ ನೀವು ಹಣ ಕೇಳುವುದು ಸರಿಯಲ್ಲ, ನಾನು ನನ್ನ ತಂದೆತಾಯಿಯನ್ನು ಕೇಳುವುದಿಲ್ಲವೆಂದಾಗ, ಅವಳನ್ನು ಬಚ್ಚಲ ಮನೆಯ ಕಿಟಕಿಯಲ್ಲಿ ಕಾಲಿಗೆ ಸರಪಳಿ ಹಾಕಿ ಕಟ್ಟಿದ್ದರು. ಊಟವನ್ನೂ ಅಲ್ಲಿಗೆ ಕೊಡುತ್ತಿದ್ದರು. ನನಗೆ ಇದನ್ನು ಹೇಳುವಾಗ ಬಹಳ ದುಃಖವಾಗುತ್ತಿದೆ, ಆ ಹುಡುಗಿಗೆ ಅತ್ತೆ, ಮಾವ, ಮೈದುನರೆಲ್ಲರೂ ಸೇರಿ ಏನು ಕಿರುಕುಳ ಕೊಟ್ಟರೆಂದರೆ, ಅವಳು ಅಂಗೈ ತೋರಿಸಿದಳು, ಅದನ್ನು ಬ್ಲೇಡಿನಿಂದ ಕುಯ್ದಿದ್ದರು. ಅತ್ತೆ ಅಥವಾ ಮಾವ ಪಾರದ ಪುಡಿ

ತೆಗೆದುಕೊಂಡು ಬಂದು ರಕ್ತವಾಗಿದ್ದ ಕೈ ಮೇಲೆ ಹಾಕಿದರು. ಅವಳ ಚೀರಾಟ ಕೇಳುವುದಷ್ಟಾಗುತ್ತಿರಲಿಲ್ಲ. ಮಾವ, ಮೈದುನ ಬಂದು ಕೋಳಿಯ ಕತ್ತನ್ನು ಕತ್ತರಿಸಿ, ಅದರ ಬಿಸಿ ರಕ್ತವನ್ನು ಮೈದುನ ಅವಳನ್ನು ಹಿಡಿದುಕೊಂಡು ಬಾಯಿಗೆ ರಕ್ತವನ್ನು ಹಾಕಿ, ಆಸ್ತಿ ತರುತ್ತೀಯೋ, ಇಲ್ಲವೋ ಎಂದು ಕೇಳಿದ. ಆ ಹೆಣ್ಣು ಮಗುವಿಗೆ ತಡೆದು-ಕೊಳ್ಳುವುದಷ್ಟಾಗುತ್ತಿರಲಿಲ್ಲ. ಮೈ ತುಂಬಾ ರಕ್ತವಾಗಿತ್ತು. ರಾತ್ರಿ ಸುಮಾರು ಹನ್ನೊಂದು ಗಂಟೆಯಲ್ಲಿ ಬಾತ್‌ರೂಮಿಗೆ ಹೋಗುತ್ತೇನೆಂದು ಹೇಳಿ, ಸರಪಣಿ ಬಿಚ್ಚಿಕೊಂಡು ಮನೆಯವರ ಕಣ್ಣುತಪ್ಪಿಸಿ ರಿಚ್‌ಮಂಡ್ ರೋಡ್‌ನಿಂದ ಇಂದಿರಾನಗರದವರೆಗೆ ಓಡೋಡಿ ನಮ್ಮ ಮನೆಗೆ ಬಂದಳು. ಆ ಪರಿಸ್ಥಿತಿಯಲ್ಲಿ ಅವಳನ್ನು ನೋಡಿದಾಗ ನನಗೆ ಏನು ಅನಿಸಿತು ಎಂದರೆ, ಇವತ್ತಿನ ಪರಿಸ್ಥಿತಿಯಲ್ಲಿ ಮಹಿಳೆ ಹೇಗೆ ಇದ್ದಾಳೆ ಎನ್ನುವುದನ್ನು ಇಲ್ಲಿರುವ ಎಲ್ಲಾ ಮಹನೀಯರು ಅರ್ಥ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಟಿ.ಪಿ. ಕೈಲಾಸಂರವರು ಬಹಳ ಹಿಂದೆ "ತಾಳಿ ಕಟ್ಟುವ ಕೂಲಿ"ನೇ ಎಂದು ಹೇಳಿದ್ದರು. ಅಂದು ಹೇಳಿರತಕ್ಕಂಥ ಮಾತು ಇಂದು ನಡೆಯುತ್ತಿದೆ. ತಾಳಿ ಕಟ್ಟುವುದಕ್ಕೆ ಕೂಲಿ ಕೇಳಿ ಮದುವೆಯಾದ ನಂತರ ಹಣವನ್ನು ತಂದುಕೊಡು ಎಂದು ಕೇಳಿ, ಟೈಪ್‌ರೈಟರ್, ಫ್ರಿಜ್, ರೇಡಿಯೋ, ತೆಗೆದುಕೊಂಡು ಬಾ ಎಂದು ಕೇಳತಕ್ಕಂಥ ಪರಿಸ್ಥಿತಿಯನ್ನು ನಾವಿಂದು ನೋಡುತ್ತಿದ್ದೇವೆ. ವರದಕ್ಷಿಣೆ ಕಿರುಕುಳ, ವರದಕ್ಷಿಣೆ ಪ್ರಾಹಿಬಿಷನ್ ಆಕ್ಟ್‌ನ್ನು ನಾವೆಲ್ಲಾ ಸೇರಿ ಅಮೆಂಡ್ ಮಾಡಿದೆವು. ಮದುವೆಯಾದ ಏಳು ವರ್ಷದ ಒಳಗೆ ಈ ರೀತಿ ಏನಾದರೂ ಸತ್ತರೆ, ಅಥವಾ ಅಪಘಾತವಾದರೆ, ಇದರ ಮೇಲೆ ಕ್ರಮಕೈಗೊಳ್ಳಬೇಕು ಎಂದು ಕಾನೂನನ್ನು ತಂದೆವು. ಆದರೆ ಇದು ಯಾವ ಕಾನೂನೂ ಸಹ ಇಂಪ್ಲಿಮೆಂಟ್ ಆಫಾರೀಟಿಸ್, ಪೋಲಿಸ್‌ನವರು ಇದನ್ನು ಸರಿಯಾಗಿ ವ್ಯವಧಾನ ಮಾಡದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿ, ಕಾನೂನು ಕೇವಲ ಪುಸ್ತಕದಲ್ಲಿ ಮಾತ್ರ ಇದೆ ಎಂದು ನಾನು ಬಹಳ ದುಃಖದಿಂದ ಈ ಮಾತನ್ನು ಹೇಳಬೇಕಾಗಿದೆ. ರಾತ್ರಿ ವೇಳೆಯಲ್ಲಿ ನಮ್ಮ ಮನೆಗೆ ಬಂದಂಥ ಆ ಹೆಣ್ಣುಮಗುವಿಗೆ ಸಹಾಯ ಮಾಡುವ ದೃಷ್ಟಿಯಿಂದ, ಅವಳ ಗಂಡ ಮತ್ತು ಮೈದುನನ್ನು ಅರೆಸ್ಟ್ ಮಾಡಿಸುವುದಕ್ಕೆ ಪ್ರಯತ್ನಿಸಿದೆ. ಅರೆಸ್ಟ್ ಮಾಡಿಸಿದ ನಂತರ ಎರಡೂ ಕುಟುಂಬಗಳ ಕಡೆಯಿಂದ ದೊಡ್ಡ ಮನುಷ್ಯರು ನನ್ನ ಹತ್ತಿರ ಬಂದು, ಎರಡು ದೊಡ್ಡ ಮನೆತನಗಳು ಇವರನ್ನು ಕೋರ್ಟ್‌ನಲ್ಲಿ ಅರೆಸ್ಟ್ ಮಾಡಿಸುವುದು ಬೇಡ ಎಂದು ಹೇಳಿ, ರಾಜಿ ಮಾಡಿಸಿದಿರಿ ಎಂದು ಹೇಳುವಂತಹ ಪ್ರಸಂಗವನ್ನೂ ಕೂಡ ನಾನು ನೋಡಿದ್ದೇನೆ. ಇದೊಂದು ಸಾಮಾನ್ಯವಾದ ಘಟನೆ ಅಲ್ಲ ಇಂಥ ಸಹಸ್ರಾರು ಘಟನೆಗಳು ಆಗುವುದನ್ನು ನಾವು ನೋಡಿದ್ದೇವೆ. ಮೊನ್ನೆ ತಾನೇ ಬೀಜಾಪುರದಲ್ಲಿ ಜರುಗಿದಂಥ ನಮ್ಮ xxxx ಇತ್ತೀಚಿನ ವರ್ಷಗಳಲ್ಲಿ ಏನಾಯಿತು ಎಂಬುದನ್ನು ಕೂಡ ನೋಡಿದ್ದೇವೆ.

---

xxxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :— ಮಂತ್ರಿಗಳದ್ದು ವಿಚಾರ ತಮಗೇನೂ ಗೊತ್ತಿಲ್ಲ. ನೀವು ಈ ರೀತಿ ಹೇಳಿದರೆ ಪತ್ರಿಕೆಗಳವರಿಗೆ, ಸಾರ್ವಜನಿಕರಿಗೆ, ಮಂತ್ರಿಗಳ ಮೇಲೆ ಏನು ಅಭಿಪ್ರಾಯ ಬರುತ್ತದೆ? It will give a different meaning. No, it is a natural death, ಅನ್‌ನ್ಯಾಚುರಲ್ ಡೆತ್ ಕೇಸ್‌ನ್ನು ನಾವು ರಿಜಿಸ್ಟರ್ ಮಾಡಿಕೊಂಡಿದ್ದೇವೆ. ವಿಚಾರಣೆ ನಡೆಯುತ್ತಿದೆ. ಈ ರೀತಿ ಇದ್ದಾಗ ಮಂತ್ರಿಗಳ ಮೇಲೆ ಮಾತನಾಡಿದರೆ ಹೇಗೆ? ಈ ರೀತಿಯಾದಂಥ ಉದಾಹರಣೆಗಳನ್ನು ತೆಗೆದುಕೊಳ್ಳಬಾರದು. It should not go on record,

ಶ್ರೀಮತಿ ಫ್ರಮೀಳಾ ನೇಸರ್ಗಿ :— ಅನ್‌ನ್ಯಾಚುರಲ್ ಡೆತ್ ಎಂದು ರಿಜಿಸ್ಟ್ರ ಮಾಡಿಕೊಂಡಿದ್ದೀರಿ. ಅದನ್ನು ನ್ಯಾಚುರಲ್ ಡೆತ್ ಎಂದು ಕನ್‌ವರ್ಟ್ ಆಗುತ್ತಿದೆ. ಇದೇ ವಿಷಯವನ್ನು ವಿಮೋಚನಾ ಸಂಸ್ಥೆಯವರು ತಮ್ಮ ಮುಂದೆ ಇಟ್ಟಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— xxxx ಇದು ಸರಿಯಲ್ಲ, ಎನ್ನುವುದು ನನ್ನ ಅಭಿಪ್ರಾಯ. that is not the case, that is not the truth. ನೀವು ಬೇಕಾದರೆ ಬೇರೆ ಉದಾಹರಣೆಗಳನ್ನು ತೆಗೆದುಕೊಳ್ಳಿ.

ಶ್ರೀಮತಿ ಫ್ರಮೀಳಾ ನೇಸರ್ಗಿ :— ಟ್ರೂಥ್ ಅಲ್ಲವೆಂದು ನೀವು ಹೇಗೆ ಹೇಳುತ್ತೀರಿ?....

SRI P.G.R. SINDHIA :— It is under investigation, ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ, xxxx ಸತ್ಯಾಂಶ ಏನು ಇದೆಯೋ ನಮಗೆ ಗೊತ್ತಿಲ್ಲ. ವಿಚಾರಣೆ ಮಾಡಿಸುತ್ತಿದ್ದೇವೆ. ಪೋಲಿಸ್ ನವರು ಅನ್ಯಾಚುರಲ್ ಡೆತ್ ಎಂದು ಈಗಾಗಲೇ ಕೇಸ್ ರಿಜಿಸ್ಟ್ರ್ ಮಾಡಿಕೊಂಡಿದ್ದಾರೆ. ಆ ಹುಡುಗಿಯ ಕಡೆಯಿಂದಾಗಲಿ, ತಂದೆ-ತಾಯಿಗಳಿಂದಾಗಲಿ, ಮತ್ತೊಬ್ಬರ ಕಡೆಯಿಂದಾಗಲಿ ಯಾವುದೇ ದೂರು ಬಂದಿಲ್ಲ. ಹೀಗಿರುವಾಗ ಮಾನ್ಯ ಸದಸ್ಯರು, xxxx ಈ ರೀತಿ ಮಾತನಾಡಿದರೆ ಹೇಗೆ? ಬೇರೆ ಉದಾಹರಣೆಗಳನ್ನು ಕೊಡಿ. ನೀವು ಇದುವರೆವಿಗೂ ಏನು ಮಾತನಾಡಿದಿರಿ, ನಾವೆಲ್ಲಾ ಕೇಳಿಸಿಕೊಂಡು ಇಲ್ಲಿ ಕುಳಿತಿದ್ದೇವೆ. ಇಲ್ಲಿಯವರೆಗೆ ರೈಲು ಸರಿಯಾಗಿ ಹಳಿಯ ಮೇಲೆ ಹೋಗುತ್ತಿತ್ತು. ಈಗ ಹಳಿಯ ಮೇಲೆ ಹೋಗದೇ ಬೇರೆ ಕಡೆಗೆ ತಿರುಗುತ್ತಿದೆ. ಇವತ್ತು ಈ ವಿಷಯದ ಬಗ್ಗೆ ಮಾತನಾಡಲು ಸಭಾಧ್ಯಕ್ಷರು ಹಾಗೂ ಸಭಾಪತಿಗಳವರು ಎರಡು ಮನೆಯ ಮಹಿಳಾ ಸದಸ್ಯರ ಜೊತೆಯಲ್ಲಿ ಮಾತನಾಡಿ ಅವಕಾಶ ಕಲ್ಪಿಸಿಕೊಟ್ಟಂಥ ಸಂದರ್ಭದಲ್ಲಿ, ಮಾನ್ಯ ಬೈರೇಗೌಡರು ಹಾಗೂ ಮಾಲೂರ್ ನಾಗರಾಜರವರು ಮಧ್ಯೆ ಪ್ರವೇಶಿಸಿದಾಗ ಇದನ್ನು ಲಘುವಾಗಿ ಪರಿಗಣಿಸಬೇಡಿ ಎಂದು ಹೇಳಿದರಲ್ಲದೇ ಬಹಳ ಗಂಭೀರವಾಗಿ ವಿಚಾರ, ಇದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ದೃಷ್ಟಿಯಿಂದ ನನಗೆ ನಿರ್ದೇಶನವಾಗಿ

---

xxxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಿಸಲಾಗಿರುತ್ತದೆ.

ಹೇಳಿದ್ದಾರೆ. ಈ ಸಂಬಂಧವಾಗಿ ನಾನು ಮತ್ತು ಉನ್ನತ ಅಧಿಕಾರಿಗಳ ಜೊತೆಯಲ್ಲಿ ಮೂರು ಸಭೆಗಳನ್ನು ಮಾಡಿದ್ದೇನೆ. ಕಾನೂನನ್ನು ಯಾವ ರೀತಿ ಬದಲಾವಣೆ ಮಾಡಿ, ಮಹಿಳೆಯರಿಗೆ ಯಾವ ರೀತಿ ಹೆಚ್ಚಿನ ರಕ್ಷಣೆ ಕೊಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿರುವಾಗ, ನೀವು ಈ ರೀತಿ ರಾಜಕೀಯ ದೃಷ್ಟಿಯಿಂದ ನೋಡಿದರೆ ಹೇಗೆ? ಭಾಷಣ ಮಾಡುವಂತಹ ಸಂದರ್ಭದಲ್ಲಿ ಈ ವಿಚಾರವಾಗಿ, ಪಕ್ಷ, ಗುಂಪು, ಭೇದ, ಮತ್ತೊಂದು ಎಲ್ಲಾ ಬಿಡುತ್ತೇವೆ ಎಂದು ತಾವೇ ಹೇಳಿದಿರಿ. ಈ ರೀತಿ ಮಂತ್ರಿಗಳ ಮೇಲೆ ಹೇಳಿದರೆ, ಅದು ಅವರ ಮೇಲೆ ಯಾವ ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ತಾವು ದಯವಿಟ್ಟು ವಿಚಾರ ಮಾಡಬೇಕು. ಆದ್ದರಿಂದ, ಪರಸ್ಪರ ದೋಷಾರೋಪಣೆ ಮಾಡುವುದು ಬೇಡ. ವಿಷಯದ ಗಂಭೀರತೆಯನ್ನು ಅರಿತು ಅದರ ಬಗ್ಗೆ ತಾವು ಹೇಳಿ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ವೈಯಕ್ತಿಕವಾಗಿ ನೀವು xxxx ಇಲ್ಲಿ ಇಲ್ಲದೇ ಇರುವುದರಿಂದ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. Case is under investigation. ಅವರ ಕೊಲೆಯಾಗಿದೆ ಎಂದು dowry harassment ಅಥವಾ ವರದಕ್ಷಿಣೆ ಕಿರುಕುಳವೆಂದು ಯಾರೂ ಇದುವರೆವಿಗೂ ದೂರನ್ನು ಕೊಟ್ಟಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಾನು ಹೇಳಿದ್ದನ್ನು ಮಾನ್ಯ ಸಚಿವರು, ಅರ್ಥ ಮಾಡಿಕೊಳ್ಳಲಿಲ್ಲ. It is under investigation, ಇನ್‌ವೆಸ್ಟಿಗೇಷನ್ ಆಗತಕ್ಕಂಥದ್ದು...

SRI P.G.R. SINDHYA :— There is not allegation as such which is now made. It is only the Hon. Member who is making an allegation on this floor. Nobody has complained. No complaint we have received.

ಅಧ್ಯಕ್ಷರು :— ನಮ್ಮ ಮುಂದಿರತಕ್ಕಂಥ ವಿಷಯದ ಗಾಂಭೀರತೆಯನ್ನು ಹಾಪಾಡುವ ದೃಷ್ಟಿಯಿಂದ ಬೇರೆ ವಿಷಯ ಪ್ರಸ್ತಾಪಿಸುವುದು ಬೇಡ. ಮಾನ್ಯ ಗೃಹ ಮಂತ್ರಿಗಳ ಹೇಳಿಕೆಯ ಮೇಲೆ ಅವರ ಮನೆಯಲ್ಲಿ ನಡೆದಂಥ ದುರ್ಘಟನೆ ಈ ತರಹದಕ್ಕೆ ಸಂಬಂಧಪಟ್ಟದೆಯೋ ಇಲ್ಲವೋ ಎನ್ನುವುದಕ್ಕೆ ನಮ್ಮ ಹತ್ತಿರ ಮಾಹಿತಿ ಇಲ್ಲ. ಈ ಹಂತದಲ್ಲಿ ಅವರ ಹೆಸರಿಗೆ ಕಳಂಕ ಹಚ್ಚುವುದು ಬೇಡ. I remove it from the records. No reference will be made to the Minister's family. Please kindly note it.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಕಳ್ಳನ ಮನಸ್ಸು ಹುಳಹುಳ್ಳಗೆ ಎನ್ನುವ ಒಂದು ಗಾದೆ ಇದೆ. ನಾನೇನಾದರೂ ಇವರು ಮಾಡಿದ್ದಾರೆಂದು ಹೇಳಿದನೇ? ಅಧ್ಯಕ್ಷರೆ, ದಯಮಾಡಿ ಅರ್ಥಮಾಡಿಕೊಳ್ಳಿ....

---

xxxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಧ್ಯಕ್ಷರೆ, ಇದು ಸರಿಯಲ್ಲ, ಕಳ್ಳನ ಮನಸು ಹುಳಹುಳ್ಳಗೆ ಎಂದರೆ ನನ್ನ ಮನಸ್ಸು ಏಕೆ ಹುಳಹುಳ್ಳಗೆ ಆಗಬೇಕು? There is no `Kalla' here at all,

ಅಧ್ಯಕ್ಷರು :— ಇನ್ನೂ ಅನೇಕ ಅವಕಾಶಗಳು ತಮಗೆ ಸಿಗುತ್ತದೆ. ಅದು ನಿಜವಾಗಲೂ ಯುಡಿಆರ್ ಬಗ್ಗೆ ತನಿಖೆಯಾಗಿ ಅವರು ಅಪರಾಧಿಗಳು ಅಥವಾ ಇದಕ್ಕೆ ಏನಾದರೂ ಸಂಬಂಧವಿದೆ ಎಂದು ತಿಳಿದು ಬಂದರೆ ಮತ್ತೊಂದು ಬಾರಿ ನೀವು ಇಲ್ಲಿ ಚರ್ಚಿಸಬಹುದು. ದಯಮಾಡಿ, ಇವತ್ತು ನಮ್ಮ ಮುಂದಿರುವ ವಿಷಯದ ಬಗ್ಗೆ ಮಾತ್ರ ಮಾತನಾಡಿ...

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಾನು ಏನು ಹೇಳಿದೆ ಎಂದರೆ, ಅನ್‌ನ್ಯಾಚುರಲ್ ಡೆತ್ ರಿಜಿಸ್ಟ್ರಿ ಎಂದು ಇದೆ. ಬೆಂಗಳೂರಿನಲ್ಲಿ 711 ಕೇಸುಗಳು ರಿಪೋರ್ಟ್ ಆಗಿವೆ. ಈ ಎಲ್ಲಾ ಕೇಸುಗಳಲ್ಲಿ ಅಸಹಜ ಸಾವು ಎಂದು ರಿಪೋರ್ಟ್ ಮಾಡಿಕೊಳ್ಳುತ್ತಾರೆ. ಈ ಎಲ್ಲಾ ಕೇಸುಗಳಲ್ಲಿ ಸ್ಪೌಬುರ್ಸ್ಟ್ ಆಗುವುದಕ್ಕೆ ಸಾಧ್ಯವೆ? ಇದು ಊಹೆಗೂ ಮೀರಿದ್ದು. ಯಾವ ಕಂಪನಿಯವರು ಈ ಸ್ಪೌವ್‌ಗಳನ್ನು ತಯಾರಿಸಿದವರು? ಈ ರೀತಿ ಸ್ಪೌವ್ ತಯಾರಿಸಿದವರ ಮೇಲೆ ನೆಗ್ಲಿಜೆನ್ಸಿ ಎಂದು ಹೇಳಿ ಏನಾದರೂ ಮೊಕದ್ದಮೆ ಹೂಡಿದ್ದಿರಾ? ಅಥವಾ ಈ ಸ್ಪೌವ್‌ಗಳ ಮಾರಾಟವನ್ನು ಏನಾದರೂ ತಡೆಹಿಡಿದಿದ್ದಿರಾ? ಇದರ ಬಗ್ಗೆ ತಾವು ಏನೂ ಮಾಡಿಲ್ಲ. ಆ ಸ್ಪೌವ್ ಸೀಜ್ ಮಾಡಿದ್ದೀರಾ? ನಿಮ್ಮಲ್ಲಿರತಕ್ಕಂಥ ಅನ್‌ನ್ಯಾಚುರಲ್ ಡೆತ್ ರಿಜಿಸ್ಟ್ರಿ ಏನಿದೆ, ಅದರಲ್ಲಿ ಅಸಹಜ ನಾವು ಎಂದು ಹೇಳಿ ತಾವು ಕೇಸ್ ರಿಜಿಸ್ಟ್ರಿ ಮಾಡುತ್ತೀರಿ. ಇದಕ್ಕೆ ನಮ್ಮ ಕೂಗು ಏನೆಂದರೆ, ಎಲ್ಲಾ ಅಸಹಜ ಸಾವುಗಳಲ್ಲಿ ಕೂಡ ನ್ಯಾಚುರಲ್ ಡೆತ್ ಇರಬಹುದು ಅಥವಾ ಆತ್ಮಹತ್ಯೆ ಇರಬಹುದು ಅಥವಾ ಬೇರೆ ಯಾರಾದರೂ ಮಾಡಿರಬಹುದು. ತನಿಖೆಯಾಗತಕ್ಕಂಥ ಸಂದರ್ಭದಲ್ಲಿ ಸರಿಯಾಗಿ ತನಿಖೆ ಆಗುತ್ತಿದಿಯೇ ಅಥವಾ ಇಲ್ಲವೇ ಎನ್ನುವುದೇ ನಮ್ಮ ಇವತ್ತಿನ ಪ್ರಶ್ನೆ. ಈ 711 ಕೇಸುಗಳೂ ಕೂಡ ತಾವು ಸ್ಪೌವ್ ಬರ್ಸ್ಟ್ ಎಂದು ಹೇಳಿದರೆ ಹೇಗೆ? ನಾನೂ ಕೂಡ ವಿಕ್ಟೋರಿಯಾ ಆಸ್ಪತ್ರೆಯನ್ನು ನೋಡಿದ್ದೇನೆ, ಅಲ್ಲಿ ಬರ್ಸ್ಟ್ ವಾರ್ಡ್ ಇದೆ. ಒಂದು ದಿನಕ್ಕೆ ಸುಮಾರು 57 ಮಹಿಳೆಯರ ಬರ್ಸ್ಟ್ ಕೇಸುಗಳು ತೆಗೆದುಕೊಂಡು ಬರುತ್ತಾರೆ. ನಾನು ನಿಮ್ಮಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ತಾವು ಆ ಸಂದರ್ಭದಲ್ಲಿ ಡೈಯಿಂಗ್ ಡಿಕ್ಲರೇಷನ್ ತೆಗೆದುಕೊಳ್ಳುತ್ತೀರಲ್ಲಾ, ಇದನ್ನು ತಾವು ಸರಿಯಾಗಿ ತೆಗೆದುಕೊಳ್ಳುತ್ತೀರಾ? ಅತ್ತೆ-ಮಾವ-ಮೈದುನ-ಭಾವ ಇವರೆಲ್ಲರನ್ನು ಮುಂದೆ ಇಟ್ಟುಕೊಂಡು ಇವರ ಎದುರುಗಡೆ ಬರ್ನ್ಟ್ ಆಗಿರುವ ಮಹಿಳೆಯಿಂದ ಹೇಳಿಕೆಯನ್ನು ರೆಕಾರ್ಡ್ ಮಾಡಿಕೊಂಡರೆ, ಸಾಯುವ ಅಂಚಿನಲ್ಲಿ ಇರತಕ್ಕಂಥ ಮಹಿಳೆಗೆ ಸತ್ಯ ಹೇಳತಕ್ಕಂಥ ಪರಿಸ್ಥಿತಿ ಒದಗಿಬರುತ್ತದೆಯೇ? ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡಬೇಕು. ಆ ಮಹಿಳೆ ಸತ್ಯ ಹೇಳಬೇಕಾದರೆ ಇವರೆಲ್ಲರನ್ನೂ ದೂರ ಇಟ್ಟು ಹೇಳಿಕೆ ತೆಗೆದುಕೊಳ್ಳಬೇಕು. ಇಂಥ ಸಂದರ್ಭದಲ್ಲಿ ವಿಮೋಚನಾ ಸಂಸ್ಥೆಯ ಇಬ್ಬರು ಮಹಿಳೆಯರು ಅಲ್ಲಿರಬೇಕು ಎಂದು ಡಾಕ್ಟರ್‌ಗಳನ್ನು

ಒಟ್ಟಿಗೆ, ನಾವೆಲ್ಲರೂ ತೀರ್ಮಾನ ಮಾಡಿ ಅಲ್ಲಿ ಸ್ಥಳದಲ್ಲಿ ಇಬ್ಬರು ಮಹಿಳೆಯರು ಇರುವಂತೆ ವ್ಯವಸ್ಥೆ ಮಾಡಿದ್ದೇವೆ. ಮೊನ್ನೆ ಅದೇ ಆಸ್ಪತ್ರೆಯಲ್ಲಿ ಈ ರೀತಿ ಸಂದರ್ಭ ಬಂದಾಗ ಅಲ್ಲಿರುವ ಮಹಿಳೆಗೆ ಬೆದರಿಕೆ ಹಾಕುವುದರ ಜೊತೆಗೆ ನೀನು ಆಚೆ ಬಾ ನೋಡಿಕೊಳ್ಳುತ್ತೇವೆ ಎನ್ನುವಂತಹ ಮಾತುಗಳನ್ನು ಹೇಳುತ್ತಾರೆ. ಈ ರೀತಿ ಆದರೆ ನಿಜವಾದ ತನಿಖೆಯಾಗುವುದಕ್ಕೆ ಸಾಧ್ಯವೇ? ಇದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಪೋಲೀಸ್‌ನವರು ರೆಕಾರ್ಡ್ ಮಾಡುವಂತಹ ಸಂದರ್ಭದಲ್ಲಿ, ಸುಟ್ಟಿರುವ ಮಹಿಳೆ ಸ್ವಂತಿಕೆಯಿಂದ ಹೇಳಿಕೆ ಕೊಡುವಂತಹ ಸಂದರ್ಭದಲ್ಲಿ Doctor must certify that she is capable of giving the statement. ಎಂದು ಜಸ್ಟೀಸ್ ಸಲ್ಡಾನ್‌ರವರು ತೀರ್ಮಾನ ಕೊಟ್ಟಿದ್ದಾರೆ. ಡಾಕ್ಟರ್ ಬಂದು ಸರ್ಟಿಫೈ ಮಾಡುವ ಹೊತ್ತಿಗೆ ಅವಳ ಅರ್ಧ ಪ್ರಾಣ ಹೋಗಿರುತ್ತದೆ. ಇದರ ಬಗ್ಗೆ ತಾವು ಏನಾದರೂ ಅಪೀಲ್ ಹಾಕಿದ್ದೀರಾ? ಈ ರೀತಿ ಸಂದರ್ಭದಲ್ಲಿ ವಾರ್ಡ್ ಒಳಗಡೆ ಹೊರಗಡೆಯವರು ಬಾರದ ಹಾಗೆ, ಪೋಲೀಸ್‌ನವರು ರೆಕಾರ್ಡ್ ಮಾಡುವಂತಹ ಸಂದರ್ಭದಲ್ಲಿ ಬೆದರಿಕೆ ಹಾಕಿ ಹೇಳಿಕೆ ತೆಗೆದುಕೊಳ್ಳಬಹುದಲ್ಲವೆ? ಮತ್ತೊಂದು ವಿಚಾರವನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಆಸ್ಪತ್ರೆಗೆ ಯಾವುದಾದರೊಂದು

11.20 ಎ.ಎಂ.

ಆಸ್ಪತ್ರೆಗೆ ಯಾವುದಾದರೊಂದು ಬರ್ನ್ ಕೇಸ್ ಬಂದಾಗ ಮೊದಲು ಕಾನ್ಸ್ಟೆಬಲ್ ಮಾಡತಕ್ಕಂಥ ಕೆಲಸ ಏನೆಂದರೆ, ಒಂದು ಬ್ಲ್ಯಾಂಕ್ ಪೇಪರ್ ಮೇಲೆ ಆಕೆಯ ಹೆಬ್ಬೆಟ್ಟು ಗುರ್ತನ್ನು ತೆಗೆದುಕೊಳ್ಳುತ್ತಾರೆ. ಇದನ್ನು ಏಕೆ ತೆಗೆದುಕೊಳ್ಳುತ್ತಾರೆಂದರೆ, ಸ್ಟೇಟ್‌ಮೆಂಟ್ ತೆಗೆದುಕೊಳ್ಳುವುದಕ್ಕೋಸ್ಕರ ಬ್ಲ್ಯಾಂಕ್ ಪೇಪರ್ ತೆಗೆದುಕೊಂಡು ಬಂದು, ಅತ್ತೆ-ಮಾವನನ್ನು ಒಂದು ಕಡೆ ನಿಲ್ಲಿಸಿಕೊಂಡು ನನ್ನ ಹತ್ತಿರ ಬ್ಲ್ಯಾಂಕ್ ಪೇಪರ್ ಇದೆ, ನಿಮ್ಮನ್ನು ಜೈಲಿಗೆ ಕಳುಹಿಸಬೇಕೆಂದರೆ ನಾನು ಏನಾದರೂ ಬರೆದುಕೊಳ್ಳುತ್ತೇನೆಂದು ಹೇಳಿ, ದುಡ್ಡು ಕಿತ್ತುಕೊಳ್ಳುತ್ತಾರೆ. ಅವರು ದುಡ್ಡು ಕೊಟ್ಟರೆ, ಇಲ್ಲಿ ಇವಳು ಆತ್ಮಹತ್ಯ ಮಾಡಿಕೊಂಡಿಲ್ಲ, ಸ್ಟೌವ್ ಬರ್ಸ್ಟ್ ಆಗಿ ನಾನು ಸತ್ತನೆಂದು ಬರೆದುಕೊಳ್ಳುವುದು. ಇಂಥ ಸಂದರ್ಭದಲ್ಲಿ ಬ್ಲ್ಯಾಂಕ್ ಪೇಪರ್ ಮೇಲೆ ಸಿಗ್ನೇಚರ್ ತೆಗೆದುಕೊಳ್ಳುವುದಕ್ಕೆ ಇವರಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ? ಈಗ ನಾನು ಹೇಳುವುದೇನೆಂದರೆ, ಇಂಥ ಎಲ್ಲಾ ಕೇಸ್‌ಗಳಲ್ಲಿ ಆಕೆಯ ತಂದೆ-ತಾಯಿಗಳಿಗೆ ತಕ್ಷಣ ಇನ್‌ಫಾರ್ಮೇಶನ್ ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಇವತ್ತು ನಾನು ನಿಮಗೆ ಒಂದು ಸಜೆಷನ್ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಅಮೇರಿಕಾದಲ್ಲಿ ಇಂಥ ಕೇಸ್‌ಗಳ ವಿಷಯವನ್ನು ಆದಷ್ಟುಬೇಗ ತಿಳಿಸಲು ಹಾಟ್‌ಲೈನ್ ಓಪನ್ ಮಾಡಿದ್ದಾರೆ. ಹಾಟ್‌ಲೈನ್ ಫೋನ್ ನಂಬರ್ ಎಲ್ಲರ ಹತ್ತಿರ ಇರುತ್ತದೆ. ನಾವು ಇಲ್ಲಿ 100 ನಂಬರ್‌ಗೆ ಫೋನ್ ಮಾಡಿದರೆ ಹೇಗೆ ಪೊಲೀಸ್ ಕಂಟ್ರೋಲ್ ರೂಮಿಗೆ ಮೆಸೇಜ್ ಹೋಗುತ್ತದೆಯೋ ಅದೇ ರೀತಿಯಲ್ಲಿ ಅಲ್ಲಿ ಯಾರುಬೇಕಾದರೂ ಕೂಡ ಹಾಟ್‌ಲೈನ್ ಫೋನ್ ಮಾಡಿ ಎಲ್ಲಾ ವಿಷಯವನ್ನು ತಿಳಿಸಿದಾಗ ತಕ್ಷಣ 10 ನಿಮಿಷ ಆಗುವುದರೊಳಗೆ ಪೊಲೀಸ್‌ನವರು ಸ್ಥಳಕ್ಕೆ

ಬರುತ್ತಾರೆ. ಈ ಕೆಲಸ ನಡೆಯುತ್ತಿರುವಾಗಲೇ ಹಾಟ್‌ಲೈನ್ ಮುಖಾಂತರವೇ ಅವರ ತಂದೆ-ತಾಯಿಗಳಿಗೆ ವಿಷಯವನ್ನು ತಿಳಿಸತಕ್ಕಂಥ ವ್ಯವಸ್ಥೆ ಕೂಡ ಅವರು ಮಾಡುತ್ತಾರೆ. ಈ ಹಾಟ್‌ಲೈನ್ ನಂಬರ್‌ನ್ನು ಪ್ರತಿಯೊಂದು ಮಾಧ್ಯಮಗಳಲ್ಲಿ, ಅಂದರೆ, ಟಿ.ವಿ. ಮತ್ತು ನ್ಯೂಸ್ ಪೇಪರ್‌ನಲ್ಲಿ ಪಬ್ಲಿಷ್ ಮಾಡುತ್ತಾರೆ. ಯಾರಾದರೂ ಅವಶ್ಯಕತೆ ಇದ್ದರೆ ತಕ್ಷಣ ಫೋನ್ ಮಾಡಿ ಕೇಳಿ ತಿಳಿದುಕೊಳ್ಳತಕ್ಕಂಥ ವ್ಯವಸ್ಥೆ ಅಲ್ಲಿದೆ. ಇಂಥ ಹಾಟ್‌ಲೈನ್ ವ್ಯವಸ್ಥೆಯನ್ನು ಇಲ್ಲಿಯೂ ಮಾಡಿ ಒಂದು ಫೋನ್ ನಂಬರ್ ಕೊಡಬೇಕಾಗುತ್ತದೆ. ಇಂಥ ಪರಿಸ್ಥಿತಿ ಅಮೇರಿಕಾದಲ್ಲಿ ಬಂದಾಗ 1994ನೇ ಇಸವಿಯಲ್ಲಿ ಒಂದು ಆಕ್ಟ್ ಮಾಡತಕ್ಕಂಥ ಸಂದರ್ಭದಲ್ಲಿ ಅವರು ಅಡ್ವೈಸರಿ ಕೌನ್ಸಿಲ್ ಕಮಿಟಿ ಮಾಡಿದರು. ಇದರ ಬಗ್ಗೆ ತೀಕ್ಷ್ಣವಾಗಿ ಸ್ಟಡಿ ಮಾಡಬೇಕೆಂದು ಒಂದು ಸಮಿತಿ ಮಾಡಿದರು. ಈ ಕಮಿಟಿಯಲ್ಲಿ ಯಾರ್ಯಾರು ಇರುತ್ತಾರೆಂದರೆ, No less than the Attorney General was made the Chairman. ಮತ್ತು ಇದರಲ್ಲಿ 58 ಜನ ಡಾಕ್ಟರ್‌ಗಳು ಮತ್ತು ಸೋಷಿಯಲ್ ವರ್ಕರ್‌ಗಳು, ಜಡ್ಜ್‌ಗಳು ಮತ್ತು ಪೊಲೀಸ್ ಆಫೀಸರ್, ಸೋಷಿಯಾಲಿಜಿಸ್ಟ್‌ಗಳು ಹಾಗೂ ಎಲ್ಲಾ ಹೆಡ್ ಆಫ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಇರುತ್ತಾರೆ. ಇದರಲ್ಲಿ ಪೊಲೀಸ್ ಕಮೀಷನರ್ ಅಥವಾ ಬೇರೆಯವರೂ ಸಹ ಇರಬಹುದು, ಆದರೆ ಅರ್ಜೆಂಟ್ ಅಧಿಕಾರಿಗಳು ಇರುವುದಿಲ್ಲ. ಇವರೆಲ್ಲರೂ ಸೇರಿ ಒಂದು ಅಡ್ವೈಸರಿ ಕೌನ್ಸಿಲ್ ಕಮಿಟಿ ಎಂದು ಮಾಡಿ ಅದರ ಮುಖಾಂತರ ಪೂರ್ಣವಾಗಿ ಇಂಥ ವಿಷಯಗಳ ಮೇಲೆ ಚರ್ಚೆ ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು ಈ ಆಕ್ಟ್‌ನಲ್ಲಿ ಬಂದಿದೆ. ಅಷ್ಟೇ ಅಲ್ಲದೆ ಇವತ್ತು ಆಸ್ಟ್ರೇಲಿಯ, ಕೆನಡ, ಅಮೇರಿಕಾ ಹಾಗೂ ಬೇರೆ ಬೇರೆ ದೇಶಗಳಲ್ಲೂ ಈ ರೀತಿಯ ಸೆಂಟರ್‌ಗಳನ್ನು ಮಾಡಿದ್ದಾರೆ. ಇಂಥ ಅಪಾಯಕಾರಿ ರೀತಿಯಲ್ಲಿ ಸಾಯುತ್ತತಕ್ಕಂಥ ಮಹಿಳೆಯರಿಗೆ ತಕ್ಷಣ ಶೆಲ್ಟರ್ ಕೊಡಬೇಕೆಂದು, ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಶೆಲ್ಟರ್‌ಗಳನ್ನು ಮಾಡಿದ್ದಾರೆ. ಇಂಥ ಶೆಲ್ಟರ್‌ಗಳಿಗೆ ಹೋಗಿ ಆಸರೆ ಪಡೆದುಕೊಂಡು ಜೀವನ ಮಾಡುವುದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಇದಕ್ಕೋಸ್ಕರ ಪ್ರತ್ಯೇಕವಾದ ಹಣಕಾಸಿನ ವ್ಯವಸ್ಥೆ ಇರುತ್ತದೆ. ಇವತ್ತು ದೇಶದ ಡಿಫೆನ್ಸ್‌ಗೋಸ್ಕರ ಯಾವರೀತಿ ಹಣವನ್ನು ಮೀಸಲಾಗಿಟ್ಟಿರುತ್ತಾರೋ, ಅದೇ ರೀತಿ ಹಣವನ್ನು ಅಮೇರಿಕಾದಲ್ಲಿ ಮೀಸಲಾಗಿಟ್ಟಿದ್ದಾರೆ. ಅಮೇರಿಕಾದಲ್ಲಿ ಕ್ಲಿಂಟನ್ ಅಧಿಕಾರದಲ್ಲಿ ಇವತ್ತು ಪ್ರತ್ಯೇಕವಾದ ಹಣವನ್ನು ತೆಗೆದಿಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಈ ಹಣದಿಂದ ಪೊಲೀಸ್ ಆಫೀಸರ್‌ಗಳಿಗೆ ಟ್ರೈನಿಂಗ್ ಕೊಡುವುದಕ್ಕೆ ಮತ್ತು ಇದನ್ನು ಟ್ರೀಟ್ ಮಾಡತಕ್ಕಂಥ ಜಡ್ಜ್‌ಗಳಿಗೆ ಸ್ಪೆಷಲ್ ಟ್ರೈನಿಂಗ್ ಮತ್ತು ಅವರ ಜೊತೆ ಸ್ಥಂದಿಸುವುದಕ್ಕೋಸ್ಕರ ಸ್ಥಂದನ ಇರತಕ್ಕಂಥ ಜಡ್ಜ್ ಆಗಬೇಕೆಂದು ಮತ್ತು ಪೊಲೀಸ್ ಆಫೀಸರ್, ಸೋಷಿಯಾಲಿಜಿಸ್ಟ್‌ಗಳು ಸ್ಥಂದಿಸಬೇಕೆಂದು ಹಾಗೂ ಸೈಕಿಯಾಟ್ರಿಸ್ಟ್ ಅಲ್ಲಿರಬೇಕೆಂದು, ಇವರಿಗೆ ಟ್ರೈನಿಂಗ್ ಕೊಡುವುದಕ್ಕಾಗಿ ಹಣವನ್ನು ಮೀಸಲಾಗಿಟ್ಟಿದ್ದಾರೆ. ಇದಕ್ಕೋಸ್ಕರ ಪ್ರತ್ಯೇಕವಾಗಿ ಇಟ್ಟಿರುವ ಹಣದಲ್ಲಿ 50 ಪರ್ಸೆಂಟ್‌ನಷ್ಟು ಕಡಿಮೆ ಮಾಡಬೇಕೆಂದು ಸೆನೆಟ್‌ನಲ್ಲಿ ಪ್ರಸ್ತಾಪ ಮಾಡಿದಾಗ, ಕ್ಲಿಂಟನ್‌ರವರು ಆ ರೀತಿ

ಆಗಬಾರದೆಂದು ಎಲ್ಲಾ ಹಣವನ್ನು ಹಾಗೆಯೇ ಮೀಸಲಾಗಿಟ್ಟಿದ್ದಾರೆ. ಅಮೇರಿಕಾದಲ್ಲಿ ಅಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೋ ಅದು ಪ್ರತಿಯೊಂದು ಸ್ಟೇಟ್‌ನಲ್ಲಿಯೂ ಈ ಹಣ ವಿನಿಯೋಗ ಮಾಡುತ್ತಿದ್ದಾರೆ. ಈಗ ಚೈನಾದಲ್ಲಿ ಬೀಜಿಂಗ್ ಕನ್ವೆನ್‌ಶನ್ ಎಂದು ಮಾಡಿದ್ದಾರೆ. ಅಲ್ಲಿಯೂ ಕೂಡ ಇದಕ್ಕೆ ಅದ್ಯತೆ ಕೊಡಬೇಕೆಂದು ಅಲ್ಲಿನ ಎಲ್ಲಾ ಸ್ಟೇಟ್‌ನಲ್ಲಿಯೂ ಕೂಡ ಬೌಂಡ್ ಆಗಲೇಬೇಕೆಂದು ಹೇಳಿ, ಇದಕ್ಕೆ ಹಣವನ್ನು ಒದಗಿಸಿ, ಇದರ ಬಗ್ಗೆ ರಿಪೋರ್ಟ್ ಕೊಡಬೇಕೆಂದು ಹೇಳಿದರು. ಪ್ರತಿಯೊಂದು ಸ್ಟೇಟ್‌ನಲ್ಲಿಯೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಇವತ್ತಿನ ದಿವಸ ಕರ್ನಾಟಕ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದರ ಬಗ್ಗೆ ಯಾವ ರಿಪೋರ್ಟ್‌ನ್ನು ತಾವು ತಯಾರು ಮಾಡಿದ್ದೀರಾ? ಇದರ ಬಗ್ಗೆ ಏನಾದರೂ ಮಾಡಬೇಕೆಂದು ಯಾವುದೇ ರೀತಿಯ ಬ್ಲೂ ಪ್ರಿಂಟ್ ಪ್ಲಾನ್ ಮಾಡಿದ್ದೀರಾ? ಈಗಾಗಲೇ ಬೀಜಿಂಗ್ ಕನ್ವೆನ್‌ಶನ್ ಮಾಡಿ ಎರಡು ವರ್ಷ ಆಯಿತು. ಈಗ ಎಲ್ಲಾ ಕಡೆ ಕನ್ವೆನ್‌ಶನ್ ಆಗಿದೆ. We are also part and parcel of UNO charter. ಇದಕ್ಕೆ ಒಂದು ಚಾರ್ಟರ್ಡ್ ಮಾಡಿ, ಎಲ್ಲರೂ ಕೂಡ ಬೌಂಡ್ ಎಂದು ಹೇಳಿದರು. ಬೀಜಿಂಗ್‌ಗೆ ಇಂಡಿಯಾದಿಂದ ನಮ್ಮ ರಾಜ್ಯದ ಪ್ರತಿನಿಧಿಯಾಗಿ ತಾವೂ ಕೂಡ ನಮ್ಮ ಮಹಿಳೆಯನ್ನು ಕಳುಹಿಸಿಕೊಟ್ಟಿದ್ದೀರಿ. ಅಲ್ಲಿಗೆ ಹೋಗಿ ಬಂದಂಥವರು ಇಲ್ಲಿ ಏನು ಮಾಡಿದ್ದಾರೆ? ಏತಕ್ಕೋಸ್ಕರ ಕಳುಹಿಸಿದ್ದೀರಿ? ತಾವು ಏನು ಮಾಡಿದ್ದೀರಿ? ಇದನ್ನೆಲ್ಲಾ ನಾವು ನೋಡಬೇಕಲ್ಲವೇ? ಹಣ ಖರ್ಚು ಮಾಡಿ ಕಳುಹಿಸಿದ ಮೇಲೆ ಏನು ಮಾಡಿದ್ದಾರೆಂದು ನಾವು ತಿಳಿದುಕೊಳ್ಳಬೇಕಲ್ಲವೆ? ಅಲ್ಲಿಗೆ ಹೋಗಿ ಬಂದ ಮೇಲೆ, ಅಲ್ಲಿನ ರಿಪೋರ್ಟ್ ಏನಾಯಿತು? ಮತ್ತು ಏನೇನು ರೆಕಮೆಂಡೇಷನ್ ಮಾಡಿದ್ದಾರೆ? ಅವರು, ಸರ್ಕಾರ ಏನು ಮಾಡಬೇಕೆಂದು ತಿಳಿಸಿದ್ದಾರೆ? ಇದರ ಬಗ್ಗೆ ನಮಗೆ ಮಾಹಿತಿ ಬೇಕಲ್ಲಾ? ಇದರ ಬಗ್ಗೆ ಇವತ್ತು ಕರ್ನಾಟಕದಲ್ಲಿ ಏನೂ ಆಗಿಲ್ಲ ಎನ್ನುತ್ತಿರುವ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. sensitisation of the police force ಬಗ್ಗೆ ಡಿಬೇಟ್ ಮಾಡುತ್ತಿರುವುದರಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು, ನಾವೇನೂ ಮಾಡಿಲ್ಲ ಎನ್ನುವ ದೃಷ್ಟಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಪೊಲೀಸ್ ಆಫೀಸರ್‌ಗೆ ಲೋಯರ್ ಲೆವೆಲ್‌ನಲ್ಲಿ, ಮಹಿಳೆಯ ತೊಂದರೆಗೆ ಸಂಬಂಧಪಟ್ಟ ಹಾಗೆ ಟ್ರೈನಿಂಗ್ ಕೊಡಬೇಕೆಂಬ ದೃಷ್ಟಿಯಿಂದ ಮೊನ್ನೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಮತ್ತು ಅದರ ಸದಸ್ಯರುಗಳು ಬಂದಾಗ, ಒಂದು ದಿನದ ಸೆಮಿನಾರ್‌ನ್ನು ನಾವು ಪೊಲೀಸ್ ಇಲಾಖೆಯಿಂದ ಸೀನಿಯರ್ ಆಫೀಸರ್‌ಗಳಿಗೆ ಇಟ್ಟುಕೊಂಡಿದ್ದೆವು. ಆ ಸಂದರ್ಭದಲ್ಲಿ ವಿಭಾ ಪಾರ್ಥಸಾರಥಿಯವರು ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರಿಗೆ ಸಿಗುತ್ತಿರುವ ಪ್ರೊಟೆಕ್ಷನ್ ಮತ್ತು ಅವರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವುದರಲ್ಲಿ ನಾವು ತೆಗೆದುಕೊಂಡಿರುವಂಥ ಕ್ರಮಗಳನ್ನು ಪ್ರಶಂಸೆ ಮಾಡಿದ್ದಾರೆಂದು ಇಲ್ಲಿ ನಾನು

ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇರೆ ರಾಜ್ಯದಲ್ಲಿ ಇನ್ನೂ ಸತಿಪದ್ಧತಿ ಇರತಕ್ಕಂಥದ್ದು ನಮ್ಮ ಗಮನದಲ್ಲಿದೆ.

ಶ್ರೀಮತಿ ಪ್ರಮೀಳಾನೇಸರ್ಗಿ :— ನೀವು ಯಾವರೀತಿ ಪ್ರೊಟೆಕ್ಷನ್ ಕೊಡುತ್ತಿದ್ದೀರೆಂದು ನಾವು ನೋಡುತ್ತಿದ್ದೇವೆ. ತಾವು ಹೊಗಳಿಕೊಳ್ಳುವುದಾದರೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಅಧ್ಯಕ್ಷರು :— ತಮ್ಮಲ್ಲಿ ಮತ್ತು ಮಾನ್ಯ ಗೃಹ ಮಂತ್ರಿಗಳ ಹತ್ತಿರ ಹಾಗೂ ಇತರೆ ಎಲ್ಲಾ ಸದಸ್ಯರುಗಳ ಹತ್ತಿರ ಆ ಹೆಣ್ಣುಮಕ್ಕಳು ಬಂದು ಭೇಟಿಯಾಗಿ ಅವರು ತಮ್ಮ ಸಂಕಟವನ್ನು ತೋಡಿಕೊಂಡಿದ್ದನ್ನು ನಾವೆಲ್ಲರೂ ಕೇಳಿದ್ದೇವೆ. ತಮಗೆ ಮತ್ತು ಇನ್ನು ಮಾತನಾಡತಕ್ಕಂಥ ಮಾನ್ಯ ಸದ್ಯಸರಿಗೆ ನಾನು ವಿನಂತಿ ಮಾಡುವುದೇನೆಂದರೆ, ಇಲ್ಲಿ ಯಾರ ಮೇಲೆ ಯಾರೂ ಕಂಪ್ಲೇಂಟ್ ಮಾಡುವುದಕ್ಕೆ ನಾವು ಸೇರಿಲ್ಲ. ಮಾನವೀಯತೆ ದೃಷ್ಟಿಯಿಂದ ಕೆಲವು ಸನ್ನಿವೇಶದಲ್ಲಿ ಹೆಣ್ಣುಮಕ್ಕಳನ್ನು ಎಷ್ಟು ಹೀನವಾಗಿ ಕಾಣುತ್ತಾರೆಂಬುದು ಹಾಗೂ ವ್ಯವಸ್ಥೆಯಲ್ಲಿರತಕ್ಕಂಥ ಲೋಪದೋಷಗಳು ಮತ್ತು ಸಾಮಾಜಿಕ ಅಥವಾ ಆರ್ಥಿಕ ವ್ಯವಸ್ಥೆ ಇದಕ್ಕೆ ಮುಖ್ಯ ಕಾರಣವಾಗಿರಬಹುದು. ನಾವೆಲ್ಲರೂ ಒಟ್ಟಾಗಿ ಸೇರಿ ಜನಪ್ರತಿನಿಧಿ ಸಭೆ ಮಾಡಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿದುಕೊಳ್ಳುವ ದೃಷ್ಟಿಯಲ್ಲಿ ನಾವು ಹೋಗೋಣ. ಯಾರೋ ಒಬ್ಬ ಕಾನ್‌ಸ್ಟೇಬಲ್, ಡಾಕ್ಟರ್, ಎಸ್.ಪಿ. ಅಥವಾ ಡಿ.ಎಸ್.ಪಿ. ಎಂಬುದೆಲ್ಲಾ ಪ್ರಾಸಂಗಿಕವಾಗಿ ಎಲ್ಲಾದರೂ ಒಂದು ಕಡೆ ಬರಲಿ, ಇದೇ ಮುಖ್ಯವಾಗುವುದು ಬೇಡ. ಕಾರಣ ಏನೆಂದರೆ, ಇವತ್ತಿನದಿವಸ ಪೊಲೀಸ್ ಇಲಾಖೆಯಲ್ಲಿ ಮತ್ತು ರಾಜಕಾರಣದಲ್ಲಿ ಹಾಗೂ ಸಾಹಿತಿಗಳಲ್ಲಿ ಒಳ್ಳೆಯವರು ಹಾಗೂ ಕೆಟ್ಟವರು ಇದ್ದಾರೆ. ಇವತ್ತು ಇವರು ಎಲ್ಲಾ ಕಡೆ ಹಂಚಿ ಹೋಗಿದ್ದಾರೆ. ಇವತ್ತಿನ ಮುಖ್ಯವಾದ ವಿಷಯವೇನೆಂದರೆ, ಹೆಣ್ಣುಮಕ್ಕಳು ಒಬ್ಬೊಬ್ಬರಾಗಿ ತಮ್ಮ ಗೋಳನ್ನು ನಮ್ಮ ಎದುರಿಗೆ ತೋಡಿಕೊಂಡಾಗ ನಮಗೆ ಕಣ್ಣೀರು ತಡೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇದನ್ನು ಅವರು ಬಹಳ ನೋವಿನಿಂದ ಬಂದು ನಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಇವತ್ತು ಸುಮಾರು ಜನ ಗ್ಯಾಲರಿಯಲ್ಲಿ ಕುಳಿತುಕೊಂಡು ನಮ್ಮ ಡೆಲಿಬರೇಶನ್‌ನನ್ನು ವಾಚ್‌ಮಾಡುತ್ತಿದ್ದಾರೆ. ಸಾಮಾನ್ಯ ಜನರಿಗೆ ಈ ಸದನದ ಕಾರ್ಯಕಲಾಪಗಳಲ್ಲಿ ಇರತಕ್ಕಂಥ ವಿಶ್ವಾಸವನ್ನು ಹೆಚ್ಚಿಸತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ. ನಮ್ಮ ಕಲಾಪ ಆ ದಿಕ್ಕಿನಲ್ಲಿ ಹೋಗಲಿ ಎಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಸನ್ಮಾನ್ಯ ಅಧ್ಯಕ್ಷರೆ, ಪೊಲೀಸ್‌ನವರು ಕಮೀಷನ್ ಮಾಡುತ್ತಿರುವ ಬಗ್ಗೆ ನಮ್ಮವರು ಕೂಡ ಅಲ್ಲಿಗೆ ಹೋಗಿ ನೋಡಿದ್ದಾರೆ ಮತ್ತು ನನ್ನ ಜೀವನದಲ್ಲಿ ಪ್ರತಿದಿವಸ ಇದರ ಬಗ್ಗೆ ನೋಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಬೇರೆಯವರು ಬಂದು ಹೇಳಿ ಹೋದರೆಂದು ಸನ್ಮಾನ್ಯ ಮಂತ್ರಿಗಳು ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ಇಷ್ಟು ಸಾವು-ನೋವುಗಳು ಆಗುತ್ತಿರಲಿಲ್ಲ.

ಮಹಿಳೆಯ ಕಣ್ಣೀರು ಇಷ್ಟೊಂದು ಹರಿಯತಕ್ಕಂಥ ಪರಿಸ್ಥಿತಿ ಕೂಡ ಬರುತ್ತಿರಲಿಲ್ಲ. ತಾವು ಹೇಳಿದ ಪರಿಸ್ಥಿತಿ ಹೊರಕ್ಕೆ ಬರುವುದಕ್ಕೆ ತಮ್ಮ ಮುಂದೆ ಏನು ಸ್ಟ್ಯಾಟಿಸ್ಟಿಕಲ್ ರೆಕಾರ್ಡ್ ಇಟ್ಟಿದ್ದಾರೆಯೋ, ಅದು ಸತ್ಯಕ್ಕೆ ದೂರವಾದಂತಹ ವಿಷಯ. ಇದರ ಬಗ್ಗೆ ತಾವು ಡೀಪ್ ಆಗಿ ಒಳಗಡೆ ಹೋದರೆ ಮಾತ್ರ ಅರ್ಥವಾಗುತ್ತದೆ. ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೋಸ್ಕರವೇ ಇವತ್ತಿನದಿವಸ ಚರ್ಚೆ ಮಾಡುತ್ತಿದ್ದೇನೆ. ಇಲ್ಲಿರತಕ್ಕಂಥ ಎಲ್ಲಾ ಶಾಸಕರು ಒಂದಲ್ಲಾ ಒಂದು ರೀತಿಯಲ್ಲಿ ಎಷ್ಟೋ ಮನೆಗಳನ್ನು ಉಳಿಸಿದ್ದಾರೆ, ಅದರ ಬಗ್ಗೆ ನಾನು ಹೇಳುತ್ತಿಲ್ಲ. ನಾವು ಇವತ್ತು ಚರ್ಚೆ ಮಾಡುವುದರಿಂದ ಇನ್ನಷ್ಟು ಜೀವಗಳನ್ನು ಉಳಿಸುವುದಕ್ಕೆ ನಾವೇನಾದರೂ ಪ್ರಯತ್ನ ಮಾಡಿದರೆ, ಇದರಿಂದ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ. ಇದಕ್ಕೋಸ್ಕರ ನಾವೆಲ್ಲಾ ಒಂದು ನಿರ್ದಿಷ್ಟವಾದ ದಾರಿ ಮಾಡೋಣ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಹಿಲರಿ ಕ್ಲಿಂಟನ್‌ರವರು ಹೇಳಿರತಕ್ಕಂಥ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅದೇನೆಂದರೆ, ``When I travelled overseas on behalf of the United States, I always learn in new way how very much human experience we share across national boundaries. This probelm is all pervasive and yet very difficult to see. There is nothing visibly wrong with the picture. But I know too well that every country that I have visited, every country shares a hidden part of the scene. When some of those women go home at night, they live with fear, not fear of an invading army or a naturral disaster or even a stranger in an alien: They fear the very people, family members, on whom they are supposed to depend upon for help and comfort. That is the trust destroying fear that attends every step of victims of domestic voilence. For these women home provides inadequate refuge, the law, little protection, and public opinion even less empathy. Domestic and sexual voilence against women remains one of the most serious and under-reported human rights voilations in our region." ಅಧ್ಯಕ್ಷರೆ, ಇದಕ್ಕೆ ನಾವು ಏನಾದರೂ ವ್ಯತ್ಯಾಸವಾಗಿದ್ದೇವೆಯೇ? ನನಗೆ ಗೊತ್ತಿದೆ ಇವತ್ತೂ ಕೂಡ ಕೆಲಸ ಮಾಡತಕ್ಕಂಥ ಸಹಸ್ರಾರು ಮಹಿಳೆಯರು ಕೆಲಸವನ್ನು ಮಾಡಿ ಮನೆಗೆ ಹೋಗುವಾಗ ಅಳುತ್ತಾ ಹೋಗುವಂಥ ಪರಿಸ್ಥಿತಿ ಬಂದಿದೆ. ರಾತ್ರಿಯಾದರೆ ಮನೆಯಲ್ಲಿ ಹೇಗೆ ಇರಬೇಕೆನ್ನುವ ಪರಿಸ್ಥಿತಿ, ರಾತ್ರಿಯಿಂದ ಬೆಳಗಿನವರೆಗೆ ಹೇಗೆ ಇರಬೇಕೆನ್ನುವ ಭಯದ ಒಂದು ವಾತಾವರಣ. ಬಾಯಿಯಿಂದ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಅಕ್ಕಪಕ್ಕದ ಜನರಿಗೆ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಸರ್ಕಮ್‌ಸ್ಟನ್ಸ್‌ನಲ್ಲಿ ಇಂದು ಸಾವಿರಾರು ಮಹಿಳೆಯರು ಬರುತ್ತಿದ್ದಾರೆ ಎನ್ನುವುದನ್ನು

ನಾವು ನೋಡಬೇಕಾಗಿದೆ. ಅವರಿಗೆ ನಾವು ಏನು ಮಾಡಬೇಕೆನ್ನುವ ಬಗ್ಗೆ ಇವತ್ತು ನಾವೆಲ್ಲರೂ ಕೂಡಿ ತೀರ್ಮಾನ ಮಾಡಬೇಕಾಗಿದೆ. ಬಜಾರಿನಲ್ಲಿ ಆಯಿತೆಂದರೆ ಪೊಲೀಸ್‌ನವರು ರಿಜಿಸ್ಟರ್ ಮಾಡಿ ಕೇಸ್ ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಾರೆ. ಗಂಡ-ಹೆಂಡತಿಯ ಜಗಳವಾಗಿದೆ, ಮನೆಯಲ್ಲಿ ಅತ್ತೆ-ಮಾವಂದಿರು ಹೊಡೆದಿದ್ದಾರೆ ಎಂದರೆ ಅಷ್ಟು ಆಸಕ್ತಿಯನ್ನು ತೋರಿಸುವುದಿಲ್ಲ. ಇವತ್ತು ಹೊಡೆದಾಟವಾದರೆ ಎಷ್ಟು ಆಸಕ್ತಿಯನ್ನು ಮಹಿಸಿ ಪೊಲೀಸ್‌ನವರು ಕೇಸನ್ನು ಫೈಲ್ ಮಾಡುತ್ತಾರೋ, ಆದರೆ ಮಹಿಳೆಯರಿಗೆ ಮನೆಯಲ್ಲಿ ತೊಂದರೆ ಕೊಟ್ಟರೆ ಅಷ್ಟು ಆಸಕ್ತಿವಹಿಸುವುದಿಲ್ಲವೆನ್ನುವುದನ್ನು ತಾವು ನೋಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಹೋಗಿ ನೋಡಿ: ಪ್ರಾಕ್ಟಿಕಲ್ ನೋಡಬೇಕು. ಕಾನೂನು ಇರುವುದು ಬೇರೆ. ಅದು ಆಗುತ್ತಿರುವುದು ಬೇರೆ, ನಾವು ಇವತ್ತು ನೋಡಬೇಕಾಗಿದೆ. ಮನೆಯಲ್ಲಿ ಆಗತಕ್ಕಂಥ ಪರಿಸ್ಥಿತಿಯಲ್ಲಿ, ಆ ಮಹಿಳೆ ಯಾವ ವಿಧವಾದ ಭಯದಿಂದ ಅವಳು ನಡುಗುತ್ತಿದ್ದಾಳೆ ಎನ್ನುವುದನ್ನು ನಾವು ಇವತ್ತು ಅರ್ಥಮಾಡಿಕೊಳ್ಳಬೇಕಾಗಿದೆ. ಅಂಕಿಅಂಶಗಳ ಪ್ರಕಾರ every fifth woman ನಾನು ಎಲ್ಲರ ಮನೆಯಲ್ಲಿ ಆ ರೀತಿಯಾಗಿ ಇದೆ, ಭಯ ಇದೆ ಎಂದು, ಎಲ್ಲರ ಮನೆಯಲ್ಲಿ ಅತ್ತೆ-ಮಾವಂದಿರು ಆ ರೀತಿಯಾಗಿ ನೋಡಿಕೊಳ್ಳುತ್ತಾರೆಂದು ಹೇಳುವುದಿಲ್ಲ. There are exceptions, generalisation is always bad, more so with the human beings; ಆದರೆ 5 ಮಹಿಳೆಯರಲ್ಲಿ ಒಬ್ಬ ಮಹಿಳೆ ಈ ರೀತಿಯಾದ ಒಂದು ಭಯದ ವಾತಾವರಣದಲ್ಲಿ ಇದ್ದಾಳೆ. ಹೆಚ್ಚು ಕಡಿಮೆ ಆ ಮಹಿಳೆ ಮನೆಯಲ್ಲಿರುವ ಗಂಡ ಅಥವಾ ಅತ್ತೆ-ಮಾವಂದಿರಿಂದ ಹೊಡೆತವನ್ನು ತಿನ್ನುತ್ತಾಳೆ. a battered woman ಎನ್ನುವ ಮಾತನ್ನು ನಾವು ಇವತ್ತು ನೋಡುತ್ತಿದ್ದೇವೆ. ಇವರಿಗೆ ತಾವು ಏನು ಮಾಡುತ್ತೀರಿ? ಇವರ ಭಯವನ್ನು ನಿವಾರಣೆ ಮಾಡುವುದಕ್ಕೋಸ್ಕರ ತಾವು ಯಾವ ಕಾನೂನನ್ನು ತರುವವರು ಇದ್ದೀರಿ? ಇವರೆಲ್ಲರಿಗೂ ಕೂಡ ಭಯವು ಇಲ್ಲದೇ ಇರತಕ್ಕಂಥದ್ದರಲ್ಲಿ ಜೀವನ ಮಾಡುವುದಕ್ಕೋಸ್ಕರ ಯಾವ ಕಾನೂನನ್ನು ತಂದು ಅವರಿಗೆ ರಕ್ಷಣೆ ಕೊಡುತ್ತೀರಿ ಇದನ್ನು ನಾವು ನೋಡಬೇಕಲ್ಲಾ. ಹೊರಗಡೆ ಏನಾದರೂ ಆದರೆ ಕಾನೂನು ಇದೆ, ಪೊಲೀಸ್ ಸ್ಟೇಷನ್‌ದಲ್ಲಿ ಲಾ ಆ್ಯಂಡ್ ಆರ್ಡರ್ ಇದೆ, ಆದರೆ ಮನೆಯಲ್ಲಿ ಇರತಕ್ಕಂಥ ಅತ್ತೆ-ಮಾವಂದಿರು ರಕ್ಷಣೆ ಕೊಡತಕ್ಕಂಥ ಸಂದರ್ಭದಲ್ಲಿ ಆ ಮಹಿಳೆಯರಿಗೆ ರಕ್ಷಣೆ ಕೊಡಬೇಕಾದರೆ ಯಾವ ರೀತಿಯಾದ ಕಾನೂನನ್ನು ತರಬೇಕು, ಹೇಗೆ ಮಾಡಿದರೆ ಅವಳು ಸುರಕ್ಷಿತವಾಗಿ ಬಾಳಬಲ್ಲಳು ಅದನ್ನು ನಾವು ಇವತ್ತು ನೋಡಬೇಕಲ್ಲವೇ? ಅದಕ್ಕಾಗಿ ನಾವು ಇವತ್ತು ಯಾವ ಕಾನೂನನ್ನು ತರಬೇಕೆನ್ನುವ ಬಗ್ಗೆ ನೋಡಬೇಕಾಗಿದೆ. ಇವತ್ತು ಸೀಮೆಎಣ್ಣೆಯನ್ನು ಸುರಿದು ಸಾಯಿಸಬಹುದು.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಬಹಳ ಸೀರಿಯಸ್ಸಾಗಿ ವಿಷಯ ಹೋಗುತ್ತಿದೆ. ಇದರ ಜೊತೆಗೆ ನನ್ನ ಒಂದು ಸಲಹೆ: ಎಲ್ಲಾ ಪ್ರಕರಣಗಳಲ್ಲಿ ಕಂಪ್ಲೇಂಟ್ ಮಾಡಿದ್ದು ಮಾವನ ಮೇಲೆಯಾಗಲಿ ಅಥವಾ ಮೈದುನನ ಮೇಲೆ ಆಗಲಿ ಇಲ್ಲ. ಅತ್ತೆಯ

ಮೇಲೆ ಮತ್ತು ನಾದಿನಿಯ ಮೇಲೆ ಕಂಪ್ಲೇಂಟ್ ಆಗುತ್ತದೆ. ಹೀಗಾಗಿ ಯೋಗ್ಯವಾದ ಸಂಸ್ಕಾರವನ್ನು ಮಹಿಳೆಯರಿಗೆ ತುಂಬತಕ್ಕಂಥದ್ದು ಆಗತ್ಯ ಇದೆಯೋ ಏನೋ ಎಂದು ನನಗೆ ಅನಿಸುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರೆ, ಅತ್ತೆ, ಮಾವ ಹಾಗೂ ಭಾವ ಎಲ್ಲರೂ ಸೇರಿ ಜಾಯಿಂಟ್ ರೆಸ್ಪಾನ್ಸಿಬಲ್ ಆಗುತ್ತಾರೆ. ಅದರಲ್ಲಿ ಅತ್ತೆ ಒಬ್ಬಳೇ ಬರುವುದಿಲ್ಲ. ಆದ್ದರಿಂದ, ನೀವು ಅತ್ತೆಯ ಮೇಲೆ ಹೇಳಿ, ಹೆಣ್ಣಿನ ಮೇಲೆ ಹೆಣ್ಣಿಗೆ ಜಗಳ ತರುವ ವ್ಯವಸ್ಥೆ ಮಾಡತಕ್ಕಂಥದ್ದನ್ನು ಮಾಡಬೇಡಿ. ಆ ರೀತಿಯಾದ ಪರಿಸ್ಥಿತಿ ಅದು ಅಲ್ಲ. ಆ ಪರಿಸ್ಥಿತಿಯನ್ನು, ಒಂದು ಕುಟುಂಬ, ಒಟ್ಟಿಗೆ ಸೇರಿ ಆ ಹೆಣ್ಣಿನ ಮೇಲೆ ದಾಳಿ ಮಾಡಿದಾಗ ಏನು ಮಾಡುತ್ತಾರೆ, ಅದರಲ್ಲಿ ಅತ್ತೆ ಒಬ್ಬಳೇ ಬರುವುದಿಲ್ಲ, ಎಲ್ಲರೂ ಅದರಲ್ಲಿ ಬರುತ್ತಾರೆ ಎನ್ನುವುದನ್ನು ತಾವು ಇವತ್ತು ಯೋಚನೆ ಮಾಡಬೇಕಾಗಿದೆ. ಆದ್ದರಿಂದ, ಹೆಣ್ಣಿನ ಮೇಲೆ ಹೆಣ್ಣನ್ನು ಕಟ್ಟಿ ಈ ರೀತಿ ಮಾಡತಕ್ಕಂಥದ್ದು ಸರಿಯಲ್ಲವೆಂದು ಅಭಿಪ್ರಾಯ ಬರುತ್ತದೆ. ನನ್ನ ಈ ಒಂದು ಪರಿಸ್ಥಿತಿಯಲ್ಲಿ : ಹೆಣ್ಣು ಹುಟ್ಟುವುದಕ್ಕೆ ಮುಂಚೆ ಒಂದು ಪರಿಸ್ಥಿತಿ ಪ್ರಾರಂಭವಾಗುತ್ತದೆ. ನಾನು ಒಂದು ಸಮಯದಲ್ಲಿ ಬೆಂಗಳೂರಿನಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಮಾಡತಕ್ಕಂಥ ಅಂಕಿಅಂಶಗಳನ್ನು ನೋಡಿದಾಗ ಒಂದು ತಿಂಗಳಲ್ಲಿ, ಬೆಂಗಳೂರಿನಲ್ಲಿ ಮಾತ್ರ, ಹೆಣ್ಣು ಮಗುವಿದೆ ಎಂದು ನೋಡಿ ಅಬಾರ್ಷನ್ ಆಗಿದ್ದು 10 ಸಾವಿರ ಮಕ್ಕಳ ವಧೆಯಾಗಿದೆ. ನೀವು ಇವತ್ತು ಯೋಚನೆ ಮಾಡಿ ಕರ್ನಾಟಕದಲ್ಲಿ ಎಷ್ಟು ಆಗಿರಬಹುದು. ಇಡೀ ದೇಶದಲ್ಲಿ ಇವತ್ತು ಹೆಣ್ಣು ಮಗು ಹುಟ್ಟುವ ಮುಂಚೆ ಭ್ರೂಣ ಹತ್ಯೆ ಮಾಡಿರಬಹುದು. ಇವತ್ತು ನಾವು ಇದನ್ನು ಯೋಚನೆ ಮಾಡಬೇಕು. ಇದನ್ನು ತಪ್ಪಿಸಬೇಕಾದರೆ ನಾವು ಏನು ಮಾಡಬೇಕು. ಇವತ್ತೂ ಕೂಡ ಹೆಣ್ಣು ಮತ್ತು ಗಂಡು ಎಂಬ ಬೇದಭಾವ ಆರ್ಟಿಕಲ್ 15 ನಲ್ಲಿ ಅಥವಾ 14ರಲ್ಲಿ ಇಲ್ಲದೇ ಇದ್ದರೂ ಕೂಡ ಇವತ್ತು ಪ್ರತಿಯೊಂದು ಮನೆಯಲ್ಲಿ ನಾವು ನೋಡಿದ್ದೇವೆ. ಅಮೇರಿಕದಲ್ಲಿರುವ ಒಬ್ಬ ಫುಟ್‌ಬಾಲ್ ಆಟಗಾರರನ್ನು ನಿನಗೆ ಮಕ್ಕಳು ಎಷ್ಟು ಎಂದು ಕೇಳಿದಾಗ ಅವನು ಹೇಳುತ್ತಾನೆ. "one son and seven mistakes`` He says "one boy and seven mistakes" ಇದು ಒಂದೆ ಕಡೆ ಅಲ್ಲ. ಇದೇ ರೀತಿ ಪಾಕಿಸ್ಥಾನದಲ್ಲಿ ಆದಾಗ ಶ್ರೀಮತಿ ಬೆನಜೀರ್ ಬುಟ್ಟೋ ಕೂಡ ಬಂದು "I can never tolerate this, I will not do this". ಎಂದು ಹೇಳಿದ್ದಾರೆ. ಪ್ರತಿಯೊಬ್ಬರು ಕೂಡ ಹೇಳಿಕೊಂಡು ಬಂದಿದ್ದಾರೆ. ಆದರೆ ಅವ್ಯಾಹತವಾಗಿ ಇದು ನಡೆದುಕೊಂಡು ಬರುತ್ತಾ ಇದೆ. ಬಾಂಬೆಯಲ್ಲಿ ಕೂಡ ಒಂದು ದಿನಕ್ಕೆ ಎಷ್ಟೋ ಭ್ರೂಣ ಹತ್ಯೆಯಾಗುತ್ತಿವೆ. ನರ್ಸಿಂಗ್ ಹೋಮ್ ಆಕ್ಟ್ ತರುತ್ತೇವೆಂದು ಹೇಳಿದರು, ಅದರ ಬಗ್ಗೆ ಕಾನೂನು ತಂದರು. ಆದರೆ, ಕಾನೂನು ಕಾನೂನಾಗಿಯೇ ಉಳಿದಿದೆ. ಗಲ್ಲಿಗಲ್ಲಿಗಳಲ್ಲಿಯೂ ಕೂಡ ಇವತ್ತು ಒಬ್ಬ ಮಹಿಳೆ ಪ್ರೆಗ್ನೆಂಟ್ ಆದರೆ, ಅವಳ ಗರ್ಭದಲ್ಲಿರುವ ಮಗು ಹೆಣ್ಣು ಅಥವಾ ಗಂಡು ಎಂದು ಪರೀಕ್ಷೆ ಮಾಡಿ ಅದು

ಬೇಡವೆಂದು ಹೇಳುವಂಥ ಒಂದು ಪರಿಸ್ಥಿತಿ ಬಂದಿದೆ. ಒಂದು ಅಡ್‌ವರ್ಟೈಸ್‌ಮೆಂಟ್ ಬರುತ್ತದೆ, ಭಾರತ ದೇಶದಲ್ಲಿ ಹೆಣ್ಣು ಮಗು ಹುಟ್ಟುವ ಮುಂಚೆ, ಸಾಯಿಸುವುದಕ್ಕೆ 38 ರೂಪಾಯಿಗಳು ಖರ್ಚು. ಆದರೆ ನಿಮಗೆ ಮದುವೆ ಮಾಡಲಿಕ್ಕೆ ಕೊಡಬೇಕಾಗಿರುವ ವರದಕ್ಷಿಣೆಯ ಖರ್ಚು 38 ಸಾವಿರ ರೂಪಾಯಿಗಳು, ಇದರಲ್ಲಿ ನಿಮಗೆ ಯಾವುದು ಬೇಕು ಯೋಚನೆ ಮಾಡಿ ಎಂದು ಅಡ್‌ವರ್ಟೈಸ್‌ಮೆಂಟ್ ಬರುತ್ತದೆಂದರೆ, ಇವತ್ತು ನಾವು ಯೋಚನೆ ಮಾಡಬೇಕು. ಸಾಯಿಸಬೇಕಾದರೆ 38 ರೂಪಾಯಿಗಳು, ಇಲ್ಲವಾದರೆ ಆ ಹೆಣ್ಣು ಮಗಳು ಹುಟ್ಟಿ ಬೆಳೆದರೆ ನೀವು 38 ಸಾವಿರ ರೂಪಾಯಿಗಳ ವರದಕ್ಷಿಣೆ ಕೊಡಬೇಕಾಗುತ್ತದೆ. ಇದನ್ನು ಮುಗಿಸಿ ಎಂದು ಹೇಳಿದರೆ ನಾವು ಇವತ್ತು ಯಾವ ಪರಿಸ್ಥಿತಿಯಲ್ಲಿದ್ದೇವೆ ಅದನ್ನು ನಾವು ನೋಡಬೇಕು. ನಾವು ಇವತ್ತು ಯಾವ ಪರಿಸ್ಥಿತಿಯಲ್ಲಿ ನಡೆಯುತ್ತಿದ್ದೇವೆ ಅದನ್ನು ನೋಡಬೇಕಲ್ಲಾ. ಹುಟ್ಟುವ ಮುಂಚೆ ಸಾವು, ಒಬ್ಬ ಪಾರ್ಸಿಯ ಮಹಿಳೆ ಸತ್ತಾಗ ಅವಳು ಬೇರೆ ಜಾತಿಯ ಗಂಡಿನ ಜೊತೆ ಮದುವೆಯಾಗಿದ್ದರೆ, ಅವರಿಗೆ ಪಾರ್ಸಿಯವರ ಗೋರಿಯಲ್ಲಿ ಜಾಗವಿಲ್ಲ. ಏಕೆಂದರೆ ಬೇರೆ ಜಾತಿಯವರನ್ನು ಮದುವೆಯಾಗಿರುವುದರಿಂದ. ಹೆಣ್ಣು ಮಗು ಹುಟ್ಟುವ ಮುಂಚೆ ಅಂತಹ ವ್ಯವಸ್ಥೆ, ಹುಟ್ಟಿ ಸತ್ತ ನಂತರ ಇಂತಹ ವ್ಯವಸ್ಥೆ. ಹುಟ್ಟುವುದಕ್ಕಿಂತ ಮುಂಚೆಯಿಂದ ಹಿಡಿದು ಸಾಯುವವರೆಗೆ ಕೂಡ ಹುಟ್ಟಿದ ನಂತರ ಆ ಹೆಣ್ಣುಮಗು ಶಾಲೆಗೆ ಹೋಗಿ ಏಕೆ ಓದಬೇಕು ಎಂದು ಅವಳಿಗೆ ವಿದ್ಯಾಭ್ಯಾಸವಿಲ್ಲ. Genocide, Infenticide, circumcision...

MR. SPEAKER :— We have taken up this as a special subject. ನೀವು ಸ್ವಲ್ಪ ಹಿಂದಕ್ಕೆ ಬನ್ನಿ. ಮೆಹರ್ ಏಕೆ ಇಂಟ್ರಡ್ಯೂಸ್ ಮಾಡಿದರು. ಕನ್ಯಾಶುಲ್ಕ ಏಕೆ ಇತ್ತು? ರಾಜಮಹಾರಾಜರ ಮನೆಗಳಲ್ಲಿ ಸ್ವಯಂವರದ ಪದ್ಧತಿ ಏಕೆ ಬಂದಿತ್ತು? Emancipation of women-you come stage by stage. ನಮ್ಮ ಸೋಷಿಯಲ್ ಆರ್ಡರ್ ಮತ್ತು ಎಕಾನಾಮಿಕ್ ಆರ್ಡರ್‌ಗಳು ಹೇಗೆ ಬದಲಾವಣೆಯಾಗಿವೆ ಇವತ್ತು ಈ ರೀಸಲ್ಟ್ ಏಕೆ ಬದಲಾವಣೆಯಾಗಿವೆ. ಇವತ್ತು ಕೂಡ ಇದರ ಬಗ್ಗೆ ನೀಖಾ ಮಾಡಬೇಕಾದರೆ ಮೆಹರ ಕೊಟ್ಟೇ ನೀಖಾ ಮಾಡಿಕೊಳ್ಳುವುದು. ಇದು ಒಂದು ವಿಪರ್ಯಾಸ. ಮೇಹರ ಕೊಟ್ಟು ಹುಡುಗ, ಹುಡುಗಿಗೆ ನೀಖಾ ಖಾಯಂ ಮಾಡುತ್ತಾರೆ. ಆದರೆ, ಅವರ ಸಮಾಜದಲ್ಲಿ ಕೂಡ ವರದಕ್ಷಿಣೆ ತೆಗೆದುಕೊಳ್ಳುತ್ತಿದ್ದಾರೆ. The main reason for all this is, the change in social order, economic order and change of value system and this House should find answer to these problems. We must go on these lines.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರೆ, ನಾವು ರೋಮನ್‌ರ ಕಾಲಕ್ಕಿಂತಲೂ ಮುಂಚೆ ಹೋಗಬೇಕು. ರೋಮನ್‌ರ ಕಾಲದಲ್ಲಿ ಸ್ಲೇವ್ಸ್ ಇದ್ದರು. ಯಾರು ಸ್ಲೇವ್ಸ್ ಎನ್ನುವುದು ತಮಗೂ ಕೂಡಾ ಗೊತ್ತಿದೆ. ಯಾರು ಮಾರಾಟ ಮಾಡುತ್ತಿದ್ದರು ಅವರನ್ನು

ಸ್ಲೇವ್ಸ್ ಎಂದು ಕರೆಯುತ್ತಿದ್ದರು. ಅವರು ಮಾರಾಟದ ವಸ್ತುಗಳಾಗಿದ್ದರು. ನಾನು ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇವತ್ತು ಏನಾಗಿದೆ, ತಾವು ಹೇಳಿದಂತೆ ಇವತ್ತು ಜಾತಿ ಇಲ್ಲ, ಮುಸ್ಲಿಂ ಇರಬಹುದು, ಕ್ರಿಶ್ಚಿಯನ್ ಇರಬಹುದು, ಹಿಂದೂ ಇರಬಹುದು, ಪ್ರತಿಯೊಂದು ಜನಾಂಗದಲ್ಲಿ ಇವತ್ತು ಗಂಡು ಮದುವೆಯ ಮಾರ್ಕೆಟ್‌ನಲ್ಲಿ ಮಾರಾಟದ ವಸ್ತುವಾಗಿದ್ದಾನೆ. He has reduced himself to a slave. ಮಾರಾಟದ ವಸ್ತುವಾಗಿರುವುದರಿಂದ ಈ ಪರಿಸ್ಥಿತಿ ಇವತ್ತು ಒದಗಿ ಬಂದಿರುತ್ತದೆ. ಆದ್ದರಿಂದ ಇವತ್ತು ಆ ಗಂಡನ್ನು ಇವತ್ತು ಆ ಸ್ಲೇವ್ಸ್‌ದಿಂದ ಬಿಡುಗಡೆ ಮಾಡಬೇಕಾಗಿದೆ. ಆ ಸ್ಲೇವ್ಸ್‌ದಿಂದ ತೆಗೆದು ಹಾಕಿ, ಆ ಗಂಡನ್ನು ನೀನು ಮನುಷ್ಯನಾಗಿ ಬಾಳು, ನೀನು ಮಾರಾಟದ ವಸ್ತುವಾಗಿ ಬಾಳಬೇಡ ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಅಧ್ಯಕ್ಷರೆ, ಮಾನ್ಯ ಸದಸ್ಯರೆಯರು ಹೇಳುವುದಕ್ಕೆ ಇಲ್ಲಿ ಯಾರದ್ದೂ ಎರಡು ಮಾತಿಲ್ಲ. ಆದರೆ, ಅದನ್ನು ನಿಲ್ಲಿಸಬೇಕಾದರೆ ಏನು ಮಾಡಬೇಕು ಎಂಬುದರ ಬಗ್ಗೆ ಪರಿಹಾರವನ್ನು ಹೇಳಬೇಕು. ವರದಕ್ಷಿಣೆಯ ಬಗ್ಗೆ ಹೇಳಬೇಕಾದರೆ, ಅದರ ಹಿಂದೆ ಹೆಣ್ಣೇ ಇರುತ್ತಾಳೆ. ಇವತ್ತು ಬಹಳ ಕಡೆ ನಾವು ಅದನ್ನು ನೋಡುತ್ತಿದ್ದೇವೆ. ಅದಕ್ಕೆ ನಾವು ಪರಿವರ್ತನೆ ತರಬೇಕಾಗುತ್ತದೆ.

ಅಧ್ಯಕ್ಷರು :— ನೀಚತನಕ್ಕೆ ಹೆಣ್ಣು-ಗಂಡು ಜಾತಿ ಏನೂ ಇಲ್ಲ. ನೀಚರಾದವರೆಲ್ಲಾ ಆ ಕೆಲಸ ಮಾಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೆ, ಎಂತಹ ನೀಚನೂ ಕೂಡ ತನ್ನ ಮಗಳನ್ನು ಅತ್ಯಾಚಾರ ಮಾಡುವುದಿಲ್ಲ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಅತ್ಯಾಚಾರವನ್ನು ಮಾಡುವಂತಹ ವ್ಯಕ್ತಿಗಳಿಗೆ, ಅಂತದ್ದರಲ್ಲಿ ಒಬ್ಬ ಕುಡುಕನನ್ನು ಹುಡುಕಿಕೊಂಡು ಬನ್ನಿ, ಕುಡಿದುಕೊಂಡು ಮನೆಗೆ ಬಂದ ವ್ಯಕ್ತಿಯೂ ತಾಯಿಯ ಜೊತೆ ಮಲಗುವುದಿಲ್ಲ. ನಾನು ತುಂಬಾ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನೀಚತನ ಇರುವ ವ್ಯಕ್ತಿಯೂ ಕೂಡ ಬೇರೆ ಹೆಣ್ಣು ಮಗಳೂ ಕೂಡ ಅವಳು ನನ್ನ ಮಗಳು ಎನ್ನುವ ಭಾವನೆಯೂ ಕೂಡ ಎಲ್ಲಿಯವರೆಗೆ ಈ ಸಮಾಜದಲ್ಲಿ ಬರುವುದಿಲ್ಲವೋ, ಅಲ್ಲಿಯತನಕ ಈ ಹೆಣ್ಣಿಗೆ ಶೋಷಣೆಯೂ ನಡೆಯುತ್ತಿರುತ್ತದೆ.

ಅಧ್ಯಕ್ಷರು :— ಅದು ಬರದೇ ಇರುವುದೇ ನೀಚತನ.

ಶ್ರೀ ಕೆ.ಎಸ್. ಈಶ್ವರಪ್ಪ :— ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ.

ಡಾ : ಎಂ.ಪಿ. ಕರ್ಕಿ :— ಒಂದು ಹೆಣ್ಣು ತನಗೆ ಹೆಣ್ಣು ಮಗಳು ಹುಟ್ಟಿದಾಗ ಅಳುತ್ತಾಳೆ. ಏಕೆಂದು ಕೇಳಿದರೆ ಅವಳಿಗೆ ನೋವಾಗಿದೆ ಎಂದು ಹೇಳುವುದಿಲ್ಲ. ಹಣೆಬರಹವನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಮನೆಯಲ್ಲಿ ಬೈಯುತ್ತಾರೆ. ಒಂದು ಹುಡುಗಿ ಆದ ಮೇಲೆ ಮತ್ತೊಂದು ಹುಡುಗಿಯನ್ನು ಏಕೆ ಮಾಡಿದೆ ಎಂದು ಬೈಯುತ್ತಾರೆ ಎಂದು ಹೇಳುವಂತಹ

ಒಂದು ರೀತಿಯ ವಿಪರ್ಯಾಸದ ವ್ಯವಸ್ಥೆಯಾಗಿದೆ. ಇದು ಬರೀ ಹೆಂಗಸರಿಗೆ ತೊಂದರೆಯನ್ನು ಕೊಡುವಂತದ್ದಲ್ಲ, ಇದರಲ್ಲಿ ಮಾವ, ಗಂಡ ಮತ್ತು ಎಲ್ಲರೂ ಇದ್ದಾರೆ. ಈ ಸಮಾಜವು ಕೂಡ ಹಾಗೆಯೇ ಇದೆ.

ಅಧ್ಯಕ್ಷರು :— ಇದಕ್ಕೊಂದು ಬಹಳ ದೊಡ್ಡದಾದ ಇತಿಹಾಸವಿದೆ. ನಾನು ಪದೇಪದೇ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಾವು ಮೊದಲು ಲಗ್ನ ಮಾಡುತ್ತಿದ್ದೆವು. ಕನ್ಯಾದಾನವನ್ನು ಮಾಡುವ ಹೊತ್ತಿಗೆ ಕನ್ನೆಯ ಕಡೆಯವರು ಅವರ ಎಲ್ಲಾ ಸಂಬಂಧಿಕರು ಕಣ್ಣೆನಲ್ಲಿ ನೀರು ಹಾಕುತ್ತಿದ್ದರು. ಇಷ್ಟೊಂದು ಪ್ರೀತಿಯಿಂದ ನಿನ್ನನ್ನು ಬೆಳೆಸಿ, ಸಾಕಿ, ಎಲ್ಲಾ ನಾವು ಮಾಡಿದ್ದೇವೆ. ನಿನ್ನನ್ನು ಅವರ ಕೈಯಲ್ಲಿ ಇಡುತ್ತಿದ್ದೇವೆಂದು ಧಾರೆಯನ್ನು ಎರೆಯುವಾಗ ಅವರನ್ನು ಕೇಳಿಕೊಳ್ಳುವರು. ನನ್ನ ಮಗುವನ್ನು ನೀವು ಚೆನ್ನಾಗಿ ಕಾಪಾಡಿಕೊಂಡು ಹೋಗಬೇಕು ಎಂದು ಅವರನ್ನು ಕೇಳಿಕೊಳ್ಳುತ್ತಿದ್ದರು. ಈಗ ಆ ಭಾವನೆಗಳು ಹೊರಟುಹೋಗಿದೆ. ನಿನ್ನೆ ಈ ಸದನದಲ್ಲಿ ಒಬ್ಬ ಸದಸ್ಯರು ಹೇಳಿದರು 1 ಲಕ್ಷ, 2 ಲಕ್ಷವನ್ನು ಕಲ್ಯಾಣಮಂಟಪಕ್ಕೆ ಕೊಟ್ಟು, ಫ್ಲೋರಲ್ ಡಕೋರೇಷನ್ ಮಾಡಿ, ಅಡಿಗೆಯವರನ್ನು ಕರೆಯಿಸಿ, ಬ್ಯಾಂಡ್ ಬಾರಿಸಿ ಮದುವೆ ಮಾಡುತ್ತಿದ್ದರು. ಈ ಕಲ್ಚರಿಗೆ ನಾವು ಬಂದಿದ್ದೇವೆ. ಮ್ಯಾರೇಜ್‌ಗೆ ಸ್ಯಾಂಕ್ಷನ್ ಎಲ್ಲಿದೆ. ಆ ರಿಲೇಷನ್‌ಶಿಪ್ ಎಲ್ಲಿದೆ, ಏಕೆ ಮೆಟರ್‌ನಲ್ ರಿಲೇಷನ್‌ಶಿಪ್‌ನಲ್ಲೇ ಹೆಚ್ಚು ಮದುವೆಗಳನ್ನು ನಮ್ಮವರು ಮಾಡುತ್ತಿದ್ದರು. please go back a little. ಸ್ವಲ್ಪ ಟೈಮ್ ತೆಗೆದುಕೊಂಡರೂ ಚಿಂತೆಯಿಲ್ಲ. Let us somehow try to find some solution for this.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಸನ್ಮಾನ್ಯ ಅಧ್ಯಕ್ಷರೆ, ಹೆಣ್ಣು ಹೆಣ್ಣಿಗೆ ಎಂದು ನಾನು ತಮಗೆ ಹೇಳಬೇಕು ಎಂದು The experience in my life, I have seen in my bare eyes. ನನ್ನ ಹತ್ತಿರ ಕೆಲವು ಜನರು ಬಂದು ನನಗೆ ಡೌರಿ ಬೇಕಿಲ್ಲ, ಮದುವೆ ಮಾಡಿಸಿಕೊಡಿ ಮೇಡಂ ಎಂದು ಹೇಳುತ್ತಾರೆ. ನಾವು ಗಂಡು ಮತ್ತು ಹೆಣ್ಣು ಇಬ್ಬರು ಒಪ್ಪಿದ್ದೇವೆ ಎಂದು ಹೇಳುತ್ತಾರೆ. ನಾಳೆ ನೀನು ಬಾ ರಿಜಿಸ್ಟರ್ ಮದುವೆ ಮಾಡಿಸೋಣ ಎಂದು ಹೇಳಿದರೆ ಅವನು ಮಾರನೇ ದಿವಸ ಬರುತ್ತಾನೆ. ಮೇಡಂ, ನನಗೇನೂ ಡೌರಿ ಬೇಕಾಗಿಲ್ಲ, ಆದರೆ ನಮ್ಮ ತಂದೆತಾಯಿಂದಿರು ಕೇಳುತ್ತಾರೆ. ನೀನು ವರದಕ್ಷಿಣೆಯನ್ನು ತೆಗೆದುಕೊಂಡು ಬರದಿದ್ದರೆ ನೀನು ಬೇರೆ ಮದುವೆ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ. ನಾನು ಇವತ್ತು ಕೇಳುತ್ತೇವೆ, ಆ ಗಂಡಿಗೇನು ಹೃದಯವಿಲ್ಲವೇ? ಅವನು ಗಂಡಾಗಿದ್ದಾನೋ ಅಥವಾ ಇನ್ನೇನು ಅಂದುಕೊಂಡಿದ್ದಾನೆ. ಅಪ್ಪಅಮ್ಮಂದಿರು ಹೇಳಿದರು ಅದಕ್ಕೋಸ್ಕರ ನಾನು ಡೌರಿ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಾನಲ್ಲಾ, ಅವನೆಂಥ ಗಂಡು ಎಂದು ನೀವೇಲ್ಲಾ ಪ್ರಶ್ನೆ ಮಾಡಬೇಕಲ್ಲವೇ? ಅವನಲ್ಲಿ ನಾನು ನನ್ನ ಹೆಂಡತಿಯನ್ನು ಸಾಕುತ್ತೇನೆಂಬ ಶಕ್ತಿ ಇದಿದ್ದರೆ ಆ ರೀತಿ ಅವನು ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಈ ವಿಷಯವನ್ನು ತಾವು ಸುದೀರ್ಘವಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ಮಾನ್ಯ

ಅಧ್ಯಕ್ಷರೇ, ತಾವು ಒಂದು ಮಾತನ್ನು ಹೇಳಿದ್ದೀರಿ. ಒಂದು ಕಾಲದಲ್ಲಿ ಕನ್ಯಾಶುಲ್ಕ ಎಂದು ಇತ್ತು. ಕನ್ನೆಯನ್ನು ಕೊಟ್ಟು ಶುಲ್ಕವನ್ನು ತೆಗೆದುಕೊಂಡು ಹೋಗುವಂತಹ ಕಾಲ ಈಗ ಬದಲಾವಣೆಯಾಗಿದೆ. ಮೆಹರ್ ಬಗ್ಗೆ ತಾವು ಹೇಳಿದ್ದೀರಿ. ಮಹಮದಿಯರ ಕಾಲದಲ್ಲೂ ಬಹಳ ಒಳ್ಳೆಯ ಕಾನೂನುಗಳಿತ್ತು. ಇಲ್ಲ ಎಂದು ನಾನು ಹೇಳುವುದಿಲ್ಲ. ಅವರು ಮೆಹರ್‌ನ್ನು ಕೊಡುತ್ತಾರೆ. ಆದರೆ ಡೈವರ್ಸ್ ಮಾಡಬೇಕಾಗದರೆ ಆ ಮೆಹರನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳುತ್ತಾರೆ. ಯಾವ ಕಾಲದಲ್ಲಿ ಯಾರು ಮೆಹರ್ ಕೊಟ್ಟಿದ್ದರು ಆ ಹಣ ಅವಳಿಗೆ ಜೀವನ ನಡೆಸುವುದಕ್ಕೆ ಸಾಕಾಗುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನೂ ಸಹ ನಾವು ನೋಡಬೇಕಾಗುತ್ತದೆ. ಅದನ್ನು ಕೂಡ ನಾವು ಈ ಪರಿಮಿತಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ. ನನ್ನ ಹತ್ತಿರ ಬಹಳ ಕೇಸುಗಳು ಇದರ ಬಗ್ಗೆ ಬಂದಿದೆ. ಇಷ್ಟೇ ಇಷ್ಟು ಮೆಹರ್ ನಮ್ಮದು ಆಗಿಹೋಯಿತು ಎಂದು ಹೇಳತಕ್ಕಂತಹ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ಈ ಮೆಹರ್‌ನಿಂದ ಅವಳ ಜೀವನ ಸಾಗಿಸುವುದಕ್ಕೆ ಸಾಕಾಗುತ್ತದೆಯೇ? It is high time ನಾವು ಇವತ್ತು ಯೋಚನೆ ಮಾಡಬೇಕಾಗುವಂತಹ ಪರಿಸ್ಥಿತಿ ಬಂದಿದೆ. ಹಲವಾರು ಮಹಿಳೆಯರು, ಅಲ್ಪಸಂಖ್ಯಾತ ಮಹಿಳೆಯರೂ ಕೂಡ ಇವತ್ತು ನನ್ನ ಹತ್ತಿರ ಬರುತ್ತಾರೆ. ಡೈವರ್ಸ್ ಎಂದು ಹೇಳಿ ತಲಾಖ್, ತಲಾಖ್ ಎಂದು ಮಾಡಿ ಅವರನ್ನು ಮನೆಗೆ ಕಳುಹಿಸುವಂತಹ ಪರಿಸ್ಥಿತಿಯಲ್ಲಿ ಅವಳಿಗೂ ಮತ್ತು ಅವಳ ಮಕ್ಕಳ ಗತಿಯೇನು ಎಂಬುದನ್ನು ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಆ ಹೆಣ್ಣಿನ ಜೀವನದ ಬಗ್ಗೆಯೂ ಕೂಡ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಅವಳು ಸಮಾಜದಲ್ಲಿ ಹೇಗೆ ಬದುಕಬೇಕು ಎಂದು ನಾವು ಯೋಚನೆ ಮಾಡಬೇಕಾಗಿದೆ. ಅದೇ ರೀತಿ ಕ್ರಿಶ್ಚಿಯನ್ಸ್ ಲಾನಲ್ಲಿಯೂ ಕೂಡ, ಕೇರಳದಲ್ಲಿ Adultery is the only ground ನಾಲ್ಕು ಗೋಡೆಯ ಮಧ್ಯೆ ನಡೆಯುವಂತಹ ಡೈವರ್ಸ್ ಒಂದೇ ಒಂದು ಗ್ರೌಂಡ್ಸನಲ್ಲಿ ಆಗುತ್ತಿರುವುದು ಡೈವರ್ಸ್ ಎಂದು ಹೇಳಿ ಕೇರಳದಲ್ಲಿ ಹೊಡೆದು ಹಾಕಿದರು. ಇವತ್ತೂ ಕೂಡ ಈ ಕರ್ನಾಟಕದಲ್ಲಿ ಏನೂ ಕೂಡ ಆಗಿಲ್ಲ. ಆ ಒಂದು ಪರಿಸ್ಥಿತಿಯಲ್ಲಿ ಕ್ರಿಶ್ಚಿಯನ್ ಮಹಿಳೆಯರು ಬರುತ್ತಾರೆ. ನನ್ನ ಗಂಡ ಇಂಥವರ ಜೊತೆಯಲ್ಲಿ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದಾನೆ ಎಂದು ಹೇಳಿದಾಗ ಅದನ್ನು ಪ್ರೂವ್ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದಾಗ, ನಾವು ಪ್ರೂವ್ ಮಾಡುವುದು ಹೇಗೆ ಮೇಡಂ 4 ಗಂಟೆಯಲ್ಲಿ ಯಾರು ಬಂದು ಹೇಳುತ್ತಾರೆ. ಇವತ್ತು ಅವರು ಡೈವರ್ಸ್‌ನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಹೀಗೆ ಅಖಂಡವಾಗಿ, ಸಮಗ್ರವಾಗಿ ಎಲ್ಲಾ ಮಹಿಳೆಯರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಆ ಮಹಿಳೆಗೆ ಆಗಿರುವಂತಹ ದುಃಖವನ್ನು ಸರಿಪಡಿಸುವುದು ಹೇಗೆ? ಗಂಡ ಕುಡಿದು ಮನೆಗೆ ಬಂದು ಹೆಂಡತಿಗೆ ಹೊಡೆದಾಗ ಅದನ್ನು ತಪ್ಪಿಸುವುದು ಹೇಗೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ನಾವು ಇದಕ್ಕೆ ಪರಿಹಾರವೇನು ಎಂಬುದನ್ನು ಕೇಳುತ್ತಿದ್ದೇವೆ. ಇದಕ್ಕೆ ಪರಿಹಾರವೇನು ಎಂದು ತಾವು ಹೇಳಿದ್ದೀರಿ. ನಿಮ್ಮ ಸರ್ಕಾರ ಪಾನ ನಿರೋಧವನ್ನು ಜಾರಿಗೆ ತರುತ್ತೇವೆಂದು

ಹೇಳಿದ್ದೀರಿ. ಅದನ್ನು ತೆಗೆದುಕೊಂಡು ಬಂದಿರಿ, ಏನೂ ಮಾಡಲಿಲ್ಲ. ಆ ವ್ಯಕ್ತಿ ಕುಡಿದು ಮನೆಗೆ ಬಂದು ಆ ಹೆಣ್ಣಿಗೆ ಹೊಡೆತ, ಬಡಿತ ಹಾಗೂ ಅವಳ ಮಾಂಗಲ್ಯಕ್ಕೂ ಕೂಡ ಧಕ್ಕೆ. ಆ ಮಾಂಗಲ್ಯವನ್ನು ತೆಗೆದುಕೊಂಡು ಹೋಗಿ ಮಾರಿ ನನಗೆ ಹಣ ಕೊಡು ಬಾ ಎಂದು ಹೇಳುತ್ತಾರೆ. ಇವತ್ತು ಮಧ್ಯಮ ವರ್ಗದ ಮಹಿಳೆಯರಿಗಿಂತ ಹೆಚ್ಚಾಗಿ ಕೆಳವರ್ಗದ ಮಹಿಳೆಯರೆಲ್ಲರೂ ದುಡಿಯುತ್ತಿದ್ದಾರೆ. ಅವರು ಬೆಳಿಗ್ಗೆಯಿಂದ ಸಾಯಂಕಾಲದ ತನಕ ದುಡಿದು ಮನೆಗೆ ಬಂದರೆ ಸಂಜೆ ಗಂಡನಾದವನು ಕುಡಿದು ಮನೆಗೆ ಬಂದು ಆ ಹಣವನ್ನು ಅವಳಿಂದ ಕಿತ್ತುಕೊಂಡು ಹೋಗುತ್ತಾನೆ. ಆ ಮಕ್ಕಳಿಗೆ ಗಂಜಿ ಕೂಡ ತರದೆ ಇರುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಈ ಮಹಿಳೆಯರ ಪರಿಸ್ಥಿತಿ ಏನಾಗಿದೆ, ಮಧ್ಯಮ ವರ್ಗಕ್ಕೆ ಸೇರಿದ ಮಹಿಳೆಯ ಪರಿಸ್ಥಿತಿ ಏನಾಗಿದೆ ಎನ್ನುವುದನ್ನೂ ಸಹ ನಾವು ನೋಡಬೇಕಾಗಿದೆ. ಈ ಅತ್ಯಾಚಾರ, ಅನಾಚಾರ ಹೇಗೆ ಮಾಡುತ್ತಿದ್ದಾರೆಂದು ತಾವು ನೋಡಬೇಕು. ಇವತ್ತು ಕೆನಡಾದಲ್ಲಿ ರೇಪ್ ಎನ್ನುವಂತಹ ಅಕ್ಷರವನ್ನು ತೆಗೆದುಹಾಕಿದ್ದಾರೆ. ಸೆಕ್ಶುಯಲ್ ಅಸಾಲ್ಟ್ ಎಂದು ಕರೆಯಿರಿ, ರೇಪ್ ಎಂದು ಕರೆಯಬೇಡಿ ಎಂದು ಹೇಳುತ್ತಾರೆ. ನಮ್ಮಲ್ಲಿಯೂ ಕೂಡ ಕಾನೂನು ಇದೆ. ಗಂಡ ಹೆಂಡತಿಯ ಮನಸ್ಸಿಗೆ ವಿರುದ್ಧ ಅವನೇನಾದರೂ ಇಂಟರ್‌ಕೋರ್ಸ್‌ನ್ನು ಕೇಳಿದರೆ ಇಟ್ ಇಸ್ ರೇಪ್ ಎಂದು ಹೇಳುತ್ತಾರೆ. ಮನಸ್ಸಿಗೆ ವಿರುದ್ಧವಾಗಿ ಮಾಡುವ ಹಾಗಿಲ್ಲ. ಆದರೆ ಎಷ್ಟು ಮಹಿಳೆಯರು ಇವತ್ತು ಕುಡಿದು ಬಂದ ಗಂಡನ ಕೈಯಲ್ಲಿ ಮನಸ್ಸಿಲ್ಲದೆ ಹೋರಾಟ ಮಾಡುತ್ತಿರುವುದನ್ನು ನಾವು ನೋಡುತ್ತಿಲ್ಲವೇ? ಇದೆಲ್ಲ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಯಾರು ನೋಡುತ್ತಾರೆ? ನಾವು ಇದರ ಬಗ್ಗೆ ಕಂಪ್ಲೆಂಟ್‌ನ್ನು ಕೊಟ್ಟರೆ ಪೊಲೀಸ್‌ನವರು ಏನಾದರು ಮಾಡುತ್ತಿದ್ದಾರಾ? ಇದರ ಬಗ್ಗೆ ಯಾವುದಾದರೂ ಕಂಪ್ಲೆಂಟ್ ರಿಜಿಸ್ಟರ್ ಆಗಿದೆಯೇ? ನಮಗೆ ಇದರ ಬಗ್ಗೆ ಸ್ಟ್ಯಾಟಿಸ್ಟಿಕ್ಸ್‌ನ್ನು ಕೊಡಿ ನಾವು ಅದನ್ನು ನೋಡೋಣ. ಈ ತರಹ ಎಷ್ಟು ಕಂಪ್ಲೆಂಟ್ ರಿಜಿಸ್ಟರ್ ಆಗಿದೆ? ಆ ಕಂಪ್ಲೆಂಟ್‌ಗಳು ರಿಜಿಸ್ಟರ್ ಆಗುವುದಿಲ್ಲ. ಇದು ನಡೆದುಕೊಂಡು ಬರುತ್ತಲೇ ಇದೆ. ಅವಳಿಗೆ ಇದರಿಂದ ಮುಕ್ತಿ ಇಲ್ಲ, ಈ ಪರಿಸ್ಥಿತಿಯಲ್ಲಿ ನಾವೆಲ್ಲರೂ ಇದ್ದೇವೆ. ಹಿಂದಿನ ಕಾಲದಲ್ಲಿ ನಮಗೆ ಮದುವೆ ಮಾಡಿ ಕಳುಹಿಸುವ ಕಾಲದಲ್ಲಿ ನಮಗೆ ಹೇಳುತ್ತಿದ್ದರು. ಸಂಬ್ರಾಜ್ಞಿ, ಶಶಿನೋಭವ ಸಂಬ್ರಾಜ್ಞಿ, ಶಶ್ಯಾಂಭವ, ನನಾಗರಿ ಸಂಬ್ರಾಜ್ಞಿಭವ, ಅತ್ತೆ ಮಾವಂದಿರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಮೈದುನನ್ನು ಮತ್ತು ನಾದಿನಿಯರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಭಾವ ಮೈದುನರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನೀವು ಚೆನ್ನಾಗಿ ಇರು ಎಂದು ಹೇಳಿ ಆಶೀರ್ವಾದವನ್ನು ಮಾಡಿ ಕಳುಹಿಸಿಕೊಡುತ್ತಿದ್ದರು. ಇವತ್ತು ಏನಾಗಿದೆ ಎಂದು ಹೇಳಿದರೆ ನೋಡಿಕೊಳ್ಳಲು ಹೋಗುವಂತಹ ಮಹಿಳೆಯರಿಗೆ ಸಿಗುತ್ತಿರುವುದು ಈ ಕುಟುಂಬದವರಿಂದಲೇ ಅವಳ ಮೇಲೆ ಅತ್ಯಾಚಾರ, ಅವಳ ಕೊಲೆ, ಅವಳ ಮೇಲೆ ಸೀಮೆಎಣ್ಣೆಯನ್ನು ಹಾಕುವುದು, ಅವಳಿಗೆ ಪಾಯಿಸನ್ ಕುಡಿಸುವುದು, ಇವರನ್ನೂ unpaid servants ಎಂದು ಕರೆಯುತ್ತಾರೆ ಇವತ್ತು ಹೇಳುತ್ತಾರೆ. ಪೇಯ್ಡ್ ಸರ್ವೆಂಟ್ಸ್ ಇರಬಹುದು ಅಥವಾ ಅನ್‌ಪೇಯ್ಡ್ ಸರ್ವೆಂಟ್ಸ್ ಇರಬಹುದು. ಕೆಲಸವನ್ನು ಮಾಡಿದವರು ಮಾತ್ರ

ಕೆಲಸವದರ ಮನೆಯಲ್ಲ. ಗಂಡಸಾದವನು ಕೆಲಸವನ್ನು ಮಾಡಿ ಸಂಪಾದನೆ ಮಾಡಿಕೊಂಡು ಮನೆಗೆ ತರುತ್ತಾನೆ. ಆದರೆ ಅದೇ ಸಮಯದಲ್ಲಿ ಮಹಿಳೆಯು ಮಕ್ಕಳನ್ನು ನೋಡಿಕೊಂಡು, ಮನೆಯ ಕೆಲಸವನ್ನು ಮಾಡಿಕೊಂಡು, ಆಕೆಯೂ ಕೂಡ She also contributes to the family. ಆದ್ದರಿಂದ ಅವಳು ಮನೆಯಲ್ಲಿ ಚಾಕರಿಯನ್ನು ಮಾಡತಕ್ಕಂತಹ ಹೆಣ್ಣಲ್ಲ ಎನ್ನುವಂತಹ ದೃಷ್ಟಿಕೋನದಿಂದ ನಾವು ನೋಡಬೇಕಾಗಿದೆ. ಈ ಒಂದು ದೃಷ್ಟಿಕೋನದಲ್ಲಿ ನಾವು ನೋಡಬೇಕಾದರೆ ಅವಳಿಗೂ ಒಂದು ಶಕ್ತಿ, ಮನಸ್ಸು ಇದೆ, ಅವಳ ಧಮನಿಯಲ್ಲಿ ಹರಿಯತಕ್ಕಂತಹ ರಕ್ತ ಕೂಡ, ಗಂಡಿನಲ್ಲಿ ಹರಿಯತಕ್ಕಂತಹ ರಕ್ತ, ಹೆಣ್ಣಿನಲ್ಲಿ ಹರಿಯತಕ್ಕಂತಹ ರಕ್ತ ಎರಡು ಒಂದೇ ಎನ್ನುವುದನ್ನು ನಾವು ಅರ್ಥಮಾಡಿಕೊಂಡು ಅವರ ಕಷ್ಟವನ್ನು ದೂರಮಾಡುವುದಕ್ಕೋಸ್ಕರ ನಾವು ಪ್ರಯತ್ನಪಡಬೇಕಾಗಿದೆ. ಈ ದಿಸೆಯಲ್ಲಿಯೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ನನಗೆ ಬಹಳ ದುಃಖವಾಗುವ ವಿಷಯವೇನೆಂದರೆ ಗಂಡ ಹೆಂಡತಿಯರ ಮಧ್ಯದಲ್ಲಿ ಕೂಸು ಬಡವಾಯಿತು ಇದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಗಂಡಸಾದವನು ಮನೆಗೆ ಬಂದು ಮಕ್ಕಳ ಎದುರಿನಲ್ಲಿ ಹೆಂಡತಿಗೆ ಹೊಡೆಯುವುದು. ಇದರಿಂದ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಇವತ್ತು ಕ್ರಿಮಿನಲ್ಸ್, ಚೈಲ್ಡ್ ವಿಕ್ಟಿಮ್ಸ್ ಮತ್ತು ರೋಡಿನಲ್ಲಿ ಓಡಾಡುವಂತಹ ಮಕ್ಕಳನ್ನು ನಾವು ಪರೀಕ್ಷೆ ಮಾಡಿದಾಗ, ಅವರು ಹೇಳುವಂತದ್ದು ನಾವು ತಂದೆತಾಯಿಂದಿರ ಜಗಳವನ್ನು ಮತ್ತು ಹೊಡೆದಾಟವನ್ನು ನೋಡಲಾರದೆ ಮನೆಯನ್ನು ಬಿಟ್ಟು ಬಂದಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಸ್ಟೇ ಚಿಲ್ಡ್ರನ್ಸ್ ಆ ಮಕ್ಕಳನ್ನು ಏನು ಮಾಡಬೇಕು ಎಂದು ನಾವು ನೋಡಬೇಕಾಗಿದೆ. ಇದು ಮಕ್ಕಳ ಮನಸ್ಸಿನ ಮೇಲಾಗುವ ಪರಿಣಾಮ, ಹೆಂಡತಿಗೆ ಸುಖವಿಲ್ಲ, ಮನೆಯಲ್ಲಿ ಶಾಂತಿಯಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಈ ಮಹಿಳೆಯರ ಬಗ್ಗೆ ಏನು ಗಮನವನ್ನು ಹರಿಸಬೇಕು. ಇದರ ಬಗ್ಗೆ ಏನು ಕಾನೂನನ್ನು ಮಾಡಬೇಕು ಎಂಬುದರ ಬಗ್ಗೆ ಒಂದು ಸಮಗ್ರವಾದ ಚಿಂತನೆಯಾಗಬೇಕು. ಈ ವಿಚಾರದಲ್ಲಿ ಎರಡು ಸದನದ ಜಾಯಿಂಟ್ ಸೆಲೆಕ್ಟ್ ಕಮಿಟಿಯಾಗಬೇಕು. ಈ ಕಮಿಟಿಯಲ್ಲಿ ಎಲ್ಲಾ ಅನುಭವಸ್ಥರ, ಸೋಷಿಯಾಲಿಜಿಸ್ಟ್ ಆಗಬಹುದು, ಲಾ ಕಾಲೇಜಿನ ಪ್ರಿನ್ಸಿಪಾಲ್ ಆಗಬಹುದು, ಅಡ್ವೋಕೇಟ್ ಜನರಲ್ ಆಗಬಹುದು, ಜಡ್ಜ್ ಮತ್ತು ಪೊಲೀಸ್ ಆಫೀಸರ್ ಆಗಬಹುದು. ಇವೆರಲ್ಲರೂ ಸೇರಿದಂತಹ ಒಂದು ಅಡ್ವೈಸರಿ ಕಮಿಟಿಯನ್ನು ತಾವು ಮಾಡಬೇಕು. ಆ ಅಡ್ವೈಸರಿ ಕಮಿಟಿಯಲ್ಲಿ ಕಾನೂನಿನಲ್ಲಿ ಯಾಯಾವ ಲೂಪ್‌ಹೋಲ್ಸ್‌ಗಳಿವೆ, ಹೆಣ್ಣುಮಕ್ಕಳಿಗೆ ಏನೇನು ಅನ್ಯಾಯವಾಗುತ್ತಿದೆ ಇವೆಲ್ಲವನ್ನೂ ಕೂಡ ಪರಾಮರ್ಶೆ ಮಾಡಿ ಅದನ್ನು ಹೇಗೆ ಸರಿಪಡಿಸಬೇಕೆಂಬುದರ ಬಗ್ಗೆ ಅವಕಾಶವನ್ನು ತಾವು ಕೊಡಬೇಕು. ಆ ಕಮಿಟಿಯ ವರದಿಯು ಆದಷ್ಟು ಬೇಗ ಬರುವಂತೆ ಮಾಡಬೇಕು. ಎಲ್ಲಾ ದೇಶಗಳಲ್ಲಿ ಈ ಸಂಬಂಧವಾಗಿ ಏನೇನು ಕಾನೂನುಗಳಿವೆ, ಅದನ್ನು ತರಿಸಿ ನೋಡಬೇಕು. ಈ ಹೆಣ್ಣುಮಕ್ಕಳಿಗೆ ಬಂದಿರುವಂತಹ ಪರಿಸ್ಥಿತಿಯನ್ನು ಸುಧಾರಣೆ ಮಾಡಿ ಹೆಣ್ಣುಮಗಳು ನಿರಾತಂಕವಾಗಿ ಮನೆಯಲ್ಲಿ ಜೀವನ ಮಾಡಿ, ರಸ್ತೆಯಲ್ಲಿ ನಿರಾಂತಕವಾಗಿ ಓಡಾಡುವುದಕ್ಕೆ ಅವಕಾಶವನ್ನು

ಕಲ್ಪಿಸಿಕೊಡುವುದಕ್ಕೆ ತಾವು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ನಾವು ಆಳವಾಗಿ ಚಿಂತನೆಯನ್ನು ಮಾಡಬೇಕು. ಅದರ ಬಗ್ಗೆಯೂ ತಾವು ಯೋಚನೆ ಮಾಡಬೇಕೆಂಬುದು ನನ್ನ ಅನಿಸಿಕೆಯಾಗಿದೆ.

11.50 ಎ.ಎಂ.

ಈ ಸಂದರ್ಭದಲ್ಲಿ ನನಗೆ ತಿಳಿದ ವಿಚಾರ ಹೇಳುತ್ತೇನೆ. ತಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಒಬ್ಬರು ಮಂತ್ರಿಯನ್ನು ಮಾಡಿದ್ದೀರಿ. ಬೇರೆ ಕಡೆ ಸಹ ಇದೇ ರೀತಿ ಮಾಡಿದ್ದಾರೆ. ಹ್ಯೂಮನ್ ರಿಸೋರ್ಸ್ ಡಿಪಾರ್ಟ್‌ಮೆಂಟ್ ಎಂದು ಇಲ್ಲಿ ಮತ್ತು ಬೇರೆ ಕಡೆ ಮಾಡಿದ್ದಾರೆ. ನಮ್ಮಲ್ಲೂ ಸಹ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೋಸ್ಕರ ಒಬ್ಬರು ಮಂತ್ರಿ ಮಾಡಿದ್ದೀರಿ. ಆದರೆ ಅವರಿಗೆ ಅಧಿಕಾರ ಏನು ಕೊಟ್ಟಿದ್ದೀರಿ? ಹೆಸರಿಗೆ ಮಾತ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ. ಆ ಹೆಸರಿಗೊಬ್ಬರು ಮಂತ್ರಿ. ಅಧಿಕಾರ ಮಾತ್ರ ನನಗಂತೂ ಖಂಡಿತಾ ಏನೂ ಕಂಡಿಲ್ಲ. ಮಕ್ಕಳಿಗೆ ಯಾವುದಾದರೂ ರೀತಿಯಲ್ಲಿ ಆಹಾರ ಕೊಡತಕ್ಕದ್ದು ಮಾಡಿದ್ದೀರಾ? ಒಳ್ಳೆಯ ಆಹಾರವನ್ನು ಮಕ್ಕಳಿಗೆ ಕೊಡೋಣವೆಂದರೆ ಅದನ್ನು ತೆಗೆದುಕೊಂಡು ಹೋಗಿ ಜಿಲ್ಲಾ ಪಂಚಾಯಿತಿಗಳಿಗೆ ಕೊಟ್ಟಿದ್ದೀರಿ. ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಏನಾದರೂ ಮಹಿಳೆಯರಿಗೆ ನೋಡೋಣವೆಂದರೆ, ಅವರಿಗಾಗಿ ಇರತಕ್ಕ ಹಣವನ್ನು ಮಹಿಳೆಯರಿಗೆ ಕೊಡಲಿಕ್ಕೆ ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದ್ದೀರಿ. ಯಾವುದೇ ಒಂದು ಹಣವನ್ನು ಈ ಕೈಯಲ್ಲಿ ಕೊಟ್ಟು ಬೇರೆ ಕಡೆ ಯಥಾಪ್ರಕಾರ ಮಹಿಳೆಯರು ಹಣವನ್ನು ಉಪಯೋಗ ಮಾಡಿಕೊಂಡು ಗರ್ಭಿಣಿ ಸ್ತ್ರೀಯರಿಗೆ ಬರಬೇಕಾದ ಹಣವನ್ನು ಕೂಡ ವಿನಿಯೋಗವಾಗದಂತೆ ತಾವು ಮಾಡಿದ್ದೀರಿ. ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇಂತಹದ್ದಕ್ಕೆ ನಮಗೆ ಮಂತ್ರಿಗಳೊಬ್ಬರು ಬೇಕಾ? ನಿಮಗೆ ನಿಜವಾಗಿಯೂ ಮನಸ್ಸಿದ್ದರೆ ಈಗಿರತಕ್ಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳಿಗೆ ಏನಾದರೂ ಮಾಡಬೇಕೆಂದು ಮನಸ್ಸು ಇದೆ, ಆದರೆ ಅವರಿಗೆ ಮಾಡುವುದಕ್ಕೆ ದಾರಿಯಿಲ್ಲ. ಕೈಕಾಲು ಕಟ್ಟಿಹಾಕಿ ಹೆಸರಿಗೆ ಮಾತ್ರ ಮಂತ್ರಿ ಮಾಡಿದ್ದೀರಿ. ಅವರ ಎಲ್ಲ ಹಕ್ಕುಗಳನ್ನು ಹರಿದು ಹಂಚಿ ವಿಕೇಂದ್ರೀಕರಣ ಅಲ್ಲ, ಛಿದ್ರೀಕರಣ ಮಾಡಿದ್ದೀರಿ. ನೀವು ವಿಕೇಂದ್ರೀಕರಣದ ಹೆಸರಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳನ್ನು ಛಿದ್ರೀಕರಣ ಮಾಡಿ ಬೇರೆ ಬೇರೆಯವರಿಗೆ ಕೊಟ್ಟಿರತಕ್ಕ ಸಂದರ್ಭದಲ್ಲಿ ಹೆಸರಿಗೆ ಮಾತ್ರ ಮಂತ್ರಿ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಬಾಲಭವನ ಎಂದು ಮಾಡಿದ್ದೀರಿ. ಮಕ್ಕಳ ಕಲ್ಯಾಣಕ್ಕೋಸ್ಕರ ಬಾಲಭವನ ಎಂದು ಮಾಡಿ ಅದಕ್ಕೆ ಒಬ್ಬರು ಛೇರ್ಮನ್ ಮಾಡಿದ್ದೀರಿ. ಬಾಲಭವನಕ್ಕೆ ಕೊಟ್ಟಿರತಕ್ಕ ಹಣವೆಷ್ಟು? 40 ಲಕ್ಷ ರೂಪಾಯಿ ಹಣ. ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಮಕ್ಕಳ ವಿಳಾಸಕ್ಕಾಗಿ ಕೊಟ್ಟಿರತಕ್ಕ ಹಣ 40 ಲಕ್ಷ. ಕೊಟ್ಟಿರುವ 20 ಲಕ್ಷದಲ್ಲಿ ಸಂಬಳ ಸಾರಿಗೆ ಕೊಡಬೇಕು. 40 ಲಕ್ಷದಲ್ಲಿ ಇವತ್ತು ಇನ್ನೂ 20 ಲಕ್ಷ ಕೊಟ್ಟಿಲ್ಲ. ನಾವು ಕೇಳುತ್ತೇವೆ, ಮಕ್ಕಳ ಕಲ್ಯಾಣ

ಹೇಗೆ ಆಗುತ್ತದೆ? ಮಹಿಳೆಯರ ಕಲ್ಯಾಣ ಹೇಗೆ ಆಗುತ್ತದೆ? ಈ ತರಹ ನಾವು ಮಹಿಳೆಯರಿಗೆ ಒಂದು ನೆಪ ಮಾಡಿ ಅವರಿಗೊಂದು ಅಧ್ಯಕ್ಷಸ್ಥಾನ ಕೊಟ್ಟು ಮಹಿಳೆಯರಿಗೆ ಒಂದು ಮಂತ್ರಿಸ್ಥಾನ ಕೊಟ್ಟು ಯಾವುದೇ ವಿಧವಾದ ಅಧಿಕಾರಿಗಳು ಇಲ್ಲ. ಹೆಸರಿಗೆ ಮಾತ್ರ ಮಹಿಳೆ, ಆದರೆ ಆಗತಕ್ಕ ಕೆಲಸ ಮಹನೀಯರದ್ದು. ಈ ರೀತಿಯ ಕೆಲಸಗಳಾದರೆ ಎಲ್ಲೂ ಕೂಡ ಮಹಿಳೆಯರ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ನಿಮಗೆ ಮನಸ್ಸಿದ್ದರೆ ಮಹಿಳೆಯರ ಏಳಿಗೆಯಾಗಬೇಕು, ಮಹಿಳೆಯರು ಕಷ್ಟ ಸಂಕೋಲೆಗಳಿಂದ ಬಿಡುಗಡೆಯಾಗಬೇಕೆಂದು ಏನಾದರೂ ತಮ್ಮ ಮನಸ್ಸಿನಲ್ಲಿ ಇದ್ದಿದ್ದೇಯಾದರೆ ತಾವು ಯೋಚನೆ ಮಾಡಬೇಕು. ಇವತ್ತು ಸೆಂಟ್ರಲ್ ಜೈಲ್ ಇದೆ. ಅಲ್ಲಿಗೆ ಹಿಂದೆ ನಾನೂ ಕೂಡ ಹೋಗಿದ್ದೇನೆ. ಗರ್ಭಿಣಿ ಮಹಿಳೆಯರನ್ನು ಅಲ್ಲಿಟ್ಟಿದ್ದಾರೆ. ಹೆರಿಗೆಯಾದ ಮೇಲೆ ಆ ಮಗು ಏನು ಅಪರಾಧ ಮಾಡಿತ್ತು? ಹೆರಿಗೆಯಾದ ಮೇಲೆ ಆ ಮಗುವನ್ನು ಅಲ್ಲಿಯೇ ಇಡುತ್ತಾರೆ. ಆ ಮಗುವಿಗೆ ಏನಾದರೂ ಜೈಲಿನಲ್ಲಿರಬೇಕೆಂದು ಶಿಕ್ಷೆಯಾಗಿದೆಯೆ? ಅದನ್ನು ನಾವೆಲ್ಲಾ ಯೋಚನೆ ಮಾಡಬೇಕಲ್ಲಾ. ಆ ಮಗುವಿಗೆ ಏನಾದರೂ ಶಿಕ್ಷೆಯನ್ನು ಕೋರ್ಟ್‌ನಲ್ಲಿ ಕೊಟ್ಟಿದ್ದಾರೆಯೆ? ನೀವು ಗರ್ಭಿಣಿ ಮಹಿಳೆಯನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಹಾಕುತ್ತೀರಿ. ಬೇರೆ ಬೇರೆ ದೇಶಗಳಲ್ಲಿ ಗರ್ಭಿಣಿ ಮಹಿಳೆಯರಿಗೆ ಜೈಲಿನಲ್ಲಿ ಹಾಕುವಂತಹ ಪರಿಸ್ಥಿತಿ ಇಲ್ಲ. ಅವರಿಗೆ ಸ್ಪೆಷಲ್ ಟ್ರೀಟ್‌ಮೆಂಟ್ ಕೊಟ್ಟು ಹೆರಿಗೆ ಆಗುವವರೆಗೆ ನೋಡಿಕೊಂಡು ಆ ಮಗುವಿಗೆ ಒಳ್ಳೆಯ ಸ್ಥಾನವನ್ನು ಕಲ್ಪಿಸಿಕೊಂಟ್ಟು ಆ ಮಗುವನ್ನು ನೋಡಿಕೊಳ್ಳುವಂತಹ ವ್ಯವಸ್ಥೆ ಮಾಡುತ್ತಾರೆ. ಇವತ್ತು ಸೆಂಟ್ರಲ್ ಜೈಲಿನಲ್ಲಿ ಯಾವ ಪರಿಸ್ಥಿತಿ ಇದೆಯೋ ನನಗೆ ಗೊತ್ತಿಲ್ಲ. ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ನೋಡಿದಾಗ ಆ ಮಕ್ಕಳೂ ಕೂಡ ತಾಯಿಯ ಜೊತೆ ಅಲ್ಲಿ ಜೈಲಿನಲ್ಲಿ ಆ ವಾತಾವರಣದಲ್ಲಿ ಬೆಳೆಯುತ್ತಿರತಕ್ಕದ್ದನ್ನು ನೋಡಿದಾಗ, ಮಹಿಳೆಯರ ಕಲ್ಯಾಣ ಮತ್ತು ಮಕ್ಕಳ ಕಲ್ಯಾಣ ಇದು ಹೇಗೆ ಆಗುತ್ತದೆ ಎನ್ನುವುದನ್ನು ನಾವು ಇವತ್ತು ಯೋಚನೆ ಮಾಡಬೇಕು. ಇವತ್ತು ಮನೆಯಲ್ಲಿ ಸಂಬಳ, ಮಾನ್ಯ ಮಾಟಾಳ್ ನಾಗರಾಜ್‌ರವರು ಹೇಳಿದಹಾಗೆ, ಪ್ರತಿಯೊಬ್ಬರಿಗೂ ರೈಟ್ ಟು ಲೈಫ್ ಇವತ್ತು ರೈಟ್ ಟು ಡಿಗ್ನಿಟಿ, ರೈಟ್ ಟು ಲೈಫ್ ಎಂದು ಏನು ಹೇಳುತ್ತಾರೆ ಜೀವಿಸುವ ಹಕ್ಕು ಈವೊಂದು ಒಳ್ಳೆಯ ವಾತಾವರಣದಲ್ಲಿ ಜೀವಿಸುವಂತಹ ಹಕ್ಕು ಬದುಕುವ ಹಕ್ಕು ಇದು ರೈಟು ಟು ಲೈಫ್ ಎನ್ನತಕ್ಕದ್ದನ್ನು ನಾವು ಸಂವಿಧಾನದಲ್ಲಿ ನೋಡಿದ್ದೇವೆ. ಇದು ಆಗಬೇಕಾಗಿದೆ. ಮತ್ತೊಂದು ದುಃಖವಾದ ವಿಚಾರ ಅದನ್ನು ಹೇಳಬೇಕಾಗಿದೆ. ಇದು ವಿದೇಶಗಳಲ್ಲಿ ಮತ್ತು ಇಲ್ಲಿಯೂ ಕೂಡ ಬಂದಿದೆ. ತಮಿಳುನಾಡಿನಲ್ಲಿ ಹೆಚ್ಚಾಗಿ ಆಗುತ್ತಿದೆಯೆಂದು ಕೇಳಿದ್ದೇನೆ. ಹುಟ್ಟಿದ ಮಗುವಿಗೆ, ಹೆಣ್ಣುಮಗು ಹುಟ್ಟಿದ ಮಗುವಿಗೆ ಅದಕ್ಕೆ ಸರ್ಕಂಸೇಶನ್. ನಾನೂ ಕೂಡ ಕೇಳಿರಲಿಲ್ಲ, ಕೇಳಿ ಬಹಳ ದುಃಖವಾಯಿತು. ಹೆಣ್ಣುಮಗುವಿಗೆ circumcision ಈ ರೀತಿಯ ಪರಿಸ್ಥಿತಿ. ಹುಟ್ಟಿದ ಹೆಣ್ಣುಮಕ್ಕಳನ್ನು ಇವತ್ತು ಮಾರಾಟ ಮಾಡುತ್ತಿದ್ದಾರೆ. ಕಂಪೆಲ್ಡ್ ಪ್ರಾಸ್ಟಿಟ್ಯೂಷನ್ ಅವರನ್ನು ಅಲ್ಲಿಗೆ ಕಳುಹಿಸತಕ್ಕ ವ್ಯವಸ್ಥಿತ ರೀತಿ. ಹೋಗುವುದು ಬೇರೆ ಮಾಡುವುದು ಬೇರೆ. ಆ ರೀತಿಯಾಗತಕ್ಕ ಪರಿಸ್ಥಿತಿಯಲ್ಲಿ ನಾವು ಮಹಿಳೆಯರು

ಬದುಕಿ ಯಾವ ರೀತಿ ಬಾಳಬೇಕು. ಅದನ್ನು ತಾವು ಹೇಳಬೇಕಾಗಿದೆ. ಇದು ಬಹಳ ದುಃಖವಾಗುತ್ತಿದೆ. ಕಾರ್ಮಿಕ ಮಹಿಳೆಯರಿಗೆ ಅಲ್ಲಿ ಹೋದರೆ ಹೆಚ್ಚು ಹೆಚ್ಚು ಹಿಂಸೆ. ಅದೂ ಕೂಡ ಪರಿಸ್ಥಿತಿಗಳನ್ನು ನೋಡಿದ್ದೇವೆ. ಇನ್‌ಸ್ಟೆನ್ಸ್‌ಗಳನ್ನು ನೋಡಿದ್ದೇವೆ. ಅಮೇರಿಕಾದಲ್ಲಿ ಇಂಡಿಯಾದಿಂದ ಹೋದಂತಹ ಒಂದು ಕುಟುಂಬದ ಮೇಲೆ ಯಾವರೀತಿ ಆಯಿತು? ಕೌರ್ ಅನ್ನತಕ್ಕ ಕುಟುಂಬ. 14 ಜನರ ಕೊಲೆ ಹೇಗಾಯಿತು ಅದನ್ನು ನೋಡಿದ್ದೇವೆ. ಅದೇ ರೀತಿ ಅಂಜನಾಮಿಶ್ರ ಅವರ ಮೇಲೆ ನಡೆದ ಕೃತ್ಯಗಳನ್ನು ನಾವು ನೋಡುತ್ತಿದ್ದೇವೆ. ಯಾವರೀತಿ ಪರಿಸ್ಥಿತಿ ಇದೆಯೆಂದರೆ, ಇದಕ್ಕೆ ಕೊನೆ ಇದೆಯೇ ಇಲ್ಲವೇ, ಅದು ನನಗೂ ಗೊತ್ತಿದೆ ಇದಕ್ಕೆ ಕೊನೆ ಇರುವುದಕ್ಕೆ ಸಾಧ್ಯವಿಲ್ಲ. ತಕ್ಷಣ ನಾವು ಏನಾದರೂ ಮಾರ್ಪಾಟು ಮಾಡುತ್ತೇವೆಂದರೆ, ನಾವು ಅಂದುಕೊಂಡಹಾಗೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಅದನ್ನು ಮಾಡುವುದಕ್ಕೆ ಸಾಧ್ಯವೂ ಇಲ್ಲ. ಆದರೂ ಸಹ ನಾವೆಲ್ಲರೂ ಮನಸ್ಸು ಮಾಡಿದರೆ ಎಲ್ಲರ ಮನಸ್ಸನ್ನು ಪರಿವರ್ತನೆ ಮಾಡತಕ್ಕ ಕೆಲಸವನ್ನು ಮಾಡಿದರೆ Attitude of Man towards Women ಏನಿರಬೇಕೆನ್ನುವುದನ್ನು ಭಾವನೆಗಳನ್ನು ಮಾಡಿಕೊಳ್ಳುತ್ತಾ ಹೋಯಿತು ಅಂದರೆ, ಯೂನಿವರ್ಸಿಟಿಗಳಲ್ಲಿ ಕಾಲೇಜುಗಳಲ್ಲಿ, ವರ್ಕ್‌ಪ್ಲೇಸ್‌ಗಳಲ್ಲಿ, ಕ್ಯಾಂಟೀನ್‌ಗಳಲ್ಲಿ, ಹೋಟೆಲ್‌ಗಳಲ್ಲಿ, ವಿಧಾನಸೌಧದಲ್ಲಿ ಎಲ್ಲಾ ಕಡೆ ಕೆಲಸ ಮಾಡತಕ್ಕ ಸಂದರ್ಭಗಳಲ್ಲಿ ಈವೊಂದು ಸಂದೇಶವನ್ನು ಅವರಿಗೆ ನೀಡಿ ಡೊಮ್ಯಾಸ್ಟಿಕ್ ವಯಲೆನ್ಸ್ ಹೆಣ್ಣುಮಕ್ಕಳಿಗೆ ಮಾಡತಕ್ಕ ವಯಲೆನ್ಸ್ ಇದು ಆಗಬಾರದು ಆದರೆ ಇಂತಹ ಪನಿಷ್‌ಮೆಂಟ್ ಇದೆ ಎನ್ನತಕ್ಕ ಸಂದೇಶವನ್ನು ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಹೇಳುತ್ತಾ ಹೋಯಿತು ಅಂದರೆ ಮನಸ್ಸಿನ ಮೇಲೆ ಪರಿಣಾಮವಾಗಿ ಮಕ್ಕಳ ಮನಸ್ಸಿನ ಮೇಲೆ ಪರಿಣಾಮವಾಗಿ ಇದರ ಬಗ್ಗೆ ಪರಿಣಾಮಕಾರಿಯಾಗಿ ಇದರ ಬಗ್ಗೆ ಚಿಂತಿಸಬಹುದೇ ಹೊರತು ಈ ರೀತಿ ಏನಾದರೂ ಮಾಡುತ್ತೇವೆಂದರೆ ಕಾನೂನಿನ ಮುಖಾಂತರವೇ ಮಾಡುತ್ತೇವೆ ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದರೆ ಅದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ನಾನಾದರೂ ಕೂಡ ಈ ಸಂದರ್ಭದಲ್ಲಿ ಯೂನಿವರ್ಸಿಟಿ, ವಿದೇಶಗಳಲ್ಲಿ, ಅಮೇರಿಕಾದಲ್ಲಿ, ಮತ್ತು ಬೇರೆ ಕಡೆಗಳಲ್ಲಿ ಎಲ್ಲರಿಗೂ ಕೂಡ ಕರೆ ಕೊಟ್ಟು ಅವರು ಮತ್ತೊಂದು ಮುಖ್ಯವಾದ ಕೆಲಸವನ್ನು ಮಾಡಿದರು. ಈ ಕಾನೂನನ್ನು ತರುವುದಕ್ಕೆ ಮುಂಚೆ ಎಲ್ಲಾ ರಿಲಿಜಿಯಸ್ ಹೆಡ್ಸ್ ಧರ್ಮಾಧಿಕಾರಿಗಳನ್ನು ಕರೆದು ಅವರಿಗೂ ಕೂಡ ಈ ಸಂದೇಶವನ್ನು ಕೊಟ್ಟರು. ನಿಮ್ಮ ನಿಮ್ಮ ಚರ್ಚ್‌ಗಳಲ್ಲಿ ಮಸೀದಿಗಳಲ್ಲಿ ದೇವಸ್ಥಾನಗಳಲ್ಲಿ, ಗುರುದ್ವಾರಗಳಲ್ಲಿ ಎಲ್ಲಾ ಕಡೆ ಇದರ ಬಗ್ಗೆ ಪರಿಣಾಮಕಾರಿಯಾದ ಚಿಂತನೆಯಾಗಬೇಕೆಂದು ಹೇಳಿ ಇದರ ಬಗ್ಗೆ ಸಂದೇಶ ನೀಡಬೇಕೆಂದು ಹೇಳಿ ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ ಒಂದು ಕಮಿಟಿಯಲ್ಲಿ ರಿಲಿಜಿಯಸ್ ಹೆಡ್ಸ್‌ಗಳ ಒಪೀನಿಯನ್ ತೆಗೆದುಕೊಂಡರು. ನಾನಾದರೂ ಸಹ ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದು ಧರ್ಮಾಧಿಕಾರಿಗಳು ಸಮಾಜದಲ್ಲಿರತಕ್ಕ ಆಗುಹೋಗುಗಳ ಬಗ್ಗೆ ಚಿಂತನೆ ಮಾಡತಕ್ಕ ಧರ್ಮಾಧಿಕಾರಿಗಳು ಇದರ ಬಗ್ಗೆ ಚಿಂತನೆ ಮಾಡಿದರೆ ಹೆಣ್ಣುಮಕ್ಕಳ ಮೇಲೆ ಆಗತಕ್ಕ ವೈಮನಸ್ಸುಗಳನ್ನು ಪರಿಹಾರ ಮಾಡುವುದರಲ್ಲಿ

ಅವರ ಕೃಪೆ ಬಹಳ ಜಾಸ್ತಿಯಿರುತ್ತದೆ. ಅವರು ಹೇಳುವ ಮಾತುಗಳನ್ನು ಜನರು ಕೇಳುವಂತಹ ಪರಿಸ್ಥಿತಿಯಲ್ಲಿದ್ದಾರೆ. ಆದುದರಿಂದ ಎಲ್ಲಾ ಧರ್ಮದರ್ಶಿಗಳನ್ನು ಈ ಸಂದರ್ಭದಲ್ಲಿ ಒಂದು ಕಡೆ ಕರೆಸಿ ಅವರಿಗೂ ಕೂಡ ಈ ಸಂದೇಶವನ್ನು ನೀಡಿ ಅವರ ಪಾಲನ್ನೂ ಕೂಡ ತೆಗೆದುಕೊಂಡು ಇದಕ್ಕೆ ಏನು ಮಾಡಬೇಕೆನ್ನುವುದರ ಬಗ್ಗೆ ತಾವೂ ಕೂಡ ಯೋಚನೆ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಅಮೇಲೆ ಇಂಡಿಯನ್ ಕ್ರಿಮಿನಲ್ ಪ್ರೊಸೀಜರ್ ಕೋಡ್ 125. ನಾವು ಇದನ್ನು ಕೇಳುತ್ತಿದ್ದೇವೆ. ಮೆಂಟೇನೆನ್ಸ್ ಮ್ಯಾಕ್ಸಿಮಮ್ ಫೀ ಫಾರ್ ವುಮೆನ್ 500 ರೂಪಾಯಿಗಳನ್ನು ನಾವು ಕೇಳುತ್ತಿದ್ದೇವೆ. ಕರ್ನಾಟಕದಲ್ಲಿ ಅಮೆಂಡ್‌ಮೆಂಟ್ ಮಾಡುವುದಕ್ಕೆ ನಮಗೆ ಪವರ್ ಇದೆ. ಕಳೆದ ಹತ್ತು ವರ್ಷಗಳಿಂದ ಎಲ್ಲಾ ಅಮೆಂಡ್‌ಮೆಂಟ್ಸ್‌ಗಳನ್ನು ಮಾಡಬೇಕೆಂದು ಕೇಳುತ್ತಿದ್ದೇವೆ. ಫ್ಯಾಮಿಲಿ ಕೋರ್ಟ್, ಕುಟುಂಬ ಕಲ್ಯಾಣ ಯೋಜನೆಗಳು ಯಾವುದೂ ಕೂಡ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಯಾವ ರೀತಿ ಆ ಕೋರ್ಟ್‌ಗಳು ಇರಬೇಕೆಂದು ಕೂಡ ನೋಡುತ್ತಿಲ್ಲ. ಫ್ಯಾಮಿಲಿ ಕೋರ್ಟ್‌ಗಳಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬೇಕಲ್ಲಾ. ಆ ಕೋರ್ಟನ್ನು ಶಿಫ್ಟ್ ಮಾಡಿಬಿಟ್ಟಿದ್ದಾರೆ. 5ನೇ ಫ್ಲೋರ್‌ಗೆ ಫ್ಯಾಮಿಲಿ ಕೋರ್ಟನ್ನು ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಈಜಿ ಕಡೆ ಕುಳಿತುಕೊಳ್ಳುವುದಕ್ಕೆ ಬೆಂಚ್ ಇಲ್ಲ. ಗಂಡ ಹೆಂಡತಿ ಅಲ್ಲಿ ಬಂದು ಜಗಳವಾಡಿದರೆ ಅವರನ್ನು ನಿಭಾಯಿಸತಕ್ಕ ಶಕ್ತಿಯಿಲ್ಲ. ಇಂತಹ ಪರಿಸ್ಥಿತಿಯಿದೆ, ಇದನ್ನೂ ಕೂಡ ನಾವು ಸರಿ ಮಾಡಬೇಕಲ್ಲ. ಕುಟುಂಬ ನ್ಯಾಯಾಲಯಗಳು, ಪೋಲೀಸ್ ಅಧಿಕಾರಿಗಳು, ಇನ್‌ವೆಸ್ಟಿಗೇಟಿಂಗ್ ಆಫೀಸರ್ಸ್ ಇವರು ಹೇಗಿರಬೇಕೆಂಬುದನ್ನೂ ಕೂಡ ಚಿಂತನೆ ಮಾಡಬೇಕು. ಇನ್ವೆಸ್ಟ್ಸ್ ಹೇಗೆ ಮಾಡಬೇಕು ಎಲ್ಲಿ ಮಾಡಬೇಕು, ಹೇಗೆ ಮಾಡಬೇಕು ಅದರ ಬಗ್ಗೆ ಚಿಂತನೆಯಾಗಬೇಕು. ಪೋಸ್ಟ್ ಮಾರ್ಟಂ ಮಾಡುವಾಗ ತಪ್ಪು, ಬರೆಯುತ್ತಾರಲ್ಲಾ ಅದನ್ನು ಹೇಗೆ ತಿದ್ದಬೇಕು ಅದರ ಬಗ್ಗೆ ಚಿಂತನೆಯಾಗಬೇಕು. ನನಗೆ ಗೊತ್ತಿದೆ ನಾನು ಯಾರ ಮೇಲೂ ಕಂಪ್ಲೈಂಟ್ ಮಾಡಬೇಕೆಂದು ಹೇಳುತ್ತಿಲ್ಲ. ಡಾಕ್ಟರುಗಳು ಯಾವರೀತಿ ಪೋಸ್ಟ್‌ಮಾರ್ಟಂ ಮಾಡುತ್ತಿದ್ದಾರೆ ಯಾವರೀತಿ ರಿಪೋರ್ಟ್ ಕೊಡುತ್ತಾರೆ ಡೆತ್ ಡ್ಯೂ ಟು ಶಾಕ್; ಡೆತ್ ಡ್ಯೂ ಟು ಬರ್ನಿಂಗ್ ಅಲ್ಲ; ಡೆತ್ ಡ್ಯೂ ಟು ಶಾಕ್. ನಾನು ಅದನ್ನು ನೋಡಿದ್ದೇನೆ ಅದಕ್ಕಾಗಿ ಹೇಳುತ್ತೇನೆ. ಅದರ ಬಗ್ಗೆ ಅಸಿಫಿಕ್ಷಿಯೇಷನ್ ಡ್ಯೂ ಟು ವಾಟ್ ಬರೆಯುವುದಿಲ್ಲ. ಡೆತ್ ಡ್ಯೂ ಟು ಶಾಕ್ ಅಷ್ಟೇ ಬರೆಯುತ್ತಾರೆ. ಡೆತ್ ಡ್ಯೂ ಟು ವಾಟ್ ಬರೆಯಬೇಕಲ್ಲಾ, ನಾನು ಹೇಳುತ್ತಿದ್ದೇನೆ. ಡೆತ್ ಡ್ಯೂ ಟು ವಾಟ್ ಎಂದು ಬರೆದರೆ ಗೊತ್ತಾಗುತ್ತದೆ.

MR. SPEAKER :— Iam sorry, my attention was elsewhere. ನನ್ನ ಗಮನ ಬೇರೆ ಕಡೆ ಇತ್ತು ಡಾಕ್ಟರ್ ಈಶ್ವರಪ್ಪನವರು ಏನೋ ಹೇಳಿದರು.

ಶ್ರೀಮತಿ ಪ್ರಮೀಳಾನೇಸರ್ಗಿ :— ಪೋಸ್ಟ್‌ಮಾರ್ಟಂ ಆಗಬೇಕಾದರೆ, ಡೆತ್ ಡ್ಯೂ ಟು ಶಾಕ್ ಎಂದು ಹೇಳುತ್ತಾರೆ. ಶಾಕ್ ಡ್ಯೂ ಟು ವಾಟ್ ಎಂದು ಬರೆಯುವುದಿಲ್ಲ, ಅಂದರೆ ಸಾವಿಗೆ ಕಾರಣ ಶಾಕ್‌ಯಿಂದ ಸಾಯುವು ಎಂದು ಹೇಳುತ್ತಾರೆ. ಅವಳು ಸತ್ತಿದ್ದು

ಹೇಗಾದರೂ ಇರಲಿ. ಡಾಕ್ಟರ್ ಹೇಳತಕ್ಕದ್ದು ಡೆತ್ ಡ್ಯು ಟು ಶಾಕ್ ಎಂದು ಬರೆಯಬೇಕೆಂದು. ನಾನು ಕೇಳತಕ್ಕದ್ದು ಶಾಕ್ ವಿತ್‌ಔಟ್‌ವರ ಆಯಿತು, ಅವರು ಸುಟ್ಟಿದ್ದರಿಂದ ಆಯಿತೇ, ಅದನ್ನು ನಾವು ಕೇಳುತ್ತೇವೆ. ಅದನ್ನು ಬರೆಯಬೇಕೋ ಬೇಡವೊ? ಅದನ್ನು ಬರೆಯುವುದಿಲ್ಲವೆನ್ನತಕ್ಕದ್ದು ನಮ್ಮ ಕಂಪ್ಲೆಂಟ್.

ಅಧ್ಯಕ್ಷರು :— ನಾನು ಅದನ್ನೇ ಹೇಳಿದ್ದು ನಾನು ಎಷ್ಟು ಸಲ ಹೇಳಬೇಕು? ಆ ಡಾಕ್ಟರ್ ವರದಕ್ಷಿಣೆ ತೆಗೆದುಕೊಂಡು ಬಂದಿರುವವನು ಆಗಿದ್ದರೆ ಏನು ಮಾಡುತ್ತೀರಿ? ಅವರ ಅಪ್ಪ ಅಮ್ಮ ಇವನನ್ನು ತೋರಿಸಿ ವ್ಯಾಪಾರ ಮಾಡಿದ್ದರೆ, ನಮಗೆ ಅಷ್ಟು ಲಕ್ಷ ಖರ್ಚಾಯಿತು ಇವನ ಡಾಕ್ಟರ್ ಮಾಡುವುದಕ್ಕೆ ಎಂದು ಹೇಳಿ ಹೇಳುವವನು ಇಲ್ಲಿ, ಎಲ್ಲಾ ಕಾಲೇಜುಗಳಲ್ಲಿ ಡೊನೇಷನ್ ಕೊಟ್ಟು ಬಂದಿರುವವನು ಅದರೆ ಅವರ ಅಪ್ಪ ಅಮ್ಮ ವ್ಯಾಪಾರ ಮಾಡಿ ಇವನು ಡಾಕ್ಟರ್ ಮಾಡಿದ್ದರೆ ಅವನು ಪೋಸ್ಟ್‌ಮಾರ್ಟಂ ಮಾಡಿದರೆ, ಎಲ್ಲಿಗೆ ಬರುತ್ತೆ? Please try to get out of this pit in which you have fallen. Economic order, Social order.

ಶ್ರೀಮತಿ ಪ್ರಮೀಳಾನೇಸರ್ಗಿ :— ನಮ್ಮ ಹಿಷ್ಟರಿಲ್ಲಿ ತಪ್ಪಿದೆ, ನಾನು ಒಪ್ಪುತ್ತೇನೆ.

ಡಾ: ಎಂ.ಪಿ. ಕರ್ಕಿ :— ನಾನೊಂದು ಕ್ಲಾರಿಫಿಕೇಷನ್ ಕೊಡಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸದಸ್ಯರಿಯವರು ಅವಕಾಶ ಕೊಡಬೇಕು. ಮಾನ್ಯ ಅಧ್ಯಕ್ಷರೆ ಇದು, Ultimately it is shock. It could be by burning, bleeding or any such thing. ಶಾಕ್ ಎಂದು ಹೇಳಿದರೆ, ಬ್ಲಡ್ ಸಪ್ಲೈ ಸಾಕಾಗದೆ ಇರತಕ್ಕ ಒಂದು ಸನ್ನಿವೇಶ. Shock doesn't mean something else. ಇದು ಮೆದುಳಿಗೆ ರಕ್ತ ಸಾಕಾಗದೆ ಶಾಕ್ ಆಗುತ್ತೆಯಾದ್ದು. That is a proper way to give it. ಅದರೆ ಇತಿಹಾಸ ಇರುತ್ತದೆ, ಬರ್ನಿಂಗ್ ಆಗಿರತಕ್ಕಂಥಾದ್ದು ಮತ್ತೊಂದು ಅಂತ ಇರುತ್ತದೆ. Shock is due to the burning ಎಂದು ಹೊಸದಾಗಿ ಹೇಳಬೇಕಾಗುತ್ತದೆ.

MR. SPEAKER :— Generally they assign two reasons. ಒಂದು ಶಾಕ್. ಇನ್ನೊಂದು ಅಸ್ಫಿಕ್ಸಿಯಾ. ಬರ್ನಿಂಗ್ ಆದರೆ ಶಾಕ್. ಡ್ರೌನಿಂಗ್ ಆದರೆ ಅಸ್ಫಿಕ್ಸಿಯಾ.. ಅದೆಲ್ಲಾ ಕಾಮನ್ ಟರ್ಮಿನಾಲಜೀಸ್. ಯಾರೂ ಬೇಕಾದರೂ ಸರ್ಟಿಫಿಕೇಟ್ ಕೊಡಬಹುದು. ಡಾಕ್ಟರೇ ಕೊಡಬೇಕು ಎಂದು ಏನೂ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರೇ, ವಿತೌಟ್‌ವರ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ, ಕಾಲಮಿಗಳಲ್ಲೇ ಫಿಲ್ಲಿಂಗ್ ಮಾಡಿರುವುದಿಲ್ಲ. ಕೊನೆಗೆ ಸುಮ್ಮನೆ ಬರೆಯುತ್ತಾರೆ. ಇವರು ಒಂದು ಸಾವು ಆಗುತ್ತಿದ್ದಹಾಗೆ ಪೊಲೀಸಿನವರ ಹತ್ತಿರ ಹೋಗುತ್ತಾರೆ, ಡಾಕ್ಟರುಗಳ ಹತ್ತಿರ ಹೋಗುತ್ತಾರೆ. ಯಾವರೀತಿ ಸ್ಟೇಟ್‌ಮೆಂಟ್ ಬರೆಯಬೇಕು? ಪೋಸ್ಟ್‌ಮಾರ್ಟಮ್ ರಿಪೋರ್ಟ್ ಹೇಗೆ ಆಗಬೇಕು? ಅಲ್ಲಿವರೆಗೂ ಹೊರಟುಹೋಗುತ್ತಾರೆ.

ಇವತ್ತು ಕೋರ್ಟಿನಲ್ಲಿ ಕೇಸ್ ಸ್ಟ್ಯಾಟಿಸ್ಟಿಕ್ಸ್ ಪರ್ಪಸ್‌ಗೋಸ್ಕರ ಏನು ಮಾಡಿದ್ದಾರೆ ಎಂದರೆ ಪೊಲೀಸಿನವರು ಹೇಳಬಹುದು ನಾವೆಲ್ಲಾ ಕೇಸ್‌ಗಳನ್ನು ಡೌರಿ ಡೆತ್‌ನಲ್ಲಿ ಹಾಕುತ್ತಿದ್ದೇವೆ, ಡೌರಿ ಹೆರ್ಯಾಸ್‌ಮೆಂಟ್ ಕೇಸ್‌ನಲ್ಲಿ ಕೇಸ್‌ಗಳನ್ನು ಬುಕ್ ಮಾಡುತ್ತಿದ್ದೇವೆ ಎಂದು ಅವರು ಹೇಳುತ್ತಾರೆ. ಇವತ್ತು ಡೌರಿ ಹೆರ್ಯಾಸ್‌ಮೆಂಟ್‌ನಲ್ಲಿ ಬಂದಿರತಕ್ಕಂಥ ಎಲ್ಲಾ ಕೇಸ್‌ಗಳನ್ನು ರೆಕಾರ್ಡ್ ಮಾಡಿ ತಮಗೆ ನಾನು ಕಳುಹಿಸಿಕೊಡುತ್ತೇನೆ. ತಾವು ನೋಡಬಹುದು. ಆದರೆ ಏನಾಗುತ್ತದೆ ಎಂದರೆ ಡೌರಿ ಹೆರ್ಯಾಸ್‌ಮೆಂಟ್‌ಮೆಂಟ್ ಎಂದು ಕೇಸ್ ಬುಕ್ ಮಾಡುತ್ತಾರೆ ಮತ್ತು ಕೋರ್ಟಿನಲ್ಲಿ ಕೇಸು ಹಾಕುತ್ತಾರೆ. ಆದರೆ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿರುತ್ತಾರಲ್ಲಾ, ಅದರಲ್ಲಿ ಇವರಲ್ಲಿ ಯಾವುದೇ ವರದಕ್ಷಿಣೆ ಕೇಳಿರಲಿಲ್ಲ, ಯಾರೂ ಏನೂ ಮಾಡಿರಲಿಲ್ಲ, ಬಹಳ ಚೆನ್ನಾಗಿ ಸಂತೋಷವಾಗಿ, ಸುಖವಾಗಿ ಇದ್ದರು ಎಂದು ಸ್ಟೇಟ್‌ಮೆಂಟ್ ಬರೆದಿರುತ್ತಾರೆ.

MR. SPEAKER :— Enactment of any legislation is not the answer for the social problems that we have. For example: Now we have the PCR Act, rather Untouchability Act. Do we have the courage to say that untouchability is not there in our Society? Untouchability is there. There are still a large number of people who practice untouchability and the people who suffer from it despite enacting the PCR Act. These are all social problems. Mass education in required. You must come on those lines. Digging up something here and there is not the answer.

ಡಾ: ಎಂ.ಪಿ. ಕರ್ಕಿ :— ಅನ್‌ಟಚಬಿಲಿಟಿ ಆಕ್ಟ್‌ನಲ್ಲಿ the reverse is also true. ಅಟ್ರಾಸಿಟೀಸ್ ಏನೂ ಮಾಡದೇಹೋದರೂ ಕೂಡ ಅಟ್ರಾಸಿಟಿ ಆಗುತ್ತದೆ. ನಮ್ಮಲ್ಲಿ ಅದು ಆಗುತ್ತಾ ಇದೆ.

ಅಧ್ಯಕ್ಷರು :— ಸಹಜವಾಗಿ ಅದು ಆಗಿಯೇ ಆಗುತ್ತದೆ. ಜನರಿಗೆ ಯಾವಾಗ ತಿಳಿವಳಿಕೆ ಇರುವುದಿಲ್ಲ, ಉಪಯೋಗಕ್ಕಿಂತ ದುರುಪಯೋಗವೇ ಹೆಚ್ಚು ಆಗುವುದು.

ಡಾ: ಎಂ.ಪಿ. ಕರ್ಕಿ :— ನಮ್ಮ ಜಿಲ್ಲೆಯಲ್ಲಿ. Untouchability, I don't think, is practised in a big way. Inspite of it, the reverse is true. ಈಗ ಇಲ್ಲಿ ಕೇಳಿರತಕ್ಕಂಥ ಅಟ್ರಾಸಿಟಿ ಕೇಸ್‌ಗಳು.. ನನಗೆ ಹೊಡದರು...

ಅಧ್ಯಕ್ಷರು :— ಡಾಕ್ಟ್ರೇ, ನಾನು ಅದನ್ನೇ ಹೇಳುವುದು. ಯಾವುದೇ ಒಂದು ಕಾನೂನನ್ನು...

MR. P.G.R. SINDHIA :— Please don't say that. ತಮ್ಮ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ತಮ್ಮ ಜಿಲ್ಲೆಯ ವಾತಾವರಣವೇ ಬೇರೆ. ನಿಮ್ಮ ಜಿಲ್ಲೆಯಲ್ಲಿ ಪರಿಶಿಷ್ಟ

ಜಾತಿ, ಪರಿಶಿಷ್ಟ ವರ್ಗದ ಜನಸಂಖ್ಯೆಯೂ ಕಡಿಮೆ ಇದೆ. ಆದ್ದರಿಂದ ಈ ರೀತಿ ವಾತಾವರಣ ಇದೆಯೇ ವಿನಹ ಬಾಕಿ ಕಡೆಗಳಲ್ಲಿ ಇಲ್ಲವೆಂದು ಹೇಳಬೇಡಿ. ಮಾನ್ಯ ಅಧ್ಯಕ್ಷರು ಹೇಳಿರತಕ್ಕಂಥಾದ್ದು ನೂರಕ್ಕೆ ನೂರು ಸತ್ಯವಾಗಿರತಕ್ಕಂಥ ವಿಚಾರ.

ಡಾ : ಎಂ.ಪಿ. ಕರ್ಕಿ :— ನಾನು ನಮ್ಮ ಜಿಲ್ಲೆಮಟ್ಟಿಗೆ- I qualified. ನಮ್ಮ ಜಿಲ್ಲೆಯಲ್ಲಿ ಈ ರೀತಿ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ನಾನು ಯೂನಿವರ್ಸಲ್ ಆಗಿ ಹೇಳಲಿಲ್ಲ.

ಅಧ್ಯಕ್ಷರು :— ಡೌರಿ ಆಕ್ಟ್ ಇದೆ. ಈ ಆಕ್ಟ್‌ನ್ನು ಹೇಗೆ ಹೇಗೆ ಯಾವ್ಯಾವ ಸಂದರ್ಭದಲ್ಲಿ ಉಪಯೋಗಿಸಬೇಕು ಎನ್ನುವ ತಿಳುವಳಿಕೆ ಇಲ್ಲದ ಸಮಾಜದಲ್ಲಿ a handful of people will exploit, not make the proper usage of it.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಆಕ್ಟ್ ಇದೆ. ಆದರೆ ಅದು ಪರಿಣಾಮಕಾರಿಯಾಗಿ ಇಂಪ್ಲಿಮೆಂಟ್ ಆಗುತ್ತಿಲ್ಲ.

ಅಧ್ಯಕ್ಷರು :— ಇವತ್ತು ನಮ್ಮ ಸದನದ ಕರ್ತವ್ಯ ಆ ನಿಟ್ಟಿನಲ್ಲಿ ಯೋಚನೆ ಮಾಡುವುದು ಆಗಬೇಕಾಗಿದೆ, ನಾವು ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅದು ಆಗುತ್ತಿದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕಲ್ಲಾ. ಅದು ಇವತ್ತು ಆಗುತ್ತಿಲ್ಲ. ಡೌರಿ ತೆಗೆದುಕೊಂಡವರು ಮಾತ್ರವಲ್ಲ ಕೊಟ್ಟವರೂ ಕೂಡ ಅಷ್ಟೇ ತಪ್ಪಿತಸ್ಥರು. ಅವರ ಮೇಲೂ ಕೂಡ ತಾವು ಕ್ರಮ ತೆಗೆದುಕೊಳ್ಳಬೇಕು. ಆದರೆ ಒಂದು ಕೇಸ್‌ನ್ನೂ ತೆಗೆದುಕೊಂಡಿಲ್ಲ. ಅಧ್ಯಕ್ಷರೇ, ಇವತ್ತು ಆಕ್ಟ್ ಇದೆ, ಕೊಟ್ಟವರ ಮೇಲೂ ಕೂಡ ಕೇಸ್ ರಿಜಿಸ್ಟರ್ ಮಾಡಬೇಕು ಎಂದು ಇದೆ. ಅವರು ಕೂಡ ಅಷ್ಟೇ ತಪ್ಪಿತಸ್ಥರು.

ಅಧ್ಯಕ್ಷರು :— ಆಲ್‌ರೈಟ್. ಬೇರೆ ನಿಮ್ಮ ಸಹೋದರಿಯರು ಮಾತನಾಡುತ್ತಾರೆ ಎಂದು ಕಾಣುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ನಾನು ಜಾಸ್ತಿ ಮಾತನಾಡುವುದಿಲ್ಲ, ನನಗೆ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಿಮ್ಮ ಸಲಹೆ ಏನು?

ಅಧ್ಯಕ್ಷರು :— ಅವರು ಹೇಳಿದ್ದಾರೆ. She has suggested.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಡ್ವೈಸರಿ ಕೌನ್ಸಿಲ್ ಮಾಡಿ ಎಲ್ಲಾ ದೊಡ್ಡ ದೊಡ್ಡ ಹಿರಿಯರು ಅಟಾರ್ನಿ ಜನರಲ್‌ನಲ್ಲಿ ಯಾವರೀತಿ ಮಾಡಿದ್ದಾರೋ ಆ ರೀತಿ ಇಲ್ಲಿ ಕೂಡ ಮಾಡಬೇಕು...

ಅಧ್ಯಕ್ಷರು :— ಅಡ್ವೈಸರಿ ಕೌನ್ಸಿಲ್ ಎಂದರೆ ಒಂದು ಜಾಯಿಂಟ್ ಹೌಸ್ ಕಮಿಟಿಯನ್ನು ಮಾಡಬೇಕು ಎಂದು ಅವರು ಹೇಳಿದ್ದಾರೆ. ಜಾಯಿಂಟ್ ಹೌಸ್ ಕಮಿಟಿ ಮಾಡಿ ಆ ಅಡ್ವೈಸರಿ ಕೌನ್ಸಿಲ್ ಹತ್ತಿರ ಅವರು ಸಂಪರ್ಕ ಮಾಡಿ ಎಂಟು-ಹತ್ತು ವಾರಗಳ ಅವಧಿಯಲ್ಲಿ ಅವರ ಶಿಫಾರಸ್ಸುಗಳನ್ನು ಫೈನಲೈಸ್ ಮಾಡಿಕೊಡಬೇಕು. ಅವರು ಕಾಂಕ್ರೀಟ್ ರೆಕಮೆಂಡೇಷನ್ಸ್‌ನ್ನು ಕೊಡಬೇಕು, ಅದನ್ನು ಸರ್ಕಾರ ಇಂಪ್ಲಿಮೆಂಟ್ ಮಾಡಬೇಕು. ಅದೇ ಅಲ್ವೇನಮ್ಮ, ತಾವು ಹೇಳಿದ್ದು?

ಶ್ರೀಮತಿ ಪ್ರಮೀಳಾ ನೇಸರ್ಗಿ :— ಹೌದು. ಅದರಲ್ಲಿ ಮಹಿಳೆಯರ ಬಗ್ಗೆ ಸ್ಪಂದಿಸತಕ್ಕಂಥ, ಹೃದಯ ಇರತಕ್ಕಂಥ ಎಲ್ಲರನ್ನೂ ಹಾಕಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಡೌರಿ ಬಗ್ಗೆ ಮಾತನಾಡುವಾಗ ವೈದ್ಯರವರೆಗೆ ಮುಟ್ಟಿದರು. ಅದರ ಬಗ್ಗೆ ವಾದ ಮಾಡುವವರು, ತೀರ್ಮಾನ ಮಾಡುವವರು ಎಲ್ಲರೂ ತೆಗೆದುಕೊಂಡರೆ ಇವತ್ತಿನ ಸಮಾಜದಲ್ಲಿ ಪರಿಸ್ಥಿತಿ ಏನಾಗುತ್ತದೆ?

ಮಾನ್ಯ ಸದಸ್ಯರು :— ಮೇಲಿರೂ ತೆಗೆದುಕೊಂಡರೆ ಏನಾಗುತ್ತದೆ ಎಂದು ಕೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಆಗ ಇಬ್ಬರೂ ಅಫೆಂಡರ್ಸ್. ಅದನ್ನು ನಾನು ಹೇಳಿದ್ದೇನೆ. ಆದರೆ ನನಗೆ ದುಃಖವಾಗತಕ್ಕಂಥಾದ್ದು ಏನೆಂದರೆ ಬರ್ನ್ ಕೇಸ್ ಆದರೆ ತಕ್ಷಣ ಬರ್ನ್ ಆಗಲಿ, ಹ್ಯಾಂಗಿಂಗ್ ಆಗಲಿ, ಆ ಮಹಿಳೆಯನ್ನು ಮೇಲಿನಿಂದ ತೆಗೆದಿಟ್ಟುಬಿಡುತ್ತಾರೆ. ಆದರೆ ಅದಕ್ಕೆ ಮೊದಲು ಅದು ವಿಡಿಯೋಗ್ರಾಫ್ ಆಗಬೇಕು. ಯಾವ ಸೀನ್ ಆಫ್ ಅಕರೆನ್ಸ್ ಇರುತ್ತದೆ ಆ ಮಹಿಳೆಯನ್ನು ಯಾವ ರೀತಿ ಕೊಲೆ ಮಾಡಿರುತ್ತಾರೆ ಅಥವಾ ಬರ್ನ್ ಕೇಸ್ ಏನು ಆಗಿರುತ್ತದೆ ಆ ಸೀನ್ ಆಫ್ ಅಕರೆನ್ಸ್‌ನ್ನು ವಿಡಿಯೋಗ್ರಾಫ್ ಆಗತಕ್ಕಂಥ ಪರಿಸ್ಥಿತಿ ಬರಬೇಕು. ತತ್‌ಕ್ಷಣ ಒಬ್ಬ ಅಧಿಕಾರಿ ಹೋಗಿ ಎನ್‌ಕ್ವೈರಿ ಮಾಡಿ, ಇನ್ವೆಸ್ಟಿಗೇಟ್ ಮಾಡತಕ್ಕಂಥ ವ್ಯವಸ್ಥೆಯಾಗಬೇಕು. ಆ ಆಫೀಸರ್ ಸ್ಪೆಶಲಿ ಟ್ರೈನ್ಡ್ ಆಫಿಷಿಯಲ್ ಆಗಿರಬೇಕು. ಒಳ್ಳೆಯ ಕಾನ್‌ಸ್ಟೇಬಲ್ ಆದರೂ ಆಗಬಹುದು. ಕೆಲವು ಕಡೆ ಬಹಳ ಒಳ್ಳೆಯ ಕಾನ್‌ಸ್ಟೇಬಲ್ ಕೂಡ ಇದ್ದಾರೆ. ದೊಡ್ಡ ಅಧಿಕಾರಿಯೇ ಬೇಕು ಅಂತಿಲ್ಲ. ಈ ಇನ್ವೆಸ್ಟಿಗೇಷನ್ ಮಾಡತಕ್ಕಂಥ ಅಧಿಕಾರಿಯನ್ನು ಅಲ್ಲಿ ಕಳುಹಿಸಿ ಅವರು ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡತಕ್ಕಂಥ ಸಂದರ್ಭದಲ್ಲಿ, ಪೋಲೀಸಿನವರು ತೆಗೆದುಕೊಳ್ಳದ ಹಾಗೆ ಮಾಡಿ, ಅಲ್ಲಿ ಅವರ ತಂದೆತಾಯಿಗಳು ಮುಖ್ಯವಾಗಿ ಇರತಕ್ಕಂಥ ಪರಿಸ್ಥಿತಿಯನ್ನು ಒದಗಿಸಿ-starting from there to investigation...

ಅಧ್ಯಕ್ಷರು :— ಈ ಎಲ್ಲಾ ಶಿಫಾರಸ್ಸುಗಳನ್ನು ನಿಮ್ಮ ಕಮಿಟಿಯಲ್ಲಿ ಕೊಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಈ ರೀತಿ ಆಗತಕ್ಕಂಥ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನನಗಾದರೂ ಕೂಡ ತಾವು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಒಂದು ಮಾತನ್ನು ನಾನು

ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಆಗುತ್ತದೆ ಎನ್ನತಕ್ಕಂಥ ನಮ್ಮ ಆಸೆಗಳು ನೂರಾರು ಇರುತ್ತವೆ. ತಾವು ಕೇಳಬಹುದು ಅದು ಆಗುತ್ತದೆಯೇ, ಇಲ್ಲವೇ ಎಂದು. ಆಗಲೇಬೇಕು ಎಂದು ನಮ್ಮ ಆಸೆ ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. American poet Emily Dickinson ಎನ್ನತಕ್ಕಂಥ ಅವರು ಒಂದು ಮಾತನ್ನು ಹೇಳುತ್ತಾರೆ. ಏನು ಹೇಳುತ್ತಾರೆ ಎಂದರೆ

``I dwell in possibility. Today, together we dwell in possibility. For this is a moment that is infused with hope in a time ripe for positive social change."

ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜಣ್ಣ :— ಒಂದು ಕ್ಲಾರಿಫಿಕೇಷನ್. ಐದು ಕುಟುಂಬದಲ್ಲಿ ಒಬ್ಬ ಮಹಿಳೆಗೆ ಎಫೆಕ್ಟ್ ಆಗುತ್ತದೆ ಎಂದು ನೀವು ಹೇಳಿದ್ದೀರಿ. ಅದು ಸ್ವಲ್ಪ ನಿಜ. ಇಷ್ಟು ಹೊತ್ತು ನೀವು ಹೇಳಿದ ಕಷ್ಟವನ್ನು ಕೇಳಿದ್ದೇನೆ. ನೀವು ಹೇಳಿದ್ದು ನಿಜ. ಆದರೆ ಹತ್ತು ಕುಟುಂಬದಲ್ಲಿ ಇಲ್ಲ ಇಪ್ಪತ್ತು ಕುಟುಂಬಗಳಲ್ಲಿ ಒಬ್ಬ ವ್ಯಕ್ತಿಗೆ ಹೆಂಗಸರೇ ತೊಂದರೆ ಕೊಟ್ಟು ಫಾಲ್ಸ್ ಕಂಪ್ಲೇಂಟ್ ಕೊಡುತ್ತಾರಲ್ಲಾ, ಇದನ್ನು ಹೇಗೆ ಸಾಲ್ವ್ ಮಾಡುತ್ತೀರಿ?

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅದು ಇವತ್ತು ಬೇಡ. ಅದನ್ನು ಇನ್ನೊಂದು ದಿವಸ ಇಟ್ಟುಕೊಳ್ಳೋಣ.

ಶ್ರೀ ಎನ್. ರಾಜಣ್ಣ :— ಬೆಂಗಳೂರು ನಗರದಲ್ಲಿ ಇಂಥಾದ್ದು ಬರುತ್ತಿವೆ. ಅವರ ಗೋಳು ಹೇಳುವುದಕ್ಕೇ ಆಗುವುದಿಲ್ಲ.

ಅಧ್ಯಕ್ಷರು :— ಬಿ.ಟಿ. ಲಲಿತಾನಾಯಕ್ ಅವರು...

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೇ, ಇವತ್ತು ಮಹಿಳೆಯರಿಗೆ ಆಗುತ್ತಿರುವ ಹಲವಾರು...

ಅಧ್ಯಕ್ಷರು :— ಶ್ರೀಮತಿ ಲೀಲಾದೇವಿಯವರೇ, ತಮಗೆ ನಾನು ಅವಕಾಶ ಕೊಡುತ್ತೇನೆ. ಈ ಸದಸ್ಯರುಗಳೆಲ್ಲಾ ಮಾತನಾಡಲಿ. ಖಂಡಿತವಾಗಿಯೂ ನಿಮಗೆ ನಾನು ಅವಕಾಶ ಕೊಡುತ್ತೇನೆ. ಈ ಚರ್ಚೆಯಲ್ಲಿ ನೀವು ಮಂತ್ರಿಯಾಗಿ ಭಾಗವಹಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಬರೇ ಮಹಿಳೆಯರಿಗೋ ಅಥವಾ ಬೇರೆಯವರಿಗೂ ಅವಕಾಶ ಕೊಡುತ್ತೀರಿ, ಅಲ್ವಾ?

ಅಧ್ಯಕ್ಷರು :— ಅವರದ್ದು ಎಲ್ಲಾ ಮುಗಿದ ಮೇಲೆ ಮಾನ್ಯ ಘೋರ್ಪಡೆಯವರನ್ನು ನಾನು ಕೇಳಿಕೊಳ್ಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ವಿಶೇಷವಾಗಿ ಶ್ರೀರಾಮರೆಡ್ಡಿಯವರಿಗೆ ಅವಕಾಶ ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನೂ ಕೂಡ ಒಬ್ಬ ಸಿಗ್ನೇಟರಿ. ನಮಗೂ ಅವಕಾಶ ಏನಾದರೂ ಉಂಟಾ?

ಅಧ್ಯಕ್ಷರು :— ಕೊಡುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) :— ಮಾನ್ಯ ಅಧ್ಯಕ್ಷರೇ, ಇವತ್ತು ತಾವು ಮಹಿಳಾ ಶೋಷಣೆ ಬಗ್ಗೆ ಮಾತನಾಡುವುದಕ್ಕೆ ಸ್ತ್ರೀ ಪುರುಷರೆಲ್ಲರಿಗೂ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ಮಹಿಳೆ ಮಾತನಾಡುವುದು ಮಹಿಳೆಗಾಗಿ ಅಲ್ಲ, ಇಡೀ ಸಮಾಜಕ್ಕಾಗಿ. ಮಹಿಳೆ ಎನ್ನುವವಳನ್ನು ತಾವು ಒಬ್ಬ ಮನುಷ್ಯಳಾಗಿ ಮೊದಲು ತೀರ್ಮಾನ ಮಾಡಬೇಕು. ಮನುಷ್ಯರಲ್ಲಿರುವಂಥ ಎಲ್ಲಾ ರೀತಿಯ ಕರುಣೆ, ದುಷ್ಟತನ, ನೀಚತನ, ಕ್ರೌರ್ಯ ಒಳ್ಳೆಯದು ಮತ್ತು ಕೆಟ್ಟದ್ದು ಎಲ್ಲವನ್ನೂ ಒಳಗೊಂಡಂಥ ಒಬ್ಬ ಮನುಷ್ಯಳಾಗಿ ಇಲ್ಲಿ ತಾವು ಮಹಿಳೆಯನ್ನು ನೋಡಬೇಕಾಗಿದೆ. ಮಹಿಳೆ ಅಂದಕೂಡಲೇ ಆಕಾಶದಿಂದ ಉದುರಿ ಬಂದಿಲ್ಲ. ಮತ್ತು ಪುರುಷನಿಗಿಂತ ಬೇರೆ ಅಲ್ಲ. ಯಾವ ಯಾವ ಲೋಪದೋಷಗಳು ಪುರುಷರಿಂದ ಆಗುತ್ತಾ ಇವೆಯೋ ಅವು ಮಹಿಳೆಯರಿಂದಲೂ ಕೂಡ ಆಗುತ್ತಾ ಇವೆ. ಆದರೆ ನಮ್ಮ ಕೂಗು ಏನು? ನಾವು ಇವತ್ತು ಏನು ಕೇಳುತ್ತಾ ಇದ್ದೇವೆ. ಮಹಿಳೆಗಾಗಿ ನಮ್ಮ ಬೇಡಿಕೆ ಏನು ಎಂದರೆ, ಮಹಿಳೆ ಎಂಬ ಒಂದೇ ಕಾರಣಕ್ಕಾಗಿ ನಮ್ಮನ್ನು ತಾವು ದೂರಮಾಡಬೇಡಿ. ಯಾವುದೇ ಒಂದು ಸ್ಥಾನಮಾನದಿಂದ ವಂಚಿತರನ್ನಾಗಿ ಮಾಡಬೇಡಿ. ಸಮಾನವಾದ ಅವಕಾಶಗಳು ದೊರೆತಾಗ, ಆ ಸಮಾನವಾದ ಅವಕಾಶವನ್ನು ತಾವು ಕೊಡುವುದಕ್ಕೆ ಮುಂದೆ ಬನ್ನಿ ಎನ್ನುವಂಥ ಬೇಡಿಕೆಯನ್ನು ಇಟ್ಟುಕೊಂಡು, ಇವತ್ತು ಮಹಿಳೆ ನಡೆದುಬಂದ ದಾರಿ ಏನು, ಯಾವ ದಿಕ್ಕಿನಲ್ಲಿ ಮಹಿಳೆ ನಡೆಯುತ್ತಿದ್ದಾಳೆ, ಏನನ್ನು ಬೇಡುತ್ತಿದ್ದಾಳೆ, ಏಕೆ ಅದು ಸಫಲವಾಗುತ್ತಿಲ್ಲ ಎನ್ನುವುದರ ಬಗ್ಗೆ ಒಂದರೆಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಿಳೆ ಎಂದರೆ ಮಹಾ ಇಳೆ, ಪುರುಷ ಪ್ರಧಾನವಾದಂಥ ಸಮಾಜದಲ್ಲಿ ತಾವೇ ಕರೆದಂಥ ಈ ಹೆಸರು. ಮಹಾ ಇಳೆ ಎಂದು ಮಹಿಳೆಯನ್ನು ಕರೆದಿರಿ. ಅಂದರೆ ಭೂಮಿಯಷ್ಟು ಸಹನೆ ಉಳ್ಳವಳು. ಪುರುಷರೂ ಕೂಡ ಮಹಿಳೆಯ ರೀತಿಯಲ್ಲಿ ಸಹನೆಯನ್ನು ಪಡೆದುಕೊಳ್ಳಬೇಕಾಗಿದೆ. ಆದರೆ, ಅದು ಆಗುತ್ತಾ ಇಲ್ಲ. ನಮ್ಮನ್ನು ಸ್ತ್ರೀ ಎಂದು ಕರೆದಿರಿ. ಸ್ತ್ರೀ ಎಂದರೆ ಸೂತ್ರಿ, ಮಕ್ಕಳನ್ನು ಹೆರುವವಳು ಕೇವಲ ಮಕ್ಕಳನ್ನು ಹೆರುವವಳು ಎನ್ನುವಂಥ ಅರ್ಥದಿಂದ ಅವಳನ್ನು ಸ್ತ್ರೀ ಎಂದು ಕರೆದಿರಿ. ಮಾನ್ಯ

ಮಂತ್ರಿಗಳು ಹೆಂಗಸು ಎಂದಕೂಡಲೇ, ನೀವು ಹೆಂಗಸು ಎಂದು ಹೇಳಬೇಡಿ ಎಂದಿರಿ. ಆದರೆ, ನೀವು ಸ್ತ್ರೀ ಎಂದರೂ ಅಷ್ಟೆ, ಮಹಿಳೆ ಎಂದರೂ ಅಷ್ಟೆ, ಹೆಂಗಸು ಎಂದರೂ ಅಷ್ಟೆ. ನೀವು ಏನು ಹೇಳಿದರೂ ತಿರುಗಾ ಮುರುಗಾ ಅಲ್ಲೇ ಬಂದು ನಿಲ್ಲುತ್ತದೆ ಮಹಿಳೆಯನ್ನು ನೀವು ಯಾವ ದೃಷ್ಟಿಯಿಂದ ನೋಡುತ್ತೀರೋ, ಅದೇ ದೃಷ್ಟಿಯಿಂದ ಇವತ್ತಿಗೂ ಕೂಡ ಕರೆಯುತ್ತಾ ಇದ್ದೇವೆ. ಆ ಮಹಿಳೆ ಭೂಮಿಯ ಹಾಗೆ ಎಲ್ಲವನ್ನೂ ಸಹಿಸಿಕೊಳ್ಳುವವಳು ಎನ್ನುವಂಥ ಹಿನ್ನೆಲೆಯಂತೂ ಆ ಶಬ್ದಕ್ಕೆ ಇದೆ. ಮೊದಲಿನಿಂದಲೂ ಕೂಡ ನಮ್ಮ ಜಾನಪದರು ಹೇಳಿದ್ದಾರೆ. ಪ್ರಪಂಚವನ್ನು ಪಾದುಕೆ ಮಾಡಿ, ಪಾದಕೆ ಮೆಟ್ಟವಳು ದೇವಿ. ಆದಿಶೇಷನ ಡಾಬು ಮಾಡಿ ಸೊಂಟಕೆ ಬಿಗಿದವಳು ಅನ್ನುವಂಥ ಉದಾತ್ತವಾದ ದೃಷ್ಟಿಯಲ್ಲಿ ಹೇಳಿದ್ದಾರೆ. ಈ ಜಗತ್ತನ್ನೇ ಅವಳು ಪಾದುಕೆ ಮಾಡಿ, ಈ ಭೂಮಿಯನ್ನು ಮೆಟ್ಟಿದ್ದಾಳೆ. ಅವಳು ಆದಿಶೇಷನನ್ನೇ ಡಾಬು ಮಾಡಿ ಸೊಂಟಕ್ಕೆ ಬಿಗಿದಿದ್ದಾಳೆ ಅನ್ನುವಂಥ ಮಹತ್ತರವಾದಂಥ ಸ್ಥಾನಮಾನವನ್ನು ಕೊಟ್ಟು ಅವಳನ್ನು ಅಷ್ಟು ದೊಡ್ಡ ಸ್ಥಾನದಲ್ಲಿಟ್ಟು ನೋಡಿದರೂ ಕೂಡ, ಏಕೆ ಮಹಿಳೆ ಇವತ್ತು ಅತ್ಯಂತ ಎರಡನೇ ದರ್ಜೆ ಪ್ರಜೆಯಾಗಿ ಕಾಣಿಸುತ್ತಾಳೆ? ಯಾರಾದರೊಬ್ಬ ಮಹಿಳೆ ಈ ಶಾಸನ ಸಭೆಯಲ್ಲಿ ಅಷ್ಟೇ ಅಲ್ಲ. ಯಾವುದೇ ಒಂದು ಸಭೆಯಲ್ಲಾಗಲೀ ಅಥವಾ ಚುನಾಯಿತಿ ಪ್ರತಿನಿಧಿಗಳು ಯಾರೇ ಆಗಿರಲಿ ಅವಳು ಮಾತನಾಡಿದಾಗ, ಏಕೆ ಅವರನ್ನು ಗೇಲಿಯ ದೃಷ್ಟಿಯಿಂದ ನೋಡುವುದು? ಏಕೆ ಅಣಕ ಮಾಡುತ್ತಾರೆ? ಏಕೆ ಅವಳ ಮಾತನ್ನು ವ್ಯಂಗ್ಯವಾಗಿ ತೆಗೆದುಕೊಳ್ಳುತ್ತಾರೆ? ಏಕೆ ಅವಳನ್ನು ಇಷ್ಟು ಕೆಳದರ್ಜೆಯಲ್ಲಿ ಕಾಣುತ್ತಿದ್ದಾರೆ ಎನ್ನುವುದಕ್ಕೆ ನಾವು ಅರ್ಥವನ್ನು ಹುಡುಕಿಕೊಂಡು ಹೋದಾಗ ಅನ್ನಿಸುತ್ತದೆ ಈ 3-4 ವಿಷಯಗಳಲ್ಲಿ ಮಹಿಳೆಯನ್ನು ಶತಮಾನಗಳಿಂದಲೂ ತುಳಿದಿಟ್ಟಿರುವುದು ನಮಗೆ ಕಂಡುಬರುತ್ತಿದೆ. ಏಕೆಂದರೆ, ಬಾಲವಿವಾಹ ಪದ್ಧತಿ ಹಿಂದೆ ಇತ್ತು. ಬಾಲ್ಯವಿವಾಹ ಮಾಡಿದಾಗ, ಈಗೇನು ಪುರುಷ ಸ್ವಲ್ಪಮಟ್ಟಿಗಾದರೂ ತಿಳಿದುಕೊಂಡು ಬರುತ್ತಾ ಇದ್ದಾನೋ, ಈ ಪ್ರಪಂಚವನ್ನು ಅರ್ಥಮಾಡಿಕೊಳ್ಳುತ್ತಾ ಬರುತ್ತಾ ಇದ್ದಾನೋ ಆ ರೀತಿ ಅರ್ಥ ಮಾಡಿಕೊಳ್ಳಲು ಮಹಿಳೆಗೆ ಸಾಧ್ಯವಾಗಲಿಲ್ಲ. ಏಕೆಂದರೆ, ಅವಳಿಗೆ ಬಾಲ್ಯ ವಿವಾಹ ಮಾಡಿದ ಕೂಡಲೇ, ಪ್ರಾಯಕ್ಕೆ ಬಂದಮೇಲೆ ಮಕ್ಕಳನ್ನು ಹೆರುವಂತಾದ್ದು, ಮನೆಯನ್ನು ನೋಡಿಕೊಳ್ಳುವಂತಾದ್ದು, ಗಂಡನನ್ನು ಜೋಪಾನ ಮಾಡುವಂಥ ಒಂದು ಕಾರ್ಯದಲ್ಲಿ ತೊಡಗಿದಾಗ, ಅವಳಿಗೆ ಏನು ಕಲಿಸಿಕೊಟ್ಟರು ಎಂದರೆ, ನೋಡಮ್ಮ ನೀನು ಇಷ್ಟೇ ಮಾಡಿಕೊಂಡಿರಬೇಕು. ನೀನು ದಾಸಿಯಾಗಿ, ಗೃಹಿಣಿಯಾಗಿ, ದೇವತೆಯಾಗಿ, ತಾಯಿಯಾಗಿ ಇರಬೇಕು. ಈ ರೀತಿಯ ಕಟ್ಟುಕಥೆಯನ್ನು ಅವಳ ಮೇಲೆ ಹೇರಿದಾಗ, ಅವಳು ಅದಕ್ಕಿಂತಲೂ ಕೂಡ ಹೊರಗಡೆ ಏನನ್ನೂ ಆಲೋಚನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅವಳು ಎಷ್ಟು ಆಲೋಚನೆ ಮಾಡಿದಳು ಎಂದರೆ, ನಾನು ಎಷ್ಟು ಒಡವೆ ಹಾಕಿಕೊಳ್ಳಬಹುದು, ಎಂಥಹ ಸೀರೆ ಉಡಬಹುದು, ನಾನು ಯಾವರೀತಿ ಅಲಂಕರಿಸಿಕೊಂಡು ಈ ಪುರುಷ ಸಮಾಜವನ್ನು ಅಂದರೆ ತನ್ನ ಗಂಡನನ್ನು ಅಥವಾ ಇನ್ನೊಬ್ಬರನ್ನು ಯಾವರೀತಿ ಚೆಂದವಾಗಿ ಕಾಣುವುದಕ್ಕೆ

ಏನೇನು ಮಾಡಬಹುದು ಎಂಬುದರ ಕಡೆ ಹೆಚ್ಚು ಗಮನ ಕೊಟ್ಟಳು. ಇದರಿಂದ, ಆಕೆ ಹೊರ ಜಗತ್ತಿನ ಸಂಪರ್ಕವನ್ನೇ ಕಳೆದುಕೊಂಡಳು. ಅಂದರೆ ಯಾವರೀತಿ ಇಡೀ ಸಮಾಜವನ್ನು ಇವತ್ತು ಪುರುಷ ನೋಡುತ್ತಾನೋ ಅಂತಹ ದೃಷ್ಟಿಯಲ್ಲಿ ಅವಳಿಗೆ ನೋಡಲು ಹೋಗುವುದಕ್ಕೆ ಸಾಧ್ಯವಾಗದೇ ಹೋದದ್ದು ಕೂಡ ಒಂದು ದುರಂತ. ಅದು ಬರು ಬರುತ್ತಾ ಬದಲಾವಣೆಯಾಗುತ್ತಾ ಇದೆ. ಆ ಮಾತು ಬೇರೆ. ಆದರೆ ಪುರಾಣ ಕಾಲದಿಂದಲೂ ನಾವು ನೋಡಿದಾಗ, ಮಹಿಳೆಯ ಸ್ಥಿತಿ ಇವತ್ತಿಗೂ ಹೇಗೆ ಒಂದೇತರಹ ಇದೆ ಎಂಬುದು ಬಹಳ ಸೋಜಿಗದ ವಿಚಾರ. ಗಂಗೆ ಗೌರಿ ವಿಚಾರವನ್ನೆ ತೆಗೆದುಕೊಂಡು ಸ್ವಲ್ಪ ಪುರಾಣದ ಕಡೆ ಗಮನಹರಿಸಿ ನೋಡಿದಾಗ, ಶಿವ ಜಗತ್ತಿಗೇ ದೊಡ್ಡ ದೇವರು. ಅವನು ಇಬ್ಬರು ಹೆಂಡಿರನ್ನು ಮಾಡಿಕೊಂಡ. ಗೌರಿಯ ಹಾಗೆ ಗಂಗೆಯನ್ನು ತಂದ, ಅವಳನ್ನು ಜಟೆಯಲ್ಲಿ ಕೂರಿಸಿಕೊಂಡ. ಇಬ್ಬರಿಗೂ ಜಗಳಹಚ್ಚಿದ ಎಂಬುದನ್ನು ಸಹ ನಾವು ನೋಡುತ್ತೇವೆ. ಮತ್ತೆ ನೀವು ಯಾವ ದೇವರನ್ನೇ ನೋಡಿ. ಹಿಂದೂ ದೇವರುಗಳೇ ಆಗಲೀ ಅಥವಾ ಬೇರೆ ಬೇರೆ ದೇವರುಗಳ ಬಗ್ಗೆ, ಧರ್ಮದ ಬಗ್ಗೆ ನಾನು ಹೇಳುವುದಿಲ್ಲ. ಏಕೆಂದರೆ, ಹಿಂದೂ ಧರ್ಮ ಬಹಳ ಉದಾತ್ತವಾದುದು. ನಾವು ಮನುಷ್ಯನ ಮೇಲೆ ಆರೋಪ ಮಾಡಿಕೊಂಡಿದ್ದೇವೆಯೋ ಅದೆಲ್ಲಾ ನಾವು ಹೇಳಿಕೊಳ್ಳಬಹುದು. ಪ್ರತಿಯೊಂದು ದೇವರೂ ಕೂಡ ಒಬ್ಬ ಹೆಂಡತಿಯ ಮೇಲದ್ದುದು ಬಹಳ ಕಡಿಮೆ. ರಾಮನನ್ನು ಬಿಟ್ಟರೆ, ಬೇರೆ ಎಲ್ಲಾ ದೇವರುಗಳಲ್ಲಿ ಒಂದಲ್ಲ ಒಂದು ತೊಂದರೆಯನ್ನು ಕಾಣುತ್ತೇವೆ. ಆದರೆ, ರಾಮನನ್ನು ನಾವು ಹೇಗೆ ಪ್ರೀತಿ ಮಾಡುತ್ತೇವೆಯೋ ಏಕಪತ್ನಿ ವ್ರತಸ್ಥ ಎಂದು ಗೌರವ ಕೊಡುತ್ತೇವೆಯೋ ಹಾಗೆಯೇ ನಾವು ಕೃಷ್ಣನನ್ನೂ ಕೂಡ ಬಹಳ ಭಕ್ತಿ ಗೌರವದಿಂದ ಕಾಣುತ್ತೇವೆ. ಇದು ವಿಚಿತ್ರ ಅಂದರೆ, ಈ ದೇಶದಲ್ಲಿ ಬಹುಮುಖ ಸಂಸ್ಕೃತಿ ಇದೆ. ಬಹುಮುಖಿಯಾದ ಈ ಸಂಸ್ಕೃತಿಯನ್ನು ನಾವು ಎಲ್ಲಾ ರೀತಿಯಲ್ಲಿ ಒಪ್ಪಿಕೊಳ್ಳುತ್ತೇವೆ. ಒಬ್ಬ ಗಂಡನನ್ನು ಮೆಚ್ಚಿದ ಕಾರಣಕ್ಕಾಗಿ ನಾವು ಸೀತೆಯನ್ನು ಹೇಗೆ ಹೊಗುತ್ತೇವೆಯೋ ಹಾಗೆಯೇ 5 ಜನ ಗಂಡಂದಿರನ್ನು ಮಾಡಿಕೊಂಡಂಥ ದ್ರೌಪದಿಯ ಮೇಲೂ ನಮಗೆ ಅಷ್ಟೇ ಅಭಿಮಾನ ಇದೆ. ಅವಳನ್ನೂ ನಾವು ಪತಿವ್ರತೆಯರ ಸಾಲಿಗೇ ಸೇರಿಸುತ್ತೇವೆ. ಅಂದರೆ ಇದರ ಅರ್ಥ, ಈ ಜಗತ್ತಿನಲ್ಲಿ ನಾವು, ಈ ಸಮಾಜದಲ್ಲಿ, ಈ ಸಂಸ್ಕೃತಿಯಲ್ಲಿ ಪ್ರತಿಯೊಂದನ್ನೂ ಕೂಡ ಒಪ್ಪಿಕೊಳ್ಳುತ್ತೇವೆ. ಗೊಲ್ಲರ ಒಬ್ಬ ಹುಡುಗ ಕೃಷ್ಣ. ಆ ಕೃಷ್ಣನನ್ನು ನಾವು ದೇವರು ಮಾಡುತ್ತೇವೆ. ಅವನಲ್ಲಿರುವಂಥ ಉತ್ತಮವಾದಂಥ ರಾಜಕೀಯ ಕಟುತ್ವವನ್ನು ಗುರುತಿಸುತ್ತೇವೆ. ಹೀಗೆಯೇ ಪ್ರತಿಯೊಂದು ವಿಚಾರದಲ್ಲೂ ಕೂಡ ಈ ಸ್ತ್ರೀ, ಪುರುಷರನ್ನು ನಮ್ಮದೇ ಆದ ರೀತಿಯಲ್ಲಿ, ನಮ್ಮ ಸಂಸ್ಕೃತಿಗೆ ಒಗ್ಗಿಸಿಕೊಂಡು ನೋಡುತ್ತಾ ಬಂದಿರುವಂಥ ಚರಿತ್ರೆಯನ್ನು ಇಲ್ಲಿ ಗಮನಿಸಬಹುದು. ರಾಮಾಯಣ ಮತ್ತು ಮಹಾಭಾರತದಂಥ ಪಾತ್ರಗಳಲ್ಲಿಯೂ ಕೂಡ ನಾವು ಕಲಿಯುವುದು ಬಹಳ ಇದೆ. ಹಿಂದೆ ನೋಡಿ ಮುಂದೆ ಹೋಗು ಅನ್ನುವಂಥ ಮಾತನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ದಶರಥ ಒಂದುವೇಳೆ ಮೂರು ಜನ ಪತ್ನಿಯರನ್ನು ಮಾಡಿಕೊಳ್ಳದೇ ಇದ್ದಿದ್ದರೆ, ರಾಮಾಯಣವೂ ನಡೆಯುತ್ತಿರಲಿಲ್ಲವೆಂದೆನಿಸುತ್ತದೆ.

ಒಬ್ಬ ಹೆಂಡತಿ ಇರುವಂಥ ರಾಜನಿಗೆ ಬಹಳ ಕಡಿಮೆ ಕಥೆ ಇರುತ್ತದೆ. ಆದರೆ, ಬಹಳಷ್ಟು ಪತ್ನಿಯರನ್ನು ಹೊಂದಿದಂಥ ರಾಜನಿಗೆ ಬಹಳಷ್ಟು ಕಥೆಗಳಿರುತ್ತವೆ. ಒಬ್ಬ ರಾಜ, ಸತ್ತಾಗ ಏಳುನೂರು ಜನ ಪತ್ನಿಯರು ಸಹಗಮನ ಮಾಡಿದರು ಎನ್ನುವುದನ್ನು ರಜಪೂತ ಮನೆತನದ ಕಥೆಗಳನ್ನು ಓದಿದಾಗ, ಇದನ್ನು ನಾವು ನೋಡುತ್ತೇವೆ. ಅಂದರೆ, ಸಹಗಮನ ಪದ್ಧತಿಯಿಂದ ನಮಗೇನು ಗೊತ್ತಾಗುತ್ತದೆಂದರೆ, ಒಬ್ಬ ಮಹಿಳೆ ಗಂಡ ಸತ್ತಮೇಲೆ ಅವಳಿಗೆ ಈ ಭೂಮಿ ಮೇಲೆ ಎನೂ ಕೆಲಸ ಇಲ್ಲ, ಅವಳಿಂದ ಯಾವರೀತಿಯ ಉಪಯೋಗವೂ ಇಲ್ಲ. ಅವಳೂ ಕೂಡ ಗಂಡನ ಚಿತೆ ಏರಿ ಸಾಯಬೇಕು: ಅನ್ನುವಂಥ ಒಂದು ಮನೋಭಾವ ಇತ್ತಲ್ಲಾ, ಇದು ಏನು ಹೇಳುತ್ತದೆ ಎಂದರೆ ಮಹಿಳೆ ಕೇವಲ ಪುರುಷನಿಗಾಗಿ ಬದುಕಬೇಕು. ಪುರುಷ ಇಲ್ಲದಿದ್ದರೆ, ಅವಳು ಬದುಕಬಾರದು ಅನ್ನುವಂಥ ಪದ್ಧತಿ ಇತ್ತು. ಹಾಗಿದ್ದಾಗ ನಾವು ಈಗ 16-18ನೇ ಶತಮಾನದಿಂದ ಈಚೆಗೆ ಮಹಿಳೆ ಬಗ್ಗೆ ಆಲೋಚನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದರಿಂದ, ಹಿಂದೆ ಯಾವ ಯಾವ ಮೌಢ್ಯಗಳು ಹೆಣ್ಣನ್ನು ಮುತ್ತಿಕೊಂಡಿದ್ದವೋ, ಯಾವ ಮೌಢ್ಯದಿಂದ ಅವಳನ್ನು ನೋಡುತ್ತಾ ಇದ್ದೇವೋ ಆ ಎಲ್ಲಾ ಮೌಢ್ಯಗಳು ಇವತ್ತಿಗೂ ಅವಳಲ್ಲಿ ಮನೆ ಮಾಡಿವೆ. ಇದರಿಂದ, ಇವತ್ತಿಗೂ ಮಹಿಳೆ ಬೌದ್ಧಿಕವಾಗಿ ಪ್ರಥಮ ದರ್ಜೆಗೆ ಏರುವುದಕ್ಕೆ ತೊಂದರೆಯಾಗುತ್ತಿದೆ. ಇದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ವರದಕ್ಷಿಣೆ ಪದ್ಧತಿಯಿಂದ ಕೊಲೆಯಾಗುತ್ತವೆ, ಅವಳ ಸರವನ್ನು ಕಿತ್ತುಕೊಳ್ಳುತ್ತಾರೆ, ಅವಳ ಒಡವೆಯಿಂದ ಅವಳನ್ನು ಸಾಯಿಸುತ್ತಾರೆ. ಇಂತಹ ಎಲ್ಲಾ ಹೇಳಿಕೆಗಳ ಹಿಂದೆ ಏನಿದೆ ಎಂದರೆ, ಮಹಿಳೆಯನ್ನು ನಾವು ಮನುಷ್ಯಳಾಗಿ ಕಾಣುತ್ತಾ ಇಲ್ಲ. ವರದಕ್ಷಿಣೆ ತೆಗೆದುಕೊಳ್ಳುವುದು ಎಂದರೆ ಏನು? ನಿಮಗೆ ಹೆಣ್ಣನ್ನು ಕೊಡುತ್ತೇನೆ, ಮತ್ತೆ ಇಷ್ಟು ಹಣವನ್ನೂ ಕೊಡುತ್ತೇನೆ. ನೀನು ಅವಳನ್ನು ಸರಿಯಾಗಿ ನೋಡಿಕೋ ಅನ್ನುವಂಥ ಒಂದು ಕಾಲ ಇತ್ತು. ಅದು ತೆರ ಕೊಡುವಂಥ ಪದ್ಧತಿ. ಆ ಗಂಡಿಗೆ ಇಷ್ಟು ಹಣವನ್ನು ಕೊಡುತ್ತೇನೆ, ನೀನು ಅವಳನ್ನು ಬಹಳ ಚೆನ್ನಾಗಿ ಕಾಪಾಡಿಕೊಳ್ಳಬೇಕು. ಇಷ್ಟು ಹಣವನ್ನು ನಿನಗೆ ವರದಕ್ಷಿಣೆ ರೂಪದಲ್ಲಿ ಕೊಡುತ್ತೇನೆಂದು ಹೆಣ್ಣಿನ ತಂದೆ ಕೊಟ್ಟಾಗ, ಅವನು ಅವಳನ್ನು ಯಾವ ದೃಷ್ಟಿಯಿಂದ ನೋಡುತ್ತಾನೆ? ವರದಕ್ಷಿಣೆ ಪಡೆಯುವಂತಾದ್ದೇ ಒಂದು ಪಂಜರದ ಗಿಳಿ ರೂಪದಲ್ಲಿ, ಅಂದರೆ ಒಂದು ಗಿಳಿಯನ್ನು ಸಾಕಿದಹಾಗೆ ನಿಮ್ಮ ಮಗಳನ್ನು ನಾನು ಸಾಕುತ್ತೇನೆ, ನೀನು ಇಷ್ಟು ಹಣವನ್ನು ಕೊಟ್ಟುಬಿಡು ಎಂದು ಅವನು ಹೇಳಿದಹಾಗೆ ಅರ್ಥವಾಗುತ್ತದೆ. ಅಲ್ಲಿಗೂ ಕೂಡ ಅವಳು ಮನುಷ್ಯಳಾಗಲಿಲ್ಲ. ಒಂದು ಗಿಳಿಯೇ ಆದಳು. ಆದರೆ, ತೆರ ಕೊಡುವ ಪದ್ಧತಿಯಿಂದ, ಒಂದು ಹಸುವನ್ನು ಅಥವಾ ಕರುವನ್ನು ಕೊಟ್ಟಾಗ, ಇಷ್ಟು ದುಡ್ಡು ಕೊಟ್ಟುಬಿಡು, ಇದನ್ನು ನಿನಗೆ ಕೊಟ್ಟುಬಿಡುತ್ತೇನೆ. ಎಂದೇನು ಹೇಳುತ್ತೇವೆ, ಆ ರೀತಿಯಲ್ಲಿ ಒಂದು ಹೆಣ್ಣನ್ನು ಕೊಡುತ್ತೇವೆ. ನಮ್ಮ ಟ್ರೈಬಲ್ ಜನಾಂಗದಲ್ಲಿ, ಬುಡಕಟ್ಟು ಜನಾಂಗದಲ್ಲಿ ಮಹಿಳೆಯರಿಗೆ ವರದಕ್ಷಿಣೆ ಕೊಡುವುದಿಲ್ಲ. ಅಪ್ಪ ಅಮ್ಮನಿಗೆ ಗಂಡನ ಕಡೆಯವರು ಕನ್ಯಾತೆರವನ್ನು ಕೊಡುತ್ತಾರೆ. ಈ ಕನ್ಯಾತೆರವನ್ನು ಏಕೆ ಕೊಡುತ್ತಾರೆಂದರೆ, ಇನ್ನುಮೇಲೆ ಅವಳು ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯಬೇಕು, ನಮ್ಮ ಕಡೆ ಒಂದು

ಆಳು ಬರುತ್ತಾ ಇದೆ ಎಂದು ಹೇಳುತ್ತಾರೆ. ಅವಳು ಸಿಕ್ಕಾಪಟ್ಟೆ ದುಡಿಯಬೇಕು. ಅವಳು ಮನುಷ್ಯರ ತರಹ ಅಲ್ಲ. ಒಟ್ಟು ಪ್ರಾಣಿ ತರಹ ಇಲ್ಲಿ ದುಡಿಯಬೇಕು. ಆದ್ದರಿಂದ, ಇಷ್ಟು ಹಣವನ್ನು ನಿನಗೆ ಕೊಡುತ್ತಾ ಇದ್ದೇನೆ, ನೀನು ತೆಗೆದುಕೊಂಡು ಹೋಗಿ ನಿನ್ನ ಮಗಳನ್ನು ಕೊಟ್ಟುಬಿಡು ಎಂದು ಹೇಳುತ್ತಾರೆ. ಇದಕ್ಕೆ ಕನ್ಯಾದಾನ ಎಂದು ಹೇಳುತ್ತಾರೆ ಒಬ್ಬ ಬ್ರಾಹ್ಮಣನಿಗೆ 500 ಜನ ಮಹಿಳೆಯರನ್ನು ದಾನ ಮಾಡಿದಂಥ ಪ್ರಸಂಗಗಳನ್ನು ಪುರಾಣದಲ್ಲಿ ನೋಡುತ್ತೇವೆ. ಅಂದರೆ, ಅವನು ಬೇರೆಯವರಿಗೆ ಬೇಕಾದಹಾಗೆ ಮಾರಾಟ ಮಾಡುತ್ತಿದ್ದ. ಡಾ: ಅನುಪಮಾ ನಿರಂಜನಾ ಅವರ ಒಂದು ಕಾದಂಬರಿಯಲ್ಲಿ, ಮಾಧವಿ ಎಂಬ ಕಾದಂಬರಿಯಲ್ಲಿ ಈ ಮಾತು ಬರುತ್ತದೆ. ಋಷಿಮುನಿಗಳೂ ಕೂಡ ದನಕರುಗಳನ್ನು ಮತ್ತು ಮಹಿಳೆಯರನ್ನು ದಾನವಾಗಿ ಪಡೆಯುತ್ತಿದ್ದರು ಮತ್ತು ಅವರು ತಮಗೆ ಬೇಕಾದವರಿಗೆ ಹೇಗೆ ವಿಲೇವಾರಿ ಮಾಡುತ್ತಿದ್ದರು ಎನ್ನುವುದನ್ನು ನೋಡಿದಾಗ, ಒಂದು ಹಸುವಿಗೆ ಹಗ್ಗ ಹಾಕಿ, ಹೇಗೆ ಎಳೆದುಕೊಂಡು ಹೋಗುತ್ತೇವೆಯೋ ಅದೇ ರೀತಿಯಲ್ಲಿ ಮಹಿಳೆಯೂ ಕೂಡ ಹಿಂದೆ, ಹಿಂದೆ ಬರಬೇಕು. ನಿನ್ನನ್ನು ಇಂತಹವರಿಗೆ ದಾನ ಮಾಡಿದ್ದೇನೆ, ನೀನು ಹೋಗು ಎಂದರೆ ಹೋಗುವಂತಾದ್ದು..

12.20 ಪಿ.ಎಂ.

ಇಂಥವರಿಗೆ ದಾನ ಮಾಡಿದ್ದೇವೆ ನೀನು ಹೋಗು ಎಂದು ಹೆಣ್ಣಿಗೆ ಹೇಳಿದರೆ ಹೋಗಬೇಕಾಗಿತ್ತು ಇಂಥ ಸಂಸ್ಕೃತಿಯಲ್ಲಿ ಬೆಳೆದಂಥ ಮಹಿಳೆಗೆ ಎಷ್ಟೆಲ್ಲಾ ಶೋಷಣೆಗೆ ಒಳಗಾದವಳು ಎಂಬ ಬಗ್ಗೆ ಕಲ್ಪನೆ ಸಹ ಬರಲು ಸಾಧ್ಯವಾಗುವುದಿಲ್ಲ. ಏಕೆ ಈ ಪದ್ಧತಿ ಇವತ್ತಿನವರೆಗೆ ಸುಧಾರಣೆಯಾಗುತ್ತಿಲ್ಲವೆಂದರೆ ಹೆಣ್ಣು ತನ್ನನ್ನು ತಾನೇ ಇನ್ನೂ ಅರ್ಥ ಮಾಡಿಕೊಂಡಿಲ್ಲ. ಪುರುಷ ಅರ್ಥ ಮಾಡಿಕೊಳ್ಳುವುದು ಬೇರೆ ವಿಚಾರ. ಆದರೆ ಹೆಣ್ಣು ತನ್ನನ್ನು ತಾನೇ ಇನ್ನೂ ಅರ್ಥಮಾಡಿಕೊಂಡಿಲ್ಲ. ಮಹಿಳೆಯ ಸಮಸ್ಯೆಗಳು ಏನು ಎಂದು ಮಹಿಳೆಗೇ ಗೊತ್ತಲ್ಲ. ಯಾವತ್ತು ಮಹಿಳೆ ಸ್ತ್ರೀವಾದಿನೆಲೆಯಿಂದ ಇದರ ಬಗ್ಗೆ ವಿಚಾರ ಮಾಡುತ್ತಾಳೋ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಇದರಲ್ಲಿ ತೊಂದರೆಯೇನಿದೆ, ಪುರುಷರ ಜೊತೆ ಹೊಂದಾಣಿಕೆಯಿಂದ ಬಾಳ್ಮೆ ಮಾಡುತ್ತಿರುವುದರಲ್ಲಿ ಏನು ಶೋಷಣೆ ನನಗೆ ಆಗುತ್ತಿದೆ, ನನ್ನಿಂದ ಇನ್ನೊಬ್ಬರಿಗೆ ಏನು ಶೋಷಣೆಯಾಗುತ್ತಿದೆ, ಎನ್ನುವ ಬಗ್ಗೆ ಅರ್ಥ ಮಾಡಿಕೊಂಡಿದ್ದೇ ಆದರೆ ಅವತ್ತಿಗೆ ಇದರಲ್ಲಿ ಸುಧಾರಣೆಯಾಗಬಹುದು. ಇಲ್ಲಿ, ಒಂದು ಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ, ಹುಚ್ಚನಂಥ ಗಂಡ, ಹುಲಿಯಂಥ ಮೈದುನ, ದತ್ತುರವ ನನ್ನ ನಗೆಹಣ್ಣ, ದತ್ತುರವ ನನ್ನ ನಗೆಹಣ್ಣ ಕೈಯಾಗ ಹ್ಯಾಂಗೆ ಈಜಿ ಬರಲಿ ಹಡೆದವ್ವ ಎಂದು ಒಬ್ಬ ಹೆಣ್ಣು ಮಗಳು ಕೇಳುತ್ತಾಳೆ. ಇಲ್ಲಿ, ಹುಚ್ಚನಂಥ ಗಂಡ, ಹುಲಿಯಂಥ ಮೈದುನ ಎಂದು ಹೇಳುವುದರ ಜೊತೆಗೆ ನಗೆಹಣ್ಣ ಎಂದೂ ಸಹ ಹೇಳುತ್ತಾಳೆ, ಇಲ್ಲಿ ನಗೆಹಣ್ಣ ಎಂದರೆ ಓರಗಿತ್ತಿ. ಆ ನಗೆಹಣ್ಣಿಯನ್ನು ದತ್ತೂರ ಗಿಡಕ್ಕೆ ಹೋಲಿಸುತ್ತಾಳೆ. ದತ್ತೂರ ಗಿಡ ವಿಷ ಅಂಥ ಗಿಡಕ್ಕೆ ಓರಗಿತ್ತಿಯನ್ನು ಹೋಲಿಸುತ್ತಾಳೆ.

ಅಂಥ ವಿಷವನ್ನು ಹೊಂದಿರುವ ಓರಗಿತ್ತಿ ಇರುವಾಗ ನಾನು ಹೇಗೆ ಸಂಸಾರವನ್ನು ಈಜಿ ಬರಲಿ ಎಂದು ಆ ಹೆಣ್ಣು ಕೇಳುತ್ತಾಳೆ. ಇಲ್ಲಿ ಕೇವಲ ಪುರುಷರು ಮಾತ್ರವಲ್ಲ, ಕುಟುಂಬದ ಮಹಿಳೆಯೂ ಸೇರಿ ಆ ಹೆಣ್ಣುಮಗಳಿಗೆ ಶೋಷಣೆ ಮಾಡುತ್ತಿದ್ದಾರೆ, ಕುಟುಂಬದ ಎಲ್ಲರಿಂದಲೂ ಶೋಷಣೆಯಾಗುತ್ತಿದೆ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಬಹಳ ಜನ ಸದಸ್ಯರು ಸೊಸೆಯನ್ನು ಅತ್ತೆಯೇ ಸುಡುತ್ತಾಳೆ ಎಂದು ಹೇಳಿದರು. ಇಲ್ಲಿ ಅತ್ತೆಯನ್ನು ಏಕೆ ಆ ಮಟ್ಟದಲ್ಲಿ ನೋಡುತ್ತೀರಾ? ಅವಳೂ ಸಹ ಒಬ್ಬ ಮನುಷ್ಯಳು. ಮನುಷ್ಯನಲ್ಲಿರುವ ಎಲ್ಲಾ ದೌರ್ಬಲ್ಯಗಳೂ ಸಹ ಅವಳಲ್ಲಿವೆ. ತಾವು ಹೆಣ್ಣು ಮತ್ತು ಗಂಡಿನ ಮಧ್ಯೆ ಒಂದು ಗೆರೆ ಎಳೆದು ಅವಳಿಗೆ ಇಷ್ಟು ಇವನಿಗೆ ಇಷ್ಟು ಎಂದು ವಿಂಗಡಣೆ ಮಾಡುವುದು ಸರಿಯಲ್ಲ. ಕುಟುಂಬದಲ್ಲಿ ಗಂಡು ಹೆಣ್ಣು ಸಮನಾಗಿ ಹೆಚ್ಚೆಯನ್ನಿಡುವಾಗ, ಬರತಕ್ಕ ಕಷ್ಟ ಸುಖಗಳನ್ನು ನೋವು ನಲಿವುಗಳನ್ನು ಸಮನಾಗಿ ನಿವಾರಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ನೀವು ಕೆಲಸ ಮಾಡಬೇಕು. ಒಬ್ಬ ಗಂಡನಿಗೆ ಹೆಂಡತಿ ಸತ್ತರೆ ಅವನು ಸಣ್ಣ ವಯಸ್ಸಿನವನಾಗಿದ್ದರೆ ಮೂರು ತಿಂಗಳಿನಲ್ಲಿ ಮತ್ತೆ ಮದುವೆ ಮಾಡಿಬಿಡುತ್ತಾರೆ. ಆದರೆ ಸಣ್ಣ ವಯಸ್ಸಿನ ಹೆಣ್ಣು ಮಗಳು ವಿಧವೆಯಾದರೆ ತಲೆಬೋಳಿಸುವಂಥ ಪದ್ಧತಿ ಸಹ ಇದೆ. ಆದರೆ ಬುಡಕಟ್ಟು ಜನಾಂಗದವರಲ್ಲಿ ಆ ಪದ್ಧತಿ ಇಲ್ಲ. ಪುರುಷ ಪ್ರಧಾನ ಹೇಗೆ ಎಂಬ ಬಗ್ಗೆ ನಮ್ಮ ಲಂಬಾಣಿ ಜನಾಂಗದಲ್ಲಿ ಒಂದು ಹಾಡು ಇದೆ ಅಕ್ಕಾ ಪಾರಿವಾಳಕ್ಕಾಗಿ ಈ ರಸ್ತೆಯನ್ನು ಬಿಟ್ಟು ಆಚೆ ಹೋಗು, ಅಂದರೆ, ನಮ್ಮ ಅಪ್ಪ ಬಂದರೆ ನಿನ್ನನ್ನು ಹಿಡಿದು ಬಿಡುತ್ತಾನೆ, ನಿನ್ನನ್ನು ಸಾರಾಯಿಯ ನೆಂಜಿಕೆ ಮಾಡಿಕೊಂಡು ಬಿಡುತ್ತಾನೆ, ಹಾಗೆಯೇ ಆ ಹೆಣ್ಣುಮಗಳು ಅಕ್ಕ ಪಾರಿವಾಳಕ್ಕಾಗಿ ನೀನು ದೂರ ಹೋಗಕ್ಕ ನಮ್ಮ ಮಾವ ಬರ್ತಾನೆ, ನಮ್ಮ ಚಿಕ್ಕಪ್ಪ ಬರುತ್ತಾನೆ, ದೊಡ್ಡಪ್ಪ ಬರುತ್ತಾನೆ ಅವನು ನಿಮ್ಮನ್ನು ತಿಂದು ಬಿಡುತ್ತಾನೆ ಎಂಬ ಮಾತನ್ನು ಅವಳು ಹೇಳಿದಾಗ ಇಲ್ಲಿ ಎಲ್ಲೂ ತಾಯಿ, ದೊಡ್ಡಮ್ಮ, ಚಿಕ್ಕಮ್ಮ, ಅತ್ತೆ ಈ ರೀತಿ ಬರುತ್ತಾಳೆ ಎಂದು ಹೇಳುವುದಿಲ್ಲ. ಇದರಿಂದ ಸ್ತ್ರಿಯರಿಗಿಂತ ಪುರುಷರು ಒಂದು ಕಾಲದಲ್ಲಿ ಮಹಿಳೆಯನ್ನು ಹೆಚ್ಚು ಶೋಷಣೆಗೆ ಗುರಿಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಅದು ಇವತ್ತಿಗೂ ಇದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅಂದರೆ ಪುರುಷರು ಮಾತ್ರ ಹೆಣ್ಣನ್ನ ಶೋಷಣೆ ಮಾಡುತ್ತಿದ್ದಾರೆ. ಬೇರೆ ಮಹಿಳೆಯರು ದೇವತೆಯರು ಎಂಬುದು ಸರಿಯಲ್ಲ. ನಾವೇನೂ ದೇವತೆಯರಲ್ಲ. ದೇವ, ದೇವತೆಯರನ್ನು ಮಾಡಿಕೊಂಡಿರುವವರು ನಾವು. ಯಾರೂ ಸಹ ದೇವ, ಯಾವಳೂ ಸಹ ದೇವತೆಯಲ್ಲ. ದೇವರ ಬಗ್ಗೆ ನಾವು ಬೇಕಾದಷ್ಟು ಕತೆಗಳನ್ನು ಬರೆದು ಬಹಳ ರಂಜಕವಾಗಿ ಮಾಡಿದ್ದೇವೆ. ದುರ್ಬಲ ವರ್ಗದ ಜನಕ್ಕೆ ಈಶ್ವರನನ್ನು ಹೇಗೆ ಹೋಲಿಸಿದ್ದಾರೆಂದರೆ, ಈಶ್ವರನ ಮನೆಯ ಬಚ್ಚಲಿಗೆ ಬಾಗಿಲೇ ಇರಲಿಲ್ಲ, ಈಶ್ವರನ ಹೆಂಡತಿ ಬಹಳ ಕಷ್ಟ ಪಟ್ಟು ಸ್ನಾನ ಮಾಡುತ್ತಿರುತ್ತಾಳೆ, ಅವಳ ಮೈಮೇಲೆ ಗಣೇಶನನ್ನು ಮಾಡುವಷ್ಟು ಕೊಳೆ ಇರುತ್ತದೆ ಎಂಬುದಾಗೆಲ್ಲಾ ನಾವು ಓದುತ್ತೇವೆ. ಜನಸಾಮಾನ್ಯರ ಪದ್ಧತಿಯನ್ನೇ ದೇವರ ಮೇಲೆ ಈ ರೀತಿ ಹೇಳಿರುವುದರಿಂದ, ಇಂಥವರೇ ಕಿಟ್ಟವರು, ಇಂಥವರೇ ಒಕ್ಕೆಯವರು

ಎಂದು ಹೇಳಲು ಸಾಧ್ಯವಾಗುವುದಿಲ್ಲ. ಬಹಳಷ್ಟು ಜನ ಪುರುಷರು ಋಷಿ ಮುನಿಗಳಾಗಿಹೋದರು. ಅದೇ ರೀತಿ ಮಹಿಳೆಯರೂ ಸಹ ಭಕ್ತಿ ಪಂಥಕ್ಕೆ ಸೇರಿದ್ದರು. ಮನುಷ್ಯರ ಸಂಗವೇ ಬೇಡವೆಂದು ಮಹಿಳೆಯರಿಗೆ ಅನ್ನಿಸಿ ಆ ರೀತಿ ಭಕ್ತಿ ಪಂಥಕ್ಕೆ ಸೇರಿದರು. ಅದಕ್ಕಾಗಿಯೇ ಅಕ್ಕಮಹಾದೇವಿಯವರು ಈ ಕೆಡುವ ಸುಡುವ ಗಂಡನ ನಾ ಒಲ್ಲೆ ಎಂದು ಹೇಳಿದ್ದು. ಏಕೆಂದರೆ ಮನುಷ್ಯನಲ್ಲಿ ಅಷ್ಟೊಂದು ಕ್ರೌರ್ಯ ನೀಚತನವನ್ನು ಕಂಡಾಗ ಭಕ್ತ ಮೀರ, ಸಂತಸಕ್ಕೂಬಾಯಿ, ಜನಬಾಯಿ ಇವರೆಲ್ಲರೂ ಪಾಂಡುರಂಗನ, ಕೃಷ್ಣನ ಭಕ್ತರಾದರು. ಅಕ್ಕಮಹಾದೇವಿಯವರು ಶಿವನ ಭಕ್ತೆಯಾದರು. ಇವರೆಲ್ಲಾ ಏಕೆ ಈ ಮನುಷ್ಯ ಕುಲವನ್ನು ಬಿಟ್ಟು ಎಲ್ಲೋ ಕಾಣದ ದೇವರನ್ನು ಹುಡುಕಿಕೊಂಡು ಹೋದರೆಂದರೆ ಇವರಿಗೆ ಮನುಷ್ಯರಲ್ಲಿರುವ ಕ್ರೌರ್ಯವನ್ನು ಸಹಿಸಲು ಆಗಲಿಲ್ಲ. ಈಗಲೂ ಒಬ್ಬ ಹೆಣ್ಣು ಮಗಳನ್ನು ವಯಸ್ಸಾದ ಗಂಡಿಗೆ ಮದುವೆ ಮಾಡಿಕೊಡುತ್ತಾರೆ. ಅಂಥ ಸಂದರ್ಭದಲ್ಲಿ ಅವರು ಏನು ಮಾಡುತ್ತಾರೆ?

ಮುಪ್ಪಿನ ಮುದುಕಗೆ ಕೊಟ್ಟರೆ ತಾಯಿತಂದೆ
ಮುಟ್ಟಬೇಡಜ್ಜ ಮುದಿಯಜ್ಜ,
ಮುಟ್ಟಬೇಡಜ್ಜ ಮುದಿಯಜ್ಜ,
ನಾ ನಿನಗೆ ಬೊಚ್ಚಲ ಮಗಳಾಗಿರುತ್ತೀನಿ

ಎನ್ನುವಂಥ ಬಿಂಕವನ್ನು ತೋರಿಸುತ್ತಾಳೆ ಅವಳು. ಬೇಡಪ್ಪ ನಿನಗೆ ಮಗಳಾಗಿ ಇರುತ್ತೇನೆ. ನೀನು ನನ್ನನ್ನು ಮದುವೆಯಾಗಬೇಡ ಎಂದು ಕೇಳಿಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ವರದಕ್ಷಿಣೆಯಿಂದ ಇರಬಹುದು, ಬಡತನದಿಂದ ಇರಬಹುದು, ದಾರಿದ್ರ್ಯ ಇರಬಹುದು ಈ ಎಲ್ಲಾ ಕಾರಣಕ್ಕಾಗಿ ತಮ್ಮ ಪ್ರಾಯದ ಮಕ್ಕಳನ್ನು ಮುದುಕರಿಗೆ ಕೊಡುವಂಥ ಸಂದರ್ಭಗಳು ಸಹ ಇರುತ್ತವೆ. ಆದರೂ ಜಾನಪದದಲ್ಲಿ ಹೆಣ್ಣನ್ನು ಎಷ್ಟು ಚೆನ್ನಾಗಿ ಚಿತ್ರಣ ಮಾಡಿದ್ದಾರೆ. ಗಂಡನ್ನು ಹೇಗೆ ಕಂಡಿದ್ದಾರೆ ಎಂಬುದನ್ನೆಲ್ಲಾ ನೋಡಿದಾಗ ಈ ಸಮಾಜ ಇಷ್ಟೊಂದು ಕೆಟ್ಟದಲ್ಲ ಎಂಬುದು ತಿಳಿಯುತ್ತದೆ. ಸ್ವಲ್ಪ ಮಟ್ಟಿಗೆ ಕೆಟ್ಟಿದ್ದಿರಬಹುದು, ಈಗಲೂ ಕೆಟ್ಟಿದೆಯೆಂದು ನಾನು ಹೇಳುವುದಿಲ್ಲ, ಆದರೆ ಯಾವಾಗಲೂ ನೀಚ ಜನರು ಇದ್ದೇ ಇರುತ್ತಾರೆ ಮತ್ತು ಒಳ್ಳೆ ಜನರೂ ಇದ್ದೇ ಇರುತ್ತಾರೆ. ಜಾನಪದದಲ್ಲಿ ಗಂಡು ಮಗುವಿನ ಬಗ್ಗೆ ಏನು ಹೇಳುತ್ತಾರೆಂದರೆ

ಎಲ್ಲಾರೂ ಇರಲವ್ವ ಹುಲ್ಲಾಗಿ
ಬೆಳೆಯಾಲಿನಲ್ಲಿ, ಬಡ್ಡಾಗಿ ಬಿಗಿಯಾಲಿನಲ್ಲಿ
ಬಡ್ಡಾಗಿ ಬಿಗಿಯಾಲೆ ಕಂದಯ್ಯ
ದೇವಂತನಾಗಿ ಬೆಳೆಯಾಲೆ ಜಾಗೆಯೇ
ಹೆಣ್ಣಾ ಮಗುವಿಗೆ ಹೇಗೆ ಹೇಳುತ್ತಾರೆಂದರೆ

ಒಂದಣ್ಣ ಇದ್ದರೆ ಮಂಡಿಯಾಗಿದ್ದಾಳ
ಬಂಧುವನ ಬೆಲ್ಲ ಹೊರಿಸಾಳ
ಬಂಧುವನ ಬೆಲ್ಲ ಹೊರಿಸಾಳ ನನ ಮಗಳು
ಹಡದಮ್ಮನಗಿಂತ ಅತಿ ತರುಣ.

ಅಂದರೆ ನನ್ನ ಮಗಳೂ ಸಹ ನನಗೆ ಬಹಳ ಉಪಕಾರಿಯಾಗಿದ್ದಾಳೆ. ಅವಳುವ ನನಗೆ ಬೇಕು ಎನ್ನುವಂಥದನ್ನು ತಾಯಿ ಗಂಡು ಹೆಣ್ಣಿನ ನಡುವೆ ಒಳ್ಳೆಯ ಭಾವನೆಯನ್ನು ತೋರಿಸಿರುವುದನ್ನು ಜಾನಪದದಲ್ಲಿ ನೋಡುತ್ತೇವೆ. ಇವೆಲ್ಲವನ್ನೂ ನೋಡಿದಾಗ ಪ್ರಾಚೀನ ಕಾಲದಿಂದಲೂ ಹೆಣ್ಣು ಗಂಡು ಸಮಾನವಾಗಿಯೇ ಇದ್ದರೂ ಬರುತ್ತಾ ಬರುತ್ತಾ ಪುರುಷರ ಪ್ರಾಬಲ್ಯ ಜಾಸ್ತಿಯಾಯಿತು, ಆಗ ಆಳುವವನು ಏಳು ಜನರನ್ನು ಬೇಕಾದರೂ ಮದುವೆ ಮಾಡಿಕೊಳ್ಳಬಹುದು ಎಂಬ ಪದ್ಧತಿ ಬಂತು, ಇದರಿಂದಾಗಿ ಮಹಿಳೆಯರ ಬಾಳು ಏನು ಬೇಕಾದರೂ ಸಹಿಸಿಕೊಳ್ಳಬಹುದು ಎಂಬ ಮಟ್ಟಕ್ಕೆ ಬಂತು. ಇದಕ್ಕೆ ವೈಜ್ಞಾನಿಕ ಕಾರಣವನ್ನು ಚಂದ್ರಶೇಖರ್ ಎಂಬ ಪ್ರಾಚಾರ್ಯರು ನನಗೆ ಹೇಳಿದರು. ಅದು ನಿಜವಾಗಿಯೂ ಬಹಳ ಸತ್ಯವೆಂದು ಕಾಣಿಸುತ್ತದೆ. ನೀವು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಸಾವಿರ ಮಾತುಗಳನ್ನಾಡಿ ಆದರೆ ಒಂದು ಮಾತ್ರ ನಿಜ, ಅದೇನೆಂದರೆ, ಮಹಿಳೆ ಹೆಣ್ಣು, ಅವಳು ಮಕ್ಕಳನ್ನು ಹೆರುತ್ತಾಳೆ, ಅವಳಿಗೆ ಪುರುಷನ ನೆರವು ಬೇಕು. ಅದೇ ರೀತಿ ಗಂಡಸು ಎಲ್ಲಿ ಬೇಕಾದರೂ ಹೋಗಬಹುದು, ಆದರೆ ಮಹಿಳೆ ಏನಾದರೂ ಮಾಡಿ ಪುರುಷನನ್ನು ಹೊಂದಾಣಿಕೊಳ್ಳಬೇಕು, ತನ್ನ ಗಂಡನನ್ನಾಗಿ ಉಳಿಸಿಕೊಳ್ಳಬೇಕು, ಅವನು ಬೇಕಾದರೆ ಓಡಿ ಹೋಗುತ್ತಾನೆ, ಆದರೆ ತನ್ನನ್ನು ಮನೆ, ಮಕ್ಕಳನ್ನು ನೋಡಿಕೊಳ್ಳಲು ಒಬ್ಬರ ಆಸರೆ ಬೇಕು ಎಂದು ಆ ಹೆಣ್ಣು ಬೇಕಾದರೆ ಇಬ್ಬರನ್ನು ಮದುವೆ ಮಾಡಿಕೋ ನಾನು ಏನು ಮಾತನಾಡುವುದಿಲ್ಲ ಆದರೆ ನನ್ನನ್ನು ಮಾತ್ರ ಬಿಡಬೇಡ ಎಂಬ ದಿನತೆಯನ್ನು ತೋರಿಸಿದಳು. ಏಕೆಂದರೆ ಅವಳು ಆರ್ಥಿಕವಾಗಿ ಬಹಳ ದುರ್ಬಲಳು, ಅವಳ ಕೆಲಸ ಮನೆಯ ಕೆಲಸ, ಬೇರೆ ಕೆಲಸವನ್ನು ಮಾಡಲು ಅವಳಿಗೆ ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ ಹೆಣ್ಣು ಪ್ರತಿಯೊಂದು ಸಂದರ್ಭದಲ್ಲೂ ಪುರುಷನಿಗೆ ಸಡಿಲತೆಯನ್ನು ಕೊಟ್ಟುಕೊಂಡು ಬಂದಳು. ಮೂರು ಜನ ಹೆಣ್ಣುಮಕ್ಕಳನ್ನು ಮದುವೆಯಾಗಿ ನಾಲ್ಕನೆಯವಳನ್ನೂ ಸಹ ಪುರುಷ ಮದುವೆಯಾಗುತ್ತಿದ್ದ. ಇದರ ಬಗ್ಗೆ ನಾನು ಎಂ.ಎಲ್.ಸಿ. ಯಾಗಿದ್ದಾಗ ಹೇಳಿದ್ದೆ, ಅದರ ಬಗ್ಗೆ ಬಹಳಷ್ಟು ಪತ್ರಿಕೆಯವರು ನನ್ನನ್ನು ವ್ಯಂಗ್ಯವಾಗಿಯೋ, ಒಳ್ಳೆಯದ್ದಾಗಿಯೋ ಬರೆಯುತ್ತಿರುತ್ತಾರೆ. ನಾನು ಏನು ಹೇಳಿದ್ದೆ ಎಂದರೆ, ಅವನು ನಾಲ್ಕನೆಯವಳನ್ನು ಮದುವೆಯಾದಾಗಲೂ ಅವನಿಗೆ ಮದುವೆಯಾಗಿಲ್ಲವೆಂದು ಹೇಳಲಿಲ್ಲ. ಆ ಹೆಣ್ಣು ಕೊನೆಗೆ ನನ್ನ ಹತ್ತಿರ ಬಂದು ಹೇಳಿದಳು. ಆ ವ್ಯಕ್ತಿ ಮೂರು ಜನರನ್ನು ಮದುವೆಯಾಗಿದ್ದರೂ ಸಹ ನಾಲ್ಕನೇ ಮದುವೆಯಾಗುತ್ತಿರುವ ಹೆಣ್ಣಿಗೆ ಇದು ಗೊತ್ತಿಲ್ಲ. ಮದುವೆಯಾಗಿಬಿಡುತ್ತಾಳೆ. ನಾನು ಈಗಾಗಲೇ ಮೂರು ಮದುವೆಯಾಗಿದ್ದೇನೆ, ನಿನ್ನನ್ನೂ ಸಹ ಮದುವೆಯಾಗಿಬಿಟ್ಟಿದ್ದೇನೆ, ಬೇಕಾದರೆ ಇರು, ಸಾಕಾದರೆ ಹೋಗು ಎಂದು

ಅವನು ಹೇಳುತ್ತಾನೆಂದು ಇಟ್ಟುಕೊಳ್ಳಿ, ಆಗ ಈ ಸಮಾಜದಲ್ಲಿ ಆ ಹೆಣ್ಣಿಗೆ ಮತ್ತೆ ಮಾನ, ಮರ್ಯಾದೆ ಇರುವುದಿಲ್ಲ. ಆದ್ದರಿಂದ ಅನಿವಾರ್ಯವಾಗಿ ಅವನ ಜೊತೆ ಇರಬೇಕಾಗುತ್ತದೆ. ಉದ್ಯೋಗಸ್ಥ ಮಹಿಳೆಯರು ವಿವಾಹ ವಿಚ್ಛೇದನವನ್ನು ಪಡೆದು ಹೋಗುತ್ತಾರೆಂದು ನಾವು ಈಗ ಹೇಳುತ್ತೇವೆ. ಆದರೆ ಅದು ಸಹ ಅಷ್ಟೊಂದು ಸುಲಭವಲ್ಲ. ವಿವಾಹ ವಿಚ್ಛೇದನ ಪಡೆದು ಬೇರೆ ಹೋದ ಮಹಿಳೆಯನ್ನು ಬೇರೆಯವರು ಬಿಡುವುದಿಲ್ಲ. ನೂರಾರು ಚುಚ್ಚು ಮಾತುಗಳನ್ನು ಹೇಳುತ್ತಾರೆ. ಅವಳು ಮಾನಸಿಕವಾಗಿ ದಿನೇ ದಿನೇ ಕುಗ್ಗುತ್ತಾಳೆ. ಹಿಂದೆ ಗಂಡ ಸತ್ತ ಕೂಡಲೇ ಹೆಣ್ಣನ್ನು ಚಿತೆಗೆ ಇಟ್ಟು ಹೇಗೆ ಸುಡುತ್ತಿದ್ದರೋ ಅದಕ್ಕಿಂತ ಭೀಕರವಾಗಿ ಅವಳನ್ನು ನಾನಾ ರೀತಿಯ ಮಾತುಗಳಿಂದ ಇಂದು ಕೊಲ್ಲುತ್ತಾರೆ. ಹಿಂದೆ ಒಂದೇ ಸಲ ಸತ್ತು ಹೋಗುತ್ತಿದ್ದಳು, ಅದರ ಬದಲಾಗಿ ಇಂದು ದಿನೇ ಸಾಯುತ್ತಾ ಹೋಗುತ್ತಾಳೆ. ಹೀಗೆ ದಿನೇ ದಿನೇ ಸಾಯಿಸುವಂಥ ಕ್ರೌರ್ಯ ಇಂದಿಗೂ ಇದೆ. 12ನೇ ಶತಮಾನದಲ್ಲಿ ಬಸವಣ್ಣನವರ ಕಾಲದಿಂದ ಮಹಿಳೆಯರ ಬಗ್ಗೆ ಅಲೋಚನೆ ಮಾಡಿಕೊಂಡು ಬಂದರು, ದೇವದಾಸಿಯರಿಗೆ ಸ್ಥಾನಮಾನ ಕೊಟ್ಟರು, ಕೆಳವರ್ಗದ ಮಹಿಳೆಯರಿಗೂ ಸಹ ಬಸವಣ್ಣನವರು ತಮ್ಮ ಮಹಾಮನೆಯಲ್ಲಿ ಅವಕಾಶ ಮಾಡಿಕೊಟ್ಟರು. ತಮ್ಮ ಬದುಕನ್ನು ವಚನದ ರೂಪದಲ್ಲಿ ಹೇಳಿದರು. ಇವೆಲ್ಲವನ್ನೂ ಹೇಳಿದರೂ ಸಹ ಅನಂತರದ ದಿವಸಗಳಲ್ಲಿ ಮತ್ತೆ ಮತ್ತೆ ಯಥಾಪ್ರಕಾರವಾಯಿತು, ಯಾರೂ ಸಹ ಅದನ್ನು ಮುಂದುವರೆಸಲಿಲ್ಲ, ಯಾರು ಬಸವಣ್ಣನ ಜನರೆಂದರೋ ಅವರೇ ಬಸವಣ್ಣನವರನ್ನು, ಅವರ ತತ್ವವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಸ್ತ್ರೀ ಪುರುಷರೆಲ್ಲರೂ ಕೂಡ ನಾವೆಲ್ಲರೂ ಸಮಾನರು, ಒಂದೇ, ಎಂಬ ತತ್ವದ ಮೇಲೆ ಚೆನ್ನಾಗಿ ಇರಬಹುದಾಗಿತ್ತು. ಆದರೆ ಹಾಗೆ ಆಗಲಿಲ್ಲ. ಹೀಗೆಲ್ಲಾ ಇರುವಾಗ ನಮ್ಮಲ್ಲಿ ಸುಮಾರು 35 ಸಾವಿರ ಚಿಲ್ಲರೆ ಪ್ರತಿನಿಧಿಗಳು ನಮ್ಮಲ್ಲಿ ಬಂದಿದ್ದಾರೆ. ಮಹಿಳೆಯರ ಕುರಿತು ಬಹಳ ಒಳ್ಳೆಯ ಮತ್ತು ಮೆಚ್ಚಿಕೊಳ್ಳುವಂತಹ ಕೆಲಸವನ್ನು ನಮ್ಮ ಸರ್ಕಾರಗಳು ಮಾಡುತ್ತಿವೆ ಎಂದು ಹೇಳಬಯಸುತ್ತೇನೆ. ಯಾವ ಯಾವ ಮಹಿಳೆ ಇವೊತ್ತು ರಾಜಕೀಯಕ್ಕೆ ಅಥವಾ ಮಹತ್ವಪೂರಿತವಾದ ಕೆಲಸಗಳನ್ನು ಮಾಡುತ್ತಾಳೋ ಅಂತಹವಳು ಒಂದು ರೀತಿಯಿಂದ ಪತಿಯಿಂದ ವಿಚ್ಛೇದಿತಳಾಗಿರುತ್ತಾಳೆ ಅಥವಾ ಪತಿಯನ್ನು ಕಳೆದುಕೊಂಡವಳಾಗಿರುತ್ತಾಳೆ; ಅಥವಾ ಮದುವೆಯಾಗದೇ ಇರುವವಳಾಗಿರುತ್ತಾಳೆ. ಆಶ್ಚರ್ಯಕರ ಉದಾಹರಣೆಗಳನ್ನು ನಾವು ನೋಡಬಹುದು. ಕಿತ್ತೂರು ರಾಣಿ ಚೆನ್ನಮ್ಮ ಮಲ್ಲಸರ್ಜನ ರಾಜನು ಸತ್ತ ಮೇಲೆ ರಾಣಿಯಾದಳು. ಹೀಗೆ ಅನಿವಾರ್ಯವಾಗಿ ಮಹಿಳೆಯರಿಗೆ ಸ್ಥಾನವನ್ನು ಕೊಡುತ್ತಾರೆ. ಚಾಮುಂಡೇಶ್ವರಿಯ ಕತೆಯನ್ನು ನೋಡಿ. ಯಾರಿಂದಲೂ ಮಹಿಷಾಸುರನನ್ನು ಹೊಡೆಯಲು ಆಗಲಿಲ್ಲ. ನನ್ನದೊಂದು ಬಾಣ ತೆಗೆದುಕೋ ನನ್ನದೊಂದು ಬಿಲ್ಲು ತೆಗೆದುಕೋ ಎಂದು ಹೇಳಿ ಎಲ್ಲರೂ ಧೈರ್ಯ, ಉತ್ಸಾಹವನ್ನು ತುಂಬಿ ಅವಳನ್ನು ಕಳುಹಿಸುತ್ತಾರೆ. ಅಂದರೆ ಅವಳಾಗಿಯೇ ಯುದ್ಧ ಮಾಡಲು ಬರಲಿಲ್ಲ, ಧೈರ್ಯತುಂಬಿ ಇವರು ಕಳುಹಿಸಿದ್ದಾರೆ. ಹಾಗೆಯೇ ಝಾನ್ಸಿ ಲಕ್ಷ್ಮೀಬಾಯಿ ಕೂಡ ತನ್ನ ಪತಿ ಸ್ವರ್ಗಸ್ಥನಾದ ಮೇಲೆ ಅಧಿಕಾರವನ್ನು

ಮಾಡುತ್ತಾಳೆ. ಇಂದಿರಾ ಗಾಂಧಿಯವರು ಕೂಡ ಹಾಗೆಯೇ ರಾಜಕೀಯದಲ್ಲಿ ಬೆಳಗಿದರು. ಇನ್ನೂ ಬೇರೆ ಬೇರೆ ದೇಶದಲ್ಲಿನ ರಾಣಿಯರ ಬಗ್ಗೆ ನೋಡಿದಾಗ, ಅವರುಗಳ ಕತೆಯನ್ನು ಗಮನಿಸಿದಾಗ, ರಾಜರು ಇದ್ದಾಗ ಆಳ್ವಿಕೆ ನಡೆಸಿದ್ದು ಬಹಳ ಕಡಿಮೆ ಇದೆ. ಇದಕ್ಕೆ ಕಾರಣ ಏನು? ಪುರುಷ ಪ್ರಧಾನ ಸಮಾಜದಲ್ಲಿ ನಾನು ಇಲ್ಲೇ ಇರುತ್ತೇನೆ, ನೀನು ಅಲ್ಲೇ ಇರು ಎಂದು ಹೇಳಿದ ಕಾರಣ; ಪುರುಷ ಪೌರುಷದ ಕಾರಣದಿಂದ ಹಾಗೆ ಆಗಿದೆ. ಅದು ಈಗ ಸ್ವಲ್ಪ ಮಟ್ಟಿಗಾದರೂ ಬದಲಾವಣೆಯಾಗಬೇಕಾಗಿದೆ. ಪರವಾಗಿಲ್ಲ, ನಿನ್ನಲ್ಲಿ ಯೋಗ್ಯತೆ ಇದ್ದರೆ ಮುಂದೆ ಹೋಗು, ಎಂದು ಹೇಳಿದರೂ ಸಾಕು. ಇಷ್ಟನ್ನೇ ನಾವು ಹೇಳುತ್ತಾ ಇರುವುದು. ಆದುದರಿಂದ ಇವೊತ್ತು ಮಿಾಸಲಾತಿಯ ರೂಪದಲ್ಲಿ ಪಂಚಾಯತ್‌ಗಳಲ್ಲಿ ಅವಕಾಶ ಸಿಕ್ಕಿದೆ ಎಂಬುದು ಸಂತೋಷದ ವಿಚಾರವಾಗಿದೆ. ಆದರೆ ಆ ಮಿಾಸಲಾತಿಯ ಸ್ಥಿತಿಗತಿಗಳು ಏನಾಗಿವೆ? ಗಂಡ ಎನ್ನುವ ಮನುಷ್ಯ, ಅತ್ತೆ, ನಾದಿನಿ, ಹೀಗೆ ಯಾರಾದರೂ ಒಬ್ಬರು ಬಂದು ಅಧ್ಯಕ್ಷಸ್ಥಾನದಲ್ಲಿ ಕುಳಿತಿರುವ ಮಹಿಳೆಯ ಮಗುವನ್ನು ತಂದು ಬಿಡುತ್ತಾರೆ. ಆ ಮಗು ಅಳುತ್ತಿರುವುದು, ಸಿಂಬಳ ಸುರಿಸಿಕೊಂಡು ಒದ್ದಾಡುವುದು ಮುಂತಾದುವನ್ನು ನೋಡುವಲ್ಲಿ, ಸಂತೈಸುವಲ್ಲಿ ಆಕೆಗೆ ಮನಸ್ಸು ಸೆಳೆಯುತ್ತದೆಯೇ ಹೊರತು ತಾನು ಕುಳಿತಿರುವ ಸ್ಥಾನಮಾನದ ಕಡೆಗೆ ಅಷ್ಟು ಪರಿಜ್ಞಾನ, ಪ್ರಜ್ಞೆ ಇರುವುದಿಲ್ಲ. ಮಗು ಬಿಟ್ಟವರು ತಮಾಷೆ ನೋಡುತ್ತಿರುತ್ತಾರೆ. ಆ ಮಹಿಳೆಯ ಸ್ಥಿತಿಯನ್ನು ನೀವೇ ಯೋಚಿಸಿ. ಅದೇ ತನ್ನ ಗಂಡ ಏನಾದರೂ ಅಂಥ ಸ್ಥಾನವನ್ನು ಗಳಿಸಿಕೊಂಡು ಅಧ್ಯಕ್ಷಸ್ಥಾನದಲ್ಲಿ ಕುಳಿತರೆ ಆತನಿಗೆ ಯಾವುದೇ ತೊಂದರೆಯಾಗಬಾರದು ಎಂದು ಹೆಂಡತಿಯಾದವಳು ಪರಿಶ್ರಮಿಸುತ್ತಾಳೆ. ಆತನು ಮುಂದೆ ಬರಬೇಕು, ಆತನು ಮಾಡುತ್ತಿರುವ ಕೆಲಸದಲ್ಲಿ ಯಶಸ್ವಿಯಾಗಬೇಕು, ಕೀರ್ತಿಗಳಿಸಬೇಕು, ಎಂದು ಸಂಪೂರ್ಣ ಸಹಕಾರವನ್ನು ಹೆಂಡತಿ ಕೊಡುತ್ತಿರುತ್ತಾಳೆ. ಇಲ್ಲಿ ಹಣ್ಣಿಗಿರುವ ಮನೋಭಾವನೆಯು ಬೇರೆಯವರಿಗೆ ಇರುವುದಿಲ್ಲ. ಆದ್ದರಿಂದ ಮಾನಸಿಕ ಸಿದ್ಧತೆಯಿಂದ ತಾವೇನು ಮಿೀಸಲಾತಿಯನ್ನು ಕೊಡುತ್ತಾ ಇದ್ದೀರಿ, ಆಗ ಮಹಿಳೆಯು ಸಂತೋಷ ಪಡುವುದಿಲ್ಲ, ಅವಳು ದುಃಖ ಮತ್ತು ಅಸಮಾನತೆಯನ್ನು ಪಡುತ್ತಿರುತ್ತಾಳೆ ಅಪಮಾನವನ್ನು ಪಡುತ್ತಿರುತ್ತಾಳೆ. ತಮ್ಮಂಥ ಅಧಿಕಾರಿಗಳು ಬಾಯಿ ಬಿಟ್ಟು ಹೇಳುವುದಿಲ್ಲ. ಆದರೆ ಒಳಗೊಳಗೆ ಅಯ್ಯೋ ಪೆದ್ದೇ? ಏನು ಮಾತನಾಡುತ್ತಿದ್ದೀಯ, ಅಡು.... ಎಂಬ ರೀತಿಯಲ್ಲಿ ತಾತ್ಸಾರಪೂರ್ವಕವಾಗಿ ವರ್ತಿಸುತ್ತಾರೆ. ಇದು ಅವರುಗಳು ಕಣ್ಣಿನ ಮತ್ತು ಮುಖಭಾವನೆಗಳ ಮೂಲಕ ಅರ್ಥಮಾಡಿಕೊಳ್ಳಬಹುದು. ಅಂಥ ಸಂದರ್ಭಗಳಲ್ಲಿ ಮಹಿಳೆಯಾದವಳು ಕುಗ್ಗಿ ಹೋಗುತ್ತಾಳೆ. ಇನ್ನು ನಾನು ಇಲ್ಲಿಗೆ ಬಾರದೇ ಇರುವುದೇ ಒಳಿತು ಎಂಬ ಮಾನಸಿಕ ವೇದನೆಗೆ ಒಳಗಾಗುತ್ತಾಳೆ. ಇದರಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾವಂತೆಯರು, ಮೇಲ್ವರ್ಗದ ಜಾತಿಯ ಮಹಿಳೆಯರು ಪರವಾಗಿಲ್ಲ. ಅವರಲ್ಲಿ ಧೈರ್ಯ ತುಂಬಿರುತ್ತದೆ, ಪರಿಜ್ಞಾನಗಳ ಬಲ ಅವರಿಗಿರುತ್ತದೆ, ದಬಾಯಿಸಿ ಹೇಳುವಂಥ ಒಂದು ಚಾತುರ್ಯವೂ ಅವರಿಗಿರುತ್ತದೆ. ಅವರು ಪತ್ರಿಕೆಗಳ ಮೂಲಕ, ದೂರದರ್ಶನ, ರೇಡಿಯೋ ಮತ್ತು ಸಮಾಜದ ಆಗುಹೋಗುಗಳ ಬಗ್ಗೆ ಅರ್ಥ

ಮಾಡಿಕೊಂಡಿರುತ್ತಾರೆ, ತಿಳಿದುಕೊಂಡಿರುತ್ತಾರೆ. ಅಂಥವರು ಮಾತ್ರ ಧೈರ್ಯ-ಸ್ಥೈರ್ಯಗಳಿಂದ ಕೇಳರಿಮೆಗೆ ಒಳಗಾಗದೇ ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ಮಾಡಿ ಮುಂದೇ ಬರುತ್ತಾರೆ. ಬಾಕಿ ಉಳಿದವರು ಭಾಷೆ, ಜಾತಿ, ಧೈರ್ಯಸ್ಥೈರ್ಯಗಳ ಅಂಗವಿಕಲತೆಯಿಂದ ಬಳಲುತ್ತಾರೆ ಎನ್ನಬಹುದು. ಅಥವಾ ಸಾಮಾಜಿಕ ಅಂಗವಿಕಲತೆ ಇರಬಹುದು. ಒಟ್ಟಿನಲ್ಲಿ ಇಂಥ ಅನೇಕ ನ್ಯೂನ್ಯತೆಗಳ ನಡುವೆ ಹೆಣ್ಣು ಕುಗ್ಗಿಸಿ ಕುಗ್ಗಿಸಿ ಕುಬ್ಜಳಾಗುತ್ತಿದ್ದಾಳೆ. ಈ ಒಂದು ಹೆಣ್ಣಿನ ಪರಿಸ್ಥಿತಿಯನ್ನು ಪುರುಷ ಸಮಾಜವು ತಪ್ಪಿಸಬೇಕಾಗಿದೆ. ಮಹಿಳೆಯರಿಗು ಪೂರ್ಣಪ್ರಮಾಣದಲ್ಲಿ ಪುಸ್ತಕಗಳನ್ನು ಓದುವಂಥ ವ್ಯವಸ್ಥೆಯು ಇಲ್ಲ. ಅವರು ನಮಗೆ ಮೀಸಲಾತಿಯನ್ನು ಕೊಡಿ ಎಂದು ಕೇಳುತ್ತಿರುತ್ತಾರೆ. ಅಂದರೆ ತಮಗೆ ಏನು ಬೇಕೆಂಬುದು ಇನ್ನೂ ನಮ್ಮ ಮಹಿಳೆಯರಿಗೆ ಸರಿಯಾಗಿ ಗೊತ್ತಿಲ್ಲ. ಇದು ಪುರುಷರಿಗೆ ಗೊತ್ತಿದ್ದರೂ ಕೂಡ ಹೇಳುವುದೇ ಇಲ್ಲ. ಮಹಿಳೆಯರು ಯಾವಾಗಲಾದರೂ ಕಲಿಯಲಿ, ಅದು ಇಷ್ಟೊಂದು ಶತಮಾನದ ಅವಧಿಯನ್ನು ಬೇಕಾದರೂ ತೆಗೆದುಕೊಳ್ಳಲಿ ಎಂಬ ಮನೋಭಾವನೆಯು ಅವರಲ್ಲಿರುತ್ತದೆ. ಇದು ಪುರುಷ ಪ್ರಧಾನ ಸಮಾಜದ ವೈಖರಿ ಎಂದು ಹೇಳಬಹುದೇ? ಒಡನೆ, ಮಸ್ತ, ಮೋಹವನ್ನು ಬಿಟ್ಟು, ಜ್ಞಾನಾರ್ಜನೆಯನ್ನು ಪಡೆದುಕೊಳ್ಳಿ, ಲೈಬ್ರರಿಗಳಿಗೆ ಹೋಗಿ ಒಳ್ಳೆಯ ಪುಸ್ತಕಗಳನ್ನು ಓದು, ನೀನು ಶಕ್ತಳಾಗು, ಮನುಷ್ಯಳಾಗು ಎನ್ನುವಂಥ ವಿಚಾರವನ್ನು ಯಾರೂ ಹೇಳುವುದಿಲ್ಲ, ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ ಯಾರೂ ಹೇಳುತ್ತಾ ಇಲ್ಲ. ವಿದ್ಯಾಭ್ಯಾಸದ ಮೂಲಕ ಪುಸ್ತಕಗಳಲ್ಲಿ ಅಲ್ಪಸ್ವಲ್ಪ ಹೇಳಿದರೂ ಅದು ದೊಡ್ಡ ಪ್ರಮಾಣದಲ್ಲಿ ಬದಲಾವಣೆಯಾಗಿಲ್ಲ. ನಮ್ಮ ಒಂದೇ ಒಂದು ಕೂಗು ಅಂದರೆ, ನಮಗೆ ಮೀಸಲಾತಿಯನ್ನು ಕೊಡಿ; ಯಾವುದಕ್ಕಾಗಿ ನಮಗೆ ಮೀಸಲಾತಿ? ಆ ಮೀಸಲಾತಿ ಇಂದಾದರೂ ನಾವು ಒಳ್ಳೆಯ ರೀತಿಯಲ್ಲಿ ರಾಜ್ಯ ಮಾಡುತ್ತಿದ್ದೇವೆಯೇ ಎಂದು ನೋಡಿದರೆ ಅದು ಕೂಡ ಸಮಾಧಾನಕರವಾಗಿಲ್ಲ. ಈ ವಿಷಯವನ್ನು ನಾವು ಇವೊತ್ತು ಆಲೋಚನೆ ಮಾಡಬೇಕಾಗಿದೆ. ಒಬ್ಬ ಗೃಹಿಣಿ, ಒಬ್ಬ ಗೃಹಸ್ಥ ಕೆಟ್ಟರೆ ಒಂದು ಮನೆ ಹಾಳಾಗುತ್ತದೆ. ಒಬ್ಬ ಶಾಸಕನು ಕೆಟ್ಟರೆ ಒಂದು ಕ್ಷೇತ್ರ ಹಾಳಾಗುತ್ತದೆ. ಒಬ್ಬ ಮಂತ್ರಿ ಕೆಟ್ಟರೆ ಒಂದು ರಾಜ್ಯವು ಹಾಳಾಗುತ್ತದೆ. ಹಾಗೆಯೇ ಮೇಲಕ್ಕೆಕ್ಕೆ ಹೋಗುತ್ತಾ ಹೋದಾಗ ದೇಶವೇ ಹಾಳಾಗಿ ಹೋಗುತ್ತದೆ. ಇಂಥ ವಿಚಾರಗಳ ಬಗ್ಗೆ ಒಂದು ಸೂಕ್ಷ್ಮ ಮಟ್ಟದ ಚರ್ಚೆ ಮಾಡುವ ಪ್ರಯತ್ನವನ್ನು ಹಾಕಿಕೊಳ್ಳಬೇಕು, ಆ ದಿಸೆಯಲ್ಲಿ ಪೂರಕವಾದ ಯೋಜನೆಗಳನ್ನು ಹಾಕಿಕೊಳ್ಳಬೇಕು. ನಿನ್ನೆಯ ದಿನ ಮಾನ್ಯ ಪುಟ್ಟಣ್ಣಯ್ಯನವರು ಒಂದು ವಿಚಾರವನ್ನು ಹೇಳಿದರು. ರಾಜ್ಯದಲ್ಲಿ ಹೊಸದಾಗಿ ಜಿಲ್ಲೆ, ತಾಲ್ಲೂಕು, ಪಂಚಾಯತಿಗಳನ್ನು ಮಾಡಿದಾಗ ವಿಜಾರಸೌಧದ ಎಂಜಿನಿಯರ್‌ಗಳನ್ನು ಹೇಳಿದ್ದಾರೆ. ಅವುಗಳಿಗೆ ಯಾವ ಮತ್ತು ಎಷ್ಟು ಆದಾಯ ಇದೆ? ನೀವು ಹಣ ಕೊಡುವುದರ ಮೂಲಕ ಅವುಗಳ ಏಳಿಗೆಯ ಲೆಕ್ಕಗಳೇನು? ಅದರಿಂದ ಎಷ್ಟು ಪ್ರಯೋಜನವಾಗುತ್ತಿದೆ? ಇಂಥ ಯಾವುದೇ ಒಂದು ಸಂಸ್ಥೆಯ ಆಗುಹೋಗುಗಳೇನು? ಅದರ ಆದಾಯಗಳೇನು? ನಾವು ಕೊಡುತ್ತಿರುವ ಹಣದ ಪ್ರಮಾಣ ಎಷ್ಟು? ಆ ಸಂಸ್ಥೆಗಳಿಗೆ ತಗಲುವ ಖರ್ಚುವೆಚ್ಚಗಳೆಷ್ಟು ಎಂಬಿತ್ಯಾದಿ ಅಗತ್ಯ ವಿಚಾರಗಳನ್ನು

ಪರಿಗಣನೆಗೆ ತೆಗೆದುಕೊಳ್ಳದೇ ಕಣ್ಣುಮುಚ್ಚಿಕೊಂಡು ಹುಟ್ಟುಹಾಕಿದರೆ ಏನಾಗುತ್ತದೆ ಎಂಬ ಮಾತುಗಳನ್ನು ಅವರು ಹೇಳಿದ್ದಾರೆ. ಹಾಗೆಯೇ ಮಹಿಳೆಯರಿಗೆ ಕೂಡ ಅವರ ಬಗ್ಗೆ ಯಾವುದೋ ಒಂದು ಕಾನೂನನ್ನು ತಂದು ಮಹಿಳೆಯರೇ ಈಗ ನಾವು ನಿಮಗೆ ಸಮಾಧಾನ ಪಡಿಸುವ ಕಾನೂನು ತಂದಿದ್ದೇವೆ, ನಮಗೆ ಜೈಕಾರ ಹಾಕಿ ಎಂದು ಪುರುಷಪ್ರಧಾನ ಸಮಾಜವು ಹೇಳುವುದು ಬೇಡ. ನೈತಿಕವಾಗಿ ನಾವು ಮಹಿಳೆಯರು ಮುಂದೆ ಬರಲು ಏನು ಮಾಡಬೇಕು? ಮಹಿಳೆಯರು ಈ ಸಮಾಜದಲ್ಲಿ ಸಮಾನವಾಗಿ ಬಾಳಲು ಏನೇನು ಕೆಲಸಕಾರ್ಯಗಳನ್ನು ನಾವು ಮಾಡಬೇಕು, ಯಾವ ಸೌಲಭ್ಯಗಳು ಬೇಕು, ಯಾವರೀತಿಯ ಶಿಕ್ಷಣವು ಅವಳಿಗೆ ಬೇಕು, ಎಂಬ ವಿಚಾರದ ಕುರಿತು ನಾವೆಲ್ಲರೂ ಕೂಡ ಆಲೋಚನೆ ಮಾಡಬೇಕಾಗಿದೆ. ಹೀಗೆ ಯೋಚನೆ ಮಾಡುವಾಗ ವರದಕ್ಷಿಣೆ, ಅತ್ಯಾಚಾರ, ಅನಾಚಾರ ಇವೆಲ್ಲವೂ ಹೇಳಹೆಸರಿಲ್ಲದೆ ತನ್ನಿಂದ ತಾನೇ ನಾಶವಾಗುತ್ತವೆ, ಅದನ್ನು ಯಾರೂ ಕತ್ತು ಹಿಡಿದು ನೂಕಲು ಆಗುವುದಿಲ್ಲ. ಒಂದು ಕಡೆ ಮಾನ್ಯ ಗೃಹಸಚಿವರೂ ಕೂಡ ಉಪಸ್ಥಿತರಿದ್ದ ಸಂದರ್ಭದಲ್ಲಿನ ಒಂದು ವಿಚಾರವನ್ನು ಹೇಳುತ್ತೇನೆ. ಒಬ್ಬ ಗೃಹಿಣಿ ತನ್ನ ಮಗಳ ಗಂಡ, ತನ್ನ ಪತ್ನಿಯನ್ನು ಇಟ್ಟುಕೊಳ್ಳಲು ಇಷ್ಟಪಡದೇ, ತನ್ನ ಪ್ರೇಯಸಿಯನ್ನು ಇಟ್ಟುಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾನೆ. ಇಂಥ ವಿಚಾರಗಳಿಗೆ ನೀವು ಏನು ಮದ್ದು ಕೊಡುತ್ತೀರಿ? ಇಲ್ಲಿ ಅವಳ ಮನಸ್ಸು ನೋಡಿ ಹೇಗಿದೆ? ಅವನು ಪ್ರೇಯಸಿಯನ್ನು ಮೆಚ್ಚಿಕೊಂಡಿದ್ದಾನೆ. ಏನು ಮಾಡುತ್ತೀರಿ? ಇಲ್ಲಿ ಹೆಂಡತಿಯಾದವಳಿಗೆ ಏನು ಮಾಡಬೇಕೆಂಬುದನ್ನು ನೋಡಬೇಕು. ಸಪ್ತ ಪದ್ಧಿಯ ಕೂಡ ಪ್ರೇಮಿಗಳಿಬ್ಬರು ಬಂದರು. ನಾವು ಪರಸ್ಪರರು ಒಂದಾಗಿರುತ್ತೇವೆ, ದಿಟವಿಲ್ಲ, ಅಂದರೆ ಸತ್ತೇ ಹೋಗುತ್ತೇವೆ ಹೊರತು ಬೇರೆಯಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅವರಿಗೆ ಏನು ಮಾಡುತ್ತೀರಿ? ಇವೆಲ್ಲವನ್ನೂ ನೋಡಿದಾಗ ಕೆಲವು ವಿಚಾರಗಳ ಮಹತ್ವ ಮೇಲೆ ನಿರ್ಧಾರವಾಗುತ್ತವೆ ಎಂದು ನೋಡಬಹುದು. ಅವುಗಳನ್ನು ಯಾವ ಕಾನೂನುಗಳೂ ಮುಟ್ಟಲು ಆಗುವುದಿಲ್ಲ. ಹೀಗೆ ಕಾನೂನಿನ ಚೌಕಟ್ಟಿನ ಹೊರಗಿರುವಂಥ ವಿಷಯಗಳನ್ನು ಮನುಷ್ಯತ್ವದ ಮೂಲಕವೇ ಕಂಡುಹಿಡಿಯಬೇಕಾಗಿದೆ. ಮನುಷ್ಯತ್ವದ ಮೂಲಕವೇ ಅದನ್ನು ಕಂಡುಕೊಂಡು ಏನಾದರೊಂದು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಇನ್ನೊಂದು ಮಾತು ಪುರಾಣಗಳ ಗಾದೆಯಲ್ಲಿ ಬರುತ್ತದೆ ಅದನ್ನು ತಾಯಂದಿರುಗಳೂ ಕೂಡ ಒಪ್ಪುತ್ತೀರಿ. ತಾಯಂದಿರು ತುಂಬಾ ಚಿಂತನಶೀಲರು ಮತ್ತು ವಿಚಾರವಾದಿಗಳು ಆಗಿದ್ದೀರಿ. ಆದ್ದರಿಂದ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. "ಸ್ತ್ರೀ ಒಂದು ಪುಸ್ತಕ, ಪದಾರ್ಥ"-ಎಂದು ಶಾಸ್ತ್ರದಲ್ಲಿ ಹೇಳುತ್ತದೆ. "ಅವಳು ಚಂಚಲೆ, ಖಚ್ಚಿದಂತೆ ಹಾರಾಡುವವಳು, ಬಿಡುವಾಗಿರುವಂತೆ ಆಕ್ಷರಳು"-ಎಂದು ರಾಮಾಯಣ ಹೇಳುತ್ತದೆ. "ಸ್ತ್ರೀ ಎಲ್ಲಾ ಕೆಡುಕಿನ ಮೂಲ. ಸ್ತ್ರೀಯರು ತಪ್ಪಾಶ್ಯವನ್ನು ಎಂದೂ ಅಳ್ಳಿಸಬಾರದು"-ಎಂದು ಮನುಸ್ಮೃತಿಯು ಹೇಳುತ್ತದೆ. ಪುರುಷರಂತೆ ನಿಯಮಗಳನ್ನು ಪಾಲಿಸುವುದು ಅವಳಿಗೆ ಹೆಚ್ಚಿನ ತಪ್ಪ ಎಂದು ಯೂರೋಪಿನ ಒಬ್ಬ

ಧರ್ಮಬೋಧಕ ಹೇಳುತ್ತಾನೆ. "ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ, ಅಜ್ಞಾನವೂ ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುತ್ತದೆ"-ಎಂದು ಚೀನೀ ಗಾದೆ ಮಾತು ಹೇಳುತ್ತದೆ. ಇಂಥ ಮಾತುಗಳನ್ನು ಕೇಳಿದ ನಾವು ಎಲ್ಲಿ ಹೋಗಿ ತಲೆಯನ್ನು ಚಚ್ಚಿಕೊಳ್ಳಬೇಕು ಎಂದು ಮಾನ್ಯ ಅಧ್ಯಕ್ಷರೇ ಹೇಳಬೇಕು. ಅಂದರೆ ಎಷ್ಟೆಷ್ಟು ಅಜ್ಞಾನಿಯಾಗಿರುತ್ತಾಳೋ ಅಷ್ಟು ಸುಂದರಳಾಗಿರುತ್ತಾಳೆ ಎಂದು ಶತಮಾನಗಳಿಂದ ಈ ಜನರು ಹೇಳಿಕೊಂಡು ಬಂದಿದ್ದಾರೆ. ಇವೊತ್ತು ಜ್ಞಾನಿಯಾಗಿರಬೇಕು, ನಾಗರತ್ನಮ್ಮನವರ ತರಹ ಸ್ಪೀಕರ್ ಸ್ಥಾನದಲ್ಲಿ ಹೋಗಿ ಕುಳಿತು ಕಾರ್ಯನಿರ್ವಹಿಸಬೇಕು ಎಂದು ಮಹಿಳೆಗೆ ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಎಲ್ಲೋ ಒಬ್ಬರು ಇಂದಿರಾಗಾಂಧಿ, ಒಬ್ಬರು ನಾಗರತ್ನಮ್ಮ ಎಲ್ಲೋ ಒಬ್ಬ ಪ್ರಧಾನಿಯಾಗಿದ್ದರೆ ಅಲ್ಲಿಯೂ ಕೂಡ ಬಹಳ ಬುದ್ಧಿವಂತಿಕೆಯಿಂದ ಇವರು ಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ಆದರೆ ಅವರು ತಮ್ಮ ಕೃತ್ವತ್ವಶಕ್ತಿಯಿಂದಾಗಿ ಬಹಳ ಮೇಲಟ್ಟದಲ್ಲಿದ್ದರು. ಅವರಿಗೆ ಪುರುಷರ ಸಮಾನವಾಗಿ ವಿದ್ಯೆಬುದ್ಧಿಗಳು ಸಿಕ್ಕಿದವು. ಹಾಗಾಗಿ ಅವರುಗಳು ಬಹಳ ಚೆನ್ನಾಗಿ ಆಡಳಿತವನ್ನು ರಾಜಕೀಯವನ್ನು ಮಾಡಲು ಸಾಧ್ಯವಾಯಿತು. ಹಿಂದೆ ಹೆಣ್ಣುಮಕ್ಕಳಿಗೆ, ರಾಜವಂಶಜರಲ್ಲಿ ಕತ್ತಿವರಸೆಗಳನ್ನು ಕಲಿಸಿಕೊಡುತ್ತಾ ಇದ್ದರಂತೆ. ಇಂಥ ಶಿಕ್ಷಣ ಪದ್ಧತಿಯು ಅವರುಗಳನ್ನು ಮುಂದೆ ರಾಣಿಯರಾಗಿ ಮಾಡಲು ಸಾಧ್ಯವಾಯಿತು. ಇವೊತ್ತು ನಾವು ಪುರುಷ ರಾಜಕಾರಣಿಗಳಂತೆ ಇರಲು ಸೂಕ್ತ ಶಿಕ್ಷಣವನ್ನು ನಮಗೆ ನೀಡಿಲ್ಲ. ಅದನ್ನು ವಿಚಾರ ಮಾಡಬೇಕಾಗಿದೆ. ಆದ್ದರಿಂದ ಎಲ್ಲಾ ಹಳೆಯ ಗಾದೆಗಳೇನಿದ್ದಾವೆ, ಹಳೆಯ ಪುಸ್ತಕಗಳೇನಿದ್ದಾವೆ, ಅವುಗಳೆಲ್ಲವೂ ಸತ್ಯ ವಿಚಾರಗಳೇ ಎಂಬುದಾಗಿ ಅವುಗಳನ್ನು ಒಪ್ಪಿಕೊಳ್ಳಲೇಬೇಕೆಂಬ ಮಟ್ಟಕ್ಕೆ ನಾವು ಬರುತ್ತಾ ಇದ್ದೇವೆ. ನಾವು ಎಷ್ಟೇ ಒಪ್ಪಿಕೊಂಡರೂ ಕೂಡ ಕೀಳು ಭಾವನೆಗಳನ್ನು ಹೊಡೆದಟ್ಟುವುದಕ್ಕೆ ಪುರುಷರಿಂದ ಅದು ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಮಹಿಳೆಯರಿಗೆ ನಾನು ಹೇಳುವಂಥಾದ್ದು ಇಷ್ಟೇನೇ ರಾಜಕೀಯದಲ್ಲಿ ಎಲ್ಲಾ ಹೆಣ್ಣುಮಕ್ಕಳಿಗೆ ಟಿಕೆಟ್ ಕೊಡಿ ಎಂದು ಕೇಳುವುದಿಲ್ಲ. ಎಲ್ಲಾ ಹೆಂಗಸರಿಗೂ ನೌಕರಿ ಕೊಟ್ಟು ಅಡಿಗೆಮನೆಯಿಂದ ಹೊರಗಿಟ್ಟುಬಿಡಿ ಎಂದು ಹೇಳುವುದಿಲ್ಲ. ಹೆಣ್ಣುಮಕ್ಕಳು ಹೆರುವುದು ಬೇಡ, ಅವಳು ಸೀರೆ ಉಡುವುದು ಬೇಡ ಅವಳು ಮಹಿಳೇನೇ ಅಲ್ಲ ಅನ್ನುವ ರೀತಿ ಇರಲಿ ಎಂದು ನಾವು ಖಂಡಿತವಾಗಿ ಹೇಳುವುದಿಲ್ಲ. ಹೆಣ್ಣುತನವನ್ನು ನಾವು ಬಹಳ ಒಪ್ಪಿಕೊಂಡಿದ್ದೇವೆ, ಅಧ್ಯಕ್ಷರೇ, ಹೆಣ್ಣಿಗೆ ತನ್ನ ಹೆಣ್ಣುತನದ ಬಗ್ಗೆ ಹೆಮ್ಮೆ ಗೌರವ ಇದೆ. ಪುರುಷನಿಗೆ ತನ್ನ ಪೌರುಷದ ಬಗ್ಗೆ ಹೇಗೆ ಗೌರವ ಹೆಮ್ಮೆ ಇದೆಯೋ ಅದೇ ರೀತಿ ಹೆಣ್ಣಿಗೆ ನೀನು ಗಂಡು ಎಂದರೆ ಬಹಳ ಬೇಜಾರಾಗುತ್ತದೆ. ಹೆಣ್ಣು ಹೆಣ್ಣಾಗಿಯೇ ಇರಬೇಕು. ಆದರೆ ಹೆಣ್ಣಿಗೂ ಅವಳು ಮನುಷ್ಯಳೆಂದು ಗೌರವಿಸುವ ಪದ್ಧತಿ ಬೆಳೆಯಬೇಕು. ರಾತ್ರಿಹೊತ್ತಿನಲ್ಲೂ ಹೆಣ್ಣು ಒಬ್ಬಳೇ ತಿರುಗಾಡಿ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುವ ಸಮಾಜ ಬರಬೇಕಾದರೆ ಅಲ್ಲಿ ಪುರುಷನ ಸಹಕಾರ ಬೇಕು. ನಮ್ಮಲ್ಲಿ ಕೆಲವರು ಕರಾಟೆ ಕಲಿತಿದ್ದೇನೆ ಎಂದು ಒಬ್ಬೊಬ್ಬರೇ ಹೋಗುತ್ತಾರೆ. ಆದರೆ ಐದಾರು ಗೂಂಡಾಗಳು ಬಂದರೆ ಕರಾಟೆ ಕಲಿತರೂ ಉಪಯೋಗವಾಗುವುದಿಲ್ಲ. ಆದ್ದರಿಂದ ಹೆಣ್ಣಿಗೆ

ರಕ್ಷಣೆ ಕೊಡುವುದು ಹೆಣ್ಣಿನದಷ್ಟೇ ಕರ್ತವ್ಯವಲ್ಲ. ಹೆಣ್ಣು ಮಾನಸಿಕವಾಗಿ ತನ್ನನ್ನು ತಾನೇ ರಕ್ಷಣೆ ಮಾಡಿಕೊಳ್ಳಬಹುದು, ಆದರೆ ಗಂಡು ಎನಿಸಿಕೊಳ್ಳುವಮನಲ್ಲಿ ಸ್ವಲ್ಪಮಟ್ಟಿನ ಹೆಣ್ಣಿನಶೀಲ ಇರಬೇಕು. ಅದಕ್ಕೇನೇ ಗಂಡು ಹೆಣ್ಣುಗಳು ಸೇರಿದ ರೀತಿ ಅರ್ಧನಾರೀಶ್ವರ ಕಲ್ಪನೆ ಹಿಂದೂಗಳಲ್ಲೇನಿದೆ ಆ ಕಲ್ಪನೆಯನ್ನು ನಾವೆಲ್ಲರೂ ಗೌರವಿಸಬೇಕು. ಅರ್ಧನಾರೀಶ್ವರ ಅಂದರೆ ನಾಮ್ಮಾರೂ ನಗುವುದಿಲ್ಲ. ಅಂದರೆ ಗಂಡಿನಲ್ಲಿ ಹೆಣ್ಣಿನ ಗುಣ, ಹೆಣ್ಣಿನಲ್ಲಿ ಗಂಡಿನ ಗುಣ ಇದ್ದು ಪರಸ್ಪರ ಸಮಾನತೆ ಸಾರುವಂತಹ ಕಲ್ಪನೆ ಏನಿದೆ ಆ ಪರಂಪರೆಯನ್ನು ಮುಂದೆ ನಾವು ಉಳಿಸಿಕೊಂಡು ಹೋಗಬೇಕಾಗಿದೆ. ದೇಶದಲ್ಲೂ ಅರ್ಧ ಗಂಡು ಅರ್ಧ ಹೆಣ್ಣು ಇರುವುದರಿಂದ ಅದನ್ನೂ ಅರ್ಧನಾರೀಶ್ವರ ಪದ್ಧತಿಗೆ ಹೋಲಿಸಿ ಎಲ್ಲಾ ಸೌಲಭ್ಯಗಳು ಪುರುಷರಿಗೆ ಸಿಗುವ ರೀತಿ, ಅಂದರೆ ಕೆಲವು ವಿಷಯದಲ್ಲಿ ಮಹಿಳೆ ತಾನೇ ಬೇಡ ಅನ್ನುತ್ತಾಳೆ ಆದರೆ ಯಾವುದೋ ಟಿಕೆಟ್ ಕೊಡುವ ಸಂದರ್ಭದಲ್ಲಿ ತಾವೇನು ಮಾಡುತ್ತೀರಿ ಅವಳು ಕೇವಲ ಹೆಣ್ಣು ಎನ್ನುವ ಕಾರಣಕ್ಕಾಗಿ ಅವಳನ್ನು ದೂರ ಇಡುವುದು ಬೇಡ. ಅವಳಿಗೆ ಅರ್ಹತೆ ಇದ್ದರೆ ಕೊಡಿ. ಅಲ್ಲದಿದ್ದರೆ ಹೆಣ್ಣಾಗಿ ಹೇಗೆ ಭೂಮಿ ಮೇಲೆ ಬದುಕಬೇಕೋ ಹಾಗೆ ಬದುಕುತ್ತಿರುತ್ತಾಳೆ. ಅವಳು ಯಾವತ್ತಿಗೂ ದ್ರೋಹ ಬಗೆಯಲು ಹೋಗುವುದಿಲ್ಲ. ಗಂಡು ವಂಚನೆಯಂಥ ಕೆಲವು ವಿಷಯವನ್ನು ಕಲಿಯುತ್ತಾನೆ ಆದರೆ ಹೆಣ್ಣು ಅಷ್ಟು ವಂಚಕಿಯಲ್ಲ. ಹೆಣ್ಣೇ ಕೆಟ್ಟವಳು ಎಂದು ನೀವೇನು ಹೇಳುತ್ತೀರಿ ಅದನ್ನು ನಾನು ಖಂಡಿಸುತ್ತೇನೆ. ಗಂಡಿನಲ್ಲಿರುವ ನೀಚಗುಣಗಳು ಅವಳಲ್ಲೂ ಇವೆ. ಒಳ್ಳೆಯ ಗುಣಗಳೂ ಆವಳಲ್ಲಿವೆ ಎಂದು ನಾವು ಒಪ್ಪಿಕೊಳ್ಳುವ ಮೂಲಕ ಸಮಾನತೆಗೆ ಪ್ರೋತ್ಸಾಹ ಕೊಡಬೇಕು. ಈ ಸಮಾನತೆ ಬಂದ ಮೇಲೆ ಇರುವ ಅನಿಷ್ಟಗಳು ದೂರವಾಗುತ್ತವೆ. ನನಗೆ ಅವಕಾಶಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀಮತಿ ಎನ್. ಜ್ಯೋತಿರೆಡ್ಡಿ (ಗೌರಿಬಿದನೂರು) :— ಅಧ್ಯಕ್ಷರೇ, ಸ್ವಾತಂತ್ರ್ಯದ 50 ವರ್ಷದ ನಂತರ ಮೊಟ್ಟಮೊದಲು ಬಾರಿಗೆ ವಿಧಾನಸಭೆಯಲ್ಲಿ ವರದಕ್ಷಿಣೆ ಪೀಡಿತ ಮಹಿಳೆಯರ ನೋವು ಹೇಳಲು ಅವಕಾಶ ಮಾಡಿಕೊಟ್ಟ ತಮಗೂ, ನಮ್ಮ ಸರ್ಕಾರಕ್ಕೂ, ಗೃಹಸಚಿವ ಶ್ರೀ ಸಿಂಧ್ಯಾ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಪೀಡಿತ 49 ರಷ್ಟಿರುವ ಹೆಣ್ಣು ಕುಲ ಬರುತ್ತಾ ಬರುತ್ತಾ ಎಕ್ಸ್‌ಟಿಂಕ್ಟ್ ಆಗುತ್ತದೆ ಎಂದು ಹೇಳುವುದರಲ್ಲಿ ತಪ್ಪಿಲ್ಲ ಎಂದು ಹೇಳುತ್ತಿದ್ದೇನೆ. ಕಾರಣ ಇಷ್ಟೇ ಅಂಕಿಅಂಶಗಳ ಪ್ರಕಾರ.

ಅಧ್ಯಕ್ಷರು :— ಎಕ್ಸ್‌ಟಿಂಕ್ಟ್ ಆಗುವುದಿಲ್ಲ, ಹಾಗಾದರೆ ಅದು ಜೀವನದ ಅಂತಿಮ. ಎಕ್ಸ್‌ಟಿಂಕ್ಟ್ ಆಗಬಾರದು. ಅಮಾಬಾದಿಂದ ಇವತ್ತಿನ ಮಾನವ ವಿಕಾಸವಾಗುವುದಕ್ಕೆ 60 ಲಕ್ಷ ವರ್ಷ ಹಿಡಿದಿದೆ. ಹೆಣ್ಣು ಎಕ್ಸ್‌ಟಿಂಕ್ಟ್ ಆದರೆ ಪ್ರಪಂಚ ಅಲ್ಲಿಗೇ ಕ್ಲೋಸ್ ಆಗುತ್ತದೆ. ಆಟಲೀಸ್ಟ್ ನಾವೀರುವವರೆಗಾದರೂ ಆಗುವುದು ಬೇಡ.

ಶ್ರೀಮತಿ ಎಸ್. ಜ್ಯೋತಿರೆಡ್ಡಿ :— ಆಗಬಹುದು ಎಂದು ಹೇಳುತ್ತಿರುವುದು. ಕಾರಣ, ಸುಮಾರು ವರದಕ್ಷಿಣೆ ಮತ್ತು ಲೈಂಗಿಕ ಕಿರುಕುಳದಿಂದ 1200 ಸಾವು ಆಗುತ್ತಿವೆ

ವರ್ಷಕ್ಕೆ. ಎರಡನೆಯದು ಪ್ರಮೀಳಾ ಹೇಳಿದರು, ಭ್ರೂಣಹತ್ಯೆ, ಹೊಟ್ಟೆಯಲ್ಲಿರುವ ಹೆಣ್ಣುಮಗುವನ್ನು ತೆಗೆಯುವ ವ್ಯವಸ್ಥೆ ನಾವು ನೋಡುತ್ತಿದ್ದೇವೆ. ಹೆಣ್ಣುಮಗು ಹುಟ್ಟಿದ ಮೇಲೆ ಕೇರಳ ತಮಿಳುನಾಡಿನಲ್ಲಿ ವಿಷ ಕುಡಿಸಿ ಸಾಯಿಸುವ ವರದಿಗಳನ್ನೂ ನೋಡುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ಎಕ್ಸ್‌ಟೆಂಶ್ಡ್ ಆದರೂ ಆಶ್ಚರ್ಯಪಡಬೇಕಾದ ವಿಷಯವಲ್ಲ. ವರದಕ್ಷಿಣೆ ಸಾವಿಗೆ ಕಾರಣಗಳೇನೇ ಇರಬಹುದು, ಹಿಂದೆ ಮಾತೃಪ್ರಧಾನ ಸಮಾಜವಿದ್ದಾಗ ತನ್ನದೇ ಆದ ಗುಂಪು ಬೆಳೆಸಲು ಹೆಣ್ಣು ಉಪಕಾರ ಮಾಡುತ್ತಿದ್ದಳು. ಆದರೆ ಪಿತೃಪ್ರಧಾನ ವ್ಯವಸ್ಥೆ ಬಂದಾಗ ಗಂಡು ಸ್ವಾರ್ಥದಿಂದ ಹಣ ಕೊಟ್ಟು ಜೀತದಾಳಾಗಿ ಹೆಣ್ಣನ್ನು ತೆಗೆದುಕೊಳ್ಳುವ ಪದ್ಧತಿ ಬಂತು. ಕನ್ಯಾಶುಲ್ಕ ಪದ್ಧತಿ ಬರುವ ಸಂದರ್ಭದಲ್ಲಿ ಅತ್ತೆಮನೆಯವರು ಜೀತದಾಳಾಗೇ ಆ ಹೆಣ್ಣನ್ನು ಕರೆತರುತ್ತಿದ್ದರು. ಮೊಟ್ಟಮೊದಲಿಗೆ ಹೆಣ್ಣಿಗೆ ಸ್ತ್ರೀಧನ ಎಂದು ಕೊಟ್ಟು ಹೆಣ್ಣಿಗೆ ಮದುವೆಮಾಡುವ ಪದ್ಧತಿ ಬಂದಾಗ ಆ ಪರಿಸ್ಥಿತಿಯಲ್ಲೂ ಆ ಹೆಣ್ಣಿಗೆ ಆ ಸ್ತ್ರೀಧನವೂ ಕೊಳ್ಳುವಂತಹ ಹಿನ್ನೆಲೆಯಲ್ಲಿ ವರದಕ್ಷಿಣೆ ಪದ್ಧತಿ ಬಂತು. ಇದಕ್ಕೆ ಬಲಿಯಾಗುತ್ತಿರುವ ಹೆಣ್ಣಿನ ಉದ್ಧಾರ ಮಾಡಬೇಕು ಎಂದು ಯೋಚನೆ ಮಾಡಿದಾಗ ಸಮಾಜದಲ್ಲೇ ಒಂದು ಬದಲಾವಣೆ ತರಬೇಕಾಗಿದೆ ಎಂದು ವಿಚಾರ ಮಾಡಬೇಕಾದ ಹಂತದಲ್ಲಿ ನಾವಿದ್ದೇವೆ. 1997ರಲ್ಲಿ 217 ಕೇಸುಸ್ ವರದಿಯಾದರೂ 176 ಕೇಸುಸ್‌ನಲ್ಲಿ ಚಾರ್ಜ್‌ಶೀಟಾಗಿ ಕನ್‌ವಿಕ್ಷನ್ ಆದದ್ದು ಕೇವಲ 4ಕ್ಕೆ ಮಾತ್ರ. ಇದರಿಂದ ಏನು ಗೊತ್ತಾಗುತ್ತದೆ ಅಂದರೆ ಪ್ರಕರಣ ದಾಖಲಿಸುವುದರಲ್ಲೇ ವಿಳಂಬ ಅಥವಾ ಅನ್ಯಾಯವಾಗುತ್ತಿದೆ ಅಥವಾ ತನಿಖೆ ಹಂತದಲ್ಲಿ ದೋಷ ಕಂಡುಬಂದು ವಜಾ ಮಾಡುತ್ತಿದ್ದಾರಾ ಅಥವಾ ನ್ಯಾಯಾಂಗದಲ್ಲಿ ತುಂಬಾ ವಿಳಂಬವಾಗುತ್ತಿದೆಯೇ ಎಂದು ವಿಚಾರ ಮಾಡಿದಾಗ ಕೋರ್ಟಿನಲ್ಲಿ ವಿಚಾರಣೆಗೆ ತೆಗೆದುಕೊಳ್ಳಲು 4-5-6ವರ್ಷ ಹಿಡಿಯುತ್ತಿರುವುದರಿಂದ ಸಾಕ್ಷಿಗಳು ಎಂದು ಏನು ಪ್ರೊಡ್ಯೂಸ್ ಮಾಡಿರುತ್ತೇವೆ ಅವರು ಹಣಕ್ಕೆ ಅಥವಾ ಒತ್ತಡಕ್ಕೆ ಮಣಿದು ಸಾಕ್ಷಿ ಕೊಡದಿರುವುದನ್ನು ತುಂಬಾ ಕೇಸುಸ್‌ನಲ್ಲಿ ಅಕ್ಷುಟ್ ಆಗುವುದನ್ನು ನೋಡುತ್ತಿದ್ದೇನೆ. ಇದಕ್ಕೆ ಕಾರಣ ಏನೇ ಆದರೂ ಇಂತಹ ಪ್ರಕರಣಗಳನ್ನು ಕೋರ್ಟಿನಲ್ಲಿ ವಿಚಾರಣೆ ಮಾಡಲಿಕ್ಕೆ ಇಲ್ಲ ಪೋಲಿಸ್ ಹಂತದಲ್ಲಿ ಚಾರ್ಜ್‌ಶೀಟ್ ಮಾಡಲಿಕ್ಕೆ ಆದಷ್ಟು ಕಡಿಮೆ ಅವಧಿ ತೆಗೆದುಕೊಂಡಾಗ ಅದರಿಂದ ನಮಗೆ ಸ್ವಲ್ಪಮಟ್ಟಿನ ನ್ಯಾಯ ಸಿಕ್ಕಬಹುದು. ಎರಡನೆಯದು ವರದಕ್ಷಿಣೆ ಪ್ರಕರಣಗಳು ಅಂಕಿಅಂಶಗಳ ಪ್ರಕಾರ ನಗರಗಳಲ್ಲಿ ಜಾಸ್ತಿ ಆಗುತ್ತಿವೆ. 1977 ರಲ್ಲಿ ಬೆಂಗಳೂರು ಸುತ್ತಮುತ್ತಲಲ್ಲಿ 714 ಇದ್ದರೆ ಇಡೀ ಕರ್ನಾಟಕದಲ್ಲಿ 217 ಆಗಿವೆ. ಇದಕ್ಕೆ ಕಾರಣವೇನೆಂದು ನಾವು ವಿಚಾರಿಸಿದಾಗ ಗ್ರಾಮೀಣ ಪ್ರದೇಶಗಳಲ್ಲಿ ಆಡಂಬರ ಜೀವನಕ್ಕೆ ಬಯಸುವ ಯುವಕರು ಕಡಿಮೆ ಇದ್ದಾರೆಂದು ಗೊತ್ತಾಗುತ್ತದೆ.

12.50 ಪಿ.ಎಂ.

ಚೇರ್ಮನ್ (ಡಾ: ಎಂ.ಪಿ. ಕರಿಣ) ರವರು ಅಧಿಕಾರ ಪೀಠವನ್ನಲಂಕರಿಸಿದರು.

ಈ ವರದಕ್ಷಿಣೆ ಫ್ರೀಯಾಗಿ ಬರುವ ಹಣ ಕಷ್ಟಪಟ್ಟು ಸಂಪಾದನೆ ಮಾಡಿದ ಹಣವಲ್ಲ. ಆ ಹಣದಿಂದ ಆಡಂಬರ ಜೀವನವನ್ನು ನಡೆಸಬೇಕು ಎನ್ನುವ ಒಂದು ಆಸೆ ಆಕಾಂಕ್ಷೆ ಯುವಕ ಸಮಾಜ ಹಳ್ಳಿಗಾಡಿನಲ್ಲಿದೆ. ಎರಡನೆಯದು ಯಾವುದೇ ಹಳ್ಳಿಯಲ್ಲಿ ವರದಕ್ಷಿಣೆಗಾಗಿ ಒಬ್ಬ ಹೆಣ್ಣುಮಗಳಿಗೆ ಕಿರುಕುಳವನ್ನು ಕೊಡುತ್ತಿರುವಾಗ ಆ ಹಳ್ಳಿಯ ದೊಡ್ಡವರು ಎಂದು ಏನು ಹೇಳುತ್ತಾರೆ, ದೊಡ್ಡ ಮನೆತನದವರೇ ಆಗಿರಲಿ, ಎಲ್ಲಾ ಪಕ್ಷಗಳ ನಾಯಕರೇ ಆಗಿರಲಿ ಅವರು ಮಧ್ಯಂತರ ಪ್ರವೇಶ ಮಾಡಿ ಅದನ್ನು ತಡೆಗಟ್ಟುವ ವ್ಯವಸ್ಥೆಯನ್ನೂ ಸಹಾ ಮಾಡುತ್ತಿರುವುದರಿಂದ ಈ ಹಳ್ಳಿಗಾಡಿನಲ್ಲಿ ಇಂಥವುಗಳು ಸ್ವಲ್ಪ ಕಡಿಮೆಯಾಗುತ್ತಿರುವ ವಿಷಯವನ್ನೂ ಸಹ ನಾವು ಯೋಚನೆ ಮಾಡಬೇಕಾಗಿದೆ. ಇದಕ್ಕೆ ನಾವು ತೆಗೆದುಕೊಳ್ಳಬೇಕಾಗಿರುವ ಕ್ರಮಗಳೇನು ಎಂದು ಹೇಳಿದಾಗ ಜಾಯಿಂಟ್ ಹೌಸ್ ಕಮಿಟಿ ಎಂದು ಮಾಡಿ ಅದರ ಮುಖಾಂತರ ಏನು ಈಗ ಪ್ರಕರಣಗಳಿವೆ, ಅದನ್ನು ಅದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಎರಡನೆಯದು ಒಂದು ಅಡ್ವೈಸರಿ ಬೋರ್ಡ್ ಎಂದು ಮಾಡಿ ಕೆಲವು ಮುಖಂಡರುಗಳನ್ನು ಆ ಪ್ರಾಂತ್ಯದ ಸೋಷಿಯಲ್ ವರ್ಕರ್ಸ್‌ನ್ನು, ಎನ್.ಜಿ.ಓ.ಗಳನ್ನು, ಯಾರ್ಯಾರು ಒಳ್ಳೆಯ ಅಧಿಕಾರಿಗಳು ಎಂದು ಇದ್ದಾರೆ, ಅಧಿಕಾರಿಗಳಲ್ಲೂ ಕೆಲವರು ಮೊನ್ನೆ ನಾವು ಕೇಳಿದಾಗ ತುಂಬಾ ಜನರು ಕೆಲವು ಆಫೀಸರ್‌ಗಳು ಅನ್ಯಾಯ ಮಾಡಿದ್ದಾರೆ. ಕೆಲವರು ನ್ಯಾಯ ಮಾಡಿಕೊಟ್ಟರು ಎಂದು ಹೇಳುವ ಅಧಿಕಾರಿಗಳು ಇದ್ದಾರೆ ಎನ್ನುವ ಭಾವನೆಯನ್ನೂ ಸಹಾ ಅವರು ವ್ಯಕ್ತಪಡಿಸಿದ್ದಾರೆ. ಅದರಿಂದ ಯಾರು ಒಳ್ಳೆಯ ಚರಿತ್ರೆಯನ್ನು ಹೊಂದಿರುವ ಆಫೀಸರುಗಳನ್ನು ಎಲ್ಲರನ್ನೂ ಸೇರಿಸಿ ಒಂದು ಕಮಿಟಿ ಎಂದು ಮಾಡಿ ಆ ಕಮಿಟಿ ಮುಖಾಂತರ ಇಂಥ ಪ್ರಕರಣಗಳನ್ನು ಅದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಎರಡನೆಯದು ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೂ ಮಹಿಳಾ ಪೋಲೀಸ್ ಠಾಣೆಗಳನ್ನು ಓಪನ್ ಮಾಡಿದರೆ ಮಹಿಳೆ ತನಗಾದಂಥ ಅನ್ಯಾಯವನ್ನು ನೇರವಾಗಿ ಆ ಮಹಿಳಾ ಅಧಿಕಾರಿಗಳಿಗೆ ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದನ್ನು ತಾವು ಮಾಡಬೇಕಾಗುತ್ತದೆ. ಎರಡನೆಯದು ಈ ತಹಶೀಲ್ದಾರ್‌ರವರು ಬಂದು ಪಂಚನಾಮೆ ಮಾಡುವುದಕ್ಕೆ ಹೆಣ್ಣುಮಗಳು ಸತ್ತುಹೋದಾಗ ಬರುತ್ತಾರೆ, ಆ ತಹಶೀಲ್ದಾರ್ ತನ್ನ ದಿನನಿತ್ಯದ ಕೆಲಸಕಾರ್ಯಗಳನ್ನ ಅದಷ್ಟು ಬೇಗ ಅಲ್ಲಿಗೆ ಹೋಗಲಿಕ್ಕೆ ಅವಕಾಶ ಸಿಗುತ್ತಿಲ್ಲ. ಅದರಿಂದಾಗಿ ಇದಕ್ಕೆ ಒಬ್ಬ ತಹಶೀಲ್ದಾರ್‌ರವರನ್ನು ಅಟ್‌ಲೀಸ್ಟ್ ಒಂದು ಸಬ್ ಡಿವಿಜನ್ ಗಾದರೂ ಒಬ್ಬೊಬ್ಬ ತಹಶೀಲ್ದಾರ್‌ರವರನ್ನು ನೇಮಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಾ ಟೋಟಲ್ ಆಗಿ ವಿಮೆನ್ ಮೆಂಟಾಲಿಟಿ ಏನಿದೆ, ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್‌ನಲ್ಲಿ ಹುಟ್ಟಿ ಬೆಳೆದಿರುವ ಕಾಂಪ್ಲೆಕ್ಸ್ ಮಹಿಳೆಗೆ ಏನು ಇದೆ, ಅದನ್ನು ಹೋಗಲಾಡಿಸಲಿಕ್ಕೆ ಮಹಿಳೆಗೆ ಅವೇರ್‌ನೆಸ್ ಕ್ಯಾಂಪ್‌ನ್ನು ಮಾಡಬೇಕಾಗುತ್ತದೆ. ಮಹಿಳೆಗೆ ತಕ್ಷಣೇ ಆದ ನ್ಯಾಯವನ್ನು ಕೇಳಲಿಕ್ಕೆ ಅಧಿಕಾರದ ಹಕ್ಕು ಇದೆ ಎನ್ನುವ ಒಂದು ಜಾಗೃತಿ ಮಾಡುವ ವ್ಯವಸ್ಥೆಯನ್ನು ಮಾಡಿ ಆ ಮಹಿಳೆಯಲ್ಲಿ ಆತ್ಮವಿಶ್ವಾಸವನ್ನು ಮತ್ತೆ ಆತ್ಮಗೌರವವನ್ನು

ಬೆಳೆಸುವ ವ್ಯವಸ್ಥೆಯನ್ನು ಸರ್ಕಾರ ಪಾಂಪ್ಲೆಟ್‌ಗಳಿಂದಾಗಲಿ ಇಲ್ಲ ಟಿವಿ ಮುಖಾಂತರವಾಗಲಿ, ಮಾಧ್ಯಮಗಳ ಮುಖಾಂತರವಾಗಲಿ ಪ್ರಚಾರ ಆಂದೋಲನ ಮಾಡಿ ಆ ಮಹಿಳೆಗೆ ತನ್ನದೇ ಆದ ಒಂದು ಶಕ್ತಿಯನ್ನು ನಿರೂಪಣೆ ಮಾಡಿಕೊಳ್ಳುವುದಕ್ಕೆ ಸರ್ಕಾರದ ಮತಿಯಿಂದಾಗಲಿ, ಇಲ್ಲ ಹಾನೂನು ರೀತಿಯಾಗಿ ಆಗಲಿ ತನಗೆ ಸಿಗಬೇಕಾದ ಅಂಶಗಳನ್ನು ತಾನಾಗಿತಾನು ಸ್ವಶಕ್ತಿಯಿಂದ ಪಡೆಯಲಿಕ್ಕೆ ಅವಕಾಶ ಇದೆ ಎನ್ನುವ ಒಂದು ವಿಷಯವನ್ನು ಮಹಿಳೆಯರಿಗೆ ತಿಳಿಸುವ ಒಂದು ಕಾರ್ಯಕ್ರಮವನ್ನೂ ಸಹ ನಾವು ಸರ್ಕಾರ ಮಾಡಿಕೊಂಡಾಗ ಸ್ವಲ್ಪವಾದರೂ ಈ ಶೋಷಣೆ ಏನು ಇದೆ, ಇದು ಕಡಿಮೆಯಾಗುತ್ತದೆ ಎನ್ನುವ ವಿಷಯವನ್ನು ತಮ್ಮ ಮುಂದಿಡುತ್ತಾ ಅನಾದಿಕಾಲದಿಂದಲೂ ಈ ಮಹಿಳೆಯ ಶೋಷಣೆಯ ಬಗ್ಗೆ ಶ್ರೀಮತಿ ಲಲಿತಾನಾಯಕ್‌ರವರು ತುಂಬಾ ಚೆನ್ನಾಗಿ ಮಾತನಾಡಿದರು. ಆದರೆ ಅವತ್ತಿನಿಂದ ಇವತ್ತಿನವರೆಗೂ ಸಹನೆ ಎಂದರೆ ಏನು ಎಂದು ಮಹಿಳೆಯರಿಗೆ ಒಂದು ಪಟ್ಟವನ್ನು ಕೊಟ್ಟಿದ್ದೇವೆ, ಅದರಿಂದಾಗಿ ನಾವೆಲ್ಲಾ ಗೆಲ್ಲುತ್ತಾ ಇದ್ದೇವೆ ಎನ್ನುವ ಒಂದು ಭಾವನೆಯನ್ನೂ ಸಹಾ ಇವತ್ತು ನಾವು ಯೋಚನೆ ಮಾಡಬೇಕಾಗುತ್ತದೆ. ಕಾರಣ ಅವತ್ತು 14 ವರ್ಷಗಳ ವನವಾಸದ ನಂತರ ಸೀತೆಯನ್ನು ಶೀಲ ಪರೀಕ್ಷೆಗೆ ಒಳಪಡಿಸಿದಾಗ ಸೀತೆಯೂ ಸಹಾ ನಿನ್ನ ಶೀಲವನ್ನೂ ಸಹಾ ನಾನು ಪರೀಕ್ಷಿಸಬೇಕು ಎನ್ನುವ ಒಂದು ಮಾತನ್ನು ಆಡಿದ್ದರೆ ಇವತ್ತು ಈ ಹಿಂಸೆ ಹೆಣ್ಣುಮಕ್ಕಳಿಗೆ ಬರುತ್ತಿರಲಿಲ್ಲವೋ ಏನೋ ಎನ್ನುವ ಭಾವನೆ ಸಹಾ ನಮ್ಮಲ್ಲಿ ಬರುತ್ತಿದೆ. ಇದು ಸಾಕಾಗಲಿಲ್ಲ ಎಂದು ಹೆಂಡತಿಯನ್ನು ಮಾರಾಟಕ್ಕೆ ಇಟ್ಟಾಗ ನಿನ್ನನ್ನು ನೀನು ಮಾರಿಕೊಂಡು ಆ ಹಣವನ್ನು ತೆಗೆದುಕೋ ಎನ್ನುವ ಮಾತನ್ನು ಅವತ್ತು ಚಂದ್ರಮತಿ ಹೇಳಿದ್ದಿದ್ದರೆ ಇವತ್ತು ಹೆಣ್ಣುಮಕ್ಕಳನ್ನು ರೆಡ್ ಲೈಟ್ ಏರಿಯಾದಲ್ಲಿ ದೂರುವ ಒಂದು ವ್ಯವಸ್ಥೆ ಇರುತ್ತಿರಲಿಲ್ಲವೋ ಏನೋ ಎನ್ನುವ ಒಂದು ಯೋಚನೆ ಸಹ ಬರುತ್ತಿರುವುದರಿಂದ ಸಹನೆ ಅದಕ್ಕೊಂದು ಇತಿಮಿತಿ ಇರುತ್ತದೆ ಎನ್ನುವುದನ್ನು ಮನಗಂಡು ಅದಕ್ಕೆ ತಕ್ಕಂತೆ ಶಾಸನಗಳನ್ನು ಏನು ಮಾಡಬೇಕೆಂದು ಸರ್ಕಾರಕ್ಕೆ ಈಗ ನಾನು ಹೇಳಿದ್ದೇನೆ, ಅದನ್ನು ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡುತ್ತೀರಿ ಎನ್ನುವ ಒಂದು ವಿಷಯವನ್ನು ಹೇಳುತ್ತಾ ಇಷ್ಟೆಲ್ಲಾ ಮಾಡಿದಮೇಲೆ ಏನು ಕಷ್ಟಪಟ್ಟು ಒಂದು ಮಹಿಳಾ ವಿಮೋಚನೆ ಎಂದು ತುಂಬಾ ಕಷ್ಟಪಟ್ಟು ಅಂಕಿಅಂಶಗಳನ್ನು ಕಲೆಕ್ಟ್ ಮಾಡಿದ್ದಾರೆ. ಅವರಾಗಿಯೇ ಅವರು ಹೋಗಿ ನೊಂದ ಮಹಿಳೆಯರನ್ನು ಭೇಟಿ ಮಾಡಿ ಅವರಿಂದಲೂ ಸಹಾ ಮಾಹಿತಿಯನ್ನು ಪಡೆದಿದ್ದಾರೆ. ಆ ರೀತಿ ಆಗಿರುವ ಕೇಸ್‌ಗಳನ್ನು ಆದಷ್ಟು ಬೇಗ ಇತ್ಯರ್ಥ ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕು ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಛೇರ್ಮನ್ :— ಮಾನ್ಯ ಲೀಲಾದೇವಿ ಆರ್. ಪ್ರಸಾದ್‌ರವರು ಮಾತನಾಡುತ್ತಾರೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಅಧ್ಯಕ್ಷರೇ, Iam on a point of Order. ಮಂತ್ರಿಗಳು ಭಾಗವಹಿಸಬಹುದಾ ಎಂಬುದು ಒಂದು

ಇತ್ಯರ್ಥವಾಗಬೇಕು. ಸೀಟನ್ನು ಬಿಟ್ಟು ಹೋಗಿದ್ದಾರೆ, ಅವರು ಅಲ್ಲಿಂದ ಮಾತನಾಡಬಹುದಾ ಎಂದು ಎರಡು ಇತ್ಯರ್ಥವಾಗಬೇಕು. ನಾನು ಅವರು ಮಾತನಾಡುವುದಕ್ಕೆ ವಿರೋಧವಾಗಿಲ್ಲ. ಈ ಸದನದಲ್ಲಿ ಸಂಪ್ರದಾಯಗಳನ್ನು ಹೊಸಹೊಸದಾಗಿ ಮಾಡುವುದಕ್ಕೆ ಮೊದಲೇ ತೀರ್ಮಾನವಾಗಿ, ಆಗಬೇಕು. ಅವರವರು ಸೀಟು ಬಿಟ್ಟು ಅಲ್ಲಿಗೆ ಹೋಗಿ ಮಾತನಾಡಬಹುದಾ? ಮಂತ್ರಿಗಳು ಈಗ ಮಾತನಾಡುವ ಮಾತಿಗೂ ಇನ್ನೊಬ್ಬರು ಮಂತ್ರಿಗಳು ಕೊಡುವ ಉತ್ತರಕ್ಕೂ ವ್ಯತ್ಯಾಸವಾದರೆ ಲೀಲಾದೇವಿ ಅವರ ನಿಲುವು ಏನಾಗುತ್ತದೆ ಎನ್ನುವುದಕ್ಕೆ ಅವರು ಮೊದಲೇ ಸ್ಪಷ್ಟೀಕರಣ ಕೊಡಬೇಕು. ಆಮೇಲೆ ಅವರು ಸ್ಥಾನಕ್ಕೆ ಬಂದು ಮಾತನಾಡದೆ ಹೋದರೆ ಇಂಥದ್ದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆಯೇ ಎಂದು ಹೇಳಬೇಕು. ಎಲ್ಲಾ ಮಂತ್ರಿಗಳು ನಾಳೆ ಈ ಸಭೆಯಲ್ಲಿ ಒಂದೊಂದು ವಿಷಯದ ಬಗ್ಗೆ ನನ್ನದು ವೈಯಕ್ತಿಕ ಎಂದು ಶುರುಮಾಡಿದರೆ ಹೇಗೆ?

SRI PRAMILA NESARGI :— I am on a point of Order. ಅಧ್ಯಕ್ಷರು ಈಗಾಗಲೇ ತೀರ್ಪು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರು ಲೀಲಾದೇವಿ ಪ್ರಸಾದ್‌ರವರನ್ನು ಮಂತ್ರಿಯಾಗಿ ಅಲ್ಲ, ನೀವು ಮಹಿಳೆಯಾಗಿ ಇಲ್ಲಿ ಮಾತನಾಡತಕ್ಕದ್ದು ಎಂದು ಆದೇಶ ಕೊಟ್ಟು ಆರ್ಡರ್ ಆಗಿದೆ. ಆದಾದನಂತರ ಇವರ ಪಾಯಿಂಟ್ ಆಫ್ ಬರುವುದಿಲ್ಲ, ಏನೂ ಇಲ್ಲ ಅದ್ದರಿಂದ ಇವರು ಮಾತನಾಡುವುದಕ್ಕೆ ಅರ್ಥವಿಲ್ಲ ಎಂದು ಹೇಳುತ್ತೇನೆ.

ಛೇರ್ಮನ್ :— ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಮಗೆ ಅವಕಾಶ ಕೊಡುತ್ತೇನೆ. ಈಗ ಮಾಧುಸ್ವಾಮಿರವರು ಮಾತನಾಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅಧ್ಯಕ್ಷರೇ, I want a ruling from the Chair. ಇದು ಪ್ರಿಸಿಡೆಂಟ್ ಆಗುತ್ತದೆ. ನಾಳೆ ಬೇರೆ ಮಂತ್ರಿಗಳು ಯಾವುದಾದರೂ ವಿಷಯಗಳು ಬಂದಾಗ ಸರ್ಕಾರದ ತೀರ್ಮಾನಕ್ಕೆ ಅಥವಾ ನಿಲುವಿಗೆ ಬದಲಾಗಿ ಮಾತನಾಡುವುದಕ್ಕೆ ಇಲ್ಲಿ ಎದ್ದು ನಿಂತುಕೊಂಡರೆ ಈ ಸಭೆಯ ಘನತೆ ಏನು? ಅದು ಟ್ರೆಜರಿ ಬೆಂಚ್ ವ್ಯಾ ಆಗುತ್ತಾ, ಸರ್ಕಾರದ ವ್ಯಾ ಆಗುತ್ತಾ? Can a Minister who has many opportunities to express the views, ಕ್ಯಾಬಿನೆಟ್‌ನಲ್ಲಿ ಮಾಡಬಹುದು. ಹೊರಗಡೆ ಮಾಡಬಹುದು, ಮತ್ತೊಂದು ಕಡೆ ಮಾಡಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಅಧ್ಯಕ್ಷರು ಆಗಲೇ ಆದೇಶ ಕೊಟ್ಟಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾನು ಪಾಯಿಂಟ್ ಆಫ್ ಆರ್ಡರ್ ಹೇಳಿದಾಗ ತಾವು ಎದ್ದು ವಿಳಬಾರದು ಎನ್ನುವ ಸೌಜನ್ಯವನ್ನು ಕಲಿತುಕೊಳ್ಳಿ. Let me complete my submission. ನಾನು ನಿಮ್ಮಲ್ಲೇ ಈ ಸಭೆಯಲ್ಲಿ ಕೇಳಿಸ ಮಾಡಿದ್ದೇನೆ. ಈ ರೀತಿ ನಿಯಮಗಳನ್ನು ಗಾಳಿಗೆ ತೂರುವುದಕ್ಕೆ ಬಿಡುವುದಾಗುವುದಿಲ್ಲ, ಈ ಸಭೆಯನ್ನು.

ಶ್ರೀ ವಾಟಾಳ್ ನಾಗರಾಜ್:— ಮಾನ್ಯ ಅಧ್ಯಕ್ಷರೇ, ನಾನು ಮಾಧುಸ್ವಾಮಿರವರ ಕ್ರಿಯಾಲೋಪಕ್ಕೆ ನನ್ನ ಧ್ವನಿಗೂಡಿಸಿ ಬೆಂಬಲ ಕೊಟ್ಟು ಈಗ ಮಾನ್ಯ ಪ್ರಮೀಳಾರವರು ಹೇಳಿದರು. ಅವರು ಮಂತ್ರಿಯಾಗಿ ಮಾಡುವುದಿಲ್ಲ. ಅವರು ವೈಯಕ್ತಿಕವಾಗಿ ಮಾಡುತ್ತಾರೆ ಎಂದರು. ಇಲ್ಲಿ ಎರಡು ಪಾತ್ರ ಮಾಡುವುದಕ್ಕಾಗುವುದಿಲ್ಲ. ಇಲ್ಲಿರುವುದು ಒಂದೇ ಪಾತ್ರ. ನಾನು ಆಗ ಗಮನಿಸಲಿಲ್ಲ. ದಯವಿಟ್ಟು ಕ್ಷಮಿಸಬೇಕು. ಇಲ್ಲಿ ಮಂತ್ರಿಯಾಗಿ ಮಾಡಬೇಕು. ಆದ್ದರಿಂದ ಇಲ್ಲಿ ಮಂತ್ರಿಯಾಗಿ ಮಾಡುವುದು ಒಂದುಪಾತ್ರ. ಇಲ್ಲಿ ಅವರು ಮಂತ್ರಿಯಾಗಿಲ್ಲ, ಅವರು ಶಾಸಕರಾಗಿ ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಮಹಿಳೆಯರ ಪರವಾಗಿ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಒಂದು ಅವರು ಮಂತ್ರಿಯಾಗಿ ಇಲ್ಲಿ ಮಾತನಾಡತಕ್ಕಂಥದ್ದೇ ಅವರು ಶಾಸಕರಾಗಿ ಮಾತನಾಡುವುದಕ್ಕಾಗುವುದಿಲ್ಲ. ಅವರು ಮಂತ್ರಿಯಾಗಿದ್ದಾರೆ. ಮಂತ್ರಿಯಾಗಿ ಒಂದು ಪಾತ್ರ, ಶಾಸಕರಾಗಿ ಇನ್ನೊಂದು ಪಾತ್ರ, ಈ ರೀತಿ ಎರಡು ಪಾತ್ರವನ್ನು ನಿಭಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎರಡನೆಯದು ಈ ಸಭೆಯ ನಡವಳಿಕೆ ಪ್ರಕಾರ ಮಂತ್ರಿಯಾಗಿ ಎಲ್ಲಿ ಕುಳಿತುಕೊಳ್ಳುತ್ತಾರೋ ಅಲ್ಲಿ ಮಾತನಾಡುವುದು ಅದು ಎರಡನೆಯದು. ಆದ್ದರಿಂದ ತಾವು ಅದನ್ನು ದಯವಿಟ್ಟು ತಿಳಿದುಕೊಳ್ಳಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:— ನಾನು ಮಂತ್ರಿಯಾಗೇ ಮಾತನಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:— ಅಧ್ಯಕ್ಷರೇ, I am on a point of Order.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್:— ನಾನು ಮಂತ್ರಿಯಾಗೇ ಉತ್ತರ ಕೊಡುತ್ತೇನೆ ಮಾತನಾಡಿದವರೆಲ್ಲರಿಗೂ.

ಶ್ರೀ ಜೆ.ಸಿ. ಮಾಧುಸ್ವಾಮಿ:— ನಾನು ಮಾನ್ಯ ಸಿಂಧ್ಯಾರವರಲ್ಲಿ ಕೇಳುತ್ತೇನೆ, ಇದು ಅವರ ಉತ್ತರ ಎಂದು ನಾವು ಟ್ರೀಟ್ ಮಾಡಬಹುದಾ?

ಶ್ರೀ ವಾಟಾಳ್ ನಾಗರಾಜ್:— ಈಗ ಅವರು ಉತ್ತರ ಕೊಡುವ ಪ್ರಶ್ನೆ ಇಲ್ಲವೇ ಇಲ್ಲ. ಇನ್ನು ಚರ್ಚೆ ಮುಗಿದಿಲ್ಲ. ಇನ್ನು ಚರ್ಚೆಯನ್ನು ಬಹಳ ಜನರು ಮಾಡಬೇಕಾಗಿದೆ. ಮತ್ತೆ ಉತ್ತರ ಕೊಡುವವರು ತಾವೋ, ಮುಖ್ಯಮಂತ್ರಿಗಳೋ ಎಂದುತೀರ್ಮಾನವಾಗಿಲ್ಲ. ಆದ್ದರಿಂದ ಚರ್ಚೆ ಮುಗಿದಮೇಲೆ ಉತ್ತರ ಕೊಡತಕ್ಕಂಥದ್ದು. ಚರ್ಚೆ ಮುಗಿಯಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:— ಅವರು ಮಧ್ಯೆ ಇಂಟರ್‌ವೆನ್ಷನ್ ಆಗುವುದಕ್ಕೆ ಪ್ರಶ್ನೆಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು):— ಇದೊಂದು ವಿಶೇಷ ಸಂದರ್ಭ ಎಂದು ಹೇಳಿ ಮಹಿಳೆಯರ ಸಮಸ್ಯೆಗಳನ್ನು ಚರ್ಚೆ ಮಾಡಬೇಕು ಎಂದು ಹೇಳಿ

ನಿಯಮ 69ರ ಅಡಿಯಲ್ಲಿ ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಕಾಲದ ಸಮಯದ ವೇಳೆಯನ್ನು ಅವರೇ ನಿಗದಿ ಮಾಡಿದ್ದಾರೆ. ಇದಕ್ಕೆ ಸರ್ಕಾರದಿಂದ ಉತ್ತರದ ರೂಪದಲ್ಲಿ ಕೆಲವು ಸ್ಪಷ್ಟಣೆಗಳನ್ನು, ವಿವರಣೆಗಳನ್ನು ಕೊಡಬೇಕಾಗುತ್ತದೆ. ನನ್ನ ಒಂದು ಅಭಿಪ್ರಾಯದಲ್ಲಿ ತಾವೆಲ್ಲಾ ಸದಸ್ಯರುಗಳು ಮಾತನಾಡಿ. ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ನಮ್ಮೆಲ್ಲರ ಪರವಾಗಿ ಶ್ರೀಮತಿ ಲೀಲಾದೇವಿ ಅವರು ಮಾತನಾಡುತ್ತಾರೆ. ಅದಾದ ನಂತರ ವಿನಾದರೂ ಅವರು ಹೇಳಿರತಕ್ಕ ಅಂಶಗಳಿಗೆ ಮತ್ತೇನಾದರೂ ನಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಜೋಡಿಸಬೇಕು ಎಂದಿದ್ದರೆ ನಾನೂ ಹೇಳುತ್ತೇನೆ.

ಶ್ರೀ ಕೆ.ಸಿ. ಮಾಧುಸ್ವಾಮಿ :— ಸರ್ಕಾರದ ಪರವಾಗಿ ಮಾತನಾಡುವುದು ಇದ್ದರೆ ನಮ್ಮದು ಯಾರದ್ದೂ ವಿರೋಧ ಇಲ್ಲ. ಉತ್ತರ ಕೊಡುವ ಕಾಲಕ್ಕೆ ಮಾತನಾಡಿ. ತಾವು ಚರ್ಚೆಯಲ್ಲಿ ಭಾಗವಹಿಸುವ ಹಕ್ಕು ಇಲ್ಲ. because you are part of Government.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ವಿಷಯಗಳು ಇಲ್ಲಿ ಪ್ರಸ್ತಾಪ ಆಗುತ್ತಿದೆ. ಇವತ್ತಿನ ಚರ್ಚೆ ಇತಿಹಾಸದ ಕಾಲಗರ್ಭಕ್ಕೆ ಕ್ಷೇಪಾಕರುವಂತಹ ವಿಚಾರ. ಕಾಲಗರ್ಭಕ್ಕೆ ಕ್ಷೇಪಾಕಿದ್ದೀರಿ. ಯಾವ್ಯಾವ ದಿಕ್ಕಿಗೆ ಹೋಗುತ್ತದೆ ಎಂದು ಇದನ್ನು ನಿರೀಕ್ಷೆ ಮಾಡಲಿಕ್ಕೆ ಸಾಧ್ಯ ಇಲ್ಲದೇ ಇರತಕ್ಕಂಥ ಒಂದು ವಿಷಯ. ಬಹುಶಃ ಮಹಿಳೆಯರ ಸಮಸ್ಯೆ ಎಂದರೆ ಕಾನೂನಿನಲ್ಲಿ ಪರಿಹಾರ ಮಾಡಬಹುದು. ಕೆಲವು ಸಲಹೆಗಳನ್ನು ಕೊಟ್ಟರೆ, ಆ ಸಲಹೆಗಳನ್ನು ಸ್ವೀಕಾರ ಮಾಡಿ, ಅದರಿಂದ ಮಹಿಳೆಯರ ಸಮಸ್ಯೆ ಪರಿಹಾರ ಆಗುತ್ತದೆ ಅಥವಾ ಯಾವುದಾದರೂ ಕೆಲವು ಕಮೀಷನ್ ಆಫ್ ಎನ್ಕ್ವೈರೀಸ್ ಮಾಡಿದರೆ ಆ ಮಹಿಳೆಯರ ಸಮಸ್ಯೆ ಪರಿಹಾರ ಆಗುತ್ತದೆ. ಅವರನ್ನು ಸಮಾನತೆಯಿಂದ ನೋಡಲಿಕ್ಕೆ ಆಗುತ್ತದೆ- ಎಷ್ಟೊಂದು ಅಭಿಪ್ರಾಯಗಳು ಏನು ಇದೆ. ಅವೆಲ್ಲವೂ ಸಂಪೂರ್ಣ ಬೂಟಾಟಿಕೆ. ಯಾವುದೇ ಕಾನೂನಿನಿಂದ ಮಹಿಳೆಗೆ ಸಮಾನತೆಯನ್ನು ಕೊಡುವುದಕ್ಕೆ ಸಾಧ್ಯ ಇಲ್ಲ. ಅಥವಾ ಯಾವುದೇ ಕಮೀಷನ್ ಆಫ್ ಎನ್ಕ್ವೈರೀಸ್ ಮಾಡುವುದರ ಮುಖಾಂತರವಾಗಿ ಮಹಿಳೆಯರಿಗೆ ಇರತಕ್ಕ ನಿಜವಾದ, ಮೂಲಭೂತ ಸಮಸ್ಯೆ ಪರಿಹಾರ ಮಾಡಿ ಮಹಿಳೆಯರನ್ನು ಒಂದು ವ್ಯಕ್ತಿಯಾಗಿ, ಪರಿಪೂರ್ಣ ವ್ಯಕ್ತಿಯಾಗಿ ಇಡೀ ಸಮಾಜದಲ್ಲಿ ಪ್ರತಿ ಒಬ್ಬರೂ ಸಮಾನರಾಗಿ ಬದುಕತಕ್ಕಂಥ ವ್ಯವಸ್ಥೆ ಬರುತ್ತದೆಂದು ಯಾರಾದರೂ ನಿರೀಕ್ಷೆ ಮಾಡಿದರೆ ಅವರು ಯಾವುದೋ ಭ್ರಮಾಲೋಕದಲ್ಲಿ ತೇಲಾಡುತ್ತಿದ್ದಾರೆ ಎನ್ನತಕ್ಕದ್ದು ನನ್ನ ಸ್ಪಷ್ಟ ಅಭಿಪ್ರಾಯ. ಇಲ್ಲಿ ಎರಡು ವಿಷಯಗಳು ಇವೆ. ಮಹಿಳೆಯರನ್ನು ಇತಿಹಾಸ ಪೂರ್ವದ ಕಾಲಘಟ್ಟಕ್ಕೆ ಅಳೆಯಬೇಕಾಗುತ್ತದೆ. ಇತಿಹಾಸದಲ್ಲಿ ನಂಬಿಕೆ ಇಲ್ಲದೇ ಇರತಕ್ಕ ವೇದ ಪೂರ್ವ ಭಾಗದ ಘಟನೆಯನ್ನು ಅಲೋಚನೆ ಮಾಡಬೇಕಾಗುತ್ತದೆ. ಸಮಾಜದಲ್ಲಿ ಎರಡು ಘಟ್ಟಗಳು ಇವೆ. ಒಂದು ಇತಿಹಾಸ ಪೂರ್ವದ ಸಮಾಜ ಅಥವಾ ವೇದ ಪೂರ್ವ ಸಮಾಜ ಅಂದರೆ pre

historic age, prevedic age, ಎಂದು ಹೇಳತಕ್ಕ ಎರಡು ಘಟ್ಟಗಳು ಇದೆ. ಆ ಪ್ರೀ ಹಿಸ್ಟಾರಿಕ್ ಏಜ್ ಎಂದು ಹೇಳಿ ಇತಿಹಾಸ ಪ್ರಾರಂಭ ಆಗುವುದಕ್ಕಿಂತ ಮೊದಲೇ ಏನು ಸಮಾಜ ಇತ್ತು ಆ ಸಮಾಜದಲ್ಲಿ ಮಹಿಳೆಗೆ ಇದ್ದಂತಹ ಸಮಸ್ಯೆ ಏನು? ಪರಿಸ್ಥಿತಿ ಏನು. ಇತಿಹಾಸ ಪ್ರಾರಂಭ ಆದ ಮೇಲೆ ಮಹಿಳೆ ಸಮಸ್ಯೆ ಏನು ಎನ್ನತಕ್ಕದ್ದು ಒಂದು ಪ್ರಶ್ನೆ. ಎರಡನೆಯ ಪ್ರಶ್ನೆ. ವೇದ ಪೂರ್ವ ಸಮಾಜ. ಇತಿಹಾಸದಲ್ಲಿ ನಂಬಿಕೆ ಇಲ್ಲದೇ ಇರತಕ್ಕ ಜನಕ್ಕೆ ವೇದ, ಪುರಾಣಗಳ ಮೇಲೆ ನಂಬಿಕೆ ಇರತಕ್ಕ ಜನಕ್ಕೆ ಅವರು ನಂಬಿಕೊಂಡಿರತಕ್ಕದ್ದು ವೇದ ಪೂರ್ವ ಸಮಾಜ ಎಂದು ಹೇಳುತ್ತೇವೆ. ಅಂದರೆ ಪ್ರೀ ವೇದಿಕ್ ಏಜ್ ಎಂದು ಹೇಳುತ್ತೇವೆ, ಎರಡರಲ್ಲೂ ನಾವು ನೋಡತಕ್ಕ ಸಂದರ್ಭದಲ್ಲಿ ಪ್ರೀ ಹಿಸ್ಟಾರಿಕ್ ಏಜ್ ಏನು ಇದೆ, ಇತಿಹಾಸ ಪೂರ್ವ ಸಮಾಜದಲ್ಲಿ ಮಹಿಳೆ ಎಂದೂ ಬಾಲಿಶಳಾಗಿ ಇರಲಿಲ್ಲ, ಅಥವಾ ಮಹಿಳೆಯನ್ನು ಪುರುಷನ ಅರ್ಧಾಂಗಿ ಎಂದು ಹೇಳಿ ಎಂದೂ ಕರೆಯಲಿಲ್ಲ, ಅಥವಾ ಆ ಸಮಾಜದಲ್ಲಿ ಮಹಿಳೆ ಪರಾವಲಂಬಿ ಆಗಿರಲಿಲ್ಲ. ಮಹಿಳೆ ಎನ್ನತಕ್ಕಂಥ ಸ್ವತಂತ್ರವಾದ ಅಸ್ತಿತ್ವ ಮಾನವ ಇತಿಹಾಸದಲ್ಲಿ ಎಂದಾದರೂ ಇದ್ದಿದ್ದರೆ ಅದು ಪ್ರೀ ಹಿಸ್ಟಾರಿಕ್ ಏಜ್‌ನಲ್ಲಿ. That is only in pre historic age not after the history. ಇಂತಹ ಒಂದು ಹಿನ್ನೆಲೆಯನ್ನು ನಾವು ನೋಡಬೇಕಾದ ಸಂದರ್ಭದಲ್ಲಿ ನಮ್ಮ ಮಾನವ ಇತಿಹಾಸ ಇಮತ್ತು ಯಾವ ರೀತಿಯಲ್ಲಿ ಬೆಳೆಯುತ್ತಾ ಬಂದಿದೆ ಎಂದು ಹೇಳಿದರೆ ಆ ಇತಿಹಾಸದಲ್ಲಿ ಸ್ತ್ರೀ ಮತ್ತು ಪುರುಷ ಎಂದು ಹೇಳಿ ವಿಭಾಗ ಮಾಡುವುದು. ಇಲ್ಲಿಂದ it is only after the commencement of history. What is that history? History of private property. ಆಸ್ತಿಯ ಹಕ್ಕು ಈ ಸಮಾಜದಲ್ಲಿ ಎಂದು ಉಗಮ ಆಗುವುದಕ್ಕೆ ಪ್ರಾರಂಭ ಆಯಿತೋ ಆ ದಿನಿಸ ಸ್ತ್ರೀಗೆ ಇದ್ದಂತಹ ಸಂಪೂರ್ಣ ಸ್ವಾತಂತ್ರ್ಯ, ಪರಿಪೂರ್ಣ ಸ್ವಾತಂತ್ರ್ಯ, ಸ್ವತಂತ್ರವಾದ ಅಸ್ತಿತ್ವ ಎಲ್ಲವೂ ನಾಶ ಆಗಿದ್ದು. ಒಂದೇ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಚ್ಛಿಸಬಯಸುತ್ತೇನೆ. ನಮ್ಮ ಈಶ್ವರನಿಗೆ ಅರ್ಧ ನಾರೀಶ್ವರ ಎಂದು ಹೇಳುತ್ತಾರೆ. ಅರ್ಧನಾರೀಶ್ವರ ಎಂದು ಹೆಸರು ಏಕೆ ಬಂತು? ಅರ್ಧ ನಾರೀಶ್ವರ ಎಂದು ಹೆಸರು ಬರುವುದಕ್ಕೆ ವಿಶೇಷವಾದ ಕಾರಣ ಏನು ಎಂದರೆ ಅಲ್ಲಿಂದ ಇಲ್ಲಿಯವರೆಗೆ ಇತಿಹಾಸ ಪ್ರಾರಂಭ ಆಗಿರಲಿಲ್ಲ. ನಾನು ಪುರಾಣದ ದೃಷ್ಟಿಯಿಂದ ಹೇಳತಕ್ಕದ್ದು. ಇತಿಹಾಸದ ದೃಷ್ಟಿಯಿಂದ ಅಲ್ಲ. ಪುರಾಣ ಇತಿಹಾಸ ಮಾಡತಕ್ಕದ್ದು, ಪುರಾಣವನ್ನು ಇತಿಹಾಸ ಮಾಡತಕ್ಕ ಒಂದು ಕೆಟ್ಟ ಸಂಪ್ರದಾಯ ನಮ್ಮ ದೇಶದಲ್ಲಿ ಪ್ರಾರಂಭ ಆಗಿದೆ. ಹಾಗಾಗಿ ನಾವು ಪುರಾಣ ಎಂದು ಹೇಳತಕ್ಕ ದೃಷ್ಟಿಯಲ್ಲಿ, ಹೇಳುವುದಾದರೆ ಅರ್ಧ ನಾರೀಶ್ವರ ಎಂದು ಶಿವನಿಗೆ ಹೆಸರು ಬರುವುದಕ್ಕೆ ಕಾರಣ ಏನು ಅಂದರೆ ಆ ಸಮಾಜದ ಕಾಲ ಘಟ್ಟ ಏನು ಇತ್ತು, ಅದು ಅಲ್ಲಿಂದ ಪುರುಷ ಮತ್ತು ಸ್ತ್ರೀ ಇಬ್ಬರೂ ಸಮಾನರಲ್ಲ ಎಂದು ಹೇಳಲಿಕ್ಕೆ ತೀರ್ಮಾನ ಆದಂತಹ ಒಂದು ಸಮಾಜದ ಕಾಲ ಕೂಡ.

ಛೇರ್ಮನ್ :— ಒಂದು ನಿಮಿಷ, ನೋಟೀಸ್ ಓದಿ ಬಿಡುತ್ತೇನೆ. ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಲ್ಲೆಗಳು ಅತ್ಯಧಿಕವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನಗೆ ಗೊತ್ತಿದೆ. ಈ ವಿಷಯವನ್ನು ಎಲ್ಲರೂ ಮಾತನಾಡಿದ್ದು.

ಛೇರ್ಮನ್ :— ಇವರುಗಳ ಮೇಲೆ ಹಲ್ಲೆ ನಡೆಯದೇ ಇರುವ ದಿನಗಳೇ ಇಲ್ಲ. ಪ್ರತಿನಿತ್ಯ ಸುದ್ದಿ ಪತ್ರಿಕೆಯಲ್ಲಿ ಈ ಸಂಬಂಧ ವಿಷಯಗಳು ಇದ್ದೇ ಇರುತ್ತವೆ. ರಾಜ್ಯದಲ್ಲಿ ಒಂದು ಮಾಹಿತಿ ಪ್ರಕಾರ 700 ಜನ ಮಹಿಳೆಯರು, ಅತ್ಯಾಚಾರ, ಸ್ಪೈನ್ ಸಿಡಿತ, ವರದಕ್ಷಿಣೆ ಸರಾಪಹರಣಕ್ಕೆ ಬಲಿ ಆಗುತ್ತಿದ್ದಾರೆ ಎಂದು ಹೇಳಿ ಈ ಬಗ್ಗೆ ಸ್ಪೆಸಿಫಿಕ್ ಆಗಿ ಈ ಸದನದಲ್ಲಿ ಚರ್ಚೆ ಆಗಬೇಕಾಗಿದೆ. ಅದಕ್ಕಾಗಿ ತಾವು ಪೀಠಿಕೆಯನ್ನು ಸ್ವಲ್ಪ ಏನಾದರೂ ಹೇಳಿದರೆ ಅಡ್ಡಿ ಇಲ್ಲ. ಅದನ್ನು ಬಹಳ ಉದ್ದ ಹೇಳಿಕೊಂಡು ಹೋದರೆ ಸದನದ ಮುಂದಿನ ಕಾರ್ಯಕಲಾಪಗಳಿಗೆ ತೊಂದರೆ ಆಗುತ್ತದೆ. ಇದಕ್ಕಾಗಿ ಸಮಯ ನಿಗದಿ ಆಗಿರತಕ್ಕದ್ದು ಒಂದು ಗಂಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಎಷ್ಟು ಸಮಯ ಕೊಡುತ್ತೀರಿ, ಅಷ್ಟು ಸಮಯ ನಿಗದಿ ಮಾಡಿ. ನಿಗದಿ ಮಾಡಿದ ಸಮಯದಲ್ಲಿ ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ.

ಛೇರ್ಮನ್ :— ತಾವೇ ನಿಗದಿ ಮಾಡಿಕೊಳ್ಳಿ. ನಾನು ಇರತಕ್ಕ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಪ್ರಸ್ತಾಪ ಮಾಡುತ್ತಾ ಇರತಕ್ಕದ್ದು ಯಾರದೋ ತುಟಿಗೆ ಬೆಣ್ಣೆ ಸವರತಕ್ಕ ಪ್ರಶ್ನೆ ಅಲ್ಲ ಅದು. ನೀವೇನು ಸಮಯ ನಿಗದಿ ಪಡಿಸಿದ್ದೀರೋ ಅದನ್ನು ಹೇಳಿ, ಅದರಂತೆ ಮಾಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ :— ಹಾಸ್ಯವಾಗಿ ಕಾಮ್ ಆಗಿ ತೆಗೆದುಕೊಳ್ಳಿ. ಮಹಿಳೆಯರ ವಿಚಾರ ಮಾತನಾಡುವಾಗ ಬಹಳ ಕೋಪವಾಗಿ, ಸಿಟ್ಟಿಗೆ ಏಳಬಾರದು, ರಿವೆಂಜ್ ತೆಗೆದುಕೊಳ್ಳಬಾರದು.

ಛೇರ್ಮನ್ :— ಇನ್ನೂ ಕೆಲವರು ಮಾತನಾಡಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನೀವು ಎಷ್ಟು ಸಮಯ ಕೊಡುತ್ತೇನೆಂದು ಹೇಳಿ ಬಿಡಿ, ಅಷ್ಟರಲ್ಲೇ ನಾನು ಮಾತನಾಡುತ್ತೇನೆ. ಅಷ್ಟಾದರೂ ಆಗಬೇಕಲ್ಲಾ, ನಾನು ಏನು ಮಾತನಾಡಬೇಕು ಎಂಬುದು ನನಗೆ ಬಿಟ್ಟಿದ್ದು. ನೀವು ಸಮಯ ನಿಗದಿ ಮಾಡಿ, ನೀವು ಕೊಟ್ಟ ನಿಗದಿತ ಸಮಯದಲ್ಲಿ, ನಾನು ಹೇಳುತ್ತೇನೆ.

ಛೇರ್ಮನ್ :— ಹತ್ತು ನಿಮಿಷ ಮಾತನಾಡಿ. ಈಗ 2-3 ಜನ ಮಾತನಾಡಿದ್ದಾರೆ. ನಾನು ಅಲ್ಲಿಂದಲೂ ಕುಳಿತುಕೊಂಡು ಕೇಳಿದ್ದೇನೆ. ಇಲ್ಲೂ ಕುಳಿತು ಕೇಳಿದ್ದೇನೆ. ಇದು ವಿಶೇಷವಾಗಿ ಸ್ತ್ರೀಯರ ಮೇಲೆ ಹಲ್ಲೆ ನಡೆಯುತ್ತಿರುವ ವಿಚಾರ ಆಗಿರುವುದರಿಂದ ಅವರು ಸ್ವಲ್ಪ ಹೆಚ್ಚಿನ ಸಮಯ ತೆಗೆದುಕೊಂಡಿರಲಿಕ್ಕೆ ಸಾಕು. ತಾವು ಕೂಡ ಅದಕ್ಕೆ ಹೊರತು ಎಂದು ನಾನು ಹೇಳುವುದಿಲ್ಲ. ಆದರೆ ಇದಕ್ಕೆ ಈ ಸೆಕ್ಷನ್ ಅಡಿಯಲ್ಲಿ ಇರತಕ್ಕ ಸಮಯ ಒಂದು ತಾಸು. ವಿಶೇಷವಾದ ಚರ್ಚೆ ಆಗಿರುವುದರಿಂದ, ವಿಶೇಷವಾಗಿ ಸಾಮಾಜಿಕವಾದ ಚರ್ಚೆ ಆಗಿರುವುರಿಂದ, ಸ್ವಲ್ಪ ಸಮಯದ ಅವಕಾಶವನ್ನು ಮಾಡಿಕೊಂಡು ಆ ಸಮಯಕ್ಕೆ ಅಂಟಿಕೊಂಡರೆ ಅನುಕೂಲ. ತಾವು ಮಾತನಾಡಬೇಡಿ ಎಂದು ನಾನು ಹೇಳಲಿಲ್ಲ. ಪ್ರತಿ ಒಬ್ಬರೂ ಮಾತನಾಡಬೇಕು. ವಿತ್ತೀಯ ಕಾರ್ಯಕಲಾಪಗಳು ಆಗಬೇಕಾಗಿದೆ. ಹಾಗೆಯೇ ಬೇರೆ ಬೇರೆ ಕಾರ್ಯಕ್ರಮಗಳೂ ಇದೆ.

ಶ್ರೀಮತಿ ಬಿ.ಟಿ ಲಲಿತಾ ನಾಯಕ್ :— ಇದು ಸೂಕ್ಷ್ಮ ವಿಚಾರ ಆಗಿರುವುದರಿಂದ ಏಕಾಏಕಿ ಪೀಠಿಕೆ ಇಲ್ಲದೇ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರಣೆಯಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ತಾವು ಏನು ಹೇಳಿದರು ಅದಕ್ಕೆ ಸರಿಯಾದ ಕಾರಣ ಹೇಳಿದ್ದಾರೆ. ಕಾನೂನಿನ ಬಗ್ಗೆ ಮಹಿಳೆಗೆ ಏನೇನು ಬೇಕು. ಸಮಕಾಲೀನ ಮಹಿಳೆ ಎದರಿಸುತ್ತಿರುವ ಸಮಸ್ಯೆ ಮತ್ತು ಅವಳ ಮೇಲೆ ಆಗಿರತಕ್ಕ ತೊಂದರೆಗಳು, ಅನ್ಯಾಯ, ಅತ್ಯಾಚಾರಗಳು, ಪರಿಹಾರಗಳು ಅವುಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಹೇಳಿ ಬಿಟ್ಟಿದ್ದಾರೆ. ಆದರೆ, ನಾವುಗಳೆಲ್ಲರೂ ಮತ್ತೆ ಅದನ್ನೇ ಚರ್ವಿತ ಚರ್ವಣ ಮಾಡುವುದಕ್ಕಾಗುವುದಿಲ್ಲ-ವೆನ್ನುವುದಕ್ಕೆ ಬೇರೆ ಬೇರೆ ದಿಕ್ಕುಗಳಲ್ಲಿ ಹೇಳುತ್ತಿದ್ದೇವಷ್ಟೆ. ಮಹಿಳೆಯರಿಗೆ ಅನ್ಯಾಯ-ವಾಗಿರುವುದರಿಂದ ಅವರಿಗೆ ನ್ಯಾಯ ಸಿಗುವ ದಿಸೆಯಲ್ಲಿ ಮಹಿಳಾ ಕಮೀಷನ್ ಆಗಬೇಕೆಂದು ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಬಹುದು. ಈಗಾಗಲೇ ಪೊಲೀಸ್ ಇಲಾಖೆ ಹೆಣ್ಣುಮಕ್ಕಳ ರಕ್ಷಣೆಗೋಸ್ಕರ ಏನೇನು ಮಾಡಬಹುದೋ ಅದೆಲ್ಲವನ್ನೂ ಮಾಡಿದೆ, ಅದೇ ರೀತಿ ಸರ್ಕಾರಗಳೂ ಸಹ ಕ್ರಮ ಕೈಗೊಂಡಿವೆ. ಆದರೂ ಹೀಗಾಗುತ್ತಿದೆಯೆಲ್ಲಾ, ಏಕೆ? ಎಂಬುದಕ್ಕೆ ನಾವು ಕಾರಣ ಹುಡುಕಬೇಕಾದರೆ ಮತ್ತೆ ಹಿಂದಕ್ಕೆ ಹೋಗಬೇಕಾಗುತ್ತದೆ.

ಛೇರ್ಮನ್ :— ನಾನು ತಮ್ಮ ಭಾಷಣವನ್ನು ನನ್ನ ಜಾಗದಲ್ಲಿ ಹಾಗೂ ಈ ಅಧ್ಯಕ್ಷಪೀಠದಲ್ಲಿ ಕುಳಿತುಕೊಂಡು ಶಾಂತ ರೀತಿಯಿಂದ ಕೇಳಿದ್ದೇನೆ. ತಮ್ಮ ಮಾತುಗಳನ್ನು ಆಲಿಸಿದ ನಂತರ ತಾವು ಸಾಮಾಜಿಕ ರೀತಿಯಲ್ಲಿ ಮಾತನಾಡಿದ್ದೀರಿ. ಈಗ ತಮಗೆ ನಾನು ಹೇಳುತ್ತಿರುವುದೇನೆಂದರೆ, ಪೀಠಿಕೆ ದೊಡ್ಡದಾಗುವುದು ಬೇಡ, ಪ್ರಕೃತವಾಗಿರತಕ್ಕಂಥ ವಿಷಯವೇನಿದೆ, ಅದರ ಮೇಲೆ ಹೆಚ್ಚಿನ ಬೆಳಕು ಚೆಲ್ಲುವಂತಾದ್ದು ಏನಾದರೂ ಇದ್ದು ಹೇಳಿದರೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳುತ್ತಿದ್ದೇನೆ. ನಾನು ತಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿಲ್ಲ, ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಛೇರ್ಮನ್‌ರವರೆ, ಅಧ್ಯಕ್ಷ ಪೀಠದಲ್ಲಿ ಕುಳಿತಿರುವ ತಾವು ಒಬ್ಬ ಡಾಕ್ಟರ್ ಆಗಿದ್ದೀರಿ. ಡಾಕ್ಟರ್ ಹತ್ತಿರ ರೋಗಿ ಬಂದರೆ first duty of the doctor is to diagnise the disease and then only he can give treatment. ಟ್ರೀಟ್‌ಮೆಂಟ್ ಮಾಡುವಲ್ಲಿ ವೈದ್ಯರ ಟ್ರಯಲ್ ಅಂಡ್ ಎರರ್ ಮೆಥೆಡ್ ಒಂದಿದೆ, ಯಾವುದೇ ಒಂದು ಸಮಸ್ಯೆಯನ್ನು ನಾವು ತಿಳಿದುಕೊಳ್ಳಬೇಕಾದರೆ ಕನಿಷ್ಠ ಅದರ ಸ್ವರೂಪವನ್ನಾದರೂ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈಗ ವರದಕ್ಷಿಣೆ ಪದ್ಧತಿ ಬಗ್ಗೆ ಉಂಟಾಗುವ ದೌರ್ಜನ್ಯ ಮುಂತಾದ ಸಮಸ್ಯೆಗಳಿಗೆ ಮೂಲ ಕಾರಣವೇನು? ಡೌರಿ ಆಕ್ಟ್‌ನ ಸೆಕ್ಷನ್‌ಗೆ ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿ ಎಷ್ಟು ವರ್ಷವಾಯಿತು, ಆದರೂ ಯಾವುದೇ ಅಮೆಂಡ್‌ಮೆಂಟ್ ಆಗಲಿಲ್ಲ.

ಛೇರ್ಮನ್ :— ತಾವು ತಮ್ಮ ಮಾತನ್ನು ಎಲ್ಲಿಗೆ ನಿಲ್ಲಿಸಿದ್ದಿರೋ ಅಲ್ಲಿಂದ ಮುಂದುವರೆಸಿ.

ಶ್ರೀ ಜಿವಿ. ಶ್ರೀರಾಮರೆಡ್ಡಿ :— ಇತಿಹಾಸಪೂರ್ವ ಸಮಾಜದಲ್ಲಿ ಮನುಷ್ಯನ ಪಾಸಗಿ ಆಸ್ತಿ ಎನ್ನುವ ಪ್ರಶ್ನೆ ಎಲ್ಲಿಂದ ಪ್ರಾರಂಭವಾಯಿತೋ ಅವೊತ್ತಿನಿಂದಲೇ ಮಹಿಳೆಗಿದ್ದಂಥ ಸಂಪೂರ್ಣ ಸಮಾನತೆ ಹೋಯಿತು. ಅದಕ್ಕೆ ಇತಿಹಾಸವೇ ದಾಖಲೆಯಾಗಿದೆ.

Socio-cultural structure of all well religious institutions, rituals that develop the consensus with the private property over a period have played a key role in ensuring further ground on social alienation of woman that begun with origin of private properties and the constituition while on the one hand these structures work as effective powers of roots in inequality.

ಇದು ಮೂಲಭೂತವಾಗಿರುವ ಸಮಸ್ಯೆ. ಅದು ಆಗಿದ್ದು ಏಕೆ? ಮನುಷ್ಯನ ಇತಿಹಾಸಪೂರ್ವ ಸಮಾಜದಲ್ಲಿ ವ್ಯವಸಾಯ ಎನ್ನುವುದು ಪ್ರಾರಂಭವಾಗದೇ ಇದ್ದಂಥ ಒಂದು ಸಾಮಾಜಿಕ ಕಾಲಘಟ್ಟದಲ್ಲಿ, ಪಕ್ಷಿಯಂತೆ ಮಾನವ ಸ್ವೇಚ್ಛೆಯಾಗಿದ್ದ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವವಾಗಿರಲಿಲ್ಲ. ಯಾವೊತ್ತಿನಿಂದ ನಾಗರಿಕತೆ ಬೆಳೆದು ಮನುಷ್ಯ ಪ್ರಕೃತಿಯನ್ನವಲಂಬಿಸದೆ ಪ್ರಕೃತಿಯೇತರ ರೀತಿಯಲ್ಲಿ ಅಂದರೆ ವ್ಯವಸಾಯ ಮಾಡಿಕೊಂಡು ಜೀವನ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ಸಮಸ್ಯೆ ಪ್ರಾರಂಭವಾಯಿತು. ಪ್ರೈವೇಟ್ ಪ್ರಾಪರ್ಟಿ ಕಾನ್‌ಸೆಪ್ಟ್ ಡೆವಲಪ್ ಆದಾಗ ಕೃಷಿ ಪ್ರಧಾನ ಸಮಾಜದಲ್ಲಿ ಪುರುಷ ಪ್ರಧಾನವೆನ್ನುವ ಅಂಶವೂ ಬಂದಿತ್ತು. ಕೃಷಿ ಪ್ರಧಾನ ಸಮಾಜವೆಂದು ಇವೊತ್ತು ನಾವೆಲ್ಲರೂ ಮಾತನಾಡುತ್ತೇವೆ. ಹೀಗೆ ಇದರ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇಡೀ ಮಹಿಳಾ ಸಮಾಜವನ್ನು ಆ ಒಂದು ಸಾಮಾಜಿಕ ವ್ಯವಸ್ಥೆ ಪಾಸಗಿ ಆಸ್ತಿಯ ರೀತಿಯಲ್ಲಿ ತನ್ನ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಮಾಜಿಕ ಸಮ್ಮತಿ ಅಂದರೆ ಸೋಷಿಯಲ್ ಆಪ್ರೂವಲ್

ಬೇಕಾಗಿತ್ತು. ಸಾಮಾಜಿಕ ಸಮ್ಮತಿಯನ್ನು ಪಡೆಯತಕ್ಕಂಥ ವ್ಯವಸ್ಥೆಯಲ್ಲಿ ಶಾಸ್ತ್ರ ಪುರಾಣಗಳೆಲ್ಲವೂ ಸುಸ್ತಿಯಾಗಿದ್ದವು. ಅಂದರೆ ಪ್ರಾರಂಭದಲ್ಲಿ ಆಸ್ತಿಯ ಹಕ್ಕು, ಖಾಸಗಿ ಹಕ್ಕು ಎಂದು ಆರಂಭಗೊಂಡು ಮಹಿಳೆಗಿದ್ದ ಸಂಪೂರ್ಣ ಸ್ವಾತಂತ್ರ್ಯ ಹೊರಟುಹೋಯಿತು. ಅವಳ ಸ್ವಾತಂತ್ರ್ಯಹರಣವಾದ ನಂತರ ಸಾಮಾಜಿಕ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಅದಕ್ಕೆ ಸೋಷಿಯಲ್ ರೆಗ್ಯುಲೇಷನ್ ಬೇಕಾಯಿತು. ಆ ಸೋಷಿಯಲ್ ರೆಗ್ಯುಲೇಷನ್ ಎಲ್ಲಿತ್ತು? ಅದನ್ನು ಮಾಡಿದ್ದು ಯಾರು? ಮಾನ್ಯ ಛೇರ್ಮನ್‌ರವರೆ, ತಮಗೆ ಗೊತ್ತಿರುವಂತೆ ಸುಮಾರು ಐದು ನೂರು ವರ್ಷಗಳ ಹಿಂದೆ ಮನುಸ್ಮೃತಿ ಜಾರಿಯಲ್ಲಿತ್ತು. ಮನುಸ್ಮೃತಿ ಎಂದರೇನು? It is a document to regularise the society. ಆ ಡಾಕ್ಯುಮೆಂಟ್‌ನಲ್ಲಿ ಮಹಿಳೆ ಎಂದರೇನು? ಪುರುಷ ಎಂದರೇನು? ಸಮಾಜದಲ್ಲಿ ಯಾರ್ಯಾರು ಹೇಗಿರಬೇಕೆಂಬ ಬಗ್ಗೆ ರೆಗ್ಯುಲೈಸ್ ಮಾಡಿದರು. 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದದ್ದು ಯಾರು? ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದದ್ದು ಮನು. ಆರ್ಥಿಕ ಸಂಬಂಧಗಳ ಏರು-ಪೇರುಗಳು ಮತ್ತು ಅಸಮಾನತೆಯನ್ನು ಸಾಮಾಜೀಕರಣಗೊಳಿಸಿ ಸಮಾಜವನ್ನು ನಿರ್ದೇಶಿಸುವುದಕ್ಕೆ ಹುಟ್ಟಿದಂಥ ಆ ಶಾಸ್ತ್ರಗಳು ಇವೊತ್ತಿನ ದಿವಸ ಮಹಿಳೆಯನ್ನು ಒಂದು ಪ್ರಾಣಿ ಎನ್ನುವ ರೀತಿಯಲ್ಲೂ ನೋಡುವುದಕ್ಕೂ ತಯಾರಿಲ್ಲ. ಸ್ತ್ರೀ ಪಾಪಯೋನಿಯಲ್ಲಿ ಹುಟ್ಟಿದವಳಾದ್ದರಿಂದ ಅವಳು ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಮನು ಹೇಳಿದ್ದಾನೆ.

ಶ್ರೀ ಕುಂಬಳೆ ಸುಂದರರಾವ್ :— ಆ ಶ್ಲೋಕ ಅಪಾರ್ಥದಲ್ಲಿ ಪ್ರಯೋಗವಾಗುತ್ತದೆಂದು ನನಗನ್ನಿಸುತ್ತದೆ. ಯಾವ ಮನುಸ್ಮೃತಿಯನ್ನು ನೀವು ಹೇಳುತ್ತಿದ್ದೀರೋ ಅಲ್ಲಿ ಸ್ತ್ರೀಗೆ ಅನ್ಯಾಯವಾಗಲಿಲ್ಲ. 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರದೇವತಾ' ಇದು ಮನುಸ್ಮೃತಿಯ ಮಾತು. ಅಂದರೆ, ಎಲ್ಲಿ ನಾರಿ ಗೌರವಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನಲಿದಾಡುತ್ತಾರೆ ಎಂಬ ಅರ್ಥವಿರುವಾಗ 'ಪಿತಾ ರಕ್ಷಿತಃ ಕೌಮಾರೇ ಭರತಾ ರಕ್ಷಿತಃ,' ಈ ಮಾತಿನಲ್ಲಿ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬುದೂ ಬಂದಿದೆ. ಒಂದು ಶ್ಲೋಕಕ್ಕೆ ನಾಲ್ಕು ಪಾದಗಳಿದ್ದರೆ ಮೂರು ಪಾದಗಳನ್ನು ಬಿಟ್ಟು ಒಂದು ಪಾದವನ್ನು ಹಿಡಿದು ಮಾತನಾಡಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮನುಸ್ಮೃತಿಯಲ್ಲಿ ಹೇಳಿರುವುದರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಇಷ್ಟವಾಗುತ್ತದೆ. ಯಾರಿಗೆ ಯಾವುದು ಅನುಕೂಲವಾಗುತ್ತದೋ ಅದನ್ನು ಅವರು ಉಪಯೋಗಿಸಿಕೊಳ್ಳುತ್ತಾರೆ. ಇದು ಇತಿಹಾಸದಲ್ಲಿರುವ ಸತ್ಯ. ಇದನ್ನೆಲ್ಲಾ ಯಾರು ಹೇಳಿದ್ದಾರೋ, ಆ ಆಶ್ರಯದಲ್ಲಿಯೇ ಮಹಿಳೆ ಇವೊತ್ತು ಸಂಪೂರ್ಣ ತುಳಿತಕ್ಕೊಳಗಾಗಿದ್ದಾಳೆ, ದಮನಕ್ಕೊಳಗಾಗಿದ್ದಾಳೆ. ಈ ರೀತಿ ಹೇಳಿದ ಜನರೇ ಮಹಿಳೆ ಹೀಗಿರಬೇಕೆಂದು ಹೇಗೆ ನಿರ್ದೇಶನ ಮಾಡಿದರೆಂದರೆ...

ಛೇರ್ಮನ್ :— ಮಹಿಳೆಯರ ಮೇಲಿನ ದೌರ್ಜನ್ಯ ಬರೀ ಭಾರತದಲ್ಲಿ ಮಾತ್ರವಲ್ಲ, ಪಾಶ್ಚಾತ್ಯ ದೇಶಗಳಲ್ಲೂ ಕೂಡ ಇವೊತ್ತು ನಡೆಯುತ್ತಿದೆ. ಅದರ ಬಗ್ಗೆ ಪ್ರಮೀಳಾ ನೇಸರ್ಗಿಯವರು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಛೇರ್ಮನ್‌ರವರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದರಿಂದ ಮಧ್ಯೆ ತಾವು ಮಾತನಾಡುವುದನ್ನು ಬಿಟ್ಟುಬಿಡಿ.

ಛೇರ್ಮನ್:— ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಮತ್ತೇಕೆ ತಾವು ಮಧ್ಯೆ ಪ್ರವೇಶಿಸುವಂಥಾದ್ದು?

ಛೇರ್ಮನ್:— ಯಾರು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ನನಗೆ ಅವಕಾಶ ಕೊಟ್ಟಿರುವುದರಿಂದ ನಾನು ಮಾತನಾಡುತ್ತಿದ್ದೇನಷ್ಟೆ. ಛೇರ್ಮನ್‌ರವರು ಮಧ್ಯೆ ಪ್ರವೇಶಿಸಬೇಕೆಂದು ನಾನು ಕೇಳುತ್ತಿಲ್ಲ. ಆ ರೀತಿ ಹೇಳಿದಂಥ ಜನರಾದ ನೀವು ಅದನ್ನು ಯಾವ ರೀತಿ ಬೆಳಿಸಿಕೊಂಡು ಬಂದಿದ್ದೀರೆಂದರೆ ಸ್ತ್ರೀ ಹೇಗಿರಬೇಕೆಂದು ಮನು ಹೇಗೆ ಹೇಳುತ್ತಾನೆಂದರೆ...

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ಬಸವರಾಜ್‌ರವರು ಮಾತನಾಡಲು ಎದ್ದು ನಿಂತರು)

ಛೇರ್ಮನ್:— ಅವರು ಮಾತನಾಡುವಾಗ ಮಧ್ಯೆ ಯಾರೂ ಮಾತನಾಡಬಾರದೆಂದು ಹೇಳಿರುವುದರಿಂದ ತಾವು ಕುಳಿತುಕೊಳ್ಳಬೇಕು.

SRI G.V. SRI RAMA REDDY :— Our Shasthras and Puranas had laid emphasis on Dharma, Artha, Kama and Moksha. ಇದು ಯಾರಿಗೆ ಅನ್ವಯಿಸುತ್ತದೆಂದರೆ, ಪತಿವ್ರತಾ ಧರ್ಮ ಹೇಗಿರಬೇಕು, ಮಹಿಳೆಯಾದವಳು ಹೇಗಿರಬೇಕೆಂದರೆ 'ಕ್ಷಮಯಾ ಧರಿತ್ರಿ, ಪೂಜ್ಯೇಶು ಮಾತಾ, ಶಯನೇಶು ವೇಶ್ಯಾ ರೂಪೇಶು ಲಕ್ಷ್ಮಿ,' ಇದನ್ನು ನೀವು ಹೇಳಿದ್ದು. ಇಷ್ಟಿದ್ದರೆ ಮಾತ್ರ ಮಹಿಳೆ ಯಾವ ರೀತಿ ನಡೆದುಕೊಳ್ಳಬೇಕೆಂದು ನಿರ್ದೇಶಿಸುವಂಥಾದ್ದು. ಅಲ್ಲದೆ, ಮಹಿಳೆ ಹೇಗಿರಬೇಕೆಂಬ ಬಗ್ಗೆ ಇತಿಹಾಸದಲ್ಲೂ ಸಹ ತಿಳಿಸಲಾಗಿದೆ. ಹಾಗಾಗಿ, ಸಾವಿರಾರು ವರ್ಷಗಳಿಂದ ಮಹಿಳೆ ಬಗ್ಗೆ ಇರುವ ದೃಷ್ಟಿ ಮತ್ತು ಸಂಬಂಧಗಳು ಕಾನೂನು ಮುಖಾಂತರ ಬದಲಾವಣೆಯಾಗುವುದಕ್ಕೆ ಸಾಧ್ಯವಿದೆಯೆಂದು ತಕ್ಷಣದಲ್ಲಿ ಯಾರಾದರೂ ಭಾವಿಸಿದರೆ ಅದು ಖಂಡಿತವಾಗಿ ಸಾಧ್ಯವಿಲ್ಲ. ಇಲ್ಲಿನ ವ್ಯವಸ್ಥೆಯಲ್ಲಿಯೇ ಮೂಲ ದೋಷ ಅಡಗಿದೆ. ಕೆಲವು ಮಹಿಳಾ ಸಂಘಟನೆಗಳ ವಾದವೂ ಇದೇ ಆಗಿದೆ. ಅದಕ್ಕೆ ಕೆಲವರು ಫೆಮಿನಿಸ್ಟ್ ಅಪ್ರೋಚ್ ಟು ದಿ ಪ್ರಾಬ್ಲಂ ಎಂದು ಹೇಳುವುದು, ಮಹಿಳಾ ಸಮಸ್ಯೆಯನ್ನು ಸ್ತ್ರೀವಾದಿ ದೃಷ್ಟಿಯಿಂದ ನೋಡುವುದು. ಇವೆಲ್ಲವೂ ಒಟ್ಟಾರೆ ವೈಜ್ಞಾನಿಕ ರೀತಿಯಿಂದ ಕೂಡಿದೆ. ಆದರೆ, ಅವರ ದೃಷ್ಟಿಯಲ್ಲಿ ಈ ಎಲ್ಲಾ ಅನಿಷ್ಟಗಳಿಗೂ ಕಾರಣ ಪುರುಷರು ಎಂಬುದು. ಇದೂ ಕೂಡ ವೈಜ್ಞಾನಿಕ ದೃಷ್ಟಿಯಿಂದ ಕೂಡಿದುದ್ದಲ್ಲ. ಮಹಿಳೆ ಇವೊತ್ತು ಶೋಷಿತಳಾಗಿದ್ದು, ಕೇವಲ ಒಂದು ವಿಧಾನದಲ್ಲಿ

ಮಾತ್ರ ಶೋಷಿತಳಾಗಿರದೆ ಎಲ್ಲಾ ಅಂಶಗಳಲ್ಲೂ ಕೂಡ ಶೋಷಿತಳಾಗಿದ್ದಾಳೆ. ಆದರೆ, ಪುರುಷ ಒಂದರಲ್ಲಿ ಮಾತ್ರ ಶೋಷಿತ. ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಅತನ ಶೋಷಣೆಯಾಗುತ್ತದೆ. ಸ್ತ್ರೀ ಶೋಷಣೆ ಮಾತ್ರ ಎಲ್ಲಾ ಅಂಶಗಳಲ್ಲೂ ಇದೆ.

1.20 ಪಿ.ಎಂ.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರತಿಯೊಂದು ಅಂಶದಲ್ಲೂ ಕೂಡ ಶೋಷಣೆಗೆ ಒಳಗಾದಂತಹ ಈ ಜಗತ್ತಿನಲ್ಲಿ ಅತ್ಯಂತ ದಮನಕ್ಕೆ ಒಳಗಾದಂತಹ ಯಾವುದಾದರೂ ಒಂದು ಮನುಷ್ಯ ಪ್ರಾಣಿ ಇದ್ದರೆ ಅದು ಎಲ್ಲಾ ವಿಧದಲ್ಲೂ ಮಹಿಳೆ ಮಾತ್ರ. ಈ ವ್ಯವಸ್ಥೆ ನಿರ್ಮಾಣ ಮಾಡುವುದಕ್ಕೆ ಸಾವಿರಾರು ವರ್ಷಗಳಿಂದ ವ್ಯವಸ್ಥೆ ನಿರ್ಮಾಣ ಮಾಡಿಕೊಂಡು ಬಂದಿರತಕ್ಕಂತಹ ಒಂದು ವ್ಯವಸ್ಥೆ. ಹಾಗಾಗಿ ಆ ವ್ಯವಸ್ಥೆಯಲ್ಲಿರತಕ್ಕಂತಹ ಮೂಲದೋಷವನ್ನು ಹುಡುಕಿ ಅದಕ್ಕೆ ಪರಿಹಾರ ಕಾಣದೆ ನಾವು ಬೇರೆ ಯಾವುದೇ ಕಾರಣದಿಂದ ಯಾವುದೇ ದೃಷ್ಟಿಯಿಂದ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯತೆ ಇಲ್ಲ. ವರದಕ್ಷಿಣೆ ಎಂದು ಮಾತನಾಡುತ್ತಿದ್ದೇವೆ, ವರದಕ್ಷಿಣೆ ಎನ್ನತಕ್ಕಂತಹ ಈ ಪ್ರಶ್ನೆ ಎಲ್ಲಿಂದ ಬಂತು? ಇದು ಗುಲಾಮಗಿರಿ ಸಮಾಜದ ಅವಶೇಷ. ಇದು ಆ ಗುಲಾಮಗಿರಿ ವ್ಯವಸ್ಥೆಯಲ್ಲಿ ಮನುಷ್ಯ ಮನುಷ್ಯನನ್ನು ಮಾರಾಟ ಮಾಡುವಂತಹ ಒಂದು ವ್ಯವಸ್ಥೆ ಇತ್ತು. ಆ ಗುಲಾಮಗಿರಿ ಅವಶೇಷವೇ ಈ ವರದಕ್ಷಿಣೆಯ ಪ್ರಶ್ನೆ. ನಮ್ಮ ಸಮಾಜ ಏನಾಗಿದೆ, ವರದಕ್ಷಿಣೆ ಪ್ರಶ್ನೆ ಭಾರತ ದೇಶದಲ್ಲಿ ಅತಿ ಹೆಚ್ಚಿನ ರೀತಿಯಲ್ಲಿ ಇರತಕ್ಕಂಥದ್ದು. ಏಕೆ ಇಲ್ಲಿ ಹೆಚ್ಚಿಗೆ ಇದೆ, ಬೇರೆ ದೇಶದಲ್ಲಿ ಏಕೆ ವರದಕ್ಷಿಣೆ ಪ್ರಶ್ನೆ ಇಲ್ಲ, ವರದಕ್ಷಿಣೆ ಸಾವುಗಳು ಇಲ್ಲ, ಎಂದರೆ ವ್ಯತ್ಯಾಸ ಇಷ್ಟೆ. ನಮ್ಮ ದೇಶದಲ್ಲಿ ಹಳೆಯ ಸಾಮಾಜಿಕ ಪಳಿಯುಳಿಕೆಗಳು ಇನ್ನೂ ಮುಂದುವರೆಯುತ್ತಿವೆ. ಗುಲಾಮಗಿರಿ ವ್ಯವಸ್ಥೆ ಏನಾಗಿದೆ, ಅದರ ಲಕ್ಷಣ ಇದು. ಹಾಗಾಗಿ ಇವತ್ತು ಕಾನೂನು ಮಾಡುತ್ತೇವೆ, ಆ್ಯಂಟಿ ಡೌರಿ ಕಾನೂನು ಮಾಡಿದೆವು, ಆ ಕಾನೂನಿನಿಂದ ಭಾರತ ದೇಶದಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗುವುದಕ್ಕೆ ಸಾಧ್ಯವಾಗಿದೆ, ಸಾಧ್ಯವಾಗಿಲ್ಲ. ಏಕೆಂದರೆ, ಡೌರಿ ಕೊಡತಕ್ಕಂತಹವರೂ ಹೇಳುವುದಿಲ್ಲ, ತೆಗೆದುಕೊಳ್ಳುವವರೂ ಹೇಳುವುದಿಲ್ಲ. ಇದನ್ನು ಏನೆಂದು ಕರೆಯುತ್ತೀರಿ, ಯಾವ ಕಾನೂನಿನ ಅಡಿಯಲ್ಲಿ ನೀವು ಇದನ್ನು ನಿಷೇಧ ಮಾಡುತ್ತೀರಿ ಹೇಳಿ. ಡೌರಿ ಕೊಟ್ಟವನೂ ಹೇಳುವುದಿಲ್ಲ, ಡೌರಿ ತೆಗೆದುಕೊಂಡವನೂ ಹೇಳುವುದಿಲ್ಲ. ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಯಾರಾದರೂ ತಯಾರಿದ್ದಾರಾ? ಯಾರೂ ತಯಾರಿಲ್ಲ. ನಾವು ಯಾರು ಇದನ್ನು ವಿರೋಧ ಮಾಡುತ್ತೇವೆಂದು ಹೇಳುತ್ತೇವೆ, ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವರದಕ್ಷಿಣೆ ವ್ಯವಸ್ಥೆಗೆ ಬಲಿಯಾಗಿರತಕ್ಕಂತಹ ಬಲಿಪಶುಗಳು ನಾವು. ಇದನ್ನು ನಾವು ಸಾರಾಸಗಟಾಗಿ ಯಾವುದೋ ಒಂದು ಲಕ್ಷಣ ಇದು ವಿಲಕ್ಷಣ ಅಲ್ಲ. ಇದು ಸಮಾಜದ ಲಕ್ಷಣ ಅದನ್ನು ಬದಲು ಮಾಡಬೇಕಾದರೆ ಮೂಲತಃ ಆ ವ್ಯವಸ್ಥೆಯನ್ನು ಬದಲು ಮಾಡದೆ ಸಾಧ್ಯವಿಲ್ಲ. ಈ ರೀತಿ ಹಲವಾರು

ಸಾರಿ ನೀವು ನಾವು ಅಷ್ಟೇ ಚರ್ಚೆ ಮಾಡುವುದಲ್ಲ. ಸುಮಾರು ನೇತಾರರು ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಗಾಂಧಿ ಏನು ಹೇಳಿದರು, ಗಾಂಧಿ ಮತ್ತು ಲೆನಿನ್ ಇಬ್ಬರೂ ಹೇಳಿರತಕ್ಕಂತಹ ವಿಷಯವನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಗಾಂಧಿ ಏನು ಹೇಳಿದರು ಅದು ಎಲ್ಲರಿಗೂ ಗೊತ್ತು. ಮಹಿಳೆಯೊಬ್ಬಳು ಮಧ್ಯ ರಾತ್ರಿಯಲ್ಲಿ ಒಂಟಿಯಾಗಿ ನಿರ್ಭಯವಾಗಿ ಓಡಾಡುವ ಪರಿಸ್ಥಿತಿ ಬಂದಾಗಲೇ ನಿಜವಾದ ಸ್ವಾತಂತ್ರ್ಯ ಎಂದು ಹೇಳಿದರು. ಏನು ಅದರ ಅರ್ಥ? ರಾತ್ರಿ ಮಹಿಳೆಯರು ಎಲ್ಲಾದರೂ ಓಡಾಡಿ ಎಂದು ಅರ್ಥವಲ್ಲ. ಅಂತಹ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಬಂದಿದೆ ಎಂದು ಹೇಳುವುದಕ್ಕೆ ಸಾಧ್ಯ. ಸ್ವಾತಂತ್ರ್ಯ ಎಂದರೆ ಏನು ಫ್ರೀಡಂ ಫಾರ್ ಆಲ್. ಎನ್ನತಕ್ಕಂತಹ ಪ್ರಶ್ನೆ ಅಲ್ಲ. ನಿಜವಾದ ಸ್ವಾತಂತ್ರ್ಯ ಬರುವುದು ಎಂದರೆ ಮಹಿಳೆ ಸ್ವತಂತ್ರ್ಯವಾಗಿ ನಿರ್ಭಯವಾಗಿ ಇರತಕ್ಕಂತಹ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗಬೇಕು. ಅಲ್ಲಿಯವರೆಗೆ ಅದಕ್ಕೆ ನಿಜವಾದ ಅರ್ಥವಿಲ್ಲ. ಇನ್ನೊಂದು ಹೊಸ ಸಮಾಜವಾದವನ್ನು ಹುಟ್ಟು ಹಾಕಿದ ಲೆನಿನ್ ಏನು ಹೇಳುತ್ತಾರೆಂದರೆ, ಸಂಪೂರ್ಣ ಸ್ವೇಚ್ಛೆಯನ್ನು ಮಹಿಳೆ ಪಡೆದಾಗ ಮಾತ್ರ ನಿಜವಾದ ಸಮಾಜವಾದ ಬರುವುದು ಎಂದು ಲೆನಿನ್ ಹೇಳುತ್ತಾರೆ. ಅದರ ಅರ್ಥವೇನು? ಸಮಾಜವಾದವನ್ನು ತರಬಹುದು, ಆದರೆ ನಿಜವಾದ ಸಮಾಜವಾದ ಬರತಕ್ಕಂಥದ್ದು ಯಾವಾಗ ಎಂದರೆ, ಮಹಿಳೆ ಒಬ್ಬಳಿಗೆ ಸಂಪೂರ್ಣ ಸ್ವೇಚ್ಛೆ ಸಿಕ್ಕಿದಾಗ. ಸ್ವೇಚ್ಛೆ ಎಂದರೆ ಏನು, ಸ್ವೇಚ್ಛೆ ಎಂದರೆ ಆರ್ಥಿಕವಾಗಿ ಸಾಮಾಜಿಕವಾಗಿ ತನ್ನ ಕಾಲ ಮೇಲೆ ತಾನು ನಿಂತುಕೊಂಡು ಸ್ವತಂತ್ರ್ಯವಾಗಿ ಆಲೋಚನೆ ಮಾಡತಕ್ಕಂತಹ ಶಕ್ತಿ ಮತ್ತು ಪರಿಸರ ನಿರ್ಮಾಣವಾಗುವುದು ಎಂದು ಅದರ ಅರ್ಥ. ಅಂತಹ ಪರಿಸ್ಥಿತಿ ನಿರ್ಮಾಣ ಮಾಡಲಿಲ್ಲ ಹಾಗಾಗಿ ನಿಮ್ಮ ಸಮಾನತೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಮಹಿಳಾ ಸಮಾನತೆ ಎನ್ನುವುದು ಕಾನೂನಿನಿಂದ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಇದು ಒಂದು ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆ. ಮೂಲತಃ ಈ ಎಲ್ಲಾ ಸಮಸ್ಯೆಗಳು ಬಂದಿರತಕ್ಕಂಥದ್ದು ನಮ್ಮ ಸಮಾಜದಲ್ಲಿ ಆಗಬಹುದು, ಜಗತ್ತಿನ ಬೇರೆ ಯಾವುದೇ ಸಮಾಜದಲ್ಲಿ ಆಗಬಹುದು. ಮಹಿಳೆಯಲ್ಲಿ ಪರತಂತ್ರವಾಗಿ ಇಟ್ಟಿರತಕ್ಕಂಥದ್ದಕ್ಕೆ ಇದೆಲ್ಲಕ್ಕೆ ಮೂಲಭೂತವಾದ ಕಾರಣ ಹರಾವಲಂಬಿ. ಯಾರ ಮೇಲೆಯೋ ಅವಲಂಬಿತವಾಗಿ ಜೀವನ ಆಗಬೇಕು, ಹುಟ್ಟಿದಾಗ ತಂದೆತಾಯಿಗಳ ಆಶ್ರಯದಲ್ಲಿ ಬದುಕಬೇಕು. ದೊಡ್ಡವರಾದರೆ ಗಂಡನ ಆಶ್ರಯದಲ್ಲಿ ಬದುಕಬೇಕು. ವಯಸ್ಸಾದರೆ ಮಕ್ಕಳ ಆಶ್ರಯದಲ್ಲಿ ಬದುಕಬೇಕು. ಮಹಿಳೆಯ ಜೀವನದ ಉದ್ದಕ್ಕೂ ಎಂದೂ ಕೂಡ ಸ್ವತಂತ್ರವಾಗಿ ಆಲೋಚನೆ ಮಾಡತಕ್ಕಂತಹ ಜೀವನ ಮಾಡತಕ್ಕಂತಹ ಪರಿಸ್ಥಿತಿ ಈ ಸಮಾಜದಲ್ಲಿ ನಿರ್ಮಾಣವಾಗಲಿಲ್ಲ. ಹಾಗಾಗಿ ಅಂತಹ ಒಂದು ಸಮಾಜವನ್ನು ನಮ್ಮ ನಮ್ಮ ಮುಂದೆ ಇಟ್ಟುಕೊಂಡು ನಾವು ಈ ಸಮಾಜದಲ್ಲಿ ಇದ್ದು ನಾವು ಕಾನೂನು ಮುಖಾಂತರ ಈ ಸಮಸ್ಯೆ ಪರಿಹಾರ ಮಾಡುತ್ತೇವೆ ಎಂದು ಯಾರು ಭಾವಿಸಿದರೂ ಅದು ಖಂಡಿತ ಕೂಡ ಸಾಧ್ಯವಿಲ್ಲ. ಕಾನೂನುಗಳು ಏನಾದರೂ ಪರಿಣಾಮಕಾರಿಯಾಗಿದ್ದರೆ ನಾನು ಒಂದು

ವಿಷಯ ಹೇಳುತ್ತಿದ್ದೆ, ಸಿಂಧ್ಯರವರು ಇದ್ದರೆ ಬಹಳ ಚೆನ್ನಾಗಿತ್ತು. ಒಂದು ಸ್ಟ್ಯಾಟಿಸ್ಟಿಕ್ಸ್ ಹೇಳುತ್ತೇನೆ, ಕಾನೂನಿನಿಂದ ಏನಾದರೂ ಪ್ರಯೋಜನ ಆಗಿದೆಯಾ ಎನ್ನತಕ್ಕಂಥದ್ದು ಆಲೋಚನೆ ಮಾಡಬೇಕಾಗುತ್ತದೆ. 1999ನೇ ಇಸವಿಯಲ್ಲಿ ಒಂದು ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ರೇಪ್ ಕೇಸ್ 9,793, ಇದು ಆಲ್ ಇಂಡಿಯಾ ಫಿಗರ್. ಮೊಲೆಸ್ಟೇಷನ್ ಕೇಸಸ್ 20,611 ಕಿಡ್ನ್ಯಾಪಿಂಗ್ 12,300, ಈವ್ ಟೀಸಿಂಗ್ 10,283 ಇದೆ. ಕಂಪ್ಯಾರಿಟೀಸ್ ಫಿಗರ್ಸ್ ಏಕೆ ಹೇಳುತ್ತಿದ್ದೇನೆ ಎಂದರೆ, 1987ರಲ್ಲಿ 7,767 ಇದ್ದಂತಹ ರೇಪ್ ಕೇಸಸ್ 1991 ರಲ್ಲಿ 9,793 ಆಗಿದೆ. ನಿಮ್ಮ ಕಾನೂನು ಏನು ಮಾಡಿದೆ? ಯಾವ ಕಾನೂನು ಅದನ್ನು ರಕ್ಷಣೆ ಮಾಡಿದೆ? ನಿಮ್ಮ ಕಾನೂನುಗಳು ಏನೂ ಇಲ್ಲ. ನಿಮ್ಮ ಕಾನೂನುಗಳು ನಿಷ್ಪಯೋಜನ ಎನ್ನುವುದಕ್ಕೆ ನಿದರ್ಶನ. ವರದಕ್ಷಿಣೆ ಸಾವು 1997ರಲ್ಲಿ 1,912, 1991ರಲ್ಲಿ 5,157 ನಿಮ್ಮ ಕಾನೂನು ಏನು ಮಾಡಿದೆ? ಆ್ಯಂಟಿ ಡೌರಿ ಆ್ಯಕ್ಟ್ ಏನು ಮಾಡಿದೆ? ಏನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. Rape occurs every 54 minutes in India. Molestation- every 26 minutes; One kidnapping/abduction every 43 minutes; one act of eve-teasing every 51 minutes, one dowry death every one hour 42 minutes, one act of cruelty every 33 minutes. ನಿಮ್ಮ ಕಾನೂನು ಏನು ಮಾಡಿದೆ? ಕಾನೂನು ಎಲ್ಲಾ ಮಾಡಿದ್ದೇವೆಂದು ಈ ಕಾನೂನಿನಿಂದ ಈ ಸಮಸ್ಯೆ ಪರಿಹಾರವಾಗುತ್ತದೆ ಎಂದು ಯಾರೂ ನಿರೀಕ್ಷೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಈ ಕಾನೂನು ಏಕೆ ನಿಷ್ಪಯೋಜನವಾಗುತ್ತದೆ ಎನ್ನತಕ್ಕಂಥದ್ದು ಕೂಡ ನಾವು ನೋಡಬೇಕಾಗುತ್ತದೆ. ಕಾನೂನು ನಿಷ್ಪಯೋಜನ ಆಗತಕ್ಕಂಥದ್ದು ಏಕೆಂದರೆ, ಮೂಲತಃ ಇದು ಅಸಮಾನತೆಯನ್ನು ಸಮರ್ಥನೆ ಮಾಡತಕ್ಕಂತಹ ಸಮಾಜ. ಅಸಮಾನತೆ ಮನುಷ್ಯ ಮನುಷ್ಯರ ಮಧ್ಯೆ ಅಷ್ಟೇ ಅಲ್ಲ, ಸ್ತ್ರೀ ಪುರುಷರ ಮಧ್ಯೆ ಅಸಮಾನತೆಯನ್ನು ಪೋಷಿಸಿಕೊಂಡು ಅದನ್ನು ವೈಭವೀಕರಿಸಿಕೊಂಡು ಬಂದಿರತಕ್ಕಂತಹ ಸಮಾಜ. ನಾವು ನೀವು ಇಲ್ಲಿ ಮಾತನಾಡತಕ್ಕಂತಹವರು ಎಲ್ಲರೂ ಸೇರಿ ಆತ್ಮ ಶೋಧನೆ ಮಾಡುವುದಾದರೆ ಸ್ತ್ರೀ ಶೋಷಣೆಯನ್ನು ವೈಭವೀಕರಣ ಮಾಡಿಕೊಂಡು, ಅವರನ್ನು ನೇಣುಗಂಬಕ್ಕೆ ಹಾರಿಸಿದ ಜನ ನಾವು ನೀವು ಎಲ್ಲಾ.

(ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಆ ವೈಭವೀಕರಣ ಎಲ್ಲಿಯವರೆಗೆ ಬಂದಿದೆ, ಮಾತೃದೇವೋಭವ ಎಂದು ಹೇಳಿದಂತಹ ಈ ದೇಶದಲ್ಲಿ ಆ ತಾಯಿ ಸ್ಥಾನವನ್ನು ಎಲ್ಲಿಟ್ಟಿದ್ದೀರಿ? ಮಾತೃದೇವೋಭವ ಎಂದು ಹೇಳುವ ಈ ಸಮಾಜ, ಈ ದೇಶ ಇಡೀ ಜಗತ್ತಿನ ಮುಂದೆ ತಲೆ ತಗ್ಗಿಸಬೇಕು. ಗಂಡ ಸತ್ತಂತಹ ಕಾರಣಕ್ಕೋಸ್ಕರ ಹೆಣ್ಣುಮಕ್ಕಳಿಗೆ ಬೆಂಕಿಗೆ ಹಾಕುವಂತಹ ಇತಿಹಾಸ ಈ ದೇಶದಲ್ಲಿ ಇದೆ. ಇದು ಆಗಿದ್ದು ಯೂರೋಪ್‌ನಲ್ಲಿ ಅಲ್ಲ, ಮಾತೃದೇವೋಭವ ಎಂದು ಹೇಳುವ ದೇಶದಲ್ಲಿ. ಮಾತೃವನ್ನು ದೈವ ಸ್ಥಾನಕ್ಕೆ ಹೇಳುವ ಒಂದು ದೇಶದಲ್ಲಿ ಹಾಗಾಗಿ

ನಾವು ಮಾಡತಕ್ಕಂತಹ ಕಾನೂನುಗಳು ಏನು ಇದೆ, ಈ ಕಾನೂನುಗಳು ಏಕೆ ನಿಷ್ಪಯೋಜನ ಆಗುತ್ತದೆ ಎಂದರೆ, ಈ ಸಮಾಜದಲ್ಲಿರತಕ್ಕಂತಹ ಮೂಲಭೂತವಾದ ಅಸಮಾನತೆಯ ಪ್ರಶ್ನೆ ಎಲ್ಲಿಯವರೆಗೆ ಆಸ್ತಿಯ ಹಕ್ಕು ರದ್ದು ಆಗುವುದಿಲ್ಲ, ಅಲ್ಲಿಯವರೆಗೆ ಈ ಅಸಮಾನತೆ ಹೋಗುವುದಿಲ್ಲ. ಏಕೆಂದರೆ, ಇವತ್ತು ನಮ್ಮ ದೇಶದಲ್ಲಿ ಹೆಂಡತಿಯನ್ನು ನನ್ನ ಖಾಸಗಿ ಆಸ್ತಿ ಎಂದು ನಾವೆಲ್ಲರೂ ತೀರ್ಮಾನ ಮಾಡಿರುವುದು. She is my private property. ನಮ್ಮ ಮನೆಯವರು, ನಮ್ಮ ಹೆಂಡತಿ What is this? ನನ್ನ ಮಗಳನ್ನು ಇಂತಹವರಿಗೆ ಕೊಟ್ಟು ಮದುವೆ ಮಾಡಿದ್ದೇನೆ. Is it a commodity? who made it? ನಾವು ಮಹಿಳೆಯನ್ನು ಖಾಸಗಿ ಆಸ್ತಿಯಾಗಿ ನಿರ್ಧಾರ ಮಾಡಿರತಕ್ಕಂಥದ್ದು ಖಾಸಗಿ ಆಸ್ತಿ ಬರೀ ಪ್ರಾಪರ್ಟಿ ಅಲ್ಲ, ಈ ಖಾಸಗಿ ಆಸ್ತಿ ಎನ್ನತಕ್ಕಂತಹ ಮನೋಭಾವ ಎಲ್ಲಿಯವರೆಗೆ ಯಾವ ಸಮಾಜದಲ್ಲಿರುವುದಿಲ್ಲ...

DR. M.P. KARKI :— Wife cannot be public property.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಧ್ಯಕ್ಷರೇ, Concept of private property leads to that. ನಾನು ಹೇಳಿದ್ದು ಅವರನ್ನು ಸಾರ್ವಜನಿಕ ಆಸ್ತಿ ಮಾಡುವುದಕ್ಕೆ ಅಲ್ಲ. ಆಲೋಚನೆ ಮಾಡತಕ್ಕಂಥದ್ದು ವಿಕೃತ ಮನೋಭಾವ. concept of private property leads to where? ನನ್ನ ಮಗಳನ್ನು ಅವರ ಮಗನಿಗೆ ಕೊಟ್ಟು ಮದುವೆ ಮಾಡಿದ್ದೇನೆ. ಏನು ಕೊಡುವುದು. Is it a commodity to give? ಒಬ್ಬ ಹೆಣ್ಣು ಮಗಳಿಗೆ ನನ್ನ ಜೀವನ ಯಾರ ಜೊತೆ ಸಾಗಿಸಬೇಕು ಎಂದು ನಿರ್ಧಾರ ಮಾಡತಕ್ಕಂತಹ ಹಕ್ಕನ್ನು ಈ ದೇಶದಲ್ಲಿ ಕೊಟ್ಟಿಲ್ಲ. ಕಾನೂನಿನ ಪ್ರಕಾರ ಇದೆಲ್ಲಾ ಕೊಟ್ಟು ಬಿಡುತ್ತೇವೆ ಎಂದು ಯಾರಾದರೂ ಹೇಳಿದರೆ, ಅದನ್ನು ನಂಬುವುದಕ್ಕೆ ನಾವೇನು ಪ್ರಾಥಮಿಕ ಶಾಲೆಯ ಮಕ್ಕಳೇ? ಮಹಿಳೆಯರ ಮೇಲೆ ನಡೆದಿರುವ ದೌರ್ಜನ್ಯಗಳ ಅಂಕಿಅಂಶಗಳನ್ನು ನಾನು ಈಗ ಕೊಡಬಯಸುತ್ತೇನೆ. ಕರ್ನಾಟಕ ರಾಜ್ಯ ಬಹಳ ಸುರಕ್ಷಿತವಾಗಿದೆ ಎಂದು ಯಾರೋ ವಿಭಾ ಪಾರ್ಥಸಾರಥಿ ಎಂಬುವವರು ಮಾನ್ಯ ಸಿಂಧ್ಯಾರವರಿಗೆ ಸರ್ಟಿಫಿಕೇಟ್ ಕೊಟ್ಟರಂತೆ. ನಾನು ಈ ಅಂಕಿಅಂಶಗಳನ್ನು ಹೇಳುವಾಗ ಮಾನ್ಯ ಸಿಂಧ್ಯಾರವರು ಸದನದಲ್ಲಿ ಇದ್ದರೆ ಚೆನ್ನಾಗಿತ್ತು. ಕರ್ನಾಟಕ ರಾಜ್ಯಕ್ಕೆ ಸೀಮಿತವಾದಂತೆ ಇತ್ತೀಚಿನ ಅಂಕಿಅಂಶಗಳನ್ನು ನಾನು ಹೇಳುತ್ತೇನೆ. 1994ರಲ್ಲಿ ಅತ್ಯಾಚಾರ ಪ್ರಕರಣಗಳು 276 ಇದ್ದರೆ, 1995ರಲ್ಲಿ, 268, 1996ರಲ್ಲಿ 270, 1997ರಲ್ಲಿ 247, 1998ರಲ್ಲಿ 241 ಅತ್ಯಾಚಾರ ಪ್ರಕರಣಗಳು ನಡೆದಿವೆ. ಯಾವ ಮಜಾ ಕಾಯಿ ಮಾನ್ಯ ಸಿಂಧ್ಯಾರವರಿಗೆ ಸರ್ಟಿಫಿಕೇಟ್ ಕೊಟ್ಟರೋ ಗೊತ್ತಿಲ್ಲ. ಕಿಡ್ನಾಪಿಂಗ್ ಪ್ರಕರಣಗಳು 1994ರಿಂದ 1998ರವರೆಗೆ ಕ್ರಮವಾಗಿ 322 321, 332, 401 ಮತ್ತು 357 ಜರುಗಿವೆ. ಕೊಲ್ಲೆಗಾಲ ಪ್ರಕರಣಗಳು 1994ರಿಂದ 1998ರವರೆಗೆ ಕ್ರಮವಾಗಿ 1115, 1348, 1310, 1405 ಮತ್ತು 1335 ಜರುಗಿವೆ. ಕರ್ನಾಟಕದಲ್ಲಿ ಮಹಿಳೆಯರ ಸ್ಥಿತಿ ಬಹಳ ಚೆನ್ನಾಗಿದೆ, ಏನೂ ಹೊಂದರೆಯಾಗಿಲ್ಲವೆಂದು

ಯಾರೋ ಸರ್ಟಿಫಿಕೇಟ್ ಕೊಟ್ಟಿದ್ದಾರಂತೆ. ನಾನು ಈ ಅಂಕಿ ಅಂಶಗಳ ಜೊತೆಗೆ ಜಂಜಾಟ ಮಾಡಲಿಕ್ಕೆ ತಯಾರಿಲ್ಲ. ಸತ್ಯ ಎಲ್ಲರಿಗೂ ಗೊತ್ತಿದೆ. ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಮಹಿಳೆಯರ ವಿರುದ್ಧ ಯಾವ ರೀತಿ ಅಟ್ರಾಸಿಟೀಸ್ ನಡೆಯುತ್ತಿದೆ ಎಂಬ ಸತ್ಯ ಹೊರಗೆ ಬಂದಿದೆ. ಮಹಿಳೆಯರ ಮೇಲೆ ನಡೆಯತಕ್ಕಂಥ ದೌರ್ಜನ್ಯವನ್ನು ನಿಲ್ಲಿಸತಕ್ಕಂಥ ಕಾನೂನು ಪರಿಣಾಮಕಾರಿಯಾಗಿ ಜಾರಿಯಾಗಬೇಕಾದರೆ ಈ ಇಡೀ ವ್ಯವಸ್ಥೆ ಬದಲಾವಣೆ ಆಗಬೇಕು. ಅದಾಗದೇ ಈ ಕಾನೂನು ಪರಿಣಾಮಕಾರಿಯಾಗಲಿಕ್ಕೆ ಸಾಧ್ಯವಿಲ್ಲ. ಯಾವುದೇ ಒಂದು ಕಾನೂನನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ, ಈಗಿರತಕ್ಕ ಪರಿಸ್ಥಿತಿಗೆ ಹೊಂದಿಕೊಂಡು ಕಾನೂನನ್ನು ರಚನೆ ಮಾಡುತ್ತಾರೆಯೇ ಹೊರತು ವ್ಯವಸ್ಥೆಯನ್ನು ಬದಲಾವಣೆ ಮಾಡತಕ್ಕಂಥ ರೀತಿಯಲ್ಲಿ ಕಾನೂನನ್ನು ರಚಿಸಲು ಯಾರ ಕೈಯ್ಯಲ್ಲೂ ಕೂಡ ಸಾಧ್ಯವೇ ಇಲ್ಲ. ಆ ಕಾನೂನನ್ನು ಮಾಡಿದರೂ ಕೂಡ, ಯಾರೂ ಅದನ್ನು ಜಾರಿಗೊಳಿಸುವುದಿಲ್ಲ. ಆ ರೀತಿಯಾದಂತಹ ಒಂದು ವ್ಯವಸ್ಥೆ ಇವತ್ತು ನಮ್ಮಲ್ಲಿದೆ. ಹೀಗಿರುವಾಗ ಮಹಿಳೆಯರಿಗೆ ಸಮಾನತೆ ನೀಡುವುದು ಸಾಧ್ಯವಿಲ್ಲ. ಯಾವುದೋ ಪುರಾಣಗಳಲ್ಲಿ, ಶಾಸ್ತ್ರಗಳಲ್ಲಿ ಹೇಳಿದ ರೀತಿಯಲ್ಲಿ ಮಹಿಳೆಯರಿಗೆ ಸಮಾನತೆ ಬರಲಿಕ್ಕೆ ಸಾಧ್ಯತೆ ಇಲ್ಲ. ಸಮಾನತೆ ಎನ್ನುವಂತಾದ್ದು ಒಂದು ಸ್ವತಂತ್ರ ಅಸ್ತಿತ್ವ. ಇಂತಹ ಸ್ವತಂತ್ರವಾದಂತಹ ಅಸ್ತಿತ್ವವನ್ನು ವ್ಯಕ್ತಿಯೊಬ್ಬ ಪಡೆಯಬೇಕಾದರೆ, ಮೊಟ್ಟ ಮೊದಲು ಆ ವ್ಯಕ್ತಿಗೆ ಬೇಕಾಗಿರತಕ್ಕಂಥದ್ದು, ನಾನು ಯಾರ ಹಂಗಿಲ್ಲದಿದ್ದರೂ ಕೂಡ ಬದುಕಬಲ್ಲೆ ಎಂಬುದು....

ಶ್ರೀ ಡಿ. ಮಂಜುನಾಥ :— ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು ಏನೋ ಬಹಳ ಚೆನ್ನಾಗಿ ಸ್ವಾರಸ್ಯವಾಗಿ ಮಾತನಾಡುತ್ತಿದ್ದಾರೆ. ಆದರೆ ನಿಯಮ 69ರ ಮೇಲಿನ ಚರ್ಚೆ ಬಹಳ ಜಾಸ್ತಿ ಹೊತ್ತಿನಿಂದ ನಡೆಯುತ್ತಿದೆ.

ಅಧ್ಯಕ್ಷರು :— ಇನ್ನೇನು ಬೇಗ ಮುಗಿಸಿಬಿಡುತ್ತಾರೆ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನು ಯಾರಹಂಗು ಇಲ್ಲದಿದ್ದರೂ ಕೂಡ ಬದುಕಬಲ್ಲೆ ಎನ್ನುವಂತಹ ಸ್ವಾಭಿಮಾನ ಮತ್ತು ಶಕ್ತಿ ಬರಬೇಕಾದರೆ, ಮೊಟ್ಟಮೊದಲು ಆಗಿರಬೇಕಾಗಿರತಕ್ಕಂಥದ್ದು, ತನ್ನ ಕಾಲ ತಾನು ನಿಂತು ಜೀವನ ಮಾಡತಕ್ಕ ಶಕ್ತಿ ಬರಬೇಕು. ಇಷ್ಟೆಲ್ಲಾ ಮಾತನಾಡುವಂತಹ ನಾವು, ಇವತ್ತಿಗೂ ಭಾರತ ದೇಶದಲ್ಲಿ ಮಹಿಳೆಯರಿಗೆ ಆಸ್ತಿ ಹಕ್ಕಿನಲ್ಲಿ ಭಾಗ ಕೊಡಲಿಕ್ಕೆ ತಯಾರಿಲ್ಲ. ನೀನು ಗಂಡನ ಮನೆಗೆ ಹೋಗುತ್ತೀಯಾ, ಅಲ್ಲಿಯ ಆಸ್ತಿಯಲ್ಲಿ ನಿನಗೆ ಭಾಗ ಬರುತ್ತದೆ, ಹಾಗಾಗಿ ನಿನಗೆ ಈ ಆಸ್ತಿಯಲ್ಲಿ ಭಾಗ ಕೊಡಲಿಕ್ಕಾಗುವುದಿಲ್ಲ ಎಂದು ನಾವು ವಾದ ಮಾಡುತ್ತೇನೆ. ಆದರೆ ಆಕೆ ಗಂಡನ ಮನೆಗೆ ಹೋದರೆ ಏನಾಗುತ್ತದೆ ಎಂದರೆ, ಆಕೆಗೆ ಮಕ್ಕಳಿದ್ದರೆ, ಆಕೆಗೆ ಒಂದು ಕಾಸೂ ಕೂಡ ಆಸ್ತಿ ಬರುವುದಿಲ್ಲ. ಯಾವತ್ತೂ ಕೂಡ ಆಕೆಗೆ ಆಸ್ತಿ ಸಿಗುವುದಿಲ್ಲ. ತವರು ಮನೆಯವರು ಒಂದು ರೀತಿ ವಾದ ಮಾಡಿ ಗಂಡನ ಮನೆಗೆ ಕಳುಹಿಸುತ್ತಾರೆ,

ಆದರೆ ಅಲ್ಲಿಯೂ ಕೂಡ ಆಕೆಗೆ ಆಸ್ತಿ ಸಿಗುವುದಿಲ್ಲ. ಅಂದರೆ ಗಂಡು ಮಕ್ಕಳಿಗೆ ಮಾತ್ರ ಆಸ್ತಿ ಕೊಡಬೇಕೆಂಬುದು ಇದರ ಅರ್ಥ. ನಮ್ಮ ರೆವಿನ್ಯೂ ಆಫೀಸ್‌ನಲ್ಲಿ ಇರುವಂತೆ, ಪಾವತಿವಾರು ಖಾತೆ ಬದಲಾವಣೆ ಮಾಡುವಾಗ ಗಂಡು ಅಥವಾ ತಂದೆ ಅಥವಾ ಮಗನ ಹೆಸರನ್ನು ಮಾತ್ರ ಬರೆಯುತ್ತಾರೆ. ಹೆಂಡತಿಯ ಪ್ರಶ್ನೆಯು ಇಲ್ಲಿ ಬರುವುದಿಲ್ಲ. ಈ ಸಮಾಜದ ಅಸಮಾನತೆಯಲ್ಲಿ ಮಹಿಳೆಯರ ಅಸಮಾನತೆಗೆ ಜಾತಿ ಭೇದ ಇಲ್ಲ. ಧರ್ಮದ ಬೇಧ ಇಲ್ಲ. ಎಲ್ಲಾ ಜಾತಿಯ ಪುರುಷರೂ ಕೂಡ ಮಹಿಳೆಯರನ್ನು ಒಂದೇ ದೃಷ್ಟಿಯಲ್ಲೇ ನೋಡುತ್ತಾರೆ. ಜಗತ್ತಿನಲ್ಲಿ ಯಾವುದೇ ಬೇದಭಾವ ಇಲ್ಲದೇ ನೋಡತಕ್ಕಂಥ ಒಂದೇ ಒಂದು ವಸ್ತು ಎಂದರೆ ಮಹಿಳೆ. ಎಲ್ಲಾ ಜಾತಿಗಳೂ, ಎಲ್ಲಾ ಧರ್ಮಗಳೂ ಮಹಿಳೆಯರ ಬಗ್ಗೆ ಒಂದೇ ರೀತಿಯ ಅಭಿಪ್ರಾಯವನ್ನು ಇಟ್ಟುಕೊಂಡಿದೆ. ಅವುಗಳಲ್ಲಿ ಯಾವುದೇ ರೀತಿಯ ಬದಲಾವಣೆ ಇರುವುದಿಲ್ಲ. ದುರಂತ ಏನೆಂದರೆ, ಯಾವುದೇ ಧರ್ಮ ಧರ್ಮದ ಮಧ್ಯೆ ಜಗಳವಾದರೆ ಮೊದಲನೇ ಬಲಿ ಪಶುವೇ ಮಹಿಳೆ. ಜಾತಿ ಜಾತಿಗಳ ಮಧ್ಯೆ ಎಲ್ಲಾದರೂ ಏನಾದರೂ ತಕರಾರು ಬಂದರೆ ಮೊದಲನೇ ಬಲಿ ಪಶುವೇ ಮಹಿಳೆ. ಪುರುಷ ಪ್ರಧಾನವಾದಂತಹ ಸಮಾಜದಲ್ಲಿ ತಮ್ಮ ಆಕ್ರೋಶವನ್ನು, ಸಿಟ್ಟನ್ನು ಅವರ ಮೇಲೆ ತೀರಿಸಿಕೊಳ್ಳುವಾಗ ನಾವು ವರ್ತನೆ ಮಾಡುವುದು ಹೇಗೆ? ನಾವು ಜನರನ್ನು ಏನೆಂದು ಬಯ್ಯುತ್ತೇವೆ? ನಾನು ಇಲ್ಲಿ ಆ ಪದಗಳನ್ನು ಉಪಯೋಗಿಸಬಾರದು. ಅದು ಅಸಂಸದೀಯ ಪದಗಳಾಗಿವೆ. ನಮಗೆ ಯಾರ ಮೇಲಾದರೂ ಸಿಟ್ಟಿದ್ದರೆ ನಾವು ಬಯ್ಯುವಾಗ ಉಪಯೋಗಿಸುವ ಪದಗಳೇನು? ಅವರನ್ನೇ ಮುಂದಿಟ್ಟುಕೊಂಡು ನಾವು ಬಯ್ಯುತ್ತೇವೆ. ಅಂದರೆ ಇದರ ಅರ್ಥವೇನು? ಎಲ್ಲಾ ರೀತಿಯಾದಂತಹ ತುಳಿತಕ್ಕೂ ಕೂಡ ಅವರನ್ನೇ ನಾವು ಬಲಿಪಶುಗಳನ್ನಾಗಿ ಮಾಡುತ್ತಿದ್ದೇವೆ. ನಾವು ಯಾರ ಮೇಲಾದರೂ ಸೇಡು ತೀರಿಸಿಕೊಳ್ಳಬೇಕೆಂದರೂ ಕೂಡ ಅವರನ್ನೇ ಬಲಿಪಶುಗಳನ್ನಾಗಿ ಮಾಡುತ್ತಿದ್ದೇವೆ. ಈ ಸಮಸ್ಯೆ ಬಹಳ ಗಂಭೀರವಾದುದು ಎಂದು ನಾನು ಪ್ರಾರಂಭದಲ್ಲೇ ಹೇಳಿದೆ. ಇತಿಹಾಸದ ಕಾಲ ಗರ್ಭದಿಂದ ಹುಟ್ಟಿ ಬಂದಿರತಕ್ಕಂಥ ಪಾಯಲೆ ಇದು. ಆ ಪಾಯಲೆಗೆ ಎಲ್ಲೋ ಒಂದು ಕಡೆ ಗ್ಲೂಕೋಸ್ ಬಾಟಲ್ ಹಾಕಿ ಮಾಡುವುದಕ್ಕಾಗುವುದಿಲ್ಲ. ಕೆಲವರು ನಮ್ಮ ಮಾನಸಿಕ ದೃಷ್ಟಿ ಬದಲಾವಣೆಯಾಗಬೇಕು, ನಮ್ಮ ಮನೋದೃಷ್ಟಿ ಬದಲಾವಣೆಯಾಗಬೇಕು ಎಂದು ವಾದ ಮಾಡುತ್ತಾರೆ. ಮೆಂಟಲ್ ಮೇಕಪ್ ಹೇಗೆ ಬರುತ್ತದೆ? ಮೆಂಟಲ್ ಮೇಕಪ್ ಸಾಮಾಜಿಕ ಪರಿಸರದ ಒತ್ತಡದಿಂದ ಬರುತ್ತದೆ. ಫ್ರೆಂಚ್ ಫಿಲಾಸಫರ್ ಆದ ಡೆಕಾರ್ಟ್ ಎಂಬುವವನು ಏನು ಹೇಳುತ್ತಾನೆ ಎಂದರೆ, ``I am thinking because I am here, I am here because I am thinking" ಏನು ಇದರ ಅರ್ಥ? ನಾನು ಒಬ್ಬ ಇದ್ದರೆ ನಾನು ಆಲೋಚನೆ ಮಾಡುತ್ತೇನೆ. ನಾನು ಇಲ್ಲದೇ ಇದ್ದರೆ ಆಲೋಚನೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಅಂತಹ ಒಂದು ಪರಿಸರ ಇದು. ಮಹಿಳೆಯರಿಗೆ ಸಮಾನತೆ ಕೊಡಬೇಕೆಂದು ಮಾನಸಿಕವಾಗಿ ನಾವೆಲ್ಲಾ ತೀರ್ಮಾನ ಮಾಡತಕ್ಕಂಥ ಪ್ರಶ್ನೆ ಇದಲ್ಲ. The material condition of the women has to change.

ಆದಾಗದ ಹೊರತು ಯಾವುದೇ ಬದಲಾವಣೆಯನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆಂದು ಬದಲಾವಣೆಯಾಗುವವರೆಗೂ ಕೂಡ ಅವರನ್ನು ತುಳಿಯುತ್ತಲೇ ಇರಬೇಕು, ಅವರ ಮೇಲೆ ದಮನ ನಡೆಯುತ್ತಿರಬೇಕು, ಅವರನ್ನು ಶೋಷಣೆ ಮಾಡಬೇಕು ಎಂಬತಕ್ಕುಂಥ ವಾದ ಇದಲ್ಲ. ಆ ಬದಲಾವಣೆಯ ಪ್ರೊಸೆಸ್‌ನಲ್ಲಿ ಇವೆಲ್ಲವೂ ಕೂಡ ಒಂದು ಭಾಗವಾಗಬೇಕು. ನಾವು ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ ನಡೆಸತಕ್ಕುಂಥದ್ದು, ಮಹಿಳೆಯರ ಮೇಲಿನ ದಮನದ ವಿರುದ್ಧ ಹೋರಾಟ ನಡೆಸತಕ್ಕುಂಥದ್ದು, ಮಹಿಳೆಯರ ಬಗ್ಗೆ ಕಾನೂನುಗಳನ್ನು ತರತಕ್ಕುಂಥದ್ದು, ಇವೆಲ್ಲವೂ ಕೂಡ ಆ ಬದಲಾವಣೆಯ ಪ್ರೋಸೆಸ್‌ನ ಭಾಗವಾಗಬೇಕೇ ಹೊರತು ಮೇಲ್ನೋಟಕ್ಕೆ ಅದನ್ನು ಕೊಟ್ಟುಬಿಟ್ಟು, ನಾವೆಲ್ಲಾ ಕಾನೂನು ಮಾಡಿದ್ದೇವೆ ನೀವು ಸುರಕ್ಷಿತವಾಗಿರಿ ಎಂದು ಹೇಳುವುದಲ್ಲ. ಈಗ ಮಹಿಳಾ ಮೀಸಲಾತಿ ಮಸೂದೆಗೆ ಯಾವ ರೀತಿಯ ಪರಿಸ್ಥಿತಿ ಬಂದಿದೆ ಎಂಬುದು ನಮಗೆಲ್ಲಾ ಇವತ್ತು ಗೊತ್ತೇ ಇದೆ. ಮೇಲ್ನೋಟಕ್ಕೆ ನಾವು ಮಾಡತಕ್ಕದೆಲ್ಲವನ್ನೂ ಕೂಡ ಮಾಡಿ, ಅದನ್ನು ಕೈ ಬಿಡುವುದರಿಂದ ಸಮಸ್ಯೆ ಪರಿಹಾರವಾಗುತ್ತದೆ ಎನ್ನಲಿಕ್ಕೆ ಖಂಡಿತಾ ಸಾಧ್ಯವಿಲ್ಲ. ಇದಕ್ಕೆ ಬಹಳ ಆಳವಾದಂತಹ, ದೀರ್ಘವಾದಂತಹ ಚರ್ಚೆ ಮತ್ತು ಮಂಥನ ಬೇಕಾಗುತ್ತದೆ. ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಇವನ್ನೆಲ್ಲಾ ಚರ್ಚೆ ಮಾಡತಕ್ಕುಂಥ ಪ್ರಶ್ನೆ ಇದಲ್ಲ. ಮೂಲತಃ ಇರತಕ್ಕುಂಥ ಪ್ರಶ್ನೆಗಳೇನು? ಆ ಪ್ರಶ್ನೆಗಳ ಆಧಾರದ ಮೇಲೆ ನಾವು ಚರ್ಚೆ ಮಾಡತಕ್ಕುಂಥ ಸಂದರ್ಭದಲ್ಲಿ ನಮಗೆ ಒಂದು ಸ್ಪಷ್ಟತೆ ಇರಬೇಕು. ಮಹಿಳಾ ಸಮಾನತೆ ಮಾತುಗಳಿಂದ ಬರಲಿಕ್ಕೆ ಸಾಧ್ಯತೆ ಇಲ್ಲ, ಕಾನೂನುಗಳಿಂದ ಬರಲಿಕ್ಕೆ ಸಾಧ್ಯತೆ ಇಲ್ಲ. ಈ ವ್ಯವಸ್ಥೆ ಮೂಲಭೂತವಾಗಿ ಬದಲಾವಣೆಯಾಗದೇ ಆ ಬದಲಾವಣೆ ಬರಲಿಕ್ಕೆ ಸಾಧ್ಯವಿಲ್ಲ ಎನ್ನುವಂಥಾದ್ದನ್ನು ನಾವು ಸ್ಪಷ್ಟವಾಗಿ ತಿಳಿದಿರಬೇಕು. ಆ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡತಕ್ಕುಂಥ ಹೋರಾಟಗಳು ನಡೆದರೆ ಮಾತ್ರ ಈ ಸಮಸ್ಯೆ ಬದಲಾವಣೆಯಾಗುತ್ತದೆ. ಕಾನೂನುಗಳಲ್ಲಿ ಬದಲಾವಣೆ ಮಾಡಿ ಮಾತ್ರವೇ ಇದು ಆಗುತ್ತದೆ ಎಂದು ಹೇಳಿದರೆ, ಅದು ಖಂಡಿತಾ ಸಾಧ್ಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಬಜೆಟ್ ಮೇಲೆ ಚರ್ಚೆ ನಡೆಸುವುದು ಇನ್ನೂ ಬಾಕಿ ಇದೆ. ಮಾನ್ಯ ಪುಟ್ಟಣ್ಣಯ್ಯನವರು, ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಐದೈದು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿಬಿಡಿ. ಕೊನೆಯದಾಗಿ ಮಾನ್ಯ ಲೀಲಾದೇವಿ ಪ್ರಸಾದ್‌ರವರಿಗೂ ಅವಕಾಶ ಮಾಡಿಕೊಡುತ್ತೇನೆ.

+ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಸನ್ಮಾನ್ಯ ಅಧ್ಯಕ್ಷರೇ, ಏನಾದರೂ ಮಾಯ ಮಂತ್ರ ಬಂದಿದ್ದರೆ, ಎಲ್ಲಾ ಗಂಡಸರನ್ನೂ ಹೆಂಗಸರನ್ನಾಗಿ ಮಾಡಿ, ಎಲ್ಲಾ ಹೆಂಗಸರನ್ನೂ ಗಂಡಸರನ್ನಾಗಿ ಮಾಡಿದ್ದರೆ, ಅವರವರ ಕಷ್ಟ ಏನೆಂಬುದು ಕರೆಕ್ಟಾಗಿ ಗೊತ್ತಾಗುತ್ತಿತ್ತು. ಇತಿಹಾಸದ ಕಾಲ ಗರ್ಭವನ್ನು ಇವತ್ತಿನ ಪರಿಸ್ಥಿತಿಗೆ ತಗೆದುಕೊಂಡು ಬಹಳ ಗಂಭೀರವಾಗಿ ಸನ್ಮಾನ್ಯ ಗೆಳೆಯರಾದ ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ.

ಇವತ್ತಿನ ಸಮಸ್ಯೆಯನ್ನು ನಾವು ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು. ಇವತ್ತು ಎರಡು ಪ್ರಮುಖವಾದ ಸಮಸ್ಯೆಗಳಿವೆ. ಒಂದು ವರದಕ್ಷಿಣೆ, ಮತ್ತೊಂದು ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ. ಈ ಮದುವೆ ಎನ್ನುವ ಕಾನ್ಸೆಪ್ಟ್ ಏನಿದೆ, ಈ ಮದುವೆ ಏಕೆ ಅನ್ನುವುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇದೇನು ಸಂಪ್ರದಾಯವೇ ಅಥವಾ ವೈಜ್ಞಾನಿಕ ಕಾರಣವೇ? ಉದಾಹರಣೆಗೆ ಹೇಳುವುದಾದರೆ, ಹಿಂದೆ ಸಿಫಿಲಿಸ್, ಈಗ ಏಡ್ಸ್ ಎಂಬ ರೋಗಗಳು ಬಂದಿವೆ. ಏನು ಇದರ ಉದ್ದೇಶ? ಇವು ಬರಲಿಕ್ಕೆ ಕಾರಣವೇನು? ಲೈಂಗಿಕತೆ ಅಶಿಸ್ತು ಇದ್ದರೆ ಮನುಷ್ಯ ನಾಶವಾಗುತ್ತಾನೆ. ಮುಂದಿನ ಜನಾಂಗ ಆರೋಗ್ಯಕರವಾಗಿ ಹುಟ್ಟಬೇಕಾದರೆ, ಲೈಂಗಿಕತೆ ಒಂದು ಶಿಸ್ತು ಇರಬೇಕೆಂದು ಹೇಳಿ ವೈಜ್ಞಾನಿಕವಾದ ಕಾರಣದ ಆಧಾರದ ಮೇಲೆ ಸಂಪ್ರದಾಯಗಳನ್ನು ಸೃಷ್ಟಿ ಮಾಡಿದರು. ಇದು ಅಷ್ಟೇ ಕಾರಣ. ಈಗಾಗಲೇ ಅಂಕಿಅಂಶಗಳ ಪ್ರಕಾರ ಭಾರತ ದೇಶದಲ್ಲಿ 2,000 ಇಸವಿ ಹೊತ್ತಿಗೆ ಒಂದು ಕೋಟಿ ಜನ ಏಡ್ಸ್ ಪೀಡಿತರು ಇದ್ದಾರೆ. ಇಂಡಿಯಾ ದೇಶದಲ್ಲಿ ಈ ಅಂಕಿಅಂಶ ಇದೆ. ಈ ಶಿಸ್ತನ್ನು ನಾವು ಅಳವಡಿಸುವುದರಲ್ಲಿ ಫೇಲ್ಯೂರ್ ಆಗಿದ್ದೇವೆ. 15 ಲಕ್ಷ 20 ಲಕ್ಷ, 40 ಲಕ್ಷ, 70 ಲಕ್ಷ ಖರ್ಚು ಮಾಡಿ ಮದುವೆ ಮಾಡುವುದು ಭ್ರಷ್ಟಾಚಾರ ಬೆಳೆಯುವುದಕ್ಕೆ ಒಂದು ಕಾರಣ. ಯಾರೋ ಮದುವೆ ಮಾಡುತ್ತಾರೆ ಎಂದರೆ ಇನ್‌ವಿಟೇಷನ್ ಮಾಡುವುದು, ಒಬ್ಬೊಬ್ಬರು ಒಂದೊಂದು ತರಹ ಮದುವೆ ಮಾಡುವುದು. ತಾವು ಹೇಳಿದಿರಿ, ಬೆಂಗಳೂರಿನಲ್ಲಿ ಒಂದು ವರ್ಷ ಮುಂಚಿತವಾಗಿ ಮದುವೆ ಭತ್ರ ಬುಕ್ ಆಯಿತು ಎಂದು 30 ಲಕ್ಷ 40 ಲಕ್ಷ ಖರ್ಚು ಮಾಡುವುದನ್ನು ನೋಡಿ ಬೇರೆ ಎಲ್ಲಾ ತರಹದ ವರದಕ್ಷಿಣೆ ಪದ್ಧತಿ ಸೃಷ್ಟಿಯಾಯಿತು. ವಿಶೇಷವಾಗಿ ಎಲ್ಲಾ ಮದುವೆಗಳು ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ನೋಂದಾವಣೆಯಾಗಬೇಕು. ನೋಂದಾವಣೆಯಾದರೆ ಮಾತ್ರ ಸಮಸ್ಯೆ ಬಗೆಹರಿಸಬಹುದು. ವಿಜಯಾಗೆ ಗ್ರಾಮಾಂತರ ಪ್ರದೇಶಗಳಲ್ಲಿ, ಸುಮಾರು ಪಂಚಾಯಿತಿಗಳನ್ನು ಮಾಡಿ ವಿಶೇಷವಾಗಿ ಮಹಿಳೆಯರಿಗಾಗಿ ಸೂಕ್ತ ವ್ಯವಸ್ಥೆ ಮಾಡಬೇಕು. ಎರಡು ಮಕ್ಕಳ ತಾಯಿ ನನ್ನ ಹತ್ತಿರ ಒಂದು ಹೆಣ್ಣು ಗಂಡು ಬೇರೆ ಮದುವೆ ಮಾಡಿಕೊಂಡಿದ್ದಾರೆ, ಆದರೆ ನನ್ನ ಎರಡು ಮಕ್ಕಳಿಗೋಸ್ಕರ ನಾನು ಬದುಕಬೇಕು, ಅವನ ಹತ್ತಿರ ಒಂದು ಎಕರೆ ಜಮೀನು ಇದೆ, ಅರ್ಧ ಎಕರೆ ಕೊಡಿಸಿಕೊಡಿ ಎಂದು ಹೇಳಿದರು. ಆಸ್ತಿ ಹಕ್ಕು ಇದ್ದರೆ ಪುರುಷ ಮಹಿಳೆ ಮೇಲೆ ದೌರ್ಜನ್ಯವಾಗಲಿ, ಬೇರೆ ರೀತಿ ಅನೈತಿಕವಾಗಿ ಚಿಂತನೆ ಮಾಡುವುದಕ್ಕೆ ಸಾಧ್ಯವಿಲ್ಲ. ಮೊದಲನೆಯದಾಗಿ ಮಹಿಳೆಯರಿಗಾಗಿ ಸಮಾನವಾದ ಆಸ್ತಿ ಹಕ್ಕು ಕೊಡಬೇಕು. ಅದರಿಂದ ಸಮಸ್ಯೆ ಬಗೆಹರಿಸಬಹುದು. ನಾವು ಹಿಂದು ಧರ್ಮದಲ್ಲಿ, ಸಂಸ್ಕೃತದಲ್ಲಿ ಏನು ಹೇಳುತ್ತೇವೆ, ಎಂದರೆ, ಎಳೆ ಕನ್ಯೆ ಮೊದಲನೆಯ ಗಂಡನೇ ಶೂರನು, ಎರಡನೇ ಗಂಡನು ಗಂಧರ್ವ ಮೂರನೇ ಗಂಡ ಅಗ್ನಿ ಮತ್ತು ಅವರಿಂದ ಸುಖ ಭೋಗಗಳನ್ನು ಅನುಭವಿಸಿ ಮಕ್ಕಳನ್ನು ಪಡೆದು ನಾಲ್ಕನೇ ಗಂಡನಾದ ವಾಸ್ತವವನ್ನು ಮದುವೆಯಾಗುತ್ತಿದ್ದರು. ನಾವೆಲ್ಲಾ ಅದೇ ರೀತಿ ಮದುವೆಯಾಗುತ್ತಿದ್ದೆವು. ಇದು ಈ ಮಂತ್ರ ಎಷ್ಟು ಸಮಂಜಸ. ಇದನ್ನು ನಾವು

ಬದಲಾವಣೆ ಮಾಡಬೇಕು. ಪದ್ಧತಿಗಳನ್ನು ನಾವು ಬದಲಾವಣೆ ಮಾಡಬೇಕು. ಮದುವೆ ಮಾಡತಕ್ಕಂಥದ್ದಕ್ಕೆ ಒಂದು ಶಿಸ್ತಿನ ಬಗ್ಗೆ ಯೋಚನೆ ಮಾಡದೆ ಇದ್ದರೆ ಕಷ್ಟ. ಆದ್ದರಿಂದ ಮಹಿಳೆಯರಿಗಾಗಿ ನನ್ನ ಸಲಹೆ ಮಹಿಳೆಯರಿಗಾಗಿ ಆಸ್ತಿ ಹಕ್ಕನ್ನು ಕೊಡಬೇಕು. ಎರಡನೆಯದು ಪಿಸಿಆರ್ ಆಕ್ಟ್ ಹೇಗೆ ಮಾಡಿದ್ದೀರಿ? ಮಹಿಳೆ ಮೇಲೆ ಅತ್ಯಾಚಾರ ಮಾಡತಕ್ಕಂಥದ್ದಕ್ಕೆ ಕಾನೂನಿನಲ್ಲಿ ಗಂಭೀರವಾದ ಭಯದ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕೆ ಕಾರಣ ಮಾಧ್ಯಮದವರು. ಸಿನಿಮಾ ವಾಲ್‌ಪೋಸ್ಟ್‌ನ್ನು ಯಾವ ರೀತಿಯಾಗಿ ಹೆಣ್ಣನ್ನು ಉಪಯೋಗಿಸಿಕೊಳ್ಳುತ್ತಾರೆ, ಟಿ.ವಿ. ಮಾಧ್ಯಮದಲ್ಲೂ ಕೂಡ ಹೆಣ್ಣು ಎಂದರೆ ಯಾವುದೋ ಭೋಗದ ವಸ್ತು ಎಂಬ ಭಾವನೆ ಕ್ರಿಯೇಟ್ ಆಗಿದೆ. ಆದ್ದರಿಂದ ಮಹಿಳೆಯರಿಗೆ ವಿಶೇಷವಾದ ಉದ್ಯೋಗ ವ್ಯವಸ್ಥೆ ಬಗ್ಗೆ ಯೋಚನೆ ಮಾಡಬೇಕು. ನನ್ನನ್ನು ನಾನೇ ಉದಾಹರಣೆ ಮಾಡಿಕೊಂಡರೆ ನಮ್ಮ ಅಪ್ಪ ನನಗೆ ಮದುವೆ ಮಾಡಿದಾಗ ಸಾಲ ಮಾಡಿ 50,000 ರೂಪಾಯಿ ಖರ್ಚು ಮಾಡಿ ಮದುವೆ ಮಾಡಿದ. ನನ್ನ ಸ್ನೇಹಿತ ಸರಳ ಮದುವೆ ಮಾಡಿಕೊಂಡ. ಅವರು ಸಿಕ್ಕಿ ಸುಮಾರು 20 ವರ್ಷಗಳಾಗಿದ್ದವು, ಇವತ್ತು ಸಿಕ್ಕಿ ನಾನು ಮದುವೆಯಾಗುವ ದುಡ್ಡಿನಲ್ಲಿ ನಾನು ಒಂದು ಸೈಟ್ ತೆಗೆದುಕೊಂಡೆ, ಇವತ್ತು 52 ಲಕ್ಷಕ್ಕೆ ಕೇಳುತ್ತಿದ್ದಾರೆ ಎಂದ. ಆರ್ಥಿಕವಾಗಿ ನಾವು ಯೋಚನೆ ಮಾಡಬೇಕು. ಆರ್ಥಿಕ ಅಸಮಾನತೆಯಿಂದ ಆ ಮಹಿಳೆ ಜೀವನ ಬಹಳ ಕಷ್ಟವಾಗಿದೆ. ಆದ್ದರಿಂದ ನಾವು ಮದುವೆ ಎಂದರೆ, ಇನ್ನೊಂದು ಕಾರಣ ಉದಾಹರಣೆಗೆ ಯಾವುದೋ ಒಂದು ಜಮೀನು ತೆಗೆದುಕೊಳ್ಳುತ್ತೇವೆ. ಸರ್ವೇ ನಂ. 116 ನನ್ನ ಎರಡು ಎಕರೆ ಎಂದು ಸುಮ್ಮನೆ ಗದ್ದೆ ಇದ್ದ ಹಾಗೆ ಇದ್ದಿದ್ದರೆ ಯಾವ ಸರ್ವೇ ನಂ. ನಮಗೆ ಗೊತ್ತಾಗಬೇಕು. ಹೀಗೆ ನಾವು ಜೀವನದಲ್ಲಿ ಸಾಗಿಸಲು ಒಂದು ಹೆಣ್ಣು ಒಂದು ಗಂಡು ಅದಕ್ಕೋಸ್ಕರವಾಗಿ ಒಂದು ಶಿಸ್ತನ್ನು ಇಟ್ಟುಕೊಂಡಿದ್ದೇವೆ. ಅಸಮಾನತೆ ವಿರುದ್ಧ, ಒಂದು ಸಾಂಸ್ಕೃತಿಕ ಬದಲಾವಣೆ ಆಗತಕ್ಕಂತಹ ಚಿಂತನೆ ಆಗಬೇಕು. ಕಾನೂನಿನಲ್ಲಿ ಭದ್ರತೆ ಆಗಬೇಕೆಂದು ಹೇಳುತ್ತಾ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಸಭಾಧ್ಯಕ್ಷರೇ, ಬಹಳಷ್ಟು ಮಾತುಗಳು ಆಗಿವೆ. ಜೊತೆಗೆ ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ಅವರು ಒಂದು ದಿಕ್ಕು ಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದರು ಎಂದು ಕಾಣುತ್ತದೆ ವಿಶೇಷವಾದ ವಿಚಾರ ನಾನು ಪ್ರಸ್ತಾಪ ಮಾಡಿದೆ, ಶ್ರೀರಾಮರೆಡ್ಡಿಯವರು ಹಿಂದಿನ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಮಗೆ ಮುಂದೆ ಇರುವುದು, ನಮ್ಮ ರಾಜ್ಯದಲ್ಲಿ, ನಮ್ಮ ಸುತ್ತಮುತ್ತ ಮಹಿಳೆಯರ ಮೇಲೆ ಆಗುತ್ತಿರತಕ್ಕಂತಹ ದೌರ್ಜನ್ಯ ಅತ್ಯಾಚಾರ ನಾವು ಅವರನ್ನು ನೋಡುತ್ತಿರುವ ದೃಷ್ಟಿ, ಇದನ್ನು ನಾವು ಯಾವ ರೀತಿ ಬದಲಾವಣೆ ಮಾಡಿಕೊಳ್ಳಬೇಕು, ಅಷ್ಟಕ್ಕೆ ಸೀಮಿತವಾಗಿ ವಿಷಯ ಇಟ್ಟುಕೊಂಡು ಈ ದೇಶದಲ್ಲಿ, ಪ್ರಧಾನಮಂತ್ರಿ ಮಾಡಿದ್ದೇವೆ ಮುಖ್ಯಮಂತ್ರಿಯನ್ನಾಗಿ ಮಾಡಿದ್ದೇವೆ,

ನ್ಯಾಯಾಧೀಶರನ್ನಾಗಿ ಮಾಡಿದ್ದೇವೆ ಮಹಿಳೆಯರನ್ನು ಎಲ್ಲಾ ಸ್ಥಾನದಲ್ಲಿ ನೇಮಕ ಮಾಡಿದ್ದೇವೆ. ಆದರೆ ನಮ್ಮ ನಿತ್ಯ ಜೀವನದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಕೋನ ಮಾತ್ರ ಇದುವರೆಗೆ ಬದಲಾವಣೆಯಾಗಿಲ್ಲ. ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಮಹಿಳಾ ಆಯೋಗ ಎಂದು ಒಂದು ಮಾಡಿದ್ದೇವೆ. ಮಹಿಳೆಯರಿಗೆ ತೊಂದರೆ ಬಂದರೆ ಅವರಿಗೆ ಸಹಾಯವಾಗಬೇಕು: ಇದುವರೆಗೆ ಮಹಿಳಾ ಆಯೋಗದಿಂದ ಎಷ್ಟು ಜನರಿಗೆ ಸಹಾಯವಾಗಿದೆ ಎಂದು ಲೆಕ್ಕ ಹಾಕಿದರೆ ನನಗೆ ಉತ್ತರ ಸಿಗಲಿಲ್ಲ. ಪ್ರಾಯಶಃ ಮಹಿಳಾ ಆಯೋಗಕ್ಕಿಂತ ಬೆಂಗಳೂರು ನಗರದ ಪೋಲಿಸ್‌ನವರು ಮಹಿಳಾ ಸಹಾಯ ವಾಣಿ ಎಂದು ಏನು ಮಾಡಿದರು ಅದರಿಂದ ಜಾಸ್ತಿ ಉಪಯೋಗವಾಗುತ್ತಿದೆ. ಬಹಳಷ್ಟು ಜನರ ದುಃಖ ದುಮ್ಮಾನಕ್ಕೆ ಸ್ಪಂದಿಸುತ್ತಿದ್ದಾರೆ. ಮಹಿಳಾ ಆಯೋಗವನ್ನು ಯಾರಿಗೋ ಒಂದು ರಾಜಕೀಯ ಆಶ್ರಯ ಕೊಡುವುದಕ್ಕೆ ಇರುವ ಸಂಸ್ಥೆ ಎಂದು ತಿಳಿದುಕೊಳ್ಳುವುದರ ಬದಲು ನಿಜವಾಗಿ ಸಮಾಜದ ಮಹಿಳೆಯರ ದುಃಖ ದುಮ್ಮಾನಕ್ಕೆ ಉತ್ತರ ಹುಡುಕುವ ಒಂದು ಆಯೋಗ ಮಾಡುವುದಕ್ಕೆ ಈ ಸರ್ಕಾರ ತಯಾರಿದೆಯಾ ಎಂದು ಒಂದು ಪ್ರಶ್ನೆ. ಈಗಾಗಲೇ ಮಾನಭಂಗದ ಬಗ್ಗೆ ಭಾರತ ಸರ್ಕಾರದ ಗೃಹ ಸಚಿವರು ಒಂದು ಕಠಿಣವಾದ ನಿಲುವನ್ನು ತೆಗೆದುಕೊಂಡಿದ್ದಾರೆ. Rape is a heinous crime. ಅದಕ್ಕೆ ಕ್ಯಾಪಿಟಲ್ ಪನಿಷ್‌ಮೆಂಟ್ ಕೊಡಬೇಕೆಂದು ಅದಕ್ಕೆ ಒಂದು ತೀರ್ಮಾನ ತೆಗೆದುಕೊಂಡು ಆ ದಿಕ್ಕಿನಲ್ಲಿ ವಿಚಾರ ನಡೆಯುತ್ತಿದೆ. Nothing short of that. ಯಾವ ರೀತಿ ಮ್ಯಾನ್ ಸ್ಲಾಟರ್‌ನ ನಾವು ಒಂದು ಕೊಲೆ ಎಂದು ನೋಡುತ್ತೇವೆ, ಮಾನಭಂಗ ಕೂಡ ನಾವು ಅದೇ ರೀತಿ ಸ್ವೀಕರಿಸಬೇಕು. ಅದೇ ತರಹ ಉಗ್ರತನವನ್ನು ನಾವು ತೋರಿಸಬೇಕು. ಇವತ್ತು ಏನಾಗಿದೆ ಈ ಸದನದಲ್ಲಿ ಕೆಲವು ಸಂದರ್ಭದಲ್ಲಿ ನಾನು ಗಮನಿಸಿರುವುದು ಎಲ್ಲಾ ಕಡೆ ನಮ್ಮ ಹಾಸ್ಯಕ್ಕೆ ನಮ್ಮ ಅಪಹಾಸ್ಯಕ್ಕೆ ನಮ್ಮ ವ್ಯಂಗ್ಯಕ್ಕೆ, ನಮ್ಮ ಬೈಗುಳಕ್ಕೆ ಹೆಣ್ಣು ಒಂದು ಸಾಧನ. ಹೆಣ್ಣು ಇಲ್ಲದೆ ನಮಗೆ ಜೋಕ್ ಮಾಡುವುದಕ್ಕೆ ಕೂಡ ಬರುವುದಿಲ್ಲ. ಹೆಣ್ಣು ನಿಂತು ಮಾತನಾಡಿದರೆ ಅದೇ ಒಂದು ಜೋಕ್. ನಮ್ಮ ಮಾನಸಿಕ ಸ್ಥಿತಿಯನ್ನು ನಾವು ಬದಲಾವಣೆ ಮಾಡಿಕೊಳ್ಳದೆ ಇದ್ದರೆ ಕಾನೂನು ಎಷ್ಟೇ ತಂದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ಇರುತ್ತದೆ, ಕಾನೂನು ಇರುವಾಗ ಅದನ್ನು ಇಂಪ್ಲಿಮೆಂಟ್ ಮಾಡುವವರು ಹಾಗೆ ಇಂಪ್ಲಿಮೆಂಟ್ ಮಾಡಬಾರದು ಎಂದು ಕೂಡ ಯೋಜನೆ ಮಾಡುತ್ತಾರೆ. ನಾನು ಸನ್ಮಾನ್ಯ ಗೃಹ ಸಚಿವರ ಗಮನಕ್ಕೆ ಒಂದೇ ಒಂದು ವಿಚಾರ ತರುತ್ತೇನೆ, 1987ರಲ್ಲಿ ಆಗಸ್ಟ್ ತಿಂಗಳಲ್ಲಿ ಈ ದೇಶದ ಸರ್ವೋಚ್ಚ ನ್ಯಾಯಾಲಯ ದುಡಿಯುವ ಮಹಿಳೆಯರ ಲೈಂಗಿಕ ಶೋಷಣೆ ಇದನ್ನು ನ್ಯಾಯಾಲಯ ಅಪರಾಧ ಎಂದು ಘೋಷಣೆ ಮಾಡಿದೆ. 1997ರ ಆಗಸ್ಟ್ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನಲ್ಲಿ ವಿಶೇಷವಾಗಿ ಉದ್ಯೋಗಸ್ಥ ಮಹಿಳೆಯರ ಮೇಲಿನ ದೌರ್ಜನ್ಯ ಲೈಂಗಿಕ ಕಿರುಕುಳವನ್ನು ಕರಾರುವಾಕ್ಕಾಗಿ ವ್ಯಾಖ್ಯಾನ ಮಾಡಿ ಕಿರುಕುಳ ಎಂದರೆ ಮುಜುಗರ ಉಂಟು ಮಾಡುವ ಲೈಂಗಿಕ ಅರ್ಥ ಹೊರಡಿಸುವ ಪ್ರತ್ಯಕ್ಷ ಹಾಗೂ ಪರೋಕ್ಷ ವರ್ತನೆ. ಎಲ್ಲರೂ ಈ ಅಪರಾಧ ಮಾಡಿಯೇ ಮಾಡಿದ್ದೇವೆ. ಎಲ್ಲರೂ ಅಪರಾಧಿಗಳು. ಎರಡನೆಯದು

ದೈಹಿಕ ಸಂಪರ್ಕ ಮತ್ತು ಸೂಚನೆ ಮತ್ತು ಮೂರನೆಯದು ಲೈಂಗಿಕ ಅರ್ಥ ಹೊರಡಿಸುವ ಮಾತುಗಳ ಬಳಕೆ, ಅಶ್ಲೀಲ ಚಿತ್ರಗಳನ್ನು ತೋರಿಸುವುದು ಮತ್ತು ಲೈಂಗಿಕ ಸಂಪರ್ಕ ಹೊಂದಲು ಕೋರಿಕೆ, ಅಥವಾ ಒತ್ತಡ ಮತ್ತು ಆರನೆಯದಾಗಿ ಮುಜುಗರ ಉಂಟು ಮಾಡುವ ಲೈಂಗಿಕ ಸ್ವರೂಪದ ಯಾವುದೇ ಅಂಗಿಕ ಕ್ರಿಯೆಗಳ ಮಾತುಗಳ ಬಳಕೆ. ಇದನ್ನು ಹೇಳಿ ಸರ್ವೋಚ್ಚ ನ್ಯಾಯಾಲಯ ಏನೇನು ಮಾಡಬೇಕೆಂದೂ ಕೂಡ ಡೈರೆಕ್ಷನ್ ಕೊಟ್ಟಿದೆ. ಖಾಸಗಿ ಅಥವಾ ಸಾರ್ವಜನಿಕ ವಲಯದ ಎಲ್ಲಾ ಮಾಲೀಕರು ಅಥವಾ ಸಂಬಂಧಪಟ್ಟ ಮಾಲೀಕರು ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ತೆಗೆದುಕೊಂಡು ಕ್ರಮಗಳನ್ನು ಅದು ಸೂಚಿಸಿದೆ. We should advertise these things. ಮೊದಲನೆಯದು, ಲೈಂಗಿಕ ಕಿರುಕುಳವನ್ನು ನಿಶೇಧಿಸುವ ಬಗ್ಗೆ ಸ್ಪಷ್ಟ ಪ್ರಕಟಣೆ ಹೊರಡಿಸಿ, ಮಹಿಳಾ ಉದ್ಯೋಗಿಗಳಲ್ಲಿ ಅರಿವು ಮೂಡಿಸಲು ಪ್ರಚಾರ ಮಾಡುವುದು. ಎರಡನೆಯದಾಗಿ the state Government has got a duty..ಸರ್ಕಾರಿ ಮತ್ತು ಸಾರ್ವಜನಿಕ ವಲಯಗಳಲ್ಲಿನ ನೌಕರರ ಶಿಸ್ತು ಮತ್ತು ನಡತೆಗೆ ಸಂಬಂಧಿಸಿದಂತೆ ರಚನೆಯಾಗಿರುವ ನಿಯಮ ನಿಬಂಧನೆಗಳಲ್ಲಿ ಲೈಂಗಿಕ ಕಿರುಕುಳವನ್ನು ನಿಷೇಧಿಸಲಾಗಿರುವ ಅಂಶಗಳನ್ನು ಸೇರಿಸಬೇಕು. It should become part of the Rules and Regulations. ಲೈಂಗಿಕ ಕಿರುಕುಳ ನೀಡಿದವರಿಗೆ ವಿಧಿಸಲಾಗುವ

ದಂಡ ಶಿಕ್ಷೆಯ ಬಗ್ಗೆ ವಿವರಿಸಬೇಕು. ಇನ್ನು ಮೂರನೆಯದಾಗಿ ಖಾಸಗಿ ಸಂಸ್ಥೆಗಳು ಅಂದರೆ ಅವುಗಳ ಮಾಲೀಕರು ಈ ಮೇಲೆ ತಿಳಿಸಿದ ಅಂಶಗಳನ್ನು ಕೈಗಾರಿಕಾ ಉದ್ಯಮ 1946ರ ಕಾಯಿದೆಯಡಿಯಲ್ಲಿ ಸೇರ್ಪಡೆ ಮಾಡಲು ಕ್ರಮ ಕೈಗೊಳ್ಳಬೇಕು. ಮಹಿಳೆಯರಿಗೆ ಕೆಲಸ ಮಾಡುವ ಮಧ್ಯೆ ವಿಶ್ರಾಂತಿ ಪಡೆಯಲು, ಅವರ ಉತ್ತಮ ಆರೋಗ್ಯಕ್ಕಾಗಿ ಶುಚಿತ್ವ ಮತ್ತು ಇತ್ಯಾದಿ ಉತ್ತಮ ವಾತಾವರಣವನ್ನು ಉಂಟುಮಾಡಿ ಆ ಮೂಲಕ ಮಹಿಳೆಯರಿಗೆ ಮುಜುಗರದ ವಾತಾವರಣವನ್ನು ತೊಡೆದುಹಾಕುವಲ್ಲಿ ಉದ್ದಿಮೆದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಐ.ಪಿ.ಸಿ. ಅಥವಾ ಯಾವುದೇ ಕಾಯಿದೆಯಡಿಯಲ್ಲಿ ಅಪರಾಧ ಎನಿಸುವ ಅಥವಾ ದೈಹಿಕ ಕಿರುಕುಳಕ್ಕೆ ಸಂಬಂಧಿಸಿದ ಪ್ರಕರಣ ಗಮನಕ್ಕೆ ಬಂದಾಗ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಜರುಗಿಸಲು ತೋಡಿಕೊಳ್ಳಬೇಕು. ಮೊದಲು ಹೂಡಿದವರು ಬೆಂಬಲ ಮತ್ತು ಸಾಕ್ಷ್ಯ ವಿಚಾರಣೆಯ ಗುರುತನ್ನು ಹೇಳಿ ನೇಡಿನ ಕ್ರಮವನ್ನು ಅವರ ಮೇಲೆ ಜರುಗಿದಂತೆ ನೋಡಿಕೊಳ್ಳಬೇಕು ಎಂದು ಹೇಳಲಾಗಿದೆ. ಬಹಳ ದುಃಖದ ವಿಚಾರವೆಂದರೆ ಇಷ್ಟೊಂದು ಕಾರ್ಯಕ್ರಮ ಸಂಘಟಿಸಿದ್ದರೂ ಕೂಡ ಮಹಿಳೆಯರ ಹಕ್ಕಿನ ಬಗ್ಗೆ ಯೋಚನೆ ಮಾಡುತ್ತಿರುವಂಥ ಇಂದಿನ ದಿನಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಮ್ಮ ಕಾರ್ಮಿಕ ಸಂಘಟನೆಗಳ ಮುಂದಾಳತ್ವ ಹೊತ್ತ ಕಾರ್ಖಾನೆಗಳಲ್ಲಿ it should become part of the rules and regulations ಎಂದು ಏಕೆ ಮಾಡುತ್ತಿಲ್ಲವೆನ್ನುವುದೇ ದುಃಖದ ವಿಚಾರವಾಗಿದೆ. Male

chauvenism ಎನ್ನುವುದು ಎಲ್ಲಾ ಕಡೆಯೂ ಇಂದು ಇದೆ.ಹೆಣ್ಣು ಇರುವುದೇ ಭೋಗದ ವಸ್ತು ಎನ್ನುವ ಹಾಗಿದೆ. ಆ ಹೆಣ್ಣನ್ನು ಸೋದರಿ, ಮಗಳು ಎನ್ನುವ ಕಾನ್‌ಸಪ್ಟ್‌ನಲ್ಲಿ ನೋಡುವುದೇ ಇಲ್ಲ. ಆ ಕಾರಣಕ್ಕೋಸ್ಕರ ನಾನು ಅಧ್ಯಕ್ಷರ ಮುಖಾಂತರ ಹೇಳಬಯಸುವುದೇನೆಂದರೆ ತುರ್ತು ಪರಿಹಾರವಾಗಿ ಈಗಿರುವ ಕಾನೂನನ್ನು ಬಿಗಿಗೊಳಿಸಿ ಇಂಪ್ಲಿಮೆಂಟಿಂಗ್ ಅಥಾರಿಟಿಯವರು ಏನಿದ್ದಾರೆ ಅವರಿಗೆ ಮನುಷ್ಯತ್ವ ಬರುವ ಹಾಗೆ ಮಾಡಬೇಕು. ಒಬ್ಬ ಹೆಂಗಸು ಮಾನಭಂಗಕ್ಕೆ ಒಳಗಾಗಿ ದೂರನ್ನು ನೀಡಲು ಪೋಲಿಸ್ ಠಾಣೆಗೆ ಹೋದರೆ ಅವಳನ್ನು ಪ್ರೊಫೆಶನಲ್ ಹೆಣ್ಣೆಂದು ಭಾವಿಸಿಕೊಂಡು ಆ ಧಾಟಿಯಲ್ಲಿಯೇ ಪೋಲಿಸರು ಮಾತನಾಡುತ್ತಾರೆ. ಮೊದಲೇ ಆ ಹೆಣ್ಣು ಜರ್ಝರಿತಳಾಗಿ ಬಂದಿರುವವಳನ್ನು ಇನ್ನಷ್ಟು ಕಂಗಾಲಾಗುವಂತೆ ಇವರು ಮಾಡುತ್ತಾ ಆಕೆಯ ಶೀಲಕ್ಕೆ ಸಂಬಂಧಪಟ್ಟಂತೆಲ್ಲಾ ಪ್ರಶ್ನೆ ಮಾಡುತ್ತಾ ಕೊನೆಗೆ ಏತಕ್ಕಾದರೂ ಪೋಲಿಸ್ ಠಾಣೆಗೆ ನಾನು ಬಂದೆನೋ ಎನ್ನುವ ಭಾವನೆ ಆ ಹೆಣ್ಣಿಗೆ ಬರುವಂತೆ ಮಾಡುತ್ತಾರೆ. ಪ್ರಾಯಶಃ ಈ ಪೋಲಿಸ್ ಠಾಣೆಯಲ್ಲಿ ಆಗುವ ಮಾನಭಂಗಕ್ಕಿಂತ ಹಿಂದೆ ಆದ ಮಾನಭಂಗ ಕಡಿಮೆಯೇ ಆಗಿರುತ್ತದೆ. ಆ ಮನುಷ್ಯತ್ವ ಎಂಬುದನ್ನು ಪೋಲಿಸ್ ಇಲಾಖೆ ಮತ್ತು ಇತರ ಇಲಾಖೆಗಳಲ್ಲಿರುವವರಿಗೆ ತುಂಬಿಸುವುದಕ್ಕೆ ಪ್ರಯತ್ನ ಪಡುತ್ತೀರಾ? ಶಾಲಾ ಕಾಲೇಜುಗಳಲ್ಲಿರುವ ಗಂಡುಮಕ್ಕಳಿಗೂ ಕೂಡ ಅವರ ಜವಾಬ್ದಾರಿ ಬಗ್ಗೆ ತಿಳಿಹೇಳುವ ದಿಕ್ಕಿನಲ್ಲಿ, ಹೆಣ್ಣುಮಕ್ಕಳನ್ನು ಕೊಂಕುದೃಷ್ಟಿಯಲ್ಲಿ ನೋಡಬಾರದು ಎಂದು ಹೇಳುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೀರಾ? ಈ ವಿಚಾರಗಳ ಬಗ್ಗೆ ಎಲ್ಲರೂ ಯೋಚನೆ ಮಾಡಬೇಕಾಗಿದೆ. ಇನ್ನು ಮನೆಗಳಲ್ಲಿ ನಡೆಯುವ ಬೆಂಕಿ ಪ್ರಕರಣದ ಬಗ್ಗೆ ಹೇಳಬೇಕೆಂದರೆ ನಾನು ಒಮ್ಮೆ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ 717ರ ಪ್ರಕರಣದಲ್ಲಿ ದಾಖಲಾಗಿರುವ ರೋಗಿಗಳನ್ನು ನೋಡಿದೆ, ಸ್ಟೌವ್ ಸಿಡಿದು ಸೀಮೆಎಣ್ಣೆ ಮೈಗೆ ಬಿದ್ದು ಬೆಂಕಿ ಹಚ್ಚಿಕೊಂಡಿರುವವರಲ್ಲಿ ಬಹುತೇಕ ಮದುವೆಯಾಗಿರುವ ಯುವತಿಯರುಗಳೇ ಹೆಚ್ಚಿದ್ದರು. ಆಶ್ಚರ್ಯಕರ ಪ್ರಶ್ನೆಯೆಂದರೆ ಈ ಸ್ಟಾಪ್ ಅತ್ತೆಯರಿಗೇಕೆ ಸಿಡಿದು ಬೆಂಕಿ ಹಚ್ಚಿಕೊಳ್ಳುವುದಿಲ್ಲ? ಅಲ್ಲಿದ್ದ ಯುವತಿಯರುಗಳಿಗೆ ಸ್ಟೌವ್ ಸಿಡಿಯಬೇಕೆ? ಅತ್ತೆಯರಿಗೇಕೆ ಸ್ಟೌವ್ ಸಿಡಿಯುವುದಿಲ್ಲ? ಕೆಲವರಿಗೆ ಮನೆಯಲ್ಲಿ ಅಡಿಗೆ ಮಾಡುವುದಕ್ಕೆ ಸೀಮೆಎಣ್ಣೆ ಸಿಗದಿದ್ದರೂ ಹೆಣ್ಣು ಮಗಳನ್ನು (ಸೊಸೆ) ಸುಡುವುದಕ್ಕೆ ಸೀಮೆಎಣ್ಣೆ ಸಿಗುತ್ತದೆ. ಹೆಣ್ಣು ಹುಟ್ಟಿದಾಗ ಮಗಳು, ನಂತರ ಸೋದರಿ, ಆಮೇಲೆ ಮಡದಿ, ಯಾರಿಗೋ ಸೊಸೆಯಾಗಿ ತದನಂತರದ ದಿನಗಳಲ್ಲಿ ಅವಳೇ ಅತ್ತೆಯಾಗುತ್ತಾಳೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವೆ) :— ಅತ್ತೆಯರಿಗೇಕೆ ಸ್ಟೌವ್ ಸಿಡಿಯುವುದಿಲ್ಲವೆಂದರೆ ನನಗನ್ನಿಸುವ ಹಾಗೆ ಸೊಸೆ ಬಂದ ತಕ್ಷಣ ಅಡಿಗೆ ಮನೆಯ ಜವಾಬ್ದಾರಿಯನ್ನು ಸೊಸೆಗೆ ಕೊಟ್ಟುಬಿಡುವುದರಿಂದ ಅತ್ತೆಗೆ ಸ್ಟೌವ್ ಸಿಡಿಯುವುದಿಲ್ಲವೇನೋ.

ಶ್ರೀ ಎಸ್. ಸುರೇಶ್ ಕುಮಾರ್ :— ನಾನು ಯಾವುದೇ ಒಂದು ಲೈಟರ್ ವೇನಲ್ಲಿ ಮಾತನಾಡುತ್ತಿಲ್ಲ. ಇಲ್ಲಿ ಹಾಸ್ಯಕ್ಕಿಂತ ಭಾವನೆಗಳು ಮುಖ್ಯವಾಗಿರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸೀಮೆಎಣ್ಣೆ ಸ್ಟೌವ್‌ಗಳು ಅತ್ತೆಯ ಮನೆಯಲ್ಲಿಯೇ ಸಿಡಿಯುತ್ತದೆಯೇ ಹೊರತು ತವರು ಮನೆಯಲ್ಲಿ ಏತಕ್ಕೆ ಸಿಡಿಯುವುದಿಲ್ಲ ಎನ್ನುವುದು ಅದರ ಅರ್ಥ. ಸುರೇಶ್ ಕುಮಾರ್‌ರವರು ಹೇಳಿದ್ದು ಅದನ್ನೇ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನಭಂಗ ಮಾಡುವ ವ್ಯಕ್ತಿಗೆ ಆ ಹೆಣ್ಣಿನ ಬಗ್ಗೆ ತನ್ನ ಸೋದರಿಯ ಅಥವಾ ತಾಯಿಯ ಭಾವನೆ ಬರುವುದಿಲ್ಲವೋ ಅದೇ ರೀತಿಯಲ್ಲಿ ಸೊಸೆಗೆ ತೊಂದರೆ ಕೊಡುವಾಗ ತನ್ನ ಮಗಳಿಗೂ ಅತ್ತೆಯ ಮನೆಯಲ್ಲಿ ಇದೇ ರೀತಿ ತೊಂದರೆ ಬರಬಹುದು ಎಂದು ಅನ್ನಿಸುವುದೇ ಇಲ್ಲ. ಈ ನಿಟ್ಟಿನಲ್ಲಿ ನಾನು ಎರಡೇ ಎರಡು ಪ್ರಶ್ನೆ ಕೇಳುತ್ತೇನೆ. ಒಂದು ಕಾನೂನನ್ನೇನೋ ಮಾಡಿದ್ದಾರೆ, ಅದನ್ನು ಸ್ವಾಗತ ಮಾಡಬೇಕಾಗಿದೆ. ಏನೆಂದರೆ ಮದುವೆಯಾದ ಹೆಣ್ಣು 7 ವರ್ಷಗಳೊಳಗೆ ಅಸಹಜ ಮರಣಕ್ಕೆ ತುತ್ತಾದರೆ ಅದರ ಬಗ್ಗೆ ತಹಸೀಲ್ದಾರ್‌ರವರಿಂದ ವಿಚಾರಣೆ ಆಗಬೇಕು ಎನ್ನುವ ಕಾನೂನು ಬಂದಿದೆ. ಆದರೆ ಆ ಕಾನೂನು ಬಿಗಿಯಾಗಿ ಆಚರಣೆಯಲ್ಲಿಲ್ಲ. ಇದರಲ್ಲಿ ಯಾವ್ಯಾವುದೋ ರಾಜಕೀಯ ಒತ್ತಡದಿಂದಾಗಿ ಸರಿಯಾಗಿ ಆಚರಣೆಯಲ್ಲಿಲ್ಲ. ಕೇವಲ ಒಂದು ಪ್ರಕರಣಗಳಲ್ಲಾದರೂ ವರದಕ್ಷಿಣೆ ಸಾವು ಎಂದು ಹೇಳಿ ಇದಕ್ಕಾಗಿ ಇಂಥವರಿಗೆ ಶಿಕ್ಷೆಯಾಗಿದೆ ಎನ್ನುವ ಮೆಸೇಜ್ ಸೊಸೈಟಿಗೆ ಹೋಗಿಲ್ಲ. The message should go to the society and work as deterrant. ಇನ್ನು ಎರಡನೆಯ ವರ್ಗದ ಜನಗಳೂ ಇದ್ದಾರೆ, ಇವರು ವರದಕ್ಷಿಣೆ ಬೇಡ ಎಂದು ಹೇಳುವ ಹುಡುಗರಿಗೆ ಏನಾದರೂ ಐಬು ಇರಬಹುದು ಎಂದು ಹೇಳುವವರಾಗಿರುತ್ತಾರೆ. ಐಬು ಇರುವ ಕಾರಣದಿಂದ ಧಾರಾಳವಾಗಿ ನನಗೆ ವರದಕ್ಷಿಣೆ ಬೇಡ ಎಂದು ಮುಂದೆ ಬಂದಿದ್ದಾನೆ ಎನ್ನುತ್ತಾರೆ. ಇದು ಬಹಳ ವಿಚಿತ್ರ.

ಅಧ್ಯಕ್ಷರು :— ನಾನು ಒಮ್ಮೆ ಸ್ಕೌಟ್ಸು ಕಮಿಟಿ ಆಡ್ರೆಸ್ ಮಾಡಿ ಮಾತನಾಡುವಾಗ ಸ್ವಲ್ಪ ಎಕ್ಸೈಟ್ ಆಗಿ ಹೇಳಿದೆ, ಏನೆಂದರೆ ಹುಡುಗ ವರದಕ್ಷಿಣೆ ಕೇಳಿದರೆ ನಿನಗೆಲ್ಲೋ ಆರೋಗ್ಯ ಸರಿ ಇಲ್ಲವೆಂದು ಕಾಣುತ್ತದೆ, ಅದಕ್ಕೋಸ್ಕರ ನೀನು ಹೆಂಡತಿ ಬೇಡ ಹಣವೇ ಬೇಕು ಎನ್ನುತ್ತಿದ್ದೀಯಾ, ಆದುದರಿಂದ ನೀನು ಷಂಡನಂತೆ. ಈ ರೀತಿಯ ವರನನ್ನು ಷಂಡರೆಂದೇ ಡಿಕ್ಲೇರ್ ಮಾಡಿ ಎಂದು ನಾನು ಹೇಳಿದ್ದೆ. ಸ್ವಲ್ಪ ದಿನಗಳಾದ ಮೇಲೆ ಕನ್ನಡ ದಿನಪತ್ರಿಕೆಯೊಂದರಲ್ಲಿ ಜೋಕ್ ಹಾಕಿದ್ದರು, ಅದರಲ್ಲಿ ಗಂಡ ಹೆಂಡತಿ ಡಾಕ್ಟರ್ ಹತ್ತಿರ ಹೋಗಿ ನಮಗೆ ಬಹಳ ದಿನಗಳಾದರೂ ಮಕ್ಕಳೇ ಆಗಲಿಲ್ಲವೆಂದು ಹೇಳಿದಾಗ ಡಾಕ್ಟರ್ ವರದಕ್ಷಿಣೆ ತೆಗೆದುಕೊಂಡಿದ್ದೀರಾ ಎಂದು ಪ್ರಶ್ನೆ ಹಾಕಿದ್ದಾರೆ, ಆ ಪ್ರಶ್ನೆಯ ಬ್ರಾಕೆಟ್‌ನಲ್ಲಿ ಸಭಾಧ್ಯಕ್ಷರು ಎಂದು ಇತ್ತು.

ಶ್ರೀ ಎಸ್. ಸುರೇಶ್ ಕುಮಾರ್ :— ಸಭಾಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಒಪ್ಪಲಿ ಅಥವಾ ಒಪ್ಪದಿರಲಿ, ಮದುವೆ ಎನ್ನುವುದು it is a bond; It is a partnership. ಅವರು ಪ್ರತಿ ಅಥವಾ ಇನ್ನೇನಾದರೂ ಹೇಳಬಹುದು. ಆದರೆ ಇದು ಒಂದು ರೀತಿಯ

ಪವಿತ್ರವಾದ ಬಂಧನವಾಗಿದೆ. ಆದರೆ ಇವೊತ್ತು it has become an investment for business. ಇವೊತ್ತು ವರದಕ್ಷಿಣೆ ಬಗ್ಗೆ ಕ್ರೈಸ್‌ಲಿಸ್ಟೇ ಹಾಕಿಬಿಟ್ಟಿದ್ದಾರೆ. ನಾನು ಹಾಗೇ ಸುಮ್ಮನೆ ಲೆಕ್ಕಾಚಾರ ಹಾಕಿದೆ. ಬೆಂಗಳೂರಿನಲ್ಲಿ ಸುಮಾರು 250 ಕಲ್ಯಾಣ ಮಂಟಪಗಳಿವೆ, ಇದರಲ್ಲಿ ಆಷಾಢ ಮಾಸ, ಶನಿವಾರ, ಮಂಗಳವಾರ, ಅಮಾವಾಸ್ಯೆ ಮದುವೆ ಮಾಡುವುದಿಲ್ಲವೆನ್ನುವುದನ್ನೂ ಪರಿಗಣಿಸಿದರೂ ಕೂಡ ಒಂದೊಂದು ಕಲ್ಯಾಣ ಮಂಟಪದಲ್ಲೂ 100 ಮದುವೆಗಳು ನಡೆಯುತ್ತದೆ ಎಂದು ಲೆಕ್ಕ ಹಾಕಿದರೂ ಕೂಡ ಒಟ್ಟು 25000 ಮದುವೆಗಳು ನಡೆಯುತ್ತದೆ. ನಾನು ಇದರಲ್ಲಿ ಚರ್ಚ್‌ನಲ್ಲಿ ನಡೆಯುವ ಮದುವೆ ಮತ್ತು ಆರ್ಯಸಮಾಜ ಮತ್ತು ಇನ್ನಿತರ ಕಡೆ ನಡೆಯುವ ಮದುವೆಗಳನ್ನು ಸೇರಿಸಿಲ್ಲ. ಇದನ್ನು ಬಿಟ್ಟು 25000 ಮದುವೆ. ಒಂದೊಂದು ಮದುವೆಗೂ ಸರಾಸರಿ ಒಂದು ಲಕ್ಷ ರೂ.ಗಳನ್ನು ಅನಗತ್ಯ ಖರ್ಚಿನ ವ್ಯಾಪ್ತಿಯಲ್ಲಿ ಸೇರಿಸಿದರೆ 250 ಕೋಟಿ ರೂ.ಗಳಾಗುತ್ತದೆ. ಆ 250 ಕೋಟಿ ರೂ.ಗಳನ್ನು ನನಗೆ ಕೊಟ್ಟರೆ ಬೆಂಗಳೂರಿಗೆ ಬೇಕಾಗುವ ಮೂಲಭೂತ ಕಾರ್ಯಗಳನ್ನು ಒಂದು ವರ್ಷದಲ್ಲಿ ನಾನು ಪೂರೈಸುತ್ತೇನೆ. ನಾನು ಕ್ಯಾಲ್ಕುಲೇಷನ್‌ಗೋಸ್ಕರ ಹೇಳುತ್ತಿದ್ದೇನೆ. ಆದರೆ ಇವೊತ್ತು ಅದನ್ನು ರೆಸಿಸ್ಟ್ ಮಾಡುವ ಕೆಪ್ಯಾಸಿಟಿ ಎಷ್ಟಿದೆ? ನಾವು ಇಂದು ಅಧಿಕಾರ ಸ್ಥಾನದಲ್ಲಿದ್ದೇವೆ, ಮಂತ್ರಿಗಳಾಗಿರಬಹುದು ಅಥವಾ ಶಾಸಕರುಗಳಾಗಿರಬಹುದು, ನಾವು ಇವೊತ್ತು ಅದರ ಬಗ್ಗೆ ಡಿಸೈಡ್ ಮಾಡುತ್ತೇವೆಯೇ We will become a role model to the society. ಇವನ ಹತ್ತಿರ ಹಣವಿದ್ದರೂ ಕೂಡ ಮಗಳ ಮದುವೆಯನ್ನು ಬಹಳ ಸರಳವಾಗಿ ಮಾಡಿದ ಎಂದು ಹೇಳುವ ತಾಕತ್ತು ನಮ್ಮ ಹತ್ತಿರ ಇದೆಯೇ? ನಮ್ಮ ಹತ್ತಿರ ಆ ತಾಕತ್ತು ಇಲ್ಲದಿರುವಾಗ ಯಾರೋ ಬೀದಿಯಲ್ಲಿ ಹೋಗುವ ಬಡವರಿಂದ ಹೇಗೆ ಎಕ್ಸ್‌ಪೆಕ್ಟ್ ಮಾಡುವುದಕ್ಕಾಗುತ್ತದೆ? ಇಂದು ಮಹಿಳಾ ಆಯೋಗವೇನಿದೆ ಅದನ್ನು ಹೆಚ್ಚು ಶಕ್ತಿಯುತವನ್ನಾಗಿ ಮಾಡಬೇಕಾಗಿದೆ. ಇದಲ್ಲದೇ ನಾನೇನು ಸುಪ್ರೀಕೋರ್ಟ್ ತೀರ್ಮಾನವನ್ನು ಹೇಳಿದೆ ಅದನ್ನು ಎಲ್ಲಾ ಉದ್ಯೋಗಸ್ಥ ಕೇಂದ್ರಗಳಲ್ಲಿ ಪ್ರಚಾರ ಮಾಡಿ ಜನತೆಗೆ ಗೊತ್ತಾಗುವ ಹಾಗೆ ಮಾಡಬೇಕು. ಇಂದು ಸಮೂಹ ಮಾಧ್ಯಮಗಳನ್ನು ನೀವು ಉಪಯೋಗಿಸಿಕೊಂಡು ಮಹಿಳೆಯರಿಗೆ ಸ್ವಾಭಿಮಾನ ಹಾಗೂ ಅರಿವು ಮೂಡುವಂತೆ ಮಾಡಬೇಕು. ಆದರೆ ಇಂದಿನ ಸಮೂಹ ಮಾಧ್ಯಮಗಳಲ್ಲಿ ಮಹಿಳೆಯನ್ನು ಇನ್ನಷ್ಟು ಲೈಂಗಿಕ ವಸ್ತುವೆಂದು ತೀರ್ಮಾನ ಮಾಡುವಂತೆ ಜಾಹಿರಾತುಗಳು ಬರುತ್ತಿದೆ. ಅದು ಧಾರವಾಹಿ ಇರಬಹುದು ಅಥವಾ ಜಾಹಿರಾತಿನ ರೂಪವಿರಬಹುದು. ಬಾಕಲೇಟಿಗೂ ಲೈಂಗಿಕತೆಗೂ ಏನು ಸಂಬಂಧ? ಅದರ ಅದಕ್ಕೆ ಹೆಣ್ಣೇ ಬರಬೇಕು. ಅವಳು ಬಂದು ಅದರ ಬಗ್ಗೆ ಅಪೀಲ್ ಮಾಡಬೇಕು. ಇದರ ವಿರುದ್ಧ ಕೂಡ ಶಾಸನಸಭೆಯ ಜೊತೆಯಲ್ಲಿ ಸಮಾಜದಲ್ಲಿ ಕೂಡ ಒಂದು ರೀತಿಯ ಮಾನಸಿಕ ಪರಿವರ್ತನೆಯನ್ನು ತರುವುದಕ್ಕಾಗಿ ಆಂದೋಳನದ ಅಗತ್ಯತೆ ಇದೆ. ಈ ದೃಷ್ಟಿಯಿಂದ ಸರ್ಕಾರದ ಮುಂದೆ ಇರುವ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) :— ಸನ್ಮಾನ್ಯ ಅಧ್ಯಕ್ಷರೇ, ಇಷ್ಟೊತ್ತು ಬಹಳ ಸದಸ್ಯರು ಮಾತನಾಡಿದರು. ಇದು ಕಡಿಮೆ ಆಗಬೇಕಾದರೆ a family must learn how to live -the art of living. ಎರಡನೆಯದು ಮೋಜಿನ ಜೀವನ ಬಿಡಬೇಕು, ಸರಳ ಜೀವನ ಮಾಡುವುದನ್ನು ಕಲಿಯಬೇಕು. ಮೂರನೆಯದು ಪ್ರಾಕೃತಿಗೆ ಹೊಂದಿಕೊಂಡು ಹೋಗುವಂತಹ ಜೀವನ ಮಾಡಿದರೆ ಈ ಸಮಸ್ಯೆಗಳು ಕಡಿಮೆಯಾಗುತ್ತವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು :— ಈಗ ವಾಟಾಳ್ ನಾಗರಾಜ್‌ರವರೇ ತಾವು ಮಾತನಾಡಿ. ತಾವು ಬೇಗ ಮಾತನಾಡಿ. ಮಂತ್ರಿಗಳು ರಿಪ್ಲೈ ಕೊಡುತ್ತಾರೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೇ, ಇಂದು ಒಂದು ಬಹಳ ಮಹತ್ತರವಾದಂತಹ ವಿಚಾರವನ್ನು ತಾವು ಚರ್ಚೆಗೆ ತೆಗೆದುಕೊಂಡಿದ್ದೀರಿ. ಕೇವಲ ಇದು ನಾಲ್ಕು ಗಂಟೆ ಚರ್ಚೆ ಆಗುವುದರಿಂದ ಸಮಗ್ರವಾಗಿ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಏನೋ ಒಂದು ರೀತಿ ಚರ್ಚೆಯಲ್ಲಿ ಹೇಳಿಕೊಂಡೆವು ಎನ್ನುವ ಭಾವನೆ ವ್ಯಕ್ತಪಡಿಸಬಹುದು ಅದು ಬಿಟ್ಟರೆ ಇದನ್ನು ಸಮಗ್ರವಾಗಿ ಮಹಿಳೆಯರಿಗೆ ಆಗತಕ್ಕಂಥ ಅವರ ಹಕ್ಕುಗಳ ರಕ್ಷಣೆ ಮಾಡುವುದಕ್ಕೆ ಮೂರ್ನಾಲ್ಕು ಗಂಟೆ ಚರ್ಚೆ ಮಾಡಿ ಅದಕ್ಕೆ ಸರ್ಕಾರ ಉತ್ತರ ಕೊಟ್ಟುಬಿಟ್ಟರೆ ಅದು ತೀರ್ಮಾನವಾಗತಕ್ಕಂಥ ಪ್ರಶ್ನೆ ಅಲ್ಲ. ಇದು ಶತಶತಮಾನಗಳಿಂದ ಮಹಿಳೆಯರು ತುಳಿತಕ್ಕೆ ಸಿಕ್ಕಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅವರು ಬಹಳ ಎಚ್ಚರವಾಗಿದ್ದಾರೆ. ಬಹಳ ಹಿಂದೆ ಮಹಿಳೆಯರ ಸ್ವಾತಂತ್ರ್ಯಕ್ಕೆ ಅಕ್ಕಮಹಾದೇವಿ ಬಹಳ ಒಳ್ಳೆಯ ಕೊಡುಗೆಯನ್ನು ಕೊಟ್ಟಿದ್ದಾರೆ. ಕೇವಲ ಮಹಿಳೆಯರಿಗೆ ಅಷ್ಟೆ ಅಲ್ಲ. ಪುರುಷರಿಗೂ ಕೂಡ ಸಮಾನವಾದ ಹಕ್ಕನ್ನು ಕೊಟ್ಟಿದ್ದಾರೆ. ಅಕ್ಕಮಹಾದೇವಿಯವರು ಒಂದು ಕಡೆ ಒಂದು ಮಾತನ್ನು ಹೇಳುವಾಗ ಲಿಂಗ ಭೇದವನ್ನು ದಿಕ್ಕರಿಸುವ ನಿರ್ಲಿಂಗ ವಾದಿ. ಗಂಡಸರು, ಹೆಂಗಸರು ಯಾವುದೂ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸ್ತ್ರೀ ಪುರುಷರ ಬಗೆಗಿನ ಅವಳ ನಿಲುವು ಆಧ್ಯಾತ್ಮಿಕ ನೆಲೆಯಿಂದ ಹುಟ್ಟಿದುದಾಗಿದೆ. ಶರಣರು ಹೇಳುವ ಮೊಲೆ ಮೂಡಿ ಬಂದರೆ ಹೆಣ್ಣು ಎಂಬರು, ಗಡ್ಡ ಮೀಸೆ ಬಂದರೆ ಗಂಡು ಎಂಬರು. ನಡುವೆ ಸುಳಿವಾತ್ಮ ಹೆಣ್ಣು ಅಲ್ಲ, ಗಂಡು ಅಲ್ಲ ಎಂಬ ವಚನದಂತೆ ಗಂಡು ಮೇಲು ಹೆಣ್ಣು ಕೀಳು ಎಂಬ ಸಾಮಾಜಿಕ, ಧಾರ್ಮಿಕ ಹಾಗೂ ಎಲ್ಲಾ ರೀತಿಯ ಅಸಮಾನತೆಗಳು ಅರ್ಥಹೀನ ಎನ್ನುವ ಮಾತನ್ನು ಅಕ್ಕಮಹಾದೇವಿ ಅವರು ತಮ್ಮ ವಚನದಲ್ಲಿ ಮಾಡಿದ್ದಾರೆ.

ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ರೂಪದಲ್ಲಿ ಹಾಡಿತ್ತು.
ಸ್ತ್ರೀ ಮುಂದೆ ಮಾಯೆ ಪುರುಷನ ಅಭಿಮಾನವಾಗಿ ಹಾಡಿತ್ತು.

ಎಂದರೆ ಪುರುಷ ಮತ್ತು ಮಹಿಳೆಯರನ್ನು ಅಕ್ಕಮಹಾದೇವಿ ಸಮಾನತೆಯಿಂದ ಅವರು ಆಕಾರ ತಂದಿದ್ದಾರೆ. ಮತ್ತು ಮಹಿಳೆಯರಿಗೆ ಒಂದು ಹೆಚ್ಚಿನ ಶಕ್ತಿಯನ್ನು ತಂದಂತಹ

ಅಕ್ಕಮಹಾದೇವಿಯವರು ಈಗ ಇಲ್ಲಿ ನಾವು ಹೆಣ್ಣುಮಕ್ಕಳಿಗೆ ಶೋಷಣೆ ಮಾಡುತ್ತಾ, ಬರೀ ಗಂಡಸರಿಗೆ ಯಾವುದೋ ಒಂದು ದೃಷ್ಟಿಗಿಂತ ಹೆಚ್ಚಾಗಿ ನಮ್ಮ ಧರ್ಮ ನಮ್ಮ ಸಂಸ್ಕೃತಿ ನಮ್ಮ ಅನೇಕ ಕಂದಾಚಾರಗಳು ಮೂಢ ನಂಬಿಕೆಗಳು ಇವತ್ತು ಹೆಣ್ಣುಮಕ್ಕಳನ್ನು ಇವತ್ತು ಒಂದು ಕೂಪಕ್ಕೆ ಇಳಿಸುತ್ತಿದ್ದೇವೆ. ಎರಡು ವಿಚಾರದಲ್ಲಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಸಮಾಜದಲ್ಲಿ ನಮ್ಮ ಧರ್ಮದಲ್ಲಿ ಒಬ್ಬ ಮಹಿಳೆ ಮದುವೆಯಾಗಿದ್ದರೆ ಗಂಡಹೆಂಡತಿ ಇಬ್ಬರು ಇದ್ದಾಗ ಅವಳಿಗೆ ಮುತ್ತೈದೆ ಎಂದು ಕರೆಯುತ್ತಾರೆ. ಎಂದರೆ ನಮ್ಮ ಧರ್ಮದಲ್ಲಿ ಆಕೆ ಮುತ್ತೈದೆ ಎಂದರೆ ಬಹಳ ಸರ್ವ ಶ್ರೇಷ್ಠವಾದಂತಹ ಒಂದು ಸ್ಥಾನವನ್ನು ಕೊಟ್ಟಿದ್ದೇವೆ. ಗಂಡ ತೀರಿಕೊಂಡರೆ ಅವಳಿಗೆ ಇದ್ದಂತಹ ಎಲ್ಲಾ ಸ್ವಾತಂತ್ರ ಹೊರಟು ಹೋಗುತ್ತದೆ. ಸ್ವಾತಂತ್ರ್ಯ ಎಂದರೆ ಆ ನರಕದ ವ್ಯವಸ್ಥೆ ಇದೆಯಲ್ಲಾ, ಅದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಅದನ್ನು ಯಾವ ಧರ್ಮದಲ್ಲಿ ಯಾರಿಗಾಗಿ ಅದನ್ನು ವ್ಯವಸ್ಥೆ ಮಾಡಿದರು ಎಂದು ಯೋಚನೆ ಮಾಡುವುದಕ್ಕೆ ಹೋದರೆ ನರಕ ಇದ್ದರೆ, ನನ್ನ ದೃಷ್ಟಿಯಲ್ಲಿ ನರಕನೂ ಇಲ್ಲ, ಸ್ವರ್ಗನೂ ಇಲ್ಲ. ಆದರೆ ನರಕ ಇದ್ದರೆ ಅದು ನರಕದ ಸ್ವರೂಪವೇ. ಗಂಡನನ್ನು ಕಳೆದುಕೊಂಡಂತಹ ಒಬ್ಬ ಮಹಿಳೆ ಅವಳ ಪರಿಸ್ಥಿತಿ ಆ 12ನೇ ದಿನದಲ್ಲಿ ಕೊಡತಕ್ಕಂಥ ಆ ಚಿತ್ರಹಿಂಸೆ ಇದೆಯಲ್ಲ ಅದು ಸಮಾಜದಲ್ಲಿ ಕಿತ್ತು ಒಗೆಯತಕ್ಕಂಥ ಒಂದು ಹೊಸ ಕ್ರಾಂತಿ ಆಗಬೇಕು. ಒಂದೊಂದು ಸಮಾಜದಲ್ಲಿ ಆ ಮಹಿಳೆಯನ್ನು ನೋಡತಕ್ಕಂಥ ವ್ಯವಸ್ಥೆ ಬಗ್ಗೆ ತಾವು ನೋಡಿದರೆ 12ನೇ ದಿನದಲ್ಲಿ ಆಕೆಗೆ ಒಂದು ಮೊರದ ಕುಂಕುಮ, ಆಕೆಗೆ ಒಂದು ಗಾಡಿಯಷ್ಟು ಹೂವು, ಆಕೆಗೆ ಕೈತುಂಬಾ ಬಳೆ, ಅದನ್ನು ಒಡೆಯುತ್ತಾರೆ, ಆ ದೃಶ್ಯ ಇದೆಯಲ್ಲಾ, ಬಳೆ ಒಡೆಯುವುದು, ಹೂವು ಹಾಕುವುದು, ಕುಂಕುಮ ಸುರಿದು 13ನೇ ದಿನ ಆಕೆಯನ್ನು ಕರೆಯತಕ್ಕಂಥ ಹೆಸರು ಏನು? ವಿಧವೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಮಾನ್ಯ ಅಧ್ಯಕ್ಷರೇ, ಆ ಪದ್ಧತಿ ಈಗೀಗ ಹೋಗುತ್ತಿದೆ. ಈಗ ಹುಡುಗಿಯರು ಮದುವೆ ಆಗುವ ಮೊದಲೇ ಹೂವು, ಮುಡಿಯುತ್ತಾರೆ, ಕುಂಕುಮ ಹಚ್ಚುತ್ತಾರೆ, ಬಳೆಯನ್ನು ಹಾಕುತ್ತಾರೆ. ಮದುವೆಯಾದರೆ ತಾಳಿ ಕಟ್ಟುತ್ತಾರೆ ಎನ್ನುವ ಒಂದೇ ಕಾರಣಕ್ಕೆ ತಾಳಿ ತೆಗೆಯುತ್ತಾರೆ. ಆ ತರಹದ ಭಾವನೆ ಬಹಳಷ್ಟು ಜನರಿಗೆ ಇರುವುದರಿಂದ ಅದನ್ನು ಲೆಕ್ಕಕ್ಕೆ ಇಡುವುದಿಲ್ಲ. ತಾವು ಏನು ಹೇಳುತ್ತಿದ್ದೀರಿ, ಅದನ್ನು ಈಗಲೂ ಮಾಡುತ್ತಾರೆ. ಆದರೆ ಅದು ಲೆಕ್ಕಕ್ಕೆ ಇಲ್ಲ. ಅದೆಲ್ಲಾ ಪದ್ಧತಿಗಳು ಬೇಕಾಗಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೇ, ಮದುವೆಯಾದರೆ ಹೆಣ್ಣುಮಕ್ಕಳಿಗೆ ಮಾತ್ರ ತಾಳಿ. ಪುರುಷ ಮದುವೆಯಾದ ಎನ್ನುವುದಕ್ಕೆ ಏನೂ ಇಲ್ಲ. ಅದರ ಅರ್ಥ ಏನೆಂದರೆ ಮುನ್ಸಿಪಾಲಿಟಿ ನಾಯಿಗೆ ಬ್ಯಾಡ್ಜ್ ಕಟ್ಟುತ್ತಾರಲ್ಲಾ ಈ ರೀತಿ ಕಂಡ ಹಾಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಮಹಿಳೆಯರನ್ನು ನಾವು ಮೂಢ ನಂಬಿಕೆಗಳ ಒಂದು ದೃಷ್ಟಿಯಿಂದ...

ಅಧ್ಯಕ್ಷರು :— ಇದು ಮೂಢನಂಬಿಕೆ ಅಲ್ಲ. ನೀಚ ಆಲೋಚನೆ. ಪೌರೋಹಿತರಾಹಿ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಅವಳ ಶೀಲವನ್ನು ಶಂಕಿಸಿ, ಅವಳ ರೂಪವನ್ನು ವಿಕಾರವಾಗಿ ಕಾಣುವಂತೆ ಮಾಡುವುದು, ಅವಳಿಗೆ ವೈಧವ್ಯ ಪ್ರಾಪ್ತ ಮಾಡುವುದು, ಒಟ್ಟು ಅವಳು ವಿಕಾರವಾಗಿ ಕಾಣಬೇಕು. ಅವಳು ಯಾರನ್ನು ಕೂಡ ಆಕರ್ಷಿಸಬಾರದೆನ್ನುವ ದುರುದ್ದೇಶದಿಂದ ಮಾಡಿರುವುದು. ಆದರೆ ಇವನು ಎಲ್ಲಿಬೇಕಾದರೂ ಹೋಗಬಹುದು. ಅವಳಿಗೆ ಮಾತ್ರ ರಿಸ್ಟ್ರಿಕ್ಟ್ ಮಾಡುವುದು.

ಶ್ರೀ ವಾಟಾಳ್ ನಾಗರಾಜ್ :— ಆ ಶೋಷಣೆ ಮೊದಲು ತಪ್ಪಬೇಕು. ಕೆಲವು ಸಮಾಜದಲ್ಲಿ ಗಂಡ ಸತ್ತರೆ ಹೆಂಡತಿ ಸಮಾಧಿಗೆ ಹೋಗುವ ಹಾಗೆ ಇಲ್ಲ. ಎರಡನೆಯದಾಗಿ ಸಂಪೂರ್ಣವಾಗಿ ಸುಂದರವಾದಂತಹ ಕೂದಲನ್ನು ತೆಗೆದು ಒಂದು ಮೂಲೆಯಲ್ಲಿ ಕೂರಿಸುವುದು.

ಅಧ್ಯಕ್ಷರು :— ಈಗ ಆ ರೀತಿ ಮಾಡುವುದಿಲ್ಲ. ಈಗ ಅದು ಕಡಿಮೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ :— ನಡೆಯುತ್ತಿದೆ. ಅದು ಸರಿಯಿಲ್ಲ. ಅದಕ್ಕೆ ಆ ರೀತಿ ಮಾಡಿದರೆ ಶಿಕ್ಷೆ ಮಾಡುತ್ತೇವೆ ಎಂದು ಕಾನೂನು ತರಬೇಕು. ಆ ರೀತಿ 12ನೇ ದಿವಸದಲ್ಲಿ ಬಳೆ ಹಾಕಿ, ಕುಂಕುಮ ಹಾಕಿ, ತಲೆಗೆ ಹೂವು ಮುಡಿಸಿ ಆಕೆಗೆ ಹಾಗೆ ಮಾಡಿದರೆ ಅಂತಹವರಿಗೆ ಆರು ತಿಂಗಳು ಕಠಿಣ ಸಜಾ, ಜೈಲಿಗೆ ಹಾಕುತ್ತೇವೆ ಎಂದು ಕಾನೂನು ತರಬೇಕಲ್ಲಾ.

ಅಧ್ಯಕ್ಷರು :— ಒಳ್ಳೆಯ ಸಲಹೆ.

ಶ್ರೀ ವಾಟಾಳ್ ನಾಗರಾಜ್ :— ತಲೆಯನ್ನು ಬೋಳಿಸಿ, ಮೂಲೆಯಲ್ಲಿ ಯಾರು ಕೂರಿಸುತ್ತಾರೆ ಅಂಥವರನ್ನು ಕಂಡರೆ ಆರು ತಿಂಗಳು ಜೈಲಿಗೆ ಹಾಕುತ್ತೇವೆ ಎಂದು ಮಾಡಬೇಕು. ಮತ್ತು ಮಹಿಳೆಯರ ಮೇಲೆ ನಡೆಯುತಕ್ಕಂಥ ಅನೇಕ ದೌರ್ಜನ್ಯಗಳನ್ನು ನ್ಯಾಯಾಲಯದ ಮುಂದೆ ಮಂಡಿಸುತ್ತೇವೆ. ನ್ಯಾಯಾಲಯ ಕೊಡತಕ್ಕಂಥ ತೀರ್ಪು ಯಾವಾಗ 10-12 ವರ್ಷ 15 ವರ್ಷ ಆದ ಮೇಲೆ ನಡೆಯುತ್ತದೆ. ಅದಕ್ಕೆ ಒಂದು ಕಾಲಮಿತಿ ಮಾಡಿ ಇಷ್ಟು ದಿವಸಕ್ಕೆ ವಿವಾಹ ವಿಚ್ಛೇದನಕ್ಕೆ ಒಂದು ಅರ್ಜಿಯನ್ನು ಹಾಕಿದಾಗ ಕೇವಲ ಒಂದು ಆರು ತಿಂಗಳೊಳಗಾಗಿ ಇತ್ಯರ್ಥವಾಗಬೇಕು. ಆರು ತಿಂಗಳ ಮೇಲೆ ನಡೆಯಬಾರದು ಎನ್ನುವಂತಹ ಒಂದು ಶಿಕ್ಷೆ ಮಾಡಬೇಕು. ಒಂದು ಸಮಾನವಾದ ಶಿಕ್ಷೆ ಎಂದು ಹೇಳಿದರೆ ನಮ್ಮ ಆಸ್ತಿಯಲ್ಲಿ ಏನು ಗಂಡುಮಕ್ಕಳಿಗೆ ಕೊಡುತ್ತಾರೆ, ಹೆಣ್ಣುಮಕ್ಕಳಿಗೂ ಕೂಡ ಆಸ್ತಿಯಲ್ಲಿ ಪಾಲನ್ನು ಎಲ್ಲಾ ವಿಚಾರದಲ್ಲಿ ಕೊಡುವಂತಹ ಕೆಲಸವನ್ನು ನಾವು ಮಾಡಬೇಕು. ಆದರೆ ಗಾದೆಗಳು ಇದೆ, ಅತ್ತೆಗೆ ಒಂದು ಕಾಲ, ಸೊಸೆಗೆ ಒಂದು ಕಾಲ ಎಂದು. ಅತ್ತೆ ಎಷ್ಟೇ ಕ್ರೂರವಿ ಆಗಿದ್ದರೂ ಕೂಡ ಸೊಸೆ ಬಂದಮೇಲೆ

ಅತ್ತೆ ಮೇಲೆ ಹಾಡತಕ್ಕಂಥಾದ್ದು ಇದೆಯಲ್ಲಾ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆ ಕಷ್ಟನೂ ಉಂಟು. ತಾವು ಹೇಳಿದ ಹಾಗೆ ಮಹಿಳೆಯರನ್ನು ನಾವು ಯಾವ ದೃಷ್ಟಿಯಲ್ಲಿ ನೋಡುತ್ತಿದ್ದೇವೆ. ಈ ವ್ಯವಸ್ಥೆ ಬದಲಾಗತಕ್ಕಂಥ ಒಂದು ಕ್ರಾಂತಿಕಾರಿಯಾದಂತಹ ಬದಲಾವಣೆಯಾಗಬೇಕು. ಮತ್ತು ಅಂತರ್ಜಾತಿ ವಿವಾಹದ ಬಗ್ಗೆ ತಾವು ಕೇಳಿರಬಹುದು. ಮಗ ಅಂತರ್ಜಾತಿ ವಿವಾಹ ಆದತಕ್ಷಣ ಮಾವನಿಗೆ ಕೋಪ ತಾಪ ಬಂದು ಸೊಸೆಯನ್ನು ಬರೀ ವಿಷ ಹಾಕಿ ಕೊಲ್ಲುವುದಿಲ್ಲ. ಬೆರಳು ಕತ್ತರಿಸಿ, ಕೈ ಕತ್ತರಿಸಿ, ತಲೆ ಕತ್ತರಿಸಿ, ಎಲ್ಲಾ ಮಾಂಸದ ಮುದ್ದೆ ಮಾಡಿ ಎಲ್ಲೋ ಎಸೆಯುತ್ತಾನೆ. ಇದು ನಮ್ಮ ಕರ್ನಾಟಕದಲ್ಲಿ, ಬೆಂಗಳೂರಿನ ಬಸವೇಶ್ವರ ನಗರದಲ್ಲಿ ನಡೆದಿದ್ದು. ನ್ಯಾಯಾಲಯ ಯಾವುದೋ ಒಂದು ಮೂಳೆಯ ಮುಖಾಂತರ ಪತ್ತೆ ಹಚ್ಚಿ ಅತ್ತೆಗೆ, ಮಾವನಿಗೆ, ಹಾಗೂ ಮಗನಿಗೆ ಜೀವಾವಧಿ ಶಿಕ್ಷೆ ಮಾಡುತ್ತಾರೆ. ಅವರು ಬಹಳ ದೊಡ್ಡ ಪಂಡಿತರು. ವಿದ್ವಾಂಸರು.

ಅಧ್ಯಕ್ಷರು :— ಅವರು ಅಗ್ರಿಕಲ್ಚರ್ ಯೂನಿವರ್ಸಿಟಿ ಪ್ರೊಫೆಸರ್. ಬೀನಾ ಕೇಸ್ ಬಗ್ಗೆ ನೀವು ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ :— ಇದು ಸಮಾಜದಲ್ಲಿ ಎಷ್ಟೋ ಶತಮಾನಗಳ ಹಿಂದೆ ನಡೆದಿದ್ದಲ್ಲ. ಇತ್ತೀಚೆಗೆ ಜರುಗಿದ ಘಟನೆಯಾಗಿದ್ದು ಕೃಷಿ ವಿಶ್ವವಿದ್ಯಾನಿಲಯದ ಒಬ್ಬ ಮಹಾ ಪಂಡಿತ ಮಾಡಿದ ಅಪರಾಧವನ್ನು ಒಬ್ಬ ಮಹನೀಯ [illegible]ಂದ ತಪ್ಪಿತಸ್ಥರೆಲ್ಲರೂ ಇವೊತ್ತು ಜೈಲಿನಲ್ಲಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಅನೇಕ ವಿಚಾರವಾಗಿ ನಾವು ಶಾಸನಗಳನ್ನು ತರುತ್ತೇವೆ. ಇದರ ಬಗ್ಗೆಯೂ ನಾವು ಕ್ಷಣವಾಗಿ ಪರಿಣಾಮಕಾರಿಯಾಗಿ ಶಾಸನಗಳನ್ನು ತರುವುದರ ಮೂಲಕ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನಿಲ್ಲಿಸುವುದಕ್ಕೆ ಕ್ರಮ ಕೈಗೊಳ್ಳುವಂತಾಗಬೇಕು. ಅದು ಬಿಟ್ಟು ಈ ಕುರಿತ ಅಧ್ಯಯನಕ್ಕೆ ಸದನ ಸಮಿತಿ ರಚಿಸಿ ತಮಿಳುನಾಡಿಗೋ, ಆಂಧ್ರಪ್ರದೇಶಕ್ಕೋ, ವಿದೇಶಕ್ಕೆ ಹೋಗಿ ಬಂದರೆ ಸಮಸ್ಯೆ ಬಗೆಹರಿದಂತಾಗುವುದಿಲ್ಲ. ಈ ಸದನದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿಯೇ ಈ ಸರ್ಕಾರ ಒಂದು ಶಾಸನ ತರಲಿ ಮತ್ತು ಯಾವ್ಯಾವ ರೀತಿಯ ಶಾಸನಗಳನ್ನು ತರಬೇಕೆಂಬ ಬಗ್ಗೆ ಒಂದು ಜಂಟಿ ಸಲಹಾ ಸಮಿತಿಯನ್ನು ರಚಿಸಿ ಅದರಲ್ಲಿ ತರಲು ಉದ್ದೇಶಿಸಿರುವ ಶಾಸನಗಳನ್ನು ತಾವು ಪಟ್ಟಿ ಮಾಡಿ ಆ ಶಾಸನಗಳ ಮುಖಾಂತರ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಗಟ್ಟಲು ನಾವು ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಆದರೆ, ಒಂದು ವಿಚಾರವೇನೆಂದರೆ, ಬರೀ ಮಹಿಳೆಯರಿಗೇ ಅನ್ಯಾಯವಾಗುತ್ತದೆಂದಲ್ಲ, ಮಹಿಳೆಯಿಂದ ಪುರುಷರಿಗೂ ಅನ್ಯಾಯವಾಗುತ್ತಿರುವ ಅಂಶ ಎಲ್ಲಿಯೋ ಒಂದು ಕಡೆ ಇದೆ. ಇದರ ಬಗ್ಗೆ ಭಯ, ಭೀತಿಯಿಂದ ಮಾತನಾಡತಕ್ಕಂಥ ವ್ಯವಸ್ಥೆಗೆ ಹೋಗಬಾರದು ಅಲ್ಲದೆ ಇದನ್ನು ನಾವು ತಳ್ಳಿಹಾಕುವಂತೆಯೂ ಇಲ್ಲ. ಎಷ್ಟೋ ಜನ ಪುರುಷರು ಮನೆಗೆ ಹೋದ ತಕ್ಷಣ ಹೆಂಡತಿಯರ ಕಾಲಿಗೆ ಬಿದ್ದಿರುವುದುಂಟು! ಕೈಮುಗಿದಿರುವುದುಂಟು! ಹೆದರಿರುವುದೂ ಉಂಟು!

ಶ್ರೀಮತಿ ಪ್ರಮೀಳಾ ನೇಸರ್ಗಿ :— ತಪ್ಪು ಮಾಡಿದಾಗ ಆ ತರಹ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :— ಒಂದು ಕಡೆ ಮಾತ್ರ ದೃಷ್ಟಿಯಿಟ್ಟುಕೊಂಡು ಮಾತನಾಡುವುದು ಬೇಡ. ಮಹಿಳೆಯರಿಂದ ಪುರುಷರಿಗೂ ಅನ್ಯಾಯವಾಗುತ್ತಿರುವುದು ಉಂಟಲ್ಲಾ, ಗಂಡಂದಿರ ಮೇಲೂ ಶೋಷಣೆ ನಡೆದಿದೆಯಲ್ಲಾ!

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಆದೂ ಸಾಧ್ಯವಿದೆ. ಏಕೆಂದರೆ, ಕಾನೂನಿನ ದುರುಪಯೋಗವಾಗಬಾರದು. ಎಷ್ಟೋ ಬಾರಿ ಪುರುಷರು ನನ್ನ ಹತ್ತಿರ ಬಂದು ನೋಡಿ, ಅವರು ಹೆದರಿಸುತ್ತಿದ್ದಾರೆ. ವರದಕ್ಷಿಣೆ ಕೇಳಿದೆನೆಂದು ನನ್ನ ಮೇಲೆ ಸುಳ್ಳು ಕೇಸು ಹಾಕುತ್ತಿದ್ದಾರೆ. ಎಂದು ಹೇಳುತ್ತಾರೆ. ಈ ತರಹ ಮಹಿಳೆಯಿಂದ ಪುರುಷರಿಗೂ ಅನ್ಯಾಯವಾಗುತ್ತಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಶೇಕಡಾ 90ರಷ್ಟು ಅನ್ಯಾಯಗಳು ಪುರುಷ ವರ್ಗದವರಿಂದಲೇ ಮಹಿಳೆಯರ ಮೇಲಾಗುತ್ತದೆ ಮತ್ತು ಶೇಕಡ 10ರಷ್ಟು ಅನ್ಯಾಯ ಮಹಿಳೆಯರಿಂದ ಪುರುಷರ ಮೇಲಾಗುತ್ತದೆನ್ನುವ ಮಾತನ್ನು ಎಲ್ಲರೂ ಒಪ್ಪಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ :— ಅದು ಎಷ್ಟು ಭಯಾನಕವಾಗಿರುತ್ತದೆಂದರೆ ಅದರ ಒಂದೊಂದು ಅಂಶವನ್ನು ವರ್ಣಿಸುವುದಕ್ಕೆ ಹೋಗುವುದು ಸರಿಯಲ್ಲ ಎಂದೆನಿಸುತ್ತದೆ. ಬರೀ ಪುರುಷರಿಂದಲೇ ಮಹಿಳೆಯರಿಗೆ ಅನ್ಯಾಯವಾಗುತ್ತದೆಂದಲ್ಲ. ಮಹಿಳೆಯರಿಂದ ಪುರುಷರಿಗೂ ಅನ್ಯಾಯವಾಗಿ ಎಷ್ಟೋ ಪ್ರಕರಣಗಳಲ್ಲಿ ಪುರುಷರೂ ಸತ್ತಿರುವುದುಂಟು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದುಂಟು, ಹೊರಗಡೆ ಹೋಗಿರುವುದುಂಟು, ಹುಚ್ಚರಾಗಿರುವುದುಂಟು.

ಶ್ರೀ ಸಿ.ಎಂ. ಉದಾಸಿ :— ಇವೊತ್ತು ಮಹಿಳೆಯಿಂದ ಪುರುಷನಿಗೆ ಅನ್ಯಾಯವಾಗುವುದಿಲ್ಲ ಎನ್ನುವ ಮಾತಿಲ್ಲ. ಇದಕ್ಕಾಗಿ ರಾಷ್ಟ್ರಮಟ್ಟದಲ್ಲಿ 'ಪತ್ನಿ ಪೀಡಿತರ ಸಂಘಟನೆ' ಎಂಬುದೊಂದು ಇದ್ದು ಸದರಿ ಸಂಘಟನೆಗೆ ವಕೀಲರೊಬ್ಬರು ಅಧ್ಯಕ್ಷರಾಗಿದ್ದಾರೆ. ಅವರು ಏತಕ್ಕಾಗಿ ಪತ್ನಿ ಪೀಡಿತರ ಸಂಘಟನೆ ಮಾಡಿದರೆಂದರೆ, ತಮ್ಮ ಹೆಂಡತಿಗೆ ಡೈವೋರ್ಸ್ ನೋಟೀಸ್ ಕೊಟ್ಟಿದ್ದು 22 ವರ್ಷಗಳಾದರೂ ಅದು ನಿಖಾಲೆಯಾಗದ್ದರಿಂದ ತೊಂದರೆಯುಂಟಾಯಿತು. ಇಂತಹ ಸಂಘಟನೆ ಇಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಆ ಸಂಘಟನೆಯ ಅಧ್ಯಕ್ಷರು ಎರಡನೇ ಮದುವೆಯಾದ ನಂತರವೇ ಈ ಪಂಚಾಯಿತಿ ಎಲ್ಲಾ ಆದದ್ದು. ಆಕೆಯ ಕೇಸನ್ನು ನಾನೇ ನಡೆಸಿರುವುದರಿಂದ ಗೊತ್ತಿದೆ. ಅವರು ಎರಡನೇ ಮದುವೆಯಾದ ಬಳಿಕ ಮೊದಲ ಹೆಂಡತಿ ಅವರ ಬಳಿ ಹೋದಾಗ ಓಡಿಸಿದ್ದೂ ಉಂಟು.

ಶ್ರೀ ವಾಟಾಳ್ ನಾಗರಾಜ್:— ಆದುದರಿಂದ, ಆ ಕುರಿತ ವಿವರಗಳನ್ನು ಕೊಡುವುದಕ್ಕಾಗುವುದಿಲ್ಲ. ಎಷ್ಟೋ ಜನ ಗಂಡಂದಿರ ಹಣೆಬರಹದಂತೆ ಮನೆ, ಮಠ ಬಿಟ್ಟು ಗಂಗಾ ನದಿಗೆ ಹೋಗಿರುವುದುಂಟು, ಪಾತಾಳಕ್ಕೆ ಹೋಗಿರುವುದುಂಟು. ಆದರ ಬಗ್ಗೆ ನಾವು ಚರ್ಚೆ ಮಾಡಲು ಹೊರಟಾಗ ಬಹಳ ಅಪಾಯಕ್ಕೆ ಸಿಲುಕುತ್ತೇವಾದ್ದರಿಂದ ನನ್ನ ಚರ್ಚೆಯನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):— ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದು ಸಾಕಷ್ಟು ರೀತಿಯಲ್ಲಿ ಚರ್ಚೆಯಾಗಿರುವುದರಿಂದ ಒಂದು ಸಲಹೆಯನ್ನು ಮಾತ್ರ ಕೊಡಬಯಸುತ್ತೇನೆ. ಹೆಣ್ಣುಮಕ್ಕಳ ಮೇಲೆ ಯಾವ ರೀತಿಯಾಗಿ ದೌರ್ಜನ್ಯ, ಶೋಷಣೆಗಳುಂಟಾಗುತ್ತಿದೆ ಎನ್ನುವುದರ ಬಗ್ಗೆ ವ್ಯಾಖ್ಯಾನಿಸಲು ಹೋಗುವುದಿಲ್ಲ. ಈಗಾಗಲೇ ಮಾತನಾಡಿರುವ ಎಲ್ಲಾ ಮಾನ್ಯ ಸದಸ್ಯರುಗಳು ಕೂಡ ಅದಕ್ಕೆ ದನಿಗೂಡಿಸಿದ್ದು, ಅವರೆಲ್ಲರ ಅಭಿಪ್ರಾಯಗಳಿಗೆ ನನ್ನ ಸಹಮತಿ ಕೂಡ ಇದೆಯೆಂದು ತಿಳಿಸುತ್ತಾ ಉದ್ಭವಿಸಿರುವ ಸಮಸ್ಯೆಯನ್ನು ತಡೆಗಟ್ಟಲು ವಿಶೇಷವಾಗಿ ಸಾಮಾಜಿಕ ಪರಿವರ್ತನೆಯಾಗದ ಹೊರತು ಇದಕ್ಕೆ ಪರಿಹಾರವಿಲ್ಲ. ಕೇವಲ ಕಾನೂನು ತರುವುದರಿಂದಾಗಲೀ, ತಂದಂಥ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸದಿದ್ದಲ್ಲಿ ಇದಕ್ಕೆ ಪರಿಹಾರ ಸಿಗುವುದಿಲ್ಲ. ಆದರೂ ಕೂಡ ದಿನ ಬೆಳಗಾದರೆ ನಿತ್ಯ ಪತ್ರಿಕೆಗಳಲ್ಲಿ ಮಹಿಳೆಯರ ಮೇಲೆ ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ರೀತಿ ದೌರ್ಜನ್ಯ, ಕಿರುಕುಳವುಂಟಾಗುತ್ತಿದೆ ಎಂಬುದನ್ನು ನೋಡುತ್ತಿದ್ದು ಇದರ ಬಗ್ಗೆ ನಾನು ಹೆಚ್ಚಿನ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಮಹಿಳೆಯರ ಮೇಲಿನ ದೌರ್ಜನ್ಯ, ಶೋಷಣೆ ಹತ್ತಿಕ್ಕಲು ಒಂದು ಕಾನೂನನ್ನೇ ತರಬೇಕಾಗುತ್ತದೆಂದು ಹೇಳುತ್ತಿದ್ದೇನೆ. ಇವೊತ್ತು ಹೆಣ್ಣುಮಕ್ಕಳ ಮೇಲಾಗುತ್ತಿರುವ ದೌರ್ಜನ್ಯ ಅಥವಾ ವರದಕ್ಷಿಣೆಯಿಂದಾಗುವ ಸಾವು ಅಥವಾ ಚುಡಾಯಿಸುವುದರಿಂದ ಅವರಿಗಾಗತಕ್ಕ ಮಾನಸಿಕ ನೋವನ್ನು ಹೋಗಲಾಡಿಸಲು ನಮ್ಮ ಕಾನೂನಿನಲ್ಲಿ ಭದ್ರತೆಯಿಲ್ಲ. ಅಲ್ಲದೆ, ಕಾನೂನಿನ ನೆರವು ತೆಗೆದುಕೊಂಡು ಅದರಿಂದ ಯಾರಾದರೂ ರಿಲೀಫ್ ತೆಗೆದುಕೊಂಡಿರುವ ಉದಾಹರಣೆಯನ್ನೂ ನೋಡಿಲ್ಲ. ಇವೊತ್ತು ನಾವು ಹಳ್ಳಿಗಳಿಗೆ ಹೋದರೆ ಪ್ರತಿನಿತ್ಯವೂ ಒಂದಲ್ಲ ಒಂದು ರೀತಿಯಾದ ಸಮಸ್ಯೆಗಳು ದಿನದಿನಕ್ಕೂ ಜಾಸ್ತಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಅದೊಕ್ಕೋಸ್ಕರ, ಈ ನಿಟ್ಟಿನಲ್ಲಿ ನನ್ನ ಒಂದು ಸಲಹೆಯೇನೆಂದರೆ, ನಮ್ಮಲ್ಲಿ ಕಂಟ್ರೋಲ್ಡ್ ಸೊಸೈಟಿ ಇದ್ದು, ಬೇರೆ ದೇಶಗಳಲ್ಲಿ ಫ್ರೀ ಸೊಸೈಟಿಯಿದ್ದರೂ ಕೂಡ ಅವರು ಆ ಕುರಿತಂತೆ ವಿಶೇಷವಾದ ಕಾನೂನು ತಂದಿದ್ದು, ಜಾರಿಯಲ್ಲಿದೆ. ಅವರಿಗೆ ಅದರಿಂದ ರಕ್ಷಣೆ ಕೂಡ ಸಿಗುತ್ತಿದೆಯೆಂಬುದು ನನ್ನ ಅಭಿಪ್ರಾಯವಾಗಿದೆ. ಹೆಣ್ಣುಮಕ್ಕಳ ಮೇಲೆ ಏತಕ್ಕೋಸ್ಕರ ದೌರ್ಜನ್ಯಗಳಾಗುತ್ತಿದೆಯೆಂದರೆ it is because of sex. Unless you impose a punishment. ಈ ತರಹದ ಸಮಸ್ಯೆ ಉಂಟಾಗಲು ಕಾರಣವಾಗುತ್ತದೆ. ತುಂಬಾ ಮುಂದುವರೆದ ಅಮೆರಿಕಾದಂಥ ದೇಶದಲ್ಲೂ ಕೂಡ ಮಹಿಳೆಯರ ಮೇಲೆ ಅತ್ಯಾಚಾರವಾದಂಥ ಸಂದರ್ಭದಲ್ಲಿ ಅವರಿಗೆ ಕ್ಯಾಪಿಟಲ್ ಪನಿಷ್‌ಮೆಂಟ್ ಕೊಡುವ

ಕಾನೂನು ಇವ್ಞೊತ್ತು ಜಾರಿಯಲ್ಲಿರಬೇಕಾದರೆ ಅಂಥದ್ದೇ ವಿಶೇಷವಾದ ಕಾನೂನನ್ನು ತರುವ ಬಗ್ಗೆ ನನಗನ್ನಿಸುವುದೇನೆಂದರೆ ಈ ಕುರಿತು ಚರ್ಚೆ ಮಾಡುವುದಲ್ಲದೆ ಮಹಿಳೆ ಇನ್ನೂ ಅನೇಕ ತರಹದ ಸಮಸ್ಯೆಗಳನ್ನು ಎದುರಿಸುತ್ತಿರಬೇಕಾದರೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಅಭಿಪ್ರಾಯ ಪಟ್ಟಿರುವ ರೀತಿಯಲ್ಲಿ ಸದನ ಸಮಿತಿ ರಚಿಸಿ ಅಧ್ಯಯನ ಮಾಡಿ ಪರಿಹಾರ ಕಂಡುಹಿಡಿಯುವುದಕ್ಕಿಂತ ಮುಂಚಿತವಾಗಿ ಈ ದಿಸೆಯಲ್ಲಿ ವಿಶೇಷವಾದ ಕಾನೂನು ತಂದು ಅದನ್ನು ಜೆಎಸ್‌ಪಿಗೆ ರೆಫರ್ ಮಾಡಿ ಮತ್ತು ಎಲ್ಲಾ ಸಂಘ-ಸಂಸ್ಥೆಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಅನಂತರ ಕಾನೂನನ್ನು ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಇವ್ಞೊತ್ತು ಆ ಬಗ್ಗೆ ಲೆಜಿಸ್ಲೇಷನ್ ತರುವುದಕ್ಕೆ ತಡವಾಗುತ್ತದೆಂಬ ಅಭಿಪ್ರಾಯ ನಿಮಗಿದ್ದರೆ ಈ ತಕ್ಷಣವೇ ಸದನ ಸಮಿತಿ ರಚಿಸಿ ಎಲ್ಲಾ ಸಂಘ-ಸಂಸ್ಥೆಗಳೊಂದಿಗೆ, ಶಾಸಕರುಗಳ ಜೊತೆ ಇಂಟರ್‌ಆ್ಯಕ್ಟ್ ಮಾಡಿ ವಿಶೇಷವಾದ ಕಾನೂನು ತರುವುದು ಸೂಕ್ತ, ಅದಕ್ಕೆ ನಮ್ಮ ಬೆಂಬಲ ಇದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವ್ಞೊತ್ತು ಕಂಟ್ರೋಲ್ಡ್ ಸೊಸೈಟಿಯಲ್ಲಿರುವ ನಮ್ಮ ಹೆಣ್ಣುಮಕ್ಕಳ ಪರಿಸ್ಥಿತಿ ಏನು ಎನ್ನುವುದರ ಬಗ್ಗೆ ನಮ್ಮಗಳ ಚಿಂತನೆ ಹರಿಸುವುದಕ್ಕೋಸ್ಕರ ಇವ್ಞೊತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ನಾನು ತಮ್ಮನ್ನು ಹಾಗೂ ವಿಧಾನಪರಿಷತ್ತಿನ ಸಭಾಪತಿಯವರನ್ನು ಅಭಿನಂದಿಸುತ್ತೇನೆ. ಬಹುಶಃ ಈ ಸದನದಲ್ಲಿ ಇದೇ ಮೊದಲ ಬಾರಿಗೆ ಇಷ್ಟು ದೀರ್ಘವಾಗಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರುವುದಕ್ಕೆ ನಾನು ಸರ್ಕಾರದ ಪರವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ತಾವು ಬಹಳ ಆಸಕ್ತಿವಹಿಸಿ ಸದನದ ಹೊರಗಡೆ ಮಹಿಳೆಯರ ಪರವಾಗಿ ಹೋರಾಟ ಮಾಡುವ 'ವಿಮೋಚನೆ' ಮತ್ತಿತರ ಸಂಘಟನೆಗಳನ್ನು ಕರೆಸಿ ಅವರುಗಳಿಂದ ಮಹಿಳೆಯರ ಮೇಲಾಗುತ್ತಿರುವ ದುರಂತದ ಘಟನೆಗಳನ್ನು ಕೇಳಿದಾಗ ನಮ್ಮ ಮನಸ್ಸು ನೊಂದಿರುವುದಷ್ಟೇ ಅಲ್ಲ, ಇಂತಹ ಹೇಯ ಕೃತ್ಯ ನಮ್ಮ ಸಮಾಜದಲ್ಲಿ ನಡೆಯುತ್ತಿರುವುದರ ಬಗ್ಗೆ ನಮ್ಮ ಮನಸ್ಸಿಗೆ ಆಘಾತವುಂಟಾಗಿ ಪರಸ್ಪರ ನಾವುಗಳು ಭಾವನೆಗಳನ್ನು ಹಂಚಿಕೊಂಡಿರುವುದು ಮೂರು ದಿವಸಗಳ ಹಿಂದೆ ಕಂಡಿದ್ದೇವೆ. ತಾವು ಇವ್ಞೊತ್ತು ಈ ಸದನದಲ್ಲಿ ವಿಶೇಷವಾಗಿ ಮಹಿಳಾ ಸದಸ್ಯರುಗಳಲ್ಲಿ ಏನು ಮನವಿ ಮಾಡಿಕೊಂಡಿದ್ದೀರೆಂದರೆ, ವಿಮೋಚನಾ ಸಂಘ ಮತ್ತಿತರ ಸಂಘಟನೆಗಳ ಪ್ರತಿನಿಧಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ತಮ್ಮ ವಿಚಾರದಲ್ಲಿ ಸದನದಲ್ಲಿ ತಾವು ಅದನ್ನು ಪ್ರತಿಬಿಂಬಿಸಬೇಕೆಂದು ತಿಳಿಸಿದ್ದೀರಿ. ಈಗ ಮಾತನಾಡಿರುವ ಎಲ್ಲಾ ಮಹಿಳಾ ಸದಸ್ಯರು ಮತ್ತು ಪುರುಷ ಸದಸ್ಯರುಗಳೂ ಕೂಡ ತಂತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ನಾನೂ ಸಹ ತಮ್ಮನ್ನು ಅಭಿನಂದಿಸುವ ಸಂದರ್ಭದಲ್ಲಿ ಈಗಾಗಲೇ ಮೂರು ಬಾರಿ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿ, ಡಿ.ಜಿ.ಪಿ.ಯವರು, ಡಿ.ಜಿ.ಪಿ. (ಸಿ.ಐ.ಡಿ)ಯ ಡೌರಿ ಡೆತ್ ಸೆಲ್‌ನಲ್ಲಿ ಕಾರ್ಯನಿರ್ವಹಿಸುವ ಅನೇಕ ಅಧಿಕಾರಿಗಳನ್ನು

ಕರೆಯಿಸಿ ಸಭೆ ನಡೆಸಿದ್ದೇನೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಈ ಸಮಸ್ಯೆಗೆ ಪರಿಹಾರ ಇಲ್ಲಿಯೇ ಸಿಗುತ್ತದೆಂದು ನಾವ್ಯಾರು ಕೂಡ ತಿಳಿದುಕೊಂಡಿಲ್ಲ. ಇದರ ಬಗ್ಗೆ ನಮ್ಮ ಸಮಾಜದಲ್ಲಿ ಮೂಲಭೂತವಾಗಿ ಪರಿವರ್ತನೆಯಾಗಬೇಕಾಗುತ್ತದೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಹೇಳಿರುವಂಥ ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಂಡಾಗ ಅವರು ಹೇಳಿರುವ ವಿಚಾರಗಳೇನು, ಇವ್ಹೊತ್ತು ನಾವು ಮಾಡುತ್ತಿರುವುದೇನು ಎಂಬುದನ್ನೆಲ್ಲಾ ನೋಡಿದಾಗ ನಮ್ಮಲ್ಲಿರುವ ನಮ್ಮ ಸಮಾಜದಲ್ಲಿರುವ ಆಷಾಢಭೂತಿತನವೇ ಈ ಸಮಸ್ಯಗಳಿಗೆಲ್ಲಾ ಮೂಲಭೂತವಾದ ಕಾರಣವೆಂದು ಮನಗಾಣಬೇಕಿದೆ. ಇವ್ಹೊತ್ತು ಸಾಮಾಜಿಕ ಕ್ರಾಂತಿ ಬಯಸಿದಾಗ, ಆಸ್ತಿಯಲ್ಲಿ ಮಹಿಳೆಯರಿಗೆ ನಾವು ಸಮಾನ ಹಕ್ಕು ಕೊಡುತ್ತೇವೆನ್ನುವ ಸಂದರ್ಭ ಬಂದಾಗ ಇದು ಸ್ವಲ್ಪ ಕಡಿಮೆಯಾಗಬಹುದೆನ್ನುವ ಭಾವನೆ ನಮ್ಮಲ್ಲಿರುವ ಅನೇಕರಲ್ಲಿ ವೈಯಕ್ತಿಕವಾಗಿ ಬಂದರೂ ಸಹ ಸಮಾಜದಲ್ಲಿ ಮಹಿಳೆಯನ್ನು ಆರ್ಥಿಕವಾಗಿ ಮುಂದೆ ತರಬೇಕಾದರೆ ಮಾಡಬೇಕಾಗಿರುವ ಕೆಲಸ ಮತ್ತು ಅವರಿಗೆ ಅಧಿಕಾರ ಕೊಡುವ ವಿಚಾರದಲ್ಲಿ ನಾವು ಮಾಡಬೇಕಾಗಿರುವ ಕೆಲಸ, ಲೋಕಸಭೆಯಲ್ಲಾಗಲೀ ವಿಧಾನಸಭೆಯಲ್ಲಾಗಲಿ, ವಿಧಾನ ಪರಿಷತ್ತಿನಲ್ಲಾಗಲಿ ಅಥವಾ ಮತ್ತೊಂದು ಕಡೆಯಾಗಲಿ ನೂರಕ್ಕೆ ಮೂವತ್ತರಷ್ಟು ಸ್ಥಾನ-ಮಾನಗಳನ್ನು ಮಹಿಳೆಯರಿಗೆ ಕೊಡಬೇಕೆಂದು ಹೇಳಿದಾಗ ನಮ್ಮಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ತೆಗೆದುಕೊಂಡಿರುವ ನೀತಿ-ನಿಲುವುಗಳನ್ನು ನೋಡಿದಾಗ ನಾವು ಎಲ್ಲಿಯೋ ಒಂದು ಕಡೆ ಹೇಳುವುದಕ್ಕೂ, ಮಾಡುವುದಕ್ಕೂ ವ್ಯತ್ಯಾಸವಿದೆಯೆಂಬ ಅಂಶವನ್ನು ಮನಗಾಣಬೇಕಾಗುತ್ತದೆ.

2.20 ಪಿ.ಎಂ.

ಇವತ್ತು ಒಂದು ವರ್ಷದೊಳಗಡೆ 220 ಸ್ಥಾನಗಳಲ್ಲಿಕಿ ಮೂರನೆ ಒಂದು ಭಾಗ ಮಹಿಳೆಯರಿಗೆ ಹೋಗಬೇಕೆಂದು ಹೇಳಿದಾಗ ನಮ್ಮಲ್ಲಿ, ಅದನ್ನು ಎಷ್ಟುಮಂದಿ ಮನಸಾರೆ ಒಪ್ಪುತ್ತೇವೆ ಎನ್ನುವುದನ್ನೂ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಕಾನೂನು ಮಾಡಿದ್ದನ್ನು ಮಹಿಳೆಯರಿಗೆ ಕೊಡುವುದಕ್ಕಾಗುವುದಿಲ್ಲ, ಎಲ್ಲಿಯವರೆಗೆ ಆಸ್ತಿಯಲ್ಲಿ ಸಮಾನವಾದ ಹಕ್ಕನ್ನು ಕೂಡ ಅವರಿಗೆ ಕೊಡುವುದಕ್ಕಾಗುವುದಿಲ್ಲ, ಅಲ್ಲಿಯವರೆಗೆ ಇದೊಂದು ಮೂಲಭೂತವಾದ ಬದಲಾವಣೆಯಾಗುತ್ತದೆಂದು ನಾವ್ಯಾರು ಬಯಸುವುದು ತಪ್ಪಾಗುತ್ತದೆ ಎನ್ನುವ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಮಂಡನೆ ಮಾಡುತ್ತೇನೆ. ಗೃಹಮಂತ್ರಿಯಾಗಿ ನನಗೆ ಕೆಲವು ಜವಾಬ್ದಾರಿಗಳಿವೆ, ಅದನ್ನು ನಾನು ನಿರ್ವಹಿಸಬೇಕಾಗಿದೆ. ನಾನು ಅವನ್ನು ನಿರ್ವಸಶಕ್ತಂಥ ಸಂದರ್ಭದಲ್ಲಿ, ಅನೇಕ ವಿಚಾರಗಳನ್ನು ಪ್ರಚಾರ ಮಾಡುವುದಕ್ಕೆ ಮುಂಚೆ ತಮ್ಮಲ್ಲಿ ನಾನು ಮನವಿಮಾಡಿಕೊಳ್ಳುವುದೇನೆಂದರೆ, ವಿರೋಧಪಕ್ಷದ ಉಪನಾಯಕರು, ಗಣ್ಯ ಶಾಸಕರು ಈಗ ನಮಗೇನು ಸಲಹೆಗಳನ್ನು ಕೊಟ್ಟಿದ್ದಾರೆ, ಪ್ರಾರಂಭದಲ್ಲಿ ತಾವೇ ಅದನ್ನು ಪ್ರಸ್ತಾವಿಕವಾಗಿ ಪ್ರಸ್ತಾಪ ಮಾಡಿದ್ದೀರಿ. ಎರಡು ಸದನಗಳ ಒಂದು ಜಂಟಿ ಸಮಿತಿಯನ್ನು ರಚಿಸಿ ಆ ಸಮಿತಿಗೆ ಎರಡು ಮೂರು ತಿಂಗಳುಗಳ ಸಮಯವನ್ನು ಕೊಟ್ಟು,

ಈಗ ಇರುವ ಕಾನೂನುಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಇರುವ ಅಡಚಣೆಗಳೇನು? ಆಗುತ್ತಿರುವ ಅನ್ಯಾಯ ಹಾಗೂ ಮೋಸವೇನು? ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಲ್ಲಿರುವ ತಪ್ಪೇನು ಎನ್ನುವುದರ ಬಗ್ಗೆ ಒಂದು ವರದಿಯನ್ನು ಕೊಟ್ಟರೆ ಅದನ್ನು ಜಾರಿಗೊಳಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :— ನಮ್ಮ ಒಂದು ಸಲಹೆ ಏನೆಂದರೆ, ಈಗ ಸಮಿತಿ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಿಂತ ಸೆಕ್ಷನ್ 305 ರ ಕೆಳಗೆ ಈಗಾಗಲೇ ಒಂದು ಸಮಿತಿ ಇದೆ, ಆ ಸಮಿತಿಗೆ ಯಾರನ್ನು ಸದಸ್ಯರನ್ನಾಗಿ ಮಾಡಬೇಕೆನ್ನುವ ಅಧಿಕಾರ ಅಧ್ಯಕ್ಷರಿಗೆ ಇದೆ. ಉದಾಹರಣೆಗೆ ನಾನು ಅದನ್ನು ಓದುತ್ತೇನೆ, ``At the commencement of the Assembly or from time to time as the case may be, the speaker shall nominate a Committee on the Welfare of women and children consisting of not more that 17 members of whom not more than 12 members shall be nominated by the Speaker from amongst the members of Legislative Assembly and not more than five members likewise be nominated by the Chairman of the Legislative Council from amongst the members of the Legislative Council."

ಈ ಪ್ರಾವಿಷನ್ ಕೆಳಗೆ, ಅಧ್ಯಕ್ಷರೆ, ತಾವು ತಕ್ಷಣವೇ ಸದಸ್ಯರನ್ನು ನಾಮಕರಣ ಮಾಡಿ. ಈಗ ತಮ್ಮ ಮುಂದೆ ಸಮಿತಿಗಳನ್ನು ರಚನೆ ಮಾಡುವಂತಹದಿದೆ, ಇದರಲ್ಲಿ ಹೆಚ್ಚು ಆಸಕ್ತಿ ಇರತಕ್ಕಂಥವರನ್ನು ಸದಸ್ಯರನ್ನಾಗಿ ಮಾಡಿ ಅವರಿಗೆ ಒಂದು ತಿಂಗಳುಗಳ ಕಾಲಾವಕಾಶ ಕೊಟ್ಟು, ಈಗಾಗಲೇ ಏನೊಂದು ಚರ್ಚೆ ಆಗಿದೆ, ಆ ಒಂದು ಆಧಾರದ ಮೇಲೆ, ಇಲ್ಲಿ ಪ್ರಮುಖವಾಗಿರುವುದು ನೀವು ಸಮಾಜದ ಎಲ್ಲಾ ವಿಷಯಗಳನ್ನು ತೆಗೆದುಕೊಂಡರೆ ಚರ್ಚೆ ಮಾಡುವುದಕ್ಕೆ ಅವಕಾಶ ಸಾಧ್ಯವಾಗುವುದಿಲ್ಲ. ಒಂದು ಸಮಾಜದಲ್ಲಿ ಅಸ್ಪೃಶ್ಯತೆ ಇದೆ, ಹೆಣ್ಣು ಮಕ್ಕಳನ್ನು ಇನ್ನೂ ಕೂಡ ಅಸ್ಪೃಶ್ಯರಂತೆ ಕಾಣುತ್ತಾರೆ. ಅಂದಾಗ ನೀವು, ನಾವು ಸಮಾಜ ಸುಧಾರಣೆ ಇವೆಲ್ಲವೂ ಕೂಡ ಇದರಲ್ಲಿ ಬರುವುದಿಲ್ಲ. ನಾನು ಹೇಳುವುದೇನೆಂದರೆ ಈ ಸಮಿತಿಗೆ ನೇರವಾಗಿ ಏನು ದೌರ್ಜನ್ಯಗಳಾಗುತ್ತಿವೆ ಅಥವಾ ವರದಕ್ಷಿಣೆ ಮರಣಗಳಾಗುತ್ತಿವೆ, ಅಸ್ವಾಭಾವಿಕ ಮರಣವಾಗುತ್ತಿವೆ, ಇದರ ಬಗ್ಗೆ ಸ್ಯಾಂಪಲ್ ಆಗಿ ಸರ್ವೆ ಮಾಡಿ ತಕ್ಷಣ ಇದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಲು ಏನು ಕಾನೂನನ್ನು ತರಬೇಕು ಎನ್ನುವುದಕ್ಕೆ ಸೀಮಿತವಾಗಿ ತಾವು ಬೇಗನೆ ಮಾಡಿದರೆ ಇದು ಪರಿಹಾರವಾಗುತ್ತದೆಯೇ ಹೊರತು ದೇಶವೆಲ್ಲಾ ಸಂಚಾರ ಮಾಡಿದರೆ ಬಹುಶಃ ಸಾಧ್ಯವಾಗುವುದಿಲ್ಲ ಎಂದು ನನ್ನ ಭಾವನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಧ್ಯಕ್ಷರೆ, ಆ ಒಂದು ಅಧಿಕಾರ ತಮಗಿದೆ. ಸದನ ಸಮಿತಿಯನ್ನು ರಚಿಸಬೇಕೋ ಅಥವಾ ಈಗಿರುವ ನಿಯಮಾವಳಿಗಳ ಪ್ರಕಾರ

ಒಂದು ಸ್ಕ್ರೀನಿಂಗ್ ಕಮಿಟಿ ಮಾಡುವುದು ಇವೆಲ್ಲಾ ತಮ್ಮ ವಿವೇಚನೆಗೆ ಬಿಟ್ಟಿರುವುದು, ತಾವೇನು ನಿರ್ಧಾರ ಮಾಡುತ್ತೀರ, ಅದನ್ನು ಸರ್ಕಾರ ಒಪ್ಪುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ. ಈಗ ಅನೇಕ ಸದಸ್ಯರುಗಳು ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ, ಆ ಎಲ್ಲಾ ಅಭಿಪ್ರಾಯಗಳನ್ನೂ ಕೂಡ ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಕೆಲವು ಪಾಯಿಂಟುಗಳನ್ನು ಕೊಟ್ಟಿದ್ದಾರೆನ್ನುವ ಮಾತನ್ನು ಹೇಳಿದರು ಅದನ್ನು ನಾನು ನನ್ನ ಗಮನಕ್ಕೆ ತೆಗೆದುಕೊಂಡಿದ್ದೇನೆ, ಅದರ ಮೇಲೆ ಕಾನೂನುಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲವೆಂದು ಹೇಳುತ್ತೇನೆ. ಬೆಂಗಳೂರು ನಗರ ಪೋಲೀಸ್‌ನವರು ಈಗಾಗಲೇ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಹಿಳಾವಾಣಿ ಎನ್ನುವ ಒಂದು ಕಾರ್ಯಕ್ರಮವನ್ನು ಆರಂಭ ಮಾಡಿದ್ದಾರೆ, ಉಡುಪಿ ಪೋಲೀಸ್‌ನವರೂ ಕೂಡ ಇದೆ ರೀತಿಯ ಕೆಲಸವನ್ನು ಮಾಡಿದ್ದಾರೆ. ಈ ಮಹಿಳಾವಾಣಿ ಹಾಗೂ ಮಕ್ಕಳವಾಣಿ ಎನ್ನುವ ಕಾರ್ಯಕ್ರಮವೇನಿದೆ, ಇದು ಆರಂಭವಾದ 23ನೇ ತಾರೀಖು ಜನವರಿ, ಎರಡು ತಿಂಗಳುಗಳ ಒಳಗಡೆ ಸುಮಾರು 2934 ಕರೆಗಳು ಬಂದಿವೆ. ಅದರಲ್ಲಿ ಖಚಿತವಾಗಿರುವ ಸಮಸ್ಯೆಗಳು 272. ಪೋಲೀಸ್‌ನವರು ಸುಮಾರು 82 ಮಹಿಳಾ ಸಂಘಟನೆಗಳ ಸಹಕಾರದಿಂದ ಇದನ್ನು ಮಾಡಿರುವುದು, ಸಮಸ್ಯೆಗಳೂ ಕೂಡ ಇತ್ಯರ್ಥವಾಗಿವೆ ಎಂದು ಹೇಳುತ್ತೇನೆ. ಎಲ್ಲಾ ಜಿಲ್ಲೆಗಳಲ್ಲೂ ಕೂಡ ಈ ಮಹಿಳಾ ವಾಣಿ ಕಾರ್ಯಕ್ರಮವನ್ನು ಅನುಕರಣೆ ಮಾಡುವಂತೆ ಸೂಚನೆಯನ್ನು ಕೊಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊಷ್ಟೆ ಈ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಅನ್ನು ನಮ್ಮ ಸರ್ಕಾರ ಆಯ್ಕೆ ಮಾಡಿದೆ, ಅದರಲ್ಲಿ 23 ಜನ ಮಹಿಳೆಯರಾಗಿರುತ್ತಾರೆ. ನಾವು ಆಯ್ಕೆ ಮಾಡಿರುವವರ ಪೈಕಿ ಈಗ 20 ಜನ ಮಹಿಳಾ ಸಬ್-ಇನ್‌ಸ್ಪೆಕ್ಟರುಗಳು ತರಬೇತಿಯಲ್ಲಿದ್ದಾರೆ. ಇದರಿಂದ ಪ್ರತಿಯೊಂದು ತಾಲೂಕಿಯಲ್ಲೂ ಕೂಡ, ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಒಬ್ಬರು ಇಬ್ಬರು ಮಹಿಳಾ ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳಿದ್ದರೆ ಒಳ್ಳೆಯದು. ಹೆಲ್ಪ್‌ಮೆಂಟ್ ಕಡಿಮೆಯಾಗಬಹುದೆನ್ನುವ ದೃಷ್ಟಿಯಿಂದ ಈಗ ಇಡೀ ರಾಜ್ಯದಲ್ಲಿ 800 ಸಬ್-ಇನ್‌ಸ್ಪೆಕ್ಟರ್ ಹುದ್ದೆಗಳು ಖಾಲಿ ಇವೆ. ಅದರಲ್ಲಿ ಈ ವರ್ಷ 200, 250 ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಒಂದು ಪ್ರಕ್ರಿಯೆಯನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಶೇಕಡ 30 ರಂತೆ ಸುಮಾರು 70 ಜನ ಮಹಿಳಾ ಸಬ್-ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆನ್ನುವ ಆದೇಶವನ್ನು ಸರ್ಕಾರ ಹೊರಡಿಸುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ಈ ಡೌರಿ ಕೇಸ್‌ಗಳನ್ನು ಟ್ರಯಲ್ ಮಾಡುವುದಕ್ಕೆಂದು ಬೆಂಗಳೂರಿನಲ್ಲಿ ಮಾತ್ರ ಒಂದು ವಿಶೇಷ ಕೋರ್ಟ್‌ಇದೆ ನಾವು ಹೈಕೋರ್ಟ್ ಅನ್ನು ಕನ್ಸಲ್ಟ್ ಮಾಡಿ ಬೇರೆ ಕಡೆಯಲ್ಲೂ ಕೂಡ ಈ ವಿಶೇಷ ಕೋರ್ಟ್‌ಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನೂ ಕೂಡ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಈಗಾಗಲೇ ಹೇಳಿದಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಕೂಡ ಸರ್ಕಾರ ಮಹಿಳಾ ಪೋಲೀಸ್ ಠಾಣೆಗಳನ್ನು ತೆರೆಯುತ್ತಿದ್ದೇವೆ. ಇದರಿಂದ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ಸ್ವಲ್ಪ ಅನುಕೂಲವಾಗುತ್ತದೆ. ಅವತ್ತು ಕೆಲವು

ಘಟನೆಗಳನ್ನು ವಿಶೇಷವಾಗಿ ನಮ್ಮ ವಿಮೋಚನ ಸಂಘಟನೆಯವರು ಏನು ಹೇಳಿದ್ದಾರೆ ಇದನ್ನು ಗಮನದಲ್ಲಿಟ್ಟುಕೊಂಡು ಕೆಲವು ಕ್ರಮಗಳನ್ನು ನಾನು ತುರ್ತಾಗಿ ತೆಗೆದುಕೊಳ್ಳಬೇಕೆಂದಿದ್ದೇನೆ. ಅಧಿವೇಶನದ ನಂತರ ಯಾರು ಸಿಓಡಿ ಕೆಳಗಡೆ ಡೌಂ ಡೆತ್ ಕೇಸುಗೋಸ್ಕರ ಒಂದು ಸ್ಪೆಷಲ್ ಸೆಲ್ ಮಾನಿಟರ್ ಮಾಡುವುದಕ್ಕೆ ಮಾಡಿದ್ದೇವೆ. ಅದರ ಕಾರ್ಯಕ್ರಮವನ್ನು ರಿವ್ಯೂ ಮಾಡಿ ನಾವು ಕೆಲವು ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಯೋಚಿಸಿದ್ದೇವೆ. ಈ ನಿಟ್ಟಿನಲ್ಲಿ ಅವರಿಗೆ ನಾವು ಕೆಲವು ಸಹಾಯಕ ಸಹಕಾರವನ್ನೂ ಕೂಡ ನೀಡಬೇಕಾಗುತ್ತದೆ. ಈಗ ಅಧಿಕಾರಿಗಳು ಮಾಡುತ್ತಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ನಮಗಿರುವ ವ್ಯವಸ್ಥೆಯಲ್ಲಿ ನಾವು ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಆ ಬದಲಾವಣೆಗಳನ್ನು ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ಅಧಿವೇಶನದ ನಂತರ ನಾನು ಮತ್ತೊಂದು ಸಭೆಯನ್ನು ಕರೆದು, ಮಾನ್ಯ ಸದಸ್ಯರುಗಳು ಹೇಳಿದಂತೆ ಈಗಿರುವ ಕಾನೂನುಗಳು ಸಾಕಷ್ಟು ಇವೆ, ಅವುಗಳನ್ನು ಕಾರ್ಯಾಚರಣೆಗೆ ತರುವಲ್ಲಿ ಕೆಲವು ವಿಳಂಬ ಹಾಗೂ ತಪ್ಪುಗಳಾಗುತ್ತಿವೆ. ಅವುಗಳನ್ನು ಸರಿಮಾಡುವುದಕ್ಕೆ ಕಠಿಣವಾದ ಕ್ರಮವನ್ನು ನಾವು ಹಾಗೂ ಪೋಲಿಸ್ ಇಲಾಖೆಯವರು ತೆಗೆದುಕೊಳ್ಳುತ್ತೇವೆ. ಈ ಡಿಸ್ಪೊಸಲ್ ಆಫ್ ಕೇಸ್ ಹಾಗೂ ಈ ಟ್ರಯಲ್ ನಲ್ಲಿ ಸುಮಾರು ಒಂದು ಪ್ರಕರಣಕ್ಕೆ ಎರಡರಿಂದ ಎರಡೂವರೆ ವರ್ಷಗಳಾಗುತ್ತಿವೆ. ಜವಾಬ್ದಾರಿ ನಾಗರಿಕರು ಸಾಕ್ಷಿಯನ್ನು ಹೇಳುವುದಕ್ಕೆ ಮುಂದೆ ಬರುತ್ತಿಲ್ಲ ಈ ರೀತಿ ಮತ್ತೊಂದು ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಪಕ್ಕದ ಮನೆಯಲ್ಲಿ ಆಗಿದೆ ಎಂದರೆ ಅಯ್ಯೋ ಕೋರ್ಟಿಗೆ ಹೋಗುತ್ತಾರೆ, ನಾಲ್ಕು ಐದು ಸಾರಿ ಸಾಕ್ಷಿಗೋಸ್ಕರ ಕರೆಯುತ್ತಾರೆ ಯಾರು ಹೋಗುವುದು ಎಂದು ಬರುವುದಿಲ್ಲ ಅದೊಂದು ಮುಖ್ಯವಾಗಿರುವ ತೊಂದರೆ. ಮತ್ತೆ ಸಾಕ್ಷಿಗಳು ಹಾಸ್ಟೈಲ್ ಆಗತಕ್ಕಂಥದ್ದನ್ನು ನಾವು ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ. ಏಕೆ ಈ ಕನ್ವಿಕ್ಷನ್ ಕೇಸುಗಳು ಕಡಿಮೆಯಾಗುವುದಕ್ಕೆ ಏನು ಕಾರಣವೆಂದು ನೋಡಿದಾಗ ಇದು ಒಂದು ಕಾರಣ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಅಕ್ಕಪಕ್ಕದಲ್ಲಿರುವವರು ಸಹಕಾರ ನೀಡುವುದಿಲ್ಲ. ಏನೋ ನಡೆದುಕೊಂಡು ಹೋಗುತ್ತದಪ್ಪ ನಮಗೆ ಏತಕ್ಕೆ, ಏನೋ ನಡೆದುಕೊಂಡು ಹೋಗುತ್ತದೆಂದು ಸುಮ್ಮನಿರುತ್ತಾರೆ. ಆದುದರಿಂದ ಇರತಕ್ಕಂಥ ಕಾನೂನಿನಲ್ಲಿ ಇದನ್ನು ಯಾವರೀತಿ ಹೋಗುತ್ತದೆಂದು ಸುಮ್ಮನಿರುತ್ತಾರೆ. ಆದುದರಿಂದ ಇರತಕ್ಕಂಥ ಕಾನೂನಿನಲ್ಲಿ ಇದನ್ನು ಯಾವರೀತಿ ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ. ಬಹಳ ಮುಖ್ಯವಾಗಿ, ಇನ್ವೆಸ್ಟ್ ಪ್ರೊಸೀಡಿಂಗ್ಸ್ ಮತ್ತು ಈ ಡೈಯಿಂಗ್ ಡಿಕ್ಲರೇಷನ್ ಏನಿದೆ, ಇದು ಅವತ್ತು ನಿರ್ದಿಷ್ಟವಾಗಿ ಹೇಳಿರತಕ್ಕಂಥ ಎಲ್ಲಾ ಕೇಸುಗಳಿಗೂ ಪಾಯಿಂಟೆಡ್ ಆಗಿ ಅದೊಂದರಲ್ಲೇ ನಾವು ಉತ್ತರವನ್ನು ಹುಡುಕಬೇಕಾಗಿರುತ್ತದೆ. ಒಂದು ಇನ್ವೆಸ್ಟ್ ಪ್ರೊಸೀಡಿಂಗ್ಸ್ ಇನ್ನೊಂದು ಡೈಯಿಂಗ್ ಡಿಕ್ಲರೇಷನ್. ಅದರ ಬಗ್ಗೆ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ವಿಡಿಯೋ ರಿಕಾರ್ಡ್ ಮಾಡುವುದಕ್ಕೆ ಸಾಧ್ಯವೇ ಎಂದು ಹೇಳಿದ್ದಾರೆ, ಅದನ್ನು ನಾನು ವಿಚಾರ ಮಾಡುತ್ತೇನೆ. ಅದರ ಜೊತೆಗೆ ಇದರಲ್ಲಿ ಭಾಗಿಗಳಾಗಿರುವವರು ಯಾರು, ಒಂದು, ವೈದ್ಯರು ಇನ್ನೊಂದು ಪೋಲಿಸ್ ಅಧಿಕಾರಿಗಳು, ಪ್ರಾಸಿಕ್ಯೂಟರ್ಸ್ ಮತ್ತು ಎಕ್ಸಿಕ್ಯೂಟಿವ್ ಮಾಜಿಸ್ಟ್ರೇಟ್ಸ್.

ಅಧ್ಯಕ್ಷರು :— ವಿಡಿಯೋಗ್ರಾಫ್ ಮಾಡುವುದಕ್ಕೆ ಜೊತೆ ಜೊತೆಗೆ ಡೈಯಿಂಗ್ ಡಿಕ್ಲರೇಷನ್ ವೇಳೆಗೆ ಅವರ ಅತ್ತೆ ಮನೆಯವರು ಯಾರು ಇನ್-ಲಾಸ್ ಇರುತ್ತಾರೆ, ಅವರ್ಯಾರೂ ಅಲ್ಲಿ ಇರಬಾರದು. ಅನೇಕ ಸಂದರ್ಭಗಳಲ್ಲಿ ಅವರು ಅಲ್ಲಿ ಹಾಜರಿದ್ದು ಮ್ಯಾನುಪಲೇಟ್ ಮಾಡುತ್ತಾರೆ, ಬ್ಲಾಕ್‌ಮೇಲ್ ಮಾಡುತ್ತಾರೆ. ಉದಾಹರಣೆಗೆ ಅವಳು ಶೇಕಡ 80 ರಷ್ಟು ಸುಟ್ಟು ಹೋಗಿರುತ್ತಾಳೆ, ಮಗು ಇರುತ್ತದೆ, ನೀನು ಹೇಳಿಕೆ ಕೊಟ್ಟರೆ ಸತ್ತುಹೋಗುತ್ತಿಯಾ ನಾವು ನಿನ್ನ ಮಗುವನ್ನು ನೋಡಿಕೊಳ್ಳುವುದಿಲ್ಲ. ನಿನ್ನ ಗಂಡ ಜೈಲಿಗೆ ಹೋಗುತ್ತಾನೆ ಎಂದು ಹೇಳುತ್ತಾರೆ, ಬ್ಲಾಕ್‌ಮೇಲ್ ಮಾಡುತ್ತಾರೆ. ಅವರ್ಯಾರೂ ಇರಕೂಡದು, ಅವಳು ತಾನೇನು ಹೇಳಬೇಕೆಂದಿರುತ್ತಾಳೋ ಅದನ್ನು ಸ್ವಯಂಪ್ರೇರಣೆಯಿಂದ ನಿರ್ಭಯವಾಗಿ ಹೇಳತಕ್ಕಂಥ ವಾತಾವರಣ ಸೃಷ್ಟಿಯಾಗಬೇಕು, ಅದನ್ನು ವಿಡಿಯೋಗ್ರಾಫ್ ಮಾಡಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅಧ್ಯಕ್ಷರೆ, ಅದಕ್ಕೋಸ್ಕರ ನಾವು 27 ಜಿಲ್ಲೆಗಳಿಂದಲೂ ಕೂಡ ಕೆಲವರಾದರೂ ಅಧಿಕಾರಿಗಳನ್ನು ಕರೆಯಿಸಿ, ನಮ್ಮ ಮೈಸೂರಿನಲ್ಲಿರುವ ಪೋಲಿಸ್ ಅಕಾಡೆಮಿಯಲ್ಲಿ ಒಂದು ಸೆನ್ಸಿಟೈಸೇಷನ್ ಹಾಗೂ ತರಬೇತಿ ಕಾರ್ಯಕ್ರಮವನ್ನು ಕೂಡಲೇ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ವಿಮೋಚನಾ ಸಂಘದವರು ಬಂದು ಇಷ್ಟೆಲ್ಲಾ ಹೇಳಿದ ಮೇಲೆ ನಾವು ತೆಗೆದುಕೊಂಡಿರತಕ್ಕಂಥ ನಿರ್ಧಾರವಿದು. ಇದರಿಂದ ಸ್ವಲ್ಪಮಟ್ಟಿಗೆ ಉಪಯೋಗವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಖಾಲಿ ಹಾಗದದ ಮೇಲೆ ಪೋಲೀಸಿನವರು ಹೇಳಿಕೆ ತೆಗೆದುಕೊಳ್ಳತಕ್ಕಂಥಾದ್ದು, ಪೋಲೀಸಿನವರು ಹೇಳಿಕೆ ತೆಗೆದುಕೊಳ್ಳುವಾಗ ಬೇರೆ ಯಾರೂ ಇರಬಾರದು ಎಂದು ಹೇಳತಕ್ಕಂಥಾದ್ದು ಮತ್ತು ಪೋಲೀಸಿನವರಿಗೆ ಇನ್‌ಸ್ಟ್ರಕ್ಷನ್ಸ್ ಮಾಡತಕ್ಕಂಥಾದ್ದು ಇವುಗಳೆಲ್ಲಾ ಅನೇಕ ಸಂದರ್ಭಗಳಲ್ಲಿ ನಡೆಯತಕ್ಕಂಥಾದ್ದಾಗಿವೆ. ಇದರ ಹಿನ್ನೆಲೆಯಲ್ಲಿ ಎಷ್ಟು ಬಿಗಿ ಮಾಡಲು ಸಾಧ್ಯವೋ ಅಷ್ಟು ಬಿಗಿ ಮಾಡಲು ನಮ್ಮ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ. ಇದು ಸರ್ಕಾರದ ಹಿರಿಮೆ. ಶ್ರೀರಾಮರೆಡ್ಡಿಯವರು ನನಗೆ ಕೆಲವು ಅಂಕಿಅಂಶಗಳನ್ನು ಕೊಟ್ಟರು. ಈ ಅಂಕಿಅಂಶಗಳು ತಪ್ಪು, ಎಂದು ಹೇಳಲು ನಾನು ಹೋಗುವುದಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇವೆ. ಅದೇ ರೀತಿ, ಆ ಅಂಕಿಅಂಶಗಳು ಇರುವುದು ಕೂಡ ನಿಜ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ಅಂಕಿಅಂಶಗಳನ್ನು ಕೊಟ್ಟೆ ಎಂದರೆ, ಮಾನ್ಯ ಸಿಂಧ್ಯಾರವರು ಮೊದಲು ಮಾತನಾಡತಕ್ಕಂಥ ಸಂದರ್ಭದಲ್ಲಿ ವಿಭಾ ಪಾರ್ಥಸಾರಥಿಯವರು ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಬಹಳ ಚೆನ್ನಾಗಿ ಗಮನಿಸಿದ್ದಾರೆ ಎಂದು ಹೇಳಿದರು.

ಅಧ್ಯಕ್ಷರು :— ಇರುವುದರಲ್ಲಿ ಉತ್ತಮ ಎಂದು ಒಂದು ರೆಫರೆನ್ಸ್ ಕೊಟ್ಟರು ಅಷ್ಟೇ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇಡೀ ರಾಷ್ಟ್ರದಲ್ಲಿ ಇರುವುದರಲ್ಲಿ ಉತ್ತಮವಾಗಿರುವುದು ಎಂದರೆ ತಮಿಳುನಾಡಿನಲ್ಲಿ ಮಾತ್ರ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಶ್ರೀರಾಮರೆಡ್ಡಿಯವರು ವಿರೋಧ ಪಕ್ಷದ ಸದಸ್ಯರಾಗಿ ಆ ರೀತಿಯೇ ಮಾತನಾಡಬೇಕಾಗುತ್ತದೆ. ನಮ್ಮ ತಪ್ಪುಗಳನ್ನು ಕಂಡುಹಿಡಿಯಲೇ ಬೇಕಾಗುತ್ತದೆ. ಏಕೆಂದರೆ ಅವರು ಇರುವುದೇ ವಿರೋಧ ಪಕ್ಷದಲ್ಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಈ ಭಾರತ ದೇಶದಲ್ಲಿ ಮಹಿಳೆಯರ ಮೇಲೆ ದಬ್ಬಾಳಿಕೆ ಮತ್ತು ದೌರ್ಜನ್ಯಗಳು ಕಡಿಮೆ ಪ್ರಮಾಣದಲ್ಲಿ ನಡೆದಿರತಕ್ಕಂಥ ಒಂದು ರಾಜ್ಯವೆಂದರೆ ಅದು ತಮಿಳುನಾಡು ಮಾತ್ರ. ಬೇಕಾದರೆ ನೀವು ಕೇಂದ್ರ ಸರ್ಕಾರದ ಅಂಕಿಅಂಶಗಳನ್ನು ತೆಗೆದು ನೋಡಿ. ಕರ್ನಾಟಕ ರಾಜ್ಯದ ಮೇಲೆ ಗೂಬೆ ಕೂರಿಸಬೇಕು ಎಂದು ನಾನು ಹೇಳುತ್ತಿಲ್ಲ. ಒಟ್ಟು 6177 ಪ್ರಕರಣಗಳು ನಡೆದಿರತಕ್ಕಂಥಾದ್ದು ಕರ್ನಾಟಕದಲ್ಲಿ, ತಮಿಳುನಾಡಿನಲ್ಲಿ ಅಲ್ಲ. Tamiland is the least State.

ಅಧ್ಯಕ್ಷರು :— ಅಲ್ಲಿ ಈಗ ರಿವರ್ಸ್ ಆಗಿದೆ. ಮೊನ್ನೆ ಅಡಿಟರ್ ಅದನ್ನು ಹೇಳಿದ್ದಾರೆ.

SRI P.G.R. SINDHIA :— I don't want to step into the argument with the Hon. Member. ಪ್ರಾರಂಭದಲ್ಲಿ ಪ್ರಾಸ್ತಾವಿಕವಾಗಿ ಡಿಬೇಟ್‌ನ ಮೇಲೆ ಮಾತನಾಡುವಾಗ ನಾನು ಏನು ಹೇಳಿದೆ ಎಂದರೆ ಇತ್ತೀಚೆಗೆ ಪೋಲೀಸ್ ಇಲಾಖೆಯವರು ಪೋಲೀಸರನ್ನು ಸೆನ್ಸಿಟೈಜೇಷನ್ ಮಾಡುವ ದೃಷ್ಟಿಯಿಂದ, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಬಂದಂಥ ಸಂದರ್ಭದಲ್ಲಿ ಮಹಿಳೆಯರ ವಿಚಾರದಲ್ಲಿ, ಅದು ಮಹಿಳೆಯರಿಗೆ ಸರ್ಕಾರಿ ನೌಕರಿಯಲ್ಲಿ ಶೇ. 33 ರಷ್ಟು ರಿಸರ್ವೇಷನ್ ಮಾಡತಕ್ಕಂಥ ವಿಚಾರ ಇರಬಹುದು, ಮಂಡಲ್ ಪಂಚಾಯಿತಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪುರಸಭೆಗಳಲ್ಲಿ ಪ್ರಾತಿನಿಧ್ಯವನ್ನು ಕೊಡತಕ್ಕಂಥ ವಿಚಾರ ಇರಬಹುದು, ಇದರಲ್ಲಿ ಬೇರೆ ರಾಜ್ಯಗಳಿಗಿಂತ ಉತ್ತಮವಾಗಿರತಕ್ಕಂಥ ಕೆಲಸವನ್ನು ನಮ್ಮ ರಾಜ್ಯ ಮಾಡಿದೆ ಎನ್ನುವ ಮಾತನ್ನು ವಿಭಾ ಪಾರ್ಥಸಾರಥಿಯವರು ಹೇಳಿದರು ಎಂದು ಹೇಳಿದೆನೇ ಹೊರತು ಆಗುತ್ತಿರುವುದೆಲ್ಲ ಸರಿ ಎಂದು ನಾನು ಹೇಳಲಿಲ್ಲ. ಇವತ್ತು ತಮಗೆ ಎಷ್ಟು ನೋವಾಗಿದೆಯೋ, ಅಷ್ಟೇ ನೋವು ನಮಗೂ ಆಗಿದೆ. ನಾವು ಇಂಥ ಒಂದು ಜವಾಬ್ದಾರಿಯುತ ಸ್ಥಾನದಲ್ಲಿರುವಂಥ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ನಮಗೂ ಸಹೋದರಿಯರಿದ್ದಾರೆ, ನಮ್ಮ ಕುಟುಂಬಗಳಲ್ಲೂ ಸಹ ಸಹೋದರಿಯರು ಇದ್ದಾರೆ, ನಮ್ಮ ಮಹಿಳೆಯರನ್ನೂ ನೋಡಿದೆ. ಆದ್ದರಿಂದ ಈ ವಿಚಾರದಲ್ಲಿ ವಿರೋಧಪಕ್ಷ ಮತ್ತು ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರುಗಳು ಕೊಟ್ಟಿರತಕ್ಕಂಥ ಸಲಹೆಯನ್ನು ತಮ್ಮ ಮಾರ್ಗದರ್ಶನದಲ್ಲಿ ಸರಿ ಮಾಡಲು, ಈಗಾಗಲೇ ಇರತಕ್ಕಂಥ ಕಾನೂನುಗಳನ್ನು ಅದಷ್ಟು ಜಾರಿಗೆ ತರಲು ಕಠಿಣವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ಮತ್ತೊಮ್ಮೆ ವಂದಿಸುತ್ತೇನೆ. ಅದೇ ರೀತಿ, ವಿಮೋಚನಾ ಸಂಘಟನೆಯವರೂ ಸಹ ನಮಗೆ ಸಹಕಾರ ಕೊಟ್ಟಿದ್ದಾರೆ, ಅವರಿಗೂ ಸಹ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾವುದೇ ಸಂದರ್ಭದಲ್ಲಿ ಆಗಲಿ, ಈ ಸದನದ ಮೂಲಕ ಮತ್ತು ತಮ್ಮ ಮೂಲಕ ನಾನು ಈ ರಾಜ್ಯದ ಜನತೆಯಲ್ಲಿ ಮನವಿ

ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ, ಈ ರೀತಿ ಮಹಿಳೆಯರ ಪರವಾಗಿರುವಂಥ ಸಂಘಟನೆಗಳು, ವಿವಿಧ ರಾಜಕೀಯಕ್ಕೆ ಸಂಬಂಧಿಸಿದ ಮಹಿಳಾ ವಿಭಾಗದವರು ಉತ್ತಮವಾಗಿರತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಅವರು ನಮ್ಮ ಗಮನಕ್ಕೆ ಇಂಥ ವಿಚಾರಗಳನ್ನು ತಂದರೆ, ಸರ್ಕಾರಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಅದರ ಜೊತೆಗೆ ಒಂದು ಮಾತು, ಇದು ಧೈರ್ಯಂಕವಾಗಿ ಆಗಿರತಕ್ಕಂಥಾದ್ದು. ಕೆಲವು ಸಲ ಮಾನಸಿಕವಾಗಿ ಹಿಂಸೆಯನ್ನು ಕೊಡುತ್ತಾರೆ. ಉದಾಹರಣೆಗೆ, ವಿಧವೆಯಾದಾಗ ಬಳೆಯನ್ನು ಒಡೆಯುವುದು, ಹೀಗೆ ಕ್ರೌರ್ಯವಾಗಿ ನಡೆದುಕೊಳ್ಳುವಂಥಾದ್ದು ಕೂಡ ಕೆಟ್ಟದ್ದು, ಇದು ಸರಿಯಲ್ಲ, ಹೀಗೆ ಮಾಡುವುದರಿಂದ ಶಕ್ಷೆಯಾಗುತ್ತದೆ ಎಂದು ಮಾಡಬೇಕು. ಮಾನ್ಯ ಗೃಹಮಂತ್ರಿಗಳು ಇದನ್ನು ಗಮನಿಸಬೇಕು. ಇಂಥಾದ್ದಕ್ಕೆ ಏನಾದರೊಂದು ಭೀತಿಯನ್ನುಂಟು ಮಾಡತಕ್ಕಂಥಾದ್ದು ಆಗಬೇಕು.

ಅಧ್ಯಕ್ಷರು :— ವಾಟಾಳ್ ನಾಗರಾಜ್‌ರವರು ಅದನ್ನು ಹೇಳಿದ್ದಾರೆ. ಈ ವಿಚಾರವನ್ನು ನಮ್ಮ ಗಮನಕ್ಕೆ ಕೆಲವು ದಿವಸಗಳ ಹಿಂದೆ ತಂದಾಗ, ಈ ಅಧಿವೇಶನ ಮುಕ್ತಾಯವಾಗುವುದರೊಳಗಾಗಿ ಇದನ್ನು ಚರ್ಚೆ ಮಾಡಬೇಕು ಎಂದು ನಿರ್ಣಯ ಮಾಡಿದೆವು. ಅಂದು ನಾವು ಪ್ರಾಥಮಿಕ ಸಭೆ ಮಾಡಿದಾಗಲೂ ಮಾನ್ಯ ಗೃಹಮಂತ್ರಿಗಳು ನಮ್ಮ ಜೊತೆಯಲ್ಲಿದ್ದರು. ಅವರೂ ಕೂಡ ಒಪ್ಪಿಗೆ ಕೊಟ್ಟು ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದರು. ಅವರು ತೋರಿಸಿದ ಆಸಕ್ತಿಗಾಗಿ ಅವರನ್ನು ನಾನು ತುಂಬು ಹೃದಯದಿಂದ ಅಭಿನಂದಿಸುತ್ತಿದ್ದೇನೆ. ಅವರು ತೋರಿಸಿರತಕ್ಕಂಥ ಶ್ರದ್ಧೆ ಶ್ಲಾಘನೀಯವಾದುದು. ಚರ್ಚೆಯಲ್ಲಿ ಪಾಲ್ಗೊಂಡಂಥ ಅನೇಕ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು ನಮ್ಮಲ್ಲಿ ಈಗಾಗಲೇ ಇರತಕ್ಕಂಥ ಸ್ಥಾಯಿ ಸಮಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸ್ಥಾಯಿ ಸಮಿತಿಯ ಅವಧಿ ಮೇ 21 ನೇ ತಾರೀಖಿನವರೆಗೆ ಇರುತ್ತದೆ. ಒಂದನೇ ತಾರೀಖಿಗೆ ನಾವು ಈ ಸಭೆಯನ್ನು ಮುಂದೂಡಿದರೆ ಮತ್ತೆ ನಾವು ಜೂನ್ ತಿಂಗಳಲ್ಲಿ ಸೇರುತ್ತೇವೆ. ಆಗ ನಾವು ಸ್ಥಾಯಿ ಸಮಿತಿಗಳನ್ನು ರಚಿಸಬೇಕಾಗುತ್ತದೆ. ಈಗ ಇರತಕ್ಕಂಥ ಸ್ಥಾಯಿ ಸಮಿತಿಯ ಮುಂದೆ ಈಗಾಗಲೇ ಸ್ವಲ್ಪ ಕೆಲಸವಿರುವುದರಿಂದ ಈ ವಿಷಯಕ್ಕೆ ಸೀಮಿತವಾಗಿ ವಿಶೇಷ ಆಸಕ್ತಿ ಮತ್ತು ಶ್ರದ್ಧೆ ಇರತಕ್ಕಂಥವರನ್ನು ಆಯ್ಕೆ ಮಾಡಿಕೊಂಡು, ಮೇಲ್ಮನೆಯ ಸಭಾಪತಿಗಳೊಂದಿಗೆ ಕೂಡ ಚರ್ಚೆ ಮಾಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಜಂಟಿ ಸದನ ಸಮಿತಿಯನ್ನು ಮಾಡತಕ್ಕಂಥ ನಿರ್ಣಯಕ್ಕೆ ನಾನು ಬಂದಿದ್ದೇನೆ. ಅವರಿಗೆ ಎಂಟು ವಾರಗಳ ಕಾಲ ಮಾತ್ರ ಗಡುವು ಇರುತ್ತದೆ. ಯಾವ ಕಾರಣಕ್ಕೂ ಕೂಡ ಅವರು ಅವಧಿ ವಿಸ್ತರಣೆ ಕೇಳಲು ಅವಕಾಶವಿರುವುದಿಲ್ಲ. ಅವರು ಈ ಎಂಟು ವಾರಗಳ ಅವಧಿಯೊಳಗಾಗಿ ಶ್ರದ್ಧೆಯಿಂದ ಎಲ್ಲಾ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಸಾಮಾಜಿಕವಾಗಿ ಇದಕ್ಕೆ ತರಬೇಕಾಗಿರತಕ್ಕಂಥ ಕೆಲವು ಬದಲಾವಣೆಗಳು ನಾವು ಶಾಸನಬದ್ಧವಾಗಿ ಮಾಡತಕ್ಕಂಥ ಪ್ರಯತ್ನಗಳು ಕಾನೂನಿನ ಚೌಕಟ್ಟಿನಲ್ಲಿ ಮಾಡಬೇಕಾದಂಥ ಕೆಲವು ಬದಲಾವಣೆಗಳು, ಈ ಬಗ್ಗೆ ಆ ಸಮಿತಿ ಯಾವ ಶಿಫಾರಸ್ಸುಗಳನ್ನು ಮಾಡುತ್ತದೆ, ಅದನ್ನು ಸರ್ಕಾರದವರು ಅನುಷ್ಠಾನಗೊಳಿಸುತ್ತಾರೆ ಎನ್ನತಕ್ಕಂಥ ವಿಶ್ವಾಸವನ್ನು ನಾನು

ಇಟ್ಟುಕೊಂಡಿದ್ದೇನೆ. ಈ ಬಗ್ಗೆ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಸದನ ಸಮಿತಿಯನ್ನು ನಾನು ಬಹುತೇಕ ಒಂದನೇ ತಾರೀಖಿನ ದಿವಸ ಅನೌನ್ಸ್ ಮಾಡುತ್ತೇನೆ. ಈ ಚರ್ಚೆ ಇಲ್ಲಿಗೆ ಮುಕ್ತಾಯವಾಗಿದೆ. ನಾವು ಊಟ ಮುಗಿಸಿಕೊಂಡು ಬಂದು ಪುನಃ ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜು ಖರ್ಗೆ :— ಈ ಸಮಿತಿಗಾಗಿ ನಾನು ಮೊದಲಿಗೆ ನಿಮಗೆ ಒಂದು ಕಂಪ್ಲೇಟ್‌ನ್ನು ಕೊಡುತ್ತಿದ್ದೇನೆ. ಆ ಸಮಿತಿಗೆ ಇದನ್ನು ಒಪ್ಪಿಸಬೇಕು. ಇದು ಆರ್. ರಾಮಕೃಷ್ಣಯ್ಯ, ಬಿನ್ ರಂಗಯ್ಯ, ಕುಲುವೇನ ಹಳ್ಳಿ, ಗ್ರಾಮ ಪಂಚಾಯಿತಿ, ನೆಲಮಂಗಲ, ಬೆಂಗಳೂರು, ಇವರ ಅರ್ಜಿ. ಇದನ್ನು ತಮಗೆ ಕೊಡುತ್ತಿದ್ದೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡಲಾಗಿದೆ. ಪುನಃ 3.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.30 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 3.50ಕ್ಕೆ ಪ್ರಾರಂಭವಾಯಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(2) ಬಯಲುಸೀಮೆ ಮಂಡಳಿಗೆ ಹೆಚ್ಚು ಹಣ ನೀಡುವ ಬಗ್ಗೆ

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಮೂರು ಪ್ರಾದೇಶಿಕ ಮಂಡಳಿಗಳಿವೆ. ಆದರಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ, ಈ ಎರಡು ಯೋಜನಾ ಇಲಾಖೆಗಳಿಗೆ ಸೇರಿದ ಮಂಡಳಿಗಳಿವೆ. ನಮ್ಮದು ಬಯಲುಸೀಮೆ ಅಭಿವೃದ್ಧಿ ಮಂಡಳಿ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸುಮಾರು 72 ರಿಂದ 75 ತಾಸಕರು ಇರುವ ಕ್ಷೇತ್ರಗಳು ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಈ ಮಂಡಳಿ ರಚನೆ ಮಾಡಿದರಿ. ಆ ಮಂಡಳಿಯ ಆಡಳಿತ, ಹಣಕಾಸಿನ ವ್ಯವಸ್ಥೆ ಮತ್ತು ಇದರಿಂದ ನಮಗಾಗಿರುವ ಅನುಕೂಲಕಗಳ ಬಗ್ಗೆ ಚರ್ಚೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಂಡಿದ್ದರ ಮೇರೆಗೆ ನನಗೆ ತಾವು ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುತ್ತೀರಿ ಇದಕ್ಕಾಗಿ ತಮಗೆ ಮೊಟ್ಟಮೊದಲನೆಯದಾಗಿ ವಂದನೆಯನ್ನು ಅರ್ಪಿಸುತ್ತೇನೆ. ಈ ಮಂಡಳಿ ಕೇವಲ ಹೆಸರಿಗೆ ಮಾತ್ರ ಮಂಡಳಿಯಾಗಿದೆ. ಬಯಲು ಸೀಮೆಯಲ್ಲಿರುವ ಜನ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸುಮಾರು 70ರಷ್ಟು ವಂಚಿತರಾಗುತ್ತಿದ್ದಾರೆ. ನಮಗೆ ನೀರಾವರಿ

(ಈ ಹಂತದಲ್ಲಿ ಶ್ರೀಮತಿ ಡಿ.ಜಿ. ಹೇಮಾವತಿ) ಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಯೋಜನೆಗಳಿಲ್ಲ, ನಮಗೆ ಅರಣ್ಯ ಪ್ರದೇಶಗಳಿಲ್ಲ, ನಮಗೆ ಯಾವುದೇ ಗಡಿ ಪ್ರದೇಶದ ಅಭಿವೃದ್ಧಿಯಲ್ಲಿ ಹಣವಿಲ್ಲ. ಟ್ರೈಬಲ್ ಸಬ್-ಪ್ಲಾನ್ ಸ್ಕೀಮ್‌ನಲ್ಲಿ ನಮಗೆ ಹಣ ಬರುತ್ತಿಲ್ಲ.

ಇದರ ಜೊತೆಗೆ ಅಭಿವೃದ್ಧಿ ಕೆಲಸಗಳಲ್ಲಿ ನಮಗೆ ಬಹಳ ತಾರತಮ್ಯ ಆಗುತ್ತಿದೆ. ಒಂದು ಕಡೆ ಜಿಲ್ಲೆಗಳಿಗೆ ಸಂಸದರ ಅನುದಾನ ಬಂದು ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಆಗಬೇಕಾಗಿತ್ತೋ ಇದರಲ್ಲಿ ಕೂಡ ಒಂದು ಕೋಟಿ ಎರಡು ಕೋಟಿ ಕೊರತೆ ಮಾಡಿ ಅವರ ವಿವೇಚನಾ ಕೋಟಾದಲ್ಲಿ ಖರ್ಚು ಮಾಡುತ್ತಿದ್ದಾರೆ. ಇನ್ನು ಇ.ಎ.ಎಸ್. ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ಇ.ಎ.ಎಸ್. ಸಮಿತಿಗಳಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳು ಬಂದ ಮೇಲೆ ಅಲ್ಲೂ ಕೂಡ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನ ಮಾಡುವುದಕ್ಕಾಗುತ್ತಿಲ್ಲ. ರೋಜಗಾರ್ ಹಣ ಮತ್ತು ಸ್ಕ್ಯಾಂಪ್ ಡ್ಯೂಟಿ ರಿಜಿಸ್ಟ್ರೇಷನ್ ಅರಿಯರ್ಸ್ ಹಣ ಏನು ಬರುತ್ತಿತ್ತು ಇದೂ ಕೂಡ ತಾಲ್ಲೂಕು ಪಂಚಾಯತಿಗಳಿಗೆ, ಜಿಲ್ಲಾ ಪಂಚಾಯತಿಗಳಿಗೆ ನೇರವಾಗಿ ಹೋಗುತ್ತಿರುವುದರಿಂದ, ಈ ಕ್ಷೇತ್ರಗಳಿಗೆ ಶಾಸಕರು ಆಗಿರುವವರು ಪುನಃ ಆರಿಸಿ ಬರುತ್ತೇವೆಯೇ ಎನ್ನುವಂತಹ ಜಿಜ್ಞಾಸೆಗೆ ಬಂದು ಬಿಟ್ಟಿದೆ. ನಮ್ಮ ಕಡೆಯಿಂದ ಏನೂ ಕೆಲಸ ಆಗುವ ಹಾಗೆ ಇಲ್ಲ. ಯಾವುದೇ ಅಭಿವೃದ್ಧಿ ಕೆಲಸಗಳನ್ನು ಇವರ ಕಡೆಯಿಂದ ಮಾಡಿಸುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿ ಬಂದಾಗ, ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಕೆಲಸ ಮಾಡಿಸಬಹುದು ಎಂದು ನಾವೆಲ್ಲಾ ಬಹಳ ಆಶೆ ಇಟ್ಟು ಕೊಂಡಿದ್ದೆವು. ಈ ಮಂಡಳಿಗೆ ಎಂಟರಿಂದ ಎಂಟೂವರೆ ಕೋಟಿ ರೂಪಾಯಿಗಳ ಹಣವನ್ನು ಒದಗಿಸಿದ್ದರು. ಕಳೆದ ಬಾರಿ ನಾವು ಇಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡಿದಾಗ ಅಷ್ಟು ಹಣ ಬಿಡುಗಡೆಯಾಗಲಿಲ್ಲ, ಇದರಿಂದ ನಮ್ಮ ಯಾವುದೇ ಅಭಿವೃದ್ಧಿ ಕೆಲಸಗಳು ಆಗಲಿಲ್ಲ. ಒಂದೊಂದು ಕ್ಷೇತ್ರಕ್ಕೆ ಒಂಭತ್ತು ಲಕ್ಷ ರೂಪಾಯಿ ಕೊಡುತ್ತೇವೆಂದು ತಾವು ಹೇಳಿದಿರಿ, ಇದನ್ನೂ ಕೂಡ ನಾವು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿಯನ್ನು ಇವತ್ತು ನಿರ್ಮಾಣ ಮಾಡಿದ್ದೀರಿ ಯೋಜನೆಗಳನ್ನು ಅಪ್ರೂವ್ ಮಾಡುವಾಗ ಅವುಗಳಿಗೆ ಮಾರ್ಜಿನಲ್ಲಿ ಹಣ ಬಿಡುಗಡೆ ಮಾಡಿದಿರಿ ಎಂದು ನಾವು ಸದನದಲ್ಲಿ ಒತ್ತಾಯ ಮಾಡಿದ್ದೆವು. ಅವತ್ತು ನಮ್ಮ ಸುದೈವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಹಣಕಾಸಿನ ಮಂತ್ರಿಗಳು ಕೊರತೆಯನ್ನು ನಿಭಾಯಿಸಿ ಹೆಚ್ಚಿಗೆ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ದುರ್ದೈವದಿಂದ ನಮಗೆ ಹಣ ಜಾಸ್ತಿಯಾಗಲಿಲ್ಲ. ಇದಾದ ಮೇಲೆ ಒಂದೊಂದು ಕ್ಷೇತ್ರಕ್ಕೂ 65 ಲಕ್ಷ ರೂಪಾಯಿಗಳನ್ನು ನಬಾರ್ಡ್‌ನಿಂದ ಕೊಡಿಸುತ್ತೇವೆ ನೀವು ಯೋಜನೆಯನ್ನು ತಯಾರಿಸಿ ಕೊಟ್ಟರೆ ನಾವು ನಬಾರ್ಡ್‌ಗೆ ಕಳುಹಿಸುತ್ತೇವೆಂದು ಹೇಳಿ ನಮ್ಮ ಹತ್ತಿರ ಪಟ್ಟಿ ತೆಗೆದುಕೊಂಡರು. ನಾವೆಲ್ಲರೂ ಕುಳಿತುಕೊಂಡು ಸರ್ಕಸ್ ಮಾಡಿ 65 ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿಸಿ ಮಂಡಳಿಗೆ ಕಳುಹಿಸಿದೆವು. ಒಂದೇ ಒಂದು ರೂಪಾಯಿ ಕೂಡ ಈ ಯೋಜನೆಯಡಿಯಲ್ಲಿ ನಮಗೆ ಸಿಕ್ಕಿಲ್ಲ. ಒಂಬತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಏನು ಮಾತು ಕೊಟ್ಟಿದ್ದಾರೋ ಅದಕ್ಕನುಗುಣವಾಗಿ ನಾವು ನಮ್ಮ ಕೆಲಸಗಳನ್ನು ಬರೆದು ಕೊಟ್ಟಿದ್ದರೂ ಅದರಲ್ಲೂ ಕೂಡ ಕೆಲವೊಂದು ಕೆಲಸಗಳಿಗೆ ಮಾತ್ರ ಅಂಗೀಕಾರ ಮಾಡಿ ಇನ್ನೂ ಕೆಲವು ಕೆಲಸಗಳಿಗೆ ಅನುಮೋದನೆ ತೆಗೆದುಕೊಳ್ಳಬೇಕು. ಈ ಅನುಮೋದನೆಗೆ ಹಣ ಬಿಡುಗಡೆಯಾಗಿಲ್ಲ. ಈ ವರ್ಷದ್ದೇ ನಮಗೆ ಇನ್ನೂ ಎರಡು ಕೋಟಿ ರೂಪಾಯಿ ಕೊರತೆ ಎಂದು ಆ ಡೋರ್ಡಿನವರು ಹೇಳುತ್ತಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಈ ಕಡೆಗಮನ ನೀಡಬೇಕು. ಏಕೆಂದರೆ, ಯಾವುದೇ ಸಮಸ್ಯೆ ಅವರಿಗೆ

ಗೊತ್ತಿಲ್ಲ ಎಂದಲ್ಲ ಬಹುಶಃ ಎಲ್ಲಾ ಸಮಸ್ಯೆಗಳು ಮಾನ್ಯ ಸಚಿವರಿಗೆ ಗೊತ್ತಿದೆ. ನಾವು ಮಾನ್ಯ ಸಚಿವರ ಬಗ್ಗೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೆವು ಏಕೆಂದರೆ, ನಮ್ಮ ಕಷ್ಟಕಾರ್ಪಣ್ಯಗಳು ಮಾನ್ಯ ಸಚಿವರಿಗೆ ಗೊತ್ತಿವೆ ಅವರು ಇದಕ್ಕೆಲ್ಲಾ ಇತಿಶ್ರೀ ಹಾಕುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ ಎಲ್ಲವನ್ನೂ ನಿಭಾಯಿಸುತ್ತಾರೆ ಎಂದು ನಾವು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೇವು. ಆದರೆ ನಮ್ಮ ದುರ್ದೈವ ನಮ್ಮ 75 ಶಾಸಕರನ್ನು ಮರೆತು ಬಿಟ್ಟಿದ್ದಾರೆ. ಸಣ್ಣ ನೀರಾವರಿಗೆ ಏನಾದರೂ ದುಡ್ಡನ್ನು ಕೊಟ್ಟು ನಮ್ಮ ಭಾಗದಲ್ಲಿರತಕ್ಕಂಥ ಕೆರೆಗಳನ್ನು ಅಭಿವೃದ್ಧಿಪಡಿಸುತ್ತಿರೆಂದರೆ ಅದರಲ್ಲೂ ಕೂಡ ದುಡ್ಡಿಲ್ಲ ಎಂದು ಹೇಳುತ್ತೀರಿ. ಕಡೇ ಪಕ್ಷ ಲೋಕೋಪಯೋಗಿ ಇಲಾಖೆಗೆ ಏನಾದರೂ ಹಣ ಕೊಡುತ್ತೀರೆಂದರೆ ಅಲ್ಲೂ ಕೂಡ ಹಣ ಇಲ್ಲವೆಂದು ಹೇಳುತ್ತೀರಿ. ಕನಿಷ್ಠಪಕ್ಷ ಬಯಲುಸೀಮೆಯವರು ಎಲ್ಲರಂತಲ್ಲದಿದ್ದರೂ ಮನುಷ್ಯರಾಗಿ ಬಾಳುವುದಕ್ಕೆ ಸ್ವಲ್ಪ ಹಣ ಕೊಡಿ ಎಂದರೆ ಅದರಲ್ಲೂ ಕೂಡ ಬೌಕಾಸಿ ಮಾಡಿ ಅದೇ ಪರಿಸ್ಥಿತಿಯಲ್ಲಿ ಈ ಮಂಡಳಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ನಾವು ನಿಮ್ಮಲ್ಲಿ ಸ್ಪಷ್ಟವಾಗಿ ಕೇಳುವುದೇನೆಂದರೆ, ನಾವೇನು ಈ ಭಾಗದ 75 ಶಾಸಕರು ಈ ವಿಧಾನಸಭೆಯಲ್ಲಿ ಜನಪ್ರತಿನಿಧಿಗಳಾಗಿದ್ದೇವೆ, ನಾವು ಹಾಗೂ ನಮ್ಮ ಭಾಗದ ಜನರು ಸಹ ಕಟ್ಟತಕ್ಕಂಥ ಕಂದಾಯ ಕಟ್ಟುತ್ತಿದ್ದೇವೆ. ಇದರಿಂದ ನಮ್ಮ ಭಾಗದ ಜನರು ಕಷ್ಟಕಾರ್ಪಣ್ಯಗಳ ಬಗ್ಗೆ ನಮ್ಮ ಹೊಟ್ಟೆಪಾಡಿನ ಸ್ಥಿತಿ, ಬಗ್ಗೆ ಇವೆಲ್ಲವನ್ನೂ ತಾವು ಲಕ್ಷಕ್ಕೆ ತೆಗೆದುಕೊಳ್ಳಬೇಕು. ನಮ್ಮ ಈ ಭಾಗದಲ್ಲಿ ಮುಖ್ಯವಾಗಿ ತೋಟಗಾರಿಕೆ ಬೆಳೆಯನ್ನು ಬೆಳೆದುಕೊಂಡು ಬರುವವರು ನಾವು, ಸ್ವಂತ ಬಂಡವಾಳ ಹಾಕಿಕೊಂಡು ನೀರಾವರಿಯನ್ನು ಮಾಡಿಕೊಳ್ಳುವವರು ನಾವು. ರಾಜ್ಯದ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ ನೀವು ನೀರಾವರಿ ಯೋಜನೆಗಳಿಗೆ ಖರ್ಚು ಮಾಡಬೇಕಾದರೆ, ಬಾಯಮುಚ್ಚಿಕೊಂಡು ಇಲ್ಲಿ ಕುಳಿತು ಮಾತನಾಡದೆ ಎದ್ದುಹೋಗತಕ್ಕಂಥವರು ನಾವು. ನಮಗೆ ಯಾವಾಗ ಅನುಕೂಲ ಮಾಡುತ್ತೀರಿ ಎಂದು ಕೇಳತಕ್ಕಂಥ ಅಧಿಕಾರ ಹಾಗೂ ಹಕ್ಕನ್ನು ನಾವು ಕಳೆದುಕೊಳ್ಳಬಾರದೆಂದು ಸ್ಪಷ್ಟವಾಗಿ ನಾವು ನಿಮ್ಮಲ್ಲಿ ಕೇಳುತ್ತಿದ್ದೇವೆ ನಾವು ಈ ರಾಜ್ಯದಲ್ಲಿ ಬದುಕಬೇಕೆ ಅಥವಾ ಬೇಡವೆ? ನೀವು ಇವತ್ತು ಕೋಟಿಗಟ್ಟಲೆ ಲೆಕ್ಕ ಹೇಳಿಕೊಂಡು ನೀರಾವರಿಗಾಗಿ ಹಣ ಖರ್ಚು ಮಾಡುತ್ತಿದ್ದರೆ, ನಮ್ಮ ಭಾಗದಲ್ಲಿ ಬರತಕ್ಕಂಥ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಹಾಗೂ ಇನ್ನುಳಿದ ಬಯಲ ಸೀಮೆಗಳಿಗೆ ತಾವು ಯಾವತ್ತು ಲಕ್ಷ ಕೊಡುತ್ತೀರಿ? ತಾವು ಇಷ್ಟು ದಿವಸ ಕೃಷ್ಣಾ-ಕಾವೇರಿಯ ನೀರನ್ನು ಬಳಸಿಕೊಳ್ಳಬೇಕು ಎಂದು ನಮ್ಮ ಹಣವನ್ನಲ್ಲಾ ಆ ಕಡೆ ಸಂದಾಯ ಮಾಡಿದ್ದರೂ ನಾವು ಇದರ ಬಗ್ಗೆ ಚಕಾರ ಎತ್ತಲಿಲ್ಲ. ಆದರೆ, ತಾವು ನಮ್ಮ ಕಡೆ ಅಭಿವೃದ್ಧಿ ಮಾಡಬೇಕು ಎಂದು ಯಾವತ್ತೂ ದೊಡ್ಡ ಮನಸ್ಸು ಮಾಡಲಿಲ್ಲ. ತಾವು ಈ ಕಡೆ ಗಮನಹರಿಸದೇ ಈ ಭಾಗದಲ್ಲಿ ಬರತಕ್ಕಂಥ ಕ್ಷೇತ್ರಗಳು ಅಭಿವೃದ್ಧಿಯಾಗದಿದ್ದರೆ ನಾವು ಇಲ್ಲಿ ಕುಳಿತು ಏನು ಮಾಡಬೇಕು? ನಾವು ಹಾಗೆ ಉಳಿದು ಬೇರೆ ಕಡೆಯವರು ಅಭಿವೃದ್ಧಿಯಾದರೆ ಅಸಮತೋಲನವುಂಟಾಗುವುದಿಲ್ಲವೇ? ಇದು ಯಾವ ರೀತಿ ಆಗುತ್ತದೆ ಎಂದರೆ, ಒಂದು ಕಡೆ ನಾವು ಅಸಮರ್ಥರು ಎಂದು ಜನಗಳ ಮಧ್ಯೆ ಗುರುತಿಸಿಕೊಳ್ಳುತ್ತೇವೆ. ಮತ್ತೊಂದು ಕಡೆ ಎರಡು ವರ್ಗವನ್ನು ಸೃಷ್ಟಿ ಮಾಡುತ್ತಿದ್ದೇವೆ. ಇದು ತಪ್ಪಬೇಕು ಎಂದರೆ ಎಲ್ಲಾ ಪ್ರದೇಶಗಳಿಗೆ ಹಣ ಕೊಡುವಂತ ನಮ್ಮ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಹಣ

ಕೊಡಬೇಕು. ಇಲ್ಲವಾದರೆ ದಯಮಾಡಿ ಎಲ್ಲಾ ಮಂಡಳಿಗಳನ್ನು ರದ್ದುಮಾಡಿಬಿಡಿ. ಒಂದೊಂದು ಕ್ಷೇತ್ರಕ್ಕೂ ಇಷ್ಟಿಷ್ಟು ಅನುದಾನ ಕೊಡುತ್ತೇವೆ ಇಂಥ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಒಂದು ಸ್ಪಷ್ಟವಾದ ಮಾತನ್ನಾದ್ದರೂ ಹೇಳಿಬಿಡಿ. ಏಕೆಂದರೆ, ಒಂದು ಕ್ಷೇತ್ರ ಅಭಿವೃದ್ಧಿ ಮಾಡಿ, ಮತ್ತೊಂದು ಮಂಡಳಿಗೆ ಸಾಕಷ್ಟು ಅನುದಾನ ಕೊಟ್ಟು ಇನ್ನೊಂದು ಮಂಡಳಿಗೆ ಹಣವನ್ನೇ ಕೊಡದೇ ಕಛೇರಿಯನ್ನೇ ನಡೆಸದಿರತಕ್ಕಂಥ ಪರಿಸ್ಥಿತಿಯನ್ನು ನೀವಿಂದು ನಿರ್ಮಾಣ ಮಾಡಿದಿರಿ. ಇದನ್ನು ತಪ್ಪಿಸಬೇಕು ಇದನ್ನು ತಪ್ಪುತ್ತೀರೋ ಅಥವ ಇಲ್ಲವೋ ಎನ್ನತಕ್ಕಂಥದ್ದನ್ನು ತಾವು ಸ್ಪಷ್ಟಪಡಿಸಬೇಕು. ಮತ್ತೊಂದು ವಿಷಯ ಏನೆಂದರೆ, ಆಡಳಿತಾತ್ಮಕ ವಿಷಯಕ್ಕೆ ಸಂಬಂಧಪಟ್ಟಂತೆ ಯಾರನ್ನು ಕೇಳಬೇಕು ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಇವತ್ತಿನವರೆಗೆ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಖಾಯಂ ಆಗಿ ಒಬ್ಬ ಕಾರ್ಯದರ್ಶಿಯನ್ನು ನೀವು ನೇಮಕ ಮಾಡಲಿಲ್ಲ. ಇದರ ಜೊತೆಗೆ ಆ ಮಂಡಳಿಯ ಕೇಂದ್ರ ಕಛೇರಿ ಎಂದು ಚಿತ್ರದುರ್ಗದಲ್ಲಿರಿಸಿ ಅದನ್ನು ಯಾರು ಉಪಯೋಗ ಮಾಡದಂಥ ಸ್ಥಿತಿಗೆ ತೆಗೆದುಕೊಂಡು ಬಂದಿದ್ದೀರಿ. ಇವತ್ತು ಅಲ್ಲಿಗೊಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡುವುದರ ಜೊತೆಯಲ್ಲಿ ಅವರು ಅಲ್ಲಿ ಫುಲ್ ಟೈಮ್ ಕೆಲಸ ಮಾಡುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು. ಮಂಡಳಿಯಿಂದ ಆರು ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ, ವರ್ಷಕ್ಕೊಮ್ಮೆ ಅವರು ಸಭೆ ಕರೆಯುತ್ತಾರೆ, ಮಂಡಳಿಯವರೇನೂ ಹಣ ಕೊಡುವುದಿಲ್ಲ ಸುಮ್ಮನೆ ನಾವೇಕೆ ಹೋಗಬೇಕು, ಇವರು ಸುಮ್ಮನೆ ಸಭೆ ಕರೆಯುತ್ತಾರೆಂದು ನಾವೂ ಕೂಡ ಹಾಜರಾಗಿರತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ. ಆ ಮಂಡಳಿಯನ್ನು ಒಂದು ಗೌರವಯುತವಾದ ಸಂಸ್ಥೆಯನ್ನಾಗಿ ಉಳಿಸಿಕೊಡಬೇಕು. ಈಗಾಗಲೇ ತಾವು ಆ ಮಂಡಳಿಗಳಿಗೆ ಡಿವಿಜನಲ್ ಕಮೀಷನರ್ ಕೇಡರ್ ಇರುವವರನ್ನು ಕಾರ್ಯದರ್ಶಿಯನ್ನಾಗಿ ಹಾಕಿರುತ್ತೀರಿ, ಇಂಥ ದೊಡ್ಡ ಕೇಡರ್ ಆಫೀಸರ್ಸ್ ಅಲ್ಲಿ ಕುಳಿತುಕೊಳ್ಳುವುದೇನೂ ನಮಗೆ ಬೇಕಾಗಿಲ್ಲ. ನಿಮಗೆ ಬೇಕಾದ ಅಧಿಕಾರಿಯನ್ನು ಅಲ್ಲಿ ವರ್ಗಾಯಿಸಿ ಆ ಮಂಡಳಿ ಫುಲ್ ಟೈಮ್ ಕೆಲಸ ಮಾಡುವಂತೆ ಮಾಡಬೇಕು. ಇದರ ಜೊತೆಗೆ ಕಳೆದ ವರ್ಷ ಏನೊಂದು ಹಣ ಖರ್ಚಾಗಿರಲಿಲ್ಲ ಆ ಹಣವನ್ನು ಹೋದ ವರ್ಷ ಸರಿದೂಗಿಸಿಕೊಡುತ್ತೇವೆಂದು ತಾವು ಹೇಳಿದ್ದೀರಿ. ಈ ಸಭೆಯಲ್ಲಿ ತಾವೂ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಕೂಡ ಇಷ್ಟಿ ಅನುದಾನ ಕೊಡುತ್ತೇವೆಂದು ಮಾತು ಕೊಟ್ಟಿರುತ್ತೀರಿ. ಇವತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆಗತಕ್ಕಂಥ ತಾರತಮ್ಯವನ್ನು ನಿವಾರಣೆ ಮಾಡಬೇಕು. ಈ ಮಂಡಳಿಯ ಖರ್ಚುವೆಚ್ಚದ ಕೆಲಸಗಳಲ್ಲಿ ಖರ್ಚಾಗಿ ಒಂದು ಪತ್ರ ಕೊಡುವಂತಹ ಅವಕಾಶ ಇತ್ತು. ಬೇರೆ ಯಾವುದಕ್ಕಾಗಲೂ ನಮಗೆ ಅವಕಾಶವಿಲ್ಲ. ಏಕೆಂದರೆ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಸದಸ್ಯರ ಹತ್ತಿರ ಹೋಗಬೇಕಾಗಿತ್ತು, ಇಲ್ಲವಾದರೆ, ಸಂಸದರ ಹತ್ತಿರ ಹೋಗಿ ನಮ್ಮ ಕ್ಷೇತ್ರಕ್ಕೂ ಸ್ವಲ್ಪ ಹಣ ಕೊಡಿ ಎಂದು ಕೈಮುಗಿಬೇಕಾಗಿತ್ತು. ಇವತ್ತು ನಮ್ಮ ಜಿಲ್ಲೆಗೆ ಬರುತ್ತಿರುವ ಅನುದಾನದ ಒಂದು ಕೋಟಿ ಡಿಸ್ಕ್ರಿಷನರಿ ಗ್ರ್ಯಾಂಟ್‌ನ್ನು ಖರ್ಚು ಮಾಡತಕ್ಕಂಥ ಶಕ್ತಿಯನ್ನು ಅವರಿಗೆ ಕೊಟ್ಟಿದ್ದೀರಿ. ನಿಮಗೆ ನಮ್ಮ ಮೇಲೆ ಭಾರಿ ಸೇಡಿದ್ದರೆ ಮುಂದಿನ ಸಾರಿ ಚುನಾವಣೆಗೆ ನಿಂತುಕೊಳ್ಳಬೇಡಿ ಎಂದು ಹೇಳಿದರೆ ನಾವೆಲ್ಲರೂ ಸುಮ್ಮನೆ ಆಗುತ್ತೇವೆ. ಈ ರೀತಿಯಾಗಿ ನಮ್ಮನ್ನು ಸೋಲಿಸುವುದಕ್ಕೆ ಮುಂದಕ್ಕೆ ಕಳುಹಿಸಬೇಡಿ. ಇಂತಹ ಪರಿಸ್ಥಿತಿ ಇರುವಾಗ

ನಾವು ಜನರಿಗೆ ಏನು ಉತ್ತರ ಹೇಳಬೇಕು? ಎಂ.ಪಿ.ಗಳಿಂದ ಮತ್ತು ಜಿಲ್ಲಾಪಂಚಾಯತ್ ಮೆಂಬರ್‌ಗಳಿಂದ, ಜೆ.ಪಿ.ಎಸ್.ಗಳಿಂದ ಹಾಗೂ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರಿಂದ ಕೆಲಸ ಆಗುತ್ತದೆ. ಆದರೆ ಸನ್ಮಾನ್ಯ ಬೈರೇಗೌಡರೆ, ಇವತ್ತಿನದಿವಸ ಒಬ್ಬ ಎಂ.ಎಲ್.ಎ.ಯಿಂದ ಏನು ಕೆಲಸ ಆಗುವುದಿಲ್ಲ ಎಂಬ ಸ್ಥಿತಿಗೆ ನಾವು ಬಂದಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ ಇವತ್ತಿನ ದಿವಸ ಏಪಿಎಂಸಿ ಡೈರೆಕ್ಟರ್ ಕೂಡ ರೋಡ್ ಮಾಡುವುದಕ್ಕೆ ಸಮರ್ಥರಾಗಿದ್ದಾರೆ. ಇವರೆಲ್ಲರೂ ಕೋಟಿಗಟ್ಟಲೆ ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ :— ಯಾರು ಮಾಡಿದರೂ ನಿಮ್ಮ ತಾಲ್ಲೂಕಿಗೇ ಕೆಲಸ ಆಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಯಾರು ಮಾಡಿದರೂ ನಮ್ಮ ತಾಲ್ಲೂಕಿಗೆ ಕೆಲಸ ಆಗುವುದು. ಆದರೆ ಇದಕ್ಕೆ ರಾಜಕೀಯದ ಲೇಪನ ಮಾಡದಿದ್ದರೆ ನಾವು ಸಂತೋಷ ಪಡುತ್ತೇವೆ. ಇದಕ್ಕೆ ಒಂದು ಸಿಲ್ವರ್ ಕೋಟ್ ಮಾಡದೇ, ಫಳಫಳ ಎಂದು ಹೊಳೆಯುವ ಚಿನ್ನವನ್ನು ತಂದಿಟ್ಟಿದ್ದರೆ ನಮಗೆ ತುಂಬ ಸಂತೋಷವಾಗುತ್ತಿತ್ತು.

ಶ್ರೀ ಸಿ. ಬೈರೇಗೌಡ :— ರಾಜಕೀಯ ದೃಷ್ಟಿಯಿಂದ ಕೆಲಸ ಆಗುತ್ತದೆಂದು ತಾವು ಹೇಳುವುದಾದರೆ, ಈಗ ಇರತಕ್ಕಂಥ ವಿವೇಚನ ನಿಧಿಯ ಯೋಜನೆಯನ್ನು ತೆಗೆಯಬೇಕೆಂದು ತಮ್ಮ ಅಭಿಪ್ರಾಯವೇ?

ಶ್ರೀ ಜೆ.ಸಿ. ಮಾಧುಸ್ವಾಮಿ :— ದಯಮಾಡಿ ತೆಗೆದು ಬಿಡಿ. ಸಮಗ್ರ ರಾಜ್ಯದ ಅಭಿವೃದ್ಧಿಗೆ ಯೋಜನೆ ಮಾಡಿ. ನೀವು ಕೊಡುವುದಾದರೆ ಕೊಡಿ. ಆದರೆ, ನಮಗೂ ಮಾನ ಮರ್ಯಾದೆ ಉಳಿಸುವಂತಹ ಸ್ಥಿತಿ ಮಾಡಿ ಎಂದೇ ನಾನು ಆರಂಭದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇವತ್ತು ಕೇಂದ್ರ ಸರ್ಕಾರದ ಇಎಎಸ್‌ನಲ್ಲಿ ಜಿಲ್ಲಾಪಂಚಾಯತ್ ಮೆಂಬರ್ ಬರೆದುಕೊಟ್ಟರೂ ಲಕ್ಷ ರೂಪಾಯಿಯ ಕೆಲಸ ಆಗುತ್ತದೆ. ಬೇಕಾದರೆ ನೀವೇ ಬಂದು ನೋಡಿ.

ಶ್ರೀ ಸಿ. ಬೈರೇಗೌಡ :— ಇ.ಎ.ಎಸ್. ಎಂದರೆ, ಉದ್ಯೋಗ ಧೃಢೀಕರಣ ಯೋಜನೆ. ಆ ಪದದಲ್ಲಿಯೇ ಅದರ ಅರ್ಥ ಇದೆ. ಇಲ್ಲಿ ಬಂದು ಕೆಲಸ ಕೇಳಿದವರಿಗೆ ಕೆಲಸ ಕೊಡತಕ್ಕಂಥ ಒಂದು ಯೋಜನೆ. ಇದು ಕಾಗದದ ಮೇಲೆ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಸಚಿವರೇ, ಅದರ ನಾರ್ಮ್ಸ್ ನಮಗೆ ಚೆನ್ನಾಗಿ ಗೊತ್ತು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಕಾಗದದ ಮೇಲೆ ಇದೆ. ಆದರೆ, ಆ ರೀತಿ ಏನೂ ನಡೆಯುತ್ತಿಲ್ಲ. ಇ.ಎ.ಎಸ್.ನಲ್ಲಿ ಏನು ನಡೆಯುತ್ತದೆಂದು ನಮ್ಮೆಲ್ಲರಿಗಿಂತಲೂ ನಿಮಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಬರತಕ್ಕಂಥ ಹಣದಲ್ಲಿ 15 ಸಾವಿರದಿಂದ 20 ಸಾವಿರದವರೆಗೆ ಹಂಚಿಕೊಂಡು, ಇವತ್ತಿನದಿವಸ ಒಂದು ಕಿ.ಮೀ. ರಸ್ತೆ ಮಾಡುವುದಕ್ಕೂ ಬಿಡುವುದಿಲ್ಲ. ಆ ರೀತಿಯ ಪರಿಸ್ಥಿತಿ ಅಲ್ಲಿದೆ ಎಂಬುದು ತಮಗೂ ಚೆನ್ನಾಗಿ ಗೊತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅದರಲ್ಲಿರತಕ್ಕಂಥ ನಾರ್ಮ್ಸ್ ನಮಗೆಲ್ಲಾ ಗೊತ್ತು, ಡಿಸ್ಟ್ರಿಕ್ಟ್‌ನಲ್ಲಿ ಪಿಎಎಸ್ ಕಮಿಟಿ ಇರುವುದು, ತಾಲ್ಲೂಕುಗಳಲ್ಲಿ ಇಎಎಸ್ ಕಮಿಟಿ

ಇರುವುದು ಗೊತ್ತು. ಪ್ರಾಜೆಕ್ಟ್ ಮಾಡಬೇಕೆಂಬುದು ಅದು ಅನುಮೋದನೆ ಆಗಬೇಕೆಂದು ಗೊತ್ತು, ಎರಡು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಹಣ ಬರಬೇಕೆಂದು ಗೊತ್ತು ಮತ್ತು ಅಡಿಷನಲ್ ಲಿಸ್ಟ್ ಇನ್‌ಸ್ಟಾಲ್‌ಮೆಂಟ್‌ನಲ್ಲಿ 23 ಕೋಟಿ ರೂಪಾಯಿ ನಿಮಗೆ ಬಂದಿಲ್ಲ ಎಂಬುದು ನಮಗೆ ಗೊತ್ತು. ಇವತ್ತಿನ ದಿವಸ ಇದೆಲ್ಲಾ ಗೊತ್ತಿರುವುದರಿಂದಲೇ ಇಲ್ಲಿ ಮಾತನಾಡುತ್ತಿದ್ದೇನೆ. ಆದರೆ ಇವತ್ತು ಕೆಲಸಗಳನ್ನು ಗುರ್ತಿಸುವ ಕಡೆ ಸಮತೋಲನ ಇಲ್ಲ. ಇವತ್ತು ಯಾರ್ಯಾರಿಗೆ ಕೆಲಸ ಮಾಡಿಸುವುದಕ್ಕೆ ಶಕ್ತಿ ಇದೆ, ಅಂಥ ಶಾಸಕರಿಂದಲೂ ಏನೂ ಆಗುವುದಿಲ್ಲ ಎನ್ನುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಕನಿಷ್ಟಪಕ್ಷ ಕನ್ಸರ್ವೇಶನ್ ಆಫ್ ಲ್ಯಾಂಡ್; ಸಾಯಿಲ್ ಮತ್ತು ವಾಟರ್ ಕನ್ಸರ್ವೇಶನ್‌ನಾದರೂ ನಾವು ಮಾಡಿಸುತ್ತಿದ್ದೆವು. ಆದರೆ ಇವತ್ತು ಇದಕ್ಕೂ ದುಡ್ಡು ಇಲ್ಲದಂತೆ ಮಾಡಿದ್ದೀರಿ ಮತ್ತು ರೋಡ್ ಮಾಡುವುದಕ್ಕೂ ದುಡ್ಡಿಲ್ಲದಂತೆ ಮಾಡಿದ್ದು, ಇವತ್ತು ಏನಾದರೂ ಒಂದು ಕಾರ್ಯಕ್ರಮ ಮಾಡಬೇಕಾದರೆ ಆಗುತ್ತಿಲ್ಲ. ಇವತ್ತಿನದಿವಸ ನೀವೇ ಮಾಡಿ ನೋಡೋಣ? ಈಗ ಡಿಸ್ಟ್ರಿಬಿನಂ ಗ್ರ್ಯಾಂಟ್ ಬೇಡ ಎಂದರೆ, ಎಂಪಿ ಗ್ರ್ಯಾಂಟ್ ನಿಲ್ಲಿಸುವುದಕ್ಕೆ ರೆಸಲ್ಯೂಷನ್ ಮಾಡಿ. ಇದು ಆ ಜಿಲ್ಲೆಯ ಅಭಿವೃದ್ಧಿಗೆ ಬರುತ್ತಿದ್ದ ಹಣ, ಇದಕ್ಕೋಸ್ಕರ ಎಕ್ಸ್‌ಟ್ರಾ ಕೊಟ್ಟಿಲ್ಲ. ಎಂಪಿಗಳು ಇವತ್ತು ತಮ್ಮ ಇಚ್ಛೆಗೆ ಅನುಸಾರವಾಗಿ ಖರ್ಚು ಮಾಡುತ್ತಿದ್ದಾರೆ. ಆದರೆ ನಮಗೆ ಇಲ್ಲಿ ದುರ್ದೈವ ಎಂದು ಕಾಣುತ್ತದೆ. ಎಂ.ಪಿ.ಗಳು ಸ್ಟೇಟ್ ಡೆವಲಪ್‌ಮೆಂಟ್‌ಗೆ ನೇರವಾಗಿ ಪಾತ್ರಧಾರಿಗಳಾಗಿ ಆಗಬಾರದಿತ್ತು. ಇವತ್ತು ಪಬ್ಲಿಕ್ ವರ್ಕ್ಸ್‌ನ್ನು ಯಾರು ಅಭಿವೃದ್ಧಿ ಮಾಡುತ್ತಿದ್ದಾರೆ? ಇದನ್ನು ಯಾರು ನೋಡಬೇಕು? ಇದು ನಿಮ್ಮ ಲಿಸ್ಟ್‌ನಲ್ಲಿರುವ ವಿಷಯ. ಇವತ್ತಿನದಿವಸ ಪ್ರತಿಯೊಂದು ಸ್ಟೇಜ್‌ನಲ್ಲಿಯೂ ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ಆದರೆ, ಕಾಂಗ್ರೆಸ್ ಸದಸ್ಯರು ಏನಾದರೂ ಕೇಳಿದರೆ ಇಲ್ಲಿ ಏನೂ ನಡೆಯವುದಿಲ್ಲ. ಯುದ್ಧ ಮಾಡುವಾಗ ರಾಮನ ಕತೆ ಯಾರೂ ಕೇಳುವುದಿಲ್ಲ. ಅವನು ಮರೆಯಲ್ಲಿ ನಿಂತುಕೊಂಡು ಬಾಣ ಬಿಟ್ಟಿದ್ದಾನೆ ಮತ್ತು ಯಾರನೋ ಉಪಯೋಗಿಸಿಕೊಂಡು ಅಣ್ಣನನ್ನು ಕೊಂದು ತಮ್ಮನನ್ನು ಜೊತೆಯಲ್ಲಿ ಹಾಕಿಕೊಂಡಿದ್ದನು. ಇದನ್ನೆಲ್ಲಾ ಮಾಡಿ ಯುದ್ಧ ಗೆಲ್ಲಬೇಕಾಗುತ್ತದೆ. ದಯಮಾಡಿ ಇತ್ತ ಕಡೆ ಸರ್ಕಾರ ಲಕ್ಷ ಕೊಡಬೇಕು. ಇದು ತಮ್ಮ ಕೈಯಲ್ಲಿದೆ. ಮಾನ್ಯ ಬೈರೇಗೌಡರು ಕೃಷಿಮಂತ್ರಿಗಳಾದಾಗ ನಮ್ಮನ್ನೆಲ್ಲಾ ಕರೆದು ಸಭೆ ಮಾಡಿ, ರೈತರ ಪೋರಂ ಮಾಡೋಣ ಎಂದು ಹೇಳಿದ್ದೀರಿ. ಈಗ ಏನೂ ಮಾಡದೆ ಇನ್ನು 5-6 ತಿಂಗಳ ನಂತರ ವಾಪಸ್ಸು ಹೋಗುವುದಕ್ಕೆ ಮಾಡಿದ್ದೀರಿ. ಇದು ಸರಿಯೇ? What is the positive effort of your being the Agriculture Minister for 5 years ಎಂದರೆ, ನಿಮ್ಮ ಕ್ಷೇತ್ರದಲ್ಲಿ ಹೋಗಿ ನೀವು ಏನು ಹೇಳುತ್ತೀರಿ? ನಮ್ಮನ್ನು ಬಿಟ್ಟುಬಿಡಿ, ಏಕೆಂದರೆ ಸಾಲ ಯಾರಿಗೂ ಬೇಡವೆ ಗೆದ್ದು ಬಂದವರು. ಇಷ್ಟೆಲ್ಲಾ ಅಧಿಕಾರ ಮಾಡಿ ಇಲ್ಲಿ ಕುಳಿತುಕೊಂಡು ಹೋದಾಗ ಮಾಡಿದ ನೀವು ನಿಮ್ಮ ಕ್ಷೇತ್ರಕ್ಕೆ ಹೋಗಿ ಏನು ಹೇಳುತ್ತೀರಿ? ಏನಾದರೂ ಒಂದನ್ನು ಹೋಗಿ ನಾಳೆದಿವಸ ಹೇಳಲೇಬೇಕಲ್ಲವೇ? ತಾವು ಬಯಲು ಸೀಮೆಯಿಂದಲೇ ಬಂದಿರುವವರು, ನಿಮ್ಮ ಕಡೆ ನಾಲೆ ಬರಲಿಲ್ಲ, ಸಮುದ್ರದ ದಂಡೆಯಲ್ಲಿಯೂ ಇಲ್ಲ ಅಥವಾ ಮಲೆನಾಡು ಇಲ್ಲ, ನೀವು ನಮ್ಮ ಜೊತೆಯಲ್ಲಿ ಉತ್ತರ ಹೇಳಬೇಕಾಗುತ್ತದೆ. ಆದುದರಿಂದ ತಾವು ಆ ಕಡೆ ಲಕ್ಷ ಕೊಡಬೇಕು.

ಶ್ರೀ ಜಿ. ಚಂದ್ರಣ್ಣ:— ಸರ್ಕಾರ ಆ ರೀತಿಯಾಗಿ ಕಂಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:— ಆ ರೀತಿ ಇದೆ. ಆದರೆ ಕಬ್ಬಿಣ ಪೆಟ್ಟಿಗೆಯ ಬೀಗ ತೆಗೆಯುವುದಿಲ್ಲ ಎನ್ನುತ್ತಾರೆ. ಅಷ್ಟೆ. ಕಬ್ಬಿಣ ಪೆಟ್ಟಿಗೆಯ ಬೀಗ ತೆಗೆಯಿರಿ ಎಂದರೆ, ಇಲ್ಲ ಮಗನೇ ದೂರ ಇರು ಎನ್ನುತ್ತಾರೆ. ಕೆಲವರಿಗೆ ಬಾರೋ ಮಗನೆ ಎಂದು ಬೆನ್ನು ತಟ್ಟುತ್ತಾರೆ. ಸ್ವಂತ ಅಪ್ಪ ಮಗನ ಬೆನ್ನು ತಟ್ಟಿಬಿಟ್ಟರೆ ಹೊಟ್ಟೆ ತುಂಬುತ್ತದೆಯೇ? ಚಾಕೊಲೇಟ್ ಒಂದನ್ನು ಕೊಡಿ, ತಿಂದು ಬಾಯಿ ಚಪ್ಪರಿಸಲಿ. ಇವತ್ತು ನಮ್ಮ ಬಯಲುಸೀಮೆ ಕಡೆ ಲಕ್ಷ ಕೊಡಬೇಕು. ನಮಗೆ ಸಮಯದ ಕೊರತೆ ಇರುವುದರಿಂದ ಹಾಗೂ ಈ ವಿಷಯವನ್ನು ಇನ್ನು ಮೂರ್ನಾಲ್ಕು ಜನ ಸದಸ್ಯರು ಪ್ರಸ್ತಾಪ ಮಾಡಬೇಕಾಗಿರುವುದರಿಂದ, ನಾವು ಸನ್ಮಾನ್ಯ ಅರ್ಥ ಸಚಿವರನ್ನು ನೇರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇವೆ. ಈ ಹಿಂದಿನ ಶಾಸನ ಸಭೆಯಲ್ಲಿ ಮಾನ್ಯ ಸಿದ್ದರಾಮಯ್ಯನವರು ಮುಂದಿನ ಸಲ ಜಾಸ್ತಿ ಮಾಡುತ್ತೇವೆಂದು ಮಾತು ಕೊಟ್ಟಿದ್ದರು. ತಾವು ಮಾತು ಕೊಟ್ಟಿದ್ದು ಸತ್ಯವೇ ಅಥವಾ ಇಲ್ಲವೇ? ಈ ಸಲ ಬಜೆಟ್‌ನಲ್ಲಿಯೂ ಕೂಡ ಜಾಸ್ತಿ ಮಾಡಲಿಲ್ಲ ಏಕೆ? ಹೋದ ಸಲ ಬಜೆಟ್‌ಗಿಂತ ಮುಂಚೆಯೇ ಜಾಸ್ತಿ ಮಾಡಬೇಕೆಂದು ನಾವು ಡಿಮ್ಯಾಂಡ್ ಮಾಡಿದ್ದೆವು. ಈ ಸಾರಿಯೂ ಮಾಡಲೇ ಬಾರದೆಂದು ನಿಮಗೆ ಮನಸ್ಸಿದ್ದರೆ ಅದು ನಿಮ್ಮ ಇಷ್ಟ. ಕೊಡಿ ಎಂದು ಕೇಳಬಹುದು ಅಥವಾ ಕೊಡಿ ಸ್ವಾಮಿ ಎಂದು ಬೇಡಬಹುದು. ಇದನ್ನು ಬಿಟ್ಟು ಬೇರೆ ಏನು ಮಾಡುವುದಕ್ಕೆ ಆಗುತ್ತದೆ? beggars have no choice... ಎಂದು ಇಂಗ್ಲಿಷನಲ್ಲಿ ಗಾದೆ ಇದೆ. ಬೇಡುವವರಿಗೆ ಚಾಯ್ಸ್ ಇಲ್ಲ, ನೀವು ಕೊಡುವವರಿಗೆ ಏನಾದರೂ ಚಾಯ್ಸ್ ಇದ್ದರೆ ಇರಬಹುದು. ನಿಮಗೆ ಏಕೋ ಇಚ್ಛೆ ಇಲ್ಲವೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಾವು ಇಷ್ಟರಿಂದಲೇ ರಾಜಕಾರಣದಿಂದ ನಿವೃತ್ತರಾಗುವುದಿಲ್ಲ, ಇದನ್ನೇ ಒಂದು ಹೋರಾಟವಾಗಿ ಆರಂಭ ಮಾಡಿಕೊಳ್ಳುತ್ತೇವೆ. ಇಲ್ಲಿ, ನಮ್ಮವರೇ ಹಾಗೂ ರೈತರ ಮಕ್ಕಳೇ ಇದ್ದು ಮತ್ತು ಬಯಲುಸೀಮೆಯವರೇ ಇದ್ದುಕೊಂಡು ನಮ್ಮ ಕುತ್ತಿಗೆಯನ್ನು ಎಷ್ಟು ಜೋರಾಗಿ ಹಿಸುಕಿದ್ದಾರೆಂದು ಹಾಗೂ ನಾವು ಯಾರನ್ನು ಅಧಿಕಾರಕ್ಕೆ ತರಬೇಕೆಂದು ಆಶೀರ್ವದಿಸಿದ್ದೇವೋ ಅವರೆಲ್ಲರೂ ಯಾರಾಯಾರ ಸೇವೆ ಮಾಡಿ ಮನೆಗೆ ಹೋಗಿದ್ದಾರೆ ಎಂಬುದನ್ನು ನೋಡಿ ಎನ್ನುವ ಸ್ಥಿತಿಯನ್ನು ಮಾಡುತ್ತೀರಾ?

ಶ್ರೀ ಜಿ. ಚಂದ್ರಣ್ಣ:— ನಿಮ್ಮ ಕ್ಷೇತ್ರದಲ್ಲಿಯೇ ಹೋರಾಟ ಮಾಡುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ:— ಹೋರಾಟ ಮಾಡುವುದಕ್ಕೆ ಕ್ಷೇತ್ರಕ್ಕೆ ಏಕೆ ಹೋಗಬೇಕು? ನಾವಿರುವ ಹತ್ತಿರವೇ ಮಾಡುತ್ತೇವೆ. ನಮ್ಮ ಮೇಲೆ ಬಹಳ ಆಸೆ ಇಟ್ಟುಕೊಂಡು ಕುತ್ತಿಗೆಯನ್ನು ಎಷ್ಟು ಜೋರಾಗಿ ಹಿಸುಕಿದ್ದಾರೆಂದು ಹಾಗೂ ನಮ್ಮನ್ನು ತೆಗೆದುಕೊಂಡು ಹೋಗಿ ಕಂಡವರ ಮನೆಯಲ್ಲಿ ಅಳಾಗಿ ಏಕೆ ಮಾಡಿದ್ದೀರೆಂದು ಹೇಳಿಕೊಂಡು ತಿರುಗಾಡಬೇಕಾಗುತ್ತದೆ. ಈ ಶಾಸನಸಭೆಯಲ್ಲಿ ಇವತ್ತು ಸುಮಾರು 72 ರಿಂದ75 ಶಾಸಕರ ಕ್ಷೇತ್ರದ ಕಡೆ ತಾವು ಲಕ್ಷ ಕೊಡಲಿಲ್ಲವೆಂದರೆ ಅದಕ್ಕಿಂತ ದುರ್ದೈವದ ಸಂಗತಿ ಏನೂ ಇಲ್ಲ. ದಯಮಾಡಿ ಇವತ್ತೆ ಹೇಳಿಕೆ ಕೊಡಬೇಕು. ನಾವು ಕೇಳುತ್ತಿರುವುದು ಮೊದಲು ಹಣ, ನೀವು ಹಣ ಕೊಟ್ಟರೆ ನಾವು ಕಾರ್ಯಕ್ರಮಗಳನ್ನು ಮಾಡುತ್ತೇವೆ. ಬಯಲುಸೀಮೆ

ಅಭಿವೃದ್ಧಿ ಮಂಡಳಿಗೆ ನಬಾರ್ಡ್‌ನಿಂದ 65 ಲಕ್ಷ ರೂಪಾಯಿಗಳನ್ನು ಗ್ಯಾರಂಟಿ ಕೊಟ್ಟು ಹಣ ತರುತ್ತೇವೆಂದು ಹೇಳಿದ್ದೀರಿ. ಆದುದರಿಂದ, ಆ ಯೋಜನೆಯನ್ನು ಅಪ್ರೂವ್ ಮಾಡಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ಕೆಲಸ ಮಾಡುವಂತೆ ಮಾಡಬೇಕು. ಒಂದು ಬೋರ್ಡ್ ಮಾಡಿ, ಅಧ್ಯಕ್ಷರಿಗೆ ಒಂದು ಕಾರು ಕೊಟ್ಟು, ಅಲ್ಲಿರು ಎಂದು ಹೇಳಿದಾಕ್ಷಣ ಅದಕ್ಕೆ ಬೋರ್ಡ್ ಅಂತೀರಾ? ಇವತ್ತಿನವರೆಗೆ ಅಲ್ಲಿ ಒಬ್ಬ ರೆಗ್ಯೂಲರ್ ಸೆಕ್ರೆಟರಿ ಕೊಟ್ಟಿಲ್ಲ. ತಾವು ಹಾಕಿರುವ ಡಿವಿಜನಲ್ ಕಮೀಷನರ್‌ರವರು, ಆಫೀಸಿಗೆ ಇವತ್ತಿನವರೆಗೆ ಹೋಗಿಲ್ಲ. ಡಿವಿಸಿಯವರು ಹೋಗುವುದಿಲ್ಲವೆಂದು ಅಲ್ಲಿ ಡಿ.ಸಿ.ಯವರಿಗೆ ಚಾರ್ಜ್ ಕೊಟ್ಟಿದ್ದೀರಿ. ಅವರು ಡಿ.ಸಿ. ಕೆಲಸ ಮಾಡುವುದನ್ನು ಬಿಟ್ಟು ಇಲ್ಲಿ ಅವರಿಗೆ ಆಸಕ್ತಿ ಇಲ್ಲ. ಇಂಥ ಸ್ಥಿತಿ ನಿರ್ಮಾಣ ಮಾಡಿದ್ದೀರಿ. ನಾವು ಬಹಳ ಗಹನವಾಗಿ ಮತ್ತು ತೀವ್ರವಾಗಿ ತೆಗೆದುಕೊಂಡಿರುವ ವಿಷಯ. ತಾವು ದಯಮಾಡಿ ಇವತ್ತಿನ ಅನುದಾನದಲ್ಲಿ ಜಾಸ್ತಿ ಮಾಡುವುದಕ್ಕೆ ಈಗಲೇ ಆದೇಶವನ್ನು ಹೊರಡಿಸಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಂಜಿನಿಯರ್‌ಗಳು ಸುಮಾರು 30 ರಿಂದ 35 ದಿವಸ ಸ್ಟ್ರೈಕ್ ಮಾಡಿದ್ದಾರೆ. ಆದ್ದರಿಂದ ಅಷ್ಟು ದಿವಸವನ್ನು ಮುಂದಕ್ಕೆ ಹಾಕಿ, ಮಾರ್ಚ್ 31ಕ್ಕೆ ಮುಗಿಯಬೇಕಾದ ಕೆಲಸಗಳನ್ನು ಏಪ್ರಿಲ್ 15 ಅಥವಾ ಮೇ 15ರವರೆಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟು, ಈಗ ಯಾವ್ಯಾವ ಕಾಮಗಾರಿಗಳಿಗೆ ಅನುಮೋದನೆ ಆಗಿದೆಯೋ ಆ ಎಲ್ಲಾ ಕಾಮಗಾರಿಗಳನ್ನು ಮುಗಿಸುವುದಕ್ಕೆ ಅನುವುಮಾಡಿಕೊಡಬೇಕೆಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಛೇರ್ಮನ್‌ರವರೆ, ನಾವು ಬಯಲು ಸೀಮೆ ವಿಷಯವನ್ನು ಈ ಸದನದಲ್ಲಿ ಸುಮಾರು ಸಾರಿ ಚರ್ಚೆ ಮಾಡಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸನ್ಮಾನ್ಯ ಬೈರೇಗೌಡರು ಈ ಮಂಡಳಿಗೆ ಮೊದಲನೆ ಅಧ್ಯಕ್ಷರಾಗಿ ಎರಡು ಸಲ ಮೀಟಿಂಗ್ ಮಾಡಿದ್ದರು. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ, ಒಂದು ಸಭೆ ಮಾಡಿ ಮಂತ್ರಿಗಳನ್ನು ಕರೆದು 25 ಕೋಟಿ ರೂಪಾಯಿ ಗ್ಯಾರಂಟಿ ಕೊಡುತ್ತೇವೆಂದು ಮಾನ್ಯ ಬೈರೇಗೌಡರ ಮುಂದೆಯೇ ಅಶ್ವಾಸನೆ ಕೊಟ್ಟಿದ್ದರು. ಆದರೆ ಇದುವರೆಗೂ ಅದು ಜಾರಿಯಾಗಲಿಲ್ಲ. ಮಾನ್ಯ ದೇವೇಗೌಡರು ಹೋದ ನಂತರ ಸನ್ಮಾನ್ಯ ಪಟೇಲರು ಮುಖ್ಯಮಂತ್ರಿಗಳಾದ ಮೇಲೆ, ಇವರನ್ನು ಬಯಲು ಸೀಮೆಗೆ ಕರೆದುಕೊಂಡು ಹೋಗಿ ಸಭೆ ಮಾಡಿ ಕೇಳಿದಾಗ, ಅವರು ಅಶ್ವಾಸನೆ ಕೊಟ್ಟರು ಮತ್ತು ಮಾನ್ಯ ಸಿದ್ದರಾಮಯ್ಯನವರು ಎರಡು-ಮೂರು ಸಲ ಸದನದಲ್ಲಿಯೇ ಅಶ್ವಾಸನೆ ಕೊಟ್ಟಿದ್ದಾರೆ. ಹೇಳಿಲ್ಲವಂತೆ, ಏನು ಮಾಡುವುದು? ತಾವು

(ಗೊಂದಲ)

ಹೇಳಿದ್ದೀರಿ ಬೇಕಾದರೆ ದಾಖಲೆ ತೆಗೆಸಿ ತೋರಿಸಿದರೆ ಗೊತ್ತಾಗುತ್ತದೆ. ಇಷ್ಟೆಲ್ಲಾ ಆದರೂ ಕೂಡ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಏಕೆ ಈ ರೀತಿ ದೃಷ್ಟಿ ಇದೆ? ಬಹುಶಃ ಮಾನ್ಯ ವೀರಪ್ಪಮೊಯಿಲಿಯವರ ಅವಧಿಯಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಚನೆಗಾಗಿ ಆಕ್ಟ್ ಆಯಿತು. ಆಗ 72 ಜನ ಶಾಸಕರು ಬಯಲು ಸೀಮೆ ಅಭಿವೃದ್ಧಿ

ಮಂಡಳಿಯ ಸದಸ್ಯರು. ಇದೊಂದು ರೀತಿ ಮಿನಿ ವಿಧಾನಸೌಧ ಇದ್ದ ಹಾಗೆ ಇರುತ್ತದೆ. ಈ ಅಭಿವೃದ್ಧಿ ಮಂಡಳಿಯನ್ನು ಪ್ರಾರಂಭ ಮಾಡಿದಂಥ ನೀವು ಇದರ ಬಗ್ಗೆ ಸರಿಯಾದಂತಹ, ಪ್ರಾಮಾಣಿಕವಾದಂತಹ ಕಾಳಜಿ ಇಲ್ಲದೇ ಇದ್ದಾಗ ಮತ್ತು ಇದಕ್ಕೆ ಹಣ ಕೊಡತಕ್ಕಂಥ ವ್ಯವಸ್ಥೆ ಇಲ್ಲದೇ ಇದ್ದಾಗ, ನೀವು ಆ ಮಂಡಳಿಯನ್ನು ರಚನೆ ಮಾಡದೇ ಇದ್ದಿದ್ದರೆ ಏನು ತೊಂದರೆ ಆಗುತ್ತಿರಲಿಲ್ಲ, ನಾವು ಹೇಳತಕ್ಕಂಥ ಪ್ರಶ್ನೆಯು ಇರುತ್ತಿರಲಿಲ್ಲ ಮತ್ತು ಇವತ್ತು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಕೂಡ ಇರುತ್ತಿರಲಿಲ್ಲ. ಹೋದವರ್ಷ 4.5 ಕೋಟಿ ರೂಪಾಯಿ ಹಣ ಕೊಟ್ಟು ಇದರಲ್ಲಿ ಅರ್ಧ ಹಣವನ್ನು ಇನ್ನು ಬಿಡುಗಡೆ ಮಾಡಿಲ್ಲ. ಇವತ್ತು ನಾವು ಕೊಟ್ಟಿರತಕ್ಕಂಥ ಕಾಮಗಾರಿಗಳ ಎಸ್ಟಿಮೇಟ್‌ಗಳೆಲ್ಲಾ ಅವರ ಹತ್ತಿರವೇ ಇದೆ, ಈಗ ಅವರು ಹಣ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಎರಡನೇಯದಾಗಿ ಇವತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಸೇರತಕ್ಕಂಥ 72 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಲುವೆ, ಕುಂಟೆ, ಕೆರೆ, ಹೀಗೆ ಎಲ್ಲಾ ಕಡೆ ಸಣ್ಣ ನೀರಾವರಿಗೆ ಅವಲಂಬಿತವಾಗಿರತಕ್ಕಂಥ ಪ್ರದೇಶಗಳಾಗಿವೆ. ಆದುದರಿಂದ, ತಾವು ಸಣ್ಣ ನೀರಾವರಿಗೂ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರತಕ್ಕಂಥ 72 ವಿಧಾನಸಭೆಯ ಕ್ಷೇತ್ರಗಳು ಏನು ಇವೆ, ಇಡೀ 72 ವಿಧಾನಸಭೆಯ ಕ್ಷೇತ್ರಗಳು ಅತೀ ಹೆಚ್ಚಿಗೆ ಆಧಾರ ಬಿದ್ದಿರತಕ್ಕಂಥದ್ದು ಈ ಸಣ್ಣ ನೀರಾವರಿ ಪ್ರದೇಶಗಳಿಗೆ. ಕೆರೆ, ಕಾಲುವೆ, ಕುಂಟೆ ಇವು ಸಣ್ಣ ನೀರಾವರಿ ಇರತಕ್ಕಂಥ ಪ್ರದೇಶಗಳು. ನಾನು ಮೊನ್ನೆ ಬಜೆಟ್ ಮೇಲೆ ಮಾತನಾಡುವಾಗ ಕೂಡ ಹೇಳಿದ್ದೇನೆ. 64 ಪರ್ಸೆಂಟ್ ಕೃಷಿ ಇವತ್ತು ಸಣ್ಣ ನೀರಾವರಿ ಮೇಲೆ ಆಧಾರ ಬಿದ್ದಿದೆ. 64 ಪರ್ಸೆಂಟ್ ಕೃಷಿ ಪ್ರದೇಶವನ್ನು ನೀವು ನಿರ್ಲಕ್ಷ್ಯ ಮಾಡಿ ಹೇಗೆ ಅಭಿವೃದ್ಧಿಯನ್ನು ಸಾಧನೆ ಮಾಡುತ್ತೀರಿ ಎನ್ನತಕ್ಕಂಥದ್ದು ದಯಮಾಡಿ ನೀವು ಆಲೋಚನೆಯನ್ನು ಮಾಡಿ. ಈ ಸಣ್ಣ ನೀರಾವರಿ ನಮಗೆ ಏನು ಇವೆ. ಈ ಸಣ್ಣ ನೀರಾವರಿ ಇಲಾಖೆಯ ಪರಿಸ್ಥಿತಿ ಏನಾಗಿದೆ, ಅದಕ್ಕೆ ತಾವು ಸಾಕಷ್ಟು ಹಣವನ್ನೂ ಕೊಡುತ್ತಿಲ್ಲ. ಕೆರೆ, ಕಟ್ಟೆ ರಿಪೇರಿಗೆ ಹಣ ಇಲ್ಲ. ಕಾಲುವೆ ರಿಪೇರಿಗೆ ಕಾಸು ಇಲ್ಲ. ತೂಬು ರಿಪೇರಿಗೆ ಕಾಸು ಇಲ್ಲ. ಕೊನೆಗೆ ಮಾನ್ಯ ಬೈರೇಗೌಡರು ಏನೇನೋ ಪ್ರಯತ್ನ ಮಾಡಿ ಕೆರೆಯಲ್ಲಿರುವ ಹೂಳನ್ನು ತೆಗೆಸುವ ಕಾರ್ಯಕ್ರಮ ಮಾಡೋಣ ಎಂದರು, ಅದು ನಿಜವಾಗಿಯೂ ಕೂಡ ಒಳ್ಳೆಯದು. ಅವರ ಸಾಹಸಕ್ಕೆ ನಾವು ಶ್ಲಾಘನೆ ಮಾಡಬೇಕು. ಬೈರೇಗೌಡರು ಅವರ ಮೇಲೆ ಇವರ ಮೇಲೆ ಬಿದ್ದು ಒಂದೆರಡು ಕಡೆ ಪ್ರಾರಂಭ ಮಾಡಿಸಿದರು. ಅದಕ್ಕೆ ಒಳ್ಳೆಯ ರೆಸ್ಪಾನ್ಸಿಬಲ್ ಬಂತು. ಜನರಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಅದು ಅಷ್ಟಕ್ಕೆ ನಿಂತು ಬಿಟ್ಟಿತು. ಆ ಕೆರೆಗಳಲ್ಲಿರುವ ಹೂಳನ್ನು ತೆಗೆಯತಕ್ಕಂಥದ್ದರಿಂದ ಪ್ರಾರಂಭವಾಗಿ ಕಾಲುವೆ, ಕುಂಟೆಗಳನ್ನು ರಿಪೇರಿ ಮಾಡಿಸುವವರೆಗೂ ಕೂಡ ಸಣ್ಣ ನೀರಾವರಿಗೆ ಹಣ ಇಲ್ಲ. ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಹಣವನ್ನು ಕೊಟ್ಟರೆ ಕೆರೆ, ಕಾಲುವೆಗಳನ್ನು ರಿಪೇರಿ ಮಾಡಿಸಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಅಂತರ್ಜಲ ಸಂಪೂರ್ಣವಾಗಿ ಕೆಳಗಡೆ ಹೋಗುತ್ತಿದೆ. ಅದನ್ನು ಅಭಿವೃದ್ಧಿ ಪಡಿಸತಕ್ಕಂಥ ವ್ಯವಸ್ಥೆ ಇಲ್ಲ. ಆ ರೀತಿಯಾದಂಥ ಪರಿಸ್ಥಿತಿಯಲ್ಲಿ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ):— ನಾನು ಭಾಷಣವನ್ನು ಮಾಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಆದರೆ, ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ನನಗೆ ನೆನಪು ಇದ್ದ ಪ್ರಕಾರ, ಕೆಲಸ ವಿಚಾರಗಳು ನಮ್ಮ ತಲೆಯಲ್ಲಿ ಇದ್ದವು. ಏಕೆಂದರೆ, ಅದನ್ನು ಬರೀ ಸ್ಟೇಟ್‌ನಿಂದ ತಾವು ಪ್ರತ್ಯೇಕವಾಗಿ ಕೊಡತಕ್ಕಂಥ ಹಣ ಒಂದು ಕಡೆಯಾದರೆ ಹಿಂದೆ ನನಗೆ ನೆನಪು ಇದ್ದ ಪ್ರಕಾರ I was just trying to clarify. 42 ತಾಲ್ಲೂಕುಗಳು ಹಿಂದೆ ಡಿಪಿಎಪಿ ತಾಲ್ಲೂಕುಗಳಾಗಿದ್ದವು. ಅದರಲ್ಲಿ ಕೂಡ ಡಿಪಿಎಪಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ. ಇನ್ನು ಕೆಲವು ಕಡೆ ಉದಾಹರಣೆಗೆ ಕೋಲಾರ ಹಾಗೂ ಇತರೆ ಕಡೆಗಳಲ್ಲಿ ರೋಜ್‌ಗಾರ್ ಯೋಜನೆ ಎನ್‌ಆರ್‌ಇಪಿ ಕಾರ್ಯಕ್ರಮದಲ್ಲಿ ಇದನ್ನೆಲ್ಲ ಕೋ-ಆರ್ಡಿನೇಟ್ ಮಾಡಿ ಕೇಂದ್ರ ಸರ್ಕಾರದಿಂದ ಕೆಲವು ಯೋಜನೆಗಳ ಬಗ್ಗೆ ನಾವು ಅನೇಕ ಬಾರಿ ಪ್ಲಾನಿಂಗ್ ಕಮೀಷನ್ ಅಥವಾ ಬೇರೆ ಬೇರೆ ಇಲಾಖೆಗಳ ಜೊತೆಯಲ್ಲಿ ಚರ್ಚೆಗೆ ಹೋದಾಗ, ನಮಗೆ ಅನ್ನಿಸುತ್ತಿತ್ತು, ಅನೇಕ ಯೋಜನೆಗಳಿಗೆ ರಾಜ್ಯ ಸರ್ಕಾರಗಳು ಕೆಲವು ಸಾರಿ ಸರಿಯಾದಂಥ ಪ್ರಾಜೆಕ್ಟ್‌ಗಳನ್ನು ಮಾಡಿದರೂ ಸಹ ಅಲ್ಲಿರುವ ಹಣ ಕೂಡ ಸರಿಯಾಗಿ ಇಲ್ಲಿಗೆ ಬರುತ್ತಿರಲಿಲ್ಲ. ಇದೆಲ್ಲಾ ಆಲೋಚನೆಯನ್ನು ನಾವು ಮಾಡಿಕೊಂಡು ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿದ್ದುದು. ತಾವು ಬಜೆಟ್ ನಿಂದ ಕೊಡತಕ್ಕಂಥದ್ದು ಒಂದು ಕಡೆ, ಅದಕ್ಕೆ ಪೂರಕವಾಗಿ ಇಂತಹ ಕೆಲವು ಯೋಜನೆಗಳನ್ನು ತಾವು ದಯಮಾಡಿ, ನಿಮ್ಮ ಪ್ರಾಜೆಕ್ಟ್‌ಗಳನ್ನು ಮಾಡಿ ಕೇಂದ್ರ ಸರ್ಕಾರದ ಕೆಲವು ಯೋಜನೆಗಳನ್ನು ತರಬೇಕು. ಆ ಯೋಜನೆಗಳು ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತವೆ. ಆದರೆ ಅವು ನಮ್ಮ ರಾಜ್ಯಕ್ಕೆ ಬರುವುದಿಲ್ಲ. ತಾವು ದಯಮಾಡಿ ಇದಕ್ಕೆ ಒಬ್ಬ ಒಳ್ಳೆಯ ಡೈನಾಮಿಕ್ ಅಧಿಕಾರಿಯನ್ನು ಹಾಕಬೇಕು. ಏಕೆಂದರೆ ಇದು ಸಣ್ಣ ಕಾರ್ಯಕ್ರಮ ಅಲ್ಲ. ಇದನ್ನು ಬಹಳ ಚೆನ್ನಾಗಿ ಮಾಡಬೇಕು. ಇದಕ್ಕೆ ಒಬ್ಬ ಡೈನಾಮಿಕ್ ಅಧಿಕಾರಿಯನ್ನು ಹಾಕಿ, ಅವನೇ ಸ್ಪೆಷಲ್ ಆಫೀಸರ್ ಆಗಿ, ಅವನು ಡೆಲ್ಲಿಗೆ ಹಾಗೂ ಬೇರೆ ಬೇರೆ ಇಲಾಖೆಯ ಸೆಕ್ರೆಟರಿಗಳ ಜೊತೆಗೆ ಕುಳಿತುಕೊಂಡು ಇಲ್ಲಿ ಕೂಡ ಡಿಪಿಎಪಿ ಕಾರ್ಯಕ್ರಮಗಳು ಯಶಸ್ವಿಯಾಗಿ ಆಗಲಿಕ್ಕೆ How can you integrate so may other programmes. ಇದನ್ನೆಲ್ಲಾ, ಮಾಡಿದರೆ, ಬಯಲುಸೀಮೆ ಅಭಿವೃದ್ಧಿ ಮಂಡಳಿ what can be ideal boards in the State. ಆದರೆ ಬರೀ ರಾಜ್ಯ ಸರ್ಕಾರದ ಹಣವನ್ನು ನಂಬಿಕೊಂಡು ಇದ್ದರೆ ಅದು ಸಾಕಾಗುವುದಿಲ್ಲ. ಸ್ಟೇಟ್ ಗೌರ್ನಮೆಂಟ್ ಹೇಳತಕ್ಕಂಥ ಕಾರ್ಯಕ್ರಮಗಳನ್ನು ಇಂಟಿಗ್ರೇಟ್ ಮಾಡಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವನ್ನು ಇಂಟಿಗ್ರೇಟ್ ಮಾಡಬೇಕು. ನಬಾರ್ಡ್‌ಗೆ ನೀವು ಇನ್ನು ಕೆಲವು ಕಾರ್ಯಕ್ರಮಗಳನ್ನು ಕೊಟ್ಟರೆ, ಇದನ್ನು ಒಂದು ಉಪಯುಕ್ತವಾದಂಥ ಮತ್ತು ಬೃಹತ್ ಆದಂಥ ಒಂದು ಸಂಸ್ಥೆಯನ್ನಾಗಿ ಕಟ್ಟಲಿಕ್ಕೆ ಸಾಧ್ಯವಿದೆ. ನಾವು ಈ ಎಲ್ಲಾ ಆಲೋಚನೆಗಳನ್ನು ಮಾಡಿಕೊಂಡು ನಾವು ಆಗ ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿದ್ದು ಆದ್ದರಿಂದ ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಧ್ಯಕ್ಷರೆ, ಹಾಗಾಗಿ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನಾವು ಬಯಲುಸೀಮೆ ಅಭಿವೃದ್ಧಿ ಮಂಡಲಿಯ ಏರಿಯಾದಲ್ಲಿ ಬರುವ ಸದಸ್ಯರು. ಇದು ಜನರಿಗೂ ಗೊತ್ತಾಗಿದೆ. ಬಯಲುಸೀಮೆ ಅಭಿವೃದ್ಧಿ ಮಂಡಲಿ ಇದೆ, ಅದರಿಂದ ಶಾಸಕರಿಗೆ ಅವರ ಕ್ಷೇತ್ರಕ್ಕೆ ಹಣವನ್ನು ಕೊಡುತ್ತಾರೆಂದು, ಪ್ರತಿಯೊಬ್ಬರೂ ನಮಗೆ, ನಿಮಗೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಿಂದ ಹಣ ಬರುತ್ತದೆ. ನಾವು ಟಿ.ಪಿ.ಎಸ್. ಸದಸ್ಯರನ್ನು ಕೇಳಿದರೆ, ಅವರು ನಿಮಗೆ ಬಯಲುಸೀಮೆ ಮಂಡಲಿಯಿಂದ ಹಣ ಬರುತ್ತದೆಂದು ಎನ್ನುತ್ತಾರೆ. ಜಿಲ್ಲಾ ಪಂಚಾಯಿತಿಯಲ್ಲಿ ಕೇಳಿದರೆ, ನಿಮಗೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಿಂದ ಹಣ ಬರುತ್ತದೆಂದು ಹೇಳುತ್ತಾರೆ. ಈ ವಿಷಯ ಎಲ್ಲರಗೂ ಗೊತ್ತಾಗಿದೆ. ಆದರೆ ವಾಸ್ತವವಾಗಿ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಇವತ್ತು ಹಣ ಬರುತ್ತಿಲ್ಲ ಹಾಗಾಗಿ ಸರ್ಕಾರ ಒಂದನ್ನು ತೀರ್ಮಾನ ಮಾಡಬೇಕು. ನಾವು ಬಯಲುಸೀಮೆ ಅಬಿವೃದ್ಧಿ ಮಂಡಲಿಗೆ ಹೆಚ್ಚಿಗೆ ಹಣವನ್ನು ಕೊಡುತ್ತೇವೆ, ಇವತ್ತಿನಿಂದ ಆ ಹಣವನ್ನು ತೆಗೆದುಕೊಂಡು ಕೆಲಸವನ್ನು ಮಾಡಿ ಎಂದಾದರೂ ತೀರ್ಮಾನ ಮಾಡಿ, ಬೇಡವೆಂದರೆ ಆ ಬೋರ್ಡನ್ನು ವೈಂಡಪ್ ಮಾಡಿಬಿಡಿ. ಅದು ಇದ್ದರೆ ಏನಾಗುತ್ತದೆಂದರೆ: ನಾವು ಜಿಲ್ಲಾ ಪಂಚಾಯಿತಿಯಲ್ಲಿ ಹೋಗಿ ಕೇಳಿದರೆ, ಅವರು ಹೇಳುತ್ತಾರೆ: ಏನ್ ಸಾರ್ ನಿಮಗೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಿಂದ ಹಾಗೂ ಡಿಆರ್‌ಡಿಪಿಯಲ್ಲಿ ಹಣ ಬರುತ್ತದೆಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಮೂರು ಕಾಸು ಹಣ ಕೂಡ ಬರುವುದಿಲ್ಲ. ಶ್ರೀ ಸಿದ್ಧರಾಮಯ್ಯನವರೆ, ನಾವು ನಿಮಗೆ ಏನು ಮಾಡಬೇಕು. ನಿಮಗೆ ನಾವು ದಮ್ಮಯ್ಯ ಹಾಕಿದ್ದೇವೆ, ಬೇಡಿಕೊಂಡಿದ್ದೇವೆ. ಧರಣಿ ಮಾಡಿದ್ದೇವೆ. ಇಲ್ಲಿ ಗಲಾಟೆಯನ್ನು ಮಾಡಿರುತ್ತೇವೆ. ಹಾಗೂ ಸಭಾತ್ಯಾಗವನ್ನು ಮಾಡಿದ್ದೇವೆ. ನಾವು ಇಷ್ಟೆಲ್ಲಾ ಮಾಡಿದರೂ ಕೂಡ ಆಗಲಿಲ್ಲವೆಂದರೆ ಇನ್ನು ನಮಗೆ ಬೇರೆ ದಾರಿ ಏನು ಇದೆ. ನೀವು ಆಶ್ವಾಸನೆಯನ್ನು ಕೊಟ್ಟಿಲ್ಲವೆಂದು ಹೇಳುತ್ತೀರಿ. ನೀವು ಪ್ರಾಮಾಣಿಕವಾಗಿ ಹೇಳಿ, ನಮಗೆ ನಿಮ್ಮ ಮೇಲೆ ನಂಬಿಕೆ ಇದೆ, ನೀವು ಸುಳ್ಳು ಹೇಳುವುದಿಲ್ಲ. ನೀವು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ನೀವು ಹೆಚ್ಚಿಗೆ ಹಣವನ್ನು ಕೊಡುತ್ತೇನೆಂದು ಹೇಳಿದಿರಿ. ಖಂಡಿತವಾಗಿ ಹೆಚ್ಚಿಗೆ ಕೊಡುತ್ತೇನೆಂದು ಹೇಳಿರುತ್ತೀರಿ. ಎಷ್ಟು ಹಣ ಕೊಡುತ್ತೇನೆಂದು ಹೇಳಿರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಪ್ರಯತ್ನ ಮಾಡುತ್ತೇನೆಂದರೆ ಕೊಡುತ್ತೇನೆಂದು ಅಲ್ಲವೇ? ಕೊಡುವುದಿಲ್ಲವೆನ್ನುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಎನ್ನುತ್ತೀರಾ? ಹಾಗಾದರೆ ಅದಕ್ಕೂ ನಾವು ಇದನ್ನೇ ಹೇಳುತ್ತೇವೆಂದು ತಾವು ಹೇಳಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನಗೆ ಪ್ರಮುಖವಾಗಿ ಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ನೀವು ನಿಮ್ಮ ಮಾತಿನಲ್ಲಿ ಬದಲಾವಣೆಯನ್ನುಮಾಡಿದಿರಿ. ಆದರೆ ಅದು ಏನೋ ಏನೋ ಸರಿ ಹೋಗಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ದಯವಾಡಿ ತಾವಾದರೂ ಹೇಳಿಕೊಡಿ, ನಾವು ಯಾವ ರೀತಿಯಾಗಿ ಅರಿಕೆ ಮಾಡಿಕೊಳ್ಳಬೇಕು. ಮಾನ್ಯ ಪ್ರಕಾಶ್‌ರವರು ಹೇಳುತ್ತಿದ್ದಾರೆ. ಆದ್ದರಿಂದ, ನಮಗೆ ಸಣ್ಣ ನೀರಾವರಿಗಳ ಕೆಲಸಗಳು ಅಲ್ಲಿ ಆಗಬೇಕು. ಸಣ್ಣ ನೀರಾವರಿಗಳ

ಕೆಲಸಗಳು ಆಲ್ಲಿ ಆಗಬೇಕು. ಸಣ್ಣ ನೀರಾವರಿ ಯೋಜನೆಗಳು ಬಹಳ ಮುಖ್ಯವಾದವು. ಕೆರೆಯಲ್ಲಿ ಹೂಳು ತೆಗೆಯತಕ್ಕಂಥದ್ದಕ್ಕೆ ಕಟ್ಟೆ ರಿಪೇರಿ ಮಾಡತಕ್ಕಂಥದ್ದಕ್ಕೆ, ಕಾಲುವೆ ಮಾಡುವುದಕ್ಕೆ ಇದು ಬಹಳ ಮುಖ್ಯವಾಗಿ ಆಗಬೇಕು. ಅಂತರ್ಜಲವನ್ನು ಹೆಚ್ಚಿಸಲಿಕ್ಕೆ ಹೆಚ್ಚು ಕಾರ್ಯಕ್ರಮವನ್ನು ಹಾಕಬೇಕಾಗುತ್ತದೆ. ಚೆಕ್ ಡ್ಯಾಮುಗಳನ್ನು ನಿರ್ಮಾಣ ಮಾಡತಕ್ಕಂಥದ್ದು, ನೀರನ್ನು ಶೇಖರಣೆ ಮಾಡತಕ್ಕಂಥದಕ್ಕೆ ಹಣ ಬೇಕಾಗಿದೆ. ಎ.ಪಿ.ಎಂ.ಸಿ.ಯವರು ಕೂಡ ಹಣವನ್ನು ಕೊಡುತ್ತೇವೆಂದು ಹೇಳಿದರು. ಮೊದಲು ಒಂದು ಪಿರಿಯಡ್ ಕೊಟ್ಟರು. ಅವರು ಹಣವನ್ನು ಕೊಡಲಿಕ್ಕೆ ಸುಸ್ತಾದರು. ಅವರ ಕಡೆ ಕೂಡ ಹಣ ಇಲ್ಲದ ಸ್ಥಿತಿ. ಅದರಲ್ಲಿ ಹಣ ಕೂಡ ಈಗ ಇಲ್ಲ. 75 ವಿಧಾನಸಭೆಯ ಕ್ಷೇತ್ರಗಳು ಇವೆಲ್ಲಾ ಸಂಪೂರ್ಣವಾಗಿ ಎಲ್ಲಾ ರೀತಿಯಿಂದಲೂ ಹಿಂದುಳಿದಿರತಕ್ಕಂಥ ಪ್ರದೇಶಗಳು. ಮಾನ್ಯ ಸಿದ್ದರಾಮಯ್ಯನವರೇ, ನೀವು ಆಲೋಚನೆ ಮಾಡಬೇಕು. ಮಲೆನಾಡು ಅಭಿವೃದ್ಧಿ ಮಂಡಲಿಗೆ ಎಷ್ಟು ವಿಧಾನಸಭೆಯ ಕ್ಷೇತ್ರಗಳು ಬರುತ್ತವೆ. ಹೈದ್ರಾಬಾದ್-ಕರ್ನಾಟಕಕ್ಕೆ ಎಷ್ಟು ವಿಧಾನಸಭೆಯ ಕ್ಷೇತ್ರಗಳು ಬರುತ್ತವೆ. ನಮಗೆ ಎಷ್ಟು ವಿಧಾನಸಭೆಯ ಕ್ಷೇತ್ರಗಳು ಬರುತ್ತವೆ. ನೀವು ಅವರಿಗೆ ಕೊಡಬೇಡಿ ಎಂದು ಖಂಡಿತವಾಗಿ ಹೇಳುತ್ತಿಲ್ಲ, ನೀವು ಕೊಡಿ. ಅವರಿಗೆ ಎಷ್ಟು ಸಾಧ್ಯತೆ ಇದೆ ಅದಕ್ಕಿಂತಲೂ ಹೆಚ್ಚಿಗೆ ಕೊಡಿ, ನಾವು ಏನು ಬೇಡವೆನ್ನುವುದಿಲ್ಲ. ನಮ್ಮ ಪ್ರದೇಶ ಎಷ್ಟು ಇದೆ, ನಮಗೆ ಕೊಡುವ ಹಣ ಎಷ್ಟು ಇದೆ, ಇದರ ಬಗ್ಗೆ ತಾವು ಆಲೋಚನೆ ಮಾಡಿ. ನೀವು ಹಣವನ್ನು ಕೊಡದೇ ಬೋರ್ಡ್ ಎಷ್ಟಕ್ಕಂಥದ್ದು ಅದು ಏಕೆ ಇರಬೇಕು? ಆಗಲೇ ಮಾಧುಸ್ವಾಮಿಯವರು ಹೇಳಿದರು ಅದರ ಸ್ಥಿತಿ ಈಗ ಏನಾಗಿದೆ ಎಂದು ಪೂರ್ಣಕಾಲದ ಕಾರ್ಯದರ್ಶಿಯವರು ಆ ಬೋರ್ಡಿಗೆ ಇಲ್ಲ. ಅದನ್ನು ಯಾರು ಅಲ್ಲಿ ನೋಡುವವರೇ ಇಲ್ಲ. ಅಲ್ಲಿರತಕ್ಕಂಥ ಹಣ ಸರಿಯಾದ ರೀತಿಯಲ್ಲಿ ಸರಿಯಾದ ಸಮಯಕ್ಕೆ ಉಪಯೋಗ ಆಗಬೇಕೆಂದು ಹೇಳಿದರೆ, ಆ ಎಸ್ಟಿಮೇಟ್ ಅಲ್ಲಿಗೆ ಹೋದರೆ, ಅದನ್ನು ಸಹಿ ಮಾಡುವವರು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು, ಆ ಜಿಲ್ಲಾಧಿಕಾರಿಗಳು ಇದಕ್ಕೆ ಇನ್‌ಚಾರ್ಜ್. ಆ ಜಿಲ್ಲಾಧಿಕಾರಿಗಳಿಗೆ ಸಮಯ ಇರುವುದಿಲ್ಲ. ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡತಕ್ಕಂಥವರು, ಅವರಿಗೆ ಈ ಕೆಲಸ ಮಾಡಲಿಕ್ಕೆ ಸಮಯ ಎಲ್ಲಿದೆ? 3, 5, 6 ತಿಂಗಳವರೆಗೆ ಆ ಫೈಲುಗಳು ಅಲ್ಲಿಯೇ ಬಿದ್ದಿರುತ್ತವೆ. ಇದು ಅವ್ಯವಸ್ಥಿತವಾದಂಥ ರೀತಿಯಲ್ಲಿ ಇದ್ದು ನಿರ್ಲಕ್ಷಕ್ಕೆ ಒಳಪಟ್ಟರೆ ಆ ಒಂದು ಬೋರ್ಡ್‌ನಾದರೂ ನಾವು ಏಕೆ ಇಟ್ಟುಕೊಳ್ಳಬೇಕು? ದಯವಿಟ್ಟು ಆಲೋಚನೆ ಮಾಡಿ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ನಾವು ನಿಮ್ಮನ್ನು ಇಷ್ಟೇ ಕೇಳುವುದು, ಏಕೆಂದರೆ ನಿಮಗೆ ಗೊತ್ತಿರದೇ ಇಲ್ಲ. ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಕನಿಷ್ಠ 25 ಕೋಟಿ ರೂಪಾಯಿಗಳನ್ನಾದರೂ ನೀವು ಶ್ರುತಿಪರ್ಯ ಕೊಡಬೇಕು. ಇದು ನಮ್ಮ ಸತತವಾದಂಥ ಒತ್ತಾಯ. ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಆಶ್ವಾಸನೆ ಕೊಟ್ಟಿದ್ದರು ಮಾಜಿ ಪ್ರಧಾನರೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನೀವೂ ಕೂಡ ಹೆಚ್ಚಿಗೆ ಕೊಡಬೇಕೆಂದು ಹೇಳುತ್ತೀರಿ. ಆದರೆ ನೀವು 25 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳುವುದಿಲ್ಲ. ಹೆಚ್ಚಿಗೆ ಕೊಡೋಣ ಎಂದು ಹೇಳುತ್ತೀರಿ. ಹೆಚ್ಚಿಗೆ ಕೊಡಲು ನೀವು ಒಪ್ಪುತ್ತೀರಿ. ಹಾಗಾಗಿ ನಮಗೆ ನೀವು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಹೆಚ್ಚಿನ ಹಣವನ್ನು ಕೊಡಲೇ ಬೇಕು. ಅದರ ತೀರ್ಮಾನ ಇವತ್ತು ಆಗಬೇಕು. ಇಲ್ಲವಾದರೆ ನೀವು ಆ ಮಂಡಲಿಯನ್ನು

ರದ್ದು ಮಾಡುತ್ತೇವೆ ಎನ್ನುವ ತೀರ್ಮಾನವನ್ನಾದರೂ ಇವತ್ತು ಹೇಳಿಬಿಡಿ. ಇಲ್ಲವೆಂದರೆ ನಾವೆಲ್ಲರೂ ಇಲ್ಲಿ ಬಂದು ಧರಣಿಗೆ ಕುಳಿತುಕೊಳ್ಳುತ್ತೇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ):— ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಮಾಧುಸ್ವಾಮಿಯವರು ಹಾಗೂ ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ. ಮಾತನಾಡಿರತಕ್ಕಂಥ ವಿಷಯದ ಬಗ್ಗೆ ಮತ್ತೆ ಮಾತನಾಡಿ ಹೇಳುವುದು ಅಷ್ಟು ಚೆನ್ನಾಗಿ ಇರುವುದಿಲ್ಲ. ಆದರೆ ಇವತ್ತು ನಮ್ಮ ಸರ್ಕಾರ ಮೊದಲನೆಯದಾಗಿ ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ತಂದು, ಅದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಬೇಕೆಂದು ಹೇಳಿದ್ದು, ಅದು ನಮ್ಮ ಕಾಲದಲ್ಲಿಯೇ. ಅದರಲ್ಲಿ ಮಾನ್ಯ ಬೈರೇಗೌಡರು ಇಲ್ಲಿ ಕೃಷಿ ಮಂತ್ರಿಗಳಾಗಿ ಮತ್ತು ಈ ಭಾಗದ ಒಬ್ಬ ಸದಸ್ಯರಾಗಿ ಕೆಲಸ ಮಾಡತಕ್ಕಂಥ ಈ ಸಂದರ್ಭದಲ್ಲಿ ಅವರು ಸಹಿತ ಬಹಳ ಪ್ರೀತಿಯಿಂದ ಈ ಕಾರ್ಯಕ್ರಮ ಆಗಬೇಕು. ಅದು ಅನುಷ್ಠಾನಗೊಳ್ಳಬೇಕು ಮತ್ತು ಅದಕ್ಕೆ ಹೆಚ್ಚಿಗೆ ಹಣವನ್ನು ಕೊಟ್ಟು ಈ ಭಾಗದ ಎಲ್ಲಾ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ಅಭಿವೃದ್ಧಿಗೊಳಿಬೇಕೆಂದು ಅವರೂ ಸಹಿತ ಇಷ್ಟಪಟ್ಟಿರುವಂಥವರು ಆಗ ಒಂದು ಹೋರಾಟವನ್ನು ಮಾಡಿದರು. ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಆಗ ಅವರು ಮನೆಯಲ್ಲಿಯೇ ಕರೆದು ಬಹಳ ವಿಶ್ವಾಸದಿಂದ ಹೇಳಿದರು. ಈ ಸಮಯದಲ್ಲಿ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸುತ್ತೇನೆಂದು ಅವರು ಮಾತು ಕೊಟ್ಟರು. ಆದರೆ ಅದೂ ಸಹಿತ ಈಡೇರಲಿಲ್ಲ. ಅದು ಆದ ಮೇಲೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಾಫೀರರೂ ಕೂಡ ಆಶ್ವಾಸನೆಯನ್ನು ಕೊಟ್ಟರು. ಆದರೆ ನಮಗೆ ಒಂದು ದುರಾದೃಷ್ಟವಶಾತ್ ಏನಾಯಿತೆಂದರೆ ನಾವು ಅದರ ಬಗ್ಗೆ ಇಲ್ಲಿ ಹೇಳಬೇಕಾಗುತ್ತದೆ. ಈ ಭಾಗದಲ್ಲಿ ನಮಗೆ ಯಾವುದೇ ರೀತಿಯ ನೀರಾವರಿ ಸೌಲಭ್ಯ ಇರುವುದಿಲ್ಲ. ಇವತ್ತು ಅನೇಕ ಸೌಲಭ್ಯವನ್ನು ಬೇರೆಬೇರೆ ಮಂಡಲಿಗೆ ಬೇರೆ ಬೇರೆ ರೂಪದಲ್ಲಿ ಹಣಕಾಸಿನ ಸೌಲಭ್ಯವನ್ನು ತಾವು

ಮಾಡಿಕೊಟ್ಟಿರುತ್ತೀರಿ. ಮಾನ್ಯ ಕೃಷಿ ಸಚಿವರು ಈ ವಿಷಯದ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಸುಮಾರು 5 ವರ್ಷಗಳಿಂದ ನಮಗೆ ಯಾವುದೇ ಸೌಲಭ್ಯಗಳನ್ನು ಹಾಗೂ ಈ ಒಂದು ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರುವುದಿಲ್ಲ. ಕೆರೆಗಳಲ್ಲಿ ಹೂಳೆತ್ತುವುದರ ಮುಖಾಂತರ ನಾವು ಅಂತರ್ ಜಲವನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಇಲ್ಲಿರತಕ್ಕ ಮುಖ್ಯವಾದ ಅಂಶಗಳಲ್ಲಿ ಒಂದು. ಅದಕ್ಕೆ ನಾವು ಹೆಚ್ಚಿನ ಶಕ್ತಿಯನ್ನು ಕೊಡುತ್ತಿಲ್ಲ. ಏಕೆಂದರೆ ನಮಗೆ ಬೇರೆ ಸೌಲಭ್ಯಗಳು ಇಲ್ಲ. ಮುಂದೆ ಇದೇ ರೀತಿ ಹತ್ತಾರುವರ್ಷಗಳು ಹೋದರೆ ನೀರಿನ ಬಾಟಲಿಯನ್ನು ಇಟ್ಟುಕೊಂಡುಹೋಗುವ ಕಾರ್ಯಕ್ರಮವನ್ನೂ ಸಹ ನಾವು ಹಾಕಿಕೊಳ್ಳಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿ ಈ ಭಾಗಗಳಲ್ಲಿ ಬರುತ್ತದೆ ಎನ್ನುವ ಭಾವನೆ ನಮಗೆಲ್ಲರಿಗೂ ಬಂದಿದೆ. ಇಲ್ಲಿ ಅನೇಕ ಸ್ನೇಹಿತರು ಹೇಳುತ್ತಿದ್ದರು. ನಾವೆಲ್ಲರೂ ಹೆಚ್ಚಿಗೆ ಶಕ್ತಿಯನ್ನು ಕೊಡಬೇಕು. ಇದಕ್ಕೆ ಸರ್ಕಾರದ

ಮೇಲೆ ಒತ್ತಡವನ್ನು ತಂದು ನಾವು ಈ ಕಾರ್ಯಕ್ರಮವನ್ನು ರೂಪಿಸಬೇಕೆಂದು ಹೇಳುತ್ತಿದ್ದರು. ಮಾನ್ಯ ಹಣಕಾಸಿನ ಸಚಿವರಾದ ಶ್ರೀ ಸಿದ್ಧರಾಮಯ್ಯನವರು ರೈತಪರವಾಗಿದ್ದು ಇವತ್ತು ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ಸದನದಲ್ಲಿ ಬಹುಶಃ ಭಾಷಣವನ್ನು ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಹಿಂದಿನ ಅಳಲನ್ನು ನಾವು ಅವರ ಜೊತೆ ತೋಡಿಕೊಂಡಿದ್ದೇವೆ. ನಮ್ಮ ತಾಲ್ಲೂಕಿನವರಾದ ಶ್ರೀ ಕೃಷ್ಣಮೂರ್ತಿಯವರು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ನಬಾರ್ಡ್ ಕೆಲಸಗಳು, ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕೆಲಸಗಳು ಎಲ್ಲಾ ಕಡೆಗಳಲ್ಲೂ ಆಗಿದೆ. ಆದರೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯ ಕೆಲಸಗಳು ಆಗಿದೆ ಎಂದು ಎಲ್ಲೂ ಕೂಡ ನೋಡುವುದಕ್ಕೆ ಸಾಧ್ಯವಿಲ್ಲ ಎಂದು ಮಂಡಳಿಯ ಅಧ್ಯಕ್ಷರು ಹೇಳಿದರು. ಇಂತಹ ಒಂದು ಪರಿಸ್ಥಿತಿಯನ್ನು ನಾವು ಬೇರೆ ಬೇರೆ ಜಿಲ್ಲೆಗಳಲ್ಲಿ ಇವತ್ತು ಕಾಣುತ್ತಿದ್ದೇವೆ. ಇಷ್ಟೊಂದು ದೊಡ್ಡದಾದ 8 ಜಿಲ್ಲೆಗಳನ್ನು ಒಳಗೊಂಡು 75 ಜನ ಶಾಸಕರುಗಳಿದ್ದು ನಾವು ಈ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ಕೊಡಲಿಲ್ಲವೆಂದರೆ ಬಹುಶಃ ಜನತಾದಳದ ಸರ್ಕಾರದಲ್ಲಿ ಹೆಚ್ಚು ಜನ ರೈತರುಗಳಾದ ಶಾಸಕರುಗಳಿದ್ದು, ಆ ಸರ್ಕಾರವೇ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲವೆಂದು ಮಾತು ದಯಮಾಡಿ ಯಾರಲ್ಲಿಯೂ ಬರಬಾರದು. ಇವತ್ತು ಆ ರೀತಿಯಲ್ಲಿ ಒಂದು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ನಬಾರ್ಡ್‌ನಿಂದ ಪ್ರತಿ ತಾಲ್ಲೂಕಿಗೆ 65 ಲಕ್ಷ ರೂಪಾಯಿಗಳ ಪಟ್ಟಿಯನ್ನು ಮಾಡಿದ್ದರು. ಈ ಸದನದಲ್ಲಿ ಮಾನ್ಯ ಕಾಡಾ ಮಂತ್ರಿಗಳು ಇಲ್ಲ. ಅವರು ಈ ಸಂದರ್ಭದಲ್ಲಿ ಇರಬೇಕಾಗಿತ್ತು. ಒಂದು ಪಟ್ಟಿಯನ್ನು ಮಾಡಿ ಎಲ್ಲರಿಗೂ ಕಳುಹಿಸಿಕೊಟ್ಟಿದ್ದೇನೆಂದು ಅವರು ಹೇಳುತ್ತಿದ್ದರು. ಈಗಾಗಲೇ ನಬಾರ್ಡ್‌ನ ಬಗ್ಗೆ ಚರ್ಚೆಯೂ ಸಹ ನಡೆದಿದೆ. ಅದು ಸಹ ಇದುವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಉದಾಹರಣೆಗೆ ಹೇಳುವುದಾದರೆ ಯಲಿಯೂರು ಎಂಬ ಗ್ರಾಮದಲ್ಲಿ 1000 ಅಡಿ ತೋಡಿದರೂ ಸಹ ನೀರು ಸಿಗುತ್ತಿಲ್ಲ. ಅದೇರೀತಿಯಾಗಿ ದೇವನಹಳ್ಳಿಯ ಸುತ್ತಮುತ್ತಲೂ ಯಾವುದೇ ಗ್ರಾಮಗಳಿಗೆ ಹೋದರೂ ಇವತ್ತಿನ ಪರಿಸ್ಥಿತಿಯಲ್ಲಿ ನೀರು ಬೇಕಾದರೆ 600 ರಿಂದ 700 ಅಡಿ ತೋಡಬೇಕಾಗುತ್ತದೆ. ಹೋದಸಾರಿ ಚೆನ್ನಾಗಿ ಮಳೆಯಾಗಿದ್ದರೂ ಸಹಿತ ನಮಗೆ ನೀರು ಬೇಕಾದರೆ ನಾವು ಅಷ್ಟು ಅಡಿ ಆಳಕ್ಕೆ ಹೋಗಬೇಕಾಗುತ್ತದೆ. ಆ ಒಂದು ಭಯದಿಂದ ನಾವು ಇವತ್ತು ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮದೇ ಸರ್ಕಾರ ಇರುವುದರಿಂದ ನಾವು ತಮ್ಮಲ್ಲಿ ನಮ್ಮ ಭಾವನೆಯನ್ನು ತೋಡಿಕೊಂಡು ಹೇಳುತ್ತಿದ್ದೇನೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) :— ಮಾನ್ಯ ಚಂದ್ರೋಪ್ಪನವರು ನಮಗೆ ನೀರು ಬೇಕಾದರೆ 600 ರಿಂದ 700 ಅಡಿ ತೋಡಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ನಾನು ಕೃಷಿಸಾಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕೆರೆಗಳಲ್ಲಿ 7-8 ವರ್ಷಗಳಿಂದ ನೀರು ಇರಲಿಲ್ಲ. ಈಗ ಕೆರೆಗೆ ನೀರು ಬಂದಿದೆ. ಎಷ್ಟೋ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲವೆಂದು ಅವರಿಗೆ ಗೊತ್ತಿದ್ದರೂ ಸಹ ಸಮ್ಮರ್ ಕ್ರಾಪ್‌ನ್ನು ಏಕೆ ಇಡಬೇಕು? ಟೊಮೋಟೊವನ್ನು ಮಾರ್ಕೆಟ್‌ಗೆ ತಂದು ಏಕೆ ಸುರಿಯಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ :— ಬೆಂಗಳೂರಿನಲ್ಲಿ ಬದುಕಿರುವವರಿಗೆ ಹೊಟ್ಟೆಯನ್ನು ತುಂಬಿಸುವುದಕ್ಕೋಸ್ಕರ ಸಮ್ಮರ್ ಕ್ರಾಪ್‌ನ್ನು ತಂದಿರುವುದು.

ಶ್ರೀ ಎನ್. ರಾಜಣ್ಣ :— ನಾನು ಬೆಂಗಳೂರಿನ ಬಗ್ಗೆ ಹೇಳುತ್ತಿಲ್ಲ. ಕೆಲವು ಹಳ್ಳಿಗಳ ಬಗ್ಗೆ ಮಾತನಾಡುತ್ತಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾವು ಬೆಂಗಳೂರಿನಲ್ಲಿರುವವರ ಹೊಟ್ಟೆಯನ್ನು ತುಂಬಿಸುವುದಕ್ಕೆ ಬೆಳೆಯುತ್ತಿದ್ದೇವೆ. ತಾವು ನಿಂತುಕೊಂಡು ಏನು ಮಾತನಾಡುತ್ತಿದ್ದೀರಿ.

ಶ್ರೀ ಎನ್. ರಾಜಣ್ಣ :— ಕೆರೆಗೆ ನೀರು ಬಂದು 10 ವರ್ಷವಾಗಿತ್ತು. ಈ ಸಾರಿ ನೀರು ಬಂದಿದೆ. ಸಮ್ಮರ್ ಕ್ರಾಪ್‌ನ್ನು ಏಕೆ ಇಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ :— ಹಳ್ಳಿಯ ಜನ ಒಳ್ಳೆಯದು ಯಾವುದನ್ನೂ ತಿನ್ನುತ್ತಿಲ್ಲ. ನಾವು ಬೆಳೆದಿದ್ದನ್ನು ಇವರ ಹೊಟ್ಟೆಗೆ ತುಂಬಿಸುವುದಕ್ಕೆ ಸಾಕಾಗಿಹೋಗಿದೆ. ಆಕಸ್ಮಾತ್ ಒಳ್ಳೆಯದು ಏನಾದರೂ ಇದ್ದರೆ ಅದನ್ನು ಮಾರುತ್ತೇವೆ. ನಾವು ಕೆಟ್ಟದ್ದನ್ನು ತಿಂದುಕೊಂಡು ಬದುಕಿದ್ದೇವೆ.

(ಗೊಂದಲ)

ಛೇರ್ಮನ್ :— ಮಾನ್ಯ ರಾಜಣ್ಣನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಚಂದ್ರಣ್ಣ :— ನಮ್ಮ ಕೋಲಾರ ಜಿಲ್ಲೆಯ ನಮ್ಮ ಪಕ್ಕದ ಊರಿನ ಕೆರೆಯಲ್ಲಿ ಮಾನ್ಯ ಕೃಷಿ ಸಚಿವರಾದ ಶ್ರೀ ಭೈರೇಗೌಡರು ಹೂಳನ್ನು ತೆಗೆಸಿದರು. ಬಹುಶಃ ಅಲ್ಲಿರುವಂತಹ ನೀರಿನ ವ್ಯವಸ್ಥೆಯನ್ನು ನೋಡಿದರೆ ನಮಗೆ ಸಂತೋಷವಾಗುತ್ತದೆ. ಈಮತ್ತು ಅಲ್ಲಿ ಎಲ್ಲಾ ರೈತರುಗಳು ಸಚಿವರ ಬಗ್ಗೆ ಬಹಳ ಪ್ರಶಂಸೆಯಿಂದ ಮಾತನಾಡುತ್ತಾರೆ. ಈ ರೀತಿ ಹೂಳು ಎತ್ತಿದ್ದರಿಂದ ಸುಮಾರು ವರ್ಷಗಳಿಂದ ಕೆರೆ ತುಂಬದೇ ಇದ್ದದ್ದು ಈಗ ಕೆರೆಯಲ್ಲಿ ನೀರು ಬಂದಿದ್ದು, ಬೋರ್‌ವೆಲ್‌ಗಳು ರೀಚಾರ್ಜ್ ಆಗಿದೆ. ಈ ರೀತಿಯಾಗಿ ಅನೇಕ ಒಳ್ಳೆಯ ಮಾತುಗಳನ್ನು ಅವರು ಹೇಳಿದ್ದಾರೆ. ಉದಾಹರಣೆಗೆ ನಮ್ಮ ದೇವಸಮುದ್ರದಲ್ಲಿ, ಅಕ್ಕಪಕ್ಕದಲ್ಲಿರುವವರು ಒಂದು ಇಟ್ಟಿಗೆಗೂಡನ್ನು ಇಟ್ಟಿದ್ದಾರೆ. ಅಲ್ಲಿಯ ಜನರು ಇಟ್ಟಿಗೆಗೂಡನ್ನು ಮಾಡುವ ಸಲುವಾಗಿ ಕೆರೆಯಲ್ಲಿ ಆಗಿದು ಮಣ್ಣನ್ನು ತೆಗೆದುಕೊಳ್ಳುವುದರಿಂದ ಇವತ್ತು ಆ ಕೆರೆಯಲ್ಲಿ 2 ವರ್ಷಗಳಿಗೂ ಆಗುವಷ್ಟು ನೀರು ಬಂದು ನಿಂತಿರುತ್ತದೆ. ಇದರಿಂದಾಗಿ ಸುತ್ತಲಿನ ಬೋರ್‌ವೆಲ್‌ಗಳು ಅಲ್ಲಿರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳು ರೀಚಾರ್ಜ್ ಆಗಿದೆ. ಈ ಕಾರ್ಯಕ್ರಮದಲ್ಲಿ 40 ಅಥವಾ 60 ಎಂದು ಅಳವಡಿಸುವುದು ಬೇಡಾಗಿ 100 ಪರ್ಸೆಂಟ್ ಈ ಕೆರೆಯನ್ನು ದೀಗಿಲ್ಲೆ ಮಾಡುವುದಕ್ಕೆ ಈ ಕಾರ್ಯಕ್ರಮವನ್ನು ರೂಪಿಸಿದರೆ ಬಹುಶಃ ಇದಕ್ಕೆ ಕೊಡತಕ್ಕಂತಹ ಎಲ್ಲಾ ಹಣವೂ

ಸಹ ಈ ಕೆಲಸಕ್ಕಾಗಿ ವಿನಿಯೋಗವಾಗುತ್ತದೆ. ಈ ರಸ್ತೆ ರಿಪೇರಿಗಳ ಬಗ್ಗೆ ಮತ್ತು ಬೇರೆ ಬೇರೆ ಕೆಲಸ ಕಾರ್ಯಗಳಿಗೆ ಬೇರೆ ಹೆಡ್‌ನಿಂದ ಹಣವು ಸಿಗುತ್ತದೆ. ಆದರೆ ಇದರಲ್ಲಿ 10 ಲಕ್ಷ ರೂಪಾಯಿಗಳು ಸಿಕ್ಕಿದರೆ ಎಂಎಲ್‌ಎಗಳಿಗೆ ಚುನಾವಣೆಯಲ್ಲಿ ವೋಟನ್ನು ಹಾಕಿಬಿಡುತ್ತಾರೆ ಅಥವಾ ಆ ಭಾಗದಲ್ಲಿ ವೋಟುಗಳು ಸಿಗುತ್ತದೆ ಎನ್ನುವಂತಹ ಪ್ರಶ್ನೆಯಲ್ಲ. ನಿಜವಾಗಲೂ ಸಹ ಪ್ರಾಣಹಾನಿಯಾಗುವಂತಹ ವ್ಯವಸ್ಥೆಯಾಗುತ್ತದೆ. ಬಹುಶಃ ಮುಂದಿನ ಪೀಳಿಗೆಯವರಿಗೆ ಇದರಿಂದ ತೊಂದರೆಯಾಗುತ್ತದೆ ; ಎನ್ನುವ ಭಾವನೆಯನ್ನು ನಾವು ವ್ಯಕ್ತ ಮಾಡುತ್ತಿದ್ದೇವೆ. ನಮ್ಮದೇ ಸರ್ಕಾರ ಅಧಿಕಾರದಲ್ಲಿರುವುದರಿಂದ, ನಮ್ಮವರೇ ಹಣಕಾಸಿನ ಸಚಿವರಾದ ಸಿದ್ಧರಾಮಯ್ಯನವರು ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ಇಟ್ಟುಕೊಳ್ಳಬೇಕು. ದಯಮಾಡಿ ಈ ಭಾಗದ 75 ಜನ ಶಾಸಕರುಗಳ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ನಾನು ಪಕ್ಷಾತೀತವಾಗಿ ಹೇಳುವಂತಹ ವಿಚಾರವಾಗಿದೆ. ದಯಮಾಡಿ ಹೆಚ್ಚಿಗೆ ಹಣವನ್ನು ಈ ಭಾಗಕ್ಕೆ ಕೊಡುವ ಬಗ್ಗೆ ತಾವು ಘೋಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ.ಎಂ. ಚೆನ್ನಿಗಪ್ಪ (ಕೊರಟಗೆರೆ) :— ಮಾನ್ಯ ಛೇರ್ಮನ್‌ರವರೆ, ನಾವು ಮತ್ತು ನಮ್ಮ ಎಲ್ಲಾ ಸ್ನೇಹಿತರು ಸರ್ಕಾರದ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ನೀರಾವರಿ ಸ್ಕೀಂನ್ನು ಮಾಡಿ ದೊಡ್ಡ ದೊಡ್ಡ ಡ್ಯಾಂಗಳನ್ನು ಅನೇಕ ಜಿಲ್ಲೆಗಳಿಗೆ ಕಟ್ಟಿಸಿಕೊಟ್ಟಿದ್ದೀರಿ ಆದರೆ ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಯಾವುದೇ ಡ್ಯಾಂನ ವ್ಯವಸ್ಥೆ ಇಲ್ಲ. ಮಾನ್ಯ ಚಂದ್ರಣ್ಣನವರು ಮತ್ತು ಮಾಧುಸ್ವಾಮಿಯವರು ಹೇಳಿದ ಹಾಗೆ ಕೇವಲ ಕೆರೆಗಳನ್ನು ಹೂಳು ಎತ್ತುವುದರ ಮೂಲಕವಾಗಿ ಅದನ್ನು ದುರಸ್ಥಿ ಮಾಡಿದರೆ ಅಲ್ಲಿ ನೀರಿಗೆ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತಿತ್ತು. ಈ ಬಗ್ಗೆ ಮಾನ್ಯ ಸಚಿವರಾದ ಬೈರೇಗೌಡರು ಒಂದು ಸ್ಕೀಂನ್ನು ಮಾಡಿದ್ದರು. ಎರಡು ವರ್ಷಗಳ ಹಿಂದೆ ಒಂದು ಮೀಟಿಂಗ್‌ನ್ನು ಸೇರಿದಾಗ ಆ ಸ್ಕೀಂನ ಪ್ರಕಾರ 60 ರಿಂದ 75 ಲಕ್ಷ ರೂಪಾಯಿಗಳನ್ನು ಕೆರೆಗಳಲ್ಲಿ ಹೂಳೆತ್ತುವ ಕೆಲಸಗಳಿಗಾಗಿ ಎಲ್ಲಾ ಎಂಎಲ್‌ಎಗಳಿಗೆ ಕೊಡುತ್ತೇವೆಂದು ಹೇಳಿದರು. ಇದುವರೆಗೂ ಸಹ ಹಣವನ್ನು ಒದಗಿಸಿರುವುದಿಲ್ಲ. ಮಾನ್ಯ ರಾಜಣ್ಣನವರು 650 ಅಡಿ ಬೋರ್‌ವೆಲ್ ತೋಡಿದರೂ ನೀರು ಬರುವುದಿಲ್ಲ ಎಂದು ಹೇಳಿದರು. ಇದಕ್ಕೆ ಕಾರಣ ಸ್ಯಾಚುರಲ್ ಕೆಲಾಮಿಟಿ ಎಂದು ನಮಗೆ ಗೊತ್ತಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಈ ಬಗ್ಗೆ ಒಂದು ಗಹನವಾದ ಮನಸ್ಸನ್ನು ಮಾಡಬೇಕು. 1/3 ಭಾಗದ ಎಂಎಲ್‌ಎಗಳು ತಮ್ಮಲ್ಲಿ ಕೀಳಿಕೊಳ್ಳುವುದಾದರೆ, ತಾವು ದಯಮಾಡಿ ಬಯಲುಸೀಮೆ ಅಭಿವೃದ್ಧಿಗೋಸ್ಕರವಾಗಿ, ಇದುವರೆಗೂ ತಮಗೆ ನೀರಾವರಿಗೋಸ್ಕರ ಖರ್ಚಾಗಿರುವಂತಹ ಹಣದಲ್ಲಿ 1/3 ಭಾಗದಷ್ಟು ಹಣವನ್ನು ನಮಗೆ ಒದಗಿಸಿದರೆ ಅನುಕೂಲವಾಗುತ್ತದೆ. ತಾವು ನೀರಾವರಿಗೋಸ್ಕರ 2 ಕೋಟಿ ಹಣವನ್ನು ಖರ್ಚುಮಾಡುವುದರಲ್ಲಿ

ನಮಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಈ ಮೂರು ಜಿಲ್ಲೆಗಳಿಗೆ ಆಗಿರುವ ಅನ್ಯಾಯವನ್ನು ನಾವು ಸರಿಪಡಿಸಬೇಕೆಂಬುದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸದನದ ಹಿರಿಯ ಸಚಿವರಾದ ಶ್ರೀ ಸಿದ್ಧರಾಮಯ್ಯನವರು ತಾವು ಈ ವಿಷಯದ ಬಗ್ಗೆ ಮನಸ್ಸು ಮಾಡಿದರೆ ಈ ವಿಷಯ ತಮಗೆ ದೊಡ್ಡದೇನಲ್ಲ. ನಾವು ಒಟ್ಟು 75 ಜನ ಎಂಎಲ್‌ಎಗಳಿದ್ದೇವೆ. ಈ ಬಯಲುಸೀಮೆ ಅಭಿವೃದ್ಧಿಗೋಸ್ಕರವಾಗಿ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ನಿಜವಾಗಿಯೂ ಸಹ ನಾವು ಪಕ್ಷಾತೀತವಾಗಿ ಮುಂದಿನ ಚುನಾವಣೆಯಲ್ಲಿ ಗೆದ್ದು ಬರುವಂತಹ ಶಕ್ತಿಯನ್ನು ನಾವೆಲ್ಲರೂ ಪಡೆದಿದ್ದೇವೆ. ಇದರಿಂದ ಈ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮಾನ್ಯ ಬೈರೇಗೌಡರು ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕಛೇರಿಯನ್ನು ಚಿತ್ರದುರ್ಗದಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಚಿನ್ನಿಗಪ್ಪನವರೆ, ಮೊದಲು 60 ರಿಂದ 70 ಜನರನ್ನು ಮಾನ್ಯ ಸಿದ್ಧರಾಮಯ್ಯನವರು ಚುನಾವಣೆಯಲ್ಲಿ ಗೆಲ್ಲಿಸಿಕೊಳ್ಳಲಿ.

ಶ್ರೀ ಸಿ. ಚಿನ್ನಿಗಪ್ಪ :— ಅವರು ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತಾರೆ. ಅವರಿಗೆ ಆ ಶಕ್ತಿ ಇದೆ. ಮಾನ್ಯ ಸಿದ್ಧರಾಮಯ್ಯನವರು ಬಡಕುಟುಂಬದಿಂದ ಬಂದಂಥವರು. ಮಾನ್ಯ ಮಾಧುಸ್ವಾಮಿಯವರೇ, ಈ ವಿಷಯದ ಬಗ್ಗೆ ಯಾವುದೇ ಅನುಮಾನಪಡುವ ಹಾಗಿಲ್ಲ. ಮಾನ್ಯ ಕೃಷಿ ಸಚಿವರಾದ ಬೈರೇಗೌಡರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಮಗೆ ವ್ಯವಸಾಯದ ಪಿತಾಮಹರು ಎಂದು ಕರೆಯುತ್ತೇವೆ. ಮಾನ್ಯ ಮಾಧುಸ್ವಾಮಿಯವರು ತಮ್ಮನ್ನು ಟೀಕೆ ಮಾಡುತ್ತಿದ್ದರು. ತಾವೇನೂ ಮಾಡಿಲ್ಲ, ಸುಮ್ಮನೆ ಮಾಡಿದ್ದೀರಿ ಎಂದು ಹೇಳುತ್ತೀರಿ ಎಂದರು. ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ತಾವು 75 ಜನ ಎಂಎಲ್‌ಎಗಳ ಕ್ಷೇತ್ರದಲ್ಲಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಮುಖೇನ ನಮಗೆ ಅನುಕೂಲವನ್ನು ಮಾಡಿಕೊಡಬೇಕು. ಈ ಹಣವನ್ನು ಬರೀ ಕೆರೆಗಳಿಗೆ ಮಾತ್ರ ಉಪಯೋಗವಾಗುವ ಹಾಗೆ, ಮಾಡಬೇಕು. ಈ ಹಣ ರಸ್ತೆ ರಿಪೇರಿಗಲ್ಲ, ಅಥವಾ ಮತ್ತೊಂದಕ್ಕೆ ಅಲ್ಲ, ಈ ಬಯಲುಸೀಮೆ ಕೆರೆಗಳ ಅಭಿವೃದ್ಧಿಗೋಸ್ಕರವಾಗಿ ಮಾನ್ಯ ಸಿದ್ಧರಾಮಯ್ಯನವರು ದಯಮಾಡಿ ಎಲ್ಲಾ ಎಂಎಲ್‌ಎಗಳಿಗೂ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡಬೇಕು. ಈ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕಛೇರಿಯನ್ನು ತೆರೆದಿದ್ದೇವೆ. ಆ ಪ್ರದೇಶದ ಜನತೆಗೆ ಅನುಕೂಲವಾಗಲಿ ಎಂದು ಹೇಳುತ್ತಾ, ತಾವು ಅನುಕೂಲವನ್ನು ಮಾಡಿಕೊಡುತ್ತೀರೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಜಿ. ಮಾದ್ಯಾಳನವರ್‌ಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಎಲ್ಲರೂ ಮಾತನಾಡಿರುವುದರಿಂದ ನಾನು ಅದನ್ನೇ ಹೇಳಬೇಕೆಂದು ಏನಿಲ್ಲ, ಆದರೆ ನಮ್ಮ ಉದ್ದೇಶ ಏನೆಂದರೆ, ಸರ್ಕಾರದ ಮೇಲೆ ಹೆಚ್ಚಿನ ಒತ್ತಡವನ್ನು ತರಬೇಕಾಗುವುದು

ನಮ್ಮ ಉದ್ದೇಶ. ಬಯಲುಸೀಮೆ ಪ್ರದೇಶದವರು ಅಂದರೆ ಮಲೆನಾಡಿನವರು ಮೊದಲು ಹೆಣ್ಣು ಕೊಡುತ್ತಿರಲಿಲ್ಲ. ಬಯಲು ಸೀಮೆಯವರಿಗೆ ಮೊದಲು ಹೆಣ್ಣು ಕೊಡುತ್ತಿರಲಿಲ್ಲ. ಇವರಿಗೆ ಏನೂ ಸಿಗುವುದಿಲ್ಲ ಊಟ ನೀರು ತಿನ್ನುವುದಕ್ಕೂ ಗತಿಯಿಲ್ಲವೆಂದು ಹೆಣ್ಣು ಕೊಡುತ್ತಿರಲಿಲ್ಲ. ಈಗ ಏನೋ ಗೊತ್ತಿಲ್ಲ. ಮೊದಲಂತೂ ಹಾಗಿತ್ತು ಬಯಲುಸೀಮೆಯವರು ಅಂದರೆ ಆ ಕಡೆಯವರಿಗೆ ಮಲೆನಾಡಿನವರು ಹೆಣ್ಣು ಕೊಡುತ್ತಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಈಗಲೂ ಮಲೆನಾಡು ಒಕ್ಕಲಿಗರು ನಿಮಗೆ ಹೆಣ್ಣು ಕೊಡುವುದಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಸದಸ್ಯರು ಮೊದಲು ಮಲೆನಾಡಿನ ಕಡೆಗೆ ಹೆಣ್ಣಿಗೆ ಹೋಗಿದ್ದರಾ ಎಂದು ತಿಳಿಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮೊದಲು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇತ್ತು ಅದನ್ನು ಈಗ ತೆಗೆದು ಬಯಲುಸೀಮೆ ಅಭಿವೃದ್ಧಿ ಮಂಡಲಿಯೆಂದು ಮಾಡಿದರು. ಅದರ ಬಗ್ಗೆ ನಮ್ಮ ಮಾಜಿ ಮುಖ್ಯಮಂತ್ರಿಗಳು ಹೇಳಿದರು. ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಬರತಕ್ಕ ವ್ಯಾಪ್ತಿ ಸಂಪೂರ್ಣವಾಗಿ ಬಡತನದಲ್ಲಿರತಕ್ಕ ವ್ಯಾಪ್ತಿ. ಇಲ್ಲಿ ಯಾವುದೇ ನೀರಾವರಿಗೆ ಸೌಲಭ್ಯವಿಲ್ಲ. ನಾವು ಸಣ್ಣ ಸಣ್ಣ ಕೆರೆಗಳು ಮತ್ತು ಬೋರ್‌ವೆಲ್‌ಗಳ ಆಧಾರದಿಂದ ಅಲ್ಪಸ್ವಲ್ಪ ಬೆಳೆಯನ್ನು ಬೆಳೆದುಕೊಂಡು ಬರತಕ್ಕ ಜನ. ಇಂತಹ ಪ್ರದೇಶಗಳನ್ನು ಗುರುತಿಸಿ ಬಯಲುಸೀಮೆ ಅಭಿವೃದ್ಧಿ ಮಂಡಳಿಯೆಂದು ರಚನೆ ಮಾಡಿ, ಮಾನ್ಯ ಕೃಷಿ ಸಚಿವರು ಅವರ ಮನೆಯಲ್ಲಿ ಸಭೆ ಕರೆದು ನಮ್ಮನ್ನೆಲ್ಲಾ ಕರೆದು ಅವರಲ್ಲಿದ್ದ ಆಸೆ ಆಕಾಂಕ್ಷೆಗಳನ್ನು ನೋಡಿದರೆ, ನಾವೇನು ನಿರೀಕ್ಷೆ ಮಾಡಿದ್ದವು ಅಂದರೆ ನಾವು ಈ ಮಂಡಳಿಗೆ ಸದಸ್ಯರಾಗಿ ನಾನು ಐದು ವರ್ಷಗಳಲ್ಲಿ ಸಾಕಷ್ಟು ಸಾಧನೆಯನ್ನು ಪ್ರಗತಿಯನ್ನು ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮಾಡಬಹುದು ಎನ್ನುವ ಅಭಿಪ್ರಾಯವನ್ನು ಅವರು ಅವೊತ್ತು ನಮಗೆ ಮೂಡಿಸಿದರು. ಆದರೆ ಏನಾಯಿತು? ಸಂಪೂರ್ಣವಾದಂತಹ ಭ್ರಮನಿರಸನ. ಇವತ್ತು ಅಲ್ಪಸ್ವಲ್ಪ ಅಭಿವೃದ್ಧಿಯನ್ನು ನಮ್ಮ ಬಯಲುಸೀಮೆ ಕ್ಷೇತ್ರದಲ್ಲಿ, ಈ ಮಂಡಳಿಯಿಂದ ಸಾಧನೆಯನ್ನು ಮಾಡಿದ್ದೇವೆ ಹೇಳಿಕೊಳ್ಳತಕ್ಕ ಶಕ್ತಿ ನಮಗೆ ಇಲ್ಲ. ನಾವು ಅನೇಕ ಬಾರಿ ಚಿತ್ರದುರ್ಗಕ್ಕೆ ಸಭೆಗಳಿಗೆ ಎಂದು ಹೋದೆವು. ಇಲ್ಲಿಂದ ಚಿತ್ರದುರ್ಗಕ್ಕೆ ಸುಮಾರು 300-400 ಕಿಲೋಮೀಟರ್ ದೂರಗಳಿಂದ ಸದಸ್ಯರುಗಳು ಬಂದರು. ಏನಾದರೂ ಈ ಮಂಡಳಿಯಿಂದ ನಮ್ಮ ಕ್ಷೇತ್ರಕ್ಕೆ ಸಹಾಯವಾಗಬಹುದೇನೋ ಎನ್ನುವ ಆಸೆಯಿಟ್ಟುಕೊಂಡು ಸದಸ್ಯರುಗಳು ಹೋಗಿದ್ದೆವು. ಮಾನ್ಯ ಭೂರೇಗೌಡರು ಸುಮಾರು ಸಲ ಈ ಸಭೆಗಳಿಗೆ ಬಂದರು. ಏನಾಗಿದೆ ಇವತ್ತು? ನಿಮ್ಮ ಉದ್ದೇಶವೇನು? ಈ ಮಂಡಳಿಯನ್ನು ರಚನೆ ಮಾಡಿದಂತಹ ಉದ್ದೇಶವೇನು? ಏನೂ ಸಾಧನೆ ಮಾಡಲಿಕ್ಕೆ ಆಗದೇಹೋದರೆ ಏತಕ್ಕೆ

ಈ ಮಂಡಳಿಯಲ್ಲಿ ನೀವು ಅಧಿಕಾರಿಗಳನ್ನು ಇಟ್ಟುಕೊಂಡು ಹಣ ವ್ಯಯ ಮಾಡುತ್ತೀರಿ? ಮೊನ್ನೆ ಒಂದು ಸಬ್ಜೆಕ್ಟ್ ಬಂತು ಹಾಂಟಿಸ್ಸಾ ಕಾರನ್ನು ಅಧ್ಯಕ್ಷರಿಗೆ ಕೊಳ್ಳುವ ಬಗ್ಗೆ ಎಂದು. ನಮ್ಮನ್ನೆಲ್ಲಾ ಸಭೆಗೆ ಕರೆದು ಆ ಸಬ್ಜೆಕ್ಟನ್ನು ರ್ಯಾಟಿಫಿಕೇಷನ್ ಮಾಡಿದರು. ಅಂದರೆ ಇಂತಹ ಸಭೆಗಳನ್ನು ಮಾಡುವುದಕ್ಕೋಸ್ಕರ ಇಂತಹ ಮಂಡಳಿಯನ್ನು, ಅಭಿವೃದ್ಧಿ ಕಾಣದೇ ಇರತಕ್ಕ ಪ್ರದೇಶಗಳನ್ನು ಒಳಗೊಂಡು ರಚಿಸಿರತಕ್ಕ ಒಂದು ಮಂಡಳಿಯನ್ನು ರಚಿಸಿ, ಹಾಂಟಿಸ್ಸಾ ಕಾರನ್ನು ಪರ್ಚೇಸ್ ಮಾಡಲಿಕ್ಕೆ ಸದಸ್ಯರುಗಳನ್ನು ಕರೆದು ಮೀಟಿಂಗ್‌ಗಳನ್ನು ಮಾಡುವುದಾದರೆ, ಇದು ಖಂಡಿತವಾಗಿಯೂ ಇದು ಬಹಳ ದುರದೃಷ್ಟಕರವಾದ ಸಂಗತಿ. ನಾನಾದರೂ ಕೂಡ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ, ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ. ಇವತ್ತು ಬಯಲುಸೀಮೆ ಮಂಡಳಿಯ ಕಾರ್ಯವ್ಯಾಪ್ತಿ ನಮ್ಮ ಸರ್ಕಾರದ ಸಾಧನೆಯೆಂದು ನೀವು ಏನಾದರೂ ಹೇಳಿಕೊಳ್ಳುವುದಾದರೆ, ಖಂಡಿತವಾಗಿಯೂ ಕೂಡ ಈ ಮಂಡಳಿಯಲ್ಲಿರತಕ್ಕ ಸದಸ್ಯರುಗಳು ನಾವ್ಯಾರೂ ನಮ್ಮ ನಮ್ಮ ಕ್ಷೇತ್ರಗಳಿಗೆ ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಸಾಕಷ್ಟು ಅಭಿವೃದ್ಧಿ ಕೆಲಸವನ್ನು ಮಾಡಿದ್ದೇವೆಂದು ನಾವು ಹೇಳಿಕೊಳ್ಳುವ ಮಾತೇನೂ ಇಲ್ಲ. ದಯಮಾಡಿ ನೀವು ಇದರ ಬಗ್ಗೆ ಚಿಂತನೆ ಮಾಡಬೇಕು. ಈವೊಂದು ಮಂಡಳಿಯನ್ನು ಉಳಿಸಿಕೊಂಡು ಅಭಿವೃದ್ಧಿ ಕಾಣದೇ ಇರತಕ್ಕ ಪ್ರದೇಶಗಳಿಗೆ ಹೆಚ್ಚು ಕೆಲಸಗಳನ್ನು ಮಾಡತಕ್ಕ ಅವಕಾಶವಿದೆ. ಸದಸ್ಯರುಗಳು ಗೆದ್ದು ಬರುವುದು ಅದು ಬೇರೆ ವಿಷಯ. ಈ ಪ್ರದೇಶಗಳು ನಿಜವಾಗಲೂ ಅಭಿವೃದ್ಧಿಯಾಗಬೇಕಾಗಿರತಕ್ಕ ಪ್ರದೇಶ. ಕಳೆದ ನಾಲ್ಕೂವರೆ ವರ್ಷಗಳಿಂದ ನಾವು ಸದಸ್ಯರುಗಳಾಗಿದ್ದೇವೆ. ಒಂದೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೊಂದು ಕೆರೆಗಳನ್ನು ತೆಗೆದುಕೊಂಡು ಹೂಳೆತ್ತತಕ್ಕ ಕಾರ್ಯಕ್ರಮ ಮಾಡಲಿಕ್ಕೆ ಆಗಲಿಲ್ಲ. ಇವತ್ತು ಶೇಕಡ 60/40 ರ ಅನುಪಾತದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುತ್ತೇವೆಂದು ನಮ್ಮಿಂದ ಹಾಮಗಾರಿ ಪಟ್ಟಿಗಳನ್ನು ಪಡೆದುಕೊಂಡರು ಅವು ಏನಾಯಿತು? ಯಾವುದಾದರೂ ಒಂದು ಕ್ಷೇತ್ರದಲ್ಲಿ ಹೂಳೆತ್ತತಕ್ಕ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆಂದು ಹೇಳಿಕೊಳ್ಳತಕ್ಕ ಪರಿಸ್ಥಿತಿ ಇದೆಯಾ ಇವತ್ತು? ಮಾನ್ಯ ರಾಜಣ್ಣನವರು ಹೇಳುತ್ತಿದ್ದರು, ಅಂತರ್ಜಲ ಹೊರಟುಹೋಗುತ್ತದೆಂದು. ಅಂತರ್ಜಲವನ್ನು ಅಭಿವೃದ್ಧಿ ಮಾಡಲಿಕ್ಕೆ ನೀವು ಕೆರೆಗಳಲ್ಲಿರತಕ್ಕ ಹೂಳನ್ನು ಎತ್ತಬೇಕು. ಅದು ಬಹಳ ಮುಖ್ಯವಾದುದು. ನೀವು ಪಿಕ್ ಆಫ್ ಡ್ಯಾಮೇಗಳನ್ನು ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಸಿದ್ದರಾಮಯ್ಯನವರಿಗೆ ಕೇಳುತ್ತೇನೆ, ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರ ಖರ್ಚು ಮಾಡುತ್ತಿರುವ ಹಣ, ಇಡೀ ರಾಜ್ಯದ ಹಳ್ಳಿಗಳಿಗೆ ಖರ್ಚು ಮಾಡುತ್ತಿರುವ ಹಣ ಎಲ್ಲಾ ಕಡೆ ಸಾಲ ತಂದಿರುವುದನ್ನು ಹಿಡಿದುಕೊಂಡು ಅದರ ಬಗ್ಗೆ ಇಲ್ಲೊಂದು ಕ್ಷೇತ್ರವನ್ನು ಇಟ್ಟುಬಿಟ್ಟರೆ ನಾವು ಶರಣಾಗಿಬಿಡುತ್ತೇವೆ, ಒಂದೊಂದು ತಲೆಗೆ ಹಳ್ಳಿ ಜನ ಎಷ್ಟು ಟ್ಯಾಕ್ಸ್ ಕೊಡುತ್ತಿದ್ದೇವೆನ್ನುವುದು ನಮಗೆ ಗೊತ್ತು. ಇವರು ನಾಲ್ಕು ಆಣಿಗೆ ತರಕಾರಿ ಟೊಮ್ಯಾಟೊ ತಂದು ಸಾರು ಮಾಡುವುದಕ್ಕೆ ನಾವು

ಅಲ್ಲಿ ಎಷ್ಟು ಕಷ್ಟಪಡುತ್ತಿದ್ದೇವೆನ್ನುವುದು ಅವರಿಗೆ ಗೊತ್ತಿದ್ದರೆ ಅವರು ಈ ಮಾತುಗಳನ್ನು ಆಡುತ್ತಿರಲಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಇವತ್ತು ಅಂತರ್ಜಲದ ಮಟ್ಟ ಸಂಪೂರ್ಣವಾಗಿ ಕುಸಿದು ಹೋಗುತ್ತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇದನ್ನು ಏನಾದರೂ ಅಭಿವೃದ್ಧಿ ಮಾಡಬೇಕೆನ್ನುವ ಹಾಳಜಿ ಸರ್ಕಾರಕ್ಕೆ ಇದ್ದರೆ ಆ ಚಿಂತನೆ ಸರ್ಕಾರಕ್ಕೆ ಇದ್ದರೆ ನೀವು ಇವತ್ತು ವಾಟರ್‌ಶೆಡ್ ಪ್ರೋಗ್ರಾಮ್‌ನಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಅಂತಹ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶವಾಗುತ್ತಿತ್ತು. ನೀವು ಆ ಚಿಂತನೆಯನ್ನು ಮಾಡಲಿಲ್ಲ. ನೀವು ಮಾಡಬೇಕಾಗಿತ್ತು ನಾವು ನಿರೀಕ್ಷೆ ಮಾಡಿದ್ದೆವು. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಒತ್ತನ್ನು ಕೊಡತಕ್ಕ ಕೆಲಸ ಇದರಿಂದ ಆಗುತ್ತಿತ್ತು. ಇವತ್ತು ಇಂತಹ ಮಂಡಳಿಯನ್ನು ಮಾಡಿ ಏನೂ ಕೆಲಸವನ್ನು ಸರ್ಕಾರ ಮಾಡದೆ ನಮ್ಮನ್ನೂ ಕೂಡ ಸದಸ್ಯರುಗಳನ್ನಾಗಿ ಮಾಡಿ ಕೊನೆಗೆ ಬರೀ ಶೂನ್ಯ ಸಾಧನೆಯನ್ನು ಮಾಡಿರುವುದಕ್ಕೆ ಖಂಡಿತವಾಗಿಯೂ ನಾವೆಲ್ಲಾ ಮನ ನೊಂದಿದ್ದೇವೆ. ಇನ್ನಾದರೂ ಕೂಡ ಸ್ವಲ್ಪ ಅವಕಾಶವಿದೆ. ಈಗಲಾದರೂ ಕೂಡ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಿ ಈ ಮಂಡಳಿಯನ್ನು ಪುನಶ್ಚೇತನಗೊಳಿಸಿ 75 ಕ್ಷೇತ್ರಗಳನ್ನು ಒಳಗೊಂಡಿರತಕ್ಕ ಏನೊಂದು ಬಯಲುಸೀಮೆ ಪ್ರದೇಶವಿದೆ ಅಭಿವೃದ್ಧಿ ಹೆಚ್ಚಿನ ರೀತಿಯಲ್ಲಿ ಆಗತಕ್ಕ ಪ್ರದೇಶವೇನಿದೆ, ಈ ಪ್ರದೇಶದಲ್ಲಿ ಹೆಚ್ಚಿನ ಹಾಮಗಾರಿಗಳನ್ನು ಕೈಗೊಳ್ಳತಕ್ಕ ಮನಸ್ಸನ್ನು ಸರ್ಕಾರ ಮಾಡುತ್ತದೆನ್ನುವ ಆಸೆಯನ್ನು ಇಟ್ಟುಕೊಂಡು ಅದರ ಬಗ್ಗೆ ನಾನು ಒತ್ತಾಯವನ್ನೂ ಸಹ ಮಾಡುತ್ತಿದ್ದೇನೆ, ಇದನ್ನು ಪುನಶ್ಚೇತನಗೊಳಿಸಿ ಇದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಹೆಚ್ಚು ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಆರ್.ಜಿ. ವೆಂಕಟಾಚಲಯ್ಯ (ದೊಡ್ಡಬಳ್ಳಾಪುರ) :— ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ನಮಗೆ ಆಗಬೇಕಾದ್ದು ಕೆರೆಗಳಲ್ಲಿ ಹೂಳು ತೆಗೆಯತಕ್ಕ ವಿಚಾರ. ಕಳೆದ ವರ್ಷ ಕೂಡ ಇದೇ ಸಂದರ್ಭದಲ್ಲಿ ಮಾತನಾಡಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು ಮತ್ತು ಮುಖ್ಯಮಂತ್ರಿಗಳು ಅದಷ್ಟು ಜಾಸ್ತಿ ಆ ಕೆಲಸವನ್ನು ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ಈಗ ಸಿದ್ಧರಾಮಯ್ಯನವರು ತಲೆ ಎಲ್ಲಾಡಿಸುತ್ತಿದ್ದಾರೆ. ಬಯಲುಸೀಮೆಯವರನ್ನು ಕಂಡರೆ ಸಿದ್ಧರಾಮಯ್ಯನವರಿಗೆ ಒಳಗಡೆ ಏನೋ ಸ್ವಲ್ಪ ವೈಷಮ್ಯ ಇದ್ದಹಾಗೆ ಕಾಣುತ್ತಿದೆ. ಮಾನ್ಯ ಮೊಯಲಿಯವರು ಹೇಳಿದಹಾಗೆ, ಡಿಪಿಎಪಿ ಪ್ರೋಗ್ರಾಮ್‌ನಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೆಂದು. ತೆಗೆದುಕೊಂಡಿದ್ದೇವೆ, ನಾನು ಬೆಂಗಳೂರು ಜಿಲ್ಲಾಪಂಚಾಯತಿ ಅಧ್ಯಕ್ಷನಾಗಿದ್ದಾಗ ನಾನು ಒಂದೂವರೆ ಕೋಟಿ ರೂಪಾಯಿ ಕೆಲಸ ನಾವು ತೆಗೆದುಕೊಂಡಿದ್ದೇವೆ. ಆದರೆ ಅದರಲ್ಲಿ ಹೂಳೆತ್ತುವ ಕಾರ್ಯಕ್ರಮ ಅದರಲ್ಲಿ ಇಲ್ಲ. ಮರ ಗಿಡ ಕೊಡತಕ್ಕದ್ದು. ಅಲ್ಲೇ ಕಮಿಟಿ ಇದೆ ಆ ಕಾರ್ಯಕ್ರಮ ಮಾಡತಕ್ಕ

ಕೆಲಸವಿದೆ. ಆದರೆ ಕೆರೆಗಳ ಹೂಳು ತೆಗೆಯತಕ್ಕ ಕಾರ್ಯಕ್ರಮ ಬಹಳ ಮುಖ್ಯವಾಗಿ ಆಗಬೇಕಾದದ್ದು ಬಯಲುಸೀಮೆಯೊಳಗೆ ಈ ಕಾರ್ಯಕ್ರಮವನ್ನು ಸಣ್ಣನೀರಾವರಿಯಲ್ಲಿ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೆವು. ಕಳೆದ ವರ್ಷ ಸಣ್ಣ ನೀರಾವರಿಯೊಳಗೆ ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕಿಗೆ 98 ಲಕ್ಷ ರೂಪಾಯಿಗಳ ಅಪ್ರೂವಲ್ ಕೊಟ್ಟು 13 ಸಾವಿರ ರೂಪಾಯಿಗಳನ್ನು ಇಟ್ಟಿದ್ದರು. 1998-99ಕ್ಕೆ 13 ಸಾವಿರ ರೂಪಾಯಿ. ಮೊನ್ನೆ ಇದರ ಬಗ್ಗೆ ತಿಪ್ಪೇಸ್ವಾಮಿಗಳಲ್ಲಿ ಗಲಾಟೆಮಾಡಿದೆವು. ಈ 13 ಸಾವಿರ ಏತಕ್ಕೆ ಇಟ್ಟಿದ್ದೀರಿ ಎಂದು. ಅದ್ದರಿಂದ ನಾನು ಕೇಳುವುದು ಎಷ್ಟೇ ಆಗಲಿ ಸರ್ಕಾರದಲ್ಲಿ ಏನಿದೆ ಆ ದುಡ್ಡನ್ನು ಇಟ್ಟು ಒಂದು ಕೆರೆ ಆಗಲಿ ಅಥವಾ ಎರಡು ಕೆರೆಯ ಹೂಳನ್ನು ತೆಗೆಯಬೇಕು. ನಾನು ಮಾನ್ಯ ಜಾಲಪ್ಪನವರು ಕಷ್ಟಪಟ್ಟು ಲಕ್ಷ್ಮೀದೇವಿಪುರದ ಟ್ಯಾಂಕ್‌ನ ಡೀಸಿಲ್ಟ್ ಮಾಡಿಸಿದೆವು. ಅದರದ್ದು ಇನ್ನು ಪೂರ್ತಿ ದುಡ್ಡು ಕೊಟ್ಟಿಲ್ಲ. ಹೋದವರ್ಷ ಕೊಡಲಿಕ್ಕೆ ಆಗಲಿಲ್ಲ ಈ ವರ್ಷದ ಬಜೆಟ್‌ನಲ್ಲಿ ಸೇರಿಸಿ ಎಂದು ಹೇಳುತ್ತಾರೆ. ದಯಮಾಡಿ ನಾನು ನಿಮ್ಮನ್ನು ಕೇಳಿಕೊಳ್ಳುವುದು ಇಷ್ಟೆ, ಬಯಲುಸೀಮೆಗೆ ದುಡ್ಡು ಜಾಸ್ತಿ ಕೊಡಬೇಕು. ದುಡ್ಡು ಜಾಸ್ತಿ ಕೊಟ್ಟರೂ ಕೂಡ ರಸ್ತೆ ಕೆಲಸಗಳನ್ನು ಕಡಿಮೆ ಮಾಡಿ ಕೆರೆಯ ಹೂಳು ತೆಗೆಯತಕ್ಕ ಕಾರ್ಯಕ್ರಮವನ್ನು ಮಾಡದೇ ಹೋದರೆ ಬಹುಶಃ ನಮಗೆ ನೀರು ಸಿಗುವುದಿಲ್ಲ. ಮೊನ್ನೆ ಮಳೆ ಬಂತು, ಕೆರೆಗಳೆಲ್ಲಾ ತುಂಬಿಕೊಂಡಿವೆ, ಮೂರು ದಿವಸಗಳಿಗೆ ಕೆರೆಗಳು ಇಂಗಿ ಹೋಗಿವೆ. ನಮ್ಮಲ್ಲಿ ಕೆರೆಗಳು ತುಂಬಿ ಕೋಡಿ ಬಿದ್ದಿದ್ದವು. ನೀರನ್ನು ವ್ಯವಸಾಯಕ್ಕೆ ಬಿಡಲಿಲ್ಲ ಎರಡು ತಿಂಗಳಿಗೆ ಆ ನೀರೆಲ್ಲಾ ಇಂಗಿ ಹೋಯಿತು. ಆ ಮಟ್ಟದಲ್ಲಿ ಇವತ್ತು ನೀರಿನ ಮಟ್ಟ ಕೆಳಗಡೆ ಹೋಗುತ್ತಿದೆ. ದಯಮಾಡಿ ಮಾನ್ಯ ಸಿದ್ದರಾಮಯ್ಯನವರು ನಮ್ಮಗಳ ಕಡೆಗೆ ಕರುಣೆಯಿಟ್ಟು, ಬೇರೆ ಮಂಡಳಿಗಳಿಗೆ ಕೊಡಿ ಬಿಡಿ ಅದನ್ನು ನಾವು ಕೇಳುವುದಿಲ್ಲ. ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಜಾಸ್ತಿ ದುಡ್ಡುಕೊಡಬೇಕು. ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕೇಂದ್ರ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸಬೇಕು. ಒಂದು ವೇಳೆ ನಿಮಗೆ ಹಣವನ್ನು ಕೊಡಲಿಕ್ಕೆ ಆಗದಿದ್ದರೆ ನಮಗೆ ಒಂದೂವರೆ ಎರಡೂವರೆ ಲಕ್ಷ ರೂಪಾಯಿಗಳನ್ನು ದಯವಿಟ್ಟು ಕೊಡಬೇಡಿ. ನಮ್ಮಲ್ಲಿ ಆರೂವರೆ ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದರು. ನಿನ್ನೆ ನನಗೊಂದು ಆರ್ಡರ್ ಬಂದಿದೆ ಮೂರೂವರೆ ಲಕ್ಷ ರೂಪಾಯಿಗಳ ಕೆಲಸ ಅಪ್ರೂವಲ್ ಮಾಡಿದ್ದೇವೆ. ಎರಡು ಲಕ್ಷ ನಿಮಗೆ ರಿಲೀಸ್ ಮಾಡಿದ್ದೇವೆಂದು. ಈ ವರ್ಷಕ್ಕೆ ಅದು ಎಲ್ಲರಿಗೂ ಬಂದಿದೆ. ಎರಡು ಲಕ್ಷ ನಿಮಗೆ ರಿಲೀಸ್ ಮಾಡಿದ್ದೇವೆಂದು. ಈ ವರ್ಷಕ್ಕೆ ಅದು ಎಲ್ಲರಿಗೂ ಬಂದಿದೆ. ಎರಡು ಲಕ್ಷ ಮೂರು ಲಕ್ಷಗಳಿಗೆ ನಮ್ಮನ್ನು ಫೀಲ್ಡ್ ಮಾಡಿ ನಮ್ಮನ್ನು ಸದಸ್ಯರನ್ನಾಗಿ ಮಾಡಿ ಏನು ಪ್ರಯೋಜನ? ಅಲ್ಲಿ ನಾವು ಕ್ಷೇತ್ರಕ್ಕೆ ಹೇಳುತ್ತೇವೆ, ನಮ್ಮ ಮಾನ್ಯ ಮಾಧುಸ್ವಾಮಿಯವರು ಹೇಳಿದಾಗೆ, ಶಾಸಕರಿಗೆ ಇರುವುದು ಇದೊಂದೇ ನಾವು ಧೈರ್ಯವಾಗಿ ಈ ಕೆಲಸ ಮಾಡಿಕೊಡುತ್ತೇವೆಂದು. ಅಲ್ಲಿ ನಾವು ಜನರಿಗೆ ನಿಮ್ಮ ಕೆಲಸ ಸೇರಿಸಿದ್ದೇವೆಂದು ಹೇಳಿಬಿಡುತ್ತೇವೆ. ಇಲ್ಲಿ ನೀವು ಕೆಲಸಗಳನ್ನು ಸೇರಿಸುವುದಿಲ್ಲ. ಅಲ್ಲಿ ನಾವು ಅವರುಗಳ ಕೈಯಲ್ಲಿ

ಉಗಿಸಿಕೊಳ್ಳಬೇಕು ಇಲ್ಲಿ ಕೆಲಸನೂ ಆಗುವುದಿಲ್ಲ. ದಯಮಾಡಿ ಇದಕ್ಕೆ ಜಾಸ್ತಿ ಅಮೌಂಟ್ ಕೊಡಬೇಕು. ನೀವು ಹಣ ಕೊಡುವುದಕ್ಕೆ ಆಗದೇಹೋದರೆ ದಯವಿಟ್ಟು ಈ ಮಂಡಳಿಯನ್ನು ಮುಚ್ಚಿಬಿಡಿ. ಆ ಎಸ್ಟಾಬ್ಲಿಷ್‌ಮೆಂಟ್ ಏತಕ್ಕೆ, ಅದಕ್ಕೊಬ್ಬ ಛೇರ್ಮನ್ ಏತಕ್ಕೆ? ಅದಕ್ಕೊಬ್ಬ ಸೆಕ್ರೆಟರಿ, ಅಲ್ಲೊಂದು ಕಮಿಟಿ ಅದೆಲ್ಲಾ ಏಕೆ? ದಯವಿಟ್ಟು ಈ ಕೆಲಸ ಮಾಡಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

+ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ):— ಮಾನ್ಯ ಛೇರ್ಮನ್‌ರವರು ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಕೊಡಿ. ಈಗಾಗಲೇ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಬಗ್ಗೆ ಇರತಕ್ಕ ಮಾಸ್ಟರ್‌ಮಾಂಶವನ್ನು ಮಾತನಾಡಿದಂತಹ ಸದಸ್ಯರುಗಳೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸ್ಥಾಪನೆ ಮಾಡಿದಂತಹ ಉದ್ದೇಶ, ಮಳೆ ಅತಿ ಕಡಿಮೆಬೀಳತಕ್ಕ ಪ್ರದೇಶದಲ್ಲಿ ಅಕಸ್ಮಕವಾಗಿ ಬೀಳತಕ್ಕ ಮಳೆಯ ನೀರನ್ನು ತಡೆದು ಇಟ್ಟುಕೊಳ್ಳಬೇಕು ಅಲ್ಲಿ ಅಂತರ್ಜಲವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕೆನ್ನುವ ಒಂದು ಸದುದ್ದೇಶದಿಂದ ಬಂದಂತಹ ಈ ಮಂಡಳಿ. ಅದರಲ್ಲೂ ವಿಶೇಷವಾಗಿ ಕೃಷಿ ಕಾರ್ಯಚಟುವಟಿಕೆಗಳನ್ನು ಹೆಚ್ಚಿಗೆ ಬಯಲುಸೀಮೆ ಪ್ರದೇಶದಲ್ಲಿ ಮಾಡಬೇಕು ಅದರಿಂದ ಅಲ್ಲಿನ ಜನಜೀವನದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಬೇಕೆನ್ನುವ ಒಂದು ಉದ್ದೇಶ ಸಹ ಇತ್ತು. ಆದರೆ ದುರಾದೃಷ್ಟ ಅದಕ್ಕೆ ಕನಿಷ್ಠ ಕೊಡತಕ್ಕಂಥ ಹಣವನ್ನು ಕೊಡಲಿಕ್ಕೆ ಆಗಲಿಲ್ಲ. ಈದ ಸಾಲ್ಲು ವರ್ಷಗಳಿಂದ ಕೇವಲ 4 ಕೋಟಿ 18 ಲಕ್ಷ ರೂಪಾಯಿಗಳನ್ನು ಈ ಬೋರ್ಡ್‌ಗೆ ಕೊಟ್ಟಿದ್ದಾರೆ. ಒಂದು ಕ್ಷೇತ್ರಕ್ಕೆ 6 ಲಕ್ಷದ 80 ಸಾವಿರ ಮಾತ್ರ ಬರುತ್ತದೆ. ಇಂತಹ ಒಂದು ಮಂಡಳಿಯಿಂದ ಕೇವಲ 6 ಲಕ್ಷದ 80 ಸಾವಿರ ರೂಪಾಯಿ ಅಂದರೆ, ನಮಗೆ ಒಂದು ತರಹ ನಗೆಪಾಟಲು ಆಗುತ್ತದೆ. ಇದರ ಮೂಲಭೂತ ಉದ್ದೇಶ ಆ ಪ್ರದೇಶಗಳಲ್ಲಿರತಕ್ಕ ಕೆರೆಗಳ ಹೂಳೆತ್ತಬೇಕು. ಅಕಸ್ಮಿಕವಾಗಿ ಬರತಕ್ಕ ಮಳೆಯ ನೀರನ್ನು ಆ ಕೆರೆಗಳಲ್ಲಿ ಶೇಖರಣೆ ಮಾಡಿಕೊಳ್ಳಬೇಕು, ಅದರಿಂದ ಅಂತರ್ಜಲ ಜಾಸ್ತಿ ಮಾಡಿಕೊಳ್ಳಬೇಕು. ಇವತ್ತು ನಾವು ಬೋರ್‌ವೆಲ್‌ಗಳಲ್ಲಿ 500-600 ಅಡಿ ಆಳಕ್ಕೆ ಹೋಗಿದ್ದೇವೆ. ಪರಿಸ್ಥಿತಿ ಬಹಳ ತೀವ್ರವಾಗಿ ಗಂಭೀರವಾಗಿದೆ. ಬಹುಶಃ ಇದೇರೀತಿ ಇನ್ನೊಂದು ಹತ್ತು ವರ್ಷ ಹೋದಿದ್ದೇ ಆದರೆ ನಮ್ಮ ಕೋಲಾರ ಜಿಲ್ಲೆ ಮತ್ತು ಕೆಲವು ಜಿಲ್ಲೆಗಳು ಬರಡಾಗಿ ಹೋಗುವಂತಹ ಪರಿಸ್ಥಿತಿ ಇದೆ. ಅಂತಹ ಒಂದು ಸನ್ನಿವೇಶ ಸಹ ಕಂಡುಬರುತ್ತಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇವತ್ತು ನೀವು ಬಯಲುಸೀಮೆ ಅಭಿವೃದ್ಧಿ ಮಂಡಳಿ ಜಾಗೂ ಪ್ರಾಜೆಕ್ಟ್‌ಗಳಿಗಾದ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಹೋಲಿಸಿದರೆ ಹೆಚ್ಚಿನ ಹಣವನ್ನು ಕೊಟ್ಟಿದ್ದೀರಿ. ನಾವೂ ಕೂಡ ಈ ಮಂಡಳಿಗೆ ಸಂಬಂಧಿಸಿದಂತೆ ಹೆಚ್ಚಿನ ಹಣ ಸಹಾಯವನ್ನು ಕೊಡಿಸಿಕೊಡಬೇಕೆಂದು ಒತ್ತಾಯವನ್ನೂ ಸಹ ತಂದಿದ್ದೇವೆ. ಮತ್ತೊಂದು ಒತ್ತಾಯವನ್ನು ಕೃಷಿ ಇಲಾಖೆಯ ಅಡಿಯಲ್ಲಿರತಕ್ಕ ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ಯೋಜನಾ ಇಲಾಖೆಯ ಅಡಿಯಲ್ಲಿ ಕೊಡಬೇಕು. ಆ ಯೋಜನೆಗೆ ಪ್ಲಾನಿಂಗ್ ಮಾಡಬೇಕಾದ ಸಂದರ್ಭದಲ್ಲಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯಾವರೀತಿ ಫ್ಲಾನಿಂಗ್ ನಲ್ಲಿ ಬರುತ್ತದೆಯೋ ಇದೂ ಸಹ ಅದರ ಅಡಿಯಲ್ಲಿ ಬಂದಾಗ ಅದಕ್ಕೆ ಶಾಶ್ವತವಾಗಿ ಬಜೆಟ್‌ನಲ್ಲಿ ಅನುದಾನ ಕೊಡತಕ್ಕಂಥ ಅವಕಾಶ ಲಭಿಸುತ್ತಿದೆ. ಈ ಕಾರಣದಿಂದ ಈಗಾಗಲೇ ಬಯಲುಸೀಮೆ ಅಭಿವೃದ್ಧಿ ಮಂಡಲಿಯಲ್ಲೂ ಇದರ ಬಗ್ಗೆ ನಿರ್ಣಯಮಾಡಿ ಸರ್ಕಾರಕ್ಕೆ ಒತ್ತಾಯವನ್ನು ತಂದಿದ್ದೇವೆ. ಆದ್ದರಿಂದ ಸರ್ಕಾರ ಶಿಫಾರಸ್ಸು ಮಾಡಿರತಕ್ಕಂಥ ಈ ಒಂದು ಕೃಷಿ ಇಲಾಖೆಯ ಅಡಿಯಲ್ಲಿ ಇರತಕ್ಕಂಥ ಇದನ್ನು ಯೋಜನಾ ಇಲಾಖೆಯ ಅಡಿಯಲ್ಲಿ ತರಬೇಕು ಮತ್ತು ಮುಂದೆ ಇದಕ್ಕೆ ಹೆಚ್ಚಿನ ಅನುದಾನ ಕೊಡಬೇಕೆಂದು ಆ ಪ್ರದೇಶದ ಜನತೆಯ ಪರವಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀಮತಿ ಎನ್. ಜ್ಯೋತಿರೆಡ್ಡಿ (ಗೌರಿಬಿದನೂರು) :— ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತು ಸದಸ್ಯರೆಲ್ಲಾ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ದುಡ್ಡು ಜಾಸ್ತಿ ಕೊಡಿ ಎಂದು ಕೇಳಿಕೊಂಡರು. ನನ್ನ ಕಷ್ಟ ಏನೆಂದರೆ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನೂ ಬಯಲುಸೀಮೆ ಅಭಿವೃದ್ಧಿ ಮಂಡಲಿಯಲ್ಲಿ ಸೇರಿಸಿದ್ದಾರೆ. ಗೌರಿಬಿದನೂರು ಗಡಿಪ್ರದೇಶವಾಗಿದ್ದು, ಅಲ್ಲಿ ಕುಡಿಯುವ ನೀರಿಗಾಗಿ 500 ರಿಂದ 530 ಅಡಿ ಆಳಕ್ಕೆ ಹೋಗಬೇಕಾದಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆದರೆ ನಮ್ಮ ಈ ಒಂದು ತಾಲ್ಲೂಕನ್ನು ಏಕೆ ಬಿಟ್ಟಿದ್ದೀರಿ, ಕಡೆಗಣಿಸಿದ್ದೀರಿ? ಆದ್ದರಿಂದ ಗೌರಿಬಿದನೂರು ತಾಲ್ಲೂಕು ಜನತೆಯ ಕೂಗನ್ನು ಇಲ್ಲಿ ಹೇಳುವುದಕ್ಕೆ ನಾನು ಇಚ್ಛಿಸುತ್ತಿದ್ದೇನೆ. ದಯವಿಟ್ಟು ನನ್ನ ಗೌರಿಬಿದನೂರು ತಾಲ್ಲೂಕನ್ನೂ ಸಹ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಸೇರಿಸಬೇಕು ಎಂದು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ. ಈ ಕಡೆ ಕೊರಟಗೆರೆ ಸೇರಿದೆ, ಆಕಡೆ ಮಧುಗಿರಿ ಸೇರಿದೆ, ಪಾವಗಡ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರಗಳೂ ಸೇರಿವೆ. ಮಧ್ಯದಲ್ಲಿ ಇರುವಂಥ ಗೌರಿಬಿದನೂರನ್ನು ಮಾತ್ರ ಬಿಟ್ಟಿದ್ದಾರೆ. ಈ ಮಾತನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಬಯಲುಸೀಮೆ ಅಭಿವೃದ್ಧಿ ಮಂಡಳಿ ಸದಸ್ಯತ್ವದಲ್ಲಿ ನಮ್ಮ ಗೌರಿಬಿದನೂರು ತಾಲ್ಲೂಕನ್ನೂ ಕೂಡ ಸೇರಿಸಿಕೊಳ್ಳಬೇಕು. ಆರು ಹೋಬಳಿಗಳನ್ನು ಒಳಗೊಂಡ ನನ್ನ ತಾಲ್ಲೂಕಿನಲ್ಲಿ ಒಂದು ಹೋಬಳಿ ಮಾನ್ಯ ಶ್ರೀರಾಮರೆಡ್ಡಿಯವರಿಗೆ ಸೇರಿದೆ. ಅವರು ಪ್ರಸ್ತಾಪ ಮಾಡುತ್ತಾರೆ ಎಂದು ನಾನು ಆಸೆಪಟ್ಟೆ. ಆದರೆ ಅವರು ಪ್ರಸ್ತಾಪ ಮಾಡಲಿಲ್ಲ. ಅದು ಇನ್ನು ಸ್ವಲ್ಪ ದಿವಸದಲ್ಲೇ ಡಸರ್ಟ್ ಆಗತಕ್ಕಂಥ ಪರಿಸ್ಥಿತಿ ಹೊಂದಿದೆ. ದಯವಿಟ್ಟು ಇದನ್ನು ಗಣನೆಗೆ ತೆಗೆದುಕೊಂಡು ಸರ್ಕಾರದವರು ಗೌರಿಬಿದನೂರು ತಾಲ್ಲೂಕನ್ನೂ ಸಹ ಬಯಲುಸೀಮೆ ಮಂಡಲಿಗೆ ಸೇರಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ವೈಸ್ ಚೇರ್ಮನ್ :— ಈಗ ಸಾಕಷ್ಟು ಚರ್ಚೆಯಾಗಿದೆ. ಇನ್ನು ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಬೇಕು. ಮಾನ್ಯ ವೀರಪ್ಪ ಮೊಯಿಲಿಯವರನ್ನು ಈ ಸಂದರ್ಭದಲ್ಲಿ ಅಭಿನಂದಿಸುವುದಕ್ಕೆ

ಇಚ್ಛಿಸಿದ್ದೇನೆ. ಏಕೆಂದರೆ ಅವರು ಈ ಪ್ರದೇಶದ ಬಗ್ಗೆ ಕಾಳಜಿ ಇಟ್ಟುಕೊಂಡು ಈ ಪ್ರದೇಶದ ಅಭಿವೃದ್ಧಿಯಾಗಬೇಕೆಂದು ಹೇಳಿ ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯ ರಚನೆಯನ್ನು ಮಾಡಿದರು. ಆದರೆ ಈ ಸರ್ಕಾರ ಇದರ ಬಗ್ಗೆ ಏಕೋ ಮಲತಾಯಿ ಧೋರಣೆಯನ್ನು ತಾಳಿದೆ. ಅದು ಏಕೆಂದು ನನಗೆ ಗೊತ್ತಿಲ್ಲ. ಸನ್ಮಾನ್ಯ ಬೈರೇಗೌಡರು ಮೊದಲನೇ ಸಲ ನಮ್ಮನ್ನು ಸಭೆ ಸೇರಿಸಿ ನಮಗೆ ಟಿ.ವಿ. ತೋರಿಸಿ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಹೇಳಿದಾಗ ಆ ಸಂದರ್ಭದಲ್ಲಿ ನಾವೆಲ್ಲರೂ ಬಹಳ ಖುಷಿಪಟ್ಟಿವು, ಏನೋ ನಮ್ಮ ಕ್ಷೇತ್ರದಲ್ಲಿ ಕೆಲಸ ಆಗುತ್ತದೆ ಎಂದು. ಕೆರೆ ಹೂಳನ್ನು ಎತ್ತುತ್ತಾರೆ ಎಂದು ನಾವು ಖುಷಿಯನ್ನು ಪಟ್ಟಿವು. ಇಬ್ಬರು ಮುಖ್ಯಮಂತ್ರಿಗಳನ್ನು ಸಭೆಗೆ ಕರೆಸಿ ಆಶ್ವಾಸನೆಯನ್ನು ಕೊಡಿಸಿದರು. ಆದರೆ ಏನೂ ಪ್ರಯೋಜನ ಆಗಲಿಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತು ಬಹುಶಃ ಹೆಚ್ಚುಮಂದಿ ಶಾಸಕರು ಇದ್ದಿದ್ದರೆ ಚೆನ್ನಾಗಿತ್ತು. ಇವತ್ತು ಬಯಲುಸೀಮೆ ಅಭಿವೃದ್ಧಿ ಮಂಡಲಿ ಬಗ್ಗೆ ಚರ್ಚೆಯಾಗುತ್ತದೆ ಎಂದು ಈ ಪ್ರದೇಶದಿಂದ ಬರತಕ್ಕಂಥ ಹೆಚ್ಚಿನ ಶಾಸಕರಿಗೆ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಬಾಲಕೃಷ್ಣ ಅವರೇ ಒಂದು ನಿಮಿಷ. ಈ ಅಭಿವೃದ್ಧಿ ಮಂಡಲಿ ಆಗಬೇಕು ಎಂದು ಹೇಳಿ ಈ ಕಡೆ ಕುಳಿತುಕೊಂಡು ಹೋರಾಟ ಮಾಡಿದ್ದರ ಮುಖಂಡತ್ವವನ್ನು ಮಾನ್ಯ ಬೈರೇಗೌಡರು ವಹಿಸಿದ್ದರು. ಇವತ್ತು ನೀವು ಮಾನ್ಯ ಮೊಯಿಲಿಯವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೀರಿ. ಈ ಕಡೆ ಕುಳಿತುಕೊಂಡು ಇದು ಆಗಲೇಬೇಕು ಎಂದು ಹೇಳಿದಾಗ ಬೈರೇಗೌಡರು, ನಾವೆಲ್ಲರೂ ಅವತ್ತು ಇಲ್ಲಿ ಇದ್ದೆವು. ಆದ್ದರಿಂದ ನೀವು ಅವರನ್ನು ಏಕೆ ಬಿಡುತ್ತೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ :— ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಇಷ್ಟೆ. ಮೊನ್ನೆ ನಮ್ಮ ಅಭಿವೃದ್ಧಿ ಮಂಡಲಿಯಲ್ಲಿ ಗಲಾಟೆಯಾಯಿತು ಮತ್ತು ಸಭೆ ಆಗಲಿಕ್ಕೇ ಬಿಡಲಿಲ್ಲ. ಏಕೆಂದರೆ ಮಾನ್ಯ ಮುದ್ದಹನುಮೇಗೌಡರು ಹೇಳಿದ ರೀತಿಯಲ್ಲಿ ಬರೇ ಕಾಂಟಿನ್ಜೆನ್ಸಿ ಹಣವನ್ನು ಕೊಡಿಸುವುದಕ್ಕೆ ಸಭೆಯ ಅವಶ್ಯಕತೆ ಇಲ್ಲ. ಅದನ್ನು ಅಲ್ಲೇ ತೆಗೆದುಕೊಳ್ಳಬಹುದಾಗಿತ್ತು. ಆದರೆ ನೀವು ಏನೋ ತೆಗೆದುಕೊಂಡುಬಂದು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೀರಿ ಎಂದು ಹೇಳಿ ಬಹಳ ಗಲಾಟೆಯಾಗಿ ಸಭೆ ಗದ್ದಲದಿಂದ ಮುಕ್ತಾಯವಾಯಿತು. ದಯಮಾಡಿ ನಾನು ಸರ್ಕಾರವನ್ನು ಕೇಳುವುದು ಇಷ್ಟೆ. ಇಲ್ಲಿ ಬೇರೆ ಮಂಡಲಿಗಿಂತ ಹೆಚ್ಚಿನ ರೀತಿಯಿಂದ ಕೆಲಸ ಆಗಬೇಕಾಗಿದೆ. ಏಕೆಂದರೆ ಬೇರೆ ಮಂಡಲಿಗಳು ಬಹಳ ಮಟ್ಟಿಗಿಂದ ಕೆಲಸ ಮಾಡಿಕೊಂಡುಬಂದಿವೆ. ನಮ್ಮದು ಇತ್ತೀಚೆಗೆ ಬಂದಿರುವಂಥ ಅಭಿವೃದ್ಧಿಮಂಡಲಿ ಆದ್ದರಿಂದ ಇದಕ್ಕೆ ಹೆಚ್ಚಿನ ಒತ್ತುಕೊಟ್ಟು ಈ ಭಾಗದ ಅಭಿವೃದ್ಧಿಗೆ ಅನುಕೂಲಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

+ ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ,

ಶ್ರೀ ಜೆ.ಸಿ. ಮಾಧುಸ್ವಾಮಿ :— ಉಪ ಮುಖ್ಯಮಂತ್ರಿಯವರ ಬಾಯಲ್ಲಿ ಹೇಳಿಸಿ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಅವರೂ ಮಾತನಾಡುತ್ತಾರೆ. ಬಹಳ ಪ್ರಾಮುಖ್ಯವಾದಂಥ, ವಿಚಾರದಲ್ಲಿ ಏಳು ಜನ ಮಾನ್ಯಸದಸ್ಯರುಗಳು ಭಾಗವಹಿಸಿ ಮಾತನಾಡಿದ್ದಾರೆ. ಈ ಬಯಲುಸೀಮೆ ಅಭಿವೃದ್ಧಿ ಮಂಡಲಿ ವ್ಯಾಪ್ತಿ ನಮ್ಮ ರಾಜ್ಯದ 75 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರತಕ್ಕಂಥಾದ್ದು ಇದೆ. ಈ 75 ಕ್ಷೇತ್ರಗಳಲ್ಲೂ ಸಹ ಮಳೆ ಸಾಮಾನ್ಯವಾಗಿ 18 ರಿಂದ 22 ಅಂಗುಲದಷ್ಟು ಸರಾಸರಿ ಮಳೆಯಾಗುತ್ತದೆ. ಮತ್ತೆ ಶೇಕಡಾ ನೀರಾವರಿ ಎಷ್ಟು ಎಂದು ಲೆಕ್ಕಹಾಕಿದರೂ ಸಹ ಅದು ಎಲ್ಲವೂ ಕೂಡ ಶೇಕಡಾ 30 ಕ್ಕಿಂತ ಕಡಿಮೆ ಈ ಭಾಗದಲ್ಲಿ ನೀರಾವರಿ ಆಗತಕ್ಕದ್ದು. ಅಂದರೆ ಭಾರಿ ನೀರಾವರಿ ಯೋಜನೆಗಳು ಇರತಕ್ಕಂಥಾದ್ದು ಯಾವ ಪ್ರದೇಶದಲ್ಲಿ ಕೂಡ ಇಲ್ಲ. ಸಣ್ಣ ನೀರಾವರಿ ಆಗತಕ್ಕಂಥ ಕೆರೆ, ಕುಂಟೆ ಮುಂತಾದವುಗಳಲ್ಲಿ ನೀರಾವರಿ ಆಗತಕ್ಕಂಥಾದ್ದು ಕೂಡ ಇಷ್ಟು ಕಡಿಮೆ ಇದೆ. ಈ ಭಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಾದರೆ ಸುಮಾರು 107 ಲಕ್ಷ ಹೆಕ್ಟೇರ್ ಪ್ರದೇಶ ಸಾಗುವಳಿಗೆ ಯೋಗ್ಯವಾಗಿದೆ. ಆದರೆ ಇದರಲ್ಲಿ ಈಗ ನೀರಾವರಿ ಆಗತಕ್ಕಂಥಾದ್ದು ಕೂಡ ಕೇವಲ 24 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ. 107 ಹೆಕ್ಟೇರ್ ಪ್ರದೇಶದಲ್ಲಿ 24 ಲಕ್ಷ ಹೆಕ್ಟೇರ್ ಮಾತ್ರ ನೀರಾವರಿ ಆಗುತ್ತಿದೆ. ಇದರಲ್ಲಿ ನಮ್ಮ ಅಂದಾಜು ಪೊಟೆನ್ಶಿಯಲ್ ಇರತಕ್ಕಂಥಾದ್ದು ಸುಮಾರು 54 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಈ ಅಂಕಿಅಂಶಗಳನ್ನು ನಾನು ಏಕೆ ಮಾಡುತ್ತಿದ್ದೇನೆ ಎಂದರೆ, ಈ ಭಾಗದಲ್ಲಿ ಇನ್ನು 50-100 ವರ್ಷಗಳಾದರೂ ಅಥವಾ ಸಾವಿರ ವರ್ಷಗಳಾದರೂ, ಯಾವುದೇ ಭೂಮಿ ಇರುವವರೆಗೆ ಆಗಲಿ ಇಲ್ಲಿ ಯಾವುದೇ ದೊಡ್ಡ ಜಲಾಶಯ ಬರುವುದಕ್ಕೆ ಸಾಧ್ಯತೆ ಇಲ್ಲವೇ ಇಲ್ಲ. ಇಂತಹ ಪ್ರದೇಶವನ್ನು ಅಭಿವೃದ್ಧಿಗೊಳಿಸಬೇಕು ಎನ್ನತಕ್ಕಂಥ ಕಾರಣದಿಂದಲೇ ಈ ಮಂಡಲಿಯನ್ನು ರಚನೆ ಮಾಡಿರತಕ್ಕಂಥಾದ್ದು. ಮಾನ್ಯ ಮಾಧುಸ್ವಾಮಿಯವರು ಹೇಳಿದಹಾಗೆ ನಾವು ಈ ಕಡೆ ಕುಳಿತಿದ್ದ ಸಂದರ್ಭದಲ್ಲಿ ನಾವೆಲ್ಲರೂ ಸಹ ಬಹುಶಃ ಅವತ್ತು ಈ ಮಸೂದೆ ಕಾನೂನು ಆದಾಗ, ಅಧಿವೇಶನದ ಕೊನೆಯ ದಿವಸದಲ್ಲಿ ನಾವೆಲ್ಲರೂ ಕೂಡ ಸೇರಿ, ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆಡಳಿತ ಪಕ್ಷದಿಂದಲೇ ಕೆಲವರಿಂದ ವಿರೋಧ ಬಂತು. ಆಗ ಅವರೂ ಸಹ ಮಾತನಾಡಿ ಇದೆಲ್ಲಾ ಸರಿಪಡಿಸುತ್ತೇನೆ ಎಂದು ಹೇಳಿ ಅವರ ಕಾಲದಲ್ಲಿ ಇದು ಕಾನೂನು ಆಯಿತು. ಇದನ್ನು ಜಾರಿಮಾಡತಕ್ಕಂಥಾದ್ದಕ್ಕೆ ನಮ್ಮ ಕಾಲದಲ್ಲಿ ಆಯಿತು. ನಾನೇ ಇದನ್ನು ಜಾರಿಕೊಟ್ಟೆ. ಆದರೆ ಇವತ್ತು ಈ ಹಣಕಾಸಿನ ಮುಗ್ಗಟ್ಟು ಈ ಮಂಡಳಿಗೆ ಇರತಕ್ಕಂಥಾದ್ದು ನಿಜ. ಮಾನ್ಯ ಸದಸ್ಯರು ಹೇಳಿರತಕ್ಕದ್ದರಲ್ಲಿ ಅತ್ಯಂತ ಕಡಿಮೆ ಹೇಳಿದ್ದಾರೆಂದು ನನ್ನ ಭಾವನೆ. ಏಕೆಂದರೆ ನಾನು ಈ ಭಾಗದಿಂದ ಬಂದಿದ್ದು ಬಹಳ ದೊಡ್ಡ ಆಸೆ ಇಟ್ಟುಕೊಂಡು ಈ ಮಂಡಲಿಯಿಂದ ದೊಡ್ಡ ಸಾಧನೆ

ಮಾಡಬೇಕು ಎನ್ನತಕ್ಕಂಥ ಗುರಿಯನ್ನು ಇಟ್ಟುಕೊಂಡು ಈ ಕಾನೂನನ್ನು ಜಾರಿಕೊಟ್ಟಿರತಕ್ಕಂಥಾದ್ದು. ಆದರೆ ಒಟ್ಟಾರೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನೂ ಸಹ ಗಮನಿಸಬೇಕಾಗುತ್ತದೆ. ಇವತ್ತು ನಾನು ಸ್ವಲ್ಪ ವೇಳೆಯನ್ನು ತೆಗೆದುಕೊಂಡರೆ ಕ್ಷಮಿಸಬೇಕು ಎಂದು ಕೇಳುತ್ತಾ ಇವತ್ತು ನಮ್ಮ ಪಾಲಿನ ನೀರು ಯು.ಕೆ.ಪಿ. ಪ್ರಾಜೆಕ್ಟ್‌ನಲ್ಲಿ ಆಂಧ್ರದ ಪಾಲಾಗದಿರತಕ್ಕಂಥಾದ್ದಕ್ಕೆ ಎರಡು ಸಾವಿರ ಇಸವಿ ಒಳಗಾಗಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕಾಗಿರತಕ್ಕಂಥಾದ್ದು ಮತ್ತು ಈ ಭಾಗಕ್ಕೆ ಬಂದರೆ ಕಾವೇರಿಯಿಂದ ಈಗಾಗಲೇ ತಮಿಳುನಾಡಿಗೆ ಸಾಕಷ್ಟು ನೀರು ಹರಿದುಹೋಗುತ್ತಿದೆ. ನಮ್ಮ ನೀರಿನ ಹಕ್ಕನ್ನು ನಾವು ಸ್ಥಾಪನೆ ಮಾಡಿಕೊಳ್ಳಬೇಕು ಎಂಬುದು ನಮ್ಮ ಮಾದ ಇದೆ. ಇದೇ ರೀತಿಯಲ್ಲಿ ವಿದ್ಯುತ್ ಅಭಾವದ ಕಾರಣದಿಂದ ನಾವು ವಿದ್ಯುಚ್ಛಕ್ತಿಗೂ ಕೂಡ ಹೆಚ್ಚಿನ ಹಣ ತೊಡಗಿಸಬೇಕಾದ ಅವಶ್ಯಕತೆ ಇದೆ. ಇಷ್ಟೆಲ್ಲ ಇದ್ದರೂ ಕೂಡ ಈ ಭಾಗಕ್ಕೂ ಕೂಡ ಹೆಚ್ಚಿನ ಆಸ್ಥೆಯನ್ನು ಕೊಡತಕ್ಕಂಥಾದ್ದು ಅಷ್ಟೇ ಅವಶ್ಯಕತೆ ಇದೆ. ಆದರೆ ಯಾವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಮಂಡಲಿಯೂ ಹಣಕಾಸಿನ ವಿಚಾರದಲ್ಲಿ ಸೊರಗಿದೆ ಎನ್ನುವುದನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಇವತ್ತು ಕೆಲವು ಅಂಕಿಅಂಶಗಳನ್ನು ಲಿಖಿತ ಹೇಳಿಕೆ ಮೂಲಕ ಕೊಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಚಿತ್ರದುರ್ಗವನ್ನು ಕೇಂದ್ರಸ್ಥಾನವಾಗಿ ಹೊಂದಿರುವ ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಲಿಯು 1995-96ರ ಸಾಲಿನಿಂದ ಕಾರ್ಯಾರಂಭ ಮಾಡಲು ಪ್ರಾರಂಭಿಸಿದೆ. ಈ ಮಂಡಲಿಯ ವ್ಯಾಪ್ತಿಗೆ ಹಿಂದಿನ 8 ಜಿಲ್ಲೆಗಳ 57 ತಾಲ್ಲೂಕುಗಳು ಒಳಪಟ್ಟಿದ್ದು ಇವುಗಳಲ್ಲಿ ಬರುವ 75 ವಿಧಾನಸಭಾ ಕ್ಷೇತ್ರಗಳೂ ಸಹ ಈ ಮಂಡಲಿಯ ವ್ಯಾಪ್ತಿಗೆ ಒಳಪಡುತ್ತವೆ. ಸದರಿ ಮಂಡಲಿ ಕಾರ್ಯಾರಂಭ ಮಾಡಲು ಪ್ರಾರಂಭಿಸಿದ ವರ್ಷದಿಂದ 98-99ನೇ ಸಾಲಿನವರೆಗೆ ದಿನಾಂಕ 31-12-98ವರೆಗೆ ಸರ್ಕಾರವು ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು ಕೆಳಗಡೆ ನೀಡಲಾಗಿದೆ. ಆಯವ್ಯಯದಲ್ಲಿ ಒದಗಿಸಿರುವ ಅನುದಾನ. 95-96ನೇ ಸಾಲಿನಲ್ಲಿ 597 ಲಕ್ಷ ರೂಪಾಯಿ ನಿಗದಿಪಡಿಸಿದ್ದು ಬಿಡುಗಡೆಮಾಡಲಾದ ಅನುದಾನ 372.75 ಲಕ್ಷ ರೂಪಾಯಿಗಳು. ಪ್ರಾರಂಭ ವರ್ಷದಲ್ಲಿ ಕೊನೆ ಅವಧಿಯಲ್ಲಿ ಹಣಬಿಡುಗಡೆ ಮಾಡಿದ್ದೇವೆ. ಆದರೆ ಅದನ್ನು ಖರ್ಚು ಮಾಡುವುದಕ್ಕೆ ಆಗಲಿಲ್ಲ. ಇದೇರೀತಿಯಲ್ಲಿ 96-97 ರಲ್ಲಿ, ಆಯವ್ಯಯದಲ್ಲಿ ಒದಗಿಸಿದ ಹಣ 647 ಲಕ್ಷ ರೂಪಾಯಿಗಳು. ಬಿಡುಗಡೆ

ಮಾಡಲಾದ ಅನುದಾನ 418 ಲಕ್ಷ ರೂಪಾಯಿಗಳು. ಅಡಳಿತ ಮಂಜೂರಾತಿ ನೀಡಿದ ಮೊತ್ತ 555.18 ಲಕ್ಷ ರೂ.ಗಳು ಅನುಷ್ಠಾನವಾದ ಕಾರ್ಯಗಳಿಗೆ ಮಂಡಳಿಯು ಬಿಡುಗಡೆ ಮಾಡಿದ ಅನುದಾನ 483.93, ಲಕ್ಷ ರೂ.ಗಳು ಕೈಗೆತ್ತಿಕೊಳ್ಳಲಾದ ಕೆಲಸಗಳು 328. 1997-98ನೇ ಸಾಲಿನಲ್ಲಿ 740 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು.

ಮತ್ತೆ 590 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆಡಳಿತಾಧಿಕಾರಿಗಳಿಗೆ ನೀಡಲಾದಂಥ ಹಣ 463 ಲಕ್ಷ ರೂಪಾಯಿಗಳು, ಅನುಷ್ಠಾನಾಧಿಕಾರಿಗಳಿಗೆ ಮಂಡಳಿಯು ಬಿಡುಗಡೆ ಮಾಡಿದ ಅನುದಾನ 366.98 ಲಕ್ಷ, 377 ಹಮಗಾರಿಗಳನ್ನು ಕ್ಷಿಗೆತ್ತಿಕೊಳ್ಳಲಾಗಿತ್ತು. 1998-99ನೇ ಸಾಲಿನಲ್ಲಿ 850 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು. 637.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆಡಳಿತ ಮಂಜೂರಾತಿ 410.29 ಲಕ್ಷ ರೂಪಾಯಿಗಳಿಗೆ ನೀಡಲಾಗಿತ್ತು. ಅನುಷ್ಠಾನಾಧಿಕಾರಿಗಳಿಗೆ ಮಂಡಳಿಯು ಬಿಡುಗಡೆ ಮಾಡಿರುವ ಅನುದಾನ 267.19 ಲಕ್ಷ ರೂಪಾಯಿಗಳು. ಒಟ್ಟು 345 ಹಮಗಾರಿಗಳನ್ನು ಕ್ಷಿಗೆತ್ತಿಕೊಳ್ಳಲಾಗಿತ್ತು. ಸದರಿ ಮಂಡಳಿಗೆ 1999-2000 ನೇ ಇಸವಿಗೆ ಅಂದರೆ ಮುಂದೆ ಬರತಕ್ಕ ಆಯವ್ಯಯದಲ್ಲಿ ಈ ರೀತಿಯಾಗಿ ಅನುದಾನವನ್ನು ಮಾನ್ಯ ಹಣಕಾಸಿನ ಮಂತ್ರಿಗಳು ನೀಡಿದ್ದಾರೆ. ಸಾಮಾನ್ಯ ಕಾರ್ಯಕ್ರಮ 850 ಲಕ್ಷ ರೂಪಾಯಿಗಳು. ವಿಶೇಷ ಘಟಕ ಯೋಜನೆ 360 ಲಕ್ಷ ರೂಪಾಯಿಗಳು, ಗಿರಿಜನ ಉಪಯೋಜನೆ 90 ಲಕ್ಷ ರೂಪಾಯಿಗಳು. ಒಟ್ಟು 1300 ಲಕ್ಷ ರೂಪಾಯಿಗಳನ್ನು ಬರತಕ್ಕ ಆಯವ್ಯಯದಲ್ಲಿ ಒದಗಿಸಿದ್ದಾರೆ. ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನವನ್ನು ಬಳಸಿಕೊಂಡು ಮಂಡಳಿಯು ತನ್ನ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಂಡಳಿಯ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತದೆ. ಈ ರೀತಿಯಾಗಿ ಸೂಕ್ಷ್ಮವಾಗಿ ಈ ಮಂಡಳಿಯ ಕಾರ್ಯಕ್ರಮವನ್ನು ನಾನು ನೀಡುತ್ತಾ, ಇವತ್ತು ಕೆಲವು ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಮತ್ತೆ ಕೆಲವು ಸದಸ್ಯರು ಬಹಳ ಸಿಟ್ಟಿನಿಂದ ಕೂಡ ಮಾತನಾಡಿದ್ದಾರೆ. ಅವೆಲ್ಲವನ್ನೂ ನಾವು ಅರ್ಥ ಮಾಡಿಕೊಂಡಿದ್ದೇವೆ. ಬರತಕ್ಕೂಥ ವರ್ಷದಲ್ಲಿ 13 ಕೋಟಿ ರೂಪಾಯಿಗಳನ್ನು ನಾವೇನು ಒದಗಿಸಿದ್ದೇವೆ, ಅದರ ಜೊತೆಗೆ ಇನ್ನೂ 7 ಕೋಟಿ ರೂಪಾಯಿಗಳನ್ನು ಅಂದರೆ...

ಶ್ರೀ ಕೆ.ಎಸ್. ಬೇಳಗಿ :— ಬಯಲುಸೀಮೆ ಹಣದಲ್ಲಿ 8 ಕೋಟಿ ರೂಪಾಯಿಗಳು ಎಸ್.ಸಿ.ಪಿಗೆ ಹೋಗುತ್ತದೆ....

ಶ್ರೀ ಸಿ. ಭೈರೇಗೌಡ :— ಎಲ್ಲಾ ಲೆಕ್ಕ ಶೀರ್ಷಿಕೆಯಲ್ಲೂ ಈ ಹಣವನ್ನು ನಾವು ಕಳೆಯಬೇಕಾಗುತ್ತದೆ. ಅದು ನಿಜ, ನೀವು ಹೇಳುವುದನ್ನೂ ಹೇಳುತ್ತೇನೆ. ನಾವು ಒಪ್ಪಿಕೊಂಡಿರತಕ್ಕ ನೀತಿ, ಅದನ್ನು ಕಡಿಮೆ ಮಾಡುವುದಕ್ಕೂ ಆಗುವುದಿಲ್ಲ. ನಮ್ಮ ನಿಯಮದ ಪ್ರಕಾರ ಅದನ್ನು ಕೊಡಲೇಬೇಕಾಗುತ್ತದೆ. ಅದೆಲ್ಲವನ್ನೂ ಕೇಂದ್ರೀಕರಿಸಿ ನಾವು ಬೇರೆ ಬೇರೆ ಕಾರ್ಯಕ್ರಮಗಳಿಗೆ ಬಳಸತಕ್ಕೂಂತಾದ್ದು ಉಂಟು. ಆ ಹಣವನ್ನು ನಾವು ಖರ್ಚು ಮಾಡಲೇಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು, ಈ ಪೂರಕ ಬೇಡಿಕೆಗಳಲ್ಲಿ ಬರತಕ್ಕೂಂಥ ವರ್ಷದಲ್ಲಿ 7 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ನೀಡುವುದಾಗಿ ಭರವಸೆಯನ್ನು ಕೊಟ್ಟಿರುತ್ತಾರೆ. ಮಾನ್ಯ ಸದಸ್ಯರು ಹೇಳಿರತಕ್ಕೂಂಥ ಅಭಿಪ್ರಾಯಗಳನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಅರ್ಥಮಾಡಿಕೊಂಡಿದ್ದಾರೆ. ಅವರ

ಒತ್ತಾಯಕ್ಕೆ, ಮಂತ್ರಿಗಳು ಸಹಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆ ಭಾಗದಿಂದ ಬಂದಿರುವವರಲ್ಲಿ ನಾನೂ ಸಹ ಒಬ್ಬ ಸದಸ್ಯನಾಗಿರುವುದರಿಂದ 7 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಅನುದಾನವಾಗಿ ಕೊಡುತ್ತೇನೆಂದು ಭರವಸೆ ಕೊಟ್ಟಿರುವುದರಿಂದ, ಮಾನ್ಯ ಅರ್ಥಮಂತ್ರಿಗಳಿಗೆ ನನ್ನ ಪರವಾಗಿಯೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಮಂಡಳಿಗೆ ಇನ್ನೂ ಅವಶ್ಯಕತೆ ಇದೆ, ಇಲ್ಲ ಎಂದು ನಾನು ಹೇಳುತ್ತಾ ಇಲ್ಲ.

-ಗೊಂದಲ-

ಶ್ರೀ ಜೆ.ಸಿ. ಮಾಧುಸ್ವಾಮಿ :— ಎಸ್.ಸಿ.ಪಿ ಮತ್ತು ಟಿಎಸ್‌ಪಿ ಬಿಟ್ಟು 20 ಕೋಟಿ ರೂ. ಕೊಡಬೇಕು.

-ಗೊಂದಲ-

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ದಯವಿಟ್ಟು ಈ ವಿಚಾರವಾಗಿ ಮಾನ್ಯ ಸಿದ್ದರಾಮಯ್ಯನವರು ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :— ಮಾನ್ಯ ಭೈರೇಗೌಡರು ಆ ಭಾಗದಿಂದ ಬಂದಂಥವರು ಮತ್ತು ಮಾನ್ಯ ಕೃಷಿ ಸಚಿವರು. ಇದರ ಬಗ್ಗೆ ಹೆಚ್ಚು ಆಸಕ್ತಿ ಇಟ್ಟುಕೊಂಡು, ಆ ಭಾಗದಲ್ಲಿ ಹೆಚ್ಚು ಅಭಿವೃದ್ಧಿಪಡಿಸಬೇಕು ಎಂಬ ಕಾಳಜಿಯನ್ನು ಏನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಆ ಕಾಳಜಿಯನ್ನು ಅವರೂ ಕೂಡ ಇಟ್ಟುಕೊಂಡಿದ್ದಾರೆ ಮತ್ತು ನಮಗೂ ಆ ಬಗ್ಗೆ ಎಲ್ಲಿ ನೀರಾವರಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಮಳೆ ಆಶ್ರಯದಲ್ಲಿ ವ್ಯವಸಾಯ ಮಾಡಬೇಕಾಗಿದೆ ಮತ್ತು ಕೆರೆಗಳ ಮೂಲಕ ಸಣ್ಣ ನೀರಾವರಿ ವ್ಯವಸಾಯ ಮಾಡಬೇಕಾಗಿದೆ, ಈ ಪ್ರದೇಶಗಳ ಅಭಿವೃದ್ಧಿ ಮಾಡಬೇಕೆಂಬುದರ ಬಗ್ಗೆ ಎರಡನೇ ಮಾತಿಲ್ಲ. ಏಕೆಂದರೆ, ಆ ಭಾಗದ ಜನರ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಕೂಡ ಸುಧಾರಣೆಯಾಗಬೇಕಾಗುತ್ತದೆ. ಆದರೆ, ಇರತಕ್ಕಂಥ ನಮ್ಮ ಸಂಪನ್ಮೂಲಗಳ ಇತಿಮಿತಿಯೊಳಗೆಡೆ ಯಾವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕೆಂಬುದನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನೀರಾವರಿ, ವಿದ್ಯುತ್, ಪ್ರಾಥಮಿಕ ಶಿಕ್ಷಣ ಹೀಗೆ, ಇವುಗಳಿಗೂ ಕೊಡಬೇಕೆಂಬುದಕ್ಕೆ ಯಾವುದೇ ಸದಸ್ಯರು ಭಿನ್ನಾಭಿಪ್ರಾಯವನ್ನು ಇಟ್ಟುಕೊಂಡಿಲ್ಲ. ಇದರ ಜೊತೆಗೆ ನಿಮ್ಮ ಭಾಗದ ಕೆಲಸ ಕೂಡ ಆಗಬೇಕು, ಅದಕ್ಕೆ ಹೆಚ್ಚು ಹಣ ಒದಗಿಸಬೇಕು ಈ ನಿಮ್ಮ ಬೇಡಿಕೆ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಮತ್ತು ಹೆಚ್ಚು ಹಣ ಕೊಡಬಾರದು ಎಂದು ಹೇಳತಕ್ಕಂಥವನು ನಾನಲ್ಲ. ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಹಣ ಒದಗಿಸಬೇಕಾಗುತ್ತದೆ. ಹಿಂದೆ, ಇದೇ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ 7 ಕೋಟಿ 40 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಇದನ್ನು ಇನ್ನೂ ಹೆಚ್ಚಿಸಬೇಕೆಂಬ ವಾದವನ್ನು ಆ ಭಾಗದಿಂದ ಬಂದ ಎಲ್ಲಾ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ, ಒತ್ತಾಯ ಮಾಡಿದರು ಮತ್ತು ಧರಣಿಯನ್ನು ಕೂಡ ಮಾಡಿದ್ದಾರೆ. ಅವತ್ತು ನಾನು ಏನು ಹೇಳಿದ್ದೆ. ಸಾಧ್ಯವಾದ ಮಟ್ಟಿಗೆ ಹೆಚ್ಚು ಮಾಡೋಣವೆಂದು

ಹೇಳಿದ್ದೇನೆ. ನಾನು ಇಷ್ಟೇ ಹೆಚ್ಚು ಮಾಡುತ್ತೇನೆಂದು ಹೇಳಿರಲಿಲ್ಲ. 1998-99ರಲ್ಲಿ ನಾವು 13 ಕೋಟಿ ರೂಪಾಯಿಗಳನ್ನು ಅಯವ್ಯಯದಲ್ಲಿ ಇಟ್ಟರೂ ಕೂಡ, ಅದರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಹಣ ಫ್ರೋಢೀಕರಣ ಮಾಡಲಾಗುತ್ತದೆ. ಎಲ್ಲಾ ಕಾರ್ಯಕ್ರಮಗಳಲ್ಲೂ, ಇದಕ್ಕೆ ತೆಗೆದುಕೊಳ್ಳುತ್ತಾರೆ. ಹಾಗೆಯೇ ಇದರಲ್ಲೂ ಕೂಡ ಎಸ್‌ಸಿಪಿಗೆ ಮತ್ತು ಟಿಎಸ್‌ಪಿಗೆ ತೆಗೆದುಕೊಳ್ಳುತ್ತಾರೆ. ಹಾಗಾಗಿ, 13 ಕೋಟಿ ರೂ.ಗಳು ಇಟ್ಟರೂ ಕೂಡ, ಇದಕ್ಕೋಸ್ಕರವೇ ಅಷ್ಟೂ ಹಣ ಖರ್ಚಾಗುವುದಿಲ್ಲ. ಎಸ್‌ಸಿ ಮತ್ತು ಎಸ್‌ಟಿ ಯವರಿಗೆ ಪೂಲ್ ಮಾಡಿದಂಥ ಹಣ, ಆ ವರ್ಗದ ಜನರಿಗೆ ಖರ್ಚಾಗುತ್ತದೆ. ಇಲ್ಲಿಯೂ ಕೂಡ ಆ ವರ್ಗದ ಜನ ಇರುತ್ತಾರೆ. ಈ ಪ್ರದೇಶದಲ್ಲೂ ಕೂಡ ಎಸ್‌ಸಿ ಎಸ್‌ಟಿ ಜನಗಳು ಇರುತ್ತಾರೆ. ಇಲ್ಲಿಟ್ಟಿರತಕ್ಕ ಹಣದಲ್ಲಿ ತೆಗೆದು, ಇವರ ಅಭಿವೃದ್ಧಿಗೋಸ್ಕರವೇ ಖರ್ಚು ಮಾಡುವಂತಾದ್ದು. ಇದು ಒಂದೇ ಕಾರ್ಯಕ್ರಮದಲ್ಲಿ ಅಲ್ಲ. ಎಲ್ಲಾ ಕಾರ್ಯಕ್ರಮಗಳಲ್ಲೂ ಪೂಲ್ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದೇವೆ. ಎಲ್ಲಾ ಮಾನ್ಯ ಸದಸ್ಯರಿಗೂ ಇದು ತಿಳಿದಿರತಕ್ಕ ವಿಚಾರ. ಈಗಾಗಲೇ ಬೈರೇಗೌಡರು ಸರ್ಕಾರದ ಪರವಾಗಿ ಹೇಳಿದ್ದಾರೆ. 1999-2000ನೇ ಇಸವಿಗೆ ಈ 13 ಕೋಟಿ ಜೊತೆಗೆ, ಇನ್ನೂ 7 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ನಾನೂ ಕೂಡ ಅವರು ಹೇಳಿರತಕ್ಕ ಮಾತನ್ನು ಅನುಮೋದನೆ ಮಾಡುತ್ತೇನೆ.

ಶ್ರೀ ಜಿ.ಸಿ.ಮಾಧುಸ್ವಾಮಿ :— ಆ ಎರಡೂ ಯೋಜನೆ ಬಿಟ್ಟು 20 ಕೋಟಿ ಕೊಡಬೇಕು.

ಮಾನ್ಯ ಸದಸ್ಯರು :— ದಯಮಾಡಿ ಇನ್ನು 5 ಕೋಟಿ ರೂ. ಜಾಸ್ತಿ ಮಾಡಿ ಸ್ವಾಮಿ. ತಾವು 25 ಕೋಟಿ ರೂ. ಕೊಡಲೇಬೇಕು.

ಶ್ರೀ ಸಿದ್ಧರಾಮಯ್ಯ :— ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಹಣವನ್ನು ತೆಗೆಯಲೇಬೇಕಾಗುತ್ತದೆ. ನಾನು ಸುಮ್ಮನೆ ಇಲ್ಲಿ ಭರವಸೆ ಕೊಡುವುದು, ನಂತರ ಭರವಸೆಯಿಂದ ಹಿಂದಕ್ಕೆ ಹೋಗುವುದು, ಅದು ಆಗುವುದಿಲ್ಲ. ಇದರ ಜೊತೆಗೆ ನಾನು ಏನು ಹೇಳುತ್ತೇನೆಂದರೆ, ಆ ಮಂಜಿಳ ಇನ್ನೂ ಹೆಚ್ಚು ಎಫೆಕ್ಟೀವ್ ಆಗಿ ಕೆಲಸ ಮಾಡಬೇಕಾದರೆ ಏನೇನು ಮಾಡಬೇಕು. ಅದರಲ್ಲಿ ಏನೇನು ತೊಂದರೆಗಳಿವೆ, ಅವುಗಳನ್ನೆಲ್ಲಾ ನಿವಾರಣೆ ಮಾಡಿಕೊಳ್ಳಬೇಕು. ಅಲ್ಲಿ ಕೆಲಸ ಮಾಡಬೇಕಾದ ಸಿಬ್ಬಂದಿ ಇಲ್ಲ, ಅವಕ್ಕೆ ಒಬ್ಬ ಸಿಬ್ಬಂದಿಯವರನ್ನು ನೇಮಕ ಮಾಡುವಂತಾದ್ದು ಆಗಬೇಕು. ಸಣ್ಣಪ್ಪ ಮೊಯ್ಲಿಯವರು ಹೇಳಿದಂತೆ, ಈ ಕಾರ್ಯಕ್ರಮಗಳ ವಿಚಾರದಲ್ಲಿ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತುಕತೆ ಅಲ್ಲಿಂದ ಬರಬೇಕಾದ ಹಣವನ್ನೂ ಇದರ ಜೊತೆಗೆ ಸೇರಿಸೋಣ. ಮತ್ತು ಎಷ್ಟು ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೋ ಅದನ್ನು ಮಾಡೋಣ. ನಾವು ಮಾತುಕತೆಯಾಡುತ್ತಿವೆ ಮತ್ತು ಮಾನ್ಯ ಬೈರೇಗೌಡರೂ ಹೋದಾಗ ಸಂಬಂಧಪಟ್ಟ

ಇಲಾಖೆಯ ಮಂತ್ರಿಯವರ ಜೊತೆಗೆ ಮಾತನಾಡಿ, ಇದಕ್ಕೆ ಇನ್ನೂ ಹೆಚ್ಚು ಹಣ ಕೊಡುವುದಕ್ಕೆ ಪ್ರಯತ್ನ ಮಾಡೋಣ. ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ಏಕೆಂದರೆ, ನಾವೂ ಕೂಡ ಅಂತಹ ಪ್ರದೇಶದಿಂದಲೇ ಬಂದಿರುತ್ತೇವೆ. ಅದು ಎಲ್ಲೋ ಸ್ವಲ್ಪ ನೀರಾವರಿ ಇರುವುದರಿಂದ ಬಿಟ್ಟುಬಿಟ್ಟಿದ್ದಾರೆ. ಅದು ಏನೇ ಇರಲಿ ಅದರ ಬಗ್ಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಸಹ ಅಂಥಾದ್ದೇ ಪ್ರದೇಶದಿಂದ ಬಂದಿರುವುದರಿಂದ ಅಲ್ಲಿನ ಜನರ ಸಮಸ್ಯೆಗಳು, ಆ ಭಾಗದ ಸಮಸ್ಯೆಗಳು ಗೊತ್ತಿದ್ದೂ ಕೂಡ..

ಶ್ರೀ ಜೆ.ಸಿ. ಮಾಧುಸ್ವಾಮಿ :— ಯಾವ ಪಕ್ಷದ ಸರ್ಕಾರ ಬಂದರೂ ಸಹ ಸ್ಟೇಟ್ ಫೈನಾನ್ಸ್ ನಿಮ್ಮ ಕೈಯಲ್ಲಿಯೇ ಇರುತ್ತದೆಯಲ್ಲಾ.

ಶ್ರೀ ಸಿದ್ದರಾಮಯ್ಯ :— ರಾಜಶೇಖರ ಮೂರ್ತಿಯವರು 11 ತಿಂಗಳು ಇದ್ದರು, ಅದು ಆದ ಮೇಲೆ ನಾನೇ ಇದ್ದದ್ದು. ಅದಕ್ಕಿಂತ ಹಿಂದೆ ಯಾರೂ ಫೈನಾನ್ಸ್ ಮಿನಿಸ್ಟರ್ಸ್ ಇರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇಲ್ಲ ಸಾರ್ ಇನ್ನೊಂದು 3 ಕೋಟಿ ರೂ. ಜಾಸ್ತಿ ಮಾಡಲೇಬೇಕು.

ಶ್ರೀ ಸಿದ್ದರಾಮಯ್ಯ :— ಯಾರೇ ಹಣಕಾಸಿನ ಮಂತ್ರಿಗಳಾಗಿದ್ದರೂ ಸಹ ತಾರತಮ್ಯ ಮಾಡುವುದಕ್ಕೆ ಆಗುವುದಿಲ್ಲ. ಹಣಕಾಸಿನ ಮಂತ್ರಿಗಳು ಡಿಸ್ಕ್ರಿಮಿನೇಟ್ ಹಣ ಎಂದು ಇಟ್ಟುಕೊಂಡಿರುವುದಿಲ್ಲ. ಇಲ್ಲಿ ತಾವುಗಳು ಶಾಸಕ ಸಭೆಯಲ್ಲಿ ಎನು ಹಣ ಮಂಜೂರು ಮಾಡಿ ಕೊಡುತ್ತೀರಿ ಬೇರೆ ಬೇರೆ ಬಾಬುಗಳಿಗೆ ಏನು ಹಣ ಮಂಜೂರು ಮಾಡಿ ಕೊಡುತ್ತೀರಿ ಅದರಂತೆ ನಾವು ಹಣ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಎಸ್‌ಸಿಪಿ ಮತ್ತು ಟಿಎಸ್‌ಪಿ ಬಿಟ್ಟು 20 ಕೋಟಿ ರೂಪಾಯಿಗಳಾದರೂ ನಮಗೆ ತಾವು ಕೊಡಬೇಕು.

ಶ್ರೀ ಸಿದ್ದರಾಮಯ್ಯ :— ಮಾನ್ಯ ಸದಸ್ಯರು ದಯಮಾಡಿ ಈ ಸಾರಿ 1999 ಮತ್ತು 2000 ಇಸವಿಗೆ ಸರ್ಕಾರದಿಂದ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಆ ಎರಡು ಸ್ಕೀಮ್ ಬಿಟ್ಟು.

ಶ್ರೀ ಸಿದ್ದರಾಮಯ್ಯ :— ಕೇಂದ್ರ ಸರ್ಕಾರದಿಂದ ಏನಾದರೂ ಹಣ ಬಂದರೆ ಆ ಹಣವನ್ನು ಸಹ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಹೆಚ್.ಜಿ. ಬಾಲಕೃಷ್ಣ, ಹಾಗೂ ಇನ್ನಿತರೆ ಮಾನ್ಯ ಸದಸ್ಯರು ಧರಣಿ ಮಾಡಿದರು)

ಶ್ರೀ ವಿ. ಮುನಿಯಪ್ಪ :— ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ತೆಗೆದುಕೊಳ್ಳಬೇಕೆಂದು ನಾವು ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಕೃಷಿ ಇಲಾಖೆಯಿಂದ ಈ ಹಣವನ್ನು ತೆಗೆದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿ ಕಳುಹಿಸಿದ್ದೇವೆ. ಮಂಡಲಿಯಲ್ಲಿ ತೀರ್ಮಾನ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೇವೆ. ಮಂಡಲಿಯಲ್ಲಿ ತೀರ್ಮಾನ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ :— ಈಗ ಕೃಷಿ ಇಲಾಖೆಯ ಅಡಿಯಲ್ಲಿದೆ. ಕೃಷಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಅದು ಅಲ್ಲಿಯೇ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ :— ಮಾನ್ಯ ಮುನಿಯಪ್ಪನವರು ಹೇಳುವುದರಲ್ಲಿ ಸ್ವಲ್ಪ ಅರ್ಥ ಇದೆ. ತಾವು ಹಣಕಾಸಿನ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು. ತಾವು ಕೃಷಿ ಇಲಾಖೆಯಲ್ಲಿ ನಿರ್ವಹಣೆಗೆ ಇಡಿ. ಆದರೆ ಏನಾಗುತ್ತದೆ ಅಂದರೆ ನಾನೂ ಕೂಡ ತಮ್ಮ ಅಲೋಕೇಷನ್ ಅನ್ನು ಅಬ್ಜರ್ವ್ ಮಾಡಿದಾಗ ಅದು ಏನಾಗಿದೆ ಅಂದರೆ ಕೃಷಿ ಇಲಾಖೆಯ ಸೆಕ್ಟಾರ್‌ನಲ್ಲಿಯೇ ಅದು ಬರುತ್ತದೆ. ಇದರಿಂದ ನಿಮಗೆ ಹೆಚ್ಚು ಹಣ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿ ಮತ್ತು ಹೈದ್ರಾಬಾದ್ ಅಭಿವೃದ್ಧಿ ಮಂಡಲಿಯಲ್ಲಿ ಅದಕ್ಕೆ ಸಪರೇಟ್ ಆಗಿ ಅಲೋಕೇಷನ್ ಇರುವುದರಿಂದ ತಾವು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಹೆಚ್ಚುವರಿಯಾಗಿ ಕೊಡುವುದಕ್ಕೆ ಆಗುತ್ತದೆ. ಆದರೆ ಇದು ಕೃಷಿ ಇಲಾಖೆಯಲ್ಲಿಯೇ ಬರುವುದರಿಂದ ನಿರ್ವಹಣೆಗೆ ಕೃಷಿ ಇಲಾಖೆಗೆ ಬಿಟ್ಟುಬಿಡಿ. ಆದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಇದಕ್ಕೆ ಪ್ರತ್ಯೇಕವಾದ ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿರುವಂತೆ ಈ ಮಂಡಲಿಯಲ್ಲಿಯೂ ಅದರ ಕಾರ್ಯಕ್ರಮಗಳಿಗೆ ಸೀಮಿತಗೊಂಡು ನಿರ್ವಹಣೆಗೆ ಕೃಷಿ ಇಲಾಖೆಗೆ ಬಿಟ್ಟು ಇಲ್ಲದಿದ್ದರೆ ಏನಾಗುತ್ತದೆ ಅಂದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕೃಷಿ ಇಲಾಖೆಯವರು ಚರ್ಚೆಗೆ ಹೋಗುವಾಗ ಬೇರೆ ಎಲ್ಲಾ ಒಂದು ಅದ್ಭುತವಾದ ಕ್ಷೇತ್ರವನ್ನು ನೋಡುವಾಗ ಏನಾಗುತ್ತದೆ ಅಂದರೆ ಕೃಷಿ ಇಲಾಖೆಯಲ್ಲಿಯೇ ಈ ಬಡಪಾಯಿ ಹಂಚಿಕೊಂಡಂತೆ ಕೃಷಿ ಇಲಾಖೆಯ ಹಣವನ್ನು ಹಂಚಿಕೊಂಡಂತೆ ಆಗುತ್ತದೆ. ಅದು ಅವರು ಹೇಳುವ ಪಾಯಿಂಟ್ ಇದನ್ನು ಕನ್ವಿಡರ್ ಮಾಡಿ. ಈಗ ನಾನು ಒಂದು ಆರ್ಟಿಕಲ್ ಓದಿದೆ. ಅದು ಏನೆಂದರೆ ಅತಿವೃಷ್ಟಿಗಿಂತಲೂ ಕೂಡ ಅನಾವೃಷ್ಟಿ ಈ ದೇಶವನ್ನು ಹೆಚ್ಚು ಬಾಧಿಸುವಂತಹ ಒಂದು ವಿಚಾರ. ಮಲೆನಾಡು ಅಭಿವೃದ್ಧಿಮಂಡಲಿ ಇರುವಂತಾದ್ದು ಅತಿವೃಷ್ಟಿ ಬಂದರೂ ಕೂಡ ಜನ ಸುಧಾರಿಸಿಕೊಳ್ಳಬಹುದು, ಪುನಃ ಅದನ್ನು ನಿರ್ಮಾಣ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ, ಆದರೆ ಅನಾವೃಷ್ಟಿಯ ಸ್ಥಳಗಳು ಏನು ಇದೆ

ಅನಾವೃಷ್ಟಿಯ ಪ್ರದೇಶಗಳನ್ನು ಒಂದು ರೀತಿಯಲ್ಲಿ ಅದು ಕ್ಯಾನ್ಸರ್ ಇದ್ದಂತೆ. ಆ ಪ್ರದೇಶ, ಆದ್ದರಿಂದ ಅತ್ಯಂತ ಕನಿಷ್ಟ ಪರಿಸ್ಥಿತಿಯಲ್ಲಿರತಕ್ಕಂಥ ಜನ ಯಾರು ಅಂದರೆ ಅನಾವೃಷ್ಟಿಯಲ್ಲಿರತಕ್ಕಂಥ ಜನ. ಆ ದೃಷ್ಟಿಯಿಂದಲೇ ತಾವು ವಿಚಾರ ಮಾಡಬೇಕು. ಏಕೆಂದರೆ ಮುಂದೆ ಆಲೋಚನೆ ಮಾಡಿ. ಈಗಾಗಲೇ ನಾವು ಅವರು ಎನು ಹೇಳುತ್ತಾರೆ ಅಂದರೆ 3 ಕೋಟಿಯನ್ನು ತಾವು ಟಿಎಸ್‌ಪಿ ಮತ್ತು ಎಸ್‌ಸಿಪಿಗೆ ಏನು ಕೊಡುತ್ತೀರಿ ಆ ಹಣ ಆಯಾಯ ವರ್ಷದ ಬಜೆಟ್‌ನಲ್ಲಿ ತಾವು ಏನು ಹಣ ಇಡುತ್ತೀರಿ ಆ ಹಣ ಖರ್ಚಾಗುತ್ತಿಲ್ಲ. ಏಕೆಂದರೆ ಅದು ಎಸ್‌ಸಿಪಿ ಎಂದು ಹೇಳಿ ಒಂದು ವರ್ಷ ಹೋಗಬಹುದು. ಎರಡು ವರ್ಷ ಹೋಗಬಹುದು ಯೋಜನಾ ಕರ್ತರು ಏನು ಮಾಡುತ್ತಾರೆ ಅಂದರೆ ಬಿಡುಗಡೆಗೆ ಕೊನೆಯ ಪ್ರಾಶಸ್ತ್ಯ ಕೊಡುತ್ತಾರೆ. ಆದ್ದರಿಂದ ತಾವು ಈ 3 ಕೋಟಿಯನ್ನು ಇದಕ್ಕಾಗಿ ಹೆಚ್ಚು ಕೊಡಿ ಅವರ ಬೇಡಿಕೆ ಅಷ್ಟೇ. ಅದು ಬಹಳ ಸಾಧುವಾಗಿದೆ. ತಾವು ಆ 3 ಕೋಟಿಯನ್ನು ಅವರಿಗೆ ಕೊಡಿ. ಅವರು ಟಿಎಸ್‌ಪಿ ಮತ್ತು ಎಸ್‌ಸಿಪಿಯಲ್ಲಿಯೇ ಆ ಹಣ ಖರ್ಚು ಮಾಡಲಿ. ಕನಿಷ್ಟಪಕ್ಷ ಈ ವರ್ಷವಾದರೂ ನಾವು ಆ ಸ್ವಾತಂತ್ರ್ಯವನ್ನು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಕೊಟ್ಟರೆ ಈ ವರ್ಷ ಮತ್ತು ಬರುವ ವರ್ಷ ಕೊಟ್ಟರೆ ಖಂಡಿತವಾಗಿ ಆ ಹಣ ಖರ್ಚಾಗುತ್ತದೆ. ಇಲ್ಲದಿದ್ದರೆ ಅದು ಖರ್ಚಾಗತಕ್ಕಂಥ ವ್ಯವಸ್ಥೆ ಇಲ್ಲ. ದಯಮಾಡಿ ಆ ಎಸ್‌ಸಿಪಿಯಲ್ಲಿರತಕ್ಕಂಥ ಹಣವನ್ನು ತೆಗೆದಿರಿಸಿ ಅವರಿಗೆ ಖರ್ಚು ಮಾಡತಕ್ಕಂಥ ಒಂದು ಆಶ್ವಾಸನೆಯನ್ನು ಕೊಟ್ಟರೆ ಬಹಳ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಸಿದ್ದರಾಮಯ್ಯ :— ತಾವು ಕೊಟ್ಟಿರತಕ್ಕಂಥ ಸಲಹೆ ಎನು ಇದೆ ಅದನ್ನು ನಾನು ಮತ್ತು ಮಾನ್ಯ ಕೃಷಿ ಸಚಿವರು ಕುಳಿತುಕೊಂಡು ಮಾತನಾಡಿ ಅದರ ಬಗ್ಗೆ ಒಂದು ತೀರ್ಮಾನ ಮಾಡುತ್ತೇವೆ. ತಾವು ದಯಮಾಡಿ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ :— ನಾವು ಅದನ್ನು ತೆರೆಯಲೇಬೇಕಾಗುತ್ತದೆ. ಅದನ್ನು ಮೀರುವುದಕ್ಕೆ ಸಾಧ್ಯವಿಲ್ಲ. ಆದರೆ ಒಂದು ನಾವು ಏನು ಪರಿಗಣಿಸಬಹುದು ಅಂದರೆ ವು ಈ ಬಾಬಿಗೋಸ್ಕರ ಮೀಸಲಾಗಿಟ್ಟಿರತಕ್ಕಂಥ ಹಣವನ್ನು ಈ ಭಾಗದಲ್ಲಿಯೇ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡೋಣ ಈಗ ಹಣವನ್ನು ಪೂಲ್ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :— ಈ ವರ್ಷದ ಬಜೆಟ್‌ನಲ್ಲಿ ನಾವು ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 91 ಕೋಟಿ ರೂಪಾಯಿಗಳನ್ನು ಪೂಲ್ ಮಾಡಿದ್ದೇವೆ. ಇಲ್ಲಿ ಏನು ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಏನು ಹಣ ತೆಗೆಯುತ್ತೇವೆ ಆ ಹಣವನ್ನು ಈ ಭಾಗದಲ್ಲಿಯೇ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ :— ಯಾವ ಯಾವ ತಾಲ್ಲೂಕು ಸೇರಬೇಕೆಂದು ಅಕ್ಷಾನಲ್ಲಿಯೇ ಸೇರಿದೆ. ಈಗ ಬೇರೆ ತಾಲ್ಲೂಕು ಸೇರಬೇಕಾದರೆ ಮೂಲ ಕಾನೂನು ತಿದ್ದುಪಡಿಯಾಗಬೇಕಾಗುತ್ತದೆ.

ಆ ಮೂಲ ಕಾನೂನು ತಿದ್ದುಪಡಿ ಮಾಡಬೇಕಾದರೆ ಎರಡೂ ಸದನಗಳ ಒಪ್ಪಿಗೆ ಪಡೆಯಬೇಕಾಗುತ್ತದೆ. ಆ ಕಾರಣದಿಂದ ತಡವಾಗುತ್ತಿದೆ. ತಿದ್ದುಪಡಿ ಮಾಡತಕ್ಕಂಥ ಸಂದರ್ಭದಲ್ಲಿ ಮಂದೆ ನೋಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಗೌರಿಬಿದನೂರು ತಾಲ್ಲೂಕು ಸೇರಬೇಕೆನ್ನುವುದು ದೊಡ್ಡ ತಿದ್ದುಪಡಿ ಏನೂ ಅಲ್ಲವಲ್ಲಾ. ಈ ಸದನದಲ್ಲಿಯೇ ತನ್ನಿ.

ಶ್ರೀ ಸಿದ್ದರಾಮಯ್ಯ :— ಸಚಿವ ಸಂಪುಟದ ಒಪ್ಪಿಗೆ ಪಡೆದು ಮಾಡಬೇಕಾಗುತ್ತದೆ.

ಶ್ರೀ ಸಿ. ಭೈರೇಗೌಡ :— ಅದು ನನಗೆ ಬರುವುದಿಲ್ಲ. ಅದಕ್ಕೆ ಪ್ರತ್ಯೇಕವಾಗಿ ಒಬ್ಬ ಮಂತ್ರಿಗಳು ಇದ್ದಾರೆ. ಹಾಡಾ ಮಂತ್ರಿಗಳು ಇದ್ದಾರೆ. ಅದು ನನ್ನ ಕೈಯಲ್ಲಿ ಇಲ್ಲ ಅವರ ಕೈಯಲ್ಲಿರುವುದು.

ಶ್ರೀ ಹೆಚ್.ಜಿ. ಬಾಲಕೃಷ್ಣ :— ನಬಾರ್ಡ್ ಸಾಲದ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಸಿ. ಭೈರೇಗೌಡ :— ಪ್ರಯತ್ನ ಮಾಡೋಣ.

ಶ್ರೀ ಸಿದ್ದರಾಮಯ್ಯ :— ನಬಾರ್ಡ ನಾರಮ್ಸ್‌ನಲ್ಲಿ ಬರಬೇಕಾಗುತ್ತದೆ. ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಈಗ ಗೌರಿಬಿದನೂರು ತಾಲ್ಲೂಕನ್ನು ಸೇರಿಸುವ ಬಗ್ಗೆ ಒಂದು ತಿದ್ದುಪಡಿಯನ್ನು ತನ್ನಿ. ಮಾನ್ಯ ಕಾನೂನೂ ಮಂತ್ರಿಗಳು ಇದ್ದಾರೆ. ಅವರು ಈ ಅಧಿವೇಶನದಲ್ಲಿಯೇ ಒಂದು ತಿದ್ದುಪಡಿ ತನ್ನಿ. ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ನಿಯಮಗಳಿಗೆ ಅನುಗುಣವಾಗಿ ಗೌರಿಬಿದನೂರು ತಾಲ್ಲೂಕು ನೇರವಾಗಿ ಬರಬೇಕು ಎನ್ನತಕ್ಕಂಥಾದ್ದು ಇದ್ದರೆ ಅದನ್ನು ಸೇರಿಸಿ ಒಂದು ತಿದ್ದುಪಡಿಯನ್ನು ತರೋಣ. ಬಯಲು ಪ್ರದೇಶ ಎಂದು ಹೇಳತಕ್ಕಂಥ ಒಂದು ಸೀಮೆಯ ವ್ಯಾಪ್ತಿಯಲ್ಲಿ ಅದು ಬರಬೇಕು. ಬಂದರೆ ಅದನ್ನು ನಾವು ಸೇರಿಸಿಕೊಳ್ಳಬೇಕಾಗುತ್ತದೆ ಸೇರಿಸಿಕೊಳ್ಳೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರು ಹೇಳುವುದು ನನಗೆ ಗೊತ್ತಾಗುತ್ತದೆ. ಮಾನ್ಯ ಸಚಿವರು ಹೇಳುವುದು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಸೇರಬೇಕಾದರೆ ಕೆಲವು ನಿಯಮಾವಳಿಗಳು ಉಂಟು. ಬಿಲೋ 40 ಪರ್ಸೆಂಟ್ ನೀರಾವರಿಗೆ ಇರಬಾರದು ಎನ್ನುವ ಒಂದು ನಿಯಮ ಇದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಇರತಕ್ಕಂಥಾದ್ದು 28 ಪರ್ಸೆಂಟ್ ನಾವು ದಾಖಲೆಗಳನ್ನು ಕೊಟ್ಟಿದ್ದೇವೆ.

ಶ್ರೀ ಎಂ.ಸಿ. ನಾಣಯ್ಯ :— ನಿಯಮಗಳಲ್ಲಿ ಬಂದರೆ ಅದನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇಲ್ಲ.

4. ವಿತ್ತೀಯ ಕಾರ್ಯ ಕಲಾಪ

1999-2000ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ(ಮುಂದುವರಿದುದು)

+ ಶ್ರೀ ಜೆ.ಸಿ. ಮಾಧುಸ್ವಾಮಿ ಸನ್ಮಾನ್ಯ ಅಧ್ಯಕ್ಷರೆ, 1999-2000ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಹೇಳಿದ ರೀತಿಯಲ್ಲಿ ಇದು ಅವರ ಐದನೇ ಆಯವ್ಯಯವಾಗಿದೆ. ಅವರು ಹೇಳಿದ ಒಂದು ಮಾತನ್ನು ಇಲ್ಲಿ ಉಲ್ಲೇಖ ಮಾಡುತ್ತೇನೆ. ನಾವು ಕೇಂದ್ರ ಸರಕಾರದ ಜೊತೆಗೆ ನೆಗೋಶಿಯೇಟ್ ಮಾಡುತ್ತೇವೆ, ಹೆಚ್ಚು ಕಾರ್ಯಕ್ರಮಗಳನ್ನು ನಾವು ಕೇಂದ್ರ ಸರಕಾರದಿಂದ ರೂಪಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಅಂತೆಯೇ ಟ್ಯಾಕ್ಸ್ ರೂಪದಲ್ಲಿ ನಮ್ಮ ಹಣ ಕೇಂದ್ರ ಸರಕಾರಕ್ಕೆ ಹೋಗುತ್ತಿರುವುದರಲ್ಲಿ ನಮ್ಮ ಭಾಗವನ್ನು ಜಾಸ್ತಿ ಮಾಡಿಕೊಳ್ಳಲು ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಪ್ರಮುಖವಾಗಿ ಒಂದು ವಿಷಯವನ್ನು ತಮ್ಮ ಮೂಲಕ ಪ್ರಸ್ತಾಪ ಮಾಡಬಯಸುತ್ತೇನೆ. ನಾವು ನಮ್ಮ ಸಂವಿಧಾನವನ್ನು ಒಪ್ಪಿಕೊಂಡಿದ್ದೇವೆ. ಈಗಿನ ಹಾಲದಲ್ಲಿ ರಾಜ್ಯದ ಹತೋಟಿಯಲ್ಲಿದ್ದ ಅನೇಕ ಇಲಾಖೆಗಳಲ್ಲಿ ಕೇಂದ್ರ ಸರಕಾರದವರು ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುವಾಗ ರಾಜ್ಯದ ಸಾರ್ವಭೌಮತ್ವವನ್ನು ಬೈಪಾಸ್ ಮಾಡಿ ಜಿಲ್ಲಾ ಮಟ್ಟಕ್ಕೆ, ತಾಲ್ಲೂಕು ಮಟ್ಟಕ್ಕೆ, ಅವರದ್ದೇ ಆದ ವ್ಯವಸ್ಥೆಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೈ ಹಾಕಿರುವುದು ನಿಜವಾಗಿಯೂ ಈ ಸಂವಿಧಾನ ಪದ್ಧತಿಯಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ. ರಾಜ್ಯಕ್ಕೆ ಬಂದು ರಾಜ್ಯದ ಸಾರ್ವಭೌಮತ್ವದ ಕೆಳಗೆ, ಹಣಕಾಸು ಖರ್ಚಾಗಬೇಕಾದುದು, ಅಕೌಂಟಿಬಿಲಿಟಿ ಮೈಂಟೈನ್ ಆಗಬೇಕಾದುದು ವಾಸ್ತವ ಸಂಗತಿಯಾಗಿದ್ದರೂ ಕೂಡ ಇತ್ತೀಚಿನ ದಿನಗಳಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ, ತಮ್ಮದೇ ಆದ ರೀತಿಯಲ್ಲಿ ಮಾಡುತ್ತಿದ್ದಾರೆ. ಕೆಲವು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಯುಬಿಎಸ್ ಸ್ಕೀಮ್ ಎಂದು ಮಾಡುತ್ತಾರೆ. ಮುನ್ಸಿಪಾಲಿಟಿಯವರು, ಅವರು, ಇವರು, ಮಾಡಬೇಕಾದಂಥ ಕೆಲಸವನ್ನು ಅವರುಗಳ ಗಮನಕ್ಕೆ ಬಾರದ ರೀತಿಯಲ್ಲಿ ಮಾಡುವುದು ಮತ್ತು ಯಾವುದೋ ಎನ್‌ಜಿಓಗಳ ಮೂಲಕ ಮಾಡಿದ್ದೇವೆ ಎಂದು ಹೇಳುವುದು ನಡೆದಿದೆ. ಐಡಿಎಸ್‌ಎಂಟಿ ಸ್ಕೀಮನ್ನು ಮುನ್ಸಿಪಲ್ ಏರಿಯಾದಲ್ಲಿ ಮಾಡುತ್ತಾ ಇದ್ದರು. ಅದನ್ನು ಪುರಸಭೆಯವರ ಗಮನಕ್ಕೆ ಬಾರದ ಹಾಗೆ ನಾವು ಅಸಿಸ್ಟೆಂಟ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ನಾವು ಮಾಡಿದ್ದೇವೆ ಎಂದು ಹೇಳುತ್ತಾರೆ. ಇಎಸ್‌ಎಂಟಿ ಸ್ಕೀಂ ಕೂಡ ಹೀಗೆ ಮಾಡುತ್ತಾರೆ. ಇಎಸ್‌ಎಂಟಿ ಸ್ಕೀಂನ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಏನಾದರೂ ಹತೋಟಿ ಇದೆಯೋ ಅಥವಾ ಇಲ್ಲವೋ ಎಂದು ಕಾಡುವಂಥ ಸ್ಥಿತಿಗೆ ಬಂದಿದೆ. ಜಿಲ್ಲೆಗಳಿಗೆ ಹಣ ಕೊಡಬೇಕಾಗಿತ್ತು. ಇಲ್ಲಿ ಎರಡನೇ ಕಂತಿನ ಹಣ ಖರ್ಚಾದ ಮೇಲೆ ಮೂರನೇ ಕಂತಿನ ಹಣವನ್ನು ಕೊಡಬೇಕಾಗಿತ್ತು. ಹೋದಸಲ ಇವರು ಇಲ್ಲಿ ಕಳಿಸಿಕೊಂಡು

ನೀವು ನಾಲ್ಕು ತಾಲ್ಲೂಕುಗಳಲ್ಲಿ 50 ಲಕ್ಷ ರೂ.ಗಳನ್ನು ಜಾಸ್ತಿ ಖರ್ಚು ಮಾಡಿ ಅಡಿಶನಲ್ ಇಎಎಸ್‌ಗಳಲ್ಲಿ ನಾವು ಪ್ರೊವೈಡ್ ಮಾಡುತ್ತೇವೆ ಎಂದಿದ್ದರು. ಇವೊತ್ತು ಕೂಡ ನಾವು ಜಿಲ್ಲಾಪಂಚಾಯತ್ ಮೀಟಿಂಗ್‌ಗಳಿಗೆ ಹೋದರೆ, ಆ 50 ಲಕ್ಷ ಮತ್ತು ಮೂರನೇ ಇನ್‌ಸ್ಟಾಲ್‌ಮೆಂಟ್ ಬರಲೇ ಇಲ್ಲ, ನಿಮ್ಮ ಕಾನ್ಸಿಟ್ಯೂಯನ್ಸಿಗಳಲ್ಲಿ ಕೊರತೆಯಾಗಿದೆ, ನೀವು ಈ ವರ್ಷ ಮಾಡುವ ಪ್ರಾಜೆಕ್ಟ್‌ಗಳಲ್ಲಿ ಕಡಿಮೆ ಮಾಡಿ ಎಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಅರ್ಥ ಸಚಿವರು ಇವುಗಳೆಲ್ಲವನ್ನೂ ಒಂದೇ ಅಂಬ್ರೆಲ್ಲಾದ ಕೆಳಗೆ ತರಬೇಕಾಗುತ್ತದೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿ ನಾವು ತೆಗೆದುಕೊಂಡ ಯೋಜನೆಗಳಿಗೆ ಹಣವು ಬರಲಿಲ್ಲ ಅಂದರೆ, ನಮಗೆ ಇರಿಸುಮುರಿಸು ಆಗುತ್ತದೆ. ಈ ವರ್ಷ ಕೂಡ ಹಾಗೆಯೇ ಆಗಿದೆ. ಇಎಎಸ್ ಕಾರ್ಯಕ್ರಮದಲ್ಲಿ ಎಷ್ಟು ಹಣ ಬರುತ್ತದೆಂಬುದು ನಮಗೆ ಗೊತ್ತಾಗುವುದಿಲ್ಲ. ನಮ್ಮ ತುಮಕೂರು ಜಿಲ್ಲೆಗೆ 8.5 ಕೋಟಿ ರೂ.ಗಳು ಬರಬೇಕಾಗಿತ್ತು. ಅವರು ಆಗಲೇ ಎಕ್ಸೀಡ್ ಮಾಡಿ ಬಹಳ ದಿನಗಳು ಆದವು ಮೂರನೇ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ ಎಂದು ಅಲ್ಲಿ ಕೇಳಿದರೆ ಶಾಸಕರಾಗಿ ನಾವು ಅವರಿಗೆ ಉತ್ತರ ಹೇಳುವ ಸ್ಥಿತಿಯಲ್ಲಿರುವುದಿಲ್ಲ. ಇದೇ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು 2, 3, 4 ಏಜನ್ಸಿಗಳು ಮಾಡುವುದರಿಂದ ಮೊದಲನೇದಾಗಿ ಅಕೌಂಟಿಬಿಲಿಟಿ ನಮ್ಮ ರಾಜ್ಯ ಸರ್ಕಾರಕ್ಕೆ ಲಾಸ್ ಆಗುತ್ತದೆ ಎಂದು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಈ ಕುರಿತು ಎಷ್ಟು ಹಣ ಖರ್ಚಾಗುತ್ತಿದೆ, ಯಾವ ಯಾವ ಏಜನ್ಸಿಗಳ ಮೂಲಕ ಖರ್ಚಾಗುತ್ತಿದೆ, ಇಂಡಿಪೆಂಡೆಂಟ್ ಆಗಿ ಯಾರ್ಯಾರು ಕೆಲಸ ಮಾಡುತ್ತಿದ್ದಾರೆ, ಇದಕ್ಕೆಲ್ಲಾ ಯಾರು ಜವಾಬ್ದಾರರು ಎಂಬಿತ್ಯಾದಿ ವಿಶಯಗಳನ್ನು ಕೇಳಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಅರ್ಥ ಸಚಿವರು ಗಮನ ಕೊಡಬೇಕಾಗುತ್ತದೆ. ಅವರು ಒಂದು ಕಸರತ್ತನ್ನು ಮಾಡಿದ್ದಾರೆ. ಒಬ್ಬರು ಕೊಟ್ಟ ಹಾಗೆ ಆಗಬೇಕು ಮತ್ತು ಇಬ್ಬರು ಇಸಿದುಕೊಂಡ ಹಾಗೆ ಆಗಬೇಕೆಂದು ಮಾಡಿದ್ದಾರೆ. ಇದರ ಮೂಲಕ ಕೊಟ್ಟವರು ಕೊಡಂಗಿ ಇಸಿದುಕೊಂಡವರು ವೀರಭದ್ರ ಎಂದ ಹಾಗೆ ಆಗಿದೆ. ಅನೇಕ ಯೋಜನೆಗಳಿಗೆ ತುಂಬಾ ಒಳ್ಳೆಯ ನಾಮಕರಣವನ್ನು ಮಾಡಿದ್ದೀರಿ. ಹೋದ ಸಲ ತಾವುಗಳು ಮಾಂಗಲ್ಯಭಾಗ್ಯ ಯೋಜನೆಯ ಬಗ್ಗೆ ಹೇಳಿದ್ದೀರಿ. ಅದಕ್ಕೆ ಸಮಿತಿಗಳನ್ನು ಕೂಡ ಮಾಡಿದ್ದೀರಿ. ಆದರೆ ಬಾಯಿ ತುಂಬಾ ಹೇಳಿಕೊಂಡ ಆ ಯೋಜನೆಯಲ್ಲಿ 3-4 ಜನರಿಗೂ ಕೂಡ ಯೋಜನೆಯ ಫಲವನ್ನು ಕೊಟ್ಟಿಲ್ಲ. ನೀವು ಇಲ್ಲಿ ಹೇಳಿ ಪೇಪರ್‌ಗಳಲ್ಲಿ ಅನೌನ್ಸ್ ಮಾಡಿದಾಗ ಅಲ್ಲಿನ ಹೆಣ್ಣುಮಕ್ಕಳು ನಮ್ಮ ಹತ್ತಿರ ಬಂದು ನಮಗೆ ಐದು ಸಾವಿರ ರೂ.ಗಳನ್ನು ಕೊಡಿಸಿ ಎಂದು ನಮಗೆ ಕೇಳಿದರೆ, ನಾವು ಯಾರನ್ನು ಕೇಳಬೇಕು, ಯಾರನ್ನು ಹೇಳಬೇಕು. ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಇವೊತ್ತಿಗೂ ಕೂಡ ಅನೇಕ ಕಾರ್ಯಕ್ರಮಗಳನ್ನು ತಾವುಗಳು ಘೋಷಣೆ ಮಾಡಿಕೊಂಡು ಬಂದಿದ್ದೀರಿ. ಇಂಥ ಕಾರ್ಯಕ್ರಮಗಳು ವಾಸ್ತವವಾಗಿ ಅನುಷ್ಠಾನವಾಗುತ್ತಿವೆಯೇ ಎಂದು ಪ್ರಶ್ನಿಸಬೇಕಾಗುತ್ತದೆ. ಅನುಷ್ಠಾನ ಮಾಡುವಂಥ ಕಾರ್ಯಕ್ರಮಗಳನ್ನು, ಸಾಸಹಗಳನ್ನು, ಅನುಷ್ಠಾನ ಮಾಡುವ ಸ್ಥಿತಿಯನ್ನು ನಾವು ವಾಸ್ತವ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಅನುಷ್ಠಾನವಾಗದಂಥ ಕಾರ್ಯಕ್ರಮಗಳನ್ನು ನಾವು ಘೋಷಣೆ ಮಾಡಿಕೊಂಡು ಹೋದರೆ ಅದನ್ನು ಆಡಳಿತ

ಎಂದು ನಾವು ಕರೆಯುವುದು ಕಷ್ಟವಾಗುತ್ತದೆ. ಇವೊತ್ತು ತಾವುಗಳು ಹೇಳಿದ ಕಾರ್ಯಕ್ರಮಗಳನ್ನು ತಾವುಗಳು ಹೇಗಾದರೂ ಮಾಡಿ ಅನುಷ್ಠಾನ ಮಾಡಬೇಕು. ಅದಕ್ಕೆ ಬಜೆಟ್‌ನಲ್ಲಿ ತಾವುಗಳು ಪ್ರಾವಿಷನ್ ಮಾಡಬೇಕಾಗಿತ್ತು ಎಂದು ಹೇಳಬಯಸುತ್ತೇನೆ. ಹಾಗೆಯೇ ರೀಜನಲ್ ಇಂಬ್ಯಾಲೆನ್ಸನ್ನು ಜಾಸ್ತಿ ಮಾಡುವ ಕ್ರಮವನ್ನು ನಾವು 10-12 ವರ್ಷಗಳ ಬಜೆಟ್‌ಗಳಿಂದ ನೋಡುತ್ತಾ ಇದ್ದೇವೆ. ನೀವು ಗ್ರಾಮೀಣ ಪ್ರದೇಶಗಳಿಗೆ ಮಾಡುತ್ತಿರತಕ್ಕಂಥ ಖರ್ಚುಗಳನ್ನು, ಪಟ್ಟಣ ಪ್ರದೇಶಗಳಿಗೆ ಮಾಡುತ್ತಿರತಕ್ಕಂಥ ಖರ್ಚುಗಳನ್ನು ಜನಸಂಖ್ಯೆಯ ಆಧಾರದ ಮೇಲೆಯೋ, ಭೂಮಿಯ ವಿಸ್ತೀರ್ಣದ ಆಧಾರದ ಮೇಲೆಯೋ, ಇನ್‌ಕಂ ಆಧಾರದ ಮೇಲೆಯೋ, ತುಲನೆ ಮಾಡಿ ನೋಡಿದರೆ, ನಾವು ರಾಜಕಾರಣಿಗಳು ಭಾಷಣ ಮಾಡುತ್ತಿರುತ್ತೇವೆ. ನಾವುಗಳು ಮಾಡುವ ಒಂದು ಪಾಪ ಅಂದರೆ ನಮ್ಮ ಅಧಿಕಾರಿಗಳು ಮಾಡುವ ಎಲ್ಲಾ ಪಾಪಗಳನ್ನು ನಮ್ಮ ಮುಖದ ಮೇಲೆ ಹಾಕಿಕೊಂಡು ಏನಾದರೂ ಮಾಡಿ ತಿಂಗಳಿಗೊಮ್ಮೆ ಕಷ್ಟಪಟ್ಟು ಹಣವನ್ನು ಒಟ್ಟು ಮಾಡಿ ಅಧಿಕಾರಿಗಳಿಗೆ ಸಂಬಳ ಕೊಡುವುದು ಮಾತ್ರ ನಮ್ಮ ಕೆಲಸವಾಗಿದೆ. ಆ ಒಂದೆರಡು ಪರ್‌ಸೆಂಟ್‌ನಷ್ಟು ಜನರನ್ನು ಸಾಕಲಿಕ್ಕೋಸ್ಕರವಾಗಿ ನಾವು ಸಮಾಜ ಸೇವೆಯ ಹೆಸರಿನಲ್ಲಿ ರಾಜಕಾರಣವನ್ನು ಮಾಡುತ್ತಾ ಇದ್ದೇವೆ; ಎಂದು ಅನಿಸುತ್ತದೆ. ಸಂಬಳಕೊಡುವುದಕ್ಕಾಗಿ 30ನೇ ತಾರೀಖಿನೊಳಗೆ ಖಜಾನೆಗೆ ಹಣವನ್ನು ತುಂಬುವುದು ಒಂದು ಕೆಲಸ. ಅವರು ಮಾಡಿದ ಎಲ್ಲಾ ಪಾಪವನ್ನು ನಮ್ಮ ಮೇಲೆ ಎಳೆದುಕೊಳ್ಳುವುದು ಇನ್ನೊಂದು ಕೆಲಸ. ಈ ಎರಡು ಕೆಲಸಗಳನ್ನು ಬಿಟ್ಟು ವಾಸ್ತವವಾಗಿ ನಮ್ಮನ್ನು ಇಲ್ಲಿಗೆ ಯಾರು ಕಳುಹಿಸಿದ್ದಾರೋ ಅವರಿಗಾಗಿ ಏನಾದರೂ ಒಂದು ಕಾರ್ಯಕ್ರಮವನ್ನು ಮಾಡಬೇಕೆಂದರೆ, ಅದು ನಮ್ಮಿಂದ ಆಗುತ್ತಾ ಇಲ್ಲ. ಇವೊತ್ತು ನೀವು ಅಮೌಂಟ್‌ನ್ನು ಜಾಸ್ತಿಮಾಡಬೇಕೆಂದು ಏನು ಹೇಳುತ್ತಿದ್ದೀರಿ ಅದು ಕನಿಷ್ಟ ನಾನ್ -ಪ್ಲಾನ್‌ನಲ್ಲಿ ಅನಿವಾರ್ಯತೆಯಿಂದ ಮಾಡುತ್ತಾ ಇದ್ದೀರಿ. ಅವರಿಗೆ ಬರಬೇಕಾದ ಹೆಚ್ಚುವರಿ ಸಂಬಳ, ಭತ್ಯ, ಇನ್‌ಕ್ರೀಮೆಂಟ್‌ಗಳ ಬಗ್ಗೆ ಕೆಲಸ ಮಾಡಿದ್ದನ್ನು ಬಿಟ್ಟರೆ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಹಣವನ್ನು ನಿಮ್ಮ ಬಜೆಟ್‌ನಲ್ಲಿ ಇಡಲು ಆಗಲಿಲ್ಲ ಎಂದು ಹೇಳಬಯಸುತ್ತೇನೆ. ತಾವುಗಳು ಹಿಂದೆ ಪಶುಸಂಗೋಪನ ಸಚಿವರಾಗಿ ಕೆಲಸ ಮಾಡಿದ್ದೀರಿ. ಆಗ ಪಶು ಸಂಗೋಪನ ಇನ್‌ಸ್ಟಿಟ್ಯೂಶನ್ಸ್ ಎಷ್ಟು ಇತ್ತು ಮತ್ತು ಔಷಧಿಗಾಗಿ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂಬುದು ತಮಗೆ ಗೊತ್ತಿತ್ತು. ಒಂದು ಆಸ್ಪತ್ರೆ ಅಂದರೆ ಅಲ್ಲಿಗೆ ಇಷ್ಟು ಹಣವನ್ನು ಇಡಬೇಕು, ಆಸ್ಪತ್ರೆಗ ಇಷ್ಟು ಔಷಧಿ ಇಡಬೇಕೆಂದು ಇರುತ್ತದೆ. ಇವೊತ್ತು ಆಸ್ಪತ್ರೆಗಳು ಜಾಸ್ತಿಯಾದವು. ಔಷಧಿ ಇಲ್ಲದ ಹಾಗೆ ಆಯಿತು. ಉದಾಹರಣೆಗೆ ಕುರಿ ಮಂಡಳಿಯಲ್ಲಿ ಹೋದ ವರ್ಷ ಮೇ ತಿಂಗಳಲ್ಲಿ ಹಣ ರಿಲೀಸ್ ಮಾಡಿ ವ್ಯಾಕ್ಸಿನ್ ಕೊಡಿಸಿದ್ದಾರೆ. ಆದರೆ ಇವೋತ್ತಿನವರೆಗೂ ಇರಲಿಲ್ಲ ಅಂದರೆ ಈ ಮಂಡಳಿಯನ್ನು ನೀವು ಏಕೆ ಮಾಡಿದ್ದೀರಿ? ಮಂಡಳಿಗೆ ಒಂದಿಷ್ಟು ಜನ ಡಾಕ್ಟರ್‌ಗಳನ್ನು ಏಕೆ ಹಾಕಿದ್ದೀರಿ? ಹೀಗೆ ನಾವು ಇಲ್ಲಿ ಕುಳಿತುಕೊಂಡು 85-90 ಸಾವಿರ ಜನ ಟೀಚರ್ಸ್‌ನ್ನು ನೇಮಕ ಮಾಡಿಕೊಂಡು ಸಮಗ್ರ ಅಭಿವೃದ್ಧಿಯನ್ನು ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತೇವೆ. ಆದರೆ ನಾನು ಹಾಗೆ

ಭಾವಿಸುವುದಿಲ್ಲ. ಯಾಕೆಂದರೆ ಅದಕ್ಕೆ ತಕ್ಕ ಹಾಗೆ ಇನ್‌ಫ್ರಾಸ್ಟ್ರಕ್ಚರ್‌ನ್ನು ನಾವು ಕ್ರಿಯೇಟ್ ಮಾಡುತ್ತಾ ಇದ್ದೇವೆಯೇ? ಅದಕ್ಕೆ ತಕ್ಕ ಹಾಗೆ ಸೌಲಭ್ಯಗಳನ್ನು ನಾವು ಕ್ರಿಯೇಟ್ ಮಾಡುತ್ತಾ ಇದ್ದೇವೆಯೇ? ಇಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರು ಪಶುಸಂಗೋಪನ ಸಚಿವರಾಗಿದ್ದ ಸಮಯದಲ್ಲಿ ಎಷ್ಟು ಹಣವನ್ನು ಇಟ್ಟಿದ್ದರು? ಈಗ ಎಷ್ಟು ಇಟ್ಟಿದ್ದಾರೆ? ಆಗಿನ ದಿನದಿಗಳ ಬೆಲೆಗೂ ಈಗಿನ ಬೆಲೆಗೂ ಏರಿಕೆ ಇಲ್ಲವೇ? ಹೆಚ್ಚುವರಿಯಾದ ಬೆಲೆಯ ಬಗ್ಗೆ ಪರಿಶೀಲಿಸ- ಬೇಕಾಗಿದೆಯಲ್ಲವೇ? ಅದರ ಪ್ರಕಾರ ಹಣವನ್ನು ಹೆಚ್ಚಿಸಲಾಗಿದೆಯೇ? ಅದಕ್ಕೆ ಸರಿಯಾಗಿ ಯೋಚನೆ ಮುಡಿದಾಗ ಅದಕ್ಕೆ ಸಮಾನಾಂತರವಾಗಿ ಏನಾದರೂ ಅಲೋಕೇಶನ್ ಮಾಡಬೇಕೇ, ಈ ಎಲ್ಲಾ ವಿಚಾರಗಳನ್ನು ಮಾಡಿದಾಗ, ಅವಲೋಕಿಸಿದಾಗ ತಾವುಗಳು ಬಜೆಟ್ಟನ್ನು ಇಲ್ಲಿ ಇಡಲು ಸಮರ್ಥರಾಗಿಲ್ಲವೋ ಏನೋ ಎಂದು ನನ್ನ ಭಾವನೆ. ನಾವುಗಳು ತಮ್ಮಿಂದ ಬಹಳ ನೀರಿಕ್ಷೆ ಮಾಡಿದ್ದೆವು. ಗ್ರಾಮೀಣ ಪ್ರದೇಶಗಳಿಗೆ ತಾವುಗಳು ಧಾರಾಳ ಮನೋಭಾವದಿಂದ ಇದು ಕೊನೆಯ ವರ್ಷವಾದ ಕಾರಣದಿಂದಾದರೂ ಸಹಾಯ ಮಾಡುತ್ತೀರಿ ಎಂಬ ಆಶ ನಮ್ಮಲ್ಲಿತ್ತು. ನಾವು ನಿಮ್ಮ ಆರ್ಥಿಕ ಸಮೀಕ್ಷೇಯನ್ನು ಓದಿದ್ದೇವೆ. ಇವೊತ್ತು ಫರ್ಟಿಲೈಸರ್ಸ್ ಸೇಲ್ಸ್ ಜಾಸ್ತಿಯಾಗುತ್ತಿದೆ ಮತ್ತು ಪ್ರಾಡಕ್ಷನ್ ಆಫ್ ಫುಡ್‌ಗ್ರೈನ್ ಕಡಿಮೆಯಾಗುತ್ತಿದೆ. ಹೀಗೆ ಏಕೆ ಆಗುತ್ತಿದೆ? ಫರ್ಟಿಲೈಜರ್ ಬಳಕೆ ಜಾಸ್ತಿಯಾದಾಗ, ಅದರ ಮೇಲೆ ಕೊಡುವ ಸಬ್ಸಿಡಿಯು ಜಾಸ್ತಿಯಾದಾಗ, ಫರ್ಟಿಲೈಜರ್ ಯುಟಿಲೈಸೇಶನ್ ಜಾಸ್ತಿಯಾದಾಗ, ಅದಕ್ಕೆ ಸಮನಾಗಿ ಕೃಷಿ ಉತ್ಪನ್ನಗಳು ಏಕೆ ಬರುತ್ತಾ ಇಲ್ಲ? ಅದು ದುಬಾರಿಯಾಗಿದೆ. ಅದರಿಂದಾಗಿ ನಮಗೆ ಏನೂ ಬರುತ್ತಾ ಇಲ್ಲ. ರಾಜ್ಯದ ಯೋಜನೆಯಲ್ಲಿ ಇದನ್ನು ಯೋಚನೆ ಮಾಡಬೇಕು. ಇವೊತ್ತು ಯಾರು ಬಂಡವಾಳವನ್ನು ಹಾಕಲು ಯೋಚನೆ ಮಾಡುತ್ತಿದ್ದಾನೆ, ಅವನು ಹಾಕುವ ಬಂಡವಾಳಕ್ಕೆ ಏನಾದರೂ ಸಮನಾಗಿ, ಸ್ವಲ್ಪ ಹೆಚ್ಚಾಗಿ ರೆಮ್ಯುನರೇಟಿವ್ ಪ್ರೈಸ್‌ನ್ನು ನಾವು ಕೊಡುತ್ತಿದ್ದರೆ ರಾಜ್ಯವು ಚೆನ್ನಾಗಿರುತ್ತಿತ್ತು. 80 ಪರ್‌ಸೆಂಟ್‌ನಷ್ಟು ಜನರು ನಾವು ಅಲ್ಲೇ ಬದುಕಿರುವುದು, 10-20 ಪರ್‌ಸೆಂಟ್ ಜನರಿಗಾಗಿ ನಾವು ಬಜೆಟ್ ಮಾಡುವುದು, ಇದಾದರೆ ಹೇಗೆ? ಇದೇ ಸ್ಥಿತಿಯನ್ನು ಮಾನ್ಯ ಸಿದ್ದರಾಮಯ್ಯನವರೂ ಮುಂದುವರಿಸಿಕೊಂಡು ಹೋಗುವುದಾದರೆ ನಾವು ನಮ್ಮ ಸ್ಥಿತಿಯನ್ನು ಮತ್ತು ನಮ್ಮ ಶಾಪದ ವಿಮೋಚನೆಯನ್ನು ಮುಕ್ತಿಗೊಳಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ. ಇವೊತ್ತು ಗ್ರಾಮೀಣ ಪ್ರದೇಶಗಳ ಪರಿಸ್ಥಿತಿಯನ್ನು ತಾವುಗಳು ಬಂದು ನೋಡಿದ್ದೀರಾ? ನಗರಗಳಿಗೆ ಮಾತ್ರ ಹೈಟೆಕ್ ಸೌಲಭ್ಯಗಳು ಬೇಕು ಎಂಬಿತ್ಯಾದಿ ಒತ್ತಾಯಗಳು ಎಲ್ಲಾ ಕಡೆಯಿಂದಲೂ ಬರುತ್ತಿರುತ್ತದೆ. ನಮ್ಮ ಹಳ್ಳಿಗಳಲ್ಲಿ ಹೆರಿಗೆಗೆ ಬಂದ ಹೆಣ್ಣುಮಕ್ಕಳಿಗೆ ಆಸ್ಪತ್ರೆಯಲ್ಲಿ ಎಎಸ್‌ಎಂಗಳೂ ಕೂಡ ಇರುವುದಿಲ್ಲ. ಆದರೆ ಅದೇ ನಗರ ಪ್ರದೇಶಗಳಿಗೆ ಇನ್‌ಕ್ಯುಬೇಟರ್ ವ್ಯವಸ್ಥೆಗೆ ಪ್ಲಾನ್ ಮಾಡಿಕೊಂಡಿದ್ದೀರಿ. ಶರೀರದಲ್ಲಿ ಇಟ್ಟುಕೊಂಡು ಕಷ್ಟ ಪಡುವ ಬದಲು ಇನ್‌ಕ್ಯುಬೇಟರ್‌ನಲ್ಲಿಟ್ಟು ಸಾಕೋಣ ಎಂದು ಆಲೋಚನೆ ಮಾಡುವುದು ಒಂದು ಕಡೆಯಾದರೆ, ಹೆರಿಗೆ ಹೇಗೆ ಮಾಡಿಸುವುದು ಯಾರೂ ಇಲ್ಲವಲ್ಲ ಎಂದು

ಗೋಳಾಡುತ್ತಿರುವ ತಾಯಂದಿರು ಇನ್ನೊಂದು ಕಡೆ ಇದ್ದಾರೆ. ಈ ಎಲ್ಲಾ ಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ಸೌಲಭ್ಯಗಳನ್ನು ನಮ್ಮ ಜನರಿಗೆ ಒದಗಿಸಿಕೊಡುವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗಿತ್ತು. ಇವೊತ್ತೂ ಕೂಡ ಅನೇಕ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆಯನ್ನು ಹೇಳುವುದೂ ಕಷ್ಟವಾಗುತ್ತದೆ. ನಮ್ಮ ತುಮಕೂರು ಜಿಲ್ಲಾ ಆಸ್ಪತ್ರೆಗಳಲ್ಲಿ ಎಲ್‌ಎಂಓಗಳನ್ನು ಹಾಕಲೇ ಇಲ್ಲ. ಇವೊತ್ತು ನೀವು ಒದಗಿಸಿರುವ ಕಾಂಟ್ರಾಕ್ಟ್ ಡಾಕ್ಟರ್‌ಗಳು ದಿನವಿಡಿ ಕೆಲಸ ಮಾಡುತ್ತಾ ಇಲ್ಲ. ಇವೆಲ್ಲವನ್ನೂ ನೀವು ಆಲೋಚನೆ ಮಾಡಬೇಕು. ಎಲ್ಲಿ ತಪ್ಪಿದ್ದೀರಿ ಎಂಬುದನ್ನು ಕಂಡುಕೊಳ್ಳಬೇಕು. ಯಾರೋ ಸಂಸ್ಥೆಯವರು ಸಾಲವನ್ನು ಕೊಟ್ಟರು, ನೀವು ಆಸ್ಪತ್ರೆ ಕಟ್ಟಡಗಳನ್ನು ಕಟ್ಟುತ್ತಾ ಇದ್ದೀರಿ. ಆದರೆ ಅಲ್ಲಿಗೆ ಔಷಧಿಯನ್ನು ಸಾಕಾಗುವಷ್ಟು ಕೊಟ್ಟಿದ್ದೀರಾ, ಅಲ್ಲಿನ ಸಮಸ್ಯೆಗಳಿಗೆ ಪರಿಹಾರವೇನಾದರೂ ಒದಗಿಸಿಕೊಟ್ಟಿದ್ದೀರಾ? ಹಳದಿ ಕಾರ್ಡ್ ಕೊಟ್ಟು ಅವರಿಗೆ ಉಚಿತವಾದ ಸೇವೆಯನ್ನು ಕೊಡುತ್ತೇವೆ ಎಂದು ಹೇಳಿಬಿಟ್ಟಿದ್ದೀರಿ. ಆದರೆ ಅಂಥವರಿಗೆ ಸೇವೆಯು ಲಭ್ಯವಾಗಿದೆ ಎಂದು ನೋಡಿದ್ದೀರಾ? ಏಂಡಿತವಾಗಿಯೂ ಇಲ್ಲ, ಅದಕ್ಕೆ ಬೇಕಾಗುವಷ್ಟು ಹಣದ ಲಭ್ಯವಾಗಿಲ್ಲ. ಡಾಕ್ಟರ್‌ಗಳು ಹಳದಿ ಕಾರ್ಡ್‌ನವರಿಗೂ ಕೂಡ ಉಚಿತವಾಗಿ ಔಷಧಿಗಳನ್ನು ಕೊಡುತ್ತಾ ಇಲ್ಲ. ಇನ್ನೊಂದು ಕಡೆ ಸಂಬಳಸಾರಿಗೆಗಳ ಹೆಚ್ಚಳವಾಗುತ್ತಾ ಇದೆ. ಸ್ವಾಮಿ ತಾವು ಕೂಡ

5.20 ಪಿ.ಎಂ.

ಸಮಾಜವಾದಿ ಸಿದ್ಧಾಂತವನ್ನು ಒಪ್ಪಿಕೊಂಡಿದ್ದೀರಿ. ಯಾವುದೇ ಸಿದ್ಧಾಂತದ ಕೆಳಗೆ ಒಬ್ಬ ಮನುಷ್ಯನ ವರಮಾನ ಇನ್ನೊಬ್ಬನ ವರಮಾನಕ್ಕೆ ಅಂತರ ಬಹಳ ಆಗಬಾರದು ಇವತ್ತು ನಿಮ್ಮಲ್ಲೇನಾಗಿದೆ, 30, 40, ಸಾವಿರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಒಂದು ಕಡೆ 3, 4, 2 ಸಾವಿರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು ಒಂದು ಕಡೆ. ತಮ್ಮಿಂದ ನಾನು ನೀರಿಕ್ಷೆ ಮಾಡಿರಲಿಲ್ಲ. ದೊಡ್ಡವರದ್ದು ಸ್ವಲ್ಪ ಕಟ್ ಮಾಡಿ. ಅವರು ಏನೂ ಉಪವಾಸ ಮಲಗಿಕೊಳ್ಳುವುದಿಲ್ಲ. ಮಾಡಲೇಬೇಕು ಅಂದರೆ ಕೆಳವರ್ಗದ ಜನರಿಗೆ ಏನಾದರೂ ಸಹಾಯಮಾಡಿ. ಇದರ ಬಗ್ಗೆ ನೀವು ಚಿಂತನೆ ಮಾಡಿರುವ ಸೂಚನೆಗಳಿಲ್ಲ. ಮೇಲುಗಡೆಯವರಿಗೇ ಕೊಟ್ಟುಕೊಂಡು ಹೋಗುತ್ತೀರಿ. ಮತ್ತೆ 20 ಸಾವಿರ ಜಾಬ್‌ಗಳನ್ನು ನಾವು ಕಡಿಮೆ ಮಾಡುತ್ತೇವೆ ಅಂತೀರಿ. ಸಾರ್ ಪ್ರಮೋಷನ್ಸ್ ಎಷ್ಟು ಆಗುತ್ತಿದೆ? ಯಾಕೆ ಆಗುತ್ತಿದೆ? ಇದು ನಮಗೆ ಅರ್ಥವಾಗುತ್ತಿಲ್ಲ. ನಾವು ಅನೇಕ ಸಲ ಹೇಳಿದ್ದೇವೆ. ಅನೇಕ ಅನಗತ್ಯ ದೊಡ್ಡ ಹುದ್ದೆಗಳನ್ನು ಮೊದಲು ರದ್ದುಮಾಡಿಬಿಡಿ ಎಂದು. ಡಿವೈಎಸ್‌ಪಿ, ಅಡಿಷನಲ್ ಎಸ್‌ಪಿ ಡಿಸಿ ಎಕ್ಸೈಜ್ ತೆಗೆಯಿರಿ. ಏನು ಮಾಡುತ್ತಿದ್ದಾರೆ ಸಾರ್ ಅವರು.

ಶ್ರೀ ಸಿದ್ದರಾಮಯ್ಯ :— ಕೆಲವು ಡಿವಿಷನಲ್ ಕಮೀಷನರ್‌ಗಳು ಸೇರಿವೆ. ಹಾಗೇನೇ ಕೆಲವು ಉಪಕಾರ್ಯದರ್ಶಿಗಳು ಸೇರಿವೆ. ಕೆಲವು ಡಿವಿಡನಲ್ ಲೆವೆಲ್ ಆಫೀಸರ್ಸ್ ಪೋಸ್ಟ್‌ಗಳೂ ಸೇರಿವೆ. ಕೆಲವು ಕಡೆ ಅಡಿಷನಲ್ ಎಸ್‌ಪಿಗಳು ಸೇರಿವೆ. ಆ 20 ಸಾವಿರದಲ್ಲಿ ಎಲ್ಲೆಲ್ಲಿ ಅನಗತ್ಯ ಹುದ್ದೆಗಳು ಇವೆಯೋ ಅವೆಲ್ಲಾ ಸೇರಿವೆ.

ಶ್ರೀ ಜೆ.ಸಿ ಮಾಧುಸ್ವಾಮಿ :— ಜಿಲ್ಲೆಗಿಬ್ಬರು ಡಿಡಿಪಿಐಗಳು, ಜಿಲ್ಲೆಗೊಬ್ಬ ಜಂಟಿ ನಿರ್ದೇಶಕರು ಕಡಿಮೆ, ಇದನ್ನೆಲ್ಲಾ ನೀವು ಬಂದ ಮೇಲೇ ಮಾಡಿರುವುದು. ಕನಿಷ್ಠ ಇಬ್ಬರು ಡಿಡಿಪಿಐ ಮಾಡುದ್ದು ನಿಮ್ಮ ಸರ್ಕಾರವೇ. ಕೃಷಿ ಜಂಟಿ ನಿರ್ದೇಶಕ ಹುದ್ದೆಯನ್ನು ಜಿಲ್ಲೆ ಮಟ್ಟಕ್ಕೆ ಇಳಿಸಿದವರು ನೀವೇ. ಉಪನಿರ್ದೇಶಕ ಸಾಕಾಗಿತ್ತು. ಈಗ ಜಿಲ್ಲೆಗಿಬ್ಬರು ಉಪನಿರ್ದೇಶಕರು ಕೃಷಿಗೆ. ಏಕೆ ಮಾಡಿದಿರಿ ನಮಗೆ ಅರ್ಥವಾಗಲಿಲ್ಲ. ಏನು ಕೆಲಸ ಕೊಡುತ್ತೀರಿ ಅರ್ಥವಾಗುವುದಿಲ್ಲ. ಫಾರೆಸ್ಟ್‌ನಲ್ಲಿ, ನಿಮ್ಮ ಎಸಿಎಫ್‌ಗಳಿಗೇನು ಕೆಲಸ? ಫಾರೆಸ್ಟ್‌ನಲ್ಲಿ ಇವತ್ತು ಮೂರು ಮೂರು ಜನ ಡಿಎಫ್‌ಓಗಳಿದ್ದಾರೆ. ಇವತ್ತು ನಮಗೆ ಶೇಕಡ 11ರಷ್ಟು ಅರಣ್ಯವೂ ಇಲ್ಲ ಇಲಾಖೆ ಒಪ್ಪಿಕೊಳ್ಳುತ್ತದೆ. ಫಾರೆಸ್ಟ್ ಇನ್‌ವೆಸ್ಟ್‌ಮೆಂಟ್ ಜಾಸ್ತಿಯಾಗುತ್ತಿದೆ, ಗ್ರೋತ್ ಕಡಿಮೆಯಾಗುತ್ತಿದೆ. ಅಕಸ್ಮಾತ್ ಅಲ್ಪಸ್ವಲ್ಪ ಕೆಲಸ ಆಗುತ್ತಿದ್ದರೆ ಸೋಷಿಯಲ್ ಫಾರೆಸ್ಟ್ರಿಯಲ್ಲಿ ಆಗುತ್ತಿದೆ, ಜನಕ್ಕೂ ಮರಗಿಡ ಬೆಳೆಸಬೇಕೆಂಬ ಭಾವನೆ ಬಂದಿದ್ದರಿಂದ ಇದಾಗುತ್ತಿರುವುದು ಬಿಟ್ಟರೆ ಹಣವೆಲ್ಲಾ ಖರ್ಚಾಗುತ್ತಿದೆ. ಈ ಫಾರೆಸ್ಟ್ ಇಲಾಖೆ ಖರ್ಚಿನ ಬಗ್ಗೆ ಯಾವತ್ತಾದರೂ ಕುಳಿತು ಮೌಲ್ಯಮಾಪನ ಮಾಡಬೇಕು. ಹೈಯರ್ ಕೇಡರ್‌ನಲ್ಲಿ ಬಹಳ ಹಣ ಹೋಗುತ್ತಿದೆ. ಆದೇ ಆರ್‌ಎಫ್‌ಓಗಳಿಗೆ ಒಂದು ಬಂದೂಕು ಕೇಳಿದರೆ ಕೊಡಿಸೋಲ್ಲ ಅಂತೀರಿ. ಅಲ್ಲಿ ಯಾವುದಾದರೂ ವೈಲ್ಡ್‌ಪ್ರಾಣಿ ಬಂದರೆ ರಕ್ಷಣೆಗಿಲ್ಲ. ಈ ಸ್ಥಿತಿ ಬಗ್ಗೆ ಯೋಚನೆ ಮಾಡಬೇಕಾಗಿದೆ. ತಾವು ದಯಮಾಡಿ ಗಮನಹರಿಸಬೇಕು. ನೌಕರಿ ಮಾಡುತ್ತಿರುವವರಲ್ಲಿ ಅಂತರ ಏನಿದೆ, ಕೆಳಗಡೆಯವರಿಗೂ ಮೇಲಿನವರಿಗೂ ಸಂಬಳದಲ್ಲಿರುವ ತಾರತಮ್ಯ ಕಡಿಮೆ ಮಾಡಬೇಕು. ಮತ್ತೆ ಒಂದು ಪಾಲಿಸಿ ಆಗಬೇಕು. ಯಾರೋ ರೈಸ್ ಮಾಡಿದರು ಅಂದರೆ ನಾವು ರೈಸ್ ಮಾಡುವ ಸ್ಥಿತಿ ತಂದಿಟ್ಟುಕೊಂಡಿದ್ದೇವೆ. ಇವತ್ತು ವಿಶ್ವವಿದ್ಯಾಲಯಗಳಲ್ಲೇನಾದರೂ ಸಂಬಳ ಕೊಡುತ್ತಿರುವುದನ್ನು ಲೆಕ್ಕಾ ಹಾಕಿಕೊಂಡು ನಾಳೆ ಏನಾದರೂ ಕಾಲೇಜಿನವರಿಗೆ ಅದೇ ಸಂಬಳ ಕೊಡುತ್ತೇವೆ ಅಂದರೆ ನಿಮ್ಮ ಖಜಾನೇಲಿ ದುಡ್ಡಿರುವುದಿಲ್ಲ. ಟೀಚರ್ಸ್ ಜಾಸ್ತಿ ಮಾಡಿದ್ದೇವೆ ಎಂದು ಈವತ್ತು ಹೇಳುತ್ತಿದ್ದೀರಿ. ಸ್ಕೀಂ ವೈಂಡ್ ಆಫ್ ಆಗಿ ನಾಳೆ ಸಂಬಳ ಎಲ್ಲಾನೂ ನೀವೇ ಕೊಡಬೇಕೆಂದು ಹೇಳಿದಾಗ ಕೊಡಲು ದುಡ್ಡಿರುವುದಿಲ್ಲ. ಡ್ಯಾನಿಡಾ ಸ್ಕೀಮ್ ಬಗ್ಗೆ ಬಹಳ ಚೆನ್ನಾಗಿ ಇಲ್ಲಿ ಭಾಷಣದಲ್ಲಿ ಹೇಳಿದ್ದೀರಿ. ಡ್ಯಾನಿಡಾ ಸ್ಕೀಂ ವೈಂಡ್ ಆಫ್ ಆದಾಗ ಲೇಡಿ ಕೃಷಿ ಅಧಿಕಾರಿಗಳಿಗೆ ಮೂರು ನಾಲ್ಕು ತಿಂಗಳು ಸಂಬಳ ಸಿಕ್ಕಲಿಲ್ಲ. ಏಕೆಂದರೆ ಇಲ್ಲಿ ನೀವು ಪ್ರಾವಿಶನ್ ಮಾಡಿಕೊಂಡಿಲ್ಲ. ದಿಡೀರ್ ಎಂದು ಗ್ರಾಂಟನ್ನು ನಿಲ್ಲಿಸಿಬಿಟ್ಟರೆ.. ಅಧ್ಯಕ್ಷರೇ, ಈ ಗ್ರಾಮೀಣ ಬದುಕಿನ ಬಗ್ಗೆ ಹೆಚ್ಚು ಒತ್ತನ್ನು ಮಾನ್ಯ ಸಿದ್ದರಾಮಯ್ಯನವರು ಕೊಡಬೇಕಾಗಿತ್ತು ಎಂದು ಕೇಳಿ ಕೆಲವು ಅನುಪಯುಕ್ತ ಕಾರ್ಯಕ್ರಮ, ಇಲಾಖೆಗಳನ್ನೇ ತಾವು ಮುಚ್ಚುವ ತೀರ್ಮಾನ ಮಾಡಬೇಕಾಗಿತ್ತು. ನಾನು ಯಾರನ್ನೂ ದೂಷಣೆಮಾಡಿ ಮಾತನಾಡುವುದಿಲ್ಲ. ತಮ್ಮ ಕಾಲದಲ್ಲಿ ತಮಗೆ ಭಾರಿ ದೊಡ್ಡ ಹೆಸರೇನು ಬಂದಿದೆ, ಲೆಜಿಸ್ಲೇಚರ್ ಕೂಡ ಎರಡು ಸೆಷನ್‌ಗೆ ಸೀಮಿತಿಯೇಯಾಗಿದೆ. ಇಲ್ಲಿ 224, ಅಲ್ಲಿ 75 ಸದಸ್ಯರಿಗೆ 800 ಸಿಬ್ಬಂದಿ ಇದೆ. ನಾವು ಮಾಡಲ್ ಆಗಿರಬೇಕು. ಒಬ್ಬೊಬ್ಬ ಎಂಎಲ್‌ಎ

ಎಂಎಲ್‌ಸಿಗೆ ಮೂರು ಸಿಬ್ಬಂದಿಗಳ ಅಗತ್ಯ ಇತ್ತೇ ಎಂದು ಕೇಳಬೇಕಾಗುತ್ತದೆ. ನಾನು ಈ ಶಾಸನಸಭೆಗೆ ಗೌರವ ಕೊಟ್ಟು ಮಾತನಾಡುತ್ತಿದ್ದೇನೆ. ಇಡೀ ದೇಶದಲ್ಲಿ ಲೆಜಿಸ್ಲೇಚರ್‌ನಲ್ಲಿ ಎರಡು ಕಾರ್ಯಾಲಯಗಳು. ಇದೂ ನೀವು ಕೊಡೋ ಹಣನೇ. ಇದೇನು ಆಕಾಶದಿಂದ ಸುರಿಯುವ ಹಣವಲ್ಲ. ಅಗತ್ಯ ಇತ್ತಾ? ಅಲ್ಲಿಗೊಬ್ಬ ಸೆಕ್ರೆಟರಿ, ಇಲ್ಲಿಗೊಬ್ಬ ಸೆಕ್ರೆಟರಿ, ಅಲ್ಲಿಗೊಬ್ಬ ಅಡಿಷನಲ್ ಸೆಕ್ರೆಟರಿ, ಇಲ್ಲಿಗೊಬ್ಬ ಅಡಿಷನಲ್ ಸೆಕ್ರೆಟರಿ, ಅಗತ್ಯ ಇತ್ತಾ? ಫೀಲ್ಡ್‌ನಲ್ಲಿರುವ ಸ್ಟಾಫ್ ತೆಗೆಯಲು ತಮಗೆ ಗೊತ್ತಾಗುತ್ತದೆ. ಇಲ್ಲಿ ಸಾರ್? ಇಲ್ಲಿಂದ ಶುರುಮಾಡಿ ಸಾರ್. ಯಾವ ಸುಧಾರಣೆಯೂ ಇಲ್ಲಿಂದ ಆರಂಭವಾಗಲಿ. ನಾನು ಇದನ್ನು ಖಂಡಿತ ಯಾರನ್ನು ಟೀಕೆ ಮಾಡುವುದಕ್ಕೆ ಆಡುತ್ತಿಲ್ಲ. ಸುಧಾರಣೆನೇ ಮಾಡುತ್ತೇವೆ ಅಂದರೆ ಇಲ್ಲಿಂದ ಆರಂಭವಾಗಬೇಕು. ಖಂಡಿತಾ ನಮ್ಮ ವಿಧಾನಸೌಧದಲ್ಲಿ ಇವತ್ತು ಇಷ್ಟು ಸಿಬ್ಬಂದಿ ಅಗತ್ಯ ಇಲ್ಲ ಸಾರ್. ನೀವು ಇಲ್ಲಿಂದ ಆರಂಭಮಾಡಿ ಏತಕ್ಕೆ ಇಷ್ಟೊಂದು ಜನ? ಏನು ಮಾಡುವುದಕ್ಕೆ? ನಾಳೆ ಜನರಿಗೆ ನಾವು ಅನ್ನಬಲೇ? ನಾಳೆ ಉತ್ತರ ಹೇಳಬೇಕಾಗುತ್ತದೆ. ಒಬ್ಬ ಎಂಎಲ್‌ಎಗೆ ನಾಲ್ಕು ಜನ ಸಿಬ್ಬಂದಿ ಇದ್ದಾರೆ ಅಂದರೆ ಏನು ಅರ್ಥ ಇವತ್ತು? ಆ ಕಡೆ ಯೋಜನೆ ಮಾಡಬೇಕು. ಎರಡನೆಯದು, ಇವತ್ತು ಡಿಸ್‌ಪ್ಯಾರಿಟಿ. ಬಹುಶ ನಿಮಗೆ ಗೊತ್ತು, ಕೇಂದ್ರ ಸರ್ಕಾರಿ ನೌಕರರು, ರಾಜ್ಯ ಸರ್ಕಾರಿ ನೌಕರರು. ಯಾವುದೋ ಆಸೆಗೆ ಯಾರೋ ಸಂಬಳ ಜಾಸ್ತಿ ಮಾಡಿದರೆ ನಾವು ಸಂಬಳ ಜಾಸ್ತಿ ಮಾಡಬೇಕಾ? ಆದರೆ ಬೇರೆ ದಿಕ್ಕಿನಲ್ಲಿ ಯೋಚನೆ ಮಾಡಿ. ಸಾರ್, ಇವತ್ತು ನಿಮ್ಮ ದೂರದರ್ಶನದವರು ಟ್ಯಾಕ್ಸಿನಲ್ಲಿ ಬರಬೇಕು. ಆದರೆ ನಮ್ಮ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಕಾರ್‌ನಲ್ಲಿ ಹೋಗುತ್ತಾರೆ. ಅವರಿಗೆ ನಾವು ಸ್ಟೇಟ್ಸ್‌ನಲ್ಲಿ ಕೊಟ್ಟಿರುವ ಬೆನಿಫಿಟ್ ಬಗ್ಗೆ ಅವರೆಂದೂ ಮಾತನಾಡಲಿಲ್ಲ. ಸಂಬಳದ್ದೊಂದು, ಕೇಂದ್ರ ಸರ್ಕಾರ ಹೆಚ್ಚು ಮಾಡಿತು, ನೀವು ಹೆಚ್ಚು ಮಾಡಿರಿ ಅನ್ನುವುದನ್ನು ಬಿಟ್ಟರೆ ಇಲ್ಲಿ ಕಾರ್‌ನಲ್ಲಿ ಹೋಗುತ್ತಿದ್ದರೆ ಅಲ್ಲಿ ಯಾವ ವಾಹನವೂ ಇಲ್ಲ, ಕನಿಷ್ಠ ಎಸ್ಟಾಬ್ಲಿಷ್‌ಮೆಂಟ್‌ನಲ್ಲಾದರೂ ಅವರು ಸೇವ್ ಮಾಡಿದ್ದಾರೆ. ಕೇಂದ್ರ ಸರ್ಕಾರ ಕಛೇರಿಗಳೇನಿವೆ ಅಲ್ಲಿ ನಿಮ್ಮ ಕಛೇರಿಯಷ್ಟು ಖರ್ಚು ಆಗುವುದಿಲ್ಲ, ಅವರು ಲಗ್ಜುರಿಯಸ್ಸಾಗಿ ಆಫೀಸ್‌ಗಳನ್ನು ಮೇಂಟೇನ್ ಮಾಡುತ್ತಿಲ್ಲ. ಅದರ ಅಗತ್ಯವಿಲ್ಲ, ಗೊತ್ತು ಅವರಿಗೆ. ಕೈಗೊಂದು ಹಾರು, ಕಾಲಿಗೊಂದು ಹಾರು. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಈ ರಾಜ್ಯದಲ್ಲಿ ಕಾರಿನಲ್ಲಿ ಓಡಾಡುತ್ತಿದ್ದಾರೆ. ಏನು ಇವರು ಕಾರಿನಲ್ಲಿ ಸೈಟ್ ನೋಡುವುದಕ್ಕೆ ಆಗುತ್ತದೆ? ಜಿಲ್ಲಾ ಪಂಚಾಯಿತಿಗಳಲ್ಲಿ ಮುಂದೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಕಾರ್ ಟ್ರಾನ್ಸ್‌ಫರ್ ಆಗುತ್ತದೆ. ಏತಕ್ಕೆ ಹೊಸ ಕಾರ್ ತೆಗೆದುಕೊಳ್ಳಬೇಕು ನೋಡಿ. ನೀವು ವಾಹನಗಳನ್ನು ಕಡಿತ ಮಾಡುತ್ತೇವೆ ಎಂದು ಹೇಳಿದ ಮಾತಿಗಾಗಿ ನಾನು ಹೇಳುತ್ತಿದ್ದೇನೆ. ನೀವು ಅವಲೋಕನ ಮಾಡಬೇಕು. ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಡಿಎಫ್‌ಓಸ್ ಕಾರ್‌ನಲ್ಲಿ ಹೋಗಲು ಆಗುತ್ತದೆಯಾ? ಕಾಡೊಳಗೆ, ಗುಡ್ಡದೊಳಗೆ, ಎಲ್ಲೋ ಸೈಟಿಗೆ, ಬರೀ ಸ್ಟೇಟಸ್‌ಗೆ ಹೋಗುತ್ತೇವೆ ಅಂದರೆ ನನ್ನದೇನಿಲ್ಲ. ವಾಸ್ತವವಾಗಿ ಅವರು ಮಾಡುವ ಕೆಲಸಕ್ಕೆ ಆ ವಾಹನ ಲಾಯಕ್ಕಾಗಿದೆಯಾ? ನೋಡಿ. ಅದು ಮಾಡದೆ

ಎಲ್ಲರಿಗೂ ಕಾರು, ಗೂಟ, ಈಗ ಬಿಡಿ, ಅಸಿಸ್ಟೆಂಟ್ ಕಮೀಷನರ್‌ರಿಂದ ಹಿಡಿದು ಎಲ್ಲರಿಗೂ ಮೇಲುಗಡೆ ಲೈಟ್ ಕೊಟ್ಟಬಿಟ್ಟಿದ್ದೀರಿ. ಏಕೆ ಕೊಟ್ಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಜನಕ್ಕೆ ಬಾರಿ ಗೊಂಲ, ಅಂಬುಲೆನ್ಸ್ ಯಾವುದೋ ಎಸಿ ಕಾರ್ ಯಾವುದೋ, ಡಿಸಿ ಕಾರ್ ಯಾವುದೋ, ಎಸ್‌ಪಿ ಕಾರ್ ಯಾವುದೋ, ನಿಮ್ಮ ಅಧ್ಯಕ್ಷರುಗಳ ಕಾರ್ ಯಾವುದೋ, ಎಲ್ಲಾ ಕೆಂಪಗೆ ಬಣ್ಣ, ನೀವೇ ರೆಡ್ ಡೇಂಜರ್, ಯಾವಾಗಲೂ ಆ ಡೆಂಜರ್‌ನಲ್ಲೇ ಇದ್ದೀರಿ. ಆ ಡೇಂಜರ್ ಲೈಟ್ ತೆಗೆಸಿ. ಯಾವುದಾದರು ಒಂದು ಲೈಟ್ ಹಾಕಿಸಿ ಸಾರ್. ನಮ್ಮ ನಂಜುಂಡಸ್ವಾಮಿಯವರು ಒಂದು ಹಸಿರು ಲೈಟ್ ಹಾಕ್ಕೊಂಡು ತಿರುಗುತ್ತಿದ್ದರು, ರೈತ ಸಂಘದಲ್ಲಿದ್ದಾಗ. ಹಾಗೆ ಬೇರೆ ಬಣ್ಣದ ಲೈಟ್ ಹಾಕಿಸಿಬಿಟ್ಟರೆ ಈ ಸರ್ಕಾರ ಡೇಂಜರ್ ಅಲ್ಲ ಎಂದು ಅನಿಸುತ್ತದೆ. ಇಲ್ಲದೇ ಇದ್ದರೆ ಡೇಂಜರೇನೆ. ದಯಮಾಡಿ ಇದನ್ನು ಕಡಿತ ಮಾಡಬೇಕು. ಇನ್ನು ತಮಗೆ ವರಮಾನಗಳ ಮೂಲ. ಸಾರ್, ನಾನು ನಿಮ್ಮ ಬಗ್ಗೆ ಭಾರಿ ಅಭಿಮಾನ ಗೌರವ ಇಟ್ಟುಕೊಂಡಿರುವವನು. ತಮಗೆ ಅಬ್ಕಾರಿಯಿಂದ ಬರಬೇಕಾದ ಹಣ, ಅದರಲ್ಲೂ ಲಿಕರ್ ಲಾಬಿಯಿಂದ ಬರಬೇಕಾಗಿರುವ ಹಣದಲ್ಲಿ ಕನಿಷ್ಠ 30ರಿಂದ 40 ಪರ್ಸೆಂಟ್ ಹೋಗುತ್ತಿದೆ. ಎವೇಷನ್ ಆಗುತ್ತಿದೆ. ನೀವು ಇದನ್ನು ಒಪ್ಪಿಕೊಳ್ಳಲೇಬೇಕು. ನೀವು ತರಿಸಬೇಕು. ಈ ರಾಜ್ಯದಲ್ಲಿರುವ ಉತ್ಪಾದನಾ ಸಾಮರ್ಥ್ಯವೆಷ್ಟು? ಬಿಎಂಎಲ್ ಐಎಂಎಫ್‌ಎಲ್ ಬಿಯರನ್ನು ಉತ್ಪಾದಿಸಬೇಕಾದ ಸಾಮರ್ಥ್ಯವೆಷ್ಟು? ಅವರು ಬಳಸುತ್ತಿರುವ ನ್ಯೂಟ್ರಲ್ ಸ್ಪಿರಿಟೆಷ್ಟು ರೆಕ್ಟಿಫೈಡ್ ಸ್ಪಿರಿಟೆಷ್ಟು? ಉತ್ಪಾದನೆ ತೋರಿಸುತ್ತಿರುವುದೆಷ್ಟು? ನಾನು ತಮ್ಮ ಮುಂದೆ ಒಂದು ಪತ್ರ ಓದುತ್ತೇನೆ: 5-9-98ರಲ್ಲಿ ದೊಡ್ಡಬಳ್ಳಾಪುರದಲ್ಲಿ ಆ ರೇಂಜ್‌ನಲ್ಲಿ ಇನ್ವೆಸ್ಟರ್ ಆಫ್ ಎಕ್ಸೈಜ್ ಮಾಡಿರುವ ರೈಡ್‌ನಲ್ಲಿ ಹೇಳುತ್ತಾರೆ.

"Illegal procurement, possession, transaction and sale of 1,95,739 litres of non-duty paid IML of JPN Quawasji Distilleries, Bangalore by evading the Excise duty and Sales Tax etc.,

Illegal procurement and sale of 42,211 litres of non duty paid IML and 9858 litres of Beer in excess of the books of accounts and wilful creation of shortage of 20879 litres of Beer, thus evading excise duty, Sales Tax etc.,

Wilful creation of shortages of 39,135 litres of IML and 2,14,613 litres of Beer by submitting incorrect monthly consumption statements, thus evading last point Sales Tax and Surcharge in voilation

of Sections 11, 13 and 14 read with 32, 34, 35, 36, 39 and 41 off K.E. Act, 1965." ಏನು ಸಾರ್ ಇದು. ಒಂದು ತಾಲ್ಲೂಕಿನಲ್ಲಿ ಇಷ್ಟು ಲಕ್ಷ. ನಿಮ್ಮವನು ಹಾಕಿರುವ ಎಫ್.ಐ.ಆರ್. ಕಾಪಿ ಕೋರ್ಟ್ ಮುಂದಿದೆ. ಇಂಥ ಎಷ್ಟು ಲಕ್ಷಗಳು ಇವತ್ತು ಎವೇಷನ್ ಆಗಿದೆ ಎಂದು ಉತ್ತರ ಕೊಡುತ್ತೀರಾ. ಇದರಲ್ಲಿ ನಾನು ಯಾರನ್ನು ದೂರಲಿಕ್ಕೆ ಹೋಗುವುದಿಲ್ಲ.

This is the F.I.R. filed by Mr. S. Mariswamy, Instector of Excise, Doddaballapur Range, Doddaballapur ಆಮೇಲೆ ಬೀಳಗಿಯಲ್ಲಿ, ನನಗೆ ಯಾರೋ ಮಾಹಿತಿಯನ್ನು ಕೊಟ್ಟರು. ಜಮಖಂಡಿ, ಮುಧೋಳ್‌ನಲ್ಲಿ ಎಕ್ಸೈಜ್ ಪ್ರಾಪರ್ಟಿ ಹರಾಜು ಆಗಿದೆ. 20 ಲಕ್ಷ ರೂಪಾಯಿಗಳನ್ನು, ಕಟ್ಟಬೇಕಾಗಿತ್ತಂತೆ. ಟೋಟಲ್ ಡ್ಯೂಸ್ 90 ಲಕ್ಷ ತಮಗೆ ಗೊತ್ತು. ಅದನ್ನು ಹರಾಜು ಮಾಡಿದರೆ ಇವತ್ತಿನವರೆಗೆ ಆ ಲ್ಯಾಂಡನ್ನು ಪೊಸಿಷನ್‌ಗೆ ತೆಗೆದುಕೊಳ್ಳುವುದಕ್ಕೆ ಬಿಡುವುದು ಬೇಡ ಎಂದು ಮೇಲಿಂದ ಆದೇಶ ಇದೆ ಎಂದು ಹೇಳುವ ಸ್ಥಿತಿಗೆ ಬಂದರೆ ಎಲ್ಲಿಂದ ಈ ರಾಜ್ಯಕ್ಕೆ ರೆವೆನ್ಯೂ ಬರುತ್ತದೆ?

ಮೇಡಂ, ಶುರುಮಾಡಿದ್ದೇನೆ, ಮಾತನಾಡಬೇಡಿ ಎಂದರೆ ಆಗುವುದಿಲ್ಲ. ಅದು ಅಪ್ರಸ್ತುತ ಎಂದರೂ ಮಾತನಾಡುವುದಿಲ್ಲ. ಈ ರಾಜ್ಯಕ್ಕೆ ಬರಬೇಕಾಗಿರುವ ರೆವೆನ್ಯೂ ಹೀಗೆ ಎವೇಡ್ ಆಗುತ್ತಿದೆ ಎಂದಾಗ ತಾವು ಬೆಲ್ ಮಾಡುವ ಸ್ಥಿತಿಗೆ ಬಂದರೆ ತಮಗೆ ಕನ್ನಡ ಬರುವುದಿಲ್ಲ ಎಂದು ನಾನು ತಿಳಿದುಕೊಳ್ಳಬೇಕಾಗುತ್ತದೆ.

ಛೇರ್ಮನ್ :— ಇನ್ನು ಎರಡು-ಮೂರು ಜನರು ಮಾತನಾಡುವವರು ಇದ್ದಾರೆ. ಆ ರೀತಿಯಲ್ಲಿ ಏನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಸನ್ಮಾನ್ಯ ಸಿದ್ದರಾನಯ್ಯನವರೇ, ನಾನು ಅನೇಕ ಸಲ ಹೇಳಿದ್ದೇನೆ, ಇಬ್ಬರು-ಮೂರು ಎಕ್ಸೈಜ್ ಕಂಟ್ರಾಕ್ಟರ್‌ಗೊಸ್ಕರ ಈ ರಾಜ್ಯ ನಡೆಯುತ್ತಿದೆ ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡುವುದು ಬೇಡ. ಅವರ್ಯಾರೂ ಏನೂ ಬಾಕಿ: ನಿಮ್ಮನ್ನು ನಮ್ಮನ್ನು ಸಾಕಿಲ್ಲ. ನನಗೆ ಗೊತ್ತು, ನೀವು ಯಾವ ಸಿದ್ಧಾಂತದಲ್ಲಿ ಹೋರಾಟದಲ್ಲಿ ಬಂದಿರಿ ಎಂದು. ನಿಮ್ಮ ಇಂಟಿಗ್ರಿಟಿಯನ್ನು ಪ್ರಶ್ನೆ ಮಾಡುವ ಹಂತಕ್ಕೆ ನಾನು ಇನ್ನೂ ಇಳಿದಿಲ್ಲ. ಆದರೆ ನಿಮಗೆ ಗೊತ್ತಿಲ್ಲದಂತೆ ಇವೆಲ್ಲಾ ನಡೆಯುತ್ತಿರುವುದರ ಮೇಲೆ ಸ್ವಲ್ಪ ನಿಗಾ ಇಡಬೇಕು. ನನ್ನ ತಾಲ್ಲೂಕಿನ ಕತೆಯನ್ನು ಹೇಳುತ್ತೇನೆ. ಸಣ್ಣ ತಾಲ್ಲೂಕಿನಲ್ಲಿ ಆರ್ಮ್ಸ್ ಇವತ್ತು ಹರಾಜಾಗಿದೆ. ಅದಕ್ಕಿಂತ ಹಿಂದೆ ಎರಡು ವರ್ಷ ಸರ್ಕಾರದ ಹೆಸರಿನಲ್ಲಿ ಅವರೇ ಹರಾಜು ಮಾಡಿದ್ದಾರೆ. ಸತ್ಯವಾದ ಮಾತನ್ನು ಹೇಳುತ್ತಿದ್ದೇನೆ, ಅವರು ಮಾಡುವ ವಿಷಯವನ್ನು ನಂ.2ರಲ್ಲಿ ಮಾಡುವ ಒಂದೇ ಒಂದು ಕಾರಣಕ್ಕೆ ಇವತ್ತು ಆ ತಾಲ್ಲೂಕು

ಹರಾಜು ಮಾಡುತ್ತಾರೆ. ಅಲ್ಲಿ ಬಂದು ಎಲ್ಲಾ ಡಂಪ್ ಮಾಡುತ್ತಾರೆ. ಅಲ್ಲಿಂದ ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ಅವರದೇ ಸ್ವಂತ ವಾಹನಗಳು, ಅವರದೇ ಮಿಲಿಟರಿ ಇಟ್ಟುಕೊಂಡಂತೆ ಇಟ್ಟುಕೊಂಡು ಅವರಿಗೆ ಬೇಕಿಲ್ಲದವರನ್ನು ತಂದು ನಿಮ್ಮ ಎಕ್ಸೈಜ್ ಇನ್ಸ್‌ಪೆಕ್ಟರ್‌ಗಳಿಗೆ ಕೊಟ್ಟು ಕೇಸನ್ನು ರಿಜಿಸ್ಟರ್ ಮಾಡಿಸುತ್ತಾರೆ. ರಾತ್ರಿ ತೆಗೆದುಕೊಂಡು ಬಂದು ಎಕ್ಸೈಸ್‌ನವರು ಆಫೀಸ್‌ಗಳಿಗೆ ಹಾಕಿಕೊಳ್ಳುತ್ತಾರೆ. ಇಷ್ಟು ಹಣ ಲೂಟಿಯಾಗಿ ಹೋಗುತ್ತಿದ್ದರು ಯಾರೂ ನೋಡಲಿಲ್ಲ ಎಂದರೆ ಹೇಗೆ? ಇನ್ನು ಹೊಸದೊಂದು ಯುಗವಾಗಿದೆ ಸಿಎಲ್-9 ನ್ನು ಕೊಡುತ್ತಿದ್ದಾರೆ. ಯಾರಿಗೆ ಕೊಡುತ್ತಿದ್ದೀರಿ ಸ್ವಾಮಿ? ಟೂರಿಸಂ ಡೆವೆಲಪ್‌ಮೆಂಟ್ ಯಾರೊಂದು ಟೂರಿಸ್ಟ್ ಲಾಡ್ಜ್ ಮಾಡುತ್ತಾರೆ, ಅದರಲ್ಲಿ ಇನ್‌ಕಾರ್ಪೊರೇಟ್ ಮಾಡಿ ಒಂದು ಬಾರ್ ಅಂಡ್ ರೆಸ್ಟೋರೆಂಟ್‌ಗೆ ಸಿಎಲ್-9 ಕೊಡುತ್ತೇವೆ ಎಂದು ಹೇಳಿದ್ದೀರಿ ಮೂರು ತಿಂಗಳಿಂದ ಎಷ್ಟು ಕೊಟ್ಟಿದ್ದೀರಿ ಎಂಬ ಲೆಕ್ಕವನ್ನು ಹೇಳುತ್ತೀರಾ? ಸಿಎಲ್-9 ಗಳಿಗೆ ಲೆಕ್ಕ ಇಲ್ಲ ಸನ್ಮಾನ್ಯ ಸಿದ್ದರಾಮಯ್ಯನವರರೇ, 5 ಕಿಲೋಮೀಟರ್ ವ್ಯಾಪ್ತಿ ಎಂದು ಇಟ್ಟುಕೊಂಡು 5-6-7 ಕಿಲೋಮೀಟರ್‌ವರೆಗೂ ಕೊಡುತ್ತಿದ್ದೀರಿ. ಇವತ್ತು ಕೇಳುವವರೆಲ್ಲಾ ಸಿಎಲ್-9 ಸಿಗುತ್ತಿದೆ. ತುಮಕೂರಿನಂಥ ಊರಿನಲ್ಲಿ ಏನೂ ಬಾರ್‌ಗಳಿಗೆ ರೆಸ್ಟೋರೆಂಟ್‌ಗಳಿಗೆ ಅಡಚಣೆ ಇರಲಿಲ್ಲ. ನೀವು ಟೂರಿಸಂ ಸೆಂಟರ್ ಮಾಡುವ ಜಾಗದಲ್ಲಿ ನಾವು ಇರಲಿಲ್ಲ. ಅಲ್ಲಿ ಪ್ರವಾಸದಲ್ಲಿ ಕುಡಿಸುವುದೇ ಅನಿವಾರ್ಯ ಎಂದು ಹೇಳಿದರೆ ಮತ್ತು ಅಲ್ಲಿಗೆ ಕೊಟ್ಟಿದ್ದರೆ ನಾನು ಪ್ರಶ್ನೆ ಮಾಡುತ್ತಿರಲಿಲ್ಲ. ನಗರ ಪ್ರದೇಶ ಮತ್ತು ಬೆಂಗಳೂರಿನಲ್ಲಿ ಕೂಡ ಇವತ್ತು ಟೂರಿಸಂ ಸೆಂಟರ್ ಕೆಳಗೆ ಕೊಡಬೇಕಾದ ಸಿಎಲ್-9 ರಲ್ಲಿ ಲೈಸನ್ಸ್ ಕೊಟ್ಟು ಈ ಸರ್ಕಾರ ಲಿಕ್ಕರ್ ಶಾಪ್‌ಗಳಿಗೆ ಬಾರ್‌ಗಳಿಗೆ ಲೈಸನ್ಸ್ ಕೊಡುವುದಿಲ್ಲ ಎಂದು ಹೇಳಿ ಘೋಷಣೆ ಮಾಡಿದ್ದೇವೆ ಎಂದರೆ ಇದಕ್ಕೇನಾದರೂ ಅರ್ಥ ಇದೆಯಾ? ತಾವು ಇದನ್ನು ತಿರಸ್ಕರಿಸಬೇಕು. ತಮ್ಮ ರಿಪ್ಲೈಯಲ್ಲಿ ಹೇಳಬೇಕು. ಈ ಮಧ್ಯೆ ಈ ವರ್ಷದಲ್ಲಿ ಫೆಬ್ರವರಿಯಿಂದ ಇಲ್ಲಿಗೆ ಸಿಎಲ್-9ಕ್ಕೆ ಎಷ್ಟು ರೆಕಮೆಂಡ್ ಆಗಿವೆ? ಯಾರು ಕೊಟ್ಟರು? ತುಮಕೂರಿಗೆ ಕೊಡುವ ಅವಶ್ಯಕತೆ ಏನಿತ್ತು? ಎಲ್ಲರೂ ಇವತ್ತು ನಮ್ಮನ್ನು ಕೇಳುತ್ತಿದ್ದಾರೆ. ಸಿಎಲ್-9ನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಅವಕಾಶ ಇದೆ ಮಾಡಿಸಿಕೊಡಿ ಎಂದು ಕೇಳುತ್ತಾರೆ. ಇದನ್ನು ತಪ್ಪಿಸದೇ ಹೋದರೆ ಹೇಗೆ? ಒಂದು ಕಡೆ ಭಾಷಣ ಮಾಡುವುದು, ಇದನ್ನು ಕಡಿಮೆ ಮಾಡುತ್ತೇವೆ ಎಂದು ಹೇಳುವುದು. ಎರಡನೆಯದು ಕನ್‌ಸಂಷನ್. ಇದೇನು ಹೊಸವಿಷಯವಲ್ಲ. ನೋಡಿ ಯಾವುದೇ ವೈನ್ ಷಾಪ್‌ನವನಿಗೆ ನಿಮ್ಮವರು ಅವನು ಮಾರುತ್ತಿರುವ ವ್ಯಾಪಾರದ ಮೇಲೆ ಕಲೆಕ್ಷನ್‌ನ್ನು ನಿಮಗೆ ತರುತ್ತಿಲ್ಲ. ಕನ್‌ಸಂಷನ್‌ನ್ನು ಫಿಕ್ಸ್ ಮಾಡಿದ್ದಾರೆ. ನೀನು ಇಷ್ಟು ಲೀಟರ್ ಮಾರಲೇಬೇಕು ಎಂದು. ಅವನು ಜಾಸ್ತಿ ಮಾರುತ್ತಿದ್ದಾನೇ, ಕಡಿಮೆ ಮಾರುತ್ತಿದ್ದಾನೋ ಗೊತ್ತಿಲ್ಲ. ನೀನು ಇಷ್ಟು ಲೀಟರ್ ಮಾರಿದಕ್ಕೆ ಡ್ಯೂಟಿ ಕಟ್ಟಬೇಕು, ರಾಜ್ಯ ಸರ್ಕಾರಕ್ಕೆ ನಾವು ದುಡ್ಡು ಕೊಡಬೇಕು. ಅಷ್ಟೆ. That is not regular collection at all. ಇಷ್ಟು ಕಂಸಂಷನ್ ಎಂದು ಫಿಕ್ಸ್ ಮಾಡಿ ನಡೆಯುತ್ತಿರುವ ದಂಧೆ ಇದು ಇವತ್ತು ಈ ರಾಜ್ಯದಲ್ಲಿ ಎಕ್ಸೈಜ್ ಈ ರೀತಿ ನಡೆಯುತ್ತಿದೆ. ಇದನ್ನು

ಎಲ್ಲಿಯಾದರೂ ಸರಿಮಾಡಿ ಎಂದರೆ ಅದಕ್ಕೇನು ಮಾಡಿದರು ಎಂದರೆ ದೊಡ್ಡರರು ಬಾರ್ ಅಂಡ್ ರೆಸ್ಟೊರೆಂಟ್‌ನವರನ್ನು ಹಿಡಿದುಕೊಂಡರು. ವೈನ್ ಷಾಪೆಲ್ಲಾ 9 ಗಂಟೆಗೆ ಕ್ಲೋಸ್ ಆಗಬೇಕು. ಇನ್ನುಳಿದವರು 11-12 ಗಂಟೆಯವರೆಗೆ ತೆಗೆದುಕೊಂಡಿರಬೇಕೆ. ಏಕೆ? ಬಾರ್ ಅಂಡ್ ರೆಸ್ಟೊರೆಂಟ್‌ಗಳಿಗೆ ಬಿಸಿನೆಸ್ ಕಡಿಮೆಯಾಗುತ್ತದೆ. ಬೆಳಿಗ್ಗೆ 9ಕ್ಕೆ ತೆಗೆಯಿರಿ ಎನ್ನುತ್ತಾರೆ. ಮಧ್ಯಾಹ್ನ ಅವರಿಗೆ ಲಂಚ್ ಅವರ್ಸ್ ಇಲ್ಲ ಎನ್ನುತ್ತಾರೆ. ಅದೇ ಬಾರ್ ಅಂಡ್ ರೆಸ್ಟೊರೆಂಟ್‌ನಲ್ಲಿ ಊಟ ಮಾಡಬಹುದಾಗಿತ್ತು. ಅವನಿಗೆ ಮಧ್ಯಾಹ್ನ ಬ್ರೇಕ್ ಅಂತೆ. ವೈನ್ ಶಾಪ್‌ಗಳಿಗೆ ಬ್ರೇಕ್ ಇಲ್ಲ. ಬೆಳಿಗ್ಗೆ 9 ರಿಂದ ರಾತ್ರಿ 9. ಬಾರ್ ಅಂಡ್ ರೆಸ್ಟೊರೆಂಟ್‌ನವರಿಗೆ ಬೆಳಿಗ್ಗೆ 9 ರಿಂದ 2-30 ಮತ್ತೆ ಸಂಜೆ 5-30 ರಿಂದ ರಾತ್ರಿ 11 ಗಂಟೆಯವರೆಗೆ. ಸಾರ್, ನೀವೇನಾದರೂ ಈ ರಾಜ್ಯದ ಜನರು ಮನೆ ಸೇರಿಕೊಳ್ಳಬೇಕು, ರಾತ್ರಿ 9 ಗಂಟೆ 10 ಗಂಟೆ ಒಳಗೆ ನಗರ ಪ್ರದೇಶದಲ್ಲಿರುವವರು ಸಂಸಾರಸ್ಥರಾಗಿ ಉಳಿಯಬೇಕೆಂದರೆ ಎಲ್ಲರನ್ನೂ 9 ಗಂಟೆಗೆ ಕ್ಲೋಸ್ ಮಾಡಿಸಿ. ಇಲ್ಲಾ ಎಲ್ಲಿ ತೆಗೆದುಬಿಟ್ಟಬಿಡಿ ರಾತ್ರಿ 11 ಗಂಟೆ, 12 ಗಂಟೆವರೆಗೂ ಕುಡಿದುಕೊಂಡಿರಲಿ. ಏಕೆ ಈ ರಿಸ್ಟ್ರಿಕ್ಷನ್. ಇಬ್ಬರೂ ಮಾಡುವುದೂ ಒಂದೇ ದಂಧೆ. ಅವನು ಮಾರುವುದೇ ಲಿಕ್ಕರ್. ಇವನು ಮಾರುವುದೇ ಲಿಕ್ಕರ್. 9 ಗಂಟೆಗೆ ಬಾಗಿಲು ಮುಚ್ಚು ಎನ್ನುವುದು. ಮುಚ್ಚಲಿಲ್ಲ ಎನ್ನುವುದು. ಕೊಂಡುಕೊಂಡು ಹೋಗುವರು ಮೊದಲೇ ಕೊಂಡುಕೊಳ್ಳಬೇಕಂತೆ. ಅದೇ ಅಲ್ಲೇ ಕುಡಿಯುವವರು 11 ಗಂಟೆಯವರೆಗೂ ಅಲ್ಲೇ ಇರಬಹುದು. ಕೊಂಡುಕೊಂಡು ಹೋಗಿ ನಾನು ಮನೆಯಲ್ಲಿ ಕುಡಿಯುತ್ತೇನೆ, ನಾನು ಗೌರವಸ್ಥ ಎನ್ನುವವನಿಗೆ 9 ಗಂಟೆ ಮೇಲೆ ಸಿಗುವ ಹಾಗೆ ಇಲ್ಲ. ಬಾರ್‌ನಲ್ಲಿಯೇ ಕುಡಿಯುತ್ತೇನೆ ಎನ್ನುವವನಿಗೆ ಮಾತ್ರ 11 ಗಂಟೆಯವರೆಗೆ ಸಿಗುತ್ತದೆ. ತಾವು ಕನಿಷ್ಟ ಈ ಕಡೆಯಾದರೂ ಗಮನ ಹರಿಸಿದ್ದಿದ್ದರೆ ಇನ್ನು 200-300 ಕೋಟಿ ರೂಪಾಯಿಗಳು ನಿಮಗೆ ವರಮಾನ ಬಂದಿರುವುದು. ಆ 200-300 ಕೋಟಿ ನಮ್ಮ ಬಯಲು ಸೀಮೆಗೆ ನೀವು ಕೊಟ್ಟಿದ್ದರೆ ನಾವು ಇಲ್ಲಿ ಧರಣಿ ಮಾಡುವುದು ತಪ್ಪುತ್ತಿತ್ತು. ಸ್ವಲ್ಪ ಆ ಕಡೆ ಗಮನ ಕೊಡಿ ಸಾರ್. ಇನ್ನು ಎರಡನೆಯದಾಗಿ ತಮಗೆ ಕೆಲವು ಇನ್ಫರ್‌ಮೇಷನ್. ಸನ್ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರ್ ಉತ್ತರ ಹೇಳಬೇಕಾದರೆ ನಾನು ಇಲ್ಲಿದ್ದೆ. ಇಂಡಸ್ಟ್ರೀಯಲ್ ಡೆವೆಲಪ್‌ಮೆಂಟ್ ಏರಿಯಾ ಬೋರ್ಡಿನವರು ಜಮೀನನ್ನು ತೆಗೆದುಕೊಳ್ಳುವುದು. ಅದನ್ನು ಅಭಿವೃದ್ಧಿ ಮಾಡುವುದು. ಅದಕ್ಕೆ ನಿಗಧಿ ಮಾಡಿರುವ ಧಾರಣೆ ಕಡೆ ತಾವು ಗಮನ ಹರಿಸಬೇಕು. ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಈ ರಾಜ್ಯದಲ್ಲಿ ಹೇಗೆ ಕೆಲಸ ಮಾಡುತ್ತಿದೆ ಎಂದು ತಾವು ಅರ್ಥ ಸಚಿವರಾಗಿ ಒಂದು ದಿವಸ ಖುದ್ದು ಪರಿಶೀಲನೆ ಮಾಡಬೇಕು. 20-30-40 ಸಾವಿರ ರೂಪಾಯಿಗಳಿಗೆ ಮಾರಬಹುದಾದ ಒಂದೊಂದು ಜಮೀನನ್ನು ಪರ್‌ಸೆಂಟೇಜ್ ಬಗ್ಗೆ ಮಾತನಾಡಿಕೊಂಡು, ಕಮೀಷನ್ ಬಗ್ಗೆ ಮಾತನಾಡಿಕೊಂಡು ಎಕರೆಗೆ 3 ಲಕ್ಷ 4 ಲಕ್ಷದವರೆಗೆ ಕೊಡುತ್ತಿದ್ದಾರೆ. ಅವರು ಕೇಳಿದ್ದು ನಿಜ. ನಾನು ಕೆ.ಎಂ.ಎಫ್. ಅಧ್ಯಕ್ಷನಾಗಿದ್ದಾಗ ಕೇಳುತ್ತಿದೆ. ನೀವೇನು ನಿಗದಿ ಮಾಡುತ್ತಿದ್ದೀರಿ ಎರಡು ಲಕ್ಷ ಚಿಲ್ಲರೆ ಡೆವಲಪ್‌ಮೆಂಟ್ ಛಾರ್ಜ್‌ಸ್ ಸೇರಿ ಎಂದು, ಅದೇ ಪಕ್ಕದಲ್ಲಿ ಖಾಸಗಿಯವನು

30-40 ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನನ್ನು ಮಾರುವುದಕ್ಕೆ ತಯಾರಾಗಿದ್ದಾನೆ. ಇದನ್ನೆಲ್ಲಾ ಇಂಡಸ್ಟ್ರೀಯಲ್ ಏರಿಯಾ ಬೋರ್ಡ್ ಕೆಳಗೆ ತಂದು ಹಾಕಿದ್ದೀರಿ, ಈಗದೇನೆ ನಡೆಯುತ್ತಿದೆ ಸಾರ್ ಆ ಬೋರ್ಡ್ ಏಕೆ ಸಾರ್ ನಮ್ಮ ಭಾರಿ ಗೌರವಸ್ಥ ಶಂಕರಲಿಂಗೇಗೌಡರಂಥವರನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕಿದ್ದೀರಿ? ನಮಗೆ ಭಾರೀ ಹೆಮ್ಮೆ ಇತ್ತು ಅತನ ಬಗ್ಗೆ, ಯಾವುದೋ ತಿಮಿಂಗಲಗಳ ಬಾಯಿಗೆ ತೆಗೆದುಕೊಂಡು ಹೋಗಿ ಇಂಥ ಅಧಿಕಾರಿಗಳನ್ನೆಲ್ಲಾ ಹಾಟಿಬಿಡುತ್ತೀರಲ್ಲಾ ಎಂದು ನನಗೆ ಇವತ್ತು ನೋವಾಗುತ್ತಿದೆ. ನಿಮಗೆ ನಾನು ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. Everything goes on some head. ಸೆಕ್ಯೂರಿಟಿ ಹೆಡ್‌ನಲ್ಲಿ ಸ್ಟೆನೋಗ್ರಾಫರ್ ರೆಕ್ರೂಟ್ ಆಗುತ್ತಾರೆ. ಸೆಕ್ಯೂರಿಟಿ ಹೆಡ್‌ನಲ್ಲಿ ಇಂಜಿನೀಯರ್ಸ್ ರೆಕ್ರೂಟ್ ಆಗುತ್ತಾರೆ. ಸೆಕ್ಯೂರಿಟಿ ಹೆಡ್‌ನಲ್ಲಿ ಆಫೀಸರ್ಸ್ ರೆಕ್ರೂಟ್ ಆಗುತ್ತಾರೆ. ನಾನು ಆಫೀಸ್ ಫೈಲನ್ನು ಕಳುಹಿಸಿಕೊಡುತ್ತೇನೆ. ಅವರು ಯಾರನ್ನು ಬೇಕಾದರೂ ರೆಕ್ರೂಟ್ ಮಾಡಬಹುದು. ನಾವು ದಿನಗೂಲಿ ಆಧಾರದ ಮೇಲೆ ಯಾರಾದರೂ ಇನ್ನು ಮುಂದಕ್ಕೆ ಕೆಲಸಕ್ಕೆ ತೆಗೆದುಕೊಂಡರೆ ನಿಮ್ಮ ಸಂಬಳದಲ್ಲಿ ಕಟಾಯಿಸುತ್ತೇವೆ ಎಂದು ಇಲ್ಲಿ ಬಹಿರ್ ಭಾಷಣದಲ್ಲಿ ಹೇಳುತ್ತಾರೆ. ಹಾಗಾದರೆ ಇವರು ನಿಮ್ಮ ರಾಜ್ಯ ಸರ್ಕಾರದೊಳಗೆ ಇಲ್ಲವೇ? ಇವರಿಗೆ ಈ ನ್ಯಾಯಗಳು, ನೀತಿಗಳು ಅನ್ವಯಿಸುವುದಿಲ್ಲವೇ? ಸದ್ಯಕ್ಕೆ ತಾವು ಒಂದು ಮಾಹಿತಿ ಕೊಡಿ ಇಂಡಸ್ಟ್ರೀಯಲ್ ಡೆವೆಲಪ್‌ಮೆಂಟ್ ಏರಿಯಾ ಬೋರ್ಡ್‌ನವರು ಸೆಕ್ಯೂರಿಟಿ ಹೆಸರಿನಲ್ಲಿ they have done illegal recruitment, to the tune of Engineers. ಏಕೆ ಏಲೋ ಮಾಡುತ್ತೀದ್ದೀರಿ? ನಿಮಗೆ ಗೊತ್ತಿಲ್ಲವೇ. ಗೊತ್ತು ಏಕೆ ಸುಮ್ಮನೆ ಇದ್ದೀರಿ? ಅದು ನನಗೆ ಅರ್ಥವಾಗಿಲ್ಲ. ಯಕ್ಷ ಪ್ರಶ್ನೆ. ಆ ಕಡೆ ಸ್ವಲ್ಪ ಗಮನ ಹರಿಸಬೇಕು. ಆಮೇಲೆ ಕುಡಿಯುವ ನೀರು. ನಿಮಗೆ ಗೊತ್ತು. ನೀವು ಹೇಳಿದ್ದೀರಿ ಈ ವರ್ಷವೆಲ್ಲಾ ಕರ್ನಾಟಕವನ್ನು ಜಲಾವೃತ ಮಾಡಿ ಹಾಕುತ್ತೇವೆ, ಅದು ನಮ್ಮ ಭಾರಿ ಅಂಬಿಷಿಯಸ್ ಪ್ರೋಗ್ರಾಮ್ ಎಂದು ಅಂದುಕೊಂದು ಏನೋ ನಾಮಕರಣವನ್ನು ಮಾಡಿದ್ದೀರಿ. ಎಲ್ಲಿದೆ ಸ್ವಾಮಿ ನೀರು? ನಮ್ಮ ಹತ್ತಿರ ಬಂದು ನೋಡಿ. ನೀವು ನೋಡಿದ್ದೀರಿ, ಭಾಷಣ ಮಾಡಿದ್ದೀರಿ. ನೀರು ಕೊಡುತ್ತೇವೆ ಎಂದು ಹೇಳಿ ನಮ್ಮ ಜನರು ಅದೇ ನೀರು ನಂಬಿಕೊಂಡು ಕಣ್ಣಲ್ಲಿ ನೀರು ಹಾಕುತ್ತಾ ಇದ್ದಾರೆ. ನಾಳೆ ಆ ನೀರು ಬರುತ್ತದೆ. 400 ಅಡಿ 500 ಅಡಿಯಲ್ಲಿ ನೀರು ಇದೆ ಸನ್ಮಾನ್ಯ ಸಚಿವರೇ. ಹ್ಯಾಂಡ್ ಪಂಪ್‌ಗಳು ಕೆಲಸ ಮಾಡುವ ಸ್ಥಿತಿಗಳಲ್ಲಿಲ್ಲ ನಮ್ಮ ಭಾಗದಲ್ಲಿ. ಅವುಗಳಿಗೆ ಪವರ್ ಪಂಪನ್ನು ನೀವು ಅಳವಡಿಸಲೇಬೇಕಾಗಿದೆ. ಕೆ.ಇ.ಬಿ. ಕಣ್ಣಾಮುಚ್ಚಾಲೆ ಆಡುತ್ತಿದೆ. ಕುಡಿಯುವ ನೀರಿಗೆ ನಾವು ಎಷ್ಟು ಯಾತನೆಪಡುತ್ತಿದ್ದೇವೆ ಕೋಲಾರ ತುಮಕೂರು ಜನರು ಎಂದರೆ ಬಹುಶ : ತಮಗೆ ಅರ್ಥವಾಗುವುದಿಲ್ಲ. ಒಂದು ಸಲ ಬನ್ನಿ ದಯವಿಟ್ಟು ಆ ಕಡೆ ನೋಡುವಿರಂತೆ. 100 ಅಡಿ 200 ಅಡಿ ಮೇಲೆ ಹ್ಯಾಂಡ್ ಪಂಪ್‌ಗಳಲ್ಲಿ ನೀರು ಎತ್ತುವುದಕ್ಕಾಗುವುದಿಲ್ಲ ಸಾರ್. ಇವತ್ತು ನಿಮಗೆ ಇರುವ ಮೆಕಾನಿಸಂ ನಿಮ್ಮ ಹ್ಯಾಂಡ್ ಪಂಪ್ಸ್ ಇದೇಯಲ್ಲಾ, ಭಾರಿ ಎಂದರೆ 150 ಅಡಿ ಪಂಪ್ ಮಾಡಬಹುದು. ನಾವು ಈಗ ಕೊರೆಯುತ್ತಿರುವ ಬೋರ್‌ವೆಲ್‌ಗಳೇ

400 ಟಿ 500 ಅಡಿ. ಅವಕ್ಕೇನಾದರೂ ಸ್ಪೆಷಲ್ ಆಲೋಚನೆ ಮಾಡಿ, ಅಲ್ಲಿಗೆಲ್ಲಾ ಏನಾದರೂ ಎಂ.ಡಬ್ಲ್ಯು.ಎಸ್. ಮತ್ತೊಂದು ಮಾಡುವ ಆಲೋಚನೆ ಮಾಡಿ. ನೀವು ಆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದರೆ ಹಳ್ಳಿಯ ಜನರಿಗೆ ಸ್ವಲ್ಪ ನೀರು ಸಿಗುತ್ತದೆ. 10 ಸಾವಿರ ಚಿಲ್ಲರೆ ಕೋಟಿ ಬೆಂಗಳೂರಿಗೆ ನೀರು ತರುವ ಬಗ್ಗೆ ನೀವು ಯೋಚನೆ ಮಾಡುತ್ತೀರಿ. ಒಂದು ಸಾವಿರ ಕೋಟಿ ನೀವು ಇಡೀ ಸಮಗ್ರ ಕರ್ನಾಟಕ ಗ್ರಾಮೀಣ ಪ್ರದೇಶಕ್ಕೆ ನೀರು ಕೊಡುವುದಕ್ಕೆ ಆಲೋಚನೆ ಮಾಡುವುದಿಲ್ಲ ಎಂದರೆ ನಾವೇನು ಭಾಷಣ ಮಾಡಬೇಕು? ನಮಗೆ ಅರ್ಥವಾಗಿಲ್ಲ. ಆಮೇಲೆ ನಿಮ್ಮ ಈ ಸಮೀಕ್ಷೆ ಓದಿ. Every year agricultural production is reduced. Every year oil seed production is reduced. ಏನು ಮತ್ತೆ ವರಮಾನ. ಯಾರು ದುಡಿದು ಬದುಕುತ್ತಿದ್ದ, ಅವರ ಶಕ್ತಿಯನ್ನು ಕಳೆದಿದ್ದೀರಿ. ಸಾರ್, ನಾನು ನಿಮಗೊಂದು ಪ್ರಶ್ನೆ ಕೇಳುತ್ತೇನೆ. ಲೆವಿ ಕೆಲಕ್ಷನ್ ಸಿಸ್ಟಂಗೆ ವಿರುದ್ಧವಾಗಿ ನೀವೇನಾದರೂ ರೈತನ ಮಗನಾಗಿದ್ದರೆ ಒಂದು ರೆಸಲ್ಯೂಷನ್‌ನನ್ನು ಕೇಂದ್ರಕ ಸರ್ಕಾರದ ವಿರುದ್ಧವಾಗಿ ಪಾಸ್ ಮಾಡಿಸಬೇಕಾಗಿತ್ತು. why only a farmer should be levied. ಭತ್ತ ಬೆಳೆಯುವವನೇ ನೀವು ಪಾಯಿಂಟ್‌ನಲ್ಲಾದರೂ ಲೆವಿಯನ್ನು ಕಲೆಕ್ಟ್ ಮಾಡಿ. ರೈತರೇ ಕೊಡುತ್ತಿರುವುದು ಇವತ್ತು. ಯಾರೂ ರೈಸ್ ಮಿಲ್ ಓನರ್ಸ್ ಲೆವಿ ಕೊಡುತ್ತಿಲ್ಲ. ನಮ್ಮ ಹತ್ತಿರ ಹಿಡಿದುಕೊಂಡೇ ಲೆವಿ ಕೊಡುವುದು. ಹಾಗಾದರೆ ಬಾಟಾ ಚಪ್ಪಲಿ ಮಾಡುವವನು ಲೆವಿ ಕೊಡಲಿ, ಬಡವರಿಗೆ ಕೊಡಿಸೋಣ. ನಿಮ್ಮ ರಿಲಯನ್ಸ್‌ನವನು ಬಂದು ಲೆವಿ ಕೊಡಲಿ, ಯಾರಾದರೂ ಬಡವರಿಗೆ ಬಟ್ಟೆ ಕೊಡಿಸೋಣ. ರೈತ ಬೆಳೆದಿದ್ದಕ್ಕೆ ಲೆವಿ ಕೊಡಬೇಕು. ಇನ್ಯಾರೂ ಬೆಳೆದಿದ್ದಕ್ಕೆ ಕೊಡುವುದಕ್ಕಾಗುವುದಿಲ್ಲವೇ? ಲೆವಿ ಕೊಡುವ ಬದಲು ನಮ್ಮ ರೇಟನ್ನು ಕೊಟ್ಟು ಕೊಂಡುಕೊಳ್ಳಲಿ. ಸಬ್ಸಿಡೈಸ್ ಮಾಡಿಕೊಡಲಿ. ತಾವೊಂದು ಹೋರಾಟವನ್ನು ಆರಂಭ ಮಾಡಬೇಕು. ನಮ್ಮ ಬೈರೇಗೌಡರು ಇದ್ದರೆ ಹೇಳುತ್ತಿದ್ದ. ಸಮಗ್ರವಾದ ಕೃಷಿ ನೀತಿ ಬಗ್ಗೆ. ಈ ದೇಶದ ಮೊದಲನೇ ಕೃಷಿ ನೀತಿ ಬರೆದರನು ಹೇಳಿದ್ದಾನೆ, ಯಾವಾಗ ನೀವು ಈ ಲೆವಿ ಸಿಸ್ಟಂ ತಂದಿರಿ, ಯಾವಾಗ ನೀವು ಇಂಟರ್-ಸ್ಟೇಟ್ ಟ್ರಾನ್ಸ್‌ಪೋರ್ಟೇಷನ್ನನ್ನು ರದ್ದುಮಾಡಿದ್ದೀರಿ, ಯಾವಾಗ ನೀವು ಇಂಟರ್-ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟೇಷನನ್ನು ರದ್ದು ಮಾಡಿದಿರಿ, ಅವತ್ತು ಈ ದೇಶದ, ಆ ರಾಜ್ಯದ ರೈತರನ್ನು ಕೊಂದಿರಿ. ನಮಗೆ ಮಾರುಕಟ್ಟೆ ಮಾಡುವ ಫೆಸಿಲಿಟೀಸ್ ಅನ್ನು ರಿಮ್ಯಾಕ್ಸ್ ಮಾಡಿದಿರಿ. ನಮಗೆ ಲೆವಿ ಸಿಸ್ಟಂ ತಂದಿರಿ. ಯಾರೋ ಊಟ ಮಾಡಲಿಕ್ಕೆ ನಾನು ಲೆವಿ ಕೊಡಬೇಕಾ? ನಾನು ಬಳಸುವುದಕ್ಕೂ ಲೆವಿನಲ್ಲಿ ಅಡುಕೂಲ ಕೊಡಿಸಿ. ಈ ಆಲೋಚನೆಗಳನ್ನು ನೀವು ಮಾಡದೇ ಹೋದರೆ ಅನಾನುಕೂಲ ಆಗುತ್ತದೆ. ಹಾರೆ ಕೊಡಿಸಿ, ಗುದ್ದಲಿ ಕೊಡಿಸಿ, ಟ್ರ್ಯಾಕ್ಟರ್ ಕೊಡಿಸಿ, ಪಿಕಾಸಿ ಕೊಡಿಸಿ. ಏನಾದರೂ ಒಂದು ಲೆವಿನಲ್ಲಿ ಮಾಡಬೇಕಲ್ಲಾ. ನೀವು ಒಂದು ಸ್ಪೀಲ್ ಇಂಡಸ್ಟ್ರೀ ಇಟ್ಟುಕೊಂಡಿದ್ದೀರಿ ಇಷ್ಟು ಪರ್ಸೆಂಟ್ ಲೆವಿ ಕೊಡಿ ಎಂದು ಸಣ್ಣಪ್ಪ ಶಂಕರ್ ಅವರಿಗೆ ಹೇಳಿ ನಮಗೆ ಕೊಡಿಸಿ. ಟ್ರ್ಯಾಕ್ಟರ್ ಕೊಡಿಸಿ ಲೆವಿನಲ್ಲಿ ಒಂದಿಷ್ಟು ಟ್ರ್ಯಾಕ್ಟರ್ ತೆಗೆದುಕೊಳ್ಳಿ. ನೀವು ಹತ್ತು ಸಾವಿರ, ಮೂವತ್ತು

ಸಾವಿರ ಕೊಡುತ್ತಿರುವ ಸಬ್ಸಿಡಿ ಬದಲು ನಮಗೆ ಒಂಡಿಷ್ಟು ಲೆವಿನಲ್ಲಿ ಇಂಪ್ಲಿಮೆಂಟ್ಸ್ ಬರುವ ಹಾಗೆ ಮಾಡಿ; ನಾವು ಸಂತೋಷಪಡುತ್ತೇವೆ. ಯಾರಿಗೆ ನೀವು ಸಬ್ಸಿಡಿ ಕೊಡುತ್ತೀರಿ? ಯಾರಿಗೆ ನೀವು ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಿ ಕೊಡುತ್ತೀರಿ? ಯಾರನ್ನು ಹೋಗಿ ಕೈಕಾಲು ಕಟ್ಟಿಕೊಂಡು ಬಂದು ಇಲ್ಲಿ ಇಂಡಸ್ಟ್ರೀ ಮಾಡಿಸುತ್ತೀರಿ? ಅವರಿಗೆ ಎಲ್ಲಾ ಸಹಾಯ ಮಾಡುತ್ತೀರಿ. ಯಾರು ಈ ದೇಶದ ಮಗ ಎಂದು ಭಾವಿಸಿಕೊಂಡು ಬದುಕಿದ್ದು, ಅವನಿಗೆ ಯಾವುದೇ ರೀತಿಯ ಸಪೋರ್ಟ್‌ನ್ನು ಇವತ್ತು ರಾಜ್ಯ ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ನಿರೀಕ್ಷಣೆ ಮಾಡದಂತಹ ಸ್ಥಿತಿಗೆ ತಂದು ತಲುಪಿಸಿ ಬಿಟ್ಟಿದ್ದೀರಿ. ಎಲ್ಲಿಯವರೆಗೆ ಆ ಮಗ ನಿಮ್ಮ ಅಮೂರ್ತ್ಯಸೇನ್ ಅವರು ಬರೆದ ಹಾಗೆ, ಆ ಗ್ರಾಮೀಣ ಪ್ರದೇಶದಲ್ಲಿ ಬದುಕಿರುವ ಮಗ, ಆ ಗ್ರಾಮೀಣ ಪ್ರದೇಶದಲ್ಲಿ ಉಸಿರಾಡುತ್ತಿರುವ ಜೀವ ಸಮಾಧಾನ ಪಡುವುದಿಲ್ಲ, ಅಲ್ಲಿಯವರೆಗೆ ಎಕನಾಮಿಕ್ಸ್‌ಗೆ, ಫೈನಾನ್ಸ್‌ಗೆ ಈ ಬಜೆಟ್‌ಗೆ ಯಾವುದೇ ಅರ್ಥ ಉಳಿಯುವುದಿಲ್ಲ. ನಮಗೆ ಗೊತ್ತು. ನೀವು ಇವತ್ತು ಏನೂ ಮಾಡುವ ಸ್ಥಿತಿಯಲ್ಲಿಲ್ಲ. ಆದರೆ ಕೆಲಸವನ್ನು ನಾವು ಮಾತನಾಡಲೇ ಬೇಕಾಗುತ್ತದೆ. ಏಕೆಂದರೆ ನಿಮ್ಮಿಂದ ನಾವೆಲ್ಲಾ ನಿರೀಕ್ಷೆ ಮಾಡಿದ್ದವು. ಕೊನೆಯ ವರ್ಷ ಆದರೂ ಕನಿಷ್ಟ ತಿರುಗಿ ಓಟು ಕೇಳುವ ಆಸೆಗಾದರೂ ಏನಾದರೂ ನಮಗೆ ಮಾಡಿ ಹೋಗುತ್ತೀರಿ ಎಂದು ತಿಳಿದುಕೊಂಡಿದ್ದೆವು. ಆದರೆ ನಾವು ಆ ಆಸೆಯನ್ನೂ ಏಕೋ ಬಿಟ್ಟ ಹಾಗೆ ಕಾಣುತ್ತದೆ. ಈ ವರ್ಷದ ಬಜೆಟ್ಟು ಅನ್ನು ನಾವು ನಿರೀಕ್ಷೆ ಮಾಡುತ್ತಿದ್ದೆವು. ನಿಮಗೆ ಎರಡು ಮಾತು ಹೇಳಿ ಹೊಗುತ್ತೇನೆ. ಕನಿಷ್ಟ ಈ ಕೆಇಬಿ ಇಲಾಖೆಯನ್ನ ನೀವು ಕಂಟ್ರೋಲಿಗ್ ತೆಗೆದುಕೊಂಡಿದ್ದರೆ, ಕನಿಷ್ಟ ಅವರು ಅನಾವಶ್ಯಕವಾಗಿ ಮಾಡಿರತಕ್ಕಂಥ ಗೊಂದಲವನ್ನು ನಿವಾರಣೆ ಮಾಡಿದ್ದರೆ ಒಂದು ಐದರಿಂದ ಹತ್ತು ಪರ್ಸೆಂಟ್ ಓಟು ಜಾಸ್ತಿ ನಿಮಗೆ ಬರುತ್ತಿತ್ತು. ಸುಮ್ಮ ಸುಮ್ಮನೇ ಕ್ರಿಯೇಟ್ ಮಾಡುತ್ತಾರೆ ಗೊಂದಲವನ್ನು. ಯಾರಿಗೆ ಬೇಕಿತ್ತು ಇವತ್ತು ಈ ಸ್ಟೋರ್ ಶಿಫ್ಟ್ ಮಾಡುವುದು ನೀವು ಒಪ್ಪಿಕೊಳ್ಳುತ್ತೀರಾ? ಇವತ್ತು ಅದರ ಅವಶ್ಯಕತೆ ಇತ್ತಾ? ಇವತ್ತು ನೋಡಿ ಬನ್ನಿ, 40, 45, ತಾಲ್ಲೂಕುಗಳಲ್ಲಿ ಸ್ಟೈಕ್ ನಿಮ್ಮ ಪಾರ್ಟಿಗೆ ಧಿಕ್ಕಾರ, ಎಂಎಲ್‌ಎಗಳಿಗೆ ಧಿಕ್ಕಾರ. ನಾವೆಲ್ಲಾ ಅಶಕ್ತರು. ಕನಿಷ್ಟ ನೀವು ಮೀಟರ್ ಹಾಕುತ್ತೀರಾ? ಹಾಕುವುದಕ್ಕೆ ಆಗುತ್ತದಾ? ಏಕೆ ಸಾರ್ ನೀವು ಗೊಂದಲವನ್ನು ಮಾಡಿ ರೈತರ ಓಟುಗಳನ್ನು ಕಳೆದುಕೊಂಡಿರಿ? ಇದು ನನಗೆ ಅರ್ಥ ಆಗಲಿಲ್ಲ. ನಾನು ಅವತ್ತು ಹೇಳಿದ್ದೆ. ನೀವು ನಿಮಗೆ ಓಟು ಹಾಕಿರುವಂತಹ ಜನಕ್ಕೆ ತಲುಪಲು ದೂರ ಆಗುತ್ತಿದ್ದೀರಿ, ಇದು ಚೆನ್ನಾಗಿ ಕಾಣುವುದಿಲ್ಲ. ಏನಾದರೂ ಮುಂದಿನ ವರ್ಷಗಳಲ್ಲಾದರೂ ಹೋಗುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದ್ದೇ. ನಿಮಗೆ ಆ ಆಸೆ ಇಲ್ಲ. ನಿಮಗೆ ಅವರ ಹತ್ತಿರ ಹೋಗಲು ಮನಸ್ಸೂ ಇಲ್ಲ. ನಮಗೆಲ್ಲಾ ಇವತ್ತು ಎನ್‌ಆರ್‌ಡಬ್ಲ್ಯೂಎಸ್, ಎಆರ್‌ಡಬ್ಲ್ಯೂಎಸ್ ಸ್ಕೀಮ್‌ಗಳು ಸ್ಕಾಂಕ್ಷನ್ ಆಗಿವೆ. ದುಡ್ಡು ಇಲ್ಲದೇ ವರ್ಷಕ್ಕೆ ಇಷ್ಟಿಷ್ಟು ಮಾತ್ರ ಇಂಪ್ಲಿಮೆಂಟ್ ಮಾಡಬೇಕೆಂದು ಹೇಳಿ ಸ್ಕಾಂಕ್ಷನ್ಡ್ ಪ್ಲಾನ್‌ಗಳನ್ನೂ ಪೆಂಡಿಂಗ್ ಇಟ್ಟಿದ್ದಾರೆ. ದಯಮಾಡಿ ಅದನ್ನು ತರಿಸಿ ಬಿಟ್ಟು ಆ ಸ್ಕೀಮ್‌ಗಳಿಗೆ ನೀರು ಕೊಡಿ. ಒಂದು

ಸಾವಿರದಿಂದ ಎರಡು ಸಾವಿರ ಜನಸಂಖ್ಯೆ ಇರುವಂತಹ ಊರಿನಲ್ಲಿ ಓವರ್‌ಹೆಡ್ ಟ್ಯಾಂಕ್ ಸ್ಕೀಮ್‌ನಲ್ಲಿ ನೀರು ಕೊಡುತ್ತೇವೆ. ಈ ವರ್ಷಕ್ಕೆ ಸೇರಿಸುವುದಿಲ್ಲ, ಮುಂದಿನ ವರ್ಷಕ್ಕೆ ಸೇರಿಸುತ್ತೇವೆಂದು ಮಾತನಾಡುತ್ತಾರೆ. ಮುಂದಿನ ವರ್ಷಕ್ಕೆ ಸೇರಿಸುವುದಕ್ಕೆ ಆಗುವುದಿಲ್ಲ, ಅದರ ಮುಂದಿನ ವರ್ಷಕ್ಕೆ ಸೇರಿಸುತ್ತೇವೆಂದು ಮಾತನಾಡುತ್ತಾರೆ. ಜನ ಇಮತ್ತು ಯಾರಿಗೂ ಕಾಯುವ ಸ್ಥಿತಿಯಲ್ಲಿಲ್ಲ, ತಂತ್ರಜ್ಞಾನ, ಕಾಲ ಎರಡೂ ವೇಗವಾಗಿ ಹೋಗುತ್ತಿದೆ. ಅದರ ಜೊತೆಗೇ ತಾವು ಕಾಲು ಹಾಕಿದರೆ ಮತ್ತೆ ಈ ಕಡೆಯ ಕುರ್ಚಿ ಆಸೆ ಇಟ್ಟುಕೊಳ್ಳಬಹುದು. ಇಲ್ಲದಿದ್ದರೆ ಕಷ್ಟ ಆಗುತ್ತದೆ. ನಾನು ನಿರ್ಧಾಕ್ಷಿಣ್ಯವಾಗಿ ಹೇಳುತ್ತಿರುವುದು ಏಕೆ ಎಂದರೆ ಇನ್ನೊಂದು ಆರು ತಿಂಗಳು ಇದೆ. ಮನಸ್ಸು ಮಾಡಿದರೆ ಏನಾದರೂ ಮಾಡಬಹುದು. ಸ್ವಲ್ಪ ಗ್ರಾಮೀಣ ಸೊಗಡಿಗೆ ಆಸೆ ಇಟ್ಟುಕೊಂಡು ಆ ಕಡೆಗೆ ಕೊಡಬೇಕು. ಎರಡನೆಯದು ಕೆಲವು ಎಕ್ಸೆಂಪ್ಷನ್ ಹಾಗೂ ಕೆಲಸಕ್ಕೆ ಟ್ಯಾಕ್ಸ್ ಹಾಕುವ ವಿಚಾರವನ್ನು ತಾವು ಮಾಡಿದ್ದೀರಿ. ನಾನು ಒಂದು ವಿಷಯಕ್ಕೆ ಸಂತೋಷಪಡುತ್ತೇನೆ. ಕಾಯರ್ ಮೇಲೆ ಇದ್ದಿದ್ದು, ಹಸ್ಕ್ ಮೇಲೆ ಇದ್ದ ಟ್ಯಾಕ್ಸ್ ತೆಗೆದಿರಿ. ಮೊಟ್ಟೆ ಮೇಲೆ ಏಕೆ ಸಾರ್ ಟ್ಯಾಕ್ಸ್ ಹಾಕುವುದಕ್ಕೆ ಹೋದಿರಿ?

Charcoal is charged. Charcoal is under your taxation. ನಾವೇನು ಇದ್ದಿಲು ಮಾಡುತ್ತಿದ್ದೆವು, ಅದಕ್ಕೆ ನೀವು ಟ್ಯಾಕ್ಸ್ ಹಾಕಿದ್ದೀರಿ. ನಿಮಗೆ ಗೊತ್ತಿಲ್ಲ. ನಾನು ವ್ಯಾಲ್ಯೂ ಆಡೆಡ್ ಟ್ಯಾಕ್ಸ್ ಸಿಸ್ಟಂ ತರುತ್ತೇನೆ, ಬೇಸ್ ವೈಡ್ ಮಾಡುತ್ತೇನೆಂದು ಹೇಳಿ ಮೊಟ್ಟೆಗೆ ಇದ್ದಿದ್ದು ಈ ವರ್ಷ ತೆಗೆದಿದ್ದೀರಿ. ಬೊಟ್ಟಿಗೆ ಹೋದ ವರ್ಷ ಹಾಕಿಂದತಹ ಕರ ಹಾಗೆಯೇ ಮುಂದುವರಿಸಿಕೊಂಡು ಹೋಗಿದ್ದೀರಿ. ತೆಂಗಿನಕಾಯಿ ಚಿಪ್ಪು, ಮಾರುವ ವ್ಯಕ್ತಿಗಳ ವಿಚಾರ. ನಾನು ಒಬ್ಬ ತೆಂಗಿನಕಾಯಿ ಬೆಳೆಯುವನು ಹೇಳುತ್ತಿದ್ದೇನೆ. ನಿಮ್ಮ ವಿಧಾನಸಬೆಯ ಶಾಸಕನಾಗಿ ಹೇಳುತ್ತಿದ್ದೇನೆ. ನೀವು ಚಾರ್‌ಕೋಲ್ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಅದಕ್ಕಾಗಿ ನಮ್ಮ ಹತ್ತಿರ ಚಿಪ್ಪು ಕೊಳ್ಳುವವರು ದಿಕ್ಕು ಇಲ್ಲದ ಹಾಗೆ ಆಗಿದ್ದಾರೆ. ನಮಗೆ ಏನು 100 -150 ರೂಪಾಯಿ ತೆಂಗಿನ ಕಾಯಿ ಕೊಬ್ಬರಿ ಚಿಪ್ಪಿನಲ್ಲಿ ಬರುತ್ತಿತ್ತು, ಆ ವರಮಾನ ಬಂದ್ ಆಗಿದೆ. ಕೊಲ್ಲುವವರೆ ಇಲ್ಲ. ದಯಮಾಡಿ ಅದನ್ನು ನೀವು ತೆಗೆಯಬೇಕಾಗುತ್ತದೆ. ಈಗ ನೀವು ಕೆಲವು ಕಡೆ ಹೇಳಿದಿರಿ. ಹೋದಸಾರಿ ನಾವು ಹೇಳಿದೆವು, ಬೇಡಿಕೊಂಡೆವು, ವೀಟ್ ಅಂಡ್ ವೀಟ್ ಪ್ರಾಡಕ್ಟ್ಸ್, ಮೇಲೆ ಕರ ಹಾಕಬೇಡಿ ಎಂದು ಬೇಡಿಕೊಂಡೆವು. ಕೇಳಲಿಲ್ಲ. ಸುಮಾರು 30 ರಿಂದ 40 ಇಂಡಸ್ಟ್ರೀಗಳು ಸಫರ್ ಆಯಿತು. ನಾವೇನಾದರೂ ಹೇಳಿದರೆ ನೀವು ಒಂದೇ ಸಿದ್ಧಾಂತ ಹೇಳುತ್ತಿರಿ. ನಾನು ಯಾರ ಮಾತೂ ಕೇಳುವುದಿಲ್ಲ, ಹೊಗಿ, ಎಲ್ಲರನ್ನೂ ಕೇಳಿಕೊಂಡು ಬರ್ಜಿ ಮಾಡಿದ್ದೇನೆಂದು ಹೇಳುತ್ತೀರಿ. ಸಾರ್ ನಿಮಗೆ ಒಳ್ಳೆಯ ಹೆಸರು ಬರಬೇಕಾದ ಕಡೆ ಎರಡು ಪರ್ಸೆಂಟ್, ಒಂದು ಪರ್ಸೆಂಟ್ ಟ್ಯಾಕ್ಸ್ ಅನ್ನು ಕಾಂಪ್ರೊಮೈಸ್ ಮಾಡುವುದಕ್ಕೆ ಬಿಡುವುದಿಲ್ಲ ಅಂದರೆ ಸರ್ಕಾರ ಅಷ್ಟೊಂದು ಒಳ್ಳೆಯ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ನಿಮಗೆ ಏನಂತಿ ಮಾಡುತ್ತಿದ್ದೇನೆ. ತಾವು ತೆಂಗಿನಕಾಯಿ ಚಿಪ್ಪಿನ ಮೇಲೆ ಕರ ಹಾಕಿದ್ದೀರಿ,

ಚಾರ್‌ಕೋಲ್ ಮೇಲಿನ ಕರವನ್ನು ತಾವು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಚಾರ್‌ಕೋಲ್ ಅನ್ನು ಏನು ಕೊಂಡು ಕೊಂಡು ಹೋಗುತ್ತಿದ್ದರು, ಅವರು ನಮ್ಮ ಮನೆಯ ಹತ್ತಿರ ಬಂದು ಚಿಪ್ಪು ತೆಗೆದುಕೊಂಡು ಹೋಗುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ. ನಾನು ನಿಮಗೆ ಆಮೇಲೆ ಡೀಟೇಲ್ ಆಗಿ ಬರೆದು ಕಳುಹಿಸುತ್ತೇನೆ. ಎರಡನೆಯದು, ನೀವು ಇವತ್ತು ಏನು ಎಕ್ಸಪೋರ್ಟ್ ಓರಿಯೆಂಟೆಡ್ ಇಂಡಸ್ಟ್ರೀ ಇದ್ದವರಿಗೆ ಎಲ್ಲಾ ಫೆಸಿಲಿಟೀಸ್ ಕೊಟ್ಟು ಅವರನ್ನು ಆಚೆಗೆ ಕಳುಹಿಸುವುದಕ್ಕೆ ಮಾಡುತ್ತಿದ್ದೀರಿ. ನಮ್ಮ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್, ಹೊರಗಡೆ ಹೋಗಬೇಕಾದರೆ (ಸಿ) ಫಾರ್ಮ್ ತೆಗೆದುಕೊಂಡು ಬನ್ನಿ. ಅಲ್ಲಿ ಯಾರಿಗೆ ಮಾರುತ್ತೀರಿ ತನ್ನಿ, ಇಲ್ಲಿ ಯಾರಿಗೆ ಮಾರುತ್ತೀರಿ ಎಂದು ವಿವರ ತನ್ನಿ. ಇದನ್ನು ತೆಗೆದುಕೊಂಡು ಬಂದು ಈ ದೇಶದ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಅನ್ನು ಇಲ್ಲೇ ಉಳಿಸುವುದಕ್ಕೆ ವ್ಯವಸ್ಥೆ ಮಾಡಿದರೆ ನಮಗೆ ಮಾರ್ಕೆಟಿಂಗ್ ಫೆಸಿಲಿಟೀಸ್ ಸಿಗುತ್ತದೆ. ನಾವು ಪ್ರಾಡ್ಯೂಸರ್ ಆಗಿ ಹೊರಗೆ ಹೋಗಬೇಕು. ನಾನು ನಿಮಗೆ ವಂದನೆ ಸಲ್ಲಿಸುತ್ತೇನೆ. ತಾವು ಹೋದ ವರ್ಷ ಅಡಿಕೆಗೆ (ಸಿ) ಫಾರ್ಮ ತೆಗೆದಿರಿ. ಅಡಿಕೆಯನ್ನು ಮುಕ್ತ ಮಾಡಿದಿರಿ. ಹಾಗಾಗಿ ಅಡಿಕೆಗೆ ಮತ್ತೆ ರೇಟ್ ಬಂತು. ಕೊಬ್ಬರಿಗೆ ತೆಗೆಯಿರಿ. ನಾನು ತಮಗೆ ಬಂದು ಕೇಳಿಕೊಂಡಾಗ ಎರಡು ವರ್ಷದ ಕರ ತೆಗೆದು ಕೊಟ್ಟಿರಿ. ಧಾರಣೆ ಬಂತು; ಈಗ ಮತ್ತೆ ನಿಮ್ಮ ಇಲಾಖೆಯವರು ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದ್ದಾರೆ. ಇಲ್ಲ ಅದು ಸರ್ಕಾರಿ ಆದೇಶ ಆಗಿಲ್ಲ. ಕೋರ್ಟ್ ಡಿಸಿಷನ್ ಆಗಿದೆ, ಸಿ ಫಾರ್ಮ್ ಈಸ್ ಎ ಮಸ್ಟ್ ಎಂದು ಹೇಳಿ, ಮೂವ್‌ಮೆಂಟ್ ಆಗಲೇ ರಿಸ್ಟ್ರಿಕ್ಟ್ ಆಗಿದೆ. ಸಿ ಫಾರ್ಮ ಇದೊಂದು ರಾಜ್ಯದಲ್ಲಿ ಹಾಕಿ ಪಕ್ಕದ ರಾಜ್ಯಗಳೆಲ್ಲೆಲ್ಲಾ ಹಾಕಲಿಲ್ಲ ಎಂದರೆ ನಿಮ್ಮ ಮಾಲು ಆಚೆಗೆ ಹೋಗುವುದಿಲ್ಲ. ಏನಾದರೂ ನೀವು ಈ ರಾಜ್ಯಕ್ಕೆ ಒಳ್ಳೆಯದು ಮಾಡಬೇಕು. ರೈತರಿಗೆ ಅನುಕೂಲ ಆಗಬೇಕು ಎಂದರೆ ಹೊರಗಡೆಯಿಂದ ಬರುವಂತಹ ವಸ್ತುಗಳಿಗೆ ಟ್ಯಾಕ್ಸ್ ಹಾಕಿ. ಇಲ್ಲಿಂದ ಹೊರಗಡೆ ಹೊಗುವಂತಹ ವಸ್ತುಗಳಿಗೆ ಏಕೆ ಟ್ಯಾಕ್ಸ್ ಹಾಕುತ್ತಿದ್ದೀರಿ? ಕಡಿಮೆ ಮಾಡಬೇಕಾಗುತ್ತದೆ. ಈ ಟ್ಯಾಕ್ಸನ್ನು ನೀವು ಕಡಿಮೆ ಮಾಡದೇ ಹೋದರೆ ರಿಸ್ಟ್ರಿಕ್ಟೆಡ್ ಮಾರ್ಕೆಟ್‌ನಲ್ಲಿ ನಮಗೆ ಲಾಭದಾಯಕವಾದಂತಹ ಸ್ಥಿತಿ ಸಿಗುವುದಿಲ್ಲ. ಅದನ್ನು ಏನಾದರೂ ತಾವು ಆಲೋಚನೆ ಮಾಡಬೇಕು. ಇನ್ನು ಅನೇಕ ಐಟಂಗಳು ಇವೆ. ಈ ವ್ಯಾಲೂ ಆಡೆಡ್ ಟ್ಯಾಕ್ಸ್ ಸಿಸ್ಟಂನಲ್ಲಿ ತರುತ್ತೇವೆಂದು ಹೇಳಿ ಶೆಡ್ಯೂಲ್ 5(ಎ) ಇವತ್ತೆಲ್ಲಾ ನೀವು ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದು ಅಂತಹ ಒಳ್ಳೆಯ ತೀರ್ಮಾನ ಎಂದು ನಾನೇನೂ ಭಾವಿಸಿಲ್ಲ. ಕೆಲವು ಐಟಂಗಳಿಗೆ ಟ್ಯಾಕ್ಸ್ ಹಾಕಬಾರದು ಎಂದು ಏನು ಇತ್ತು, ಅಮೆಂಡ್‌ಮಾಡಿ ಕೊಂಡು ನಾವು ಟ್ಯಾಕ್ಸಿಂಗ್ ಏರಿಯಾದೊಳಗೆ ತಂದುಬಿಟ್ಟರಿ. ಎರಡು ಪೈಸೆ, ಮೂರು ಪೈಸೆ ಹಾಕಿದ್ದಾರೆ ನಿಮಗೆ ಏನಾಗುತ್ತಿರಲಿಲ್ಲ. ದಯಮಾಡಿ ಮರು ಚಿಂತನೆ ಮಾಡಬೇಕು. ಅದನ್ನು ಯೋಚನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ನಾನೀಗ ನಿಮಗೆ ಕೇಳುತ್ತಿದ್ದೇನೆ. ಈಗ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೀರಿ. ಸಿನೆಮಾದವರಿಗೆ ನಾವು 15 ಲಕ್ಷದವರೆಗೆ ಒಳ್ಳೆಯ ಸಿನೆಮಾಗೆ ಸಬ್ಸಿಡಿ ಕೊಡುತ್ತೇವೆ ಎಂದು

ಹೇಳಿದ್ದೀರಿ. ನಿಜ. ಅಷ್ಟೊಂದು ಕೊಡುವ ಅಗತ್ಯ ಇತ್ತಾ ಎಂದು ಇನ್ನೊಮ್ಮೆ ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ ಯಾರಿಗೋ ಒಬ್ಬರಿಗೆ ನೀವು 15 ಲಕ್ಷ ಕೊಡುವುದರಿಂದ ಏನಾಗುತ್ತದೆ ಎಂದು ಹೇಳಿ ನನಗೆ ಗೊತ್ತಿಲ್ಲ. ಅದರ ಬದಲು ಇನ್ನೊಂದು ಕಡೆ ಯೋಚನೆ ಮಾಡಿ. ಈ ದೇಶದ ಭಾಷೆ ಬೆಲೆಯಬೇಕು. ಈ ದೇಶದ ಕಲೆ ಉಳಿಯಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೀರಿ ಎಂದು ಭಾವಿಸುತ್ತೇನೆ. ಪುಸ್ತಕ ಬರೆಯುವವರಿಗೆ ಏನಾದರೂ ಮಾಡಿ. ಒಳ್ಳೆಯ ಪುಸ್ತಕ ಬರೆದವನಿಗೆ ನೀವು ಸಬ್ಸಿಡೈಜ್ಡ್ ಮಾಡಿ ಸ್ವಲ್ಪ ಮಾರುಕಟ್ಟೆ ಮಾಡಲಿಕ್ಕೆ ಅನುಕೂಲ ಆದರೆ ನಾವೆಲ್ಲಾ ಒಂದು ಕೊಂಡು ಇಟ್ಟು ಕೊಳ್ಳಬಹುದಾ? ಈಗ ಕನ್ನಡದಲ್ಲಿ ಇವತ್ತು ಬರೆಯುತ್ತಿರುವ ಪುಸ್ತಕಗಳ ಸಂಖ್ಯೆಗೆ ಕೊರತೆಯೇ ಇಲ್ಲ. ಅದಕ್ಕೆ ಓದುವವರು ಏಕೆ ಕಡಿಮೆ ಆಗುತ್ತಿದ್ದಾರೆ ಎಂದರೆ ಕೊಳ್ಳುವ ಶಕ್ತಿ ನಮಗೆ ಇವತ್ತು ಕಡಿಮೆ ಆಗಿದೆ.

ಶ್ರೀ ಸಿದ್ಧರಾಮಯ್ಯ :— ಎಲೆಕ್ಟ್ರಾನಿಕ್ ಮಾಧ್ಯಮಗಳು ಬಂದಿರುವುದರಿಂದ ಓದುಗರ ಸಂಖ್ಯೆ ಕಡಿಮೆ ಆಗಿದೆ. ಇಂಟರ್‌ನೆಟ್‌ನಲ್ಲಿ ಇವತ್ತು ಅಮೇರಿಕಾದಲ್ಲಿರುವುದನ್ನು ಇವತ್ತು ಇಲ್ಲಿ ನೋಡಲಿಕ್ಕೆ ಸಾಧ್ಯವಾಗುತ್ತಿದೆ. ಅಲ್ಲೇ ನೋಡಿಕೊಂಡು ಬಿಡುತ್ತಾರೆ. ಪುಸ್ತಕ ಓದಿಕೊಂಡು ಏಕೆ ಕಷ್ಟ ಪಡುತ್ತಾರೆ? ಆ ಪರಿಸ್ಥಿತಿಯಾಗಿ ಪುಸ್ತಕಗಳು ಕಡಿಮೆ ಆಗುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ತಾವು ಪಬ್ಲಿಷರ್ಸ್ ಪುಸ್ತಕಗಳಿಗೆ ಫಿಕ್ಸ್ ಮಾಡಿರುವ ಪ್ರೈಸ್ ಅನ್ನು ತೆಗೆದುಕೊಂಡು ನೋಡಿದರೆ, ಸಾಧಾರಣ ಮನುಷ್ಯರು ಇವತ್ತು ಪುಸ್ತಕವನ್ನು ಕೊಂಡು ಓದುವಂತಹ ಸ್ಥಿತಿಯಲ್ಲಿ ಇಲ್ಲ. ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ನಿಮಗೆ ಗೊತ್ತಿರುವ ಸಿಡಿಗಳಲ್ಲಿ ನಿಮಗೆ ಬರುತ್ತಿರುವ ಇಂಟರ್‌ನೆಟ್‌ನಲ್ಲಿ ಅಮೇರಿಕಾವನ್ನು ಚಿತ್ರಿಸುವುದು ಬಿಟ್ಟರೆ ಕರ್ನಾಟಕ ಚಿತ್ರಿಸುವುದಕ್ಕೆ ಆಗುವುದೇ ಇಲ್ಲ. ನಾನು ಕುಳಿತುಕೊಂಡು ನಮ್ಮ ಮನೆಯ ಕಂಪ್ಯೂಟರ್ ಆನ್ ಮಾಡಿದರೆ ಜಾನ್ಸನ್ ಆಫ್ ಕೆನಡಿ ಅವರದ್ದು ಎರಡು ಸೆಕೆಂಡ್ ಭಾಷಣ ಬರುವುದು ಬಿಟ್ಟರೆ ನಿಮ್ಮ ಭಾಷಣ ಬರುವ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿಲ್ಲ. -ನಾನು ಯೂಸ್ ಮಾಡುವವನು ಹೇಳುತ್ತಿದ್ದೇನೆ. ಅವರು ಮಾಡಿದ್ದಾರೆ ಇಂಟರ್‌ನೆಟ್‌ನಲ್ಲಿ ನಾವೆಲ್ ಬಂದಿದೆ. ನೀವು ಭಗವದ್ಗೀತೆಯಿಂದ ಹಿಡಿದು ರಾಮಾಯಣದವರೆಗೆ ಸಿಡಿಯಲ್ಲಿ ತರುತ್ತಿದ್ದೀರಿ. ಅದ್ಯಾರಿಗೆ ಎನ್ನುವುದು ಪ್ರಶ್ನೆ? ನಾನು ಕೇಳುತ್ತಿರುವುದು ನಿಜವಾಗಿಯೂ ಇವತ್ತು ಬರಹಗಾರರು ಜಾಸ್ತಿ ಆಗಿದ್ದಾರೆ. ಪಬ್ಲಿಷರ್ಸ್ ಜಾಸ್ತಿ ಆಗಿದ್ದಾರೆ. ಸ್ವಲ್ಪಮಟ್ಟಿಗೆ ತಾವು ಸಬ್ಸಿಡೈಸ್ಡ್ ಮಾಡುವ ಆಲೋಚನೆಯನ್ನು ಮಾಡಬೇಕು. ಈ ಸಿನಿಮಾಗೆ ಕೊಟ್ಟ ಹಾಗೆ ಪ್ರೋತ್ಸಾಹ ಕೊಡಿ. ಎಲ್ಲಾ ಪುಸ್ತಕವನ್ನೂ ನಾನು ಸಬ್ಸಿಡೈಜ್ಡ್ ಮಾಡು ಎಂದು ಕೇಳುವುದಿಲ್ಲ. ಒಳ್ಳೆಯ ಪುಸ್ತಕಕ್ಕೆ ನಾವು ಕನಿಷ್ಠ ಇಷ್ಟು ಪರ್ಸೆಂಟ್ ರಿಯಾಯಿತಿ ಕೊಡುತ್ತೇವೆಂದು ಹೇಳಿ. ಪಬ್ಲಿಷ್ ಮಾಡಲಿಕ್ಕೆ ಅನುಕೂಲ ಮಾಡಿ ಕೊಡಿ. ಅಥವಾ ನಿಮ್ಮದೇ ಯಾವುದಾದರೂ ಪಬ್ಲಿಷಿಂಗ್ ಹೌಸಿಂಗ್ ಪ್ರೆಸ್‌ನಿಂದ ಪ್ರಿಂಟ್ ಮಾಡಿಸಿಕೊಡಿ. ಸಾಹಿತ್ಯ ಏನಾದರೂ ನಾವು ಹೀಗೆಯೇ ಬಿಟ್ಟುಕೊಂಡು ಹೋದರೆ ಬಹಳ

ದಿಮಸ ಪುಸ್ತಕ ಬರೆಯವವರು ದಿಕ್ಕು ಇಲ್ಲದ ಹಾಗೆ ಆಗುತ್ತಾರೆ. ಈಗ ಏಕೆ ಬರೆಯುತ್ತಿದ್ದಾರೆ. ಯಾರೋ ಲೆಟರಿಗೆಗಳು ಬರೆಯುತ್ತಿದ್ದಾರೆ. ಯಾರೋ ಸಂಬಳ ತೆಗೆದುಕೊಳ್ಳುವುದಕ್ಕೆ ಬರೆಯುತ್ತಾರೆ. ಆದರೆ ಒಬ್ಬ ಬಡತನದಲ್ಲಿರುವಂತಹ ವ್ಯಕ್ತಿ ಪುಸ್ತಕ ಬರೆದವನು ಪಬ್ಲಿಷ್ ಮಾಡಿಸುವಂತಹ ಸ್ಥಿತಿಯಲ್ಲಿ ಇಲ್ಲ. ಆ ಕಡೆ ಆ ಕಡೆ ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳಿ ಇನ್ನು ಕಂದಾಯ ಸಚಿವರ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಬೇಕಾಗುತ್ತದೆ. ಅನೇಕ ಸಲ ಕೇಳಿಕೊಂಡಿದ್ದೇನೆ. ಈ ಎಕ್ಸೈಜ್ ಲ್ಯಾಂಡ್, ಸೇಂದಿ ವನ ಏನು ಇದೆ, ಇದನ್ನು ನೀವು ಬಗರ್ ಹುಕುಂನಲ್ಲಾದರೂ ವಿಲೇ ಮಾಡಿ ಅಥವಾ ಯಾವುದಾದರೂ ಒಂದು ಸ್ಪೇಷಲ್ ಸ್ಕೀಮ್ ತೆಗೆದುಕೊಂಡು ಬಂದು ಯಾರು ಪೊಸಿಷನ್‌ನಲ್ಲಿದ್ದಾರೆ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ಇಲ್ಲಿ ಕನಿಷ್ಟ ಕಿಮ್ಮತ್ತಾದರೂ ಫಿಕ್ಸ್ ಮಾಡಿ ಕೊಡಿ ಕಟ್ಟುತ್ತಾರೆ. ನಿಮಗೆ ಅವರು ಎವಿಕ್ಟ್ ಮಾಡಿಸಿ ಸರ್ಕಾರಕ್ಕೆ ಮತ್ತೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬಿಟ್ಟು ಕೊಡುವುದಕ್ಕೆ ಅವರು ತಯಾರಾಗಿ ಇಲ್ಲ. ನಿಮ್ಮ ಅಧಿಕಾರಿಗಳು ಸಮರ್ಥರೂ ಇಲ್ಲ, ಆ ಜಮೀನುಗಳನ್ನು ಬಿಡಿಸುಕೊಳ್ಳಲಿಕ್ಕೆ. ಏನಾದರೂ ಮಾಡಿ. ಬೆಂಗಳೂರು ಸಿಟಿಯಲ್ಲಿರುವವನು ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡಿದವನಿಗೆ ನಾವು ರೆಗ್ಯುಲರೈಸ್ ಮಾಡುತ್ತೇವೆ. ಎನ್ನುವ ಜನ ಅಲ್ಲೊಬ್ಬ ರೈತನ ಜಮೀನು ರೆಗ್ಯುಲರೈಸ್ ಮಾಡುವುದಕ್ಕೆ ಸ್ಕೀಮ್ ತೆಗೆದುಕೊಳ್ಳುವುದಕ್ಕೆ ಎಷ್ಟು ವರ್ಷ ಯೋಚನೆ ಮಾಡುತ್ತೀರಿ?

5.50 ಪಿ.ಎಂ.

ಯಾವನೋ ಇಲ್ಲಿ ಬಂದು ಮೋಸ ಮಾಡಿ ನಿಮ್ಮ ಜಾಗದಲ್ಲಿ ಮನೆ ಕಟ್ಟಿಕೊಂಡು ರೆಗ್ಯುಲರೈಸ್ ಆಗಬಹುದು. ಆದರೆ, ಅಲ್ಲಿನ ನಾಲ್ಕು ಗುಂಟೆ ಜಮೀನನ್ನು ಉತ್ತುಕೊಂಡು ಗಿಡಗಳನ್ನು ಬೆಳೆದುಕೊಂಡವನಿಗೆ ರೆಗುಲರೈಸ್ ಮಾಡುವುದಕ್ಕೆ ತಮಗೆ ಇಷ್ಟೊಂದು ಜಿಜ್ಞಾಸೆಯೇ? ಎಕ್ಸೈಜ್ ಲ್ಯಾಂಡ್‌ನಲ್ಲಿ ಇವೊತ್ತು ಟ್ಯಾಡಿ ಇದೆಯೇ? ಈಚಲು ಗಿಡಗಳಿವೆಯೇ? ಅಥವಾ ರಾಜ್ಯದಲ್ಲೇನಾದರೂ ಜಿಲ್ಲೆ ಬಿಟ್ಟು ಜಿಲ್ಲೆಯಲ್ಲಿ ಟ್ಯಾಡಿ ಮಾಡುವುದಕ್ಕೆ ಅವಕಾಶವಿದೆಯೇ? ತಾವು ಏಕೆ ರಿಸರ್ವ ಆಗಿ ಇಟ್ಟುಕೊಂಡಿದ್ದೀರೆಂಬುದು ನನಗರ್ಥವಾಗಿಲ್ಲ. ಈಗ ಯಾವುದಾದರೊಂದು ಜಿಜ್ಞಾಸೆಗೆ ಸಮಸ್ಯೆಯಿರಬೇಕು. ಇವೊತ್ತು ಎಕ್ಸೈಜ್ ಲ್ಯಾಂಡ್ ಅನ್ನು ರಿಲೀಸ್ ಮಾಡುವುದಕ್ಕೆ ಸಮಸ್ಯ ಏನಿದೆ? ಇದನ್ನು ತಾವು ಹೇಳಬೇಕು. ಕ್ಯಾಬಿನೆಟ್ ಸಬ್-ಕಮಿಟಿ ಮುಂದೆ ಇದು ತೀರ್ಮಾನವಾಗಲಿಲ್ಲವೆನ್ನುವ ಒಂದೇ ಕಾರಣಕ್ಕೆ ನೀವು ಇದನ್ನು ಬಿಟ್ಟುಕೊಂಡು ಹೋದರೆ ನಿಜವಾಗಿಯೂ ಇದರ ಶ್ರೇಯಸ್ಸು, ಯಶಸ್ಸು ಬೇರೆಯವರಿಗೆ ಹೋಗುತ್ತದೆ. ಹಳೆಯ ಮೈಸೂರು ಭಾಗದಲ್ಲಿರುವ ಸೇಂದಿ ವನದ ಬಗ್ಗೆ ದಯಮಾಡಿ ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು. ಯಾರು ಆ ಜಮೀನಿನಲ್ಲಿದ್ದಾರೆ, ಅವರಿಗೆ ಉಚಿತವಾಗಿ ಕೊಡಬೇಡಿ. ಬಗರ್‌ಹುಕುಂನಲ್ಲಿ ಕೊಡುವುದಕ್ಕೆ ಆಗದೇಹೋದರೆ ಕಿಮ್ಮತ್ತನ್ನು ನಿಗದಿಪಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಸಬ್-ಡಿವಿಜನಲ್ ಕೇಡರ್‌ನ ಅಧಿಕಾರಿಗಳನ್ನು ನೇಮಿಸಲಾಗುವುದೆಂದು,

ಇನ್ನೆರಡು ತಿಂಗಳೊಳಗೆ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಿಸಿ ತಾಲ್ಲೂಕು ಆಡಳಿತವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತೇವೆಂದು ತಾವು ಭಾರಿಯಾಗಿ ಹೇಳಿದ್ದೀರಲ್ಲಾ, ಎಲ್ಲಿ ಹೋಯಿತು ನಿಮ್ಮ ಆಲೋಚನೆ? ಛೇರ್ಮನ್‌ರವರೆ, ಇದರ ಬಗ್ಗೆ ನಿಮಗೆ ಹೇಳಿರಲಿಲ್ಲವೆ? ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಿಸಲಾಗುವುದೆಂದು ಹೇಳಿದಾಗ ನೀವು ಇಲ್ಲಿ ಇರಲಿಲ್ಲವೆ? ಕಳೆದ ಸಾರಿ ಹೇಳಿದ ಮಾತು ಇದಾಗಿದ್ದು, ಇದುವರೆವಿಗೂ ಕಾರ್ಯಗತವಾಗಲ್ಲಿಲ್ಲ. ಅಸಿಸ್ಟೆಂಟ್ ಕಮೀಷನರ್‌ಗಳನ್ನು ಏಕೆ ನೇಮಿಸಲ್ಲಿಲ್ಲ? ತಾಲ್ಲೂಕುಗಳಿಗೆ ಅಸಿಸ್ಟೆಂಟ್ ಕಮಿಷನರ್‌ಗಳನ್ನು ತಕ್ಷಣ ನೇಮಿಸದೆ ಹೋದರೆ ನಿಜವಾಗಿಯೂ ತಾಲ್ಲೂಕುಗಳು ಹಾಳಾಗಿ ಹೋಗುತ್ತವೆ. ತಹಸೀಲ್ದಾರ್‌ಗಳು ಹೇಗಿದ್ದಾರೆಂದರೆ ನಾಲ್ಕು ಜನರು ಒಟ್ಟುಗೂಡಿ ದೊಣ್ಣೆ ಹಿಡಿದುಕೊಂಡು ಹೋಗಿ ಇಂತಹ ಎಂಡಾರ್ಸ್‌ಮೆಂಟ್ ಕೊಡು ಎಂದರೆ ಕೊಡುತ್ತಾರೆಯೇ ವಿನ: 'ನೀವು ಆಫೀಲ್ ಹಾಕಿ ಬಾ, ಮತ್ತೊಂದು ರೀತಿಯಲ್ಲಿ ಬಾ' ಎಂದು ಹೇಳುವುದಿಲ್ಲ. ಐದು ಜನರು ತಹಶೀಲ್ದಾರ್ ಬಳಿಗೆ ಹೋಗಿ ಹೆದರಿಸಿ ಬೇಕಾದಂತೆ ಆರ್ಡರ್‌ಗಳನ್ನು ಇವೊತ್ತು ಬರೆಸಿಕೊಂಡು ಬರಬಹುದಾಗಿದೆ. ಇದನ್ನು ನಾನು ಹುಡುಗಾಟಿಕೆಗಾಗಿ ಹೇಳುತ್ತಿಲ್ಲ. ಅದಕ್ಕೆ ಕಾನೂನು ಬೇಕಾಗಿಲ್ಲ, ನೀತಿಯೂ ಬೇಕಾಗಿಲ್ಲ. ನನ್ನ ಮುಂದೆ ಸಮಸ್ಯೆ ಇಲ್ಲದಿದ್ದರೆ ಸಾಕೆಂದು ಮತ್ತು ಕಛೇರಿಯಿಂದ ಜನರು ಖಾಲಿಯಾದರೆ ಸಾಕೆಂದು ತಿಳಿದು ಅವರು ತಕ್ಷಣ ಬರೆದುಕೊಟ್ಟು ಬಿಡುತ್ತಾರೆ. ಅಧಿಕಾರಿಗಳು ಈ ರೀತಿ ಆಡಳಿತ ನಡೆಸಿದರೆ ನಾಳೆ ಗತಿಯೇನು? ಮಾಜಿ ಸದಸ್ಯರಾದ ಮಹದೇವ ಪ್ರಸಾದ್‌ರವರು ಹೇಳಿದಂತೆ ತಹಸೀಲ್ದಾರ್ ಕಛೇರಿಯಲ್ಲಿ ಗುಮಾಸ್ತರು ಯಾರು, ಪ್ಯೂನ್ ಯಾರು, ತಹಸೀಲ್ದಾರ್ ಯಾರು, ಅಧಿಕಾರಿಗಳು ಯಾರು ಎಂಬುದು ಗೊತ್ತಾಗದ ಸ್ಥಿತಿಗೆ ಬಂದಿದೆ. ಇವರು ಎಲ್ಲೋ ಕುಳಿತ್ತಿರುತ್ತಾರೆ, ಅವರು ಎಲ್ಲೋ ಕುಳಿತ್ತಿರುತ್ತಾರೆ. ಬಗರ್‌ಹುಕುಂಗೆ ಸಂಬಂಧಿಸಿದಂತೆ ನನ್ನ ತಾಲ್ಲೂಕಿನ ವಿಚಾರ ಹೇಳುವುದಾದರೆ 1994ನೇ ಇಸವಿಯಲ್ಲಿ ನಾನು ಅಧ್ಯಕ್ಷನಾಗಿದಾದಗ 52 ಪ್ರಕರಣಗಳಿಗೆ ಸಂಬಂಧಿಸಿದಂತೆ ಜಮೀನು ಕೊಡಬೇಕೆಂದು ನೋಟೀಸ್ ಕೊಟ್ಟು ದುಡ್ಡು ಕಟ್ಟಿಸಿಕೊಂಡಿದ್ದರೂ ಇದುವರೆವಿಗೂ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ. ಇದರ ಬಗ್ಗೆ ತಾವು ಎನ್‌ಕ್ವೈರಿ ಮಾಡಿಸಿ. ಛೇರ್ಮನ್‌ರವರೆ, ಇಂತಹ ಗಹನವಾದ ವಿಚಾರವನ್ನು ತಾವು ಸಣ್ಣಪ್ಪ ಕಂದಾಯ ಸಚಿವರ ಗಮನಕ್ಕೆ ತರಬೇಕು. ನಮ್ಮ ಚಿಕ್ಕಮಾಯಿಗೌಡನಪುರ ತಾಲ್ಲೂಕು ಕಛೇರಿಯಲ್ಲಿ 102 ಸಾಗುವಳಿ ಚೀಟಿಗಳು ಕ್ಲಿಯರನ್ಸ್‌ಗಾಗಿದೆ. ಈ ತಾಲ್ಲೂಕಿನಲ್ಲಿ ಎರಡು ಮ್ಯೂಟೇಷನ್ ರಿಜಿಸ್ಟರ್ ಇದೆ, ಜಾತಿ, ಪಾಪಿ ಮಾಡಿಕೊಂಡಿದ್ದಾರೆ. ಯಾರಿಗೆ ಜಮೀನಿನ ಸಾಗುವಳಿ ಚೀಟಿ ಕೊಟ್ಟಿದ್ದಾರೋ, ಅವರ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿ ಇಲ್ಲ. ಅಲ್ಲದೆ ಗಣಕೀಕರಣ ಮಾಡುತ್ತೇವೆಂದು ತಾವು ಹೇಳುತ್ತಿದ್ದು, ಯಾವಾಗ್ಯಾವುದನ್ನು ತಾವು ಗಣಕೀಕರಣ ಮಾಡುತ್ತೀರೆಂಬ ಬಗ್ಗೆ ನಮಗೆ ಜಿಜ್ಞಾಸೆ ಉಂಟಾಗಿದೆ. ಆ ರೆಕಾರ್ಡ್ ಮಾಡುತ್ತೀರೋ? ಇಲ್ಲವೇ ನಿಮ್ಮ ಒರಿಜಿನಲ್ ರೆಕಾರ್ಡ್‌ಅನ್ನು ಗಣಕೀಕರಣ ಮಾಡುತ್ತೀರೋ? ನಾನು ಬಗರ್‌ಹುಕುಂ ಅನ್ನು ಹಂಚುವುದಕ್ಕೆ ಹೋದರೆ ಪಾಪ, ಗೆಯ್ಯುತ್ತಿರುವುದು ಯಾರೋ ಆಗಿದ್ದು, ನಾವು ಕೇಳಿದರೆ

ಹಿಡುವಳಿದಾರರೆಂದು ಹೇಳಿಕೊಂಡು ಬರುತ್ತಿದ್ದಾರೆ. ಸಾಗುವಳಿ ಚೀಟಿಯನ್ನು ಕದ್ದುಕೊಂಡು ಹೋಗಿ ಸ್ವಂತ ಖಾತೆ, ಪಹಣಿ ಮಾಡಿಸಿಕೊಂಡಿದ್ದಾರೆಂದು ಕಂದಾಯ ಸಚಿವರಿಗೆ ಹೇಳುತ್ತಿದ್ದೇನೆ. ತಾವು ಈ ಬಗ್ಗೆ ಹೆಚ್ಚಿನ ಕಳಕಳಿ ವಹಿಸಬೇಕು. ನಾನು ಇಲ್ಲಿ ತಮಗೆ ಡಿಮ್ಯಾಂಡ್ ಮಾಡುತ್ತೇನೆ, ನಾನು ಹುಡುಗಾಟದ ಮಾತನಾಡುತ್ತಿಲ್ಲ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಾಗುವಳಿ ಚೀಟಿಯನ್ನು ಕದ್ದು ಫೋರ್ಜರಿ ರುಜು ಮಾಡಿ ಖಾತೆ, ಪಹಣಿ ಮಾಡಿರುವ ಅಧಿಕಾರಿಗಳ ವಿರುದ್ಧ ಕನಿಷ್ಠ ಪಕ್ಷ ನೀವು ಕ್ರಮ ಜರುಗಿಸಿ 'ಕಂದಾಯ ಸಚಿವರು ಪರವಾಗಿಲ್ಲ' ಎನ್ನಿಸಿಕೊಳ್ಳುವುದಕ್ಕೆ ತಯಾರಾಗುತ್ತಿರೋ ಇಲ್ಲವೋ? ಏಕೆಂದರೆ, ತಾವು ಚಿಕ್ಕನಾಯಕನಹಳ್ಳಿಗೆ ಬಂದಿದ್ದಾಗ ನಾನು ಸೂಕ್ಷ್ಮವಾಗಿ ಈ ಮಾತನ್ನು ಹೇಳಿದೆ. ನಾವು ಅವರ ಮೇಲೆ ಕೇಸ್ ಹಾಕಿಸಿದ್ದೇವೆ. ಇವೊತ್ತು ಅವರೆಲ್ಲರೂ ನಾವು 'ಪೊಲಿಶನ್'ನಲ್ಲಿದ್ದೇವೆ' ಎಂದು ಬಗರ್‌ಹುಕುಂನಲ್ಲಿ ಅರ್ಜಿ ತೆಗೆದುಕೊಂಡು ಬಂದಿದ್ದಾರೆ. ಅವೊತ್ತು ಕೇಸ್ ಹಾಕಿದರೆ ಇವೊತ್ತು ಅವರಿಗೆ ಮಂಜೂರು ಮಾಡುವ ಸ್ಥಿತಿ ನಿರ್ಮಾಣ ಮಾಡಿದಿರಿ. ನನಗೆ ತಿಳಿದ ಮಟ್ಟಿಗೆ ಯಾವ ಅಡಚಣೆಯೂ ಇಲ್ಲ. ಎಲ್ಲಿಯೂ ಎರಡು ಮ್ಯುಟೇಷನ್ ರಿಜಿಸ್ಟರ್‌ಗಳು ಇರಬಾರದು, ಖಾತೆ, ಪಹಣಿ ಆಗಬಾರದು. ಚಿಕ್ಕನಾಯಕನಹಳ್ಳಿ ಕಡೆ ತಾವು ಸ್ವಲ್ಪ ಗಮನಕೊಡಬೇಕು. ತಾವು ಈ ಬಗ್ಗೆ ವಿಶೇಷ ಮಾಡಿಕೊಂಡು ತಕ್ಷಣ ಎಸ್‌ಕ್ಯೂರಿ ಮಾಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಬೇಕು. ತಹಸೀಲ್ದಾರ್‌ರವರು ನಿವೃತ್ತರಾದ ನಂತರ ರುಜು ಹಾಕಿದ್ದಾರೆ. ಯಾವ ತಹಸೀಲ್ದಾರ್‌ನ ರುಜುವಿದೆ 'ರುಜುವನ್ನು ನಾನು ಹಾಕಿಲ್ಲ' ವೆಂದು ಹೇಳುವ ಸ್ಥಿತಿಯಿದೆ. ಇಂಥದನ್ನಾದರೂ ತಾವು ಸರಿಪಡಿಸಿಕೊಡಬೇಕು. ಇದರ ಜೊತೆಗೆ ರೆವೆನ್ಯೂ ಇಲಾಖೆಯಲ್ಲಿ ಕಾಯಕಲ್ಪ ಮಾಡುತ್ತೇವೆಂದು ತಾವೇನು ಹೊರಟಿದ್ದೀರಿ, ಅದೆಲ್ಲವನ್ನೂ ತಾವು ಶೀಘ್ರವಾಗಿ ಮಾಡಬೇಕಾಗುತ್ತದೆ. ಇವೊತ್ತು ಖಾತೆ, ಪಹಣಿ ಮಾಡುವುದಕ್ಕೆ ದುಡ್ಡು ಕೊಡದೆ ನಡೆಯುವ ಸ್ಥಿತಿಯಲ್ಲಿ ಇಲ್ಲ. ದುಡ್ಡು ಕೊಡದಿದ್ದರೆ ಕೆಲಸ ಆಗಿಯುವುದಿಲ್ಲ. ಆದುದರಿಂದ, ನೀವು ಏನಾದರೂ ಮಾಡಿ ಸ್ವಲ್ಪ ಬಿಗಿ ತರಬೇಕೆಂದು ಹೇಳಿ ಕೇಳಿಕೊಳ್ಳುತ್ತೇನೆ. ಛೇರ್ಮನ್‌ರವರು ಏಕೋ ಮೂಡ್‌ನಲ್ಲಿಲ್ಲ. 'ಹೇಮಾವತಿ'ಎಂಬ ಹೆಸರಿನವರೇ ನಮಗೆ ಅಪಾಯ! ನಮಗೆ ಹೇಮಾವತಿಯ ನೀರು ಬರಲಿಲ್ಲ, ನಮಗೆ ನೀವು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಚಿಕ್ಕನಾಯಕನಹಳ್ಳಿಗೆ ಏನಾದರೂ ಮಾಡಿ ಹೇಮಾವತಿ ನದಿ ನೀರು ಕೊಡಿ ಎಂದು ಐದು ವರ್ಷಗಳಿಂದ ಕೇಳಿತ್ತಿದ್ದೇವೆ. ಏಕೋ, ನಮ್ಮ ಗ್ರಹಚಾರವೇ ಚೆನ್ನಾಗಿಲ್ಲ. ಹೇಮಾವತಿ ಎನ್ನುವ ಹೆಸರೇ ನಮಗೆ ಆಗಿ ಬರಲಿಲ್ಲವೆಂದು ಹೇಳುತ್ತಾ ಸರ್ಕಾರದವರು ಆ ಕಡೆ ಹೆಚ್ಚಿನ ಆಸಕ್ತಿ ವಹಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಎಂ.ಪಿ. ಪ್ರಕಾಶ್‌ರವರಿಗೆ ಹೆಚ್ಚು ಒತ್ತಡ ತರುವುದೇನೆಂದರೆ, ಕುಡಿಯುವ ನೀರಿಗೆ ಏನಾದರೂ ಸಹಾಯ ಮಾಡಬೇಕು. 200, 300, 400 ಮತ್ತು 500 ಅಡಿ ಆಳದವರೆಗೆ ಬೋರ್ ತೆಗೆದು ಹ್ಯಾಂಡ್‌ಪಂಪ್‌ನಿಂದ ನೀರೆತ್ತಲು ಸಾಧ್ಯವಿಲ್ಲದಿರುವ ಪರಿಸ್ಥಿತಿಯಿರುವುದರಿಂದ ಎಂ.ಜಿ.ಎನ್.ಆರ್.ಇ.ಜಿ.ಎಸ್.ನಲ್ಲಿ, ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿಕೊಡಬೇಕು.

ತುಮಕೂರು ಮತ್ತು ಕೋಲಾರ ಜಿಲ್ಲೆಯ ಕೆಲವು ಭಾಗಗಳೇನಿವೆ, ಅಲ್ಲಿಗೆ ವಿಶೇಷವಾದದೊಂದು ಯೋಜನೆಯನ್ನು ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಈಗ ಹೊಸದಾಗಿ ಹೆಚ್ಚುವರಿಯಾಗಿ ಸುಮಾರು ಹದಿನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ಬಂದಿರುವುದರಿಂದ ತುಮಕೂರು ಜಿಲ್ಲೆಗೆ ಒಂದು ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೊಟ್ಟಿದ್ದೇವೆ. ಅದನ್ನು ಇವೊತ್ತು ಹಣಕಾಸು ಇಲಾಖೆ ಕ್ಲಿಯರ್ ಮಾಡುವುದರಿಂದ ನಾಳೆ ಇತ್ಯೊತ್ತಿಗೆ ಆ ಹಣ ತಮ್ಮ ಜಿಲ್ಲೆಗೆ ಬರುತ್ತದೆ. ಆ ಹೆಚ್ಚುವರಿ ಹಣದಲ್ಲಿ ತಾವು ಉಪಯೋಗಿಸಿಕೊಳ್ಳಬಹುದಾಗಿದೆ. ಅಲ್ಲದೆ 1999-2000ನೇ ಇಸವಿಯ ಆಯವ್ಯಯದಲ್ಲಿ ಐದು ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಹೆಚ್ಚು ಮಾಡಿದ್ದೇವೆ. ತಮ್ಮ ಜಿಲ್ಲೆಗೆ ಇರುವ ತೊಂದರೆ ಬೇರೆ ತರಹದ್ದಾಗಿದ್ದು ಅಂತರ್ಜಲದ ಕೊರತೆಯಿದ್ದು, ಹೇಮಾವತಿ ನದಿ ನೀರನ್ನು ಅಲ್ಲಿರುವ ಕೆರೆಗಳಿಗೆಲ್ಲಾ ತುಂಬಿಸಿದರೆ ತಮಗೆ ಅನುಕೂಲವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅದರ ಬಗ್ಗೆ ನಾನು ಹೇಳಲು ಹೊರಟಿದ್ದೆ. ನಮಗೇನಾದರೂ ಸ್ಪೆಷಲ್ ಸ್ಕೀಮಿನಲ್ಲಿ ಅಥವಾ ರಾಜೀವ್ ಗಾಂಧಿ ಟೆಕ್ನಾಲಜಿ ಮಿಷನ್‌ಗಳಲ್ಲಿ ತೆಗೆದಿಟ್ಟಿರುವ ಹಣದಲ್ಲಿಯಾದರೂ ಹೇಮಾವತಿ ನದಿಯಿಂದ ಎಷ್ಟೆಷ್ಟು ಕೆರೆಗಳಿಗೆ ನೀರು ತರಬಹುದೋ ತಂದು ಆ ಭಾಗದಲ್ಲಿರುವ ಕೆರೆಗಳಿಗೆ ಕೃಷಿ ಉದ್ದೇಶಕ್ಕಾಗಿ ನೀರು ಕೊಡದಿದ್ದರೂ ಪರವಾಗಿಲ್ಲ ನೀರನ್ನು ಅಲ್ಲಿ ಸಂಗ್ರಹಿಸಿ ಬೋರ್‌ವೆಲ್‌ಗಳನ್ನು ರಿಚಾರ್ಜ್ ಮಾಡುವುದಕ್ಕೆ ಅಥವಾ ಆ ನೀರನ್ನು ಪುನರಿಕ್ಷೆ ಮಾಡಿಕೊಂಡು ಟ್ಯಾಂಕುಗಳಿಗೆ ಪಂಪ್ ಮಾಡುವುದಕ್ಕಾದರೂ ಒಂದು ಯೋಜನೆ ಮಾಡಿಸಿ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಸದಸ್ಯರಾದ ಟಿ.ಬಿ. ಜಯಚಂದ್ರರವರಿಗೆ ಗೊತ್ತಿರುವಂತೆ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರು ಹರ್ಮೀಷನ್ ಕೊಟ್ಟಿರುವುದರಿಂದ ತಾವು ಆ ಕುರಿತು 5-6 ಪ್ರಸ್ತಾವನೆಗಳನ್ನು ಕಳುಹಿಸಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಆಗಲಿ. ನಾನು ತಮಗೆ ಆಗಲೇ ಹೇಳಿರುವಂತೆ ಬೆಳಗೆರೆ ಕೆರೆ, ಜೆ.ಸಿ.ಪುರ ಮತ್ತು ಗುಬ್ಬಿ ತಾಲ್ಲೂಕಿನ ದೊಡ್ಡಗುಬ್ಬಿ ಇಲ್ಲಿಗೆ 7-8 ಕಿಲೋಮೀಟರ್ ದೂರದಲ್ಲಿರು ಲೆಫ್ಟ್ ಸೈಡ್ ಆಫ್ ಹೇಮಾವತಿ ಕೆನಾಲ್‌ನಿಂದ ನೀರನ್ನು ತುಂಬಿಸಿ ಕೊಟ್ಟರೆ ಕನಿಷ್ಠ ಆ ಭಾಗದ ಸಮಸ್ಯೆಯನ್ನು ನಾವು ನಿಭಾಯಿಸಬಹುದು. ಮಾನ್ಯ ವೀರಪ್ಪಮೊಯಿಲಿಯವರು ಹೇಳಿದಂತೆ ನದಿ ದಂಡೆಯಲ್ಲಿ ವಾಸಿಸುವವರಿಗೆ ಪ್ರವಾಹ ಬಂದಂಥ ಸಂದರ್ಭದಲ್ಲಿ ಮಾತ್ರ ತೊಂದರೆಯಾಗುತ್ತದೆ. ಆದರೆ, ಬರಪೀಡಿತ ಪ್ರದೇಶದಲ್ಲಿರುವವರು ಯಾವಾಗಲೂ ತೊಂದರೆಗೊಳಗಾದವರಾಗಿದ್ದಾರೆ. ಆದುದರಿಂದ, ನಮ್ಮ ಭಾಗದ ಸಮಸ್ಯೆ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ ಸಮಸ್ಯೆ ಬಗೆಹರಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಹಾಲಾವಕಾಶ ಕಡಿಮೆಯಿದ್ದರೂ ಕೂಡ ಇಷ್ಟು

ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಛೇರ್ಮನ್‌ರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಛೇರ್ಮನ್‌ರವರೆ, ಇನ್ನು 2-3 ಜನ ಮಾನ್ಯ ಸದಸ್ಯರುಗಳು ಭಾಷಣ ಮಾಡಬೇಕಿರುವುದರಿಂದ ಇವೊತ್ತು ಭಾಷಣ ಮುಗಿಸಿ ಅದಕ್ಕೆ ನಾಳೆ ದಿವಸ ಉತ್ತರ ಕೊಡುವುದೆಂದು ತೀರ್ಮಾನವಾಗಿರುವುದರಿಂದ ಉಳಿದಿರುವ ಸಮಯವನ್ನು ಮಾತನಾಡಲು ಎಲ್ಲಾ ಸದಸ್ಯರುಗಳಿಗೂ ಹಂಚಿಕೊಟ್ಟರೆ ಅನುಕೂಲವಾಗುತ್ತದೆ.

+ಶ್ರೀ ಟಿ.ಬಿ.ಜಯಚಂದ್ರ (ಕಳಂಬೆಳ್ಳ) :— ಮಾನ್ಯ ಛೇರ್ಮನ್‌ರವರೆ, ನಾನು ಫೈನಾನ್ಸ್‌ಗೆ ಸೀಮಿತವಾಗಿ ಮಾತನಾಡುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ರಾಜ್ಯದ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಸತತವಾಗಿ ಐದನೆಯ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. 1999-2000ನೇ ಇಸವಿಯ ಆಯವ್ಯಯ ಪತ್ರವನ್ನು ಬಹುಧಾನ್ಯ ಸಂವತ್ಸರದಲ್ಲಿ ಮಂಡಿಸಿದ್ದು ಅದರ ಮೇಲೆ ಕ್ರಮಾಥಿ ಸಂವತ್ಸರದಲ್ಲಿ ಇವೊತ್ತು ಚರ್ಚೆಯಾಗುತ್ತಿದೆ. ಅವರು ಆಯವ್ಯಯವನ್ನು ಮಂಡಿಸುವಂಥ ಸಂದರ್ಭದಲ್ಲಿ ಜ್ಯೋತಿಷಿ ಅಥವಾ ಶಾಸ್ತ್ರದವರನ್ನು ಕೇಳಿದ್ದರೆ ಬಹುತ: ಗೊತ್ತಾಗುತ್ತಿತ್ತು. ಕ್ರಮಾಥಿ ಸಂವತ್ಸರದಲ್ಲಿ ಗುರು ಅಧಿಪತಿಯಾಗಿದ್ದು, ಅಡಳಿತದಲ್ಲಿ ಬದಲಾವಣೆ ಎನ್ನುವ ಮಾತನ್ನು ಸರ್ವಸಾಮಾನ್ಯವಾಗಿ ಹೊರಗಡೆ ಮಾತನಾಡುತ್ತೇವೆ. ಇವೊತ್ತು ಬಜೆಟ್ ಎನ್ನುವುದೊಂದು ವಿಶೇಷವಾದ ಡಾಕ್ಯುಮೆಂಟ್ ಆಗಿದ್ದು ವಿಧಾನಸಭೆಯಲ್ಲಿ ಮಂಡಿಸುವಂಥಾದ್ದಾಗಿದೆ. ಬಜೆಟ್ ಎಂದರೆ 'ಬೊಗೆಟ್ 'ಎಂದು ಫ್ರೆಂಚ್ ಭಾಷೆಯಿಂದ ಬಂದಿರುವ ಶಬ್ದವಾಗಿದೆ. ಇಂಗ್ಲಿಷಿನಲ್ಲಿ 'ಬಜೆಟ್'ಎಂದು ಹೇಳುವುದನ್ನು ಕನ್ನಡದಲ್ಲಿ ನಾವು 'ಚರ್ಮದ ಚೀಲ'ವೆಂದು ಅರ್ಥಮಾಡಿಕೊಂಡರೆ ತಪ್ಪಾಗಲಾರದು. ಬಜೆಟ್ ಅನ್ನು ಮಂಡಿಸುವಂಥ ಸಂದರ್ಭದಲ್ಲಿ ಚೀಲವನ್ನು ತರತಕ್ಕೂಥಾದ್ದು ಎಂದರೆ ಪೋಜ್ ಮಾಡಿ ಅದನ್ನು ಪ್ರಚಾರ ಮಾಡುವುದು ಬಹಳ ಕಾಲದಿಂದಲೂ ನಡೆದುಕೊಂಡು ಬಂದಿರುವ ವಾಡಿಕೆಯಾಗಿದೆ. ಬಜೆಟ್ ಒಂದು ವಿಶೇಷವಾದ ಡಾಕ್ಯುಮೆಂಟ್ ಆಗಿದ್ದು, ಇದು ರಾಜಕೀಯ ಸ್ಥಿತಿ-ಗತಿಗಳನ್ನು ವಿವರಿಸುವ ಒಂದು ದಾಖಲೆಯಾದರೂ ಕೂಡ ಅದರ ಒಟ್ಟಾರೆ ಸಾರಾಂಶ ತೆರಿಗೆಯ ನಿರ್ಧಾರಿತ ಕ್ರಮಗಳನ್ನು ಕಾರ್ಯಗೊಳ್ಸುವಂತಾದ್ದು ಮತ್ತು ಕಾರ್ಯನೀತಿಗಳನ್ನು ಸೂಚಿಸುವಂತಾದ್ದಾಗಿದೆ. ಇದೇ ಬಜೆಟ್‌ನಲ್ಲಿ ಮುಖ್ಯವಾಗಿ ಇರುವಂಥಾದ್ದು. ಇವೊತ್ತು ಬಜೆಟ್ ಮಂಡಿಸುವ ಉದ್ದೇಶವೇನೆಂದರೆ, ನಿರೀಕ್ಷಿತ ಸಂಪನ್ಮೂಲದಲ್ಲಿ ಏನಾದರೂ ಕೊರತೆಯುಂಟಾದರೆ, ಆ ಕೊರತೆಯನ್ನು ಹೊಸ ಸಂಪನ್ಮೂಲಗಳ ಮುಖಾಂತರ ತುಂಬುವಿಕೆ ಅಥವಾ ವೆಚ್ಚವನ್ನು ಸೂಕ್ತ ರೀತಿಯಲ್ಲಿ ಕಡಿಮೆ ಮಾಡಬಹುದೇ? ಎನ್ನುವುದಕ್ಕೋಸ್ಕರ ಬಜೆಟ್‌ಗೆ ಬಹಳ ಮಹತ್ವವಿರತ್ತದೆ. ಈ ಸಾಲಿನ ಬಜೆಟ್‌ನಲ್ಲಿ ಎಷ್ಟು ಖರ್ಚಾಗುತ್ತದೆ ಮತ್ತು ಯಾವ ರೀತಿಯಾದ ವೆಚ್ಚವನ್ನು ಭರಿಸಲಾಗುತ್ತದೆಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅದಕ್ಕೆ ಮಹತ್ವವಿದ್ದು ಜೊತೆಗೆ ಸರ್ಕಾರದ ಕಾರ್ಯನೀತಿ ಮತ್ತು ಅದರ ಉದ್ದೇಶ ಕೂಡ ಅಡಗಿರುತ್ತದೆ.

ಇವತ್ತು ವೆಚ್ಚದ ಮೊತ್ತವನ್ನು ಕಡಿಮೆ ಮಾಡುವ ಕೆಲಸವನ್ನು ಮಾಡಲಿಲ್ಲ. ಇವತ್ತು ರೆವಿನ್ಯೂ ರಿಸೀಟ್ಸ್‌ನ ಮೂಲಕ ಸಾಲವನ್ನು ತೀರಿಸತಕ್ಕ ಕೆಲಸವನ್ನು ಮಾಡಲು ಹೊರಟಿದ್ದಾರೆ. ನಾನು ಕೊಟ್ಟಿರುವ ಬಜೆಟ್‌ನ ವಿನಾಯತಿಗಳ ಬಗ್ಗೆ ಬಹಳ ಪತ್ರಿಕೆಗಳವರು ಹೊಗಳಿದ್ದಾರೆಂದು ಮಾನ್ಯ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಮಾತನಾಡುವಾಗ ಬಹಳ ಸಲ ಹೇಳಿದರು. ಬಹಳ ಒಳ್ಳೆಯ ಬಜೆಟ್‌ನ್ನು ಮಾಡಿದ್ದಾರೆಂದು ಪತ್ರಿಕೆಗಳವರು ಹೇಳಿದ್ದಾರೆಂದು ಅವರು ಹೇಳಿದರು. ಯಾವುದಾದರೂ ಬಜೆಟ್‌ನ್ನು ಮಂಡನೆ ಮಾಡಿದ ಮೇಲೆ ಅದನ್ನು ಬೇರೆ ಬಜೆಟ್‌ಗೆ ಹೋಲಿಸಿ ಇರತಕ್ಕ ವ್ಯತ್ಯಾಸವನ್ನು ನೋಡಿದ ಮೇಲೆ ಎಷ್ಟರಮಟ್ಟಿಗೆ ತಮ್ಮ ಬಜೆಟ್ ರಾಜ್ಯದ ಸಂಪನ್ಮೂಲವನ್ನು ವೃದ್ಧಿಯ ದೃಷ್ಟಿಯಿಂದ ಸಹಾಯವಾಗಿದೆ ಎಂಬುದು ಗೊತ್ತಾಗುತ್ತದೆ. ತಾವು ತಮ್ಮ ಕಾಲಾವಧಿಯಲ್ಲಿ ಐದು ಸಂಪೂರ್ಣವಾದ ಬಜೆಟ್‌ನ್ನು ಮಂಡನೆ ಮಾಡಿದ್ದೀರಿ. ನಾನು ತಮ್ಮ ಕಾಲದ ಮತ್ತು ತಮ್ಮ ಹಿಂದೆ ಆಡಳಿತ ನಡೆಸಿದ್ದಂಥ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಂಡಿಸಿದ್ದಂಥ ಬಜೆಟ್‌ಗಳನ್ನು ಹೋಲಿಕೆ ಮಾಡಬಯಸುತ್ತೇನೆ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ಮಂಡಿಸಿದ್ದ ಬಜೆಟ್ ಯಾವ ಪ್ರಮಾಣದಲ್ಲಿತ್ತು, ಅದರ ಸರ್ಪ್ಲಸ್ ಮತ್ತು ಡಿಫಿಸಿಟ್ ಯಾವ ಪ್ರಮಾಣದಲ್ಲಿ ಇತ್ತು ಎಂಬ ಬಗ್ಗೆ ಅಂಕಿ ಅಂಶವನ್ನು ಕೊಡುವುದಾದರೆ, 1989-90ರಲ್ಲಿ ನಾವು 3336 ಕೋಟಿ ಆದಾಯವನ್ನು ನಿರೀಕ್ಷೆ ಮಾಡಿದ್ದೆವು. ಖರ್ಚಾಗಿದ್ದು 3483 ಕೋಟಿ. ರೆವಿನ್ಯೂ ಡೆಫಿಸಿಟ್ 147 ಕೋಟಿ. 1990-91ರಲ್ಲಿ 3892 ಕೋಟಿ ಆದಾಯವನ್ನು ನಿರೀಕ್ಷೆ ಮಾಡಿದ್ದರೆ ಖರ್ಚಾಗಿದ್ದು 3971 ಕೋಟಿ, ಡೆಫಿಸಿಟ್ ಕೇವಲ 79 ಕೋಟಿ, 1991-92ರಲ್ಲಿ 4775 ಕೋಟಿ ಆದಾಯವನ್ನು ನಿರೀಕ್ಷೆ ಮಾಡಲಾಗಿತ್ತು, ಖರ್ಚಾಗಿದ್ದು 4954 ಕೋಟಿ, ಡೆಫಿಸಿಟ್ 179 ಕೋಟಿ, 1992-93ರಲ್ಲಿ 5472 ಕೋಟಿ ಆದಾಯವನ್ನು ನಿರೀಕ್ಷೆ ಮಾಡಲಾಗಿತ್ತು ಖರ್ಚು ಮಾಡಿದ್ದು 5592 ಕೋಟಿ 170 ಕೋಟಿ ಡಿಫಿಸಿಟ್. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಸಹ ಸತತವಾಗಿ ಡೆಫಿಸಿಟ್ ಇತ್ತು. ಆದರೆ ಪ್ರಮಾಣ 170 ಕೋಟಿಯಿಂದ 179 ಕೋಟಿಯವರೆಗೆ ಮಾತ್ರ ಇತ್ತು. 1993-94ರಲ್ಲಿ 6325 ಕೋಟಿ ಆದಾಯದ ನಿರೀಕ್ಷೆ ಇತ್ತು, ಖರ್ಚಾಗಿದ್ದು 6208, ಆ ವರ್ಷ 117 ಕೋಟಿ ಸರ್ಪ್ಲಸ್ ಇತ್ತು 1994-95 ರಲ್ಲಿ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 8168.36 ಕೋಟಿ ಆದಾಯದ ನಿರೀಕ್ಷೆ ಮಾಡಲಾಗಿದ್ದು, ಖರ್ಚಾಗಿದ್ದು 7948.42 ಕೋಟಿ. 219.94 ಸರ್ಪ್ಲಸ್ ಇತ್ತು. ತಮಗೆ ಅಧಿಕಾರವನ್ನು ಹಸ್ತಾಂತರ ಮಾಡುವ ಸಂದರ್ಭದಲ್ಲಿ ಆ ಹಿಡಿಗಂಟನ್ನು ಕೊಟ್ಟರು. 1994ರ ಡಿಸೆಂಬರ್‌ನಲ್ಲಿ ತಮಗೆ ಸರ್ಪ್ಲಸ್ ಬಜೆಟ್‌ನ್ನು ಹಸ್ತಾಂತರ ಮಾಡಿದರು. ತಮಗೆ ಅಧಿಕಾರವನ್ನು ವಹಿಸಿಕೊಟ್ಟ ಕೇವಲ ಮೂರುವರೆ ತಿಂಗಳಿನಲ್ಲಿ ಪರಿಣಾಮವೇನಾಯಿತು ಎಂದರೆ 1994-95ರ ಮೂರುವರೆ ತಿಂಗಳಿನಲ್ಲಿ 296 ಕೋಟಿ ಡೆಫಿಸಿಟ್ ಆಯಿತು. 1995-96ರಲ್ಲಿ 8543 ಕೋಟಿ ಆದಾಯವನ್ನೇನು ತಾವು ನಿರೀಕ್ಷೆ ಮಾಡಿದ್ದಿರಿ, ಖರ್ಚಾಗಿದ್ದು 8481 ಕೋಟಿ ಆ ವರ್ಷ 62 ಕೋಟಿ ಸರ್ಪ್ಲಸ್ ಬಜೆಟ್ ಮಾಡಿದಿರಿ. 1996-97ರಲ್ಲಿ 9622 ಕೋಟಿ ಆದಾಯ

ನಿರೀಕ್ಷೆ ಮಮಾಡಿದ್ದಾರೆ ಖರ್ಚಾಗಿದ್ದು 10,201 ಕೋಟಿ ಅಂದರೆ 579 ಕೋಟಿ ಡೆಫಿಸಿಟ್ ಬಜೆಟ್. 1997-98ರಲ್ಲಿ ಆದಾಯದ ನಿರೀಕ್ಷೆ ಮಾಡಿದ್ದು 11,4177 ಕೋಟಿ ಮೈನಸ್ 11,833 ಕೋಟಿ, 415 ಕೋಟಿ ಡೆಫಿಸಿಟ್. 1998-99 ಆದಾಯ ನಿರೀಕ್ಷೆ ಮಾಡಿದ್ದು 12,168 ಕೋಟಿ ಇದರಲ್ಲಿ 388 ಕೋಟಿ ಕೊರತೆಯಾಗಬಹುದು ಎಂದು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಆದರೆ ರಿವೈಸ್ಡ್ ಎಸ್ಟಿಮೇಟ್ ಮಾಡಿದಾಗ ಖರ್ಚು 13,564.91 ಕೋಟಿಯಾಗಿತ್ತು, ಒಟ್ಟಾರೆ ಡೆಫಿಸಿಟ್ 1396.60 ಕೋಟಿ. 1999-2000ರಲ್ಲಿ ನೀವು ಆದಾಯ ಆದಾಯ ನಿರೀಕ್ಷೆ ಮಾಡಿರತಕ್ಕದ್ದು 13,991.78 ಕೋಟಿ, ಖರ್ಚಾಗಿರತಕ್ಕದ್ದು 15,390.97 ಕೋಟಿಗಳು. ಅಂದರೆ ಇವತ್ತು 1399 ಕೋಟಿ ರೂಪಾಯಿಗಳ ಕೊರತೆ ಬಜೆಟ್‌ನ್ನು ಮಂಡನೆ ಮಾಡಿದ್ದೀರಿ. ತಾವು ರಿವೈಸ್ಡ್ ಎಸ್ಟಿಮೇಟ್ ಮಾಡುವ ಸಂದರ್ಭದಲ್ಲಿ ಒಟ್ಟಾರೆ ಕೊರತೆ ಎಷ್ಟು ಆಗುತ್ತದೆ ಎಂದು ಈವತ್ತೇ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಹೋದ ವರ್ಷ ತಾವು ಬಜೆಟ್‌ನಲ್ಲಿ 388 ಕೋಟಿ ರೂ. ಕೊರತೆಯಾಗುತ್ತದೆಂದು ಹೇಳಿದ್ದೀರಿ, ಆದರೆ ರಿವೈಸಡ್ ಎಸ್ಟಿಮೇಟ್ಸ್ ಪ್ರಕಾರ ಅದು 1396 ಕೋಟಿಯಾಯಿತು. ಈವತ್ತೇ ಬಜೆಟ್ ಕೊರತೆ 1399 ಕೋಟಿಯಾಗುತ್ತಿರಬೇಕಾದರೆ ಈ ಶತಮಾನದ ಅಂತ್ಯದಲ್ಲಿ ಇದು ಯಾವುದೇ ರೀತಿಯಲ್ಲೂ ಎರಡರಿಂದ ಮೂರು ಸಾವಿರ ಕೋಟಿ ರೂಪಾಯಿಗಳ ಕೊರತೆ ಬೀಳುವ ಸಾಧ್ಯತೆಗಳು ಇವೆ. ಆದರೆ ತಮ್ಮ ಅಡಳಿತಾವಧಿಯು ಕೇವಲ ಡಿಸೆಂಬರ್ ವರೆಗೆ ಮಾತ್ರ ಇರುತ್ತದೆ. ಆದರೆ ಮುಂದೆ ಅಧಿಕಾರಕ್ಕೆ ಬರುವ ಸರ್ಕಾರಗಳಿಗೆ ಬಹಳ ಹೊರೆಯನ್ನು ಕೊಟ್ಟು ಹೋಗುತ್ತಿದ್ದೀರಿ. ಮುಂದೆ ಸಹ ತಾವೇ ಅಧಿಕಾರಕ್ಕೆ ಬರುವುದಾಗಿ ಹೇಳುತ್ತಿದ್ದೀರಿ. ತಾವು ನಿಜವಾಗಿಯೂ ಮುಂದಿನ ಸಲವು ಅಧಿಕಾರಕ್ಕೆ ಬರಬೇಕು ಎಂಬ ಉದ್ದೇಶವಿದ್ದರೆ ರಾಜ್ಯದ ಹಿತದೃಷ್ಟಿಯೇನಾದರೂ ತಮ್ಮ ಗಮನದಲ್ಲಿ ಇದ್ದಿದ್ದರೆ ಇಷ್ಟೊಂದು ಕೊರತೆಯ ಬಜೆಟ್‌ನ್ನು ಮಂಡಿಸಲು ಪ್ರಯತ್ನ ಮಾಡುತ್ತಿರಲಿಲ್ಲ. ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರೂ ಹೌದು ಹಾಗೆಯೇ ರಾಜಕೀಯ ಪಕ್ಷದ ನಾಯಕರೂ ಹೌದು. ತಾವು ಇಂದು ಮಾಡಿರುವ ಬಜೆಟ್ ಭಾಷಣವು ರಾಜಕೀಯ ಪಕ್ಷದ ಮುಖಂಡರಾಗಿ ಮಾಡಿದಂಥ ಭಾಷಣವಾಗಿದೆಯೇ ಹೊರತು ಹಣಕಾಸು ಮಂತ್ರಿಗಳ ಭಾಷಣವಾಗಿ ಉಳಿದಿಲ್ಲ. ತಾವು ಮೈಸೂರಿನವರು. ವೈಯಕ್ತಿಕವಾಗಿ ನಾವಿಬ್ಬರೂ ಸ್ನೇಹಿತರು. ಮಹಾರಾಜರು ಮೈಸೂರು ರಾಜ್ಯವನ್ನು ಆಳುವಂಥ ಸಂದರ್ಭದಲ್ಲಿ, ನೂರು ವರ್ಷಗಳ ಹಿಂದೆ ಬಜೆಟ್ ಯಾವ ನಿಟ್ಟಿನಲ್ಲಿತ್ತು ಎಂದರೆ 1.79 ಕೋಟಿ ಬಜೆಟ್ ಅಂದಾಜು ಇತ್ತು. ಖರ್ಚಾಗಿದ್ದು 1.92 ಕೋಟಿ.ಆಗಲೂ ಕೊರತೆ ಬಜೆಟ್ ಇತ್ತು. ಏಕೆ ಕೊರತೆ ಬಜೆಟ್ ಇತ್ತು ಎಂದರೆ, ಆಗ ಸಾಂಕ್ರಾಮಿಕ ರೋಗವಾದ ಪ್ಲೇಗ್ ಇತ್ತು. ಆ ರೋಗ ಬಂದಾಗ ಊರಿನ ಜನರೆಲ್ಲಾ ಬೇರೆ ಕಡೆಗೆ ಹೋಗತಕ್ಕ ಸಾವಿರಾರು ಜನರು ಸತ್ತು ಹೋಗತಕ್ಕ ಸಂದರ್ಭದಲ್ಲಿ ಕೊರತೆ ಬಜೆಟ್ ಮಾಡಬೇಕಾಯಿತು. ನೂರು ವರ್ಷಗಳ ನಂತರ ಅದೇ ಮೈಸೂರಿನಿಂದ ಬಂದಿರತಕ್ಕ ಮೈಸೂರಿನ ಮಹಾರಾಜರ ಜಾಗದಲ್ಲಿ ಕುಳಿತು ತಾವು ಬಜೆಟ್ ಮಂಡನೆ ಮಾಡುತ್ತಿದ್ದೀರಿ, ಆದರೆ ಅವತ್ತು ಇದ್ದಂಥ

ಪ್ಲೇಗ್ ರೋಗ ಇವತ್ತು ಯಾವಾಗಲೂ ಬಂದಿರಲಿಲ್ಲ. ಆಕಸ್ಮಾತ್ ಪ್ಲೇಗ್ ಬಂದಿದ್ದರೆ ಜನತಾದಳದ ಸರ್ಕಾರಕ್ಕೆ ಬಂದಿದೆಯೆಂದು ಹೇಳಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಏಕೆಂದರೆ 1400 ಕೋಟಿ ರೂಪಾಯಿಗಳ ಕೊರತೆ ಬಜೆಟ್‌ನ್ನು ತಾವು ಮಂಡಿಸುತ್ತಿದ್ದೀರಿ. ಅದು ಶತಮಾನದ ಕೊನೆಯಲ್ಲಿ ಎರಡು ಇಲ್ಲವೇ ಮೂರು ಸಾವಿರವನ್ನು ಮೀರತಕ್ಕ ಸಂದರ್ಭವಿದೆಯೊಂಬುದನ್ನು ತಾವು ಮರೆಯಬಾರದು. ತಮ್ಮ ಆಡಳಿತಾವಧಿಯಲ್ಲಿ ಬಿಗಿಯನ್ನೇನಾದರೂ ತಂದು ಸಂಪನ್ಮೂಲವನ್ನು ವೃದ್ಧಿ ಮಾಡತಕ್ಕ ಕೊರತೆ ಬಜೆಟ್‌ನ್ನು ಕಡಿಮೆ ಮಾಡತಕ್ಕ ಪ್ರಯತ್ನವೇನಾದರೂ ಮಾಡಿದ್ದೀರಾ ಎಂಬ ಬಗ್ಗೆ ಹೇಳುವುದಾದರೆ, as on 31st March 1998, arrears in collection on tax on sales, trade, entry tax, entertainment tax and professional tax - Rs.784.7 crores.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸ್ಟೇಟ್ ಎಕ್ಸೈಜ್‌ನಿಂದ 290.66 ಕೋಟಿ ರೂ.ಗಳು, ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಿಂದ 54 ಕೋಟಿ ರೂ.ಗಳು, ವಾಹನಗಳ ಮೇಲಿನ ತೆರಿಗೆಯಿಂದ 39.78 ಕೋಟಿ ರೂ.ಗಳು ಬಾಕಿ ಇದೆ. 31.3.98ರಲ್ಲಿದ್ದಂತೆ ಒಟ್ಟು ಬಾಕಿ ಹಣದ ಮೊತ್ತ 1169.6 ಕೋಟಿ ರೂ.ಗಳು. ಈ ಅರಿಯರ್ಸ್ ನಮ್ಮ ಕಾಲದಲ್ಲಿ ಇರಲಿಲ್ಲ ಎಂಬ ಮಾತನ್ನು ನಾನು ಹೇಳುವುದಿಲ್ಲ. ಅದು ನಮ್ಮ ಕಾಲದಲ್ಲೂ ಕೂಡ ಇತ್ತು. 30.3.94ರಲ್ಲಿದಂತೆ ನಿಮಗೆ ಅಧಿಕಾರ ಹಸ್ತಾಂತರ ಮಾಡಿದಂತಹ ಸಂದರ್ಭದಲ್ಲಿ ಕ್ಯಾರಿಡ್ ಓವರ್ ಲಾಸಸ್ ಎಲ್ಲಾ ಸೇರಿ 656.77 ಕೋಟಿ ರೂ.ಗಳು ಮಾತ್ರ ಡ್ಯೂಸ್ ಇತ್ತು. ಆದರೆ ನೀವು ಅಧಿಕಾರದಲ್ಲಿದ್ದ ಐದೇ ವರ್ಷಗಳಲ್ಲಿ ಈ ಪ್ರಮಾಣವನ್ನು 1169 ಕೋಟಿ ರೂ.ಗಳಿಗೆ ಏರಿಸಿದ್ದೀರಿ. ಹೀಗಿರುವಾಗ ನಿಮ್ಮ ಆಡಳಿತ ಎಷ್ಟರಮಟ್ಟಿಗೆ ಚೆನ್ನಾಗಿದೆ ಎಂಬುದನ್ನು ನೀವೆ ಲೆಕ್ಕ ಹಾಕಿ, ಆ ದಿಸೆಯಲ್ಲಿ ಯೋಚನೆ ಮಾಡಿ. ಈ ಕೊರತೆಯನ್ನು ಯಾವ ರೀತಿಯಲ್ಲಿ ಸರಿದೂಗಿಸುತ್ತೀರಿ? ನೀವು ಸಾಲ ತಂದು ಈ ಕೊರತೆ ಸರಿದೂಗಿಸುತ್ತಿದ್ದೀರಿ. ಕ್ಯಾಪಿಟಲ್ ಅಕೌಂಟ್‌ನಲ್ಲಿ ನೀವು ಇವತ್ತು ಸಾಲದ ರೂಪದಲ್ಲಿ ಹಣವನ್ನು ತಂದಿದ್ದೀರಿ. ಕ್ಯಾಪಿಟಲ್ ಅಕೌಂಟ್‌ನಲ್ಲಿ ನೂರಕ್ಕೆ ನೂರರಷ್ಟು ಹಣ ಸಾಲದ ರೂಪದಲ್ಲಿ ಬರುತ್ತದೆ. ಅದು ಓಪನ್ ಮಾರ್ಕೆಟ್ ಲೋನ್ಸೇ ಇರಬಹುದು ಅಥವಾ ರಿಸರ್ವ್ ಬ್ಯಾಂಕ್ ಲೋನ್ಸ್ ಇರಬಹುದು ಅಥವಾ ಎನ್‌ಸಿಡಿಸಿ ಲೋನ್ಸ್ ಇರಬಹುದು, ಆ ರೀತಿಯಾದ ಯಾವುದೇ ತರವಾದಂತಹದ್ದು ಇರಲಿ, ಕ್ಯಾಪಿಟಲ್ ಅಕೌಂಟ್‌ನಲ್ಲಿ ಸಾಲದ ರೂಪದಲ್ಲಿಯೇ ಹಣ ಬರುತ್ತದೆ. ಸಾಲವನ್ನು ತಂದು ನೀವು ಈ ಕೊರತೆಯನ್ನು ತುಂಬಿಸತಕ್ಕ ಪ್ರಯತ್ನ ಮಾಡಿದ್ದೀರಿ. ಹೀಗೆಂದಾಕ್ಷಣ ಬೇರೆ ಯಾರೂ ಕೂಡ ಹಿಂದೆ ಸಾಲ ಮಾಡಿಯೇ ಇಲ್ಲ ಎಂದೇನಿಲ್ಲ. ಸಾಲವನ್ನು ನಿರ್ದಿಷ್ಟವಾದಂತಹ ಸಂದರ್ಭಗಳಲ್ಲಿ ನಾತ್ರ ನಿರ್ದಿಷ್ಟ ಉದ್ದೇಶಕ್ಕಾಗಿ ಮಾಡಬೇಕು. ರಾಜ್ಯಕ್ಕೆ ಅಗತ್ಯವಾಗಿ ಇನ್‌ಫ್ರಾಸ್ಟ್ರಕ್ಚರ್ ಅನ್ನು ಬಿಲ್ಡ್-ಅಪ್ ಮಾಡಲೇಬೇಕು ಎನ್ನುವಂತಹ ಸಂದರ್ಭದಲ್ಲಿ,

ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವೆಲಪ್ ಮಾಡುವುದಕ್ಕೋಸ್ಕರ ಸಾಲವನ್ನು ತರಬಹುದು. ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವೆಲಪ್ ಮಾಡಿ ಅದರಿಂದ ಇನ್‌ಕಂ ಬರುವಂತೆ ಮಾಡಿಕೊಂಡು ಅದರ ಮೂಲಕ ನಮ್ಮ ರೆವೆನ್ಯೂ ಅನ್ನು ಜಾಸ್ತಿ ಮಾಡಿಕೊಳ್ಳಬೇಕಾಗುವ ಸಂದರ್ಭಗಳಲ್ಲಿ ಮಾತ್ರ ಸಾಲವನ್ನು ತಂದು ಉಪಯೋಗ ಮಾಡಿಕೊಳ್ಳಬಹುದು. ಆದರೆ ನೀವು ಇವತ್ತು ಆ ಕೆಲಸವನ್ನು ಮಾಡುತ್ತಿಲ್ಲ. ಕ್ಯಾಪಿಟಲ್ ಅಕೌಂಟ್‌ನಿಂದ ನೀವು ದುಡ್ಡು ತಂದು ದಿನನಿತ್ಯದ ಖರ್ಚುಗಳಿಗೋಸ್ಕರ, ಸೌಕರರ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೋಸ್ಕರ ಬಳಸಿಕೊಳ್ಳುತ್ತಿದ್ದೀರಿ. ಸಾಲ ತಂದು ಈ ಉದ್ದೇಶಗಳಿಗೆ ನೀವು ಹಣವನ್ನು ಖರ್ಚು ಮಾಡಿ ಇದನ್ನೊಂದು ವಿಶಿಷ್ಟವಾದಂತಹ ಬಜೆಟ್ ಎಂದು ನೀವು ಹೇಳಿಕೊಳ್ಳುವುದಾದರೆ ಅದನ್ನು ಯಾರು ನಂಬುತ್ತಾರೆ? ಅದನ್ನು ನಂಬುವುದಕ್ಕೆ ಸಾಧ್ಯವೇ ಎಂಬುದನ್ನು ನೀವು ಯೋಚನೆ ಮಾಡಬೇಕಾಗುತ್ತದೆ. ನಿಮ್ಮ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾತನಾಡುವುದಾದರೆ.....

ಅಧ್ಯಕ್ಷರು :— ಮಾನ್ಯ ಜಯಚಂದ್ರರವರೇ, ನನಗೇನೂ ನೀವು ಮಾತನಾಡುವುದರಿಂದ ಏನೂ ತೊಂದರೆ ಇಲ್ಲ. ಸದನ ನಡೆಸಲು ಅಗತ್ಯವಾದ ಕೋರಂಗಿಂತ ಕೇವಲ ಇಬ್ಬರು-ಮೂವರು ಮಾತ್ರ ಜಾಸ್ತಿ ಇದ್ದಾರೆ. ನಾವು ಆ ಕಡೆ ಈ ಕಡೆ ನೋಡುವಾಗ ಯಾರಾದರೂ 2-3 ಜನ ಎದ್ದು ಹೋಗಿ ಬಿಟ್ಟರೆ ಕೋರಂ ಇಲ್ಲದೇ ಸದನ ಮುಂದೂಡಬೇಕಾದ ಪರಿಸ್ಥಿತಿ ಒದಗಿ ಬರುತ್ತದೆ. ಬಜೆಟ್ ಮೇಲಿನ ಚರ್ಚೆ ಇಂದೇ ಮುಗಿದು ಹೋಗಬೇಕು. ಮಂಗಳವಾರ ವೋಟ್ ಆನ್ ಅಕೌಂಟ್ ಬಿಲ್ ಪಾಸ್ ಆಗಿ ಬರಬೇಕು. ಮಾನ್ಯ ಯೋಗೀಶ್ವಭಟ್ ಮತ್ತು ಮಾನ್ಯ ಶಿವಪ್ಪನವರು ಐದೈದು ನಿಮಿಷಗಳ ಕಾಲ ಮಾತನಾಡಬೇಕೆಂದು ಇಚ್ಛೆ ಪಟ್ಟಿದ್ದಾರೆ. ಮಾನ್ಯ ಮುನಿಯಪ್ಪನವರೂ ಕೂಡ ಮಾತನಾಡಬೇಕೆಂದು ಬರೆದು ಕಳುಹಿಸಿದ್ದಾರೆ. ಭಾಷಣ ಮಾಡಬೇಕೆಂಬ ಆಸೆ ಇರುವವರು ಮಾನ್ಯ ಸದಸ್ಯರ ಕೊರತೆಯಾಗದಂತೆ ನೋಡಿಕೊಳ್ಳಬೇಕು.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೇ, ಮಾರ್ಚ್ 1998ರಲ್ಲಿದ್ದಂತೆ ಸರ್ಕಾರ ಸಾಲದ ಗ್ಯಾರಂಟಿ 5413 ಕೋಟಿ ರೂ.ಗಳಾಗಿದೆ. ಸರ್ಕಾರ ಅಮ್ಮೊಂದು ದೊಡ್ಡ ಮೊತ್ತಕ್ಕೆ ಗ್ಯಾರಂಟಿ ಕೊಟ್ಟಿದೆ. ರಿಸರ್ವ ಬ್ಯಾಂಕ್‌ನವರು ಇನ್‌ಸಿಸ್ಟ್ ಮಾಡುತ್ತಿದ್ದಾರೆ ಎನ್ನುವ ಕಾರಣಕ್ಕೋಸ್ಕರ ನೀವು ಅದರ ಮೇಲೆ ಸೀಲಿಂಗ್ ತರಬೇಕೆನ್ನುವ ಪ್ರಯತ್ನವನ್ನು ಮಾಡುತ್ತಿದ್ದೀರಿ. ಯುಕಿಟಿಗೆ ತರತಕ್ಕಂಥ ಸಾಲ ಇದಕ್ಕೆ ಅನ್ವಯವಾಗುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದೀರಿ. ಅದೊಂದು ವಿಷಯದಲ್ಲಿ ತಾವು ನನಗೆ ನೀವು ಉತ್ತರ ಕೊಡುವ ಸಂದರ್ಭದಲ್ಲಿ ಎಕ್ಸ್‌ಪ್ಲೈನ್ ಮಾಡಬೇಕಾಗುತ್ತದೆ. ಯುಕಿಟಿಗಾಗಿ ತರತಕ್ಕಂಥ ಸಾಲ, ಕೇಂದ್ರ ಸರ್ಕಾರದ ಸಾಲವನ್ನೂ ಸೇರಿಸಿದರೆ ಅದು ನಿಮ್ಮ ರೆವಿನ್ಯೂಗಿಂತ ಎರಡರಷ್ಟು ಆಗುವ ಸಂಭವವಿದೆ; ಈಗಾಗಲೇ ಎರಡು ಸಾವಿರ ಕೋಟಿ ರೂ. ನೀವು ಸಂಗ್ರಹಿಸಿದ್ದೀರಿ. ಮತ್ತೊಂದು ನಿಗಮವನ್ನು ಸ್ಥಾಪನೆ ಮಾಡಿ 600 ಕೋಟಿ ರೂ.ಗಳನ್ನು ಸಂಗ್ರಹಿಸಲು ಹೊರಟಿದ್ದೀರಿ. ಈ ವರ್ಷ ನೀವು ಕೆಲಸವನ್ನು ತ್ವರಿತವಾಗಿ ಮುಗಿಸಬೇಕಾಗಿರತಕ್ಕಂಥ

ಸಂದರ್ಭದಲ್ಲಿ ಇನ್ನೂ 3-4 ಸಾವಿರ ಕೋಟಿ ರೂ.ಗಳನ್ನು ಸಾಲವಾಗಿ ಎತ್ತಬಹುದು. 1996-97ಕ್ಕೆ ಲೆಕ್ಕ ಹಾಕಿದರೆ ಕೇಂದ್ರ ಸರ್ಕಾರದ ಸಾಲ ಇವತ್ತು 10ಸಾವಿರ ಕೋಟಿ ರೂ.ಗಳಿಗಿಂತ ಜಾಸ್ತಿಯಾಗಿದೆ. ನಾರು ವಿಪರೀತವಾಗಿ ಮಾಡತಕ್ಕ ಸಾಲದಿಂದ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ವಿರುಪೇರಾಗುತ್ತದೆ. ಯಾರೇ ಮುಖ್ಯಮಂತ್ರಿ ಆಗಲೀ, ಯಾರೇ ಹಣಕಾಸಿನ ಮಂತ್ರಿಗಳಾಗಿರಲಿ ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿಗೆ ತನ್ನದೇ ಆದಂತಹ ಸ್ಥಾನಮಾನಗಳೇನು ಇರುತ್ತಿತ್ತೋ ಅದು ಇವತ್ತು ಇಲ್ಲದಂತಾಗಿದೆ. ಬಿಹಾರ ಮತ್ತು ಇತರ ರಾಜ್ಯಗಳಿಗೆ ಹೋಲಿಕೆ ಮಾಡುವಂತಹ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಂತಲ್ಲಾ ಎಂದು ನನಗೆ ದು:ಖವಾಗುತ್ತಿದೆ. ನಾನ್ ಪ್ಲಾನ್‌ನಲ್ಲಿ ಶೇಕಡ 77ರಷ್ಟು ನಿಮ್ಮ ಇನ್‌ಕಂ ಎಕ್ಸ್‌ಪೆಂಡೀಚರ್ ಆಗುತ್ತಿದೆ. ಪ್ಲಾನ್‌ನಲ್ಲಿ ಶೇಕಡ 23 ರಷ್ಟು ಮಾತ್ರ ಆಗುತ್ತಿದೆ. ಕೇಂದ್ರ ಸರ್ಕಾರದ ಸಾಲ ಸುಮಾರು 11500 ಕೋಟಿ ರೂ.ಗಳಿದೆ. ಅಂದರೆ ಅಂದಾಜು 1200 ಕೋಟಿ ರೂ.ಗಳನ್ನು ಒಂದು ವರ್ಷಕ್ಕೇ ನೀವು ವಾಪಸ್ ಕೇಂದ್ರಕ್ಕೆ ಕೊಡಬೇಕು. ಇಂತಹ ಒಂದು ಪರಿಸ್ಥಿತಿಯಲ್ಲಿ ಇವತ್ತು ನಿಮ್ಮ ನಾನ್ ಪ್ಲಾನ್ ಬಜೆಟ್ ಮಿತಿ ಮೀರಿ ಹೊಗುತ್ತಿದೆ. ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ದುಡ್ಡೇ ಇಲ್ಲದಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಒಟ್ಟಿನಲ್ಲಿ ನಿಮ್ಮ ಬಜೆಟ್ ಏನಾಗಿದೆ ಎಂದರೆ, it is completely imaginary and inflationary and you have taken us to a debt trap. ಎನ್ನುವಂತಹ ಒಟ್ಟಾರೆ ತೀರ್ಮಾನಕ್ಕೆ ನಾವು ಬರಬಹುದು. ಇವತ್ತು ನಿಮ್ಮ ಸಂಪನ್ಮೂಲದಲ್ಲಿ ಕೇವಲ ಶೇಕಡ 13ರಷ್ಟು ಸಾಲವನ್ನು ಮಾತ್ರ ತೀರಿಸುತ್ತಿದ್ದೀರಿ. ಅದು ಬಡ್ಡಿಗಾಗಿ ಹೋಗುತ್ತಿದೆಯೋ ಅಥವಾ ಅಸಲಿಗಾಗಿ ಹೋಗುತ್ತಿದೆಯೋ ನನಗೆ ಗೊತ್ತಿಲ್ಲ. ಕೇವಲ ಬಡ್ಡಿಕೊಟ್ಟು ಅಸಲನ್ನು ನಿಲ್ಲಿಸಿಕೊಳ್ಳುತ್ತಿದ್ದೀರೋ ಏನೋ ನನಗಂತೂ ಗೊತ್ತಿಲ್ಲ. ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಆ ಬಗ್ಗೆ ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ 600 ಕೋಟಿ ರೂ.ಗಳನ್ನು ಹೆಚ್ಚು ಸಾಲವಾಗಿ ತಂದಿದ್ದೀರಿ. ಅದರಲ್ಲಿ ನೀವು ಕೇವಲ 142 ಕೋಟಿ ರೂ.ಗಳನ್ನು ಮಾತ್ರ ತೀರಿಸಿದ್ದೀರಿ. ನಿಮ್ಮ ಅಂಕಿ ಅಂಶಗಳ ಆಧಾರದ ಮೇಲೆಯೇ ನಾನು ಇದನ್ನು ಹೇಳುತ್ತಿದ್ದೇನೆ. ಈ ಸಾರಿ ಕೇಂದ್ರ ಸರ್ಕಾರದಿಂದ 2083 ಕೋಟಿ ರೂ.ಗಳ ಸಾಲ ಬರುತ್ತದೆ ಎಂಬ ಮಾತನ್ನು ನೀವು ಹೇಳಿದ್ದೀರಿ. ಇದನ್ನು ನಂಬುವುದಕ್ಕೆ ಸಾಧ್ಯವೇ? ನಿಮ್ಮ ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇದ್ದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ 2083 ಕೋಟಿ ರೂ.ಗಳ ಸಾಲವನ್ನು ನಾವು ನಿರೀಕ್ಷೆ ಮಾಡಬಹುದು. ಆದರೆ ನಿಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟದಾಗಿರುವುದರಿಂದ ಅಲ್ಲಿಂದ ಹಣ ಸಂಪೂರ್ಣವಾಗಿ ಬರುತ್ತದೆ ಎಂಬ ತೀರ್ಮಾನಕ್ಕೆ ನಾವು ಬರುವಂತಿಲ್ಲವೆಂಬುದನ್ನು ನೀವು ಒಪ್ಪಬೇಕಾಗುತ್ತದೆ. ಭಾರತ ದೇಶದ ಎಲ್ಲಾ ರಾಜ್ಯಗಳಿಗೆ ಅನ್ವಯಿಸುವಂತೆ ನೀತಿ ನಿಯಮಗಳನ್ನು ತಿಳಿಸುವ ರಾಜಾ ಚೆಲ್ಲಯ್ಯ ಎಂಬುವರ ರಿಪೋರ್ಟ್ ಇದೆ. ನಿಮ್ಮ ಬಜೆಟ್ ಭಾಷಣದಲ್ಲಿ ಆ ರಿಪೋರ್ಟ್‌ನಲ್ಲಿರಬಹುದಾದ ಸಾರಾಂಶವನ್ನು ನಾವು ಅಡಾಪ್ಟ್ ಮಾಡಿಕೊಳ್ಳಬಹುದಾದ ಪ್ರಯತ್ನದಲ್ಲಿದ್ದೇವೆ ಎಂಬ ಮಾತನ್ನು

ಹೇಳಿದ್ದೀರಿ. ನೀವಿನ್ನೂ ಆ ಪ್ರಯತ್ನದಲ್ಲಿ ಇದ್ದೀರಿ. ರಾಜಾ ಚೆಲ್ಲಯ್ಯ ರಿಪೋರ್ಟ್ ಪ್ರಕಾರ ಸಿಂಪ್ಲಿಫಿಕೇಷನ್ ಆಫ್ ಟ್ಯಾಕ್ಸ್ ಮಾಡಲು ನೀವು ಹೋರಟಿದ್ದೀರಿ. ಅದರಲ್ಲಿ ಮುಖ್ಯವಾಗಿ ಏನು ಇದೆ ಎಂದರೆ Simplification of taxes is also one of the important things. Single point taxation based on value added system that is another point and decrease in rate of tax and increase in the base of tax structure. That was the concept. ಆದರೆ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರತಕ್ಕಂಥ ಕೆಲಸ ಇಲ್ಲಾಗಿದೆ. ನೀವು ಬಜೆಟ್ ಮಂಡಿಸುವಾಗ ಬೇಕಾಬಿಟ್ಟಿಯಾಗಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರತಕ್ಕ ಕೆಲಸವನ್ನು ಮಾಡಿದ್ದೀರಿ. ಇವತ್ತು ಸಾಮನ್ಯ ಜನರು ನಿಮ್ಮ ಬಜೆಟ್‌ನಿಂದ ಸಾಕಷ್ಟು ನಿರೀಕ್ಷೆ ಮಾಡಿದ್ದರು. ಆದರೆ ನೀವು ಅವರಿಗೆ ಯಾವ ರೀತಿಯ ಕೊಡುಗೆಯನ್ನೂ ಕೂಡ ಕೊಟ್ಟಿಲ್ಲ. ನಿಮ್ಮ ಬಜೆಟ್‌ನಲ್ಲಿ ನೀವು ಐಸ್‌ಕ್ರೀಂ, ಬೀರ್, ಹಳೆಯ ಕಾರ್ ಇವುಗಳ ಮೇಲಿನ ತೆರಿಗೆ ಕಡಿಮೆ ಮಾಡಿದ್ದೀರಿ. ಅದರೆ ನಿಮಗೆ ಮತ ಕೊಟ್ಟಂತಹ ಬಡವರು ನಿಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಇವತ್ತು ಐಸ್‌ಕ್ರೀಂ ಅನ್ನು ಬಯಸಲಿಲ್ಲ, ಓಲ್ಡ್ ಕಾರ್ ಅನ್ನು ಹತ್ತಲು ಬಡವ ಪ್ರಯತ್ನ ಮಾಡುತ್ತಿರಲಿಲ್ಲ, ಬೀರ್ ಕುಡಿಯಲಿಕ್ಕೆ ಮೊದಲೇ ಬಡರ ಹೋಗುತ್ತಿರಲಿಲ್ಲ. ರೋಟಿ, ಕಪಡಾ ಮತ್ತು ಮಕಾನ್ ಅಂದರೆ ಅನ್ನ, ಬಟ್ಟೆ ಮತ್ತು ಸೂರು ಅನ್ನು ಬಡವ ಸರ್ಕಾರದಿಂದ ನಿರೀಕ್ಷೆ ಮಾಡುತ್ತಿದ್ದ.

6.20 ಪಿ.ಎಂ.

ಅಂತಹ ಬಡ ಮತದಾರರಿಗೆ, ಈ ರಾಜ್ಯದ ಜನರಿಗೆ ನೀವು ಕೊಟ್ಟಿದ್ದು ಏನೆಂದರೆ, ಕಾರ್ ಐಸ್‌ಕ್ರೀಂ ಮತ್ತು ಬೀರ್. ಬೀರ್ ಮೇಲೆ ಟ್ಯಾಕ್ಸ್ ಕಡಿಮೆ ಮಾಡತಕ್ಕಂತಹ ಕೆಲಸ ಮಾಡಿದ್ದೀರಿ. ನೀವು ಇದನ್ನು ಏಕೆ ಮಾಡುತ್ತಿದ್ದೀರಿ ಎಂಬುದು ಗೋತ್ತಾಗಲಿಲ್ಲ. ಕೊನೆ ಪಕ್ಷ ಇದರಲ್ಲಿ ಆದರೂ ಕೂಡ ನೀವು ಸಂಪನ್ಮೂಲ ಜಾಸ್ತಿ ಮಾಡತಕ್ಕಂತಹ ಕೆಲಸ ಮಾಡದೆ ಇದ್ದರೆ ಹೇಗೆ? ಬೀರ್ ಕುಡಿಯತಕ್ಕಂತಹವರು ಯಾರು? ಅದರ ಜೊತೆಗೆ ನೀವು ಮನೆಗಳನ್ನು ಕಟ್ಟಿಸುವುದರ ಬಗ್ಗೆ ವರ್ಷಕ್ಕೆ ಒಂದು ಲಕ್ಷ ಮನೆ ಎಂದು ಹೇಳಿದಿರಿ. 1986-87, 1987-88 ಮತ್ತು 1988-89ರಲ್ಲಿ ಕಟ್ಟಬೇಕಾಗಿದ್ದ ಮನೆಗಳಿಗೆ ಇನ್ನೂ ಕೂಡ ಹಣ ಪಾವತಿ ಮಾಡಬೇಕಾಗಿದೆ. ಒಂದೊಂದಕ್ಕೂ 15-20 ಲಕ್ಷ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಬೇಕಾಗಿದೆ. ಮನೆಗಳ ಮೇಲೆ ಖರ್ಚು ಮಾಡಬೇಕೆಂದು ಒಂದುವರೆ ಲಕ್ಷ ಮನೆಗಳು ಕಟ್ಟಬೇಕೆಂದು ಹೇಳುತ್ತಿದ್ದೀರಿ, ಇವತ್ತು ನಿಮ್ಮ ಎಲ್ಲಾ ಮನೆಗಳನ್ನು ಪೂರ್ತಿ ಮಾಡಬೇಕಾದರೆ ಯಾವ ಹೊಸ ಮನೆಗಳನ್ನು ತೆಗೆದುಕೊಳ್ಳದೆ ಅರ್ಧಂಬರ್ಧ ಕಟ್ಟಿರತಕ್ಕಂತಹ ಮನೆಗಳಿಗೆ ನೀವು ದುಡ್ಡು ಪೂರೈಸಿದರೆ ದೊಡ್ಡ ಸಹಾಯ ಮಾಡಿದ ಹಾಗೆ ಆಗುತ್ತದೆ. ಜನ ನಿಮ್ಮನ್ನು ನೆನೆಯುತ್ತಾರೆ. ಒಂದೂವರೆ ಲಕ್ಷ ಮನೆ ಕಟ್ಟುತ್ತೀರಿ, ಎಲ್ಲಿದೆ ನಿಮ್ಮ ಹತ್ತಿರ ಹಣ, ಅಡಿಷನಲ್ ರಿಸೋರ್ಸಸ್ ಮೊಬಿಲೈಸ್ ಮಾಡುವುದಕ್ಕೆ ಎಲ್ಲಿ ಆಗುತ್ತದೆ? Additional

resources mobilisation is purely inflationary. ಚುನಾವಣೆ ಎದುರಾಗಿರುವುದರಿಂದ ಜನಗಳಿಗೆ ಸುಮ್ಮನೆ ಆಶ್ವಾಸನೆ ಕೊಡತಕ್ಕಂತಹ ಕೆಲಸ ಆಗಿದೆ ಎನ್ನುವುದು ಬಿಟ್ಟರೆ ಬೇರೆ ಏನೂ ಆಗಿಲ್ಲ. ಇನ್ನೊಂದು ಬಹಳ ಮುಖ್ಯವಾಗಿ ಕೇಂದ್ರ ಸರ್ಕಾರದವರು ಅಮರ್ತ್ಯಸೇನ್‌ರವರ ನಾರ್ಮ್ಸ್ ಪ್ರಕಾರ, ಅಮರ್ತ್ಯಸೇನ್‌ರವರು ಭಾರತದಲ್ಲಿ ಹುಟ್ಟಿ, ಭಾರತದಲ್ಲಿ ಬೆಳೆದು, ಭಾರತ ದೇಶದ ಪರಿಸ್ಥಿತಿ ಅರ್ಥಮಾಡಿಕೊಂಡು ಅದರಲ್ಲಿ ನೋಬಲ್ ಪ್ರಶಸ್ತಿ ಪಡೆಯುವಂತಹ ಮಟ್ಟಕ್ಕೆ ಹೋದರು. He is a good economist. ಭಾರತ ಸರ್ಕಾರ ಕೂಡ ಅವರಿಗೆ ಇವತ್ತು "ಭಾರತ ರತ್ನ" ಪ್ರಶಸ್ತಿ ಕೊಟ್ಟಿದೆ. ಅವರು ಹಾಕಿ ಕೊಟ್ಟಿರತಕ್ಕಂತಹ ನೀತಿ ನಿಯಮಗಳ ಅಡಿಯಲ್ಲಿ ಬಹಳ ಮುಖ್ಯವಾಗಿ ಅವರು ಹೇಳಿರತಕ್ಕಂಥದ್ದು Human development index and social safety net. ಈ ಎರಡನ್ನು lack of entitlement ಎನ್ನುವದರಲ್ಲಿ ವಿವರಣೆ ಮಾಡುವಾಗ ಅವರು ಹೆಚ್ಚಿಗೆ ಒತ್ತು ಕೊಡಬೇಕಾಗಿರತಕ್ಕಂಥದು ಎಜುಕೇಷನ್ ನ್ಯೂಟ್ರೀಷನ್ ಮತ್ತು ಹೆಲ್ತ್. ಅದಕ್ಕೆ ನೀವು ಹೇಳಿದ್ದೀರಿ, ಸಾಕಷ್ಟು ಪ್ರೋತ್ಸಾಹ ಕೊಡುವುದಕ್ಕೆ ಮಾಡಿದ್ದೇವೆಂದು ಹೇಳಿದಿರಿ, ಅದರೆ ನಿಮ್ಮ ಡಿಫಿಸಿಟ್ ಬಜೆಟ್‌ನಲ್ಲಿ ನೀವು ಖಂಡಿತ ಅದನ್ನು ಅಚೀವ್ ಮಾಡುವುದಕ್ಕಾಗುವುದಿಲ್ಲ. ನೀವು ಅರ್ಥ ಮಾಡಿಕೊಳ್ಳಬೇಕು. ಯಾವುದೇ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕಾದರೆ ನೀವು ಈ ದಿಸೆಯಲ್ಲಿ ಈವತ್ತು ಬಜೆಟ್ ಮಂಡನೆ ಮಾಡಬೇಕಾಗುತ್ತದೆ. Entire third-world countries in the world, they are following the same norm. They have accepted it. ದುರಾದೃಷ್ಟ ಏನಾಗಿದೆ ಎಂದರೆ, ನಮ್ಮ ದೇಶದಲ್ಲಿ ಇತಿಮಿತಿಗೆ ಅನುಕೂಲವಾಗುವ ರೀತಿಯಲ್ಲಿ ಅವರು ಕೊಟ್ಟರೂ ಕೂಡ ಅವರನ್ನು ಒಪ್ಪದೆ ಇರತಕ್ಕಂಥದ್ದು ಇದು ಬಹಳ ತಪ್ಪಿನ ಕೆಲಸ. ಅದಕ್ಕೆ ನೀವು ಯಾವುದೇ ತರಹದ ಗೌರವ ಕೊಟ್ಟಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರ, ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್‌ನಲ್ಲಿ 1997-98ರಲ್ಲಿ 3.37 ಇತ್ತು, 1998-99ರಲ್ಲಿ 5.7 ಆದರೆ 1999-2000 ಇಸವಿಗೆ ನಿಮ್ಮ ಸರ್ವೆ ಪ್ರಕಾರ ಎಷ್ಟಾಗುತ್ತದೆ ಎಂದು ಗೊತ್ತಿಲ್ಲ. ಈ ಕೊರತೆಯಿಂದ ಜನ ಇವತ್ತು ಬದುಕುವುದಕ್ಕೆ ಕಷ್ಟ. ಅದರಲ್ಲೂ ವಿಶೇಷವಾಗಿ ಮಧ್ಯಮ ವರ್ಗದ ಜನರಿಗೆ ಕೊಳ್ಳತಕ್ಕಂತಹ ಶಕ್ತಿ ಇವತ್ತು ಇಲ್ಲವೆಂದು ನೀವು ಒಪ್ಪಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ. ನಿಮ್ಮ ಆಡಳಿತದಿಂದ ಇವತ್ತು ಬಿಸ್‌ನೆಸ್ ಕರ್ನಾಟಕ ರಾಜ್ಯ ಬಿಟ್ಟು ಹೊರ ರಾಜ್ಯಕ್ಕೆ ಹೋಗುತ್ತದೆ ಎಂದು ಒಂದೇ ಒಂದು ಪಾಯಿಂಟ್ ಹೇಳಿ ಮಲ್ಲಿಪಾಯಿಂಟ್‌ನಿಂದ ಸಿಂಗಲ್ ಪಾಯಿಂಟ್‌ಗೆ ಬರಬೇಕು ಎನ್ನತಕ್ಕಂತಹ ಉದ್ದೇಶ ನಿಮ್ಮದು. ಇವತ್ತು ಕೋರ್ಟ್‌ನಲ್ಲಿ ಏನು ಮಾಡಿದ್ದೀರಿ, ಸಿಂಗಲ್ ಪಾಯಿಂಟ್‌ನಿಂದ ಹೋಗಿ ಮಲ್ಲಿ ಪಾಯಿಂಟ್ ತಂದು ಇವತ್ತು ಒಂದು 166 ಗ್ರಾಮ್ಸ್ ಗೋಲ್ಡ್‌ಗೆ 750 ರೂಪಾಯಿ ಕಾಸ್ಟ್ ಜಾಸ್ತಿಯಾಗುತ್ತದೆ. ನಿಮಗೆ ಏನಾಗಿದೆ ಎಂದರೆ, ಇವತ್ತು ಕರ್ನಾಟಕದ ಯಾವುದೇ ಮದುವೆ ಮುಂಜಿ ಆಗಬೇಕೆಂದರೆ, ಚಿನ್ನವನ್ನು ಮದ್ರಾಸ್ ಇಲ್ಲ ಬಾಂಬೆಗೆ ಹೋಗಿ ತರಬೇಕು. ಅಲ್ಲಿ ಬೈ ಗೋಲ್ಡ್ ಅಟ್ ಮುಂಬೈ ಮತ್ತು

ದುಬೈ ರೇಟ್ಸ್ ಎಂದು ಬೋರ್ಡ್‌ಗಳನ್ನು ಹಾಕಿರುತ್ತಾರೆ. ಚಿನ್ನ ತರಬೇಕಾದರೆ ಸೇಲಂ ಕೃಷ್ಣಗಿರಿಗೆ ಹೊಗುವ ಪ್ರಶ್ನೆ ಆದರೆ, ನಮ್ಮ ಇರತಕ್ಕಂತಹ ಟ್ರೇಡ್ ಹೋಗುತ್ತದೆ. ನಮ್ಮ ಬೊಕ್ಕಸಕ್ಕೆ ಬರತಕ್ಕಂತಹ ತೆರಿಗೆ ಕೂಡ ಬಹಳಷ್ಟು ಕಡಿಮೆಯಾಗುತ್ತದೆ ಎಂದು ಹೇಳಿ, ಎನ್‌ವಿರಾನ್‌ಮೆಂಟ್ ಕಾನ್‌ಸೆಪ್ಟ್ ಬಗ್ಗೆ ಇಡೀ ಪ್ರಪಂಚದ ಎಲ್ಲಾ ದೇಶಗಳು ಅದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ನೀತಿ ಪ್ರಕಾರ 33 ಪರ್ಸೆಂಟ್ ಕಾಡು ಇಲ್ಲದೇ ಇದ್ದರೂ ಕೂಡ 20 ಪರ್ಸೆಂಟ್ ಕಾಡು ಇದ್ದರೂ ಅದು ಶಾಶ್ವತವಾದ ಕಾಡು ಹೆಚ್ಚು ಹಾಳಾಗದೆ ಇರುವ ರೀತಿಯಲ್ಲಿ ನೋಡುಕೊಳ್ಳಬೇಕಾಗುತ್ತದೆ. ಪ್ಲಾಸ್ಟಿಕ್ ಮೇಲೆ ನೀವು ತೆರಿಗೆ ಕಡಿಮೆ ಮಾಡಿದ್ದೀರಿ. ಒಂದಾನೊಂದು ಕಾಲದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ಲಾಸ್ಟಿಕ್ ಬ್ಯಾನ್ ಮಾಡಬೇಕೆಂದು ಹೊರಟಿರಬೇಕಾದರೆ, ಅದರ ಮೇಲೆ ತೆರಿಗೆ ಕಡಿಮೆ ಮಾಡಿ ಹೆಚ್ಚು ಪ್ಲಾಸ್ಟಿಕ್ ಉಪಯೋಗ ಮಾಡಬೇಕೆಂದು ಹೊರಟರೆ ಅದು ಏನಾಗುತ್ತದೆ ಎಂದು ನೀವು ಯೋಚನೆ ಮಾಡಿ. ಅದು ಬ್ಯಾನ್ ಮಾಡಬೇಕಾಗುತ್ತದೆ. ಅದರಿಂದ ನಾನಾ ತರಹದ ಪ್ರತಿಕೂಲ ಅನಾನುಕೂಲಗಳಾಗುತ್ತವೆ. ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ. ಎನ್‌ವಿರಾನ್‌ಮೆಂಟ್ ಮೇಲೆ ಪರಿಣಾಮವಾಗುತ್ತದೆ ಎಂದು ಎನ್ನತಕ್ಕಂತಹ ಕಾರಣದಿಂದ ಅವರೆಲ್ಲರೂ ಬ್ಯಾನ್ ಮಾಡಿರತಕ್ಕಂಥದ್ದು. ಅಲ್ಲಿಂದ ಬರತಕ್ಕಂತಹ ರಿ-ಪ್ರೋಸಸ್ ಮೆಟೀರಿಯಲ್ಸ್ ತರತಕ್ಕಂತಹ ಕೆಲಸ ಇವತ್ತು ನಡೆಯುತ್ತಿದೆ. ಅವರಿಗೂ ಗೊತ್ತಿದೆ, ಈ ಉದ್ಯಮದಲ್ಲಿ ಏನು ನಡೆಯುತ್ತದೆ ಎಂದು. ಇವತ್ತು ನೀವು ತಿಳಿದಿರುವ ರೀತಿಯಲ್ಲಿ ಒರಿಜಿನಲ್ ಮೆಟೀರಿಯಲ್ ಬರುವುದಿಲ್ಲ. ರಿ-ಪ್ರೋಸಸ್ ಮೆಟೀರಿಯಲ್ ಬರುವುದು. ಇವತ್ತು ಇದರಿಂದ ದೊಡ್ಡ ಅನಾನುಕೂಲವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೋಸ್ಕರ ಈಗಾಗಲೇ ನೀವು ವೆಸ್ಟನ್ ಘಾಟ್ಸ್ ಪ್ರಾಜೆಕ್ಟ್‌ನಲ್ಲಿ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಹೂಡಿದ್ದೀರಿ. ಆ ಹಣವನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತಿದ್ದೀರಿ ಎಂದು ಅದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಫಾರೆಸ್ಟ್‌ನಿಂದ ಖರ್ಚು ಮಾಡಿರತಕ್ಕಂತಹ ದುಡ್ಡು ಯಥೇಚ್ಛವಾಗಿ ಖರ್ಚು ಮಾಡಿದ್ದಾರೆ. ಇವತ್ತು ಕಾಗದದಲ್ಲಿ ಗಿಡಗಳನ್ನು ಬೆಳೆದಿದ್ದಾರೆ ಏನು; ಬೇರೆ ನೆಟ್ಟಿಲ್ಲ ಎನ್ನುವ ಮಾತನ್ನು ಅಧ್ಯಕ್ಷರ ಪೀಠದಿಂದ ಹೇಳಿದಂತಹ ಮಾತು ನನಗೆ ಜ್ಞಾಪಕ ಇದೆ. ಅದಕ್ಕೋಸ್ಕರ ಒಂದು ನಿದರ್ಶನ ಕೊಡಬೇಕಾಗುತ್ತದೆ. Approval of OECF assisted forest & Environment project for Eastern Plains of Karnataka will be implemented in 17 districts of the State over the period of 1997 to 2002. ಇದಕ್ಕೆ ಎಂದು ಹೈ ಪವರ್ ಕಮಿಟಿ ಮಾಡುತ್ತೀರಿ, ಅದರ ಜೊತೆಗೆ ಒಂದು ಎಂಪವರ್ ಕಮಿಟಿ ಮಾಡುತ್ತೀರಿ. 600 ಕೋಟಿ ರೂಪಾಯಿ ಸಾಲವನ್ನು ತರುವುದಕ್ಕೆ ನೀವು ಅಧಿಕಾರವನ್ನು ಯಾವ ರೀತಿಯಾಗಿ ಕೊಡುತ್ತಿದ್ದೀರಿ ಎಂದರೆ, ಇದು ಕಾರ್ಯಗತ ಆಗುತ್ತಾ ಎನ್ನುವುದಕ್ಕೆ ನಿಮ್ಮ ಗವರ್ನಮೆಂಟ್ ಆರ್ಡರ್ ಓದುತ್ತೇನೆ. ಒಂದು ಸಮಿತಿಗೆ ಕ್ಯಾಬಿನೆಟ್ ಪವರ್‌ಸ್ಸನ್ನು ಕೊಡಬೇಕಂಥದ್ದು ಇದು ಎಲ್ಲಾದರೂ ಸಾಧ್ಯವಾ? ``To endure

the timely implementation of this project, this specifically empowered Committee is vested with the powers to create a new post, to create a post on contract basis and lay down the terms and conditions of contract appointments, lay down guidelines for the execution of the contract, approve the leasing of works and services on contract for implementation of various components of this project, including research, studies to take decision on any other important matters pertaining to the project implementation; to sanction all kinds of purchases and to give all types of sanstions needed for the pur{pose of the project without subjecting such proposals to the prior consultation concurrence with or Finance Department or Planning Department or DPAR, Law Department and Forest Minister and Cabinet." ಎಲ್ಲವನ್ನೂ ನೋಡಿ ಕ್ಯಾಬಿನೆಟ್ ಪವರನ್ನು ಎಂಪವರ್ ಕಮಿಟಿಗೆ ಕೊಡುವುದು, ಇಷ್ಟೊಂದು ಬ್ಲಾಂಕೆಟ್ ಆರ್ಡರ್ ಕೊಡತಕ್ಕಂತಹ ಸಂದರ್ಭ ಆದರೂ ಏನಿತ್ತು, ಫಾರೆಸ್ಟ್ ಮಿನಿಸ್ಟರ್ ಅಪ್ರೂವಲ್‌ಗೆ ಬರಬೇಕಾಗಿಲ್ಲ ಎಂದು ಹೇಳುವುದಾದರೆ....

ಶ್ರೀ ಸಿ. ಬೈರೇಗೌಡ :— ಇದು ಸಚಿವಸಂಪುಟದ ಮುಂದೆ ಬಂದು ಆಗಿರುವುದು. Can the Cabinet delegate that power to the High Power Committee headed by the Officials?

ಶ್ರೀ ಡಿ. ಮಂಜುನಾಥ್ :— ಎಂಪವರ್ ಕಮಿಟಿ ಮಾಡದೆ ಈ ತರಹ ಮಾಡಬೇಕೆಂದು ಮಾಡಿದೆ Guidelines were given by the Central Government.

ಶ್ರೀ ಟಿ.ಬಿ ಜಯಚಂದ್ರ :— ಅದನ್ನು ಮಾಡತಕ್ಕಂಥವರು ಯಾರು? ನೀವು ಅವರ ತಾಳಕ್ಕೆ ತಕ್ಕಂತೆ ಕುಣಿಯತಕ್ಕಂಥ ಕೆಲಸವನ್ನು ಮಾಡಿದ್ದೀರಲ್ಲಾ. ಕ್ಯಾಬಿನೆಟ್ ಅಪ್ರೂವ್ ಇಲ್ಲದಿದ್ದರೂ ಕಡೇಪಕ್ಷ ಅರಣ್ಯ ಮಂತ್ರಿಗಳ ಅಪ್ರೂವಲ್ ಕೂಡ ಬೇಡ ಎಂದು ಅವರು ಹೇಳುವುದಾದರೆ ಹೇಗೆ? ನನಗಂತೂ ಅರ್ಥವಾಗುತ್ತಿಲ್ಲ. ಇನ್ನು ಸಿದ್ದರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ

``Beer manufacturing is an important industry in Karnataka. Since 1995-96, the consumption of beer has been going down. The alcohol content in the beer is low. To check the trend in favour of consumption of hard liquor, the tax on beer would be reduced."

Is it a word from Sri Siddaramaiah?

ನೀವು ಹೇಳಿರುವ ಶಬ್ದದ ಅರ್ಥ ಏನು ಬರುತ್ತದೆ ಎಂಬುದನ್ನು ನಾನು ಹೇಳುತ್ತೇನೆ. ಒಂದು ಬಾಟಲ್‌ನಲ್ಲಿ 650 ಎಂ.ಎಲ್. ಬಿಯರ್ ಇರುತ್ತದೆ. ಇದರಲ್ಲಿ ಶೇಕಡ 5 ರಿಂದ 6 ರಷ್ಟು ಆಲ್ಕೋಹಾಲ್ ಕಂಟೆಂಟ್ ಇರುತ್ತದೆ. ಅದೇ ರೀತಿ ಒಂದು ಕ್ವಾರ್ಟರ್ ಬಾಟಲ್ ಮಿಶ್ರಿಯಲ್ಲಿ ಶೇಕಡ 42 ರಿಂದ 43 ರಷ್ಟು ಆಲ್ಕೋಹಾಲ್ ಕಂಟೆಂಟ್ ಇರುತ್ತದೆ. ಒಟ್ಟಾರೆಯಾಗಿ ಎರಡನ್ನೂ ಸೇರಿ ಲೆಕ್ಕ ಹಾಕಿದರೆ ಎರಡು ಬಾಟಲ್ ಬೀಯರ್ ಕುಡಿದರೆ ಸುಮಾರು ಒಂದೂವರೆ ಬಾಟಲ್‌ನಷ್ಟು ವಿಸ್ಕಿ ಕುಡಿದ ಹಾಗೆ ಆಗುತ್ತದೆ. ಇದನ್ನು ಗಮನಿಸಿದರೆ ಇಂದಿನ ಜನರನ್ನು ನೀವು ಆಲ್ಕೋಹಾಲ್ ಕುಡಿಸುವತ್ತ ತೆಗೆದುಕೊಂಡು ಹೋಗುತ್ತಿದ್ದೀರಿ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ನಿಟ್ಟಿನಲ್ಲಿ ನೀವು ಇಂದು ಹಾರ್ಡ್ ಲಿಕ್ಕರ್‌ನ್ನೇ ಜನರಿಗೆ ಕುಡಿಸುತ್ತೀದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಬೇಕಾಗಿದೆ. ಇನ್ನು ರಾಗಿ ಫ್ಲೋರ್‌ಗಳಿಗೆ ಟ್ಯಾಕ್ಸ್ ಹಾಕುವುದನ್ನು ಕಡಿಮೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಹಳ್ಳಿಗಳಲ್ಲಿ ಜನರು ರಾಗಿಯನ್ನು ಮಿಲ್‌ಗೆ ಹಾಕಿ ಇದನ್ನು ತಂದು ಮನೆಗಳಲ್ಲಿ ಹಿಟ್ಟನ್ನು ಮಾಡಿಕೊಂಡಿ ತಿನ್ನುತ್ತಾರೆ. ಆದರೆ ನೀವು ಮಾಡಿರುವುದೇನೆಂದರೆ ಬಜೆಟ್‌ನಲ್ಲಿ ಜನರು ನೋಡಿ ಸಿದ್ಧರಾಮಯ್ಯನವರು ಬಡವರ ಮೇಲೆ ಕನಿಕರವಿಟ್ಟು ಟ್ಯಾಕ್ಸ್ ಹಾಕದೇ ಒಳ್ಳೆಯದನ್ನು ಮಾಡಿದ್ದಾರೆ ಎನ್ನುವ ಭಾವನೆ ಬರುವ ಹಾಗೆ ಮಾಡಿದ್ದೀರಿಯೇ ಹೊರತು ನಿಜವಾಗಿಯೂ ಇದರ ಲಾಭ ಯಾರಿಗೆ ಬರುತ್ತದೆಂದರೆ ರಾಗಿ ಹಿಟ್ಟನ್ನು ಪ್ಯಾಕೆಟ್‌ಗಳಲ್ಲಿ ಹಾಕಿ ಮಾರುವ ಬೆಂಗಳೂರಿನಂಥ ವ್ಯಾಪಾರಿಗಳವರಿಗೆ ಅನುಕೂಲವಾಗುತ್ತದೆ. ಇದೇ ರೀತಿಯಾಗಿ ನೀವು ಇಂದು ಹಳೇ ಕಾರುಗಳ ಮೇಲೆ ಟ್ಯಾಕ್ಸ್ ಕಡಿಮೆ ಮಾಡಿದ್ದೀರಿ. ಇವುಗಳೆಲ್ಲಾ ಬಡವರಿಗೆ ಅನುಕೂಲ ಆಗುವಂಥದ್ದಲ್ಲವೆಂದು ಹೇಳಿ ನೀವೇನು ಬಜೆಟ್‌ನ್ನು ಮಂಡನೆ ಮಾಡಿದ್ದೀರಿ ಅದನ್ನು ನಾನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ತಾವು ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ವಂದನೆಗಳನ್ನು ಹೇಳಬಯಸುತ್ತೇನೆ. 1998-99ನೇ ಸಾಲಿನಲ್ಲಿ ನಿರೀಕ್ಷೆಗಿಂತ 800 ಕೋಟಿ ರೂ. ತೆರಿಗೆ ಸಂಗ್ರಹವಾಗಿದ್ದು ರೆವಿನ್ಯೂ ವೆಚ್ಚ 204 ಕೋಟಿ ರೂ. ಪ್ಲಾನ್ ಮತ್ತು ಯೋಜನಾ ವೆಚ್ಚ 222 ಕೋಟಿ ರೂ. ಕಡಿಮೆಯಾಗಿದೆ. ಇನ್ನೊಂದು ಕಡೆಯಲ್ಲಿ ಕೆ.ಇ.ಬಿ. ಯಂಥ ಸಂಸ್ಥೆಯಲ್ಲಿ 1400 ಕೋಟಿ ರೂ. ಸಾಲದ ಹೊರೆ ಇರುವಂಥ ಸಂದರ್ಭದಲ್ಲಿ ರೆವಿನ್ಯೂ ಕಲೆಕ್ಷನ್ ನ್ನು ಹೇಗೆ ಹೆಚ್ಚು ಮಾಡಬಹುದು ಎಂಬುದರ ಬಗ್ಗೆ ತಾವು ಯೋಚನೆ ಮಾಡುವುದರ ಬದಲು ನಮಗೆ ಆಘಾತವಾಗುವ ಹಾಗೆ ಮಾಡಿದ್ದೀರಿ. ಇದರ ಬಗ್ಗೆ ನಾನು ಮಾನ್ಯ ಸಚಿವರಿಗೂ ವಿನಂತಿ ಮಾಡಿಕೊಂಡಿದ್ದೆ. ತಾವೂ ಕೂಡ ಅದರ ಬಗ್ಗೆ ಪುನರ್‌ಪರಿಶೀಲಿಸಬೇಕೆಂದು ವಿನಂತಿ ಮಾಡುತ್ತೇನೆ.

ಅದೇನೆಂದರೆ ವಿಶೇಷವಾಗಿ ಕೃಷಿ ಉತ್ಪನ್ನಗಳಾಗಿದ್ದ ಬೀಡಿ ಎಲೆ ಹಾಗೂ ಗೋಡಂಬಿ ಬೆಳೆಯನ್ನು ವಾಣಿಜ್ಯ ಬೆಳೆ ಎಂದು ತಾವು ಮಾಡಿದ್ದೀರಿ. ಈ ರೀತಿ ಮಾಡಿ ಅವುಗಳನ್ನು ಪ್ರವೇಶ ತೆರಿಗೆ ವ್ಯಾಪ್ತಿಗೆ ತರುವುದರಿಂದ ಇದನ್ನೇ ನೆಚ್ಚಿಕೊಂಡಿರುವ ಸುಮಾರು 8 ಲಕ್ಷ ಕಾರ್ಮಿಕರಿಗೆ ದೊಡ್ಡ ಆಘಾತವೇ ಆಗುತ್ತದೆ. ಇಂದು ಬೀಡಿ ಕಟ್ಟುವುದರಿಂದ ಅದನ್ನು ಪ್ಯಾಕ್ ಮಾಡುವವರೆಗೆ ಇರುವ ಸುಮಾರು 8 ಲಕ್ಷ ಕುಟುಂಬಗಳವರಿಗೆ ಬೇರೆ ವ್ಯವಸ್ಥೆ ಮಾಡುವ ಹಾಗಿಲ್ಲ. ಒಂದು ಕಡೆ ಗುಟ್ಕಾದವರ ಕಾಂಪಿಟೇಷನ್ ಇನ್ನೊಂದು ಕಡೆ ಮಿನಿ ಸಿಗರೇಟ್ ನವರ ಕಾಂಪಿಟೇಷನ್ ಇವರಿಗೆ ಇರುವಾಗ ಈ ಎರಡಕ್ಕೂ ತಾವು ತೆರಿಗೆಯನ್ನು ಏರಿಸಿದ್ದರೆ ನನಗೆ ಸಂತೋಷವಾಗುತ್ತಿತ್ತು. ಅದನ್ನು ಬಿಟ್ಟು ತಾವು ಬೀಡಿ ಮತ್ತು ಗೋಡಂಬಿಯನ್ನು ವಾಣಿಜ್ಯ ಪದಾರ್ಥಗಳ ವ್ಯಾಪ್ತಿಗೆ ತಂದು ಪ್ರವೇಶ ತೆರಿಗೆಯನ್ನು ಹಾಕಿ ಸುಮಾರು 8 ಲಕ್ಷ ಕಾರ್ಮಿಕರಿಗೆ ತೊಂದರೆ ಮಾಡುತ್ತಿದ್ದೀರಿ. ಆದುದರಿಂದ ತಾವು ಇದರ ಬಗ್ಗೆ ದಯವಿಟ್ಟು ಪುನರ್ ಪರಿಶೀಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದಷ್ಟೇ ಅಲ್ಲ, ಗೋಡಂಬಿ ರಫ್ತು ಉದ್ಯಮದಿಂದ ಸಾಕಷ್ಟು ಕೋಟಿ ರೂ.ಗಳು ಬರುತ್ತಿದೆ. ಹೀಗಿರುವಾಗ ನೀವು ಎ.ಪಿ.ಎಂ.ಸಿ.ಯಲ್ಲಿ ಖಾಲಿ ಇರುವಂಥ ಗೋಡಂಬಿಗೆ ಟ್ಯಾಕ್ಸ್ ಹಾಗೂ ಒಳಗಿರುವ ಕರ್ನಲ್ ಯಾವುದಿದೆ ಅದರ ಮೇಲೆ ಟ್ಯಾಕ್ಸ್ ಹಾಕಿ ಎರಡೂ ರೀತಿಯ ಟ್ಯಾಕ್ಸ್‌ನಿಂದ ಬೆಳೆಗಾರರಿಗೆ ಸಫರ್ ಆಗಿದೆ. ಇದನ್ನು ತಾವು ರದ್ದು ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇದರ ಜೊತೆಗೆ ತಾವೇನು ಈಗ ಕೃಷಿ ಉತ್ಪನ್ನಗಳನ್ನು ವಾಣಿಜ್ಯ ಉತ್ಪನ್ನಗಳೆಂದು ಮಾಡಿದ್ದೀರಿ ಅದನ್ನು ಕೈಬಿಟ್ಟು ಮೊದಲಿದ್ದ ಹಾಗೆ ಅವುಗಳನ್ನು ಕೃಷಿ ಉತ್ಪನ್ನಗಳೆಂದೇ ಪರಿಗಣಿಸಿ ರಫ್ತು ಉದ್ಯಮಕ್ಕೆ ಪ್ರೋತ್ಸಾಹ ನೀಡುವತ್ತ ತಾವು ಪ್ರಯತ್ನ ಮಾಡಬೇಕು. ಇನ್ನು ತಾವು 1999ರ ವರ್ಷವನ್ನು ಪ್ರವಾಸೋದ್ಯಮ ವರ್ಷವೆಂದು ಹೇಳಿದ್ದೀರಿ. ಹೀಗಿರುವಾಗ ತಾವು ವೆಹಿಕಲ್ ಟ್ಯಾಕ್ಸ್‌ನ್ನು ಹೆಚ್ಚು ಮಾಡಿದ್ದೀರಿ. ಈಗಾಗಲೇ ಭಾರತ ದೇಶದಲ್ಲಿ ನಮ್ಮ ರಾಜ್ಯದಲ್ಲಿಯೇ ವೆಹಿಕಲ್ ಟ್ಯಾಕ್ಸ್ ಹಾಲಿ ಜಾಸ್ತಿ ಇರುವಾಗ ನೀವೂ ಇನ್ನೂ ಹೆಚ್ಚು ಮಾಡುವುದಕ್ಕೆ ಹೊರಟಿರುವುದು ಸರಿಯಲ್ಲ. ಇದು ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದ ಹಾಗೆ ಆಗುತ್ತದೆ. ಏಕೆಂದರೆ ಸುಮಾರು 23 ಲಕ್ಷ ವಿದೇಶಿ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಇಂದು ಬರುತ್ತಿದ್ದಾರೆ. ಚೈನಾವನ್ನು ಬಿಟ್ಟರೆ ನಮ್ಮ ದೇಶಕ್ಕೆ ಹೆಚ್ಚು ಜನ ವಿದೇಶಿ ಪ್ರವಾಸಿಗರು ಬರುತ್ತಾರೆ. ಕೇವಲ ಪ್ರವಾಸೋದ್ಯಮ ವರಮಾನದಿಂದಲೇ ಇಂದು ಸಿಂಗಾಪುರ್ ಹಾಗೂ ಮಲೇಶಿಯಾಗಳು ಬದುಕು ನಡೆಸುವುದಕ್ಕೆ ಸಾಧ್ಯವಿರುವಂಥ ಪರಿಸ್ಥಿತಿ ಇರುವಾಗ ಅದೇ ರೀತಿ ವಿದೇಶಿ ವಿನಿಮಯವನ್ನು ಹೆಚ್ಚು ಮಾಡುವುದಕ್ಕಾಗಿ ಆ ನಿಟ್ಟಿನಲ್ಲಿ ಪ್ರವಾಸಿ ನೀತಿಯನ್ನು ಅಳವಡಿಸಲು ತಾವು ಪ್ರಯತ್ನ ಮಾಡಬೇಕಾಗಿತ್ತು. ಈ ನಿಟ್ಟಿನಲ್ಲಿ ಮರುಚಿಂತನೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ಮೂಲಭೂತ ಸೌಲಭ್ಯಗಳ ಬಗ್ಗೆ ತಾವು ಅನೇಕ ಮಾತುಗಳನ್ನು ಹೇಳಿದ್ದೀರಿ. ನಾನು ಮಂಗಳೂರು ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನೀವು ಸುಮಾರು

5 ಕೋಟಿ ರೂ.ಗಳನ್ನು ನೀವು ಪುನರ್‌ವಸತಿಗೋಸ್ಕರ ವಿನಿಯೋಗಿಸಿದ್ದರೆ ಸುಮಾರು 120 ಕೋಟಿ ಕೇಂದ್ರ ಸರ್ಕಾರದಿಂದ ನೆರವು ಬರುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಅನುಕೂಲವಾಗುವುದಲ್ಲದೇ ರಪ್ತು ಉದ್ಯಮಕ್ಕೂ ಕೂಡ ಅದ್ಯತೆಯನ್ನು ಕೊಟ್ಟಂತಾಗುವುದರಿಂದ ತಾವು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಮ್ಮ ಭಾಷಣದಲ್ಲಿ ತೆರಿಗೆ ಹಾಗೂ ಟೆಂಡರ್ ಕರೆಯುವುದರಲ್ಲಿ ಪಾರದರ್ಶಕತೆ ನೀತಿಯನ್ನು ಜಾರಿಗೆ ತರುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಬಹುಶಃ ನಾಲ್ಕೂವರೆ ವರ್ಷಗಳ ನಂತರವಾದರೂ ತಾವು ಇದರ ಬಗ್ಗೆ ಯೋಚನೆ ಮಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ನಾಲ್ಕೂವರೆ ವರ್ಷಗಳವರೆಗೂ ಏಕೆ ಯೋಚನೆ ಮಾಡಲಿಲ್ಲ ಎಂಬ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ. ಇನ್ನು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಏನಿದೆ ಅದನ್ನು ಎಲ್ಲಾ ಹಾಮಗಾರಿಗಳಿಗೂ ಸಂಬಂಧಪಟ್ಟ ಹಾಗೆ ಕಡ್ಡಾಯವಾಗಿ ಮಾಡಬೇಕು. ಯೂಸರ್ಸ್ ಕಮಿಟಿಯನ್ನು ಮಾಡಿಕೊಂಡು ಇದರ ಪರಿಶೀಲನೆಯಲ್ಲಿ, ಅದನ್ನು ಅಳವಡಿಸಿಕೊಂಡು ಅದನ್ನು ತರಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ಮಹಾನಗರಪಾಲಿಕೆ ಹಾಗೂ ನಗರಸಭೆಗಳಿಗೆ ಸಂಬಂಧಪಟ್ಟಂತೆ ಪ್ರತಿ ವಾರ್ಡ್‌ಗೂ ಒಂದೊಂದು ಕಮಿಟಿಯನ್ನು ಮಾಡಿ ಅದರಲ್ಲಿ, ಚುನಾಯಿತ ಪ್ರತಿನಿಧಿಗಳನ್ನು ಹಾಗೂ ಇನ್ನಿತರ ಸಮಾಜದ ಗಣ್ಯರನ್ನೂ ಕೂಡ ಸೇರಿಸಬೇಕು ಮತ್ತು ಇದರಿಂದ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್‌ನ್ನು ಎಲ್ಲಾ ಹಾಮಗಾರಿಗಳಿಗೆ ಸಂಬಂಧಪಟ್ಟ ಹಾಗೆ ಮಾಡಿಸುವುದಕ್ಕೆ ಪ್ರಯತ್ನ ಮಾಡಿದರೆ ಇದರಿಂದ ಹೆಚ್ಚು ಉಪಯುಕ್ತವಾಗುತ್ತದೆ. ಇನ್ನು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾ ವಿದ್ಯಾರ್ಥಿಗಳಿಗೆ ಶೇಕಡ 15ರಷ್ಟು ಗ್ರೇಸ್ ಮಾರ್ಕ್ಸ್‌ನ್ನು ಕೊಡಬೇಕು. ಇದರ ಬಗ್ಗೆ ತಾವು ಏನನ್ನೂ ಹೇಳಿಲ್ಲ. ಪಕ್ಕದ ರಾಜ್ಯವಾದ ಕೇರಳದಲ್ಲಿ ಇಂಥ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್‌ನ್ನು ಕೊಡುತ್ತಿದ್ದಾರೆ. ಆ ರೀತಿ ನೀವೂ ಮಾಡಿದರೆ ಹಳ್ಳಿಗಾಡುಗಳ ವಿದ್ಯಾರ್ಥಿಗಳಿಗೆ ಕ್ರೀಡೆಯಲ್ಲಿ, ಪಾಲ್ಗೊಳ್ಳಲು ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ಮೀನುಗಾರರಿಗೆ ಡೀಸೆಲ್ ಸಬ್ಸಿಡಿಯನ್ನು ಏನು ತೋರಿಸಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಕರಾವಳಿ ಪ್ರದೇಶಕ್ಕೆ ಸೀಮಿತವಾದಂತೆ ವಿಶೇಷ ಅಭಿವೃದ್ಧಿ ಕೆಲಸವನ್ನು ಮಾಡುವ ನಿಟ್ಟಿನಲ್ಲಿ ಅಲ್ಲಿರುವಂಥ ಡ್ರೆಜ್ಜಿಂಗ್ ಮೆಷಿನ್ಸ್ ಅದೇ ರೀತಿ ಜೆಡ್ಡಿ ನಿರ್ಮಾಣಕ್ಕೋಸ್ಕರ ಮೈನರ್ ಇರಿಗೇಷನ್‌ನ್ನು ಬಂದರು ಇಲಾಖೆಗೆ ತಾವು ಹಸ್ತಾಂತರಿಸಬೇಕು. ಮೀನುಗಾರ ಸಚಿವರಿಗೆ ಹೆಚ್ಚು ಕೆಲಸವನ್ನು ಕೊಡುವ ಶಕ್ತಿಯನ್ನು ಮಾಡಿದರೆ ಮಾತ್ರ ಇದು ಹೆಚ್ಚು ಉಪಯುಕ್ತವಾಗಬಹುದು. ಈ ಬಗ್ಗೆ ಕೂಡ ತಾವು ಪರಿಶೀಲಿಸಿ ಮಾಡುವುದು ಸೂಕ್ತವೆಂದು ವಿನಂತಿಸುತ್ತೇನೆ. ಇನ್ನು 13ನೇ ಪುಟದಲ್ಲಿ ತಾವು ದುರ್ಬಲ ವರ್ಗದವರ ಕಲ್ಯಾಣಕ್ಕೆ ಸಾಮಾಜಿಕ ನ್ಯಾಯವನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದ್ದೀರಿ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಬಗ್ಗೆ ತಾವು

ಉಲ್ಲೇಖ ಮಾಡಿದ್ದೀರಿ. 239 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮಾಡುವಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ನಾಲ್ಕು ಜನ ಮಂತ್ರಿಗಳು ಬಂದು ಪರಿಶೀಲನೆ ಮಾಡಿಕೊಂಡು ಹೋಗಿದ್ದೀರಿ. ಇವತ್ತಿನವರೆಗೂ ಅಲ್ಲಿ ವಿದ್ಯಾರ್ಥಿ ಹಾಸ್ಟೆಲ್ ಕಂಪ್ಲೀಟ್ ಮಾಡುವುದಕ್ಕಾಗಿಲ್ಲ. ಇದನ್ನೂ ಕೂಡ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಪಡುತ್ತೇನೆ. ಅದೇ ರೀತಿ ಯುವ ಜನ ಸೇವೆಗೆ ಸಂಬಂಧಪಟ್ಟ ಹಾಗೆ ಅನೇಕ ರೀತಿಯಲ್ಲಿ ಸಲಹೆ ಸೂಚನೆಗಳನ್ನು ಕೊಡುವಂತಹ ಆಸಕ್ತಿ ಇದ್ದರೂ ಕೂಡ ಸಮಯಾವಕಾಶ ಕಡಿಮೆ ಇರುವುದರಿಂದ ಕೊಟ್ಟಿರುವಂತಹ ಅವಕಾಶಕ್ಕೆ ಧನ್ಯವಾದಗಳನ್ನು ಹೇಳುತ್ತಾ, ಬಹುಶಃ ಬೀಡಿ ಎಲೆ ಮತ್ತು ಗೋಡಂಬಿಗೆ ಸಂಬಂಧಪಟ್ಟ ಹಾಗೆ ತಾವು ಹೆಚ್ಚಿನ ಆದ್ಯತೆ ಕೊಡುತ್ತೀರಿ, ದಕ್ಷಿಣ ಕನ್ನಡ ಜಿಲ್ಲೆಯ ತೋಟಗಾರರ ಉತ್ಪನ್ನ ಏನಿದೆ ಅದಕ್ಕೆ ಒಳ್ಳೆಯ ಮಾರಾಟ ಸಿಗುವ ರೀತಿಯಲ್ಲಿ ರಫ್ತು ಉದ್ಯಮಕ್ಕೆ ಅದು ಕೂಡ ಸೇರ್ಪಡೆ ಆಗುವ ದಿಕ್ಕಿನಲ್ಲಿ ತಾವು ಹೆಚ್ಚು ಪ್ರೋತ್ಸಾಹ ಕೊಡುತ್ತೀರಿ ಎಂದು ಹೇಳಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೇ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಚಾರಗಳನ್ನು ಅರ್ಥ ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛಪಡುತ್ತೇನೆ. ಕಳೆದ ಸದನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಕಾಫಿ ಬೆಳೆಗಾರರಿಗೆ ಫಾರಂ ನಂಬರ್ 39 ತೆಗೆಯಬೇಕು ನಂತರ 600 ಕೆ.ಜಿ., ಮೇಲೆ ಏನು ನಾವು ಕಾಫಿ ಬೆಳೆಯುತ್ತೇವೆ ಅದಕ್ಕೆ ಟ್ಯಾಕ್ಸ್ ಹಾಕಬಾರದು ಎಂದು ಪ್ರಸ್ತಾಪ ಮಾಡಿದ್ದೆ. ತಾವು ಈ ಸಾರಿ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಹಾಗೂ ಅದನ್ನು ಬಿಟ್ಟು ಕೊಟ್ಟಿದ್ದೀರಿ. ಆದರೆ ನಮ್ಮ ಹಳ್ಳಿಯಲ್ಲಿ, ಒಂದು ಮಾತು ಇದೆ. ತಾವು ಕೊಟ್ಟಿದ್ದಕ್ಕೆ ಅಭಿನಂದನೆ. ಬಲದ ಕೈಯಲ್ಲಿ ಕೊಟ್ಟು ಎಡದ ಕೈಯಲ್ಲಿ ತೆಗೆದುಕೊಂಡ ಎಂದು ಹೇಳುತ್ತಾರೆ. ತಾವು ಏನು ಮಾಡಿದ್ದೀರಿ ಎಂದರೆ ಫಾರಂ ನಂಬರ್ 28, ಇದನ್ನು ಕ್ಯೂರಿಂಗ್ ವರ್ಕ್ಸ್‌ನಲ್ಲಿ ಇಟ್ಟಿದ್ದೀರಿ. ತೆಗೆಯಲಿಲ್ಲ. ತೆಗೆಯುವುದಿದ್ದರೆ ಎರಡು ತೆಗೆಯಬೇಕು. ಈಗ ಏನಾಗುತ್ತದೆ ಎಂದರೆ ನಾನು ಈಗುಹಿಸಿದ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಾ ಸ್ಟಾಕ್ ಆಗುತ್ತದೆ. ಅದಕ್ಕೆ ಟ್ಯಾಕ್ಸ್ ತೆಗೆದುಕೊಳ್ಳುತ್ತೀರಿ. ಇಲ್ಲಿ ಬಿಟ್ಟಿರಿ, ಅಲ್ಲಿ ತಾವು ತೊಂದರೆ ಮಾಡುವಂತಹ ವ್ಯವಸ್ಥೆ ಮಾಡಿದ್ದೀರಿ. ಅದು ಆಗಬಾರದು. ಫಾರಂ 28 ತೆಗೆಯಬೇಕು. ಇನ್ನೊಂದು ತೊಂದರೆ ನಮ್ಮನ್ನು ಸಿಕ್ಕಿಸಿದ್ದೀರಿ ಎಂದರೆ ಎಕ್ಸ್‌ಪೋರ್ಟ್ ಕಾಫಿ,

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಈಗ ಥ್ಯಾಂಕ್ಸ್ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಬಿ.ಬಿ. ಶಿವಪ್ಪ :— ಈ ಎಕ್ಸ್‌ಪೋರ್ಟ್ ಕಾಫಿ ಏನಿದೆ ಇದರ ಮೇಲೆ ತಾವು ಸೇಲ್ಸ್‌ಟ್ಯಾಕ್ಸ್ ಹಾಕಿದ್ದೀರಿ. ಕೇಂದ್ರದಲ್ಲಿ ಕೂಡ ಎಕ್ಸ್‌ಪೋರ್ಟ್ ಕಾಫಿ ಬಗ್ಗೆ ಒಂದು ವ್ಯವಸ್ಥೆ ಇದೆ. ಕಾಫಿ ಎಕ್ಸ್‌ಪೋರ್ಟ್ ಆದಮೇಲೆ ಕೊನೇಪಕ್ಷ ಅವರಿಗೆ ಆರು ತಿಂಗಳು ಸಮಯ ಕೊಟ್ಟು ಆರು ತಿಂಗಳ ಒಳಗೆ ಅವರು ಎಕ್ಸ್‌ಪೋರ್ಟ್ ಮಾಡದೇ ಇದ್ದರೆ ಆಗ ಟ್ಯಾಕ್ಸ್ ಹಾಕಬಹುದು. ಅಕೌಂಟ್ ಇದ್ದೇ ಇರುತ್ತದೆ. ಎಕ್ಸ್‌ಪೋರ್ಟರ್ಸ್‌ಗೆ ಕೊನೇಪಕ್ಷ ಒಂದು ಆರು ತಿಂಗಳು ಸಮಯ ಕೊಡುವಂತಹ ವ್ಯವಸ್ಥೆಯಾಗಬೇಕು. ತಮಗೆ ಗೊತ್ತಿದೆ, ಕಳೆದ ವರ್ಷ 50 ಕೆ.ಜಿ. ಒಂದು ಮೂಟೆ ಕಾಫಿಗೆ ಏಳೂವರೆ ಸಾವಿರ ರೂಪಾಯಿ ಇತ್ತು. ಆದರೆ ಇವತ್ತು 2,800 ರೂಪಾಯಿಗೆ ಬಂದಿದೆ. ಇವತ್ತು ಈ ಸದನದಲ್ಲಿ ಎಲ್ಲಾ ಬೆಳೆಗಳ ಬಗ್ಗೆ ಚರ್ಚೆ ಮಾಡುತ್ತೀರಿ. ಆದರೆ ಕಾಫಿ ಬೆಳೆ ಬಗ್ಗೆ ಯಾರೂ ಕೂಡ ಚರ್ಚೆ ಮಾಡುವುದಿಲ್ಲ. ಕಾರಣ ಕಾಫಿ ಬೆಳೆಗಾರರು ಎಂದರೆ ಅವರ ಬಗ್ಗೆ ಒಳ್ಳೆಯ ಅಭಿಮಾನ ಇದೆ. ಮೇಲೆ ಹೋದರೂ ಕೇಳುವವರು ಇಲ್ಲ, ಕೆಳಗೆ ಹೋದರೂ ಕೇಳುವವರು ಇಲ್ಲ. ಮೇಲೆ ಏನಾದರೂ ಹೋದರೆ ಟ್ಯಾಕ್ಸ್ ಬಗ್ಗೆ ದೃಷ್ಟಿ ಹರಿಸುತ್ತೀರಿ. ಅದು ನಾವು ಸಿಕ್ಕಿಹಾಕಿಕೊಂಡಿರುವಂತಹ ತೊಂದರೆ. ಇದರ ಬಗ್ಗೆ ಹೇಳುತ್ತಾ ಇನ್ನು ಕೋಲಾರದ ಟೊಮ್ಯಾಟೋ ಬಗ್ಗೆ ಆಗ್ಗಾಗ್ಗೆ ಬರುತ್ತಿದೆ. ಎರಡು ಸಾರಿ ರಸ್ತೆ ಮೇಲೆ ಟೊಮ್ಯಾಟೋ ಹಾಕಿದ್ದಾರೆ. ಎಲ್ಲಿ ಜಾಸ್ತಿ ಹಣ್ಣುಹಂಪಲುಗಳನ್ನು ಬೆಳೆಯುತ್ತೇವೆ ಅಲ್ಲಿ ಸಂಸ್ಕರಣ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಅದನ್ನು ಸೊಸೈಟಿ ಮುಖಾಂತರ ಅಥವಾ ಪ್ರೈವೇಟ್ ಆಗಿ ಯಾರಾದರೂ ಬರುವವರಿದ್ದರೆ ಅದನ್ನು ಮಾಡಿದರೆ ಬೆಳೆಯುವಂತಹ ರೈತನಿಗೆ ಅನುಕೂಲವಾಗಬಹುದು ಎಂದು ನನ್ನ ಅನಿಸಿಕೆ. ಇದರ ಬಗ್ಗೆ ತಾವು ಗಮನಹರಿಸಬೇಕು ಎಂದು ಕೇಳುತ್ತೇನೆ. ಕೃಷಿ ಮತ್ತು ತೋಟಗಾರಿಗೆ ಎರಡು ಬೆಳೆಗೆ ತಾವು ಈ ಒಂದು ವ್ಯವಸ್ಥೆ ಮಾಡಿಕೊಡಬೇಕು. ಕೊನೆಯದಾಗಿ ಮಾನ್ಯ ಪ್ರಕಾಶ್‌ರವರು ಇದ್ದಾರೆ. ಅವರು ಕುಡಿಯುವ ನೀರಿನ ಬಗ್ಗೆ ಯಾವುದೇ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನು 50 ವರ್ಷವಾದರೂ ಕೂಡ ಸಂಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಮಾಡಿರುವಂತಹ ಈ ಕುಡಿಯುವ ನೀರು ವ್ಯವಸ್ಥೆ ಕೂಡ ಅವ್ಯವಸ್ಥೆಯಾಗಿದೆ. ಟ್ಯಾಂಕ್ ಆಗಿದೆ. ಆದರೆ ನೀರು ಎಲ್ಲಿ ಸಿಗುತ್ತದೆ ಎಂದು ಹುಡುಕುತ್ತಿದ್ದಾರೆ. ಪಂಪ್, ಪೈಪ್, ಡಿಸ್ಟ್ರಿಬ್ಯೂಷನ್ ಲೈನ್ ಎಲ್ಲಾ ಆಗಿದೆ. ಆದರೆ ಈ ರೀತಿ ಸಂಪೂರ್ಣ ಅವ್ಯವಸ್ಥೆಯಾಗಿದೆ. ಕುಡಿಯುವ ನೀರಿಗೆ ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ ಅಷ್ಟು ಉಪಯೋಗವಾಗಲಿಲ್ಲ. ತಾವು ಟ್ಯಾಕ್ಸ್ ಇಳಿಸುವಂತಹ ಸಂದರ್ಭದಲ್ಲಿ ಕೆಲವು ಐಟಂಗಳಲ್ಲಿ ಹೇರಿಕೊಂಡಿದ್ದೀರಿ. ಯಾವುದೂ ಕೂಡ ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಯಾವುದೇ ವಸ್ತು ಮೇಲೆ ಟ್ಯಾಕ್ಸ್ ಇಳಿಸಲಿಲ್ಲ. ಉದಾಹರಣೆಗೆ ಹೇಳುವುದಾದರೆ ಬೀರಿನ ಮೇಲೆ ಇಳಿಸಿದಿರಿ. ಏಕೆ ಇಳಿಸಿದಿರಿ ಎಂದು ನನಗೆ ಅರ್ಥವಾಗಲಿಲ್ಲ. ಬೀರ್ ಎಂದರೆ ನನಗೆ ಒಂದು ಘಟನೆ ನೆನಪಿಗೆ ಬರುತ್ತದೆ. ಯಾವುದೋ ಒಂದು ಹಳ್ಳಿಗೆ ಹೋಗಿ ಭಾಷಣ ಎಲ್ಲಾ ಮಾಡಿ ಸುಸ್ತಾಗಿ ಒಂದು ಕಪ್ ನೀರು ಕೊಡು ಎಂದು ಒಬ್ಬನನ್ನು

ಕೇಳಿದೆವು. ಅವನು ನಮ್ಮಲ್ಲಿ ನೀರು ಇಲ್ಲ ಎಂದು ಹೇಳಿದ. ಎಂದರೆ ನೀವು ಹೇಗೆ ಜೀವನ ಮಾಡುತ್ತೀರಿ ಎಂದು ಕೇಳಿದೆವು. ಇಲ್ಲ ಸ್ವಾಮಿ ನಾವೂ ಬೀರ್ ಕುಡಿಯುತ್ತೇವೆ ಎಂದು ಹೇಳಿದ. ಅದಕ್ಕೆ ನಾವು ಸಂತೋಷ, ನಿಮ್ಮ ದನಕರುಗಳು ನೀರು ಕುಡಿಯುವುದಕ್ಕೆ ಏನು ಮಾಡುತ್ತೇವೆಂದು ಕೇಳಿದಾಗ, ಅವುಗಳು ಫಾಂಟ, ಕೋಕೋಕೋಲ ಕುಡಿಯುತ್ತೇವೆ ಎಂದು ಹೇಳಿದ. ಎಂದರೆ ರಿಪೋರ್ಟ್ ವಿಲೇಜಸ್‌ಗೆ ನೀವು ಹೋದರೆ ಬೀರ್, ಫಾಂಟ, ಕೋಕೋಕೋಲ ಸಿಗುತ್ತದೆ. ಆದರೆ ನೀರು ಸಿಗುವುದಿಲ್ಲ. ಇವತ್ತಿನ ಪರಿಸ್ಥಿತಿ ಈ ರೀತಿ ಇದೆ. ನೀವೇನು ಖರ್ಚು ಮಾಡುತ್ತೀರಿ ಅದರ ಮೇಲೆ ಹಿಡಿತ ಕಡಿಮೆ ಆಗುತ್ತಿದೆ. ಖರ್ಚ ಅನಾವಶ್ಯಕವಾಗಿ ಖರ್ಚು ಆಗುತ್ತಿದೆ. ಆದರೆ ಉಪಯೋಗ ಕಡಿಮೆ ಆಗುತ್ತಿದೆ. ಕೆಲವು ಅಂಶಗಳನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಫಾರಂ 39 ತೆಗೆದರೆ ಅದೇ ರೀತಿ ಫಾರಂ ನಂಬರ್ 28 ಅನ್ನೂ ತೆಗೆಯಬೇಕು. ಪ್ರಯೋಜನ ಇಲ್ಲದೆ ಇರತಕ್ಕಂಥ ಹೆರ್ಯಾಸ್‌ಮೆಂಟ್ ಆಗುತ್ತದೆ. ಅದಕ್ಕೆ ಏನು ಸರ್ಕಾರಕ್ಕೆ ಭಾರಿ ಬರುತ್ತದೆ ಎಂದ ಲೆಕ್ಕ ಹಾಕಬೇಡಿ. ಮತ್ತು ಟ್ಯಾಕ್ಸ್ ಬಗ್ಗೆ ತಾವು ಗಮನಹರಿಸಬೇಕೆಂದು ಹೇಳಿ, ತಮ್ಮ ಈ ಬಜೆಟ್, ಇದು ಚುನಾವಣಾ ಬಜೆಟ್ ಎಂದು ಹೇಳುತ್ತಾ ನಾನು ಇದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ವಿಚಾರಗಳನ್ನು ಪ್ರಸ್ತಾಪ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಮಾನ್ಯ ಮುನಿಯಪ್ಪನವರು ಮಾತನಾಡಿ. ಮಾನ್ಯ ಬೈರೇಗೌಡರೇ ಈಗ ತಾವು ಫಸ್ಟ್ ಬೆಂಚ್‌ಗೆ ಬನ್ನಿ

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) :— ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ತಡವಾದರೂ ಸಹ ತಾವು ನನ್ನ ಮನವಿಗೆ ಪುರಸ್ಕರಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ, ನಿನ್ನೆ ಪ್ರಶ್ನೋತ್ತರ ವೇಳೆಯಲ್ಲಿ ಕಾರಣಾಂತರದಿಂದ ನಾನು ಹಾಕಿದಂತಹ ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾನು ಅದಕ್ಕೆ ಉತ್ತರ ಸರಿಯಿಲ್ಲ...

ಅಧ್ಯಕ್ಷರು :— ಬಿಡಿ, ಅದನ್ನು ಮನಸ್ಸಿಗೆ ಏತಕ್ಕೆ ಇಟ್ಟುಕೊಳ್ಳುತ್ತೀರಿ? ನಾನು ಮರೆತು ಹೋಗಿ ಯಾವ ಕಾಲವಾಯಿತು. ಮುಂದೆ ಹೋಗಿ.

ಶ್ರೀ ವಿ. ಮುನಿಯಪ್ಪ :— ನನಗೆ ಸ್ವಲ್ಪ ಉದ್ವೇಗವಾಗಿತ್ತು ನಿಜ. ಆದರೆ ನಾನು ಯಾವುದೇ ಕಾರಣಕ್ಕೂ ಅನ್‌ಪಾರ್ಲಿಮೆಂಟರಿ ಅಥವಾ ಅನ್‌ಪಾಪುಲರ್ ಆಗಿ ಮಾತನಾಡಲಿಲ್ಲ. ಅದರೆ ಅನುಚಿತವಾಗಿ ವರ್ತನೆ ಮಾಡಿದರು ಎಂದು ಹೇಳಿ ಪತ್ರಿಕೆಗಳಲ್ಲಿ ಬಂದಾಗ ನನ್ನ ಮನಸ್ಸಿಗೆ ಸ್ವಲ್ಪ ನೋವಾಯಿತು. ನಾನು ಯಾವ ರೀತಿಯಲ್ಲೂ ಅನುಚಿತವಾಗಿ ವರ್ತನೆ ಮಾಡಲಿಲ್ಲ.

ಅಧ್ಯಕ್ಷರು :— ಯೋಚನೆ ಮಾಡಬೇಡಿ.

ಶ್ರೀ ವಿ. ಮುನಿಯಪ್ಪ :— ನಾನು ಒಬ್ಬ ಸದಸ್ಯನಾಗಿ ಸರ್ಕಾರದಲ್ಲಿ ಇರತಕ್ಕಂಥ ವೈಫಲ್ಯತೆ ಬಗ್ಗೆ ಗಮನ ಸೆಳೆಯುವುದಕ್ಕೆ ಪ್ರಯತ್ನಪಟ್ಟೆನೇ ಹೊರತು ಬೇರೆ ಯಾವುದೇ ಕಾರಣದಿಂದ ಅಲ್ಲ ಎನ್ನುವ ಮಾತನ್ನು ತಮ್ಮ ಮುಖಾಂತರ ಹೇಳುತ್ತಾ, ವಿಶೇಷವಾಗಿ ಅಧ್ಯಕ್ಷ ಸ್ಥಾನಕ್ಕೆ ಸದಾಕಾಲ ಗೌರವ ನನಗೆ ಇದೆ. ಯಾವುದೇ ರೀತಿಯಲ್ಲಿ ಆ ಸ್ಥಾನಕ್ಕೆ ಧಕ್ಕೆ ಬರದ ಹಾಗೆ ನಡೆದುಕೊಳ್ಳತಕ್ಕಂಥಾದ್ದು, ನನಗೂ ಸಹ ಜವಾಬ್ದಾರಿ ಇದೆ ಎನ್ನುವ ಮಾತನ್ನು ನಾನು ಇವತ್ತು ತಿಳಿಸುತ್ತಾ, ಬಹಳ ಕಾಲಾವಕಾಶ ಕಡಿಮೆ ಇರುವುದರಿಂದ ಕೆಲವು ವಿಚಾರಗಳನ್ನು ಮಾತ್ರ ತಿಳಿಸುತ್ತೇನೆ. ನಾವು ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂಥವರು. ಅದರ ನೈಜ ಪರಿಸ್ಥಿತಿ ತಮಗೆ ಗೊತ್ತಿದೆ ನಮಗೆ ನದಿ, ನಾಲೆ ಏನೂ ಇಲ್ಲ. ನಾವು ಸಂಪೂರ್ಣವಾಗಿ ಪ್ರಕೃತಿಯ ಆಶೀರ್ವಾದದಿಂದ ಬಂದಿರುವಂತಹ ವಾತಾವರಣಕ್ಕೆ ಅಳವಡಿಸಿಕೊಂಡಿರುವುದು. ಕೋಲಾರ ಜಿಲ್ಲೆ ಒಂದು ಕಡೆ ಹಾಲು ಉತ್ಪಾದನೆ ಹಾಗೂ ರೇಷ್ಮೆ ಉತ್ಪಾದನೆ ಮಾಡುತ್ತಾರೆ. ನೂರಕ್ಕೆ 85 ಭಾಗ ಸಣ್ಣ ಹಿಡುವಳಿದಾರರಿಂದ ಜೀವನ ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನನಗೆ ಏನೋ ಸಂಶಯ ಬರುತ್ತಿದೆ. ಪ್ರತಿಯೊಬ್ಬರೂ ಏಕೋ ನಿಮಗೆ ಕಾಗದ ಕೊಡುತ್ತಿದ್ದಾರೆ. ಅವರು ಏನು ಕೊಡುತ್ತಾರೆ ಸ್ವಲ್ಪ ಬಹಿರಂಗ ಪಡಿಸಬೇಕು. ಎಸ್.ಎಸ್. ಪಾಟೀಲ್ ಅವರು ಕೊಟ್ಟರು ನಂತರ ಕೃಷಿ ಮಂತ್ರಿ ಕೊಟ್ಟರು, ಕತ್ತಿಯವರು ಕೊಟ್ಟರು, ಮಾನ್ಯ ಪ್ರಕಾಶ್‌ರವರು ಕೊಟ್ಟರು, ಮುಂಜಾನೆಯಿಂದ ಒಂಬತ್ತು ಲೆಟರ್ ನಾನು ನೋಡುತ್ತಿದ್ದೇನೆ. ಅದು ಯಾವುದು ಕಾಗದ, ಏನು ವಿಷಯ ಎಂದು ಈ ಸಭೆಗೆ ಬಹಿರಂಗಪಡಿಸಬೇಕು ಎಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಅಧ್ಯಕ್ಷರು :— ನಾನು ತಿಳಿಸುತ್ತೇನೆ. ಎಲ್ಲರಿಗಿಂತ ಬಹಳ ಡೇಂಜರಸ್ ಲೆಟರ್ ನನಗೆ ಬಂದಿದ್ದು ಎಂದರೆ ಎಸ್.ಎಸ್. ಪಾಟೀಲ್ ಅವರ ಕಡೆಯಿಂದ ಬಂದಿದ್ದು.

ಶ್ರೀ ವಿ. ಮುನಿಯಪ್ಪ :— ಎಲ್ಲಾ ವರ್ಗಗಳಲ್ಲಿ ಒಂದು ಸಂಘಟನೆ ಇದೆ. ಆದರೆ ದುರಾದೃಷ್ಟ ನಮ್ಮ ರೈತರಲ್ಲಿ ಒಂದು ಸಂಘಟನೆ ಇಲ್ಲ. ಯಾವುದಾದರೂ ಒಂದು ಅಸಂಘಟಿತ ವರ್ಗವಿದೆ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಎಂದರೆ ಅದು ರೈತ ಸಮುದಾಯ. ಅವರ ಒಂದು ವ್ಯವಸ್ಥೆ ಹಾಗೆ ಇದೆ. ಬದುಕು ಹಾಗೆ ಇದೆ. ಯಾವುದೇ ಕಾರಣಕ್ಕೂ ಸಂಘಟನೆಗಳಲ್ಲಿ ತನ್ನನ್ನು ತಾವು ಅಳವಡಿಸಿಕೊಳ್ಳುವಂತಹ ವಾತಾವರಣ ಇಲ್ಲ. ಆ ದೃಷ್ಟಿಯಿಂದ ಉತ್ಪಾದನೆ ಮಾಡುವುದಕ್ಕೆ ಉತ್ಪಾದನೆ ವೆಚ್ಚಕ್ಕೆ ತಕ್ಕಂತೆ ಕಷ್ಟಕ್ಕೆ ತಕ್ಕಂತೆ ಫಲ ಸಿಗತಕ್ಕಂಥ ವ್ಯವಸ್ಥೆ ಈಗ ರೈತನಿಗೆ ಉದ್ಭವವಾಗಿರತಕ್ಕಂಥಾದ್ದು ನೋಡುತ್ತಿದ್ದೇವೆ. ಅದರಲ್ಲಿ ವಿಶೇಷವಾಗಿ ಇವತ್ತು ಹಾಲು ಎಂದರೆ ಬಹುಶಃ ಭೂಲೋಕದಲ್ಲಿ ಅಥವಾ

ಈ ಕಲಿಯುಗದಲ್ಲಿ ಅದೇ ಅಮೃತವೆಂದು ಹೇಳುತ್ತಾರೆ. ಅದಕ್ಕೆ ಕಾರಣ ಕೂಡ ಇದೆ. ಮಗುವಿಗೆ ಹುಟ್ಟುತ್ತಲೇ ಹಾಲು ಕೊಡುತ್ತಾರೆ. ಅಥವಾ ಮನುಷ್ಯ ಸಾಯುತ್ತಿದ್ದಾರೆ ಎಂದರೆ ಹಾಲು ಕೊಡುತ್ತಾರೆ, ಕಾರಣ ಶಕ್ತಿ ಬರುತ್ತದೆ, ಅವನು ಇನ್ನು ಕೆಲವು ಕಾಲ ಉಳಿಯುತ್ತಾನೆ ಎಂದು. ಹಾಲಿನ ಒಂದು ಶಕ್ತಿ ಪ್ರಾಮುಖ್ಯತೆ ಬಹಳ ಮಹತ್ತರವಾದುದು. ಅಂತಹ ಮಹತ್ತರವಾದಂತಹ ಹಾಲಿಗೆ ಕೊಡುತ್ತಿರತಕ್ಕಂಥ ಬೆಲೆಯನ್ನು ನಾವು ವಿಚಾರ ಮಾಡಿದರೆ ಬಹಳ ನೋವಾಗುತ್ತದೆ. ರಿಮೂಟ್ ಪ್ಲೇಸಸ್‌ನಲ್ಲಿರುವ ಹಳ್ಳಿಗಳಿಗೆ ಐದು

6.50 ಪಿ.ಎಂ.

ಗಂಟೆಗೆ ಲಾರಿ ಹೋಗುತ್ತದೆ. ಹಾಲು ಕರೆಯುವುದಕ್ಕೆ ಮಹಿಳೆಯರು ಮುಂಜಾನೆ ಮೂರು ಗಂಟೆಗೆ ಏಳಬೇಕು. ಅಷ್ಟು ಹೊತ್ತಿಗೆ ಎದ್ದು ಹಾಲು ಕರೆದು ಅದನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕಾದರೆ ಹಳ್ಳಿಯಲ್ಲಿರುವ ತೊಂದರೆಗಳು ಸಾಮಾನ್ಯವಾಗಿ ಯಾರಿಗೂ ಬರತಕ್ಕಂಥಾದ್ದಲ್ಲ. ಆದರೂ ತಮಗಿರುವ ಕಷ್ಟವನ್ನು ಮೆಟ್ಟಿ ನಿಂತು ಅನಿವಾರ್ಯ ಪರಿಸ್ಥಿತಿಯಲ್ಲೂ ಆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎನ್ನುವುದಾದರೆ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಲಿಲ್ಲವೆಂದರೆ, ಮತ್ತು ಅದಕ್ಕಿಂತ ಮುಖ್ಯವಾಗಿ ಯಾವುದೇ ಸರ್ಕಾರವಿರಲಿ ವಾಸ್ತವವಾಗಿ ಹಾಲಿನ ಉತ್ಪಾದನಾ ವೆಚ್ಚವೇನಿದೆ, ಅದರ ಆಧಾರದ ಮೇಲೆ ಸರ್ಕಾರ ಹಾಲಿನ ದರ ನಿಗದಿಪಡಿಸದೆ ಹೋದರೆ ರೈತರ ಪರವಾಗಿ ಇಲ್ಲಿ ಬಂದು ಪ್ರತಿನಿಧಿಸುವಂಥ ಜನರಾದ ನಾವು ಖಂಡಿತವಾಗಿಯೂ ಮಹಾಪಾಪ ಮಾಡಿದಂತಾಗುತ್ತದೆಂಬ ವಿಷಯವನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಇಷ್ಟಪಡುತ್ತೇನೆ. ಕುಡಿಯುವ ನೀರಾದ ಬಿಸ್ಲೇರಿ ಮಿನರಲ್ ವಾಟರ್‌ಗೆ ಲೀಟರ್‌ವೊಂದಕ್ಕೆ ರೂ. 15, ರೂ.16 ನಿಗದಿಪಡಿಸಿದ್ದು, ಒಂದು ಲೀಟರ್ ಹಾಲಿಗೆ ರೂ. 10, ರೂ. 9, ರೂ. 8.00 ರಂತೆ ಕೊಡುತ್ತಿದ್ದೇವೆ. ಇವೊತ್ತು ಪಶುವಿನ ಆಹಾರ ಪದಾರ್ಥಗಳ ಬೆಲೆಗಳೆಲ್ಲವೂ ಗಗನಕ್ಕೇರಿದ್ದು ಕೊಳ್ಳುವುದಕ್ಕಾಗುತ್ತಿಲ್ಲ. ಹಸುಗಳನ್ನು ಸಾಕಿ ಹಾಲು ಕರೆದು ಅದರಿಂದ ಬರುವ ದುಡ್ಡು ಕೇವಲ ಪಶು ಆಹಾರಕ್ಕಷ್ಟೇ ಸಾಕಾಗುತ್ತಿದ್ದು ಅವರ ಬಳಿ ಬಿಡಿಗಾಸು ಉಳಿಯುವ ಪರಿಸ್ಥಿತಿಯಿಲ್ಲ. ಅವರ ಕೂಗು ಮುಟ್ಟುತ್ತಿಲ್ಲ. ಬೆಂಗಳೂರಿನಲ್ಲಿ ಸುಮಾರು ಎರಡು ಲಕ್ಷ ಸಂಘಟಿತ ವರ್ಗವಿದ್ದು ಒಂದು ಕಡೆ ಪತ್ರಿಕಾ ಸ್ನೇಹಿತರು ಅದಕ್ಕೆ ಬೆಂಬಲ ಕೊಟ್ಟರೆ ಇನ್ನೊಂದೆಡೆ ಕಾರ್ಮಿಕ ವರ್ಗವಿದೆ. ನಗರ ಪ್ರದೇಶಗಳಲ್ಲಿ ಐವತ್ತು ಲಕ್ಷ ಜನಸಂಖ್ಯೆದಷ್ಟಿರುವ ಜನರ ಕೂಗು ತತ್‌ಕ್ಷಣ ವಿಧಾನಸೌಧದ ಕಿವಿಗೆ ಕೇಳಿಸುತ್ತದೆ, ಆದರೆ, ಹಾಲಿನ ಬೆಲೆ ಹೆಚ್ಚಿಸಬೇಕೆಂದರೆ ಸರ್ಕಾರ ಹಿಂದೆ ಸರಿಯುತ್ತದೆ. ವಾಸ್ತವವಾಗಿ ಹಾಲಿನ ಉತ್ಪಾದನೆಗೆ ಇರುವ ಕಷ್ಟವನ್ನು ಮನವರಿಕೆ ಮಾಡಿಕೊಂಡರೆ ನಿಜವಾಗಿಯೂ ಹಾಲಿಗೆ ನಿಗದಿಪಡಿಸಿರುವ ದರ ಏನೇನೂ ಸಾಲದಾಗಿದೆ. ಆದುದರಿಂದ, ದಯಮಾಡಿ ಬಿಸ್ಲೇರಿ ನೀರಿಗೆ ಕೊಡುತ್ತಿರುವಂತೆ ಒಂದು ಲೀಟರ್ ಹಾಲಿಗೆ ಕನಿಷ್ಠ ರೂ. 15ಕ್ಕೆ ಕಡಿಮೆಯಿಲ್ಲದಂತೆ ದರವನ್ನು ನಿಗದಿಪಡಿಸುವ ವ್ಯವಸ್ಥೆ ಮಾಡಿದರೆ ಹಾಲಿಗೆ ಇರುವ ಒಂದು ಪ್ರಾಮುಖ್ಯತೆ,

ಮಹತ್ವ ಗೊತ್ತಾಗುತ್ತದಲ್ಲದೆ ಆರೋಗ್ಯಕ್ಕೆ ನಿಜವಾಗಿಯೂ ಬೆಂಬಲ ಕೊಟ್ಟಂತಾಗುತ್ತದೆ ಮತ್ತು ಇದರಿಂದಾಗಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದನೆಗೆ ಅವಕಾಶವಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಾ ದಯಮಾಡಿ ಹಾಲಿನ ಬೆಲೆಯನ್ನು ಹೆಚ್ಚಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಎರಡನೆಯದಾಗಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿರುವುದರಿಂದ ನಾನು ಅದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪಿಸುವುದಿಲ್ಲ. ಮೈನರ್ ಇರಿಗೇಷನ್‌ಗೆ ಕೇವಲ ರೂ. 125 ಕೋಟಿ ಕೊಟ್ಟಿದ್ದೀರಿ. ಈ ಸಲ ಡಿ-ಸಿಲ್ಟಿಂಗ್ ವಿಚಾರದಲ್ಲಿ ಕೆರೆ ಕಲ್ಯಾಣ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಳೆದ ವರ್ಷ ಇದಕ್ಕಾಗಿ ರೂ. 10 ಕೋಟಿ ಕೊಟ್ಟಿದ್ದಿರಿ. ಆದರೆ, ಇವೊತ್ತಿನವರೆವಿಗೂ ಯಾರಿಗೂ ಒಂದು ಬಿಡಿಗಾಸಿನ ಪೇಮೆಂಟ್ ಆಗಿಲ್ಲ. ಕಾರಣವೇನೆಂದರೆ, ಅದನ್ನು ಬಜೆಟ್‌ನಲ್ಲಿ ಸೇರಿಸಿಲ್ಲ, ಮತ್ತು ಹಣಕಾಸು ಇಲಾಖೆಯವರು ಇದಕ್ಕೆ ಅಬ್ಜೆಕ್ಷನ್ ಹಾಕಿರುವುದರಿಂದ ಮೈನರ್ ಇರಿಗೇಷನ್‌ನ ಯಾವುದೇ ಕೆರೆಗಳಿಗೆ ಇವೊತ್ತಿನವರೆಗೆವಿಗೂ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಆದ್ದರಿಂದ, 'ಕೆರೆ ಕಲ್ಯಾಣ' ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಿ ಅದಕ್ಕೆ ನಿಗದಿತವಾದ ಅಲೋಕೇಷನ್ ಕೊಟ್ಟರೆ ಮಾತ್ರ ಪೇಮೆಂಟ್ ಆಗುತ್ತದೆ ಇಲ್ಲದಿದ್ದರೆ ಕಾರ್ಯಕ್ರಮ ಸುಮ್ಮನೆ ನಾಮಕಾವಸ್ತೆಯಾಗಿ ಉಳಿಯುತ್ತದೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ನಮ್ಮ ತಾಲ್ಲೂಕಿನಲ್ಲಿರುವ ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕೇವಲ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಕಾರಣಾಂತರಗಳಿಂದ ಕಳೆದ ವರ್ಷ ಕೆರೆಗಳಲ್ಲಿನ ಹೂಳೆತ್ತುವ ಕಾರ್ಯಕ್ರಮವನ್ನು ಪ್ರಾರಂಭಿಸುವುದಕ್ಕಾಗಲಿಲ್ಲ. ಮಧ್ಯೆ ಮಧ್ಯೆ ಮಳೆ ಬಂದಿದ್ದರಿಂದ ಕಾರ್ಯಕ್ರಮ ಸರಿಯಾಗಿ ಅನುಷ್ಠಾನವಾಗಲಿಲ್ಲ. ಈ ಸಲ ಸದರಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ ಕೇವಲ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಯಿತು. ರೈತರುಗಳು ಸುಮಾರು 50-60 ಟ್ರ್ಯಾಕ್ಟರುಗಳನ್ನು ವಾಲಂಟರಿಯಾಗಿ ಹೂಳನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದಾರೆ ಕೆರೆಗಳು ಆರು ಅಡಿಗಳಷ್ಟು ಹೂತು ಹೋಗಿದ್ದು, ಮಾನ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಅಧ್ಯಕ್ಷರಿಗೆ ಯಾವತ್ತಾದರೂ ಪುರಸೊತ್ತಿದ್ದರೆ ಅರ್ಧ ಗಂಟೆ ಬಂದು ನೋಡಬೇಕು. ಸುಮಾರು ಆರು ಅಡಿಗಳಷ್ಟು ಸಿಲ್ಟ್ ಡಿಪಾಸಿಟ್ ಆಗಿದೆ. ಅಂತಹದನ್ನು ತೆಗೆದುಕೊಂಡು ಹೋಗುವುದಕ್ಕೆ ಇವೊತ್ತು ರೈತರುಗಳು ವಾಲಂಟರಿಯಾಗಿ ಟ್ರ್ಯಾಕ್ಟರುಗಳನ್ನು ತರುತ್ತಿರುವುದರಿಂದ ಇಂತಹುದಕ್ಕೆ ನಾವು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕೆಂಬ ಮನಸ್ಸು ನಮಗೆ ಬರುತ್ತದೆ. ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಸುಮಾರು 600 ರಿಂದ 650 ಅಡಿಗಳಷ್ಟು ಆಳದವರೆಗೆ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಇದರಿಂದ ಮುಂದಿನ ಪೀಳಿಗೆ ಏನಾಗಬಹುದೆಂಬುದನ್ನು ಯೋಚನೆ ಮಾಡಿದರೆ ಮುಂದೊಂದು ದಿನ ಎಲ್ಲಿ ಮರಳುಗಾಡಾಗುತ್ತದೆನ್ನುವ ಅನುಮಾನ ಕಾಡುತ್ತಿದ್ದು ನೆನೆಸಿಕೊಂಡರೆ ನಮಗೆ ಭಯವಾಗಿ ನಡುಕವುಂಟಾಗುತ್ತದೆ. ಇಂತಹ ಸಂದರ್ಭದಲ್ಲಿ ನಮಗಿರುವ ಜೀವನಾಡಿಗಳೆಂದರೆ ಸಣ್ಣ

ಕೆರೆಗಳು ಮಾತ್ರ. ತಮಗೆ ಗೊತ್ತಿರುವಂತೆ ಕೋಲಾರ ಜಿಲ್ಲೆಯಲ್ಲಿ 3,650 ಕೆರೆಗಳಿದ್ದು, ಮೂರು ವರ್ಷಗಳಿಗೊಮ್ಮೆ ಯಾವಾಗಲಾದರೊಮ್ಮೆ ಮಳೆ ಬಂದಾಗ ಪ್ರತಿಯೊಂದು ಕೆರೆಗಳು ತುಂಬಿ ಕೋಡಿ ಹರಿಯುತ್ತವೆ ಮತ್ತು ಮಾರನೇ ತಿಂಗಳಿಗೆ ಎಲ್ಲಾ ಕೆರೆಗಳು ಒಣಗಿಹೋಗಿರುತ್ತವೆ. ಕಾರಣ, ಕೆರೆಗಳೆಲ್ಲವೂ ಶೇಕಡ 75 ಭಾಗದಷ್ಟು ಸಿಲ್ಟ್-ಆಫ್ ಆಗಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಸಣ್ಣ ಕೆರೆಗಳೇ ನಮಗೆ ಜೀವಾಳವಾಗಿದ್ದು ಅವುಗಳನ್ನು ಬಿಟ್ಟರೆ ಜೀವನ ಮಾಡುವುದಕ್ಕೆ ನಮಗೆ ಬೇರೆ ದಾರಿಯೇ ಇಲ್ಲ. ಆ ಕಾರಣಕ್ಕಾಗಿ ಕೆರೆಗಳಲ್ಲಿರುವ ಹೂಳನ್ನು ತೆಗೆಯುವ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕೆರೆ ಕಲ್ಯಾಣ ಕಾರ್ಯಕ್ರಮಕ್ಕಾಗಿ ಪ್ರತ್ಯೇಕವಾಗಿ ಬಜೆಟ್ ಅಲೋಕೇಷನ್ ಮಾಡಿ ಹಣ ನೇರವಾಗಿ ಅಲ್ಲಿಗೇ ಹೋಗುವಂಥ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ಹಾಂಶ್ರಿಕ ತೊಂದರೆಯುಂಟಾಗಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದಕ್ಕೆ ಕಷ್ಟವಾಗುತ್ತದೆಂದು ಹೇಳುತ್ತಿದ್ದೇನೆ. ಇನ್ನು ರಸ್ತೆಗಳ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ರಸ್ತೆಗಳ ಅಭಿವೃದ್ಧಿಗೆ ಜಾಸ್ತಿ ಹಣ ಕೊಟ್ಟಿದ್ದೇವೆಂದು ಸರ್ಕಾರದವರಾದ ನೀವು ಬಹಳ ಜೋರಾಗಿ ಹೇಳುತ್ತಿದ್ದೀರಿ. ಆದರೆ, ಅಂದಾಜು ಸಮಿತಿಯ ವರದಿ ಹಾಗೂ ನಿಮ್ಮ ಇಲಾಖಾಧಿಕಾರಿಗಳು ಕೊಟ್ಟಿರುವ ವರದಿ ಬಗ್ಗೆ ಸಂಕ್ಷಿಪ್ತವಾಗಿ ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮಲ್ಲಿ ಬಾಗೇಪಲ್ಲಿ-ಬಂಗಾರಪೇಟೆ ರಸ್ತೆಯಿದ್ದು ಯಾರಾದರೂ ಮಂತ್ರಿಗಳು ಕಾರು ತೆಗೆದುಕೊಂಡು ಒಮ್ಮೆ ಆ ರಸ್ತೆಯಲ್ಲಿ ಹೋಗಿ ಬಂದರೆ ಪುನಃ ಈ ರಸ್ತೆಯಲ್ಲಿ ಬರಬಾರದೆಂದು ವಾಪಸ್ಸು ಹೋಗುತ್ತಾನೆ. ಸಾದಲಿಯಿಂದ ಮಿಟ್ಟೇಮರಿ ಮಾರ್ಗವಾಗಿ ಬಾಗೇಪಲ್ಲಿಗೆ ಮತ್ತು ಸಾದಲಿಯಿಂದ ಬೈರಸಂದ್ರಕ್ಕೆ ಹೋಗುವ ರಸ್ತೆ ಮಾರ್ಗ ಬಹಳಷ್ಟು ಕೆಟ್ಟಿದ್ದು ಸುಗಮವಾಗಿ ಸಂಚರಿಸುವುದಕ್ಕಾಗುವುದಿಲ್ಲ. ರಸ್ತೆ ದುರಸ್ತಿಗೆ ಯಾವ ಹೆಡ್‌ನಲ್ಲಿ ಹಣ ಕೇಳಿದರೂ ಇಲ್ಲವೆನ್ನುತ್ತಾರೆ. 1995-96ರಲ್ಲಿ ರೂ.71 ಕೋಟಿ 28 ಲಕ್ಷ ರೂಪಾಯಿ ಅನುದಾನವಿದ್ದದ್ದು 97-98ರಲ್ಲಿ ರೂ. 56 ಕೋಟಿ 45 ಲಕ್ಷಕ್ಕೆ ಇಳಿದಿದೆ. ಅದರ ವೆಚ್ಚ 1995-96, 96-97 ಮತ್ತು 97-98ರಲ್ಲಿ ಕ್ರಮವಾಗಿ ರೂ. 60 ಕೋಟಿ 15 ಲಕ್ಷ, 85 ಕೋಟಿ 78 ಲಕ್ಷ ಮತ್ತು ರೂ.63 ಕೋಟಿ 38 ಲಕ್ಷವಾಗಿದೆ. 1997-98ರಲ್ಲಿ ನೀಡಿದ್ದ ರೂ.56 ಕೋಟಿ 45 ಲಕ್ಷ ರೂಪಾಯಿಗಳ ಅನುದಾನದಲ್ಲಿ ರೂ.12 ಕೋಟಿ ಕಡಿತವಾಗಿದೆ. 1998-99ರ ಸಾಲಿಗೆ ರೂ.37 ಕೋಟಿ 10 ಲಕ್ಷ ಅನುದಾನ ನೀಡಿದ್ದು 95-96ನೇ ಸಾಲಿಗೆ ಹೋಲಿಸಿದಾಗ ಶೇಕಡ 52ರಷ್ಟಾಯಿತು. 1994-95ಕ್ಕಿಂತ ಮುಂಚಿತವಾಗಿ ನೀವು ಏನು ಅನುದಾನ ಕೊಟ್ಟಿದ್ದೀರಿ, ಅದರಲ್ಲಿ ಶೇಕಡ 48 ರಷ್ಟು ರಸ್ತೆಗಳಿಗೆ ಸಂಬಂಧಿಸಿದಂತೆ ಕಡಿಮೆ ಮಾಡಿದ್ದೀರಿ. ಆದುದರಿಂದ, ಇವೊತ್ತು ರಸ್ತೆಗಳ ದುರಸ್ತಿ ಇನ್ನೂ ಮಾಡಬೇಕಾಗಿರುತ್ತದೆ. ಅಷ್ಟೇ ಅಲ್ಲದೆ, ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿಲ್ಲವೆಂದು ನಿಮ್ಮ ಇಲಾಖೆಯಾದ ಪಿಡಬ್ಲ್ಯೂಡಿಯ ಪರವಾ ನಿಲಯ. ಅಂತೆ ಕೆಟ್ಟಿರುವ ರಸ್ತೆಗಳ

ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ನಮಗಂತೂ ಯಾವುದೇ ಹೆಡ್‌ನಲ್ಲೂ ಹಣ ಸಿಗುತ್ತಿಲ್ಲ. ಆ ರಸ್ತೆಗಳ ಗತಿ ನೋಡಿದರೆ, ಆ ಮಾರ್ಗವಾಗಿ ಪ್ರಯಾಣಿಸಲು ನಮಗೆ ನಾಚಿಕೆಯಾಗುತ್ತದೆ. ಅದುದರಿಂದ, ರಾಜ್ಯ ಹಾಗೂ ಜಿಲ್ಲಾ ಹೆದ್ದಾರಿಗಳೇನಿವೆ, ಇವುಗಳು ಸಂಪರ್ಕ ಕಲ್ಪಿಸುವ ಬಹಳ ಪ್ರಾಮುಖ್ಯ ರಸ್ತೆಗಳಾಗಿದ್ದು ಇವುಗಳ ಅಭಿವೃದ್ಧಿಗೆ ನಿರ್ದಿಷ್ಟ ಹಣ ನಿಗದಿಪಡಿಸುಕೊಡುವ ವ್ಯವಸ್ಥೆಯಾಗಬೇಕು. ಇನ್ನು ಆಹಾರ ಪಡಿತರ ವಿತರಣೆಗೆ ಸಂಬಂಧಿಸಿದಂತೆ ಹೇಳುವುದಾದರೆ, ತಮಗೆ ಗೊತ್ತಿರುವಂತೆ ಸುಮಾರು 85 ಲಕ್ಷದಷ್ಟು ಹಸಿರು ಕಾರ್ಡುಗಳಿದ್ದುದನ್ನು 66 ಲಕ್ಷಕ್ಕೆ ಇಳಿಸಿದ್ದೀರಿ. ತಾವು ಬೋಗಸ್ ಕಾರ್ಡ್‌ಗಳನ್ನು ಸರ್ವೆ ಮಾಡಿ ಮುಟ್ಟುಗೋಲು ಹಾಕಿಕೊಂಡಿರುವುದಕ್ಕೆ ನನ್ನದೂ ಪ್ರೋತ್ಸಾಹವುಂಟು. ಅದರಲ್ಲಿ ಬೇರೆ ಮಾತಿಲ್ಲ. ಬಹಳ ವಿಚಿತ್ರವಾದ ಸಂಗತಿಯೆಂದರೆ, ಹಸಿರು ಕಾರ್ಡಿನ ಬೆಲೆ ರೂ. 3.50 ಪೈಸೆಯಿದ್ದು, ಈಗ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ರೂ.1,500ರಿಂದ 1,600 ಆಗಿದೆ. ಇದರಿಂದ ಫೇರ್ ಪ್ರೈಸ್ ಡಿಪೋ ಹೋಲ್ಡರ್ಸ್‌ಗೆ ಮತ್ತು ಹೋಲ್‌ಸೇಲ್ ಪಾಯಿಂಟ್‌ನವರಿಗೆ ಬಹಳ ಹಬ್ಬವಾಗಿದೆ. ಹಬ್ಬವೆಂದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ, ಅದರಲ್ಲಿ ಅಷ್ಟೊಂದು ವ್ಯತ್ಯಾಸವಾಗಿದೆ. ಮಾರುಕಟ್ಟೆ ದರಕ್ಕೂ ಮತ್ತು ಪಡಿತರ ವ್ಯವಸ್ಥೆ ಮೂಲಕ ಹಂಚುವ ಅಕ್ಕಿಯ ದರಕ್ಕೂ ಕಳೆದ 2-3 ವರ್ಷಗಳಿಂದ ಮಾತ್ರ ವ್ಯತ್ಯಾಸವಾಗಿದೆ. ಮೊದಲಿ ಇಷ್ಟೊಂದು ವ್ಯತ್ಯಾಸವಿರಲಿಲ್ಲ. ಅಕ್ಕಿ ದರ ಇಲ್ಲಿ ರೂ.300, ರೂ. 400 ಇದ್ದರೆ ಅಲ್ಲಿ ರೂ. 600, ರೂ.700ಕ್ಕೆ ಸಿಗುತ್ತಿತ್ತು ಮತ್ತು ಆಗ ಅಕ್ಕಿ ದುರುಪಯೋಗವಾಗುವ ಸಂಭವ ಬಹಳ ಕಡಿಮೆ ಇತ್ತು. ಆಗ ಏನಾಗಿಯೆಂದರೆ, ಒಂದು ಮೂಟೆ ಅಕ್ಕಿಗೆ ಒಂದು ಸಾವಿರ ರೂಪಾಯಿಗಳಷ್ಟು ಲಾಭ ಸಿಗುತ್ತದೆ. ಅಂದರೆ, ವ್ಯತ್ಯಾಸ ರೂ.1,500ಗಳಾಗಿ ಅವರು ರೂ,1,200 ರಿಂದ ರೂ.1300ಗಳಿಗೆ ಮಾರಿಕೊಂಡರು. ಇವೊತ್ತು ಫೇರ್ ಪ್ರೈಸ್ ಡಿಪೋನವರು, ಹೋಲ್‌ಸೇಲ್ ಪಾಯಿಂಟ್‌ನವರು ಮತ್ತು ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ಒಂದಾಗಿದ್ದು ಈ ಕುರಿತು ನೀವು ಎಷ್ಟೇ ದೂರುಗಳನ್ನು ಕೊಟ್ಟರೂ ಅವರಿಂದ ಹುಡುಕುವುದಕ್ಕಾಗುವುದಿಲ್ಲ. ಎರಡು ಕೋಟಾವನ್ನು ಒಂದೇ ಬಾರಿ ತರುತ್ತಾರೆ. ಅನೇಕ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ಬಂಡವಾಳವೇ ಇಲ್ಲ. ಇವೊತ್ತು ಹತ್ತನೇ ತಾರೀಖಿನಂದು ಹಣ ತೆಗೆದುಕೊಂಡು ಹೋದರೆ ಇಪತ್ತು ದಿವಸಗಳಾದರೂ ಫೇರ್ ಪ್ರೈಸ್ ಡಿಪೋನವರು ಅವರಿಗೆ ಆಹಾರಧಾನ್ಯಗಳನ್ನು ತಂದುಕೊಡುವುದಿಲ್ಲ. ಅನಂತರ ಏನು ಮಾಡುತ್ತಾರೆಂದರೆ ಮುಂದಿನ ತಿಂಗಳು ಬಂದಾಗ ಆ ತಿಂಗಳಿನ ಹಣ ಕಟ್ಟಿಸಿಕೊಂಡು ಒಂದು ತಿಂಗಳ ಆಹಾರ ಪಡಿತರ ವಿತರಿಸಿ ಇನ್ನೊಂದು ತಿಂಗಳಿನದು ಯಾರಿಗೂ ಹೇಳುವುದಿಲ್ಲ. ಅವರೂ ಅಷ್ಟೆ ಫೇರ್ ಪ್ರೈಸ್ ಡಿಪೋಗೆ ಎರಡು ತಿಂಗಳಿನದು ಒಂದೇ ಸಾರಿ ತೆಗೆದುಕೊಂಡು ಹೋಗುತ್ತಾರೆ ಮತ್ತು ಎರಡು ತಿಂಗಳಿನದು ಎಂಟ್ರಿ ಮಾಡಿಕೊಡುತ್ತಾರೆ. ಹಳ್ಳಿಯಲ್ಲಿರುವ ರೈತರುಗಳು ಅಶಿಕ್ಷಿತರಾಗಿದ್ದು ಅವರುಗಳಿಗೆ ಹಸಿರು ಕಾರ್ಡುಗಳಿದ್ದರೂ ನೂರಕ್ಕೆ ತೊಂಭತ್ತು ಭಾಗ ಗೊತ್ತಾಗುವುದಿಲ್ಲ. ಆ ತರಹದ ಮೋಸ ನಡೆಯುತ್ತಿದೆ. ಹಸಿರು ಕಾರ್ಡು ಉಳ್ಳವರಿಗೆ ಸರ್ಕಾರ ಸಬ್ಸಿಡಿ

ಸಹ ಕೊಡುತ್ತಿದ್ದು ಇದರ ಬಗ್ಗೆ ನನ್ನ ವಿವಾದವೇನೂ ಇಲ್ಲ. ಬಡವರ ಬಗ್ಗೆ ನೀವು ವಿಶೇಷವಾದ ಕಾಳಜಿಯನ್ನೇ ವಹಿಸಿದ್ದೀರಿ. ಆದರೆ, ಅದರ ನಿಜವಾದ ಪ್ರತಿಫಲ ಬಡವರಿಗೆ ಸಿಗುತ್ತಿಲ್ಲ. ಇದರಲ್ಲಿ ಶೇಕಡ 50ಕ್ಕಿಂತ ಮೇಲ್ಪಟ್ಟು ದುರುಪಯೋಗವಾಗುತ್ತಿರುವುದರಿಂದ ಇದರ ಬಗ್ಗೆ ನೀವು ಸರ್‌ಪ್ರೈಸ್ ಚೆಕ್ ಮಾಡಬೇಕೆಂದು ಹೇಳುತ್ತಿದ್ದೇನೆ. ನೀವು ಕಾರ್ಡ್ ಹೋಲ್ಡರ್‌ಗಳ ಒಂದು ಸ್ಯಾಂಪಲ್ ಮಾಡಿ ಜಿಲ್ಲಾವಾರು ಮತ್ತು ಗ್ರಾಮವಾರುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸರ್‌ಪ್ರೈಸ್ ಚೆಕ್ ಮಾಡಬೇಕು. ಈ ತರಹ ಮಾಡಿ ನೋಡಿದರೆ ನಿಮಗೆ ರಿಯಾಲಿಟಿ ಗೊತ್ತಾಗುತ್ತದೆ. ಈ ಬಗ್ಗೆ ಯಾವುದೇ ಜಿಲ್ಲಾಧಿಕಾರಿಯನ್ನು ಕೇಳಿದರೆ ಗೊತ್ತಾಗುವುದಿಲ್ಲ. ನೂರು ಮೂಟೊಗಳಿವೆಯೆಂದರೆ ಒಂದು ಲಕ್ಷ ರೂಪಾಯಿ ಬರುತ್ತದೆ ಅಥವಾ ಎಂಬತ್ತು ಸಾವಿರ ರೂಪಾಯಿಗಳು ಬರುತ್ತದೆ. ಒಂದೊಂದು ತಾಲ್ಲೂಕಿಗೆ 40 ರಿಂದ 50 ಲೋಡ್ ಅಕ್ಕಿ ಬರುತ್ತದೆ. ಇದು ಎಷ್ಟರಮಟ್ಟಿಗೆ ವಿತರಣೆಯಾಗುತ್ತದೆ ಮತ್ತು ಎಷ್ಟರಮಟ್ಟಿಗೆ ದುರುಪಯೋಗವಾಗಲು ಅವಕಾಶವುಂಟಾಗುತ್ತದೆ ಎಂಬುದನ್ನು ತಾವು ಊಹಿಸಿಕೊಳ್ಳಿ. ಕಾರಣ, ಮಾರುಕಟ್ಟೆ ಬೆಲೆಗೆ ಬಹಳ ಹತ್ತಿರವಿದೆ. ಅದರ ಅನ್‌ಡ್ಯೂ ಅಡ್ವಾಂಟೇಜ್ ತೆಗೆದುಕೊಳ್ಳುವ ಪ್ರಯತ್ನವಾಗುತ್ತಿದ್ದು, ನಾವು ಅನೇಕ ಸಾರಿ ಈ ಕುರಿತು ಸರ್ಕಾರದ ಗಮನಕ್ಕೆ ತಂದರೂ ಸಹ ಸರ್ಕಾರದ ಯಾವುದೇ ಅಧಿಕಾರಿ ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಈಗ ಹೆಚ್ಚು ಸಮಯವಾಗಿರುವುದರಿಂದ, ಕೃಷಿ ಬಗ್ಗೆ ಮಾತನಾಡಲು ಹೆಚ್ಚು ಸಮಯ ತೆಗೆದುಕೊಳ್ಳದೆ ಅದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಅಧ್ಯಕ್ಷರು :— ನೀವು ಹಾಗು ಭೈರೇಗೌಡರು ತುಂಬ ಒಳ್ಳೆಯ ಸ್ನೇಹಿತರು.

ಶ್ರೀ ವಿ. ಮುನಿಯಪ್ಪ :— ಅಧ್ಯಕ್ಷರೆ, ಅವರಲ್ಲಿ ಆ ತರಹದ ಸ್ನೇಹ ಸೌಜನ್ಯತೆಯೇ ಇಲ್ಲ. ಅವರ ಹತ್ತಿರ ಇದ್ದಿದ್ದರೆ ನಾನು ಆ ಕುರಿತು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ಅವರು ಸಚಿವರಾಗಿ ನಾಲ್ಕು ವರ್ಷ ಕಳೆದಿದ್ದರೂ "ಏನು ಮುನಿಯಪ್ಪ, ನಿನ್ನ ಕಷ್ಟವೇನು? ನಿನ್ನ ಕ್ಷೇತ್ರದ ಪರಿಸ್ಥಿತಿ ಹೇಗಿದೆ?" ಎಂದು ಅವರೂ ಬಾಯಿ ಬಿಟ್ಟು ಕೇಳಲಿಲ್ಲ, ನಾವು ಕೇಳುವುದಕ್ಕೆ ಹೋಗಲಿಲ್ಲ. ಅದಕ್ಕೆ ಈ ಸೌಜನ್ಯತೆಗೆ ಧಕ್ಕೆ ಬಂದು ಈಗ ಕಷ್ಟವಾಗಿರುವುದು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) :— ನೀವು ಮಂತ್ರಿಗಳಾಗಿದ್ದಾಗ ಇದೇ ರೀತಿ ಮಾಡಿದ್ದಿರಬೇಕು.

ಶ್ರೀ ವಿ. ಮುನಿಯಪ್ಪ :— ಇಲ್ಲ ನಾನು ಮಾಡಿಲ್ಲ. ಬೇಕಾದರೆ ಅವರನ್ನು ಕೇಳಿ, ನಾನು ಅವರ ಹಿಂತನಕ್ಕೆ ಎಷ್ಟು ಗೌರವವನ್ನು ಕೊಡಬೇಕೋ ಅದಕ್ಕೆ ಎರಡರಷ್ಟು ಕೊಟ್ಟು ನಡೆದುಕೊಂಡು ಹೋಗಿದ್ದೇನೆ. ಅದರೆ ನಾವು ಕಿರಿಯರಾಗಿ ಬೆಳೆಯುವುದು ಅವರಿಗೆ

ಮನಸ್ಸಿಲ್ಲ, ಅದೇ ನಮಗೆ ಅಗಿರತಕ್ಕಂಥ ನೋವ್ತ, ಅದು ಇರಲಿ ಅದು ಪ್ರತೀಕವಾಗಿರುವ ರಾಜಕಾರಣ, ನಾವು ಮಾಡಿಕೊಳ್ಳುತ್ತೇವೆ ಅದಕ್ಕೆ ನಾವು ತಯಾರಾಗಿದ್ದೇವೆ.

ಅಧ್ಯಕ್ಷರು :— ಏನಷ್ಟ ನೀವು ಸಚ್ಯವೆಲ್ಲಾ ಹೇಳಿಬಿಟ್ಟಿಯಲ್ಲಪ್ಪ.

ಶ್ರೀ ವಿ. ಮುನಿಯಪ್ಪ :— ಹೌದು ಸಾರ್, ಅದರಲ್ಲಿ ಬೇರೆ ಮಾತಿಲ್ಲ, ಅದನ್ನು ಹೇಗೆ ಮುಚ್ಚಿಡುವುದು. ಈಗ ಕೃಷಿ ವಿಚಾರದ ಬಗ್ಗೆ ಅವರು ಏನೇನೊ ಹೊಸ ನೀತಿಗಳನ್ನು ತರುತ್ತಿದ್ದೇವೆಂದು ಹೇಳುತ್ತಿದ್ದಾರೆ, ಎರಡು ವರ್ಷಗಳ ಹಿಂದೆ ಸಚಿವ ಸಂಪುಟದ ಸಭೆಯಾಯಿತು, ಸಭೆಯ ನಂತರ ಪತ್ರಕರ್ತರನ್ನು ಕಂಡು ಇವತ್ತು ನಾನು ಹೊಸ ಕೃಷಿ ನೀತಿಯನ್ನು ತಂದುಬಿಟ್ಟಿದ್ದೇನೆಂದು ಪತ್ರಕರ್ತರ ಮುಂದೆ ಕುಣಿದಾಡಿಬಿಟ್ಟರೆಂದು ಪತ್ರಿಕೆಯವರು ಬರೆದಿದ್ದರು. ನನಗೂ ಕೂಡ ಬಹಳ ಸಂತೋಷವಾಯಿತು. ನಮ್ಮ ಗೌಡರು, ಇದ್ಯಾವುದೊ ಹೊಸ ನೀತಿ ತಂದುಬಿಟ್ಟರಪ್ಪ, ಯಾರೋ ಒಂದಿಷ್ಟು ರೈತರಿಗೆ ಅನುಕೂಲವಾಗುತ್ತದೆಂದು ನಾನು ನಿಜವಾಗಿಯೂ ಸಂತೋಷಪಟ್ಟೆ. ಆದರೆ ದುರದೃಷ್ಟ ಆ ಕೃಷಿನೀತಿ, ಆ ಕೃಷಿ ನೀತಿಯ ಪ್ರತಿಫಲ ಏನಿದ್ದರೂ ಇದ್ಯಾವುದೋ ನೇಗಿಲಯೋಗಿ ಎಂದು ತಾಲ್ಲೂಕು ಕಛೇರಿಗಳಲ್ಲಿ, ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿದ್ದಾರೆ ಅದರಲ್ಲಿ ಎಲ್ಲಾ ಫೋಟೋವಿದೆ. ಇದೆಲ್ಲಾ ಇದ್ದರೂ ಕೂಡ ಪುನ: ನೇಗಿಲಯೋಗಿ ಎಂದು ಹೊಸ ಪ್ರದರ್ಶನವನ್ನು ಮಾಡಿದರು ಇರಲಿ; ಪಾಪ ಅದೊಂದು ರೀತಿ ಪ್ರಚಾರ ಮಾಡಬೇಕಾಗಿದೆ. ಉದಾಹರಣೆಯಾಗಿ, ತಮಗೆ ಗೊತ್ತಿರುವಂತೆ, ಶಿವಮೊಗ್ಗದಲ್ಲಿ ಪ್ರಫುಲ್ಲಚಂದ್ರ ಎಂಬುವವರು ಹದಿನೈದು ಇಪ್ಪತ್ತು ವರ್ಷಗಳಿಂದ 42 ಟನ್ ಕಬ್ಬಿನ ಬೆಳೆಯನ್ನು ಬೆಳೆದರೆಂದು ಅವರಿಗೆ ಅಲ್ಲಿ ಬಹುಮಾನ ಕೊಟ್ಟರು. ಬಹುಮಾನ ಕೊಟ್ಟಂಥ ಸಂದರ್ಭದಲ್ಲಿ, ಜಿಲ್ಲೆಯಲ್ಲಿ, ಎಲ್ಲೆಲ್ಲಿ ಇಷ್ಟನ್ನು ಹೆಚ್ಚಿಗೆ ಬೆಳೆಯುತ್ತಾರೆ ಅವರನ್ನೆಲ್ಲಾ ಕರೆದುಕೊಂಡು ಹೋಗಿ ಅಲ್ಲಿ ಕ್ಷೇತ್ರೋತ್ಸವ ಮಾಡಿದರು. ಎಲ್ಲಿ ಮಾಡಬೇಕಾಗಿರುವುದು ಕ್ಷೇತ್ರೋತ್ಸವ? ಪ್ರಗತಿಪರವಾದ ಬೆಳೆ ಎಲ್ಲಿ ಬೆಳೆದಿದೆ ಆ ಸ್ಥಳಕ್ಕೆ ರೈತರನ್ನು ಕರೆದುಕೊಂಡು ಹೋಗಿ ಆತ ವೈಜ್ಞಾನಿಕ ರೀತಿಯಲ್ಲಿ ಹೇಗೆ ಆ ಬೆಳೆಯನ್ನು ಬೆಳೆದ, ಹೆಚ್ಚಿನ ಇಳುವರಿಯನ್ನು ಪಡೆಯಲು ಆತ ಏನೇನು ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿದ ಎನ್ನುವ ವಿಚಾರಗಳನ್ನು ಪ್ರಾಕ್ಟಿಕಲ್‌ಆಗಿ ಆ ಜಾಗದಲ್ಲಿ ತೋರಿಸಬೇಕು. ಆದರೆ ದುರಾದೃಷ್ಟ ನಮಗೆ ತಮಾಷೆ ಏನೆಂದರೆ, ವಿಧಾನಸೌಧಕ್ಕೆ ಕರೆದುಕೊಂಡು ಬಂದು ನಾನು ವಿಧಾನಸೌಧದಲ್ಲಿ ಊಟ ಹಾಕಿಸಿದೆ, ನನಗಿಂತ ರೈತರಿಗೆ ಯಾರು ಸಹಾಯ ಮಾಡಿಲ್ಲವೆಂದರೆ, ಯಾವಾಗಲೋ ಇಪ್ಪತ್ತು ಮುವತ್ತು ವರ್ಷಗಳ ಹಿಂದೆ ಒಂದು ಮಾತು ಹೇಳಿದ್ದರು, ಯಾರು ರೈತರು ವಿಧಾನಸೌಧವನ್ನು ನೋಡಿರುವುದಿಲ್ಲ, ವಿಧಾನಸೌಧಕ್ಕೆ ಹೋದೆವು ಎಂದರೆ ಅವರಿಗೆ ಸಂತೋಷ. ಸರ್ ಈಗ ವಿಧಾನಸೌಧಕ್ಕೆ ಬಂದು ನಾನು ಊಟ ಹಾಕಿಸಿದೆ ಎಂದರೆ ಯಾವ ರೈತ ಊಟಕ್ಕೆ ಕಾಯ್ದುಕೊಳ್ಳುತ್ತಾನೆ ಹೇಳಿ? ಇವರು ಪ್ರಗತಿಪರ ರೈತರನ್ನು ಕರೆದುಕೊಂಡು ಬರುತ್ತಾರೆ, ಬಡ ರೈತರನ್ನು ಕರೆದುಕೊಂಡು ಬರುವುದಿಲ್ಲ. ಪ್ರಗತಿಪರ ರೈತರು ಇವರೇನೋ ವಿಧಾನಸೌಧದ ಮುಂದೆ

ದೊಡ್ಡ ಕಾರ್ಯಕ್ರಮ ಮಾಡುತ್ತಿದ್ದಾರೆಂದು ಅವರು ಬರುತ್ತಾರೆ, ಇವರು ಬೆನ್ನುಹತ್ತುತ್ತಾರೆ ಹೊರಟುಹೋಗುತ್ತಾರೆ; ಇದರಲ್ಲಿ ಏನು ಫಲಿತಾಂಶವಿಲ್ಲ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಸಭಾಧ್ಯಕ್ಷರೆ, ಇವರು ಹೇಳುವುದರಲ್ಲಿ ಏನಾದರೂ ಅರ್ಥವಿದೆಯಾ ತಮ್ಮ ಮೂಲಕ ತಿಳಿಸಿಕೊಳ್ಳುವುದೇನೆಂದರೆ, ಇಂತಹವರು ರೈತರ ಬಗ್ಗೆ ಮಾತನಾಡುವುದು ಬೇಡ. ಯಾರು ಹೆಚ್ಚಿಗೆ ಉತ್ಪಾದನೆ ಮಾಡಿದ್ದರೋ ಅಂತಹವರನ್ನು ವಿಧಾನಸೌಧದ ಕಾರ್ಯಕ್ರಮಕ್ಕೆ ಕರೆಯಿಸಿದ್ದು.

ಶ್ರೀ ವಿ. ಮುನಿಯಪ್ಪ :— ಇರಲಿ, ನಿಮ್ಮ ಅರ್ಥ ನೀವೇ ಇಟ್ಟುಕೊಂಡು ಜನರಿಗೆ ಹೇಳಿ, ನಮ್ಮ ಅರ್ಥ ನಾವು ಹೇಳುತ್ತೇವೆ, ಮಾತನಾಡುವುದಕ್ಕೆ ಸಮಯವಿಲ್ಲ. ಮೂಲಭೂತವಾಗಿ ರೈತನ ಉತ್ಪಾದನೆಗೆ ನಾವು ಯಾವ ನೀತಿಯನ್ನು ತರಬೇಕಾದರೂ, ಅವನು ಏನು ಉತ್ಪಾದನೆ ಮಾಡುತ್ತಾನೆ, ಅವನು ಬೆಳೆಯನ್ನು ತೆಗೆಯುವಲ್ಲಿ ಪ್ರಸ್ತುತ ಕ್ಲೈಮೇಟಿಕ್ ಕಂಡಿಷನ್ಸ್ ಹೇಗಿದೆ ಅದಕ್ಕೆ ಯಾವ ಬೆಳೆಯನ್ನು ಬೆಳೆಯುವುದಾಗುತ್ತದೆ, ಅದಕ್ಕೆ ಯಾವ್ಯಾವ ತಂತ್ರಜ್ಞಾನವನ್ನು ಪ್ರಸ್ತುತ ಕ್ಲೈಮೇಟಿಕ್ ಕಂಡಿಷನ್ಸ್‌ಗೆ ಅಳವಡಿಸಿದರೆ ನಾವು ಉತ್ತಮವಾದ ಬೆಳೆಯನ್ನು ಬೆಳೆಯುವುದಾಗುತ್ತದೆ, ಅದಕ್ಕೆ ಯಾವ್ಯಾವ ತಂತ್ರಜ್ಞಾನವನ್ನು ಪ್ರಸ್ತುತ ಕ್ಲೈಮೇಟಿಕ್ ಕಂಡಿಷನ್ಸ್‌ಗೆ ಅಳವಡಿಸಿದರೆ ನಾವು ಉತ್ತಮವಾದ ಬೆಳೆಯನ್ನು ಬೆಳೆಯಲು ಸಾಧ್ಯವಿದೆ ಎನ್ನುವುದರ ಬಗ್ಗೆ ರೀಸರ್ಚ್ ಆಗಬೇಕಾಗಿತ್ತು. ಎಲ್ಲೋ ಇಸ್ರೇಲ್ ಮಾಡಿದ್ದಾರೆಂದು, ಇಸ್ರೇಲ್ ವಾತಾವರಣಕ್ಕೂ ನಮ್ಮ ಕೋಲಾರದಲ್ಲಿರುವ ವಾತಾವರಣಕ್ಕೂ ಒಂದೇ ರೀತಿ ಹೋಲಿಕೆ ಮಾಡುವುದಾಗುತ್ತದೆಯೇ? ನಾನು ಏತಕ್ಕೆ ಈ ವಿಷಯವನ್ನು ಹೇಳುತ್ತೇನೆಂದರೆ, ಇವತ್ತು ಜಿಕೆವಿಕೆಯಲ್ಲಿರುವ ನಮ್ಮದೇ ಆದ ರಿಸರ್ಚ್ ಸೆಂಟರ್‌ಗೆ ನಲ್ವತ್ತು, ಐವತ್ತು ಲಕ್ಷ ರೂ. ಗಳನ್ನು ಖರ್ಚು ಮಾಡುತ್ತಿದ್ದಾರೆ. They are Spending only for research purposes... ಅಲ್ಲಿಂದ ಏನು ಫಲಿತಾಂಶವಿದೆ? ಅಲ್ಲಿಂದ ಫಲಿತಾಂಶವೆಷ್ಟಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ನಾನು ಅವರನ್ನು ದೂಷಿಸುತ್ತಿಲ್ಲ, ಆದರೆ ಎಷ್ಟರಮಟ್ಟಿಗೆ ಬೀ ಆಸೆ ಸಾಕಾದಂತಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಇವತ್ತು ಸೀಡ್ ಟೆಕ್ನಾಲಿಜ ಬಗ್ಗೆ ಹೇಳುವುದಾದರೆ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮೊದಲು ನಾವು ರಿಚ್ಚಿಗೆ ಹೋಗಿಬಂದಾಗ ಬೆಳೆಯುತ್ತಿದ್ದೆವು, ಅದೆಲ್ಲಾ ನಮ್ಮ ಪ್ರದೇಶದಲ್ಲಿ ಬೆಳೆಯುತ್ತಿದ್ದರು, ಕಮರ್ಷಿಯಲ್ ಆಗುತ್ತಿದ್ದದ್ದು ಧಾರವಾಡ, ಹುಬ್ಬಳ್ಳಿ, ಬೆಳಗಾಂ ಕಡೆಯಾಗುತ್ತಿತ್ತು. ಏನೊಲೆಪಿಕ್ ಆಗಿರಬೇಕು, ಸೀಡ್ ಬಹಳ ಪ್ಯೂರಿಟಿ ಆಗಿರಬೇಕು, ಕ್ವಾಲಿಟಿ ಮೈಂಟೇನ್ ಆಗಬೇಕಾಗಿರುತ್ತಂಥದ್ದೇ ಸೀಡ್ ಏರಿಯಾದ ಮೂಲ ಉದ್ದೇಶವಿದ್ದು. ಅಂತಹದ್ದನ್ನು ಬಿಟ್ಟು ಇವತ್ತು ಎಲ್ಲಿ ಕಮರ್ಷಿಯಲ್ ಬೆಳೆಯುತ್ತಿದ್ದಾರೋ ಅಲ್ಲೇ ಸೀಡ್ ಬೆಳೆಯುತ್ತಿದ್ದಾರೆ, ಆ ಸೀಡ್ ಸರ್ಟಿಫಿಕೇಷನ್ ಎನ್ನುವುದಕ್ಕೆ ಬೆಲೆಯೇ ಇಲ್ಲ. ಬಹುಶಃ ಆ ಸೀಡ್ ಸರ್ಟಿಫಿಕೇಷನ್‌ದ್ದು ಐದೆಂಟಿಫಿಕೇಷನ್ನೇ ಹೋಗಿಬಿಟ್ಟಿದೆ. ಅದಕ್ಕೆ ಇವತ್ತು ನೂರಕ್ಕೆ ತೊಂಬತ್ತು ಭಾಗ ಇವತ್ತು ಕಳಪೆ ಬೀಜ ಬರತಕ್ಕಂಥದ್ದು. ಇದು ಏತಕ್ಕೆ

ಆಗುತ್ತಿದೆ ಎಂದರೆ ಆ ಸೀಡ್ ಐಡೆಂಟಿಫಿಕೇಷನ್ ಏಜೆನ್ಸಿ ಏನಿತ್ತು ಅದು ಇವತ್ತು ಸಂಪೂರ್ಣವಾಗಿ ನಶಿಸಿ ಹೋಗಿದೆ; ಅದರ ಐಡೆಂಟಿಪೇಷನ್ ಇಲ್ಲದೆ ಅದರ ರೆಕಗ್ನಿಷನ್ ಇಲ್ಲದಂತಾಗಿದೆ. ಅದು ಬಹಳ ಸ್ಟ್ರಾಂಗ್ ಆಗಿ ಆಗಬೇಕು, ಯಾವತ್ತು, ಮೂಲ ಬಿತ್ತನೆ ಉತ್ಪಾದನೆ ಏನಿದೆ ಅದನ್ನು ಬಹಳ ಪ್ರತ್ಯೇಕವಾಗಿ ಬೆಳೆದು ಅದರ ಪ್ಯೂರಿಟಿಯನ್ನು ಹಾಗೂ ಕ್ವಾಲಿಟಿಯನ್ನು ಮೈಂಟೇನ್ ಮಾಡಿ ಒಳ್ಳೆಯ ಉತ್ತಮವಾದ ತಳಿಯನ್ನು ಕೊಟ್ಟರೆ ಮಾತ್ರ ರೈತನಿಗೆ ಅದರಿಂದ ಉತ್ಪತ್ತಿ ಅವನ ನಿರೀಕ್ಷೆಗಿಂತ ಹೆಚ್ಚಿಗೆ ಬರುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಲ್ಲಿ ಕೆಲಸ ಮಾಡಬೇಕಾಗಿತ್ತು, ಅದು ಆಗಲಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಈಗ ಮತ್ತೊಂದು ಹೊಸ ನೀತಿಯನ್ನು ಆಯವ್ಯಯದಲ್ಲಿ ಪ್ರಕಟಣೆ ಮಾಡಿದ್ದಿರಿ. ಅದೇನೆಂದರೆ, ಈ ಕೃಷಿ ಪರಿಷ್ಕೃತ ನೀತಿಯನ್ನು ಜಾರಿಗೆತರುತ್ತೇವೆಂದು ಸುಮಾರು ನಾಲ್ಕೂವರೆ ವರ್ಷದಿಂದ ಪ್ರಯತ್ನಪಟ್ಟು ಅದೆಲ್ಲಾ ಹೊರಟುಹೋಗಿ ಈಗ ಹೊಸ ನೀತಿಯನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ತರುತ್ತೇವೆಂದು ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ, ಕರ್ನಾಟಕ ಆಗ್ರೋ ಇಂಡಸ್ಟ್ರಿಸ್ ಕಾರ್ಪೊರೇಷನ್ ಎಂದು ಕೃಷಿ ಕೈಗಾರಿಕಾ ನೀತಿಗೆ ಸಂಬಂಧಿಸಿದಂತೆ 1967 ರಲ್ಲಿ ಸ್ಥಾಪನೆ ಮಾಡಲಾಯಿತು. ಆದರಲ್ಲಿ ಎಲ್ಲಾ ಆಧುನಿಕ ಕೃಷಿ ಉಪಕರಣಗಳನ್ನು ಕಾಲದಿಂದ ಕಾಲಕ್ಕೆ ಬದಲಾವಣೆಯಾಗುವ ಒಂದು ತಂತ್ರಜ್ಞಾನವನ್ನು ಅಳವಡಿಸಿ ಅದರ ಮೂಲಕ ರೈತರಿಗೆ ಯಾವ್ಯಾವ ಪ್ರದೇಶದಲ್ಲಿ ಗದ್ದೆಗೆ ಯಾವರೀತಿ ಮಾಡಬೇಕು, ಡ್ರೈಲ್ಯಾಂಡ್ ಯಾವರೀತಿ ಮಾಡಬೇಕು ಮತ್ತೆ ವೆಟ್ ಲ್ಯಾಂಡ್‌ಗೆ ಯಾವ ರೀತಿ ಮಾಡಬೇಕು ಇತ್ಯಾದಿಗಳಿಗೆ ಬೇಕಾದ ತಂತ್ರಜ್ಞಾನ ಅದಕ್ಕೆ ಬೇಕಾದಂಥ ಉಪಕರಣಗಳನ್ನು ಉತ್ಪಾದನೆ ಮಾಡತಕ್ಕಂಥ ಒಂದು ಸಂಸ್ಥೆ ಅದರ ಜೊತೆಗೆ, ಪೆಟ್ರಿಫೈಡ್ಸ್, ಇನ್‌ಸೆಕ್ಟಿಸೈಡ್ಸ್ ಉತ್ಪಾದನೆ ಮಾಡತಕ್ಕಂಥ ಒಂದು ಘಟಕವು ಕೂಡ ಅದರಲ್ಲಿದೆ. ಬೇರೆ ಬೇರೆ ಕಾರಣಗಳಿಂದ ಪಬ್ಲಿಕ್ ಸೆಕ್ಟಾರ್ ಉದ್ದಿಮೆಗಳು ರೋಗಗ್ರಸ್ತವಾಗಿವೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆ ರೋಗಗ್ರಸ್ತ ಸಂಸ್ಥೆಯನ್ನು ಪುನರ್ವಸತಿ ಮಾಡಬೇಕಾದರೆ ಯಾವ್ಯಾವ ಕಾರ್ಯಕ್ರಮಗಳನ್ನು ತಾವು ತೆಗೆದುಕೊಂಡಿದ್ದೀರಿ? ಸುಧಾರಣೆಗಳನ್ನು ತರಬೇಕಾದರೆ ಮೊದಲು ಆ ಬಿಳಿ ಆನೆಗಳಾದ ಸಿಬ್ಬಂದಿಗಳೇನಿದ್ದರು ಅವರನ್ನು ಕಡಿಮೆ ಮಾಡಬೇಕಾಗಿತ್ತು, ಅಲ್ಲಿರುವ ಟೆಕ್ನಾಲಜಿ ಏನಿತ್ತು ಅವನ್ನು ಸರಿಯಾಗಿ ತಾಂತ್ರಿಕವಾಗಿ ಇನ್ನು ಆಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸತಕ್ಕಂಥ ಪ್ರಯತ್ನವಾಗಬೇಕಾಗಿತ್ತು. ಇಲ್ಲಿ ಟ್ರಾಕ್ಟರ್ ಕಮಿಷನ್ ತೆಗೆದುಕೊಂಡರು, ಪಂಪ್‌ಸೆಟ್ ಕಮಿಷನ್ ತೆಗೆದುಕೊಂಡರು, ಇವೆಲ್ಲವನ್ನೂ ಕಂಪನಿ ಉಳಿಯಬೇಕೆನ್ನುವ ದೃಷ್ಟಿಯಿಂದ ಮಾಡಿದರು, ಆ ವಿಚಾರ ಬೇರೆ. ಆದರೆ, ಅಲ್ಲಿ ಏನಾಗಿದೆ ಎಂದರೆ, ಅಲ್ಲಿರುವ ಸಿಬ್ಬಂದಿಗೆ ಸಂಬಳವಿಲ್ಲದಿರುವ ಪರಿಸ್ಥಿತಿಯಲ್ಲಿ ಅಲ್ಲಿರುವ ಅನೇಕರಿಗೆ ಸಣ್ಣ ಆನೆಯಾಗಿದಂಥವರಿಗೆ ದೊಡ್ಡ ಆನೆಗಳಾಗಿ ಪ್ರಮೋಷನ್ ಕೊಟ್ಟರು; ಅವರಿಗೆ ಕೆಲಸವಿಲ್ಲ, ಜನರಲ್ ಮ್ಯಾನೇಜರ್ ಇತ್ಯಾದಿಗಳು ಜಾಸ್ತಿಯಾದವು. ಸಿಬ್ಬಂದಿ ವೆಚ್ಚ ಕಡಿಮೆ ಮಾಡುವುದಕ್ಕೆ ಪ್ರಯತ್ನವೇ ಮಾಡಲಿಲ್ಲ. ಆಮೇಲೆ ಇವರು ಹೊಸ

ಚುವಟಿಕೆಯನ್ನು ತಂದರು. ಅದೇನೆಂದರೆ ಪ್ಲೋರಿಕಲ್ಚರ್ ಡಿವಿಷನ್ ಮಾಡಿದರು. ಬಹುಶಃ ಇಡೀ ವಿಶ್ವದಲ್ಲೇ ಅದರ ಎಕ್ಸ್‌ಪೆನ್ಸ್ ಕಡಿಮೆಯಾಗುತ್ತಿದೆ, ಬಹುಶಃ ಅದು ಇಲ್ಲಿ ಸರಿಯಾಗಿ ಆಗುತ್ತಿದೆಯೊ ಏನೋ ಗೊತ್ತಿಲ್ಲ, ಇಲ್ಲಂತು ನಷ್ಟವಾಗಿ ಕುಳಿತಿದೆ. ಎರಡನೆಯದು ಪ್ರೊಕ್ಯೂರ್‌ಮೆಂಟ್ ಅಂಡ್ ಎಕ್ಸ್‌ಪೋರ್ಟ್ ಡಿವಿಷನ್ ಎಂದು ಆರಂಭ ಮಾಡಿದರು. ನಮ್ಮ ಕೃಷಿ ಇಲಾಖೆಗೆ ಸಂಬಂಧಪಡದೆ ಇರುವ ಮೊಲಾಸಿಸ್ ವ್ಯಾಪಾರ ನಡೆಸುತ್ತಿದ್ದರು. ಮೊಲಾಸಿಸ್ ವ್ಯಾಪಾರದಿಂದ ಅಗ್ರೊ ಇಂಡಸ್ಟ್ರೀಸ್ ಇಂಪ್ರೂವ್ ಆಗಿ ಅದರಿಂದಲಾದರೂ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡೆ; ಆದರೆ ಅದೂ ಆಗಲಿಲ್ಲ. ಇದ್ದದ್ದನ್ನು ನೇಜವಾಗಿ ಹೇಳಿದ್ದೇವೆ, ತಾವು ಹೇಗೆ ಬೇಕಾದರೂ ನಿಮ್ಮ ಅನುಕೂಲಕ್ಕೆ ತಕ್ಕಂತೆ ಟ್ವಿಸ್ಟ್ ಮಾಡಿಕೊಳ್ಳಿ. ಪ್ರೊಕ್ಯೂರ್‌ಮೆಂಟ್ ಅಂಡ್ ಎಕ್ಸ್‌ಪೋರ್ಟ್ ಡಿವಿಷನಲ್ಲಿ ಮೊಲಾಸಿಸ್ ಎಂದು ಮಾಡಿದರು, ಅದಕ್ಕೆ ಒಬ್ಬ ಅಧಿಕಾರಿಯನ್ನು ಬೇರೆಡೆಯಿಂದ ತಂದರು, ಅವನಿಗೆ ಒಂದು ಲಕ್ಷ ಖರ್ಚು, ಒಂದು ವರ್ಷಕ್ಕೆ ಒಟ್ಟು ಹದಿನೈದು ಲಕ್ಷ ಅವನಿಗೆ ಖರ್ಚು ಎಷ್ಟು ಹೋಯಿತು, ಎಷ್ಟು ವ್ಯಾಪಾರ ಮಾಡಿದ ಎನ್ನುವುದಕ್ಕೆ ಇದುವರೆವಿಗೂ ಆಡಿಟ್ ಆಗಿಲ್ಲ, ದಯಮಾಡಿ ಅದನ್ನು ವಿಚಾರ ಮಾಡಿಸಿ. ಆಮೇಲೆ, Factory on wheels-mobile unit for fruit processing ಅನ್ನು ರಾಷ್ಟ್ರದ ಪ್ರಧಾನಮಂತ್ರಿಗಳಾಗಿದ್ದಂಥ ಸನ್ಮಾನ್ಯ ದೇವೇಗೌಡರು ಬಂದು ಅದನ್ನು ಉದ್ಘಾಟನೆ ಮಾಡಿದರು. ನನಗೂ ಬಹಳ ಸಂತೋಷವಾಯಿತು, ಏಕೆಂದರೆ ನಾನು 25 ವರ್ಷಗಳಿಂದ ಟೊಮ್ಯಾಟೊ ಬೆಳೆಗಾರ. ಈ ಫ್ರೂಟ್ ಪ್ರೊಸೆಸಿಂಗ್ ಹಳ್ಳಿ ಹಳ್ಳಿಗೆ ಬರುತ್ತದೆ, ಎಲ್ಲೆಲ್ಲಿ ಹಣ್ಣುಗಳು ಸಿಗುತ್ತವೆಯೊ ಅಲ್ಲಲ್ಲಿ ಕ್ರಷ್ ಮಾಡಿ ಸ್ಥಳದಲ್ಲಿ ಹಣದ ಪಾವತಿ ಎಂದರು. ಇದೇನೋ ಬಹಳ ಒಳ್ಳೆಯ ಕೆಲಸವೆಂದು ನನಗೆ ಬಹಳ ಸಂತೋಷವಾಯಿತು. ಒಳ್ಳೆಯ ಕೆಲಸ ಆಯಿತೆಂದು ನನಗೆ ಬಹಳ ಸಂತೋಷವಾಯಿತು. ಸಣ್ಣ ಸಣ್ಣ ರೈತರು ಎಂದರೆ ಅರ್ಧ ಎಕರೆ, ಒಂದು ಎಕರೆ ಜಾಗದಲ್ಲಿ ಬೆಳೆಯತಕ್ಕಂಥ ರೈತರಿಗೆ ಅದರೂ ಅನುಕೂಲವಾಗುತ್ತದೆ. ಆದರೆ ಆ ಯಂತ್ರ ತುಕ್ಕು ಹಿಡಿದುಬಿಟ್ಟಿದೆ.

ಅಧ್ಯಕ್ಷರು :— ಅದಕ್ಕೆ ನೀವು ಏನು ಮಾಡಬೇಕೆಂದರೆ, ನಮ್ಮ ಊರಿಗೆ ಬನ್ನಿ, ಒಂದು ಎಕರೆ ಜಮೀನೂ ಕೂಡ ಇಟ್ಟುಕೊಂಡಿಲ್ಲ ಎಲ್ಲಾ ಮಾರಿಬಿಟ್ಟಿದ್ದೇವೆ. ಸುಮ್ಮನೆ ಜಮೀನು ಮಾರುತ್ತಾ ಹೋಗಿ ಆ ಸಮಸ್ಯೆ ಯಾವುದೂ ಇರುವುದಿಲ್ಲ.

ಶ್ರೀ ವಿ. ಮುನಿಯಪ್ಪ :— ಫಾರ್ಮರ್ಸಿಗೆ ಹೊಸ ಹೊಸ ತಂತ್ರಜ್ಞಾನವನ್ನು ಕನ್‌ಸಲ್ಟೆನ್ಸಿ ಮುಖಾಂತರ ಕೊಡತಕ್ಕಂಥದ್ದು ಇದೆ. ಇದಕ್ಕೆ ಸಂಬಂಧಪಟ್ಟ ಅಗ್ರೋ ಇಂಡಸ್ಟ್ರೀ ಕಟ್ಟಡ ಜೆ.ಸಿ. ರೋಡ್‌ನಲ್ಲಿ ಇದೆ. ಮತ್ತು ಅದು ಕಲ್ಲಿನ ಕಟ್ಟಡವಾಗಿರುತ್ತದೆ. ಇಲ್ಲಿ ಒಂದು ವಿಪರ್ಯಾಸ ಎಂದರೆ ಕಲ್ಲು ಕಟ್ಟಡಕ್ಕೆ ವೈಟ್ ವಾಷ್ ಮಾಡುವುದು ನಾನು ಎಲ್ಲೂ ನೋಡಿಲ್ಲ. ಆ ಕಟ್ಟಡಕ್ಕೆ ಹಸಿರು ಬಣ್ಣವನ್ನು ಹೊಡೆದಿದ್ದಾರೆ. ಕಲ್ಲಿನ ಕಟ್ಟಡಕ್ಕೆ ಯಾರಾದರೂ

ಸುಣ್ಣಬುಣ್ಣ ಹೊಡೆಯುತ್ತಾರೆಯೇ? ಮಾನ್ಯ ಅಧ್ಯಕ್ಷರೆ, ಕಲ್ಲಿನ ಕಟ್ಟಡವಾದ ವಿಧಾನಸೌಧಕ್ಕೆ ಸುಣ್ಣಬುಣ್ಣ ಹೊಡೆಯುತ್ತಾರೆಯೇ? ನೀವೇ ಹೇಳಿ. ರೈತರ ಹೆಸರಿನಲ್ಲಿ ಇವರು ಕೆಲಸ ಮಾಡಿಕೊಂಡುಬಿಟ್ಟಿದ್ದಾರೆ. ಇಲ್ಲಿ ಸಾರ್ವಜನಿಕರ ಹಣ ಪೋಲು ಆಗಿದೆ. ಇದೇ ಆಗ್ರೋ ಇಂಡಸ್ಟ್ರೀಯಲ್ಲಿ ಶಂಕರ್ ಶೆಟ್ಟಿ ಮತ್ತು ಅವನ ಗುಂಪಿನಿಂದ ಸುಮಾರು 50 ಲಕ್ಷ ರೂ.ಗಳ ದುರುಪಯೋಗವಾಗಿದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳು ತನಿಖೆ ಮಾಡಲು ಸಿ.ಓ.ಡಿ.ಗೆ ಒಪ್ಪಿಸಿದ್ದಾರೆ. ಇಲ್ಲಿಯವರೆಗೆ ಸಿ.ಓ.ಡಿ. ಯಿಂದ ತನಿಖೆ ಆಗಲಿಲ್ಲ. ಇತ್ತೀಚೆಗೆ ಆ ಶಂಕರ್ ಶೆಟ್ಟಿ ನಿವೃತ್ತವಾಗಿ ಮನೆಗೆ ಹೋಗಿದ್ದಾರೆ. prima facie our Hon'ble Minister himself knows those facts. Based on those facts, enquiry into Rs.50 laks misappropriation case against Shankar Shetty and others is not allowed to complete due to non-cooperation from the higher authority. This is the fact. There was a domestic enquiry against one Mr. Vittal Rao. ರೈತರಿಗೆ ಅನುಕೂಲವಾಗಲು ಪರಿಷ್ಕೃತ ಕೃಷಿ ಕೈಗಾರಿಕೆ ತರಬೇಕು ಎಂದು ಇದ್ದಾರೆ. ಅದಕ್ಕೆ the same institution is meant for particular purpose. There is no need to bring new processing units. Almost all required technology is there. That should be strengthened. That is my interest.

ಶ್ರೀ ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಕೃಷಿ ಕೈಗಾರಿಕಾ ನಿಗಮದಲ್ಲಿ ನಡೆದಿರತಕ್ಕಂಥ ಕೆಲವು ವ್ಯವಹಾರಗಳ ಬಗ್ಗೆ ನನಗೂ ಕೂಡ ಸಂಪೂರ್ಣವಾದಂಥ ತೃಪ್ತಿ ಇಲ್ಲ. ಮತ್ತು ಏನೋ ಅನುಮಾನ ಇದೆ. ಅದಕ್ಕೋಸ್ಕರ ಒಬ್ಬ ಮೇಲ್ಪಟ್ಟಿದ ಅಧಿಕಾರಿಗೆ ಇದನ್ನು ವಹಿಸಿ ವಿಚಾರಣೆ ನಡೆಸಬೇಕು, ಯಾರು ತಪ್ಪಿತಸ್ಥರು ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದೆ. ಇದು ರೆಕಾರ್ಡ್‌ನಲ್ಲಿ ಇದೆ. ಏನಾಗುತ್ತದೆ ಎಂದರೆ ಅನೇಕ ಸಲ ಏನು ಹೇಳುತ್ತಾರೆ ಎನ್ನುವುದನ್ನು ಕೇಳಿಕೊಳ್ಳುವುದೇ ಇಲ್ಲ. ಇದು ಬಹುಶಃ ಶ್ರೀ ಮುನಿಯಪ್ಪನವರ ಸ್ಪೆಷಾಯಾಲಿಟಿ ಎಂದು ತೋರುತ್ತದೆ. ಅದನ್ನು ವಿಚಾರಣೆ ನಡೆಸುವುದಕ್ಕೆ ಸಿದ್ಧತೆ ನಡೆಸಿದ್ದೇವೆ ತಪ್ಪಿತಸ್ಥರು ಯಾರೇ ಇರಲಿ, ಅವರು 5ರೂ. ದುರುಪಯೋಗ ಮಾಡಿರಲಿ ಅಥವಾ 50 ಲಕ್ಷ ರೂ.ಗಳನ್ನು ದುರುಪಯೋಗ ಮಾಡಿರಲಿ that amount is immaterial. ಯಾರು ಯಾರು ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಮತ್ತು ಮಾಡಬೇಕಾಗಿರತಕ್ಕಂಥ ಕೆಲಸ ಮಾಡಿಲ್ಲ. ಅಂಥವರ ಮೇಲೆ ಬಹಳ ಕಠಿಣವಾದ ಕ್ರಮವನ್ನು ಖಂಡಿತವಾಗಿ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

SRI V. MUNIYAPPA: If you would have taken those steps, I would be very much grateful to you in the interst of public. ನಾನು ವರ್ಷಾವಾರು ನಷ್ಟ ಆಗಿರುವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. 1990 ರಿಂದ 1998-99ರ ವರೆಗೆ ಒಟ್ಟು 78 ಕೋಟಿ ರೂಪಾಯಿಗಳು ನಷ್ಟವಾಗಿವೆ. ಅದರಲ್ಲಿ 1995-96 ರಿಂದ ಇಲ್ಲಿಯವರೆಗೆ 35 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಮಾನ್ಯ ಮಂತ್ರಿಗಳಿಗೆ ರೈತರ ಬಗ್ಗೆ ಆಸಕ್ತಿ ಇದೆ. ಆ ಆಸಕ್ತಿ ತಾನು ಅಧಿಕಾರಕ್ಕೆ ಬಂದಮೇಲೆ ಎಷ್ಟರಮಟ್ಟಿಗೆ ಅದರ ಪ್ರತಿಫಲ ರೈತರಿಗೆ ಸಿಕ್ಕಿದೆ ಎನ್ನುವಂಥ ವಿಚಾರವನ್ನು ನೋಡಿದಾಗ ಅದರ ಬಗ್ಗೆ ಕಂಪ್ಲೀಟ್ ನಿರ್ಲಕ್ಷ್ಯ ಆಗಿದೆ. ಇದಕ್ಕೆ ಯಾರು ಜವಾಬ್ದಾರರು ಎನ್ನತಕ್ಕಂಥ ಮಾತನ್ನು ಅವರೇ ಹೇಳಬೇಕು. ನಾನು ಈ ಮಾತನ್ನು ಹೇಳುವುದಿಲ್ಲ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, 133 ಕೋಟಿ ರೂಪಾಯಿಯ ಯೂರಿಯಾ ಏನಾಯಿತೆಂದು ಈ ದೇಶದಲ್ಲಿರತಕ್ಕಂಥ ಎಲ್ಲರಿಗೂ ಗೊತ್ತಿದೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಇದು ಎಲ್ಲಾ ಏನೆಂದರೆ ಯಾವ ಊರು ಗೌಡ ಎಂದು ಕೇಳಿದರೆ ಕಂಬಳಿಗೆ ಮೂರು ಆಣೆ ಎಂದರಂತೆ. ನಾನು ಕೇಳುವುದು ಏನು, ಎಲ್ಲೋ ಹೋಗಿರುವುದು ಎಂದರೆ ಏನು, ಅದಕ್ಕೆ ಅವರು ಅನುಭವಿಸುತ್ತಾ ಇರುವುದು. ಅದರ ಬಗ್ಗೆ ಪ್ರಶ್ನೆ ಬೇಡ. ಇರತಕ್ಕಂಥದ್ದನ್ನು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ :— ಆ ರೀತಿಯಾಗಿ ನಡೆದಿದ್ದರೆ ಅವರ ಮೇಲೆ ಕಾಠಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಎಲ್ಲಿ ಹೋಯಿತು ಯೂರಿಯಾ ಎಲ್ಲಿ ಹೋಯಿತು ಯೂರಿಯಾ ಎಂದು ಈ ದೇಶದ 97ರಿಂದ 98 ಕೋಟಿ ಜನ ಹುಡುಕುತ್ತಲೇ ಇದ್ದಾರೆ. ಆದರೆ ಒಂದು ಕಾಳು ಯೂರಿಯಾ ಕೂಡ ಸಿಕ್ಕಿಲ್ಲ. ಎಲ್ಲಿ ಹೋಯಿತು ಎನ್ನುವುದೂ ಕೂಡ ಗೊತ್ತಿಲ್ಲ.

ಶ್ರೀ ವಿ ಮುನಿಯಪ್ಪ :—.....ನಾವು ಎಸ್.ಸಿ.:ಎಸ್.ಟಿ. ಕಾರ್ಪೋರೇಷನ್‌ನಿಂದ 7 ಕೋಟಿ 11 ಲಕ್ಷ ರೂ. ಇದೆಯೇ ಎಂದು ಕೇಳಿದರೆ, ಯಾವ ಯಾವುದೋ ಸಾಲ ಇದೆ ಅದು ತಂದ ಮೇಲೆ ಇವರಿಗೆ ಕೊಡುತ್ತೇವೆ ಎಂದು ಹೇಳಿದರೆ ಹೇಗೆ? ಗಂಗಾಕಲ್ಯಾಣ ಯೋಜನೆ ಬಡವರದ್ದು. ಇಂಪ್ಲಿಮೆಂಟ್ ಮಾಡುತ್ತೇವೆಂದು ಆ ಹಣವನ್ನು ತೆಗೆದುಕೊಂಡಿದ್ದೀರಿ, ಅದನ್ನು ನೀವು ತಕ್ಷಣ ಮಾಡಬೇಕು, ನಿಮ್ಮ ಕೈಯಲ್ಲಿ ಆಗದೇ ಹೋದರೆ ಅದನ್ನು ವಾಪಸ್ಸು ಕೊಡಬೇಕು. ಅದು ಬಿಟ್ಟು ಆ ಹಣವನ್ನು ತೆಗೆದುಕೊಂಡು ಹೋಗಿ ಯಾವುದೋ ಹಣಕ್ಕೆ ಅಂದರೆ ಎಷ್ಟೋ ವರ್ಷದಿಂದ ಅಕ್ಕುಮಲೇಟ್ ಲಾಸ್‌ನಲ್ಲಿ ಇರತಕ್ಕಂಥದ್ದಕ್ಕೆ ಇದನ್ನೂ ಲಿಂಕ್ ಮಾಡಿ, ಅವರು ಹಣವನ್ನು ಕ್ಯಾಷ್ ರೂಪದಲ್ಲಿ

ಕೊಟ್ಟಿದ್ದರು. ಅದರ ಬಗ್ಗೆ ಅರ್ಬಿಟ್ರೇಷನ್‌ಗೆ ಹೋಗಿದ್ದಾರೆ. ಒಂದು ತಿಂಗಳಿನಲ್ಲಿ ಹಣ ಕೊಡಬೇಕು, ಇಲ್ಲದಿದ್ದರೆ 20 ಪರ್ಸೆಂಟ್ ಬಡ್ಡಿ ಕೊಡಬೇಕು. ಎಂದು 1997ರಲ್ಲಿ ಅರ್ಬಿಟ್ರೇಷನ್‌ನಲ್ಲಿ ತೀರ್ಮಾನವಾಗಿದೆ. ತಮಗೆ ಬೇಕಾದರೆ ಅದರ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಬಡವರಿಗೆ ಇರತಕ್ಕಂಥ ಎಸ್.ಸಿ. : ಎಸ್.ಟಿ. ಕಾರ್ಪೊರೇಷನ್‌ನಿಂದ ಹಣ ತೆಗೆದುಕೊಂಡು ಆ ಹಣವನ್ನು ಸರ್ಕಾರದವರು ಬೇರೆ ಕಡೆಗೆ ಉಪಯೋಗ ಮಾಡಿಕೊಂಡು 2 ವರ್ಷ ಕಳೆದರೂ, ಆ ಹಣವನ್ನು ಯಾವ ಉದ್ದೇಶಕ್ಕಾಗಿ ಇಟ್ಟಿದ್ದರು ಎಂದರೆ ಗಂಗಾಕಲ್ಯಾಣ ಯೋಜನೆ ಎನ್ನುವ ದೊಡ್ಡ ಯೋಜನೆ ತಂದಿದ್ದೇವೆಂದು ಸರ್ಕಾರಕ್ಕೆ ಕೀರ್ತಿ ತರುವಂಥ ಈ ಯೋಜನೆಯ ಹಣ ಈ ತರಹ ಆದರೆ ಇದಕ್ಕೆ ದುರುಪಯೋಗವಾಗಿದೆ ಎಂದು ಹೇಳದೆ ಇನ್ನೇನು ಹೇಳಬೇಕು? ಇದಕ್ಕೆ ಮಾನ್ಯ ಮಂತ್ರಿಗಳೇ ಹೇಳಬೇಕು. ಇಷ್ಟೆಲ್ಲಾ ಆದ ಮೇಲೂ ಶ್ರೀ ಪಿ.ವಿ. ರೆಡ್ಡಿ ಎನ್ನುವವರನ್ನು ಜಿ.ಕೆ.ವಿ.ಕೆಯಯಿಂದ ನಿಯೋಜನೆ ಮೇರೆಗೆ ತೆಗೆದುಕೊಂಡಿದ್ದಾರೆ. ಅವರಿಗೆ ತಿಂಗಳಿಗೆ 50 ರಿಂದ 60 ಸಾವಿರ ಸಂಬಳ ರೂಪದಲ್ಲಿ ಖರ್ಚಾಗುತ್ತಿದೆ. ನಂತರ ಮಿಲ್ಕ್ ಫೆಡರೇಷನ್‌ನಿಂದ ಶ್ರೀ ದಿವಾಕರ ರಾವ್ ಎನ್ನುವ ಒಬ್ಬ ಸ್ಪೇಷಲಿಸ್ಟ್‌ನ್ನು ತೆಗೆದುಕೊಂಡಿದ್ದಾರೆ. There are already experts available in the Corporation. In spite of that they have taken on deputation from other institutions. ಇವರಿಗೆ ಕಾರು ಕೊಡಬೇಕು. ಇವರೆಲ್ಲರಿಗೆ ದೊಡ್ಡ ದೊಡ್ಡ ಸ್ಟೇಟ್ ಆಫೀಸರ್ಸ್ ಅವರ ಸ್ಟೇಟಸ್ ಕೊಡಬೇಕು. ಅದರ ಜೊತೆಗೆ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಮುನೇಗೌಡ ಅಥರಾ ಮುನಿರಾಜು ಎನ್ನುವವರನ್ನು ತೆಗೆದುಕೊಂಡಿದ್ದಾರೆ. ಅವರಿಗೆ 15ರಿಂದ 20 ಲಕ್ಷ ರೂ.ಗಳ ಖರ್ಚು. ಈ ರೀತಿ ಬೇರೆ ಕಡೆಯಿಂದ ಇಲ್ಲಿಗೆ ಅಧಿಕಾರಿಗಳನ್ನು ತೆಗೆದುಕೊಳ್ಳತಕ್ಕಂಥ ರಿಸರ್ಚ್‌ಗಳನ್ನು ಇಲ್ಲಿ ಟ್ರಯಲ್ ಮಾಡಿಸುವುದಕ್ಕೆ ಹೋಗಿ ಮೊದಲೇ ಮುಳುಗಿರುವಂಥದ್ದಕ್ಕೆ ಇನ್ನೊಂದು ಟ್ರಯಲ್ ಹಾಕಿ ಅದು ಪೂರ್ತಿ ಮುಳುಗಿಸುವುದಕ್ಕೆ ಪ್ರಯತ್ನ ಮಾಡಿ 31 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿ ಇದ್ದ ಅದನ್ನು ಕೇವಲ 3 ವರ್ಷದಲ್ಲಿ 65 ಕೋಟಿ ರೂಪಾಯಿಗಳು ಆಗುವ ಹಾಗೆ ಮಾಡಿದಿರಿ. ಇದು ಈಗ ಆಗಿರತಕ್ಕಂಥ ಪರಿಸ್ಥಿತಿ. ಇದರ ಬಗ್ಗೆ ಪೂರ್ಣ ತನಿಖೆ ಆಗಬೇಕು. ಸಾಧ್ಯವಾದರೆ ಸಿ.ಓ.ಡಿ. ಅಥವಾ ಸಿ.ಬಿ.ಐ. ಅಥವಾ ಸದನ ಸಮಿತಿ ಮಾಡಿ ಅದರ ಮುಖಾಂತರ ಆದರೂ ತನಿಖೆ ಆಗಬೇಕು, ಅದಕ್ಕೆ ಮಾನ್ಯ ಮಂತ್ರಿಗಳೂ ಸಹ ಸಹಕರಿಸುತ್ತಾರೆ ಏಕೆಂದರೆ ಇದರಲ್ಲಿ ಅನೇಕ ಲೋಪದೋಷಗಳು, ಎನ್ನತಕ್ಕಂಥದ್ದನ್ನೂ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ಸಂಬಂಧಪಟ್ಟಿರತಕ್ಕಂಥ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದೆ. ಈ ಕೆಲಸವನ್ನು ಆ ಸಮಿತಿಗೆ ವಹಿಸುವುದಕ್ಕೆ ಸರ್ಕಾರ ಈಗಲೇ ಸಿದ್ಧವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ಸಂಬಂಧಪಟ್ಟಿರುತ್ತಕ್ಕಂಥ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸುವುದಕ್ಕೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಒಪ್ಪಿಕೊಂಡಿದ್ದಾರೆ. ಅದನ್ನು ಪಿ.ಎ.ಸಿ. ಕಮಿಟಿಗೆ ರೆಫರ್ ಮಾಡಬೇಕು. ಮಾನ್ಯ ಮಂತ್ರಿಗಳು ತಮ್ಮ ಮುಖಾಂತರ ಸದನಕ್ಕೆ ತಿಳಿಸಿರುವುದರಿಂದ ಇದು ರೆಫರ್ ಆದಹಾಗೆ ಅಲ್ಲವೇ?

ಅಧ್ಯಕ್ಷರು :— ರೆಫರ್ ಆದಹಾಗೆ. ಇದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಎಕ್ಸೈಜ್ ಕಂಟ್ರಾಕ್ಟರ್‌ಗಳಿಂದ ಸರ್ಕಾರಕ್ಕೆ 285 ಕೋಟಿ ರೂಪಾಯಿನಷ್ಟು ಬಾಕಿ ಬರಬೇಕಾಗಿದೆ. ಇದರಲ್ಲಿ ಒಂದು ವಿಪರ್ಯಾಸವನ್ನು ತಮ್ಮ ಗಮನಕ್ಕೆ ತರುತ್ತೇನೆ. ಸರ್ಕಾರಕ್ಕೆ ಬಾಕಿ ಬರಬೇಕಾದ ಹಣದಲ್ಲಿ ಕೇವಲ 23 ಕೋಟಿ ರೂಪಾಯಿಗಳು ಮಾತ್ರ ಡಿಸ್‌ಪ್ಯೂಟ್ ಆಗಿ ಕೋರ್ಟ್‌ನಲ್ಲಿ ಇದೆ. ಇನ್ನುಳಿದ 201 ಕೋಟಿ ರೂ.ಗಳಿಗೆ ಯಾವ ವಿವಾದವೂ ಇಲ್ಲ. ಆದರೆ ಯಾರ್ಯಾರು ಅಬಕಾರಿ ಗುತ್ತಿಗೆದಾರರು ಇದ್ದಾರೆ ಅವರು ಸರ್ಕಾರಕ್ಕೆ ಕೊಡಬೇಕಾದ ಬಾಕಿಯನ್ನು ಇಟ್ಟುಕೊಂಡು ಪುನ: ಅವರೇ ಹರಾಜಿನಲ್ಲಿ ಪಾಲ್ಗೊಳ್ಳುತ್ತಾರೆ. ಇದು ಎಲ್ಲರಿಗೂ ಗೊತ್ತಿದೆ. ಒಂದು ಸಲ ಅವರು ಸರ್ಕಾರಕ್ಕೆ ಬಾಕಿ ಕೊಡದೆ ಡಿಫಾಲ್ಟರ್ ಆದಮೇಲೆ ಪುನ: ಅದೇ ವ್ಯಕ್ತಿಗಳಿಗೆ ಅಬಕಾರಿ ಹರಾಜಿನಲ್ಲಿ ಕಾಂಟಿಟ್ ಮಾಡುವುದಕ್ಕೆ ಏಕೆ ಅವಕಾಶ ಕೊಡುತ್ತೀರಿ? ಸುಮಾರು 200 ಕೋಟಿ ರೂ.ಗಳಿಗಿಂತ ಹೆಚ್ಚು ಸರ್ಕಾರಕ್ಕೆ ಬರಬೇಕು. ಇಂಥಾದ್ದು ಸರ್ಕಾರದಲ್ಲಿ ಗಿದೆ. ಇನ್ನು ಹೊಸ ಸರಾಯಿ ನೀತಿಯಲ್ಲಿ ರಿ-ಆಕ್ಷನ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡಿರುವುದರಿಂದ 70 ಕೋಟಿ ರೂ.ಗಳಷ್ಟು ಲಾಭ ಬಂತು ಎಂದು ಸರ್ಕಾರದವರು ಹೇಳಿದರು. ಕಳೆದ ಎರಡು ವರ್ಷದಲ್ಲಿ ವರ್ಷಕ್ಕೆ 70 ಕೋಟಿ ರೂ.ನಂತೆ ಸರ್ಕಾರಕ್ಕೆ ಬರುತ್ತಕ್ಕಂಥ ಒಟ್ಟು 140 ಕೋಟಿ ರೂ.ಗಳ ಆದಾಯ ಹೋಗುಹೋಯಿತು. ಅಂದರೆ 140 ಕೋಟಿ ರೂ.ಗಳ ನಷ್ಟವಾಯಿತು. ಪ್ರತಿ ವರ್ಷ ಆಕ್ಷನ್ ನೀತಿ ತಂದಿದ್ದರೆ, ಪ್ರತಿ ವರ್ಷ 10 ಪರ್ಸೆಂಟ್ 15 ಪರ್ಸೆಂಟ್ 25 ಪರ್ಸೆಂಟ್ ಹೀಗೆ ಹಂತ ಹಂತವಾಗಿ ಎನ್‌ಹ್ಯಾನ್ಸ್ ಆಗುತ್ತಿತ್ತೆ ಹೊರತು ಕಡಿಮೆ ಆಗತಕ್ಕಂಥದ್ದು ಇಲ್ಲವೇ ಇಲ್ಲ. ಆದರೆ ಮೇಲಿನಂತೆ ಮಾಡದೆ ಈ ತರಹದ ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ಕೋರ್ಟ್‌ನವರು ಏನು ಮಾಡಿದ್ದಾರೆ ಅದನ್ನು ಖಂಡಿತರಾಗಿ ಮುಂದುವರಿಸಬೇಕು. ಇನ್ನೂ 2-3 ಪಾಯಿಂಟ್‌ಗಳ ಮೇಲೆ ಮಾತನಾಡಬೇಕೆಂದು ಇದ್ದೆ. ಆದರೆ ಸಮಯದ ಅಭಾವವಿರುವುದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗದೆ ಇಷ್ಟು ಹೊತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಕಡೇ ಘಳಿಗೆವರೆಗೆ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಗೌರವಾನ್ವಿತ ಸದಸ್ಯರು ಕುಳಿತು ಸಹಕರಿಸಿದ್ದಕ್ಕೆ ನನ್ನ ಧನ್ಯವಾದಗಳನ್ನರ್ಪಿಸಿ, ಈಗ ಸದನವನ್ನು ಮುಂಡೂಡುತ್ತಿದ್ದೇನೆ. ಸದನವು ಪುನ: ಮಂಗಳವಾರ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರುವುದು.

(ಸದನವು ಸಂಜೆ 7 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ: 30-3-1999ರ ಮಂಗಳವಾರದಂದು ಬೆಳಿಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು.

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕರ್ನಾಟಕ ವಿಧಾನಸಭೆ

ಮಂಗಳವಾರ 30ನೇ ಮಾರ್ಚ್ 1999 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್)ಅವರು ಪೀಠವನ್ನು ಅಲಂಕರಿಸಿದರು.

1. ವಿತ್ತೀಯ ಕಾರ್ಯಕಲಾಪಗಳು

(ಅ) 1999-2000 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ.

ಅಧ್ಯಕ್ಷರು :— ಮಾನ್ಯ ವಾಟಾಳ್‌ರವರೇ ತಾವು 20 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ಈಗಾಗಲೇ 11 ಗಂಟೆ 10 ನಿಮಿಷ ಆಗಿದೆ. 11.30 ಕ್ಕೆ ತಾವು ಮುಗಿಸಿದರೆ ಆನಂತರ ಉತ್ತರ ಕೊಡುತ್ತಾರೆ. ಏಕೆಂದರೆ 2-3 ದಿವಸ ಅವಾಯ್ಡ್ ಮಾಡಿ ಅವಕಾಶ ಕೊಟ್ಟಿಲ್ಲ. ಆನಂತರ ಬಜೆಟ್ ಮೇಲೆ ಮಾತನಾಡಲಿಲ್ಲ ಎಂದು ನೀವು ಹೇಳುವುದು ಬೇಡ.

ಶ್ರೀ ವಾಟಾಲ್ ನಾಗರಾಜ್ :— ಇದು ಐದು ವರ್ಷದ ಕೊನೇ ಬಜೆಟ್

ಅಧ್ಯಕ್ಷರು :— ಆದ್ಕೆ 10 ನಿಮಿಷದಲ್ಲಿ ಮುಗಿಸಿಬಿಡಿ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೇ, ಇದು ಜಾಸ್ತಿ ಆಯವ್ಯಯದ ಚರ್ಚೆಗಿಂತ ಸಾಮಾನ್ಯವಾಗಿ ಆಯವ್ಯಯದ ಸಭೆ ಎಂದರೆ ಈ ಸದನ ಬಹಳ ಲವಲವಿಕೆಯಿಂದ ಇಡೀ ಸದಸ್ಯರೆಲ್ಲಾ ಸದನದಲ್ಲಿ ಇರುವುದು ಸಾಮಾನ್ಯ. ಮತ್ತು ಮೇಲುಗಡೆ ಗ್ಯಾಲರಿಯಲ್ಲಿ ವಿಪರೀತವಾಗಿ ಇರುತ್ತಾರೆ. ನಾನು 1967ರಿಂದ ಈ ಸದನದ ಸಂಪೂರ್ಣ ಒಂದು ಮಾಹಿತಿ ಮತ್ತು ವಿಚಾರ ಇದರ ಬಗ್ಗೆ ಬಹಳ ಗಮನಿಸಿದ್ದೇನೆ. ಈ ಸದನಕ್ಕೆ ಒಂದು ಗಂಭೀರತೆ ಮತ್ತು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಶಾಸನ ಸಭೆಗೆ ಅಪಾರವಾದಂತಹ ಒಂದು ಶಕ್ತಿ ಇದೆ. ಈ ಶಕ್ತಿಯನ್ನು ನಾವು ಉಳಿಸಿಕೊಂಡು ಹೋಗಬೇಕಾದ್ದು ನಮ್ಮ ಕರ್ತವ್ಯ. ಯಾವತ್ತು ಈ ಶಾಸನ ಸಭೆಗೆ ಶಕ್ತಿಹೀನವಾದಂತಹ ಸ್ಥಿತಿ ಬರಬಾರದು ಎನ್ನುವುದು ನನ್ನಲ್ಲಿ ಮೊದಲಿನಿಂದ ಇರುವಂತಹ ವಾದ. ಇದು ಐದು ವರ್ಷದ ಕೊನೆಯ ಅಭಿನಂದನಾ ಸಭೆ ಇದ್ದಹಾಗೆ. ತಾವು ಮುಂದೆ ಜೂನ್‌ನಲ್ಲಿ ಕರೆಯತಕ್ಕಂಥ ಅಧಿವೇಶನ ಅದು ವಂದನಾರ್ಪಣ ಸಭೆ ಇದ್ದ ಹಾಗೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಸಭೆಯಲ್ಲಿ ನಾವು ಮುಂದಿನ ಚುನಾವಣೆಯ ದೃಷ್ಟಿಯಲ್ಲಿ ನಾವು ಹೋಗತಕ್ಕಂಥದ್ದು. ಆದರೆ ಯಾವುದೇ ಸರ್ಕಾರವಿದ್ದರೂ ಆಯವ್ಯಯವನ್ನು ಇದೇ ರೀತಿ ಮಂಡಿಸಬೇಕಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :— ಅವರು ಉತ್ತರವನ್ನೇ ಕೊಡುತ್ತಾರೆ ಇವರು ಹೇಳುವುದೇಕೆ? ಒಳ್ಳೆಯದೆಂದು ಅವರು ಅದೇ ಉತ್ತರವನ್ನು ಕೊಡುತ್ತಾರೆ, ಅದು ಒಳ್ಳೆಯದಿದೆ ಎಂದು ಹೇಳುವುದಕ್ಕೆ ಇವರು ಏತಕ್ಕೆ ಬೇಕು?

ಶ್ರೀ ವಾಟಾಳ್‌ನಾಗರಾಜ್ :— ನಾನು ಹೇಳುವವರೆಗೆ ಇವರು ಕೇಳುವುದೇ ಇಲ್ಲವೇ.

ಅಧ್ಯಕ್ಷರು :— ನಿಮ್ಮ ವಿಶೇಷ ಸಲಹೆಯ ಮೇರೆಗೆ ಅವರು ಈಗ ಇಪ್ಪತ್ತು ನಿಮಿಷ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :— ನಮ್ಮ ಅವರ ಸ್ನೇಹವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರಿಗೆ ಸ್ವಲ್ಪ ಅವಕಾಶ ಮಾಡಿಕೊಡಿ ಎಂದು ಹೇಳುವುದಕ್ಕೆ ಅವರು ನಿಮ್ಮ ಛೇಂಬರ್‌ಗೆ ಬಂದಿದ್ದರು ಎಂದು ಕಾಣುತ್ತದೆ. ನಾನು ಹೋದಾಗ ಅವರು ಇರಲಿಲ್ಲ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ) :— ಅಧ್ಯಕ್ಷರ ಕೋಣೆಗೆ ಹೋಗಿದ್ದು ನಿಜ, ಆದರೆ ಈ ವಿಷಯ ಪ್ರಸ್ತಾಪ ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಮಾತನಾಡುವ ಧಾಟಿಯನ್ನು ನೋಡಿದರೆ ನೀವು ಇಬ್ಬರೂ ಜೊತೆಯಲ್ಲೇ ಹೋಗಿದ್ದೀರಿ ಎಂದು ಅರ್ಥವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ನಾನು ಇನ್ನು ಮಾತನಾಡುವ ಧಾಟಿಯನ್ನೇ ಪ್ರಾರಂಭಿಸಿಲ್ಲ, ನಾನು ಮಾತನಾಡುವ ಧಾಟಿಯನ್ನು ನೋಡಿ ಇವರಿಗೆ ಭವಿಷ್ಯ ಗೊತ್ತಾಗಿದೆ. ಮುಂದೆ ಏನಾಗುತ್ತದೆ ಎನ್ನುವ ಭವಿಷ್ಯ ಇವರಿಗೆ ಗೊತ್ತಾಗಿದೆ. ನಾನು ಮೊದಲೇ ತಮಗೆ ಹೇಳಿದಂತೆ, ಈ ಅಭಿನಂದನಾ ಸಭೆಯಲ್ಲಿ ನಾವು ಎಷ್ಟು ತೀವ್ರವಾಗಿ ಮಾತನಾಡಿದರೂ ಕೂಡ ಇವತ್ತು ಈ ಸಭೆಯ ಕೊನೆಯ ಹಂತಕ್ಕೆ ಬರುತ್ತಿದ್ದೇನೆ. ಮುಂದಿನ ಎಂಟು ತಿಂಗಳಲ್ಲಿ ನಾವು ಚುನಾವಣೆಗೆ ಹೋಗುತ್ತೇವೆ. ಇನ್ನು ಜೂನ್ ತಿಂಗಳು ಕಳೆದ ನಂತರ ಬಹುಶಃ ನನಗನಿಸುತ್ತದೆ, ಚುನಾವಣೆಯ ನೀತಿ ನಿಯಮಗಳನ್ನೆಲ್ಲಾ ಸಮಗ್ರವಾಗಿ ತರುತ್ತಾರೆ, ನಾವೇನು ಗುದ್ದಲಿಪೂಜೆ, ಶಂಕುಸ್ಥಾಪನೆ ಮಾಡುವಂತಿಲ್ಲ ಮಾವಿನ ಸೊಪ್ಪು ಕಟ್ಟುವಂತಿಲ್ಲ ಇನ್ನು ಚುನಾವಣೆಗೆ ಹೋಗುವುದೊಂದೇ ಈಗ ನಮಗೆ ಉಳಿದಿರತಕ್ಕಂಥದ್ದು. ಆದರೆ ಸಿದ್ದರಾಮಯ್ಯನವರು ಐದು ವರ್ಷಗಳ ಕಾಲ ಈ ಒಂದು ಆಯವ್ಯಯವನ್ನು ಮಂಡನೆ ಮಾಡಿ ಒಂದು ಇತಿಹಾಸವನ್ನು ನಿರ್ಮಾಣ ಮಾಡಿದ್ದಾರೆ, ನಾವು ಅದನ್ನು ಒಪ್ಪಿಕೊಳ್ಳಲೇಬೇಕು. ವಿರೋಧಪಕ್ಷ ಇರುವುದು ಸಂಪೂರ್ಣವಾಗಿ ಬೈಯುವುದಕ್ಕೆ ಅಡಳಿತ ಪಕ್ಷವಿರುವುದು ನಾವು ಹೇಳಿದ್ದಕ್ಕೆಲ್ಲಾ ಉತ್ತರ ಕೊಡುವುದೆಂದಾದರೆ ಅದು ಸರಿಯಾಗಿ ಕಾಣುವುದಿಲ್ಲ. ಒಂದು ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಇಲ್ಲಿ ಕೈಗಾರಿಕಾ ಮಂತ್ರಿಯಾಗಿ ಸನ್ಮಾನ್ಯ ಎಸ್.ಎಂ. ಕೃಷ್ಣರವರು

ಇದ್ದದ್ದು ನನಗೆ ಜ್ಞಾಪಕವಿದೆ. ನಾನು ಅವರಿಗೆ ಅವರು ಯಾರೊ ತಮ್ಮ ಸಂಬಂಧಿಕರಿಗೆ ಕೈಗಾರಿಕೆಯನ್ನು ಕೊಟ್ಟಿದ್ದಾರೆಂದು ಒಂದು ಅಪಾದನೆಯನ್ನು ಮಾಡಿದೆ. ತಕ್ಷಣ ಅವರು ಎದ್ದುನಿಂತುಕೊಂಡು ಇದು ಸತ್ಯ, ಕೊಟ್ಟಿರುವುದು ನಿಜ, ಅಪರಾಧವಾಗಿದೆ ಎಂದು ಹೇಳಿದರು. ಇದರ ಅರ್ಥವೇನೆಂದರೆ, ಹಾಗೆ ಪ್ರಾಮಾಣಿಕವಾಗಿ ಹೇಳುವುದು ನಮ್ಮಲ್ಲೂ ಬರಬೇಕು ಮತ್ತೆ ಅವರಲ್ಲೂ ಕೂಡ ಅಷ್ಟೇ ಪ್ರಾಮಾಣಿಕವಾಗಿ ಉತ್ತರ ಕೊಡುವುದು ಇರಬೇಕು; ಇದು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸಭೆಗೆ ಇರುವ ಒಂದು ಹೆಚ್ಚಿನ ಮಹತ್ವ. ನಾವು ಎಲ್ಲ ಪಕ್ಷದವರು ಈ ಸಭೆಯ ಶಕ್ತಿಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲೇಬೇಕು. ಈ ಸಭೆಯನ್ನು 1967ರಲ್ಲಿ ನೋಡಿದ್ದೇನೆ 1972 ರಲ್ಲಿ ನೋಡಿದ್ದೇನೆ ಮತ್ತೆ ಇತ್ತೀಚಿನ ದಿನಗಳಲ್ಲಿ ನೋಡಿದ್ದೇನೆ. 1962, 1967, 1977 ಲೋಕಸಭೆ, ಶಾಸನಸಭೆ ಸುವರ್ಣ ಯುಗ. ಯಾವ ಸದಸ್ಯರುಗಳು ಈ ಸದನದಿಂದ ಹೊರಗೆ ಹೋಗುವುದಕ್ಕೆ ತಯಾರಿರಲಿಲ್ಲ; ಆ ರೀತಿ ಈ ಸದನವನ್ನು ನಡೆಸಿಕೊಂಡು ಬಂದಿದ್ದೇವೆ. ಆದುದರಿಂದ, ಈ ಸದನಕ್ಕೆ ಇರುವ ಶಕ್ತಿಯನ್ನು ನಾವು ಯಾವತ್ತು ಮರೆಯತಕ್ಕೂಥದ್ದಲ್ಲ. ಮತ್ತೆ ಇತ್ತೀಚಿನ ದಿನಗಳಲ್ಲಿ ಶಾಸಕಾಂಗದ ಮೇಲೆ ನ್ಯಾಯಾಂಗದ ಪ್ರಭಾವ ಒಂದು ರೀತಿ ಎಲ್ಲಾ ಕಡೆ ಪ್ರಾರಂಭವಾಗಿದೆ. ಲೋಕ ಸಭೆಯ ಮೇಲೆ ಚರ್ಚೆ ನಡೆದಿರುವುದು, ಶಾಸನಸಭೆಗಳ ಮೇಲೆ ಚರ್ಚೆ ನಡೆದಿರುವುದು ನಡೆದಿದೆ. ಇತ್ತೀಚೆಗೆ ಇದಕ್ಕೆ ಬಹಳ ಶಕ್ತಿಯಿದೆ ಎಂದು, ನ್ಯಾಯಾಂಗಕ್ಕಿಂತ ಶಾಸಕಾಂಗಕ್ಕೆ ಬಲವಾದ ಶಕ್ತಿಯಿದೆ ಎಂದು ತೋರಿಸಲಾಗಿದೆ. ಈ ನಮ್ಮ ಅಧ್ಯಕ್ಷರು, ನ್ಯಾಯಾಂಗದ ಮೇಲೆ ಚರ್ಚೆಯಾದಾಗ ಈ ಸದನಕ್ಕೆ ಮಹತ್ವವಾದ ಶಕ್ತಿಯಿದೆ ಎನ್ನುವುದನ್ನು ತೋರಿಸಿದ್ದಾರೆ. ಮೊನ್ನೆ ತಮಿಳುನಾಡಿನಲ್ಲಿ ನ್ಯಾಯಾಂಗ ಹಾಗೂ ಶಾಸಕಾಂಗಗಳ ನಡುವೆ ನಡೆದ ಹೋರಾಟ ಅಂತಿಮವಾಗಿ ದೆಹಲಿಯಲ್ಲಿ ಎಲ್ಲಾ ಅಧ್ಯಕ್ಷರುಗಳ ಸಭೆಯನ್ನು ಕರೆದು ಮುಂದೆ ಏನು ಮಾಡಬೇಕು ಎನ್ನುವ ದಿಕ್ಕಿಗೆ ದಾರಿಯನ್ನು ಕಾಣುವ ಒಂದು ವ್ಯವಸ್ಥೆಗೆ ಇದು ಹೋಗಿದೆ. ಎಲ್ಲಿ ಏನೇ ಆದರೂ ಚುನಾಯಿತ ಸಭೆಗಳಾದ ಲೋಕಸಭೆ, ಶಾಸನಸಭೆ ಇವುಗಳ ಶಕ್ತಿಯನ್ನು ನಾವು ಯಾವತ್ತು ಕಡಿಮೆ ಮಾಡುವುದಕ್ಕೆ ತಯಾರಾಗಿರಬಾರದು. ಆ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರನ್ನು ನಾನು ಅಭಿನಂದಿಸುತ್ತೇನೆ. ಈ ಸದನದ ಶಕ್ತಿಗೆ ಒತ್ತನ್ನು ಕೊಟ್ಟಿದ್ದೀರಿ, ಈ ಸದನದ ಶಕ್ತಿಯನ್ನು ಉಳಿಸುವುದಕ್ಕೆ ತಾವು ಇತ್ತೀಚಿನ ದಿನಗಳಲ್ಲಿ ನಡೆದುಕೊಂಡಿರುವ ರೀತಿಯನ್ನು ನೋಡಿದಾಗ ನನಗೆ ಬಹಳ ಸಂತೋಷವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇದೊಂದು ಅಭಿನಂದನಾ ಸಭೆ ಎಂದು ನಾನು ಮೊದಲೇ ಹೇಳಿದೆ, ಇದಕ್ಕೆ ಒಂದು ಶಕ್ತಿಯನ್ನು ತಂದುಕೊಟ್ಟಿದ್ದೀರಿ ಎನ್ನುವುದನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಈಗ ಚುನಾವಣೆ ಎಂದರೇನು? ನಾವು ಚುನಾವಣೆಗೆ ನಿಲ್ಲಬೇಕು, ಸೋಲಿಸಬೇಕು ಅಥವಾ ಗೆಲ್ಲಬೇಕು ಕೆಲವರಂತು ಲೋಕಸಭೆಗಾಗಲಿ ಮತ್ತು ಶಾಸನಸಭೆಗಾಗಲಿ ಆಯ್ಕೆಯಾಗಲೇ ಬೇಕೆನ್ನುವುದು ನನ್ನ ವಾದ. ಅವರು ಯಾವುದೇ ಪಕ್ಷಕ್ಕೆ ಸೇರಿದವರಾಗಿರಬಹುದು, ಅವರ್ಯಾರು ಈ ಸದನದಲ್ಲಿ ಇಲ್ಲವೆಂದರೆ ಅದು ಒಳ್ಳೆಯ

ಸೂಚನೆಯಲ್ಲ. ಕೆಲವರು ಸದನಕ್ಕಾಗಿ, ಸದನದ ಆಸ್ತಿಯಾಗಿ, ಸದನದಲ್ಲಿ ಕೆಲಸ ಮಾಡಿರುವವರನ್ನು ಬದಲಾವಣೆ ಮಾಡಿ ಆ ಸ್ಥಳಕ್ಕೆ ಮತ್ತೊಬ್ಬರನ್ನು ತರಲು ಸಾಧ್ಯವಿಲ್ಲ. ತಮಗೆ ಹಿಂದಿನ ಇತಿಹಾಸ ಜ್ಞಾಪಕವಿರಬಹುದು, ಕಾಮರಾಜರವರನ್ನು ಒಬ್ಬ ವಿದ್ಯಾರ್ಥಿ ಚುನಾವಣೆಯಲ್ಲಿ ಸೋಲಿಸಿಬಿಟ್ಟರು, ಮತ್ತೆ ಕಾಮರಾಜರನ್ನು ತರಲಾಗಲಿಲ್ಲ, ಕಾಮರಾಜರಂಥ ಪ್ರಭಾವವುಳ್ಳವರು, ಶಕ್ತಿಯುಳ್ಳವರು ಮತ್ತೆ ಬರಲಾಗಲಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆ ಎಂದರೆ ಯಾರು ಪ್ರಾಮಾಣಿಕವಾಗಿ ಈ ಸದನದ ಒಂದು ಇತಿಹಾಸದಲ್ಲಿ ನಡೆದುಕೊಂಡು ಹೋರಾಟ ಮಾಡಿಕೊಂಡು ಬಂದವರು ಯಾವುದೇ ಪಕ್ಷದವರಾಗಲಿ ಅವರು ಬರುವಾಗ ಪಕ್ಷದ ಒಂದು ಕೂಗಿದೆ, ಮತದಾರರ ಒಲವಿದೆ ಎಂದು ಅಂತಹವರ ವಿರುದ್ಧ ಅಭ್ಯರ್ಥಿಯನ್ನು ನಿಲ್ಲಿಸಿ ಸೋಲಿಸುವುದು ಒಳ್ಳೆಯದಲ್ಲ. ಅಂತಹದ್ದರಲ್ಲಿ ನಮ್ಮ ಶಾಸನ ಸಭೆಯಲ್ಲಿ ಅಂತಹವರು ಅನೇಕರಿದ್ದಾರೆ, ಅವರು ಮತ್ತೆ ಮತ್ತೆ ಅವರು ಯಾವುದೇ ಪಕ್ಷದವರಿರಲಿ ಚುನಾವಣೆಯಲ್ಲಿ ಗೆದ್ದುಬರಬೇಕೆನ್ನುವುದು ನನ್ನ ಆಶಯ. ಒಬ್ಬರು ಮತ್ತೊಬ್ಬರನ್ನು ಸೋಲಿಸುವುದು, ಗೆಲ್ಲುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇರುವುದೇ ಆದರೆ ಕೆಲವರಿಗಾದರು ಈ ಒಂದು ವ್ಯವಸ್ಥೆ ಇರಬೇಕೆನ್ನುವುದು ನನ್ನ ಪ್ರಮುಖವಾದ ವಿಚಾರ. ಲೋಕಸಭೆಯ ಅಧ್ಯಕ್ಷರಾಗಲಿ, ಶಾಸನಸಭೆಯ ಅಧ್ಯಕ್ಷರಾಗಲಿ, ಅಧ್ಯಕ್ಷರಾಗಿರತಕ್ಕಂಥವರ ವಿರುದ್ಧ ಯಾವುದೇ ಪಕ್ಷದವರು ಅಭ್ಯರ್ಥಿಗಳನ್ನು ನಿಲ್ಲಿಸಬಾರದು. ಏಕೆಂದರೆ ಐದು ವರ್ಷ ಅವರು ರಾಜಕಾರಣ ಮಾಡದೆ ಅಧ್ಯಕ್ಷರಾಗಿ ಕುಳಿತಿರುತ್ತಾರೆ. ಬೇರೆ ಯಾವುದೇ ರಾಜಕಾರಣವಿರಲಿ, ಇಲ್ಲಿ ಎಲ್ಲಾ ಪಕ್ಷಕ್ಕೆ ಸೇರಿದಂತಹವರು ಅಧ್ಯಕ್ಷರು. ಲೋಕಸಭೆ ಇರಬಹುದು, ಶಾಸನಸಭೆ ಇರಬಹುದು, ಅದಕ್ಕೆ ಅಧ್ಯಕ್ಷತೆವಹಿಸಿರುವ ಅಧ್ಯಕ್ಷರು ಯಾರಿರುತ್ತಾರೆ? ಅವರ ವಿರುದ್ಧವಾಗಿ ಪ್ರಾಮಾಣಿಕವಾಗಿ ಯಾವ ಅಭ್ಯರ್ಥಿಯನ್ನು ನಿಲ್ಲಿಸಬಾರದು ಎನ್ನುವುದು ನನ್ನ ವೈಯಕ್ತಿಕವಾದ ಸಲಹೆ, ಅದನ್ನು ಎಲ್ಲಾ ವಿರೋಧಪಕ್ಷದವರು ಒಪ್ಪಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎನ್. ರಾಜಣ್ಣ:— ಹಾಗಾದರೆ ಈಗಲೇ ಘೋಷಣೆ ಮಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್:— ಬಹಳ ಸಂತೋಷ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಶ್ರೀಮಾನ್ ಸಿದ್ದರಾಮಯ್ಯನವರು ಐದು ವರ್ಷಗಳ ಕಾಲ ಈ ಒಂದು ಅಯವ್ಯಯವನ್ನು ಮಂಡಿಸಿದ್ದಾರೆ. ನಾವು ಅವರನ್ನು ತೀರ ಟೀಕೆ ಟಿಪ್ಪಣಿ ಮಾಡುವುದಕ್ಕಿಂತ ಹೆಚ್ಚಾಗಿ ಇಲಾಖೆಯ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಅವರಿಗೆ ಗೊತ್ತಿದ್ದರೂ ಕೂಡ ಕೆಲವು ಕಡೆ ಅವರು ಎಡವಿದ್ದಾರೆ. ಅದನ್ನೇ ಬೆಟ್ಟುಮಾಡಿ ತೋರಿಸುವುದಕ್ಕಿಂತ ಹೆಚ್ಚಾಗಿ ಒಂದು ಚಿಂತನೆ ನಡೆದಾಗ, ನನಗನಿಸುತ್ತದೆ, ಇವರ ಆಯವ್ಯಯಕ್ಕೆ ಒಂದು ಹೆಸರನ್ನು ಇಡಬಹುದು. ಕೆಸರಿನಲ್ಲಿ ಕಮಲ ಎಂದು ಹೇಳಬಹುದು. ಆಡಳಿತ ಹದಗೆಟ್ಟಿದೆ, ಮೂರು ತಿಂಗಳು ನೀವು ಬೀದಿಗೆ, ರಸ್ತೆಗೆ ಬಂದು ಆಡಳಿತವೇ ಇಲ್ಲ, ಇಂತಹ ಪರಿಸ್ಥಿತಿಯಲ್ಲಿ ಎಲ್ಲೋ ಒಂದು ಕಡೆ ಕೆಸರಿನಲ್ಲಿ ಕಮಲ ಉದ್ಭವವಾಗುತ್ತದೆ ಎಂದಾಗ,

ಅದಕ್ಕೆ ಅತ್ಯಂತ ಶಕ್ತಿಯಿದೆ. ಸುತ್ತಲೂ ಕೆಸರನ್ನು ಬೆಳ್ಳಿದ್ದಾರೆ, ಪ್ರಾಮಾಣಿಕವಾಗಿ ಸರ್ಕಾರವಿರಲಿಲ್ಲ, ಸತ್ಯವನ್ನು ನಾವು ಒಪ್ಪಿಕೊಳ್ಳಬೇಕು, ಅದರ ಬಗ್ಗೆ ಚಕಾರವಿಲ್ಲ. ಸರ್ಕಾರವಿದೆ ಎನ್ನುವುದಕ್ಕಿಂತ ಹೆಚ್ಚಾಗಿ ಬರಿ ಧ್ವಂಧ್ವ, ಪಕ್ಷದ ಸಂಘಟನೆಯ ಬಗ್ಗೆ ಹೋರಾಟ, ಮುಖ್ಯಮಂತ್ರಿಗಳನ್ನು ಅಧಿಕಾರದಿಂದ ಇಳಿಸತಕ್ಕಂಥದ್ದು, ಬೇರೆ ಮುಖ್ಯಮಂತ್ರಿಯನ್ನು ತರತಕ್ಕಂಥದ್ದು, ಇವೆಲ್ಲ ನಡೆದು, ಕೆಸರಿನಲ್ಲಿ ಒಂದು ಕಮಲ ಬಂದಿದೆ, ಆದುದರಿಂದ ಈ ನಿಮ್ಮ ಆಯವ್ಯಯವನ್ನು ಕೆಸರಿನ ಕಮಲವೆಂದು ನಾನು ಕರೆಯುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಕೆಸರಿನ ಕಮಲ ಬಜೆಟ್ಟೋ ಅಥವಾ ಸಿದ್ಧರಾಮಯ್ಯನವರೋ?

ಶ್ರೀ ವಾಟಾಳ್ ನಾಗರಾಜ್ :— ಅವೆರಡನ್ನು ಬೇರ್ಪಡಿಸಲು ಆಗುವುದಿಲ್ಲ. ಸಿದ್ಧರಾಮಯ್ಯನವರು ಬಜೆಟ್ಟನ್ನು ಮಂಡಿಸಿದಾಗ, ಅವರೇ ಬೇರೆ, ಬಜೆಟ್ಟೇ ಬೇರೆ ಎಂದು ಮಾಡಲು ಆಗುವುದಿಲ್ಲ. ಅಂಥ ಪರಿಸ್ಥಿತಿಯಲ್ಲೂ, ಆ ಕೆಸರಿನ ಮಧ್ಯೆ ಒಂದು ಕಮಲ ಉದ್ಭವವಾಗಿದೆ. ಬಹಳ ಪ್ರಯಾಸಪಟ್ಟು ಆ ಕಮಲ ಉದ್ಭವಾಗಿದೆ ಎಂದು ನಾನು ಹೇಳುವಾಗ, ಅದು ಸಿದ್ಧರಾಮಯ್ಯನವರಿಗೂ ಹೋಗುತ್ತದೆ, ಮತ್ತು ಸಿದ್ಧರಾಮಯ್ಯನವರ ಆಯವ್ಯಕ್ಕೂ ಬರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

ಇನ್ನು ಬೆಲೆ ಏರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. ನಾವೆಲ್ಲರೂ ಒಟ್ಟಿಗೆ ಚಿಂತನೆ ಮಾಡೋಣ. ಬೆಲೆ ಏರಿಕೆಯನ್ನು ನಿಯಂತ್ರಣ ಮಾಡುವುದರಲ್ಲಿ ಇವತ್ತು ನಾವ್ಯಾರೂ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿಲ್ಲ. ನಾನು ನೇರವಾಗಿ ಆಹಾರ ಧಾನ್ಯಗಳ ವಿಚಾರಕ್ಕೆ ಬರುತ್ತೇನೆ. ಇವತ್ತು ಸಾಮಾನ್ಯ ಜನ ಕೊಳ್ಳತಕ್ಕಂಥ ಆಹಾರ ಧಾನ್ಯಗಳ ಬೆಲೆ ಗಗನಕ್ಕೆ ಏರಿದ್ದು, ಅದನ್ನು ಇಳಿಸುವುದಕ್ಕೆ ನಿಮ್ಮಲ್ಲಿ ಏನಾದರೂ ಒಂದು ಪ್ರಾಮಾಣಿಕ ಚಿಂತನೆ ಇದೆಯೇ? ಇವತ್ತು ಒಂದು ಕೆ.ಜಿ. ಅಕ್ಕಿಗೆ 15 ರೂಪಾಯಿ ಇದೆ, ಒಂದು ಕೆ.ಜಿ. ರಾಗಿಗೆ ಆರು ರೂಪಾಯಿ ಇದೆ. ಒಂದು ಕೆ.ಜಿ. ಜೋಳಕ್ಕೆ 7 ರೂಪಾಯಿ ಇದೆ. ಬಡವರು ಹೇಗೆ ಈ ರೀತಿಯ ಹಣವನ್ನು ಕೊಟ್ಟು ಆಹಾರವನ್ನು ಸೇವಿಸಬೇಕು, ತೆಗೆದುಕೊಳ್ಳಬೇಕು? ಇದೇ ಪ್ರಕಾರವಾಗಿ ಎಲ್ಲ ಆಹಾರಗಳ ಬೆಲೆಗಳೂ ಆಪಾರವಾಗಿ ಗಗನಕ್ಕೆ ಏರಿವೆ. ಗಗನಕ್ಕೆ ಏರಿರತಕ್ಕಂಥ ಈ ಆಹಾರ ಪದಾರ್ಥಗಳ ಬೆಲೆಗಳನ್ನು ಇಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲ. ಇದು ಒಂದು ಕಡೆ ಆದರೆ, ಆಹಾರವನ್ನು ಕೊಂಡುಕೊಂಡು ತಿಂಡಿ ಮಾಡತಕ್ಕಂಥ ಹೋಟೆಲ್‌ನಲ್ಲಿ ಬೆಲೆ ಏನಿದೆ? ಬಹುಶಃ ನಮ್ಮಲ್ಲಿ ಅನೇಕರು ಪಂಚತಾರಾ ಹೋಟೆಲ್‌ಗಳಿಗೆ ಹೋಗುತ್ತಾರೆ. ಬಡವರ ಹೋಟೆಲ್‌ಗೆ, ಸಾಮಾನ್ಯ ಹೋಟೆಲ್‌ಗೆ ಹೋಗುವುದಿಲ್ಲ. ಆ ಹೋಟೆಲ್‌ನಲ್ಲಿ ಕನಿಷ್ಟವೆಂದರೆ ಒಂದು ಇಡ್ಲಿಗೆ 5 ರೂಪಾಯಿ, ಒಂದು ಕಾಫಿಗೆ 6 ರೂಪಾಯಿ ಇದೆ. ಪಂಚತಾರಾ ಹೋಟೆಲ್‌ಗಳ ವಿಷಯ ಬಿಡಿ. ಪಂಚತಾರಾ ಹೋಟೆಲ್‌ಗಳಲ್ಲಿ ಒಂದು ಇಡ್ಲಿಗೆ 25 ರೂಪಾಯಿ, ಒಂದು ಕಾಫಿಗೆ 25

ರೂಪಾಯಿ ಇರುತ್ತದೆ. ಆ ರೇಟನ್ನು ನೋಡಿಯೂ ನಾವು ಹಿಂದೆಮುಂದೆ ನೋಡುವುದಿಲ್ಲ. ಬಿಲ್ ಕೊಟ್ಟು ಬರುತ್ತೇವೆ. ಆದರಲ್ಲಿ ಬದಲಾವಣೆಗೆ ಹೋಗುವುದಿಲ್ಲ. ಕೆಲವು ಕಡೆ 50-60 ರೂಪಾಯಿ ಕೂಡ ಇದೆ. ಇದಕ್ಕೆ ಕಾರಣವೆಂದರೆ, ಅಲ್ಲಿ ಪಂಚತಾರಾ ವ್ಯವಸ್ಥೆ ಇರುತ್ತದೆ. ಈ ಒಂದು ಬೆಲೆ ಏರಿಕೆಯನ್ನು ತಡೆಹಿಡಿದು ನಿಲ್ಲಿಸತಕ್ಕಂಥ ಶಕ್ತಿ ನಮ್ಮಲ್ಲಿ ಇವತ್ತು ಪ್ರಾಮಾಣಿಕವಾಗಿ ಬರಲಿಲ್ಲ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎನ್ನುವ ಮಾತನ್ನು ತಮಗೆ ನಾನು ತಿಳಿಸುತ್ತಿದ್ದೇನೆ.

ಇನ್ನು ಕನ್ನಡ ಭಾಷೆಯ ಬೆಳವಣಿಗೆ ಬಗ್ಗೆ ನಿಮ್ಮಲ್ಲಿ ಸಾಕಷ್ಟು ಚಿಂತನೆ ಇಲ್ಲ. ತಮ್ಮ ರಾಜಕೀಯ ಜೀವನ ಪ್ರಾರಂಭವಾದದ್ದು, ತಮಗೆ ಅಧಿಕಾರ ದೊರೆತಿದ್ದೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದಿಂದ ಅಧ್ಯಕ್ಷರಾಗಿ ಬಂದಂಥವರು ತಾವು. ನಿಮ್ಮ ಆಯವ್ಯಯವನ್ನು ಸಂಪೂರ್ಣವಾಗಿ ನೋಡಿದರೆ, ಅದರಲ್ಲಿ ಕನ್ನಡ ಭಾಷೆಯ ಸಮಗ್ರ ಬೆಳವಣಿಗೆಗೆ ನಿಮ್ಮಲ್ಲಿ ಯಾವುದೇ ಚಿಂತೆ ಇಲ್ಲ. ಕನ್ನಡ ಭಾಷೆಯ ಬೆಳವಣಿಗೆಗೆ ನಾವು ಎಷ್ಟರಮಟ್ಟಿನ ಒತ್ತನ್ನು ಕೊಡಬೇಕಾಗಿತ್ತು, ಅದನ್ನು ಕೊಟ್ಟಿಲ್ಲ. ತಾವು ಕನ್ನಡ ಆಡಳಿತ ಭಾಷೆ ಎಂದು ಹೇಳುತ್ತಿದ್ದೀರಿ. ಕನ್ನಡ ಸಮಗ್ರವಾಗಿ ಆಡಳಿತ ಭಾಷೆಯಾಗಿಲ್ಲ. ಕರ್ನಾಟಕದಲ್ಲಿ ನಡೆಯತಕ್ಕಂಥ ಸರ್ಕಾರದ ಎಲ್ಲ ಕೆಲಸಕಾರ್ಯಗಳು ನೂರಕ್ಕೆ ನೂರು ಭಾಗ ಬರೀ ಇಂಗ್ಲೀಷಿನಲ್ಲಿ ನಡೆಯುತ್ತಿದೆ. ಇಂಗ್ಲೀಷ್ ಮಾಧ್ಯಮದ ವ್ಯವಸ್ಥೆ ಇದೆ. ಕನ್ನಡದ ಬೆಳವಣಿಗೆಯಾಗಿಲ್ಲ. ಹೊರನಾಡ ಬಗ್ಗೆ, ಗಡಿನಾಡು ಅಭಿವೃದ್ಧಿ ಬಗ್ಗೆ ಚಿಂತನೆಯ ಯಾವುದೇ ಒಂದು ಅಕ್ಷರವೂ ನಿಮ್ಮ ಆಯವ್ಯಯದಲ್ಲಿಲ್ಲ. ಇವೆಲ್ಲವನ್ನೂ ನೋಡಿದಾಗ, ನೀವು ಮೂಲಭೂತವಾಗಿ ಎಲ್ಲಿಂದು ಬೆಳೆದು ಮೇಲಕ್ಕೆ ಬಂದಿರಿ, ಆ ಏಣಿಯನ್ನು ತಳ್ಳಿದ್ದೀರಿ ಎಂದು ಅನ್ನಿಸುತ್ತದೆ. ಇದರ ಬಗ್ಗೆ ಚಿಂತನೆ ಮಾಡಬೇಕಾದುದು ತಮ್ಮ ಕರ್ತವ್ಯ ಎನ್ನುವ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ಇವತ್ತು ಹೊರನಾಡಿನಲ್ಲಿ ಕನ್ನಡಿಗರು ಎದುರಿಸುತ್ತಿರುವಂಥ ಸಮಸ್ಯೆಗಳ ಬಗ್ಗೆ ಸಮಗ್ರವಾದ ಸಮೀಕ್ಷೆಯಾಗಬೇಕು. ಹೊರನಾಡಿನಲ್ಲಿರತಕ್ಕಂಥ ಕನ್ನಡಿಗರು ಎಷ್ಟು? ಅವರ ಪರಿಸ್ಥಿತಿ ಏನು? ಆ ರಾಜ್ಯದಲ್ಲಿ ಅವರು ಪಡತಕ್ಕಂಥ ಹಿಂಸೆ ಏನು? ಅವರಿಗೆ ಸಿಗುತ್ತಿರುವಂಥ ಸಹಾಯ ಮತ್ತು ಸಹಕಾರಗಳೇನು? ಎನ್ನುವ ಬಗ್ಗೆ ಸಮಗ್ರವಾದಂಥ ಒಂದು ಸಮೀಕ್ಷೆಯಾಗಬೇಕು ಮತ್ತು ಗಡಿನಾಡು ಅಭಿವೃದ್ಧಿಯ ಬಗ್ಗೆಯೂ ತಾವು ಚಿಂತನೆ ಮಾಡಬೇಕು. ಸುಮಾರು 56 ಗಡಿನಾಡು ಪ್ರದೇಶಗಳು ನಮ್ಮ ಕರ್ನಾಟಕದಲ್ಲಿವೆ. ಈ 56 ಗಡಿ ಪ್ರದೇಶಗಳಿಗೆ ನೀವು ವರ್ಷಕ್ಕೆ ಒಂದು ಸಾರಿ 15-20 ಕೋಟಿ ರೂಪಾಯಿಗಳನ್ನು ಕೊಟ್ಟರೆ ಆಗುವುದಿಲ್ಲ. ಈ ಗಡಿನಾಡು ಪ್ರದೇಶಗಳು ಒಂದು ಹೊಸ ದಿಕ್ಕಿನಲ್ಲಿ ಬೆಳೆಯಬೇಕಾದರೆ, ಪ್ರಾಮಾಣಿಕವಾದಂಥ ಪ್ರಯತ್ನ, ಚಿಂತನೆ ನಿಮ್ಮಲ್ಲಿ ಆದಾಗ ಮಾತ್ರ ಅದು ಸಾಧ್ಯ.

ಇನ್ನು ತಾವು ಅನೇಕ ಹುದ್ದೆಗಳನ್ನು ರದ್ದು ಮಾಡುವ ಬಗ್ಗೆ ಚಿಂತನೆಯನ್ನು ಇಟ್ಟುಕೊಂಡಿದ್ದೀರಿ. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮಲ್ಲಿ

ಇಂಜಿನಿಯರ್-ಇನ್-ಚೀಫ್ ಅಂದರೆ ಪ್ರಧಾನ ಅಭಿಯಂತರರುಗಳು 9 ಜನ, ಚೀಫ್ ಇಂಜಿನಿಯರ್ 22 ಜನ, ಸೂಪರಿಂಟೆಂಡೆಂಟ್ ಇಂಜಿನಿಯರ್ 62 ಜನ, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳು 203 ಜನ ಇದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಚೀಫ್ ಇಂಜನಿಯರ್ 7, ಸೂಪರಿಂಟೆಂಡೆಂಟ್ ಇಂಜಿನಿಯರ್ 42, ಎಕ್ಸಿಕ್ಯುಟೀವ್ ಇಂಜಿನಿಯರ್ 192, ಡಿ.ಜಿ. ಮತ್ತು ಐ.ಜಿ. 1, ಡಿ.ಜಿ.ಪಿ.4, ಅಡೀಷನಲ್ ಡಿ.ಜಿ.ಪಿ. 10, ಐ.ಜಿ.ಪಿ. 27, ಡಿ.ಐ.ಜಿ.ಪಿ. 27, ಮತ್ತು ಎಸ್.ಪಿ. 49 ಜನರಿದ್ದಾರೆ. ಈಗ ಮೊದಲಿಗಿಂತ ಜನಸಂಖ್ಯೆ ಜಾಸ್ತಿ ಇರಬಹುದು, ಕೆಲಸ ಜಾಸ್ತಿ ಇರಬಹುದು, ಆದರೆ ರಾಜ್ಯ ಅಷ್ಟೇ ಇದೆ. ಈ ಪ್ರಮಾಣದ ಸಂಖ್ಯೆಯಲ್ಲಿ ಅಧಿಕಾರಿಗಳು ಬೇಕೇ ಎಂದು ನಾನು ಕೇಳುತ್ತಿದ್ದೇನೆ. ಕೆಲವು ಹುದ್ದೆಗಳನ್ನು ರದ್ದು ಮಾಡುತ್ತೇವೆ ಎಂದು ತಾವು ಹೇಳುತ್ತೀರಿ. ವಿಭಾಗಾಧಿಕಾರಿಗಳು ಅಂದರೆ ಡಿವಿಷನಲ್ ಕಮೀಷನರ್ ಹುದ್ದೆಗಳನ್ನು ರದ್ದು ಮಾಡಿ, ಅವು ಬೇಕಾಗಿಲ್ಲ. ಅವುಗಳನ್ನು ರದ್ದು ಮಾಡಿದರೆ ಒಳ್ಳೆಯದು. ಬಿ.ಡಿ.ಓ. ಹುದ್ದೆಗಳನ್ನು ರದ್ದುಮಾಡಿ, ಅವು ಬೇಕಾಗಿಲ್ಲ. ಪ್ರತಿ ತಾಲ್ಲೂಕಿಗೆ ಇಬ್ಬರು ವಿದ್ಯಾ ಇಲಾಖೆಯ ಅಧಿಕಾರಿಗಳಿದ್ದಾರೆ. ಇಬ್ಬರು ಬೇಕಾಗಿಲ್ಲ, ಒಬ್ಬರನ್ನು ಮಾಡಿ. ನನಗನ್ನಿಸುತ್ತದೆ, ಇದು ಹೆಣಭಾರ. ಬರಿಯ ಭಾರವಲ್ಲ, ಹೆಣಭಾರ. ಬದುಕಿರತಕ್ಕಂಥ ಮನುಷ್ಯನನ್ನು ಹೊರಬಹುದು, ಆದರೆ ಹೆಣ ಹೊರಲು ಆಗುವುದಿಲ್ಲ. ಹೆಣ ಹೊರುವುದು ಬಹಳ ಕಷ್ಟ. ಆದ್ದರಿಂದ ಹೆಣಭಾರ ಎಂದು ಹೇಳುತ್ತಾರೆ. ಹೆಣಭಾರವಾಗಿರತಕ್ಕಂಥ ಇಂಥ ಸಮಗ್ರ ಇಲಾಖೆಗಳನ್ನು ನೀವು ಕೂಡಲೇ ರದ್ದು ಮಾಡಿ. ಆದರಿಂದ ತೊಂದರೆಯೇನೂ ಆಗುವುದಿಲ್ಲ. ಅವರಿಗೆ ಖರ್ಚು ಮಾಡತಕ್ಕಂಥ ವ್ಯವಸ್ಥೆಯ ಬಗ್ಗೆ ನೀವು ಪ್ರಾಮಾಣಿಕವಾದಂಥ ಚಿಂತನೆ ಮಾಡಿದ ಹಾಗೆ ಆಗುತ್ತದೆ.

ಇನ್ನು ವೀರಪ್ಪನ್‌ನನ್ನು ಹಿಡಿಯಲು ಕರ್ನಾಟಕ ಸರ್ಕಾರದವರು ಇದುವರೆಗೆ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರ ಉತ್ತರ ಏನು ಬಂತು? ಹಿಂದೆ ನಿಮ್ಮ ಸರ್ಕಾರ ಎಲ್ಲಿಗ ಹೋಗಿ ತಲುಪಿತ್ತು ಎಂದರೆ, ವೀರಪ್ಪನ್ ವಿಧಾನಸೌಧಕ್ಕೇ ಬರುತ್ತಾನೆ ಎನ್ನುವ ರೀತಿ ಇತ್ತು. ತಮಿಳುನಾಡಿನ ಮುಖ್ಯಮಂತ್ರಿಗಳು ಅವರ ಕಾರಿನಲ್ಲಿ ವೀರಪ್ಪನ್‌ನನ್ನು ನಮ್ಮ ರಾಜ್ಯಕ್ಕೆ ಕರೆದುಕೊಂಡು ಬಂದು ಬಿಡುತ್ತಾರೆ ಎನ್ನುವ ಹಾಗೆ, ಆಗಿನ ಅರಣ್ಯ ಇಲಾಖೆಯ ಸಚಿವರಾದ ನಾಗಮಾರಪಲ್ಲಿಯವರ ನಾಂಚಾರಹಳ್ಳಿಯಲ್ಲಿ ಒಂದು ದೊಡ್ಡದಾದ ಸನ್ಮಾನ ಸಮಾರಂಭಕ್ಕೆ ವ್ಯವಸ್ಥೆ ಮಾಡಿತ್ತು. ವೀರಪ್ಪನ್ ಸಂಪೂರ್ಣವಾಗಿ ಒಪ್ಪಿಕೊಂಡು ಬಿಡುತ್ತಾನೆ, ಇನ್ನು ಮುಂದೆ ನಾನು ಯಾವುದನ್ನೂ ಮಾಡುವುದಿಲ್ಲ, ನನಗೆ ಜಮೀನು ಕೊಟ್ಟುಬಿಡಿ, ನನ್ನ ಮೇಲೆ ಹಾಕಿರತಕ್ಕಂಥ ಕೇಸುಗಳನ್ನು ತೆಗೆದು ಹಾಕಿ ಎಂದು ಅವನು ಕೇಳುತ್ತಾನೆ ಎಂದು ಇವರು ಪಂಚತಾರಾ ಹೋಟೆಲ್‌ನಲ್ಲಿ ಗೋಷ್ಠವಾಗಿ ಮಾತನಾಡಿದ್ದು, ಹೊರಗಡೆ ಮಾತನಾಡಿದ್ದು ಎಲ್ಲವನ್ನೂ ನೋಡಿ, ಇನ್ನೇನು ವೀರಪ್ಪನ್ ಬರಬಹುದು ಎಂದು ವಿಧಾನಸೌಧದ ಮುಂದೆ ಕರುಣಾನಿಧಿಯವರನ್ನು ಕರೆಸುವುದಕ್ಕೆ ಒಂದು ದೊಡ್ಡ ಸಮಾರಂಭವನ್ನು ವ್ಯವಸ್ಥೆ ಮಾಡಿಕೊಂಡಿದ್ದರು. ವೀರಪ್ಪನ್‌ನನ್ನು ಹಿಡಿಯಲು 40 ಕೋಟಿ ರೂಪಾಯಿಗಳು ಖರ್ಚಾಗಿರತಕ್ಕಂಥಾದ್ದು ಆಗಿದೆ. ಆಕ 250 ಆನೆಗಳನ್ನು

ಕೊಂದಿದ್ದಾನೆ, ಉತ್ತಮವಾದಂಥ 180 ಜನ ಅಧಿಕಾರಿಗಳು ಆತನಿಂದ ಸತ್ತಿದ್ದಾರೆ. ಈಗ ನಿಮ್ಮ ಪ್ರಯತ್ನ ಏನೂ ಇಲ್ಲ. ಅದರ ಬಗ್ಗೆ ನೀವು ಎಲ್ಲಿಯೂ ಹೇಳಿಲ್ಲ. ವೀರಪ್ಪನ್‌ನನ್ನು ಹಿಡಿಯುತ್ತೇವೆ, ವೀರಪ್ಪನ್‌ನನ್ನು ಬಿಡುತ್ತೇವೆ ಎಂದು ವೀರಪ್ಪನ್ ಬಗ್ಗೆ ಏನಾಗಿದೆ ಎನ್ನುವ ಬಗ್ಗೆ ಎಲ್ಲೂ, ಏನೂ ಇಲ್ಲ. ಇದುವರೆಗಾದರೂ ನಾವು ವೀರಪ್ಪನ್‌ನನ್ನು ಹಿಡಿಯುತ್ತೇವೆ, ಮಾಡುತ್ತೇವೆ, ಬಿಡುತ್ತೇವೆ ಎನ್ನುವುದು ಸುದ್ದಿಯಲ್ಲಾದರೂ ಇತ್ತು. ಆದರೆ ಇವತ್ತು ಆ ಪ್ರಶ್ನೆ ಇಲ್ಲವೇ ಇಲ್ಲ. ಅಂದರೆ ಪೋಲೀಸ್ ಆಡಳಿತ ನಿಮ್ಮ ಸರ್ಕಾರದಲ್ಲಿ ಇದೆಯೇ ಎನ್ನುತಕ್ಕಂಥಾದ್ದನ್ನು ನೇರವಾಗಿ ನಾನು ತಮಗೆ ಪ್ರಶ್ನೆ ಮಾಡುತ್ತೇನೆ. ನಿಮ್ಮ ಸರ್ಕಾರದ ನೀತಿ ಏನು? ಇವತ್ತು ತಮಗೆ ಹೇಳುತ್ತಿದ್ದೇನೆ, 1996-97, 1997-98 ಮತ್ತು 1998-99 ರವರೆಗೆ ವರದಿಯಾಗಿರುವ ದರೋಡೆ, ಸುಲಿಗೆ, ಕೊಲೆ ಹಾಗೂ ಲೂಟಿಗಳು ಎಷ್ಟೆಂದರೆ, 1996ರಲ್ಲಿ 221 ದರೋಡೆ, 808 ಸುಲಿಗೆ, 1584 ಕೊಲೆ, 7,024 ಲೂಟಿಗಳಾಗಿವೆ. 1998-99ರಲ್ಲಿ 6,126 ಲೂಟಿಗಳು, 1812 ಕೊಲೆ, 1,000 ಸುಲಿಗೆಗಳಾಗಿವೆ. ಈ ರೀತಿ ಪ್ರತಿವರ್ಷ ಇವು ಹೆಚ್ಚಾಗುತ್ತಿವೆ. ನಿಮ್ಮ ಕಾನೂನು ಸುವ್ಯವಸ್ಥೆಯಿಂದ ಇವು ಎಲ್ಲಾದರೂ ಒಂದು ಕಡೆ ಕಡಿಮೆ ಆಗುವುದು ಇದೆಯೇ ಎನ್ನುವುದನ್ನು ನೀವೇ ಹೇಳಿ. ಪ್ರತಿನಿತ್ಯ ಪತ್ರಿಕೆಗಳಲ್ಲಿ ಒಂದು ಪುಟ ಇದಕ್ಕೇ ಮೀಸಲಾಗಿದೆ. ಕೊಲೆ, ಸುಲಿಗೆ, ದರೋಡೆ, ಚೈನ್ ಕಿತ್ತರು, ಕತ್ತು ಹಿಸುಕಿದರು, ಮಕ್ಕಳನ್ನು ಎತ್ತಿಕೊಂಡು ಹೋದರು, ಬರೀ ಇವೇ ಇರುತ್ತದೆ. ಇವು ವರದಿಯಾಗಿರುವ ಪ್ರಕರಣಗಳು ವರದಿಯಾಗದಿರುವುದು ಎಷ್ಟೋ. ಇವುಗಳನ್ನು ಕಂಡು ಹಿಡಿಯುವುದಕ್ಕೆ, ತಡೆ ಉಂಟು ಮಾಡುವುದಕ್ಕೆ ಒಂದು ಪ್ರಾಮಾಣಿಕವಾದ ಪ್ರಯತ್ನ ಏಕೆ ಆಗಲಿಲ್ಲ? ಜನ ಭಯ ಭೀತಿಯಿಂದ ಓಡಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನತಕ್ಕಂಥಾದ್ದನ್ನು ತಮಗೆ ತಿಳಿಸುತ್ತಿದ್ದೇನೆ. ಇದು ಪ್ರತಿನಿತ್ಯ ಅಮ್ಯೋತ್ತರ, ಮಂತ್ರವನ್ನು ಹೇಳಿದ ಹಾಗೆ ಆಗಿದೆ. ದರೋಡೆ ಎಷ್ಟಾಗಿದೆ, ಸುಲಿಗೆ ಎಷ್ಟಾಗಿದೆ, ಕೊಲೆ ಎಷ್ಟಾಗಿದೆ ಎನ್ನುವುದು ಈ ಸಭೆಯಲ್ಲಿ ಅಮ್ಯೋತ್ತರವಾಗಿದೆಯೇ ಹೊರತು ಇದರಿಂದ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ, ವೀರಪ್ಪನ್‌ನನ್ನು ಹಿಡಿಯುವಲ್ಲಿ ಸರ್ಕಾರಕ್ಕೆ ಇದುವರೆಗೆ ಆಗಿರುವ ಸಮಗ್ರ ಖರ್ಚು ಎಷ್ಟು, ಪ್ರಾಣಗಳು ನಾಶವಾಗಿರತಕ್ಕಂಥಾದ್ದು ಎಷ್ಟು, ಆ ಪ್ರದೇಶ ಹಾಳಾಗಿರುವುದು ಎಷ್ಟು ಇವೆಲ್ಲಕ್ಕೂ ತಾವು ಸ್ಪಷ್ಟವಾಗಿ ಉತ್ತರ ಕೊಡಬೇಕು ಎಂದು ತಮಗೆ ನಾನು ಕೇಳುತ್ತಿದ್ದೇನೆ. ಪ್ರತೀ ಲೋಕಸಭಾ ಸದಸ್ಯರಿಗೆ ಕೇಂದ್ರ

11.30 ಎ.ಎಂ.

ಸರ್ಕಾರದಿಂದ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಪ್ರತೀ ಕ್ಷೇತ್ರಕ್ಕೂ ರಾಜ್ಯ ಸರ್ಕಾರದಿಂದ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕು. ಶಾಸಕರು ಅವರವರ ಕ್ಷೇತ್ರಗಳಲ್ಲಿ ಸದಸ್ಯರಾಗಿ ಉಳಿದಿಲ್ಲ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮಪಂಚಾಯತ್ ಸದಸ್ಯರ ಮುಂದೆ ಇವರು ಗುಲಾಮರಾಗಿದ್ದಾರೆ. ಇವರಿಗೆ ಒಂದು ಸಣ್ಣ ಕೆಲಸ ಮಾಡುವುದಕ್ಕೂ ಅಧಿಕಾರ ಇಲ್ಲ. ಮುಂದೆ ಚುನಾವಣೆ

ಕೂಡ ಬರುತ್ತಿದೆ. ಆದ್ದರಿಂದ ಇವತ್ತು ಆಯವ್ಯಯದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ಒಂದು ಕೋಟಿ ರೂಪಾಯಿಗಳನ್ನು ವಿವೇಚನಾ ಅನುದಾನವನ್ನಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಇದನ್ನು ತಾವು ಮಾಡಿಯೇ ಮಾಡುತ್ತೀರಿ ಎನ್ನತಕ್ಕಂಥ ಆಸೆಯನ್ನು ಇಟ್ಟುಕೊಂಡಿದ್ದೇನೆ. ಆ ಆಸೆಗೆ ಭಂಗ ತರತಕ್ಕಂಥ ಕೆಲಸವನ್ನು ಮಾಡುವುದಕ್ಕೆ ತಾವು ಹೋಗಬಾರದೆಂದು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ವಿನಂತಿಸುತ್ತಿದ್ದೇನೆ. ಒಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗದಿದ್ದರೆ ರಾಜಿ ಮಾಡಿಕೊಂಡು ಸ್ವಲ್ಪ ಹೆಚ್ಚು ಕಡಿಮೆ ಮಾಡಿ 50 ಲಕ್ಷ ರೂಪಾಯಿಗಳನ್ನಾದರೂ ತಾವು ಕೊಡಲೇಬೇಕು. ಕೊಡಲಿಲ್ಲವೆಂದರೆ ಚುನಾವಣೆಗೆ ಯಾವುದೇ ಪಕ್ಷದವರು ಅವರವರ ಕ್ಷೇತ್ರಕ್ಕೆ ಹೋಗಬೇಕಾದರೆ ಅಪಾಯವಿದೆ, ತೊಂದರೆಯಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಕಬಿನಿ ಎರಡನೇ ಹಂತದ ಬಗ್ಗೆ ಹೇಳುವುದಾದರೆ, ಆ ಕಾಲದಲ್ಲಿ ಅದನ್ನು ಶ್ರೀರಾಮಕೃಷ್ಣ ಹೆಗಡೆಯವರು ಉದ್ಘಾಟನೆ ಮಾಡಿದರು. ಕರ್ನಾಟಕ ಪ್ರಾಧಿಕಾರ ಆಗಿಹೋಯಿತು, ನಾವು ಹೆಚ್ಚಿನ ಜಮೀನಿಗೆ ಹೆಚ್ಚಿಕ್ಕು ನೀರಾವರಿ ಮಾಡುವುದಕ್ಕೆ ಎಲ್ಲಿಯೂ ಅಡ್ಡಿಆತಂಕಗಳಿಲ್ಲ. ಎಂದು ನಮ್ಮ ನೀರಾವರಿ ಸಚಿವರು ಹೇಳಿದ್ದಾರೆ. ಕಬಿನಿ ಎರಡನೇ 2ನೇ ಹಂತದಿಂದ ಅದರ ಸುತ್ತಮುತ್ತ ಇರತಕ್ಕಂಥ ಲಕ್ಷಾಂತರ ಜನರಿಗೆ ಅಂದರೆ ನಂಜನಗೂಡು, ಚಾಮರಾಜನಗರ, ಸಂತೆಮಾರನಹಳ್ಳಿ, ಯಳಂದೂರು ಈ ಪ್ರದೇಶಗಳಿಗೆ ಸಂಪೂರ್ಣವಾಗಿ ನೀರಾವರಿ ಆಗತಕ್ಕಂಥ ವ್ಯವಸ್ಥೆ ಆಗುತ್ತದೆ. ಇವತ್ತಿನ ದಿವಸ ಇದನ್ನೇ ತಾವು ಘೋಷಣೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದ ಮಂತ್ರಿಗಳು ವಿದೇಶಗಳಿಗೆ ಹೋಗಿರಬಹುತಕ್ಕಂಥ ಪರಿಪಾಠದ ಬಗ್ಗೆ ಹೇಳುವುದಾದರೆ -1995ರಿಂದ 1998ರವರೆಗೆ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ, ಶ್ರೀ ದೇಶಪಾಂಡೆ ಸಹಿತ ಸುಮಾರು 46 ಜನ ಮಂತ್ರಿಗಳು ವಿದೇಶಗಳಿಗೆ ಹೋಗಿ ಬಂದಿದ್ದಾರೆ. ಅವರು ವಿದೇಶಗಳಿಗೆ ಹೋಗಬೇಕಾದರೆ - 'ವಿದೇಶಕ್ಕೆ ಹೋಗಿ ಭಾರಿ ತಂತ್ರಜ್ಞಾನ, ವಿಜ್ಞಾನ ತಲೆಯಲ್ಲಿ ತರುತ್ತಾರೆ, ಇದರಿಂದ ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ' ಎಂದು ಸಂಬಂಧಪಟ್ಟ ಕಡತದಲ್ಲಿ ಟಿಪ್ಪಣಿ ಬರೆಯುತ್ತಾರೆ. ಆದರೆ ವಿದೇಶಕ್ಕೆ ಹೋಗಿ ಬಂದವರಲ್ಲಿ ಕೆಲವರು ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಕೆಲವರು ಬೇರೆ ಕಡೆಗೆ ಹೊರಟುಹೋಗಿದ್ದಾರೆ. ಇದರಲ್ಲಿ ಕೆಲವು ಮಂತ್ರಿಗಳು ನಾಲ್ಕಾರಿಂದ ಐದು ಸಲ ವಿದೇಶಕ್ಕೆ ಹೋಗಿ ಬಂದಿದ್ದಾರೆ. ಶ್ರೀ ದೇಶಪಾಂಡೆ ಅವರು ನಾಲ್ಕು ಸಲ ಮತ್ತು ಶ್ರೀ ರೋಷನ್ ಬೇಗ್ ಅವರು ಐದು ಸಲ ವಿದೇಶಕ್ಕೆ ಹೋಗಿದ್ದರು. ಶ್ರೀ ಜಯಕುಮಾರ್ ಅವರು ವಿದೇಶಕ್ಕೆ ಹೋಗಿಬಂದು ತಕ್ಷಣ ರಾಜೀನಾಮೆ ಕೊಟ್ಟಿದ್ದಾರೆ. ಇವರಿಂದ ರಾಜ್ಯಕ್ಕೆ ಯಾವ ಅನುಕೂಲವಾಯಿತು? ಇವರೆಲ್ಲಾ ಹೋಗಿ ಬರುವುದಕ್ಕೆ ಹಣ ಯಾರು ಕೊಟ್ಟರು? ಇದೆಲ್ಲಾ ಸಾರ್ವಜನಿಕ ಹಣ ಅಲ್ಲವೇ? ಶ್ರೀ ದೇಶಪಾಂಡೆ ಭಾರೀ ಮತ್ತು ಮಧ್ಯಮ ವರ್ಗದ ಕೈಗಾರಿಕೆ ಸಚಿವರು ಇವರು ಸ್ವಿಟ್ಜರ್‌ಲೆಂಡಿನ ದಾವೋಸ್‌ನಲ್ಲಿ ದಿನಾಂಕ 28 ಮತ್ತು 29-1-95 ರಂದು ನಡೆದ ವಿಶ್ವ ಆರ್ಥಿಕ ವೇದಿಕೆಯ ಮಹಾಸಭೆಯಲ್ಲಿ ಭಾಗವಹಿಸಿದ್ದರು.

ಹಾಗೂ ಇಸ್ರೇಲ್ ದೇಶವು ಆಧುನಿಕ ವ್ಯವಸಾಯ ಪದ್ಧತಿಯನ್ನು ಅನುಸರಿಸಿತ್ತು. ಈ ಪದ್ಧತಿಯನ್ನು ಅಧ್ಯಯಿಸಲು ದಿನಾಂಕ 3-1-1995ರಿಂದ 6-2-1995 ರವರೆಗೆ ಭೇಟಿ ನೀಡಿದ್ದರು. ಇವರ ಅಧ್ಯಯನ ಯಾರಿಗೋಸ್ಕರ? ಯಾವ ಪುರುಷಾರ್ಥಕ್ಕಾಗಿ ಸಾರ್ವಜನಿಕರ ಹಣ ಖರ್ಚು ಮಾಡಿ ವಿದೇಶಕ್ಕೆ ಕಳುಹಿಸಿದಿರಿ? ಈಗ ಇವರು ಸರ್ಕಾರದ ಆಡಳಿತದಲ್ಲಿ ಇಲ್ಲ. ಹೀಗೆ ವಿದೇಶಕ್ಕೆ ಹೋಗಿರತಕ್ಕಂಥ 46 ಜನ ಮಂತ್ರಿಗಳಲ್ಲಿ ಸುಮಾರು 26 ಜನ ಹೋಗಿಬಂದಿದ್ದಾರೆ, ಅದರಲ್ಲಿ ಕೆಲವರು ರಾಜೀನಾಮೆ ಕೊಟ್ಟಿದ್ದಾರೆ. ಇದರಿಂದ ಯಾರಿಗೆ ಅನುಕೂಲವಾಗುತ್ತದೆ? ರಾಜ್ಯದ ಜನರಿಗೆ ತಂತ್ರಜ್ಞಾನ, ವಿಜ್ಞಾನದ ಅನುಕೂಲವಾಯಿತೇ? ಹಾಗೆಯೇ 1995ರಿಂದ 1998ರವರೆಗೆ ಯಾವ ಯಾವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿ ನಮ್ಮ ರಾಜ್ಯದಿಂದ ವಿದೇಶಕ್ಕೆ ಹೋಗಿದ್ದಾರೆ? ಹೋಗಿದ್ದರೆ ಯಾವ ಯಾವ ಕಾರಣಕ್ಕೆ ವಿದೇಶಕ್ಕೆ ಹೋಗಿದ್ದಾರೆ? ಅವರು ವಿದೇಶಕ್ಕೆ ಹೋಗಿ ಬಂದಮೇಲೆ ರಾಜ್ಯದ ಜನರಿಗೆ ಏನೇನು ಅನುಕೂಲಗಳನ್ನು ಮಾಡಿದ್ದಾರೆ? ಎನ್ನುವುದರ ಬಗ್ಗೆ ಒಂದು ಶ್ವೇತಪತ್ರವನ್ನು ಮಂಡಿಸಬೇಕು. ಅವರಿಂದ ಏನೂ ಅನುಕೂಲವಾಗಿಲ್ಲವೆಂದರೆ ನೇರವಾಗಿ ಅವರು ಹೋಗಿಬಂದ ಖರ್ಚನ್ನು ವಸೂಲಿ ಮಾಡಬೇಕು. ಅವರಿಂದ ಸರ್ಕಾರಕ್ಕೆ ಒಂದು ಕವಡೆಯಷ್ಟೂ ಅನುಕೂಲವಾಗಿಲ್ಲವೆಂದು ನನ್ನ ವಾದ. ಅನುಕೂಲವಾಗಿದೆ ಎನ್ನುವುದಾದರೆ ಶ್ವೇತಪತ್ರದಲ್ಲಿ ಹೇಳಿ. ರಾಜಕಾರಣಿಗಳು ವಿದೇಶಕ್ಕೆ ಹೋಗಿಬಂದರೆ ಭಾರೀ ಭಾಜಾಬಜಂತ್ರಿ ಆಗುತ್ತದೆ, ಈ ಅಧಿಕಾರಿ ಮಹಾನುಭಾವರು ವಿದೇಶಕ್ಕೆ ಸರ್ಕಾರಿ ಹಣದಲ್ಲಿ ಹೋಗಿ ಬಂದರೆ ಒಬ್ಬರಿಗೂ ಗೊತ್ತಾಗುವುದಿಲ್ಲ. ಇಂಥ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಇದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಇತ್ತೀಚಿನ ದಿನಗಳಲ್ಲಿ ಕನ್ನಡದ ಪ್ರಶ್ನೆ ಬಂದಾಗ ಕನ್ನಡ ಚಿತ್ರಗಳಿಗೆ ಸಹಾಯಧನ ಕೊಡುವ ವಿಚಾರದಲ್ಲಿ ಚಲನಚಿತ್ರ ಮಂಡಳಿಯವರು ಸತ್ಯಾಗ್ರಹ ಮಾಡಬೇಕು ಎನ್ನತಕ್ಕಂಥ ಮಟ್ಟಕ್ಕೆ ಹೋಗಿದ್ದಾರೆ. ಕರ್ನಾಟಕದಲ್ಲಿಯೇ ಒಂದು ಒಳ್ಳೆಯ ವಾತಾವರಣದಲ್ಲಿ ಕನ್ನಡ ಚಿತ್ರದ ಬೆಳವಣಿಗೆ ಆಗಲಿ ಎಂದು ಶ್ರೀರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಶ್ರೀಮಾನ್ ನಾಣಯ್ಯನವರು ವಾರ್ತಾ ಇಲಾಖೆಯ ಸಚಿವರು ಆಗಿದ್ದರು ಆ ಸಂದರ್ಭದಲ್ಲಿ ಸಹಾಯಧನವನ್ನು ಕೊಡುವುದಕ್ಕೆ ಪ್ರಾರಂಭಮಾಡಿದರು. ಬಹುಶಃ ತಮಿಳುನಾಡಿನಲ್ಲಿರತಕ್ಕಂಥ ಕನ್ನಡ ಚಲನಚಿತ್ರ ಕೈಗಾರಿಕೆ ಕರ್ನಾಟಕಕ್ಕೆ ಬರಬೇಕು ಎನ್ನತಕ್ಕಂಥ ಒಂದೇ ಒಂದು ಉದ್ದೇಶಕ್ಕಾಗಿ ಸಹಾಯಧನವನ್ನು ಕೊಡುವುದಕ್ಕೆ ಹೊರಟಿದ್ದಾರೆ ಹೊರತು ಇದು ಒಳ್ಳೆಯ ಚಿತ್ರ ಇದು ಕೆಟ್ಟ ಚಿತ್ರ ಎನ್ನತಕ್ಕಂಥ ಪ್ರಶ್ನೆ ಅಲ್ಲ ಎಂದು ನನಗನ್ನಿಸುತ್ತದೆ. ಹೀಗೆ ಸಹಾಯಧನವನ್ನು ಕೊಡುತ್ತಾ ಬಂದು ಈಗ ಒಳ್ಳೆಯ ಚಿತ್ರ ಯಾವುದು, ಕೆಟ್ಟ ಚಲನಚಿತ್ರ ಯಾವುದು ಎನ್ನುವುದನ್ನು ನಿರ್ಧರಿಸಲು ಒಂದು ಸಮಿತಿ ಮಾಡಿ ಆ ಸಮಿತಿ ವರದಿ ಕೊಟ್ಟ ನಂತರ ಆ ಚಲನಚಿತ್ರಕ್ಕೆ ಸರ್ಕಾರದಿಂದ 20 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿರುವುದನ್ನು ನಾನು ಒಂದು ಹಂತದಲ್ಲಿ ಸ್ವಾಗತ ಮಾಡುತ್ತೇನೆ. ಆದರೆ ಎಲ್ಲಾ ಚಿತ್ರಗಳು ಸಾರಾಸಗಟಾಗಿ ಬರಲಿ ಅದರಲ್ಲಿ ಒಳ್ಳೆಯ ಚಿತ್ರವನ್ನು ಆಯ್ಕೆ ಮಾಡಿಕೊಂಡು ಅದಕ್ಕೆ 20 ಲಕ್ಷ ಅಥವಾ 25 ಲಕ್ಷ ರೂಪಾಯಿಗಳನ್ನು

ಕೊಡತಕ್ಕಂಥ ವ್ಯವಸ್ಥೆ ಮಾಡಿ ಎಲ್ಲಾ ಚಿತ್ರಗಳಿಗೂ ಸಹಾಯಧನವನ್ನು ಕೊಡತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇರಬೇಕು ಎಂದು ನನ್ನ ಪ್ರತಿಪಾದನೆ ನಮ್ಮಲ್ಲಿ ಕೆಟ್ಟ ಚಿತ್ರಗಳು ಕೂಡ ಬರುತ್ತಿವೆ. ಇದು ನಿಜ. ಕನ್ನಡ ಚಲನಚಿತ್ರರಂಗಕ್ಕೆ ಅಪಾರವಾದಂಥ ಹೋರಾಟ ಮಾಡಿ ಕೆಲಸ ಮಾಡಿರತಕ್ಕಂಥ ಮನುಷ್ಯ ನಾನು. ಕನ್ನಡ ಚಿತ್ರ ಉಳಿಯಬೇಕೆಂದು ಹೋರಾಟ ಮಾಡಿ ಅನೇಕ ಸಲ ಜೈಲಿಗೆ ಹೋಗಿದ್ದೇನೆ. ಅಲ್ಲಿ ಪೋಲೀಸರ್ ಬೂಟ್ಸ್ ಏಟು ತಿಂದಿದ್ದೇನೆ. ಒಂದು ಕಾಲದಲ್ಲಿ ನಮ್ಮ ಕನ್ನಡ ಚಿತ್ರಗಳು ವಿಶ್ವದ ಮಾರುಕಟ್ಟೆಯಲ್ಲಿ ಅತ್ಯಂತ ಎತ್ತರವಾಗಿ ಬೆಳೆದಂಥವು ಉಂಟು. ನಾನು ನೋಡಿದ ಕೊನೆಯ ಚಿತ್ರ 'ರಂಗನಾಯಕಿ' ಇದು ಪುಟ್ಟಣ್ಣ ಕಣಗಾಲ್ ಅವರು ನಿರ್ದೇಶಿಸಿದ ಚಿತ್ರ. ಅದರ ಸಾಹಿತ್ಯ ಎಷ್ಟೊಂದು ಶಕ್ತಿಯುತವಾಗಿದೆ ಎಂಬುದನ್ನು ಕೇಳಿ ಆನಂದಿಸಿದವರಿಗೆ ಮಾತ್ರ ತಿಳಿಯುತ್ತದೆ. ಕು.ರಾ. ಸೀತರಾಮ ಶಾಸ್ತ್ರಿಗಳು 'ರಾಮನ ಅವತಾರ ರಘುಕುಲ ಸೋಮನ ಅವತಾರ' ಎಂದು ಇಡೀ ಸಮಗ್ರ ರಾಮಾಯಣವನ್ನು ಒಂದು ಕವಿತೆಯಲ್ಲಿ ತರುತ್ತಾರೆ. ಆದರೆ ಇತ್ತೀಚಿನ ಚಿತ್ರಗಳಲ್ಲಿ ಸಾಹಿತ್ಯ, ಕನ್ನಡ ಶಬ್ದಗಳು ಯಾವುದೂ ಸರಿಯಿಲ್ಲ. ಉದಾಹರಣೆಗೆ ಹೇಳುವುದಾದರೆ- 'ಚಕ್ಕೋತ ಚಕ್ಕೋತ' ಎಂದು ಒಂದು ಹಾಡು ಇದೆ. 'ಚಕ್ಕೋತ ಚಕ್ಕೋತ' ಎಂದು ರೈಲ್ವೆಸ್ಟೇಷನ್‌ನಲ್ಲಿ ಕುಣಿಯುತ್ತಾರೆ. ಅಲ್ಲಿಂದ 'ಚಕ್ಕೋತ ಚಕ್ಕೋತ' ಎಂದು ಕುಣಿಯುತ್ತಾ ಬಸ್ ಸ್ಟಾಂಡ್‌ಗೆ ಬರುತ್ತಾಳೆ. ಅಲ್ಲಿಂದ 'ಚಕ್ಕೋತ ಚಕ್ಕೋತ' ಎಂದು ಹಾಡುತ್ತಾ ಕೆಂಪೇಗೌಡ ಸರ್ಕಲ್‌ಗೆ ಬರುತ್ತಾಳೆ. ಅಲ್ಲಿಂದ ಚಕ್ಕೋತ ಚಕ್ಕೋತ ಎಂದು ಹಾಡುತ್ತಾ ಬಳೆಪೇಟೆಗೆ ನಂತರ ಚಕ್ಕೋತ ಚಕ್ಕೋತ ಎಂದು ಹಾಡುತ್ತಾ ವಿಧಾನಸೌಧದ ಮುಂದಕ್ಕೆ ಬರುತ್ತಾಳೆ. ಅಲ್ಲಿ ಕೂಡ ಚಕ್ಕೋತಾ ಚಕ್ಕೋತಾ ಎಂದು ಹಾಡುತ್ತಾಳೆ. ಮನೆ ಹಾಳಾಗ, ಆ ಹಾಡಿನಲ್ಲಿ ಕನ್ನಡ ಶಬ್ದ ಇಲ್ಲ, ಕರ್ನಾಟಕದ ಇತಿಹಾಸ ಇಲ್ಲ. ಅದು ಏಕೆ ಚಕ್ಕೋತಾ ಎಂದು ಹಾಡಬೇಕು? ಹುಣಸೆಹಣ್ಣು ಎಂದು ಬರೆಯಲಿ, ಬೇವಿನಹಣ್ಣು, ಕಿತ್ತಲೆಹಣ್ಣು ಎಂದು ಬರೆಯಲಿ. ಹಣ್ಣಿನ ಹೆಸರು ಹೇಳಿಕೊಂಡು ಅಲ್ಲಿ ಕುಣಿಯುತ್ತ ಮಾಡತಕ್ಕಂಥ ವ್ಯವಸ್ಥೆ ಏನು ಇದೆ ಇದು ಸರಿಯಿಲ್ಲ. ಹಾಗೆಯೇ ಇನ್ನೊಂದು ಇತ್ತೀಚಿನ ಕನ್ನಡ ಚಿತ್ರದ ಹಾಡು 'ಬಂತು ಬಂತು ಟೀನೇಜು'. ರಮ್ಯತೆ, ಸಂಗೀತದ ಹಾಡು. ನಿನ್ನ ಮೈ ಎಂದು ಹೇಳುವುದು, ಇದೊಂದು ಹಾಡು. ಈ ರಂಭೆ ಅಂದ ಕಂಡ ಮೇಲೆ, ಇದೊಂದು ಹಾಡು. ಮುಂದಕ್ಕೇನಿಲ್ಲ. ಡಿಂಗ್ ಡಾಂಗೆ ಡಿಂಗ್ ಇದು ಕನ್ನಡದ ಹಾಡು. ಓ ಪ್ಯಾರಿ ಲೈಲಾ, ಕೊನೆಗೆ ಇದೊಂದು ಹಾಡು.

ಶ್ರೀ ಹೆಚ್.ಎನ್. ನಂಜೇಗೌಡ :— ವಾಟಾಳ್‌ರವರ ಅಭಿರುಚಿ ಚೆನ್ನಾಗಿದೆ. ಬಹಳ ಒಳ್ಳೆಯ ಹಾಡುಗಳನ್ನು ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಡಮಾಲ್, ಡಮಾಲ್ ಇದು ಕನ್ನಡದ ಹಾಡು. ನಮ್ಮ ಹಣೆಬರಹ. ಒಳಗೆ ಸೇರಿದರೆ ಗುಂಡು, ಹುಡುಗಿ ಆಗುವಳು ಗಂಡು, ಇದಕ್ಕೆಲ್ಲಾ ಸಂಗೀತ ಕೊಟ್ಟು, ಕುಣಿದಿದ್ದೇ ಕುಣಿದದ್ದು. ಇವರ ಹಣೆಬರಹ. ಕೂಗೋ ಕೋಳಿಗೆ ಖಾರ ಮಸಾಲೆ, ಇದನ್ನೇ 20 ಸಾರಿ ಹೇಳುವುದು. ಆ ಆಸೆ ತುಟಿಯಲ್ಲಿ, ಇದೊಂದು

ಹಾಡು. ಈ ನಿಂಬೆಹಣ್ಣಿನಂಥ ಹುಡುಗಿ ಬಂದಳು, ಇದೊಂದು ಹಾಡು. ಇವೆಲ್ಲಾ ಹಾಡುಗಳು. ಪ್ರಕಾಶ್‌ರವರೆ ತಮ್ಮ ಗಮನಕ್ಕೆ ಇದನ್ನೆಲ್ಲಾ ತರುತ್ತಿದ್ದೇನೆ. ಇದರ ಬಗ್ಗೆ ನೀವೆಲ್ಲಾ ಅದ್ಭುತವಾಗಿ ಕೆಲಸ ಮಾಡಿದವರು. ಕೊನೆಯಲ್ಲಿ ಚಕ್ಕೋತ ಹಾಕುತ್ತೇನೆ. ಇನ್ನು ಸುಂದರವಾಗಿ ಬರೆದಿರುವವರು, ಶ್ರೀಗಂಧದನಾಡಿನ ತಂಗಾಳಿಯಂತೆ, ಕಣಗಾಲ್ ಪ್ರಭಾಕರ ಶಾಸ್ತ್ರಿ, ಗಂಡು ಸಾಹಿತಿ. ಒಲವೇ ಜೀವನ ಸಾಕ್ಷಾತ್ಕಾರ, ಚಿತ್ರದಲ್ಲಿ ಎಂಥೆಂಥ ಹಾಡುಗಳನ್ನು ಬರೆದಿದ್ದಾರೆ. ಮಕ್ಕಳ ಚಿತ್ರಗಳು, ಐತಿಹಾಸಿಕ ಚಿತ್ರಗಳು, ಜಾನಪದ ಚಿತ್ರಗಳು ನಮ್ಮಲ್ಲಿ ಕಣ್ಮರೆಯಾಗಿವೆ. ಇದರ ಬಗ್ಗೆ ನಮ್ಮಲ್ಲಿ ಪೌರಾಣಿಕ ಚಿತ್ರಗಳಿಲ್ಲ. ಐತಿಹಾಸಿಕ, ಚಾರಿತ್ರಿಕ ಚಿತ್ರಗಳಿಲ್ಲ. ಈ ವ್ಯವಸ್ಥೆಗೆ ಕನ್ನಡ ಚಿತ್ರಗಳು ಏಕಿಷ್ಟು ಕಟ್ಟಿರುವುದೆಂದರೆ, ಡಬ್ಬಿಂಗ್‌ನಿಂದಾಗಿ. ತಮಿಳುನಾಡಿನಲ್ಲಿ ತೆಗೆದ ಚಿತ್ರಗಳನ್ನು ನೇರವಾಗಿ ತಂದು ಇಲ್ಲಿ ಡಬ್ಬಿಂಗ್ ಮಾಡುವುದು. ಅದಕ್ಕೆ ಬೇರೆ ಕತೆಯೇ ಇಲ್ಲ. ನಮ್ಮಲ್ಲಿರುವ ಕತೆಗೆ, ಸಾಹಿತ್ಯಕ್ಕೆ, ಸಂಭಾಷಣೆಗೆ, ನಿರ್ದೇಶನಕ್ಕೆ ಶ್ರೀಮಂತಿಕೆ ಇದೆ. ಇಡೀ ಪ್ರಪಂಚದಲ್ಲಿ ಅತ್ಯಂತ ಎತ್ತರವಾದಂಥ ಶ್ರೀಮಂತಿಕೆ ಇರುವ ಈ ಕನ್ನಡ ಚಲನಚಿತ್ರರಂಗವನ್ನು ಕಲುಷಿತ ಮಾಡಿ, ನಾಶ ಮಾಡಿ, ಅದಕ್ಕೊಂದು ಕೆಟ್ಟ ಹೆಸರು ತಂದಿರುವ ವ್ಯವಸ್ಥೆ ಇವತ್ತು ನಮ್ಮ ರಾಜ್ಯದಲ್ಲಿದೆ. ಆದ್ದರಿಂದ, ಇವತ್ತು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಪರಿಸ್ಥಿತಿ ನಿರ್ಮಾಣವಾದರೆ, ನಮ್ಮ ಮುಂದಿನ ದೃಷ್ಟಿ ಏನು? ಪಾನ ನಿರೋಧ ಜಾರಿಗೆ ತರುವ ಬಗ್ಗೆ ನೀವು ಚಿಂತನೆ ಮಾಡಿಲಿಲ್ಲ. ಚಿಂತನೆ ಮಾಡದಿರುವುದು, ಅತ್ಯಂತ ಅಪಾಯಕಾರಿ ಬೆಳವಣಿಗೆ. ಒಂದು ಕಡೆ ಪಾನ ನಿರೋಧ ಜಾರಿ ಮಾಡಲಿಲ್ಲ, ಮತ್ತೊಂದು ಕಡೆ ಅದರಿಂದ ಬರುವ ಹಣವನ್ನು ಪ್ರಾಮಾಣಿಕವಾಗಿ ವಸೂಲಿ ಮಾಡುತ್ತಿಲ್ಲ. ಇದೆಲ್ಲೋ ಒಂದು ಕಡೆ ಅನ್ಯಾಯ ನಡೆಯುತ್ತಿದೆ. ನಮ್ಮ ಸರ್ಕಾರಕ್ಕೆ ವರ್ಷಕ್ಕೆ ಸಾವಿರದಿಂದ, ಸಾವಿರದಿನ್ನೂರು ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ನೀವು ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿದರೆ ವರ್ಷಕ್ಕೆ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಅಬಕಾರಿ ಇಲಾಖೆಯಿಂದ ವಸೂಲು ಮಾಡಬಹುದು. ಅಬಕಾರಿ ಇಲಾಖೆ ದೊರೆಗಳು ಕರ್ನಾಟಕದಲ್ಲಿ ದೊಡ್ಡ ಲಾಬಿ ಮಾಡುತ್ತಾರೆ. ಅಬಕಾರಿ ದೊರೆಗಳ ಲಾಬಿ, ಗ್ರಾನೈಟ್ ದೊರೆಗಳ ಲಾಬಿ, ಮಠಾಧಿಪತಿಗಳ ಲಾಬಿ. ದೊಡ್ಡ ದೊಡ್ಡ ಲಾಬಿಗಳು. ಈ ಅಬಕಾರಿ ದೊರೆಗಳಿಗೆ ಸೂಪರ್ ಹೈವೇ. ಒಂದು ಕಾಲದಲ್ಲಿ ಸೂಪರ್ ಹೈವೇ ಮುರಿದು ಬಿದ್ದದ್ದಂದರೆ, ಶ್ರೀಮಾನ್ ವೀರೇಂದ್ರ ಪಾಟೀಲರು 11 ತಿಂಗಳ ಕಾಲ ಮುಖ್ಯಮಂತ್ರಿಗಳಾಗಿದ್ದಾಗ, ಸಮಗ್ರವಾಗಿ ಅಬಕಾರಿ ದೊರೆಗಳು ಈ ರಾಜ್ಯದಲ್ಲಿ ತಮ್ಮ ಡಿಸ್ಟಿಲರಿಗಳನ್ನು ಮುಚ್ಚಿಹಾಕಿ, ಬೇರೆ ರಾಜ್ಯಕ್ಕೆ ಹೋಗುವ ವ್ಯವಸ್ಥೆಯಾಗಿತ್ತು. ಇವತ್ತು ಆ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಇವತ್ತು ನನಗನ್ನಿಸುತ್ತದೆ, ಈ ಅಬಕಾರಿ ದೊರೆಗಳು ಸಮಗ್ರವಾಗಿ ಎಲ್ಲ ಸರ್ಕಾರಗಳಲ್ಲೂ ಇದ್ದಾರೆ. ಎಲ್ಲಾ ಸರ್ಕಾರಗಳಲ್ಲೂ ಇವರಿಗೇ ಕೆಂಪು ಹಾಸು, ಮನ್ನಣೆ, ಎಲ್ಲ ಸರ್ಕಾರಗಳಲ್ಲೂ ಇವರಿಗೇ ದಾರಿ. ಈ ರೀತಿ ಯಾವುದೇ ಸರ್ಕಾರ ಬರಲಿ, ಬೆಳಗಾಗುವ ಹೊತ್ತಿಗೆ ಅವರನ್ನು ಸ್ವಾಗತಿಸುವುದು. ಅಬಕಾರಿ ದೊರೆಗಳಿಂದಲೇ ಸರ್ಕಾರ. ಪ್ರಾಮಾಣಿಕವಾಗಿ

ಮಾತನಾಡುವುದಾದರೆ, ಅವರ ಹಣ ಸರ್ಕಾರವನ್ನು ಬದಲಾವಣೆ ಮಾಡುವುದಕ್ಕೆ, ಚುನಾವಣೆಗೆ ಸರ್ಕಾರಗಳನ್ನು ಯಾವ್ಯಾವ ರೀತಿ ಅವರ ಕಂಟ್ರೋಲ್‌ನಲ್ಲಿಟ್ಟುಕೊಳ್ಳುವುದಕ್ಕೆ ಅಬಕಾರಿ ದೊರೆಗಳಿಂದ ನಿರಂತರವಾಗಿ ನಡೆದಿದೆ. 10 ವರ್ಷಗಳಿಂದ 366 ಕೋಟಿ ರೂಪಾಯಿಗಳನ್ನು ಸರ್ಕಾರ ಯಾವುದೇ ರೀತಿಯಿಂದಲೂ ವಸೂಲಿ ಮಾಡಲಾಗಲಿಲ್ಲವೆಂದರೆ, ಹೇಗೆ? ಸಾಮಾನ್ಯ ಬಡವನೇನಾದರೂ ವಿದ್ಯುತ್ ಬಿಲ್ ಕಟ್ಟಲಿಲ್ಲವೆಂದರೆ, ರೈತಾ ಏನಾದರೂ ಅದನ್ನು ಕಟ್ಟಲಿಲ್ಲವೆಂದರೆ ಅವರ ಮನೆಗೆ ಹೋಗುತ್ತೀರಿ. ಆದರೆ, 366 ಕೋಟಿ ರೂಪಾಯಿಗೆ ಬಡ್ಡಿ ಇಲ್ಲ, ಅಸಲೂ ಇಲ್ಲ, ಯಾವುದೂ ಇಲ್ಲದೆ, ವಸೂಲೂ ಆಗಲಿಲ್ಲವೆಂದರೆ ಪರಿಸ್ಥಿತಿ ಏನು? ಅವರಿಗೇ ಮತ್ತೆ ಹರಾಜು ಕೂಗುವುದಕ್ಕೆ ಅವಕಾಶ ಸಿಗುತ್ತದೆ. ಸಾಮಾನ್ಯವಾಗಿ ಅವರನ್ನು ಬ್ಲ್ಯಾಕ್ ಲಿಸ್ಟಿಗೆ ಸೇರಿಸಬೇಕು. ಆದರೆ, ಸೇರಿಸುವುದಿಲ್ಲ. ಮತ್ತೆ ಅವರನ್ನು ಹರಾಜು ಕೂಗುವುದಕ್ಕೆ ಎಲ್ಲ ವ್ಯವಸ್ಥೆಯನ್ನೂ ಮಾಡುತ್ತೇವೆ. ಒಂದು ತೀರ್ಮಾನಕ್ಕೆ ಬರೋಣ, ಪಾನ ನಿರೋಧವನ್ನು ಸಮಗ್ರವಾಗಿ ಜಾರಿಗೆ ತರುತ್ತೇವೆಂದು ಹೇಳಿ, ಜಾರಿಗೆ ತರುವುದಕ್ಕಾಗುವುದಿಲ್ಲವೆಂದರೆ, ಪರ್ಯಾಯ ವ್ಯವಸ್ಥೆ ಮಾಡಿ. ಸರ್ಕಾರದ ಖಜಾನೆಗೆ ಹಣ ಬರುವ ವ್ಯವಸ್ಥೆಯನ್ನಾದರೂ ಮಾಡಿ. ಮಾಡದಿದ್ದರೆ, ಕಷ್ಟವಾಗುತ್ತದೆ ಇದು ಒಳ್ಳೆಯದು ಅಲ್ಲ. ಗ್ರಾನೈಟ್ ಒಂದರಲ್ಲಿ ವರ್ಷಕ್ಕೆ 5 ಸಾವಿರ ಕೋಟಿ ರೂಪಾಯಿ ಬರುತ್ತದೆ. ನಾನು ಕೊಡುತ್ತೇನೆ, ನನ್ನ ಜೊತೆಯಲ್ಲಿ ಬೇಕಾದರ ಚರ್ಚಿಸಿ, ಇದರಲ್ಲಿ ದುಡ್ಡಿನ ವಿಷಯವಲ್ಲ, ಇವತ್ತು ಏನಾಗಿದೆಯೆಂದರೆ, ಪಾನ ನಿರೋಧ ಜಾರಿಗೆ ತರದಿದ್ದರೆ, ಡಿಸ್ಟಿಲರಿಗಳಿವೆ, ಮದ್ಯಪಾನ ತಯಾರು ಮಾಡಬಹುದು, ಎಷ್ಟು ಬೇಕಾದರೂ ಹಂಚಬಹುದು. ಆ ಡಿಸ್ಟಿಲರಿಗಳಲ್ಲಿ ಅದೊಂದು ದುರಂತ ಕಥೆ, ಕರ್ಮಕಾಂಡ. ಡಿಸ್ಟಿಲರಿಗಳಲ್ಲಿ ಆಫೀಸರ್ ಯಾರು? ಅಬಕಾರಿ ಇಲಾಖಾಧಿಕಾರಿ. ಅವನು ಅಲ್ಲಿ ಏನಾಗಿದ್ದಾನೆಂದರೆ, ಡಿಸ್ಟಿಲರಿ ಮಾಲೀಕನ ಮನೆಯ ಕಸ ಹೊಡೆಯುವ ಜವಾನನಾಗಿದ್ದಾನೆ. ಕೊಟ್ಟಂಥ ಹಣ ತೆಗೆದುಕೊಂಡು, ಎಷ್ಟು ಬೇಕಾದರೂ ಮಾಡಬಹುದು. ಸೆಕೆಂಡ್ಸ್‌ನ್ನು ಎಲ್ಲಿ ಬೇಕಾದರೂ ಮಾರಬಹುದು. ಯಾರು ಏನು ಬೇಕಾದರೂ ನಡೆಸಬಹುದು. ಕರ್ನಾಟಕದಲ್ಲಿ 25 ಸಾವಿರ ಎಕರೆ ಪ್ರದೇಶದಲ್ಲಿ ಗ್ರಾನೈಟ್ ತೆಗೆಯುತ್ತಿದ್ದಾರೆ. 10 ಸಾವಿರ ಗಣಿಗಳಿದ್ದು, ಕೆಲಸಕ್ಕೆ ಬಾರದ ಒಬ್ಬ ಮನುಷ್ಯ ಈ ಊರಿನಲ್ಲಿ ಕಕ್ಷಿದಾರರಿಲ್ಲದ ಒಬ್ಬ ವಕೀಲ ತಮಿಳುನಾಡಿನಲ್ಲಿರುವ ಅವನ ಆಸ್ತಿ 3 ಸಾವಿರ ಕೋಟಿ ರೂಪಾಯಿಗಳು. ಇಳಕಲ್‌ನಿಂದ, ಚಾಮರಾಜನಗರದವರೆಗೆ ಇಡೀ ಕರ್ನಾಟಕದ ಉದ್ದಗಲಕ್ಕೆ ದೇವಸ್ಥಾನಗಳು, ಧಾರ್ಮಿಕ ಸ್ಥಳಗಳು ಹೋಗಿವೆ. ನನ್ನನ್ನು ಬೇಕಾದರೆ ಕರೆಯಿರಿ, ಆ ಪ್ರಕಾರ ನೀವು ಜೊತೆಯಲ್ಲಿ ಬನ್ನಿ, ಗ್ರಾನೈಟ್‌ನಲ್ಲಿ ವರ್ಷಕ್ಕೆ 5 ಸಾವಿರ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿಕೊಡಲಿಲ್ಲವೆಂದರೆ, ನಾನು ರಾಜೀನಾಮೆ ಕೊಡುತ್ತೇನೆ. ಇದುವರೆಗೆ ವಿದೇಶಗಳಿಗೆ ಹೋಗುವ ಅಂದಾಜೆಷ್ಟು? ಕನಿಷ್ಠ 40 ಸಾವಿರ ಕಲ್ಲುಗಳನ್ನು ವಿದೇಶಕ್ಕೆ ಸಾಗಿಸಲಾಗಿದೆ. ಯಾವ್ಯಾವ ಪ್ರದೇಶದಲ್ಲಿ ತೆಗೆದಿದ್ದಾರೆ? ಒಂದು ಕ್ಯೂಬಿಕ್ ಮೀಟರ್ ಕಲ್ಲಿಗೆ 3 ಸಾವಿರ ರೂಪಾಯಿ, ಅಲ್ಲಿ 40 ಸಾವಿರ ರೂಪಾಯಿ. ಮಂಗಳೂರಿನ ಸಮುದ್ರದ ಪಕ್ಕದಲ್ಲಿ ಬಿದ್ದಿರುವ ದಂಡೆ ಬಂಡೆ ಕಲ್ಲುಗಳನ್ನು

ನೋಡಬೇಕು. ಅದನ್ನು ನೋಡಿದಾಗ, ನನಗನ್ನಿಸುತ್ತದೆ, ವಿದೇಶಕ್ಕೆ ಹೋಗುವ ಗ್ರಾನೈಟನ್ನು ತಡೆಯಬೇಕು, ಲೂಟಿಯನ್ನು ನಿಲ್ಲಿಸಬೇಕು, ನಿಸರ್ಗ ನಾಶವಾಗುತ್ತಿದ್ದು, ಇದು ಎಲ್ಲ ದೃಷ್ಟಿಯಿಂದಲೂ ಅತ್ಯಂತ ಅಪಾಯಕಾರಿ ಬೆಳವಣಿಗೆ. ಆ ದೃಷ್ಟಿಯಿಂದ ಇದನ್ನು ತಾವು ಸರಿಯಾದ ರೀತಿಯಲ್ಲಿ ನೋಡಲಿಲ್ಲವೆಂದರೆ, ನಮಗೆ ಅತ್ಯಂತ ಯೋಜನೆಯಾಗುತ್ತದೆ. ನಿಮ್ಮ ಸರ್ಕಾರದಲ್ಲಿ ಏನೂ ಕೆಲಸವಾಗಲಿಲ್ಲವೆನ್ನುವ ಮಾತನ್ನು ನಾನು ಹೇಳುವುದಕ್ಕೆ ತಯಾರಿಲ್ಲ. ನಿಮ್ಮ ಕೆಪಿಸಿ ನಿಜವಾಗಲೂ ಒಳ್ಳೆಯ ಕೆಲಸ ಮಾಡಿದೆ. ಇದು ಸಂತೋಷಪಡುವ ವಿಚಾರ. ಅದರ ಬಗ್ಗೆ ಎಲ್ಲವನ್ನೂ ಸಾರಾಸಗಟಾಗಿ ತಳ್ಳಿಹಾಕುವುದಿಲ್ಲ. ಕೆಪಿಸಿಯಲ್ಲಿರುವ ಅಧಿಕಾರಿಗಳು ಕೆಲಸ ಮಾಡಿದ್ದಾರೆ. ವಿದ್ಯುತ್ ನಿರಂತರವಾಗಿದೆ. ಕೊರತೆ ಬಗ್ಗೆ ಅಪಾರವಾಗಿ, ಪ್ರತಿನಿತ್ಯ ಬೆಂಗಳೂರು ಮತ್ತು ಹಳ್ಳಿಗಳಲ್ಲಿ, ಎಲ್ಲ ಕಡೆ ಆ ತೊಂದರೆಯನ್ನನುಭವಿಸುತ್ತಿದ್ದೇವೆ. ಆದರೆ, ಕೊರತೆ ನೀಗಿಸಲು ಪ್ರಾಮಾಣಿಕ ಪ್ರಯತ್ನ ಇನ್ನು ಆಗಿಲ್ಲ. ಕೇಂದ್ರಕ್ಕೆ ಎಲ್ಲ ಕಡೆಯಿಂದ ಸರ್ಕಾರಿ ಸ್ವಾಮ್ಯ ಮತ್ತು ಹೊರಗಡೆಯಿಂದ ಕನಿಷ್ಠ 1500 ಕೋಟಿ ರೂಪಾಯಿಗಳು ಬರಬೇಕಾಗಿದೆ. ವಸೂಲಿಯಾಗಿಲ್ಲ. ಅಂಥದ್ದರಲ್ಲಿ, ಇವತ್ತು ಕರ್ನಾಟಕ ವಿದ್ಯುತ್ ನಿಗಮದವರು ತಯಾರುಮಾಡುವ ಅನೇಕ ವಿಚಾರಗಳ ಬಗ್ಗೆ ಮಾತನಾಡುವುದಾದರೆ, ನಿಜವಾಗಲೂ ಪ್ರಶಂಸೆ ಪಡಬೇಕು. ಆ ಕೆಲಸವನ್ನು ಅವರು ಮಾಡಿದ್ದಾರೆಂದು ತಮಗೆ ನಾನು ತಿಳಿಸುತ್ತೇನೆ. ಇದರ ಜೊತೆಗೆ, ರಸ್ತೆಗಳ ಪರಿಸ್ಥಿತಿ ಬಗ್ಗೆ ನಾನು ಪ್ರತಿಸಾರಿ ತಮಗೆ ಹೇಳಿದ್ದೇನೆ. ರಸ್ತೆಗಳ ಪರಸ್ಥಿತಿ ಏನಾಗಿದೆ? ನಾವು ಎಲ್ಲಿಗೆ ತಲುಪುತ್ತಿದ್ದೇವೆ. ರಸ್ತೆಗಳ ಬಗ್ಗೆ ನಿರಂತರವಾಗಿ ಹೇಳುತ್ತಲೇ ಬಂದಿದ್ದೇವೆ. ಕರ್ನಾಟಕದಲ್ಲಿ ಒಂದು ಕಡೆ ರಸ್ತೆ ಕಿಟ್ಟುಹೋಗಿದೆ ಎಂದು ಹೇಳುವುದಿಲ್ಲ ಕರ್ನಾಟಕ ಉದ್ದಗಲಕ್ಕೂ ರಸ್ತೆಗಳು ಹಾಳಾಗಿವೆ. ರಸ್ತೆಗಳಿಗೋಸ್ಕರವಾಗಿ ತಂದಿರತಕ್ಕಂಥ ನಬಾರ್ಡ ಹಣ ಎಲ್ಲಿ ಹೋಯಿತು? ಯಾರಿಗಾಗಿ ಖರ್ಚು ಮಾಡಿದಿರಿ? ತಾವು ಪ್ರತಿ ಕ್ಷೇತ್ರಕ್ಕೂ ಮೂವತ್ತು ಲಕ್ಷ ರೂಪಾಯಿ ಕೊಡುತ್ತೇವೆಂದು ಒಂದು ಸಾರಿ ಹೇಳಿದಿರಿ, ಅನಂತರ ಪ್ರತಿ ಕ್ಷೇತ್ರಕ್ಕೂ ಐವತ್ತು ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದಿರಿ. ಎಲ್ಲಾ ರಸ್ತೆಗಳ ರಿಪೇರಿ ಆಗಲಿಲ್ಲ. ರಸ್ತೆಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ರಸ್ತೆಗಳ ಬಗ್ಗೆ ಪ್ರಾಮಾಣಿಕವಾಗಿ ಕೆಲಸ ಸರ್ಕಾರದವರು ಮಾಡಲಿಲ್ಲ. ಲೋಕೋಪಯೋಗಿ ಇಲಾಖೆ ಯಾವ ಕಾಲದಲ್ಲೂ ಇಷ್ಟೊಂದು ಕುಲಗೆಟ್ಟು ಹೋಗಿರಲಿಲ್ಲ. ಯಾವ ಸಂದರ್ಭಗಳಲ್ಲೂ ಕೂಡ ರಸ್ತೆಗಳು ಇಷ್ಟೊಂದು ಹುಲಗೆಟ್ಟು ಹೋಗಿರಲಿಲ್ಲ ಎನ್ನುವಂತಹ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 1996-97ರಲ್ಲಿ 94 ಕೋಟಿ ರೂಪಾಯಿಗಳು ನಷ್ಟ, 1997-98ರಲ್ಲಿ 50 ಕೋಟಿ ರೂಪಾಯಿಗಳು ನಷ್ಟ, 1998-99ರಲ್ಲಿ 15 ಕೋಟಿ ರೂಪಾಯಿಗಳು ನಷ್ಟವಾಗಿದೆ. ಅಂದರೆ ಈ ಮೂರು ವರ್ಷಗಳಲ್ಲಿ ನಷ್ಟದ ಪ್ರಮಾಣ ಕಡಿಮೆಯಾಗಿದೆ. ಆದರೆ ತಮಗೆ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಕೇವಲ ಬೆಂಗಳೂರಿನಲ್ಲಿ ಹೇಳುವುದಾದರೆ, ಕಲಾಸಿಪಾಳ್ಯ ಹಾಗೂ ಶುಭಾಷ್‌ನಗರದ (ಮೆಜಿಸ್ಟಿಕ್) ಹತ್ತಿರ ಹೋಗಿ ರಾತ್ರಿಯ ಸಮಯದಲ್ಲಿ ತಾವು

ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಸರ್ಕಾರಿ ಬಸ್ಸುಗಳು 500 ಹೊರಟರೆ, ಖಾಸಗಿ ಬಸ್ಸುಗಳು ಸುಮರು 2000 ಬಸ್ಸುಗಳು ಹೊರಡುತ್ತವೆ. ಎಲ್ಲಾ ರಸ್ತೆಗಳಲ್ಲಿ ಈ ಖಾಸಗಿ ವಾಹನಗಳು ಓಡಾಡುವುದರಿಂದ ಇವತ್ತು ಇಂಥ ಪರಿಸ್ಥಿತಿ ಉಂಟಾಗಿದೆ. ಖಾಸಗಿ ಬಸ್ಸುಗಳವರು ಒಂದೊಂದು ಪರ್ಮಿಟನ್ನು ಹತ್ತುಸಾರಿ ಉಪಯೋಗ ಮಾಡಿಕೊಂಡು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಇದರಿಂದಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತದೆ ಏನೂ ಒಳ್ಳೆಯದಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಕೊನೆಯದಾಗಿ, ಮುಜರಾಯಿ ಇಲಾಖೆಯ ಬಗ್ಗೆ ಹೇಳುವುದಾದರೆ, 43,217 ಮುಜರಾಯಿ ದೇವಸ್ಥಾನಗಳಿವೆ, ಇಂಥಕಡೆ ಕೆಲಸ ಮಾಡತಕ್ಕಂಥ ಒಬ್ಬ ಅರ್ಚಕರಿಗೆ ಎಷ್ಟು ಸಂಬಳ ಕೊಡುತ್ತಿರೆಂದರೆ ಕೇವಲ ಒಂದು ರೂಪಾಯಿ ಇಪ್ಪತ್ತು ಪೈಸೆ. ಮತ್ತೊಬ್ಬರಿಗೆ ಮೂರು ರೂಪಾಯಿ, ನಮಗೆಲ್ಲಾ ದೇವರ ಬಗ್ಗೆ ಅಪಾರವಾದ ನಂಬಿಕೆ ಇಟ್ಟುಕೊಂಡು ಅಲ್ಲಿ ದೇವಸ್ಥಾನಕ್ಕೆ ಹೋದ ತಕ್ಷಣ ಕಾಯಿ ಹೊಡೆಯುವುದು, ಪೂಜೆ ಮಾಡಿಸುವುದು, ಇದೆಲ್ಲಾ ಮಾಡುತ್ತೇವೆ. ಆದರೆ ಆ ಅರ್ಚಕರಿಗೆ ಈ ರೀತಿ ಕಡಿಮೆ ಸಂಬಳ ಕೊಟ್ಟರೆ ಹೇಗೆ? ಈ ರೀತಿ ಮಾಡುವುದು ನ್ಯಾಯವೇ ಈ ರೀತಿ ಅವರಿಗೆ ಕಡಿಮೆ ಸಂಬಳ ಕೊಡುವುದು ಒಳ್ಳೆಯದಲ್ಲ. ರಾಜ್ಯದಲ್ಲಿರುವ ಇತರರ ಬೇಡಿಕೆಗಳನ್ನು ಮನ್ನಿಸಿರುವಾಗ ಅರ್ಚಕರ ಬೇಡಿಕೆಗಳ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಿ. ಅರ್ಚಕರಿಗೆ ಒಂದೂಕಾಲ್ ರೂಪಾಯಿ ಕೊಡುವುದರ ಬದಲು ನಿಲ್ಲಿಸಿಬಿಡಿ. ಕೆಲವು ದೇವಸ್ಥಾನಗಳಲ್ಲಿ ಶ್ರೀಮಂತ ದೇವಸ್ಥಾನಗಳಿವೆ. ಇಂಥ ಕಡೆ ಕೆಲಸ ಮಾಡುವ ಅರ್ಚಕರಿಗೆ ಸಂಬಳ ಇಲ್ಲದಿದ್ದರೂ ಹೇಗೋ ನಡೆದುಕೊಂಡು ಹೋಗುತ್ತದೆ. ಏಕೆಂದರೆ, ಮಂಗಳಾರತಿ ಕಾಸು ಸಿಗುತ್ತದೆ ಹೇಗೋ ನಡೆದುಕೊಂಡು ಹೋಗುತ್ತದೆ. ಕೆಲವು ಕಡೆ ಏನೂ ಸಿಗದಂಥ ದೇವಸ್ಥಾನಗಳಲ್ಲಿರತಕ್ಕಂಥ ಅರ್ಚಕರು ತಮ್ಮ ಬೇಡಿಕೆಗಳ ಬಗ್ಗೆ ಈಗಾಗಲೇ ಹಲವಾರು ಬಾರಿ ಸರ್ಕಾರದವರಲ್ಲಿ ಮನವಿ ಸಲ್ಲಿಸಿದ್ದಾರೆ. ಇವರ ಬೇಡಿಕೆಯನ್ನು ಪುರಸ್ಕರಿಸದಿದ್ದರೆ ಅರ್ಚಕರು ಪೂಜೆನೇ ಮಾಡುವುದಿಲ್ಲವೆಂದು ಬೀಗ ಹಾಕಿದರೆ ಪರಿಸ್ಥಿತಿ ಎಲ್ಲಿಗೆ ಹೋಗುತ್ತದೆ? ದೇವರ ಬಗ್ಗೆ ನಮಗೆ ನಂಬಿಕೆ ಇಲ್ಲ ಎಂದು ತಾವು ಹೇಳಬಹುದು, ಇದರ ಬಗ್ಗೆ ಬೇಕಾದರೆ ಅನಂತರ ಚರ್ಚಿಸಬಹುದು. ಆದರೆ, ಅರ್ಚಕರ ಬಗ್ಗೆ ತಾವು ಸ್ವಲ್ಪ ಚಿಂತನೆ ಮಾಡಬೇಕು. ನಾವು ಈ ಬಗ್ಗೆ ಸುಮಾರು ನಾಲ್ಕು ವರ್ಷಗಳಿಂದ ಹೇಳುತ್ತಲೇ ಬಂದಿದ್ದೇವೆ. ಆದರೂ ಸರ್ಕಾರ ಈ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಇದೊಂದು ರೀತಿಯಲ್ಲಿ ಎಮ್ಮೆ ಸರ್ಕಾರ. ಎಮ್ಮೆ ಸರ್ಕಾರ ಎಂದರೇನು ಅಂದರೆ, ಎಮ್ಮೆ ಮೇಲೆ ಮಳೆ ಬಿದ್ದರೆ ಎಮ್ಮೆಗೆ ಗೊತ್ತಾಗುವುದಿಲ್ಲ, ಒಂದು ಪಕ್ಷ ರಸ್ತೆಯಲ್ಲಿ ಈ ಎಮ್ಮೆ ನಿಂತಾಗ ಯಾವುದೇ ವಾಹನಗಳು ಬಂದರೂ ಎಷ್ಟೇ ಹಾರನ್ ಮಾಡಿದರೂ ಈ ಎಮ್ಮೆಗೆ ಗೊತ್ತಾಗುವುದಿಲ್ಲ. ವಾಹನದಲ್ಲಿರತಕ್ಕಂಥವರು ಯಾರಾದರೊಬ್ಬರು ಕೆಳಗಿಳಿದು ಈ ಎಮ್ಮೆಯ ಬಾಲ ಹಿಡಿದು ತಿರುವುದರೂ ಕೂಡ ಎಮ್ಮೆ ಅಲ್ಲಾಡುವುದಿಲ್ಲ. ಆದ್ದರಿಂದ, ಇದೊಂದು ರೀತಿಯಲ್ಲಿ ಎಮ್ಮೆ ಸರ್ಕಾರ ಇದ್ದ ಹಾಗೆ. ಅಂದರೆ, ನಾನೇನು ಮಾನ್ಯ ಪಟೇಲ್‌ರವರನ್ನು ಎಮ್ಮೆ ಎಂದು ಕರೆಯದಿದ್ದರೂ ಸರ್ಕಾರ ಮಾತ್ರ ಎಮ್ಮೆ ಇದ್ದಹಾಗೆ. ಇದರ ಬಗ್ಗೆ ತಕರಾರೇನು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಎಮ್ಮೆ ಸರ್ಕಾರ ಎಂದು ತಾವು ಹೇಳಿದಿರಿ, ಎಮ್ಮೆ ಸರ್ಕಾರ ಎಂದಾದ ಮೇಲೆ ಸರ್ಕಾರ ನಡೆಸುವವರು ಎಮ್ಮೆ ಆಗಿರಬೇಕು ಅಥವಾ ಕೋಣ ಆಗಿರಬೇಕು ಅಲ್ಲವೆ? ಯಾವುದನ್ನಾದರೂ ಒಂದು ಹೇಳಲೇಬೇಕು ಅಲ್ಲವೇ...

ಶ್ರೀ ವಾಟಾಳ್ ನಾಗರಾಜ್ :— ಎಮ್ಮೆ ಸರ್ಕಾರ ಎಂದು ತೀರ್ಮಾನಿಸಿದ ಮೇಲೆ ಅವರನ್ನು ಎಮ್ಮೆ ಎಂದೇ ತೀರ್ಮಾನಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮ ಬಾಯಿಂದಲೇ ಹೇಳಿ...

ಶ್ರೀ ವಾಟಾಳ್ ನಾಗರಾಜ್ :— ನನ್ನ ಬಾಯಿಂದಲೇ ಹೇಳಿದ್ದು ಮತ್ತೇನು ಬೇರೆಯವರ ಬಾಯಿಂದ ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಸದಸ್ಯರು ಹೇಳಿದ್ದು ಎಮ್ಮೆಯ ಸರ್ಕಾರ ಎಂದು ಅಲ್ಲ ಅವರು ಹೇಳಿದ್ದು ಏನೆಂದರೆ "ಹೆಮ್ಮೆಯ ಸರ್ಕಾರ" ಎಂದು. ಏಕೆಂದರೆ, ಮಾನ್ಯ ಸದಸ್ಯರು ಯಾವಾಗಲೂ ಅಲ್ಪಪ್ರಾಣ ಮಾತನಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಪ್ರಕಾಶ್‌ರವರೇ, ನಿಮ್ಮ ಸರ್ಕಾರ ಏನು ಅಂದರೆ, ಎಮ್ಮೆ ಮೇಲೆ ಮಳೆ ಬಿದ್ದಂಥೆ, ಮತ್ತೊಂದು ಕೋಣನ ಮುಂದೆ ಕಿನ್ನರಿ ಬಾರಿಸಿದಂಗೆ. ನಾವು ನಾಲ್ಕು ವರ್ಷದಿಂದ ಕಿನ್ನರಿಯನ್ನು ಬಾರಿಸುತಿದ್ದೇವೆ, ಕಿನ್ನರಿ ನಮಗೆ ಅರ್ಥವಾಗುತ್ತದೆ, ನಿಮಗೆ ಮಾತ್ರ ಅರ್ಥವಾಗಲೇ ಇಲ್ಲ. ಇಂಥ ವ್ಯವಸ್ಥೆಯಲ್ಲಿ ನೀವು ಇದ್ದೀರಿ. ಮಾನ್ಯ ಪಟೇಲರ ಸ್ಥಿತಿ ಕೋಣನ ರೀತಿಯಾಗಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಇದೊಂದು ರೀತಿಯಲ್ಲಿ ಬಂದ್ದಿವಂತಿಕೆಯೂ ಕೂಡ ಹೌದು. ಏಕೆಂದರೆ, ನೀವು ಯಾರು ಬೇಕಾದರೂ ಹೋಗಿ ಗುದ್ದಿದರೆ, ತಿವಿದರೆ ಸುಮ್ಮನೆ ಇರುತ್ತಾರೆ. ಎಂಥಾ ಸಮಸ್ಯೆ ಬಂದರೂ ಕೂಡ ಅವರು ಸುಮ್ಮನೆ ಇರುತ್ತಾರೆ. ಆಕಾಶವೇ ಮೇಲೆ ಬಿದ್ದರೂ ಕೂಡ ಅವರು ಸುಮ್ಮನೆ ನಿಂತಿರುತ್ತಾರೆ. ಒಂದು ರೀತಿಯಲ್ಲಿ ಎಮ್ಮೆ ತರಹ ಸುಮ್ಮನೆ ಇರುತ್ತಾರೆ. ಅಂದರೆ, ಎಮ್ಮೆಯಷ್ಟು ಶಕ್ತಿ, ನರಿಯಷ್ಟು ಬುದ್ಧಿ, ಎರಡೂ ಇವರಿಗೆ ಇದೆ. ಇವರಿಗೆ ಸಾಕಷ್ಟು ಬುದ್ಧಿ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಏಕೆಂದರೆ, ಪ್ರತಿ ಚುನಾವಣೆಗಳಲ್ಲಿ ಇಂಥವರು ಪುನ: ಆರಿಸಿ ಬರಬೇಕು ಎಂದು ಹೇಳುತ್ತೇನೆ. ಅಂದರೆ ಬೇರೆಯವರು ಆರಿಸಿ ಬರಬಾರದು ಎಂದು ನನ್ನ ಮಾತಿನ ಅರ್ಥವಲ್ಲ. ಪಾಂಡಿತ್ಯ ಇರತ್ಕಂಥ ಕೆಲವರು ಇಲ್ಲಿಗೆ ಪುನ: ಆರಿಸಿ ಬರಬೇಕು, ಅವರು ಮುಖ್ಯಮಂತ್ರಿಗಳು ಆಗಬಹುದು ಅಥವಾ ಬಿಡಬಹುದು ಅದು ಬೇರೆ ವಿಚಾರ. ಈ ಸದನದ ಅಸ್ತಿಗೋಸ್ಕರವಾಗಿ ಇಂಥವರು ಪುನ; ಚುನಾವಣೆಗಳಲ್ಲಿ ಆರಿಸಿ ಬರಬೇಕು ಎನ್ನುವುದು ನನ್ನ ಉದ್ದೇಶ. ಮಾನ್ಯ ಖರ್ಗೆಯವರ ಜಾಗದಲ್ಲಿ ಬೇರೊಬ್ಬರು ಬಂದರೆ ನಮಗೆ ನಷ್ಟ, ಸಿದ್ದರಾಮಯ್ಯನವರ ಜಾಗದಲ್ಲಿ ಬೇರೆಯವರು ಬಂದರೆ ನಮಗೆ ನಷ್ಟ, ನೀವು ಮಂತ್ರಿಯಾಗಬಹುದು, ಮುಖ್ಯ

ಮಂತ್ರಿಯಾಗಬಹುದು ಅದು ಬೇರೆ ವಿಚಾರ ಆದರೆ ಈ ಸದನಕ್ಕೆ ಮತ್ತೊಬ್ಬ ಮಲ್ಲಿಕಾರ್ಜುನ ಖರ್ಗೆ ಅಂಥವರನ್ನು ತರುವುದಕ್ಕೆ ಆಗುವುದಿಲ್ಲ, ಮತ್ತೊಬ್ಬ ಜೆ.ಹೆಚ್. ಪಟೇಲ್‌ರು ಅಂಥವರನ್ನು ತರುವುದಕ್ಕೆ ಆಗುವುದಿಲ್ಲ, ಮತ್ತೊಬ್ಬ ಸಿದ್ದರಾಮಯ್ಯ ಅಂಥವರನ್ನು ತರುವುದಕ್ಕೆ ಆಗುವುದಿಲ್ಲ, ಮತ್ತೊಬ್ಬ ಯಡಿಯೂರಪ್ಪ ಅಂಥವರನ್ನು ತರುವುದಕ್ಕೆ ಆಗುವುದಿಲ್ಲ. ನಾನು ಏಕೆ ಈ ಮಾತು ಹೇಳುತ್ತೇನೆಂದರೆ. ಅವರನ್ನು ಸೋಲಿಸಿ ಬರತಕ್ಕಂಥವರು ಅವರ ಸ್ಥಾನವನ್ನು ತುಂಬುವುದಕ್ಕೆ ಆಗುವುದಿಲ್ಲ. ಅಂಥವರು ಪುನ: ಆರಿಸಿ ಬರಬೇಕಾದುದು ಕರ್ತವ್ಯ ಎಂದು ನಾನು ಹೇಳುತ್ತೇನೆ. ಇನ್ನು ಜ್ಯೋತಿಷ್ಯದ ಬಗ್ಗೆ ಹೇಳುವುದಾದರೆ, ಇವತ್ತು ಜ್ಯೋತಿಷ್ಯದ ಮೇಲೆ ರಾಜಕಾರಣ ನಿಂತಿದೆ. ಏಕೆಂದರೆ ದೆಹಲಿಯಲ್ಲಿರುವ ಸರ್ಕಾರ ಹಾಗೂ ನಮ್ಮ ಸರ್ಕಾರ ಕೂಡ ಸ್ವಲ್ಪ ಹೆಚ್ಚು ಕಡಿಮೆ ಈ ಜ್ಯೋತಿಷ್ಯದ ಮೇಲೆ ನಿಂತಿದೆ. ನಾನಂತೂ ಜ್ಯೋತಿಷ್ಯವನ್ನು ಕೇಳುವುದಿಲ್ಲ ಅಂದಮಾತ್ರಕ್ಕೆ ನಾನು ಅದನ್ನು ಕೆದುಕುವ ಪ್ರಯತ್ನ ಮಾಡುತ್ತೇನೆಂದು ಅಲ್ಲ, ನಮ್ಮಲ್ಲಿ ಜ್ಯೋತಿಷ್ಯವನ್ನು ಕೇಳುವುದಕ್ಕೆ ಕೇಳುವವರನ್ನು ಜ್ಯೋತಿಷ್ಯಗಾರರ ಬಳಿ ಕರೆದುಕೊಂಡು ಹೋಗುವಂತಹ ಎಷ್ಟೆಂಟರು ನಮ್ಮಲ್ಲಿ ಇದ್ದಾರೆ. ಆ ಎಷ್ಟೆಂಟರ, ಜ್ಯೋತಿಷ್ಯ ಕೇಳುವವರಿಗೆ, ನೀವು ಇಂಥ ಕಡೆ ಹೋಗಿ, ನಿಮ್ಮ ತಲೆಗೆ ಬೂದಿ ಹಾಕಿಕೊಂಡರೆ, ನಿಮ್ಮ ಮೈಯಿಗೆ ಬೇವಿನ ಸೊಪ್ಪನ್ನು ಕಟ್ಟಿಕೊಂಡರೆ, ರಾತ್ರಿ ಸ್ಮಶಾನಕ್ಕೆ ಹೋದರೆ, ಅಲ್ಲಿ ಹೋಗಿ ಹೆಣದ ಮೂಳೆ ತೆಗೆದುಕೊಂಡರೆ, ಸಮಾಧಿ ಮುಂದೆ ಸೀರೆ ಉಟ್ಟುಕೊಂಡರೆ, ಕೆಂಪು ಕುಂಕುಮ ಕಂಕುಳದಲ್ಲಿ ಹಾಕಿಕೊಂಡರೆ, ನಿಮಗೆ ನಾಳೆ ಅಧಿಕಾರ ದೊರಯುತ್ತದೆ ಎಂದು ಹೇಳತಕ್ಕ ಎಷ್ಟೆಂಟರು ನಮ್ಮಲ್ಲಿ ಇದ್ದಾರೆ. ಇಂಥ ವ್ಯವಸ್ಥೆ ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಇದು. ಇದು ಎಲ್ಲಾ ಸಾರಾಸಗಟಾಗಿ ಮೂಢನಂಬಿಕೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಇವರ ಮೇಲೆ ಅವಲಂಭಿಸಿದೆ. ಈಗ ಏನಾಗಿದೆ ಎಂದರೆ ನಮ್ಮಲ್ಲಿ ಎರಡು ಗುಂಪುಗಳಿವೆ. ಈ ಮೋಡಿ ಆಟ ಎಂದು ಇರುತ್ತದೆ ಬಹುಶ: ಈ ಆಟ ತಮ್ಮ ಕಡೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಮೋಡಿಯಲ್ಲಿ ಒಂದು ಕಡೆ ಪರ ಮತ್ತೊಂದು ಕಡೆ ವಿರುದ್ಧ, ಈ ರೀತಿ ಎರಡು ಗುಂಪು ಇರುತ್ತವೆ. ಮೋಡಿ ಎಂದರೇನು ಅಂದರೆ, ನಾನು ಇದನ್ನು ನೋಡಿದ್ದೇನೆ. ಕೆಲವರು ಕೊಳ್ಳೆಗಾಲದ ಮೋಡಿ ಎಂದು ಹೇಳುತ್ತಾರೆ ಇದರಲ್ಲಿ ಆ ಕಡೆ ಒಬ್ಬರು ನಿಂತಿರುತ್ತಾರೆ ಈ ಕಡೆ ನಾವುಗಳೆಲ್ಲರೂ ನಿಂತಿರುತ್ತೇವೆ, ಆ ಕಡೆ ಇರುವವನು ಒಂದು ಕುರಿಯ ತಲೆಯನ್ನು ತಂದು ಹಾಕಿರುತ್ತಾನೆ, ಅವನು ಆ ಕುರಿಯ ತಲೆ ಅಲ್ಲಿ ಹಾಕಿ ಎದುರುಗಡೆ ಇರುವವನಿಗೆ ಆ ತಲೆಯನ್ನು ತೆಗೆದುಕೊಂಡು ಬಾ ಎಂದು ಹೇಳುತ್ತಾನೆ, ಇವನು ಕುರಿಯ ತಲೆಯನ್ನು ತೆಗೆದುಕೊಂಡು ಬರುವುದಕ್ಕೆ ಹೋದಾಗ ಅಲ್ಲಿ ಬೆಂಕಿ ಏಳುತ್ತದೆ, ಹೇಗೋ ಒಟ್ಟಿನಲ್ಲಿ ಸಾಹಸ ಮಾಡಿ ಆ ಕುರಿಯ ತಲೆ ತರುತ್ತಾನೆ. ಇಂಥ ಮೋಡಿ ಸ್ವಲ್ಪ ಹೆಚ್ಚು ಕಡಿಮೆ ಸುಮಾರು ಐದಾರು ತಿಂಗಳುಗಳಿಂದ ಜನತಾದಳದಲ್ಲಿ ನಡೆಯುತ್ತದೆ. ತಲೆ ಹಾಕುವವನು ಒಬ್ಬ, ಮತ್ತೊಬ್ಬ ತಲೆ ತರುವುದಕ್ಕೆ ಹೋಗುತ್ತಾನೆ. ದೇವೇಗೌಡರು ತಲೆ ಹಾಕುವುದಕ್ಕೆ ಹೋಗುತ್ತಾರೆ, ಪಟೇಲರು ತಲೆ ತರುವುದಕ್ಕೆ ಹೋಗುತ್ತಾರೆ.

ಇಂಥ ಮೋಡಿಯ ಆಟದಲ್ಲಿ ಪಟೇಲರು ಗೆದ್ದಿದ್ದಾರೆ. ಮೋಡಿಯ ಮಾಂತ್ರಿಕತೆಯಲ್ಲಿ, ಮೋಡಿಯ ತಾಂತ್ರಿಕತೆಯಲ್ಲಿ ಪಟೇಲರು ಗೆದ್ದಿದ್ದಾರೆ. ಪಟೇಲರು ಗೆದ್ದ ಮೇಲೆ, ಬಿದ್ದು ಹೋದವರು, ಅತೃಪ್ತರಾದವರು ಎಲ್ಲರೂ, ಹಳೆಯ ಗಂಡನ ಪಾದವೇ ಗತಿ ಎಂದು ತಿಳಿದುಕೊಂಡು, ನಾವೆಲ್ಲಾ ಒಟ್ಟಾಗಿ ಇದ್ದು ಇನ್ನು ಮುಂದೆ ಒಟ್ಟಾಗಿ ಇರೋಣ ಎಂದು ಅಂದುಕೊಂಡು ಹಿಂದುಗಡೆ ಬಾಗಿಲನಿಂದ ಮುಂದುಗಡೆ ಬಾಗಿಲಿಂದ ಎಲ್ಲಾ ಕಡೆಯಿಂದ ಹೋಗಿ ಅವರ ಬೆಂಬಲಕ್ಕೆ ಇದ್ದಾರೆ. ಇದರ ಬಗ್ಗೆ ಮಾತ್ರ ಪಟೇಲರು ತಲೆಕೆಡಿಸಿಕೊಂಡಿಲ್ಲ. ನನ್ನ ಜನುಮದಲ್ಲಿ ತಲೆಕೆಡಿಸಿಕೊಳ್ಳದ ಮುಖ್ಯಮಂತ್ರಿ ಯಾರಾದರೂ ಇದ್ದರೆ, ಬೇರೆ ಯಾರು ಅಲ್ಲ ಮಾನ್ಯ ಪಟೇಲರು ಒಬ್ಬರೇ ಎಂದು ಹೇಳಬಹುದು. ಮಳೆ ಬೀಳಲಿ, ಆಕಾಶ ಬಿದ್ದು ಹೋಗಲಿ, ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ಯಾರಾದರೂ ಆಕಾಶ ಬೀಳುತ್ತದೆ ಎಂದರೆ, ಆಕಾಶ ಬೀಳುತ್ತದೆಯೇ ಬರಲಿ ಬರಲಿ ಎಂದು ಹೇಳುತ್ತಾರೆ, ಆಕಾಶ ಬಿದ್ದರೂ ಭೂಮಿ ಮೇಲಕ್ಕೆ ಹೋದರೂ ಇದರ ಬಗ್ಗೆ ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಹಾಗೆ ಮಾನ್ಯ ಪಟೇಲರು ಇದ್ದಾರೆ. ಇಂಥ ಮೋಡಿಯ ಮಾಂತ್ರಿಕತೆಯಲ್ಲಿ ಮಾನ್ಯ ಪಟೇಲರು ಬಹಳ ಯಶಸ್ವಿಯಾಗಿದ್ದಾರೆ. ಇದರ ಜೊತೆಗೆ ಜ್ಯೋತಿಷ್ಯರು ಮಾನ್ಯ ಪಟೇಲರವರ ಸರ್ಕಾರ ಯಾವುದೋ ತಿಂಗಳಿನ ಐದನೇ ತಾರೀಖಿನ ದಿನದಂದು ಬಿದ್ದು ಹೋಗುತ್ತದೆ ಎಂದು ಭವಿಷ್ಯ ನುಡಿದಿದ್ದರು. ಎಲ್ಲರೂ ನಮ್ಮ ಮಾತನ್ನೇ ಕೇಳಬೇಕು ಎಂದು ಎಲ್ಲಾ ಜ್ಯೋತಿಷ್ಯರು ತೀರ್ಮಾನ ಮಾಡಿಕೊಂಡಿದ್ದರು. ಆದರೆ ಐದನೇ ತಾರೀಖು ಮುಗಿದು ಆರನೇ ತಾರೀಕು ಆದರೂ ಸರ್ಕಾರ ಬಿದ್ದು ಹೋಗಲಿಲ್ಲ. ಬಿದ್ದು ಹೋಗುತ್ತದೆ ಎಂದು ಹೇಳಿದ್ದ ಜ್ಯೋತಿಷ್ಯಗಾರರ ಪಟ್ಟಿಯನ್ನು ನಾವು ಮಾಡಬೇಕು, ಏಕೆಂದರೆ, ಅವರ ಹತ್ತಿರ ಹೋದರೆ ನಮಗೆ ಗೆಲುವು ಇಲ್ಲ. ಯಾರೋಬ್ಬರು ಆ ಜ್ಯೋತಿಷ್ಯಗಾರರು ಸುಳ್ಳು ಹೇಳಿಬಿಟ್ಟರು. ಆದ್ದರಿಂದ, ಯಾರು ಪ್ರಾಮಾಣಿಕವಾಗಿ ಜ್ಯೋತಿಷ್ಯ ಹೇಳಿದ್ದಾರೆ ಅಂಥವರ ಬಗ್ಗೆ ನಾವೊಂದು ಪಟ್ಟಿ ಮಾಡಬೇಕು. ಏಕೆಂದರೆ ಸಾರ್ವಜನಿಕರನ್ನು ನಾವು ಸಂತೋಷಪಡಿಸಬೇಕಾಗಿದೆ. ನಿಮ್ಮಲ್ಲಿ ಯಾರ್ಯಾರು ಜ್ಯೋತಿಷ್ಯವನ್ನು ಕೇಳುವುದಕ್ಕೆ ಹೋಗಿದ್ದೀರಿ ಎಂಬುದನ್ನು ನೀವೇ ಬಹಿರಂಗಪಡಿಸಬೇಕು. ನಮ್ಮ ಮಾಜಿ ಪ್ರಧಾನಮಂತ್ರಿಗಳ ಮೇಲೆ ನನಗೆ ಬಹಳ ಗೌರವ ಇದೆ. ಅವರು ಜ್ಯೋತಿಷ್ಯವನ್ನು ಪೂರ್ಣವಾಗಿ ನಂಬುತ್ತಾರೆ. ಮುಂದಿನ ಸಾರಿ ಮತ್ತೆ ಪ್ರಧಾನಮಂತ್ರಿಗಳಾಗಿಯೇ ಆಗುತ್ತೀರೆಂದು ನೇಪಾಳದ ಜ್ಯೋತಿಷ್ಯರೊಬ್ಬರು ಈಗಾಗಲೇ ಅವರಿಗೆ ಹೇಳಿದ್ದಾರೆ. ಇವರು ಅಲ್ಲಿಗೆ ಹೋದಮೇಲೆ ಈಗ ಸುಬ್ರಮಣ್ಯಸ್ವಾಮಿಯವರನ್ನು ಮತ್ತು ದೇವಿಲಾಲ್‌ರವರನ್ನು ತಬ್ಬಿಕೊಳ್ಳುತ್ತಿದ್ದಾರೆ ಮತ್ತು ಜಯಲಲಿತರವರ ಜೊತೆ ಸೇರಿದ್ದಾರೆ. ಈ ರೀತಿಯಾಗಿ ಅವರು ಸಮಗ್ರವಾಗಿ ಚಿಂತನೆ ಮಾಡುತ್ತಿದ್ದಾರೆ. ಇವರೇನಾದರು ಅಲ್ಲಿ ಪ್ರಧಾನಮಂತ್ರಿಯಾದರೆ, ನಮ್ಮ 8ನೇ ಮನೆಗೆ ಶನಿ ಬಂದು ಬಿಡುತ್ತಾನೆ. ಇಲ್ಲೇ ಈಗ ಶುಕ್ರ ಇದ್ದಾನೆ. ನಂತರ ಶುಕ್ರ ಅತ್ತ ಕಡೆ ಹೋಗುತ್ತಾನೆ, ಶನಿ ಮತ್ತೆ ಇತ್ತ ಕಡೆ ಬರುತ್ತಾನೆ. ಇದರಲ್ಲಿ ಅನುಮಾನವೇ ಇಲ್ಲ. ಇವತ್ತು ಒಬ್ಬ ಜ್ಯೋತಿಷ್ಯನ ಜೊತೆ ಅರ್ಧ ಗಂಟೆ ಕುಳಿತು ತಲೆಕೆಡಿಸಿಕೊಂಡು, ಏನೇನು ಮಾಡಬೇಕೆಂದು

ಕೇಳಿಕೊಂಡು ಬಂದಿದ್ದೇನೆ. ಅಕಸ್ಮಾತ್ ಇವರೇನಾದರೂ ಪ್ರಧಾನಮಂತ್ರಿಗಳಾದರೆ ಶುಕ್ರ ಅಲ್ಲಿಗೆ ಹೋಗುತ್ತಾನೆ, ಶನಿ 8ನೇ ಮನೆಗೆ ಈ ಕಡೆ ಬರುತ್ತಾನೆ. ಈಗ ನಮಗೆ ರಾಹು ಮತ್ತು ಕೇತುಗಳಿಂದ ಏನು ತೊಂದರೆ ಇಲ್ಲ. ಅಂದರೆ, ರಾಹು ಆಗಿರುವ ರಾಮಕೃಷ್ಣ ಹೆಗಡೆಯವರಿಂದ ನಮಗೇನು ತೊಂದರೆ ಇಲ್ಲ. ಹಾಗೆಯೆ ಕೇತುವಾಗಿರುವ ಬೊಮ್ಮಾಯಿಯವರು ಈಗ ರಾಜ್ಯ ಸಭೆಯಲ್ಲಿದ್ದಾರೆ ಮತ್ತು ಅವರ ಮಗನಿಗೆ ಒಂದು ಅಧಿಕಾರ ಸಿಕ್ಕಿರುವುದರಿಂದ ಅವರೂ ಸಹ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಶನಿ ಮತ್ತು ಶುಕ್ರಗಳ ನಡುವೆ ಫೈಟ್ ನಡೆಯುತ್ತಿದೆ. ಇನ್ನು ಐದಾರು ತಿಂಗಳಿನಲ್ಲಿ ಇವು ಎತ್ತಕಡೆ ಅಥವಾ ಯಾವ ದಿಕ್ಕಿನಲ್ಲಿ ತಿರುಗುತ್ತವೆಯೋ ನೋಡೋಣ. ಮಾನ್ಯ ಸಿದ್ಧರಾಮಯ್ಯನವರು ಯಾವುದಕ್ಕೂ ಸಂಬಂಧವಿಲ್ಲದ ಕೆಸರಿನ ಕಮಲವನ್ನು ಮಂಡಿಸಿದ್ದಾರೆ. ಇವರ ಮೂಗಿಗೆ ಯಾರ್ಯಾರು ತುಪ್ಪ ಹಚ್ಚಿದ್ದಾರೆ ಎಂಬುದು ಇಲ್ಲಿ ಹೇಳುವುದು ಬೇಡ. ಇದು ನಮ್ಮಿಬ್ಬರಲ್ಲಿಯೇ ಇರಲಿ, ಯಾರಿಗೂ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇವತ್ತಿನ ದಿವಸ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಈ ವಿಚಾರದಲ್ಲಿ ನಾವು ಪ್ರಾಮಾಣಿಕವಾದಂತಹ ಒಂದು ಚಿಂತನೆಯಲ್ಲಿ ನಡೆಯಬೇಕಾಗಿದೆ. ಇದಕೊಸ್ಕರವೇ ಈ ಒಂದು ಆಯವ್ಯಯದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಿನಿಸುತ್ತದೆ. ಏನೆಂದರೆ, ಕೆಲವು ವಿಚಾರದಲ್ಲಿ ನಾನು ತಕ್ಷಣ ಸಾರಸಗಟಾಗಿ ನಿಮ್ಮ ಆಯವ್ಯಯವನ್ನು ತಳ್ಳಿ ಹಾಕುವುದಕ್ಕಿಂತ ಹೆಚ್ಚಾಗಿ, ಇದು ಚುನಾವಣೆ ಆಯವ್ಯಯವೆಂದು ಎಲ್ಲರೂ ಹೇಳಿದ್ದೇವೆ. ಚುನಾವಣೆ ನಡೆಸಬೇಕಾದ ಸಂದರ್ಭದಲ್ಲಿ ಆಯವ್ಯಯವನ್ನು ಎಲ್ಲರೂ ಇದೇ ರೀತಿಯಾಗಿ ಮಂಡಿಸಬೇಕಾಗುತ್ತದೆ. ಆದರೆ ತಾವು ಹೇಳಿರುವ ಘೋಷಣೆಯನ್ನು ನಾವು ಓದಿಕೊಂಡು ತೃಪ್ತಿಪಡಬೇಕಾಗುತ್ತದೆ. ಇದರಲ್ಲಿ ಮಹಿಳೆಯರ ಬಗ್ಗೆ ಹಿಂದುಳಿದ ವರ್ಗದವರ ಬಗ್ಗೆ ಹಾಗೂ ನೀವು ಮತ್ತೆ ಸೀರೆ, ಪಂಚೆಯನ್ನು ಬೀದಿಗೆ ತರುತ್ತಿದ್ದೀರಿ. ಇವತ್ತಿನದಿವಸ ಇವೆಲ್ಲವನ್ನು ಒಂದೇ ಒಂದು ಸಾರಿ ನೀರಿಗೆ ಹಾಕಿದರೆ ನಿಮ್ಮ ಬಣ್ಣ ಗೊತ್ತಾಗುತ್ತದೆ. ಆದ್ದರಿಂದ, ಇದನ್ನು ಚುನಾವಣೆ ಇನ್ನು ಮೂರು ತಿಂಗಳು ಇರುವಾಗ ಬಿಡುಗಡೆ ಮಾಡಿ. ಏಕೆಂದರೆ ಬಣ್ಣ ಹೋಗುವುದು 6 ತಿಂಗಳ ಮುಂಚೆಯೇ ಗೊತ್ತಾಗಿಬಿಟ್ಟರೆ ನಿಮಗೆ ಮತ ಸಿಗುವುದಿಲ್ಲ. ಆಗ್ಗದ ದರದಲ್ಲಿ ನೀವು ಕೊಡುತ್ತಿರುವ ಸೀರೆ, ಪಂಚೆಯನ್ನು ಕೊನೆಗಳಿಗೆಯಲ್ಲಿ ಬಿಡುಗಡೆ ಮಾಡಿ. ಇಲ್ಲದಿದ್ದರೆ ಆ ಬಣ್ಣ ಬಯಲಾಯಿತೆಂದರೆ ಬಹಳ ಅಪಾಯಕ್ಕೆ ಸಿಕ್ಕುತ್ತೀರಿ. ಈ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ಕೊನೆಯಲ್ಲಿ ಮಾತನಾಡುವಾಗ ಇದು ಅಭಿನಂದನ ಸಭೆ ಎಂದು ಮೊದಲೇ ಹೇಳಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಿಗೆ ಅಭಿನಂದನೆ ವ್ಯಕ್ತಪಡಿಸತಕ್ಕಂಥ ಮಾತನ್ನು ನಾನು ಬಹಳ ಅತ್ಯಂತ ಪ್ರೀತಿ ಮತ್ತು ವಿಶ್ವಾಸದಿಂದ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ಈ ಸದನದಲ್ಲಿ ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಅತ್ಯಂತ ಪ್ರೀತಿ ಮತ್ತು ವಿಶ್ವಾಸದಿಂದ ಕೊಟ್ಟಿದ್ದಾರೆ. ನಾನು 1967 ರಿಂದ ಇಲ್ಲಿದ್ದೇನೆ. ಸದನದಲ್ಲಿ ಒಂದು ಸಾರಿಯೂ ಬೆಲ್ ಹೊಡೆಯದೇ ಇರತಕ್ಕಂಥ ಹೆಗ್ಗಳಿಕೆ ಮಾನ್ಯ ಅಧ್ಯಕ್ಷರಿಗೆ

ಸಲ್ಲುತ್ತದೆ. ಈ ಶಾಸನಸಭೆಯಲ್ಲಿ ಗಂಟೆಯನ್ನು ಬಾರಿಸದೇ ಇರತಕ್ಕಂಥ ಅಧ್ಯಕ್ಷರು ಯಾರಾದರೂ ಇತಿಹಾಸದಲ್ಲಿ ಇದ್ದರೆ, ಅದು ನಮ್ಮ ಅಧ್ಯಕ್ಷರೊಬ್ಬರೆ. ನಾನು ವೈಕುಂಠಬಾಳಿಗರವರು ಕಾಲದಿಂದ ಇಲ್ಲಿಯವರೆಗೆ ನೋಡಿರುವ ಹಾಗೆ ಗಂಟೆಯನ್ನು ಬಾರಿಸದೇ ಇದ್ದಂಥ ಅಧ್ಯಕ್ಷರು ಇವರು ಮಾತ್ರ. ನಾನು ಅವರ ಬಗ್ಗೆ ಅಪಾರವಾದ ಗೌರವವನ್ನು ಮತ್ತು ವಿಶ್ವಾಸವನ್ನು ಇಟ್ಟಕೊಂಡಿದ್ದೇನೆ. ಜೂನ್‌ನಲ್ಲಿ ಕರೆಯತಕ್ಕಂಥ ಸಭೆ ಒಂದು ರೀತಿ ವಂದನಾರ್ಪಣೆ ಸಭೆ ಇದ್ದ ಹಾಗೆ, ಇದು ಅಭಿನಂದನ ಸಭೆ. ಆದ್ದರಿಂದ, ನಾನು ಅವರನ್ನು ಅತ್ಯಂತ ಪ್ರಶಂಸೆ ಮಾಡುತ್ತೇನೆ. ಇದರಲ್ಲಿ ಬೇರೆ ಮಾತೇ ಇಲ್ಲ. ಒಬ್ಬರಿಗೊಬ್ಬರು ನಾವು ಯಾವುದೇ ರಾಜಕಾರಣದಲ್ಲಿ ಅಥವಾ ಬೇರೆ ಕಡೆ ಇರಬಹುದು ಅಥವಾ ಯಾವುದೇ ಕ್ಷೇತ್ರಕ್ಕೆ ಹೋಗಿ ನೀವು ಸರಿಯಿಲ್ಲ, ಅವರು ಸರಿಯಿಲ್ಲವೆಂದು ಹೇಳತಕ್ಕಂಥದನ್ನು ಮಾಡಿಲ್ಲ. ಮಾನ್ಯ ಸೋಮಶೇಖರ್‌ರವರು ನನ್ನ ಸ್ನೇಹಿತರು ಮತ್ತು ಬಹಳ ಆತ್ಮೀಯರು. ಅದರೆ ತಾವು ಬರದೆ ಪತ್ರಿಕೆಯಲ್ಲಿ ಹೇಳಿರುವುದರಿಂದ ನನಗೆ ಬಹಳಷ್ಟು ನೋವಾಗಿದೆ.

ಶ್ರೀ ಬಿ. ಸೋಮಶೇಖರ್ :— ಇದರ ಬಗ್ಗೆ ನಾನು ಈಗಾಗಲೇ ಈ ರೀತಿ ಹೇಳಲಿಲ್ಲವೆಂದು ತಿಳಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ನೀವು ಹೇಳಿಲ್ಲ ಎನ್ನುವುದು ನನಗೆ ಗೊತ್ತು.

ಶ್ರೀ ಬಿ. ಸೋಮಶೇಖರ್ :— ಇದನ್ನು ಈಗಾಗಲೇ ಕ್ಲಾರಿಫೈ ಮಾಡಿದ್ದೇನೆ. ಇದು ಸದನದಲ್ಲಿ ಮಾತನಾಡಿರತಕ್ಕಂಥ ವಿಚಾರವಲ್ಲ, ಹೊರಗೆ ಸಮಾರಂಭದಲ್ಲಿ ಮಾತನಾಡಿರುವ ವಿಚಾರದಲ್ಲಿ ತಪ್ಪು ವರದಿ ಆಗಿದೆ, ನಾನು ಈ ರೀತಿ ಹೇಳಲಿಲ್ಲವೆಂದು ಸಂಬಂಧಪಟ್ಟ ವರದಿಗಾರರಿಗೆ ಹೇಳಿದ್ದೇನೆ. ಮತ್ತೆ ನೀವೇಕೆ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ವಾಟಾಳ್‌ನಾಗರಾಜ್ :— ಆಯಿತು ಬಿಡಿ. ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಶಾಸಕರಾಗಿ ಅಥವಾ ರಾಜಕಾರಣಿಗಳಾಗಿ ಅಥವಾ ಯಾವುದೇ ಕ್ಷೇತ್ರದಲ್ಲಿ, ಎಲ್ಲೇ ಆಗಿರಲಿ, ನಮಗೆ ಪ್ರಾಮಾಣಿಕವಾದಂತಹ ಚಿಂತನೆ ಇರಬೇಕೆ ಹೊರತು, ಚುನಾವಣೆಗೆ ಹೋಗಿದ್ದೇವೆಂದು ಚುನಾವಣಾ ಪ್ರಚಾರದಲ್ಲಿ ಇನ್ನೊಬ್ಬರ ಮೇಲೆ ಕೆಸರು ಎರಚತಕ್ಕಂಥದ್ದು, ಅವರು ನಮ್ಮ ಮೇಲೆ ಕೆಸರನ್ನು ಎರಚತಕ್ಕಂಥದ್ದನ್ನು ಮಾಡುವುದು ಸರಿಯಲ್ಲ. ಈ ಭಾವನೆಗಿಂತ ಹೆಚ್ಚಾಗಿ ಮಸ್ತುಸ್ಥಿತಿಯನ್ನು, ಪ್ರಾಮಾಣಿಕವಾದಂತಹ ಚಿಂತನೆಯನ್ನು ನಾವು ನಡೆಸಬೇಕೆ ಹೊರತು, ಚುನಾವಣೆ ಸಂದರ್ಭದಲ್ಲಿ ಇನ್ನೊಬ್ಬರ ತೇಜೋವಧೆ ಮಾಡತಕ್ಕಂಥದ್ದು ಮತ್ತು ವ್ಯಕ್ತಿಗತವಾಗಿ ಅವರನ್ನು ಸಿಕ್ಕಾಪಟ್ಟೆ ಕೆಟ್ಟದಾಗಿ ಬೈಯುವುದು ಚುನಾವಣೆ ಅಲ್ಲ. ನಾವು ಬರುತ್ತೇವೆ ಹೋಗುತ್ತೇವೆ ಅಷ್ಟೆ. ನಾವು ನೋಡಿರುವ ಹಾಗೆ ಅನೇಕ ಸಾರಿ ಒಳಗೆ ಇಲ್ಲದೆ ಹೊರಗೆ ಇರುತ್ತೇವೆ. ನಮ್ಮ ಆತ್ಮ ಶೋಧನೆ ಮಾಡಿಕೊಳ್ಳಬೇಕೆ ಹೊರತು ನಾವು

ಇನ್ನೊಬ್ಬರ ಬಗ್ಗೆ ಅಪಪ್ರಚಾರ ಮಾಡತಕ್ಕಂಥ ವ್ಯವಸ್ಥೆ ಚುನಾವಣೆ ಸಂದರ್ಭಗಳಲ್ಲಿ ಆಗಬಾರದೆಂದು ನನ್ನ ಚಿಂತನೆ ಆಗಿದೆ. ಆ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರು ಮತ್ತೊಮ್ಮೆ ಈ ಸದನಕ್ಕೆ ಬರಬೇಕು, ಈ ಸದನದಲ್ಲಿ ತಾವು ಅಲ್ಲಿಯೂ ಕುಳಿತುಕೊಳ್ಳಬಹುದು, ಇಲ್ಲಿಯೂ ಕುಳಿತುಕೊಳ್ಳಬಹುದು ಅಥವಾ ಎಲ್ಲಿಬೇಕಾದರೂ ನೀವು ಕುಳಿತುಕೊಳ್ಳತಕ್ಕಂಥ ಅಧಿಕಾರ ಈ ಸದನಕ್ಕೆ ಗೆದ್ದು ಬಂದಾಗ ಬರುತ್ತದೆ. ಆದ್ದರಿಂದ ಈ ಸದನಕ್ಕೆ ಬರತಕ್ಕಂಥ ಎಲ್ಲಾ ವ್ಯಕ್ತಿಗಳ ಪೈಕಿಯಲ್ಲಿ ತಾವು ಈ ಸದನಕ್ಕೆ ಬರಬೇಕು. ಐದು ವರ್ಷಗಳ ಕಾಲ ನಮಗೆ ಹೆಚ್ಚಿನ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ ಹಾಗೂ ಎಲ್ಲಾ ರೀತಿಯಿಂದಲೂ ಬೆಂಬಲವನ್ನು ಮತ್ತು ಸಹಕಾರವನ್ನು ಕೊಟ್ಟಿದ್ದೀರಿ. ಈ ಅಯವ್ಯಯವನ್ನು ನಾನು ತಕ್ಷಣ, ಅತ್ಯಂತ ನೋವಿನಿಂದ ತಿರಸ್ಕಾರ ಮಾಡಬೇಕೆ ಅಥವಾ ಬೇಡವೆ ಎಂಬ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೇನೆ. ನಾನು ಯಾರ ಕಡೆಯು ಇದ್ದುಕೊಂಡು ಈ ಮಾತನ್ನು ಹೇಳುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರು ಐದು ಸಾರಿ ಆಯವ್ಯಯವನ್ನು ಮಂಡಿಸಿದ್ದಾರೆ ಎಂಬ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಇದು ಸಂತೋಷಪಡಬೇಕಾದ ವಿಚಾರವಾಗಿದೆ. ಮುಂದಿನ ಶಾಸಕರ ದಿನಾಚರಣೆ ಸಂದರ್ಭದಲ್ಲಿ ತಾವು ಮಾನ್ಯ ಸಿದ್ಧರಾಮಯ್ಯರವರಿಗೆ ಒಂದು ಪ್ರಶಸ್ತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ಈಗಿನ ಆಯವ್ಯಯದಲ್ಲಿ ಸ್ವಲ್ಪ ವ್ಯತ್ಯಾಸ ಆಗಿದ್ದರೂ ಕೂಡ ಐದು ವರ್ಷ ಒಬ್ಬರೆ ಆಯವ್ಯಯವನ್ನು ಮಂಡಿಸಿದ್ದಕ್ಕೆ ಪ್ರಶಸ್ತಿಯನ್ನು ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಬೈವಾಟರ್‌ಗೆ ಸಂಬಂಧಪಟ್ಟ ಹಾಗೆ, ಇನ್ವಿಮೆಂಟೇಶನ್ ಆಫ್ ಹಾವೇರಿ ವಾಟರ್ ಸ್ಕೀಂ ಬಗ್ಗೆ ನೋಟೀಸ್ ಕೊಡಲಾಗಿದೆ.

ಅಧ್ಯಕ್ಷರು :— ಹಣಕಾಸಿನ ಸಚಿವರಿಂದ ರಿಪ್ಲೈ ಆದ ಮೇಲೆ ತೆಗೆದುಕೊಳ್ಳೋಣ.. ಇದರ ಬಗ್ಗೆ ತಾವು ಮತ್ತು ಮಾನ್ಯ ಸುರೇಶ್ ಕುಮಾರ್ ಹಾಗೂ ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ. ಇದನ್ನು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ತೆಗೆದುಕೊಳ್ಳುವುದುಬೇಡ, because we have already disucssed this matter. I will give you the chance. ಆಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಮಾನ್ಯ ಅಧ್ಯಕ್ಷರೆ, ನಾನೊಂದು ವಿಷಯದ ಮೇಲೆ ಮಾತನಾಡುವುದಕ್ಕೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು :— ನಿಮ್ಮದು ತೂಕ್ಕವೇಳೆಯಲ್ಲಿ ಬರುತ್ತದೆ ಹಾಗೆಯೆ ಇನ್ನು ಕೆಲವು ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ವಿಷಯ ರೂಲ್ 69ರಲ್ಲಿ ಬರುತ್ತದೆ. ಆದ್ದರಿಂದ, ನನ್ನ ಮೊದಲನೇ

ಜವಾಬ್ದಾರಿ ಏನೆಂದರೆ, ಇವತ್ತು ಮಧ್ಯಾಹ್ನದೊಳಗೆ ಅಪ್ರೋಪ್ರಿಯೇಶನ್ ಬಿಲ್ ಪಾಸ್ ಆಗಿ ಹೋಗಬೇಕು, ಇದನ್ನು ಮುಗಿಸಿದ ನಂತರ ತಾವು ಹೇಳಿರತಕ್ಕಂಥ ವಿಷಯಗಳೆನ್ನೆಲ್ಲಾ ತೆಗೆದುಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠದ ಬಗ್ಗೆ ಧರಣಿ ಮತ್ತು ಉಪವಾಸ ಕುಳಿತಿರುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು :— ನೆನಪಿದೆ, ಆನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ :— ಬೈವಾಟರ್ ಮೇಲೆ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ. ಆದ್ದರಿಂದ ಅವರ ಟೈಂ ತಿಳಿದುಕೊಂಡು ನಾಳೆ ದಿವಸ ಇಟ್ಟುಕೊಂಡರು ಪರವಾಗಿಲ್ಲ. ಒಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕು.

ಅಧ್ಯಕ್ಷರು :— ನೋಡೋಣ. ಈಗ ಮಾನ್ಯ ಉಪಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡಿ

<u>1999-2000ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಹಣಕಾಸಿನ ಸಚಿವರ ಉತ್ತರ.</u>

+ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷದ ಅಂದರೆ 1999-2000ನೇ ಇಸವಿಯ ಆಯವ್ಯಯದ ಮೇಲೆ ಸುಮಾರು 18 ಜನ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಇವರಲ್ಲಿ ಕೆಲವರು ಟೀಕೆಗಳನ್ನು ಮತ್ತು ಉತ್ತಮವಾದಂತಹ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಕೊನೆಯಲ್ಲಿ ಮಾತನಾಡಿದಂತಹ ಮಾನ್ಯ ಮಾಟಾಳ್‌ನಾಗರಾಜ್‌ರವರು, ಮಾನ್ಯ ಅಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೂ ನಾವು ಮತ್ತೊಮ್ಮೆ ಸಭೆ ಸೇರುವುದಿಲ್ಲ ಎನ್ನುವ ರೀತಿಯಲ್ಲಿ ಭಾಷಣ ಮಾಡಿದ್ದಾರೆ. ಆದರೆ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ನಾವು ಇನ್ನೊಂದು ಬಾರಿ ಸಭೆ ಸೇರುತ್ತೇವೆ. ಮಾನ್ಯ ಹಿರಿಯ ಸದಸ್ಯರು ಹಾಗೂ ವಿರೋಧಪಕ್ಷದ ನಾಯಕರು ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಾವು ಮುಖ್ಯವಾಗಿ ಪ್ರಸ್ತಾಪ ಮಾಡಿರತಕ್ಕಂಥ 1999-2000ನೇ ಇಸವಿಯ ಆಯವ್ಯಯವನ್ನು ಕೆಲವರು ಚುನಾವಣೆ ಆಯವ್ಯಯವೆಂದು ಹೇಳಿದ್ದಾರೆ. ಮತ್ತೆ ಕೆಲವರು ಸಿದ್ದರಾಮಯ್ಯನವರು ಒಂದು ರೀತಿಯಲ್ಲಿ ರಾಜಕೀಯ ಭಾಷಣ ಮಾಡಿದ್ದಾರೆಂದು ಹೇಳಿದ್ದಾರೆ. ಮತ್ತೆ ಕೆಲವರು ಕೆಲವು ಗಂಭೀರವಾದಂತಹ ವಿಚಾರಗಳನ್ನು ಕೂಡ ಪ್ರಸ್ತಾಪಿಸಿದ್ದಾರೆ. ಬಹಳ ಮುಖ್ಯವಾಗಿ ರೆವಿನ್ಯೂ ಡಿಫಿಸಿಟ್ ಬಗ್ಗೆ ಪ್ರಸ್ತಾಪಿಸಿ, ಕೆಲವು ಸದಸ್ಯರು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ, ನಮ್ಮ ಸರ್ಕಾರ

ಹೆಚ್ಚು ಸಾಲ ಮಾಡಲು ಪ್ರಾರಂಭಿಸಿ, ಸಾಲ ತೆಗೆದುಕೊಂಡು ಹೋಳಿಗೆ ತಿಂದರು ಎನ್ನುವ ರೀತಿಯಲ್ಲಿ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಶ್ರೀ ಸುರೇಶ್‌ಕುಮಾರ್‌ರವರು ಕೇಂದ್ರ ಸರ್ಕಾರದ ಬಗ್ಗೆ ಏಕೆ ಮಾತನಾಡಿದಿರಿ ಎಂದು ಕೇಳಿದ್ದಾರೆ. ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಬಾರದೆಂದರೆ, ಅವರನ್ನು ಟೀಕೆ ಮಾಡಿದ್ದೀರಿ, ಟೀಕೆ ಮಾಡಬಾರದೆಂದು ಹೇಳಿದ್ದಾರೆ. ನಾನು ಕೇಂದ್ರ ಸರ್ಕಾರವನ್ನು ಅನಗತ್ಯವಾಗಿ ಟೀಕೆ ಮಾಡಿಲ್ಲ- ಅಥವಾ ರಾಜಕೀಯವಾಗಿ ಟೀಕೆ ಮಾಡಿಲ್ಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ, ಮತ್ತೆ ಆರ್ಥಿಕ ವಿಚಾರಗಳಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಮಾತ್ರ ಪ್ರಸ್ತಾಪಿಸಿದ್ದೆ. ಇದನ್ನು ಪ್ರತಿವರ್ಷವೂ ಕೂಡ ಪ್ರಸ್ತಾಪ ಮಾಡುತ್ತಿದ್ದೇವೆ. ಎಲ್ಲಾ ರಾಜ್ಯಗಳೂ ಕೂಡ ಪ್ರಸ್ತಾಪಿಸುತ್ತವೆ. ವಿಧಾನಸಭೆಗಳಷ್ಟೇ ಅಲ್ಲ, ನ್ಯಾಷನಲ್ ಡೆವೆಲಪ್‌ಮೆಂಟ್ ಕೌನ್ಸಿಲ್ ಬಂದಗಲೂ ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಮುಖ್ಯಮಂತ್ರಿಗಳ ಸಭೆಯಲ್ಲೂ ಕೂಡ ಕೇಂದ್ರ ಸರ್ಕಾರದವರು ಕರೆದಾಗ, ರಾಜ್ಯಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇವೆ. ಏಕೆಂದರೆ ನಾವೆಲ್ಲ ಒಕ್ಕೂಟದ ವ್ಯವಸ್ಥೆಯಲ್ಲಿರುವವರು. ಕೇಂದ್ರ ಸರ್ಕಾರ ಇಡೀ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಅದರ ಬೆಳವಣಿಗೆ ಬಗ್ಗೆ ಸಮಗ್ರವಾಗಿ ನೋಡಬೇಕಾಗುತ್ತದೆ. ಆ ತರಹದ ಆರ್ಥಿಕ ನೀತಿಯನ್ನು ರೂಪಿಸುವುದು, ಅದಕ್ಕೆ ಬೇಕಾದ ಸಂಪನ್ಮೂಲಗಳ ವ್ಯವಸ್ಥೆಯನ್ನು ಕೂಡ ರಾಜ್ಯಗಳಿಗೆ ಒದಗಿಸುವುದು, ಈ ಬಗ್ಗೆ ಕೂಡ ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ, ಕೇಂದ್ರ ಸರ್ಕಾರಕ್ಕೆ ಸಂಪನ್ಮೂಲಗಳ ಕ್ರೋಢೀಕರಣ ಮಾಡಲಿಕ್ಕೆ ಇರುವ ಅವಕಾಶಗಳು ಹೆಚ್ಚು. ಅದರೆ, ರಾಜ್ಯ ಸರ್ಕಾರಕ್ಕೆ ಬಹಳ ಸೀಮಿತವಾದ ಅವಕಾಶಗಳಿವೆ. ಇನ್‌ಕಂ ಟ್ಯಾಕ್ಸ್ ಎಕ್ಸೈಸ್ ಡ್ಯೂಟಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅವರ ಪಾಲನ್ನು ಪ್ರತಿವರ್ಷ ಕೂಡ ಕೊಡುತ್ತಿದ್ದಾರೆ. ಅದರಲ್ಲಿ ಅನೇಕ ವರ್ಷಗಳಿಂದ ನೀವು ನೋಡಿಕೊಂಡು ಬಂದರೆ, ಅಲ್ಲಿ ಯಾವುದೇ ರೀತಿಯ ಗಣನೀಯ ಹೆಚ್ಚಳವನ್ನು ನಾವು ನೋಡಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ಮಾತನ್ನು ನಾನು ಇಲ್ಲಿ ಪ್ರಸ್ತಾಪಿಸುವುದಾದರೆ, 10ನೇ ಹಣಕಾಸು ಆಯೋಗದವರು ರಾಜ್ಯಗಳಿಗೆ ಶೇ.29ರಷ್ಟು ಸಂಪನ್ಮೂಲಗಳು ವರ್ಗಾವಣೆಯಾಗಬೇಕೆಂದು ಹೇಳಿದರು. ಇವತ್ತಿನವರೆಗೆ ಅದನ್ನು ಕೊಡುವ ಕೆಲಸವನ್ನು ಕೇಂದ್ರ ಸರ್ಕಾರವು ಮಾಡಿಲ್ಲ. ಆದರೆ, ಕೊಡಬೇಕೆಂಬ ಶಿಫಾರಸಿದ್ದರೂ, ಅದನ್ನು ನೀವು ಪ್ರತಿಸಾರಿ ಕೇಳುತ್ತಿದ್ದೇವೆ. ಕಾರಣವೇನು ಹೇಳುತ್ತಾರೆಂದರೆ, ಇನ್ನೂ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡಿಲ್ಲ, ಆ ತಿದ್ದುಪಡಿ ಮಾಡದಿರುವುದರಿಂದ ಕೊಡುವುದಕ್ಕಾಗುವುದಕ್ಕಾಗಿಲ್ಲವೆಂದು ಹೇಳುತ್ತಾರೆ. 10ನೇ ಹಣಕಾಸು ಆಯೋಗ ಶಿಪಾರಸ್ಸು ಮಾಡಿರುವ ಪ್ರಕಾರ, ನಮಗೆ ಕೊಡಿ, ರಾಜ್ಯಾಂಗ ತಿದ್ದುಪಡಿ ಮಾಡಲು ನಿಮಗೆ ತೊಂದರೆ ಏನಿದೆ ಅಥವಾ ಪೆಂಡಿಂಗ್ ಅಮೆಂಡ್‌ಮೆಂಟ್ ಟು ದಿ ಕಾನ್‌ಸ್ಟಿಟ್ಯೂಷನ್ ಕೂಡಿ ಎಂದು ಹೇಳಿದ್ದೇವೆ. ಅದರೂ ಕೂಡ, ಇಲ್ಲಿಯವರೆಗೆ ಆ ಪ್ರಯತ್ನ ಮಾಡಿಲ್ಲ, ಈಗಾಗಲೇ 11ನೇ ಹಣಕಾಸು ಆಯೋಗ ರಚನೆಯಾಗಿದೆ. ಅವರು ಅಭಿಪ್ರಾಯಗಳನ್ನು ಕೇಳಲು ಪ್ರಾರಂಭ ಮಾಡಿದ್ದಾರೆ.

ಎಲ್ಲಾ ರಾಜ್ಯ ಸರ್ಕಾರಗಳೂ ಮೆಮೊರ್ಯಾಂಡಂ ಸಬ್‌ಮಿಟ್ ಮಾಡುತ್ತಿವೆ. ನಮಗೆ ಆದರ ಪ್ರಕಾರ ಬಂದಿದ್ದರೆ, 29 ಪರ್ಸೆಂಟ್ ಪ್ರಕಾರ ನಮ್ಮ ರಾಜ್ಯಕ್ಕೆ ಸುಮಾರು 500 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ನಮ್ಮ ರಾಜ್ಯದಲ್ಲೇ ಅಲ್ಲ, ಇದೇ ರೀತಿಯಾಗಿ ಎಲ್ಲಾ ರಾಜ್ಯಗಳೂ ಇದರಿಂದ ವಂಚಿತವಾಗಿವೆ. ಇದನ್ನು ಕೊಡಲಿಲ್ಲವೆಂದರೆ, ಇದು ಟೀಕೆಯಾಗುವುದಿಲ್ಲ. ರಾಜ್ಯ ಸರ್ಕಾರದ ಹಣಕಾಸಿನ ಸ್ಥಿತಿ ಬಗ್ಗೆ, ಇರುವ ಸಂಪನ್ಮೂಲಗಳ ಬಗ್ಗೆ ಚರ್ಚೆ ಮಾಡುವಾಗ ಒಕ್ಕೂಟದ ವ್ಯವಸ್ಥೆಯಲ್ಲಿರುವ ನಾವು ಇದನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ಮಾಡಲೇಬೇಕು. ನಿಮಗೆ ಇನ್ನೊಂದು ಮಾತನ್ನು ನಾನು ಹೇಳಲು ಬಯಸುತ್ತೇನೆ, ದೇಶದಲ್ಲಿ ಪ್ರೊಡ್ಯೂಸ್ ಆಗುವ ಸಾಫ್ಟ್‌ವೇರ್‌ನಲ್ಲಿ ಶೇ.40ರಷ್ಟು ಕರ್ನಾಟಕ ರಾಜ್ಯದಲ್ಲೇ ಆಗುತ್ತದೆ. ಎರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಸಾಫ್ಟ್‌ವೇರ್ ಬೇರೆ ದೇಶಗಳಿಗೆ ರಫ್ತಾಗುತ್ತದೆ. ಆದರೆ, ರಾಜ್ಯ ಸರ್ಕಾರಕ್ಕೇನೂ ಬರುವುದಿಲ್ಲ. ನಾವು ಅದಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ, ಅದಕ್ಕೆ ಬೇಕಾದ ಪರಿಸರ ಸೃಷ್ಟಿ ಮಾಡಿ, ರಾಜ್ಯ ಸರ್ಕಾರಗಳಿಗೆ ಎಕ್ಸ್‌ಪೋರ್ಟ್ ಆಗುವುದರಲ್ಲಿ ತೆರಿಗೆಯೇನೂ ಬರುವುದಿಲ್ಲ. ಆದರೆ ಕೇಂದ್ರ ಸರ್ಕಾರಕ್ಕೆ ಫಾರಿನ್ ಎಕ್ಸ್‌ಛೇಂಜ್ ಸಿಗುತ್ತದೆ. ಅವರು ಅದರಲ್ಲಿ ನಮಗೇನೂ ಕೊಡುವುದಿಲ್ಲ. ಅದಕ್ಕೆ ನಾನು ಒತ್ತಾಯ ಮಾಡುತ್ತೇನೆ, ಸರ್ವೀಸ್ ಸೆಕ್ಟಾರ್ ಮೇಲೆ ರಾಜ್ಯ ಸರ್ಕಾರಗಳಿಗೆ ತೆರಿಗೆ ಹಾಕುವ ಅಧಿಕಾರವನ್ನು ಕೊಡಬೇಕು. ಅದನ್ನೆಲ್ಲಾ ಅವರೇ ಇಟ್ಟುಕೊಂಡು, ರಾಜ್ಯಸರ್ಕಾರಗಳಿಗೆ ಅಧಿಕಾರ ನೀಡಿದೆ, ರಾಜ್ಯಸರ್ಕಾರಗಳ ಪ್ರಯತ್ನದಿಂದಾಗುವ ರಫ್ತು, ಅದರಿಂದ ಕೇಂದ್ರಸರ್ಕಾರಕ್ಕೆ ಬರುವ ಫಾರಿನ್ ಎಕ್ಸ್‌ಛೇಂಜ್ ಇದರಿಂದ ಕೇಂದ್ರ ಸರ್ಕಾರಕ್ಕೆ ಲಾಭವಾಗುತ್ತಿದೆ. ಅದಜರೆ, ರಾಜ್ಯಗಳಿಗೇನೂ ದೊರೆಯುವುದಿಲ್ಲ. ಈ ಕಾರಣಕ್ಕೋಸ್ಕರವಾಗಿ, ರಾಜ್ಯ ಸರ್ಕಾರಗಳಿಗೆ ಸರ್ವಿಸಸ್ ಮೇಲೂ ಕೂಡ ತೆರಿಗೆ ಹಾಕುವ ಅಧಿಕಾರ ಕೊಡಬೇಕೆಂಬುದು ನಮ್ಮ ಒತ್ತಾಯ. ಈಗ ಕೇಂದ್ರ ಸರ್ಕಾರದ ಆಯ್ಯಮ್ಮಯವನ್ನು ತಾವು ನೋಡಿದ್ದೀರಿ. ಅದರಲ್ಲಿ ಬಹುಶ: ಶ್ರೀ ಫೂರ್ಪಡೆಯವರು ಅದನ್ನು ಒಪ್ಪಿಕೊಳ್ಳುತ್ತಾರೆ, ಅವರೇ ನಮಗೆ ಕೊಡಬೇಕಾಗುತ್ತೆಂಬುದನ್ನು ಅವರ ಭಾಷಣದಲ್ಲಿ ಹೇಳಿದ್ದಾರೆ. ಇನ್‌ಕಂಮ್ಯಾಕ್ಸ್ ಮೇಲೆ 10 ಪರ್ಸೆಂಟ್ ಸರ್‌ಚಾರ್ಜ್ ಹಾಕಿದ್ದಾರೆ. ಎಕ್ಸೈಜ್ ಡ್ಯೂಟಿ ನಮಗೆ ಶೇರಬಲ್ ಅಲ್ಲ. ಕೇಂದ್ರ ಸರ್ಕಾರದವರೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ, ಆ ನೆಪ ಉಪಯೋಗಿಸುತ್ತಾರೆ. ಸರ್‌ಚಾರ್ಜ್ ಹೆಸರು ಹೇಳಿ, ಆದರಿಂದ ಕೇಂದ್ರ ಸರ್ಕಾರಕ್ಕೆ ಬರುವ ಹಣ ಇದರಲ್ಲಿ ನಮಗೆ ಯಾವ ಪಾಲೂ ಇಲ್ಲ. ಇದರಲ್ಲಿ ನಮಗೆ ಪಾಲು ಕೊಡಬೇಕೆಂದು ಕೇಳಿದರೆ, ಇಲ್ಲ ನೀವು ಕೇಳುವ ಹಾಗಿಲ್ಲ, ಅದನ್ನು ಬೇರೆ ರೀತಿಯಲ್ಲಿ ಬೇರೆ ರಾಜ್ಯಗಳಿಗೆ ಉಪಯೋಗಿಸುತ್ತಾರೆ, ಎಂದು ಹೇಳುತ್ತಾರೆ. ಕೇಳುವ ಹಾಗಿಲ್ಲವೆಂದರೆ ಹೇಗೆ? ರಾಜ್ಯ ಸರ್ಕಾರಗಳು ಕೂಡ ತಮ್ಮ ಪಾಲುಗಾರಿಕೆಯನ್ನು ಪಡೆದುಕೊಳ್ಳುವುದಕ್ಕೆ ಅರ್ಹತೆ ಇದೆ ಎಂದು ನಾವು ಧೈರ್ಯವಾಗಿ ಹೇಳಬೇಕಾಗುತ್ತದೆ. ಅದನ್ನೂ ಕೂಡ ಕೊಡಬೇಕೆಂದು ನಾವು ಕೇಳುವುದು. ಇದನ್ನು ಟೀಕೆ ಮಾಡಿದಂತೆ ಆಯಿತೇ? ನಾವು ಪ್ರತಿ ಬಾರಿಯೂ

ಕೇಳುತ್ತೇವೆ. ಕೆಲವು ರಾಜ್ಯಗಳಿಗೆ ರೆವಿನ್ಯೂ ಡೆಫಿಸಿಟ್ ಸತತವಾಗಿ ಮಾಡಿಕೊಂಡು ಹೋಗುತ್ತಿರುತ್ತಾರೆ. ಅವರ ವಿವೇಚನೆಯಲ್ಲಿರತಕ್ಕಂತಹ ಅನುದಾನವನ್ನು ಕೊಡುವಂಥದ್ದುರಲ್ಲಿ, ಅವರಿಗೆ ಹೆಚ್ಚು ಕೊಡುತ್ತಾರೆ. ಯಾರು ಆರ್ಥಿಕ ಶಿಸ್ತನ್ನು ಪಾಪಾಡಿಕೊಂಡು ತೆರಿಗೆಯ ಸಂಪನ್ಮೂಲಗಳನ್ನು ಸರಿಯಾಗಿ ಮಾಡಿ ಅದರಲ್ಲಿ ಆರ್ಥಿಕ ನಿರ್ವಹಣೆಯಯನ್ನು ಯಾರು ಚೆನ್ನಾಗಿ ಮಾಡಿರುತ್ತಾರೆ ಅವರಿಗೆ ಪೆನಾಲ್ಟಿಯನ್ನು ಹಾಕುತ್ತಾರೆಯ ಈ ಒಂದು ಪದ್ಧತಿ ಬದಲಾಣೆಯಾಗಬೇಕು. ಯಾವ ರಾಜ್ಯ ಆರ್ಥಿಕ ನಿರ್ವಾಹಣೆಯನ್ನು ಚೆನ್ನಾಗಿ ಮಾಡುತ್ತಿದೆಯೋ, ಯಾವ ರಾಜ್ಯವ್ಯ ತೆರಿಗೆ ವಸೂಲಾತಿಯನ್ನು ಚೆನ್ನಾಗಿ ಮಾಡುತ್ತದೋ, ಯಾವ ರಾಜ್ಯವ್ಯ ಯೋಜನಾ ವೆಚ್ಚವನ್ನು ಚೆನ್ನಾಗಿ ಮಾಡುತ್ತದೋ ಆ ರಾಜ್ಯಗಳಿಗೂ ಕೂಡ ಕೇಂದ್ರ ಸರ್ಕಾರವ್ಯ ಹೆಚ್ಚು ಅನುದಾನವನ್ನು ಕೊಡಬೇಕೆಂದು ಹೇಳುವಂಥದ್ದು ಇದು ರಾಜ್ಯಗಳ ಹಕ್ಕು ಎನ್ನುವಂತಹ ಮಾತನ್ನು ನಾನು ತಿಳಿಸುವುದಕ್ಕೆ ಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ಮಾರ್ಕೆಟ್ ಬಾರೋಯಿಂಗ್ ಎಂದು ಕೊಡುತ್ತಾರೆ. ಆ ಮಾರ್ಕೆಟ್ ಬಾರೋಯಿಂಗ್‌ನಲ್ಲಿ ಒಂದೊಂದು ರಾಜ್ಯಗಳಲ್ಲಿ ಒಂದೊಂದು ರೀತಿಯ ವಿವೇಚನೆಯನ್ನು ಇವರು ಅಲೋ ಮಾಡುತ್ತಾರೆ. ನಮ್ಮ ರಾಜ್ಯಕ್ಕೆ ಈ ಸಾರಿ 1,100 ಕೋಟಿ ರೂಪಾಯಿಗಳನ್ನು ಕೊಟ್ಟರು. ಅದೇ ಆಂಧ್ರಪ್ರದೇಶಕ್ಕೆ 1,500 ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಇದಕ್ಕೆ ಯಾವುದೇ ರೀತಿಯ ಅಳತೆಗೋಲು ಇರುವ್ಯದಿಲ್ಲ. ಇದಕ್ಕೆ ಕಾರಣವೇನು ಎಂದು ಕೇಳಿದರೆ ಹೋದ ಸಾರಿ ಕೊಟ್ಟಿದ್ದವು, ಅದಕ್ಕೆ ಈ ಸಾರಿಯೂ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ಹೇಳುತ್ತಾರೆ. ನಾವು ಯೋಜನಾ ಆಯೋಗದ ಮುಂದೆ ಚರ್ಚೆಗೆ ಹೋಗಿ ಕೇಳಿದಾಗ ಆಗ ಅವರು ಆ ರಾಜ್ಯದವರು ಕೇಳಿದ್ದರು ಅದಕ್ಕೆ ಕೊಟ್ಟಿದ್ದೇವೆ. ಮತ್ತೆ ಇಟ್ಟುಕೊಂಡಿದ್ದಂತಹ ಚೀಟಿಯೂ ನೀವು ಬರುವುದರೊಳಗೆ ಖಾಲಿಯಾಯಿತು. ನಾವು ಮೊದಲು ಬಂದವರಿಗೆ ಆದ್ಯತೆಯನ್ನು ಕೊಟ್ಟಿದ್ದೇವೆ. ಇದರಿಂದಾಗಿ ನಿಮಗೆ ಮಾರ್ಕೆಟ್ ಬಾರೋಯಿಂಗ್ ಆಗಿಹೋಯಿತು. ಇದಕ್ಕಿಂತ ಹೆಚ್ಚಿಗೆ ನಿಮಗೆ ಹಣ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದರೆ ಬೇರೆ ಬೇರೆ ರೀತಿಯಲ್ಲಿ ಕೊಡುತ್ತಾರೆ. ಇದಕ್ಕೆ ಯಾವುದೇ ಒಂದು ವೈಜ್ಞಾನಿಕವಾದಂತಹ ಅಳತೆಗೋಲನ್ನು ಇಟ್ಟುಕೊಳ್ಳದೆ ಈ ತರಹ ಮಾಡುತ್ತಾರೆ. ಯಾವುದಾದರೂ ಒಂದು ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಬೇಕು. ಈ ತರಹವಾದ ತಾರತಮ್ಯವಾಗಬಾರದು; ಎಂದು ನಮ್ಮ ಆಗ್ರಹ. ಕೇಂದ್ರ ಸರ್ಕಾರದ ಮೇಲೆ ಈ ಪದ್ಧತಿ ಬದಲಾವಮೆಯಾಗಬೇಕು. ಇಲ್ಲದೇ ಹೋದರೆ ಒಂದು ರಾಜ್ಯಕ್ಕೆ ಹೆಚ್ಚು ಸಿಗುತ್ತದೆ ಮತ್ತೊಂದು ರಾಜ್ಯಕ್ಕೆ ಕಡಿಮೆ ಸಿಗುತ್ತದೆ. ಇದರಲ್ಲಿ, ಹೆಚ್ಚಿಗೆ ಪ್ರಭಾವವಿದ್ದರೆ ಅಥವಾ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಂಬಂಧವನ್ನು ಚೆನ್ನಾಗಿ ಇಟ್ಟುಕೊಂಡಿದ್ದರೆ ಈ ತರಹ ಕನ್ ಸಿಡರೇಷನ್ ಆಗಿಬಿಡುತ್ತದೆ. ಆ ಕಾರಣಕ್ಕೋಸ್ಕರ ವೈಜ್ಞಾನಿಕವಾದ ಪದ್ಧತಿಯನ್ನು ಇಟ್ಟುಕೊಂಡು ಈ ತರಹ ಒಂದು ತೀರ್ಮಾನವನ್ನು ಮಾಡಬೇಕು ಎಂದು ಹೇಳುವಂಥದ್ದು, ನಮ್ಮ ಮೊದಲಿನಿಂದಲೂ ಇರುವಂತಹ ವಾದವಾಗಿದೆ. ನಾವು ಪದೇಪದೇ ಎಲ್ಲಾ ವೇದಿಕೆಗಳಲ್ಲೂ ಅವಕಾಶ ಸಿಕ್ಕಿದಾಗ ಪ್ರಸ್ತಾಪ ಮಾಡುತ್ತಾ ಬರುತ್ತಿದ್ದೇವೆ. ರಿಸೋರ್ಸ್‌ನಲ್ಲಿ

ಮತ್ತು ತೆರಿಗೆ ರೆವೆನ್ಯೂಶನ್‌ನಲ್ಲಿ ಕನಿಷ್ಟ ನಮ್ಮಲ್ಲಿರತಕ್ಕಂತಹ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಇಲ್ಲ. ಇಲ್ಲಿ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಜವಾಬ್ದಾರಿ ಇದೆ. ನಮಗೆ ಹೆಚ್ಚು ಜವಾಬ್ದಾರಿಗಳು ಇರುವುದರಿಂದ, ಸಂಪನ್ಮೂಲಗಳು ಕಡಿಮೆ ಇರುವುದರಿಂದ ಕನಿಷ್ಟ ತೆರಿಗೆ ಶೇಕಡ 40 ರಷ್ಟಾದರೂ ನಮ್ಮ ಪಾಲನ್ನು ಕೊಡಬೇಕೆಂದು ನಮ್ಮದು ಅವ್ಯಾಹತವಾಗಿ ಒತ್ತಾಯ ಮಾಡುತ್ತಿದ್ದೇವೆ. ಈ ಒತ್ತಾಯವನ್ನು ನಾವು ಪದೇ ಪದೇ ಮಾಡುತ್ತಿದ್ದೇವೆ. 10ನೇ ಆಯೋಗದಲ್ಲಿ 29 ಪರ್ಸೆಂಟ್ ಎಂದು ಹೇಳಿದರು. ನಾವು ಕನಿಷ್ಟ 40 ಪರ್ಸೆಂಟ್‌ನ್ನು ಕೊಡಿ ಎಂದು ಕೇಳುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ 50 ಪರ್ಸೆಂಟ್‌ನ್ನು, 45 ಪರ್‌ಸೆಂಟ್ ಹಣವನ್ನು ಕೇಳುತ್ತಿದ್ದಾರೆ. ನಮ್ಮ ಕರ್ನಾಟಕ ಸರ್ಕಾರವು ಪದೇಪದೇ ಗರಿಷ್ಠ 40 ಪರ್ಸೆಂಟ್ ಹಣವನ್ನು ಕೊಡಬೇಕು ಇಲ್ಲದೇ ಹೋದರೆ ರಾಜ್ಯದ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಕಷ್ಟವಾಗುತ್ತದೆ. ರಾಜ್ಯದ ಬೆಳವಣಿಗೆಯನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮಾಡಲಿಕ್ಕೆ, ಸಮಾಜದಲ್ಲಿ ಸಾಮಾಜಿಕವಾಗಿ ನ್ಯಾಯವನ್ನು ಒದಗಿಸಿಕೊಡಲು ಬಹಳ ಕಷ್ಟದ ಕೆಲಸವಾಗುತ್ತದೆ. ನಮಗೆ ಹೆಚ್ಚು ಸಂಪನ್ಮೂಲಗಳನ್ನು ವರ್ಗಾವಣೆ ಮಾಡಬೇಕು ಎನ್ನುವಂತಹ ವಾದವನ್ನು ನಾವು ಪದೇಪದೇ ಮಾಡಿಕೊಂಡು ಬರುತ್ತಿದ್ದೇವೆ. 11ನೇ ಹಣಕಾಸಿನ ಆಯೋಗದವರು ಮೇ ತಿಂಗಳ ಮೊದಲನೆಯ ವಾರದಲ್ಲಿ ಕರ್ನಾಟಕಕ್ಕೆ ಬರುತ್ತಿದ್ದಾರೆ. ಆಗ ಮತ್ತೆ ನಮ್ಮ ವಾದವನ್ನು ಮಂಡಿಸುತ್ತೇವೆ. ಮುಖ್ಯಮಂತ್ರಿಗಳ ಜೊತೆ ಸಭೆ ಇರುತ್ತದೆ. ಅವರು ವಿರೋಧಪಕ್ಷದ ನಾಯಕರುಗಳನ್ನು ಸಹ ಭೇಟಿ ಮಾಡುತ್ತಾರೆ. ರಾಜ್ಯ ಸರ್ಕಾರದ ಪರವಾಗಿ ನಾವು ಮೆಮೋರ್ಯಾಂಡಮ್‌ನ್ನು ಕೊಡುತ್ತೇವೆ. ಬೇರೆಬೇರೆ ಮಂತ್ರಿಗಳ ಜೊತೆಯಲ್ಲಿ ಮತ್ತು ಕೆಲವರು ಮುಖ್ಯ ಇಲಾಖೆಗಳನ್ನು ಹೊಂದಿದ್ದಾರೆ, ಆ ಸಚಿವರುಗಳ ಜೊತೆಯಲ್ಲಿಯೂ ಚರ್ಚೆಯನ್ನು ಮಾಡುತ್ತಾರೆ. ಈ ವರ್ಷದ ಮೇ ತಿಂಗಳಿನಲ್ಲಿ ಮೊದಲನೇ ವಾರ ಅವರು ಕರ್ನಾಟಕಕ್ಕೆ ಬರುತ್ತಿದ್ದಾರೆ. ನಮ್ಮ ಎಲ್ಲಾ ವಿಚಾರಗಳನ್ನು ಒಳಗೊಂಡು ವಿವರವಾದಂತಹ ಒತ್ತಾಯಪೂರ್ವಕವಾದಂತಹ ಮನವಿಯನ್ನು 11ನೇ ಹಣಕಾಸಿನ ಆಯೋಗದ ಮುಂದೆ ನಾವು ಮಂಡಿಸುತ್ತೇವೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ತಿಳಿಸಲಿಕ್ಕೆ ಇಚ್ಛಿಸಬಯಸುತ್ತೇನೆ. ಇದೊಂದು ರಾಜಕೀಯ ಭಾಷಣ ಮತ್ತು ಚುನಾವಣಾ ಆಯವ್ಯಯ ಎಂದು ಕೆಲವಾರು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಈ ವರ್ಷ ಚುನಾವಣೆ ಬರುತ್ತಿರುವುದು ನಿಜ. ಆದರೆ, ಈ ವರ್ಷದ ಆಯವ್ಯಯ ಮತ್ತು ಹಿಂದಿನ ನಾಲ್ಕು ವರ್ಷಗಳ ಆಯವ್ಯಯವನ್ನು ಸಮಗ್ರವಾಗಿ ನೋಡಿದಾಗ, ಇದು ಚುನಾವಣಾ ಆಯವ್ಯಯವಲ್ಲವೆಂದು ಬಹಳ ಸ್ಪಷ್ಟವಾಗಿ ಯಾರಿಗಾದರೂ ಗೊತ್ತಾಗುತ್ತದೆ. ಇದು ಚುನಾವಣೆಗೋಸ್ಕರವಾಗಿ ತಯಾರು ಮಾಡಿರುವಂತಹ ಆಯವ್ಯಯವಂತೂ ಅಲ್ಲವೇ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮ ಫ್ರೆಂಡೇ ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ :— ನೀವು ನಮ್ಮ ಫ್ರೆಂಡ್, ನೀವು ನಮ್ಮ ಫ್ರೆಂಡ್ ಅಲ್ಲವಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇದು ಚುನಾವಣಾ ದೃಷ್ಟಿಕೋನದಿಂದ ತಯಾರು ಮಾಡಿರುವಂತಹ ಬಜೆಟ್ ಎಂದು ನಾವು ಮೊದಲಿನಿಂದಲೂ ನೋಡಿಕೊಂಡು ಹೇಳಿದ್ದೇವೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಮೊದಲು ಅಪ್ರಿಷಿಯೇಟ್ ಮಾಡುತ್ತಿದ್ದರು. ಕೊನೆಗೂ ಅವರು ಇದು ಚುನಾವಣಾ ಬಜೆಟ್ ಎಂದು ನಾವು ಹೇಳಿದ್ದಲ್ಲಿಗೆ ಬಂದರು.

ಶ್ರೀ ಸಿದ್ದರಾಮಯ್ಯ :— ಇಷ್ಟೆಲ್ಲಾ ಹಣಕಾಸಿನ ಆರ್ಥಿಕ ಮುಗಟ್ಟು ತೊಂದರೆಗಳಿದ್ದರೂ ಸಹ ಅವರು ಕಮಲ ಇದೆ ಎಂದು ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇಷ್ಟೆಲ್ಲಾ ತೊಂದರೆಗಳಿದ್ದರೂ ಕೂಡ ಅವರು ಕಿಸರಿನೊಳಗಡೆ ಕಮಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಬಗ್ಗೆ ಅವರು ಬಹಳ ಸ್ಪಷ್ಟವಾಗಿ 5-6 ಸಾರಿ ಪ್ರಸ್ತಾಪ ಮಾಡಿದ್ದಾರೆ. ಇದರಿಂದ ಇವರಿಗೆ ನಮ್ಮ ಅಭಿನಂದನೆಗಳು ಇದ್ದೆ ಇರುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ :— ಕೋಣನ ಸರ್ಕಾರದ ಕೋಡಿಗೆ ಕಮಲ ಎಂದು ಹೇಳಿದರು. ಕೋಣನ ಸರ್ಕಾರವೇ ಅಥವಾ ಎಮ್ಮೆ ಸರ್ಕಾರವೋ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರಲ್ಲ.

ಶ್ರೀ ಸಿದ್ದರಾಮಯ್ಯ :— ಅವರು ನೋಡುವ ದೃಷ್ಟಿಕೋನದಲ್ಲಿ ಹೇಗೇಗೆ ನೋಡುತ್ತಾರೆ ಹಾಗಾಗಿ ಕಾಣುತ್ತದೆ. ಕೋಣಗಳು ಕಾಣಿಸುತ್ತವೆ, ಎಮ್ಮೆಗಳು ಕಾಣಿಸುತ್ತವೆ. ಕತ್ತೆಗಳು ಕಾಣಿಸುತ್ತವೆ. ಮನುಷ್ಯರನ್ನು ನೋಡಬೇಕು ಎನ್ನುವ ದೃಷ್ಟಿಯಿಂದ ನೋಡಿದರೆ ಯಾವಾಗಲೂ ಮನುಷ್ಯರೇ ಕಾಣಿಸುತ್ತಾರೆ. ಆ ದೃಷ್ಟಿಯನ್ನು ಬಿಟ್ಟು ಬೇರೆಬೇರೆ ದೃಷ್ಟಿಯಿಂದ ನೋಡಿದರೆ ಬೇರೆಬೇರೆ ತರಹ ಕಾಣಿಸುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯ ದೃಷ್ಟಿಯಿಂದ ನೋಡಿದ್ದಾರೆ. ಕಮಲ ಎಂದು ಹೇಳಿದ್ದಾರೆ. ಎಮ್ಮೆಯೂ ಕೂಡ ಅದು ಒಂದು ಪ್ರಾಣಿನೇ, ಅದರ ಜೀವಿತ ಕಾಲದಲ್ಲಿ ಬಹಳ ಉಪಕಾರ ಮಾಡಿ ಹೋಗುತ್ತದೆ. ಫಿಲಿಪೈನ್ ದೇಶದಲ್ಲಿ ಅದು ಒಂದು ರಾಷ್ಟ್ರೀಯ ಪ್ರಾಣಿ. ಎಮ್ಮೆ ಎಂದು ಅಷ್ಟು ಕಳಪೆ ದೃಷ್ಟಿಯಲ್ಲಿ ನೋಡುವುದು ಸರಿಯಲ್ಲ.

ಶ್ರೀ ಅರಗ ಜ್ಞಾನೇಂದ್ರ :— ಎಮ್ಮೆ ಯಮನ ವಾಹನ.

ಶ್ರೀ ಸಿದ್ದರಾಮಯ್ಯ :— ಅದು ಯಾರಿಗೆ ಗೊತ್ತು. ಅದು ಯಮನ ವಾಹನವೆಂದು ಅದನ್ನು ನೀವು ನೋಡಿದ್ದೀರಾ? ಸುಮ್ಮನೇ ನೀವು ಓದಿಕೊಂಡು ಹೇಳುವುದಲ್ಲ. ಅದನ್ನು ನೀವು ನೋಡಿದ್ದೀರಾ? ನಾವು ಫೋಟೋದಲ್ಲಿ ನೋಡಿದ್ದೇವೆ, ಪುಸ್ತಕಗಳಲ್ಲಿ ನೋಡಿದ್ದೇವೆ, ಅದನ್ನು ಬಿಡಿ. ಯಮನು ಇಲ್ಲ, ದೆವ್ವಗಳು ಇಲ್ಲ ಸುಮ್ಮನೆ ಯಮನ ವಾಹನವಂತೆ. ಕೋಣ ಮತ್ತು ಎಮ್ಮೆಯನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಎಮ್ಮೆಯ ಹಾಲಿನಲ್ಲಿ ಬೆಣ್ಣೆಯ ಪರ್ಸೆಂಟೇಜ್ ಎಷ್ಟಿದೆ ಗೊತ್ತಾ ನಿಮಗೆ? 8 ಪರ್ಸೆಂಟ್, 9 ಪರ್ಸೆಂಟ್

12.30 ಪಿ.ಎಂ.

ಇದೆ. ಗುಜರಾತಿನಲ್ಲಿ 11 ಪರ್ಸೆಂಟ್. ಎಮ್ಮೆ ಬೆಣ್ಣೆ ಕೊಡಲಿಕ್ಕೆ ಅತ್ಯಂತ ಯೋಗ್ಯವಾದ ಪ್ರಾಣಿ. ಅದರಿಂದ ಎಮ್ಮೆ ತರಹ ಇದೆಯೆಂದರೆ ಬಹುಶ: ಕರೆಯುವ ಎಮ್ಮೆಯೆಂದು ಆ ಅರ್ಥದಲ್ಲಿ ಹೇಳಿರಬಹುದು.

ಶ್ರೀ ವಾಟಾಳ್ ನಾಗರಾಜ್ :— ತಪ್ಪೇನೂ ಇಲ್ಲ, ಎಮ್ಮೆ ಶಕ್ತಿಯ ವರ್ಣನೆ ಅಂದರೆ ಬಹಳ ಅರ್ಥವಿದೆ.

ಶ್ರೀ ಸಿದ್ಧರಾಮಯ್ಯ :— ಎಮ್ಮೆ ಕರೆಯುವ ಎಮ್ಮೆ ಎಂದು ಹೇಳಿರಬಹುದು. ನಮ್ಮ ಸರ್ಕಾರ ಒಂದು ತರಹ ಕರೆಯುವ ಎಮ್ಮೆ ಇದ್ದ ಹಾಗೆ.

ಶ್ರೀ ವಾಟಾಳ್ ನಾಗರಾಜ್ :— ಎಮ್ಮೆ ಅಂದರೆ ಏನೆಂದರೆ, ಅದು ಯಾರೇ ಬಂದರೂ ಅವರೇ ಪಕ್ಕಕ್ಕೆ ಹೋಗಬೇಕೆ ಹೊರತು ಎಮ್ಮೆ ನಿಂತೇ ಇರುತ್ತೇ. ಬಸ್ ಬರಲಿ, ಕಾರು ಬರಲಿ ಮಳೆ ಬೀಳಲಿ ಏನೇ ಬಂದರೂ ಆ ಶಕ್ತಿಯಿದೆ ಎಂದು ಆ ಭಾವನೆ ಇದೆ ಎಂದು.

ಶ್ರೀ ಸಿದ್ಧರಾಮಯ್ಯ :— ಎರಡೂ ಸರಿಯಿದೆ.

ಶ್ರೀ ವಾಟಾಳ್ ನಾಗರಾಜ್ :— ಅದನ್ನೆ ಪಟೇಲರವರಿಗೆ ಹೇಳುವುದು ಎಮ್ಮೆಯಾಗೆ ಭದ್ರವಾಗಿ ಅಲುಗಾಡದೆ ಯಾವುದೇ ವಾಹನ ಬಂದರೂ ಅಲ್ಲಾಡುವುದಿಲ್ಲ. ಹಾರನ್ ಹೊಡೆಯಲಿ ಅಲ್ಲಾಡುವುದಿಲ್ಲ. ಮಳೆ ಬರಲಿ ಅಲ್ಲಾಡುವುದಿಲ್ಲ. ಹಾಗೆ ವಿಶ್ಲೇಷಣೆ ಮಾಡಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏನೋ ಬದಲಾವಣೆಯಾಯಿತು. ಮುಖ್ಯಮಂತ್ರಿಗಳು ಬರುವುದಕ್ಕೆ ಮುಂಚೆ 111 ಎಮ್ಮೆಯಲ್ಲಿ ನಮ್ಮ ಪಟೇಲರು ಒಂದು ಕೋಣ ಇದ್ದಹಾಗೆ ಎಂದು ಹೇಳಿದ್ದರು. ಈಗ ಏನೋ ಬದಲಾವಣೆ ಆಯಿತು.

ಶ್ರೀ ವಾಟಾಳ್ ನಾಗರಾಜ್ :— ನಾನು ಕೋಣವೆನ್ನುವ ಪದವನ್ನೇ ಉಪಯೋಗಿಸಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹೀಗೆ ಹೇಳಿದರೆ ನಾನೇನು ಮಾಡಲಿ?

ಶ್ರೀ ವಾಟಾಳ್ ನಾಗರಾಜ್ :— ಎಮ್ಮೆ ಎನ್ನತಕ್ಕ ಪದ ಬೇರೆ. ಎಮ್ಮೆಯ ಮೇಲೆ ಮಳೆ ಹುಯ್ದರೆ ಎನ್ನುವ ಒಂದು ಗಾದೆ ಇದೆ. ಎಮ್ಮೆ ನಿಂತಾಗ ಯಾರೇ ಬಂದರೂ ಅವರೇ ಪಕ್ಕಕ್ಕೆ ಹೋಗಬೇಕೆ ಹೋರತು ಅಂದರೆ ಅಷ್ಟು ಶಕ್ತಿಯುತವಾಗಿದೆ ಎನ್ನುವ ಅರ್ಥವನ್ನು ಕೊಟ್ಟಿರುವುದು ಇದರಲ್ಲಿ ಏನೂ ಬದಲಾವಣೆಯ ಪ್ರಶ್ನೆ ಇಲ್ಲವೇ ಇಲ್ಲವಲ್ಲ.

ಶ್ರೀ ಸಿದ್ಧರಾಮಯ್ಯ :— ಎಮ್ಮೆಯಲ್ಲಿ ಸತ್ವ ಇದೆ ಎನ್ನತಕ್ಕದ್ದರಲ್ಲಿ ಎರಡನೆಯ ಮಾತಿಲ್ಲ. ಸತ್ವ ಇದೆ ಶಕ್ತಿಯಿದೆ, ಉಪಯೋಗಕ್ಕೆ ಆಗುತ್ತದೆ ಅವುಗಳೆಲ್ಲವೂ ಕೂಡ ಪರಿಗಣಿಸಬೇಕು. ಆ ಒಂದು ದೃಷ್ಟಿಕೋನದಿಂದ ಹೇಳಿದ್ದರೆ ನಮ್ಮದು ಸ್ವಾಗತವಿದೆ.

ಶ್ರೀ ಮಾಟಾಳ ನಾಗರಾಜ್:— ಬೇರೆ ದೃಷ್ಟಿ ಇಲ್ಲವೇ ಇಲ್ಲ.

ಶ್ರೀ ಸಿದ್ದರಾಮಯ್ಯ:— ಅದು ಸರಿ, ಆ ದೃಷ್ಟಿ ಇಟ್ಟುಕೊಂಡು ಹೇಳಿರುವುದರಿಂದ ನಮ್ಮದು ಸ್ವಾಗತವಿದೆ. ಕಳೆದ ಐದು ವರ್ಷಗಳ ಆಯವ್ಯಯವನ್ನು ಸಮಗ್ರವಾಗಿ ನೋಡಿದಾಗ, ಎಕೆಂದರೆ ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ, ಆ ಆಯವ್ಯಯದಲ್ಲಿ ಲವಲವಿಕೆಯೇ ಇಲ್ಲ, ಗೊತ್ತು ಗುರಿಗಳಿಲ್ಲ, ಇವರು ಯಾವ ದಿಕ್ಕಿಗೆ ಹೋಗುತ್ತಾರೋ ಗೊತ್ತಾಗುವುದಿಲ್ಲವೆಂದು ಹೇಳಿದ್ದಾರೆ. ನಮ್ಮ ಗುರಿ ಬಹಳ ಸ್ಪಷ್ಟ, ನಮ್ಮ ನೀತಿ ಬಹಳ ಸ್ಪಷ್ಟ. ನಮ್ಮ ವಿಚಾರಗಳೂ ಕೂಡ ಬಹಳ ಸ್ಪಷ್ಟವಾಗಿವೆ ಅವುಗಳಲ್ಲಿ ಯಾವ ತರಹದ ಗೊಂದಲಗಳು ಇಲ್ಲ. ಗೊಂದಲವೇನಾದರೂ ಆಗಿದ್ದರೆ, ಈ ಐದು ಆಯವ್ಯಯಗಳನ್ನು ಸರಿಯಾಗಿ ನೋಡದಿದ್ದರೆ ಸ್ವಲ್ಪ ಗೊಂದಲಗಳಾಗಬಹುದು. ರಾಜಕೀಯ ಕಣ್ಣುಗಳಿಂದ ನೋಡಿದರೆ ಆ ತರಹ ಆಗಬಹುದು. ರಾಜಕೀಯ ಕಣ್ಣುಗಳನ್ನು ಬಿಟ್ಟು ಈ ಆಯವ್ಯಯಗಳನ್ನು ರಾಜ್ಯ ಮತ್ತು ರಾಜ್ಯದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಇದು ಅತ್ಯಂತ ಸ್ಪಷ್ಟವಾಗಿದೆ ನಮ್ಮ ಗುರಿ, ನಮ್ಮ ನೀತಿ ನಮ್ಮ ವಿಚಾರಗಳು ಕಾರ್ಯಕ್ರಮಗಳು. ಮೊದಲನೆಯ ವರ್ಷದ ಬಜೆಟನ್ನು ನೋಡಿದಾಗ ಅದರಲ್ಲಿ 1995-96ರಲ್ಲಿ ಬಹಳ ಸ್ಪಷ್ಟವಾಗಿ ನಮ್ಮ ಪ್ರಿಯಾರಿಟೀಸ್ ಏನೆಂಬುದನ್ನು ಹೇಳಿಬಿಟ್ಟಿದ್ದೇವೆ. ನಮ್ಮ ಆದ್ಯತೆಗಳೇನು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಸಮಾಜ ಕಲ್ಯಾಣ, ನೀರಾವರಿ, ವಿದ್ಯುತ್ ಪ್ರೈಮರಿ ಎಜುಕೇಶನ್, ಹೆಲ್ತ್, ಡ್ರಿಂಕಿಂಗ್ ವಾಟರ್, ಹೌಸಿಂಗ್ ಇವು ನಮ್ಮ ಆದ್ಯತಾ ವಲಯಗಳೆಂದು ನಾವು ಗುರುತು ಮಾಡಿದ್ದೇವೆ. ಈ ವರ್ಷ ಕೂಡ ಅವುಗಳನ್ನು ಮುಂದುವರೆಸುತ್ತೇವೆ. ಒಟ್ಟಿಗೆ ಸಮಗ್ರವಾಗಿ ರಾಜ್ಯದಲ್ಲಿರತಕ್ಕ ಸಂಪನ್ಮೂಲಗಳನ್ನು ಬಳಸಿಕೊಂಡು ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಮಾಡತಕ್ಕದ್ದು ಅದರ ಜೊತೆಗೆ ಅಶಕ್ತ ವರ್ಗದ ಜನರಿಗೆ ಸಾಮಾಜಿಕ ನ್ಯಾಯವನ್ನು ಕೊಡತಕ್ಕ ಪ್ರಯತ್ನವನ್ನು ಕಳೆದ ಐದು ವರ್ಷಗಳಲ್ಲಿ ನಾವು ಮಾಡಿಕೊಂಡು ಬಂದಿದ್ದೇವೆ. ಇವು ನಮ್ಮ ಗೊತ್ತು ಮತ್ತು ಗುರಿಗಳು. ನಿಮಗೆ ನಾವು ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಈ ವಲಯಗಳಿಗೆ ಹಣವನ್ನು ಖರ್ಚು ಮಾಡಿದ್ದೇವೆ, ಭೌತಿಕ ಪ್ರಗತಿಯೇನೆಂಬುದನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾವು ಹೇಳಿದ್ದೇವೆ ಮೊದಲನೆಯ ವರ್ಷದಲ್ಲಿ. ಪ್ರತಿ ವರ್ಷ ಒಂದು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೇವೆ. ಕಳೆದ ನಾಲ್ಕು ವರ್ಷಗಳಲ್ಲಿ 4 ಲಕ್ಷದ 1 ಸಾವಿರದ 82 ಮನೆಗಳನ್ನು ಕಟ್ಟಿಸಿದ್ದೇವೆ. ಇದು ಬೇರೇ ಬೇರೆ ಹಂತದಲ್ಲಿರುವುದಲ್ಲ. ಮನೆಗಳು ಪೂರ್ಣವಾಗಿರತಕ್ಕದ್ದು. ಈ ವರ್ಷ ಕೂಡ ಒಂದುವರೆ, ಎರಡು ಲಕ್ಷದಷ್ಟು ಮನೆಗಳನ್ನು ಕಟ್ಟಿಸಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. 1999-2000ದ ಇಸವಿಯಲ್ಲಿ ಹಾಗಾದರೆ ಇದು ಪ್ರಗತಿ ಇಲ್ಲವಾ? ಇನ್ನು ಮನೆಗಳು ಮತ್ತು ಸೈಟುಗಳು ಇಲ್ಲದಿರತಕ್ಕ ಜನ ಜಾಸ್ತಿ ಇರಬಹುದು ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಹಿಂದಿನ ನಾಲ್ಕು ವರ್ಷಗಳಿಗೆ ಹೋಲಿಕೆ ಮಾಡಿದರೆ ನಾವು ಮನೆಗಳನ್ನು ಕಟ್ಟಿಸಿರತಕ್ಕದ್ದನ್ನು ನೋಡಿದರೆ, ಅವು ನಾಲ್ಕು ವರ್ಷಗಳಲ್ಲಿ ಒಂದು ಲಕ್ಷ ಮನೆಗಳನ್ನು ಸಹ ಕಟ್ಟಿಸಿರಲಿಲ್ಲ. ಇವತ್ತು ನಾವು ನಾಲ್ಕು ಲಕ್ಷ ಮನೆಗಳನ್ನು

ಕಟ್ಟಿಸಿದ್ದೇವೆಂದರೆ ಇದು ಪ್ರಗತಿ ಅಲ್ಲವಾ ಎನ್ನತಕ್ಕದ್ದನ್ನು ವಿಚಾರ ಮಾಡಬೇಕಾಗುತ್ತದೆ. ಅದನ್ನು ಮಾನ್ಯ ಸದಸ್ಯರ ವಿವೇಚನೆಗೆ ಬಿಡುತ್ತೇನೆ.

ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ, ಕಳೆದ ನಾಲ್ಕು ವರ್ಷಗಳಲ್ಲಿ 7,809 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಈ ವರ್ಷ 1999-2000ದ ಇಸವಿಗೆ ಸುಮಾರು 2,600 ಕೋಟಿ ರೂಪಾಯಿಗಳನ್ನು ನೀರಾವರಿಗೊಸ್ಕರ ಇಟ್ಟಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರಾದ ಖರ್ಗೆಯವರು ಏನು ಭಾಷಣ ಮಾಡುತ್ತಾರೆಂದರೆ ನೀವು ಹಣವನ್ನು ಏನೋ ಖರ್ಚು ಮಾಡಿದ್ದೀರಿ, ಆ ಹಣ ದುರುಪಯೋಗವಾಗಿದೆ, ಭೌತಿಕ ಗುರಿ ಏನೂ ಆಗಿಲ್ಲವೆಂದು ಹೇಳಿದರು. ಭೌತಿಕ ಗುರಿ ಇಷ್ಟು ಹಣ ಖರ್ಚು ಮಾಡಿರುವುದಕ್ಕೆ ಯಾವ ಮಟ್ಟದಲ್ಲಿ ಆಗಬೇಕಾಗಿತ್ತು ಆ ಮಟ್ಟದಲ್ಲಿ ಆಗಿಲ್ಲವೆಂದರೆ ಒಂದು ಲಕ್ಷದ 43 ಸಾವಿರ ಹೆಕ್ಟೇರ್ ಇದು ನವೆಂಬರ್ ಡಿಸೆಂಬರ್‌ವರೆಗೆ ಆಗಿರತಕ್ಕದ್ದು. ಸುಮಾರು ಒಂದು ಲಕ್ಷದ 68 ಸಾವಿರ ಹೆಕ್ಟೇರ್ ಅದು ಭೌತಿಕ ಪ್ರಗತಿಯಾಗುತ್ತದೆಂದು ನಾವು ಇಟ್ಟುಕೊಂಡಿದ್ದೇವೆ. ಆದರೆ, ಇವತ್ತು ಡ್ಯಾಮ್ ಮೇಲೆ ಆರ್ ಅಂಡ್ ಆರ್ ವರ್ಕ್ಸ್ ಮೇಲೆ ಇದಕ್ಕೆ ನಾವು ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ನಾಲೆಗಳನ್ನು ತೋಡತಕ್ಕದ್ದು ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ಅಂದರೆ ಇಲ್ಲಿ ಹೆಚ್ಚು ಹಣ ಖರ್ಚುಮಾಡಿ ಪೊಟೆನ್ಷಿಯಲ್ ಕ್ರಿಯೇಟ್ ಆಗಿಲ್ಲವೆಂದು ಹೇಳಿದರೆ, ದುಡ್ಡೆಲ್ಲ ದುರುಪಯೋಗವಾಗಿದೆಯೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತು ಅದರಲ್ಲಿ ಯಾವುದೇ ಸತ್ವ ಇಲ್ಲೆನ್ನತಕ್ಕ ಮಾತನ್ನು ಮಾನ್ಯ ಖರ್ಗೆಯರವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಹಾಗೆಯೇ ಪ್ರಾಥಮಿಕ ಶಿಕ್ಷಣ, ಇವತ್ತು ಕಳೆದ ನಾಲ್ಕು ವರ್ಷಗಳಲ್ಲಿ 93 ಸಾವಿರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಇದೇನು ಅಸತ್ಯನಾ ಇದು? ಹಿಂದೆ ನಾಲ್ಕು ವರ್ಷಗಳಲ್ಲಿ ಇಷ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡಿದಂತಹ ಉದಾಹರಣೆ ಎಲ್ಲಿದೆ? ಮಾನ್ಯ ಪೂರ್ಣಚಂದ್ರ ತೇಜಸ್ವಿಯವರು ಹೇಳಿದರು, ಇಷ್ಟನ್ನು ಮಾಡಿ ಬಹಳ ಆಗಿ ಹೋಗಿಬಿಟ್ಟಿದೆಯೆಂದು ಬೆನ್ನು ತಟ್ಟಿಕೊಳ್ಳಬೇಡಿ, ಇನ್ನು ಅವಿದ್ಯಾವಂತರು ಕರ್ನಾಟಕದಲ್ಲಿದ್ದಾರೆ.ನೀವು ಕೇರಳಕ್ಕೆ ಹೋಲಿಕೆ ಮಾಡಿಕೊಳ್ಳಿಯೆಂದು ಹೇಳಿದರು. ಸಧ್ಯದಲ್ಲಿ ನಾನು ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ನಾವು ಕೇರಳದ ಜೊತೆ ಹೋಲಿಕೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಕೇರಳದವರು ಮೊದಲಿನಿಂದಲೂ ಕೂಡ ಶಿಕ್ಷಣಕ್ಕೆ ಬಹಳ ಒತ್ತು ಕೊಟ್ಟು ಕೆಲಸ ಮಾಡಿದ್ದಾರೆ. ಆರೋಗ್ಯಕ್ಕೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಿದ್ದಾರೆ. ಹಾಗಾಗಿ ಅಲ್ಲಿ ಇಡೀ ದೇಶದಲ್ಲಿ ಕೇರಳ ಮೊದಲನೆಯ ಸ್ಥಾನದಲ್ಲಿ ನಿಲ್ಲುತ್ತದೆ. ಆದರೆ ರಾಷ್ಟ್ರಮಟ್ಟದ ಸರಾಸರಿಗೆ ಹೋಲಿಕೆ ಮಾಡಿದರೆ ಕರ್ನಾಟಕ ಬಹಳ ಮೇಲಿದೆ ಎನ್ನತಕ್ಕ ಮಾತನ್ನು ತಮಗೆ ತಿಳಿಸಲಿಕ್ಕೆ ಇಚ್ಛಿಪಡಿತ್ತೇನೆ. ಲೆಟ್ರಸಿಯಲ್ಲಿ ಕರ್ನಾಟಕ ಇವತ್ತು ನಮಗೆ ಲಭ್ಯವಿರತಕ್ಕ ಅಂಕಿಅಂಶಗಳ ಪ್ರಕಾರ ಶೇಕಡಾ 70 ರಷ್ಟು ಲೆಟ್ರಸಿ ಕರ್ನಾಟಕದಲ್ಲಿ ಆಗಿದೆ. ಕನಿಷ್ಠ 500 ಜನರಿಗೆ ಒಂದು ಪ್ರಾಥಮಿಕ ಶಾಲೆ ಸಿಗತಕ್ಕ

ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ವಸತಿ ಇರತಕ್ಕ ಪ್ರತಿ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆಯತಕ್ಕ ನಿರ್ಣಯವನ್ನು ಮಾಡಿದ್ದೇವೆ. ಇದು ಹಿಂದೆ ಆಗಿರಲಿಲ್ಲ ನಾವು ಸರ್ಕಾರ ಬರುವುದಕ್ಕೆ ಮುಂಚಿತವಾಗಿ, ಬಹುಶ: ಮಾನ್ಯ ಖರ್ಗೆಯವರಿಗೆ ಗೊತ್ತಿದೆ. ಯಾವ ಹಳ್ಳಿಗಳಲ್ಲಿ ಕನಿಷ್ಠ 30-35 ಮಕ್ಕಳು ಅಲ್ಲಿ ಇರುವುದಿಲ್ಲ, ಆ ಹಳ್ಳಿಗಳಲ್ಲಿ ಶಾಲೆ ತೆಗೆಯತಕ್ಕುಥಾದ್ದು ಇರಲಿಲ್ಲ. ಇವತ್ತು ಹತ್ತು ಮಕ್ಕಳು ಇರಲಿ, ಅದಕ್ಕಿಂತ ಕಡಿಮೆ ಇರಲಿ, ಒಂದು ಪ್ರಾಥಮಿಕ ಶಾಲೆಯನ್ನು ತೆರೆಯಲೇ ಬೇಕು ಎಂದು ತೀರ್ಮಾನ ಮಾಡಿ ಇವತ್ತು ತೆಗೆದಿದ್ದೇವೆ. ಈ ವರ್ಷವೂ ಉಪಾಧ್ಯಯರ ನೇಮಕ ಮಾಡಿಕೊಂಡಿರುವುದನ್ನು ಲೆಕ್ಕಹಾಕಿದರೂ ಒಂದು ಲಕ್ಷಕ್ಕೂ ಹೆಚ್ಚು ಉಪಾದ್ಯಾಯರುಗಳನ್ನು ನೇಮಕ ಮಾಡಿದ್ದೇವೆ ಎಂದು ಅತ್ಯಂತ ಹೆಮ್ಮೆಯಿಂದ ಈ ಸದನದಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ. ಹಾಗೇನೆ ಶಾಲಾ ಕೊಠಡಿಗಳನ್ನು ಕಟ್ಟಿಸಿದ್ದೇವೆ. 2700 ಜನ ಡಾಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ. ಹಿಂದಿನ ಐದು ವರ್ಷಗಳಲ್ಲಿ ಒಬ್ಬರೇ ಒಬ್ಬ ಪ್ಯಾರಾ ಮೆಡಿಕಲ್ ಸ್ಟಾಫ್‌ನ್ನು ರೆಕ್ರೂಟ್ ಮಾಡಿರಲಿಲ್ಲ. ಇವತ್ತು ಕಳೆದ ನಾಲ್ಕು ವರ್ಷಗಳಲ್ಲಿ 4,600 ಪ್ಯಾರಾ ಮೆಡಿಕಲ್ ಸ್ಟಾಫ್‌ನ್ನು ನಾವು ರೆಕ್ರೂಟ್ ಮಾಡಿದ್ದೇವೆ. ಇವೆಲ್ಲವೂ ಪ್ರಗತಿ ಅಲ್ಲವೇನು? ಇದು ಹಿನ್ನಡೆಯಾ? ಇದು ಚುನಾವಣೆಗೋಸ್ಕರ ಆಕ್ಟ್ ಮಾಡಿರತಕ್ಕುಥ ಆಯವ್ಯಯವೇ? ಹೀಗೆ ನಾನು ಎಲ್ಲಾ ಇಲಾಖೆಗಳ ಪ್ರಗತಿ ಬಗ್ಗೆ ಹೇಳುತ್ತಾ ಹೋದರೆ, ವಿದ್ಯುತ್ ಉತ್ಪಾದನೆಗೆ 4990 ಕೋಟಿ ರೂಪಾಯಿ ಬಂಡವಾಳ ಹಾಕಿದ್ದೇವೆ. ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಇದೆ, ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಬಳಕೆ ಹೆಚ್ಚು ಆಗಿತ್ತಾ ಇದೆ. ಈ 1998-99 ಒಂದು ವರ್ಷದಲ್ಲಿ 40 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಟ್ಟಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 9 ಸಾವಿರಕ್ಕಿಂತ ಹೆಚ್ಚು ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಕೆಲಸ ಮಾಡಿದ್ದೇವೆ. ಇದು ಸರ್ವಕಾಲಿಕ ದಾಖಲೆ. ಇದು ಯಾರಿಗೋಸ್ಕರ ಕೊಟ್ಟಿರತಕ್ಕುಥಾದ್ದು? ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಜಮೀನುಗಳಿಗೆ ನೀರು ಕೊಟ್ಟು ಗಂಗಾಕಲ್ಯಾಣ ಕಾರ್ಯಕ್ರಮ ಅಡಿಯಲ್ಲಿ ನೀರು ಕೊಟ್ಟು ಅವರಿಗೂ ಕೂಡ ಆರ್ಥಿಕ ಶಕ್ತಿಯನ್ನು ತುಂಬಬೇಕು ಎನ್ನುವ ಕಾರಣಕ್ಕೋಸ್ಕರ ಇದನ್ನು ಮಾಡಿದ್ದೇವೆ. ಆದರೆ, ಅವರಿಗೆ ಪಂಪುಸೆಟ್ಟುಗಳಿಗೆ ಮೋಟಾರ್‌ನ್ನು ತೆಗೆದುಕೊಟ್ಟಿಲ್ಲ ಎನ್ನತಕ್ಕುಥ ಮಾತನ್ನು ಹೇಳಿದ್ದಾರೆ. ಅದನ್ನು ಈ ತಿಂಗಳು ಮಾಡತಕ್ಕುಥ ಕಾರ್ಯಕ್ರಮ ಮಾಡಿದ್ದೇವೆ; ಅದನ್ನು ಮಾಡುತ್ತಿದ್ದೇವೆ. ಅದಕ್ಕೆ ಕ್ವಾಲಿಟಿ ಸರಿಯಿರಲಿಲ್ಲ ಎಂದು ಹೇಳಿ ಸದನ ಸಮಿತಿಯನ್ನು ಮಾಡಿ ಅವರು ರಿಪೋರ್ಟ್ ಕೊಟ್ಟು, ಆ ರಿಪೋರ್ಟ್‌ನ ಮೇಲೆ ತೀರ್ಮಾನ ಮಾಡತಕ್ಕದ್ದು ಸ್ವಲ್ಪ ವಿಳಂಬವಾಯಿತು. ಹಾಗಾಗಿ ತೊಂದರೆ ಆಯಿತು. ಆದರೆ ಈ ದಿಕ್ಕಿನಲ್ಲಿ ಚಿಂತನೆ ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕಳೆದ ಒಂದೇ ವರ್ಷದಲ್ಲಿ 239 ಹಾಸ್ಟೆಲ್‌ಗಳನ್ನು ಕಟ್ಟಿಸಿದ್ದೇವೆ. ಹಿಂದಿನ ನಾಲ್ಕು ವರ್ಷಗಳ ಎರಡು ಪಟ್ಟಿಗಿಂತ ಹೆಚ್ಚು. ಪರಿಶಿಷ್ಟ ಜಾತಿ ಮತ್ತು ಅಲ್ಪಸಂಖ್ಯಾತರಿಗೆ ನಾಲ್ಕು ವರ್ಷಗಳಲ್ಲಿ ಹಿಂದಿನ ಸರ್ಕಾರ 140 ಹಾಸ್ಟೆಲ್‌ಗಳನ್ನು ಕಟ್ಟಿಸಿದ್ದರೆ ನಾವು 233 ಹಾಸ್ಟೆಲ್‌ಗಳನ್ನು ಕಟ್ಟಿಸಿದ್ದೇವೆ.

ಅದರ ಜೊತೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೋಸ್ಕರ 740 ಹೊಸ ವಸತಿನಿಲಯಗಳನ್ನು ತೆರೆದಿದ್ದೇವೆ. ಅದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಪರಿಶಿಷ್ಟ ಜಾತಿಯವರಿಗೆ, ಹಿಂದುಳಿದವರಿಗೆ ಮೊದಲಬಾರಿ ವಸತಿ ಶಾಲೆಗಳನ್ನು ತೆರೆದಿದ್ದೇವೆ. ಇವತ್ತು 1999-2000ನೇ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಏಳು ಜಿಲ್ಲೆಗಳಲ್ಲಿ ವಸತಿ ಶಾಲೆಗಳು ಏನು ಇಲ್ಲ, ಆ ಏಳು ಜಿಲ್ಲೆಗಳಲ್ಲಿ ವಸತಿ ಶಾಲೆಗಳನ್ನು ತೆರೆಯಬೇಕೆಂದು ನಿರ್ಣಯ ಮಾಡಿದ್ದೇವೆ. ಅಲ್ಪಸಂಖ್ಯಾತರಿಗೆ 5 ವಸತಿ ಶಾಲೆಗಳನ್ನು ತೆರೆದಿದ್ದೇವೆ. ಈಗ ಮತ್ತೆ 1999-2000ರಲ್ಲಿ ನಾವು ಮತ್ತೆ 4 ವಸತಿ ಶಾಲೆಗಳನ್ನು ತೆರೆಯತಕ್ಕಂಥ ಪ್ರಸ್ತಾವವನ್ನು ಮಾಡಿದ್ದೇವೆ. ಹೀಗೆ ಸಮಾಜದಲ್ಲಿರತಕ್ಕಂಥ ಕೆಳವರ್ಗದ ಜನರಿಗೆ, ಅಶಕ್ತವರ್ಗದ ಜನರಿಗೆ, ಅವರ ಮಕ್ಕಳಿಗೂ ಕೂಡ ವಿದ್ಯೆಯನ್ನು ಕಲಿಸಬೇಕು ವಸತಿ ಶಾಲೆಗಳನ್ನು ತೆರೆದು, ನಿರ್ಗತಿಕ ಮಕ್ಕಳಿಗೆ ವಿದ್ಯಾವಂತರನ್ನಾಗಿ ಮಾಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಇಂತಹ ವಸತಿ ಶಾಲೆಗಳನ್ನು ತೆರೆಯುತ್ತಿದ್ದೇವೆ. ಮುಂದಿನವರ್ಷ ವಿಶೇಷವಾಗಿ ಸುಮಾರು 25 ಹಿಂದುಳಿದ, ಅಲ್ಪಸಂಖ್ಯಾತರ ಹೆಣ್ಣುಮಕ್ಕಳಿಗೆ ವಸತಿ ನಿಲಯಗಳನ್ನು ತೆರೆಯುತ್ತಿದ್ದೇವೆ. ಹಾಗೇನೆ ಸಾಮಾನ್ಯ ವರ್ಗದ ಎಲ್ಲಾ ಹೆಣ್ಣುಮಕ್ಕಳ ವಿದ್ಯಾವಂತರ ಸಂಖ್ಯೆ ಹೆಚ್ಚಾಗಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಜಿಲ್ಲಾ ಮಟ್ಟದಲ್ಲಿ ಎಲ್ಲಿ ಹೆಣ್ಣುಮಕ್ಕಳಿಗೆ ಹಾಸ್ಟೆಲ್‌ಗಳು ಇಲ್ಲ, ಅಲ್ಲಿ ಕನಿಷ್ಟ ಒಂದು ಹಾಸ್ಟೆಲ್ ಆದರೂ ಕೂಡ ಇರಬೇಕು ಎಂದು ಹೇಳಿ ಈ ವರ್ಷ ನಾಲ್ಕು ಜಿಲ್ಲೆಗಳಲ್ಲಿ ಮಾಡಿ ಒಂಭತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಜಿಲ್ಲೆಗಳಲ್ಲೂ ಅದನ್ನು ಮಾಡಬೇಕು ಎಂದು ಹೇಳಿ ತೀರ್ಮಾನ ಮಾಡಿದ್ದೇವೆ. ಹಾಗೇನೆ ಗ್ರಾಮೀಣಾಭಿವೃದ್ಧಿಯಲ್ಲಿ ಡಾ: ಅಂಬೇಡ್ಕರ್ ಅವರ ಹೆಸರಿನಲ್ಲಿ ಒಂದು ಸಮಗ್ರ ಗ್ರಾಮೀಣ ಅಭಿವೃದ್ಧಿ ಮಾಡುವುದಕ್ಕೋಸ್ಕರವಾಗಿ ಒಂದು ಕಾರ್ಯಕ್ರಮವನ್ನು ಮಾಡಿದ್ದೇವೆ. ಅದು ನೂರಕ್ಕೆ 50 ಪರ್ಸೆಂಟ್ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗದವರು ಎಲ್ಲಿ ಇರುತ್ತಾರೆ ಅಂತಹ ಹಳ್ಳಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸತಕ್ಕಂಥಾದ್ದು. ಆ ಊರಿನಲ್ಲಿ ಬಡವರಿಗೆ ಮನೆಗಳನ್ನು ಕೊಡತಕ್ಕಂಥಾದ್ದು, ರಸ್ತೆಗಳನ್ನು ಮಾಡಿಕೊಡತಕ್ಕಂಥಾದ್ದು ಚರಂಡಿ-ಮೋರಿಗಳನ್ನು ಮಾಡತಕ್ಕಂಥಾದ್ದು, ಕುಡಿಯುವ ನೀರು ಒದಗಿಸತಕ್ಕಂಥಾದ್ದು, ಸಮುದಾಯ ಭವನಗಳನ್ನು ಮಾಡಿಸಿಕೊಡತಕ್ಕಂಥಾದ್ದು, ಶಾಲಾಕೊಠಡಿಗಳನ್ನು ಕಟ್ಟಿಸಿ ಕೊಡತಕ್ಕಂಥಾದ್ದು ಹೀಗೆ ಸಂಪೂರ್ಣವಾದಂಥ ಸಮಗ್ರವಾದಂಥ ಅಭಿವೃದ್ಧಿಯಾಗಬೇಕು ಎಂದು ಹೇಳಿ ಈ ವರ್ಷ 1998-99ಕ್ಕೆ ಕೆಲವು ಗ್ರಾಮಗಳನ್ನು ಆಯ್ಕೆ ಮಾಡುತ್ತೇವೆ. ಮತ್ತು 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಂಪೂರ್ಣವಾಗಿ ಕರ್ನಾಟಕದಲ್ಲಿ ಇಂತಹ ಎಲ್ಲ ಹಳ್ಳಿಗಳನ್ನು ಕೂಡ ಅಭಿವೃದ್ಧಿಪಡಿಸಬೇಕು ಎಂದು ಹೇಳಿ ತೀರ್ಮಾನ ಮಾಡಿದ್ದೇವೆ. ಈಗ ಕುಡಿಯುವ ನೀರಿಗೆ ಕಳೆದ ನಾಲ್ಕು ವರ್ಷದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಖರ್ಚು ಮಾಡಿದ್ದೇವೆ. ಇವತ್ತು ಕರ್ನಾಟಕದಲ್ಲಿ 39,500 ಹಳ್ಳಿಗಳಿಗೆ ತಲಾ 40 ಲೀಟರ್ ಕುಡಿಯುವ ನೀರು ಸಿಗತಕ್ಕಂಥ ವ್ಯವಸ್ಥೆಯಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು

ಎಂಟೂವರೆ ಸಾವಿರ ಹಳ್ಳಿಗಳಿಗೆ ನಲ್ಲಿ ಮೂಲಕ ನೀರು ಕೊಡತಕ್ಕಂಥಾದ್ದು ಮತ್ತು ಮಿನಿವಾಟರ್ ಸಪ್ಲೈ ಮೂಲಕ ನೀರು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಮುಂದಿನ ವರ್ಷ ಸುಮಾರು ನಾಲ್ಕುವರೆ ಸಾವಿರ ಹಳ್ಳಿಗಳಿಗೆ ಅದರಲ್ಲಿ ಎರಡು ಸಾವಿರ ಹಳ್ಳಿಗಳಿಗೆ ಎನ್.ಆರ್.ಡಬ್ಲ್ಯೂ.ಎಸ್ ಮೂಲಕ ಆ ಕಾರ್ಯಕ್ರಮ ಅಡಿಯಲ್ಲಿ ಮತ್ತೆ ಎರಡೂವರೆ ಸಾವಿರ ಹಳ್ಳಿಗಳಿಗೆ ಮಿನಿವಾಟರ್ ಸಪ್ಲೈ ಸ್ಕೀಮ್ ಮೂಲಕ ನೀರು ಕೊಡಬೇಕೆಂದು ಹೇಳಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. 1999-2000ನೇ ಇಸವಿಗೆ 500 ಕೋಟಿ ರೂಪಾಯಿಗಳನ್ನು ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕಾಗಿ ಹಾದಿರಿಸತ್ಕಂಥ ಕೆಲಸ ಮಾಡಿದ್ದೇವೆ. ಅದಕ್ಕೋಸ್ಕರವೇ, 1999-2000ನೇ ಇಸವಿಯನ್ನು "ನೀರು ಮತ್ತು ನೈರ್ಮಲ್ಯದ ವರ್ಷ" ಎಂದು ಕರೆಯಬೇಕೆಂದು ನಾನು ಆಯವ್ಯಯದಲ್ಲಿ ಹೇಳಿದ್ದೇನೆ. ಬಹುಶ; ಎಲ್ಲರಿಗೂ ಸಾಕಷ್ಟು ಶುದ್ಧವಾದ ನೀರು ಸಿಕ್ಕಿಬಿಡುತ್ತದೆ ಎಂಬ ಅಬಿಪ್ರಾಯ ಇಲ್ಲ. ಇನ್ನೂ ಶೇಕಡಾ 29ರಷ್ಟು ಜನರಿಗೆ ತಲಾ 40 ಲೀಟರ್ ನೀರು ಸಿಗತಕ್ಕಂಥ ವ್ಯವಸ್ಥೆ ಕರ್ನಾಟಕದಲ್ಲಿ ಆಗಿಲ್ಲ. ಅದನ್ನು ಕೂಡ ಗಮನದಲ್ಲಿಟ್ಟುಕೊಂಡು ಹಳ್ಳಿಗಳ ನೈರ್ಮಲ್ಯ ಮತ್ತು ಕುಡಿಯುವ ನೀರು ಇದು ನಮ್ಮ ಆದ್ಯತಾ ಕಾರ್ಯಕ್ರಮ ಆಗಿರುವುದರಿಂದಾಗಿ ಅದನ್ನು ಕೂಡ ಮಾಡುತ್ತಿದ್ದೇವೆ. ನಮ್ಮ ಗೊತ್ತು ಮತ್ತು ಗುರಿಗಳು ಏನೂ ಇಲ್ಲ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಆದ್ದರಿಂದ ನಮ್ಮ ಗುರಿ ಬಹಳ ಸ್ಪಷ್ಟವಾಗಿದೆ. ನಮ್ಮ ಕಾರ್ಯಕ್ರಮಗಳು ಬಹಳ ಸ್ಪಷ್ಟವಾಗಿದ್ದಾವೆ. ಇವನ್ನು ಮಾನ್ಯ ಸದಸ್ಯರಿಗೆ ನಾನು ತಿಳಿಸುವುದಕ್ಕೆ ಇಚ್ಛಿಪಡುತ್ತಾ, ಇನ್ನೊಂದು ಬಹಳ ಪ್ರಸ್ತಾಪ ಆಗಿರತಕ್ಕಂಥಾದ್ದು, ಈ ರೆವೆನ್ಯೂ ಡಿಫಿಸಿಟ್ ಹೆಚ್ಚಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದು ನಿಜ. ನಾವು 1998-99ಕ್ಕೆ ಸುಮಾರು 380 ಕೋಟಿ ರೂಪಾಯಿಗಳು ರೆವಿನ್ಯೂ ಡೆಫಿಸಿಟ್ ಆಗಬಹುದೆಂಬ ಲೆಕ್ಕಾಚಾರ ಇತ್ತು. ಅದು 1396 ರೂಪಾಯಿಗಳು ರೆವೆನ್ಯೂ ಡೆಫಿಸಿಟ್ ಆಗಿದೆ. ಇದು 1994-95ರಲ್ಲಿ ರೆವೆನ್ಯೂ ಡೆಫಿಸಿಟ್ ನಾಲ್ಕುವರೆ ಕೋಟಿ ರೂಪಾಯಿಗಳು ಇತ್ತು. ಇದಕ್ಕೆ ಕಾರಣಗಳೇನು ಮತ್ತು ಕರ್ನಾಟಕದಲ್ಲಿ ಒಂದರಲ್ಲೇ ಈ ಪರಿಸ್ಥಿತಿ ಇದೆಯೇ? ಇಡಿ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರತಕ್ಕ ಪರಿಸ್ಥಿತಿ ಏನು ಎನ್ನುವುದನ್ನು ನೋಡಿದಾಗ, ಇದು ದೇಶದಲ್ಲಿ ಕೇಂದ್ರ ಸರ್ಕಾರ ಮತ್ತು ಎಲ್ಲಾ ರಾಜ್ಯ ಸರ್ಕಾರಗಳಲ್ಲಿ ಇರತಕ್ಕ ಪರಿಸ್ಥಿತಿ. 1987-88ರಲ್ಲಿ ಪೇ ರಿವಿಷನ್ ಶುರುವಾದ ಮೇಲೆ 1993-94 ಆಮೇಲೆ 1998-99 ಹೀಗೆ ಯಾವ ಯಾವ ವರ್ಷ, ಪೇ ರಿವಿಷನ್ ಆಯಿತು ಅಂದರೆ 1980 ರಿಂದ ರೆವಿನ್ಯೂ ಡಿಫಿಸಿಟ್ ಮಾಡಲಿಕ್ಕೆ ಶುರುವಾಗತ್ತದೆ. 1995-96ರಲ್ಲಿ 62 ಕೋಟಿ ರೂಪಾಯಿಗಳ ಸರಪ್ಲಸ್ ಇತ್ತು. ಆಮೇಲೆ ಅದು ಕ್ರಮೇಣ ಹೆಚ್ಚಾಯಿತು. 1998-99ಕ್ಕೆ 381 ಕೋಟಿ ರೂಪಾಯಿ ಆಗುತ್ತದೆಂದು ಲೆಕ್ಕ ಇತ್ತು. ಇವತ್ತು ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳ ಪರಿಸ್ಥಿತಿಯನ್ನು ನಾವು ಅವಲೋಕನ ಮಾಡಿದಾಗ, ಎಲ್ಲಾ ರಾಜ್ಯಗಳಲ್ಲೂ ಕೂಡ ರೆವಿನ್ಯೂ ಡೆಫಿಸಿಟ್ ಇದೇ ಪರಿಸ್ಥಿತಿಯಲ್ಲಿದೆ. ದೇಶದಲ್ಲಿ ಕೇಂದ್ರ ಸರ್ಕಾರವೂ ಸೇರಿದಂತೆ, ಯಾವ ರಾಜ್ಯವೂ ಕೂಡ ರೆವಿನ್ಯೂ ಡಿಫಿಸಿಟ್ ಇಲ್ಲದೇ ಇರತಕ್ಕಂಥ ರಾಜ್ಯ

ಇಲ್ಲವೇ ಇಲ್ಲ. ಏಕೆಂದರೆ, ಕೇಂದ್ರ ಸರ್ಕಾರವೂ ಕೂಡ 5ನೇ ವೇತನ ಆಯೋಗವನ್ನು ಇಂಟ್ರಡ್ಯೂಸ್ ಮಾಡಿ 40 ಪರ್ಸೆಂಟ್ ಕೊಡತಕ್ಕ ನಿರ್ಣಯ ಮಾಡಿತು. ಕರ್ನಾಟಕದಲ್ಲಿ ಆದರಿಂದ, ಅನಿವಾರ್ಯವಾಗಿ ಸುಮಾರು 32.5 ಪರ್ಸೆಂಟ್ ಕೊಡಬೇಕಾಯಿತು. 1998-99 ಕ್ಕೆ 750 ಕೋಟಿ ರೂಪಾಯಿಗಳು ಹೆಚ್ಚಾಯಿತು. ಮುಂದಿನ ವರ್ಷ ಅಂದರೆ, 1999-2000ನೇ ಇಸವಿಗೆ ಸುಮಾರು 900 ಕೋಟಿ ರೂಪಾಯಿಗಳಿಗೂ ಹೆಚ್ಚಾಗುತ್ತದೆ. ಆದಕ್ಕೋಸ್ಕರವೇ, ಇದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಚರ್ಚೆಗೆ ಬಂದು, ಗಂಭೀರವಾಗಿ ಚರ್ಚೆಯಾಯಿತು. ಕೇಂದ್ರ ಸರ್ಕಾರದವರಿಗೂ ಇದರ ಬಗ್ಗೆ ಮನವರಿಕೆಯಾಗಿ, 11ನೇ ಹಣಕಾಸಿನ ಆಯೋಗದಲ್ಲಿ, ರೆಫರೆನ್ಸ್‌ನಲ್ಲಿ ಇದು ಕೂಡ ಇದೆ. ಇವತ್ತು ದೇಶದ ಆರ್ಥಿಕ ಪರಿಸ್ಥಿತಿ, ರಾಜ್ಯಗಳ ಆರ್ಥಿಕ ಪರಿಸ್ಥಿತಿ ರೆವಿನ್ಯೂ ಡೆಫಿಸಿಟ್ ಮತ್ತು ಬಜೆಟ್ ಬ್ಯಾಲೆನ್ಸ್ ಮಾಡತಕ್ಕಂಥಾದ್ದು, ಇದಕ್ಕೆ ಪರಿಹಾರಗಳನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ಚರ್ಚೆಯಾಗಿ ಅದಕ್ಕೆ ಮುಖ್ಯಮಂತ್ರಿಗಳ ಒಂದು ಸಬ್ ಕಮಿಟಿ ಕೂಡ ಆಗಿದೆ. ಆದರೆ, ಅದರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು ಇಲ್ಲ. ಬೇರೆ 7 ರಾಜ್ಯಗಳ ಮುಖ್ಯಮಂತ್ರಿಗಳು ಇದ್ದಾರೆ. ಅವರು ಇನ್ನೊಂದು ಕಮಿಟಿ ಮಾಡಿದ್ದಾರೆ. ಪ್ಲಾನಿಂಗ್ ಕಮೀಷನ್‌ನಲ್ಲಿರತಕ್ಕ ಸೆಕ್ರೆಟರಿ ಅಧ್ಯಕ್ಷತೆಯಲ್ಲಿ ಇನ್ನೊಂದು ಕಮಿಟಿ ಮಾಡಿದ್ದಾರೆ. ಇದನ್ನೆಲ್ಲಾ ಅಧ್ಯಯನ ಮಾಡಿ, 8 ವಾರದೊಳಗೆ ಒಂದು ರಿಪೋರ್ಟ್ ಕೊಡಬೇಕು ಮತ್ತು ಇದಕ್ಕೆ ಏನು ಪರಿಹಾರ ಮಾಡಬೇಕೆಂಬ ಬಗ್ಗೆ ಕೂಡ ಚರ್ಚೆ ನಡೆಯುತ್ತಾ ಇದೆ. ಇದರ ಜೊತೆಗೆ, ಆರ್ಥಿಕ ಹಿಂಜರಿತ ಇಡೀ ದೇಶದಲ್ಲಿ ಇದೆ. ಕಳೆದ ವರ್ಷವೂ ಇತ್ತು ಮತ್ತು ಈ ವರ್ಷವೂ ಇತ್ತು. ಅಂದರೆ, ಕಳೆದ ಎರಡು ವರ್ಷಗಳಿಂದ ಆರ್ಥಿಕ ಹಿಂಜರಿತವೂ ಇದೆ. ಈ ಆರ್ಥಿಕ ಹಿಂಜರಿತದಿಂದ ತೆರಿಗೆ ವಸೂಲಿ ಮೇಲೆ ಪರಿಣಾಮ ಬೀರುತ್ತಾ ಇದೆ. ಇದನ್ನು ಬಹಳ ಜನ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನೀವು ಸಂಪನ್ಮೂಲ ಕ್ರೋಢೀಕರಣ ಮಾಡುವುದರಲ್ಲಿ ಎಡವಿಬಿಟ್ಟಿದ್ದೀರಿ, ಅದನ್ನು ಮಾಡಿಲ್ಲವೆಂದು ಹೇಳಿದ್ದಾರೆ. ಇವತ್ತು ಸಂಪನ್ಮೂಲ ಕ್ರೋಢೀಕರಣ,. ತೆರಿಗೆ ಗ್ರೋತ್‌ನಲ್ಲಿ ಜಿ.ಡಿ.ಪಿ.ಗೆ ಪರ್ಸೆಂಟೇಜ್ ಇದ್ದುದು ಇಡೀ ದೇಶದಲ್ಲಿ ನಮ್ಮದು; 14.18 ಕೇರಳ ರಾಜ್ಯವನ್ನು ಬಿಟ್ಟರೆ ನಮ್ಮದೆ ಎರಡನೆಯದು. ಇದು ನಾನು ಹೇಳುವುದಿಲ್ಲ, ಎನ್.ಡಿ.ಸಿನಲ್ಲೇ ಇವತ್ತಿನ ಪ್ಲಾನಿಂಗ್ ಕಮೀಷನ್ ಡಪ್ಯೂಟಿ ಛೇರ್ಮನ್ ಆದ ಕೆ.ಸಿ. ಪಂತ್‌ರವರೇ ಪ್ರಸ್ತಾಪ ಮಾಡಿದ್ದಾರೆ. ಯೋಜನಾ ವೆಚ್ಚ ಮಾಡುವುದರಲ್ಲಿ ತೆರಿಗೆ ವಸೂಲಿ ಮಾಡಿ, ತೆರಿಗೆ ಗ್ರೋತ್ ಆಗಿರುವುದರಲ್ಲಿ, ಎಕ್ಸಟ್ರನಲ್ ಏಡೆಡ್ ಪ್ರಾಜೆಕ್ಟ್‌ಗಳಲ್ಲಿ ನಾವು ಹಣ ಬಳಸಿಕೊಳ್ಳುವುದರಲ್ಲಿ, ಈ ಮೂರು ವಿಚಾರಗಳಲ್ಲಿ ಕರ್ನಾಟಕ ಬಹಳ ಉತ್ತಮವಾದ ಕೆಲಸ ಮಾಡಿದೆ ಎಂದು ಪಂತ್‌ರವರು ಇತ್ತೀಚೆಗೆ ನಡೆದಂಥ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ತೆರಿಗೆ ವಸೂಲಿ ಮಾಡತಕ್ಕಂತಾದ್ದರಲ್ಲಿ, ಕಳೆದ 4 ವರ್ಷಗಳಲ್ಲಿ ಹೆಚ್ಚು ಕಡಿಮೆ ಶೇಕಡ 15 ರಷ್ಟು ತೆರಿಗೆ ಗ್ರೋತ್ ಆಗಿರುತ್ತದೆ. ಆರ್ಥಿಕ ಹಿಂಜರಿತದ ನಡುವೆಯೂ ಕೂಡ ಇಷ್ಟು ಆಗಿರುತ್ತದೆ.

ಶ್ರೀ ಎಂ.ವೈ ಘೋರ್ಪಡೆ :— ಪರ್‌ಕ್ಯಾಪಿಟಾ ಟ್ಯಾಕ್ಸ್ ಎಂದು ತಾವು ಹೇಳಿದಿರಿ. ಅದರ ಬಗ್ಗೆ ಪ್ರಸ್ತಾಪ ಮಾಡಿ ಎಂದು ನಾನು ವಿನಂತಿ ಮಾಡಿದ್ದೆ. ಪರ್ ಕ್ಯಾಪಿಟಾ ಟ್ಯಾಕ್ಸ್ ಕರ್ನಾಟಕದಲ್ಲಿ ಸೆಕೆಂಡ್ ಲೋಯಸ್ಟ್ ಇದೆಯೆಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಸಿದ್ದರಾಮಯ್ಯ :— ಸೌತ್ ಇಂಡಿಯಾದಲ್ಲಿ ಒಂದು ವಾದ ಮಾಡುತ್ತಾರೆ. ಆದರೆ, ಕರ್ನಾಟಕದಲ್ಲಿ ತೆರಿಗೆ ಹೆಚ್ಚು ಎಂದು ಎಲ್ಲಾ ವಾದ ಮಾಡುತ್ತಾರಲ್ಲ. ಆಂಧ್ರ ಬಿಟ್ಟರೆ, ನಮ್ಮದೇ ಪರ್ ಕ್ಯಾಪಿಟಾ ಟ್ಯಾಕ್ಸ್ ಇದೆಯಲ್ಲ, ಅದು ಕಡಿಮೆ ಇದೆ. ತಮಿಳುನಾಡಿನಲ್ಲಿ ನಮಗಿಂತ ಜಾಸ್ತಿ ಇದೆ. ಕೇರಳದಲ್ಲಿ ನಮಗಿಂತ ಜಾಸ್ತಿ ಇದೆ, ಮಹಾರಾಷ್ಟ್ರವೂ ಕೂಡ ಜಾಸ್ತಿ ಇದೆ. ಕರ್ನಾಟಕದಲ್ಲಿ ಕಡಿಮೆ ಇದೆ, ಆಂಧ್ರದಲ್ಲಿ ನಮಗಿಂತ ಸ್ವಲ್ಪ ಕಡಿಮೆ ಇದೆಯೆಂದು ನಾನು ಹೇಳಿರುವುದು. ಏಕೆಂದರೆ ಕರ್ನಾಟಕದಲ್ಲಿ ತೆರಿಗೆ ಭಾರ ಜಾಸ್ತಿಯಾಗಿ ಹೋಗಿದೆ, ತೆರಿಗೆ ಹಾಕಿರುವುದರಲ್ಲಿ ಕರ್ನಾಟಕವೇ ನಂಬರ್ ಒನ್ ಎಂದು ಹೇಳಿ ಕೆಲವರು ವಾದ ಮಾಡುತ್ತಾರೆ. ಆ ಹಿನ್ನೆಲೆಯಲ್ಲಿ ನಾನು ಆ ಮಾತನ್ನು ಹೇಳಿದ್ದೇನೆ. ಇವತ್ತು ತೆರಿಗೆ ವಸೂಲಿಯಲ್ಲೂ ಕೂಡ ಕರ್ನಾಟಕ ಹಿಂದೆ ಬಿದ್ದಿಲ್ಲ. ಇದರ ಜೊತೆಗೆ ರೆವಿನ್ಯೂ ಡೆಫಿಸಿಟ್‌ಗೆ ಪೇ ರಿವಿಷನ್ ಒಂದು ಕಾರಣ, ಎರಡನೇ ಕಾರಣ ಕೇಂದ್ರ ಸರ್ಕಾರದವರು ನಮಗೆ ಬರಬೇಕಾಗಿದ್ದಂಥ 356 ಕೋಟಿ ರೂಪಾಯಿಗಳ ಬಜೆಟ್ ಏನು ಮಾಡಿದ್ದರು, ಅದರಲ್ಲಿ 156 ಕೋಟಿ ಬರಲಿಲ್ಲ. 1998-99 ರಲ್ಲಿ ರಾಜ್ಯಕ್ಕೆ ಕೊಡಬೇಕಾದ ಪಾಲು ಏನು ಮಾಡಿದ್ದರು ನಮ್ಮ ತೆರಿ ಅದರಲ್ಲಿ 356 ಕೋಟಿ ರೂಪಾಯಿಗಳು ಬರಲಿಲ್ಲ. ಅಂದರೆ, ಅಷ್ಟು ಕಡಿಮೆಯಾಯಿತು. ಏಕೆಂದರೆ, ಅವರಿಗೂ ಟ್ಯಾಕ್ಸ್ ವಸೂಲಿಯಾಗಿಲ್ಲ, ಕಡಿಮೆಯಾಗಿದೆ. ಅಂದರೆ, ಕೇಂದ್ರಸರ್ಕಾರದವರು ತೆರಿಗೆ ವಸೂಲಿ ಮಾಡಿಲ್ಲ. ಅವರಿಗೆ ವಸೂಲಿಯಾಗದಿದ್ದರೆ, ನಮಗೆ ಕೊಡುವುದನ್ನು ಕಡಿಮೆ ಮಾಡಿದರು. ನಾವು ಅವರನ್ನು ಕೇಳುವಹಾಗೆಯೇ ಇಲ್ಲ. ಅವರು, ನಮಗೇ ಕಡಿಮೆಯಾಗಿದೆ, ನಿಮಗೆಲ್ಲ ಕೊಡೋಣವೆಂದು ಹೇಳುತ್ತಾರೆ. ನಮಗೆ 29 ಪರ್ಸೆಂಟ್ ಡಿವಿಲ್ಯೂಷನ್ ಪ್ರಕಾರ 100 ಕೋಟಿ ರೂಪಾಯಿಗಳು ಬರುತ್ತದೆ ಎಂದರು, ಆ ನೂರು ಕೋಟಿಯೂ ಬರಲೇ ಇಲ್ಲ. ಇದನ್ನು ಮೊದಲಿನಿಂದ ಕೊಡಲೂ ಇಲ್ಲ, ಈ ಸಾರಿಯೂ ಬರಲಿಲ್ಲ. ಅದೂ ಬರುತ್ತದೆಂದು ನಾವು ಲೆಕ್ಕ ಹಾಕಿಕೊಂಡಿದ್ದೆವು. ಒಟ್ಟು 456 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರಬೇಕಾದ್ದು, ಬರಲಿಲ್ಲ. ಆಮೇಲೆ, ನೀವೆಲ್ಲಾ ಪ್ರಸ್ತಾಪ ಮಾಡಿದ ಹಾಗೆ, ಟ್ಯಾಕ್ಸ್‌ಗಳಿಂದ 400 ಕೋಟಿ ರಾಜ್ಯಕ್ಕೆ ಕಡಿಮೆಯಾಗಿದೆ. ಕಾರಣ ಏನೆಂದರೆ, ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ನಮಗೆ 150 ಕೋಟಿ ರೂಪಾಯಿಗಳು ಈ ಸಾರಿ ಕಡಿಮೆಯಾಗಿದೆ. ಪ್ರಾಪರ್ಟಿ ರಿಜಿಸ್ಟ್ರೇಷನ್ ಆಗುತ್ತಾ ಇಲ್ಲ. ಈ ಪ್ರಾಪರ್ಟಿ ರಿಜಿಸ್ಟ್ರೇಷನ್ ಆಗದೇ ಇರುವುದರಿಂದ, ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ನಮಗೆ ನಿರೀಕ್ಷೆ ಮಾಡಿದುದಕ್ಕಿಂತ 150 ಕೋಟಿ ರೂಪಾಯಿಗಳು ಕಡಿಮೆಯಾಯಿತು. ಅದೇ ರೀತಿ

1.00 ಪಿ.ಎಂ.

ಮೋಟಾರ್ ವೆಹಿಕಲ್ ತೆರಿಗೆ ಸಹ ವಸೂಲಾಗುತ್ತಿಲ್ಲ. ಮೋಟಾರು ವಾಹನಗಳು ಹೊಸದಾಗಿ ನೋಂದಾವಣೆಯಾಗುತ್ತಿಲ್ಲ. ಅದರ ಸಂಖ್ಯೆ ಕಡಿಮೆಯಾಗಿದೆ. ಅದಕ್ಕಾಗಿ ನಾವು ಲೈಫ್ ಟೈಮ್ ಟ್ಯಾಕ್ಸ್‌ನ್ನು ಜಾರಿಗೆ ತಂದಿದ್ದೇವೆ. ಹೊಸ ವಾಹನಗಳು ಬಂದರೆ ಮಾತ್ರ ನಮಗೆ ತೆರಿಗೆ ಬರಬೇಕಾಗುತ್ತದೆ. ಹೊಸ ಮೋಟಾರು ವಾಹನಗಳನ್ನು ಕೊಂಡು ಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಅಲ್ಲೂ 50-60 ಕೋಟಿ ರೂಪಾಯಿಗಳು ಆದಾಯ ಕಡಿಮೆಯಾಯಿತು. ನಾವೇನು ಆದಾಯವನ್ನು ನಿರೀಕ್ಷೆ ಮಾಡಿರುತ್ತೇವೋ ಅದಕ್ಕಿಂತ ಸ್ವಲ್ಪ ಜಾಸ್ತಿ ಗುರಿಯನ್ನು ತೋರಿಸಿರುತ್ತೇವೆ. ಇವೆಲ್ಲದರಿಂದ ಇಲ್ಲಿ 450 ಕೋಟಿ ರೂಪಾಯಿಗಳು ಕಡಿಮೆಯಾಯಿತು ಎಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇವೆಲ್ಲದರ ಪರಿಣಾಮವಾಗಿ ಮೊದಲ ಬಾರಿಗೆ ರೆವಿನ್ಯೂ ಡೆಫಿಸಿಟ್ 1,396 ಕೋಟಿ ರೂಪಾಯಿಯಾಗಲು ಕಾರಣವಾಯಿತು. ಮುಂದಿನ ವರ್ಷವೂ ಸಹ ಇದು 1,399 ಕೋಟಿ ರೂಪಾಯಿಯಾಗುತ್ತದೆಂದು ನಾವು ನಿರೀಕ್ಷೆ ಮಾಡಿದ್ದೇವೆ. ಮುಂದಿನ ವರ್ಷ 900 ಕೋಟಿ ರೂಪಾಯಿಗಳು ಸಂಬಳ ಸಾರಿಗೆಗಳ ಹೊರೆ ಜಾಸ್ತಿಯಾಗುತ್ತದೆ. ಆದರೆ ಕೇಂದ್ರ ಸರ್ಕಾರದಿಂದ ಬರುವ ನಮ್ಮ ಪಾಲು ಹೆಚ್ಚಾಗುವುದಿಲ್ಲ. 1999-2000ಕ್ಕೆ ಕೇಂದ್ರದಿಂದ ನಮಗೆ ಎಷ್ಟು ಬರುತ್ತದೆ ಎಂದು ಅವರು ಈಗಾಗಲೇ ಹೇಳಿದ್ದಾರೆ. ಆದ್ದರಿಂದ ಮಿಡ್-ಟರ್ಮ್ ಸಲ್ಯೂಷನ್ ಏನು ಮುಖ್ಯಮಂತ್ರಿಯವರ ಸಮಿತಿಯಲ್ಲಿ ಕೊಡುತ್ತಾರೆ ಅದು ಒಂದು, ಯೋಜನೇತರ ವೆಚ್ಚದಲ್ಲಿ ಕಡಿಮೆ ಮಾಡುವುದು ಎರಡು, ಈ ಎರಡು ವಿಚಾರಗಳು ಇವೆ. ಯೋಜನೇತರ ವೆಚ್ಚವನ್ನು ಕಡಿಮೆ ಮಾಡಲು ಈಗಾಗಲೇ ಕೆಲವು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಇಪ್ಪತ್ತು ಸಾವಿರ ಹುದ್ದೆಗಳನ್ನು ನಾವು ಕಡಿಮೆ ಮಾಡುತ್ತೇವೆಂದು ಹೇಳಿದ್ದೇವೆ, ಅದರ ಪ್ರಕ್ರಿಯೆಯನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೇ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ಆದರೆ ಇದರ ಫಲವು ಸಧ್ಯದಲ್ಲಿ ಲಭ್ಯವಾಗುವುದಿಲ್ಲ. ಹಂತ ಹಂತವಾಗಿ ಇದರ ಫಲ ಲಭ್ಯವಾಗುತ್ತದೆ. ಕೆಲವು ಹುದ್ದೆಗಳನ್ನು ರದ್ದು ಮಾಡಿದಮೇಲೆ ಅವರನ್ನು ಈ ಕೂಡಲೇ ಮನೆಗೆ ಹೋಗು ಎಂದು ಹೇಳುವುದಕ್ಕೆ ಆಗುವುದಿಲ್ಲ. ಡಿ.ವಿ.ಸಿ., ಐ.ಡಿ.ಓ., ಜಾಯಿಂಟ್ ಡೈರೆಕ್ಟರ್, ಜಾಯಿಂಟ್ ರಿಜಿಸ್ಟ್ರಾರ್ ಹುದ್ದೆಗಳನ್ನು ತೆಗೆದುಹಾಕಿದ್ದೇವೆ. ನಾಲ್ಕನೇ ದರ್ಜೆ, ಮೂರನೇ ದರ್ಜೆಗಳಲ್ಲಿ ಮಾತ್ರ ತೆಗೆದುಹಾಕಿಲ್ಲ, ಕ್ಲಾಸ್ ಒನ್‌ನಿಂದ ನಾಲ್ಕನೆ ದರ್ಜೆಯವರೆಗಿನ ಹಲವಾರು ಹುದ್ದೆಗಳನ್ನು ತೆಗೆದುಹಾಕಿದ್ದೇವೆ. ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಕೆಲಸ ಮಾಡಿದ್ದೇವೆ. ಇಡೀ ದೇಶದಲ್ಲಿ ಇಂಥ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಯಾವ ರಾಜ್ಯದವರೂ ಮಾಡಿಲ್ಲ. ಅಂಥ ಕೆಲಸವನ್ನು ನಾವು ಮಾಡಿ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ಸಿಬ್ಬಂದಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಇದು ಬಹಳ ಕಷ್ಟದ ಕೆಲಸ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಇದುವರೆಗೆ ಎಲ್ಲಾ ಅಧಿಕಾರಿಗಳ

ಸುಮಾರು 20-25 ಸಭೆಗಳನ್ನು ಮಾಡಿದ್ದೇನೆ. ದೂರವಾಣಿ ವೆಚ್ಚದಲ್ಲಿ 20 ಪರ್‌ಸೆಂಟ್ ಕಡಿಮೆ ಮಾಡಲೇಬೇಕೆಂದು ಸೂಚನೆ ಕೊಟ್ಟಿದ್ದೇವೆ. ಹಾಗೆಯೆ ಡೀಸಲ್, ಪೆಟ್ರೋಲ್‌ಗಳ ಉಪಯೋಗವನ್ನು 10 ಪರ್‌ಸೆಂಟ್ ಕಡಿಮೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಲು ಗಂಭೀರವಾದ ಚಿಂತನೆ ಮಾಡುತ್ತಿದ್ದೇವೆ. ಇತ್ತೀಚಿನ ವರ್ಷಗಳಲ್ಲಿ ಯೋಜನೇತರ ವೆಚ್ಚವು ಬಹಳ ಹೆಚ್ಚಾಗುತ್ತಿದೆ, ಅಭಿವೃದ್ಧಿ ಕೆಲಸಗಳಿಗೆ ಹಣವೇ ಇಲ್ಲದಂತಾಗುತ್ತಿದೆ, ಇದೇ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದರೆ ಬಹಳ ಪರಿಣಾಮ ಉಂಟಾಗುತ್ತದೆ. ಯೋಜನೇತರ ವೆಚ್ಚವನ್ನು ನಿಯಂತ್ರಣ ಮಾಡಲು, ಇದರ ಬಗ್ಗೆ ನಿಷ್ಠೂರವಾದ ಕ್ರಮಗಳನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಇದಕ್ಕಾಗಿ ನಾವು ಕಾನೂನು ತರುತ್ತಿದ್ದೇವೆ. 1-4-1999ರಿಂದ ಸರ್ಕಾರಿ ಇಲಾಖೆಗಳಲ್ಲಿ, ಮಂಡಳಿಗಳು, ಕಾರ್ಪೋರೇಷನ್‌ಗಳಲ್ಲಾಗಲಿ, ಎಲ್ಲೇ ಆಗಲಿ ದಿನಗೂಲಿ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬಾರದು. ಮಂಡಳಿಗಳು, ಕಾರ್ಪೋರೇಷನ್‌ಗಳಲ್ಲಿ ಯಾವುದೇ ರೀತಿ ನೀತಿ ಇಲ್ಲದೆ, ರೋಸ್ಟರ್, ಮೀಸಲಾತಿಗಳಿಲ್ಲದೆ ಕಾನೂನು ಬಾಹಿರವಾಗಿ ನೇಮಕಾತಿ ಮಾಡಿಕೊಳ್ಳುತ್ತಿರುವುದು ನಡೆಯುತ್ತಿದೆ. ಇದಕ್ಕೆ ಏನಾದರೂ ತಡೆಯನ್ನು ಉಂಟು ಮಾಡಬೇಕಾಗುತ್ತದೆ. ಬೋರ್ಡ್, ಕಾರ್ಪೋರಾಷನ್‌ಗಳಿರಬಹುದು, ಅಟಾನಮಸ್ ಬಾಡಿಗಳಿರಬಹುದು, ಅವುಗಳು ಏಕೆ ಇವತ್ತು ನಷ್ಟದಲ್ಲಿವೆ ಎಂದರೆ ಹೆಚ್ಚಾಗಿರುವ ಸಿಬ್ಬಂದಿಯಿಂದ. ತಾವು ಮೈಸೂರ್ ಲ್ಯಾಂಪ್ಸ್‌ನವರಿಗೆ ಪದೇ ಪದೇ ಪ್ರಸ್ತಾಪ ಮಾಡುತ್ತೀರಿ, ಆದಿರಬಹುದು, ಎನ್.ಜಿ.ಇ.ಎಫ್. ಇರಬಹುದು ಯಾವುದೇ ಇರಬಹುದು ಇವೆಲ್ಲ ನಷ್ಟದಲ್ಲಿ ಏಕೆ ಇವೆ ಎಂದರೆ ಸಿಬ್ಬಂದಿಯನ್ನು ಮನಸೋ ಇಚ್ಛೆ ತೆಗೆದುಕೊಂಡು ಬಿಟ್ಟಿದ್ದಾರೆ. ಮೈಸೂರು ಮಿನರಲ್ಸ್‌ನವರು ಬೇಕಾಗಿರುವ ಸಿಬ್ಬಂದಿಗಿಂತ ಎರಡು ಪಟ್ಟು ತೆಗೆದುಕೊಂಡು ಬಿಟ್ಟಿದ್ದಾರೆ. ರೋಸ್ಟರ್ ಪದ್ಧತಿ, ಮೀಸಲಾತಿ ಸೌಲಭ್ಯವಿಲ್ಲದೆ, ಹಿಂದುಳಿದ ವರ್ಗದವರಿಗೆ ಅವಕಾಶ ಕೊಡದೆ ಇಷ್ಟುಬಂದಂತೆ ನೇಮಕ ಮಾಡಿಕೊಂಡುಬಿಡುತ್ತಾರೆ.ಆದರಿಂದ ರಾಜ್ಯ ಸರ್ಕಾರದ ಮೇಲೆ ಹಣಕಾಸಿನ ಬಾರ ಜಾಸ್ತಿಯಾಗುತ್ತದೆ, ಆ ಸಂಸ್ಥೆಗಳು ನಷ್ಟಕ್ಕೆ ತುತ್ತಾಗುತ್ತರೆ. ಸಂಬಳ ಕೊಡಲು ಹಣವಿಲ್ಲ, ಕೊಡಿ ಎಂದು ಸರ್ಕಾರದ ಹತ್ತಿರ ಬರುತ್ತವೆ. ಇದುವರೆಗೆ ನೇಮಕ ಮಾಡುಕೊಂಡಿರುವರರನ್ನು ಏನು ಮಾಡಲು ಆಗುವುದಿಲ್ಲ. ಆದರೆ ಇನ್ನು ಮುಂದೆ ಯಾರೇ ಆಗಲಿ ಈ ರೀತಿ ನಿರ್ಣಯ ಮಾಡಿ ನೇಮಕ ಮಾಡಿಕೊಂಡರೆ ಅಂಥವರನ್ನು ಸೇವೆಯಿಂದ ವಜಾ ಮಾಡಲಾಗುತ್ತದೆ. ಆ ರೀತಿ ಹಾಯ್ದೆಯನ್ನು ತರಬೇಕೆಂದು ಉದ್ದೇಶಿಸಿದ್ದೇವೆ. ಬೋರ್ಡ್, ಕಾರ್ಪೋರೇಷನ್‌ಗಳಿಗೆ ಸರ್ಕಾರ ಗ್ಯಾರೆಂಟಿಯನ್ನು ಕೊಡುತ್ತವೆ. ಅದಕ್ಕೆ ಸಹ ಆರ್.ಬಿ.ಐನವರು ಮಿತಿಯನ್ನು ಗೊತ್ತು ಮಾಡಿದ್ದಾರೆ. ಈ ರೀತಿ ಗ್ಯಾರಂಟಿ ಕೊಟ್ಟುಕೊಂಡು ಹೋದರೆ ಒಳ್ಳೆಯದಲ್ಲ, ಎಲ್ಲಾದರೂ ಒಂದು ಕಡೆ ಇದಕ್ಕೆ ತಡೆಯನ್ನು ಹಾಕಬೇಕಾಗುತ್ತದೆ. ನಾನು ಇದುವರೆಗೆ ಇಂಥವುಗಳಿಗೆ ಐದು ಸಾವಿರ ಕೋಟಿ ರೂರಾಯಿಗಳವರೆಗೆ ಗ್ಯಾರಂಟಿಯನ್ನು ಕೊಟ್ಟಿದ್ದೇನೆ. ಅದು ಒಟ್ಟಾರೆ ರೆವಿನ್ಯೂ ರಿಸೀಟ್‌ನ 51 ಪರ್ಸೆಂಟ್ ಆಗುತ್ತದೆ. ಇದರಲ್ಲಿ ಕೃಷ್ಣ ಜಲಭಾಗ್ಯ

ನಿಗಮವನ್ನು ಹೊರತುಪಡಿಸಲಾಗಿದೆ. ಎರಡು ಸಾವಿರ ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿರುವುದರಿಂದ, ನಮ್ಮ ರಾಜ್ಯದ ಹಕ್ಕನ್ನು ಉಳಿಸಿಕೊಳ್ಳಬೇಕಾಗಿರುವುದರಿಂದ, ಇದನ್ನು ಹೊರತಿಪಡಿಸಿದ್ದೇವೆ. ಒಟ್ಟಾರೆ ರಿವೆನ್ಯೂ ರಿಸೀಟ್‌ನಲ್ಲಿ 80 ಪರ್‌ಸೆಂಟ್‌ಗಿಂತ ಹೆಚ್ಚು ಗ್ಯಾರಂಟಿ ಕೊಡಬಾರದೆಂದು ಆರ್.ಬಿ.ಐ.ನವರು ಸೂಚನೆ ನೀಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾಯ್ದೆಯನ್ನು ತರುತ್ತಿದ್ದೇವೆ. ರಾಜ್ಯ ಸರ್ಕಾರ ಕೊಂಡುಕೊಳ್ಳುವ ವಿಷಯದಲ್ಲಿ ಮತ್ತು ಟೆಂಡರ್‌ಗಳ ಸಂಬಂಧದಲ್ಲಿ ಪಾರದರ್ಶಕತೆ ಇರಬೇಕೆಂಬ ಉದ್ದೇಶದಿಂದ ಇಲ್ಲಿ ಆಗುತ್ತಿರುವ ಸೋರಿಕೆ ಮತ್ತು ಅವ್ಯವಹಾರವನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಒಟ್ಟಿನಲ್ಲಿ ವೆಚ್ಚವನ್ನು ಕಡಿಮೆ ಮಾಡಲು ಸ್ಪಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದರಿಂದ ಮುಂಬರುವ ದಿವಸಗಳಲ್ಲಿ ನಮ್ಮ ರೆವಿನ್ಯೂ ರಿಸೀಟ್‌ಗಳೇನು ಹೆಚ್ಚಾಗುತ್ತದೆ ಅದನ್ನು ತಡೆಗಟ್ಟಲು, ನಿಯಂತ್ರಣ ಮಾಡಲು ಸಹಕಾರಿಯಾಗುತ್ತದೆಂದು ಹೇಳಬಯಸುತ್ತೇನೆ. ನಾವು ನೀರಾವರಿ, ವಿದ್ಯುತ್, ಕುಡಿಯುವ ನೀರು ಮುಂತಾದವುಗಳಲ್ಲಿ ಏನು ಹಣವನ್ನು ಖರ್ಚು ಮಾಡುತ್ತಿದ್ದೇವೆ ಅದಕ್ಕೆ ಯೂಸೇಜ್ ಚಾರ್ಜ್‌ನ್ನು ವಸೂಲಿ ಮಾಡುವ ಕೆಲಸ ಮಾಡುತ್ತಿಲ್ಲ. ಕುಡಿಯುವ ವಿಚಾರ. ಅದು ನಾನ್-ಟ್ಯಾಕ್ಸ್ ರೆವಿನ್ಯೂ. ಅದು ಯಾವತ್ತಿನಿಂದಲೂ ಹಾಗೆಯೇ ಇದೆ. ಹೀಗಾಗಿ ಪ್ರತಿವರ್ಷವೂ ಕೂಡ ಸೋಷಿಯಲ್ ಸೆಕ್ಟಾರ್‌ನಲ್ಲಿ ಹಣವು ಹೆಚ್ಚು ಖರ್ಚಾಗುತ್ತಾ ಇದೆ. ಅವರ ಮೆಂಟೆನೆನ್ಸ್‌ಗಾಗಿ ಹೆಚ್ಚು ಹಣ ಖರ್ಚಾಗುತ್ತಾ ಇದೆ. ರಸ್ತೆಗಳು, ಇರಿಗೇಶನ್, ಕುಡಿಯುವ ನೀರು, ವಿದ್ಯಾಭ್ಯಾಸ, ಮುಂತಾಗಿ ಇಂಥಾ ಬಾಬತ್ತುಗಳಿಗೆ ಖರ್ಚು ಹೆಚ್ಚುತ್ತಾ ಹೋಗುತ್ತದೆ. ಆ ಸಂದರ್ಭದಲ್ಲಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕೂಡ ಏರುತ್ತಾ ಹೋಗುತ್ತದೆ. ಹೀಗಾಗಿ ರೆವಿನ್ಯೂ ಡೆಫಿಸಿಟ್‌ನಲ್ಲಿ ವ್ಯತ್ಯಾಸವು ಹೆಚ್ಚು ಆಗುವುದಕ್ಕೆ ಕಾರಣವಾಗಿತ್ತದೆ. ಇದನ್ನು ತಹಬಂದಿಗೆ ತರಬೇಕೆಂಬುದರಲ್ಲಿ ಎರಡನೇ ಮಾತಿಲ್ಲ, ಅದನ್ನು ತರಲೇಬೇಕು. ರೆವಿನ್ಯೂ ಡೆಫಿಸಿಟ್‌ನ್ನು ಕಡಿಮೆ ಮಾಡಲೇಬೇಕು. ಅದಕ್ಕೆ ಬೇಕಾದಂಥ ವಿಶೇಷವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕೇಂದ್ರ ಸರಕಾರ ಕೂಡ ಈ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡಿದೆ. ಹಾಗೆಯೇ 11ನೇ ಪ್ಲಾನ್ ಕಮೀಶನ್‌ನವರಿಗೆ ಈ ವಿಚಾರವನ್ನು ನೋಡಬೇಕೆಂದು ಕೇಳಿಕೊಳ್ಳುವ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ರೆವಿನ್ಯೂ ಡೆಫಿಸಿಟ್ ಏಕೆ ಆಗುತ್ತದೆ ಮತ್ತು ಅದನ್ನು ಹೇಗೆ ಕಡಿಮೆ ಮಾಡಬೇಕೆಂಬುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಚಿಸಲೇ ಬೇಕಾದ ವಿಚಾರವಾಗಿದೆ. ಈ ಎಲ್ಲಾ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರದವರು ರೆವಿನ್ಯೂ ಡೆಫಿಸಿಟ್‌ನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಸಹಾಲಿಕ ಹೆಜ್ಜೆಯನ್ನು ಇಟ್ಟಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಹಾಗೆಯೇ ತೆರಿಗೆ ವಸೂಲಿ ಮಾಡುವಂಥ ವಿಚಾರದಲ್ಲಿ ಮತ್ತು ತೆರಿಗೆಯ ಮೂಲಗಳನ್ನು ಹೆಚ್ಚಿಗೆ ಮಾಡುವ ವಿಚಾರದಲ್ಲಿಯೂ ಕೂಡ ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ನಾವು ಇವತ್ತು ವ್ಯಾಲ್ಯೂ ಆಡೆಡ್ ಟ್ಯಾಕ್ಸ್ ರಿಜೀಮ್‌ಗೆ ಹೋಗುತ್ತಾ ಇದ್ದೇವೆ... ಅದಕ್ಕೋಸ್ಕರವಾಗಿ ಬಾಷ್ ಸ್ಪಷ್ಟವಾಗಿ ಅದಕ್ಕೆ ಬೇಕಾಗುವಂಥ ಪೂರಕವಾದ ವ್ಯವಸ್ಥೆಗಳೆಲ್ಲವನ್ನೂ ಮಾಡುತ್ತಾ ಇದ್ದೇವೆ. ಹಾಗೆ ಮಾಡುವಾಗ ಟ್ಯಾಕ್ಸ್ ಬೇಸ್‌ಗಳು ತಪ್ಪುಹೋಗುತ್ತಾ ಇಲ್ಲ. ಆ ಟ್ಯಾಕ್ಸ್

ಬೇಸ್‌ಗಳನ್ನು ಹೆಚ್ಚು ಮಾಡಲು ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಆದರಿಂದ ಸಾಮಾನ್ಯ ಜನರಿಗೆ ಹೊರೆಯಾಗದ ರೀತಿಯಲ್ಲಿ, ಬಡವರಿಗೆ ಹೊರೆಯಾಗದ ರೀತಿಯಲ್ಲಿ, ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಟ್ಯಾಕ್ಸ್ ಬೇಸ್‌ಗಳನ್ನು ನಿಗದಿ ಮಾಡತಕ್ಕಂಥಾದ್ದು ಇರುವುದರಿಂದ ಈ ದಿಸೆಯಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ರೆವಿನ್ಯೂ ಡಿಫಿಸಿಟ್ ಎಷ್ಟು ಇದೆ ಎಂಬ ಬಗ್ಗೆ ತಮ್ಮ ಗಮನಕ್ಕೆ ಕೆಲವು ಅಂಕಿಅಂಶಗಳನ್ನು ಕೊಡಬಯಸುತ್ತೇನೆ. ತಮಿಳುನಾಡಿನಲ್ಲಿ ರೆವಿನ್ಯೂ ಡಿಫಿಸಿಟ್ 1999-2000ನೇ ಸಾಲಿನಲ್ಲಿ 2,633 ಕೋಟಿ ರೂಪಾಯಿಗಳು ಅದೇ ಆಂಧ್ರ ಪ್ರದೇಶದಲ್ಲಿ 1999-2000ನೇ ಇಸವಿಗೆ 1,564 ಕೋಟಿರೂಪಾಯಿಗಳು. ಅವರು ಇನ್ನೂ ಪೇ-ರಿವಿಷನ್ ಮಾಡಿಲ್ಲ. ಅವರಲ್ಲಿನ ಆ ಕುರಿತ ಕಮಿಟಿಯು ವರದಿಯನ್ನು ಕೊಟ್ಟಿಲ್ಲ. ಅದನ್ನು ಸೇರಿಸಿಕೊಂಡರೆ ಅಲ್ಲಿ 3,000ರ ಮೇಲೆ ಹೊರಟು ಹೋಗಬಹುದು ಎಂದು ಕಾಣುತ್ತದೆ. ಹಾಗೆಯೇ ಮಹಾರಾಷ್ಟ್ರ ಮೈನಸ್ 7,000 ಕೋಟಿ ರೂಪಾಯಿಗಳು. ಕರ್ನಾಟಕದಲ್ಲಿ 1399 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದಲ್ಲಿ 1998-99ರಲ್ಲಿ ರೆವಿನ್ಯೂ ಡೆಫಿಸಿಟ್ 4,000 ಕೋಟಿ ರೂಪಾಯಿಗಳು ಹೆಚ್ಚಾಗಿದೆ. ನಾವು ಇಲ್ಲಿ ಅಂಕಿ ಅಂಶಗಳನ್ನು ಕೊಟ್ಟು ಕರ್ನಾಟಕದವರು ಎಲ್ಲರಿಗಿಂತಲೂ ಕಡಿಮೆ ರೆವಿನ್ಯೂ ಡೆಫಿಸಿಟ್‌ನಲ್ಲಿದ್ದೇವೆ ಎಂದು ಹೇಳಿ ಬೆನ್ನು ತಟ್ಟಿಕೊಳ್ಳುವ ಕೆಲಸವನ್ನು ಮಾಡುತ್ತಾ ಇಲ್ಲ. ಆದರೆ ಈ ಪರಿಸ್ಥಿತಿಯು ಇಡಿ ದೇಶದಲ್ಲಿಯೇ ಇದೆ. ಪೇ-ರಿವಿಜನ್ ಮುಂತಾದ ಕಾರಣಗಳನ್ನು ಅದಕ್ಕೆ ಕೊಡಬಹುದು. ಹೀಗಿರುವುದರಿಂದ ಕೇಂದ್ರ ಮತ್ತು ಎಲ್ಲಾ ರಾಜ್ಯ ಸರಕಾರಗಳಲ್ಲಿ ಇಂಥ ಪರಿಸ್ಥಿತಿಯು ನಿರ್ಮಾಣವಾಗಿದ್ದು ನಮ್ಮ ರಾಜ್ಯದಲ್ಲಿಯೂ ಅದೇ ಪರಿಸ್ಥಿತಿಯು ಸ್ವಲ್ಪಮಟ್ಟಿಗೆ ಇದೆ. ಈ ರೆವಿನ್ಯೂ ಡೆಫಿಸಿಟ್‌ನ್ನು ತೊಡೆದು ಹಾಕುವಂಥ ದಿಸೆಯಲ್ಲಿ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಆ ಕುರಿತು ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರುಗಳಲ್ಲಿ ಕೆಲವರು ಎಲ್ಲಾ ಸಾಲವನ್ನು ತೆಗೆದುಕೊಳ್ಳುತ್ತಾ ಇದ್ದೀರಿ, ಸಾಲದ ಹೊರೆ ಜಾಸ್ತಿಯಾಯಿತು ಎಂಬ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಹೀಗೆ ಸಾಲವನ್ನು ತೆಗೆದುಕೊಳ್ಳುತ್ತಿರುವುದು ನಾವೇನು ಹೊಸತಾಗಿ ಪ್ರಾರಂಭಿಸಿದ್ದೇನೂ ಅಲ್ಲ. 1994-95ರಲ್ಲಿ ಎಂಟು ಸಾವಿರ ಕೋಟಿ ರೂಪಾಯಿ ಬಿಲ್ಲರೆ ಸಾಲ ಇತ್ತು. ಇವೊತ್ತು ಮಾರ್ಚ್, 31-1999 ಕ್ಕೆ 12,900 ಕೋಟಿ ರೂಪಾಯಿಗಳ ಸಾಲ ಇದೆ. ಹಾಗೆಯೇ ನಾವು ತೆಗೆದುಕೊಂಡಿರುವ ಸಾಲವನ್ನು ಬಹುತೇಕವಾಗಿ ಕ್ಯಾಪಿಟಲ್ ಔಟ್‌ಲೇಗಾಗಿ ಖರ್ಚು ಮಾಡುತ್ತಾ ಇದ್ದೇವೆ. 1998-99ನೇ ಸಾಲನ್ನು ಬಿಟ್ಟು ಉಳಿದೆಲ್ಲಾ ವರ್ಷಗಳಲ್ಲಿಯೂ ಕೂಡ 80 ಪರ್‌ಸೆಂಟ್‌ನಷ್ಟು ಕ್ಯಾಪಿಟಲ್ ಔಟ್‌ಲೇಗೆ ಹೋಗಿದೆ. ಇವೊತ್ತು ನಾವು ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿದರೆ, ನ್ಯಾಷನಲ್ ಆವರೇಜ್ ತೆಗೆದುಕೊಂಡರೆ, ನ್ಯಾಷನಲ್ ಆವರೇಜ್ ಡೆಟ್ ಸರ್ವೀಸ್ ಇರತಕ್ಕಂಥಾದ್ದು 22 ಪರ್‌ಸೆಂಟ್; 22 ರಿಂದ 23 ಪರ್‌ಸೆಂಟ್. ನಮ್ಮದ್ದು 18 ಪರ್‌ಸೆಂಟ್. ಇದು 1999-2000ನೇ

ಇವಿಗೆ ಸಂಬಂಧಪಟ್ಟಿದ್ದು. 30-3-1999ರ ಅನುಸಾರ ಯಾವ ಯಾವ ರಾಜ್ಯಗಳಲ್ಲಿ ಎಷ್ಟೆಷ್ಟು ಸಾಲದ ಹೊರೆ ಇದೆ ಎಂಬುದನ್ನು ನೋಡಿ. ಆಂಧ್ರಪ್ರದೇಶದಲ್ಲಿ 22,850 ಕೋಟಿ ರೂಪಾಯಿಗಳು. ಗುಜರಾತ್‌ನಲ್ಲಿ 17,506 ಕೋಟಿ ರೂಪಾಯಿಗಳು. ಮಹಾರಾಷ್ಟ್ರದಲ್ಲಿ 30,999 ಕೋಟಿ ರೂಪಾಯಿಗಳು. ತಮಿಳುನಾಡಿನಲ್ಲಿ 19,938 ಕೋಟಿ ರೂಪಾಯಿಗಳು. ಕರ್ನಾಟಕದಲ್ಲಿ 12,973 ಕೋಟಿ ರೂಪಾಯಿಗಳು. ಹೀಗೆ ಕಂಪೇರಟೀವ್ಲಿ ಡೆಬ್ಟ್ ಸರ್ವಿಸ್‌ನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ನಾಷ್ನಲ್ ಆವರೇಜ್‌ನ್ನು ತೆಗೆದುಕೊಂಡರೆ, ನಮ್ಮಲ್ಲಿ ಅದು ಕಡಿಮೆ ಇದೆ ಹಾಗೂ ನಮ್ಮ ಆರ್ಥಿಕ ನಿರ್ವಹಣೆಯು ಚೆನ್ನಾಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಈ ಮಾತನ್ನು ಮಾನ್ಯ ಸದಸ್ಯರುಗಳು ಒಪ್ಪುತ್ತಾರೆ ಎಂಬ ವಿಶ್ವಾಸವನ್ನು ಹೊದಿದ್ದೇನೆ.

ಶ್ರೀ ಎಂ.ಪಿ ಪೂರ್ಣಡೆ :— ಮಾನ್ಯ ಸಚಿವರು ಕ್ಯಾಪಿಟಲ್ ರಿಸಿಪ್ಟ್ಸ್ ಬಗ್ಗೆ ಹೇಳಿದ್ದೀರು. ಆ ಮಾತನ್ನು ನಮಗೆ ಅನ್ವಯಿಸುವುದಿಲ್ಲ. ಏಕೆಂದರೆ, ಈ ವರ್ಷವನ್ನು ನೋಡಿದರೆ ಕ್ಯಾಪಿಟಲ್ ಔಟ್‌ಲೆಗಿಂತ ಕ್ಯಾಪಿಟಲ್ ರಿಸಿಪ್ಟ್ಸ್ 1,200 ಕೋಟಿ ರೂಪಾಯಿಗಳಷ್ಟು ಜಾಸ್ತಿ ಇದೆ.

ಶ್ರೀ ಸಿದ್ಧರಾಮಯ್ಯ :— ನಾನು ಹಿಂದಿನ ಎಲ್ಲಾ ವರ್ಷಗಳದ್ದು ಹೇಳಿದೆ. It was more than 98% and we have reduced it to 51% to 52% towards the Capital outlay. ಇಷ್ಟೆಲ್ಲಾ ಇದ್ದು, ಬೇರೆ ಬೇರೆ ರಾಜ್ಯಗಳಲ್ಲಿ ತೆರಿಗೆ ವಸೂಲಿ ಗ್ರೋತ್‌ರೇಟ್ ಆಂಧ್ರಪ್ರದೇಶದಲ್ಲಿ 8.03, ಗುಜರಾತ್‌ನಲ್ಲಿ 10.87, ಮಹಾರಾಷ್ಟ್ರ 9.19, ಕರ್ನಾಟಕ 14.18 ಇದೆ Kerala is No.1, out State is No.2. ಹೀಗಾಗಿ ತೆರಿಗೆ ಎಲ್ಲಾ ಸೋರಿ ಹೋಯಿತು? ಇವರು ವಸೂಲಿ ಮಾಡುತ್ತಾ ಇಲ್ಲ, ಎಲ್ಲಾ ಹೆಂಡದವರ ಲಾಬಿಗೆ ಸಿಕ್ಕಿಹಾಕಿಕೊಂಡಿದ್ದಾರೆ, ಬೀರ್‌ನವರ ಲಾಬಿಗೆ ಸಿಕ್ಕಿಹಾಕಿಕೊಂಡಿದ್ದಾರೆ ಎಂದೆಲ್ಲಾ ಹೇಳಿದರು. ನಾವು ಯಾರ ಮುಖಗಳು ಹೇಗೆ ಇವೆ ಎಂಬುದನ್ನೇ ನೋಡಲೇ ಇಲ್ಲ. ಬೀರ್ ವಿಚಾರದಲ್ಲಿ ಕಡಿಮೆ ಮಾಡಿಬಿಟ್ಟಿದ್ದೀರಿ ಎಂಬ ದೂರು ಇದೆ. ಬಿರ್‌ನಲ್ಲಿ ಅದನ್ನು ಕನ್‌ಸಂಪ್ಷನ್ ಮಾಡುವ ಪ್ರಮಾಣ ಕಡಿಮೆಯಾಯಿತು. 1995-96ರಲ್ಲಿ 45 ಪರ್‌ಸೆಂಟ್ ಟ್ಯಾಕ್ಸ್ ಮತ್ತು ಕೊನೆಯ ಹಂತದಲ್ಲಿ 5 ಪರ್‌ಸೆಂಟ್ ಇತ್ತು. ಆದರೆ ಅಲ್ಲಿಂದೀಚೆಗೆ ಪ್ರಮಾಣ ಕಡಿಮೆಯಾಗುತ್ತಾ ಬಂತು. ಹಾಗೆಯೇ ಬಡಕ ಜನರು ಬೀರ್ ರೇಟು ಜಾಸ್ತಿಯಾಗಿರುವುದರಿಂದ ಹಾರ್ಡ್‌ಲಿಕ್ಕರ್‌ಗೆ ಹೋಗುತ್ತಿದ್ದಾರೆ ಎಂಬ ಅಭಿಪ್ರಾಯವೂ ಬಂತು. ಅಂತೆಲ್ಲಾ ಕಡೆಗಳಿಂದಲೂ ಅದು ಗೊತ್ತಾಗುತ್ತಿತ್ತು. ನಮ್ಮ ಉದ್ದೇಶವು ಹುಡುಗರಿಗೆ, ಯುವಕರಿಗೆ ಬೀರ್ ಕುಡಿಸಬೇಕೆಂಬುದು ಅಲ್ಲ. ಮಾನ್ಯ ಮಾಜಿ ಸಾರಾಜೋರವರು ಪಾಪುಲೇಷನ್‌ನ್ನು ಜಾರಿಗೆ ತನ್ನಿ ಎಂದು ಹೇಳಿದರು. ವಾಸ್ತವ: ದೇಶದ ಯಾವ ರಾಜ್ಯದಲ್ಲಿಯೂ ಕೂಡ ಪಾನನಿರೋಧ ಜಾರಿಗೆ ತಂದು ಯಶಸ್ವಿಯಾದ ನಿದರ್ಶನಗಳು ಇಲ್ಲ. ಇದನ್ನು ಎಲ್ಲಿಯೂ ನಿಯಂತ್ರಣವನ್ನು ಕೂಡ ಮಾಡಲು ಆಗುವುದಿಲ್ಲ. ಆ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ನಿಯಂತ್ರಣ ಮಾಡಿದಷ್ಟು ಜಾಸ್ತಿಯಾಗುತ್ತಾ ಹೋಗುತ್ತದೆ. ಗುಜರಾತಿನಲ್ಲಿ ಸಂಪೂರ್ಣ ಪಾನನಿಷೇಧ ಇದೆ. ನೀವು ಎಲ್ಲಿಗೆ ಹೋದರು ಸಾಯಂಕಾಲ ಕುಡಿದುಕೊಂಡು ವಾಲಾಡುವರು ಸಿಗುತ್ತಾರೆ. Illicit distillation is going like anything. It is rempant ಅಲ್ಲಿ ಶಂಕರಸಿಂಗ್‌ವಗೇಲಾ ಎನ್ನುವ ಒಬ್ಬ ಮುಖ್ಯಮಂತ್ರಿಗಳಿದ್ದರು. ಅವರನ್ನು ಹೋಗಿ ಕೇಳಿದೆವು. ನಾವು ಸಾರಾಯಿ ನಿಲ್ಲಿಸಬೇಕೆಂದು ಮಾಡಿದ್ದೇವೆ we wanted honest opinion ಎಂದು ಕೇಳಿದೆವು. ನಾನು ನಾಣಯ್ಯನವರು, ಸಿಂಧ್ಯಾ, ಭೈರೇಗೌಡ ಎಲ್ಲ ಹೋಗಿದ್ದೆವು. ಅವರು ನಿಜಾ ಹೇಳಲಾ ಅಂದರು, ಎನಪ್ಪಾ ಅಂದರೆ ಈ ಪ್ರಾಹಿಬಿಶನ್ ಇದೆಯಲ್ಲಿ ಇದು ಒಂದು ಹಿಪ್ರಾಕ್ರೆಸಿ ಅಂದರು. He said, ``prohibition is an hypocracy" This is the word he used.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಹಾಗಿದ್ದರೆ ಮ್ಯಾನಿಫೆಸ್ಟೋದಲ್ಲಿ ಏಕೆ ಸೇರಿಸಿದ್ದೀರಿ?

ಶ್ರೀ ಸಿದ್ದರಾಮಯ್ಯ :— ನಮಗೆ ಗೊತ್ತಿಲ್ಲದೆ ಹಾಕಿದ್ದೋ, ಒಪ್ಪಿಕೊಳ್ಳುತ್ತಿದ್ದೇವಲ್ಲ. ನಮಗೆ ಅನುಭವ ಇರಲಿಲ್ಲ, ನಿಜ ನಿಮ್ಮಷ್ಟು ಅನುಭವ ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಹಿಂದಿನವರ ಅನುಭವ ತೆಗೆದುಕೊಂಡೇ ಮುನ್ನಡೆಯಿರಿ, ಇಲ್ಲಾಂದರೆ ಸಾವಿರ ಕೋಟಿ ರೂಪಾಯಿ ಡೆಫಿಸಿಟ್ ಬರುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ :— ನಿಮ್ಮ ಕಾಲದಲ್ಲೂ 1994-95ರಲ್ಲಿ 400 ಕೋಟಿ ರೂಪಾಯಿಗಳು ಇತ್ತು 1993-94ರಲ್ಲಿ ಪೇ ರಿವಿಜನ್ ಆದಮೇಲೆ 400 ಕೋಟಿ ರೂಪಾಯಿಗಳು ಬಂದುಬಿಡ್ತು. ಬೇರೆ ರಾಜ್ಯಗಳದು ನನಗೆ ಗೊತ್ತಿಲ್ಲ. ನಾವು ಗುಜರಾತ್, ಮಹಾರಾಷ್ಟ್ರ, ಕೇಂದ್ರ, ತಮಿಳುನಾಡು, ಆಂಧ್ರಪ್ರದೇಶಗಳಿಗೆ ಹೋಗಿದ್ದೆವು. ಯಾವ ರಾಜ್ಯದಲ್ಲೂ ಕೂಡ ನಿಯಂತ್ರಣಾನೂ ಮಾಡುವುದಕ್ಕಾಗುವುದಿಲ್ಲ, ನಿಲ್ಲಿಸುವುದಕ್ಕೂ ಆಗುವುದಿಲ್ಲ. ಬಹುಶ: ಇದೇನಾದರೂ ಒಂದು ರಾಷ್ಟ್ರೀಯ ನೀತಿಯಾದರೆ ಸಾಧ್ಯವಾಗುತ್ತದೇನೋ ಗೊತ್ತಿಲ್ಲ. ಹೇಗೂ ಕೇಂದ್ರದಲ್ಲಿ ಬಿ.ಜೆ.ಪಿ ಸರ್ಕಾರ ಇದೆ, ರಾಷ್ಟ್ರೀಯ ನೀತಿ ಮಾಡಿ ಎಂದು ನೀವು ಹೇಳಿ. Make it a national policy ನಮ್ಮದೂ ಸಹಕಾರ ಇದೆ. ಇದರಿಂದ ನಮಗೆ 1,200 ಕೋಟಿ ರೂಪಾಯಿ ಬರುತ್ತದೆ ಬೇರೆ ರೀತಿಯಲ್ಲಿ ಅದು ಆಗುತ್ತದೆ. ಜನ ಹಾಳಾಗುವುದು, ಅದರ ಆದಾಯ ನಷ್ಟವಾಗುವುದು ಎಲ್ಲ ಉಳಿಯುತ್ತದೆ. ಅನೇಕ ಕಾರ್ಯಕ್ರಮಗಳಲ್ಲಿ ದುಡ್ಡು ಉಳಿತಾಯ ಮಾಡಬಹುದು. ಆದರೆ It shoould be a national policy. We will act acccording to the national policy. ಪತ್ರಾನೂ ಬರೆದದಿದ್ದಾರೆ ನಮ್ಮ ಮುಖ್ಯಮಂತ್ರಿಗಳು. ಹಾಗೆ ಮಾಡಿ ಎಂದು.

ಶ್ರೀ ವಾಟಾಳ್ ನಾಗರಾಜ್ :— ಸಿದ್ದರಾಮಯ್ಯನವರೇ ಹಾಗಾದರೆ ಮದ್ಯಪಾನ ಸಂಯಮ ಮಂಡಲಿ ರದ್ದು ಮಾಡುತ್ತೀರಾ? ಅಲ್ಲಿ ಮಹಾತ್ಮ ಗಾಂಧಿ ಫೋಟೋ ಹಾಕಿ ಕುಡಿಯುವುದು ಅಪಾಯ ಎಂದು ಎಲ್ಲಾ ಕಡೆ ಪ್ರಚಾರ ಮಾಡುತ್ತೀರಲ್ಲ, ಅದು ಏಕೆ ಬೇಕು? ಯಾವ ಆಷಾಡಭೂತಿತ್ವ ಇದು.

ಶ್ರೀ ಸಿದ್ದರಾಮಯ್ಯ :— ಅದನ್ನು ನಾವು ಮಾಡಿದ್ದೇ? ಅದರಲ್ಲಿ ಸದುದ್ದೇಶವೇ ಇದೆ. ಅದು ಯಾಕೆ ಅಂದರೆ ಒಂದು ಕೆಟ್ಟ ವಿಚಾರದ ಬಗ್ಗೆ ಜನರಿಗೆ ಜಾಗೃತಿ ತಿಳುವಳಿಕೆ ಕೊಡುವ ಕೆಲಸಾನೇ ಮಾಡಬಾರದು ಎಂದು ಅಲ್ಲ. ಕುಡಿಯುವುದು ತಪ್ಪಪ್ಪ, ಬಿಟ್ಟುಬಿಡ್ರಿ ಎಂದು ಹೇಳಲೇಬಾರದು ಎಂದು ಎಲ್ಲಿದೆ? ಸಿಗರೇಟ್ ಮೇಲೆ smoking is injurious to health ಅದು ಆಹಾಡಭೂತಿನೋ ಹಾಗೇ ಕುಡಿಯಬೇಡಿ ಎನ್ನುವುದು ಸರ್ವಸಮ್ಮತವಾದದ್ದು. ನಮ್ಮ ಆರೋಗ್ಯಕ್ಕೆ ಒಳ್ಳೆಯದು, ದೇಶಕ್ಕೆ ಒಳ್ಳೆಯದು, ಆದರೆ ಸಾಧ್ಯವಾಗೋಲ್ಲವೆ? ಎಲ್ಲ ರಾಜ್ಯಗಳಿಗೂ ಹೋಗಿಬಂದ ನನ್ನ ಅನುಭವದ ಮೇಲೆ ಇದನ್ನು ಹೇಳುತ್ತಿದ್ದೇನೆ. ಆದಿರಬೇಕು ಎಂದು ವಾದ ಮಾಡುವುದಿಲ್ಲ ನಾನು. ಪಾನನಿಷೇಧದ ಬಗ್ಗೆ ಒಂದು ರಾಷ್ಟ್ರೀಯ ನೀತಿ ರೂಪಿಸಿ, ನಮ್ಮದು ಸಹಕಾರ ಅದಕ್ಕೆ ಇದೆ.

ಶ್ರೀ ಜೆ.ಎಚ್. ಪಟೇಲ್ :— ಮಾವೋತ್ಸೆತುಂಗ್‌ಗಿಂತ ಅಧಿಕೃತವಾಗಿ ಒಂದು ರಾಷ್ಟ್ರವನ್ನು ಆಳಿದವರು ಇನ್ನೊಬ್ಬರಿಲ್ಲ. ಮಾವೋತ್ಸೆತುಂಗ್‌ಗೆ ಚೈನಾದಲ್ಲಿ ಪಾನನಿಷೇಧ ತರಬೇಕೆಂದು ಸಲಹೆ ಕೊಡುತ್ತಾರೆ. ಆಗ ಆತ ಏನು ಹೇಳುತ್ತಾನೆ ಅಂದರೆ ಈ ದೇಶದಲ್ಲಿ ಧರ್ಮವನ್ನು ಬ್ಯಾನ್ ಮಾಡಿದ್ದೇನೆ Religion is also becoming a most powerful intoxicant. ಅದರ ಜೊತೆಗೆ ಇದನ್ನೂ ಬ್ಯಾನ್ ಮಾಡಿದರೆ the society will not contain ಅಂಥಾ ಚೈನಾದ ಮಾವೋತ್ಸೆತುಂಗ್‌ಗೇ ಸಾಧ್ಯವಾಗದ ಪ್ರಾಹಿಬಿಶನ್ ವಾಪಸೇಯು ಯವರಿಂದಾಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಅದರೂ ಪತ್ರ ಬರೆದಿದ್ದೇನೆ. ನನಗೆ ಕೆಲವು ಮಹಾಧಿಪತಿಗಳು ಬಂದು ಒತ್ತಡ ತಂದರು: ಪ್ರಾಹಿಬಿಷನ್ ತನ್ನಿರಿ ಎಂದು, ಈ ಸಲ ಬಜೆಟ್‌ನಲ್ಲಿ ನಿಮ್ಮ ಹಣಕಾಸು ಸಚಿವರಿಗೆ ಹೇಳಿ ಪಾನನಿಷೇದ ಜಾರಿಗೊಳಿಸಿ ಎಂದು ಅದಕ್ಕೆ ನಾನು ಹೇಳಿದೆ, ಇದು ರಾಷ್ಟ್ರೀಯ ನೀತಿಯಾಗಬೇಕು ನಾನು ಪ್ರಧಾನಮಂತ್ರಿಯವರಿಗೆ ಪತ್ರ ಬರೆದಿದ್ದೇನೆ, ಇನ್ನೂ ಅವರಿಂದ ಉತ್ತರ ಬಂದಿಲ್ಲ. ಅದ್ದರಿಂದ ಒಳ್ಳೆಯ ಉದ್ದೇಶದಿಂದ ವಾಟಾಳ್‌ರವರು ಹೇಳಿದ್ದನ್ನು ಒಪ್ಪುತ್ತೇನೆ. ನೀವು ಕುಡಿಯದೆ ಇರಬಹುದು ಅಥವಾ ಕುಡಿಯುವ ಇಚ್ಛೆಯೂ ಇಲ್ಲದಿರಬಹುದು, ಹಾಗೆಂದು ಬೇರೆಯವರ ಮೇಲೆ ಒತ್ತಡ ತನ್ನಿ ಎಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾವೋತ್ಸೆತುಂಗ್‌ದು ಒಂದು ಬಾಂಬ್ ಹಾಕಿದರು, ಕೂತರು ಮುಗಿಯಿತು ಕತೆ.

ಶ್ರೀ ಸಿದ್ದರಾಮಯ್ಯ :— ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪರಿಶಿಷ್ಟ ಜಾತಿ ವರ್ಗದವರಿಗೆ ಖರ್ಚುಮಾಡುವ ಹಣ ಲ್ಯಾಪ್ಸ್ ಆಗುತ್ತದೆ, ಸರಿಯಾಗಿ ಖರ್ಚು ಮಾಡುತ್ತಿಲ್ಲ ಎಂದು. ನಾವು 1995-96ರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣ ಕ್ರೋಢೀಕರಣ ಮಾಡುವುದಕ್ಕೆ ಪ್ರಾರಂಭ ಮಾಡಿ ಈಗಾಗಲೇ ನಾವು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ, ಹಿಂದೆ ಬೇರಬೇರೆ ಕಾರ್ಯಕ್ರಮಗಳಿಗೆಂದು ಏನು ಖರ್ಚಾಗುತಿತ್ತು ಅವನ್ನೆಲ್ಲ ನಿಲ್ಲಿಸಿ ಮೂರು ಕಾರ್ಯಕ್ರಮಗಳು, ಹೌಸಿಂಗ್, ಇಂಗೇಶನ್ ಮತ್ತು ಎಜುಕೇಶನ್‌ಗೆ

ಮಾಡಬೇಕೆಂದು ಮಾಡಿದೆವು. ಆದಾದಮೇಲೆ ಅಧ್ಯಕ್ಷರೇ 1993-94ರಲ್ಲಿ 70 ಕೋಟಿ ರೂಪಾಯಿ ಇದ್ದದ್ದು 1994-95 ರಲ್ಲಿ 74 ಕೋಟಿ ರೂಪಾಯಿಗಳು ಆಯಿತು, 1995-96 ರಲ್ಲಿ 210 ಕೋಟಿ ರೂಪಾಯಿಗಳು 1996-97ರಲ್ಲಿ 299 ಕೋಟಿ ರೂಪಾಯಿಗಳು 1997-98ರಲ್ಲಿ 276 ಕೋಟಿ ರೂಪಾಯಿಗಳು 1998-99ರಲ್ಲಿ 316 ಕೋಟಿ ರೂಪಾಯಿಗಳು 1999-2000 ರಲ್ಲಿ 370 ಕೋಟಿ ರೂಪಾಯಿಗಳು. ಮಾನ್ಯ ಖರ್ಗೆಯವರು ಹೇಳುವುದು: ಎಸ್‌ಸಿಪಿಯಿಂದ ನಾವೇನು ಪೂಲ್ ಮಾಡುತ್ತೇವೆ ಅದರಲ್ಲಿ, ಒಂದು ರೂಪಾಯಿ ಕೂಡ ಲ್ಯಾಪ್ಸ್ ಆಗುವುದಿಲ್ಲ. ಅದನ್ನು ಪಿಡಿ ಅಕೌಂಟ್‌ನಲ್ಲಿಟ್ಟು ಆ ವರ್ಷ ಖರ್ಚಾಗದಿದ್ದರೆ ಮುಂದಿನ ವರ್ಷ ಖರ್ಚು ಮಾಡುತ್ತೇವೆ. ಆದರೆ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಮತ್ತು ಇಲಾಖೆ ಮಾಡುವುದರಲ್ಲೂ ಲ್ಯಾಪ್ಸ್ ಆಗುವುದಿಲ್ಲ. ಆ ಕಾರ್ಯಕ್ರಮಗಳಲ್ಲಿ ಸ್ವಲ್ಪಮಟ್ಟಿಗೆ ಸ್ವಲ್ಪ ಪ್ಲಾನ್ ಕಟ್ ಆದಾಗ ಅಲ್ಲಿ ಕಡಿಮೆಯಾಗುತ್ತದೆ. ಇನ್ನು ಕೆಲವು ಸಲ ಫಿಗರ್ಸ್ ನಮಗೆ ಬಂದಿರುವುದಿಲ್ಲ. ಜಿಲ್ಲಾಮಟ್ಟದಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ಆಗಿರುವ ಫಿಗರ್ಸ್ ನಮಗೆ ಬಂದಿರುವುದಿಲ್ಲ. ಹೀಗಾಗಿ ಲ್ಯಾಪ್ಸ್ ಆಗಿಹೋಗುತ್ತದೆ ಎಂಬ ಮಾತು ಸಂಪೂರ್ಣ ಸತ್ಯವಲ್ಲ, ಸ್ವಲ್ಪಮಟ್ಟಿಗೆ ನಿಜ ಇದೆ, ಆ ಹಣ ಆ ವರ್ಷದ ಜನರಿಗೆ ಸಂಪೂರ್ಣ ಖರ್ಚಾಗಬೇಕು ಎಂಬ ಬಗ್ಗೆ ನನ್ನದೂ ಅಭಿಮತ ಇದೆ. ಅದಕ್ಕೋಸ್ಕರವೇ ಅದನ್ನು ಮಾನಿಟರ್ ಮಾಡಲಿಕ್ಕೆ ಒಂದು ಕಮಿಟಿ ಪ್ರತಿ ಮೂರು ತಿಂಗಳಿಗೊಮ್ಮೆ ಅರ್ಥ ಸಚಿವರ ಅಧ್ಯಕ್ಷತೆಯಲ್ಲಿ, ಅಥವಾ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಮಾಡಬೇಕಾಗುತ್ತದೆ. ಆದರೆ ಬಹಳ ಲ್ಯಾಪ್ಸ್ ಆಗಿಬಿಡ್ತು, ಕೊಡತಕ್ಕ ಹಣವೆಲ್ಲ ಖರ್ಚಾಗುವುದಿಲ್ಲ ಎಂಬುವುದರಲ್ಲಿ ಸತ್ಯವಿಲ್ಲ ಎಂದು ಹೇಳಬಯಸುತ್ತೇನೆ. ಮತ್ತು ಇನ್ನೊಂದು ಗ್ರಾಮೀಣಾಭಿವೃದ್ಧಿಗೆ ಮತ್ತು ಕೃಷಿಗೆ ಬಹಳ ಕಡಿಮೆಯಾಗಿಬಿಟ್ಟಿದೆ, ಹಣ ಮೊದಲಿನಷ್ಟು ಈಗ ಇಲ್ಲ ಅನ್ನುವುದು. ಕೆಲವೆಲ್ಲ ಶಿಫ್ಟ್ ಆಗುತ್ತವೆ. ಮೊದಲು ಕೃಷಿಯಲ್ಲಿ ಗೊಬ್ಬರಕ್ಕೆ ಸಬ್ಸಿಡಿ ಕೊಡುವುದು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಬಂದು ಹೀಗೆ ಹೋಗುತ್ತಿತ್ತು. ಆ 40 ಕೋಟಿ ರೂಪಾಯಿಗಳು ಆ ಸಬ್ಸಿಡಿ ಈಗ ಬರುವುದಿಲ್ಲ. ಹಾಗಾಗಿ ಸೆಕ್ಟರ್ ಅಲೊಕೇಶನ್‌ನಲ್ಲಿ ಕಡಿಮೆಯಾದ ಹಾಗೆ ಕಾಣುತ್ತದೆ. ಹಾಗಂತ ಕೃಷಿಗೆ ಕಡಿಮೆಯಾಗಿಬಿಟ್ಟಿದೆ, ಗ್ರಾಮೀಣಾಭಿವೃದ್ಧಿಗೆ ಕಡಿಮೆಯಾಗಿಬಿಟ್ಟಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ಗ್ರಾಮೀಣಾಭಿವೃದ್ಧಿಗೆ ನಾವು ಹೌಸಿಂಗ್ ಇರಿಗೇಶನ್ ಪವರ್ ಇವೆಲ್ಲ ಲೆಕ್ಕಹಾಕಿದರೆ ಮೊದಲಿಗಿಂತ ಹೆಚ್ಚು ಹಣ ಅಲೋಕೇಟ್

1.30 ಪಿ.ಎಂ.

ಮಾಡಿದ್ದೇವೆ. ಹಿಂದೆ ಖರ್ಚು ಮಾಡಿರುವುದಕ್ಕಿಂತ ಹೆಚ್ಚು ಹಣ ನಾವು ಇವತ್ತು ಖರ್ಚು ಮಾಡಿದ್ದೇವೆ. ಇರಿಗೇಷನ್, ಪವರ್, ಮತ್ತೆ ಹೌಸಿಂಗ್, ಡ್ರಿಂಕಿಂಗ್ ವಾಟರ್, ರೋಡ್ಸ್, ಇವುಗಳಿಗೆಲ್ಲಾ ಹಳ್ಳಿಗಾಡಿನಲ್ಲಿ ಖರ್ಚು ಮಾಡಿರತಕ್ಕದ್ದು ಲೆಕ್ಕ ಹಾಕಿಕೊಂಡರೆ ಬೇಕಾದಷ್ಟು ಖರ್ಚು ಮಾಡಿದ್ದೇವೆ, ಲೆಕ್ಕ ಹಾಕಿದರೆ ಹಿಂದೆಗಿಂತ ಹೆಚ್ಚು ಹಣವನ್ನು ನಾವು ಈ ಕ್ಷೇತ್ರದಲ್ಲಿ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಮಾಜಿ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಫ್ಲಡ್ ರಿಲೀಫ್‌ನಲ್ಲಿ ನೀವು ರೈತರಿಗೆ ಏನೂ ಸಹಾಯವನ್ನು ಮಾಡಲಿಲ್ಲ ಎನ್ನತಕ್ಕ ಮಾತನ್ನು ಕೂಡ ಹೇಳಿದ್ದಾರೆ. ತಮಗೆ ಗೊತ್ತಿರುವ ರೀತಿಯಲ್ಲಿ 46 ಕೋಟಿ 41 ಲಕ್ಷ ರೂಪಾಯಿಗಳು ಇದ್ದುದು. ಉತ್ತರ ಕರ್ನಾಟಕದಲ್ಲಿ ಆದಂತಹ ಪ್ರವಾಹ, ಅತಿವೃಷ್ಟಿಯಿಂದ ಬಹಳಷ್ಟು ಜಾನುವಾರುಗಳು, ಆಸ್ತಿಪಾಸ್ತಿಗಳು ನಷ್ಟ ಆಗಿರತಕ್ಕದ್ದು ನಿಜ. ಅದಕ್ಕೋಸ್ಕರವಾಗಿ ಸುಮಾರು 119 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇನ್ನೂ 8 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ, ನಾವು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಕೇಂದ್ರ ಸರ್ಕಾರದಿಂದ ನಮಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಅದರಲ್ಲಿ 35 ಕೋಟಿ ರೂಪಾಯಿಗಳ ಸಾಲ. 100 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಪ್ರಧಾನಮಂತ್ರಿಗಳು ಆ ಭಾಗದಲ್ಲಿ ಅಂದರೆ ಪ್ರವಾಹ ಪೀಡಿತ ಪ್ರದೇಶಗಳನ್ನು ನೋಡಿದ ಮೇಲೆ 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು. ಅವರು 50 ಕೋಟಿ ರೂಪಾಯಿಗಳನ್ನು ಕೊಟ್ಟರು. ನಾವು ಗ್ರಾಂಟ್ಸ್ ಎಂದು ತಿಳಿದುಕೊಂಡೆವು. ಅದು ಗ್ರಾಂಟ್ಸ್ ಆಗಲಿಲ್ಲ. 35 ಕೋಟಿ ರೂಪಾಯಿಗಳು ಸಾಲ, 15 ಕೋಟಿ ರೂಪಾಯಿಗಳು ಗ್ರಾಂಟ್ಸ್. ಈ 35 ಕೋಟಿ ರೂಪಾಯಿ ನಮಗೆ ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್ ಎಂದು ಕೊಟ್ಟಿರುತ್ತಾರೆ. ಅದನ್ನು ಮೂರು ವರ್ಷಗಳಲ್ಲಿ ಮುರಿದುಕೊಳ್ಳುತ್ತಾರೆ. ಅದಕ್ಕೆ ನಾವು ಬಡ್ಡಿಯನ್ನೂ ಕೊಡಬೇಕು. ಬಡ್ಡಿ ಸಮೇತ ಅವರು ಮಾಪ್ ಹಿಡಿದುಕೊಳ್ಳತಕ್ಕ ಕೆಲಸವನ್ನು ಮಾಡುತ್ತಾರೆ. ಇದು ಇರತಕ್ಕ ರಾಜ್ಯದ ಸ್ಥಿತಿ. ನಮಗೆ ಇರತಕ್ಕ ಇತಿಮಿತಿ ಒಳಗೆ ಅವರಿಗೆ ಪರಿಹಾರವನ್ನು ಕೊಡತಕ್ಕ ಪ್ರಯತ್ನವನ್ನು ಮಾಡಿದ್ದೇವೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈಗ ಟ್ಯಾಕ್ಸೇಷನ್ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಿಯರ್ ಮೇಲಿನ ಟ್ಯಾಕ್ಸ್ ಕಡಿಮೆ ಮಾಡಿದಿರಿ, ಏಕೆ ಕಡಿಮೆ ಮಾಡಿದಿರೋ ಗೊತ್ತಿಲ್ಲ ಎಂದು ಹೇಳಿದರು. ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ಬಿಯರ್‌ದು 1995-96ರಲ್ಲಿ ಇದ್ದಂತಹ ರೇಟಿಗೆ ನಾವು ಹೋಗಿದ್ದೇವೆ. 45 ಮತ್ತು 5 ಪರ್ಸೆಂಟ್ 55 ಇತ್ತು. 10 ಪರ್ಸೆಂಟ್ ಇದ್ದುದನ್ನು 5 ಪರ್ಸೆಂಟ್ ಮತ್ತು 45 ಪರ್ಸೆಂಟ್ ಮಾಡಿದ್ದೇವೆ. ಕಾರಣ ಏಕೆಂದರೆ ಕನ್‌ಸಂಪಷನ್ ಬಹಳ ಕಡಿಮೆ ಆಗಿ ಹೋಗಿತ್ತು. ಅದನ್ನು ಸರಿ ಮಾಡಲಿಕ್ಕೆ ಮತ್ತು ಹಾರ್ಡ್ ಲಿಕ್ಕರ್‌ಗೆ ಹೋಗುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ಕಡಿಮೆ ಮಾಡುವುದರಿಂದ ಮತ್ತೆ ಇದರ ಕನ್‌ಸಂಪಷನ್ ಹೆಚ್ಚಾಗಬಹುದು. ಹಾರ್ಡ್ ಲಿಕ್ಕರ್‌ಗೆ ಹೋಗುವವರ ಸಂಖ್ಯೆ ಕಡಿಮೆ ಆಗಬಹುದು ಎನ್ನುವ ಆ ಉದ್ದೇಶಕ್ಕಾಗಿ ಮಾಡಿರುವುದೇ ಹೊರತು ಇದರಲ್ಲಿ ಯಾರಿಗೋ ಸಹಾಯ ಮಾಡಲಿಕ್ಕೋಸ್ಕರ ಅಥವಾ ಯಾರೋ ಯುವಕರಿಗೆ ತೊಂದರೆ ಕೊಡಬೇಕು ಎನ್ನತಕ್ಕದ್ದು ಆಗಲೀ ಆ ಉದ್ದೇಶದಿಂದ ಅಲ್ಲ ಎನ್ನತಕ್ಕ ಮಾತನ್ನು ನಾನು ಬಹಳ ಸ್ಪಷ್ಟವಾಗಿ ತಿಳಿಸಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಖರ್ಗೆಯವರು ಒಂದು ವಿಚಾರ ಹೇಳಿದರು. ಒಂದು ಪರ್ಸೆಂಟ್ ಇದ್ದಂತಹ ಬಿಲಿಯನೇರ್‌ಗೆ 0.5 ಪರ್ಸೆಂಟ್ ಮಾಡಿದ್ದೀರಿ ಎಂದು ಹೇಳಿದರು. ಇದನ್ನು 1997ರ ಡಿಸೆಂಬರ್‌ನಲ್ಲಿ ಮಾಡಿರುವಂತಹದು, ಈಗೇನೂ ಮಾಡಿಲ್ಲ. ಆದರೆ

ಈಗ ಇನ್ನೂ ಹೆಚ್ಚು ಮಾಡಿದ್ದೇವೆ. ಏಕೆಂದರೆ ಸೋರಿ ಹೋಗುವುದನ್ನು ತಪ್ಪಿಸಬೇಕು ಎಂದು ಹೇಳಿ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಿದ್ದೇವೆ. ಈಗ ನಾವು ಒಂದು ಪರ್ಸೆಂಟ್ ನಿಂದ 0.5 ಪರ್ಸೆಂಟ್‌ಗೆ 1997ನೇ ಡಿಸೆಂಬರ್‌ನಲ್ಲಿ ಮಾಡಿದ ಮೇಲೆ ತಮಿಳುನಾಡಿನವರು ಅವರು ಹೊಸದಾಗಿ ಬಜೆಟ್ ಮಂಡಿಸಿದ ಮೇಲೆ, ಆಂಧ್ರದವರು ಹಾಗೂ ಇತರ ರಾಜ್ಯದವರು ಕಡಿಮೆ ಮಾಡಲು ಹೊರಟಿದ್ದಾರೆ. ಅವರ ಹತ್ತಿರ ಎರಡು ಪರ್ಸೆಂಟ್ ಇತ್ತು. ಅದನ್ನು ತೆಗೆದು ಹಾಕಿದ್ದಾರೆ. ಹಾಗೆಯೇ ಬೇರೆ ಟ್ಯಾಕ್ಸ್‌ಗಳನ್ನು ಕೂಡ ತೆಗೆದು ಹಾಕಿದ್ದಾರೆ. ಏಕೆಂದರೆ ನಾವು 0.5 ಪರ್ಸೆಂಟ್ ಆದ ಮೇಲೆ ಬುಲಿಯನ್ ವ್ಯಾಪಾರ ಕರ್ನಾಟಕದಲ್ಲಿ ಸ್ವಲ್ಪ ಹೆಚ್ಚಾಗುವುದಕ್ಕೆ ಶುರು ಆಯಿತು. ಹೆಚ್ಚು ತೆರಿಗೆ ಬರುವುದಕ್ಕೂ ಕೂಡ ಶುರುವಾಯಿತು. ಹಾಗಾಗಿ ತಮಿಳುನಾಡಿನವರು ಈಗ ನಮ್ಮ ರೇಟಿಗೆ ಬಂದುಬಿಟ್ಟಿದ್ದಾರೆ. 0.5 ಪರ್ಸೆಂಟ್ ಬಂದುಬಿಟ್ಟಿದ್ದಾರೆ. ನಾವು ಏಕೆ ಜ್ಯುಯಲರಿ ಇಲ್ಲೆಲ್ಲಾ ಸೋರಿ ಹೋಗುತ್ತಿದೆ ಎನ್ನುವ ಕಾರಣಕ್ಕಾಗಿ ಸ್ವಲ್ಪ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಿದ್ದೇವೆ. ಆದ್ದರಿಂದ ನಾವು ಚಿನ್ನದ ಟ್ಯಾಕ್ಸ್ ಕಡಿಮೆ ಮಾಡಿ ಚಿನ್ನ ಹಾಕಿಕೊಳ್ಳುವವರಿಗೆಲ್ಲಾ ಸಹಾಯ ಮಾಡಿ ಬಿಟ್ಟಿದ್ದೇವೆ ಅಥವಾ ಚಿನ್ನ ವ್ಯಾಪಾರ ಮಾಡುವವರಿಗೆ ಸಹಾಯ ಮಾಡಿದ್ದೇವೆಂದು ಹೇಳುವುದರಲ್ಲಿ ಅರ್ಥ ಇಲ್ಲ. ಇನ್ನೊಂದು ವಿಚಾರ ಏನು ಮಾತನಾಡುತ್ತಿದ್ದಾರೆ ಎಂದರೆ ಬ್ಲಾಕೆಂಟ್ಸ್ ಶಾಲ್ಸ್ ಇವಕ್ಕೆಲ್ಲಾ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಮಾಡಿದ್ದೇವೆಂದು ಹೇಳಿದರು. ಏಕೆ ಅಂದರೆ ಮಾನ್ಯ ಮೊಯಿಲಿಯವರಿಗೆ ಗೊತ್ತಿರುವ ಹಾಗೆ ಅಡಿಷನಲ್ ಎಕ್ಸೈಜ್ ಡ್ಯೂಟಿಯು ಕೇಂದ್ರ ಸರ್ಕಾರದಲ್ಲಿ ಬರುತ್ತದೆ ಎಂದು ಹೇಳಿ ಇಲ್ಲಿ ಟ್ಯಾಕ್ಸೇ ಹಾಕಬೇಡಿ ಎಂದು ಇಲ್ಲಿಂದ ಕೋರ್ಟ್‌ಗೆಲ್ಲಾ ವಿಷಯ ಹೋಗಿದೆ. ನಮಗೆ ಅದರಿಂದ ಕರ ಬರಬೇಕಾಗಿದೆ. ಟು ಸೇವ್ ಮಾಡುವುದಕ್ಕೋಸ್ಕರವಾಗಿ ಹಿಂದಿನದೆಲ್ಲಾ ಮಾಫಿ ಮಾಡಿ ಇನ್ನು ಮೇಲೆ ಮುಂದಕ್ಕೆ 1.4.99 ರಿಂದ ಎರಡು ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಿದ್ದೇವೆ. ಆ ಕಾರಣಕ್ಕೋಸ್ಕರ ಕರ ಹಾಕಿರುವುದೇ ಹೊರತು ಶಾಲು ಹೊದ್ದುಕೊಳ್ಳುವವರಿಗೆ, ಕಂಬಳಿ ಹೊದ್ದುಕೊಳ್ಳುವವರಿಗೆ ಕರ ಹಾಕಿದ್ದೇವೆ ಎಂದಲ್ಲ. ಕೊಟ್ಟಿರುವವರಿಗೆಲ್ಲಾ, ಎಲ್ಲಿ ಕೊಡುವುದಕ್ಕೆ ಆಗುತ್ತದೆ.? ಯಾರು ಕೊಟ್ಟಿಲ್ಲ ಅವರಿಗೆ ಕರ. ಅದನ್ನು ಮಾಡತಕ್ಕ ಕೆಲಸ ಮಾಡಿದ್ದೇವೆಯೇ ಹೊರತು ಬೇರೆ ಯಾವುದೇ ಉದ್ದೇಶದಿಂದ ಕಂಬಳಿ ಮಾಡುವವರಿಗೆ, ಶಾಲು ಮಾಡುವವರಿಗೆ ಸಹಾಯ ಮಾಡಬೇಕು ಎನ್ನತಕ್ಕದ್ದು ಅಲ್ಲ. ಮತ್ತು ಈ ವರ್ಷ ಯಾವುದೇ ಹೊಸ ತೆರಿಗೆ ಹಾಕತಕ್ಕದ್ದು ಆಗಲೀ ಅಥವಾ ಯಾವುದೇ ಪ್ರಯತ್ನವನ್ನೂ ಕೂಡ ನಾವು ಮಾಡಿಲ್ಲ. ರ್ಯಾಷನಲೈಸ್ ಮಾಡಿದ್ದೇವೆ, ಸಿಂಪ್ಲಿಫೈ ಮಾಡಿದ್ದೇವೆ. ಬಹುಶ: ಕರ್ನಾಟಕ ಮೊದಲನೇ ರಾಜ್ಯ. ಇನ್ನೊಂದು ಸರಳೀಕರಣ ಮಾಡಿರತಕ್ಕದ್ದು, ರ್ಯಾಷನಲೈಸ್ ಮಾಡಿರತಕ್ಕದ್ದು ಎನ್ನತಕ್ಕ ಮಾತನ್ನೂ ಕೂಡ ಹೇಳಿದ್ದೇವೆ. ಏಕೆಂದರೆ ಇನ್ನೂಂದು ಮಾದ ಇದೆ. ಪಕ್ಕದ ರಾಜ್ಯಗಳಿಗೆ ಸಮಾನವಾದ ತೆರಿಗೆ ದರ ಇರಬೇಕು ಎಂದು ಹೇಳಿ, ಆಮೇಲೆ ಕಡಿಮೆ ತೆರಿಗೆ ಇದ್ದರೆ ಹೆಚ್ಚು ತೆರಿಗೆ ಬರುತ್ತದೆ ಎಂದು ಹೇಳುವುದು ಸಾಮಾನ್ಯವಾದ ಮತ್ತು ಸಾರ್ವಜನಿಕವಾದಂತಹ ಅಭಿಪ್ರಾಯ. ಅದಕ್ಕೋಸ್ಕರವಾಗಿ ನಾವು ಸುಮಾರು 21

ತೆರಿಗೆ ರೇಟ್ ಇದ್ದುದನ್ನು ಕಡಿಮೆ ಮಾಡಿದ್ದೇವೆ. 1994-95ರಲ್ಲಿ 21 ತೆರಿಗೆ ರೇಟ್ ಇತ್ತು, ಇವತ್ತು ಅದನ್ನು ನಾವು ಮೂರು ತೆರಿಗೆ ರೇಟ್‌ಗೆ ತೆಗೆದುಕೊಂಡು ಬಂದಿದ್ದೇವೆ. ಎರಡು ನಾಲ್ಕು, ಹತ್ತು ಈ ರೀತಿ ಮಾಡಿದ್ದೇವೆ. ಕೆಲವು ವಸ್ತು ಪೆಟ್ರೋಲ್, ಡೀಸಲ್, ಗುಟ್ಕಾ, ಸಿಮೆಂಟ್ ಬಿಟ್ಟರೆ 99% of the commodities are coming under these three ways. ಏಕೆಂದರೆ ಇವತ್ತು ಇಡೀ ದೇಶದಲ್ಲಿ ಚರ್ಚೆ ಆಗುತ್ತಿದೆ. ನಾವು ವ್ಯಾಲ್ಯೂ ಆಡೆಡ್ ಟ್ಯಾಕ್ಸ್ ರಿಜಿಮ್‌ಗೆ ಹೋಗಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಟ್ಯಾಕ್ಸ್‌ನಲ್ಲಿ ರ್ಯಾಷನಲೈಸ್ ಇರಬೇಕು ಸರಳೀಕರಣ ಇರಬೇಕು ಮತ್ತೆ ಆ ಮೂಲಕ ಹೆಚ್ಚು ತೆರಿಗೆ ಬರುತ್ತದೆಂದು ನಾವು ಅಪೇಕ್ಷೆ ಇಟ್ಟುಕೊಂಡಿದ್ದೇವೆ. ಆದ್ದರಿಂದ ಇವತ್ತು ಕೆಲವು ಕಡೆ ತೆರಿಗೆ ವಿನಾಯಿತಿಗಳನ್ನು ಕೊಟ್ಟರತಕ್ಕದ್ದು ಸರಳೀಕರಣ ಮಾಡಿರತಕ್ಕದ್ದು, ತೆರಿಗೆ ಆದಾಯ ಹೆಚ್ಚು ಬರುತ್ತದೆ, ಕಾಂಪ್ಲಿಯೆನ್ಸ್ ಜಾಸ್ತಿ ಆಗುತ್ತದೆ ಎನ್ನುವ ಕಾರಣಕ್ಕೋಸ್ಕರವಾಗಿ ಈ ತರಹದ ಕೆಲವು ಸುಧಾರಣೆಗಳನ್ನು ತೆರಿಗೆ ಪದ್ಧತ್ತಿಯನ್ನು ಇವತ್ತು ನಾವು ಮಾಡಿದ್ದೇವೆ. ಹಾಗಾಗಿ ಮುಂದಿನ ವರ್ಷಗಳಲ್ಲಿ ತೆರಿಗೆ ಹೆಚ್ಚು ಬರುತ್ತದೆ. ಇನ್ನು ಹೋಟೆಲ್‌ಗೆ ಏಕೆ ಹೆಚ್ಚು ಮಾಡಿದ್ದೀರಿ ಎಂಬ ಪ್ರಶ್ನೆ ಬಂತು. ಅದು ಬಹಳ ವರ್ಷಗಳಿಂದ ಹಳೆಯ ಕರ ಇತ್ತು. ಹೋಟೆಲ್‌ನಲ್ಲಿ ಕಾಂಪೋಸಿಟ್ ಟ್ಯಾಕ್ಸ್ 4 ಪರ್ಸೆಂಟ್ ನಮ್ಮಲ್ಲಿತ್ತು. ಬೇರೆ ರಾಜ್ಯಗಳೆಲ್ಲಾ ಬಹಳ ಕಡಿಮೆ ಇದೆ. ಆದರಿಂದ ನೀವು ಇದನ್ನು ಕಡಿಮೆ ಮಾಡಬೇಕು ಎಂದು ಸುಮಾರು 4-5 ವರ್ಷಗಳಿಂದ ಅದರ ಒತ್ತಾಯ ಮಾಡುತ್ತಲೇ ಇದ್ದರು. ಹಾಗಾಗಿ 4 ಪರ್ಸೆಂಟ್‌ನಿಂದ ಎರಡು ಪರ್ಸೆಂಟ್ ಕಡಿಮೆ ಮಾಡಿರತಕ್ಕದ್ದು. ಆದರಿಂದ ಒಂದು ಮಾತು ಹೇಳಿದ್ದಾರೆ. ನೀವು ಕರ ಕಡಿಮೆ ಮಾಡಿದರೆ ಅದು ಗ್ರಾಹಕರಿಗೆ ಪಾಸ್ ಆನ್ ಆಗುವುದಿಲ್ಲ- ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾವು ಅದರ ಬಗ್ಗೆ ಕೂಡ ಮಾತನಾಡಬೇಕು. ಹೋಟೆಲ್ ಸಂಘದವರನ್ನು ಕರೆದು ಮಾತನಾಡಿ ಗ್ರಾಹಕರಿಗೆ ಅನುಕೂಲ ಆಗುವ ರೀತಿಯಲ್ಲಿ ಮಾಡತಕ್ಕದ್ದು. ಇದು ಲಕ್ಸುರಿ ಹೋಟೆಲ್‌ಗಾಗಿ ಅಲ್ಲ ಇದನ್ನು ಮಾಡಿರತಕ್ಕದ್ದು. ಸಾಮಾನ್ಯ ಹೋಟೆಲ್‌ಗಳಲ್ಲಿ ಮಾಡತಕ್ಕದ್ದು. ಬೇರೆ ರಾಜ್ಯಗಳಲ್ಲಿರತಕ್ಕ ರೇಟ್‌ಗಳನ್ನು ತರಿಸಿಕೊಂಡು ಆ ಧಾರಣೆಯನ್ನು ಗಮನದಲ್ಲಿಟ್ಟುಕೊಂಡು ಕರ ಹಾಕಬೇಕಾಗುತ್ತದೆ. ಇಷ್ಟಾದರೂ ಕೂಡ ಕರ ಹೆಚ್ಚು ಇದೆ. ತಮಿಳುನಾಡಿಗೆ ಕಂಪೇರ್ ಮಾಡಿದರೆ ಕರ ಹೆಚ್ಚು ಇದೆ ಎನ್ನುವುದು ಕೂಡ ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ತೆರಿಗೆಯಲ್ಲಿ ನಾವು ಇವತ್ತು ಸುಧಾರಣೆ ಮಾಡಿ ಕಳೆದ ನಾಲ್ಕು ವರ್ಷಗಳಿಂದ ಸತತವಾದ ಸುಧಾರಣೆ ಮಾಡಿದ್ದೇವೆ. ಅದರ ಸರಳೀಕರಣ ಮಾಡಿರತಕ್ಕದ್ದು. ಅನೇಕ ರೇಟ್‌ಗಳಿಗೆ ಅದನ್ನು ಕಡಿಮೆ ಮಾಡಿರತಕ್ಕದ್ದು. ಮತ್ತೆ ಸರ್‌ಛಾರ್ಜ್ ಎಲ್ಲಾ ಇತ್ತು, ಅವೆಲ್ಲಾ ತೆಗೆದು ಹಾಕಿದ್ದರಿಂದ ನಮಗೆ 200 ಕೋಟಿ ರೂಪಾಯಿಗಳು ಹೋಯಿತು. ಹೋದ ಸಾರಿ ಪೆಟ್ರೋಲ್ ಪ್ರೊಡಕ್ಟ್ಸ್ ಮೇಲೆ ನಾವು ಕಡಿಮೆ ಮಾಡಿದ್ದರಿಂದ, 200 ಕೋಟಿ ರೂಪಾಯಿಗಳು ಹೋಯಿತು. ಅದನ್ನು ನಾನು ಹೇಳಲೇ ಇಲ್ಲ, ಆದರಿಂದ 200 ಕೋಟಿ ರೂಪಾಯಿಗಳು ಕಡಿಮೆ ಆಯಿತು. ಇವೆಲ್ಲಾ ಕಾರಣಗಳಿಂದ ರೆವಿನ್ಯೂ ಡೆಫಿಸಿಟ್ ಆಯಿತು. ತೆರಿಗೆ ಇವತ್ತು

ಕರ್ನಾಟಕ ರಾಜ್ಯ ಹಾಗೂ ಪಕ್ಕದ ರಾಜ್ಯಕ್ಕೆ ಹೋಲಿಕೆ ಮಾಡಿ ನೋಡಬೇಕು. ಇದು ರಾಷ್ಟ್ರ ಮಟ್ಟದಲ್ಲಿ ಕೂಡ ಚರ್ಚೆ ಆಗಿದೆ Floor rates ಆಗಬೇಕು ಎನ್ನುತ್ತಿದ್ದು. ಇನ್ನೊಂದು ಮಾತನ್ನು ಮಾನ್ಯ ಖರ್ಗೆಯವರು ಬಹಳ ಗಂಭೀರವಾಗಿ ಹೇಳಿದ್ದಾರೆ. ನೀವು ಇಂಡಸ್ಟ್ರೀಗಳಿಗೆಲ್ಲಾ ಈಗ ತೆರಿಗೆ ಹಾಲಿಡೇಸ್, ಡೆಫರ್‌ಮೆಂಟ್ ಎಲ್ಲಾ ಮಾಡುತ್ತಿದ್ದೀರಿ. ಆದರಿಂದ ರಾಜ್ಯಕ್ಕೆ ಬರತಕ್ಕ ಆದಾಯ ಕಡಿಮೆ ಆಗುತ್ತಿದೆ, ಬಯಾಫ್ಲೋ ಕಡಿಮೆ ಆಗಿ ಹೋಗಿ ಬಿಡುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಇವತ್ತು ಒಂದು ತರಹ unhealthy competition is going on in the country. ನಾವು ಹೊಸ ಕೈಗಾರಿಕೆ ನೀತಿಯ ಪ್ರಕಾರ 100 ಕೋಟಿ ರೂಪಾಯಿಗಿಂತ ಯಾರು ಹೆಚ್ಚು ಬಂಡವಾಳವನ್ನು ಹೊಸ ಕಾರ್ಖಾನೆಗಳಿಗೆ ಹೂಡುತ್ತಾರೆ, ಅಥವಾ ಎಕ್ಸ್‌ಪ್ಯಾನ್‌ಷನ್ ಯಾವಾಗ ಮಾಡುತ್ತಾರೆ? ಇವುಗಳಿಗೆ ತೆರಿಗೆ ಹಾಲಿಡೇ ಕೊಡುವ ಕೆಲಸ ಮಾಡುತ್ತಿದ್ದೇವೆ. ಅದನ್ನು ಮಾಡುವಾಗ, ಕೆಲವು ಆಟೋಮೊಬೈಲ್ ಇಂಡಸ್ಟ್ರಿಗಳು ನಮ್ಮ ರಾಜ್ಯಕ್ಕೆ ಬಂದಿದೆ. ಪ್ರಥಮವಾಗಿ ವೊಲ್ವೋ, ಟಯೋಟ, ಕಿರ್ಲೋಸ್ಕರ್, ಸುಜುಕಿ ಬಂದಿವೆ. ಇವುಗಳಿಗೆ 10, 12, 14 ವರ್ಷ ಕೊಟ್ಟಿದ್ದಾರೆ. ಬೇರೆ ರಾಜ್ಯದವರು ಕೂಡ ಇದಕ್ಕಿಂತ ಹೆಚ್ಚಿಗೆ ಕೊಡಲು ಪ್ರಾರಂಭ ಮಾಡಿದ್ದಾರೆ. ತಮಿಳುನಾಡಿನಲ್ಲಿ, ನಮಗಿಂತ ಹೆಚ್ಚಿಗೆ ಕೊಡಲು ಪ್ರಾರಂಭ ಮಾಡಿದ್ದಾರೆ. ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ, ಮತ್ತು ಎಲ್ಲ ರಾಜ್ಯಗಳಲ್ಲೂ ತೆರಿಗೆ ಹಾಲಿಡೇ ಹೆಚ್ಚಿಸಿ ಮಾಡಲು ಪ್ರಾರಂಭ ಮಾಡಲಾಗಿದೆ. ತೆರಿಗೆ ಹಾಲಿಡೇಸ್ ಕೊಡುವುದಿಲ್ಲ, ಹೆಚ್ಚುಮಾಡುವುದಿಲ್ಲವೆಂದರೆ, ಅವರು ಬೇರೆ ರಾಜ್ಯಗಳಿಗೆ ಹೋಗುತ್ತಾರೆ. ಕೈಗಾರಿಕಾ ಬೆಳವಣಿಗೆಯಾಗಬೇಕು, ಇಲ್ಲಿ ಇನ್‌ವೆಸ್ಟ್‌ಮೆಂಟ್ ಆಗಬೇಕು ಎನ್ನುತ್ತಿರುವಾಗ, 5 ವರ್ಷ ಮಾತ್ರ ಕೊಡುವುದು, 10 ವರ್ಷ ಕೊಡುವುದಿಲ್ಲವೆಂದರೆ, ಅವರು ಬೇರೆ ರಾಜ್ಯಕ್ಕೆ ಹೋಗುತ್ತಾರೆ. ಆ ತರಹದ ಪ್ರವೃತ್ತಿ ಇವತ್ತು ಬೆಳೆಯಲು ಪ್ರಾರಂಭವಾಗಿದೆ. ಒಂದು ಕಡೆ ನಾವು ತೆರಿಗೆ ವಿನಾಯಿತಿ ಮಾಡುತ್ತೇವೆಂದರೆ, ಎಂಪ್ಲಾಯ್‌ಮೆಂಟ್ ಆಪರ್ಚುನಿಟೀಸ್ ಆಗುತ್ತದೆ. ಇನ್‌ಡೈರೆಕ್ಟಾಗಿ ಬೆನಿಫಿಟ್ಸ್ ಬಹಳ ಇರುತ್ತವೆ. ಅಪ್ಪಲರಿ ಯೂನಿಟ್ಸ್ ಹೆಚ್ಚಿಗೆ ಬರುತ್ತವೆ. ಹೀಗಾಗಿ, ರಾಜ್ಯಕ್ಕೆ ಅರ್ಥಿಕ ಬೆಳವಣಿಗೆಗೆ ಪೂರಕವಾಗಿ ಇನ್‌ಡೈರೆಕ್ಟಾಗಿ ಹೆಚ್ಚು ಲಾಭವಾಗುತ್ತದೆ. ಮೈಕೋಗೆ ಟಯೋಟಾಗೆ ಕೊಟ್ಟಿದ್ದಾರೆಂದು ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಯಾವುದಾದರೂ ಹೊಸ ಇಂಡಸ್ಟ್ರಿಗಳು ಬರುವುದಿದ್ದರೆ, ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ, ಅದನ್ನು ಹೈಪವರ್ ಕಮಿಟಿಯಲ್ಲಿಟ್ಟು ನಿರ್ಣಯವನ್ನು ತೆಗೆದುಕೊಳ್ಳುತ್ತೀರಿ. ಅದಕ್ಕೆ ಅಭ್ಯಂತರವಿಲ್ಲ. ಆದರೆ, ನಾನು ಏನು ಹೇಳಿದ್ದೆಂದರೆ, ಮೈಕೋ ಇಂಡಸ್ಟ್ರಿ ಎಕ್ಸ್‌ಪ್ಯಾನ್‌ಷನ್ ಹೆಸರಿನಲ್ಲಿ ಅವರು ಡಿಫರ್ಡ್ ಪೇಮೆಂಟ್ ಕೇಳುತ್ತಾರೆ. ರಾಜೇಶ್ವರಿ ಹಳೆಯ ಇಂಡಸ್ಟ್ರಿ ವಾಸುದತ್ತ ಎಕ್ಸ್‌ಪ್ಯಾನ್‌ಷನ್ ಹೆಸರಿನಲ್ಲಿ ಕೇಳುತ್ತಾರೆ. ಅವರೇನೂ ಮಾಡುವುದಿಲ್ಲ. 10 ವರ್ಷಗಳ ಡಿಫರ್‌ಮೆಂಟ್ ಪೇಮೆಂಟ್ ತೆಗೆದುಕೊಂಡು, ಎಕ್ಸ್‌ಪ್ಯಾನ್‌ಷನ್ ಸ್ಕೀಂ ಇಟ್ಟುಕೊಂಡು ನಿಮ್ಮಲ್ಲಿ ಸೇಲ್ಸ್ ಟ್ಯಾಕ್ಸ್ ಎಗ್ಗೊಷನ್

ತೆಗೆದುಕೊಂಡು, ಇದೇ ಹಣವನ್ನು ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆಂದು ಹೇಳುತ್ತಾರೆ. ಎಷ್ಟರಮಟ್ಟಿಗೆ ಮಾಡುತ್ತಾರೆನ್ನುವುದು ಗೊತ್ತಿಲ್ಲ. ಏಕೆಂದರೆ, ನಾವು ಸ್ಥಳದಲ್ಲೇ ಇರುತ್ತೇವೆ, ನಮಗೂ ಗೊತ್ತಿದೆ. ವಾಸುದತ್ತ, ರಾಜೇಶ್ವರಿ, ಮೈಕೋ, ಕಿರ್ಲೋಸ್ಕರ ಇರಬಹುದು, ಇವುಗಳಿಗೆ ನೀವು ಕೊಟ್ಟಿದ್ದೀರಿ, ಅದರ ಬಗ್ಗೆ ಪ್ರಸ್ತಾಪ ಮಾಡಿದೆ. ವೋಲ್ವೋ, ಬೇರೆ ಬೇರೆ ಹೊಸ ಕಂಪನಿಗಳು ಸಹಜವಾಗಿ ಕಾಂಪಿಟಿಷನ್‌ನಲ್ಲಿ ಪ್ರಥಮವಾಗಿ ಬರುವಂಥದ್ದಕ್ಕೆ ನೀವು ನಿರ್ಣಯ ತೆಗೆದುಕೊಳ್ಳುವುದು. ಸೂಕ್ತವಾದುದು. ಹಳೆಯ ಹತ್ತಾರು ಇಂಡಸ್ಟ್ರಿಗಳಿಗೆ ಮೊನ್ನೆ ಏನು ಕೊಟ್ಟಿದ್ದೀರಿ, ಅದು ಸರಿಯಲ್ಲ. ಆದರ ಬಗ್ಗೆ ನೀವು ಎಗ್ಸಾಮಿನ್ ಮಾಡಬೇಕಾಗುತ್ತದೆ. ಅವರು ಎಕ್ಸ್‌ಪ್ಯಾನ್‌ಷನ್ ಹೆಸರಿನಲ್ಲಿ ಎಕ್ಸ್‌ಪ್ಲಾಯಿಟ್ ಮಾಡುತ್ತಾರೆನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ :— ಅವರು ಹೇಳುವ ಸಲಹೆಯನ್ನು ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಮೈಕೋದವರು ಎಕ್ಸ್‌ಪ್ಯಾನ್‌ಷನ್ ಆಡಿಯಲ್ಲಿ 300 ಕೋಟಿ ರೂಪಾಯಿಗಳ ಅಡಿಷನಲ್ ಬಂಡವಾಳ ಹೂಡುತ್ತೇವೆಂದು ಹೇಳಿದ್ದಾರೆ. ಕೈಗಾರಿಕಾ ನೀತಿಯಲ್ಲಿ ಎಕ್ಸ್‌ಪ್ಯಾನ್‌ಷನ್ ವರ್ಕಿಗೆ ಟ್ಯಾಕ್ಸ್ ಎಂಗ್ಜೆಂಪ್‌ಷನ್ ಎಕ್ಸ್‌ಟೆಂಡ್ ಆಗುತ್ತದೆಂದು ನಾವೇ ಬರೆದುಕೊಂಡಿದ್ದೇವೆ. 1991, 1996ನೇ ಇಸವಿಯಲ್ಲಿ ಮಾಡಿರುವ ಕೈಗಾರಿಕಾ ನೀತಿಯಲ್ಲಿ ಸ್ಪಷ್ಟವಾಗಿದೆ. we cannot go back ಆದರೆ, ನೀವು ಹೇಳುವುದು, ಅವರು ಆ ತರಹ ಮಾಡಿದರೆ ರಿವ್ಯೂ ಮಾಡಬೇಕಾಗುತ್ತದೆ. ಅವರು ಆ ರೀತಿ ಮಾಡಿದ್ದಾರೋ ಇಲ್ಲವೋ, ಅವರು ತಿರುಗಿ ವಿನಾಯಿತಿಗೆ ಅರ್ಹರಿದ್ದಾರೋ, ಇಲ್ಲವೋ ಎಂಬುದು ನೋಡಬೇಕಾಗುತ್ತದೆ. Review is necessary ಯಾವ್ಯಾವ ಎಕ್ಸ್‌ಪ್ಯಾನ್‌ಷನ್ ವರ್ಕಿಗೆ ಕೊಟ್ಟಿದ್ದೇವೆ, ಅದನ್ನು ನೋಡುವ ಕೆಲಸ ಮಾಡುತ್ತೇವೆ. ರಾಷ್ಟ್ರಮಟ್ಟದಲ್ಲಿ ಜ್ಯೋತಿಬಸುರವರ ಅಧ್ಯಕ್ಷತೆಯಲ್ಲೊಂದು ಸಮಿತಿ ರಚನೆಯಾಗಿದ್ದು, ಮುಖ್ಯಮಂತ್ರಿಗಳೂ ಕೂಡ ಅವರಲ್ಲೊಬ್ಬರು ಸದಸ್ಯರಾಗಿದ್ದಾರೆ. ಇಡೀ ದೇಶದಲ್ಲಿ ಟ್ಯಾಕ್ಸ್ ರೇಟ್‌ನ್ನು ಫ್ಲೋರ್ ರೇಟ್ಸ್ ನಿಗಧಿ ಮಾಡುವ ಬಗ್ಗೆ ಚರ್ಚಿಸಿ, ತೀರ್ಮಾನಿಸುವುದು ಮತ್ತು ಕೈಗಾರಿಕೆಗಳಿಗೆ ಟ್ಯಾಕ್ಸ್ ಇನ್ಸೆಂಟೀವ್ ಏನು ಕೊಡುತ್ತಿದ್ದೇವೆ, ಇದರ ಬಗ್ಗೆ ಕೂಡ ತೀರ್ಮಾನ ಮಾಡುತ್ತದೆ. ಒಂದು ಅಭಿಪ್ರಾಯವೆಂದರೆ, ಟ್ಯಾಕ್ಸ್ ಇನ್ಸೆಂಟೀವ್ಸ್ ಕೊಡುವ ಬದಲು ಇನ್‌ಫ್ರಾಸ್ಟ್ರಕ್ಚರ್ ಡೆವಲಪಮೆಂಟ್ ಮಾಡಬೇಕು, ಅದನ್ನು ಒದಗಿಸಿಕೊಡುವ ಕೆಲಸವಾಗಬೇಕು, ಈ ಬಗ್ಗೆ ಚರ್ಚೆಯಾಗುತ್ತಿದೆ. ಎಲ್ಲಾ ರಾಜ್ಯಗಳೂ ಇದನ್ನು ಒಪ್ಪಿಕೊಂಡರೆ, ಟ್ಯಾಕ್ಸ್ ಇನ್ಸೆಂಟೀವ್ ಕೊಡುವುದು ಬೇಡ, ಇನ್‌ಫ್ರಾಸ್ಟ್ರಕ್ಚರ್ ಒದಗಿಸಿಕೊಡೋಣವೆನ್ನುವ ತೀರ್ಮಾನವಾದರೆ, ಆ ತರಹ ವರದಿ ಬಂದರೆ, ಅದು ನಮಗೂ ಅನುಕೂಲವಾಗುತ್ತದೆ. ಆ ದಿಕ್ಕಿನಲ್ಲಿ ಬಸುರವರ ಅಧ್ಯಕ್ಷತೆಯ ಸಮಿತಿ ಇನ್ನೂ ರಿಪೋರ್ಟ್ ಕೊಟ್ಟಿಲ್ಲ. ರಿಪೋರ್ಟ್ ಏನು ಬರುತ್ತದೆಂಬುದು ಗೊತ್ತಿಲ್ಲ. ಈ ತರಹ ಬಂದರೆ, ಎಲ್ಲ ರಾಜ್ಯಗಳಿಗೂ ಅನುಕೂಲವಾಗುತ್ತದೆ, ಕೈಗಾರಿಕಾ ಬೆಳವಣಿಗೆಯಾಗುತ್ತದೆ. ಆಗ ಕೈಗಾರಿಕೋದ್ಯಮಿಗಳು ಯಾವ ರಾಜ್ಯ ಬೇಕೋ ಅಲ್ಲಿಗೆ ಮತ್ತು ಎಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಆಗಿದೆಯೋ ಅಲ್ಲಿ ಬಂಡವಾಳ ಹೂಡುವ ಕೆಲಸ

ಮಾಡುತ್ತಾರೆ. ಆ ದಿಕ್ಕಿನಲ್ಲಿ ಇವತ್ತು ರಾಷ್ಟ್ರ ಮಟ್ಟದಲ್ಲಿ ಪ್ರಯತ್ನ ನಡೆಯುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀ ರಾಮಸ್ವಾಮಿಯವರು ಒಂದೆರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಕೆ.ಎಸ್.ಎಫ್.ಸಿಯ ಬಗ್ಗೆ ಮಾತನಾಡುತ್ತಾ, ಅಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಸಾಲ ಕೊಡುತ್ತಿರುವುದರಿಂದ ಅದನ್ನು ವಸೂಲಿ ಮಾಡುವುದಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿಯಾಗಿದೆ ಎಂದು ಹೇಳಿ ಕೆಲವು ನಿರ್ದಿಷ್ಟ ಪ್ರಕರಣಗಳನ್ನು ಪ್ರಸ್ತಾಪಿದ್ದಾರೆ. ನಿಮಗೆಲ್ಲ ಗೊತ್ತಿರುವಂತೆ, ಕೆಎಸಎಫ್‌ಸಿ ಇಡೀ ದೇಶದಲ್ಲಿ ಮೊದಲನೇ ಸ್ಥಾನದಲ್ಲಿರುವ ಸಂಸ್ಥೆ. ಸಾಲ ಕೊಡುವುದಿರಬಹುದು, ವಸೂಲಿ ಮಾಡುವುದಿರಬಹುದು ಮತ್ತು ಮಂಜೂರಾತಿ ನೀಡುವುದಿರಬಹುದು, ಇವುಗಳಲ್ಲಿ ಇಡೀ ದೇಶದಲ್ಲಿ ಎಲ್ಲ ಹಣಕಾಸು ಸಂಸ್ಥೆಗಳಿಗಿಂತ ಮುಂದಿರುವ ಒಂದು ಪ್ರತಿಷ್ಠಿತ ಹಣಕಾಸು ಸಂಸ್ಥೆ ಎನ್ನುವ ಹೆಗ್ಗಳಿಕೆಯನ್ನು ಇದು ಉಳಿಸಿಕೊಂಡು ಬಂದಿದೆ ಎನ್ನುವ ಮಾತನ್ನು ತಿಳಿಸಲು ಬಯಸುತ್ತೇನೆ. ಇವತ್ತಿನವರೆಗೆ ಸುಮಾರು ಒಂದು ಲಕ್ಷದ 40 ಸಾವಿರ ಘಟಕಗಳಿಗೆ 5 ಸಾವಿರದ 85 ಕೋಟಿ ರೂಪಾಯಿಗಳಷ್ಟು ಸಾಲ ಕೊಟ್ಟಿದೆ. ಇದರಲ್ಲಿ ಕೆಲವು ಕಡೆ ಬೋಗಸ್ ಮಾಡಿ, ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆ. ಆ ದಾಖಲಾತಿಗಳಲ್ಲಿ ಅಸೆಟ್ ಕ್ರಿಯೇಟ್ ಆಗಿರುವುದಿಲ್ಲ, ಅಧಿಕಾರಿಗಳು ಶಾಮೀಲಾಗಿದ್ದಾರೆ, ಈ ತರಹದ ಪ್ರಸ್ತಾಪಗಳನ್ನು ಅವರು ಮಾಡಿದ್ದಾರೆ. ಲ್ಯಾನ್ ಅಸೆಡಾ ಗ್ರೂಪ್ ಆಫ್ ಇಂಡಿಯಾ ಎಂಬ ಕಂಪನಿ ಹೆಸರು ಹೇಳಿದ್ದಾರೆ. ಇವರದ್ದು 5 ಕಂಪನಿಗಳಿವೆ. ಇವರು ಸುಮಾರು 750 ಲಕ್ಷ ನಾನ್ ಕನ್ವರ್ಟಿಬಲ್ ಡಿಬೆಂಚರ್‌ನ್ನು ಇಟ್ಟಿದ್ದರು. 13.5 ಕೋಟಿ ರೂಪಾಯಿಗಳಲ್ಲ. ಇದರಲ್ಲೇನಾಗಿದೆಯೆಂದರೆ, ಇವರು ಮುಂಬೈನಲ್ಲಿ ವಹಿವಾಟು ನಡೆಸುತ್ತಿದ್ದು, ಕಟ್ಟಡ ಕುಸಿದು ನಷ್ಟವಾಗಿ ವಸೂಲಿ ಮಾಡುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಯಿತು. ಆದರೂ ಸಹ, ವಸೂಲಿ ಮಾಡುವ ಕ್ರಮವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಹಾಗೆ, ಇಂಡಿಯಾನಾ ಥ್ರೀ ಸ್ಟೇಷಾಲಿಟೀಸ್ ಎನ್ನುವ ಘಟಕವಿದೆ. ಇದಕ್ಕೆ ಸುಮಾರು 113 ಲಕ್ಷ ರೂಪಾಯಿ ಕೊಟ್ಟಿದ್ದು ಎನ್‌ಗಿಡಿ ಕೂಡ 120 ಲಕ್ಷ ರೂಪಾಯಿ ಕೊಟ್ಟಿತ್ತು. ಇದೊಂದು ಪ್ರತಿಷ್ಠಿತ ಹಾಲು ಸಂಸ್ಕರಣಾ ಸಂಸ್ಥೆಯಾಗಿದ್ದು, ಪ್ರಾರಂಭದಲ್ಲಿ ಇದರ ವಹಿವಾಟು 20 ಕೋಟಿ ರೂಪಾಯಿಗಳಷ್ಟಿತ್ತು. ವರದರಾಜು ಎನ್ನುವವನ ಇಂಡಿವಿಜ್ಯುಯಲ್ ಗ್ಯಾರಂಟಿ ತೆಗೆದುಕೊಂಡು ಕೊಟ್ಟಿದ್ದರು. ಅವರು ಸತ್ತು ಹೋದ ಮೇಲೆ ವಸೂಲಿ ಮಾಡಲು ತೊಂದರೆಯಾಗಿರುವುದು ನಿಜ, ನೀವು ಹೇಳುವುದು ಸರಿ. ಇದನ್ನೆಲ್ಲಾ ಯಾರ್ಯಾರು ಕೊಟ್ಟಿದ್ದರು, ಅವರ ಮೇಲೆ ಇಂಟರ್ನಲ್ ಆಡಿಟ್ ರಿಪೋರ್ಟ್ ಬಂದ ಮೇಲೆ, 1998ರ ಜೂನ್ ಜುಲೈನಲ್ಲಿ ಆಡಿಟ್ ರಿಪೋರ್ಟ್ ಬಂದಿದೆ, ಎಲ್ಲೆಲ್ಲಿ ಆ ತರಹ ನ್ಯೂನತೆಗಳಾಗಿವೆ ಅವರ ಮೇಲೆಲ್ಲಾ ಕ್ರಮ ತೆಗೆದುಕೊಳ್ಳಲು ಈಗಾಗಲೇ ಬೋರ್ಡಿನಲ್ಲಿ ತೀರ್ಮಾನ ಮಾಡಿದ್ದೇವೆ. ಹಾಗೂ ಇನ್‌ಫರ್ಮೇಷನ್ ಟೆಕ್ನಾಲಜಿ ಇವರು 60 ಇಂದ 40 ಸ್ಟೆಪ್ ಕೊಟ್ಟಿದ್ದು, ಸ್ಟೆಪ್ ಇಲ್ಲವೆಂದು ಹೇಳಿದಿರಿ, ಅದು ನಿಜ. ಇದರ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದೇವೆ. ಅವರು ಫ್ಯಾಬ್ರಿಕೇಟೆಡ್ ಡಾಕ್ಯುಮೆಂಟ್

ಸೃಷ್ಟಿ ಮಾಡಿದ್ದಾರೆ. ಕಾರ್ಪೋರೇಷನ್, ಬಿಡಿಎನಿಂದ ಎಲ್ಲಾ ಸೀಲ್ ಇರುವ ದಾಖಲಾತಿಗಳನ್ನು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಬಂದು ಕೊಟ್ಟಿದ್ದಾನೆ. ಅದರ ಮೇಲೆ ಸಾಲವನ್ನು ಕೊಟ್ಟಿದ್ದಾರೆ. ಅದರೆ ಅದನ್ನು ಪರಿಶೀಲನೆ ಮಾಡಿದರೆ ಆ ಜಾಗವು ಇಲ್ಲ, ಅದು ಅವನ ಹೆಸರುನಲ್ಲೂ ಇಲ್ಲ, ಅಲ್ಲಿ ಯಂತ್ರೋಪಕರಣಗಳೂ ಇಲ್ಲ. ಇದರ ಬಗ್ಗೆ ಸಹ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇಲ್ಲಿ ಸಾಲವನ್ನು ಮಂಜೂರು ಮಾಡಲು ಯಾರು ಸಂಬಂಧಪಟ್ಟಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸ ಪ್ರಾರಂಭವಾಗಿದೆ. ರಾಘವೇಂದ್ರ ಗ್ಯಾಲ್ವನೈಸರ್ಸ್‌ನಲ್ಲಿ ಮಹಿಮಾಪಾಟೀಲ್ ಶ್ಯೂರಿಟಿಯನ್ನು ಕೊಟ್ಟಿದ್ದಾರೆ. ಇವರು ಕೆ.ಎಸ್.ಎಫ್.ಸಿ.ಸಲ್ಲಿ ಶೂರಿಟಿಯನ್ನು ಹಾಕಿದ್ದಾರೆ, ಇದು 1989ರಲ್ಲಿ ಆಗಿರತಕ್ಕದ್ದು. ಯಾರು ಸಾಲವನ್ನು ತೆಗೆದುಕೊಂಡಿದ್ದಾರೆ ಅವರ ಹತ್ತಿರ ವಸೂಲಿ ಮಾಡಲು ಏನೇನೂ ಇಲ್ಲ. ಇವರು ಶ್ಯೂರಿಟಿ ಕೊಟ್ಟಿದ್ದಾರೆ. ಆದ್ದರಿಂದ ಶೂರಿಟಿ ಕೊಟ್ಟಿರುವ ಮಾಹಿಮಾ ಪಾಟೀಲ್‌ರವರನ್ನು ಸಾಲ ಕೊಡಿ ಎಂದು ಹಿಡಿದುಕೊಂಡಿದ್ದಾರೆ. ಸಾಲವನ್ನು ನಾನು ತೆಗೆದುಕೊಂಡಿಲ್ಲ, ಆದ್ದರಿಂದ ಸಾಲವನ್ನು ತೀರಿಸಬೇಕಾದರೆ ಒನ್ ಟೈಮ್ ಸೆಟ್ಲಮೆಂಟ್ ಮಾಡಿಬಿಡಿ ಎಂದು ಕೇಳುತ್ತಿದ್ದಾರೆ. ಮಹಿಮಾಪಾಟೀಲ್‌ರವರು ಮಾನ್ಯ ಜೆ.ಹೆಚ್. ಪಟೇಲ್‌ರ ಮಗ ಎಂಬ ಕಾರಣಕ್ಕಾಗಿ ಅವರಿಗೆ ಒನ್ ಟೈಮ್ ಸೆಟ್ಲಮೆಂಟ್ ಸೌಲಭ್ಯವನ್ನು ಕೊಡುತ್ತಿಲ್ಲ. ಎಲ್ಲಿ ನೀಡಿರುವ ಸಾಲವನ್ನು ವಸೂಲಿ ಮಾಡುವುದಕ್ಕೆ ಆಗುವುದಿಲ್ಲವೋ ಅಲ್ಲಿ ಶೂರಿಟಿ ನೀಡಿರುವವರಿಗೆ, ಇತರರಿಗೆ ಒನ್ ಟೈಮ್ ಸೆಟ್ಲಮೆಂಟ್‌ಗೆ ಅವಕಾಶವನ್ನು ಕೊಡುತ್ತೇವೆ. ಅದೇ ರೀತಿ ಇಲ್ಲೂ ನೀಡಿದ್ದೇವೆ. ಆದ್ದರಿಂದ ಇಲ್ಲಿ ಬಹಳಾ ಮೋಸಗಳಾಗುತ್ತಿದೆ, ಅಧಿಕಾರಿಗಳು ಶಾಮೀಲಾಗಿ ಇದನ್ನು ಮಾಡುತ್ತಿದ್ದಾರೆ ಎಂಬುದು ಸರಿಯಲ್ಲ. ಇದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದೂ ಇಲ್ಲ. ಸ್ವಲ್ಪ ಮಟ್ಟಿಗೆ ಕೆಲವು ಅಧಿಕಾರಿಗಳು ಶಾಮೀಲಾಗಿರಬಹುದು. ಯಾರು ತಪ್ಪು ಮಾಡಿದ್ದಾರೆ ಅವರ ಬಗ್ಗೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಅನಂತರ ಎಲ್.ಓ.ಸಿ.ಯನ್ನು ಕೊಡುವುದರಲ್ಲಿ ಹಣವನ್ನು ತೆಗೆದುಕೊಳ್ಳುತ್ತಾರೆಂದು ಆರೋಪ ಮಾಡಿದ್ದಾರೆ. ತಾವು ಇಂಥ ಯಾವುದಾದರೊಂದು ಪ್ರಕರಣದ ಬಗ್ಗೆ ಸಾಬೀತುಮಾಡಿ ಅವರ ಹೆಸರನ್ನು ಹೇಳಿದರೆ ನಾನು ಖಂಡಿತವಾಗಿ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ಕಛೇರಿಯಲ್ಲಿ ಆ ರೀತಿ ನಡೆಯಲು ಸಾಧ್ಯವಿಲ್ಲ. ಹಣಕಾಸು ಇಲಾಖೆಯಲ್ಲಿ ಆ ರೀತಿ ನಡೆಯುತ್ತಿದ್ದರೆ ದಯಮಾಡಿ ಮಾಹಿತಿ ಕೊಡಿ. ನೀರಾವರಿ ಇಲಾಖೆಯವರು, ಪಿ.ಡಬ್ಲ್ಯೂ.ಡಿ ಇಲಾಖೆಯವರು ಇಷ್ಟು ಹಣವೆಂದು ಎಲ್.ಓ.ಸಿ.ಗೆ ಶಿಫಾರಸ್ಸಿಯನ್ನು ಕಳಿಸಿಕೊಟ್ಟಿರುತ್ತಾರೆ, ನಾವು ಪರಿಸ್ಥಿತಿಯನ್ನು ನೋಡಿಕೊಂಡು ಎಲ್.ಓ.ಸಿ. ಬಿಡುಗಡೆ ಮಾಡುತ್ತೇವೆ. ಆ ಇಲಾಖೆಯವರು ಅದನ್ನು ಹಂಚಿಕೊಳ್ಳುತ್ತಾರೆ. ನಮ್ಮ ಇಲಾಖೆಯಲ್ಲಂತೂ ಆ ರೀತಿ ನಡೆಯಲು ಸಾಧ್ಯವೇ ಇಲ್ಲ. ಆ ರೀತಿ ಏನಾದರೂ ಇದ್ದರೆ ಅದರ ಬಗ್ಗೆ ಮಾಹಿತಿ ಕೊಡಿ. ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಲು ಹಿಂದೆಮುಂದೆ ನೋಡುವುದಿಲ್ಲ. ಅನಂತರ, ಜಯದೇವ ಕಾರ್ಡಿಯಾಲಜಿ ಸಂಸ್ಥೆಯ ಮೇಲೆ ಆರೋಪ ಮಾಡಿದ್ದೀರಿ. ಇದು ಅತ್ಯಂತ ಪ್ರತಿಷ್ಠಿತವಾದ ಸಂಸ್ಥೆ. ಇದು

ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲೇ ಅತ್ಯಂತ ಪ್ರತಿಷ್ಠಿತವಾದ ಸಂಸ್ಥೆ. ಜಯದೇವ ಕಾರ್ಡಿಯಾಲಜಿಯಲ್ಲಿ ಡೆತ್ ಮಾರ್ಟಲಿಟಿ ರೇಟ್ 26 ಪರ್‌ಸೆಂಟ್ ಇದೆಯೆಂದು ಹೇಳಿದ್ದೀರಿ. ಆದರೆ ಅದು ಸರಿಯಾದ ಮಾಹಿತಿಯಲ್ಲ. 1999ರ ಮಾರ್ಚ್ ವರೆಗೆ ಅದರ ಪ್ರಮಾಣ 5.3 ಪರ್‌ಸೆಂಟ್ ಮಾತ್ರ ಇದೆಯೆಂದು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. 1998ರಲ್ಲಿ 6.8 ಪರ್‌ಸೆಂಟ್, 1997 ರಲ್ಲಿ 6.3 ಪರ್‌ಸೆಂಟ್, 1996 ರಲ್ಲಿ 2.6 ಪರ್‌ಸೆಂಟ್, 1995 ರಲ್ಲಿ 4.05 ಪರ್‌ಸೆಂಟ್ 1994 ರಲ್ಲಿ 6.28 ಪರ್‌ಸೆಂಟ್. ತಾವು ನೂರು ಜನಕ್ಕೆ 27 ಜನ ಸತ್ತು ಹೋಗುತ್ತಿದ್ದಾರೆಂದರೆ ಆ ಆಸ್ಪತ್ರೆ ಏಕೆ ಬೇಕು? ರೋಗಿಗಳೆಲ್ಲ ಬದುಕುತ್ತಾರೆಂದು ಹೇಳುವುದಕ್ಕಾಗುವುದಿಲ್ಲ, ಕೆಲವು ರೋಗಿಗಳು ಸಾಯತ್ತಾರೆ. ಸಾಮಾನ್ಯ ಜನರು, ರೋಗಿಗಳು, ಶಾಸಕರು ನಮ್ಮ ಹತ್ತಿರ ಬಂದು ಹೇಳತಕ್ಕದನ್ನು ನೋಡಿದರೆ ಅಲ್ಲಿ ಬಹಳ ಉತ್ತಮವಾಗಿ ಕೆಲಸವಾಗುತ್ತಿದೆ. ಒಳ್ಳೆಯ ಸೇವೆ ನಡೆಯುತ್ತಿದೆ. ಇದರ ಬಗ್ಗೆ ಅನೇಕ ಸಾರಿ ಚರ್ಚೆಯಾಗಿದೆ, ಉತ್ತರವನ್ನು ಕೊಡಲಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ :— ಮಾನ್ಯ ಅಧ್ಯಕ್ಷರೆ, ಅದು ಪ್ರತಿಷ್ಠಿತವಾದ ಸಂಸ್ಥೆಯೆಂಬುದು ಸರಿಯಾದುದು. ಆ ಸಂಸ್ಥೆ ನಶಿಸಿಹೋಗಬಾರದು ಎಂಬ ದೃಷ್ಟಿಯಿಂದ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಅಲ್ಲಿ ಸೆಕ್ಯೂರಿಟಿ ಏಜೆಂಟ್ಸ್‌ನ ಮೂಲಕ ವೈದ್ಯರುಗಳನ್ನು ಸ್ಟಾಫ್ ನರ್ಸ್‌ಗಳನ್ನು ನೇಮಕಾತಿ ಮಾಡಿಕೊಂಡು ಲಕ್ಷಾಂತರ ರೂಪಾಯಿಗಳ ಹಣದ ದುರುಪಯೋಗ ಮಾಡಿದ್ದಾರೆ. ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಸಿದ್ಧರಾಮಯ್ಯ :— ಇದು ಒಂದು ಅಟಾನಮಸ್ ಬಾಡಿ. ಆರೋಗ್ಯ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ, ಮುಖ್ಯಮಂತ್ರಿಯವರು ಅಧ್ಯಕ್ಷರಾಗಿರುತ್ತಾರೆ.

ಡಾ: ಹೆಚ್.ಸಿ. ಮಹದೇವಪ್ಪ :— ಅಲ್ಲಿನ ವ್ಯವಸ್ಥೆಯನ್ನು ಮೈನ್‌ಟೇನ್ ಮಾಡಲು ಡಾ: ಪ್ರಭುದೇವ್ ಎಂಬ ನಿರ್ದೇಶಕರಿದ್ದು ಅವರು ಒಬ್ಬ ಉತ್ಸಾಹಿ ಮತ್ತು ಪರಿಣತ ವೈದ್ಯರಾಗಿದ್ದಾರೆ.

ಶ್ರೀ ಸಿದ್ಧರಾಮಯ್ಯ :— ನೇಮಕಾತಿಯಲ್ಲಿ ಹಣವನ್ನು ತೆಗೆದುಕೊಂಡು ಮಾಡುತ್ತಾರೆ ಎಂಬುದೆಲ್ಲ ಸತ್ಯಕ್ಕೆ ದೂರವಾದ ಮಾತುಗಳು. ತಮಗೆ ಬಂದಿರುವ ಮಾಹಿತಿ ಆಧಾರರಹಿತವಾದದ್ದು.

ಶ್ರೀ ಎ.ಟಿ. ರಾಮಸ್ವಾಮಿ :— ನಾನು ಇದರ ಬಗ್ಗೆ ತಮಗೆ ದಾಖಲೆಗಳನ್ನು ಕೊಡುತ್ತೇನೆ. ವಿಚಾರಣೆ ಮಾಡಿ.

ಶ್ರೀ ಸಿದ್ಧರಾಮಯ್ಯ :— ಕಳಿಸಿಕೊಡಿ ವಿಚಾರಣೆ ಮಾಡೋಣ. ಆ ರೀತಿ ಸಾಯುವಂತೆ ಇದ್ದರೆ ರೋಗಿಗಳೇಕೆ ಅಲ್ಲಿಗೆ ಹೋಗುತ್ತಿದ್ದರು? 1995-96ರಲ್ಲಿ ಅಲ್ಲಿನ ಹೊರರೋಗಿಗಳ ಸಂಖ್ಯೆ 50 ಸಾವಿರ, ಒಳರೋಗಿಗಳ ಸಂಖ್ಯೆ 5,600, 1996-97ರಲ್ಲಿ

ಹೊರ ರೋಗಿಗಳ ಸಂಖ್ಯೆ 74,672, ಒಳ ರೋಗಿಗಳ ಸಂಖ್ಯೆ 8,615, 1997-98ರಲ್ಲಿ 90,800 ಹೊರರೋಗಿಗಳು, ಒಳರೋಗಿಗಳ ಸಂಖ್ಯೆ 10,500 ಒಳರೋಗಿಗಳು. 1998-99ರಲ್ಲಿ 94,887 ಹೊರರೋಗಿಗಳು, ಒಳರೋಗಿಗಳ ಸಂಖ್ಯೆ 11,000, ಅಂದರೆ ಪ್ರತಿ ವರ್ಷ ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಆ ಸಂಸ್ಥೆ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ತಮಗೆ ಯಾರಾದರೂ ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಈ ರೀತಿ ಕೊಡಬೇಡಿ ಎಂದು ದಯಮಾಡಿ ಹೇಳಿ.

ಶ್ರೀ ಎ.ಟಿ. ರಾಮಸ್ವಾಮಿ :— ನಾನು ಏನು ಹೇಳಿದ್ದೇನೋ ಅದರ ಬಗ್ಗೆ ತಾವು ಹೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ :— ತಾವು ಹೇಳಿದ್ದುದು ತಪ್ಪು. ಅದರ ಬಗ್ಗೆ ಮಾಹಿತಿ ಇದ್ದರೆ ಕೊಡಿ, ವಿಚಾರಣೆ ಮಾಡಿಸುತ್ತೇನೆ. ತಪ್ಪು ಮಾಡಿದವರನ್ನು ಶಿಕ್ಷೆಗೆ ಒಳಪಡಿಸುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ :— ಸೆಕ್ಯೂರಿಟಿ ಏಜೆಂಟ್ಸ್‌ನ ಮೂಲಕ ಅವರುಗಳು ಸ್ಟಾಫ್‌ನರ್ಸ್ ಮತ್ತು ಲೆಕ್ಚರರ್ಸ್‌ನ್ನು ನೇಮಕ ಮಾಡಿಕೊಳ್ಳದಿದ್ದರೆ ನಾನು ಈ ಸದನದಲ್ಲಿ ಒಂದು ಕ್ಷಣ ಮುಂದುವರೆಯಲು ಬಯಸುವುದಿಲ್ಲ. ನಾನು ಅದನ್ನು ಸಾಬೀತು ಮಾಡುತ್ತೇನೆ. ನಾನು ಇದರ ಬಗ್ಗೆ ಓದಿ ಹೇಳಿದ್ದೇನೆ, ಅದು ಕಡತಕ್ಕೆ ಹೋಗಿದೆ.

ಶ್ರೀ ಸಿದ್ದರಾಮಯ್ಯ :— ತಾವು ಅದರ ಬಗ್ಗೆ ಮಾಹಿತಿ ಕೊಡಿ. ವಿಚಾರಣೆ ಮಾಡಿಸುತ್ತೇನೆ. ಯಾರು ಆ ರೀತಿ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) :— ಆ ಸಂಸ್ಥೆಗೆ ಹೃದಯ ಇದ್ದವರು ಮಾತ್ರ ಹೋಗಬೇಕು.

ಶ್ರೀ ಸಿದ್ದರಾಮಯ್ಯ :— ಮಾನ್ಯ ಮುನಿಯಪ್ಪನವರು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಿರಿ, ಅದರ ಬಗ್ಗೆ ಮಾನ್ಯ ಬೈರೇಗೌಡರು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ತಾವೇನು ಆಪಾದನೆ ಮಾಡಿದ್ದೀರಿ ಅದರ ಬಗ್ಗೆ ತನಿಖೆ ಮಾಡಿ ವರದಿ ಕೊಟ್ಟು ತಪ್ಪಿತಸ್ಥರ ಮೇಲೆ ಕ್ರಮ ಕೈಗೆದುಕೊಳ್ಳಲು ತಕ್ಷಣವೇ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗೆ ರೆಫರ್ ಮಾಡಿದ್ದಾರೆ. ಇದರ ಬಗ್ಗೆ ಸಮಾಜಾಯಿಷಿಯಾಗಿ ಉತ್ತರ ಬಂದಿರುವುದರಿಂದ ಇದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ.

ಶ್ರೀ ವಿ. ಮುನಿಯಪ್ಪ :— ರಸ್ತೆಗಳು ಅಭಿವೃದ್ಧಿಗೇನು ತಾವು 1996-97ರಲ್ಲಿ ಹಣವನ್ನು ಇಟ್ಟಿದ್ದೀರಿ ಅದು 1998-99ಕ್ಕೆ 52 ಪರ್‌ಸೆಂಟ್‌ಗೆ ಇಳಿದಿದೆ. ಇದರ ಬಗ್ಗೆ ಹೇಳಬೇಕು.

ಶ್ರೀ ಸಿದ್ದರಾಮಯ್ಯ :— ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಈಗ ಒಂದು ಕಾರ್ಪೊರೇಷನ್ ಮಾಡುತ್ತಿದ್ದೇವೆ. ಅದು ಏಪ್ರಿಲ್‌ನಲ್ಲಿ ರಚನೆಯಾಗುತ್ತದೆ. ಇದಕ್ಕಾಗಿ 470 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದಿದ್ದೇವೆ.

ಶ್ರೀ ಹಾಗೋಡುತಿಮ್ಮಪ್ಪ :— ಮಲೆನಾಡು ಅಭಿವೃದ್ಧಿ ಮಂಡಳಿಗೆ ಕೊಡಬೇಕಾಗಿರುವ 29 ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಮುಖ್ಯಮಂತ್ರಿಯವರು ಹಲವಾರು ಸಲ ಭರವಸೆ ಕೊಟ್ಟಿದ್ದರು. ಆದರೆ ಇದುವರೆಗೆ ಒಂದು ಪೈಸೆ ಸಹ ಬಿಡುಗಡೆಯಾಗಿಲ್ಲ. ಈ ವರ್ಷದ 29 ಕೋಟಿ ರೂಪಾಯಿಗಳಲ್ಲಿ ಐದು ಪೈಸೆ ಹಣವನ್ನು ಕೊಟ್ಟಿಲ್ಲ.

ಶ್ರೀ ಅರಗ ಜ್ಞಾನೇಂದ್ರ :— ಕೆಲಸ ಮಾಡಿಸಿಕೊಂಡು ಬಿಲ್ ಇನ್ನು ಸೆಟ್ಲಮೆಂಟ್ ಮಾಡಲು ಆಗಿಲ್ಲ.

ಶ್ರೀ ಸಿದ್ದರಾಮಯ್ಯ :— ಇದರ ಬಗ್ಗೆ ತಾವು ಕ್ಲಾರಿಫಿಕೇಷನ್‌ನಲ್ಲಿ ಕೇಳಿ. ಮಲೆನಾಡು

2.00 ಪಿ.ಎಂ.

ಅಭಿವೃದ್ಧಿ ಮಂಡಳಿ, ಹೈದರಾಬಾದ್ ಅಭಿವೃದ್ಧಿ ಮಂಡಳಿ ಮತ್ತು ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಮೂರನೇ ಕಂತಿನ ಹಣವನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಕೊನೆಯ ಕಂತಿನ ಹಣವನ್ನು ಬಿಡುಗಡೆ ಮಾಡಬೇಕೆಂಬ ಉದ್ದೇಶ ಇದೆ. ಈ ಸಾರಿ ನಮ್ಮ ಪ್ಲಾನ್‌ನಲ್ಲಿ ಸ್ವಲ್ಪ ಕಟ್ ಮಾಡಬೇಕೆನ್ನುವ ಉದ್ದೇಶವಿರುವುದರಿಂದ ಕೊನೆಯ ಕಂತಿನ ಹಣವನ್ನು ಬಿಡುಗಡೆ ಮಾಡದೇ, ಅನಂತರ ನೋಡೋಣ ಎಂದು ಹಾಗೆಯೇ ಇಟ್ಟುಕೊಂಡಿದ್ದೇವೆ. 10 ದಿನಗಳ ಹಿಂದೆ ಮೂರನೇ ಕಂತಿನ ಹಣವಾಗಿ 29 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಮಾನ್ಯ ಈಶ್ವರಪ್ಪನವರಿಗೆ ತಿಳಿದಿಲ್ಲವೆಂದು ಕಾಣುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಹಣಕಾಸಿನ ಸಚಿವರೇ, ನೀವು 6¼ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಅದರಲ್ಲಿ 3 ಕೋಟಿ 15 ಲಕ್ಷ ರೂಪಾಯಿಗಳು ನಬಾರ್ಡ್‌ಗೇ ಹೋಯಿತು. ಇನ್ನುಳಿದ 3 ಕೋಟಿ 10 ಲಕ್ಷ ರೂಪಾಯಿಗಳು 71 ವಿಧಾನ ಸಭಾ ಕ್ಷೇತ್ರಗಳಿಗೆ ಹೇಗೆ ಸಾಕಾಗುತ್ತದೆ?

ಶ್ರೀ ಸಿದ್ದರಾಮಯ್ಯ :— ನಬಾರ್ಡ್ ನೆರವಿನಿಂದ ಅಲ್ಲಿ ರಸ್ತೆಗಳ ಅಭಿವೃದ್ಧಿ ಮಾಡುವ ಕಾರ್ಯ ನಡೆಯುತ್ತಿಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ :— ಉಳಿದಿರುವ 3 ಕೋಟಿ 10 ಲಕ್ಷ ರೂಪಾಯಿಗಳಲ್ಲಿ ನಮ್ಮ ಮಂತ್ರಿಗಳಿಗೇ ಒಂದು ಕೋಟಿ ರೂಪಾಯಿಗಳು ಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ :— ಮಲೆನಾಡು ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಎಲ್ಲವನ್ನೂ ನೀವೇ ತೀರ್ಮಾನ ಮಾಡಿಕೊಂಡಿರುತ್ತೀರಿ. ಅದರ ಬಗ್ಗೆ ನನಗ್ಯಾಕೆ ಹೇಳುತ್ತೀರಿ? ನಾವೇನು ಅಲ್ಲಿ ತೀರ್ಮಾನ ಮಾಡಲು ಬಂದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ನೀವು ಇಲ್ಲ ಎನ್ನುವುದಾದರೆ ನನಗೆ ಬಹಳ ಸಂತೋಷ. ನನಗೇನೂ ಅಭ್ಯಂತರ ಇಲ್ಲ.

ಶ್ರೀ ಸಿದ್ಧರಾಮಯ್ಯ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಮೂರನೇ ಕಂತಿನ ಹಣವನ್ನು ಬಿಡುಗಡೆ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಯ ರಸ್ತೆಗಳು ಕಿಟ್ಟುಹೋಗಿವೆ ಎಂಬುದು ನಿಜ. ನಾವು ಅಧಿಕಾರಕ್ಕೆ ಬಂದ ಮೇಲೆ ಆ ರಸ್ತೆಗಳನ್ನೇನೂ ಕೆಡಿಸಿಲ್ಲ ಅಥವಾ ಅವುಗಳಲ್ಲಿ ಹಳ್ಳ-ಗುಂಡಿಗಳನ್ನು ತೆಗೆದಿಲ್ಲ. ನಾವೇನು ಹಳ್ಳಿಯಲ್ಲಿ ತಿರುಗಾಡಿಲ್ಲವೇ?....

ಶ್ರೀ ಹಾಗೋಡು ತಿಮ್ಮಪ್ಪ :— ....ಒಂದೇ ಒಂದು ಹೊಸ ಕೆಲಸವನ್ನು ಮಾಡಲು ನಿಮಗೆ ಆಗಿಲ್ಲ.

ಶ್ರೀ ಸಿದ್ಧರಾಮಯ್ಯ :— ಮಾನ್ಯ ಹಾಗೋಡು ತಿಮ್ಮಪ್ಪನವರೇ, ನಬಾರ್ಡ್ ನೆರವಿನಿಂದ ನಿಮ್ಮಲ್ಲಿ ಎಷ್ಟು ವೆಚ್ಚದ ಕೆಲಸವಾಗಿದೆ ಎಂಬುದನ್ನು ಹೇಳಿ ನೋಡೋಣ? ಏನೂ ಕೆಲಸವೇ ಆಗಿಲ್ಲವೇ?

ಶ್ರೀ ಹಾಗೋಡು ತಿಮ್ಮಪ್ಪ :— ನಬಾರ್ಡ್ ನೆರವಿನಿಂದಾಗಿ ಕೆಲಸವನ್ನು ಹೊರತುಪಡಿಸಿ ಉಳಿದವನ್ನು ಹೇಳಿ.

ಶ್ರೀ ಸಿದ್ಧರಾಮಯ :— ನಬಾರ್ಡ್ ನೆರವಿನಿಂದಾಗಿ ಕೆಲಸಗಳನ್ನು ಏಕೆ ಬಿಟ್ಟು ಹೇಳಬೇಕು? ನಬಾರ್ಡ್ ನೆರವಿನಿಂದ ಅಭಿವೃದ್ಧಿಗೊಂಡವು ಲೋಕೋಪಯೋಗಿ ಇಲಾಖೆಯ ರಸ್ತೆಗಳೇ ಅಲ್ಲವೇ?

ಶ್ರೀ ಬಿ.ಬಿ. ಶಿವಪ್ಪ :— ನಬಾರ್ಡ್‌ನಿಂದ ಕೆಲಸದ ಬಗ್ಗೆ ನಾನು ನಿಮಗೊಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ನನ್ನ ಕ್ಷೇತ್ರದ ರಸ್ತೆಯ ಅಭಿವೃದ್ಧಿಗೆಂದು ಮಲೆನಾಡು ಅಭಿವೃದ್ಧಿ ಮಂಡಳಿಯ ಮೂಲಕ 40 ಲಕ್ಷ ರೂಪಾಯಿಗಳಿಗೆ ಒಂದು ಅಂದಾಜು ಪಟ್ಟಿ ತಯಾರಾಯಿತು. 10ಕಿ.ಮೀ. ಉದ್ದದ ಈ ರಸ್ತೆ ಕೆಲಸವನ್ನು ನಬಾರ್ಡ್‌ನಿಂದ ನೆರವಿನಿಂದ ಮಾಡಲು ಯೋಜನೆ ಮಾಡಲಾಗಿತ್ತು. ಆದರೆ ಅಲ್ಲಿ ಕೇವಲ 18 ಲಕ್ಷ ರೂಪಾಯಿಗಳ ಕೆಲಸ ಮಾತ್ರ ಆಗಿದೆ. ಬೇರೆ ವಿಧದಲ್ಲಿ ಉಳಿದ ದುಡ್ಡು ಆದರೂ ನನ್ನ ಕ್ಷೇತ್ರದ ಇತರೆ ಕಾರ್ಯಗಳಿಗೆ ವಿನಿಯೋಗವಾಗಬೇಕಾಗಿತ್ತು. ಅಲ್ಲಿ ಕೇವಲ 18 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಲು ಕಾರಣವೇನೆಂದರೆ ಅವರು ಒಂದು ರೀತಿ-ನೀತಿ ಇಟ್ಟುಕೊಂಡಿರುತ್ತಾರೆ. ಅಲ್ಲಿ ಹಿಂದೆ ಯಾವುದಾದರೂ ಸಂದರ್ಭದಲ್ಲಿ, ಯಾವುದೇ ವರ್ಷ ಅಂದರೆ 10-20

ವರ್ಷದ ಹಿಂದೆಯಾಗಲೀ, ಅಲ್ಲಿ ಟಾರ್ ರಸ್ತೆ ಮಾಡಿದ್ದರೆ, ಮತ್ತೆ ಅಲ್ಲಿ ರಸ್ತೆ ಮಾಡುವುದಿಲ್ಲ ಎಂಬ ಕಾರಣ ನೀಡಿ ಎಲ್ಲಿಂದ ಟಾರ್ ರಸ್ತೆ ಮಾಡಿದ್ದರೋ ಅಲ್ಲಿಯವರೆಗೆ ಕೆಲಸವನ್ನು ನಿಲ್ಲಿಸಿ ಬಿಟ್ಟಿದ್ದಾರೆ. ರಸ್ತೆಯ ಉಳಿದ ಭಾಗ ಏನಿದೆ ಅದು ಬಹಳ ಹಾಳಾಗಿ ಹೋಗಿದೆ. ಹಿಂದೆ ಅಲ್ಲಿ ಟಾರ್ ರೋಡ್ ಮಾಡಿದ ಮೇಲೆ ಯಾರೂ ಅದನ್ನು ಮೆಂಟೇನ್ ಮಾಡಲಿಕ್ಕೆ ಹೋಗಲಿಲ್ಲ. ರಸ್ತೆ ಅಲ್ಲಿ ವಿಪರೀತವಾಗಿ ಹಾಳಾಗಿ ಹೋಗಿದ್ದು, ಅಲ್ಲಿ ತಿರುಗಾಡಲು ಆಗುವುದಿಲ್ಲ. ಅರ್ಧ ಭಾಗ ರಸ್ತೆ ಮಾಡಿ, ಇನ್ನರ್ಧ ಭಾಗವನ್ನು ಹಾಗೆಯೇ ಬಿಡಲಾಗಿದೆ. ಈ ರಸ್ತೆ ಉಪಯೋಗ ಆಗಬೇಕಾದರೆ ಪೂರ್ತಿ 10 ಕಿ.ಮೀ. ರಸ್ತೆಯೂ ಆಗಬೇಕಲ್ಲವೇ?

ಶ್ರೀ ಜಿ.ಹೆಚ್ ಪಟೇಲ್ :— ನೀವು ನಿಮ್ಮ ಕ್ಷೇತ್ರದಲ್ಲಿ 18 ಲಕ್ಷ ರೂಪಾಯಿಗಳ ಕೆಲಸವಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ ನನ್ನ ಕ್ಷೇತ್ರದಲ್ಲಿ ಆ ಕೆಲಸವೂ ಕೂಡ ಆಗಿಲ್ಲವಲ್ಲಾ?

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೇ, 18 ಲಕ್ಷ ರೂಪಾಯಿಗಳಷ್ಟು ಕೆಲಸ ನನ್ನ ಕ್ಷೇತ್ರದಲ್ಲಿ ಆಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಅಷ್ಟೂ ಕೆಲಸ ಆಗಿಲ್ಲ ಎಂದು ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ದಕ್ಷತೆ ಇಲ್ಲ ಎಂಬಂತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಕ್ಷೇತ್ರದಲ್ಲಿ 18 ಲಕ್ಷ ರೂಪಾಯಿಗಳ ಕೆಲಸವನ್ನೂ ಕೂಡ ಮಾಡಿಸಿಕೊಳ್ಳಲಾಗುತ್ತಿಲ್ಲ, ಸರ್ಕಾರದ ಸ್ಥಿತಿ ಆ ಮಟ್ಟಕ್ಕೆ ಬಂದು ಹೋಗಿದೆ. ಅದರಲ್ಲೇನೂ ಹೆಚ್ಚಿಗೆ ಮಾತನಾಡಬೇಕಾದಂತಹ ಪ್ರಮೇಯ ಇಲ್ಲ. ನನ್ನ ಲೆಕ್ಕದಲ್ಲಿ 40 ಲಕ್ಷ ರೂಪಾಯಿಗಳಿರುವುದರಿಂದ ಉಳಿದ ರಸ್ತೆಯನ್ನೂ ಕೂಡ ಮಾಡಿಸಬೇಕೆಂಬುದು ನನ್ನ ಒತ್ತಾಯವಾಗಿದೆ.

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೇ, ನಬಾರ್ಡ್ ನೆರವಿನಿಂದ ಕೈಗೊಂಡ ಕಾಮಗಾರಿಗಳಲ್ಲಿ ಒಂದೊಂದು ಕಡೆ ಒಂದೊಂದು ರೀತಿ ಮಾಡಿ ಹಾರತಮ್ಮ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಸಣ್ಣ ಪುಟ್ಟ ವ್ಯತ್ಯಾಸಗಳು ಇದ್ದುದು ನಿಜ. ನಾನು ಎಂಪವರ್ಡ್ ಕಮಿಟಿ ಛೇರ್ಮನ್ ಆದಮೇಲೆ ಎರಡು ಮೀಟಿಂಗ್ ಮಾಡಿ ಎಲ್ಲೆಲ್ಲಿ ಕಡಿಮೆ ಕಾಮಗಾರಿಗಳನ್ನು ಮಾಡಲಾಗಿತ್ತೋ ಅಂತಹ ಕಡೆಗಳಲ್ಲಿ ಪಕ್ಷಾತೀತವಾಗಿ, ಅವರು ಯಾವುದೇ ಪಕ್ಷದವರು ಇರಬಹುದು, ಎಲ್ಲರಿಗೂ ಕನಿಷ್ಠ 2 ಕೋಟಿ ರೂಪಾಯಿಗಳಿಗಿಂತ ಹೆಚ್ಚಾದ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅಲ್ಲಿ ಇಲ್ಲಿ ಕೆಲವು ಕಡೆ ಸ್ವಲ್ಪ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಅದನ್ನು ಮುಂದೆ ಸರಿ ಪಡಿಸೋಣ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ :— ಏನೂ ಕೆಲಸವಾಗಿಲ್ಲ. 2 ಕೋಟಿ ರೂಪಾಯಿಗಳ ಕೆಲಸ ಆಗಬೇಕಾಗಿತ್ತು. ಆದರೆ ಅಷ್ಟೂ ಹಣದ ಕೆಲಸವಾಗಿಲ್ಲ. ನಮ್ಮಲ್ಲಿ ಕೇವಲ 50ಲಕ್ಷ

ರೂಪಾಯಿಗಳಿಂದ 1 ಕೋಟಿ ರೂಪಾಯಿಗಳವರೆಗೆ ಮಾತ್ರ ಕೆಲಸವಾಗಿದೆ. ತಮ್ಮ ಆದೇಶದ ಪ್ರಕಾರವೇ ಆ 2 ಕೋಟಿ ರೂಪಾಯಿಗಳೂ ತಲುಪಬೇಕಾಗಿತ್ತು ಅಲ್ಲವೇ?

ಶ್ರೀ ಚಂದ್ರಹಾತ್ ಗುರಪ್ಪ ಬೆಲ್ಲದ್ :— ಮಾನ್ಯ ಅಧ್ಯಕ್ಷರೇ, ಕೆಲವು ಶಾಸಕರ ಕ್ಷೇತ್ರಗಳಲ್ಲಂತೂ ನಬಾರ್ಡ್ ನೆರವಿನಿಂದ ಕಾಮಗಾರಿಗಳೇ ಆಗಿಲ್ಲ.

ಅಧ್ಯಕ್ಷರು :— ಮಾನ್ಯ ಹಣಕಾಸಿನ ಸಚಿವರೇ, ತಾವು ದಯಮಾಡಿ ಉತ್ತರ ಕಂಪ್ಲೀಟ್ ಮಾಡಿ. ಮಧ್ಯೆ ಯಾರಿಗೂ ಈಲ್ಡ್ ಆಗುವುದು ಬೇಡ. ಮಾನ್ಯ ಹಣಕಾಸಿನ ಸಚಿವರ ಉತ್ತರ ಪೂರ್ತಿಯಾದ ಮೇಲೆ ನಾನು ಅದರ ಮೇಲೆ ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಮಧ್ಯೆ ಮಧ್ಯೆ ಕೇಳುವುದು ಬೇಡ.

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷವೂ ಕೂಡ ನೀವು ಪ್ಲಾನ್ ಅನ್ನು ಕಟ್ ಮಾಡುತ್ತಿದ್ದೀರಿ ಎಂಬ ಮಾತನ್ನು ಮಾನ್ಯ ಸದಸ್ಯರುಗಳು ಹೇಳಿದರು. ಇದು ಪ್ರತಿ ವರ್ಷವೂ ಕೂಡ ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಿರುವುದು ನಿಜ. ಆದರೆ ಶೇಕಡ 95-96ರಷ್ಟು ಪ್ಲಾನ್ ಅಚೀವ್‌ಮೆಂಟ್ ಅನ್ನು ನಾವು ಸಾಧಿಸುತ್ತಲೇ ಬಂದಿದ್ದೇವೆ. 1994-95 ರಲ್ಲಿ 302 ಕೋಟಿ ರೂಪಾಯಿಗಳು ಕಡಿಮೆ ಆಗಿತ್ತು. ಆದರೆ ಎಕ್ಸ್‌ಪೆಂಡಿಚರ್ ಪ್ರಕಾರ 173 ಕೋಟಿ ರೂಪಾಯಿಗಳು ಅಪ್ರೂವ್ಡ್ ಪ್ಲಾನ್ ಔಟ್‌ಲೆಗಿಂತ ಕಡಿಮೆಯಾಗಿದೆ. 1994-95ರಲ್ಲಿ ಅಪ್ರೂವ್ಡ್ ಪ್ಲಾನ್ 3275 ಕೋಟಿ ರೂಪಾಯಿಗಳಾದರೆ 2,373 ಕೋಟಿ ರೂಪಾಯಿಗಳು ಖರ್ಚಾಗಿದೆ. 1995-96ರಲ್ಲಿ ಅಪ್ರೂವ್ಡ್ ಪ್ಲಾನ್ 3575 ಕೋಟಿ ರೂಪಾಯಿಗಳಾದರೆ 3,391 ಕೋಟಿ ರೂಪಾಯಿ ಖರ್ಚಾಗಿದೆ. 1996-97 ರಲ್ಲಿ 4360 ಕೋಟಿ ರೂಪಾಯಿಗಳು ಅಪ್ರೂವ್ಡ್ ಪ್ಲಾನ್ ಆದರೆ 3,973 ಕೋಟಿ ರೂಪಾಯಿಗಳು ಖರ್ಚಾಗಿದೆ. 1997-98ರಲ್ಲಿ 4,179 ಕೋಟಿ ರೂಪಾಯಿಗಳು ಅಪ್ರೂವ್ಡ್ ಪ್ಲಾನ್ ಆದರೆ 4,424 ಕೋಟಿ ರೂಪಾಯಿಗಳು ಖರ್ಚಾಗಿದೆ. 1998-99ಕ್ಕೆ 5,353 ಕೋಟಿ ರೂಪಾಯಿಗಳು ಅಪ್ರೂವ್ಡ್ ಪ್ಲಾನ್ ಔಟ್ಲೆ 5,132 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ನಾವು ಅಂದಾಜು ಮಾಡಿದ್ದೇವೆ. ಇದಕ್ಕಿಂತ ಸ್ವಲ್ಪ ಹೆಚ್ಚು ಖರ್ಚಾಗಬಹುದು. ಪ್ಲಾನ್‌ನಲ್ಲಿ ಹೀಗೆ ಪ್ರತಿ ವರ್ಷವೂ ಶೇಕಡ 4-5 ರಷ್ಟು ಕಡಿಮೆಯಾಗುತ್ತಿದೆ. ತೆರಿಗೆ ಸಂಗ್ರಹ ಕಡಿಮೆ ಆಗಿರುವುದು, ಕೇಂದ್ರ ಸರ್ಕಾರದಿಂದ ರಾಜ್ಯದ ಪಾಲಿಗೆ ಬರಬೇಕಾದ ಹಣದಲ್ಲಿ ಕಡಿಮೆಯಾಗಿರುವುದು ಈ ಎಲ್ಲಾ ಕಾರಣಗಳಿಂದ ಅಪ್ರೂವ್ಡ್ ಪ್ಲಾನ್ ಸೈಜ್ ಅನ್ನು ಸಂಪೂರ್ಣವಾಗಿ ಸಾಧಿಸಲು ನಮಗೆ ಸಾಧ್ಯವಾಗಲಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಮಾನ್ಯ ಸದಸ್ಯರಾದ ಶೋಭಾ ಕರಂದ್ಲಾಜೆಯವರು ಮಾತನಾಡುತ್ತಾ ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ ಅನ್ನು ಮಾಡಬೇಕೆಂಬ ಸಲಹೆಯನ್ನು ನೀಡಿದರು. ಇದರ ಬಗ್ಗೆ ಈಗಾಗಲೇ ನನ್ನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ದೇಶದಲ್ಲಿರುವ ಕೆಲವು ಪ್ರತಿಷ್ಠಿತ ವ್ಯಕ್ತಿಗಳೂ ಕೂಡ ಇದ್ದಾರೆ. ಇದರ ಬಗ್ಗೆ ನಾವು ಈಗಾಗಲೇ ಸಭೆಗಳನ್ನು ನಡೆಸಿದ್ದು ಅದು ಫೈನಲ್ ಆಗುವ ಹಂತಕ್ಕೆ ಬಂದಿದೆ.

ಬಹುಶಃ ಮೇ-ಜೂನ್ ತಿಂಗಳಿನಲ್ಲಿ ಅದು ಬಿಡುಗಡೆಯಾಗುತ್ತದೆ. ಇದರ ಬಗ್ಗೆ ಸಾರ್ವತ್ರಿಕವಾಗಿ ಚರ್ಚೆಯಾಗಲಿ. ಬಿಡಿಪಿ ಗ್ರೋತ್ ಲೆಕ್ಕ ಹಾಕಿಕೊಂಡು ಬಜೆಟ್ ಮಾಡದೇ ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್‌ಅನ್ನು ಆಧಾರವಾಗಿಟ್ಟುಕೊಂಡು ಮಾಡಬೇಕೆಂದು ಮಾನ್ಯ ಫೂರ್ಣಡೆಯವರು ಹೇಳಿದರು. ಮಧ್ಯಪ್ರದೇಶದಲ್ಲಿ ಈ ರೀತಿಯಾಗಿ ಮಾಡಿದ್ದಾರೆ. ಅದು ಬಿಟ್ಟರೆ ನಮ್ಮ ಕರ್ನಾಟಕವೇ ಎರಡನೇ ರಾಜ್ಯವಾಗಲಿದೆ. ಅದನ್ನು ನಾವು ಖಂಡಿತಾ ಮಾಡುತ್ತೇವೆ. ಇನ್ನು ಮುಂದೆ ಮಾನ್ಯ ಸದಸ್ಯರು ಹೇಳಿದಂತೆ ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ ಅನ್ನು ಆಧಾರವಾಗಿಟ್ಟುಕೊಂಡು ಶಿಕ್ಷಣ, ಆರೋಗ್ಯ, ಉದ್ಯೋಗ, ಕ್ಷೇತ್ರಗಳಲ್ಲಿ ಪ್ಲಾನ್ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ. ಇನ್ನು ಒಂದೆರಡು ತಿಂಗಳೊಳಗಾಗಿ ಸಮಿತಿಯ ವರದಿ ಪಬ್ಲಿಷ್ ಆಗುತ್ತದೆ. ಅನಂತರ ಅದರ ಪ್ರಕಾರವೇ ನಾವು ಕೆಲಸ ಮಾಡುತ್ತೇವೆ. ಮಧ್ಯಪ್ರದೇಶದಲ್ಲಿ ಕಮ್ಯೂನಿಟಿ ಎಜುಕೇಷನ್ ಮಾಡುತ್ತಾರೆ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಮಧ್ಯಪ್ರದೇಶದಲ್ಲಿ ರಿಮೋಟ್ ಪ್ಲೇಸಸ್‌ಗೆ ಯಾರೂ ಮೇಷ್ಟ್ರುಗಳು ಹೋಗುವುದಿಲ್ಲ. ಮೇಷ್ಟ್ರುಗಳು ಯಾರೂ ಹೋಗದೇ ಇರುವುದರಿಂದ ಅವರು ಒಂದು ಪ್ರೋಗ್ರಾಮ್ ಅನ್ನು ಮಾಡಿದ್ದಾರೆ. ಆ ಪ್ರೋಗ್ರಾಮ್ ಪ್ರಕಾರ ಒಬ್ಬರಿಗೆ 500 ರೂಪಾಯಿಗಳನ್ನು ಕೊಟ್ಟು ಅವನಿಗೆ ತರಬೇತಿ ನೀಡಿ ಪಾಠ ಮಾಡಲು ಸಾಧ್ಯವಾಗುವಂತೆ ತಯಾರುಗೊಳಿಸಲಾಗುತ್ತಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಆ ಪರಿಸ್ಥಿತಿ ಇಲ್ಲ. ಕರ್ನಾಟಕದಲ್ಲಿ ಯಾವುದೇ ಹಳ್ಳಿಗೆ ಯಾವುದೇ ಮೂಲೆಗೆ ಉಪಾಧ್ಯಾಯರುಗಳು ಹೋಗುವುದಕ್ಕೆ ತಯಾರಾಗಿದ್ದಾರೆ. ಮಧ್ಯಪ್ರದೇಶದಂತಹ ಪರಿಸ್ಥಿತಿ ರಾಜ್ಯದಲ್ಲಿಲ್ಲ. ಆದುದರಿಂದ ಆ ತರಹ ಪ್ರೋಗ್ರಾಮ್ ಮಾಡುವುದರಿಂದ ಅನುಕೂಲವೇನೂ ಆಗುವುದಿಲ್ಲ. ಈಗಾಗಲೇ ನಾವು ಎಲ್ಲೆಲ್ಲಿ ಶಾಲೆಗಳನ್ನು ತೆರೆದಿದ್ದೇವೋ ಅಲ್ಲಿಗೆಲ್ಲಾ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ನಮ್ಮಲ್ಲಿ ಉಪಾಧ್ಯಾಯರುಗಳ ಕೊರತೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಗೋವಿಂದೇಗೌಡರು ಇಲ್ಲಿ, ನಿಮಗೆ ಬೇಕಾದ ಕಡೆ ಹೋಗಿ, ಬೇಡವಾದ ಕಡೆ ಹೋಗುವುದು ಬೇಡ ಎಂಬ ಉದ್ದೇಶದಿಂದ ಉಪಾಧ್ಯಾಯರುಗಳಿಗೆ ನೇಮಕಾತಿ ನೀಡುವಾಗ ಕಾನ್ಸಲಿಂಗ್ ಪದ್ಧತಿ ಅನುಸರಿಸಿದ್ದಾರೆ.

ಶ್ರೀ ಎಂ.ವೈ. ಫೂರ್ಣಡೆ :— ಇಲ್ಲಿ, ಅಲ್ಲಿ ಮಾಡಿದಂತೆಯೇ ಮಾಡಬೇಕೆಂದು ನಾನು ಹೇಳಲಿಲ್ಲ. ಆದರೆ ಶಿಕ್ಷಣ ಗ್ಯಾರಂಟಿ, ಹೆಲ್ತ್ ಗ್ಯಾರಂಟಿ ಮತ್ತು ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಇವುಗಳನ್ನು ಒದಗಿಸಬೇಕೆಂಬುದೇ ನನ್ನ ಆಗ್ರಹ.

ಶ್ರೀ ಸಿದ್ದರಾಮಯ್ಯ :— ನೀವು ಹೇಳುವುದನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ನಾವು ಮಧ್ಯಪ್ರದೇಶದ ವಿಚಾರ ರೆಫರ್ ಮಾಡಿದ್ದರಿಂದ ನಾನು ಈ ವಿಚಾರವನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದೇನೆ. ಮಧ್ಯಪ್ರದೇಶದಲ್ಲಿ ಮಾಡಿರುವ ಕಾರ್ಯಕ್ರಮ ಕರ್ನಾಟಕದಲ್ಲಿ ಯಾವ ರೀತಿ ಉಪಯೋಗಕ್ಕೂ ಬರುವುದಿಲ್ಲ. ಕರ್ನಾಟಕಕ್ಕೆ

ಅದು ಉಪಯೋಗಕ್ಕೆ ಬರುವುದಿಲ್ಲ. ಎಲ್ಲ ಉಪಾಧ್ಯಾಯರು ಹಳ್ಳಿಗಳಿಗೆ ಹೋಗುತ್ತಾರೆ. 300 ಜನಸಂಖ್ಯೆ ಇರುವ ಪ್ರಾಥಮಿಕ ಶಾಲೆಗಳಿರಬೇಕು, ಹತ್ತಿರದಲ್ಲಿರಬೇಕು ಎಂದು ಇತ್ತು. ಇದರ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಹೆಚ್ಚಾಗುವ ಬಗ್ಗೆ ಪ್ರಯತ್ನಗಳು ಆಗಬೇಕು ಎಂದು ಒಪ್ಪಿಕೊಂಡು ಇಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿ ಮಾನ್ಯ ಸದಸ್ಯರು ಇಟ್ಟಿರತಕ್ಕಂತಹ ಸೂಚನೆಗಳು, ಸಲಹೆಗಳು ಮತ್ತು ಟೀಕೆಗಳಿಗೆ ಎಲ್ಲಾ ಸಾಧ್ಯವಾದ ಮಟ್ಟಿಗೆ ಉತ್ತರ ಕೊಟ್ಟಿದ್ದೇನೆ ಎನ್ನತಕ್ಕಂತಹ ಮಾತನ್ನು ಹೇಳಿ, ನಮ್ಮ ಆಯವ್ಯಯ ಬಹಳ ಗೊತ್ತುಗುರಿ ಇರತಕ್ಕಂಥದ್ದು, ಬಡವರ ಪರವಾಗಿರತಕ್ಕಂಥದ್ದು ಮತ್ತು ಹಳ್ಳಿಗಾಡಿನ ಜನರ ಪರವಾಗಿರತಕ್ಕಂಥದ್ದು, ಬೆಳವಣಿಗೆಗೆ ಪೂರಕವಾದ ಆಯವ್ಯಯ. ಆದ್ದರಿಂದ ಇದು ಚುನಾವಣೆ ದೃಷ್ಟಿಯಿಂದ ಮಾಡಿದ್ದುದು ಅಲ್ಲ, ಚುನಾವಣೆ ಭಾಷಣ ಮಾಡುವುದಕ್ಕೂ ಮಾಡಿದ್ದುದು ಅಲ್ಲ. ಈ ಐದು ಬಡ್ಜೆಟ್‌ಗಳನ್ನು ನೀವು ಸಮಗ್ರವಾಗಿ ಓದಿದರೆ ಬಹಳ ಸ್ಪಷ್ಟವಾದ ಚಿತ್ರ ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆಂದು ಬಹಳ ಸ್ಪಷ್ಟವಾಗಿ ಚಿತ್ರ ಬರುತ್ತದೆ. ಬಡವರ ಪರವಾದ ಸಾಮಾನ್ಯ ಜನರ ಪರವಾದ ಮತ್ತು ಹಳ್ಳಿಗಾಡಿನ ಜನರ ಪರವಾದ ಒಂದು ಆಯವ್ಯಯ. ಸಣ್ಣ ಕೈಗಾರಿಕೆಗಳೂ ಕೂಡ ಹೆಚ್ಚು ಒತ್ತು ಕೊಟ್ಟು, ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗುತ್ತವೆ ಎಂದು ಅದಕ್ಕೆ ಈ ಸಾರಿ ಒತ್ತು ಕೊಡತಕ್ಕಂತಹ ಕೆಲಸ ಮಾಡಿದ್ದೇವೆ. ನಾಲ್ಕು ಪರ್ಸೆಂಟ್ ಇದ್ದ ಟ್ಯಾಕ್ಸ್ ಎರಡು ಪರ್ಸೆಂಟ್‌ಗೆ ಕಡಿಮೆ ಮಾಡಿ ಅದಕ್ಕೆ ಉತ್ತೇಜನ ಕೊಡತಕ್ಕಂತಹ ಪ್ರಯತ್ನ ಮಾಡಿದ್ದೇವೆ. ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗತಕ್ಕಂತಹ ಬಡವರ ಪರವಾದ ಮತ್ತು ಹಳ್ಳಿಗಾಡಿನ ಪರವಾದ ಆಯವ್ಯಯ ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಹೇಳಿ, ತಮ್ಮಲ್ಲಿ ಮನವಿ ಮಾಡುತ್ತೇನೆ. ನನಗೆ ಈ ಐದು ಆಯವ್ಯಯಗಳನ್ನು ಮಂಡನೆ ಮಾಡತಕ್ಕಂತಹ ಅವಕಾಶ ಈ ರಾಜ್ಯದ ಜನತೆ ಕೊಟ್ಟಿದ್ದರು, ಅದರ ಜೊತೆಗೆ ಮಾನ್ಯ ಸದಸ್ಯರೆಲ್ಲರೂ ಕಳೆದ ಐದು ವರ್ಷಗಳಿಂದ ಸಹಾಯ ಸಹಕಾರ ಮಾಡುತ್ತಾ ಬಂದಿದ್ದಾರೆ. ಈ ರಾಜ್ಯದ ಜನತೆಗೆ ಮತ್ತೊಮ್ಮೆ ಧನ್ಯವಾದ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಅರ್ಥಸಚಿವರು ಕೆಲವು ಮಾತಿಗೆ ಸವಿಸ್ತಾರವಾದ ಉತ್ತರ ಕೊಟ್ಟರು. ಕೆಲವು ವಿಷಯಗಳಲ್ಲಿ ಅವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಇಂಟರ್ನಲ್ ಡೆಟ್ ಹೆಚ್ಚಿಗೆ ಆಗಿರುವುದು, ಅಸೆಟ್ಸ್ ಕಡಿಮೆ ಮತ್ತು ಲಯಬಿಲಿಟಿ ಹೆಚ್ಚಿಗೆ ಆಗಿದೆ ಎನ್ನತಕ್ಕಂಥದ್ದು ಅಂಕಿ ಸಂಖ್ಯೆಯಿಂದ ನಾವು ಪುನಃ ಹೇಳಬಹುದು. ಅಂದರೆ ನೀವು ಒಪ್ಪಿಕೊಂಡ ಹಾಗೆ. ಇನ್ನೊಂದು ತಮ್ಮ ಅಸೆಟ್ಸ್ ಗ್ರೋಥ್ ರೇಟ್ ಏನಿದೆ, ಅದು ಕಡಿಮೆಯಾಗುತ್ತಿದೆಯೇ ಹೊರತು ಹೆಚ್ಚಿಗೆ ಮಾಡಿಲ್ಲ. 1995-96ರಲ್ಲಿ ನೋಡಿ, 1998-99ರಲ್ಲಿ ನೋಡಿ 12 ಪರ್ಸೆಂಟ್ ಇದ್ದದು 7.75 ಪರ್ಸೆಂಟ್ ಆಗಿದೆ. ಅದಕ್ಕಾಗಿ ಹಣಕಾಸಿನ ಪರಿಸ್ಥಿತಿ ಬಹಳ ಉತ್ತಮವಾಗಿದೆ ಎನ್ನತಕ್ಕಂತಹ ಮಾತು ಪದೇ ಪದೇ ಏನು ಹೇಳುತ್ತಿದ್ದೀರಿ, ಇದರ ಮೇಲೆ ಗೊತ್ತಾಗುತ್ತಿದೆ. ತಮ್ಮ ಅಸೆಟ್ ಕಡಿಮೆಯಾಗುತ್ತದೆ ಎನ್ನುವುದು ತಾವು

ಒಪ್ಪಿಕೊಳ್ಳಬೇಕಾಗುತ್ತದೆ. 2,434 ಕೋಟಿ ರೂಪಾಯಿಗಳ ಲಯಬಿಲಿಟಿ ಅಸೆಟ್‌ಗಿಂತ ಹೆಚ್ಚಿಗೆ ಇದೆ. ಈ ಮಾತನ್ನು ಕೂಡ ತಾವು ಒಪ್ಪಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ಮನೆಗಳ ವಿಷಯ, ನಾನು ಇಷ್ಟೊಂದು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇನೆ ನಿಮಗೆ ಕಣ್ಣಿಗೆ ಕಾಣುತ್ತಿಲ್ಲವೇ ಎಂದು ಹೇಳಿದಿರಿ, ಒಂದು ಮಾತು ತಾವು ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದು ಬಹುಶಃ ಓದಿಕೊಂಡಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ನಿಮ್ಮ ಸರ್ಕಾರ ಕೊಟ್ಟಂತಹ ಅಡ್ವರ್ಟೈಸ್‌ಮೆಂಟ್ ಅದರಲ್ಲಿ ತಾವು ಏನು ತೋರಿಸಿದ್ದೀರಿ, ಎಂದರೆ ಸುಮಾರು ಒಂದು ಲಕ್ಷದ 66,000 ಆಶ್ರಯ ಯೋಜನೆ ಕೆಳಗೆ ಕಟ್ಟಿಸಿದಂತಹ ಮನೆ, ಹಿಂದಿನ ಸರ್ಕಾರ ಕೂಡ ಆಶ್ರಯ ಯೋಜನೆ ಕೆಳಗೆ ಒಂದು ಲಕ್ಷ 6,000 ಮನೆಗಳನ್ನು ಕಟ್ಟಿಸಿದೆ ಎಂದು ತಾವೇ ಇಂಡೆಕ್ಸ್‌ನಲ್ಲಿ ತೋರಿಸಿದ್ದೀರಿ. ಅಂದರೆ ಮನೆ ಹೆಚ್ಚಿಗೆ ಮಾಡಿದ್ದು ಯಾವಾಗ ಎಂದರೆ, ಇಂದಿರಾಆವಾಸ್‌ನಲ್ಲಿ, ಈ ಐದು ವರ್ಷದಲ್ಲಿ ಹೆಚ್ಚಿನ ಹಣ ಕೇಂದ್ರ ಸರ್ಕಾರದಿಂದ ಬಂದಿದೆ. ಅದಕ್ಕಾಗಿ ಆ ಯೋಜನೆ ಕೆಳಗೆ ಕಟ್ಟಿಸಿದಂತಹ ಮನೆಗಳು ಅವೂ ನಮ್ಮವೇ ಎಂದು ಹೇಳತಕ್ಕಂತಹ ಅವಶ್ಯಕತೆ ಇಲ್ಲ. ನೀವು ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದು ನಾವು ಓದಿದರೆ ನಿಮಗೆ ಅದರ ಬಗ್ಗೆ ನಂಬಿಕೆ ಇಲ್ಲ ಎಂದರೆ ನಾವು ಏನು ಹೇಳಲಿ, ನೀವು ಮೊನ್ನೆ ಪತ್ರಿಕೆಯಲ್ಲಿ ಕೊಟ್ಟ ಅಂಕಿ ಸಂಖ್ಯೆ ಮೇಲೆ ಹೇಳುತ್ತಿದ್ದೇನೆ. ಇಂದಿರಾ ಆವಾಸ್ ಸ್ಕೀಮ್ ಕೇಂದ್ರ ಸರ್ಕಾರದ ಯೋಜನೆ ಇದೆ. ತಾವು ಮಾಡಿದ ಯೋಜನೆ ಏನಿದೆ ಅದು ಹಿಂದಿನ ಸರ್ಕಾರಕ್ಕೆ ಹೋಲಿಸಿದಾಗ 50,000 ಮನೆಗಳಿಗಿಂತ ಹೆಚ್ಚು ಕಡಿಮೆ ಏನೂ ಇಲ್ಲ. ಅದೇ ರೀತಿಯಾಗಿ ಸೈಟ್‌ನಲ್ಲಿ ಹಿಂದಿನ ಸರ್ಕಾರ ಸುಮಾರು ನಾಲ್ಕು ಲಕ್ಷ ಸೈಟ್‌ಗಳನ್ನು ಕೊಟ್ಟರೆ ತಮ್ಮ ಸರ್ಕಾರ ಒಂದು ಲಕ್ಷದ 33,000 ಸೈಟ್‌ಗಳನ್ನು ನಾಲ್ಕು ವರ್ಷದಲ್ಲಿ ಕೊಟ್ಟಿದ್ದೀರಿ. ಅದಕ್ಕೆ ದಯವಿಟ್ಟು ಇವೆಲ್ಲಾ ಸಾರಾಸಗಟು ನಿಮ್ಮದೇ ಅಛೀವ್‌ಮೆಂಟ್ ಎಂದು ಏನು ಹೇಳುತ್ತಿದ್ದೀರಿ ಇದು ಸತ್ಯಕ್ಕೆ ದೂರವಾದುದು ಮತ್ತು ವಾಸ್ತವಾಂಶ ಮರೆಮಾಚತಕ್ಕಂತಹ ಕೆಲಸವಾಗಿದೆ ಎನ್ನತಕ್ಕಂತಹ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮೂರನೆಯದು ರೈತರ ಬಗ್ಗೆ ತಾವು ಏನೂ ಹೇಳಲಿಲ್ಲ. ನಾನು ಪ್ರಾರಂಭದಿಂದ ನೋಡುತ್ತಿದ್ದೇನೆ, ನಾನು ಪ್ರಸ್ತಾಪ ಮಾಡಿದ್ದೆ, ಯಾವ ರೈತರು ಅತಿವೃಷ್ಟಿಯಿಂದ ತಮ್ಮ ಬೆಳೆಗಳನ್ನು ಕಳೆದುಕೊಂಡಿದ್ದಾರೆ, ಮನೆಗಳನ್ನು ಕಳೆದುಕೊಂಡಿದ್ದಾರೆ ಇದರ ಬಗ್ಗೆ ತಾವು ಪ್ರಸ್ತಾಪ ಮಾಡಲಿಲ್ಲ. ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ ಏನು ಎಂದು ನಾನು ಕೇಳಿದ್ದೆ. ಅದಕ್ಕೂ ಕೂಡ ತಾವು ಉತ್ತರ ಕೊಡಲಿಲ್ಲ. ಎರಡನೆಯದಾಗಿ ಕೇಂದ್ರ ಸರ್ಕಾರದಿಂದ ತಮಗೆ 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಅದಕ್ಕೆ ಪ್ಲಾನ್ ಅಸಿಸ್ಟೆನ್ಸ್ ಕೊಟ್ಟಿದ್ದಾರೆ. ಮತ್ತು ಇನ್ನು 50 ಕೋಟಿ ರೂಪಾಯಿಗಳು ನಾವು ಗ್ರ್ಯಾಂಟ್ ಕೊಡುತ್ತೇವೆಂದು ಅನೌನ್ಸ್ ಮಾಡಿದ್ದರು. ಇದರ ಬಗ್ಗೆ ಕೂಡ ತಾವು ಸ್ಪಷ್ಟವಾಗಿ ಉತ್ತರದಲ್ಲಿ ಪ್ರಸ್ತಾಪ ಮಾಡಲಿಲ್ಲ. ರೈತರ ಬಗ್ಗೆ ಇಲ್ಲ, ಪಂಪ್‌ಸೆಟ್ ಬಗ್ಗೆ ಏನಾದರೂ ಕನಿಷ್ಟ ಈ ವರ್ಷವಾದರೂ ಕೂಡ ಹಣ ಕಡಿಮೆ ಮಾಡತಕ್ಕಂಥದ್ದು, ಸಬ್ಸಿಡಿ ಕೊಡತಕ್ಕಂಥದ್ದು ಏನಾದರೂ ಕೂಡ ಇರ್ರಿಗೇಷನ್ ಪಂಪ್‌ಸೆಟ್ ಮೇಲೆ ಚುನಾವಣೆ ವರ್ಷ ಇದೆ, ಏನಾದರೂ ಕನ್‌ಸೇಷನ್ ಕೊಡುತ್ತೀರಾ

ಎಂದು ಕೇಳಿದರೆ ಅದಕ್ಕೂ ಉತ್ತರ ಇಲ್ಲ. ಮೈನರ್ ಇರ್ರಿಗೇಷನ್ ಬಗ್ಗೆ ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು. ಅಲೋಕೇಷನ್ ಹೆಚ್ಚಿಗೆ ಮಾಡಿ ಟ್ಯಾಂಕ್ಸ್ ಡೀಸಿಲ್ಟಿಂಗ್ ಮಾಡಬೇಕು, ಹೆಚ್ಚಿನ ಅಲೋಕೇಷನ್ ತಾವು ಮಾಡಬೇಕು ಏಕೆಂದರೆ ದೊಡ್ಡ ನೀರಾವರಿ ಯೋಜನೆಗಳಿಗೆ ಯಾವ ರೀತಿಯಾಗಿ ತಾವು ಹಣವನ್ನು ಸಂಗ್ರಹಿಸಿ ಇದಕ್ಕೆ ಕೊಡುತ್ತಿದ್ದೀರಿ, ಅದೇ ರೀತಿಯಾಗಿ ಮೈನರ್ ಇರ್ರಿಗೇಷನ್‌ಗೂ ಕೂಡ ಒತ್ತು ಕೊಟ್ಟು ಅಲೋಕೇಷನ್ ಹೆಚ್ಚಿಗೆ ಮಾಡಬೇಕೆಂದು ಅನೇಕ ಸದಸ್ಯರು ಮಾತನಾಡಿದರು. ಇದರ ಬಗ್ಗೆ ಕೂಡ ತಾವು ಹೇಳಲಿಲ್ಲ. ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದಾಗ ಬಡ್ಜೆಟ್ ಮೇಲೆ ಉತ್ತರ ಕೊಡುತ್ತೇನೆಂದು ಹೇಳಿದಿರಿ ಇದು ಹೆಚ್‌ಕೆಡಿಬಿ ಇರಬಹುದು, ಮಲೆನಾಡು ಇರಬಹುದು, ಬಯಲು ಸೀಮೆ ಇರಬಹುದು ಯಾವುದೇ ಅದರೂ ಇದರ ಬಗ್ಗೆ ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂ ಬಗ್ಗೆ ನಾನು ಸಮಜಾಯಿಷಿ ಉತ್ತರ ಕೊಡುತ್ತೇನೆಂದು ಹೇಳಿದಿರಿ, ಹಾಗೆ ಅದಕ್ಕೂ ಉತ್ತರ ಕೂಡ ಕೊಡಲಿಲ್ಲ. ಅಲೋಕೇಷನ್ ಕೂಡ ತಾವು ವರ್ಷ ವರ್ಷ ಕಡಿಮೆ ಮಾಡುತ್ತಿದ್ದೀರಿ. ಇದು ಏಕೆ ಈ ರೀತಿ ಮಾಡುತ್ತಿದ್ದೀರಿ ಎಂದು ನಾವು ಪ್ರಸ್ತಾಪ ಮಾಡಿದರೆ ಈ ಸಂದರ್ಭದಲ್ಲಿ ಉತ್ತರ ಸಿಗಲಿಲ್ಲ. ಬಡ್ಜೆಟ್ ಮೇಲೆ ಉತ್ತರ ಕೊಡುತ್ತೇನೆಂದು ಹೇಳಿದಿರಿ. ಆ ಉತ್ತರ ಕೂಡ ಇದರಲ್ಲಿ ಬಂದಿಲ್ಲ. ಅನೇಕ ವಿಷಯಗಳು ಇವೆ. ನಾನು ಎಲ್ಲವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ರೈತರ ಬಗ್ಗೆಯಾಗಲಿ, ಕೆಇಬಿ ಬಗೆಯಾಗಲಿ, ರೀಜನಲ್ ಇಂಬ್ಯಾಲೆನ್ಸ್ ಬಗ್ಗೆಯಾಗಲಿ, ಮೈನರ್ ಇರಿಗೇಷನ್ ಬಗ್ಗೆಯಾಗಲಿ ಇವೂ ಕೂಡ ರೈತರಿಗೆ ಸಹಾಯ ಮಾಡತಕ್ಕಂತಹ ಕಾರ್ಯಕ್ರಮ ಇದರ ಬಗ್ಗೆ ತಾವು ಹೆಚ್ಚಿಗೆ ಒತ್ತು ಕೊಡಲಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಇಂಡಸ್ಟ್ರೀಸ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನೀವೇ ಒಪ್ಪಿಕೊಂಡಿದ್ದೀರಿ ಕೆಲವು ಅನಾರೋಗ್ಯಕರವಾದ ಇಂಡಸ್ಟ್ರೀಗಳಿಗೆ ಕನ್‌ಸೆಷನ್ ಕೊಟ್ಟಿದ್ದೇವೆ ಅದನ್ನು ರಿನ್ಯೂ ಮಾಡುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳಿದ್ದೀರಿ. ಅದು ಸಂತೋಷ. ಇದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡತಕ್ಕಂತಹ ಅವಶ್ಯಕತೆ ಇದೆ ಎಂದು ತಾವು ಹೇಳಿದ್ದೀರಿ. ಈ ವಿಷಯಗಳಿಗೆ ತಾವು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ :— ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಅವರು ಕೇಳಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟಿದ್ದರೂ ಕೂಡ ಮತ್ತೆ ಅದೇ ಪ್ರಶ್ನೆಗಳನ್ನು ಕೇಳಿದ್ದಾರೆ. ಮಳೆ ಹಾನಿಗೆ ಸಂಬಂಧಪಟ್ಟಂತೆ ಪರಿಹಾರ ಕೊಡುವಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎಂಬುದನ್ನೂ ಕೂಡ ಈಗಾಗಲೇ ಹೇಳಿದ್ದೇನೆ. ಅನುಕಂಪ ಭತ್ಯೆಗೆ 249 ಲಕ್ಷ ರೂಪಾಯಿಗಳನ್ನು ಹಾಯ್ದಿರಿಸಿ ಪ್ರತಿ ಜಿಲ್ಲೆಗೂ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅದನ್ನು ಖರ್ಚು ಮಾಡಲಾಗಿದೆ. ಇನ್ನು ಮನೆ ಕುಸಿತವಾಗಿರುವಾಗ ಅದಕ್ಕೆ ಪರಿಹಾರವಾಗಿ 16 ಕೋಟಿ 9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಜಾನುವಾರು ಹಾನಿಗೆ ಸಂಬಂಧಪಟ್ಟಂತೆ 24 ಲಕ್ಷ ರೂಪಾಯಿಗಳನ್ನು

ಪರಿಹಾರವಾಗಿ ನೀಡಲಾಗಿದೆ. ಇತರೆ ಹಾನಿಗಳಿಗೆ ನೀಡಲಾಗಿರುವ ಪರಿಹಾರ ಮೊತ್ತ 133 ಲಕ್ಷ ರೂಪಾಯಿಗಳಾಗಿವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಜಾನುವಾರುಗಳ ಹಾನಿಗೆ ಸಂಬಂಧಪಟ್ಟಂತೆ ಒಂದು ಪೈಸೆಯನ್ನೂ ಕೊಟ್ಟಿಲ್ಲ. ವರದಿ ತರಿಸಿಕೊಂಡು ನೋಡಿ.

ಶ್ರೀ ಸಿದ್ಧರಾಮಯ್ಯ :— ನಾವು ಕೊಟ್ಟಿರುವುದನ್ನೇ ಹೇಳುತ್ತಿರುವುದು. ಸಾರ್ವಜನಿಕ ಆಸ್ತಿಗಳ ಹಾನಿಗೆ ತುರ್ತು ದುರಸ್ತಿಗಾಗಿ 24 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಒಟ್ಟಾರೆಯಾಗಿ 78 ಕೋಟಿ 64 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು. ಎಲ್ಲವೂ ಸೇರಿಸಿಕೊಂಡು 119 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ ತೊಗರಿ ಬೇಳೆಗೆ ನಾವು 18 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. 119 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೂ ಕೂಡ ಇನ್ನೂ 8 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಇದರ ಜೊತೆಗೆ ಸಣ್ಣ ನೀರಾವರಿಗೆ ಮತ್ತು ಹೆಚ್.ಕೆ.ಡಿ.ಬಿ.ಗೆ ಮೊದಲಿನಿಂದ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿತ್ತೋ ಅಷ್ಟನ್ನು ಖರ್ಚು ಮಾಡಿದ್ದೇವೆ. ಆದರೆ ಎಲ್ಲಿ ಎಸ್.ಸಿ.ಪಿ. ಮತ್ತು ಬಿ.ಎಸ್.ಪಿ.ಗೆ ನಾವು ಹಣವನ್ನು ತೆಗೆದುಕೊಳ್ಳುತ್ತೇವೆ, ಅದನ್ನು ಬಿಟ್ಟು ಇವರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಬಜೆಟ್‌ನಲ್ಲಿ ಇಟ್ಟಿರುವ ಹಣವನ್ನಾದರೂ ಪೂರ್ಣವಾಗಿ ಕೊಡುವುದಕ್ಕೆ ನಿಮಗಾಗಿರುವ ತೊಂದರೆ ಏನು?

ಶ್ರೀ ಸಿದ್ಧರಾಮಯ್ಯ :— ತೊಂದರೆಯೇನೂ ಇಲ್ಲ. ಸಣ್ಣ ನೀರಾವರಿಗೆ ಕಳೆದ ಬಾರಿ 125 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಒಟ್ಟಿನಲ್ಲಿ ನೀವು ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರೋ ಅದಕ್ಕಿಂತ ಹೆಚ್ಚು ಹಣವನ್ನು ನಾವು ಖರ್ಚು ಮಾಡಿದ್ದೇವೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮೈನರ್ ಇರಿಗೇಶನ್ ಮೇಲೆ ಸ್ವಲ್ಪ ಕರುಣೆ ತೋರಿ. ಅದನ್ನು ಬಿಟ್ಟು ಸಾರಾಸಗಟಾಗಿ ಏಕೆ ತೆಗೆದುಹಾಕುತ್ತೀರಿ?

ಶ್ರೀ ಸಿದ್ಧರಾಮಯ್ಯ :— ಮೈನರ್ ಇರಿಗೇಷನ್‌ಗೆ ಹೆಚ್ಚು ಹಣ ಕೊಡಬೇಕಾದ್ದು ನಿಜ. 2,000 ಇಸವಿಯಾದ ಮೇಲೆ ನಾವು ಅದಕ್ಕೆ ಹೆಚ್ಚು ಹಣವನ್ನು ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ದೊಡ್ಡ ದೊಡ್ಡ ಕೆರೆಗಳಿಗೆ ಹೂಳು ತೆಗೆಯುವುದಕ್ಕೆ ಸಂಬಂಧಪಟ್ಟಂತೆ ಕೆಲಸವಾಗಿದ್ದರೂ ಪೇಮೆಂಟ್ ಆಗಿಲ್ಲ.

ಶ್ರೀ ಸಿದ್ಧರಾಮಯ್ಯ :— ಅದಕ್ಕೆ ಹಣ ಕೊಡಲಾಗಿದೆ ಮತ್ತು ಪೇಮೆಂಟ್ ಕೂಡ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸಿದ್ಧರಾಮಯ್ಯನವರೆ, ದಯವಿಟ್ಟು ತಾವು ಮೈನರ್ ಇರಿಗೇಶನ್ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾಗಿದೆ.

ಶ್ರೀ ಸಿದ್ಧರಾಮಯ್ಯ :— ತಮ್ಮ ಅಭಿಪ್ರಾಯ ಸರಿ ಇದೆ. ಆದರೆ ಇರತಕ್ಕಂಥ ಹಣಕಾಸಿನ ಪರಿಸ್ಥಿತಿಯ ಇತಿಮಿತಿಯೊಳಗೆ ತಕ್ಷಣ 100 ಕೋಟಿ ರೂಪಾಯಿಗಳನ್ನು ತೆಗೆಯುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದಿಂದ ಬರುವ ಹಣದಿಂದಲೂ ಬೇರೆಯವುಗಳಿಗೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ದೊಡ್ಡ ನೀರಾವರಿಗೆ ಸಂಬಂಧಪಟ್ಟಂತೆ ಕೃಷ್ಣಾ ಜಲ ಭಾಗ್ಯ ನಿಗಮವನ್ನು ಹೇಗೆ ಮಾಡಿದಿರೋ ಅದೇ ರೀತಿಯಲ್ಲಿ ಸಣ್ಣ ನೀರಾವರಿಗೂ ನಿಗಮವನ್ನು ಮಾಡಿ ಹಣವನ್ನು ಎತ್ತಿ.

ಶ್ರೀ ಸಿದ್ಧರಾಮಯ್ಯ :— ತಮ್ಮ ಸಲಹೆಯನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಇನ್ನು ಹೆಚ್.ಕೆ.ಡಿ.ಬಿ. ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಯಾವಾಗ ಹೇಳಿದಿರಿ?

ಶ್ರೀ ಸಿದ್ಧರಾಮಯ್ಯ :— ನಾನು ಈ ಹಿಂದೆಯೇ ಹೇಳಿದ್ದೇನೆ. 1994-95ರಲ್ಲಿ 66 ಕೋಟಿ ರೂಪಾಯಿಗಳನ್ನು ಇಡಲಾಗಿತ್ತು, ಇದರಲ್ಲಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ.ಗೆ 7ಕೋಟಿ ರೂಪಾಯಿಗಳನ್ನು ತೆಗೆದಿದೆ, ರಿವೈಸ್ಡ್ ಎಸ್ಟಿಮೇಟ್ 59 ಕೋಟಿ ರೂಪಾಯಿಗಳು, 46 ಕೋಟಿ ರುಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 1995-96ರಲ್ಲಿ 60 ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 600 ಲಕ್ಷ ರೂಪಾಯಿಗಳಾಗಿದ್ದು, 54 ಕೋಟಿ ರೂಪಾಯಿಗಳಲ್ಲಿ 45 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 1996-97ರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 17 ಕೋಟಿ ರುಪಾಯಿಗಳು ಹೋಗಿದೆ. 43 ಕೋಟಿ ರೂಪಾಯಿಗಳಲ್ಲಿ 43 ಕೋಟಿ ರೂಪಾಯಿಗಳನ್ನೂ ಕೂಡ ಬಿಡುಗಡೆ ಮಾಡಲಾಗಿದೆ. 1997-98 ರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 568 ಲಕ್ಷ ರೂಪಾಯಿಗಳು ಹೋಗಿದೆ. ಪ್ಲಾನ್‌ನಲ್ಲಿ ಕಟ್ ಆದ ಕಾರಣವಾಗಿ ಒಟ್ಟು 49 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನು 1998-99ರಲ್ಲಿ 65 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಪ್ಲಾನ್‌ನಲ್ಲಿ ಕಟ್ ಆದ ಕಾರಣದಿಂದ ಸ್ವಲ್ಪ ಕಡಿಮೆ ಖರ್ಚು ಮಾಡಲಾಗಿದೆ. ಒಟ್ಟಾರೆಯಾಗಿ ಇದರಲ್ಲಿ 13 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ನಾವು ಇಟ್ಟಿದ್ದರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಕಳೆದು ಉಳಿದಿರತಕ್ಕಂಥದ್ದನ್ನು ಖರ್ಚು ಮಾಡಿದ್ದೇವೆ. ಆದರೆ ಮಾನ್ಯ ಸದಸ್ಯರುಗಳು ಇನ್ನೂ ಹೆಚ್ಚು ಮಾಡಬೇಕೆನ್ನುವ ವಾದವನ್ನು ಮಂಡಿಸುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— 1993-94 ರಲ್ಲಿ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ :— ಆಗಲೂ 60 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಆಗ ಪೂಲ್ ಮಾಡುತ್ತಿರಲಿಲ್ಲ. ಈಗ ಪೂಲ್ ಮಾಡುತ್ತಿರುವುದರಿಂದ ಸ್ವಲ್ಪ ಕಡಿಮೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವು ಪೂಲ್ ಮಾಡಲಿಲ್ಲ ಪೂಲ್ ಮಾಡಿದಿರಿ.

ಶ್ರೀ ಸಿದ್ಧರಾಮಯ್ಯ :— ನೀವು ಪೂಲ್ ಆಗುವ ಜನವೇ? ಎಷ್ಟು ಅನುಭವ ನಿಮಗಿದೆ. ಇನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ 30 ಕೋಟಿ ರೂಪಾಯಿಗಳು ಇತ್ತು. ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 80 ಲಕ್ಷ ರೂಪಾಯಿಗಳನ್ನು ತೆಗೆದು ಇನ್ನು 221/2ಕೋಟಿ ರೂಪಾಯಿಗಳನ್ನು 1995-96 ರಲ್ಲಿ ಖರ್ಚು ಮಾಡಲಾಗಿದೆ. 1996-97ರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 21 ಕೋಟಿ ರೂಪಾಯಿಗಳು, 1997-98 ರಲ್ಲಿ ಪ್ಲಾನ್‌ನಲ್ಲಿ ಕಟ್ ಆದ ಕಾರಣದಿಂದ ಸ್ವಲ್ಪ ಕಡಿಮೆ ಖರ್ಚು ಮಾಡಲಾಗಿದೆ. ಆದರೆ ಉಳಿದ ವರ್ಷಗಳಲ್ಲಿ ಸರಿಯಾಗಿ ಖರ್ಚು ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಧ್ಯಕ್ಷರೆ, ಮೈನರ್ ಇರಿಗೇಶನ್‌ಗೆ ಮತ್ತು ಬಯಲು ಸೀಮೆಗೆ ಹಣವನ್ನು ಕೊಡಬೇಕು.

ಶ್ರೀ ಸಿದ್ಧರಾಮಯ್ಯ :— ಬಯಲು ಸೀಮೆಗೆ ಹೆಚ್ಚುವರಿಯಾಗಿ 7ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮೈನರ್ ಇರಿಗೇಶನ್‌ಗೆ?

ಶ್ರೀ ಸಿದ್ಧರಾಮಯ್ಯ :— ಈ ವರ್ಷ ಕೊಡುವುದಕ್ಕೆ ಆಗುವುದಿಲ್ಲ. ಆದರೆ ನೀವೇನು ನಿಗಮ ಮಾಡಬೇಕೆಂದು ಹೇಳಿದ್ದೀರಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಉಪ ಮುಖ್ಯಮಂತ್ರಿಗಳೆ, ಬಜೆಟ್ ಮೇಲೆ ಚರ್ಚೆ ಮಾಡುತ್ತಿರುವಂಥ ಈ ಸಂದರ್ಭದಲ್ಲಿ ಇರುವ ವಾಸ್ತವಾಂಶಗಳ ಬಗ್ಗೆ ತಾವು ಗಮನಿಸಬೇಕು. ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ ತಿಳಿದುಕೊಳ್ಳಬೇಕಾದ ನಿಟ್ಟಿನಲ್ಲಿ ಇವರ ಕಛೇರಿಗೆ ನಿನ್ನೆ ಬೆಳಿಗ್ಗೆ ಹೋಗಿಬಂದೆ. ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯಾವ ಕೆಲಸಗಳನ್ನೂ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ನೀವೇನು ಬಜೆಟ್‌ನಲ್ಲಿ ಹಣವನ್ನು ಇಟ್ಟಿದ್ದೀರೋ ಅದನ್ನಾದರೂ ಬಿಡುಗಡೆ ಮಾಡಿ. ಈಗಾಗಲೇ ಅಲ್ಲಿ ಯಾವ ಕೆಲಸಗಳು ಮುಗಿದುಹೋಗಿದೆಯೋ ಅದಕ್ಕೆ ಹಣವನ್ನು ಕೊಡಬೇಕಾದ್ದು ನಿಮ್ಮ ಕರ್ತವ್ಯವಾಗಿರುತ್ತದೆ. ನಾವಾಗಲಿ ನೀವಾಗಲಿ ಇಲ್ಲಿ ಕೇವಲ ಮಾತನಾಡುವುದರಿಂದ

ಪ್ರಯೋಜನವಿಲ್ಲ. ಇನ್ನೂ ಈ ವರ್ಷ 26 ಕೋಟಿ ರೂಪಾಯಿಗಳನ್ನು ಕೊಡಬೇಕಾದ ಬಾಕಿ ಇದೆ. ನಿನ್ನೆ ಈ ಬಗ್ಗೆ ನಾನು ವಿವರ ಪಡೆದುಕೊಂಡಿದ್ದೇನೆ. ಇದರಲ್ಲಿ 61/4 ಕೋಟಿ ರೂಪಾಯಿಗಳನ್ನು 8 ದಿನಗಳ ಕೆಳಗೆ ನೀವು ಬಿಡುಗಡೆ ಮಾಡಿದ್ದೀರಿ. ಇನ್ನೂ 193/4 ಕೋಟಿ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಬೇಕು. ಈಗಾಗಲೇ ಮಾಡಿರುವ ಕೆಲಸಗಳಿಗೆ ಹಣ ಕೊಡದಿದ್ದರೆ ಹೇಗೆ? ನಾನು ಅದಕ್ಕೋಸ್ಕರ ನೇರವಾಗಿ ಸರ್ಕಾರಕ್ಕೆ ಪ್ರಶ್ನೆ ಕೇಳುವುದೇನೆಂದರೆ ಇನ್ನೂ 193/4 ಕೋಟಿ ರೂಪಾಯಿಗಳನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ. ಹಣ ಬಾಕಿ ಇರುವ ಬಗ್ಗೆ ಬೇಕಾದರೆ ಕಾಡಾ ಮಂತ್ರಿಗಳಿಂದ ಸರ್ಕಾರ ವಿವರ ಪಡೆಯಬಹುದು.

ಶ್ರೀ ಸಿದ್ದರಾಮಯ್ಯ :— 1998-99ರಲ್ಲಿ ನಬಾರ್ಡ್‌ನದುಸೇರಿದಂತೆ ಬಜೆಟ್‌ನಲ್ಲಿ 34 ಕೋಟಿ ರೂಪಾಯಿಗಳಿತ್ತು. ಇದರಲ್ಲಿ ಎಸ್‌ಸಿಪಿ. ಮತ್ತು ಟಿಎಸ್‌ಪಿ.ಗೆ 9 ಕೋಟಿ ರೂಪಾಯಿಗಳನ್ನು ತೆಗೆದುಹಾಕಲಾಗಿದೆ. ಇನ್ನು ಉಳಿದುಕೊಂಡದ್ದು 25 ಕೋಟಿ ರೂಪಾಯಿಗಳು.

2.30 ಪಿ.ಎಂ.

25 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 18 ಕೋಟಿ, 75 ಲಕ್ಷ ರೂಪಾಯಿಗಳನ್ನು 3 ಕಂತುಗಳಲ್ಲಿ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಪ್ಲಾನ್ ಕಟ್ ಸ್ವಲ್ಪವಾಗಿದೆ. ಆದುದರಿಂದ ತಮಗೆ ಕೊಡಬೇಕಾದ್ದು ಎಲ್ಲಾ ಇದೆ. ಇನ್ನು ಉಳಿದಿದ್ದರೆ ಈ ತಿಂಗಳ ಕ್ಯಾಷ್‌ಫ್ಲೋ ನೋಡಿಕೊಂಡು ಕೊಡುವುದಕ್ಕೆ ಸಾಧ್ಯವಿದ್ದರೆ ನಾನು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು :— ಅಂಕಿಅಂಶ ನನ್ನ ಹತ್ತಿರವಿದೆ, ನಾನು ಓದಿ ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಸನ್ಮಾನ್ಯ ಸಿದ್ದರಾಮಯ್ಯನವರೆ, ಮೂರು ದಿವಸಗಳ ಕೆಳಗೆ ಮಲೆನಾಡು ಅಭಿವೃದ್ಧಿಮಂಡಳಿ ಅಧ್ಯಕ್ಷೆಯವರು ಎಲ್ಲರ ಒಂದು ಸಭೆಯನ್ನು ಕರೆದಿದ್ದರು ಆ ಸಭೆಯಲ್ಲಿ ಅವರು ಕೊಟ್ಟ ಅಂಕಿಅಂಶಗಳನ್ನು ನಾನು ತಮಗೆ ಕೊಟ್ಟಿರುತ್ತೇನೆ. 1999-2000ನೇ ಸಾಲಿಗೆ ನಲವತ್ತು ಕೋಟಿ ರೂಪಾಯಿಗಳಷ್ಟು ಅನುದಾನವನ್ನು ತಾವು ಬಿಡುಗಡೆ ಮಾಡಬೇಕಾಗಿತ್ತು. ವಿಶೇಷ ಘಟಕಯೋಜನೆಗೆ ಏಳು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಹೋಯಿತು ಇನ್ನು ಮೂವತ್ತೆರಡು ಕೋಟಿ ಎಂಭತ್ತು ಲಕ್ಷ ರೂಪಾಯಿಗಳು ಇನ್ನು ಬಾಕಿ. ಆದಾದನಂತರ ಸರ್ಕಾರ ಹಾಗೂ ಅಧ್ಯಕ್ಷರ ವಿವೇಚನೆಯ ನಿಧಿಯಿಂದ ಅವರು ಶೇಕಡ ಹತ್ತು ಅಂದರೆ ಮೂರುಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿ ಕೇಳಿದ್ದಾರೆ ಇಪ್ಪತ್ತೊಂಬತ್ತು ಕೋಟಿ ಐವತ್ತೆರಡು ಲಕ್ಷ ರೂಪಾಯಿಗಳು ಆ ಸಂದರ್ಭಕ್ಕೆ ಬಾಕಿ. ನಬಾರ್ಡ್‌ಗೆ ಹದಿನಾರು ಕೋಟಿ ರೂಪಾಯಿಗಳನ್ನಾ ತೆಗೆದುಹಾಕಿದ್ದಾರೆ. ಇನ್ನು ಹದಿಮೂರು ಕೋಟಿ ಐವತ್ತೆರಡು ಲಕ್ಷ ರೂಪಾಯಿಗಳಷ್ಟು ಅನುದಾನ ಉಳಿದಿದೆ. 1991-92 ನೇ

ಸಾಲಿಗೆ ಅವರು ಮೂವತ್ತೆರಡು ಕೋಟಿ ರೂಪಾಯಗಳನ್ನು ಅವರು ಯೋಜನೆಗೆ ಇಟ್ಟುಕೊಂಡು ಬಂದಿದ್ದಾರೆ. ಒಟ್ಟು ಬಿಡುಗಡೆಯಾಗಿರುವ ಅನುದಾನ ಹದಿನೆಂಟು ಮುಕ್ಕಾಲು ಕೋಟಿ, ಖೋತ ಅನುದಾನ ಹತ್ತೊಂಭತ್ತು ಮುಕ್ಕಾಲು ಕೋಟಿ. ಅಧ್ಯಕ್ಷರೆ ಅವರು ಸಭೆಯಲ್ಲಿ ಕೊಟ್ಟಿರುವ ಡಾಕ್ಯುಮೆಂಟ್‌ಗಳನ್ನು ನಾನು ತಮ್ಮ ಮುಖಾಂತರ ಅವರಿಗೆ ಕಳುಹಿಸಿಕೊಂಡುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ :— ನಿಮಗೆ ಗೊತ್ತಿರುವಂತೆ ಒಂದು ಕಂತು ಎಂದರೆ ಆರು ಕೋಟಿ ರೂಪಾಯಿಗಳು ಸಿಗುತ್ತದೆ, ಮೂರು ಕಂತಿನದು ಹದಿನೆಂಟು ಕೋಟಿ ಚಿಲ್ಲರೆ ಬಿಡುಗಡೆ ಮಾಡಿದ್ದೇವೆ, ಕೊಡಬೇಕಾಗಿರುವುದು ಇಪ್ಪತ್ನಾಲ್ಕು ಕೋಟಿ ರೂಪಾಯಿಗಳು ಆರು ಕೋಟಿ ಚಿಲ್ಲರೆ ಯೋಜನೆಯಲ್ಲಿ ಖರ್ಚು ಮಾಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಆ ಮಂತ್ರಿಗಳಿದ್ದಾರೆ ಅವರನ್ನಾದರು ದಯವಿಟ್ಟು ಕೇಳಿ.

ಶ್ರೀ ಸಿದ್ಧರಾಮಯ್ಯ :— ನಾನು ಅಧ್ಯಕ್ಷರೊಡನೆ ಮಾತನಾಡಿ ನಮ್ಮ ಅಂಕಿಅಂಶಗಳು ಅವರ ಅಂಕಿಅಂಶಗಳಿಗೆ ಏನಾದರೂ ವ್ಯತ್ಯಾಸಗಳಿದ್ದರೆ ನಾನು ಸರಿಪಡಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಈಗ ಆಗಿರುವ ಕೆಲಸಕ್ಕೆ ಹಣವನ್ನು ತಕ್ಷಣ ಬಿಡುಗಡೆ ಮಾಡುತ್ತೀರಾ?

ಶ್ರೀ ಸಿದ್ಧರಾಮಯ್ಯ :— ಈಶ್ವರಪ್ಪನವರೆ ಕೇಳಿ, ನನ್ನ ಪ್ರಕಾರ ಮೂವತ್ನಾಲ್ಕು ಕೋಟಿ ಇದ್ದದ್ದು, ಇದರಲ್ಲಿ ಒಂಬತ್ತು ಕೋಟಿ ಎಸ್‌ಸಿಪಿ, ಟಿಎಸ್‌ಪಿಗೆ ಹೋಗಿದೆ, ಇನ್ನು ಇಪ್ಪತ್ತೆದು ಕೋಟಿಯಲ್ಲಿ ಆರು ಕೋಟಿ ಇಪ್ಪತ್ತೆದು ಲಕ್ಷ ಯೋಜನೆಯಲ್ಲಿ ಕಟ್ ಆಗಿದೆ. ಇನ್ನು ಉಳಿದಿರತಕ್ಕಂಥದ್ದು ಹದಿನೆಂಟು ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳು ಬಿಡುಗಡೆ ಮಾಡಿದ್ದೇವೆ, ಇದು ನನ್ನಲ್ಲಿರುವ ಅಂಕಿಅಂಶಗಳು.

ಶ್ರೀ ಕೆ.ಎಸ್. ಈಶ್ವರಪ್ಪ :— ಅಧ್ಯಕ್ಷರೆ ನಾವು ಹೇಳುವುದು ಬೇಡ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್ :— ತಾವು ಸಂಬಂಧಿಸಿದ ಮಂತ್ರಿಗಳನ್ನು ಒಂದು ಮಾತನ್ನು ಕೇಳುವುದರಲ್ಲಿ ತಪ್ಪೇನು ಇಲ್ಲ.

ಶ್ರೀ ಕೆ. ವೆಂಕಟೇಶ್ (ಅಭಿವೃದ್ಧಿ ಮತ್ತು ಕಾಡ ರಾಜ್ಯ ಸಚಿವರು) :— ಮಾನ್ಯ ಉಪಮುಖ್ಯಮಂತ್ರಿಯವರು ಕೊಟ್ಟಿರುವ ಅಂಕಿಅಂಶಗಳು ಸರಿಯಾಗಿದೆ. ಕಳೆದ ವರ್ಷ ಪ್ಲಾನ್ ಕಟ್ ಮಾಡಿ ನಮಗೆ ಹಣ ಕೊಡದೆ ಇರುವುದು ನಮಗೆ ಕಡಿಮೆಯಾಗಿರುವುದರಿಂದ ಲೆಕ್ಕ ವ್ಯತ್ಯಾಸವಾಗಿದೆ. ಆದುದರಿಂದ ಅದನ್ನು ಕೊಟ್ಟರೆ ಸರಿಹೋಗುತ್ತದೆ.

ಶ್ರೀ ಹಾಗೋಡು ತಿಮ್ಮಪ್ಪ :— ನೀವು ಮೂವತ್ತು ಕೋಟಿ ರೂಪಾಯಿಗಳಿಗೆ ಕಾರ್ಯಕ್ರಮ ರೂಪಿಸಿ ಅಪ್ರೂವಲ್ ಕೊಟ್ಟಿದ್ದರೊ ಇಲ್ಲವೊ ಅದರ ಪ್ರಕಾರ ಕೆಲಸವಾಗಿದೆಯೋ ಇಲ್ಲವೋ, ಇವತ್ತು ಆ ಮೂವತ್ತು ಕೋಟಿ ರೂಪಾಯಿಗಳನ್ನು ಕೊಡಿ.

ಶ್ರೀ ಸಿದ್ಧರಾಮಯ್ಯ :— ಈಶ್ವರಪ್ಪನವರೆ ಕೇಳಿ, ಕಳೆದ ವರ್ಷ ಏನು ಪ್ಲಾನ್ ಕಟ್ ಆಯಿತು, ಅದನ್ನು ಕಟ್ ಮಾಡಬೇಡಿ, ನಮಗೆ ಆ ಹಣವನ್ನು ಸೇರಿಸಿಕೊಡಿ, ಅದನ್ನು ಸೇರಿಸಿ ಆಕ್ಷನ್ ಪ್ಲಾನ್ ಮಾಡಿಬಿಟ್ಟಿದ್ದೇವೆ ಎಲ್ಲವನ್ನೂ ಸೇರಿಸಿ ಕೊಡಿ ಎಂದು ಅವರು ಹೇಳುವುದು. ನಾನು ಅವರೊಡನೆ ಕುಳಿತು ಮಾತನಾಡಿ ಇನ್ನು ಎಷ್ಟು ಕೊಡುವುದಕ್ಕೆ ಸಾಧ್ಯವೊ ನೋಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಸಭಾಧ್ಯಕ್ಷರೆ, ಈ ಮಲೆನಾಡು ಅಭಿವೃದ್ಧಿಮಂಡಳಿಗೆ ಇವರೇನು ಪ್ರಾಮಾಣಿಕವಾಗಿ ಹಣ ಕೊಡಬೇಕಾಗಿತ್ತು ಅದನ್ನು ಕೊಡುತ್ತಿಲ್ಲ. ಮತ್ತೆ ಪ್ರತಿ ಶಾಸಕರ ಕ್ಷೇತ್ರಗಳಿಗೆ ಪಾರ್ಲಿಮೆಂಟ್ ಸದಸ್ಯರಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಅದನ್ನು ಕೇಳಿದ್ದು ಅದನ್ನು ಕೊಡುತ್ತಿಲ್ಲ, ಅದನ್ನು ಕೊಡಬೇಕೆಂದು ಒತ್ತಾಯ ಮಾಡಿ ನಾನು ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಈ ಸಂದರ್ಭದಲ್ಲಿ ಸದನದ ಬಾವಿಗೆ ಬಂದು ಧರಣಿ ಕುಳಿತರು)

ಶ್ರೀ ಕೆ.ಎಸ್. ಈಶ್ವರಪ್ಪ :— ಈ ಆಯವ್ಯಯದಲ್ಲಿ ಕೈಗಾರಿಕೋದ್ಯಮಿಗಳು ಸೇರಿದಂತೆ ಎಲ್ಲರಿಗೆ ದ್ರೋಹ ಮಾಡಿದ್ದಾರೆ, ಸರ್ಕಾರದ ಬಡ್ಜೆಟ್ ವಿರುದ್ಧವಾಗಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ಶ್ರೀ ಕೆ.ಎಸ್. ಈಶ್ವರಪ್ಪನವರು ಸೇರಿದಂತೆ ಎಲ್ಲಾ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿದ್ಧರಾಮಯ್ಯ :— ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಎಂಪಿಗಳ ರೀತಿ ಎಂಎಲ್‌ಎಗಳಿಗೆ ಕೊಡಿ ಎಂದು ಕೇಳಿದರೆ ಅದು ಸಾಧ್ಯವಿಲ್ಲ. ನಾವು ಈ ಸಾರಿ ಬಿಡಿಬ್ಲ್ಯೂಡಿನಲ್ಲಿ ಹೆಚ್ಚು ಹಣವನ್ನು ಇಟ್ಟಿದ್ದೇವೆ, ಆಯಾ ಎಂಎಲ್‌ಎ ಕ್ಷೇತ್ರದಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡುವ ಪ್ರಯತ್ನವನ್ನು ಮಾಡುತ್ತೇವೆ ಇಷ್ಟು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರ ಗಮನಕ್ಕೆ ಎರಡು ಅಂಶಗಳನ್ನು ತರುವುದಕ್ಕೆ ಬಯಸುತ್ತೇನೆ.

ಸೇಲ್ಸ್ ಟ್ಯಾಕ್ಸ್ ಸೆಕ್ಷನ್ 2 ಡಿಫಿನಿಷನ್‌ನಲ್ಲಿ 1ಸಿ ಏನು ಮಾಡಿದ್ದೀರೆಂದರೆ, ಇದು ಕಣ್ಣುತಪ್ಪಿ ಹೋಗಿದೆ, ಆದರೆ ಅದರ ಪರಿಣಾಮ ಕೃಷಿ ಕ್ಷೇತ್ರದಲ್ಲಿ ಬಹಳವಾಗುತ್ತದೆ. ಸೆಕ್ಷನ್ 2, 1ಸಿ ನಲ್ಲಿ ಹಿಂದೆ ಏನಾಗಿದೆ ಎಂದರೆ ಬೀಡಿ ಎಲೆಗಳು ಕಚ್ಚಾ ಗೋಡಂಬಿ, ಹುಣಸೆ ಹಣ್ಣು ಇತ್ಯಾದಿಗಳು ಮೊದಲು ಇರಲಿಲ್ಲ. ಈಗ ಅದನ್ನೆಲ್ಲಾ ಡಿಫಿನಿಷನ್‌ನಲ್ಲಿ ಟೀ ಜೊತೆಯಲ್ಲಿ ತೆಗೆದುಕೊಂಡಿರಿ. ಒಂದು ರೀತಿಯಲ್ಲಿ ಇವನ್ನೆಲ್ಲಾ ಎಸ್ಟೇಟ್ ಪ್ರಾಡಕ್ಟ್ ಎಂದೆ ತೆಗೆದುಕೊಂಡಂತಾಗುತ್ತದೆ, ಇದರಿಂದ ಬಹಳ ದುಷ್ಪರಿಣಾಮವಾಗುತ್ತದೆ, ಇದರಿಂದ ಪ್ರವೇಶ ತೆರಿಗೆ ಬೀಳುತ್ತದೆ. ಬೀಡಿ ಎಲೆಗಳು, ಬೀಡಿ ಉದ್ಯಮದಲ್ಲಿ ನಮ್ಮ ಜಿಲ್ಲೆ, ಮೈಸೂರು ಸೇರಿದಂತೆ ಎಲ್ಲಾ ಕಡೆ ಒಟ್ಟು ಕರ್ನಾಟಕದಲ್ಲಿ 12, 13 ಲಕ್ಷ ಜನರಿದ್ದಾರೆ. ಈಗಾಗಲೇ ಸಣ್ಣಸಣ್ಣ ಸಿಗರೇಟ್‌ಗಳು ಬಂದು ಬೀಡಿ ಉದ್ಯಮಕ್ಕೆ ಬಹಳ ತೊಂದರೆಯಾಗಿದೆ. ಇದರಿಂದ ಬೀಡಿ ಉದ್ಯಮದ ಕ್ಷೇತ್ರವೆ ಕುಸಿದುಹೋಗುತ್ತದೆ. ಈಗಾಗಲೇ ಕಡಿಮೆಯಾಗಿದೆ ಇನ್ನು ಮುಂದೆಯು ಕಡಿಮೆಯಾಗುತ್ತದೆ. ತಾವೇನು ಬೀಡಿ ಉದ್ಯಮದವರು ಬಹಳ ಶ್ರೀಮಂತರು ಎಂದು ತಿಳಿದುಕೊಂಡಿದ್ದಿರಿ. ಇದು ಡಿಫಿನಿಷನ್ ಒಳಗೆ ಸೇರಿದ್ದರಿಂದ ಈಗ ಪ್ರವೇಶ ತೆರಿಗೆ ಹಾಕಬೇಕು. ನಾನು ಇದನ್ನು ಪರೀಕ್ಷೆ ಮಾಡಿದ್ದೇನೆ, ತಾವು ಅದನ್ನು ಬಹಳ ಒಂದು ಗೌಪ್ಯವಾಗಿ ಇಟ್ಟುಕೊಂಡಿದ್ದಿರಿ, ಆದರೆ ಅದರ ದುಷ್ಪರಿಣಾಮ ಆ ಬೀಡಿ ಉದ್ಯಮದ ಮೇಲೆ ಬಹಳವಾಗುತ್ತದೆ ಇನ್ನೊಂದು ಕಚ್ಚಾ ಗೋಡಂಬಿಯ ಮೇಲು ಹಾಕಿದ್ದೀರಿ. ಗೋಡಂಬಿಗೆ ಎಲ್ಲಾ ಹಂತದಲ್ಲೂ ತೆರಿಗೆ ಇದೆ. ಈಗ ಕಚ್ಚಾ ಗೋಡಂಬಿಗೂ ಕೂಡ ಪ್ರವೇಶ ತೆರಿಗೆ ಬರುತ್ತದೆ, ಸೇಲ್ಸ್ ಟ್ಯಾಕ್ಸ್ ಸೇರಿದಂತೆ ನಾಲ್ಕೈದು ತೆರಿಗೆಗಳು ಬೀಳುತ್ತವೆ. ತಾವು ಸರಿಳೀಕರಣ ಮಾಡುತ್ತೇವೆಂದು ಹೇಳಿದ್ದೀರಿ, ಹಾಗಾದರೆ ಇದಕ್ಕೆ ನಾಲ್ಕೈದು ಹಂತಗಳಲ್ಲಿ ಇದಕ್ಕೆ ತೆರಿಗೆ ಬೀಳುತ್ತದೆ, ದಕ್ಷಿಣ ಕನ್ನಡ ಒಂದೇ ಜಿಲ್ಲೆಯಲ್ಲಿ ಸುಮಾರು 200 ಕಾರ್ಖಾನೆಗಳಿದ್ದಾವೆ, ಅದರಲ್ಲೂ ನನ್ನ ಕ್ಷೇತ್ರದಲ್ಲಿ 35 ಕಾರ್ಖಾನೆಗಳು ಬರುತ್ತವೆ, ಸುಮಾರು ನಾಲ್ಕು ಲಕ್ಷ ಜನರು ಇವತ್ತು ಈ ಗೋಡಂಬಿ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಎರಡು ವರ್ಷ ಗೋಡಂಬಿ ವ್ಯಾಪಾರ ಸರಿ ಇದ್ದರೆ, ಇನ್ನು ಮೂರು ವರ್ಷ ಸರಿಯಾಗಿ ನಡೆಯುವುದೇ ಇಲ್ಲ. ಆದುದರಿಂದ ಇದು ಬಹಳ ಗಂಭೀರವಾದ ವಿಚಾರ, ತಾವು ದಯಮಾಡಿ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಇನ್ನು ಗೊಬ್ಬರದ ಮೇಲೆ ಶೇಕಡ 2ರಷ್ಟು ಟಿಒಟಿ ಹಾಕಿದ್ದೀರಿ. ತಾವು ಇದಕ್ಕೆಲ್ಲಾ ವಿನಾಯಿತಿಯನ್ನು ಕೊಡಬೇಕು, ಏಕೆಂದರೆ ತಾವು ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳಾಗಿದ್ದು ಇದಕ್ಕೆಲ್ಲಾ ಹೋರಾಟ ಮಾಡಬೇಕು. ಏಕೆಂದರೆ, ನಾನು 1980 ರಲ್ಲಿ ಕೃಷಿ ಆದಾಯ ತೆರಿಗೆಯನ್ನು ಈ ಕಾಫಿ ಎಸ್ಟೇಟ್‌ಗೆ ತೆಗೆದುಹಾಕಿದ್ದೆವು. ಈಗ ಇದು ಬಂತು, ಇನ್ನೊಬ್ಬರು ಹಣಕಾಸು ಮಂತ್ರಿಗಳು ಬರುತ್ತಾರೆ ಕೃಷಿ ಆದಾಯ ತೆರಿಗೆ ಎಂದು ಹಾಕುತ್ತಾರೆ. ಏಕೆಂದರೆ ಎಸ್ಟೇಟ್ ಪ್ರಾಡಕ್ಟ್‌ಗೆ ಸರಿಸಮಾನವಾಗಿ ಇದನ್ನೆಲ್ಲಾ ಟ್ರೀಟ್ ಮಾಡಿದರೆ ಬಹಳ ದುಷ್ಪರಿಣಾಮವಾಗುತ್ತದೆ, ದಯಮಾಡಿ ತಾವು ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಮತ್ತೆ ಗೊಬ್ಬರದ ಮೇಲೆ ಕೂಡ ಟಿಒಟಿ ಹಾಕಿದ್ದೀರಿ,

ಇದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಇನ್ನೊಂದು ಮ್ಯಾಕ್ಸಿಕ್ಯಾಬ್‌ಗಳು ಹತೋಟಿಯಲ್ಲಿಲ್ಲವೆಂದು ಈ ರೀತಿ ತೆರಿಗೆಯನ್ನು ಹಾಕಿದರೆ ಸ್ವಯಂ ಉದ್ಯೋಗಿಗಳಾಗಿರುವ ಆ ಬಡವರೇನಾಗಬೇಕು? ಈಗ ಐನೂರು, ಏಳುನೂರು ರೂಪಾಯಿಗಳನ್ನು ಜಾಸ್ತಿ ಮಾಡಿದ್ದೀರಿ, ಮ್ಯಾಕ್ಸಿಕ್ಯಾಬ್‌ಗಳು ಇಲ್ಲವೇ ಇಲ್ಲವೆಂದು ತೆಗೆಸಿಬಿಡಿ. ಆದರೆ ಆ ಮ್ಯಾಕ್ಸಿಕ್ಯಾಬ್‌ನವರು ಬದುಕುವುದನ್ನು ನೋಡಬೇಕಲ್ಲ. ಅಲ್ಪಸಂಖ್ಯಾತರ ಬಗ್ಗೆ ಕೊನೆಯ ಪ್ರಶ್ನೆಯನ್ನು ಕೇಳುತ್ತೇನೆ. ಮೈನಾರಿಟೀಸ್ ಬಗ್ಗೆ 40-45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಾವು ಒಂದು ಸರ್ವೆ ಮಾಡಿದ್ದೇವೆ. ಅದು ಬಹಳ ಉಪಯುಕ್ತವಾಗಿದೆ. ಅದರ ಆಧಾರದ ಮೇಲೆ ನೀವು ನಿಮ್ಮ ಸೋಷಿಯೋ, ಎಕನಾಮಿಕ್ ಮತ್ತು ಎಜುಕೇಷನಲ್ ಕಾರ್ಯಕ್ರಮಗಳನ್ನು ರೂಪಿಸಲು ಸುಲಭವಾಗುತ್ತದೆ. ಆಗ ಹಣ ನಿಜವಾಗಿ ಯಾವ ದಿಕ್ಕಿನಲ್ಲಿ ಹೋಗಬೇಕು, ಯಾವ ಕಾರ್ಯಕ್ರಮಕ್ಕೆ ತಲುಪಬೇಕು ಅಲ್ಲಿಗೆ ತಲುಪುತ್ತದೆ. ದೇವರಾಜ ಅರಸುರವರ ಹೆಸರಿನಲ್ಲಿ ಒಂದು ಸಂಶೋಧನಾ ಸಂಸ್ಥೆಯನ್ನು ಮಾಡಿದ್ದೇವೆ. ಸರ್ವೆ ಮಾಡಬೇಕು ಎಂದು ಸರ್ಕಾರೀ ಆದೇಶ ಕೂಡ ಇದೆ. ಆದ್ದರಿಂದ ಎಸ್‌ಸಿ : ಎಸ್‌ಟಿಯವರ ಬಗ್ಗೆಯೂ ಒಂದು ಮೆಕ್ರೊ ಸರ್ವೆ ಮಾಡಬೇಕು. ಮೈನಾರಿಟೀಸ್ ಬಗ್ಗೆ ಹೌಸ್ ಟು ಹೌಸ್ ಸರ್ವೆ ಮಾಡಿದ ಹಾಗೆ ಅವರ ಬಗ್ಗೆಯೂ ಒಂದು ಸರ್ವೆ ಮಾಡಬೇಕು. ಅದಕ್ಕೆ ಹೆಚ್ಚಿಂದರೆ ಒಂದು ಕೋಟಿ ರೂಪಾಯಿ ಬೇಕಾಗುತ್ತದೆ. ಅದು ಬಹಳ ಉಪಯುಕ್ತವಾಗುತ್ತದೆ. ಈ ಸರ್ವೆ ಎಲ್ಲಾ ಕಾಲಕ್ಕೂ ಕೂಡ ಬಹಳ ಉಪಯುಕ್ತವಾದುದು. ಇದು ನಿಮ್ಮ ಸೋಷಿಯೋ, ಎಕನಾಮಿಕ್ ಮತ್ತು ಎಜುಕೇಷನಲ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಾಯಕ ಮಾಡುತ್ತದೆ. ಇಷ್ಟು ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಬಿ.ಐ.ಡಿ.ಪಿ.ಯ ಗಡಿ ಅಭಿವೃದ್ಧಿ ಯೋಜನೆ ಎಂದು ಇದೆ. ಅದಕ್ಕೆ ಹಣವನ್ನು ನಿಗದಿ ಮಾಡುತ್ತಿಲ್ಲ. ಗಡಿ ವಿಭಾಗದಲ್ಲಿರುವ ಕ್ಷೇತ್ರಗಳಿಗೆ, ಒಂದೊಂದು ಕ್ಷೇತ್ರಕ್ಕೆ 3-4 ಲಕ್ಷ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಡುತ್ತಿದ್ದಾರೆ. ಗಡಿನಾಡು ಅಭಿವೃದ್ಧಿ ಯೋಜನೆಗಾಗಿ ಹಿಂದೆ ಇಟ್ಟಿದ್ದಂಥ ಹಣದಲ್ಲಿ ಅರ್ಧ ಕಡಿಮೆ ಮಾಡಿದ್ದಾರೆ. ಆದ್ದರಿಂದ ಬಿ.ಐ.ಡಿ.ಪಿ.ಗೆ ಹೆಚ್ಚು ಹಣ ಕೊಡಬೇಕು. ಗಡಿ ಪ್ರದೇಶಗಳು ಅಭಿವೃದ್ಧಿಯಾಗಬೇಕು. ಅಲ್ಲಿ ಹಲವಾರು ಸಮಸ್ಯೆಗಳಿವೆ. ಇವು ಹಿಂದುಳಿದಿರತಕ್ಕಂಥ ಪ್ರದೇಶಗಳು. ಎರಡನೆಯದಾಗಿ, ಈ ವರ್ಷದ ಬಜೆಟ್‌ನಲ್ಲಿ ಒಂದೇ ಒಂದು ಹೊಸ ಹೈಸ್ಕೂಲನ್ನು ಕೊಡುವುದಕ್ಕೆ ಪ್ರಾವಿಷನ್ ಮಾಡಿಲ್ಲ, ಅದೇ ರೀತಿ ಜೂನಿಯರ್ ಕಾಲೇಜುಗಳಿಗೆ ಪ್ರಾವಿಷನ್ ಮಾಡಿಲ್ಲ. ಶಿಕ್ಷಣಕ್ಕೆ ನಾವು ಹೆಚ್ಚು ಪ್ರಾತಿನಿಧ್ಯ ಕೊಡುತ್ತೇವೆ ಎಂದು ಹೇಳಿಕೊಳ್ಳತಕ್ಕಂಥವರು, ಈ ವರ್ಷ ಒಂದೇ ಒಂದು ಹೊಸ ಹೈಸ್ಕೂಲನ್ನು ಕೊಡಲು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಲ್ಲ, ಜೂನಿಯರ್ ಕಾಲೇಜುಗಳಿಗೂ ಪ್ರಾವಿಷನ್ ಮಾಡಿಲ್ಲ. ಆದ್ದರಿಂದ ಇದಕ್ಕೆ ಪ್ರಾವಿಷನ್ ಮಾಡಬೇಕು, ಗಡಿ ಅಭಿವೃದ್ಧಿ ಯೋಜನೆಗೆ ಹೆಚ್ಚು ಹಣವನ್ನು ಕೊಡಲೇಬೇಕು. ತಾವು ಉತ್ತರ ಕೊಡುವಾಗ ಹಣ ಕೊಡುತ್ತೇವೆ ಎಂದು ಹೇಳುವಂಥಾದ್ದು ಆಗಬೇಕು. ಮತ್ತು ಗೊಬ್ಬರದ ಮೇಲೆ ಹಾಕಿರತಕ್ಕಂಥ ಶೇ. 2ರಷ್ಟು

ಟಿ.ಓ.ಟಿಯನ್ನು ತೆಗೆಯಬೇಕು. ಎಲ್ಲಾ ಶಾಸಕರ ಕ್ಷೇತ್ರಕ್ಕೆ ಕನಿಷ್ಟ 50 ಲಕ್ಷ ರೂಪಾಯಿಗಳಷ್ಟು ಕೊಡಬೇಕು ಎಂದು ಮಾಟಾಳ್ ನಾಗರಾಜ್ ರವರು ಧರಣಿ ಕುಳಿತಿದ್ದಾರೆ, ದಯವಿಟ್ಟು ಅದನ್ನು ಕೊಡಬೇಕು. ಇಲ್ಲದಿದ್ದರೆ ಭಾರೀ ಸಮಸ್ಯೆಯಾಗುತ್ತದೆ. ನಾವು ನಮ್ಮ ಕ್ಷೇತ್ರಗಳಲ್ಲಿ ಯಾವುದೇ ಕಾರ್ಯಕ್ರಮವನ್ನು ಮಾಡಲು ಆಗುವುದಿಲ್ಲ. ಈ ನಾಲ್ಕು ಅಂಶಗಳಿಗೆ ನೀವು ದಯವಿಟ್ಟು ಸೂಕ್ತ ಉತ್ತರ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :— ಹೋದಸಾರಿ ಗೊಬ್ಬರದ ಮೇಲೆ ಶೇ. 4ರಷ್ಟು ಟಿ.ಓ.ಟಿ. ಇದ್ದುದರಿಂದ ನಮ್ಮ ರಾಜ್ಯಕ್ಕೆ ಗೊಬ್ಬರವೇ ಬರಲಿಲ್ಲ. ಮಾರಾಟ ಮಹಾ ಮಂಡಲದ ಅಧ್ಯಕ್ಷನಾಗಿದ್ದಾಗ ನನಗೆ ಬಂದಂಥ ಕಷ್ಟವೇನೆಂದರೆ, ಗೊಬ್ಬರ ಉತ್ಪಾದಕರು ನಿಮ್ಮ ರಾಜ್ಯಕ್ಕೆ ಗೊಬ್ಬರ ತರಲು ಆಗುವುದಿಲ್ಲ ಎಂದು ಹೇಳಿ ಒಂದು ಸಾವಿರ ಟನ್ ಪೊಟ್ಯಾಷ್ ಮಾಡಿಸಿದುದನ್ನು ತೆಗೆದುಕೊಂಡು ಹೋಗಿ ಬೇರೆ ರಾಜ್ಯಕ್ಕೆ ಕೊಟ್ಟರು. ಆದ್ದರಿಂದ ಮಾನ್ಯ ಸಚಿವರು ಗೊಬ್ಬರದ ಮೇಲಿನ ಶೇ.2 ರ ಟಿ.ಓ.ಟಿ.ಯನ್ನು ತೆಗೆಯದಿದ್ದರೆ ಮತ್ತೆ ನಮಗೆ ಗೊಬ್ಬರದ ಅಭಾವ ಬರುತ್ತದೆ, ನಮ್ಮ ರಾಜ್ಯದಲ್ಲಿ ಗೊಬ್ಬರ ಸಿಗುವುದಿಲ್ಲ. ದಯವಿಟ್ಟು ಇದನ್ನು ತೆಗೆಯಲೇಬೇಕು ಎಂದು ತಮ್ಮ ಮೂಲಕ ಮಂತ್ರಿಗಳಿಗೆ ಆಗ್ರಹಪಡಿಸುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ 40 ಸಾವಿರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ಕೊಟ್ಟಿದ್ದೇವೆ ಎಂದು ಈಗಾಗಲೇ ಉಪಮುಖ್ಯಮಂತ್ರಿಗಳು ಹೇಳಿದರು. ದುರ್ದೈವವೆಂದರೆ, ನಮ್ಮಲ್ಲಿ ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಡಿಕ್ಲೇರ್ ಮಾಡಿರುವುದರಿಂದ 1994 ರಿಂದ ಈಚೆಗೆ ಒಂದು ಐ.ಪಿ.ಸೆಟ್ ಕನೆಕ್ಷನ್ ಕೂಡ ಕೊಟ್ಟಿಲ್ಲ. ಕೊಡಬೇಕಾದರೂ ಸೆಲ್ಫ್ ಫೈನ್ಯಾನ್ಸಿನ ಸ್ಕೀಮಿನಲ್ಲಿ ಕೊಡುತ್ತಾರೆ. ಒಬ್ಬ ರೈತ ಐ.ಪಿ. ಸೆಟ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಆತನಿಗೆ 20ರಿಂದ 25 ಸಾವಿರ ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಸರ್ವೀಸ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೂ ಕನಿಷ್ಟವೆಂದರೆ 5 ಸಾವಿರ ರೂಪಾಯಿಗಳು ಖರ್ಚು ಬೀಳುತ್ತದೆ. ಅವೈಜ್ಞಾನಿಕವಾಗಿ ಡಾರ್ಕ್ ಮತ್ತು ಗ್ರೇ ಏರಿಯಾಗಳೆಂದು ಡಿಕ್ಲೇರ್ ಮಾಡಿದ್ದಾರೆ. ಡಿಕ್ಲೇರ್ ಮಾಡುವಾಗ ಕೂಡ, ಡಾರ್ಕ್ ಮತ್ತು ಗ್ರೇ ಎನ್ನುವುದನ್ನು ತೆಗೆದುಹಾಕಿ ಎಂದು ನಾವು ಬಹಳ ವಿನಂತಿ ಮಾಡಿಕೊಂಡೆವು. ಆದರೆ ಅದನ್ನು ತೆಗೆದುಹಾಕಲಿಲ್ಲ. ಐ.ಪಿ.ಸೆಟ್ ಕನೆಕ್ಷನ್ ಕೊಡುವಾಗ ಒಬ್ಬ ರೈತ ಕನಿಷ್ಟವೆಂದರೆ 20-25 ಸಾವಿರ ರೂಪಾಯಿಗಳು ಕೊಡಬೇಕಾಗುತ್ತದೆ. ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಡಿಕ್ಲೇರ್ ಮಾಡಿರುವುದರಿಂದ ಬ್ಯಾಂಕ್ ಲೋನ್ ಸಹಾ ನಿಂತು ಹೋಗಿವೆ. ದಯಮಾಡಿ ಅದನ್ನು ರಿವ್ಯೂ ಮಾಡಬೇಕು. ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ಡಿಕ್ಲೇರ್ ಮಾಡಿದ ಕಡೆಗಳಲ್ಲಿ 1994 ರಿಂದ ಇಲ್ಲಿಯವರೆಗೆ ಒಂದು ಐ.ಪಿ.ಸೆಟ್ ಕನೆಕ್ಷನ್ ಸಿಕ್ಕಿಲ್ಲ. ರಾಜ್ಯದಲ್ಲಿ ಇಂಥ ಏಳು ತಾಲ್ಲೂಕುಗಳಿವೆ. ದಯಮಾಡಿ ಇದನ್ನು ಪರಿಶೀಲಿಸಿ ಉತ್ತರ ಕೊಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಮಾನ್ಯ ಅಧ್ಯಕ್ಷರೇ, ಗೊಬ್ಬರದ ಮೇಲಿನ ಟಿ.ಓ.ಟಿ.ಯನ್ನು ತೆಗೆಯಲಿಲ್ಲವೆಂದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆ ಟಿ.ಓ.ಟಿ.ಯನ್ನು ತೆಗೆಯಬೇಕೆಂದು ಪ್ರತಿಯೊಬ್ಬರೂ ಹೇಳಿದ್ದಾರೆ. ಮಾರ್ಕೆಟಿಂಗ್ ಮಹಾಮಂಡಲದ ಅಧ್ಯಕ್ಷರೂ ಕೂಡ ಅದನ್ನು ಹೇಳಿದರು. ಮೊಯ್ಲಿಯವರು ಹೇಳಿದ್ದು ಬಹಳ ಕರೆಕ್ಟಾಗಿದೆ. ಅದನ್ನು ತೆಗೆಯಲಿಲ್ಲವೆಂದರೆ ಎಲ್ಲ ರೈತರಿಗೂ ತೊಂದರೆಯಾಗುತ್ತದೆ, ಗೊಬ್ಬರ ಸರಿಯಾಗಿ ಸಿಗುವುದಿಲ್ಲ. ಅದನ್ನು ತೆಗೆಯಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತಿದ್ದೇನೆ. ಆಮೇಲೆ, ಹೆಚ್.ಕೆ.ಡಿ.ಬಿ. ಬಗ್ಗೆ ಹೇಳಬೇಕೆಂದರೆ ಹೆಚ್.ಕೆ.ಡಿ.ಬಿ. ಹೆಸರಿಗೆ ಮಾತ್ರ ಇದೆ. ಆದರೆ ನಮ್ಮ ಭಜೇತಿ ಏನಾಗಿದೆ ಎಂದರೆ, ಹೆಸರು ಇದೆ, ದುಡ್ಡು ಇಲ್ಲ. ಖರ್ಗೆಯವರು ಹೇಳಿದ ಹಾಗೆ ಅಲ್ಲಿ ದುಡ್ಡಿಲ್ಲ. ಹೆಚ್.ಕೆ.ಡಿ.ಬಿ. ಎಂದು ಮಾಡಿ ನಿಮಗೆ ಸೆಪರೇಟ್ ಆಗಿ ದುಡ್ಡು ಕೊಡುತ್ತೇವೆ ಎಂದು ಮೊದಲು ಹೇಳಿದ್ದರು. ಜಿಂದಾ ತಿಲಾಸ್‌ಮತ್ ಎಂದು ಹೇಳುತ್ತಾರಲ್ಲ ಹಾಗಾಗಿದೆ ನಮ್ಮ ಸ್ಥಿತಿ. ಮಾತೆತ್ತಿದರೆ ಹೆಚ್.ಕೆ.ಡಿ.ಬಿ. ಇದೆ ಎಂದು ಹೇಳುತ್ತಾರೆ. ಅದಕ್ಕೆ ರೆಗ್ಯುಲರ್ ಫಂಡೂ ಕೊಡುವುದಿಲ್ಲ. ಹೆಚ್.ಕೆ.ಡಿ.ಬಿ. ಎಂದರೆ ಅದು ಬಹಳ ಹಿಂದುಳಿದ ಪ್ರದೇಶ, ಅದು ಅಭಿವೃದ್ಧಿಯಾಗಬೇಕು ಎಂದು ಇದನ್ನು ಮಾಡಿದರು. ನಮ್ಮ ಭಜೇತಿ ಎಂದರೆ, ಯಾರೂ ಕೇಳುವವರೇ ಇಲ್ಲ. ಆದ್ದರಿಂದ ಹೆಚ್.ಕೆ.ಡಿ.ಬಿ.ಗೆ ಜಾಸ್ತಿ ದುಡ್ಡು ಕೊಡಬೇಕು ಮತ್ತು ಅದನ್ನು ಬಿಡುಗಡೆ ಮಾಡಬೇಕು. ಬಾರ್ಡರ್ ಪ್ರದೇಶಗಳಲ್ಲಿ ನಕ್ಸಲೈಟರ್ ಹಾವಳಿ ಜಾಸ್ತಿಯಾಗಿದೆ. ಬಾರ್ಡರ್ ಡೆವಲಪ್‌ಮೆಂಟ್ ಮಾಡಲಿಲ್ಲ, ಅದರ ಅಭಿವೃದ್ಧಿ ಮಾಡಲಿಲ್ಲವೆಂದರೆ ಅದು ಇನ್ನೂ ಜಾಸ್ತಿಯಾಗುತ್ತದೆ. ಆದ್ದರಿಂದ ಬಾರ್ಡರ್ ಡೆವಲಪ್‌ಮೆಂಟ್‌ಗೆ 2-3 ಲಕ್ಷ ರೂಪಾಯಿಗಳಲ್ಲಿ ಕೊಡುವುದಲ್ಲ, ಅದರ ಅಭಿವೃದ್ಧಿಗೆ ಹೆಚ್ಚಿನ ಪ್ರಮಾಣದ ಹಣ ಕೊಡಬೇಕು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು :— ಈಗ ಮಾಧುಸ್ವಾಮಿಯವರು, ಎಲ್ಲರೂ ಒಂದೊಂದು ನಿಮಿಷದಲ್ಲಿ ಮುಗಿಸಿ. ರಿಪಿಟೇಷನ್ ಬೇಡ. ಅನಂತರ ಅದನ್ನು ಓಟಿಗೆ ಹಾಕಿ ನಾವು ಊಟಕ್ಕೆ ಹೋಗಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಸನ್ಮಾನ್ಯ ಅಧ್ಯಕ್ಷರೇ, ಎಲ್ಲಾ ಕಡೆ ಜಾಸ್ತಿ ಮಾಡುತ್ತಿದ್ದಾರೆ, ಆದರೆ ನಮ್ಮ ಕಾವೇರಿ ವಲಯಕ್ಕೆ ನೀರಾವರಿಗೆ ಕೊಟ್ಟಿರುವ ಹಣವನ್ನು ಮಾನ್ಯ ಸಚಿವರು 54 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಹೋದ ವರ್ಷದ ಪೇಮೆಂಟನ್ನೇ ಮಾಡುವುದಕ್ಕೆ ಆಗಿಲ್ಲ. ಈ ವರ್ಷ ಹೇಮಾವತಿ ನಾಲೆ ವಿಭಾಗದಲ್ಲಿ ಒಂದೇ ಒಂದು ಇಂಚು ಕೆಲಸ ಮಾಡುವ ಸ್ಥಿತಿ ಇಲ್ಲ. ದಯಮಾಡಿ ತಾವು ಈದ ವರ್ಷ ಕೊಟ್ಟಷ್ಟು ಹಣವನ್ನಾದರೂ ಈ ವರ್ಷ ಕಾವೇರಿ ವಲಯಕ್ಕೆ ಕೊಡಬೇಕಾಗುತ್ತದೆ. ಕಾವೇರಿ ಹೇಮಾವತಿ ವಲಯದಲ್ಲಿ ತಾವು ಬಜೆಟ್‌ನಲ್ಲಿ ಮಾಡಿರುವ ರಿಡಕ್ಷನ್‌ನಿಂದ ಬಹಳ ತೊಂದರೆಯಾಗುತ್ತಿದೆ. ಅದನ್ನು ರೆಸ್ಟೋರ್ ಮಾಡಬೇಕು. ಫಿಷಿಂಗ್‌ನ ಮೋಟಾರ್ ಬೋಟ್‌ಗೆ ಹಾಕುವ ಡೀಸಲ್‌ಗೆ ಸಬ್ಸಿಡೈಸ್ ಮಾಡಿರುವುದನ್ನು ನಾನು ಸ್ವಾಗತಿಸುತ್ತೇನೆ.

ಹಾಗೆಯೇ ನಮ್ಮ ರೈತರು ಕೃಷಿಗಾಗಿ ಟ್ರಾಕ್ಟರ್‌ಗೆ ಮತ್ತು ಟಿಲ್ಲರ್‌ಗಳಿಗೆ ಬಳಸುವ ಡೀಸಲ್‌ಗೂ ಸಬ್ಸಿಡಿ ಕೊಡುವ ಆಲೋಚನೆ ಮಾಡಬೇಕು. ಡೀಸಲ್ ಕೊಂಡುಕೊಂಡು ಟ್ರಾಕ್ಟರ್‌ಗಳಿಗೆ ಹಾಕಿ ಹೊಲ ತೋಟಗಳಲ್ಲಿ ಕೆಲಸ ಮಾಡುವಂಥ ಸ್ಥಿತಿಯಲ್ಲಿ ಇವತ್ತು ನಾವು ಇಲ್ಲ.

ಅಧ್ಯಕ್ಷರು :— ಹಸಿವಾಗುತ್ತಿದೆ, ಬೇಗ ಮುಗಿಸಿ. ಈಗ ಡಿ.ಆರ್. ಪಾಟೀಲರು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಕಾವೇರಿ ವಿಚಾರ ಬಂದಾಗ ಹಸಿವಾಗುತ್ತದೆ ಎಂದರೆ ನಮಗೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು :— ಕಾವೇರಿ ಬಂದರೂ ಹಸಿವೇ, ಕೃಷ್ಣಾ ಬಂದರೂ ಹಸಿವೇ

ಶ್ರೀ ಎಲ್.ಆರ್. ಶಿವರಾಮೇಗೌಡ :— ಕಾವೇರಿ ವಲಯಕ್ಕೆ ಈ ಸಲ 55 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ.

ಅಧ್ಯಕ್ಷರು :— ನಮಗೆ ಕಾವೇರಿಯಲ್ಲೂ ಕೆಲಸ ಇಲ್ಲ, ಕೃಷ್ಣಾದಲ್ಲೂ ಕೆಲಸ ಇಲ್ಲ. ಈಗ ನಮಗೆ ಊಟ ಆಗಬೇಕು.

ಶ್ರೀ ಹಾಗೋಡು ತಿಮ್ಮಪ್ಪ :— ಕಾವೇರಿ, ಕೃಷ್ಣಾ ಎರಡೂ ಸೇರಿದ ಮೇಲೆ ಮೈನರ್ ಇರಿಗೇಷನ್‌ಗೆ ಮೂರು ಕಾಸೂ ಇಲ್ಲ.

ಅಧ್ಯಕ್ಷರು :— ಈಗ ಡಿ.ಆರ್. ಪಾಟೀಲರು. ಎಲ್ಲರೂ ದಯಮಾಡಿ ಸಹಕರಿಸಿ. ನಾನು ಮಾತನಾಡಬಾರದು ಎಂದು ಸುಮ್ಮನೆ ಕುಳಿತಿದ್ದೇನೆ. ಶಿವರಾಮೇಗೌಡರೇ, ನಾನು ಕರೆದವರು ಮಾತನಾಡಬೇಕೇ ಅಥವಾ ನೀವೇ ಎದ್ದು ಮಾತನಾಡಬಹುದು. ನಾನು ಡಿ.ಆರ್. ಪಾಟೀಲರ ಹೆಸರನ್ನು ಕರೆದಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಡಿ.ಆರ್. ಪಾಟೀಲರೇ ತಾವು ಕೇಳಿ.

ಶ್ರೀ ಡಿ.ಆರ್. ಪಾಟೀಲ್ :— 1997-98 ನೇ ವರ್ಷವನ್ನು ಸ್ವಾತಂತ್ರ್ಯೋತ್ಸವದ ಸುವರ್ಣ ವರ್ಷವೆಂದು ಖಾದಿ ಬಟ್ಟೆಯ ಮೇಲೆ ಇಡೀ 6 ಕೋಟಿ ವರ್ಷ 50 ಲಕ್ಷ ರೂಪಾಯಿಗಳನ್ನು ರಿಬೇಟ್ ಡಿಕ್ಲೇರ್ ಮಾಡಿದಿರಿ. ಇವತ್ತಿನವರೆಗೆ ಅದು ರಿಲೀಸ್ ಆಗಲಿಲ್ಲ. ಆ ರಿಬೇಟ್ ಪಾಸ್ ಆನ್‌ಆಗಿ ಬಿಟ್ಟಿದೆ. ಆ ಸಂಸ್ಥೆಗಳಿಗೆ ಸಾಕಷ್ಟು ತಾಪತ್ರಯವಾಗಿದೆ. ಮತ್ತೆ ಈ ವರ್ಷ 5 ಕೋಟಿ ರೂಪಾಯಿ ಡಿಕ್ಲೇರ್ ಮಾಡಿದ್ದೀರಿ. ಈ ವರ್ಷವೂ ಮುಗಿಯುತ್ತಾ ಬಂತು. ಒಟ್ಟು ಹನ್ನೊಂದೂವರೆ ಕೋಟಿ ರೂಪಾಯಿಯನ್ನು ದಯವಿಟ್ಟು ಕೂಡಲೇ ರಿಲೀಸ್ ಮಾಡಿಸಿಕೊಟ್ಟು ಆ ಸಂಸ್ಥೆಗಳು ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಸಭಾಧ್ಯಕ್ಷರೇ,....

ಶ್ರೀ ಎಲ್.ಆರ್. ಶಿವರಾಮೇಗೌಡ :— ಸಭಾಧ್ಯಕ್ಷರು ದಯಮಾಡಿ ನಮ್ಮ ರಕ್ಷಣೆಗೆ ಬರಬೇಕು. ನಾವು ಯಾರೂ ನಮ್ಮ ಕ್ಷೇತ್ರಗಳಿಗೆ ಹೋಗಲು ಆಗುವುದಿಲ್ಲ. ಕಾವೇರಿಗೆ ಹೆಚ್ಚು ದುಡ್ಡು ಕೊಡಬೇಕು.

ಅಧ್ಯಕ್ಷರು :— ಊಟ ಮಾಡಿ ಬಂದಮೇಲೆ ನಿಮ್ಮ ರಕ್ಷಣೆಗೆ ಬರುತ್ತೇನೆ. ಸಭಾಪತಿಯವರೇ, ತಾವು ಕೇಳಿ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಸಿದ್ಧರಾಮಯ್ಯನವರು ಗಮನಿಸಬೇಕು, ತಮ್ಮ ಆಯವ್ಯಯದ ಪುಟ ಸಂಖ್ಯೆ 74, ಅನುಬಂಧ-3. ಇದರಲ್ಲಿ, ಯಾಂತ್ರೀಕೃತ ದೋಣಿಗಳನ್ನು ಹೊರತುಪಡಿಸಿ ಎಲ್ಲಾ ಮೀನುಗಾರಿಕೆಗೆ ಅವಶ್ಯಕವಿರುವ ವಸ್ತುಗಳು, ಮೀನುಗಾರಿಕೆಗೆ ಬೇಕಾದ ಡೀಸಲ್ ಎಂದು ತಪ್ಪಾಗಿ ಪ್ರಿಂಟ್ ಆಗಿದೆ. ನೀವು ಅದನ್ನು ಸರಿಪಡಿಸಬೇಕು. ಮೀನುಗಾರರು ಉಪಯೋಗಿಸುವ ಯಾಂತ್ರೀಕೃತ ದೋಣಿಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡುತ್ತೇವೆಂದು ಸರ್ಕಾರದ ಪರವಾಗಿ ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದ್ದು, ಆದರೆ ಈಗ ಯಾಂತ್ರೀಕೃತ ದೋಣಿಗಳನ್ನು ಹೊರತುಪಡಿಸಿ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ದಯವಿಟ್ಟು ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು. ಹಾಗೆಯೇ 1996-97ರ ಆಯವ್ಯಯದಲ್ಲಿ ಶಾಸಕರ ಅನುದಾನವೆಂದು 30 ಲಕ್ಷ ರೂಪಾಯಿಗಳ ಮಂಜೂರಾತಿ ಕೊಟ್ಟಿದ್ದೀರಿ. ಪ್ರತೀ ವರ್ಷ 'ಶಾಸಕರ ಅನುದಾನ' ಎಂದು 30 ಲಕ್ಷ ರೂಪಾಯಿಗಳಿಗೆ ನಾವು ಏನು ಅನುಮೋದನೆ ಪಡೆದುಕೊಂಡಿದ್ದೇವೆ, ಕಾಮಗಾರಿ ಆಗಿದೆ ಆದರೆ ಅನುದಾನ ಬಿಡುಗಡೆ ಆಗಲಿಲ್ಲ. ಮತ್ತು ಕಾಮಗಾರಿ ಅರ್ಧ ಮಾಡಿದವರಿಗೆ ಕೂಡ ಪೇಮೆಂಟ್ ಆಗಿದೆ. ನಾವು ಜನರಿಗೆ ಏನು ಭರವಸೆ ಕೊಟ್ಟಿದ್ದೇವೆ ಅದು ಕಾರ್ಯಗತ ಆಗಲಿಲ್ಲ. ಶಾಸಕರ ಅನುದಾನ ಎಂದು 1996-97 ರಲ್ಲಿ 30 ಲಕ್ಷ ರೂಪಾಯಿಗಳ ಮಂಜೂರಾತಿ ಕೊಟ್ಟಿದ್ದು ಅದರ ಪೇಮೆಂಟ್ ಬಗ್ಗೆ ಏನಾಗಿದೆ? ಮತ್ತು ಶಾಸಕರ ಅನುದಾನವೆಂದು ವರ್ಷಕ್ಕೆ 30 ಲಕ್ಷದಂತೆ ಇದು ಕಳೆದ ಮೂರು ವರ್ಷದಿಂದ ಕಂಟಿನ್ಯೂ ಆಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ:—ಮಾನ್ಯ ಅಧ್ಯಕ್ಷರೆ, ಅರೇಬಿಕ್ ಶಾಲೆಗಳಿಗೆ ಸರ್ಕಾರದಿಂದ ಅನುದಾನ ಕೊಡುವ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಗಮನಹರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿಯ ಕಸ ಗುಡಿಸುವವರ ಬಗ್ಗೆ ಒಂದು ಮಾತು ಹೇಳಿದ್ದೆ. ಇವರು ಎಲ್ಲಾ ಹಳ್ಳಿಗಳಲ್ಲೂ ಕಸ ಗುಡಿಸುವುದನ್ನು ಬಿಟ್ಟಿರುವುದರಿಂದ ಯಾವ ಪರಿಸ್ಥಿತಿ ಬಂದಿದೆ ಎಂದು ಹೇಳಲಿಕ್ಕೆ ಆಸಾಧ್ಯ. ಸುಮಾರು 30 ಸಾವಿರ ಜನ ಇದ್ದು ಅವರಿಗೆ 350 ರೂಪಾಯಿನಂತೆ ಸಂಬಳ ಕೊಡಲಾಗುತ್ತಿದೆ. ಅವರ ಸಂಬಳ ಹೆಚ್ಚಿಸುವುದಕ್ಕೆ ಬಹುಶಃ 10 ಕೋಟಿ

ರೂಪಾಯಿನಷ್ಟು ಬೇಕಾಗಬಹುದು. ಇದರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಏನಾದರೂ ಒಂದು ಮಾತು ಹೇಳಬೇಕು. ಆಮೇಲೆ ಕಾವೇರಿ ಕಣಿವೆಗೆ 54 ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೀರಿ. ಇದಕ್ಕೆ ಕಳೆದ ವರ್ಷಕ್ಕಿಂತ ಜಾಸ್ತಿ ಕೊಡುವುದಕ್ಕೆ ಆಗದಿದ್ದರೆ ಕೊನೆಯ ಪಕ್ಷ ಕಳೆದ ವರ್ಷದಷ್ಟಾದರೂ ಹಣ ಕೊಡದಿದ್ದರೆ ಹೇಗೆ? ಆದ್ದರಿಂದ ಕಳೆದ ವರ್ಷ ಕೊಟ್ಟಿರುವಷ್ಟು ಹಣವನ್ನಾದರೂ ಈ ವರ್ಷ ಕಾವೇರಿ ಕಣಿವೆಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕೃಷಿ ಕಾರ್ಮಿಕರಿಗೆ 100 ಕೋಟಿ ರೂಪಾಯಿಯುಳ್ಳ ಒಂದು ಆರೋಗ್ಯ ನಿಧಿ ಮಾಡುತ್ತೇವೆ, ಕೃಷಿ ಕಾರ್ಮಿಕರಿಗೆ ಎಂಥ ಕಾಯಿಲೆ ಬಂದರೂ ಫ್ರೀಯಾಗಿ ಔಷಧಿ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಎಂದು ಮಾನ್ಯ ಹಣಕಾಸಿನ ಸಚಿವರು ಆಯವ್ಯಯದಲ್ಲಿ ಮಂಡಿಸಿದ್ದರು. ಅದನ್ನು ನೀವು ಏನು ಮಾಡಿದ್ದೀರಿ ದಯವಿಟ್ಟು ಹೇಳಬೇಕು. ಅಂಗನವಾಡಿ ಸಹಾಯಕರಿಗೆ 75 ರೂಪಾಯಿ ಎಂದು ಮಾಡಿದ್ದೀರಿ ಅವರಿಗೆ ಇನ್ನೂ 75 ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕು. ಮಾನ್ಯ ಹಣಕಾಸಿನ ಸಚಿವರು ಏನೂ ಹೇಳುವುದಿಲ್ಲ. ಆಗುವುದಾದರೆ ಆಗುತ್ತದೆಂದು ಹೇಳಬೇಕು, ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಬೇಕು. ಇನ್ನು ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತುಕೊಳ್ಳುವ ಹಾಗೆ ಮಾಡಿದ್ದೀರಿ. ಅವರು ಏನು ಕೇಳಿದ್ದಾರೆ ಅದು ಎಲ್ಲರ ಮನಸ್ಸಿನಲ್ಲಿಯೂ ಇದೆ. ಕಡ್ಡಾಯವಾಗಿ ಒಬ್ಬ ಶಾಸಕರಿಗೆ ಪ್ರತೀ ವರ್ಷ 50 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸರ್ಕಾರ ಆಲೋಚನೆ ಮಾಡಲೇಬೇಕು. ಈ ವಿಷಯದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರಿಗೆ ನನ್ನ ಪೂರ್ಣ ಬೆಂಬಲ ವ್ಯಕ್ತಪಡಿಸುತ್ತಾ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ರೈತ ಸಂಘದ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಅವರು ಸದನದ ಬಾವಿಗೆ ಆಗಮಿಸಿ ಧರಣಿ ಕುಳಿತರು).

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೆ, ಅಗ್ರಿಕಲ್ಚರಲ್ ಪ್ರಾಡ್ಯೂಸ್ ಬಗ್ಗೆ ಹೊಸದಾಗಿ ಯಾವುದೂ ಟ್ಯಾಕ್ಸ್ ಹಾಕಿಲ್ಲ. ಈ ಬೀಡಿ ಎಲೆ ಮಧ್ಯಪ್ರದೇಶದಿಂದ ಬರುತ್ತದೆ ನಮ್ಮ ರಾಜ್ಯದಲ್ಲಿ ಇದನ್ನು ಬೆಳೆಯುವುದಿಲ್ಲ. ಇದು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಅಲ್ಲ ಫಾರೆಸ್ಟ್ ಪ್ರಾಡ್ಯೂಸ್ ಆಗಿರುತ್ತದೆ. ಹೈಕೋರ್ಟ್ ಜಡ್ಜ್‌ಮೆಂಟ್ ಆದ ಮೇಲೆ ಅದನ್ನು ಹೊರಗಡೆ ಇಡುವುದಕ್ಕೆ ಮಾಡಿರತಕ್ಕಂಥ ಒಂದು ತಿದ್ದುಪಡಿ ಹೊರತು ಬೇರೆ ಏನೂ ಅಲ್ಲ. ಗೋಡಂಬಿ ಇದೆಯಲ್ಲಾ ಇದಕ್ಕೆ ಎರಡು ಪರ್ಸೆಂಟ್ ಅವರಿಗೆ ಲಾಭ ಪಡೆದುಕೊಳ್ಳುವುದಕ್ಕೆ, ಎಕ್ಸಂಪ್ಷನ್ ಪಡೆದುಕೊಳ್ಳಲಿಕ್ಕೆ ಅವಕಾಶ ಇದೆ. ಅದು ಮಾಡಬೇಕು. ಇನ್ನು ಟಿ.ಒ.ಟಿ. ಅಂದರೆ ಗೊಬ್ಬರದ ಬಗ್ಗೆ 4 ಪರ್ಸೆಂಟ್ ಟ್ಯಾಕ್ಸ್ ಇತ್ತು. 1998-99ರಲ್ಲಿ 4 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಇದ್ದುದನ್ನು ಸಂಪೂರ್ಣವಾಗಿ ವಜಾ ಮಾಡಿದ್ದೇವೆ.

ಶ್ರೀ ಬೈರೇಗೌಡ :— ಕಳೆದ ವರ್ಷ 4 ಪರ್ಸೆಂಟ್ ಟಿ.ಒ.ಟಿ ಇತ್ತು. ಕೊನೆಭಾಗದಲ್ಲಿ ಅದನ್ನು ಸಂಪೂರ್ಣವಾಗಿ ಎಕ್ಸೆಂಪ್ಟ್ ಮಾಡಿದ್ದೇವೆ.

ಶ್ರೀ ಸಿದ್ಧರಾಮಯ್ಯ :— 4 ಪರ್ಸೆಂಟ್ ಟ್ಯಾಕ್ಸ್ ಟಿ.ಒ.ಟಿ. ಗೊಬ್ಬರಕ್ಕೆ ಇತ್ತು ಆ 4 ಪರ್ಸೆಂಟ್ ಪೂರ್ತಿಯಾಗಿ ತೆಗೆಯಲಿಲ್ಲ, ಆ ವರ್ಷಕ್ಕೆ ಮಾತ್ರ ರದ್ದು ಮಾಡುತ್ತೇವೆಂದು ಹೇಳಿದ್ದೆವು. ಗೊಬ್ಬರದ ಮೇಲೆ ಆಂಧ್ರಪ್ರದೇಶದಲ್ಲಿ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿ ಟ್ಯಾಕ್ಸ್ ಟಿ.ಒ.ಟಿ ಇಲ್ಲವೆಂದು ಹೇಳಿದರು. ಆದರೆ ಅಲ್ಲೂ ಕೂಡ ಸೇಲ್ಸ್ ಟ್ಯಾಕ್ಸ್, ಟರ್ನ್‌ಓವರ್ ಟ್ಯಾಕ್ಸ್ ಇದೆಯೆಂದು ನಾನು ಉತ್ತರ ಕೊಡುತ್ತಾ ಹೇಳಿದ್ದೆ. ಆದರೂ ನಮಗೆ ಗೊಬ್ಬರ ಸಿಗುತ್ತಿಲ್ಲವೆಂದು ವಾದ ಮಾಡಿದ್ದರಿಂದ, ರೈತರಿಗೆ ನಮ್ಮಿಂದ ತೊಂದರೆ ಆಗಬಹುದು ಎನ್ನುವ ಕಾರಣಕ್ಕೋಸ್ಕರ ಟಿ.ಒ.ಟಿ.ಯನ್ನು ಕಳೆದ ವರ್ಷ ರದ್ದು ಮಾಡಿದ್ದೆವು. ಇದನ್ನು ರದ್ದು ಮಾಡಿದ್ದರಿಂದ ಸರ್ಕಾರಕ್ಕೆ ಬರುತ್ತಿದ್ದ 40 ಕೋಟಿ ರೂಪಾಯಿ ತೆರಿಗೆ ಹಣ ಕಡಿಮೆ ಆಯಿತು. ಈ ಟಿ.ಒ.ಟಿ.ಯನ್ನು ಯಾರು ವ್ಯಾಪಾರ ಮಾಡುತ್ತಾರೆ ಅವರೇ ಕೈಯಿಂದ ಕೊಡಬೇಕೆ ಹೊರತು ಗ್ರಾಹಕರು ಅಥವಾ ರೈತರ ಕೈಯಿಂದ ಅಲ್ಲ. ಅದಕ್ಕೆ 10 ಕೋಟಿ ರೂಪಾಯಿಗಿಂತ ಹೆಚ್ಚು ವ್ಯಾಪಾರ ಮಾಡಿದರೆ ಮೊದಲು 3 ಪರ್ಸೆಂಟ್ ಟಿ.ಒ.ಟಿ. ಇದ್ದುದನ್ನು ಈಗ 2 ಪರ್ಸೆಂಟ್ ಕೊಡಬೇಕೆಂದು ಮಾಡಿದ್ದೇವೆ. ಇಷ್ಟು ಕಡಿಮೆ ಮಾಡಿದರೂ ಇನ್ನೂ ಕಡಿಮೆ ಮಾಡಬೇಕೆಂದು ಹೇಳುತ್ತಿದ್ದಾರೆ, ಅದರ ಬಗ್ಗೆ ನಾವು ಮುಂದೆ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಈ ಸದನಕ್ಕೆ ಹೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ರಾಜ್ಯಕ್ಕೆ ತೊಂದರೆಯಾಗಿದೆ. ಟಿ.ಒ.ಟಿ ತೆರಿಗೆಯನ್ನು ಪೂರ್ತಿ ತೆಗೆಯಬೇಕು. ಸಣ್ಣ ನೀರಾವರಿಗೆ ಹೆಚ್ಚು ದುಡ್ಡು ಬಿಡುಗಡೆ ಮಾಡಬೇಕು.

ಶ್ರೀ ಸಿದ್ಧರಾಮಯ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಹೇಳಿದ ಎಲ್ಲಾ ಸಲಹೆಗಳ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಈ ಸದನಕ್ಕೆ ಹೇಳಬಯಸುತ್ತೇನೆ.

ಅಧ್ಯಕ್ಷರು :— ಉಳಿದ ಎಲ್ಲಾ ಸದಸ್ಯರು ಕೊಟ್ಟಿರತಕ್ಕಂಥ ಎಲ್ಲಾ ಸಲಹೆಗಳನ್ನು ಗಂಭೀರವಾಗಿ ನಿಧಾನವಾಗಿ ಪರಿಶೀಲಿಸಿ. ಈಗ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರವನ್ನು ಮುಂದುವರಿಸಿ.

ಶ್ರೀ ಸಿದ್ಧರಾಮಯ್ಯ :— ಇನ್ನು ಹಾವೇರಿ ಕಣಿವೆ ಬಗ್ಗೆ ಬಜೆಟ್‌ನಲ್ಲಿ ಕಡಿಮೆ ಹಣ ಇಟ್ಟಿದ್ದಾರೆಂದು ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. 1998-99ರ ಬಜೆಟ್‌ನಲ್ಲಿ ಇಟ್ಟಿದ್ದ ಹಣಕ್ಕಿಂತ ಈ ವರ್ಷ 50 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿರುವುದು ನಿಜಯ ಆದರೆ ಈ ಸಾರಿ ಪ್ಲಾನ್‌ನಲ್ಲಿ ಕಟ್ ಮಾಡಿ ಎಷ್ಟು ಖರ್ಚು ಮಾಡುತ್ತೇವೆ ಅದಕ್ಕಿಂತ ಜಾಸ್ತಿ ಬಜೆಟ್ ನಲ್ಲಿ ಇಟ್ಟಿದ್ದೇವೆ. ಆದರೂ ಹಾವೇರಿ ಕಣಿವೆ ಪ್ರದೇಶದ ಶಾಸಕರುಗಳು ಹೆಚ್ಚಿಗೆ ಹಣ ಇಡಬೇಕೆಂದು ಹೇಳಿದ್ದಾರೆ ಹಾಗೆಯೇ ಕಬಿನಿ 2ನೇ ಹಂತದ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಶ್ರೀ ವಾಟಾಳ್ ನಾಗರಾಜ್‌ರವರು ಬಹಳ ಒತ್ತಾಯ ಮಾಡಿ ಹೇಳಿದ್ದಾರೆ. ಹಿಂದೆ ಶ್ರೀ ಕೃಷ್ಣಮೂರ್ತಿಯವರು ಕೂಡ ಪ್ರಸ್ತಾಪ ಮಾಡಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ :— ಮೈನರ್ ಇರಿಗೇಷನ್‌ಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ :— ಮೈನರ್ ಇರಿಗೇಷನ್‌ಗೆ ಈ ವರ್ಷ ಬಜೆಟ್‌ನಲ್ಲಿ 125 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದಕ್ಕೆ ಇನ್ನೂ ಹೆಚ್ಚಿಗೆ ಹಣವನ್ನು ಬಜೆಟ್‌ನಲ್ಲಿ ಇಡಬೇಕೆಂದು ಕೆಲವು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಈಗ ಹಣಕಾಸಿನ ಲಭ್ಯ ಇಲ್ಲದಿರುವುದರಿಂದ ಮತ್ತು ಮುಂದೆ ಕೂಡ ಇದಕ್ಕೆ ಹೆಚ್ಚು ಹಣವನ್ನು ಕೊಡಬೇಕೆಂದು ಸದಸ್ಯರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಹಿಂದುಳಿದ ವರ್ಗದವರ ಮತ್ತು ಎಸ್‌ಸಿ : ಎಸ್‌ಟಿ ಜನರ ಸರ್ವೆ ಮಾಡುವುದಕ್ಕೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಮಾನ್ಯ ಸಭಾಪತಿಯವರು ಹೇಳಿರತಕ್ಕಂಥ ವಿಚಾರಕ್ಕೆ ಬರುವುದಾದರೆ, ಯಾಂತ್ರಿಕೃತ ದೋಣಿಗಳನ್ನು ಕೊಂಡುಕೊಳ್ಳುವಾಗ ಕೊಡಬೇಕಾದ ತೆರಿಗೆ ವಿನಾಯಿತಿ ಇಲ್ಲ. ಆದರೆ ಆ ದೋಣಿಗೆ ಉಪಯೋಗಿಸತಕ್ಕಂಥ ಡೀಸಲ್‌ಗೆ ಮಾತ್ರ ತೆರಿಗೆಯನ್ನು ರದ್ದು ಮಾಡಿದ್ದೇವೆ. ಐಸ್ ಏನು ಉಪಯೋಗಿಸುತ್ತಿದ್ದಾರಲ್ಲಾ, ಅದರ ಮೇಲೆ ಇದ್ದ ತೆರಿಗೆಯನ್ನು ಸುಪೂರ್ಣವಾಗಿ ರದ್ದು ಮಾಡಿದ್ದೇವೆ. ಇದರಲ್ಲಿ ಯಾವುದೇ ಅನುಮಾನ ಇಲ್ಲ. ಯಾಂತ್ರಿಕೃತ ದೋಣಿಗಳ ಮೇಲೆ ಇರತಕ್ಕಂಥ ತೆರಿಗೆ ಇಲ್ಲ ಆದರೆ ಅದಕ್ಕೆ ಡೀಸಲ್ ಏನು ಉಪಯೋಗಿಸುತ್ತಿದ್ದಾರೆ ಅದಕ್ಕೆ ತೆರಿಗೆಯನ್ನು ಸಂಪೂರ್ಣ ರದ್ದು ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಮೈನರ್ ಇರಿಗೇಷನ್‌ಗೆ ಬಜೆಟ್ ಅಲೋಕೇಶನ್ ಮಾಡಿ ಎಂದು ಕೇಳಿದರೆ ಅದಕ್ಕೆ ಸಮಾಧಾನಕರವಾದ ಉತ್ತರ ಇಲ್ಲ. ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರಿಗೆ ಕಾಂಪನ್‌ಸೇಷನ್ ಇಲ್ಲ. ಇದಕ್ಕೆ 93 ಕೋಟಿ ರೂಪಾಯಿಗಳನ್ನು ನ್ಯಾಚುರಲ್ ಕಲಾಮಿಟಿ ಫಂಡ್‌ನಿಂದ ಕೊಟ್ಟಿರುವುದು ಹೊರತಾಗಿ ಅವರಿಗೆ ಮನೆ ಕಟ್ಟಿಕೊಡುವುದಕ್ಕೆ ಪ್ರಾವಿಶನ್ ಇಲ್ಲ. ಆ ಮೇಲೆ ಟರ್ನ್‌ಓವರ್ ಟ್ಯಾಕ್ಸ್ ಇದನ್ನು ತೆಗೆಯುವುದಕ್ಕೆ ಶ್ರೀ ಬೈರೇಗೌಡರು, ಮಾನ್ಯ ಅಧ್ಯಕ್ಷರು ಹೀಗೆ ಎಲ್ಲರೂ ಕೂಡ ಫ್ಲೋಡ್ ಮಾಡುತ್ತಿದ್ದಾರೆ. ಆದರೆ ಟಿ.ಒ.ಟಿ.ಯನ್ನು ತೆಗೆಯುವ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಹಣಕಾಸು ಸಚಿವರು ಹೇಳುತ್ತಿದ್ದಾರೆಯೇ ಹೊರತು ಅದನ್ನು ತೆಗೆದುಬಿಡುತ್ತೇವೆಂದು ಹೇಳುತ್ತಿಲ್ಲ. ರೀಜನಲ್ ಇಂಬ್ಯಾಲೆನ್ಸ್ ಸರಿಪಡಿಸಲು ಹೆಚ್ಚಿನ ಹಣ ಕೊಡಬೇಕೆಂದು ಕೇಳಿದರೆ, ಅದಕ್ಕೂ ಕೂಡ ಉತ್ತರವಿಲ್ಲ, ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ಗೆ ಎನ್‌ಹ್ಯಾನ್ಸ್‌ಮೆಂಟ್ ಮಾಡಬೇಕೆಂದು ಹೇಳಿದರೆ ಅದಕ್ಕೂ ಉತ್ತರವಿಲ್ಲ, ಇರಿಗೇಷನ್ ಪಂಪ್‌ಸೆಟ್‌ಗೆ ಕನೆಕ್ಷನ್ ಕೊಡಿ ಎಂದರೆ ಅದಕ್ಕೂ ಉತ್ತರವಿಲ್ಲ, ಮೈನರ್ ಇರಿಗೇಷನ್‌ಗೆ ಕೊಡಿ ಎಂದರೆ ಅದಕ್ಕೂ ಉತ್ತರವಿಲ್ಲ, ಯಾವುದನ್ನೇ ಕೇಳಿದರೂ ಕೂಡ ಸಮಾಧಾನಕರವಾದ ಉತ್ತರವನ್ನು ಸರ್ಕಾರದವರು ಕೊಡುತ್ತಿಲ್ಲ. ಅವರ ಉತ್ತರದಿಂದ ನಾವು ತೃಪ್ತರಾಗಿಲ್ಲ. ಇದನ್ನು ನಾವು ಪ್ರತಿಭಟಿಸಿ ವಾಕ್‌ಔಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಇ) 1999-2000ನೇ ಸಾಲಿನ ಆಯವ್ಯಯದ ಮೇಲಿನ (1ರಿಂದ 67) ಬೇಡಿಕೆಗಳನ್ನು ಮಂಡಿಸುವುದು ಹಾಗೂ ಅಂಗೀಕರಿಸುವುದು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ದಿನಾಂಕ 31-3-2000ದಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ (ಲೇಖಾನುದಾನ), 1 ರಿಂದ 67 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗಳನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"ದಿನಾಂಕ 31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ (ಲೇಖಾನುದಾನ), 1 ರಿಂದ 67 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ದಿನಾಂಕ 31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ (ಲೇಖಾನುದಾನ), 1 ರಿಂದ 67 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗಳನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಹೀಗಿದೆ: ದಿನಾಂಕ 31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ (ಲೇಖಾನುದಾನ), 1 ರಿಂದ 67 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗಳನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ, ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ.

ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1- ವ್ಯವಸಾಯ (ಮ.ಪ್ರ.ಆ.ಮಂ. ಹೊರತುಪಡಿಸಿ)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವ್ಯವಸಾಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,01,14,06,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,04,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 2- ತೋಟಗಾರಿಕೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,62,13,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3- ಪಶುಸಂಗೋಪನೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 47,19,35,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4- ಮೀನುಗಾರಿಕೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೀನುಗಾರಿಕೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,68,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,32,64,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 5- ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ (ಜವಳಿ, ಸಕ್ಕರೆ ಮತ್ತು

ರೇಷ್ಮೆ ವ್ಯವಸಾಯದ ಹೊರತು)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,77,87,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,49,88,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 6- ಗಣಿಗಳು ಮತ್ತು ಭೂವಿಜ್ಞಾನ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿಗಳು ಮತ್ತು ಭೂವಿಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,72,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7- ಚಿಕ್ಕಪುಟ್ಟ ಉದ್ಯಮಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕಪುಟ್ಟ ಉದ್ಯಮಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,68,56,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,02,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8- ರೇಷ್ಮೆ ವ್ಯವಸಾಯ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 45,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9- ಸಕ್ಕರೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಕ್ಕರೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,62,48,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,66,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10- ಲೇಖನಸಾಮಗ್ರಿ ಮತ್ತು ಮುದ್ರಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೇಖನ ಸಾಮಗ್ರಿ ಮತ್ತು ಮುದ್ರಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,05,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 11- ಉನ್ನತ ಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,37.03,58,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12- ಯುವಜನ ಸೇವೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯುವಜನ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,82.59,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13- ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,08,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,66,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14- ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 841,22,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 15- ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,32,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 16- ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 419,34,14,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 17- ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,99,96,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,06,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 18- ಸಣ್ಣ ಉಳಿತಾಯ, ರಾಜ್ಯ ಲಾಟರಿಗಳು, ವಿಮೆ, ಖಜಾನೆ ಮತ್ತು ಲೆಕ್ಕ ಆಡಳಿತ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ಉಳಿತಾಯ, ರಾಜ್ಯ ಲಾಟರಿಗಳು, ವಿಮೆ, ಖಜಾನೆ ಮತ್ತು ಲೆಕ್ಕ ಆಡಳಿತಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 63,32,94,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19- ಇತರೆ ವಿವಿಧ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರೆ ವಿವಿಧ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20- ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 108,85,61,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21- ಅರಣ್ಯ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 103,57,44,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22- ರಾಜ್ಯದ ಅಬಕಾರಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯದ ಅಬಕಾರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,34,19,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 99,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 23- ಸಾರಿಗೆ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾರಿಗೆ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 31,02,75,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24- ಆರಕ್ಷಕ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರಕ್ಷಕ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 228,48,41,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,03,28,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 25- ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 23,26,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 26- ವಾರ್ತಾ ಮತ್ತು ಪ್ರಚಾರ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ ಮತ್ತು ಪ್ರಚಾರಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,67,03,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27- ಪ್ರವಾಸ್ಯೋದ್ಯಮ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸ್ಯೋದ್ಯಮಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,79,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28- ವೈದ್ಯಕೀಯ ಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ವೈದ್ಯಕೀಯ ಶಿಕ್ಷಣಕ್ಕೆ" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 67,34,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 29- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 245,30,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 38,26,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 30- ವಸತಿ (ಸರ್ಕಾರಿ ವಸತಿಗೃಹಗಳನ್ನು ಹೊರತು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ವಸತಿ"(ಸರ್ಕಾರಿ ವಸತಿಗೃಹಗಳನ್ನು ಹೊರತು) ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 62,69,96,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,60,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 31- ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಬಿವೃದ್ಧಿ ನಿಗಮವನ್ನು ಹೊರತುಪಡಿಸಿ)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಬಿವೃದ್ಧಿ ನಿಗಮವನ್ನು ಹೊರತುಪಡಿಸಿ) ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 222,04,58,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,83,61,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 32- ಬೆಂಗಳೂರು ಅಭಿವೃದ್ಧಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 33,76,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 69,29,31,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 33- ಸಣ್ಣ ನೀರಾವರಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ನೀರಾವರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 24,32,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 39,62,94,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 34- ಭಾರಿ ಮತ್ತು ಮಧ್ಯಮ ನೀರಾವರಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ನೀರಾವರಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 195,55,96,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 689,68,10,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 35- ರಾಜ್ಯ ವಿಧಾನಮಂಡಲ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ವಿಧಾನಮಂಡಲಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,02,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 36- ನ್ಯಾಯ ಪರಿಪಾಲನೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 38,59,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 37- ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 3,24,94,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 38- ಸಚಿವಾಲಯ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ಸಚಿವಾಲಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 21,01,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 39- ಜಿಲ್ಲಾಡಳಿತ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ಜಿಲ್ಲಾಡಳಿತಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 47,64,39,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 40- ಸಾಮಾನ್ಯ ಆಡಳಿತ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ಸಾಮಾನ್ಯ ಆಡಳಿತ ಇತ್ಯಾದಿ"ಗಳಿಗೆ ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 23,85,85,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41- ಯೋಜನೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ, "ಯೋಜನೆಗೆ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 7,07,10,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ, 1,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 42- ಹಿಂದುಳುದ ಪ್ರದೇಶಗಳ ಅಭಿವೃದ್ಧಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಹಿಂದುಳುದ ಪ್ರೇಶಗಳ ಅಭಿವೃದ್ಧಿ"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 34,85,65,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 43- ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)"ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 96,82,13,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44- ಕಟ್ಟಡಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಟ್ಟಡಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,40,10,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,44,83,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45- ರಸ್ತೆಗಳು ಮತ್ತು ಸೇತುವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಸ್ತೆಗಳು ಮತ್ತು ಸೇತುವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 91,99,76,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 49,94,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 46- ರೇವು ಮತ್ತು ಜಲಸಾರಿಗೆ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇವು ಮತ್ತು ಜಲಸಾರಿಗೆ ಸೇವೆಗಳಿಗಾಗಿ" ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,93,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,16,66,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 47- ವಿದ್ಯುಚ್ಛಕ್ತಿ ಯೋಜನೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 149,87,07,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 48- ಭೂ ಕಂದಾಯ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭೂ ಕಂದಾಯ ಇತ್ಯಾದಿ"ಗಳಿಗೆ ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 83,53,51,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 67,24,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 49- ಮುದ್ರಾಂಕಗಳು ಮತ್ತು ನೋಂದಣಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮುದ್ರಾಂಕಗಳು ಮತ್ತು ನೋಂದಣಿ"ಗಳಿಗೆ ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,39,82,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50- ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳಿಗೆ" ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,24,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 51- ವಕ್ಫ್

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಕ್ಫ್‌ಗೆ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,23,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 52- ಸಹಕಾರ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17,75,13,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,59,24,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 53- ಕ್ರಮಪಡಿಸಿದ ಮಾರುಕಟ್ಟೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,23,01,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 54- ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 82,07,51,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 60,62,73,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಧಿಯಾಚನೆ ಕ್ರಮಾಂಕ 55- ಗ್ರಾಮೀಣ ಅಭಿವೃದ್ಧಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣ ಅಭಿವೃದ್ಧಿಗಾಗಿ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ಮಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 210,68,44,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 56- ಕಾರ್ಮಿಕ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 32,59,72,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 57- ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಲ್ಯಾಣಗಳಿಗೆ" ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 123,37,87,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ, 19,43,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 58- ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ" ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 71,50,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ, 1,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 59- ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 2,86,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 60- ಮಲೆನಾಡು ಪ್ರದೇಶ ಅಭಿವೃದ್ಧಿ (ಕಾಡಾ ಸೇರಿದಂತೆ)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಲೆನಾಡು ಪ್ರದೇಶ ಅಭಿವೃದ್ಧಿ (ಕಾಡಾ ಸೇರಿದಂತೆ)"ಗೆ ಸಂದಾಯ ಮಾಡುವಲ್ಲಿ, ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 13,33,20,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 61- ಜವಳಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜವಳಿಗೆ" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,20,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 63,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 62- ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು"ಗೆ ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,91,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 63- ಸಾಂಖ್ಯಿಕ ಮತ್ತು ಸಾಂಖ್ಯಿಕ (ಯೋಜನೆಯಿಂದ)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಂಖ್ಯಿಕ ಮತ್ತು ಸಾಂಖ್ಯಿಕ (ಯೋಜನೆಯಿಂದ)" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,76,48,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 64- ವಿಜ್ಞಾನ ಮತ್ತು ತಂತ್ರಜ್ಞಾನ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 66,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 65- ಉದ್ಯೋಗ ಮತ್ತು ತರಬೇತಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉದ್ಯೋಗ ಮತ್ತು ತರಬೇತಿ" ಸಂದಾಯ ಮಾಡುವಲ್ಲಿ, ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,23,20,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 66- ಪೌರಾಡಳಿತ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪೌರಾಡಳಿತ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 67- ಮೂಲಭೂತ ಸೌಕರ್ಯ ಅಭಿವೃದ್ಧಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 39,99,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

(೧) ಪೂರಕ ಅಂದಾಜುಗಳು (ಅಂತಿಮ ಕಂತು) 1998-99

ಅಧ್ಯಕ್ಷರು :— ನಾನು ಈಗ ಪೂರಕ ಅಂದಾಜುಗಳು (ಅಂತಿಮ ಕಂತು)ನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"31.3.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 1 ರಿಂದ 6, 8 ರಿಂದ 13, 15, 17 ರಿಂದ 25, 28 ರಿಂದ 31, 33, 34, 36 ರಿಂದ 41, 44 ರಿಂದ 48,೫೦ ರಿಂದ 54, 56, 57 ಹಾಗೂ 61 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕೂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(2) ಶಾಸನ ರಚನೆ

(4) ವಿಧೇಯಕಗಳ ಮಂಡನೆ

(ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1999 ಮಂಡನೆಗೆ ಅಂತಿಮ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ.

ಸಹಬಂಧ ೧

(ಅ) ಕರ್ನಾಟಕ ಧನವಿನಿಯೋಗ ವಿಧೇಯಕ, 1999

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ.

ಸಹಬಂಧ ೨

(ಆ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ.

ಸಹಬಂಧ ೩

(ಈ) ಕರ್ನಾಟಕ ತೆರಿಗೆ ಕಾನೂನುಗಳ (2ನೇ ತಿದ್ದುಪಡಿ) ವಿಧೇಯಕ, 1999

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (2ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ತೆರಿಗೆ ಕಾನೂನುಗಳ (2ನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (2ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ.

ಸಹಬಂಧ ೪

(ಉ) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 1999

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) (ಕಂದಾಯ ಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (2ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಸ್ಟಾಂಪು (2ನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)(ಕಂದಾಯ ಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (2ನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ.

ಸಹಬಂಧ ೫

ಊ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1999

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) (ಸಾರಿಗೆ ಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೆ, 1999ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, 1999ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)(ಸಾರಿಗೆ ಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೆ, 1999ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ.

ಸಹಬಂಧ ೬

ಪರ್ಯಾಲೋಚನಾ ಪ್ರಸ್ತಾವ

(ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1999 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಅಧ್ಯಕ್ಷರು :— "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅ) ಕರ್ನಾಟಕ ಧನವಿನಿಯೋಗ ವಿಧೇಯಕ, 1999 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(೪) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999, ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಈ) ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1999, ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, "1999ರ ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಈ) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 1999, ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಊ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1999. ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "1999ರ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು :— ಗೌರವಾನ್ವಿತ ಸದಸ್ಯರುಗಳಾದ ಮಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಪುಟ್ಟಣ್ಣಯ್ಯ ಹಾಗೂ ಜುಲ್ಫೀಕರ್ ಹಷ್ಮಿಯವರುಗಳು, ದಯಮಾಡಿ ಧರಣಿಯನ್ನು ಮುಕ್ತಾಯಮಾಡಿ ನನ್ನ ಕೋಣೆಗೆ ಊಟಕ್ಕೆ ಬರಬೇಕು ಎಂದು ಆಹ್ವಾನವನ್ನು ಕೊಡುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರನ್ನು ನಾವು ಎಲ್ಲರೂ ಖಾಸಗಿಯಾಗಿ ಭೇಟಿ ಇತ್ತು ಎಲ್ಲಾ ವಿಚಾರಗಳನ್ನು ಪರಿಹರಿಸಿಕೊಳ್ಳೋಣ. ಊಟದ ಸಮಯವಾಗಿರುವುದರಿಂದ ಮಾನ್ಯ ಎಲ್ಲಾ ಸದಸ್ಯರಿಗೆ ಹಸಿವು ಆಗಿರುತ್ತದೆ. ಆದುದರಿಂದ, ತಾವು ದಯಮಾಡಿ ಸಹಕರಿಸಬೇಕು. ಈಗ ಸಭೆಯನ್ನು ಮುಂದೂಡಿ ಪುನಃ 4-30 ಕ್ಕೆ ಸಮಾವೇಶಗೊಳ್ಳೋಣ.

(ಸದನವು ಮಧ್ಯಾಹ್ನ ಮೂರು ಗಂಟೆ ಇಪ್ಪತ್ತೊಂದು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 4-30 ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಪುನಃ ಸಭೆಯು 4.40 ಕ್ಕೆ ಸಮಾವೇಶಗೊಂಡಿತು.
ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

3 ಪ್ರಶ್ನೋತ್ತರಗಳು.

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ದೇವನಹಳ್ಳಿಗೆ ಹೇಮಾವತಿ ನೀರು.

163(1366) ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಕ್ಷೇತ್ರಕ್ಕೆ ಹೇಮಾವತಿ ನೀರನ್ನು ತರಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ;

ಆ) ಹಾಗಿದ್ದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ಸಬ್ ಡಿವಿಜನ್‌ಗೆ ಬರುವ ತಾಲ್ಲೂಕುಗಳಾದ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಈ ತಾಲ್ಲೂಕುಗಳಿಗೂ ಸದರಿ ನದಿ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಚಂದ್ರಣ್ಣ :— ಮಾನ್ಯ ಉಪಾಧ್ಯಕ್ಷರೆ, ದೇವನಹಳ್ಳಿ ಕ್ಷೇತ್ರಕ್ಕೆ ಹೇಮಾವತಿ ನೀರನ್ನು ತರುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಸರ್ಕಾರ ಇಲ್ಲವೆಂದು ಹೇಳಿದೆ. ಇವತ್ತು ನಮಗೆ ಬಹಳಷ್ಟು ನೀರಿನ ಬವಣೆ ಜಾಸ್ತಿಯಿದೆ.

ಇದುವರೆಗೆ ಯಾವುದೇ ಸರ್ಕಾರಗಳು ಸಹಿತ ಈವೊಂದು ವಿಷಯದಲ್ಲಿ ಗಮನಹರಿಸಿಲ್ಲ. ಆ ಕಾರಣಕ್ಕೋಸ್ಕರ ಈಗಾಗಲೇ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರನ್ನು ಬಿಟ್ಟು ಬೆಂಗಳೂರಿಗೆ ನೀರು ಕೊಡಬೇಕೆಂದು ಹೇಳಿ ಆ ಪ್ರಯತ್ನ ಬಹಳ ನಡೆಯುತ್ತಿದೆ ಎನ್ನುವ ವಿಚಾರ ಇವತ್ತು ನಮ್ಮ ಗಮನಕ್ಕೆ ಬಂದಿದೆ. ಇವತ್ತು ದೇವನಹಳ್ಳಿಗೂ ಸಹ ಆ ನೀರನ್ನು ತರಬೇಕೆಂದು ನಮಗೂ ಸಹ ಬಹಳ ತೊಂದರೆಯಿದೆ ಎನ್ನುವ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮಂತ್ರಿಗಳು ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಉಪಾಧ್ಯಕ್ಷರೆ, ಹೇಮಾವತಿಯಿಂದ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟಿ ತಾಲ್ಲೂಕಿನವರು ನೀರು ಕೇಳುತ್ತಿದ್ದಾರೆ. ಈಗಾಗಲೇ ನಮಗೆ ನಿಮಗೆ ಗೊತ್ತಿರುವಹಾಗೆ ತುಮಕೂರಿನವರೆಗೆ ನೀರು ಕೊಟ್ಟು ಅಲ್ಲಿಯವರೆಗೆ ಕೆಲಸ ಕಾರ್ಯಗಳನ್ನು ಮಾಡಿದರೆ ಬೇಕಾದಷ್ಟು ಪ್ರಯೋಜನವಾಗುತ್ತದೆನ್ನುವುದು ಇರತಕ್ಕ ವಿಚಾರ. ಒಂದು ಅಂಶ ಸತ್ಯ. ದೊಡ್ಡಬಳ್ಳಾಪುರ, ದೇವನಹಳ್ಳಿ, ನೆಲಮಂಗಲ, ಹೊಸಕೋಟಿ ಇವುಗಳೆಲ್ಲ ಬಹಳ ಡ್ರೈ ತಾಲ್ಲೂಕುಗಳು. ಜೊತೆಗೆ ಹಾವೇರಿ ಬೇಸಿನ ಡಿಫಿಷಿಟ್ ಬೇಸಿನ್. ಅದಕ್ಕೆ ನಾನೊಂದು ಆಲೋಚನೆ ಮಾಡಿದ್ದೇನೆ, ನೇತ್ರಾವತಿ ನೀರನ್ನು ಡೈವರ್ಷನ್ ಮಾಡುವ ಬಗ್ಗೆ ಒಂದು ಟೆಕ್ನಿಕಲ್ ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಿ ನೇತ್ರಾವತಿಯನ್ನು ಹೇಮಾವತಿಗೆ ಡೈವರ್ಟ್ ಮಾಡಿದರೆ ಈ ಡಿಫೀಟ್ ಇರತಕ್ಕ ಬೇಸಿನ್‌ಗಳಿಗೆ ತುಮಕೂರು ಅಥವಾ ಮತ್ತೊಂದು ಭಾಗಕ್ಕೆ ಸಮರ್ಪಕವಾಗಿ ನೀರು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಅದರ ಬಗ್ಗೆ ತಾಂತ್ರಿಕವಾಗಿ ಆಲೋಚನೆ ಮಾಡಬೇಕೆನ್ನುವ ದೃಷ್ಟಿಯಿಂದ ಇನ್ನೊಂದು ವಾರದಲ್ಲಿ, ನೇತ್ರಾವತಿ ಡೈವರ್ಷನ್ ಟು ಹೇಮಾವತಿ ಎನ್ನುವ ಬಗ್ಗೆ ತಾಂತ್ರಿಕ ಸಮಿತಿಯನ್ನು ನೇಮಿಸಿ ಸಾಧ್ಯತೆಗಳ ಬಗ್ಗೆ ತಾಂತ್ರಿಕತೆಯ ಬಗ್ಗೆ ಚರ್ಚೆ ಮಾಡಿದ ನಂತರ ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕಾಗುತ್ತದೆ. ಅಲ್ಲಿಯವರೆಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಚಂದ್ರಣ್ಣ :— ಹೈ ಪವರ್ ಕಮಿಟಿಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ ಎಂದು ನಾನು ಅಂದುಕೊಂಡಿಲ್ಲ. ದಯಮಾಡಿ ಹೈ ಪವರ್ ಕಮಿಟಿ ಏನಿದೆ ಅದರ ಸಭೆ ಸೇರುವುದರ ಜೊತೆಯಲ್ಲಿ ಆ ಸಭೆಗೆ ನಮ್ಮನ್ನು ಸಹಿತ ಆಹ್ವಾನ ಮಾಡಬೇಕು. ಆ ಸಭೆಯಲ್ಲಿ ನಾನು ಈ ಪ್ರಸ್ತಾವನೆಯನ್ನು ಇಡಬೇಕೆಂದು ನನ್ನ ಭಾವನೆ. ಮಾನ್ಯ ಮಂತ್ರಿಗಳು ಬಹಳ ಸಂತೋಷದಿಂದ ಒಪ್ಪಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಬೇರೆ ನದಿ ನೀರನ್ನು ಇದಕ್ಕೆ ತಂದು ಸೇರಿಸುತ್ತೇವೆಂದು ಹೇಳತಕ್ಕದ್ದು ಇಲ್ಲಿ ಅಪ್ರಸ್ತುತವೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ರಾಮನಗರ ಸಬ್ ಡಿವಿಜನ್‌ಗಳಲ್ಲಿ, ಈಗಾಗಲೇ ನೀರಾವರಿ ಸೌಲಭ್ಯಗಳು ಅದರ ಬಗ್ಗೆ ವಿಚಾರ ಇದೆ. ಆದರೆ ದೊಡ್ಡಬಳ್ಳಾಪುರ ಸಬ್ ಡಿವಿಜನ್‌ನಲ್ಲಿ ಯಾವುದೇ ತಾಲ್ಲೂಕುಗಳನ್ನು ಸಹಿತ ಈವೊಂದು ಕಾನೂನಿನಿಂದ ವಂಚಿತರಾಗಿದ್ದಾರೆ. ಆದ್ದರಿಂದ ನಾವು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ, ಈಗಾಗಲೇ ನಮ್ಮಲ್ಲಿ ಬೋರ್‌ವೆಲ್‌ಗಳು 1 ಸಾವಿರ ಅಡಿಗೆ ಆಳಕ್ಕೆ ಹೋಗಿವೆ. ಬಹಳ

ತೊಂದರೆಯಾಗಿದೆ. ಇನ್ನು ಐದು ಹತ್ತು ವರ್ಷಗಳು ಹೋದರೆ ಬಹುಶಃ ನಾವು ಬಾಟಲ್‌ಗಳಲ್ಲಿ ನೀರು ತಂದು ಕುಡಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇವತ್ತು ನಾವೇನು 15 ರೂಪಾಯಿ ಕೊಟ್ಟು ಕುಡಿಯುವ ನೀರಿನ ಬಾಟಲ್‌ಗಳನ್ನು ಕೊಂಡುಕೊಳ್ಳುತ್ತೇವೆ ಆ ರೀತಿ ನಮ್ಮ ಕಡೆಗೆ ಆಗುತ್ತದೆ. ತಾವು ಮುಂಚಿತವಾಗಿ ಈ ಕಡೆಗೆ ಗಮನಹರಿಸಿ ಈವೊಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಅದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ನೇತ್ರಾವತಿ ನದಿ ನೀರು ತುಮಕೂರು ಜಿಲ್ಲೆಗೆ ಬರುತ್ತದೆಂದು ಹೇಳಿ ಬಹಳ ವರ್ಷಗಳಿಂದ ಹೋರಾಟ ಮಾಡಿ ಇದನ್ನು ಡೈವರ್ಟ್ ಮಾಡಕೂಡದು ಇದರಲ್ಲಿ ಏನು 9 ಟಿಎಂಸಿ ಎಂದು ಮಂತ್ರಿಗಳು ಹೇಳುತ್ತಾರೆ, 17 ರಿಂದ 20 ಟಿಎಂಸಿ ನೀರು ಇದೆಯೆಂದು ಅಲ್ಲಿನ ಸಾರ್ವಜನಿಕರು ಹೇಳತ್ತಾರೆ. ಇದನ್ನು ಡೈವರ್ಟ್ ಮಾಡಿ ಹೇಮಾವತಿಗೆ ಸೇರಿಸುವ ಸ್ಕೀಮ್‌ನ್ನು ಮಂತ್ರಿಗಳು ಸಾಧು ಎನ್ನುತ್ತಾರಾ, ಹಿಂದೆ ನಮಗೆಲ್ಲ ಹೇಳಿದ್ದರು ನೇತ್ರಾವತಿ ಸ್ಕೀಮ್ ಇವತ್ತಲ್ಲ ನಾಳೆ ತುಮಕೂರು ಜಿಲ್ಲೆಗೆ ನೀರಾವರಿಗೆ ಬರಬೇಕಾಗಿರುವ ನೀರು ಎಂದು ಹೇಳಿ. ಹಾಗೇನಾದರೂ ಆದರೆ ತುಮಕೂರು ಜಿಲ್ಲೆಯವರಿಗೆ ಆಗುವ ಅನ್ಯಾಯವನ್ನು ಅವರು ಯಾವರೀತಿ ಸರಿಪಡಿಸುತ್ತಾರೆ, ನೇತ್ರಾವತಿ ನೀರನ್ನು ಹೇಮಾವತಿಗೆ ಡೈವರ್ಟ್ ಮಾಡುವ ಮೊದಲೇ ಈ ವಿಚಾರ ಒಂದು ಸಲ ಪಾರ್ಲಿಮೆಂಟ್‌ನಲ್ಲೂ ಸಹ ಚರ್ಚೆಯಾಗಿದೆ; ಡೈವರ್ಟ್ ಮಾಡುತ್ತಾರೆಂದು ಹೇಳಿ. ಅಲ್ಲಿಂದಲೇ ಈಗ ಲಾ ಅಂಡ್ ಆರ್ಡರ್ ಶುರುವಾಗಿರುವುದು ತುಮಕೂರು ಜಿಲ್ಲೆಯಲ್ಲಿ. ತಾವು ಇದರ ಬಗ್ಗೆ ಇನ್ನೊಂದು ಸಲ ಪರಾಮರ್ಶೆ ಮಾಡಬೇಕು. ಈ ತರಹ ತಾವು ಹೇಳಿಬಿಟ್ಟರೆ ನಾಳೆ ನಮ್ಮ ಜಿಲ್ಲೆಯಲ್ಲಿ ಹೋರಾಟಗಳು ಆಗಿಬಿಡುತ್ತವೆ. ಅದಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕು. ನೇತ್ರಾವತಿಯನ್ನು ತುಮಕೂರಿಗೆ ಉಳಿಸಿ ಕೊಡುತ್ತೀರಾ ಅಥವ ಅದನ್ನು ಏನಾದರೂ ಡೈವರ್ಟ್ ಮಾಡಲಿಕ್ಕೆ ಯೋಚನೆ ಮಾಡುತ್ತೀರಾ ಎಂದು?

ಶ್ರೀ ಕೆ.ಎನ್. ನಾಗೇಗೌಡ :— ಬಹಳ ಪ್ರಾಮುಖ್ಯವಾಗಿ ಮಾನ್ಯ ಮಾಧುಸ್ವಾಮಿಯವರು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಹೇಮಾವತಿ ವಾಟರ್ ಪ್ಲಾನ್ 78ಟಿಎಂಸಿಗೆ ಇರತಕ್ಕದ್ದು ಈಗಾಗಲೇ ಅನುಮೋದನೆಯಾಗಿರತಕ್ಕದ್ದು ಗೊತ್ತಿರುವಂತಹ ವಿಚಾರ. ಶೇಕಡ 15 ರಷ್ಟು ರೀಜನರೇಟ್ ಆದರೆ ಅಲ್ಲಿ ಬರತಕ್ಕ ನೀರಿನಲ್ಲಿ ಕೊಡತಕ್ಕದ್ದು ಎರಡನೆಯ ವಿಚಾರ. ಈಗಾಗಲೇ ತುಮಕೂರು ಜೋನ್‌ಗೆ ಚನ್ನರಾಯಪಟ್ಟಣ, ತಿಪಟೂರು, ತುರುವೇಕೆರೆ, ಗುಬ್ಬಿ, ಕುಣಿಗಲ್, ನಾಗಮಂಗಲ 3 ಲಕ್ಷದ 89 ಸಾವಿರ ಎಕರೆಗೆ ನಾವು ಈಗಾಗಲೇ ಅಚ್ಚುಕಟ್ಟು ಮಾಡಿರತಕ್ಕದ್ದು. ನಾನು ಅವರಿಗೆ ಏನು ವಿಚಾರ ಹೇಳಿದೆ ಅಂದರೆ, ದೇವನಹಳ್ಳಿ ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಹೊಸಕೋಟೆ ಇಲ್ಲಿ ಕುಡಿಯುವ ನೀರಿಗೆ ತೊಂದರೆ ಇರತಕ್ಕ ವಿಚಾರ ಇದೆ. ವ್ಯವಸಾಯ ನೀರಿಗಿಂತ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎನ್ನತಕ್ಕ ಮಾತನ್ನು ಹೇಳಿದ್ದರಿಂದ ಬೋರ್‌ವೆಲ್‌ಗಳು ಬಹಳಷ್ಟು ಕೆಳಮಟ್ಟಕ್ಕೆ ಹೋಗಿವೆ ನೀರೇ ಸಿಗದಿರತಕ್ಕ ಪರಿಸ್ಥಿತಿ ಇದೆಯೆನ್ನತಕ್ಕ ಮಾತನ್ನು ಹೇಳಿದ್ದರಿಂದ ನೇತ್ರಾವತಿಯನ್ನು ಹೇಮಾವತಿಗೆ ಡೈವರ್ಟ್

ಮಾಡಿ ತುಮಕೂರಿಗೆ ಆ ಜಿಲ್ಲೆಗೆ ಸ್ಪಬಿಲೈಸ್ ಮಾಡತಕ್ಕದ್ದು ಮೇನ್ ಇಂಟೆನ್‌ಷನ್. ತುಮಕೂರು ಜಿಲ್ಲೆಯಲ್ಲಿ 3 ಲಕ್ಷದ 89 ಸಾವಿರ ಎಕರೆಗೆ ನಾವೇನು ವಾಟರ್ ಪ್ಲಾನ್ ಮಾಡಿಕೊಂಡಿದ್ದೇವೆ 78 ಟಿಎಂಸಿ ವಾಟರ್ ಪ್ಲಾನ್ ಒಳಗಡೆ ಅದನ್ನು ಸ್ಪಬಿಲೈಸ್ ಮಾಡಬೇಕೆನ್ನತಕ್ಕದ್ದು ಇಂಟೆನೆಷನ್. ಮೊದಲೇ ನಾನು ಹೇಳಿದಹಾಗೆ ಕಾವೇರಿ ಬೇಸಿನ್ ಡಿಫಿಸಿಟ್ ಬೇಸಿನ್. ಆ ಡಿಫಿಸಿಟ್ ಬೇಸಿನ್‌ಗೆ ಅವರು ಈಗಾಗಲೇ ತಮಿಳುನಾಡಿನ ಒಂದು ಅರ್ಜಿ ಸಹ ಇದೆ. ಬೇಕಾದರೆ ಅವರು ಡೈವರ್ಟ್ ಮಾಡಿಕೊಳ್ಳಬಹುದು ಅದನ್ನು ಡೈವರ್ಟ್ ಮಾಡಿಕೊಳ್ಳತಕ್ಕ ಅವಕಾಶಗಳು ಕರ್ನಾಟಕಕ್ಕೆ ಇದೆ ನಮಗೆ ಇಲ್ಲವೆಂದು ಹೇಳಿ. ಆದರೆ ನಾನು ಪೀಸಬಲಿಟಿ ಸ್ಟಡಿ ಮಾಡಿಸುತ್ತೇನೆ. ನೇತ್ರಾವತಿ ಡೈವರ್ಷನ್ನು ಹೇಮಾವತಿಗೆ ಮಾಡಿ ತುಮಕೂರು ಭಾಗದಲ್ಲಿ ಟೇಲ್ ಎಂಡರ್ಸ್‌ಗೆ ಅಚ್ಚುಕಟ್ಟನ್ನು ಸ್ಪಬಿಲೈಸ್ ಮಾಡುವುದಕ್ಕೆ ಆಗುತ್ತದೆಯೇ ಎನ್ನುವ ಬಗ್ಗೆ ಸಾಧ್ಯತೆಗಳ ಬಗ್ಗೆ ವಿಚಾರ ಮಾಡುತ್ತೇನೆ. ಒಂದು ವಾರದಲ್ಲಿ ಒಂದು ಕಮಿಟಿ ಮಾಡುತ್ತೇನೆ. ಕಮಿಟಿ ಮಾಡಿ ಅವರು ಟೆಕ್ನಿಕಲ್ ಕಮಿಟಿಯವರು ತಾಂತ್ರಿಕವಾಗಿ ನಮಗೆ ವರದಿಯನ್ನು ಕೊಡಲಿ. ತದನಂತರ ಜನತಾ ಪ್ರತಿನಿಧಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಹೇಮಾವತಿ ಎಲ್ಲಿ ಹೋಗುವುದಿಲ್ಲ ಅಲ್ಲಿ ನೇತ್ರಾವತಿ ಹೋಗಬೇಕೆನ್ನುವುದು ನಮ್ಮ ಕಲ್ಪನೆ ಇರುವುದು. ಹೇಮಾವತಿಯ ಎಡಭಾಗದಲ್ಲಿ ಏನು ರೈತರಿಗೆ ಅನ್ಯಾಯವಾಗಿದೆ ಅಲ್ಲಿಗೆ ಏನಾದರೂ ನೇತ್ರಾವತಿ ನೀರು ತಂದು ಕೊಡುತ್ತೀರಾ ಹೇಳಿ? ನೀವು ಹೇಮಾವತಿಗೆ ಡೈವರ್ಟ್ ಮಾಡಿ ಮತ್ತೆ ಇನ್ನು ಮಿಕ್ಕದ 1 ಲಕ್ಷದ 20 ಸಾವಿರ ಎಕರೆಗೆ ನೀರು ಕೊಡುತ್ತೇವೆಂದರೆ ಪರ್ಮನೆಂಟಾಗಿ ನಾವು ವಂಚಿತರಾಗುತ್ತೇವೆ. ಇದನ್ನು ನಾವು ಮಾನ್ಯ ಸಚಿವರಿಗೆ ಹೇಳಬೇಕಾಗುತ್ತದೆ. ದೊಡ್ಡ ಪ್ರತಿಭಟನೆ ಅಲ್ಲಿ ಆಗುತ್ತದೆ. ಎಲ್ಲಿ ಹೇಮಾವತಿ ಆಗೋಲ್ಲ ಅಲ್ಲಿಗೆ ನೀವು ನೇತ್ರಾವತಿ ನೀರು ಕೊಡಬೇಕಾಗುತ್ತದೆ. ಆ ಬಗ್ಗೆ ನೀವೇನು ಹೇಳುತ್ತೀರಿ?

ಶ್ರೀ ಕೆ.ಎನ್. ನಾಗೇಗೌಡ :— ಈಗ ವಿವರಕ್ಕೆ ಹೋಗುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ :— ತಾವು ನೇತ್ರಾವತಿಯನ್ನು ಡೈವರ್ಷನ್ ಮಾಡಿ ತುಮಕೂರು ಜಿಲ್ಲೆಗೆ ಕೊಡಬೇಕು ಎಂದು ಹೇಳತಕ್ಕದ್ದು ನಾನು ಸ್ವಾಗತ ಮಾಡುತ್ತೇನೆ. ಆದರೆ ಒಂದು. ಏಕೆಂದರೆ ತಾವು ಹೇಳಿದ್ದೀರಿ. ಈಗಾಗಲೇ ತಮಿಳುನಾಡಿನವರು ಕೂಡ ನೇತ್ರಾವತಿಯಿಂದ ಡೈವರ್ಟ್‌ಮಾಡಿ ಏನುವಲ್ಲಿ ಇನ್‌ಸಫಿಶಿಯೆಂಟ್ ವಾಟರ್ ಇದೆ ಅಲ್ಲಿ ಡೈವರ್ಟ್ ಮಾಡಿ ತರಬೇಕು ಎನ್ನತಕ್ಕಂಥ ವಾದವನ್ನೂ ಈಗಾಗಲೇ ಅವರು ಮುಂದಿಟ್ಟಿದ್ದಾರೆ. ಅಂದಮೇಲೆ ತಾವು ವಿಧಾನಸಭೆಯಲ್ಲಿ ಈ ರೀತಿ ಹೇಳಿಕೆ ಕೊಡುವುದರಿಂದ ತೊಂದರೆಯಾಗುವುದಿಲ್ಲವೆ? ನಮ್ಮ ನೀರಿನ ನಮ್ಮ ಹಕ್ಕು, ಅದು ವೆಸ್ಟರ್ನ್ ಘಾಟ್ಸ್‌ನಲ್ಲಿ ಹರಿಯತಕ್ಕದ್ದು, ಅದರ ಕ್ಲೈಮ್ ಯಾರಿಗೂ ಇಲ್ಲ, ಅದನ್ನು ಯಾವತ್ತು ಬೇಕಾದರೂ ಬಳಸಿಕೊಳ್ಳಬಹುದು ಎಂದು ಹೇಳಬಹುದು. ದಯಮಾಡಿ ಏನು ಬೇಕಾದರೂ ಕೂಡ ಪರಿಶೀಲನೆ ಮಾಡಿಸಿ, ಟೆಕ್ನಿಕಲ್ ಕಮಿಟಿ ಅಂತೆಲ್ಲ ಮಾಡಿ. ಇದು ಪತ್ರಿಕೆಯಲ್ಲಿ ಪ್ರಚಾರವಾಗಿ ಅವರಿಗೆ ಸಹಾಯವಾಗುವ ರೀತಿಯಲ್ಲಿ ದಯವಾಡಿ ಹೊರಗೆ ಹೋಗುವುದು ಬೇಡ ಎಂದು ನನ್ನ ವಿನಂತಿ, ಅಷ್ಟೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಜಯಚಂದ್ರ ಅವರು ಏನು ಹೇಳಿದ್ದಾರೆ, ಅದು ಸರಿಯಾದದ್ದು ಅಲ್ಲ. ಇದು ಯಾರಿಗೂ ಏನೂ ಸಹಾಯವಾಗುವುದಿಲ್ಲ. ವೆಸ್ಟರ್ನ್ ಫ್ಲೋಯಿಂಗ್ ರಿವರ್ಸ್‌ನಲ್ಲಿ ತಮಿಳುನಾಡಿಗೆ ಹಕ್ಕಿಲ್ಲ. 250 ಟಿ.ಎಂ.ಸಿ. ಬಗ್ಗೆ ಈಗಾಗಲೇ ಕಾವೇರಿ ಪ್ರಾಧಿಕಾರ ಆಗಿದೆ. ಪ್ರಾಧಿಕಾರದ ಮುಂದೆ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಇದು ಹಿಂದೆಯೇ ಎರಡು-ಮೂರು ಸಾರಿ ತಾಂತ್ರಿಕ ಸಮಿತಿಯವರು ನೇತ್ರಾವತಿ ಡೈವರ್ಶನ್ ಬಗ್ಗೆ ಚರ್ಚೆಮಾಡಿಕೊಟ್ಟ ಒಂದು ಸಣ್ಣ ರಿಪೋರ್ಟ್ ಕೂಡ ನಮ್ಮ ಹತ್ತಿರ ಇದೆ. ಇನ್ವೆಸ್ಟಿಗೇಟ್ ಮಾಡಿಸಿದರೆ ತಪ್ಪೇನೂ ಇಲ್ಲ. ಇನ್ವೆಸ್ಟಿಗೇಟ್ ಮಾಡಿಸೋಣ.

ಶ್ರೀ ಎ. ರುಕ್ಮಯ್ಯ ಪೂಜಾರಿ :— ಅಧ್ಯಕ್ಷರೇ, ಅದು ನೇತ್ರಾವತಿ ನದಿ ನಮ್ಮ ಜಿಲ್ಲೆಯಲ್ಲಿರುವ ನದಿಯೇ ಅಥವಾ ಬೇರೆ ನೇತ್ರಾವತಿ ನದಿಯೆ?

ಶ್ರೀ ಕೆ. ಜಯರಾಮಶೆಟ್ಟಿ :— ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅದನ್ನು ಬೇರೆ ಕಡೆಗೆ ಹರಿಸುವ ಯೋಚನೆಯನ್ನು ಏಕೆ ಮಾಡಿದ್ದೀರಿ?

ಶ್ರೀ ಜಿ.ಸಿ. ಮಾಧುಸ್ವಾಮಿ :— ಆಗಲೇ ಈ ಯೋಜನೆಯ ನಕಾಶೆ ಸಿದ್ಧವಾಗಿಬಿಟ್ಟಿದೆ.

ಶ್ರೀ ಡಿ. ರುಕ್ಮಯ್ಯ ಪೂಜಾರಿ :— ನೇತ್ರಾವತಿ ನದಿಯಲ್ಲಿ ನೀರೇ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಸುಮ್ಮನೆ ಏಕೆ ಜಗಳವಾಡುತ್ತೀರಿ? ನಮ್ಮ ಬೀದರ್‌ಗೆ ಆ ನದಿಯನ್ನು ಕಳಿಸಿಕೊಡಿರಿ, ಈ ಪಂಚಾಯತಿಯೇ ಮುಗಿದುಹೋಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ :— ನಾನು ಸ್ಪಷ್ಟವಾಗಿ ಹೇಳಿದೆ. ಅವರ ಪಕ್ಷದ ಹಿರಿಯ ನಾಯಕರಾದ ಆಚಾರ್ಯ ಅವರು ಅನೇಕಸಾರಿ ಹೇಳಿದ್ದಾರೆ. ವೆಸ್ಟರ್ನ್ ಫ್ಲೋಯಿಂಗ್ ರಿವರ್ಸ್ ಬಗ್ಗೆ ಮೂರು ಸಾವಿರ ಟಿ.ಎಂ.ಸಿ.ಯಷ್ಟು ನೀರಿದೆ, ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರ ವಿಫಲವಾಗಿದೆ. ಇದಕ್ಕೆ ಹೈಪವರ್ ಕಮಿಟಿಯನ್ನು ಕಾನ್ಸ್‌ಟ್ಯೂಟ್ ಮಾಡಬೇಕು. ಆ ನೀರನ್ನು ಉಪಯೋಗಿಸಿಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಆಚಾರ್ಯ ಅವರು ಅನೇಕಸಾರಿ ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ. ಜಯರಾಮಶೆಟ್ಟಿ :— ನೆರೆ ಬರುವುದಕ್ಕೆ ಪರಿಹಾರ ಆಗಲಿ ಎಂದು ಅವರು ಹೇಳಿರಬಹುದು. ಇದು ಕುಡಿಯುವ ನೀರಿಗೆ ಸಂಬಂಧಪಟ್ಟಿದ್ದು ಅಲ್ಲ. ನೀವು ಅದನ್ನು ತಪ್ಪಾಗಿ ತಿಳಿದುಕೊಂಡಿರಬೇಕು.

ಶ್ರೀ ಜಿ.ಸಿ. ಮಾಧುಸ್ವಾಮಿ :— ನಿಮ್ಮಪಕ್ಷದವರೇ ಡೆಪ್ಯುಟಿ ಸ್ಪೀಕರ್ ಆಗಿದ್ದಾಗ ಹೇಳಿದ್ದಾರೆ, ನೇತ್ರಾವತಿ ನೀರನ್ನು ತುಮಕೂರಿಗೆ ಕೊಡುತ್ತೇವೆ ಎಂದು ಹೇಳಿ. ಅದು ನಿಮ್ಮದೇ ಕಾರ್ಯಕ್ರಮ. ಪಾಪ, ಅದಕ್ಕೆ ನಾಗೇಗೌಡರನ್ನು ಏಕೆ ಗುರಿಮಾಡುತ್ತೀರಿ?

ಶ್ರೀ ಕೆ. ಜಯರಾಮಶೆಟ್ಟಿ :— ನಮ್ಮ ಜಿಲ್ಲೆಯ ಜನರಿಗೆ ಕುಡಿಯುವುದಕ್ಕೆ ನೀರಿನ ಯೋಜನೆಯನ್ನು ಹಾಕಿಕೊಡಿ. ಈ ನದಿಯ ನೀರನ್ನು ಎಲ್ಲೆಲ್ಲೋ ಊರಿಗೆ ತೆಗೆದುಕೊಂಡುಹೋಗುವುದು ಬೇಡ.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ :— ಬ್ಲೂಪ್ರಿಂಟ್ ಆಗಿ ಪ್ರಾಜೆಕ್ಟ್ ತಯಾರಾಗಿದೆ. ನೀರು ಜಾಸ್ತಿ ಇದ್ದರೆ ಕೊಡಲಿ. ಇಲ್ಲದಿದ್ದರೆ ಅವರಿಗೇ ಬಿಟ್ಟು ಬಿಟ್ಟು ನಮಗೇ ಕೊಡಿ ಎಂದು ನಾವು ಕೇಳುವುದಿಲ್ಲ. ನೀರು ಎಕ್ಸಸ್ ಇದ್ದರೆ ನಮಗೆ ಕೊಡಲಿ ಎಂದು ಕೇಳಿದ್ದೇವೆ. ಎಕ್ಸಸ್ ಇದೆ ಎಂದು ರಿಪೋರ್ಟ್ ಇದೆ. ದಯವಿಟ್ಟು ಅದಕ್ಕೆ ಅವರು ಒಪ್ಪಿಕೊಳ್ಳಲಿ. ಈ ಹಂತದಲ್ಲಿ ತರಲೆ ಮಾಡತಕ್ಕಂಥಾದ್ದು ಏನೂ ಅವಶ್ಯಕತೆ ಇಲ್ಲ.

ಶ್ರೀ ಕೆ. ಜಯರಾಮಶೆಟ್ಟಿ :— ಗ್ರಾಮೀಣ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ. ಅದು ಬಿಟ್ಟು ಎಲ್ಲೆಲ್ಲೋ ನೀರನ್ನು ತೆಗೆದುಕೊಂಡು ಹೋಗುವುದು ಸರಿಯಲ್ಲ.

ಯಲಹಂಕ ಡಿ.ಜಿ.ಪಿ. ಯೋಜನೆ.

194 (1470) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಯಲಹಂಕ ಡಿ.ಜಿ.ಪಿ. ಯೋಜನೆಯಡಿಯಲ್ಲಿರುವ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಎಷ್ಟು?

ಆ) ಈ ಯೋಜನೆಯ ಉತ್ಪಾದನಾ ಗುರಿ ಎಷ್ಟು?

ಇ) ಕಳೆದ 5 ವರ್ಷಗಳಲ್ಲಿ ಈ ಯೋಜನೆಯಡಿ ನಿಗದಿಪಡಿಸಿದ ಮತ್ತು ಸಾಧಿಸಿದ ಗುರಿ ಎಷ್ಟು?

ಈ) ಅಲ್ಲಿ ಉತ್ಪಾದಿಸಿದ ವಿದ್ಯುತ್ ಉತ್ಪಾದನಾ ವೆಚ್ಚವೆಷ್ಟು?

ಉ) ಅದನ್ನು ಗ್ರಾಹಕರಿಗೆ ಸರಬರಾಜು ಮಾಡುವ ಬೆಲೆ ಎಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಯಲಹಂಕ ಡಿ.ಜಿ.ಪಿ. ಯೋಜನೆಯ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 127.92 ಮೆಗಾವಾಟ್‌ಗಳು

ಈ ಯೋಜನೆಯ ಸಾಮಾನ್ಯ ವಾರ್ಷಿಕ ಉತ್ಪಾದನಾ ಗುರಿ 767.5 ದಶಲಕ್ಷ ಯೂನಿಟ್ಟುಗಳು.

ಕಳೆದ 5 ವರ್ಷಗಳಲ್ಲಿ ನಿಗಧಿಪಡಿಸಿದ ಗುರಿ ಮತ್ತು ಸಾಧನೆಗಳ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಗುರಿ	ಸಾಧನೆ
1993-94	1993-94ರ ಸಾಲಿನಲ್ಲಿ ಈ ಯೋಜನೆಯು ಕಾರ್ಯಾರಂಭ ಮಾಡಿದ್ದರಿಂದ ವಿದ್ಯುತ್ ಉತ್ಪಾದನೆಗೆ ಗುರಿಯನ್ನು ನಿಗದಿ ಪಡಿಸಿರುವುದಿಲ್ಲ	148.5 ದಶಲಕ್ಷ ಯೂನಿಟ್ಟುಗಳು

ವರ್ಷ	ಗುರಿ	ಸಾಧನೆ
1994-95	767.5 ದಶಲಕ್ಷ ಯೂನಿಟ್ಟುಗಳು	364.6 ದಶಲಕ್ಷ ಯೂನಿಟ್ಟುಗಳು
1995-96	767.5 ದಶಲಕ್ಷ ಯೂನಿಟ್ಟುಗಳು	542.5 ದಶಲಕ್ಷ ಯೂನಿಟ್ಟುಗಳು
1996-97	767.5 ದಶಲಕ್ಷ ಯೂನಿಟ್ಟುಗಳು	536.7 ದಶಲಕ್ಷ ಯೂನಿಟ್ಟುಗಳು
1997-98	640.0 ದಶಲಕ್ಷ ಯೂನಿಟ್ಟುಗಳು (1997-98 ರಲ್ಲಿ ಇಂಜಿನ್‌ಗಳ 12,000 ಗಂಟೆಗಳ ಪೂರ್ವನಿಯೋಜಿತ ನಿರ್ವಹಣೆಯ ಕಾರ್ಯವನ್ನು ಕೈಗೊತ್ತಿಕೊಂಡ ಕಾರಣದಿಂದಾಗಿ ಗುರಿಯನ್ನು ಇಳಿಸಲಾಯಿತು.	665.5 ದಶಲಕ್ಷ ಯೂನಿಟ್ಟುಗಳು
1998-99	672.0 ದಶಲಕ್ಷ ಯೂನಿಟ್ಟುಗಳು (1998-99 ರಲ್ಲಿ ಇಂಜಿನ್‌ಗಳ 24,000 ಗಂಟೆಗಳ ಪೂರ್ವನಿಯೋಜಿತ ನಿರ್ವಹಣೆಯ ಕಾರ್ಯವನ್ನು ಕೈಗೊತ್ತಿಕೊಂಡ ಕಾರಣದಿಂದಾಗಿ ಗುರಿಯನ್ನು ಇಳಿಸಲಾಯಿತು.	563.2 ದಶಲಕ್ಷ ಯೂನಿಟ್ಟುಗಳು. (ಫೆಬ್ರುವರಿ 99ರ ಅಂತ್ಯದವರೆಗೆ)

ಈ) ಈದ ಸಾಲಿನಲ್ಲಿ ಅಂದರೆ 1997-98 ರಲ್ಲಿ ಉತ್ಪಾದನಾ ವೆಚ್ಚ ಪ್ರತಿ ಯೂನಿಟ್ಟಿಗೆ ರೂ.3.80 ಆಗಿತ್ತು.

1998-99ರ ವರ್ಷ ಇನ್ನೂ ಅಂತ್ಯಗೊಳ್ಳಬೇಕಾಗಿರುವುದರಿಂದ, ಈ ವರ್ಷವು ಅಂತ್ಯಗೊಂಡ ನಂತರ ವಿದ್ಯುತ್ ಉತ್ಪಾದನಾ ವೆಚ್ಚವನ್ನು ಲೆಕ್ಕಾಚಾರ ಮಾಡಲಾಗುವುದು.

ಉ) ಮಂಡಳಿಯು ವಿಧಿಸಿದ ಸರ್ಚಾಜನ್ನು ನೀಡಿ, ಈ ಯೋಜನೆಯಲ್ಲಿ ಭಾಗವಹಿಸಿದ ವಿದ್ಯುತ್ ಬಳಕೆದಾರರಿಗೆ ಪ್ರತೀ ಯೂನಿಟ್ಟಿಗೆ ರೂ. 3.55ರ ದರದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಬಾಕಿ ಉಳಿದಿರುವ ವಿದ್ಯುತ್ ಇತರ ಬಳಕೆದಾರರ ಉಪಯೋಗಕ್ಕಾಗಿ ಗ್ರೀಡ್‌ಗೆ ಸೇರ್ಪಡೆಯಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:— ಉತ್ತರದಲ್ಲಿ ಉತ್ಪಾದನೆಯ ವೆಚ್ಚ ಯೂನಿಟ್‌ಗೆ ಮೂರು ರೂಪಾಯಿ ಎಂಭತ್ತು ಪೈಸೆ ಎಂದು ಹೇಳಿದ್ದಾರೆ. ನೀವು ಅದಕ್ಕೆ ಬ್ರೇಕ್ ಅಪ್ ಕೊಡಿ. ಆಮೇಲೆ ಅದಕ್ಕೆ ಫ್ಯುಯಲ್ ಯಾವುದು? ಡೀಸಲ್ ಅಥವಾ ಯಾವುದನ್ನು

ಉಪಯೋಗ ಮಾಡುತ್ತೀರಿ ಎಂದು ಗೊತ್ತಾಗಬೇಕು. ಒಂದು ಲೀಟರ್ ಪೈಯಲ್‌ಗೆ ಎಷ್ಟು ಯೂನಿಟ್ ಉತ್ಪಾದನೆಯಾಗುತ್ತದೆ? ಈ ಮೂರಕ್ಕೆ ನನಗೆ ಮಾಹಿತಿ ಕೊಡಿ.

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಸದಸ್ಯರು ಕಾಸ್ಟ್ ಏನಿದೆ ಎಂದು ಕೇಳಿದ್ದಾರೆ. ಮತ್ತೆ ಎಲ್ಲೆಲ್ಲಿ ಸಪ್ಲೈ ಮಾಡುತ್ತೀರಿ, ಪ್ರತಿವರ್ಷ ಉತ್ಪಾದನೆ ಬಗ್ಗೆ ಕೇಳಿದ್ದಾರೆ. ಇದರ ಬ್ರೇಕಪ್ ಮತ್ತು ಒಂದು ಲೀಟರ್ ಡೀಸಲ್‌ಗೆ ಎಷ್ಟು ಜನರೇಟ್ ಆಗುತ್ತದೆ ಎನ್ನುವುದರ ಸಂಪೂರ್ಣ ಮಾಹಿತಿಯನ್ನು ತರಿಸಿ ನಾಳೆಯೇ ಅವರಿಗೆ ನಾನು ಒದಗಿಸುತ್ತೇನೆ.

ಅರೆ ಖುಷ್ಕಿ ಪ್ರದೇಶಗಳು ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೆರೆ ಆಶ್ರಯದಲ್ಲಿ ವ್ಯವಸಾಯ ಮಾಡುತ್ತಿರುವುದು.

195(1465) ಶ್ರೀ ಎಸ್. ಜಯಣ್ಣ (ಕೊಳ್ಳೇಗಾಲ) :— ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ, ಹಲವಾರು ಶತಮಾನಗಳಿಂದ ಕೆರೆ ಆಶ್ರಯದಲ್ಲಿನ ಜಮೀನುಗಳಲ್ಲಿ ತರೀಬೆಳೆ ತೆಗೆಯುತ್ತಿದ್ದೂ ಸರಿಯಷ್ಟೆ. ಕಬಿನಿ ನಾಲೆ ನಿರ್ಮಾಣದ ನಂತರ ಆ ಪ್ರದೇಶಗಳನ್ನು ಅರೆ ನೀರಾವರಿ ಎಂದು ಘೋಷಿಸಿರುವುದು ನಿಜವೇ. ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

2. ಸದರಿ ಪ್ರದೇಶಗಳನ್ನು ಪೂರ್ಣ ನೀರಾವರಿ ಎಂದು ಘೋಷಿಸಲು ಅಲ್ಲಿನ ರೈತರು ಮನವಿ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಆ ಬಗ್ಗೆ ಕೈಕೊಂಡಿರುವ ಕ್ರಮಗಳೇನು?

3. ಯಾವಾಗ ಆ ಪ್ರದೇಶಗಳನ್ನು ಪೂರ್ಣ ನೀರಾವರಿ ಎಂದು ಘೋಷಿಸಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ಕಬಿನಿ ಯೋಜನೆಯಡಿಯಲ್ಲಿನ ಬರುವ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಆಚ್ಚುಕಟ್ಟು ವ್ಯಾಪ್ತಿಗೆ ವಿತರಣಾ ನಾಲೆ 41 ರಿಂದ 62 ರವರೆಗೆ ಒಳಪಟ್ಟಿರುತ್ತದೆ ಮತ್ತು ಹಲವಾರು ಸಣ್ಣ ಕೆರೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಹಾಗೂ ಹಲವಾರು ಶತಮಾನಗಳಿಂದ ಕೆರೆಗಳ ಆಶ್ರಯ ಪ್ರದೇಶಗಳಲ್ಲಿ ತರಿ ಬೆಳೆ ಬೆಳೆಯುವುದು ತಿಳಿದು ಬಂದಿರುತ್ತದೆ. ಇದಕ್ಕೆ ಪೂರಕವಾದ ನೀರು ಸರಬರಾಜು ಇದ್ದಿಲ್ಲವಾದ್ದರಿಂದ ಕಬಿನಿ ಯೋಜನೆಯು ಅದ ಮೇಲೆ ಪೂರಕವಾದ ನೀರು ಸರಬರಾಜನ್ನು ಅರೆ ನೀರಾವರಿ ಬೆಳೆಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಿದ್ದು ಅದರ ರೀತ್ಯಾ ಕಬಿನಿ ಯೋಜನೆಯಡಿಯಲ್ಲಿ ಬರುವ ಮೇಲ್ಕಂಡ ಆಚ್ಚುಕಟ್ಟು ಪ್ರದೇಶಗಳನ್ನು ಅರೆ ನೀರಾವರಿ ಎಂದು ಘೋಷಿಸಲಾಗಿದೆ.

Atchkat coming under Yalandur & Kollegal Taluka lies in the distributory from 41 to 62 of KRBC. Before advent of KRBC come wet atchkat were under tanks, which were not getting assured water supply. After advent of Kabini Project, these lands get assured water

supply for semidry crops. Hence as per the sanctioned Kabini Project report the lands coming under tank atchkat of Yalandur and Kollegal Taluks has been declared as semidry crops

2. ಕಬಿನಿ . ಬಲದಂಡೆ ನಾಲೆಯ ವಿತರಣಾ ನಾಲೆ 41 ರಿಂದ 43 ರವರೆಗಿನ ಅಚ್ಚುಕಟ್ಟು ಪ್ರದೇಶದ ರೈತರು ಸದರಿ ಕಬಿನಿ ಯೋಜನೆಯಲ್ಲಿ ಅಚ್ಚುಕಟ್ಟು ಪ್ರದೇಶವನ್ನು ಪೂರ್ಣ ನೀರಾವರಿ ಪ್ರದೇಶವೆಂದು ಘೋಷಿಸಲು ಮನವಿ ಸಲ್ಲಿಸಲಾಯಿತು. ದಿ: 11-6-92 ರ ಪತ್ರದಲ್ಲಿ ಬೆಳೆ ಪದ್ಧತಿಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ. ಆದ್ದರಿಂದ ಖಾತ್ರಿಯಾದ ನೀರು ಸರಬರಾಜನ್ನು ಅರೆ ನೀರಾವರಿ ಬೆಳೆಗೆ ಸರಬರಾಜು ಮಾಡಲಾಗುತ್ತಿದೆ.

The Ryots of above lands have represented for changing the cropping pattern and the proposal was submitted. In the letter dt. 11-6-92 it is stated that the cropping pattern cannot be altered. Hence assured water supply for semidry crop is being supplied.

3. ಸದರಿ ವಿತರಣಾ ನಾಲೆಗಳ ಅಚ್ಚುಕಟ್ಟು ಪ್ರದೇಶವನ್ನು ಅರೆ ನೀರಾವರಿಗೆ ವಿನ್ಯಾಸಗೊಳಿಸಿರುವುದರಿಂದ ಸದರಿ ಪ್ರದೇಶಗಳನ್ನು ಪೂರ್ಣ ನೀರಾವರಿ ಪ್ರದೇಶವೆಂದು ಘೋಷಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

Since the project is designed for semidry crops from Distributory No.41 to 62, the question of changing the cropping pattern does not arise.

ಶ್ರೀ ಎನ್. ಜಯಣ್ಣ:— ಮಾನ್ಯ ಅಧ್ಯಕ್ಷರೇ, ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಲವಾರು ಶತಮಾನಗಳಿಂದ ಸುಮಾರು 26 ಕೆರೆಗಳ ಆಶ್ರಯದಲ್ಲಿ ಇದುವರೆಗೆ ತರಿ ಬೆಳೆ ತೆಗೆಯುತ್ತಿದ್ದ ಕಬಿನಿ ನಾಲೆ ನೀರಾವರಿ ಬಂದ ನಂತರ ಸದರಿ ಪ್ರದೇಶವನ್ನು ಅರೆನೀರಾವರಿಯಾಗಿ ಪರಿವರ್ತಿಸಲಾಗಿದೆ. ಇದು ಸಂಪೂರ್ಣವಾಗಿ ತಾಂತ್ರಿಕ ದೋಷದಿಂದ ಕೂಡಿದೆಯೇ ಹೊರತು ನೀರಿನ ಪ್ರಮಾಣವಾಗಲೀ, ಮಳೆ ಪ್ರಮಾಣವಾಗಲೀ ಕಡಿಮೆಯಾಗಿಲ್ಲ. ಮಳೆ ಆಶ್ರಯದಲ್ಲಿ ತರಿ ಜಮೀನಿನಲ್ಲಿ ಬೆಳೆಯತಕ್ಕಂಥ ಯಾವುದೇ ಬೆಳೆಯನ್ನು ಕೂಡ ನಾವು ಬದಲಾವಣೆ ಕೂಡ ಮಾಡಿಕೊಂಡಿಲ್ಲ. ಅದೇ ಬೆಳೆಯನ್ನು ನಾವು ತೆಗೆಯುತ್ತಿದ್ದೇವೆ. ಏನೋ ತಾಂತ್ರಿಕ ದೋಷದಿಂದ ಆಗಿರತಕ್ಕಂಥಾದ್ದನ್ನು ಸರಿಪಡಿಸಿಕೊಡಬೇಕು. ಎಂದು ಮಾನ್ಯ ನೀರಾವರಿ ಮಂತ್ರಿಗಳಲ್ಲಿ ನಾನು ಮನವಿಮಾಡಿ ಕೊಳ್ಳುತ್ತೇನೆ. 40 ರಿಂದ 60 ಏನು ತೂಬುಗಳಿವೆ, 40ರಿಂದ 60 ನೇ ತೂಬಿಗೆ ಬರತಕ್ಕಂಥ ಎಲ್ಲ ನೀರಾವರಿ ಪ್ರದೇಶ ಕೂಡ ಕೆರೆ ಆಶ್ರಯವನ್ನು ಹೊಂದಿರತಕ್ಕಂಥ ಪ್ರದೇಶ. ನಾವು ಯಾವುದೇ ಬೆಳೆ ಪದ್ಧತಿಯನ್ನು ಬದಲಾವಣೆ ಮಾಡಿಲ್ಲ. ಮತ್ತೆ ತಾವು ಎಷ್ಟು ಪ್ರಮಾಣದಲ್ಲಿ ನೀರು ಕೊಡುತ್ತಿದ್ದೀರಿ, ಅಷ್ಟೇ ಪ್ರಮಾಣದಲ್ಲಿ ನಾವು ಇದುವರೆಗೂ ಕೂಡ ತರಿ ಬೆಳೆಯನ್ನು ಮಾಡುತ್ತಿದ್ದೇವೆ. ನಮಗೆ ಹೆಚ್ಚಿನ ನೀರಿನ ಅಗತ್ಯ ಇಲ್ಲದಿದ್ದರೂ ಕೂಡ ಏನು ತಾಂತ್ರಿಕ ದೋಷದಿಂದ ಆಗಿರತಕ್ಕಂಥ, ಅರೆ ನೀರಾವರಿ ಎಂದು ತಾವು

ಏನು ಘೋಷಿಸಿದ್ದೀರಿ, ಅದನ್ನು ಬದಲಾವಣೆ ಮಾಡಿಕೊಡಬೇಕು. ಮತ್ತು ಕೆನಾಲ್ ಲೈನಿಂಗ್ ಮಾಡಿಕೊಡಬೇಕು. ಸಂಪೂರ್ಣವಾಗಿ ಪೂರ್ಣ ನೀರಾವರಿ ಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಹೇಳಿ ಕೆನಾಲ್ ಲೈನಿಂಗ್‌ಗೋಸ್ಕರ ಆಸ್ಪದ ಮಾಡಿಕೊಟ್ಟು ಸಂಪೂರ್ಣ ನೀರಾವರಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈಗ ಕೊಡತಕ್ಕಂಥ ನೀರಿನ ಪ್ರಮಾಣವೇ ನಮಗೆ ಸಾಕಾಗಿದೆ. ಮಳೆ ಆಶ್ರಯದಲ್ಲಿ ನಾವು ಸಂಪೂರ್ಣ ತರಿ ಬೆಳೆಯನ್ನು ಬೆಳೆಯುತ್ತಿದ್ದೇವೆ. ಆ ಮಳೆ ನೀರು ಕೂಡ ಇವತ್ತು ಸಾಕಷ್ಟು ಇರುವುದರಿಂದ ನಾವು ತರಿ ಬೆಳೆ ಬೆಳೆಯುವುದಕ್ಕೆ ಆಸ್ಪದ ಮಾಡಿಕೊಡಬೇಕು ಅಧ್ಯಕ್ಷರ ಮೂಲಕ ಮಾನ್ಯ ಭಾರಿ ನೀರಾವರಿ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಣ್ಣನವರು ಕೇಳಿರತಕ್ಕಂಥ ವಿಚಾರ ಏನು ಎಂದರೆ,-

(ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಉಪಸ್ಥಿತರಾದರು)

ಸೆಮಿಡ್ರೈ ಕ್ರಾಪ್ ಇದೆ, ಅದನ್ನು ನಾವು ಫುಲ್ ವೆಟ್ ಕ್ರಾಪ್ ರೀತಿ ಮಾಡಿಕೊಡಬೇಕು, ಡಿಫ್ಯೂಟ್ 41 ರಿಂದ 62ವರೆಗೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಎರಡು ವಿಚಾರಗಳು ಇವೆ. ಜಯಣ್ಣ ಅವರಿಗೆ ಗೊತ್ತಿರುವಹಾಗೆ ಈ ನಾಲೆಯಲ್ಲಿ ಅನೇಕ ಕಿರಿಗಳು ಇವೆ. ಆ ಕಮಾಂಡ್ ಏರಿಯಾ ಕೂಡ ಇದೆ. ಆದರೆ ಈ ಯೋಜನೆಯ ಅಚ್ಚುಕಟ್ಟಿನಲ್ಲಿ ಕೆನಲ್ ಬಹಳ ಕಿಮ್ಮುಹೋಗಿದೆ. 25 ವರ್ಷಕ್ಕೆ ಒಂದು ಸಾರಿ ಕೆನಾಲ್ ರಿಪೇರಿ ಮಾಡದೇ ಹೋದರೆ ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ 30 ಪರ್ಸೆಂಟ್ ನೀರು ಪೋಲಾಗುತ್ತಿದೆ ಎನ್ನತಕ್ಕಂಥ ನಮಗೆ ಬಂದಿರತಕ್ಕಂಥ ಮಾಹಿತಿ. ಆದ್ದರಿಂದ ನಾನು ಒಂದು ಯೋಚನೆ ಏನು ಮಾಡುತ್ತೇನೆ ಎಂದರೆ ಒಬ್ಬರು ಚೀಫ್ ಇಂಜಿನಿಯರ್‌ನ್ನು ಕಳಿಸಿ, ಇಬ್ಬರು- ಮೂವರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ಹಾಕಿ ಕೆನಾಲ್ ರಿಪೇರಿ ಯಾವ ಪ್ರಮಾಣದಲ್ಲಿ ಆಗಬೇಕು, ನೀರಿನ ಲಭ್ಯತೆ ಎಷ್ಟು ಇದೆ, ಅದು ಎಷ್ಟು ಅಚ್ಚುಕಟ್ಟು ಆಗುತ್ತದೆ, ಈಗ ಇರತಕ್ಕಂಥ ಅಚ್ಚುಕಟ್ಟು ಏನು, ಕ್ರಾಪ್ ಫ್ಯಾಕ್ಟರ್ ಯಾವುದು, ಅದಕ್ಕೆ ಸೆಮಿಡ್ರೈ ಎಷ್ಟು ಮಾಡಬಹುದು ಮತ್ತು ಫುಲ್ ವೆಟ್ ಮಾಡುವ ಬಗ್ಗೆ ತೀವ್ರ ಪರಿಶೀಲನೆಯನ್ನು ಮಾಡಲಾಗುವುದು.

ಅಧ್ಯಕ್ಷರು :— ಜಯಣ್ಣನವರೇ, ನೀವು ಬೇರೆ ಏನಾದರೂ ಕೇಳಬೇಕೇ?

ಶ್ರೀ ಎಸ್. ಜಯಣ್ಣ :— ಕೊಟ್ಟಂತಹ ಉತ್ತರ ಸಮಂಜಸವಾಗಿದೆ.

ಜಯನಗರ ಕ್ಷೇತ್ರದ ಲಳ್ಳಂದ್ರ ಕ್ವಾರಿ ಜಾಗದ ಬತ್ತುವರಿ.

198(1355) ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) :— ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಯನಗರ ವಿಧಾನಸಭಾ ಕ್ಷೇತ್ರದ ಲಳ್ಳಂದ್ರ ಕ್ವಾರಿ ಜಾಗವು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ, ಈ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ಖಾಲಿ ಮಾಡಿಸದೇ ಇರಲು ಕಾರಣಗಳೇನು?

ಇ) ಈ ಜಾಗವನ್ನು ಖಾಲಿ ಮಾಡಿಸಿ ಇದನ್ನು ಸಂರಕ್ಷಿಸಲು ಸರ್ಕಾರದವರು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ವಿ. ಸೋಮಣ್ಣ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :—

ಅ) ಬಂದಿದೆ.

ಆ) ವಿಭಾಗ 62ರ ಲಕ್ಷಸಂದ್ರ ಕ್ವಾರಿ ಜಾಗವನ್ನು ಗುಡಿಸಲು ನಿವಾಸಿಗಳು ಒತ್ತುವರಿ ಮಾಡಿಕೊಂಡಿದ್ದು ಈ ಜಾಗವನ್ನು ಸದರಿ ನಿವಾಸಿಗಳಿಗೆ ಪರ್ಯಾಯ ಜಾಗ ಕಂಡುಕೊಂಡ ನಂತರ ಖಾಲಿ ಮಾಡಿಸಲಾಗುವುದು.

ಇ) ಹೌದು.

ಶ್ರೀ ರಾಮಲಿಂಗಾರೆಡ್ಡಿ :— ಈ ಪ್ರದೇಶದಲ್ಲಿ ಕ್ವಾರಿ ಜಾಗ ಸುಮಾರು 10 ಎಕರೆ ಇರಬಹುದು. ಈ ಕ್ವಾರಿ ಹಿಂದೆ ಬಿ.ಡಿ.ಎ.ನಲ್ಲಿತ್ತು. ಈಗ ಅವರು ಕಾರ್ಪೊರೇಷನ್‌ಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ಕಾರ್ಪೊರೇಷನ್‌ನಲ್ಲಿ ಕೂಡ ಹಿಂದೆ ಒಂದು ಉದ್ಯಾನವನ ಮಾಡಬೇಕು, ಇಲ್ಲವೆಂದರೆ ಸ್ಪೇಡಿಯಂ ಮಾಡಬೇಕು ಎನ್ನತಕ್ಕಂಥ ಕಾರ್ಯಕ್ರಮ ಇತ್ತು. ಆದರೆ, ಅದು ಯಾವುದನ್ನೂ ಮಾಡಿಲ್ಲ. ಈಗ ಸುತ್ತಲೂ ಇರತಕ್ಕಂಥವರು ಒತ್ತುವರಿ ಮಾಡುತ್ತಿದ್ದಾರೆ. ಈ ಒತ್ತುವರಿಯನ್ನು ನಿಲ್ಲಿಸಿ ಎಂದು ಹೇಳಿ ಪ್ರತಿ ಅಧಿವೇಶನದಲ್ಲಿ ಕೂಡ ನಾನು ಪ್ರಶ್ನೆ ಕೇಳುತ್ತಲೇ ಬಂದಿದ್ದೇನೆ. ಆದರೆ ಒತ್ತುವರಿ ಅಂತೂ ನಿಂತಿಲ್ಲ. ಅಲ್ಲಿ ಫೆನ್ಸಿಂಗ್ ಹಾಕಿ ಎಂದು ಬಹಳಷ್ಟು ಸಲ ಒತ್ತಾಯ ಕೂಡ ನಾನು ಮಾಡಿದ್ದೇನೆ. ಇಲ್ಲಿ ಮಾಡಿದ್ದೇನೆ ಮತ್ತು ಕಾರ್ಪೊರೇಷನ್ ಅಧಿಕಾರಿಗಳ ಹತ್ತಿರ ಕೂಡ ಮಾತನಾಡಿದ್ದೇನೆ. ಸಂಬಂಧಪಟ್ಟ ಎಲ್ಲರ ಗಮನಕ್ಕೆ ತಂದಿದ್ದೇನೆ.ಈ ಒತ್ತುವರಿಯನ್ನು ನಿಲ್ಲಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ :— ಈ ಲಕ್ಷಸಂದ್ರ ಕ್ವಾರಿಯಲ್ಲಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ 25 ಗುಡಿಸಲುಗಳು ಅಲ್ಲಿ ಇದೆ ಎಂದು ಕೊಳಚೆ ನಿರ್ಮೂಲನ ಮಂಡಳಿಯವರು ಐಡೆಂಟಿಫೈ ಮಾಡಿದ್ದಾರೆ. ಅಲ್ಲಿ ಸುತ್ತಲೂ ಆಗಿರತಕ್ಕಂಥ ಒತ್ತುವರಿಯನ್ನು ತೆಗೆದುಹಾಕುವುದಕ್ಕೆ ತೀರ್ಮಾನ ಮಾಡಿ ಎರಡನೇ ತಾರೀಖು ಬೆಳಿಗ್ಗೆ ಮಾನ್ಯ ವಿಧಾನಸಭಾ ಸದಸ್ಯರಾದ ರಾಮಲಿಂಗಾರೆಡ್ಡಿಯವರು, ನಾವು, ಅಧಿಕಾರಿಗಳು ಹೋಗಿ ಎಲ್ಲರೂ ಸ್ಥಳಕ್ಕೆ ಭೇಟಿ ಇತ್ತು ಅವತ್ತೇ ತಮ್ಮ ಸಮಕ್ಷಮದಲ್ಲಿ ಕುಳಿತುಕೊಂಡು ಅದಕ್ಕೆ ಫೆನ್ಸ್ ಮಾಡುವುದಕ್ಕೆ ಸರ್ಕಾರದಿಂದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡುತ್ತೇವೆ.

ಕಬಿನಿ ಜಲಾಶಯ ಯೋಜನೆ.

199(1447) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಬಿನಿ ಜಲಾಶಯದ ನೀರಿನ ಸಂಗ್ರಹದ ಪ್ರಮಾಣ ಎಷ್ಟು; ಎಷ್ಟು ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಈ ಜಲಾಶಯವು ಎಷ್ಟು ವಿಸ್ತೀರ್ಣದ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸುವ ಸಾಮರ್ಥ್ಯ ಹೊಂದಿದೆ?

2. ಈ ಜಲಾಶಯದಿಂದ ಹಾಲಿ ಎಷ್ಟು ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುತ್ತಿದೆ ಇದರಿಂದ ನೀರಾವರಿಗೆ ಒಳಪಟ್ಟಿರುವ ಜಮೀನಿನ ವಿಸ್ತೀರ್ಣ ಎಷ್ಟು?

3. ಯೋಜನೆಯನ್ವಯ ಎಷ್ಟು ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗಿಲ್ಲ ಹಾಗೂ ಎಷ್ಟು ಭೂ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿಲ್ಲ?

4. ಕಬಿನಿ ಎರಡನೆ ಹಂತದ ಯೋಜನೆಯ ಕಾರ್ಯಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಇದ್ದಲ್ಲಿ, ಯಾವ ಹಂತದಲ್ಲಿದೆ. ಅದನ್ನು ಕಾರ್ಯಾರಂಭ ಮಾಡಲಾಗುವುದೇ?

5. ನಂಜನಗೂಡು ತಾಲ್ಲೂಕು ಬದನವಾಳು ಚಿಟ್ಟದಗುಂಡಿ ವಿತನೀರಾವರಿಗೆ ಒಳಪಡುವ ಜಮೀನಿನ ವಿಸ್ತೀರ್ಣ ಎಷ್ಟು ಯಾವ ಯಾವ ಗ್ರಾಮಗಳ ಯಾವ ಯಾವ ಸರ್ವೆ ನಂ. ಜಮೀನುಗಳು ಈ ನೀರಾವರಿಗೆ ಒಳಪಡುತ್ತವೆ? (ನಕ್ಷೆಯ ಸಹಿತ ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ಕಬಿನಿ ಜಲಾಶಯದ ನೀರಿನ ಸಂಗ್ರಹಣೆಯ ಪ್ರಮಾಣ 19.52 ಟಿ.ಎಂ.ಸಿ. ಹರಿನೀರಾವರಿ ವ್ಯವಸ್ಥೆಯಡಿಯಲ್ಲಿ 1,13,000 ಎಕರೆ ಹಾಗೂ ವಿತ ನೀರಾವರಿ ವ್ಯವಸ್ಥೆಯಡಿಯಲ್ಲಿ 1,34,400 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

2. ಈ ಜಲಾಶಯದಿಂದ ಹಾಲಿ 31.50 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುತ್ತಿದೆ. ಇದುಂದ 1,01,518 ಎಕರೆ ಪ್ರದೇಶಕ್ಕೆ ನೀರೊದಗಿಸಲಾಗುತ್ತಿದೆ.

3. ಯೋಜನೆಯಡಿಯಲ್ಲಿ 65.00 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶವಿದ್ದು 31.50 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಇನ್ನೂ 33.50 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗಿಲ್ಲ ಹಾಗೂ ಒಟ್ಟು 1,45,882 ಎಕರೆ (ಹರಿ ನೀರು 11,482 ಎಕರೆ+ ವಿತ ನೀರಾವರಿ 1,34,400 ಎಕರೆ) ಭೂ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿಲ್ಲ.

4. ಇದೆ ಅನ್ವೇಷಣಾ ಹಂತದಲ್ಲಿದೆ. ಬದನವಾಳು ಏತ ನೀರಾವರಿಗೆ ಒಳಪಡುವ ವಿಸ್ತೀರ್ಣ 9053 ಎಕರೆಗಳು ಸದರಿ ಯೋಜನೆಯ ಅಡಿಯಲ್ಲಿ ಬರುವ ಗ್ರಾಮಗಳ ವಿಸ್ತೀರ್ಣದ ವಿವರಗಳು:

					ಪುರಾ
1.	ಗೀಕಳ್ಳಿ	-	21.00	ಎಕರೆ	ಸರ್ವೆ ನಂ. ವಾರು
2.	ಮುಳ್ಳೂರು	-	385.03	-"	ವಿವರಗಳನ್ನು
3.	ಹೊರಳವಾಡಿ	-	81.21.	-"-	ಕಮಾಂಡ್ ಏರಿಯಾ
4.	ಬೆಂಡಗಳ್ಳಿ	-	165.30	-"	ಸರ್ವೆ ಮುಗಿದ
5.	ವೀರದೇವನಪುರ	-	499.04	-"-	ನಂತರ ಸಲ್ಲಿಸ-
6.	ಅಲಗಂಚಿ	-	500.00	-"	ಲಾಗುವುದು.
7.	ಬದನವಾಳು	-	1200.22	-"-	
8.	ಬಸವಟ್ಟಿಗೆ	-	250.00	-"-	
9.	ದೇವನೂರು	-	1800.22	-"-	
10.	ವರಹಳ್ಳಿ	-	200.00	-"-	
11.	ಕಳ್ಳನಹಟ್ಟಿ	-	300.22	-"-	
12.	ತಗಡೂರು	-	2650.00	-"-	

5. ಈ ಹಿಂದೆ ಉದ್ದೇಶಿಸಿದ್ದ ಚಿನ್ನದಗುಡಿಹುಂಡಿ ಏತ ನೀರಾವರಿ ಯೋಜನೆಯಡಿ 2281.00 ಎಕರೆ ವಿಸ್ತೀರ್ಣವು ಬದನವಾಳು ಏತ ನೀರಾವರಿ ಯೋಜನೆಯಡಿಯಲ್ಲಿ ಸೇರಿರುತ್ತದೆ ಹಾಗೂ ಬದನವಾಳು ಏತ ನೀರಾವರಿ ಯೋಜನೆ ಸರ್ಕಾರ ಆದೇಶ ಸಂಖ್ಯೆ : ನೀಇ 168 ಎಂಎಂಕೆ 97, ದಿನಾಂಕ 26-2-99 ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

ಶ್ರೀ ಎ.ಆರ್. ಕೃಷ್ಣ ಮೂರ್ತಿ :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನೂತನ ಜಿಲ್ಲೆಯ ವಿಚಾರದಲ್ಲಿ ನೀರಾವರಿಗೆ ಸಂಬಂಧಪಟ್ಟಹಾಗೆ ಒಂದು ಪ್ರಶ್ನೆಯನ್ನು ಮಾನ್ಯ ನೀರಾವರಿ ಸಚಿವರಲ್ಲಿ, ಕೇಳಿದ್ದೇನೆ. ಮಾನ್ಯ ಸಚಿವರು ಈ ಕಬಿನಿ ಜಲಾಶಯ ನೀರಿನ ಸಂಗ್ರಹ ಪ್ರಮಾಣ ಎಷ್ಟು ಮತ್ತು ಜಿಲ್ಲೆಯ ಉಪಯೋಗ ಎಷ್ಟು ಎಂದು ನಾನು ಕೇಳಿದ ಪ್ರಶ್ನೆಗೆ ಜಲಾಶಯದ ನೀರಿನ ಸಂಗ್ರಹ ಸುಮಾರು 19.52 ಟಿ.ಎಂ.ಸಿ. ಎಂದು ಉತ್ತರವನ್ನು ಕೊಟ್ಟಿದ್ದಾರೆ. ಮತ್ತು ಈ ಜಲಾಶಯದಲ್ಲಿ ಹಾಲಿ ಎಷ್ಟು ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುತ್ತಿದೆ, ಎಷ್ಟು ಬಳಸಿಕೊಳ್ಳಲಾಗಿಲ್ಲ ಎಂದು ಪ್ರಶ್ನೆ ಕೇಳಿದ್ದಕ್ಕೆ ಸನ್ಮಾನ್ಯ ಸಚಿವರು ಯೋಜನೆ ಅಡಿಯಲ್ಲಿ 65 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶ ಇದ್ದು 31.50 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಇದರಲ್ಲಿ ಸುಮಾರು

ಒಟ್ಟು ಒಂದು ಲಕ್ಷದ 45 ಸಾವಿರದ 882 ಎಕರೆ ಫ್ಲೋ ಇರಿಗೇಷನ್‌ಗೆ ಬಳಸಿಕೊಳ್ಳಲಾಗಿರುತ್ತದೆ. ಸುಮಾರು 11 ಸಾವಿರದ 482 ಮತ್ತು ಲಿಫ್ಟ್ ಇರಿಗೇಷನ್‌ನಲ್ಲಿ ಒಂದು ಲಕ್ಷದ 34 ಸಾವಿರದ 400ಎಕರೆ ರೂಪುರೇಷೆಯನ್ನು ನೀರಾವರಿಗೆ ಒಳಪಡಿಸಲಾಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನಾನು ತಮ್ಮ ಮುಖೇನ ಸನ್ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಕಬಿನಿ ಫ್ಲೋ ಅಂಡ್ ಲಿಫ್ಟ್ ಇರಿಗೇಷನ್ ಸಂಬಂಧಪಟ್ಟಂತೆ ತಾವೇನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ, ಮತ್ತು ಸುಮಾರು 65 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬಹುದು ಎಂದು ಹೇಳಿದ್ದೀರಿ. ಈ ಒಂದು ಯೋಜನೆ ತಮಗೆ ತಿಳಿದಮಟ್ಟಿಗೆ ಒರಿಜಿನಲ್ ಸ್ಕಾಂಕ್ಷನ್ ಆಗಿದ್ದು 1951ರಲ್ಲಿ, ತದನಂತರ 1970 ರಲ್ಲಿ ಮಾಡಿಫೈ ಪ್ರಾಜೆಕ್ಟ್ ಅಪ್ರೂವಲ್ ಆಯಿತು. later on comprehensive Kabini Project estimated cost Rs.390 crores. ಆದ 1986ರಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಕೂಡ ಆಗಿದೆ. ಹೀಗಿದ್ದರೂ ಕೂಡ ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ, 65 ಟಿ.ಎಂ.ಸಿ. ಬಳಕೆಯಾಗತಕ್ಕ ನೀರನ್ನು ಬರೀ 31.50 ಟಿ.ಎಂ.ಸಿ. ನೀರನ್ನು ಮಾತ್ರ ತಾವು ಉಪಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನುಳಿದ 33.50 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವುದಕ್ಕೆ ನಮ್ಮ ರಾಜ್ಯದ ರೈತರಿಗೆ ಅವಕಾಶ ಮಾಡಿಕೊಟ್ಟಿಲ್ಲವೆಂಬ ಅಂಶವನ್ನೂ ಕೂಡ ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮತ್ತೊಂದು ಈ ಕಬಿನಿ 2ನೇ ಹಂತದ ಯೋಜನೆಯ ಕಾರ್ಯಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು, yes, under investigation stage ಎಂದು ಉತ್ತರ ಕೊಟ್ಟಿದ್ದಾರೆ. ನಾನು ಈಗಾಗಲೇ ಹೇಳಿದಹಾಗೆ, ಈ ರಿವೈಸ್ಡ್ ಕಾಂಪ್ರಹೆನ್ಸೀವ್ ಎಸ್ಟಿಮೇಟ್ ಏನು ಸರ್ಕಾರದ ಮುಂದೆ ಬಂದಿದೆ, ಅದಕ್ಕೆ ಮಾನ್ಯ ಸಚಿವರು ಸರ್ಕಾರದ ಒಪ್ಪಿಗೆಯನ್ನು ಕೊಟ್ಟಿದ್ದಾರೆಯೇ? ಮತ್ತು ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಮತ್ತು ಇದನ್ನು ಯಾವಾಗ ಪೂರ್ಣಗೊಳಿಸಿ, ನಮ್ಮ ರಾಜ್ಯದ ರೈತರಿಗೆ, ನೀರಾವರಿಗೆ ಅವಕಾಶ ಮಾಡಿಕೊಡುತ್ತೀರಿ ಎಂಬುದನ್ನು ತಮ್ಮ ಮುಖೇನ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಶ್ನಾಕರ್ತೆಯವರು ಕೇಳಿರತಕ್ಕ ಎಲ್ಲಾ ಪ್ರಶ್ನೆಗಳಿಗೂ ಇಲ್ಲಿಯೇ ಉತ್ತರ ಇದೆ. ಈ ಯೋಜನೆಯ ಅಡಿಯಲ್ಲಿ 65ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅವಕಾಶವಿದೆ ಎಂದು ಹೇಳಿದ್ದೇವೆ. Only 31.50 T.M.C of water being utilised. Still 33.50 jas to be utilised. ಎಂದು ಹೇಳಿದ್ದೇವೆ. ಅದಕ್ಕೆ 1,150 ಕೋಟಿ ರೂಪಾಯಿಗಳ ಸಮಗ್ರ ಯೋಜನೆಯನ್ನು ಕಬಿನಿ ಯೋಜನೆಗೆ ಅಂದಾಜು ಮಾಡಲಾಗಿದೆ. ಎರಡನೇ ಹಂತದ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಾರೆ. It is seriously under consideration before the Government. ಎಂದು ಹೇಳಿದ್ದೇವೆ. ಇವತ್ತು ಬೆಳಿಗ್ಗೆ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಕಾಲದಲ್ಲಿ ಕಬಿನಿ ಎರಡನೇ ಹಂತದ ಯೋಜನೆಯನ್ನು

ತೆಗೆದುಕೊಳ್ಳಬೇಕೆಂದು ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಾ ಇದೆ, ಅದಕ್ಕೆ ಹಣಕಾಸು ಒದಗಿಸುವ ಬಗ್ಗೆ ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ, ಇನ್‌ವೆಸ್ಟಿಗೇಷನ್‌ನ್ನು ಮೂರು ತಿಂಗಳಲ್ಲಿ ಪೂರ್ಣ ಮಾಡಿಸುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ನಮ್ಮ ಭಾಗ ಮಳೆಯ ಆಶ್ರಯದ ಭಾಗವಾಗಿರುವುದರಿಂದ, ಮಾನ್ಯ ಸಚಿವರೇನು ಸರ್ಕಾರದ ವತಿಯಿಂದ ಉತ್ತರವನ್ನು ಕೊಟ್ಟಿದ್ದಾರೆ, ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆಂದು ಹೇಳಿದ್ದಾರೆ. ಅದು ಜರೂರಾಗಿ ಆಗಬೇಕು. ಏಕೆಂದರೆ, ಈ ಪ್ರಾಜೆಕ್ಟ್ ಪ್ರಾರಂಭವಾಗಿದ್ದು 1959ರಲ್ಲಿ, ಆದರೆ, ಇಲ್ಲಿಯವರೆಗೆ ಪೂರ್ಣಗೊಂಡಿಲ್ಲವೆಂಬ ಆತಂಕ ನಮ್ಮ ಜನರಲ್ಲಿದೆ. ಮಾನ್ಯ ಸಚಿವರು ಹೇಳಿದಹಾಗೆ, ಅದಷ್ಟು ಜರೂರಾಗಿ, ಒಂದು ಡಿವಿಜನ್ ಓಪನ್ ಮಾಡಿ, ಒಂದು ಕಾಂಪ್ರೆಹೆನ್ಸೀವ್ ಎಸ್ಟಿಮೇಟನ್ನು ಸರ್ಕಾರದ ಮುಂದೆ ಇಟ್ಟು, ಒಪ್ಪಿಗೆ ತೆಗೆದುಕೊಂಡು, ಆ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಇದರ ಬಗ್ಗೆ ಡೀಟೈಲ್ ಇನ್‌ವೆಸ್ಟಿಗೇಷನ್‌ಗೆ ಆರ್ಡರ್ ಮಾಡಿ ಮೂರು ತಿಂಗಳೊಳಗೆ ವರದಿಯನ್ನು ತರಿಸಿಕೊಳ್ಳುತ್ತೇವೆ.

ಧಾರವಾಡದಲ್ಲಿ ವಿದ್ಯುಚ್ಛಕ್ತಿ ಬಳಕೆ.

200(1381) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ಜಿಲ್ಲೆಯಲ್ಲಿ ಬಳಕೆಗಾಗಿ ಅವಶ್ಯಕತೆ ಇರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಆ) ಪ್ರಸ್ತುತ ಸರಬರಾಜು ಆಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಇ) ಈ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಧಾರವಾಡ ಜಿಲ್ಲೆಯಲ್ಲಿ ವಿದ್ಯುತ್‌ನ ಪ್ರಸ್ತುತ ಅನಿರ್ಬಂಧಿತ ಬೇಡಿಕೆ ಸರಾಸರಿ ದಿನಮಹಿ ಸುಮಾರು 1.75 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಿದೆ.

ಆ) ಪ್ರಸ್ತುತ ಈ ಜಿಲ್ಲೆಗೆ ಸರಬರಾಜಾಗುತ್ತಿರುವ ವಿದ್ಯುತ್ ನ ಪ್ರಮಾಣ ಸರಾಸರಿ ದಿನಮಹಿ ಸುಮಾರು 1.0 ದಶಲಕ್ಷ ಯೂನಿಟ್ಟುಗಳಷ್ಟಾಗಿರುತ್ತದೆ.

ಇ) ಸದ್ಯದ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ದಿನಮಹಿ 8 ಗಂಟೆಗಳ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಅಲ್ಲದೇ, ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಮಾಡುವುದೂ ಸಹ ಅನಿವಾರ್ಯವಾಗಿದೆ. ಬೆಳಿಗಿನ ಮತ್ತು

ಸಂಜೆಯ ಪೀಕ್ ಲೋಡ್ ಸಮಯಗಳಲ್ಲಿ ವಿದ್ಯುತ್ ಬೇಡಿಕೆಯನ್ನು ನಿಯಂತ್ರಿಸಲು ಮತ್ತು ವಿದ್ಯುತ್ ಲಭ್ಯತೆಯೊಂದಿಗೆ ಇದನ್ನು ಸರಿದೂಗಿಸಲು ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದೂ ಅನಿವಾರ್ಯವಾಗಿರುತ್ತದೆ. ಈಗ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬೆಳಗಿನ ಸಮಯಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಜಾರಿಗೊಳಿಸಲಾಗಿದೆ. ಈ ಕಾರಣಗಳಿಂದಾಗಿ ಪ್ರಸ್ತುತ ಕೊರತೆಯ ಪ್ರಮಾಣ ಸ್ವಲ್ಪ ಹೆಚ್ಚಾಗಿರುತ್ತದೆ. ಮುಂಬರುವ ತಿಂಗಳುಗಳಲ್ಲಿ ರಾಜ್ಯದ ವಿದ್ಯುತ್ ಜಾಲಕ್ಕೆ ಸುಮಾರು 600 ಮೆಗಾ ವಾಟ್ಸ್‌ಗಳ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಸೇರ್ಪಡೆಯಾಗಲಿದ್ದು, ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುತ್ತದೆ. ಧಾರವಾಡ ಜಿಲ್ಲೆಯಲ್ಲೂ ಸಹ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದರಿಂದ, ಕೊರತೆಯ ಪ್ರಮಾಣವು ಕಡಿಮೆಯಾಗುತ್ತದೆ.

ಅಲ್ಲದೇ, ಧಾರವಾಡ ಜಿಲ್ಲೆಯ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮತ್ತು ವಿದ್ಯುತ್ ಕೊರತೆಯನ್ನು ತುಂಬಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) 1) ಧಾರವಾಡ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಸುಮಾರು 42.8 ಮೆಗಾವಾಟ್ಸ್ ಸಾಮರ್ಥ್ಯದ ಒಂದು ಬಹು ಇಂಧನ ಆಧಾರಿತ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಖಾಸಗೀ ಕ್ಷೇತ್ರಗಳಲ್ಲಿ ಸ್ಥಾಪಿಸಲು ಉದ್ದೇಶಿಸಿದೆ.

2) ಧಾರವಾಡದ ಸಮೀಪ ನರೇಂದ್ರದಲ್ಲಿ ಹೊಸದಾಗಿ ಒಂದು 22 110 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸುಮಾರು 26.0 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿ, ಜನವರಿ 99 ರಲ್ಲಿ ಚಾಲನಗೊಳಿಸಿದೆ. ಈ ವಿದ್ಯುತ್ ಸ್ವೀಕರಣಾ ಕೇಂದ್ರವು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದ ನಂತರ ಧಾರವಾಡ ಜಿಲ್ಲೆಯಲ್ಲಿ ಹೆಚ್ಚಿನ ವಿದ್ಯುತ್ ಬೇಡಿಕೆಯನ್ನು ನೀಗಲು ಸಾಧ್ಯವಾಗುತ್ತದೆ.

3) ಗೋಪನ ಕೊಪ್ಪ, ನವಲಗುಂದ ಮತ್ತು ಕಾಡಪ ಕೊಪ್ಪ ಈ ಸ್ಥಳಗಳಲ್ಲಿ ತಲಾ ಒಂದೊಂದು 110 ಕೆ.ವಿ. ವಿದ್ಯುತ್ ಸಬ್- ಸ್ಟೇಷನ್ನುಗಳನ್ನು ಒಟ್ಟು ಸುಮಾರು 13.7 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತದೆ. ಗೋಪನ ಕೊಪ್ಪದಲ್ಲಿ 110.ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ಜೂನಿ 99ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ವಿದ್ಯುತ್ ಸಬ್-ಸ್ಟೇಷನ್ನುಗಳು ಕಾರ್ಯಾರಂಭ ಮಾಡಿದ ನಂತರ, ಧಾರವಾಡ ಜಿಲ್ಲೆಯಲ್ಲಿ ಹೈವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದರಿಂದ, ಹೆಚ್ಚಿನ ಸಂಖ್ಯೆಯ ವಿದ್ಯುತ್ ಬಳಕೆದಾರರ ವಿದ್ಯುತ್ ಬೇಡಿಕೆಯನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತದೆ.

ಶ್ರೀ ಅಶೋಕ್ ಪಾಟೀಲ್ (ಜಗದೀಶ್ ಶೆಟ್ಟರ್ ಅವರ ಪರವಾಗಿ) :— ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಧಾರವಾಡ ಜಿಲ್ಲೆಗೆ ಬೇಕಾಗಿರುವ ವಿದ್ಯುತ್ 1.75 ದಶಲಕ್ಷ ಯೂನಿಟ್ಸುಗಳು ಆದರೆ ಸರಬರಾಜಾಗುತ್ತಿರುವ ವಿದ್ಯುತ್ 1.0 ದಶಲಕ್ಷ ಯೂನಿಟ್ಸ್. ಅಂದರೆ, 0.75 ದಶಲಕ್ಷ ಯೂನಿಟ್ ಕಡಿಮೆ ಬೀಳುತ್ತಿದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶ ಮತ್ತು ಶಹರ್ ಪಟ್ಟಣದಲ್ಲಿ ಬಹಳಷ್ಟು ವಿದ್ಯುತ್ತಿನ ಅಭಾವ ಉಂಟಾಗಿ ಜನರು ಮೇಲಿಂದಮೇಲೆ

ರಸ್ತೆರೋಕೋ ಹಾಗೂ ಅನೇಕ ಕಾರ್ಯಕ್ರಮಗಳನ್ನು ಹಾಕುತ್ತಿದ್ದಾರೆ. ಆದ್ದರಿಂದ, ತಾವು ಈ ಕೊರತೆಯನ್ನು ಯಾವ ರೀತಿ ನೀಗಿಸುತ್ತೀರಿ. ಎರಡನೆಯದು ಈ 42 ಮೆಗಾವ್ಯಾಟ್ ವಿದ್ಯುತ್‌ನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ, ಪ್ರೈವೇಟ್ ಸೆಕ್ಟಾರ್‌ಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದನ್ನು ಯಾರಿಗೆ ಕೊಟ್ಟಿದ್ದೀರಿ ಮತ್ತು ನಮಗೆ ಯಾವಾಗ ಈ ವಿದ್ಯುತ್ ಬರುತ್ತದೆಂಬುದನ್ನು ಕೇಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಹಾಗೆ ಈಗಾಗಲೇ ಕೊರತೆ ಎಲ್ಲಾ ಕಡೆ ಇದೆ. ಬರೀ ಧಾರವಾಡ ಜಿಲ್ಲೆಯಲ್ಲೇ ಅಲ್ಲ, ರಾಜ್ಯದ ತುಂಬಾ ಈಗಾಗಲೇ ಕೊರತೆ ಇರುವುದರಿಂದ, ಹಾಲಿ ಉತ್ಪಾದನೆಯಾಗತಕ್ಕ ವಿದ್ಯುತ್‌ನಲ್ಲಿ ಎಲ್ಲಾ ಕಡೆ ಒಳ್ಳೆಯ ರೀತಿಯಲ್ಲಿ ಸರಬರಾಜು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಅಲ್ಲಿ ಈಗಾಗಲೇ 15 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಡಿಸ್ಟ್ರಿಬ್ಯೂಷನ್ ಸಿಸ್ಟಂಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುವಂತೆ ಈಗಾಗಲೇ 3-4 ಸಬ್ ಸ್ಟೇಷನ್ ಕೂಡ ಪ್ರಾರಂಭ ಮಾಡಿದ್ದೇವೆ. ಆಮೇಲೆ, ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಕೊಟ್ಟಿರತಕ್ಕ ಪ್ರೈವೇಟ್ ಕಂಪನಿ ಹೆಸರು ನನಗೆ ಗೊತ್ತಿಲ್ಲ. ಬೇಕಾದರೆ ನಾಳೆಯೇ ಕಂಪನಿಯ ಹೆಸರನ್ನು ತರಿಸಿಕೊಡುತ್ತೇನೆ. ಯಾವ ಯಾವ ಹಂತದಲ್ಲಿದೆ, ಏನೇನಾಗಿದೆ ಎಂಬುದನ್ನು ತರಿಸಿ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಈಗಾಗಲೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಕೇಳಿದಂತೆ, ಧಾರವಾಡ ಜಿಲ್ಲೆಯ ವಿದ್ಯುತ್ ಬಗ್ಗೆ ತಾವೇನೋ ಉತ್ತರ ಕೊಟ್ಟಿದ್ದೀರಿ. ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಯಾವಾಗ ಪ್ರಾರಂಭವಾಗುತ್ತದೆ? ನರೇಂದ್ರದ ಸ್ಟೇಷನ್ ಯಾವಾಗ ಪ್ರಾರಂಭವಾಗುತ್ತದೆ ಮತ್ತು ಗೋಪನ ಕೊಪ್ಪ ಎಂದು ನೀವೇನು ಹೇಳಿದ್ದೀರಿ ಈ ಮೂರು ಎಂದಿನಿಂದ ತಮ್ಮ ಕಾರ್ಯಕ್ರಮ ಮಾಡಿ, ವಿದ್ಯುತ್ ಸರಬರಾಜು ಮಾಡುವುದಕ್ಕೆ ಪ್ರಾರಂಭವಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ :— ಬೇಲೂರು ಕೈಗಾರಿಕಾ ಪ್ರದೇಶದಲ್ಲಿರುವ ಪಾಸಿ ಕಂಪನಿ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ನಾಳೆಯೇ ಈ ಮಾಹಿತಿ ತರಿಸಿಕೊಡುತ್ತೇನೆ. ಇನ್ನು ಈಗಾಗಲೇ ನನಗೆ ಮಾಹಿತಿ ಬಂದಿರುವ ಪ್ರಕಾರ ನರೇಂದ್ರ ಸ್ಟೇಷನ್ ಪೂರ್ಣವಾಗಿ ಆಗುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಬೇರೆ ಸ್ಟೇಷನ್‌ಗಳಿಗೂ ಹಣಕಾಸು ವ್ಯವಸ್ಥೆ ಮಾಡಿದ್ದೇವೆ, ಆದಷ್ಟು ಬೇಗ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :—ನರೇಂದ್ರ ಸ್ಟೇಷನ್ ಈಗಾಗಲೇ ಇನ್‌ಮೆಸ್ಟ್‌ಮೆಂಟ್ ಮಾಡಿ, ಎಲ್ಲವೂ ರೆಡಿ ಇದೆ. ಅದು ತೀವ್ರ ಪ್ರಾರಂಭವಾದರೆ, ಅಲ್ಲಿನ ತೊಂದರೆಯನ್ನು ನಿವಾರಿಸಬಹುದು. ಕೃಷಿ ವಿಶ್ವವಿದ್ಯಾನಿಲಯದವರ ಹೆಬ್ಬಳ್ಳಿ ಫಾರ್ಮ್ ರೀಸರ್ಚ್ ಸೇಟೋಷನ್ ಇದೆ. ಅಲ್ಲಿ ಕಾಟನ್ ಬಗ್ಗೆ ರೀಸರ್ಚ್ ಮಾಡುತ್ತಿದ್ದಾರೆ. ಅಲ್ಲಿ ವಿದ್ಯುತ್ ಸರಬರಾಜಿನ ತೊಂದರೆಯಿಂದ ರೀಸರ್ಚ್‌ಗೆ ಬಹಳ ಆತಂಕವಾಗಿದೆ. ಎರಡೂವರೆ ಲಕ್ಷ ರೂಪಾಯಿ ಖರ್ಚುಮಾಡಿ, ಅವರಿಗೆ ಲ್ಯಾಂಪ್ ಮಾಡಿಕೊಡಬೇಕಾಗಿದೆ. ಈ ಕೆಲಸವನ್ನು ಬೇಗ ಮಾಡಿಕೊಡಿ.

ಅಧ್ಯಕ್ಷರು :— ಯಾವುದೋ ಪ್ರಶ್ನೆ, ಯಾವುದೋ ಉಪ ಪ್ರಶ್ನೆ, ಮಂತ್ರಿ ಎಂದರೆ ಅವರೇನು ದೇವರೇ. ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಹೇಳಿದರೆ ನಮಗೆ ಸಾಕಾಗುತ್ತೆ. ಇನ್ನು ಸಂಬಂಧ ಇಲ್ಲದೇ ಇರುವುದನ್ನೆಲ್ಲಾ ಕೇಳಿದರೆ, ಅವರು ಹೇಳಿದಹಾಗೆಯೇ ಇದೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ವಿದ್ಯುತ್ ಕೊರತೆಯಿಂದ ಆ ರಿಸರ್ಚ್ ಫಾರ್ಮ್‌ಗೆ ತೊಂದರೆಯಾಗುತ್ತಾ ಇದೆ.

ವಿಟ್ಲ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆ.

201(1481) ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಟ್ಲ ವಿಧಾನಸಭಾ ಕ್ಷೇತ್ರದ ಏತ ನೀರಾವರಿ ಯೋಜನೆಯು ಸ್ಥಳೀಯ ರೈತರಿಗೆ ಪ್ರಯೋಜನೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಬಂದಿದೆ.

ಆ) ಈ ಯೋಜನೆಯನ್ನು (ಸಜೀಪ ಮುನ್ನೂರು ಏತ ನೀರಾವರಿ ಯೋಜನೆ) ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನ ಆಯವ್ಯಯದಲ್ಲಿ 10.00 ಲಕ್ಷ ರೂ. ಎಂದು ನಿಗದಿಪಡಿಸಿದ್ದು, ಸದರಿ ಕೆಲಸಕ್ಕೆ 3.00 ಲಕ್ಷ ರೂ.ಗಳ ಅನುದಾನದೊಂದಿಗೆ ಸೇರ್ಪಡೆಯಾಗಿದೆ. ಸದರೀ ಕಾಮಗಾರಿಯ ದುರಸ್ತಿಗಾಗಿ ರೂ. 6.40 ಲಕ್ಷಗಳಿಗೆ ಅಧೀಕ್ಷಕ ಅಭಿಯಂತರರು ದಿ: 13-11-98 ರಂದು ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ ಮತ್ತು ಏಪ್ರಿಲ್ 99ಕ್ಕೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಶ್ರೀ ಎ. ರುಕ್ಕಯ್ಯ ಪೂಜಾರಿ :— ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಸಜೀಪ ಮುನ್ನೂರು ಏತ ನೀರಾವರಿ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಈ ಹಿಂದೆ ಕೂಡ ವಿಧಾನ ಸಭೆಯಲ್ಲಿ ಈ ವಿಚಾರವಾಗಿ ಹಲವಾರು ಸಲ ಪ್ರಸ್ತಾಪ ಮಾಡಿದ್ದೇನೆ. ಆದರೆ, ಇನ್ನೂ ಕೂಡ ಸುಧಾರಣೆಯಾಗಿಲ್ಲ. ಅದರ ಪರಿಸ್ಥಿತಿ ಹಾಗೆಯೇ ಉಂಟು. ಈ ದಿನ ಅವರು ಕೊಟ್ಟಿರತಕ್ಕ ಉತ್ತರವೂ ಹಾಗೆಯೇ ಇದು, ಅದು ಕೂಡ ನಮ್ಮನ್ನು ಕನ್‌ಫ್ಯೂಸ್ ಮಾಡುತ್ತಿದೆ. ಈ ಯೋಜನೆಯನ್ನು ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನ ಆಯವ್ಯಯದಲ್ಲಿ 10.00 ಲಕ್ಷ ರೂಪಾಯಿಗಳ ನಿಗದಿಪಡಿಸಿದ್ದು, ಸದರಿ ಕೆಲಸಕ್ಕೆ

3 ಲಕ್ಷ ರೂಪಾಯಿಗಳ ಅನುದಾನದೊಂದಿಗೆ ಸೇರ್ಪಡೆಯಾಗಿದೆ ಮತ್ತು 6.40 ಲಕ್ಷ ರೂಪಾಯಿಗಳಿಗೆ ಅಧೀಕ್ಷಕ ಅಭಿಯಂತರರು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾರೆಂದು ಉತ್ತರದಲ್ಲಿ ಹೇಳಿದ್ದಾರೆ. ಇದೇ ನಮಗೆ ಕನ್ ಫ್ಯೂಸ್ ಮಾಡುತ್ತಿದೆ, ಇದೇನೆಂದು ನಮಗೆ ಗೊತ್ತಾಗುವುದಿಲ್ಲ. ಇದು ಸುಮಾರು 400 ಎಕರೆಗೆ ನೀರು ಕೊಡುವಂಥ ಯೋಜನೆ. ಆದರೆ, ಇವತ್ತು ಕೇವಲ 25 ಎಕರೆಗೆ ಮಾತ್ರ ನೀರು ಕೊಡುತ್ತಿದ್ದಾರೆ. ಅಷ್ಟು ಹಾಳಾಗಿದೆ ಮತ್ತು ಅದನ್ನು ವಿಸ್ತರಣೆ ಕೂಡ ಮಾಡಿಲ್ಲ. ನಾನು ಹಿಂದೆ ಕೂಡ ಪ್ರಸ್ತಾಪ ಮಾಡಿದ್ದೇನೆ. ನನಗೆ ಸರ್ಕಾರದಿಂದ ಇಷ್ಟೇ ಉತ್ತರ ಬೇಕು. ಈ ಏತ ನೀರಾವರಿ ಯೋಜನೆಯನ್ನು ಪೂರ್ತಿ ದುರಸ್ತಿ ಮಾಡಬೇಕು. ಈ ಯೋಜನೆಯು 400 ಎಕರೆಗಿಂತ ಮಿಕ್ಕಿ ನೀರು ಕೊಡುವಂಥ ಯೋಜನೆ ಅದು. ಇಷ್ಟು ಜಮೀನಿಗೆ ವಿಸ್ತರಣೆ ಮಾಡಿಕೊಡಬೇಕು ಮತ್ತು ಇದಕ್ಕೆ ಹಣವನ್ನು ಒದಗಿಸಿಕೊಡಬೇಕು. ಸುಮಾರು ಒಂದು ಕೋಟಿ ರೂಪಾಯಿನಷ್ಟು ಹಣವನ್ನು ಕೊಟ್ಟರೆ, ಆ ಯೋಜನೆಯನ್ನು ಪೂರ್ತಿ ಮಾಡಲಿಕ್ಕೆ ಆಗುತ್ತದೆ. ಇದರ ಸಂಬಂಧವಾಗಿ ಮಾನ್ಯ ನಾಗೇಗೌಡರು ಒಂದು ಉತ್ತರ ಕೊಟ್ಟಿದ್ದಾರೆ. ನೇತ್ರಾವತಿ ನದಿಯಿಂದ ನೀವು ಹಾವೇರಿಗೆ ನೀರು ಕೊಂಡುಹೋಗುತ್ತಿದ್ದೀರಿ. ಆ ಯೋಜನೆ ತಯಾರು ಮಾಡುತ್ತಿದ್ದೀರಿ. ನೇತ್ರಾವತಿ ಬಡವರಿಗಾಗಿ ಕೊಡುವಂಥ ಯೋಜನೆ ಇದ್ದೂ ಕೂಡ, ಅದು ಸರಿಯಿಲ್ಲವೆಂದು ಹೇಳಿದರೆ, ಅದರ ಬಗ್ಗೆ ಏನೆಂದು ನನಗೆ ಅರ್ಥವಾಗುವುದಿಲ್ಲ. ಅದಕ್ಕಾಗಿ, ಸನ್ಮಾನ್ಯ ಅಧ್ಯಕ್ಷರ ಮೂಲಕ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ. ಈ ವರ್ಷ ಕಡೇಪಕ್ಷ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿ, ವಿಟ್ಲ ಏತ ನೀರಾವರಿ ಯೋಜನೆಯನ್ನು ದುರಸ್ತಿ ಮಾಡಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ :— ಈ ವಿಟ್ಲ ಹಾಮಗಾರಿಗೆ ಈಗಾಗಲೇ ನಾವು ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಿದ್ದೇವೆ. ಒಂದು ತಿಂಗಳೊಳಗೆ ಆ ಕೆಲಸ ಪೂರ್ತಿಯಾಗುತ್ತದೆ ಎಂಬ ಮಾಹಿತಿ ನನ್ನ ಹತ್ತಿರ ಇದೆ. ಇವರು ಹೇಳುವ ಪ್ರಕಾರ ಒಂದು ಕೋಟಿ ರೂಪಾಯಿ ಎಂದು ಹೇಳಿದರೆ, ನಾನು ಇನ್ನೊಂದು ಸಾರಿ ಅದನ್ನು ವಿಮರ್ಶೆ ಮಾಡಿ, ಈಗೇನು ನಾವು ಪ್ರಾರಂಭ ಮಾಡಿರತಕ್ಕ ಹಾಮಗಾರಿ ಮುಂದಿನ ತಿಂಗಳಲ್ಲಿ ಕೊನೆಯಾಗುತ್ತದೆ. ಆದರೆ, ಅವರು ಹೇಳಿರುವ ಪ್ರಕಾರ, ಇನ್ನೊಂದು ಸಾರಿ ವೆರಿಫೈ ಮಾಡಿಸುತ್ತೇನೆ. ಅಷ್ಟು ಹಣ ಬೇಕಾದರೂ ಸಹ, ಮುಂದಿನ ವ್ಯವಸ್ಥೆಯಲ್ಲಿ ನಾನು ಚಿಂತನೆ ಮಾಡುತ್ತೇನೆ.

ಶ್ರೀ ರುಕ್ಮಯ್ಯ ಪೂಜಾರಿ :— ಈಗ ಕೊಡುವಂಥ ಹಣ ಏನೇನೂ ಸಾಲದು. ನೀವು ಹೇಳಿದ ಹಾಗೆ ಪುನಃ ಪರಿಶೀಲನೆ ಮಾಡಿ, ಅದಕ್ಕೆ ಬೇಕಾದಷ್ಟು ಹಣ ಕೊಟ್ಟರೆ, ನಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮೈಸೂರು ಗಂಧದ ಎಣ್ಣೆ ಕಾರ್ಖಾನೆ ಕೊಳ್ಳುವ ಗಂಧದ ಕಟ್ಟಿಗೆ ಕುರಿತು.

202(1361) ಶ್ರೀ ಜಿ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಮೈಸೂರು ಗಂಧದ ಎಣ್ಣೆ ಹಾಗೂ ಸಾಬೂನು ಕಾರ್ಖಾನೆ ಒಂದು ವರ್ಷಕ್ಕೆ ಕೊಳ್ಳುವ ಗಂಧದ ಕಟ್ಟಿಗೆಯ ಪ್ರಮಾಣವೆಷ್ಟು;

ಆ) ಇದನ್ನು ಯಾವ ಯಾವ ರೀತಿಯಲ್ಲಿ ಖರೀದಿಸಲಾಗುವುದು ಹಾಗೂ ಹೊರರಾಜ್ಯಗಳಿಂದ ಖರೀದಿಸುವ ಪ್ರಮಾಣವೆಷ್ಟು;

ಇ) ರಾಜ್ಯದಲ್ಲಿ ಕೊಡುತ್ತಿರುವ ಧಾರಣೆ ಏನು, ಹಾಗೂ ಹೊರರಾಜ್ಯಗಳಲ್ಲಿ ಕೊಡುತ್ತಿರುವ ಧಾರಣೆ ಏನು?

ಶ್ರೀ ಬಿ.ಎಲ್. ಶಂಕರ್ (ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :—

ಅ) ಒಂದು ವರ್ಷಕ್ಕೆ ಸುಮಾರು 350 ಮೆಟ್ರಿಕ್ ಟನ್ನುಗಳು.

ಆ) ಬಹುತೇಕ ಎಲ್ಲಾ ಪ್ರಮಾಣವನ್ನು ನಮ್ಮ ರಾಜ್ಯ ಅರಣ್ಯ ಇಲಾಖೆಯಿಂದಲೇ ಖರೀದಿಸಲಾಗುವುದು ಕಂಪನಿಗೆ ಬೇಕಾದ ಪ್ರಮಾಣದ ಗಂಧದ ಕಟ್ಟಿಗೆ ನಮ್ಮ ಅರಣ್ಯ ಇಲಾಖೆಯಿಂದ ಸಿಗದ ಕಾರಣ ಒಂದು ಸಲಕ್ಕೆ ಮಾತ್ರ ತಮಿಳುನಾಡು ಸರ್ಕಾರದಿಂದ 35 ಟನ್ನುಗಳನ್ನು ಹರಾಜಿನಲ್ಲಿ ಸೆಪ್ಟೆಂಬರ್ 98 ರಲ್ಲಿ ಖರೀದಿಸಲಾಗಿದೆ.

ಇ) ಕಂಪನಿಯ ಅನುಮೋದಿತ ಪುನರುಜ್ಜೀವನ ಯೋಜನೆಯಂತೆ ಕರ್ನಾಟಕ ಸರ್ಕಾರ ಒಪ್ಪಿಕೊಂಡಂತೆ ಕರ್ನಾಟಕ ಅರಣ್ಯ ಇಲಾಖೆಗೆ ಒಂದು ಟನ್ ಬಿಡಿಗೆ ರೂ. 1,44,000-00 ಕೊಡಲಾಗುತ್ತಿದೆ.

ಒಂದು ಸಲಕ್ಕೆ ಹರಾಜಿನಲ್ಲಿ ತಮಿಳುನಾಡು ಸರ್ಕಾರದಿಂದ 35 ಟನ್ನುಗಳನ್ನು ರೂ. 3,23,000-00 (ಪ್ರತಿ ಟನ್ನಿಗೆ) ದರದಲ್ಲಿ ಕೊಳ್ಳಲಾಗಿದೆ.

5.10 ಪಿ.ಎಂ.

ಶ್ರೀ ಜಿ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಗಂಧದ ಎಣ್ಣೆ ಕಾರ್ಖಾನೆಯವರು ಕೊಳ್ಳುವ ಗಂಧದ ಧಾರಣೆ ರಾಜ್ಯದಲ್ಲಿ 1 ಲಕ್ಷದ 44 ಸಾವಿರ ರೂಪಾಯಿಗಳು ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದರಲ್ಲಿ ಕೈಬಿಂಗೆ ಕೊಡುವುದು ಎಷ್ಟು? ಇಲ್ಲಿ ಒಂದಾಣೆಗೆ 44 ಸಾವಿರ ರೂಪಾಯಿಗಳನ್ನು ಕೊಟ್ಟು ತಮಿಳುನಾಡಿಗೆ ಏಕೆ 3 ಲಕ್ಷದ 23 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಹಾಗೆ ಏನಾದರೂ ಖಾಸಗಿಯವರಿಗೆ ಸ್ವಲ್ಪ ಹೆಚ್ಚಿನ ಹಣ ಕೊಟ್ಟಿದ್ದರೆ ಅಥವಾ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿದರೆ ಇವತ್ತು ಏನು ಗಂಧ ಸಾರಾಸಗಟಾಗಿ ಕಳ್ಳಸಾಗಾಣಿಕೆ ಆದಾದರೂ ಈ ರಾಜ್ಯದಲ್ಲಿ

ಉಳಿಯುತ್ತಿರಲಿಲ್ಲವೇ? ತಮಿಳುನಾಡಿಗೆ ಹೋಗಿ ನಮ್ಮವರು ಗಂಧ ಮಾರುವುದು ಕಡಿಮೆಯಾಗುತ್ತಿರಲಿಲ್ಲವೇ?

ಶ್ರೀ ಬಿ.ಎಲ್. ಶಂಕರ್:— ಮಾನ್ಯ ಅಧ್ಯಕ್ಷರೇ, ಮೈಸೂರು ಸಾಬೂನು ಕಾರ್ಖಾನೆ ಬಿ.ಐ.ಎಫ್.ಆರ್.ನಲ್ಲಿ ಹೋಗಿ ಬಿ.ಐ.ಎಫ್.ಆರ್‌ನಲ್ಲಿ ರೀಹ್ಯಾಬಿಲಿಟೇಶನ್ ಪ್ಯಾಕೇಜ್ ಆಗಿರತಕ್ಕಂಥಾದ್ದು ತಮಗೆ ಗೊತ್ತಿದೆ. 1995-96 ರಲ್ಲಿ ಬಿ.ಐ.ಎಫ್.ಆರ್. ಮುಖಾಂತರ ಕರ್ನಾಟಕದ ಅರಣ್ಯ ಇಲಾಖೆ, ಹಣಕಾಸು ಇಲಾಖೆ, ಎಲ್ಲವೂ ಸೇರಿ ಪ್ಯಾಕೇಜ್ ತೀರ್ಮಾನ ಆಗಿ, ಎಷ್ಟು ಹಣದಲ್ಲಿ ಗಂಧವನ್ನು ಸಪ್ಲೈ ಮಾಡಬೇಕು ಎನ್ನುವ ಬಗ್ಗೆ ಒಂದು ಅಗ್ರಿಮೆಂಟ್ ಆಗಿದೆ. ಅದರ ಪ್ರಕಾರ ಒಂದು ಲಕ್ಷದ 44 ಸಾವಿರ ರೂಪಾಯಿಗಳಿಗೆ ಒಂದು ಟನ್ ಶ್ರೀಗಂಧವನ್ನು ಸಪ್ಲೈ ಮಾಡುತ್ತಿದ್ದಾರೆ. 1987ನೇ ಇಸವಿಯವರೆಗೂ ತಮಿಳುನಾಡಿನಲ್ಲಿ ನೇರವಾಗಿ ಪಾಲ್ಗೊಂಡು ಹರಾಜಿನಲ್ಲಿ ಶ್ರೀಗಂಧವನ್ನು ಮೈಸೂರು ಸಾಬೂನು ಕಾರ್ಖಾನೆಯವರು ಕೊಂಡುಕೊಳ್ಳುತ್ತಿದ್ದರು. ಆದರೆ 1987ನೇ ಇಸವಿಯಲ್ಲಿ ಅವರು ಕೊಡತಕ್ಕಂಥ ಹಣದಲ್ಲಿ ಡೀಫಾಲ್ಟ್ ಆದಂತಹ ಕಾರಣದಿಂದಾಗಿ ಅವರು ಹರಾಜಿನಲ್ಲಿ ಭಾಗವಹಿಸುವಂತಾದ್ದನ್ನು ರದ್ದು ಮಾಡಿದರು. ಇದಾದ ಮೇಲೆ 1998-99 ರಲ್ಲಿ 315 ಟನ್ ನಮಗೆ ಗಂಧ ಬೇಕಾಗಿತ್ತು, ಆದರೆ ಸರ್ಕಾರದಿಂದ ಅಂದರೆ ಅರಣ್ಯ ಇಲಾಖೆಯಿಂದ ನಮಗೆ 129 ಟನ್ ಗಂಧ ದೊರೆತಿದ್ದರಿಂದ ಕರ್ನಾಟಕದ ಮುಖ್ಯಮಂತ್ರಿಗಳು ತಮಿಳುನಾಡು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ನಂತರ ನಾವು ಹರಾಜಿನಲ್ಲಿ ಭಾಗವಹಿಸಿದನಂತರ ಈ ರೇಟಿಗೆ ಅಂದರೆ 3 ಲಕ್ಷ 23 ಸಾವಿರಕ್ಕೆ ಒಂದು ಟನ್ ಗಂಧವನ್ನು ಕೊಳ್ಳತಕ್ಕಂಥ ಒಂದು ನಿರ್ಧಾರವನ್ನು ಮಾಡಿದರು. ಇದರಲ್ಲಿ ಪ್ರಮುಖವಾಗಿರತಕ್ಕಂಥ ಅಂಶ ಅಂದರೆ ನಮಗೆ ಸಾಕಷ್ಟು ಗಂಧ ಕರ್ನಾಟಕದಲ್ಲಿ ದೊರೆಯುವುದೇ ಇರತಕ್ಕಂಥಾ ಕಾರಣದಿಂದ ತಮಿಳುನಾಡಿನಲ್ಲಿ ಹರಾಜಿನಲ್ಲಿ ಭಾಗವಹಿಸಿ ಗಂಧವನ್ನು ಕೊಳ್ಳತಕ್ಕಂಥ ಕಾರಣದಿಂದ ಮತ್ತು ಮೈಸೂರು ಸಾಬೂನು ಕಾರ್ಖಾನೆ ಒಟ್ಟಾರೆ 38 ಕೋಟಿ ರೂಪಾಯಿಗಳು ನಷ್ಟದಲ್ಲಿರುವ ಕಾರಣದಿಂದ 2004ಮತ್ತು 2005ನೇ ಇಸವಿಯವರೆಗೆ ಕರ್ನಾಟಕ ಸರ್ಕಾರ ಈ ಸಾಬೂನು ಕಾರ್ಖಾನೆಗೆ ಇದೇ ಹಣದಲ್ಲಿ ನಾವು ಗಂಧವನ್ನು ಸಪ್ಲೈ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಕೇಳಿದ್ದು ಈ ಹಣವನ್ನು ಕೊಟ್ಟು ನೇರವಾಗಿ ರೈತರಿಂದ ನೀವು ಏಕೆ ಹೆಚ್ಚಿಗೆ ಕೊಳ್ಳಬಾರದಿತ್ತು ಎಂದು, ಶ್ರೀಗಂಧವನ್ನು ರೈತರಿಂದ ನೇರವಾಗಿ ಕೊಳ್ಳುವುದಕ್ಕೆ ಮೈಸೂರು ಸಾಬೂನು ಕಾರ್ಖಾನೆಗೆ ಯಾವುದೇ ಅಧಿಕಾರ ಇಲ್ಲ. ಕರ್ನಾಟಕ ಅರಣ್ಯ ಇಲಾಖೆಯಿಂದ ಮಾತ್ರ ನಾವು ಮೈಸೂರು ಸಾಬೂನು ಕಾರ್ಖಾನೆಗೆ ಶ್ರೀಗಂಧವನ್ನು ಪಡೆಯುವುದಕ್ಕೆ ಅಧಿಕಾರ ಇರತಕ್ಕಂಥಾದ್ದು, ಹಾಗಾಗಿ ರೈತರಿಗೆ ಕೊಡುವಾಗ ಇರತಕ್ಕಂಥ ಹೆಚ್ಚಿನ ಏನು ಇದೆ ಕರ್ನಾಟಕ ಸರ್ಕಾರ ಇದನ್ನು ಪರಿಶೀಲಿಸಬೇಕೆನ್ನುವ ವಿಚಾರವನ್ನು ಅರಣ್ಯ ಇಲಾಖೆಯವರು ಸರ್ಕಾರದ ಮುಂದೆ ಇಟ್ಟಿದ್ದಾರೆ. 30-4-97 ಮತ್ತು 15-3-99 ರಂದು ಒಂದು ಪರಿಷ್ಕೃತ ದರವನ್ನು ಕರ್ನಾಟಕ ಸಾಬೂನು ಮತ್ತು ಮಾರಾಟ ನಿಯಮಿತ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್, ಮತ್ತು ಧಾರ್ಮಿಕ ಸಂಸ್ಥೆಗಳು, ದೇವಸ್ಥಾನಗಳು ಇತ್ಯಾದಿಗಳಿಗೆ ಸಪ್ಲೈ

ಮಾಡತಕ್ಕಂಥ ಶ್ರೀಗಂಧಕ್ಕೆ ಹೆಚ್ಚಿನ ಹಣ ಕೊಡಬೇಕೆನ್ನುವ ಅರಣ್ಯ ಇಲಾಖೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ ಅದು ಪರಿಷ್ಕರಣೆ ಆದಂತಹ ಸಂದರ್ಭದಲ್ಲಿ ಹೆಚ್ಚು ಹಣ ಕೊಡತಕ್ಕಂಥಾದ್ದಕ್ಕೆ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಈಗ ರೈತರ ಜಮೀನಿನಲ್ಲಿ ಏನು ಗಂಧ ಬೆಳೆಯುತ್ತಿದೆ ಇದು ನಮ್ಮದಲ್ಲ ಎನ್ನುವ ಭಾವನೆ ಆ ರೈತರಲ್ಲಿ ನಿರ್ಮಾಣವಾಗದೆ. ಅದಾಗಿಯೇ ಬೆಳೆಯುವ ಗಂಧವನ್ನು ರಕ್ಷಣೆ ಮಾಡುವ ಜವಾಬ್ದಾರಿ ಬೇಕಿಲ್ಲ ಇದನ್ನು ತೆಗೆದುಕೊಂಡು ಹೋಗಿ ಅರಣ್ಯ ಇಲಾಖೆಯವರಿಗೆ ಕೊಟ್ಟರೆ ಅವರು ಕೊಡುವ ಕಿರಿಕಿರಿ ಮತ್ತು ಅವರು ಕೊಡುವ ಬೆಲೆ ರೆಮ್ಯುನರೇಟ್ ಆಗಲಿಲ್ಲವಲ್ಲ ಎನ್ನುವ ಒಂದು ಕಾರಣಕ್ಕೆ ಹೇರಳವಾಗಿ ನಮ್ಮ ರಾಜ್ಯದಿಂದ ಗಂಧ ಕಳ್ಳತನವಾಗುತ್ತಿದೆ ಮತ್ತು ನಮ್ಮ ರಾಜ್ಯದಲ್ಲಿಯೇ ಗಂಧ ಕಳ್ಳತನವಾಗುತ್ತಿದೆ. ಮಾನ್ಯ ಸಚಿವರಲ್ಲಿ ನಾನು ಕೇಳುವುದು ಏನಾದರೂ ಮಾಡಿ ರೈತರು ಬೆಳೆಯುವ ಗಂಧಕ್ಕೂ ಸ್ವಲ್ಪ ರೆಮ್ಯುನರೇಟ್ ಬೆಲೆಯನ್ನು ಕೊಟ್ಟರೆ ಇದರಿಂದ ನನಗೆ ಒಂದು ನಾಲ್ಕು ಆಣೆ ಪ್ರಯೋಜನವಾಗುತ್ತದೆಂದು ಅವರಿಗೆ ಅನಿಸಿದರೆ ಈ ಗಂಧ ಎಲ್ಲಾ ಇಲ್ಲೇ ಉಳಿದು ನಾವು ಕನಿಷ್ಟ ಹೊರರಾಜ್ಯದವರಿಗೆ ಹೆಚ್ಚುವರಿ ಹಣ ಕೊಡುತ್ತಿರುವುದಾದರೂ ಉಳಿಯುತ್ತಿರಲಿಲ್ಲವೇ? ಆ ದಿಸೆಯಲ್ಲಿ ಏನಾದರೂ ತಾವು ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ? ಮತ್ತು ಅರಣ್ಯ ಇಲಾಖೆಯವರಿಗೆ ತಾವು ಸೂಚನೆ ಕೊಡಬಹುದು. ಅವರು ಬೆಳೆದ ಗಂಧವನ್ನು ತಾವು ಎಷ್ಟು ಹಣಕ್ಕಾದರೂ ತೆಗೆದುಕೊಳ್ಳಿ. ರೈತರಿಂದ ತಾವು ಇಷ್ಟು ಹಣಕ್ಕೆ ತೆಗೆದುಕೊಂಡು ನಮಗೆ ಕೊಡಿ ಎಂದು ಏನಾದರೂ ಸಲಹೆ ಮಾಡುತ್ತೀರಾ?

ಶ್ರೀ ಬಿ.ಎಲ್. ಶಂಕರ್ :— ಮಾನ್ಯ ಅಧ್ಯಕ್ಷರೇ, ಮಾರುಕಟ್ಟೆ ದರಕ್ಕೂ ಈಗ ಇರತಕ್ಕಂಥಾ ರೈತರಿಗೆ ಕೊಡುತ್ತಾ ಇರತಕ್ಕಂಥ ದರಕ್ಕೂ ಬಹಳ ವ್ಯತ್ಯಾಸ ಇದೆ ಎನ್ನತಕ್ಕಂಥ ಮಾತು ನಿಜವಾಗಿರತಕ್ಕಂಥಾದ್ದು, ಅದೇ ರೀತಿ ತಮಿಳುನಾಡಿನಲ್ಲಿ ಸಿಗುತ್ತಾ ಇರತಕ್ಕಂಥ ಗಂಧಕ್ಕೂ ಕರ್ನಾಟಕದಲ್ಲಿ ಸಿಗುತ್ತಾ ಇರತಕ್ಕಂಥ ಶ್ರೀಗಂಧದ ಬೆಲೆಗೂ ವ್ಯತ್ಯಾಸ ಇರತಕ್ಕಂಥಾದ್ದು ನಿಜವೇ. ರೈತರಿಂದ ಶ್ರೀಗಂಧವನ್ನು ಎಷ್ಟು ಹಣಕ್ಕೆ ಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ಅರಣ್ಯ ಇಲಾಖೆಯವರು ನಿರ್ಧಾರ ಮಾಡಬೇಕಾಗಿರುತ್ತದೆ. ಅರಣ್ಯ ಇಲಾಖೆಯವರು ಈಗ ಸರ್ಕಾರಕ್ಕೆ ಒಂದು ಶಿಫಾರಸ್ಸು ಮಾಡಿರ್ತಾರೆ. ಈಗ ಏನು ಶ್ರೀಗಂಧವನ್ನು ಒಂದು ಲಕ್ಷ 44 ಸಾವಿರ ರೂಪಾಯಿಗಳಿಗೆ ಒಂದ ಟನ್ ಅನ್ನು ನಮ್ಮ ಸಾಬೂನು ಕಾರ್ಖಾನೆಗೆ ಕೊಡುತ್ತಿದ್ದಾರೆ ಅದನ್ನು 4 ಲಕ್ಷ 52 ಸಾವಿರಕ್ಕೆ ಪರಿಷ್ಕರಣೆ ಮಾಡಬೇಕೆನ್ನುವ ಒಂದು ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಅರಣ್ಯ ಇಲಾಖೆಯವರು ಈ ದರವನ್ನು ನಿಗಧಿ ಮಾಡಿದರೆ ಅದರ ಪ್ರಕಾರ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಮತ್ತು ದೇವಸ್ಥಾನಗಳು ಮತ್ತು ಧಾರ್ಮಿಕ ಸಂಸ್ಥೆಗಳು, ಮತ್ತು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ಇವುಗಳಿಗೂ ಕೂಡ ದರ ಪರಿಷ್ಕರಣೆ ಮಾಡಿ ಈಗ ಇರತಕ್ಕಂಥಾದ್ದಕ್ಕೆ ಮೂರು ಪಟ್ಟು ದರ ಹೆಚ್ಚು ಮಾಡಬೇಕೆನ್ನುವ ಬೇಡಿಕೆಯನ್ನು ಅರಣ್ಯ ಇಲಾಖೆಯವರು ಸರ್ಕಾರದ ಮುಂದೆ ಇಟ್ಟಿದೆ ಸರ್ಕಾರ ದರ ನಿಗಧಿ ಮಾಡುವಂತಾದ್ದನ್ನು ಪರಿಶೀಲನೆ ಹಂತದಲ್ಲಿ ಇಟ್ಟಿದ್ದಾರೆ.

ಕರ್ನಾಟಕ ವಿದ್ಯುತ್ ನಿಗಮದಿಂದ ಸಂದಾಯ.

203(908) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ವಿದ್ಯುತ್ ನಿಗಮದಿಂದ ಚಕ್ರಾ ಮತ್ತು ವರಾಹಿ ಯೋಜನಾ ಪ್ರದೇಶದ ಸಂತ್ರಸ್ಥರಿಗೆ ಕೋರ್ಟಿನ ಆದೇಶದಂತೆ ಕೊಡಬೇಕಾದ ಬಾಕಿ ಹಣ ಎಷ್ಟು

ಆ) ಈ ಬಗ್ಗೆ ಶಿವಮೊಗ್ಗ ಭೂ ಸ್ವಾಧೀನ ಅಧಿಕಾರಿಯವರು ವಿದ್ಯುತ್ ನಿಗಮಕ್ಕೆ ಎಂದು ಪತ್ರ ಬರೆದಿದ್ದಾರೆ;

ಇ) ಹಣ ಜಮಾ ಮಾಡಲು ವಿಳಂಬವಾಗುವುದಕ್ಕೆ ಕಾರಣಗಳೇನು ಮತ್ತು ಎಂದು ಅದನ್ನು ಜಮಾ ಮಾಡಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಶಿವಮೊಗ್ಗ ಭೂ ಸ್ವಾಧೀನಾಧಿಕಾರಿಯವರು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸಲ್ಲಿಸಿರುವ ಬೇಡಿಕೆಯನುಸಾರ ಸಾಗರ ನ್ಯಾಯಾಲಯವು 88 ಪ್ರಕರಣಗಳಲ್ಲಿ ಹೊರಡಿಸಿರುವ ಡಿಕ್ರಿಯನುಸಾರ ರೂ. 49.49 ಲಕ್ಷ ಪರಿಹಾರ ನೀಡಬೇಕಿದೆ.

ಆ) ದಿನಾಂಕ: 2-11-1998 ರಂದು.

ಇ) ದಿನಾಂಕ: 2-11-1998 ರ ಪತ್ರದ ಮೇಲೆ ವಿವರಗಳನ್ನು ಕೇಳಲಾಗಿ ಭೂ ಸ್ವಾಧೀನಾಧಿಕಾರಿಯವರು ದಿನಾಂಕ: 20-2-1999 ರಂದು ವಿವರಣೆ ನೀಡಿರುತ್ತಾರೆ. ಈ ಮಧ್ಯೆ ನಿಗಮವು ದಿನಾಂಕ: 17-2-1998 ರಂದು ರೂ. 10 ಲಕ್ಷ ಮತ್ತು ವಿವರಣೆ ದೊರತ ನಂತರ ದಿನಾಂಕ: 20-3-1999 ರಂದು ರೂ. 40 ಲಕ್ಷ ಹೀಗೆ ಒಟ್ಟು ರೂ. 50 ಲಕ್ಷ ಹಣವನ್ನು ಬಿಡುಗಡೆ ಮಾಡಿದೆ. ನಿಗಮದಿಂದ ವಿಳಂಬವಾಗಿಲ್ಲ.

ಶ್ರೀ ಅರಗಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ವರಾಹಿ ಮುಳುಗಡೆ ಯೋಜನಾ ಪ್ರದೇಶದಲ್ಲಿ, ಜಮೀನು ಮತ್ತು ಮನೆ ಕಳೆದುಕೊಂಡಿರತಕ್ಕಂಥ ರೈತರು ಪರಿಹಾರವನ್ನು ಪಡೆಯುವುದಕೋಸ್ಕರ ಕೋರ್ಟಿಗೆ ಹೋಗಿ ಡಿಕ್ರಿ ಆದರೂ ಕೂಡ ಎರಡೆರಡು ವರ್ಷಗಳು ಆದರೂ ಕೂಡ ಪರಿಹಾರದ ಹಣವನ್ನು ವಿದ್ಯುತ್ ನಿಗಮ ಪಾವತಿ ಮಾಡುತ್ತಿಲ್ಲ. ಉದಾಹರಣೆಗೆ ನೀವು ಕೊಟ್ಟಂತಹ ಉತ್ತರದಲ್ಲಿಯೇ ಇದೆ. 2-11-98 ರಲ್ಲಿ ಭೂ ಸ್ವಾಧೀನಾಧಿಕಾರಿಗಳು, ಶಿವಮೊಗ್ಗ ಇವರು ಕೆ.ಪಿ.ಸಿ.ಗೆ ಪತ್ರವನ್ನು ಬರೆಯುತ್ತಾರೆ. ನಾನು ಈ ಪ್ರಶ್ನೆ ಹಾಕಿದ ಮೇಲೆ 20-3-99ರಂದು 40 ಲಕ್ಷ ರೂಪಾಯಿಗಳನ್ನು ಭೂಸ್ವಾಧೀನಾಧಿಕಾರಿಗಳಿಗೆ ಪಾವತಿ ಮಾಡಿದ್ದಾರೆ. ಈ ರೀತಿ ವಿಳಂಬ ಮಾಡಿ ಕೊಟ್ಟುವುದರಿಂದಾಗಿ ಜಮೀನು ಮತ್ತು ಮನೆ ಕಳೆದುಕೊಂಡಿರತಕ್ಕಂಥ ರೈತರು ಬಡಿದು ಬಡಿದು ಅಕ್ಷರಶಃ ಅಲೆಮಾರಿಯಾಗಿದೆ ಅವರು ಬೀದಿಪಾಲಾಗುತ್ತಿದ್ದಾರೆ. ಇನ್ನೂ ಕೂಡ ಹಣ ಪಾವತಿ ಮಾಡುವುದಾದ್ದು ಸಾಕಷ್ಟು ಇದೆ. ಸಂಪೂರ್ಣವಾಗಿ ಆ ಹಣ ಕೊಟ್ಟುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೇ, ವರಾಹಿ ಮತ್ತು ಚಕ್ರ ಯೋಜನೆ ಅಡಿಯಲ್ಲಿ ಕೋರ್ಟಿನಲ್ಲಿರತಕ್ಕಂಥ ಕೇಸ್‌ಗಳು ನಮ್ಮ ವಿದ್ಯುತ್ ನಿಗಮಕ್ಕೆ ಬಂದಿದ್ದು 2-11-98 ರಂದು, ಇಷ್ಟು ದುಡ್ಡು ನೀವು ಕಟ್ಟಬೇಕೆಂದು ಬಂದಿತ್ತು ಅದೇ ಪ್ರಕಾರವಾಗಿ ನಾವು ಒಂದು ಲೆಟರ್ ಆಫ್ ಕ್ಲಾರಿಫಿಕೇಶನ್ ಕೇಳಿದ್ದೆವು. ಸುಮಾರು ಎರಡು ತಿಂಗಳು ಆದ ಮೇಲೆ ಅಲೆಟರ್‌ಗೆ ಕ್ಲಾರಿಫಿಕೇಶನ್ಸ್ ಬಂತು. ಅದು ಬಂದ ತಕ್ಷಣ ಸುಮಾರು 50 ಲಕ್ಷ ರೂಪಾಯಿಗಳನ್ನು ತುಂಬುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಅರಗಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಡಿಕ್ರಿಯಾಗಿರತಕ್ಕಂಥ ಕೇಸ್‌ಗಳಿಗೆ ಮತ್ತು ಅಲ್ಲಿರತಕ್ಕಂಥ ಕೃಷಿ ಕಾರ್ಮಿಕರಿಗೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ನೀವು ತುಂಬಬೇಕಾಗಿದೆ. ಭೂ ಸ್ವಾಧೀನಾಧಿಕಾರಿಗಳು ಎರಡು ಪತ್ರಗಳನ್ನು ಬರೆದಿದ್ದಾರೆ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಕಟ್ಟಬೇಕೆಂದು ಒಂದು ಪತ್ರ, ಇನ್ನೊಂದು ಪತ್ರ ತುರ್ತಾಗಿ ಮೇಜು ಕುರ್ಚಿ ಜಪ್ತಿ ಮಾಡುತ್ತಿದ್ದಾರೆ ಕೋರ್ಟ್, ತಕ್ಷಣ ಇಷ್ಟು ಹಣ ಕಟ್ಟಬೇಕಾಗಿದೆ ಎಂದು ಅದಕ್ಕಾಗಿ ಇಷ್ಟು ಹಣ ಕಟ್ಟಿದ್ದೀರಿ ಉಳಿದಿರತಕ್ಕಂಥ ಹಣ ಇನ್ನೂ ಪಾವತಿಯಾಗಬೇಕಾಗಿದೆ. ತಮ್ಮ ಹತ್ತಿರ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ನಾನು ವಿದ್ಯುತ್ ನಿಗಮದ ಅಧಿಕಾರಿಗಳ ಹತ್ತಿರ ಕೇಳಿದಾಗ ಹೇಳುತ್ತಾರೆ ಕೆ.ಇ.ಬಿ.ಯವರು ನಮಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತುಂಬಬೇಕಾಗಿದೆ ನಮ್ಮ ವಿದ್ಯುತ್ ನಿಗಮದಲ್ಲಿ ಹಣ ಇಲ್ಲ ನಾನೇನು ಮಾಡುವುದು ಎಂದು ಹೇಳುತ್ತಿದ್ದಾರೆ ನೀವು ಎರಡೂ ಇಲಾಖೆಗಳನ್ನು ಹೊಂದಿರತಕ್ಕಂಥ ಮಂತ್ರಿಗಳು ತಾವು, ಕೆ.ಇ.ಬಿ.ಯಿಂದ ಕೆ.ಪಿ.ಸಿ.ಗೆ ಹಣವನ್ನು ತುಂಬಿಸುತ್ತೀರಾ? ನಮ್ಮ ಮುಳುಗಡೆ ರೈತರ ಪರಿಹಾರ ಹಣವನ್ನು ಕಟ್ಟಿಸುತ್ತೀರಾ? ಯಾವಾಗ ಮಾಡುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಅಧ್ಯಕ್ಷರೇ, ಎರಡನೆಯ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ ನಮಗೆ ಇದ್ದಂತಹ ಮಾಹಿತಿ ಸುಮಾರು 50 ಲಕ್ಷ ರೂಪಾಯಿ ಕೋರ್ಟಿನಿಂದ ಡಿಕ್ರಿಯಾಗಿ ಬಂದಿದೆ ಅದನ್ನು ತುಂಬಬೇಕು ಎಂದು ಹೇಳಿದರು ಅದನ್ನು ನಾವು ಈಗಾಗಲೇ ತುಂಬಿದ್ದೇವೆ. ಎರಡನೇ ಪತ್ರ ಒಂದು ಕೋಟಿ 25 ಲಕ್ಷದ ಬಗ್ಗೆ ಹೇಳಿದ್ದಾರೆ ನಾನು ಇವತ್ತೇ ಅದನ್ನು ತರಿಸಿ ನೋಡುತ್ತೇನೆ. ಒಂದು ವಾರ ಅಥವಾ 15 ದಿವಸದಲ್ಲಿ ದುಡ್ಡು ತುಂಬುವ ವ್ಯವಸ್ಥೆ ಮಾಡಿಸುತ್ತೇನೆ.

ದಕ್ಷಿಣ ರೈಲ್ವೆ ಇಲಾಖೆಯ ಫ್ರೇಜರ್ ಟೌನ್ ಪೊಲೀಸ್ ಠಾಣೆ ಎದುರಾದ ಸೇತುವೆಯ ಹಾಮಗಾರಿ

205(1021) ಶ್ರೀ ಎನ್. ರಾಜಣ್ಣ (ಭಾರತೀನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ದಕ್ಷಿಣ ರೈಲ್ವೆ ಇಲಾಖೆಯ ಫ್ರೇಜರ್‌ಟೌನ್ ಪೊಲೀಸ್ ಠಾಣೆ ಎದುರು ರೈಲ್ವೆ ಕೆಳಸೇತುವೆ ಆಗಲಗೊಳಿಸಲು ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ವಿನ್ಯಾಸಗಳನ್ನು ಒದಗಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಿದೆಯೇ?

ಅ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿರುತ್ತದೆ?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) ಹೌದು.

ಆ) ಬೆಂಗಳೂರು ಬೈಯಪ್ಪನಹಳ್ಳಿ ರೈಲು ಮಾರ್ಗದಲ್ಲಿ 342 ಕಿ.ಮೀ. 9-10 ಫ್ರೇಜರ್‌ಟೌನ್ ಪೋಲೀಸ್ ಠಾಣೆ ಎದುರು ಕೆಳಸೇತುವೆ ಕಟ್ಟಲು ದಿನಾಂಕ :17-12-97 ರಂದು ಅನುಮೋದನೆ ನೀಡಿರುತ್ತದೆ. ಈ ಅನುಮೋದನೆ ಪ್ರಕಾರ ಕೂಡ ಕ್ರಮ ತೆಗೆದುಕೊಳ್ಳಲು ದಿನಾಂಕ: 24-12-97ರಂದು ರೈಲ್ವೆ ಜನರಲ್ ಮ್ಯಾನೇಜರ್‌ರವರಿಗೆ ಪತ್ರವನ್ನು ಬರೆಯಲಾಗಿದೆ. ಈ ಮಧ್ಯೆ ಬೆಂಗಳೂರು ಉತ್ತರ ಲೋಕಸಭಾ ಸದಸ್ಯರಾದ ಶ್ರೀ ಸಿ.ಕೆ. ಜಾಫರ್ ಷರೀಫ್‌ರವರು ದಕ್ಷಿಣ ರೈಲ್ವೆ ಜನರಲ್ ಮ್ಯಾನೇಜರ್‌ರವರಿಗೆ ಪತ್ರ ಬರೆದು ಫ್ರೇಜರ್‌ಟೌನ್ ಪೋಲೀಸ್ ಠಾಣೆ ಮುಂದೆ ರಸ್ತೆಗೆ ಕೆಳಸೇತುವೆ ಕಟ್ಟುವುದು ಅಷ್ಟು ಸೂಕ್ತವಲ್ಲವೆಂದು ತಿಳಿಸಿ ಐಟಿಸಿ ಕಾರ್ಖಾನೆ ಹತ್ತಿರವಿರುವ ಲೆವಲ್ ಕ್ರಾಸಿಂಗ್‌ನಲ್ಲಿ ಮೇಲುಸೇತುವೆ ಕಟ್ಟುವುದು ಅವಶ್ಯಕವೆಂದು ತಿಳಿಸಿರುತ್ತಾರೆ. ಈ ಬಗ್ಗೆ ತಾಂತ್ರಿಕ ವರದಿ ತಯಾರಿಸಲು ಸಲಹೆಗಾರರಿಗೆ ಸೂಚಿಸಲಾಗಿದೆ. ಹಾಗೆಯೇ ರೈಲ್ವೆ ಇಲಾಖೆಯಲ್ಲಿ ವಿಚಾರಿಸಲಾಗಿ 1998-99ನೇ ಸಾಲಿನಲ್ಲಿ ಈ ಕೆಲಸವನ್ನು ಅನುಧಾನದಲ್ಲಿ ಸೇರಿಸಿಲ್ಲವೆಂದು ಕಂಡು ಬಂದಿದೆ. ಆದುದರಿಂದ ಕೆಲಸವು ತುರ್ತಾಗಿ ಆಗಬೇಕಾಗಿರುವ ಪ್ರಯುಕ್ತ ಈ ಕೆಲಸವನ್ನು 1999-2000 ನೇ ರೈಲ್ವೆ ಆಯವ್ಯಯದಲ್ಲಿ ಸೇರಿಸಲು ಡಿವಿಜನಲ್ ಮ್ಯಾನೇಜರ್‌ರವರಿಗೆ ದಿನಾಂಕ : 7-1-99ರಂದು ಪತ್ರ ಬರೆಯಲಾಗಿದೆ. ರೈಲ್ವೆ ಇಲಾಖೆಯವರು ಮೇಲು ಸೇತುವೆ ಕಟ್ಟಿದ ಮೇಲೆ ಅಪ್ರೋಚ್ ರಸ್ತೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ತೆಗೆದುಕೊಳ್ಳಲಾಗುವುದು.

ಶ್ರೀ ಎನ್. ರಾಜಣ್ಣ:— ಮಾನ್ಯ ಅಧ್ಯಕ್ಷರೇ, ರೈಲ್ವೆ ಅಂಡರ್ ಕನ್‌ಸ್ಟ್ರಕ್ಷನ್ ಬಗ್ಗೆ ಬೆಂಗಳೂರಿನಲ್ಲಿ ಟುವರ್ಡ್ಸ್ ಚೀನೆ ಬೆಂಗಳೂರು ಸಿಟಿಯಿಂದ ಈ ಬ್ರಿಡ್ಜ್‌ವರೆಗೂ ಎಲ್ಲಾ ಬ್ರಿಡ್ಜ್‌ಗಳು ಮುಕ್ತಾಯವಾಗಿವೆ. ಎಕ್ಸ್‌ಪ್ಟ್ ವೀಲರ್ ಲೆವೆಲ್ ಕ್ರಾಸಿಂಗ್ ಒಂದು ಬಿಟ್ಟರೆ ಇನ್ನು ಎಲ್ಲಾ ಬ್ರಿಡಜ್ಸ್ ಆಯಿತು. ಇದಕ್ಕೆ 1992-93ರಲ್ಲಿ ರೈಲ್ವೆಯವರು ಬಜೆಟ್ ಕಾದಿರಿಸುತ್ತಾರೆ. ಆದರೆ ನಮ್ಮ ಬೆಂಗಳೂರು ನಗರದ ಅಧಿಕಾರಿಗಳು ಅಪ್ರೋಚ್ ಮಾಡಿ ಕೆಲಸ ಮಾಡದೇ ಬಿಟ್ಟುಬಿಟ್ಟರು. ಸನ್ಮಾನ್ಯ ಶ್ರೀ ಜಾಫರ್ ಷರೀಫ್ ಅವರು 1993-94ರಲ್ಲಿ ಬಜೆಟ್‌ನಲ್ಲಿ ಹಣ ಇಟ್ಟರು. ಆದರೆ ನಮ್ಮವರು ಇಡಲಿಲ್ಲ. ಆಮೇಲೆ 1995 ಆದ ಮೇಲೆ ನಾನು ಮಾನ್ಯ ರಾಮವಿಲಾಸ್ ಪಾಸ್ವಾನ್ ಅವರಿಗೆ ವಿನಂತಿಸಿಕೊಂಡು ಸನ್ಮಾನ್ಯ ದೇವೇಗೌಡರನ್ನು ವಿನಂತಿಸಿಕೊಂಡು ಮಾನ್ಯ ಶ್ರೀ ಬೊಮ್ಮಾಯಿಯವರನ್ನು ವಿನಂತಿಸಿಕೊಂಡಾಗ ಅವರು ನನಗೆ ಉತ್ತರ ಬರೆದರು ಕೆಲಸ ಮಾಡುವುದಕ್ಕೆ ರೆಡಿಯಾಗಿದ್ದೇವೆ, ಇನ್ಸ್‌ಪೆಕ್ಷನ್ ಮಾಡಲು ಜನರಲ್ ಮ್ಯಾನೇಜರ್ ಬೆಂಗಳೂರಿಗೆ ಬರುತ್ತಾರೆ ಎಂದು ಹೇಳಿದರು, ಆನಂತರ 6-11-97 ರಲ್ಲಿ ಇನ್ಸ್‌ಪೆಕ್ಷನ್ ಆಯಿತು. 17-12-97ಕ್ಕೆ ಅನುಮೋದನೆ ಕೊಡುತ್ತಾರೆ. ನೀವು ಬ್ರಿಡ್ಜ್ ಕಟ್ಟಬಹುದು ಎಂದು ಹೇಳಿ. 1997 ರಲ್ಲಿ ಅನುಮೋದನೆಯಾಗಿ ಆರ್ಡರ್ ಕೊಟ್ಟಿರುವುದನ್ನು ಇದುವರೆಗೂ ತಾವು ಕೆಲಸ ತೆಗೆದುಕೊಂಡಿಲ್ಲ. ಮತ್ತೆ ಇನ್ನೊಂದು ಪತ್ರ ಬರೆದಿದ್ದೇವೆಂದು, ಈಗ ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅದೂ 7-1-99ರಲ್ಲಿ ಪತ್ರ ಬರೆದಿದ್ದಾರೆ. ಮಾನ್ಯ

ರೈಲ್ವೆ ಮಂತ್ರಿಗಳು ದಿನಾಂಕ : 17-6-98ರಲ್ಲಿ ಪತ್ರ ಬರೆದು ಮತ್ತೆ 14-12-98 ರಲ್ಲಿ ಮತ್ತೆ ಅವರು ನನಗೆ ಒಂದು ಪತ್ರ ಬರೆಯುತ್ತಾರೆ. ಕೆಲವು ಕ್ಲಾರಿಫಿಕೇಶನ್ಸ್ ಕೊಟ್ಟರೆ ನಾವು ಕೆಲಸ ಶುರು ಮಾಡುತ್ತೇವೆಂದು ಹೇಳುತ್ತಾರೆ. ಯಾವ ಕೆಲಸವೂ ದಂಡು ಪ್ರದೇಶದಲ್ಲಿ ಆಗುತ್ತಿಲ್ಲ. ಎಕ್ಸಿಸ್ಟ್ ರಸ್ತೆಗಳು ಅದು ಇದು ಬಿಟ್ಟರೆ ಮೇಜರ್ ಫ್ಲೈ ಓವರ್ಸ್ ಬ್ರಿಡ್ಜ್‌ಗಳು ಆಗುತ್ತಿಲ್ಲ. ಆ ಲೆವೆಲ್ ಕ್ರಾಸಿಂಗ್‌ನಲ್ಲಿ ಒಂದು ನಿಮಿಷಕ್ಕೆ ಕನಿಷ್ಟಪಕ್ಷ 150-200 ವಾಹನಗಳು ಹೋಗುತ್ತದೆ.

ಅಧ್ಯಕ್ಷರು :— ಆಯಿತು ಒಂದು ನಿಮಿಷ ಸ್ಲೋ ಡೌನ್ ಮಾಡಿ. ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೇ ಈ ಕೆಳ ಸೇತುವೆಯನ್ನು ಮಾಡಬೇಕೆಂದು 17-12-97 ರಲ್ಲಿ ಸರ್ಕಾರ ಒಂದು ಆದೇಶ ಮಾಡಿತು. ಸನ್ಮಾನ್ಯ ಜಾಫರ್ ಶರೀಫ್‌ರವರು, ಮಾಜಿ ರೈಲ್ವೆ ಸಚಿವರು ಒಂದು ಪತ್ರವನ್ನು ಬರೆದು, ಈ ಕೆಳ ಸೇತುವೆ ಬದಲಿಗೆ ಐಟಿಸಿ ಕಾರ್ಖಾನೆಯ ಬಳಿ ಇರತಕ್ಕಂಥ ಮೇಲು ಸೇತುವೆಯನ್ನು ಮಾಡಿದರೆ ಅದು ಸಾರ್ವಜನಿಕವಾಗಿ ಬಹಳ ಉಪಯುಕ್ತವಾಗುತ್ತದೆ ಎಂದು ಹೇಳಿದ ಕಾರಣ, ಪುನಃ ದ್ವಂದ್ವವುಂಟಾಗಿ ತದನಂತರ ರೈಲ್ವೆ ಇಲಾಖೆಯವರು ಮತ್ತು ನಗರಪಾಲಿಕೆ ಅಧಿಕಾರಿಗಳು ಪರಿಶೀಲನೆ ಮಾಡಿ 7-1-99 ರಲ್ಲಿ ಡಿವಿಜನಲ್ ಸೀನಿಯರ್ ಮ್ಯಾನೇಜರ್ ರೈಲ್ವೆ ದಕ್ಷಿಣ ವಲಯ-ಇವರುಗಳು ಬಂದು ನೋಡಿದ ಮೇಲೆ, ಇದಕ್ಕೋಸ್ಕರವಾಗಿ 1999-2000 ನೇ ಇಸವಿಯಲ್ಲಿ ಆದ್ಯತೆಯ ಮೇಲೆ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವನ್ನು ಮಾಡಿ ಕೆಳಸೇತುವೆಯನ್ನು ಕಟ್ಟುವ ಬದಲು ಮೇಲೆ ಸೇತುವೆಯನ್ನು ಕಟ್ಟುವುದರಿಂದ ಸಾವಿರಾರು ಜನರಿಗೆ ಅನುಕೂಲವಾಗುತ್ತದೆ, ಆದಕಾರಣ ಮೇಲುಸೇತುವೆ ಮಾಡುವುದು ಎಂದು ತೀರ್ಮಾನ ಮಾಡಿ 29-2-99 ಮತ್ತು 2-3-99 ರಂದು ರೈಲ್ವೆ ಇಲಾಖೆಯವರಿಗೆ ನಾವು ಕೆಲವು ವಿವರಗಳನ್ನು ಒದಗಿಸಿದ ಮೇಲೆ, ಈ ಸಾರಿ ಆದ್ಯತೆಯ ಮೇಲೆ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ತಿರ್ಮಾನ ಮಾಡಿದ್ದಾರೆ. ಆ ಕೆಲಸವನ್ನು ಅವರು ಮಾಡಿದ ಮೇಲೆ ನಾವು ಆದಕ್ಕೆ ಪೂರಕವಾದ ಅಪ್ರೋಚ್ ರಸ್ತೆ ಮತ್ತಿತರ ವ್ಯವಸ್ಥೆಯನ್ನು ನಗರಪಾಲಿಕೆ ಮೂಲಕ ಮಾಡಿಸುತ್ತೇವೆ. ಈ ಸೇತುವೆ ಕೆಲಸವನ್ನು ರೈಲ್ವೆ ಇಲಾಖೆಯವರು ಮಾಡಬೇಕಾದುದರಿಂದ ಮಾನ್ಯ ರಾಜಣ್ಣನವರು ಹೇಳಿದ ಹಾಗೆ ಮೇಲ್‌ಸೇತುವೆ ಮಾಡುವುದು ಉಚಿತ ಎಂಬ ಬಗ್ಗೆ ಸನ್ಮಾನ್ಯ ಜಾಫರ್ ಶರೀಫ್‌ರವರು ಕೂಡ ಪರಿಗಣಿಸಿ ಇವೊತ್ತು ಆ ಕೆಲಸವನ್ನು ಮಾಡಲು ತೀರ್ಮಾನಿಸಲಾಗಿದೆ.

ಶ್ರೀ ಎನ್. ರಾಜಣ್ಣ :— ಮಾನ್ಯ ಅಧ್ಯಕ್ಷರೇ, ಮಾನ್ಯ ಜಾಫರ್ ಶರೀಫ್‌ರವರು 1993-94 ರಲ್ಲಿ ಬಜೆಟ್ ಇಟ್ಟಿದ್ದರೆ, ಅವರು ಎಲ್ಲಿ ಹೇಳಿದ್ದರೋ ಅದೇ ಜಾಗದಲ್ಲಿ ಮಾಡಲು ನಾಲ್ಕು ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು. ಆದರೆ ಈಗ ಆ ಕೆಲಸಕ್ಕೆ 40 ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಆದರೆ ಈಗ ಆ ಕೆಲಸಕ್ಕೆ 40 ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಅಲ್ಲಿರುವ ಮನೆಗಳನ್ನು ಆಕ್ವಾಯರ್ ಮಾಡಿಕೊಳ್ಳಬೇಕಾಗುತ್ತದೆ ಅದು ಆಗುವ ಕೆಲಸ ಅಲ್ಲ. ಆದುದರಿಂದ ಅಪ್ರೂವ್ ಆಗಿರುವ ಕಡೆಯಲ್ಲಿ ಕೆಲಸ ಶುರು

ಮಾಡಬೇಕು ಈ ಕೆಲಸಕ್ಕಾಗಿ 1999-2000ನೇ ಬಜೆಟ್‌ನಲ್ಲಿ ಎಷ್ಟು ಹಣವನ್ನು ಕಾದಿಟ್ಟಿದ್ದೀರಿ ಎಂದು ಹೇಳಬೇಕು? ಈಗ ಕೇವಲ ಬೆಂಗಳೂರು ದಕ್ಷಿಣ ಭಾಗವನ್ನು ಮಾತ್ರ ನೋಡುತ್ತಿದ್ದಾರೆ. ಹೀಗಾಗಿ ಬೆಂಗಳೂರು ಉತ್ತರ ಭಾಗವನ್ನು ಯಾರು ನೋಡುಕೊಳ್ಳುತ್ತಾರೆ? ಎಂದು ಕೇಳಬಯಸುತ್ತೇನೆ. ನಮ್ಮ ಉತ್ತರ ಭಾಗದ ಜನರಿಗೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ಅಲ್ಲಿ ವಾಹನಗಳು ಸಂಜೆ ಹೊತ್ತಿನಲ್ಲಿ ಹೇಗೆ ಹೋಗುತ್ತವೆ ಎಂಬುದನ್ನು ನೋಡಬೇಕು. ಒಬ್ಬರಿಗೊಬ್ಬರು ಹೊಡೆದುಕೊಂಡು ಬೈದಾಡುತ್ತಾರೆ. ರೈಲ್ವೆಲೆವೆಲ್ ಕ್ರಾಸ್ ಕ್ಲೋಸ್ ಮಾಡಿಬಿಟ್ಟರೆ ನೂರಾರು ವಾಹನಗಳು ನಿಂತುಬಿಡುತ್ತವೆ. ಆ ಅವಸ್ಥೆಯನ್ನು ನೋಡಲು ಆಗುವುದಿಲ್ಲ, ಜನರಿಗೆ ತುಂಬಾ ಅನಾನುಕೂಲ ಮತ್ತು ತೊಂದರೆಯಾಗಿದೆ, ಅದನ್ನು ಸರಿಪಡಿಸಬೇಕೆಂದು ಕೋರುತ್ತೇನೆ.

ಶ್ರೀ ವಿ. ಸೋಮಣ್ಣ:— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜಣ್ಣನವರು ಹೇಳಿದ ಹಾಗೆ ಕೆಲಸದ ವೆಚ್ಚ ಜಾಸ್ತಿಯಾಗುತ್ತದೆ ಎಂದು ಹೇಳಿದ್ದಾರೆ. ರೈಲ್ವೆ ಅಧಿಕಾರಿಗಳನ್ನು, ಮಹಾನಗರ ಪಾಲಿಕೆ ಅಧಿಕಾರಿಗಳನ್ನು, ರೈಲ್ವೆ ಡಿವಿಜನಲ್ ಮ್ಯಾನೇಜರ್‌ರವರನ್ನು ಮತ್ತು ಶಾಸಕರುಗಳನ್ನು 5-6ನೇ ತಾರೀಖಿಗೆ ಕರೆಯಿಸುತ್ತೇನೆ. ಈ ಎರಡರಲ್ಲಿ ಯಾವುದನ್ನು ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ನಾಲ್ಕುಕೋಟಿ ಇದ್ದುದು ನಲವತ್ತು ಕೋಟಿ ರೂಪಾಯಿಗಳು ಆಗುತ್ತದೆಂದು ಹೇಳುತ್ತಾರೆ, ಅದನ್ನು ಪರಿಶೀಲಿಸಿ, ಈ ಕೆಲಸವು ತ್ವರಿತಗತಿಯಿಂದ ಆಗಬೇಕಾಗಿರುವುದರಿಂದ ಮತ್ತು ರೈಲ್ವೆ ಇಲಾಖೆಯವರು ಈ ಕೆಲಸವನ್ನು ಮಾಡಬೇಕಾಗಿರುವುದರಿಂದ, ನಗರಪಾಲಿಕೆಯವರು ಯಾವುದೇ ಹಣವನ್ನು ಇದಕ್ಕೆ ಮುಂಗಡವಾಗಿ ಇಟ್ಟುಕೊಂಡರೂ ಕೂಡ ಕೆಲಸವನ್ನು ರೈಲ್ವೇಯವರೇ ಮಾಡಬೇಕು, ನಾವು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ 5 ತಪ್ಪಿದರೆ 6ನೇ ತಾರೀಖು ನಗರಪಾಲಿಕೆಯವರು ರೈಲ್ವೇಯವರು, ಮತ್ತಿತರ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರೊಂದಿಗೆ ನಾನು ಸ್ಥಳಪರಿಶೀಲನೆ ಮಾಡಿ, ಮಾನ್ಯ ಜಾಫರ್ ಶರೀಫ್‌ರವರನ್ನು ಕೂಡ ಬರಲು ವಿನಂತಿಸಿಕೊಂಡು ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ ತತ್‌ಕ್ಷಣವೇ ಕ್ರಮ ಜರುಗಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಮುಧೋಳ ತಾಲ್ಲೂಕಿನ ಮುಗಳಕೋಡ ಗ್ರಾಮಕ್ಕೆ 33 ಕೆ.ವಿ.ಎ. ಸ್ಟೇಷನ್

206(1252) ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಧೋಳ ತಾಲ್ಲೂಕಿನ ಮುಗಳಕೋಡ ಗ್ರಾಮಕ್ಕೆ 33 ಕೆವಿ. ಸ್ಟೇಷನ್ ಮಂಜೂರಾಗಿ 4 ವರ್ಷ ಕಳೆದರೂ ಕೂಡ ಕೆಲಸವನ್ನು ಪ್ರಾರಂಭಿಸದೇ ಇರಲು ಕಾರಣವೇನು?

ಆ) ಎಂದಿನಿಂದ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):—

ಅ) ಈ ಸಬ್-ಸ್ಟೇಷನ್ನನ್ನು ನಿರ್ಮಾಣಮಾಡಲು ಬೇಕಾಗುವ ಭೂಮಿಯನ್ನು

ಗುರುತಿಸುವಲ್ಲಿ, ಉಂಟಾದ ವಿಳಂಬವೇ, ಕೆಲಸವನ್ನು ಇದುವರೆವಿಗೆ ಪ್ರಾರಂಭಿಸದೇ ಇರಲು ಮುಖ್ಯ ಕಾರಣವಾಗಿದೆ. ಅಲ್ಲದೇ, ಈ ಕಾರ್ಯವನ್ನು ಕೈಗೊಳ್ಳಲು ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯುವುದೂ ಅಗತ್ಯವಾಗಿದ್ದಿತ್ತು.

ಆ) ಭೂಮಿಯನ್ನು ಈಗ ಗುರುತಿಸಲಾಗಿದ್ದು, ಭೂ ಸ್ವಾಧೀನದ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಭೂಮಿಯನ್ನು ಮಂಡಳಿಯ ವಶಕ್ಕೆ ತೆಗೆದುಕೊಂಡ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು. ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುವುದು. ಅಲ್ಲದೇ, ಈ ಕಾರ್ಯವನ್ನು ನಿರ್ವಹಿಸಲು ಗ್ರಾಮೀಣ ವಿದ್ಯುದೀಕರಣ ನಿಗಮವು ಈಗ ಸಾಲ ಸೌಲಭ್ಯವನ್ನು ಸಹ ಮಂಜೂರು ಮಾಡಿರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಭೂಮಿಯನ್ನು ಈಗ ಗುರುತಿಸಲಾಗಿದ್ದು ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಭೂಮಿಯನ್ನು ಮಂಡಳಿಯ ವಶಕ್ಕೆ ತೆಗೆದುಕೊಂಡ ಕೂಡಲೇ ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಮುಗಳಕೋಡ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್‌ಗೆ ಸರಿಯಾದ ಜಮೀನು ಇಲ್ಲದಿದ್ದುರಿಂದ ಪಕ್ಕದ ಗ್ರಾಮದಲ್ಲಿ ಸರ್ವೆ ನಂಬರ್-277 ರಲ್ಲಿ ಇರುವ ಸರಕಾರಿ ಜಮೀನು ನಾಲ್ಕು ಎಕರೆಗಳಷ್ಟು ಮಂಜೂರು ಮಾಡಿದ್ದಾರೆ. ಆದರೂ ಕೂಡ ಮಂಡಳಿಯವರು ಕೆಲಸ ಪ್ರಾರಂಭ ಮಾಡಿಲ್ಲ. ಅದೇ ರೀತಿಯಲ್ಲಿ ಅಧಿಕಾರಿಗಳು ಸದನಕ್ಕೆ ಈ ರೀತಿಯಲ್ಲಿ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಕ್ಕೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಹಾಗೆಯೇ ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಪ್ರಾರಂಭ ಮಾಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕೆಂದು ಸರಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೆ, ಮುಗಳಕೋಡ್ ಗ್ರಾಮದಲ್ಲಿ ಈಗಾಗಲೇ ಒಂದು 33 ಕೆ.ವಿ. ಸ್ಟೇಶನ್ ಸರಕಾರದಿಂದ ಮಂಜೂರು ಆಗಿದೆ. ನನಗೆ ಬಂದಿರತಕ್ಕಂಥ ಮಾಹಿತಿಗಳ ಪ್ರಕಾರ ಇಲ್ಲಿ ಎರಡು ಕಾರಣಗಳಿಗಾಗಿ ಕೆಲಸವು ಪ್ರಾರಂಭವಾಗಿಲ್ಲ. ಲ್ಯಾಂಡ್ ಅಕ್ವಿಸಿಶನ್ ಕೆಲಸ ಆಗಬೇಕು. ಮತ್ತು ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದು ಮಂಜೂರಾತಿಯು ದೊರೆತಿದೆ. ಮೇ ತಿಂಗಳಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ :— ಮಾನ್ಯ ಅಧ್ಯಕ್ಷರೇ, ನಾಲ್ಕು ಎಕರೆ ಭೂಮಿಯನ್ನು ನಾನು ಸ್ವತಃ ಸರಕಾರದಿಂದ ಕೊಡಿಸಿದ್ದೇನೆ. ಹೀಗೆ ಭೂಮಿ ಸಿಕ್ಕಿಲ್ಲ ಎಂದು ಹೇಳುವುದು ತಪ್ಪಾಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗ ನಾಲ್ಕು ಎಕರೆ ಭೂಮಿಯನ್ನು ಕೂಡ ಕೊಟ್ಟಿದ್ದಾರೆ. ಈಗ ಭೂಮಿ ಹಾಗೂ ಹಣಕಾಸಿನ ತೊಂದರೆ ನಮಗೆ ಇಲ್ಲ. ಮೇ ತಿಂಗಳಲ್ಲಿ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ತಡಹಿಂಡಿಯಲಾದ ಪ್ರಶ್ನೆ

ಬೆಂಗಳೂರಿನ ಅಲಸೂರು ಕೆರೆಯ ಹೂಳೆತ್ತುವುದು.

135(1080) ಶ್ರೀ ಎನ್. ರಾಜಣ್ಣ, (ಭಾರತಿನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಅಲಸೂರು ಕೆರೆಯಲ್ಲಿನ ಹೂಳನ್ನು ಇನ್ನು 15 ದಿವಸಗಳಲ್ಲಿ ತೆಗೆಸುವುದಾಗಿ ಹಿಂದಿನ ಬೆಂಗಳೂರು ನಗರಾಭಿವೃದ್ಧಿ ಸಚಿವರು ವಿಧಾನ ಸಭೆಯಲ್ಲಿ ಕಳೆದ ವರ್ಷ ಆಶ್ವಾಸನೆ ನೀಡಿದ್ದು ನಿಜವೆ?

ಆ) ಹಾಗಿದ್ದಲ್ಲಿ, ಈ ಹೂಳನ್ನು ತೆಗೆಯಲು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) 1998-99 ರಲ್ಲಿ ಈ ಕೆರೆಯ ಹೂಳು ತೆಗೆಯಲು ಹಾಗೂ ಶುದ್ಧೀಕರಿಸಲು ಈವರೆಗೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

ಈ) ಈ ಕೆರೆಯಲ್ಲಿನ ಹೂಳನ್ನು ಪೂರ್ತಿ ತೆಗೆಯಲು ಬೇಕಾಗುವ ಕಾಲಾವಧಿ ಹಾಗೂ ಹಣವೆಷ್ಟು?

ಉ) ಈ ಕೆರೆಗೆ ಕಸಾಯಿ ಖಾನೆಗಳಿಂದ ಕಲ್ಮಶಗಳು ಬಂದು ನೀರು ಕಲುಷಿತಗೊಂಡಿದ್ದು ಅದರಿಂದ ಈ ಪ್ರದೇಶದ ಜನರು ಉಸಿರಾಟ ಜಾಂಡೀಸ್ ಹಾಗೂ ಇತರ ಖಾಯಿಲೆಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಈ ಬಗ್ಗೆ ಜರೂರು ಕ್ರಮ ಕೈಕೊಳ್ಳದೆ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು?

ಋ) ಈ ಕಸಾಯಿ ಖಾನೆಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಹಾಗೂ ಈ ಕೆರೆಗೆ ಬರತಕ್ಕ ಕಲ್ಮಶಗಳನ್ನು ತಡೆಗಟ್ಟಲು ಸರ್ಕಾರದವರು ಕೂಡಲೇ ಕ್ರಮ ಕೈಕೊಳ್ಳುವರೆ?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) ಹೌದು

ಆ) ಈ ಕೆರೆಯಲ್ಲಿನ ಹೂಳನ್ನು ತೆಗೆಯಲು ಹಾಗೂ ಕೆರೆಯನ್ನು ಸ್ವಚ್ಛಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ ಕರ್ನಾಟಕ ಸರ್ಕಾರದ ಮಟ್ಟದಲ್ಲಿ ಅಲಸೂರು ಲೇಕ್ ಪೌಂಡೇಶನ್‌ನ್ನು ರಚಿಸಿದೆ. ಈ ಕೆರೆಯನ್ನು ಶುದ್ಧೀಕರಿಸಲು ಅನೇಕ ತಾಂತ್ರಿಕ ಸಲಹೆಗಳನ್ನು ಆಡ್ಮಿರಲ್ ಡಾಸನ್, ಶ್ರೀ ಜಯರಾಮ್ ಹಾಗೂ ಇರಿನ್ ಪೌಂಡೇಶನ್ ನೀಡಿವೆ. ಈ ವರದಿಗಳ ಅನುಸಾರ ಕೆರೆಯನ್ನು ಸ್ವಚ್ಛಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ

ಈ) ಅಂದಾಜೂ 1540 ಲಕ್ಷಗಳು ಬೇಕಾಗುವುದು ಹಾಗೂ ಅಂದಾಜು 2 ವರ್ಷಗಳ ಕಾಲಾವಧಿ ಬೇಕಾಗುವುದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಪರಿಶೀಲಿಸಲಾಗುವುದು.

ಶ್ರೀ ಎನ್. ರಾಜಣ್ಣ:— ಮಾನ್ಯ ಅಧ್ಯಕ್ಷರೇ, ನಾನು ಬೆಂಗಳೂರಿನಲ್ಲಿ ಉಳಿದಿರುವ ಒಂದೇ ಒಂದು ಕೆರೆಯಾದ ಅಲಸೂರು ಕೆರೆಯ ಬಗ್ಗೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಅಲಸೂರು ಕೆರೆಯಲ್ಲಿನ ಹೂಳನ್ನು ತೆಗೆಯಲು 15 ದಿನಗಳಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹಿಂದಿನ ಸಚಿವರಾದ ಮಾನ್ಯ ಅನಂತ್‌ನಾಗರವರು ಹೇಳಿದ್ದರು. ಅದಕ್ಕಿಂತ ಮೊದಲು ಮಾನ್ಯ ರೋಶನ್ ಬೇಗ್‌ರವರು ಕೂಡ ಹೇಳಿದ್ದರು. ನಾನು ಸತತವಾಗಿ ನಾಲ್ಕು ವರ್ಷಗಳಿಂದ ಈ ಬಗ್ಗೆ ಪ್ರಯತ್ನ ಮಾಡುತ್ತಾ ಇದ್ದೇನೆ. ಅಲ್ಲಿನ ನೀರಿನ ಸ್ಥಿತಿಯ ಬಗ್ಗೆ ಪತ್ರಿಕೆಗಳಲ್ಲಿ ಬಂದುದನ್ನು ಕೂಡ ನೋಡಿದ್ದೀರಿ. ಕೆರೆಯಲ್ಲಿನ ಮೀನುಗಳು ಆಕ್ಸಿಜನ್ ಇಲ್ಲದೆ ಸಾಯುತ್ತಿವೆ. ಸುತ್ತಮುತ್ತಲಿನ ಮಕ್ಕಳಿಗೆಲ್ಲಾ ವಾಸನೆಯಿಂದಾಗಿ ಜಾಂಡೀಸ್, ಟೈಫಾಯಿಡ್, ಮುಂತಾಗಿ ಕಾಯಿಲೆಗಳು ಬರುತ್ತಾ ಇವೆ. ಶ್ವಾಸಕೋಶದ ಕಾಯಿಲೆಗಳು ಬಂದು ಸಫರ್ ಆಗುತ್ತಾ ಇದ್ದಾರೆ. ಅಲ್ಲಿಂದ 2-3 ಕಿ.ಮೀ. ಅಂತರದಲ್ಲಿ ದಿನಕ್ಕೆ 2,000 ಗಳಷ್ಟು ಕುರಿ- ಮೇಕೆಗಳನ್ನು ಕಟ್ ಮಾಡುತ್ತಾರೆ. ಅದರ ರಕ್ತವು ಅಲಸೂರು ಕೆರೆಗೆ ಬಂದು ಸೇರುತ್ತಿದೆ. ಇದರ ಬಗ್ಗೆ ಏನೇನೋ ಪ್ರಯತ್ನಗಳನ್ನು ಮಾಡಿದ್ದೆ. ಫಿಲ್ಟರ್ಸ್ ಹಾಕಿದರು. ಬಿಡಬ್ಲ್ಯೂಎಸ್‌ಎಸ್‌ನವರು ಏನೇನೋ ಕೆಲಸಗಳನ್ನು ಮಾಡಿದರು. ಪರಿಸ್ಥಿತಿಯು ಹಾಗೇ ಇದೆ. ಸನ್ಮಾನ್ಯ ಸೋಮಣ್ಣನವರು ಅಲ್ಲಿ ಯಾರಿಗೂ ಕಾಯಿಲೆ ಇಲ್ಲ ಎಂದು ಹೇಳುತ್ತಿದ್ದಾರೆ. ಖಾಯಿಲೆಬಂದ ಬಡವರು ಯಾರೂ ನಿಮ್ಮ ಹತ್ತಿರ ಬಂದು ಹೇಳುವುದಿಲ್ಲ. ಆ ಬಡವರ ಕಷ್ಟ ಲೋಕಲ್ ಎಂಎಲ್‌ಎ ಮತ್ತು ಕೌನ್ಸಿಲರ್‌ಗಳಿಗೆ ಮಾತ್ರ ಗೊತ್ತಾಗುವುದು. ಆ ದುರ್ವಾಸನೆ ಏನು ಎಂಬುದನ್ನು ತಾವುಗಳು ಬಂದು ನೋಡಬೇಕು.

ಶ್ರೀ ವಿ. ಸೋಮಣ್ಣ:— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜಣ್ಣನವರು ಹೇಳಿದ ಹಾಗೆ ಹಿಂದಿನ ಸಚಿವರು ಕೂಡ ಇದನ್ನು ಸರಿಪಡಿಸುವುದಾಗಿ ಹೇಳಿದ್ದರು. ನಾನು ಆ ಕೆರೆ ಹತ್ತಿರ ಹೋಗಿ ಪರಿಶೀಲಿಸಿದ್ದೇನೆ. ಅಲ್ಲಿ ಅಲಸೂರ್ ಲೇಕ್ ಫೌಂಡೇಶನ್ ಎಂದು ಮಾಡಿಕೊಂಡು ಚೀಫ್ ಸೆಕ್ರೆಟರಿಯವರು, ಅಡಿಶನಲ್ ಚೀಫ್ ಸೆಕ್ರೆಟರಿಯವರು, ಫಾರೆಸ್ಟ್ ಇಲಾಖೆಯವರು, ಮಹಾನಗರ ಪಾಲಿಕೆಯವರು, ಎಲ್ಲರೂ ಒಟ್ಟಿಗೆ ಸೇರಿ 9-2-99ರಂದು ಒಂದು ಸಭೆ ಮಾಡಿ ಕೆರೆ ಅಭಿವೃದ್ಧಿ ಕುರಿತು ಸುಮಾರು 15 ಕೋಟಿ 40 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್‌ನ್ನು ಮಾಡಿದ್ದಾರೆ. ಈ ಸಮಸ್ಯೆಯು ಬಹಳ ವರ್ಷಗಳಿಂದ ಇದ್ದಂಥ ಸಮಸ್ಯೆ. ಈ ಸಮಸ್ಯೆಯನ್ನು ನಾವು ಕೇವಲ ಖಾಯಿಲೆ ಮುಂತಾದ ವಿಚಾರಗಳ ಬಗ್ಗೆಯೂ ಗಮನಿಸಿ ಖಾಯಂ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಮಾನ್ಯ ಸದಸ್ಯರಿಗೆ ಈಗಾಗಲೇ ಹೇಳಿದ ಹಾಗೆ ಅವರ ಒಂದು ಕೆಲಸಕ್ಕಾಗಿ 6-4-99 ರಂದು ಅವ ಕ್ಷೇತ್ರಕ್ಕೆ ಹೋಗುತ್ತಿದ್ದೇವೆ ಅದರ ಜೊತೆಗೆ ಈ ಕೆರೆಯ

ಬಗ್ಗೆಯೂ ಕೂಡ ಎಲ್ಲಾ ಅಧಿಕಾರಿಗಳನ್ನು ಜೊತೆಗೆ ಕರೆದುಕೊಂಡು ಹೋಗಿ ಅಲ್ಲಿರತಕ್ಕಂಥ ಬಹಳ ದೀರ್ಘಕಾಲೀನ ಸಮಸ್ಯೆಯನ್ನು, ಅಲ್ಲಿರತಕ್ಕಂಥ ಕಲುಷಿತ ವಾತಾವರಣವನ್ನು ಸರಿಪಡಿಸಲು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ :— ಅಲ್ಲಿ ಒಂದು ಅಸೋಸಿಯೇಶನ್ ಪ್ರಾರಂಭವಾಗಿ ಹತ್ತು ವರ್ಷಗಳು ಆಯಿತು. ಈಗ ಇನ್ನೊಂದು ಫೌಂಡೇಶನ್ ಬಂದಿದೆ. ನಾನು ಬಹಳ ವರ್ಷಗಳಿಂದ ಕೇಳುತ್ತಾ ಬಂದಿದ್ದೇನೆ. ಅಲ್ಲಿಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅಲ್ಲಿನ ಕಾಲು ಭಾಗ ಸಿಲ್ಟ್ ತೆಗೆಯಿರಿ. ಅಲ್ಲಿ ಸುತ್ತುಮುತ್ತು ಮೂರು ಸ್ಲಾಟರ್‌ಹೌಸ್‌ಗಳು ಇವೆ. ಅವುಗಳನ್ನು ನಗರದ ಹೊರಗಡೆ ಶಿಫ್ಟ್ ಮಾಡಿ. ಹೊಸದಾಗಿ ಸ್ಲಾಟರ್ ಹೌಸ್ ಮಾಡಿ ಈ ಇರತಕ್ಕಂಥ ಸ್ಲಾಟರ್ ಹೌಸ್‌ಗಳನ್ನು ಮಾರ್ಕೆಟ್ ಮಾಡಿಕೊಳ್ಳಲು ಅವರಿಗೆ ಕೊಟ್ಟರೆ ಅವರೂ ಒಪ್ಪಿಕೊಳ್ಳುತ್ತಾರೆ. ಹೀಗೆ ಮಾಡಿದರೆ ಮಾತ್ರ ಆ ಸಮಸ್ಯೆ ಬಗೆಹರಿಯುತ್ತದೆ. ಇಲ್ಲವಾದರೆ ನಮ್ಮ ಮುಖ್ಯಮಂತ್ರಿಯವರು ಹೇಳಿದ ಹಾಗೆ ಗಾಯಕ್ಕೆ ಮುಲಾಂ ಹಾಕಿದರೂ ಗಾಯ ವಾಸಿಯಾಗುವುದಿಲ್ಲ. ದಯವಿಟ್ಟು ಪರಿಹಾರ ಒದಗಿಸುವ ರೀತಿಯ ಕೆಲಸ ಮಾಡಿ, ಇಲ್ಲವಾದರೆ ಜನರು ಬಹಳ ಸಫರ್ ಮಾಡಬೇಕಾಗುತ್ತದೆ. ರಕ್ತ ಹರಿದು ಬರುತ್ತಿರುವುದರಿಂದ ಅಲ್ಲಿ ಮರಗಳು ಕೂಡ ಹೇಗೆ ಒಣಗಿ ಹೋಗುತ್ತಿವೆ ಎಂದು ನೋಡಿ. ಆ ಚಿತ್ರಗಳನ್ನು ತಮಗೆ ಕೊಡುತ್ತೇನೆ.

ಶ್ರೀ ವಿ. ಸೋಮಣ್ಣ :— ಮಾನ್ಯ ಅಧ್ಯಕ್ಷರೇ, ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೆ ಸಾಕು ಎಂದು ಹೇಳಿದ್ದಾರೆ. 6ನೇ ತಾರೀಖು ನಾನು ಮಾನ್ಯ ಸದಸ್ಯರ ಜೊತೆಗೆ ಹೋಗುತ್ತೇನೆ. ಒಂದೆರಡು ಕೋಟಿಗಳಲ್ಲಿ ಆ ಕೆಲಸವಾಗುವುದಾದರೆ ಮಾನ್ಯ ಸದಸ್ಯರು ಯಾವ ರೀತಿಯಲ್ಲಿ ಸಲಹೆ ಕೊಡುತ್ತಾರೋ ಅದನ್ನು ಸ್ವೀಕಾರ ಮಾಡಿ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಸ್ಲಾಟರ್ ಹೌಸ್‌ನ್ನು ಶಿಫ್ಟ್ ಮಾಡಿ ಎಂದು ಹೇಳಿದ್ದಾರೆ. ಎಲ್ಲಿ ಅದಕ್ಕೆ ಸೂಕ್ತವಾಗಿರುವ ಪ್ರದೇಶವಿದೆ ನಾವು ಅವರು ಎಲ್ಲರೂ ಕೂತು ಚರ್ಚೆಮಾಡಿ ಶಿಫ್ಟ್ ಮಾಡುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ.

ಅಧ್ಯಕ್ಷರು :— ಪ್ರಶ್ನೋತ್ತರಗಳು ಮುಗಿಯಿತು.

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಂಜುನಾಥ್ (ಅರಣ್ಯ ಸಚಿವರು) :— ಅಧ್ಯಕ್ಷರೆ 14ನೇ ಪಟ್ಟಿಯಲ್ಲಿರುವ 76 ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಕ್ರಮ ಸಂಪರ್ಕ ಪಡೆದ ನೀರಾವರಿ ಪಂಪ್‌ಗಳ ಸಕ್ರಮ.

930(1432) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಇಂದನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಕ್ರಮವಾಗಿ ಸಂಪರ್ಕ ಪಡೆದ ನೀರಾವರಿ ಪಂಪ್‌ಸೆಟ್ ಸಕ್ರಮಗೊಳಿಸುವ ತೀರ್ಮಾನದಂತೆ ಇದುವರೆವಿಗೂ ಎಷ್ಟು ರೈತರಿಗೆ ಪ್ರಯೋಜನವಾಗಿದೆ; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಇದರಿಂದ ವಿದ್ಯುತ್ ಇಲಾಖೆಗೆ ಸಂಗ್ರಹವಾದ ಹಣ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಈ ರೀತಿ ಅಕ್ರಮ ಸಂಪರ್ಕ ಪಡೆದಿದ್ದರಿಂದ ಸ್ಥಳೀಯವಾಗಿ ಜೆಸಿ. ಗಳ ಮೇಲೆ ಲೋಡ್ ಜಾಸ್ತಿಯಾಗಿದ್ದು ಈ ಹಿಂದೆ ಸಂಪರ್ಕ ಪಡೆದ ಬಳಕೆದಾರರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಸಿಗದೇ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದಲ್ಲಿ ಇದನ್ನು ಸರಿಪಡಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂದನ ರಾಜ್ಯ ಸಚಿವರು) :—

ಅ) ಅಕ್ರಮವಾಗಿ ಸಂಪರ್ಕ ಪಡೆದ ನೀರಾವರಿ ಪಂಪ್‌ಸೆಟ್ ಸಕ್ರಮಗೊಳಿಸುವ ತೀರ್ಮಾನದಿಂದ ದಿನಾಂಕ: 28-2-99ರ ಅಂತ್ಯದಲ್ಲಿದ್ದಂತೆ 5,469 ರೈತರುಗಳಿಗೆ ಪ್ರಯೋಜನವಾಗಿದೆ. ಹಾಗೂ ಈ ಸಕ್ರಮೀಕರಣದಿಂದ ಮಂಡಳಿಗೆ ದಿನಾಂಕ 28-2-99 ಅಂತ್ಯಕ್ಕೆ 34.77 ಕೋಟಿ ರೂ.ಗಳು ಸಂಗ್ರಹವಾಗಿರುತ್ತದೆ. ಸಕ್ರಮೀಕರಣಗೊಳಿಸಲಾದ ಪಂಪ್‌ಸೆಟ್‌ಗಳ ಸಂಖ್ಯೆ ಮತ್ತು ವಸೂಲು ಮಾಡಲಾದ ಶುಲ್ಕದ ಮೊತ್ತದ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹೌದು; ಬಂದಿದೆ.

ಇ) ವಿದ್ಯುತ್ ಮಾರ್ಗಗಳ ಬಲವರ್ಧನೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರ ಮೂಲಕ ವ್ಯವಸ್ಥೆಯನ್ನು ಸುಧಾರಿಸಲು ಮಂಡಳಿಯು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1432ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ ತಾಲ್ಲೂಕು	ಸಕ್ರಮೀಕರಣಗೊಳಿಸಲಾದ ಪಂಪುಸೆಟ್ಟುಗಳ ಸಂಖ್ಯೆ	ಸಕ್ರಮೀಕರಣದ ಬಗ್ಗೆ ವಸೂಲಾದ ಶುಲ್ಕದ ಮೊತ್ತ
	ಬೆಂಗಳೂರು ಜಿಲ್ಲೆ		
1	ಆನೇಕಲ್	761	ರೂ. 86,05,062-00
2	ಬೆಂಗಳೂರು ಉತ್ತರ	396	ರೂ. 33,44,525-00
3.	ಬೆಂಗಳೂರು ದಕ್ಷಿಣ	385	ರೂ. 41,97,132-00

1	2	3	4
4.	ಚನ್ನಪಟ್ಟಣ	748	ರೂ. 57,64,684-00
5.	ದೇವನಹಳ್ಳಿ	365	ರೂ. 25,93,000-00
6.	ದೊಡ್ಡಬಳ್ಳಾಪುರ	1086	ರೂ.1,12,30,000-00
7.	ಹೊಸಕೋಟೆ	238	ರೂ. 15,66,000-00
8.	ಕನಕಪುರ	56	ರೂ. 5,74,336-00
9.	ಮಾಗಡಿ	440	ರೂ. 43,06,00-00
10.	ನೆಲಮಂಗಲ	483	ರೂ. 33,47,000-00
11.	ರಾಮನಗರ	374	ರೂ. 31,80,785
	ಮೊತ್ತ	5332	ರೂ. 4,87,08,524
	ಬೆಳಗಾಂ ಜಿಲ್ಲೆ		
1.	ಅಥಣಿ	1016	77,01,865
2.	ಬೆಳಗಾಂ	6	50,570
3.	ಚಿಕ್ಕೋಡಿ	853	47,97,999-00
4.	ಗೋಕಾಕ್	80	9,27,770-00
5.	ಹುಕ್ಕೇರಿ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ವ್ಯಾಪ್ತಿಗೆ ಒಳಪಟ್ಟಿದೆ.		
6.	ಖಾನಾಪುರ	7	62,460-00
7.	ಸೌದತ್ತಿ	236	15,42,040-00
8.	ರಾಯಬಾಗ್	22	2,93,584-00
9.	ರಾಮದುರ್ಗ	69	3,11,410-00
10.	ಬೈಲಹೊಂಗಲ	510	41,21,968-00
	ಮೊತ್ತ	2799	1,98,09,686-00
	ಬಳ್ಳಾರಿ ಜಿಲ್ಲೆ		
1.	ಬಳ್ಳಾರಿ	284	14,26,793-00
2.	ಹಡಗಲಿ	18	97,050-00
3.	ಹರಪನಹಳ್ಳಿ	217	7,90,811-00

1	2		3	4
4.	ಹೊಸಪೇಟೆ		2	15,920-00
5.	ಕೂಡ್ಲಿಗಿ		64	2,99,290-00
6.	ಹಗರಿಬೊಮ್ಮನಹಳ್ಳಿ		13	41,090-00
7.	ಸಂಡೂರು		64	3,12,392-00
8.	ಸಿರಗುಪ್ಪ		12	69,630-00
		ಮೊತ್ತ	674	30,52,976-00
	ಬೀದರ್ ಜಿಲ್ಲೆ			
1.	ಔರಾದ್		-	-
2.	ಬಸವಕಲ್ಯಾಣ		-	-
3.	ಭಾಲ್ಕಿ		-	-
4.	ಬೀದರ್		7	42,257-00
5.	ಹುಮ್ನಾಬಾದ್		-	-
		ಮೊತ್ತ	7	42,257-00
	ಬಿಜಾಪುರ ಜಿಲ್ಲೆ			
1.	ಬಾದಾಮಿ		14	91,476-00
2.	ಬಾಗಲಕೋಟೆ		15	98,010-00
3.	ಬಾಗೇವಾಡಿ		142	8,61,179-00
4.	ಬಿಜಾಪುರ		880	1,00,61,057-00
5.	ಬಿಳಗಿ		448	29,83,320-00
6.	ಹುನಗುಂದ		73	4,76,923-00
7.	ಇಂಡಿ		78	5,47,881-00
8.	ಜಮಖಂಡಿ		18	1,59,335-00
9.	ಮುದ್ದೇಬಿಹಾಳ್		31	1,47,890-00
10.	ಮುಧೋಳ್		38	2,14,683-00
11.	ಸಿಂದಗಿ		27	1,38,401-00
		ಮೊತ್ತ	1764	1,57,78,155-00

1	2	3	4
	ಚಿಕ್ಕಮಗಳೂರು ಜಿಲ್ಲೆ		
1.	ಚಿಕ್ಕಮಗಳೂರು	170	12,14,204-00
2.	ಕಡೂರು	4449	2,81,65,585-00
3.	ಕೊಪ್ಪ	-	-
4.	ಮೂಡಿಗೆರೆ	6	41,820-00
5.	ನರಸಿಂಹರಾಜಪುರ	-	-
6.	ಶೃಂಗೇರಿ	-	-
7.	ತರೀಕೆರೆ	1169	67,90,152-00
	ಮೊತ್ತ	5814	3,62,11,761-00
	ಚಿತ್ರದುರ್ಗ ಜಿಲ್ಲೆ		
1.	ಚಳ್ಳಕೆರೆ	281	14,62,282-00
2.	ಚಿತ್ರದುರ್ಗ	497	9,09,117-00
3.	ದಾವಣಗೆರೆ	758	31,40,800-00
4.	ಹರಿಹರ	422	23,19,161-00
5.	ಹಿರಿಯೂರು	128	2,81,050-00
6.	ಹೊಳಲ್ಕೆರೆ	180	11,41,278-00
7.	ಹೊಸದುರ್ಗ	469	16,16,836-00
8.	ಜಗಳೂರು	144	5,15,600-00
9.	ಮೊಳಕಾಲ್ಮೂರು	14	27,658-00
	ಮೊತ್ತ	2893	1,14,13,782-00
	ಕೊಡಗು ಜಿಲ್ಲೆ		
1.	ಮಡಿಕೇರಿ	-	-
2.	ಸೋಮವಾರಪೇಟೆ	-	-
3.	ವಿರಾಜಪೇಟೆ	-	-
	ಮೊತ್ತ	-	-

1	2	3	4
	ಧಾರವಾಡ ಜಿಲ್ಲೆ		
1.	ಬ್ಯಾಡಗಿ	158	11,53.000-00
2.	ಧಾರವಾಡ	3	1,19,660-00
3.	ಗದಗ್	38	2,54,904-00
4.	ಹಾನಗಲ್	346	11,66,000-00
5.	ಹಾವೇರಿ	276	16,50,000-00
6.	ಹಿರೆಕೆರೂರು	673	40,96,000-00
7.	ಹುಬ್ಬಳ್ಳಿ	33	1,36,830-00
8.	ಕಲಘಟಗಿ	16	91,250-00
9.	ಕುಂದಗೊಳ	3	21,630-00
10.	ಮುಂಡರಗಿ	80	5,36,660-00
11.	ನರಗುಂದ	-	-
12.	ನವಲಗುಂದ	-	-
13.	ರಾಣೆಬೆನ್ನೂರು	479	23,23,000-00
14.	ರೋಣ	137	9,19,096-00
15.	ಸವಣೂರು	10	50,600-00
16.	ಶಿಗ್ಗಾಂವ್	82	3,50,940-00
17.	ಶಿರಹಟ್ಟಿ	84	5,63,508-00
	ಮೊತ್ತ	2418	1,34,35,084-00
	ಗುಲ್ಬರ್ಗಾ ಜಿಲ್ಲೆ		
1.	ಅಫಜಲ್‌ಪುರ	-	-
2.	ಆಲಂದ್	-	-
3.	ಚಿಂಚೋಲಿ	-	-
4.	ಚಿತ್ತಾಪುರ	9	61,235-00
5.	ಗುಲ್ಬರ್ಗಾ	-	-
6.	ಜೇವರ್ಗಿ	-	-
7.	ಸೇಡಂ	-	-

1	2	3	4
8.	ಶಹಾಪುರ	-	-
9.	ಶೋರಾಪುರ	4	10,740-00
10.	ಯಾದಗಿರಿ	2	16,070-00
	ಮೊತ್ತ	15	88,045-00
	ಹಾಸನ ಜಿಲ್ಲೆ		
1.	ಅಲೂರು	78	1,93,750-00
2.	ಆರಕಲಗೂಡು	284	12,48,004-00
3	ಅರಸೀಕೆರೆ	5343	62,58,176-00
4.	ಬೇಲೂರು	587	21,24,000-00
5.	ಚನ್ನರಾಯಪಟ್ಟಣ	1281	2,56,58,775-00
6.	ಹಾಸನ	1248	29,64,790-00
7.	ಹೊಳೆನರಸೀಪುರ	89	4,62,590-00
8.	ಸಕಲೇಶಪುರ	10	57,506-00
	ಮೊತ್ತ	9020	3,89,37,591-00
	ಕೋಲಾರ ಜಿಲ್ಲೆ		
1.	ಬಾಗೇಪಲ್ಲಿ	339	27,38,000-00
2.	ಬಂಗಾರಪೇಟೆ	94	10,54,000-00
3.	ಚಿಕ್ಕಬಳ್ಳಾಪುರ	122	13,64,000-00
4.	ಚಿಂತಾಮಣಿ	838	59,22,000-00
5.	ಗೌರಿಬಿದನೂರು	358	40,15,000-00
6.	ಗುಡಿಬಂಡೆ	82	5,13,000-00
7.	ಕೋಲಾರ	728	27,38,000-00
8.	ಮಾಲೂರು	422	34,42,000-00
9.	ಮುಳಬಾಗಿಲು	480	35,57,000-00
10.	ಶಿಡ್ಲಘಟ್ಟ	198	14,23,000-00
11.	ಶ್ರೀನಿವಾಸಪುರ	357	26,39,000-00
	ಮೊತ್ತ	4018	3,32,97,000-00

1	2	3	4
	ಮಂಡ್ಯ ಜಿಲ್ಲೆ		
1.	ಕೃಷ್ಣರಾಜಪೇಟೆ	1490	62,38,296.00
2.	ಮದ್ದೂರು	116	6,67,066-00
3.	ಮಳವಳ್ಳಿ	521	30,45,499-00
4.	ಮಂಡ್ಯ	250	13,92,670-00
5.	ನಾಗಮಂಗಲ	521	11,86,488-00
6.	ಪಾಡವಪುರ	530	11,43,515-00
7.	ಶ್ರೀರಂಗಪಟ್ಟಣ	190	8,25,335-00
	ಮೊತ್ತ	3618	1,48,98,869-00
	ಮೈಸೂರು ಜಿಲ್ಲೆ		
1.	ಚಾಮರಾಜನಗರ	1812	1,48,28,607-00
2.	ಗುಂಡ್ಲುಪೇಟೆ	392	24,03,580-00
3.	ಹೆಗ್ಗಡದೇವನಕೋಟೆ	305	14,10,625-00
4.	ಹುಣಸೂರು	165	7,63,150-00
5.	ಹೊಳೆಗಾಲ	838	57,76,920.00
6.	ಕೃಷ್ಣರಾಜನಗರ	5	23,125-00
7.	ಮೈಸೂರು	794	56,06,709-00
8.	ನಂಜನಗೂಡು	99	1,68,697-00
9.	ಪಿರಿಯಾಪಟ್ಟಣ	192	8,88,000-00
10.	ಟಿ.ನರಸೀಪುರ	597	33,30,835-00
11.	ಯಲಂದೂರು	15	1,07,890-00
	ಮೊತ್ತ	5214	2,95,32,732.00
	ಉತ್ತರ ಕನ್ನಡ ಜಿಲ್ಲೆ		
1.	ಅಂಕೋಲ	-	-
2.	ಭಟ್ಕಳ	1	15,000-00
3.	ಹಳಿಯಾಳ	-	-
4.	ಹೊನ್ನಾವರ	-	-

1	2	3	4
5.	ಕಾರವಾರ	2	22,010-00
6.	ಕುಮಟಾ	-	-
7.	ಮುಂಡಗೋಡ	-	-
8.	ಸಿದ್ದಾಪುರ	7	37,175-00
9.	ಸಿರಸಿ	8	33,000-00
10.	ಸೂಪಾ (ಜೋಯಿಡಾ)	-	-
11.	ಯಲ್ಲಾಪುರ	6	49,010-00
	ಮೊತ್ತ	24	1,52,195-00
	ರಾಯಚೂರು ಜಿಲ್ಲೆ		
1.	ದೇವದುರ್ಗ	2	3,420-00
2.	ಗಂಗಾವತಿ	549	32,06,000-00
3.	ಕೊಪ್ಪಳ	118	6,04,000-00
4.	ಕುಷ್ಟಗಿ	8	21,000-00
5.	ಲಿಂಗಸುಗೂರು	195	6,66,358-00
6.	ಮಾನ್ವಿ	21	71,420-00
7.	ರಾಯಚೂರು	16	93,840-00
8.	ಸಿಂಧನೂರು	6	13,600-00
9.	ಯಲ್ಬುರ್ಗ	15	87,000-00
	ಮೊತ್ತ	930	47,66,638-00
	ಶಿವಮೊಗ್ಗ ಜಿಲ್ಲೆ		
1.	ಭದ್ರಾವತಿ	64	7,80,000-00
2.	ಚನ್ನಗಿರಿ	226	1,70,000-00
3.	ಹೊನ್ನಾಳಿ	71	14,20,000-00
4.	ಹೊಸನಗರ	14	67,900-00
5.	ಸಾಗರ	39	84,880-00
6.	ಶಿಕಾರಿಪುರ	197	13,67,740-00
7.	ಶಿವಮೊಗ್ಗ	342	22,25,000-00

1	2	3	4
8.	ಸೊರಬ	417	22,18,410-00
9.	ತೀರ್ಥಹಳ್ಳಿ	304	12,67,340-00
	ಮೊತ್ತ	1674	96,01,270-00
	ದಕ್ಷಿಣ ಕನ್ನಡ ಜಿಲ್ಲೆ		
1.	ಬೆಳ್ತಂಗಡಿ	1171	70,48,699-00
2.	ಭಂಟ್ವಾಳ	1745	1,22,24,540-00
3.	ಕುಂದಾಪುರ	-	-
4.	ಕಾರ್ಕಳ	646	45,74,431-00
5.	ಮಂಗಳೂರು	-	-
6.	ಪುತ್ತೂರು	820	49,95,870-00
7.	ಸೂಳ್ಯ	371	20,74,985-00
8.	ಉಡುಪಿ	-	-
	ಮೊತ್ತ	4753	3,09,18,533-00
	ತುಮಕೂರು ಜಿಲ್ಲೆ		
1.	ಚಿಕ್ಕನಾಯಕನಹಳ್ಳಿ	457	33,75,000-00
2.	ಗುಬ್ಬಿ	1570	94,27,000-00
3.	ಕೊರಟಗೆರೆ	262	23,51,000-00
4.	ಕುಣಿಗಲ್	516	31,58,000-00
5.	ಮಧುಗಿರಿ	189	16,51,00000
6.	ಪಾವಗಡ	37	24,55,000-00
7.	ಸಿರಾ	438	31,27,000-00
8.	ತಿಪಟೂರು	417	26,90,000-00
9.	ತುಮಕೂರು	1443	81,79,000-00
10.	ತುರುವೆಕೆರೆ	173	6,68,000-00
	ಮೊತ್ತ	5502	3,70,81,000-00
	ಒಟ್ಟು ಮೊತ್ತ	56,469	34,77,26,098-00

ಪಡಿತರ ಮಸ್ತಗಳು ಕಾಳಸಂತೆಯಲ್ಲಿ ಮಾರಾಟ.

931(778) ಶ್ರೀ ಅಶೋಕ ಶಂಕರ ಹಾಟ್ಟಿ (ಹುಬ್ಬಳ್ಳಿ ನಗರ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರತಿ ವರ್ಷ ಹುಬ್ಬಳ್ಳಿ ನಗರಕ್ಕೆ ಒದಗಿಸುತ್ತಿರುವ ಪಡಿತರ ಪ್ರಮಾಣ ಎಷ್ಟು (ಅಕ್ಕಿ ಗೋಧಿ, ಸಕ್ಕರೆ, ಸೀಮೆಎಣ್ಣೆ, ತಾಳೆಎಣ್ಣೆ ಸೇರಿ ಕಳೆದ 3 ವರ್ಷಗಳ ವಿವರ ನೀಡುವುದು.)

ಆ) ಪಡಿತರ ಅಂಗಡಿಕಾರರೊಂದಿಗೆ ಅಧಿಕಾರಿಗಳಿ ಶ್ಯಾಮೀಲಾಗಿ ಪಡಿತರ ಮಸ್ತುಗಳನ್ನು ಕಳ್ಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು?

ಇ) ಪಡಿತರ ಮಸ್ತುಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲು ಪಡಿತರ ಅಂಗಡಿಕಾರರಿಗೆ ಸಮಯ ನಿಗಧಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಈ) ಹಾಗಿದ್ದಲ್ಲಿ, ಎಂದಿನಿಂದ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಸವಣೆಪ್ಪ (ಆಹಾರ ಮತ್ತು ನಾಗರೀಕ ಸರಬರರಾಜು ಸಚಿವರು) :—

ಎಪ್ರಿಲ್ 1, 1996 ರಿಂದ ಫೆಬ್ರವರಿ 99 ಅಂತ್ಯದವರೆಗೆ ಪಡಿತರ ಮಸ್ತುಗಳನ್ನು ಈ ಕೆಳಕಂಡಂತೆ ವಿತರಿಸಲಾಗಿದೆ.

(ಕ್ವಿಂಟಾಲುಗಳಲ್ಲಿ)

	ಅಕ್ಕಿ		ಗೋಧಿ
ಬಿ.ಪಿ.ಎಲ್	96,089	ಕ್ವಿಂ.	9257
ಎಪಿಎಲ್	1,75,253	ಕ್ವಿಂ.	1,03,138-00
ಸಕ್ಕರೆ	72,098	ಕ್ವಿ.	
ಸಿ.ಎಣ್ಣೆ	26,775-00	ಕೆ.ಎಲ್.	
ತಾ. ಎಣ್ಣೆ	1,795	ಕೆ.ಜಿ.	
ಆ)	-ಇಲ್ಲ-		

೩) ಈಗಾಲಲೇ ಸಮಯ ನಿಗಧಿಪಡಿಸಲಾಗಿದೆ.

ಬೆಳ್ಗೆ 8 ರಿಂದ 12 ರವರೆಗೆ
ಮಧ್ಯಾಹ್ನ 4 ರಿಂದ 8 ರವರೆಗೆ

೪) ಉದ್ಭವಿಸುವುದಿಲ್ಲ

Number of bogus cards in Hubli.

932(779) Sri Ashok Shankar Katwe (Hubli) :— Will the Minister for Food and Civil Supplies be pleased to state:

a) What is he number of bougs cards detected in Hubli (fair price shop-wise details may be furnished)

b) What action Government has taken against the officers who have issued bogus cards who are the officers on whom action has been taken;

d) Whether it has come to he notice of theGovernment that public areharrassed in issue of cards;

d) If so, what action have been taken by the Government?

Sri. G. Basavanappa (Minister for Food and Civil Supplies) :—

During the current year 6,000 bogus cards havve been detedted in Hubli Fair Price Shop-wise details enclosed

In Hubli Town, for disgtribution of illegal cards, Departmental Enquiry has been initiated against 6 officers and officials of Food and Civil Supplies Department including one Asistant Director.

-NO-

Action is being taken whevever noticed.

ಕ್ರಮ ಸಂಖ್ಯೆ	ಸ್ಟ್ಯಾಂಪ್ ನಂ.	ನಕಲಿ	ಪಡಿತರ ಚೀಟಿ	
1	1	643	13	630
2	2	637	19	618
3	3	569	40	529
4	4	432	28	404
5	5	577	41	536
6	6	620	40	580
7	7	1004	85	919
8	8	559	40	519
9	9	806	55	751
10	10	240	20	220
37	37	248	22	226
38	38	444	28	416
39	39	696	42	656
40	39ಎ	308	18	290
41	40	678	40	638
42	41	547	32	515
43	42	211	12	199
44	43	825	50	775
45	44	556	38	518
46	45	380	22	356
47	46	381	22	358
48	47	210	12	198

ಕ್ರಮ ಸಂಖ್ಯೆ	ಸ್ಟಾಪ್ ನಂ.		ನಳಲಿ ಪಡಿತರ ಚೀಟಿ	
49	48	771	51	720
50	49	295	20	275
51	50	421	20	396
52	51	398	23	375
53	52	440	33	407
54	53	471	35	436
55	54	335	25	314
56	55	719	49	670
57	56	430	29	401
58	57	562	40	512
59	58	717	49	668
60	59	449	32	417
61ಐ	60	721	52	669
62	61	547	35	512
63	62	319	22	297
64	63	547	30	517
65	64	735	51	684
66	65	572	41	531
67	67	546	32	514
68	68	150	9	141
69	69	920	55	805
70	70	848	50	798

ಕ್ರಮ ಸಂಖ್ಯೆ	ಸ್ಟ್ಯಾಂಪ್ ನಂ.	ನಕಲಿ ಪಡಿತರ ಚೀಟಿ		
71	71	612	36	576
72	72	456	27	429
73	73ಎ	580	44	536
74	74	361	28	333
75	75	277	15	282
76	76	334	20	314
77	77	214	12	202
78	78	336	20	316
79	79	310	18	292
80	80	553	34	519
81	81	463	27	436
82	82	417	25	392
83	83	747	44	703
84	84	637	48	589
85	85	664	39	625
86	86	320	19	301
87	87	311	18	293
88	88	701	42	659
89	89	455	34	421
90	90	242	14	228
92	92	359	21	338
93	93	338	20	318

ಕ್ರಮ ಸಂಖ್ಯೆ	ಸ್ಟಾಪ್ ನಂ.		ನಕಲಿ ಪಡಿತರ ಚೀಟಿ	
94	94	643	38	605
95	95	398	23	375
96	96	184	10	174
97	97	515	30	485
98	98	585	35	550
99	99	319	19	300
100	100	298	17	281
101	101	418	25	393
102	102	695	41	654
103	103	594	35	659
104	104	309	19	290
105	107	638	38	600
106	108	802	48	754
107	109	521	31	490
108	110	438	35	403
109	111	636	26	613
110	112	415	34	381
111	113	334	21	313
112	114	407	30	377
113	115	668	36	532
114	116	510	?	510
115	117	459	29	430

ಕ್ರಮ ಸಂಖ್ಯೆ	ಸ್ಟ್ಯಾಬ್ ನಂ.	ನಕಲಿ ಪಡಿತರ ಚೀಟಿ		
116	118	33	43	590
117	119	358	26	332
118	120	588	42	546
119	121	461	28	433
120	122	922	61	861
121	123	662	41	621
122	124	357	28	339
123	125	659	45	614
124	126	333	21	312
125	127	484	30	484
127	129	610	8	502
128	130	376	10	366
129	131	371	29	342
130	132	618	41	507
131	133	639	39	600
132	134	583	46	537
133	136	532	39	493
134	137	426	27	399
135	138	252	18	234
136	139	638	46	592
137	140	929	68	871
138	141	636	40	596

ಕ್ರಮ ಸಂಖ್ಯೆ	ಸ್ಟಾಪ್ ನಂ.		ನಕಲಿ ಪಡಿತರ ಚೀಟಿ	
139	142	565	54	541
140	143	300	18	282
163	166	488	30	458
164	167	454	34	420
165	168	780	50	730
166	169	454	27	427
167	170	420	29	391

ವಿರಾಜಪೇಟೆಯಲ್ಲಿ ಹಸಿರು ಮತ್ತುಕೇಸರಿ ಪಡಿತರ ಚೀಟಿ ವಿತರಣೆ.

935 (066) ಶ್ರೀ ಹೆಚ್. ಬಸವರಾಜ್ (ವಿರಾಜಪೇಟೆ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಈವರೆಗೆ ವಿತರಿಸಲಾದ ಹಸಿರು ಕೇಸರಿ ಪಡಿತರ ಚೀಟಿಗಳು ಎಷ್ಟು ; ಹಾಗೂ ಈ ಪಡಿತರ ಚೀಟಿಗಳಿಗೆ ಪ್ರತಿ ತಿಂಗಳು ಪಡಿತರ ಯೋಜನೆ ಮೂಲಕ ವಿತರಿಸಲಾಗುವ ಆಹಾರ ಸಾಮಗ್ರಿಗಳು ಹಾಗೂ ಸೀಮೆಎಣ್ಣೆ ಪ್ರಮಾಣ ಎಷ್ಟು? (ಅವುಗಳಿಗೆ ಪೂರ್ಣ ವಿವರ ನೀಡುವುದು)

ಆ) ವಿರಾಜಪೇಟೆ ತಾಲ್ಲೂಕಿನಲ್ಲಿ ಹಳದಿ ಕಾರ್ಡು ಯೋಜನೆ ಅನುಷ್ಠಾನ-ಗೊಳಿಸಲಾಗಿದೆಯೇ;

ಇ) ಹಾಗಿದಿದ್ದಲ್ಲಿ ಅದಕ್ಕೆ ಕಾರಣಗಳೇನು? ಅದನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಹಸಿರು ಕಾರ್ಡು 28373
ಕೇಸರಿ ಕಾರ್ಡು 12524
ಒಟ್ಟು 40897

	ಅಕ್ಕಿ	ಗೋದಿ (ಕ್ವಿಂಟಾಳುಗಳಲ್ಲಿ)
ಹಸಿರುಕಾರ್ಡ್	2270-00	570-00
ಕೇಸರಿ ಕಾರ್ಡ್	890-00	300-00
ಸಕ್ಕರೆ	679-00	-
ಸೀಮೆಎಣ್ಣೆ	264 ಕೆ.ಎಲ್.	

ಅ) ಹಳದಿ ಕಾರ್ಡ್ ಯೋಜನೆ ಇಲಾಖೆಯಲ್ಲಿ ಇಲ್ಲ, ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಕ್ರಮ ಮದ್ಯ ಸಾಗಾಣಿಕೆ.

936(1067) ಶ್ರೀ ಹೆಚ್.ಡಿ. ಬಸವರಾಜ್ (ವೀರಾಜಪೇಟೆ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇರಳ ರಾಜ್ಯದಲ್ಲಿರುವ ಮಾಹೆ ಕೇಂದ್ರಾಡಳಿತ ಪ್ರದೇಶದಿಂದ ಕೊಡಗಿಗೆ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಯಲು ಕೈಗೊಂಡಿರುವ ಕ್ರಮವೇನು.

ಆ) ಈದ 3 ವರ್ಷಗಳಲ್ಲಿ, ವೀರಾಜಪೇಟೆ ತಾಲ್ಲೂಕಿನಲ್ಲಿ ಅಬಕಾರಿ ಇಲಾಖೆ ಅಕ್ರಮವಾಗಿ ಮದ್ಯ ಸಾರಾಯಿ ಮೇಮಾಟು ನಡೆಸುವವರ ವಿರುದ್ಧ ಕೈಗೊಂಡ ಕ್ರಮಗಳು(ವಿವರ ನೀಡುವುದು)

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಬಂದಿರುವುದಿಲ್ಲ.

ಆದರೆ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಯಲು ಮುಂಜಾಗ್ರತಾ ಕ್ರಮವಾಗಿ ವೀರಾಜಪೇಟೆ ತಾಲ್ಲೂಕಿನ ಪೆರಂಬಾಡಿ ಎಂಬಲ್ಲಿ 1998 ರಿಂದ ತನಿಖಾ ಠಾಣೆಯನ್ನು ತೆರೆಯಲಾಗಿದೆ.

ಆ) ಅಕ್ರಮ ಮದ್ಯ ವ್ಯವಹಾರ ನಡೆಸಿದ್ದರ ಮೇಲೆ ದಾಳಿಗಳನ್ನು ನಡೆಸಿ, ಅಬಕಾರಿ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ವಿವರಗಳು ಈ ರೀತಿ ಇವೆ:-

	96-97	97-98	98-99 (28-9-99)
1) ದಾಳಿಗಳ ಸಂಖ್ಯೆ	575	650	434
2) ದಾಖಲು ಮಾಡಿದ ಮೊಕದ್ದಮೆಗಳ ಸಂಖ್ಯೆ	91	98	73
3) ಅಪರಾಧಿಗಳ ಸಂಖ್ಯೆ	85	99	82
4) ವಶಪಡಿಸಿಕೊಂಡ ವಾಹನಗಳು	1	7	-
5) ವಶಪಡಿಸಿಕೊಂಡ ಮದ್ಯ	ಲೀ. 260 020	ಲೀ. 2020. 780	ಲೀ. 2155 620
6) ವಶಪಡಿಸಿಕೊಂಡ ಸಾರಾಯಿ	244.600	953.400	158.600

ವಕ್ಫ್‌ಗೆ ಸೇರಿದ ಆಸ್ತಿಯ ಕಟ್ಟಡಗಳ ನಿರ್ಮಾಣ ಮಾಡಿ ಹಂಚಿಕೆಯಲ್ಲಿ ಅವ್ಯವಹಾರ.

937(1068) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವಿರಾಜಪೇಟೆ ತಾಲ್ಲೂಕಿನಲ್ಲಿ ವಕ್ಫ್‌ಗೆ ಸೇರಿದ ಆಸ್ತಿಯಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿ ಅವುಗಳ ಹಂಚಿಕೆಯಲ್ಲಿ ಹಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಹಾಗಿದ್ದಲ್ಲಿ, ಅದರಲ್ಲಿ ಶಾಮೀಲಾಗಿರುವವರು ಯಾರು ಯಾರು? ಸರ್ಕಾರದ ವಕ್ಫ್ ಆಸ್ತಿ ರಕ್ಷಣೆಗಾಗಿ ಕೈಗೊಳ್ಳಲಿರುವ ಕ್ರಮಗಳೇನು?

3. ವಿರಾಜಪೇಟೆ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿಯಿರುವ ಆಸ್ತಿಯನ್ನು ಕೆಲವರು ಅತಿಕ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

4. ಹಾಗಿದ್ದಲ್ಲಿ, ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ರಾಜ್ಯ ಸಚಿವರು) :—

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಇದರಲ್ಲಿ, ಒತ್ತುವರಿ ಯಾವುದು ಇಲ್ಲ, ಆದರೂ ಸಹ ವಿರಾಜಪೇಟೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿ ಮಸ್ಜೀದ್-ಎ-ಅಜಮ್‌ಗೆ ಸೇರಿದ ಜಮೀನಿನಲ್ಲಿ 0.54 ಸೆಟ್ಸ್ ವಿಸ್ತೀರ್ಣದ ಜಮೀನಾಗಿರುತ್ತದೆ. ಈ ಜಮೀನಿನಲ್ಲಿ 2 ವಾಸದ ಮನೆಗಳು ಮತ್ತು 3 ಅಂಗಡಿಗಳು ಭಾಗಶಃ ಜಮೀನಿನಲ್ಲಿ ಕಟ್ಟಿರುತ್ತವೆ. ಸದರಿ ಅಂಗಡಿ ಮತ್ತು ಮನೆಗಳು ಮಸ್ಜೀದ್-ಎ-ಅಜಮ್ ಆಡಳಿತದಲ್ಲಿ (ವ್ಯವಸ್ಥೆಯಲ್ಲಿ) ಬಾಡಿಗೆಗೆ ಕೊಡಲಾಗಿದೆ.

4. ಉದ್ಭವಿಸುವುದಿಲ್ಲ.

ವಕ್ಫ್‌ಗೆ ಸಂಬಂಧಿಸಿದ ಆಸ್ತಿಯಲ್ಲಿ ರಸ್ತೆ ನಿರ್ಮಾಣ.

938(1069) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ನಗರದಲ್ಲಿರುವ ವಕ್ಫ್‌ಕ್ಕೆ ಸಂಬಂಧಿಸಿದ ಆಸ್ತಿಯನ್ನು ಕೆಲವರು ಅತಿಕ್ರಮಿಸಿ ಆ ಸ್ಥಳದಲ್ಲಿ ರಸ್ತೆ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಕಾನೂನು ಬಾಹಿರವಾಗಿ ಅತಿಕ್ರಮಿಸಿರುವವರ ವಿರುದ್ಧ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು ;

ಆ) ವಕ್ಫ್ ಸೇರಿದ ಬಿಸ್ಮಿಲ್ಲಾ ಕಾವಲಿ ಮಕಾನಿನಲ್ಲಿ ವಾಸಿಸುತ್ತಿರುವ ಬಡ ಮುಸ್ಲಿಂ ಜನತೆಗೆ ಪಟ್ಟಿ ವಿತರಣೆ ಮಾಡಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ರಾಜ್ಯ ಸಚಿವರು) :—

ಅ) ಹೌದು.

ಕರ್ನಾಟಕ ವಕ್ಫ್ ಮಂಡಳಿಯ ಗಮನಕ್ಕೆ ತಾರದೇ ಅನುಮೋದನೆ ಇಲ್ಲದೆ, ಮಸೀದಿ-ಇ-ಆಜಂ, ವಿರಾಜಪೇಟೆ, ಇದರ ಕಾರ್ಯಕಾರಿ ಸಮಿತಿಯವರು ವಿರಾಜಪೇಟೆಯ ಸರ್ವೆ ನಂ. 731 ರಲ್ಲಿ 260x12 ಅಡಿ ಅಳತೆಯ ಜಾಗವನ್ನು ರಸ್ತೆಯನ್ನು ನಿರ್ಮಾಣ ಮಾಡುವ ಸಲುವಾಗಿ ನೀಡಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಕಾರ್ಯಕಾರಿ ಸಮಿತಿ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಆ) ಬಿಸ್ಮಿಲ್ಲಾ ಖಾ ವಾಲಿ ಮಕಾನ್ ಖಬರ್‌ಸ್ತಾನ್, ಇದು ವಿರಾಜಪೇಟೆಯಲ್ಲಿರುತ್ತದೆ. ಮಂಡಳಿಯ ಅನುಮೋದನೆ ಇಲ್ಲದೇ ಸ್ಥಳೀಯ ಮುಸ್ಲೀಮರು ಸುಮಾರು ಅರ್ಧದಷ್ಟು ಜಾಗವನ್ನು ಅತಿಕ್ರಮಿಸಿಕೊಂಡು, ಜಾಗದಲ್ಲಿ ಮನೆಗಳನ್ನು ಕಟ್ಟಿರುತ್ತಾರೆ. ಈ ಅತಿಕ್ರಮವಾಗಿ ಅಕ್ರಮಿಸಿರುವ ಜಾಗವನ್ನು ಸಕ್ರಮಗೊಳಿಸುವ ಬಗ್ಗೆ ವಿಷಯವು ಮಂಡಳಿಯ ಪರಿಶೀಲನೆಯಲ್ಲಿದೆ.

ವಕ್ಫ್ ಮಂಡಳಿಯು ಹಕ್ಕು ಪತ್ರ ನೀಡದಿರುವುದು.

939(1170) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವಿರಾಜಪೇಟೆ ನಗರದಲ್ಲಿರುವ ಬಿಸ್ಮಿಲ್ಲಾಖಾವುಲಿ ಮಖಾನ್‌ನಲ್ಲಿ ಅಲ್ಪ ಸಂಖ್ಯಾತರ ಕುಟುಂಬಗಳು ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದು ಅವರಿಗೆ ವಕ್ಫ್ ಮಂಡಳಿಯವರು ಹಕ್ಕು ಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2. ಹಾಗಿದ್ದಲ್ಲಿ ಸರ್ಕಾರ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಬಿಸ್ಮಿಲ್ಲಾಷಾವುಲಿ ಮೂನ್‌ನಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವ ಸಂಖ್ಯೆ ಎಷ್ಟು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ಸಚಿವರು)

1. ವಿರಾಜಪೇಟೆಯ ಬಿಸ್ಮಿಲ್ಲಾಷಾ ಮಖಾನ್ ಏಬರ್‌ಸ್ಥಾನದ ಜಮೀನಿನಲ್ಲಿ ಕೊನೆಪಕ್ಷ ಅರ್ಧಕ್ಕಿಂತ ಹೆಚ್ಚಿನ ಭಾಗ ಸ್ಥಳೀಯ ಮುಸ್ಲೀಮರು ಒತ್ತುವರಿ ಮಾಡಿ ಸದರಿ ಜಾಗದಲ್ಲಿ ವಕ್ಫ್ ಮಂಡಳಿಯ ಪೂರ್ವಾನುಮತಿ ಇಲ್ಲದೆ. ಪಕ್ಕಾ ಮನೆಗಳನ್ನು ಕಟ್ಟಿರುತ್ತಾರೆ. ಬಗರ್ ಹುಕ್ಕುಂ ಸ್ವಾಧೀನದಾರರನ್ನು ಸಕ್ರಮಗೊಳಿಸುವ ವಿಚಾರ ಮಂಡಳಿಯ ಪರಿಶೀಲನೆಯಲ್ಲಿದೆ.

2. ಮಖಾನ್ ಜಾಗದಲ್ಲಿ ಬಗರ್ ಹುಕ್ಕುಂ ಸ್ವಾಧೀನದಾರರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ ಒತ್ತುವರಿ ಮಾಡಿ ಮನೆ ಕಟ್ಟಿ ವಾಸ ಮಾಡುತ್ತಿರುವುದು ಎಷ್ಟು ಎಂದು ಗುರ್ತಿಸಿ ಮತ್ತು ಇತರೆ ವಿವರ ವಿಸ್ತೀರ್ಣ ವಾರ್ಷಿಕ ವರಮಾನ ಇತ್ಯಾದಿ ವಿಷಯಗಳೊಳಗೆ"ಂಡಂತೆ ವರದಿ ನೀಡಲು, ಕೊಡಗು ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಆಡಳಿತಾಧಿಕಾರಿಗಳಿಗೆ ತಿಳಿಸಲಾಗಿದೆ.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಾಗಡಿ ಕ್ಷೇತ್ರದ ಅಭಿವೃದ್ಧಿ.

940(1347) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97, 1997-98 ಮತ್ತು 1998-99ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ಪೂರ್ಣವಿವರ ನೀಡುವುದು).

ಆ) ಅವುಗಳಿಗೆ ತಗುಲಿದ ವೆಚ್ಚ ಎಷ್ಟು?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :—

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಮತಿಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ 1996-97 1997-98 ಹಾಗೂ 1998-99ನೇ ಸಾಲಿನಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳ ವಿವರ ಹಾಗೂ ಇವುಗಳಿಗೆ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಅನುಬಂಧ-1

ಕ್ರ.ಸಂ.	ವರ್ಷ		ಕಾಮಗಾರಿಗಳ ಹೆಸರು	ಆಡಳಿತ ಮಂಜೂರಾತಿ ನೀಡಿದ ಮೊತ್ತ	ಬಿಡುಗಡೆ ಮಾಡಿದ ಅನುದಾನ	ಆರ್ಥಿಕ ಪ್ರಗತಿ
				ಲಕ್ಷ ರೂ.ಗಳಲ್ಲಿ		
1.	1996-97	ಅ)	ಸಿದ್ಧಗನಹಳ್ಳಿ ಸರ್ವೆ ನಂ.7ರಲ್ಲಿ ಹಳ್ಳಕ್ಕೆ ಪಿಕಪ್‌ವಿಯರ್ ನಿರ್ಮಾಣ	2.00	2.00	1.20
		ಆ)	ಚಕ್ರಬಾವಿ ಕೆರೆಗೆ ಫೀಡರ್ ಕಾಲು ನಿರ್ಮಾಣ	1.50	1.50	--
		ಇ)	ಎಂ.ಹೆಚ್. ರಸ್ತೆಯಿಂದ ನೇರನಹಳ್ಳಿ ಉರವಿಗೆರೆ ಬಾಳೆಹಳ್ಳಿ ಮಾರ್ಗವಾಗಿ ಭಾಗಮಂಡಲಕ್ಕೆ ಸೇರುವ ರಸ್ತೆ ಅಭಿವೃದ್ಧಿ	3.97	3.97	3.97
			ಒಟ್ಟು	7.47	7.47	5.17
2.	1997-98	ಅ)	ಹುಲ್ಲಿನಹಳ್ಳಿ ಪಶುವೈದ್ಯಶಾಲಾ ಕಟ್ಟಡ ನಿರ್ಮಾಣ	4.00	2.00	1.67
		ಆ)	ಭೈರಪ್ಪನಹಳ್ಳಿಯಲ್ಲಿ ಸೇತುವೆ ನಿರ್ಮಾಣ	2.00	2.00	0.94
		ಇ)	ಗಾರೇಹಳ್ಳಿಯಿಂದ ಕೊಡಗಲಿ ರಸ್ತೆ ಕೆಲಸ	0.50	0.40	--
		ಈ)	ಅಜ್ಜನಹಳ್ಳಿಯಿಂದ ಗೇರಹಳ್ಳಿಯವರೆಗೆ ರಸ್ತೆ ಅಭಿವೃದ್ಧಿ (ಸರ್ಕಾರದ ವಿವೇಚನಾ ನಿಧಿಯಿಂದ)	3.00	2.50	--
			ಒಟ್ಟು	9.50	6.90	2.61
3.	1998-99	ಅ)	ಬೋರಯ್ಯನಗುಡಿಪಾಳ್ಯ ಟ್ಯಾಂಕ್ ರಿಪೇರಿ	1.00	0.75	--
		ಆ)	ಅಜ್ಜನಹಳ್ಳಿ ಗ್ರಾಮದಲ್ಲಿ ಪಶುವೈದ್ಯಶಾಲಾ ಕಟ್ಟಡ ನಿರ್ಮಾಣ	1.50	0.75	--
			ಒಟ್ಟು	2.50	1.50	--

ವಿದ್ಯುತ್ ಇಲಾಖೆಯಿಂದ ಮಾಗಡಿ ಕ್ಷೇತ್ರದ ಅಭಿವೃದ್ಧಿ.

942(1350) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996 ನೇ ಡಿಸೆಂಬರ್‌ನಿಂದ ಈವರೆಗೆ ವಿದ್ಯುತ್ ಇಲಾಖೆಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿಸಾಲಿನಲ್ಲಿ ವಿವಿಧ ಯೋಜನೆಯಡಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು;

ಆ) ಇವುಗಳಿಗೆ ತಗುಲಿದ ವೆಚ್ಚವೆಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) 1996ನೇ ಡಿಸೆಂಬರ್‌ನಿಂದ ಫೆಬ್ರವರಿ 1999ರ ಅಂತ್ಯದವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳಿಗೆ ತಗುಲಿದ ಒಟ್ಟು ವೆಚ್ಚ 1280.13 ಲಕ್ಷ ರೂ.ಗಳು ಕಾಮಗಾರಿಗಳು ವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಸಿ. ಬಾಲಕೃಷ್ಣರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1350ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಕಾಮಗಾರಿಗಳ ವಿವರಗಳು		ಡಿಸೆಂಬರ್ 96ರಿಂದ ಮಾರ್ಚ್ 97ರ ವರೆಗೆ	1997-98	1998-99 (ಫೆಬ್ರವರಿ 99ರ ವರೆಗೆ	ವೆಚ್ಚ ಮಾಡಿದ ಒಟ್ಟು ಮೊಬಲಗು ಲಕ್ಷಗಳಲ್ಲಿ
1.	66 ಕೆ.ವಿ.ಯ ವಿದ್ಯುತ್ ಪ್ರಸರಣಾ ಮಾರ್ಗವನ್ನು ಮಾಗಡಿ-ಅಂಚೆ ಪಾಳ್ಯದ ವಿದ್ಯುತ್ ಮಾರ್ಗದಿಂದ ಕುದೂರು ವರೆಗೆ 11.26 ಕಿ.ಮೀ. ದೂರಕ್ಕೆ ನಿರ್ಮಿಸುವುದು	-	ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು ಕೆಲಸ ಪ್ರಗತಿಯಲ್ಲಿತ್ತು	ಈ ಕಾರ್ಯವನ್ನು ಪೂರ್ಣಗೊಳಿಸಿ ದಿನಾಂಕ 6.7.98 ರಂದು ಚಾಲನೆ ಗೊಳಿಸಲಾಗಿದೆ.		45.0
2.	ಕುದೂರಿನಲ್ಲಿ 1 x 6.3 ಎಂ.ವಿ.ಎ 66:11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವುದು.	-	—"—	—"—		136.0

1	2	3	4	5	6
3.	ಮಾಗಡಿ 66:11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹಾಲಿ ಇರುವ 1 x 6.3 ಎಂ.ವಿ.ಎ ಮತ್ತು 1 x 8 ಎಂ.ವಿ.ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು 2 x 12.5 ಎಂ.ವಿ.ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಬದಲಾಯಿಸುವುದು.	-	ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು ಕೆಲಸ ಪ್ರಗತಿಯಲ್ಲಿತ್ತು	ಮೊದಲನೆಯ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸುವ ಕಾರ್ಯವನ್ನು ಪೂರ್ಣಗೊಳಿಸಿ ದಿನಾಂಕ 10-12-98 ಚಾಲನೆ ಗೊಳಿಸಲಾಗಿದೆ. ಎರಡನೆಯ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸುವ ಕಾರ್ಯವು ಪೂರ್ಣಗೊಂಡಿದ್ದು ಈಗ ಚಾಲನೆ ಗೊಳಿಸುವ ಹಂತದಲ್ಲಿದೆ.	585.0
4.	ವಿದ್ಯುದೀಕರಣಗೊಳಿಸಲಾಗಿರುವ ಉಪಕ್ರಮಗಳ ಪರಿಜನ ಬಸ್ತಿಗಳ ಸಂಖ್ಯೆ	4	6	6. ಅಲ್ಲದೇ, 4 ಕಾರ್ಯಗಳು ಈಗ ಪ್ರಗತಿಯಲ್ಲಿದೆ.	15.0
5.	ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ	209	700	212	297.0
6.	ವಿಶೇಷ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಪಂಪುಸೆಟ್ಟುಗಳ ಸಂಖ್ಯೆ		54	60	16
7.	ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಭಾಗ್ಯಜ್ಯೋತಿ ಸ್ಥಾವರಗಳ ಸಂಖ್ಯೆ	837	--	939	23.1
9.	ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಕುಡಿಯುವ ನೀರು ಯೋಜನೆಗಳ ಸಂಖ್ಯೆ	8	60	18	23.5
9.	ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಜೋಡಣೆ ಮತ್ತು 11 ಕೆ.ವಿ. ಫೀಡರ್ ನಿರ್ಮಾಣ ಕೆಲಸಗಳ ಸಂಖ್ಯೆ.	18	62	57	139.53
				ಒಟ್ಟು ವೆಚ್ಚ	1,280.13

ಮಾಗಡಿ ಕ್ಷೇತ್ರಕ್ಕೆ ನೀರಾವರಿ ಇಲಾಖೆಯಿಂದ ಅಭಿವೃದ್ಧಿ ಕಾರ್ಯಕ್ರಮ.

944(1392) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. 1996 ನೇ ಡಿಸೆಂಬರ್‌ನಿಂದ ಈವರೆಗೆ ಪ್ರತಿ ಸಾಲಿನಲ್ಲಿ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರಾವರಿ ಇಲಾಖೆಯಿಂದ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ಪೂರ್ಣ ವಿವರ ನೀಡುವುದು);

2. ಅವುಗಳಿಗೆ ತಗುಲಿದ ವೆಚ್ಚ ಎಷ್ಟು?

ಶ್ರೀ (ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ಅಡಕಮಾರನಹಳ್ಳಿ ಗೇಟ್‌ನಿಂದ ಚಲುವೇಗೌಡನ ಪಾಳ್ಯಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ ಸರಪಳಿ 2.00 ರಿಂದ 5.325 ಕಿ.ಮೀ. ವರೆಗೆ.

1997-98

1. ಅಡಕಮಾರನಹಳ್ಳಿ ಗೇಟ್‌ನಿಂದ ಚಲುವೇಗೌಡನ ಪಾಳ್ಯಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ ಸರಪಳಿ 2.00 ರಿಂದ 5.325 ಕಿ.ಮೀ. ವರೆಗೆ.

2. ಪೋರ್ ಶೋರ್ ರಸ್ತೆಯ 1.00ನೇ ಕಿ.ಮೀ. ಚರಂಡಿ ನಿರ್ಮಾಣ.

1998-99

ಅಡಕಮಾರನಹಳ್ಳಿ-ಚಲುವೇಗೌಡನ ಪಾಳ್ಯ ರಸ್ತೆಯ ಸಂ. 0.00ರಿಂದ 2.00 ಕಿ.ಮೀ. ವರೆಗೆ ಅಭಿವೃದ್ಧಿ ಕಾಮಗಾರಿಗಳು.

a. 1996-97 - ರೂ. 1,78,540.00
b. 1997-98 - ರೂ.4,87,332.00
c. 1998-99 - ರೂ. 2,41,546.00

ಮುಳವಾಡ ಏತ ನೀರಾವರಿ.

945(1088) ಶ್ರೀ ಬಸನಗೌಡ ರಾಮನಗೌಡ ಪಾಟೀಲ (ವಿಠಾಪುರ) :— ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಳವಾಡ ಏತ ನೀರಾವರಿ "ಬಿ" ಸ್ಕೀಂದಲ್ಲಿ ನೀರಾವರಿಗೆ ಒಳಪಡುವ ಹಳ್ಳಿಗಳ ಸಂಖ್ಯೆ ಎಷ್ಟು? ಅವು ಯಾವುವು?

ಆ) "ಬಿ" ಸ್ಕೀಂದ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ.ಎಸ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) 51, ಇದರ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಸ್ಕೀಂ "ಬಿ" ಯೋಜನೆಯು 2000 ಇಸವಿ ನಂತರ ಪ್ರಾರಂಭಗೊಳ್ಳುವ ಸಂಭವ ಇರುವುದರಿಂದ ಈ ಯೋಜನೆಗೆ ಅಂದಾಜು ಪತ್ರಿಕೆಯನ್ನು ಇನ್ನೂ ತಯಾರಿಸಬೇಕಾಗಿದೆ.

ಅನುಬಂಧ - 1

ಮುಳವಾಡ ಏತ ನೀರಾವರಿ 'ಬಿ'ಸ್ಕೀಂನಲ್ಲಿ ನೀರಾವರಿಗೆ ಒಳಪಡುವ ಹಳ್ಳಿಗಳ ವಿವರ ಕೆಳಗಿನಂತಿವೆ.

1) ಯತನಾಳ
2) ಸಿದ್ಧಾಪೂರ
3) ಹಂಸನೂರ
4) ಕಲ್ಯಾವಗಿ
5) ಗೊನ್ಸಗಿ
6) ಕನ್ನಡ
7) ತೀಕೊಟ
8) ಬರ್ನಪುರ
9) ಕನಲ
10) ಹೊನವಾಡ
11) ಕೊನಲಿ
12) ಬಿಜಾಪೂರ
13) ಇಬ್ರಾಹಿಮಪುರ
14) ಅಟಲಟ್ಟಿ
15) ತೆಲಸಂಗ
16) ಹಳ್ಳಿ
17) ಹೊಸಳ್ಳಿ
18) ಹಾಲಳ್ಳಿ
19) ದಾಸ್ಕಳ

20) ಬಿಚ್ಚನಹಳ್ಳಿ
21) ಹೊನ್ನುಟಗಿ
22) ಎಂಬತ್ಮಾಳ
23) ಹತ್ತಿರಹಾಳ
24) ಇಂದ್ವಾರ್
25) ಯಲವಾಲ
26) ಕಾಮನಕೇರಿ
27) ತುಂಬಗಿ
28) ಹುಲ್ಟೆಂಟ್
29) ಸಾಲಾಡಿ
30) ಹಟ್ಟಿ
31) ಹುಲ್ಲೂರ
32) ಇಂಗ್ಲೇಶ್ವರ
33) ವಂದಾಲಿ
34) ಹೂವಿನ ಹಿಪ್ಪರಗಿ
35) ಕೊನ್ನುರ
36) ಬಳಗಾನುರ
37) ಹಲವಾರ
38) ಕುಬ್ಬಲ್
39) ದ್ಯಾವಳಗ
40) ಬಸರಕೊಡ
41) ಗುಡ್ಡನ್ನಿ
42) ಬ್ಯಾಲಿಹಾಳ
43) ಹಳಿಹಳ
44) ಗೊಳಸಂಗಿ
45) ಅಂಗಡಗೇರಿ
46) ಬೇನಾಳ
47) ಕೊಡಬಾಗಿ
48) ತಡಲಬಾಗಿ
49) ಸುತ್ತಟ್ಟಿ
50) ದೇಸರಹಳ್ಳಿ
51) ಕೊಕಡನೂರ

ಮುಳವಾಡ ಏತ ನೀರಾವರಿಗೆ ಖರ್ಚು ಮಾಡಿದ ಹಣ.

946(1089) ಶ್ರೀ ಬಸನಗೌಡ ರಾಮನಗೌಡ ಪಾಟೀಲ (ವಿರಾಜಪೇಟೆ) :— ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಳವಾಡ ಏತ ನೀರಾವರಿ ಯೋಜನೆ "ಎ" ಸ್ಕೀಂದಲ್ಲಿ ಬರುವ 30850 ಹೆಕ್ಟೇರ್ ನೀರಾವರಿಗಾಗಿ ಬೇಕಾಗಿರುವ ಮೊತ್ತವೆಷ್ಟು? ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಆ) ಮತ್ತು ಇ) ದಿನಾಂಕ: 31-05-2000 ಒಳಗೆ ಆಗಬೇಕಾಗಿರುವ ಕಾಮಗಾರಿಗಳು ಮುಗಿಯಲು ಆರ್ಥಿಕ ಮತ್ತು ಭೌತಿಕ ಪ್ರಗತಿಗಳ ಬಗ್ಗೆ ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು? ಬಳೂತಿ ಜಾಕ್‌ವೆಲ್ ಮತ್ತು ಇನ್ನಿತರ ಕಾಮಗಾರಿಗಳನ್ನು ತ್ವರಿತವಾಗಿ ನಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :—

ಅ) ಅಂದಾಜು ಮೊತ್ತ ರೂ. 311.87 ಕೋಟಿಗಳು. ಫೆಬ್ರವರಿ 1999ರವರೆಗೆ ಮುಳವಾಡ ಏತ ನೀರಾವರಿ ಯೋಜನೆಗೆ ರೂ. 20.55 ಕೋಟಿ ವೆಚ್ಚ ಮಾಡಲಾಗಿದೆ.

ಆ)ಇ) ಈ ಯೋಜನೆಯ ಕ್ರಿಟಿಕಲ್ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕೆಳಕಂಡ ಕಾರ್ಯಕ್ರಮ ರೂಪಿಸಲಾಗಿದೆ.

1) ಬಳೂತಿ ಹತ್ತಿರದ ಮುಖ್ಯ ಸ್ಥಾವರದ ಕೆಲಸವೂ ಆರ್.ಎಲ್. 508.75 ಮೀ.ಗೆ ಬಂದಿದ್ದು, ಉಳಿದ ಕೆಲಸಗಳನ್ನು ಮೇ 1999 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

2) ಪ್ರವೇಶ ಕಾಲುವೆ, ನೀರಿನ ತೊಟ್ಟಿ ಹಾಗೂ ರೈಸಿಂಗ್ ಮೆನ್ ಎಂಬಾಕಮೆಂಟ್ ಕೆಲಸ ಮುಗಿದಿದೆ.

3) ಲೀಡ್ ಆಫ್ ಕೆನಾಲ್ 0 ರಿಂದ 5.4 ಕಿ.ಮೀ. ಹನುಮಾಪುರದ ಎರಡನೇ ಜಾಕ್‌ವೆಲ್, ಪೂರ್ವ ಕಾಲುವೆ 0 ರಿಂದ 17 ಕಿ.ಮೀ. ಮತ್ತು ಪಶ್ಚಿಮ ಕಾಲುವೆ 0 ರಿಂದ 85 ಕಿ.ಮೀ. ಕೆಲಸಗಳು ವಿವಿಧ ಹಂತದಲ್ಲಿದ್ದು ಈ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

4) ಈ ಕಾಮಗಾರಿಗಳಿಗೆ ಬೇಕಾಗುವ ಅನುದಾನವನ್ನು ಕೃಷ್ಣಾ ಭಾಗ್ಯ ಜಲ ನಿಗಮವು ಒದಗಿಸುವುದು.

ದೇವನಹಳ್ಳಿ ಕ್ಷೇತ್ರದಲ್ಲಿ ಕೆ.ಇ.ಬಿ. ಸಬ್-ಸ್ಟೇಷನ್ ಮಂಜೂರಾತಿ.

952(1363) ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ):— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೇವನಹಳ್ಳಿ ಕ್ಷೇತ್ರದಲ್ಲಿನ ವಿದ್ಯುತ್ ಸಬ್-ಸ್ಟೇಷನ್ನು ಕ್ಲೋಸ್ ಮಾಡಲಾಗಿದೆಯೇ? ಹಾಗಿದ್ದಲ್ಲಿ, ಆ ಸ್ಥಳಗಳಾವುವು; (ದಯವಿಟ್ಟು ತಿಳಿಸುವಿರೇ).

ಆ) ಹಾಗೂ ಅವುಗಳಿಗೆ ಯಾವ ದಿನಾಂಕದಿಂದ ಅನುಮತಿ ನೀಡಲಾಗಿದೆ?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):—

ಅ) ಮತ್ತು ಆ) ದೇವನಹಳ್ಳಿ ಕ್ಷೇತ್ರದ ವಿದ್ಯಾನಗರದಲ್ಲಿ, ಒಂದು 66 : 11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನನ್ನು ಸುಮಾರು 484 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಅಲ್ಲದೇ ಈ ಕ್ಷೇತ್ರದ ಬೂದಿಗೆರೆಯಲ್ಲಿ, ಒಂದು 66 : 11 ಕೆ.ವಿ. ಸಬ್-ಸ್ಟೇಷನ್ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ. ವಿದ್ಯಾನಗರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ವಿದ್ಯುತ್ ಸಬ್ ಸ್ಟೇಷನ್ನಿಗೆ ಈಗಾಗಲೇ ಮಂಡಳಿಯ ತಾಂತ್ರಿಕ ಸಮಿತಿಯಿಂದ ಏಪ್ರಿಲ್-1997 ರಲ್ಲಿ ಅನುಮೋದನೆ ನೀಡಲ್ಪಟ್ಟಿದೆ. ಈ ಕಾಮಗಾರಿಯನ್ನು ನಿರ್ವಹಿಸಲು ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಬೂದಿಗೆರೆಯಲ್ಲಿ, ಒಂದು 66 11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಸ್ಥಾಪನೆಯ ಬಗ್ಗೆ ವಿವರವಾದ ತಾಂತ್ರಿಕ ವರದಿಯನ್ನು ಪಡೆಯಲಾಗುತ್ತಿದೆ. ಈ ತಾಂತ್ರಿಕ ವರದಿಯನ್ನು ಪಡೆದ ನಂತರ, ಅದನ್ನು ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಸಮಿತಿಯು ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇದಲ್ಲದೇ ದೇವನಹಳ್ಳಿ ಬಳಿಯಲ್ಲಿ, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸ್ಥಾಪಿಸುವುದಾದರೆ ಅದಕ್ಕೆ ವಿದ್ಯುತ್ ಪೂರೈಕೆಗಾಗಿ ಒಂದು 220 : 66 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ರಚಿಸುವ ಉದ್ದೇಶವಿದ್ದು ಈ ಕಾಮಗಾರಿಗೆ ಫೆಬ್ರವರಿ 97 ರಲ್ಲಿ ಮಂಡಳಿಯ ತಾಂತ್ರಿಕ ಸಮಿತಿಯಿಂದ ಅನುಮೋದನೆ ಪಡೆಯಲಾಗಿದೆ.

ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳು.

953(1040) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಪೋಲೀಸ್ ಇಲಾಖೆಯ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು ಈ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಅ) ಇದಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಇ) ಕಳೆದ ಸಾಲಿನ ಹೆಚ್ಚುವರಿ ಪಟ್ಟಿಯಿಂದ ಖಾಲಿ ಇರುವ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು)

ಅ) ಅ) ಪ್ರಸ್ತುತ ಖಾಲಿ ಇರುವ ಹುದ್ದೆಗಳ ವಿವರಗಳೆಂದರೆ:

1)	ಪಿ.ಎಸ್.ಐ. (ಸಿವಿಲ್)	-	359
2)	ಪಿ.ಎಸ್.ಐ. (ಬೆ.ಮು.ಸಂ.)	-	72
3)	ಪಿ.ಎಸ್.ಐ. (ನಿಸ್ತಂತು)	-	26
4)	ಆರ್.ಎಸ್.ಐ. (ಸಿಎಆರ್ : ಡಿಎಆರ್)	-	78
5)	ವಿಶೇಷ ಆರ್.ಎಸ್.ಐ. (ಕರ್ನಾಟಕ ರಾಜ್ಯ ಮೀಸಲು ಪೋಲೀಸ್)	-	53
		ಒಟ್ಟು	608

ಇ) ಒಟ್ಟು 263 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಬಂದಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಭರ್ತಿ ಮಾಡಿಕೊಳ್ಳಲು ಬಂದಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಕೊಲೆಗಳು.

954(1041) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ಜಿಲ್ಲೆಯ ಹೊಸ ಜಿಲ್ಲಾ ರಕ್ಷಣಾಧಿಕಾರಿಗಳು ಅಧಿಕಾರ ವಹಿಸಿಕೊಂಡ ನಂತರ ಜಿಲ್ಲೆಯಲ್ಲಿ ಎಷ್ಟು ಕೊಲೆಗಳು ನಡೆದಿದೆ?

ಆ) ಇದರಲ್ಲಿ ಬಂಧಿಸಲಾದ ಆಪರಾಧಿಗಳ ಸಂಖ್ಯೆ ಎಷ್ಟು?

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಈ) ಮಟ್ಕಾ ಹಾಗೂ ಜೂಜು ಇತರೇ ಅವ್ಯವಹಾರಗಳನ್ನು ಕಡಿಮೆಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಶಿವಮೊಗ್ಗ ಜಿಲ್ಲೆಯ ಹೊಸ ಜಿಲ್ಲಾ ರಕ್ಷಣಾಧಿಕಾರಿಗಳು ಅಧಿಕಾರ ವಹಿಸಿಕೊಂಡ ನಂತರ (ಅಂದರೆ ದಿನಾಂಕ : 9-7-98 ರಿಂದ 18-3-99 ರವರೆಗೆ 37 ಕೊಲೆ ಪ್ರಕರಣಗಳು ವರದಿಯಾಗಿರುತ್ತದೆ.

ಆ) ವರದಿಯಾಗಿರುವ 37 ಪ್ರಕರಣಗಳಲ್ಲಿ 34 ಪ್ರಕರಣಗಳು ಪತ್ತೆಯಾಗಿದ್ದು ಒಟ್ಟು 101 ಜನ ಆರೋಪಿಗಳನ್ನು ಬಂಧಿಸಲಾಗಿದೆ.

ಇ) ಸಾಮಾನ್ಯವಾಗಿ ಕೊಲೆಯ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಆದರೂ ಜಮೀನು ವ್ಯಾಜ್ಯ, ಹಳ್ಳಿಗಳಲ್ಲಿ ಗುಂಪುಗಾರಿಕೆ ಇಂಥಹ ಸಂದರ್ಭಗಳಲ್ಲಿ ಪ್ರತಿಬಂಧಿತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಬಾರ್ ಮತ್ತು ರೆಸ್ಟೋರೆಂಟ್, ಮದ್ಯದಂಗಡಿಗಳು ಇಂಥವುಗಳ ಮೇಲೆ ಗಮನವಿರಿಸಿದ್ದು ಯಾವುದೇ ಗಲಭೆಯಾದಾಗ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ಗಲಭೆ ದೊಂಬಿ ಮುಂತಾದವುಗಳಲ್ಲಿ ತೀವ್ರ ಕ್ರಮ ಜರುಗಿಸಿ ಆರೋಪಿಗಳನ್ನು ಬಂಧಿಸಿ ಮುಂದೆ ಇವು ಬೆಳೆದು ದೊಡ್ಡದಾಗದಂತೆ ಹತ್ತಿಕ್ಕಲಾಗುತ್ತಿದೆ.

ಈ) ಶಿವಮೊಗ್ಗ ಜಿಲ್ಲೆಯಲ್ಲಿ ಮಟ್ಕಾ ಜೂಜಾಟ ಹಾಗೂ ಇತರ ಅವ್ಯವಹಾರಗಳನ್ನು ನಿಯಂತ್ರಣಗೊಳಿಸಲು ಅಪರಾಧ ಜಾಗ್ರತಾ ದಳವನ್ನು ರಚಿಸಿದೆ. ಅವು ಇಂತಹ ಸ್ಥಳಗಳ ಮೇಲೆ ದಾಳಿ ನಡೆಸಿ ಕ್ರಮ ಜರುಗಿಸುತ್ತವೆ.

ನೂತನವಾಗಿ ಜಿಲ್ಲಾ ರಕ್ಷಣಾಧಿಕಾರಿಗಳು ಜಿಲ್ಲೆಯ ಪ್ರಭಾರ ವಹಿಸಿಕೊಂಡ ನಂತರ ಅಂದರೆ 9-7-98 ರಿಂದ 18-3-98 ರ ವರೆಗೆ ಒಟ್ಟು 85 ಮಟ್ಕಾ ಜೂಜಾಟದ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. 43 ಇತರೆ ಜೂಜಾಟದ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಮದ್ಯವನ್ನು ಅಕ್ರಮವಾಗಿ ಸಂಗ್ರಹಿಸಿದ 60 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ಹಾಗೂ ಸೂಳೆಗಾರಿಕೆಯನ್ನು ನಡೆಸುತ್ತಿದ್ದ 13 ಕೇಂದ್ರಗಳ ಮೇಲೆ ದಾಳಿ ನಡೆಸಿ ಕ್ರಮ ಕೈಗೊಳ್ಳಲಾಗಿದೆ.

ದಿನಗೂಲಿ ನೌಕರರು.

956(1035) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರಕಾರದ ದಿನಗೂಲಿ ನೌಕರರ ಮಹಾಮಂಡಳಿಯು ಗೌರವಧನ ಹಾಗೂ ದಿನಗೂಲಿ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ದಿನಾಂಕ :22-3-99 ರಿಂದ ಅನಿರ್ದಿಷ್ಟ ಅವಧಿಯ ವಿಧಾನಸೌಧ ಮುತ್ತಿಗೆ ಕರೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ ದಿನಗೂಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಕೈಕೊಂಡ ಕ್ರಮಗಳೇನು?

ಶ್ರೀ ಜಿ.ಪರಮೇಶ್ವರ್ (ಮುಖ್ಯ ಮಂತ್ರಿಗಳು) :—

ಅ) ಹೌದು

ಆ) ದಿನಗೂಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರವು ಪರಿಶೀಲಿಸಿ, ಸ್ವೀಕಾರಾರ್ಹ ಬೇಡಿಕೆಗಳ ಕುರಿತು ಈಗಾಗಲೇ ಸೂಕ್ತ ಕ್ರಮ ಕೈಗೊಂಡಿದೆ. ಕೆಲವು ಬೇಡಿಕೆಗಳು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಪರಿಶೀಲನೆಯಲ್ಲಿವೆ.

ಬೀದರ್ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಲಾಗಿರುವ ಐ.ಪಿ. ಸೆಟ್ಟುಗಳು.

957(1354) ಶ್ರೀ ಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಔರಾದ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಲಾಗಿರುವ ಐ.ಪಿ. ಸೆಟ್‌ಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಈ ಐ.ಪಿ. ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಎಂದು ಕೈಗೊಳ್ಳಲಾಯಿತು? ಹಾಗೂ ಈ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ದರ ನೀಡಬೇಕೆಂದು ಯಾವಾಗ ತೀರ್ಮಾನಕೈಗೊಳ್ಳಲಾಯಿತು?

ಇ) ಜಿಲ್ಲೆಯಲ್ಲಿ ರೈತರ ಐ.ಪಿ. ಸೆಟ್‌ಗಳಿಂದ ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಎಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಜಿಲ್ಲೆಯ ರೈತರು ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯನ್ನು ಕೇಳಿರದಿದ್ದರೂ ಸಹ ಸರ್ಕಾರವೇ ಈ ಸೌಲಭ್ಯವನ್ನು ಇಲ್ಲಿಯವರೆಗೆ ನೀಡಿ ಈಗ ಏಕಾ ಏಕಿ ಇದಕ್ಕಾಗಿ ದರ ನಿಗಧಿಪಡಿಸಿದರೆ ಹಣ ಕಟ್ಟುವ ಇರುವ ರೈತರುಗಳ ಜಮೀನಿನಿಂದ ಐ.ಪಿ. ಸೆಟ್‌ಗಳನ್ನು ಕಿತ್ತುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ವಿದ್ಯುತ್ ಮಂಡಳಿಯ ಈ ಕ್ರಮದಿಂದ ಬೆಳೆ ಬೆಳೆದಿರುವ ರೈತರು ಐ.ಪಿ. ಸೆಟ್‌ಗಳ ಮೂಲಕ ನೀರು ಐ.ಪಿ. ಸೆಟ್ಟುಗಳ ಮೂಲಕ ನೀರು ಸರಬರಾಜು ಮಾಡಲಾಗದೆ ತೊಂದರೆ ಅನುಭವಿಸುತ್ತಿದ್ದು, ಇವರ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳು ಯಾವುವು?

ಅ) ಬೀದರ್ ಜಿಲ್ಲೆಯಲ್ಲಿ ಫೆಬ್ರವರಿ 99 ರ ಅಂತ್ಯದವರೆಗೆ ವಿದ್ಯುದ್ದೀಕರಣಗೊಂಡ ನೀರಾವರಿ ಪಂಪುಸೆಟ್ಟುಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತೆ ಇವೆ.

	ತಾಲ್ಲೂಕು	ಸಂಖ್ಯೆ
1.	ಔರಾದ್	3627
2.	ಬಸವಕಲ್ಯಾಣ	8269
3.	ಭಾಲ್ಕಿ	5325
4.	ಬೀದರ್	10.370
5.	ಹುಮ್ನಾಬಾದ್	11,487
	ಒಟ್ಟು	39,078

ಆ ಹತ್ತು ಅಶ್ವ ಶಕ್ತಿಯವರೆಗಿನ ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವುದನ್ನು ಸರ್ಕಾರಿ ಆದೇಶ ಸಂ. ಡಿಇ 115 ಇಆಬಿ 92 ದಿನಾಂಕ : 20.6.92 ಮತ್ತು ಮಂಡಳಿ ಆದೇಶ ಸಂಖ್ಯೆ : ಬಿ :10:6925 : ಬಿ :90-91 ತನಿ : 30-6-92ರ ಪ್ರಕಾರ ಜಾರಿಗೊಳಿಸಲಾಯಿತು. ಈ ಉಚಿತ ವಿದ್ಯುತ್ ಸರಬರಾಜು ಸೌಲಭ್ಯವನ್ನು ಬಾಕಿ ಹಣವನ್ನು ಚುಕ್ತಾ ಮಾಡಿದ ನಂತರವೇ ಜಾರಿಗೊಳಿಸಲು ಸೂಚಿತವಾಗಿರುತ್ತದೆ.

ಈ ಉಚಿತ ವಿದ್ಯುತ್ ನೀಡುವುದನ್ನು 1996ನೇ ವರ್ಷದಲ್ಲಿ ವಿದ್ಯುತ್ ದರಗಳನ್ನು ಪುನರ್‌ವಿಮರ್ಶಿಸಿದಾಗ ಹಿಂತೆಗೆದುಕೊಂಡು ಪ್ರತಿ ಅಶ್ವ ಶಕ್ತಿಗೆ ರೂ. 100 ರಂತೆ ವಾರ್ಷಿಕ ದರ ನಿಗದಿಪಡಿಸಲಾಯಿತು.

ಜಿಲ್ಲೆಯಲ್ಲಿ ರೈತರ ಐ.ಪಿ. ಸೆಟ್‌ಗಳಿಂದ ಮಂಡಳಿಗೆ ಬರಬೇಕಾದ ಬಾಕಿಯ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತೆ ಇದೆ.

ತಾಲ್ಲೂಕು	ಬರಬೇಕಾದ ಬಾಕಿ ಹಣ (ಲಕ್ಷ ರೂ.ಗಳಲ್ಲಿ)	
1. ಔರಾದ್	145.96	
2. ಬಸವಕಲ್ಯಾಣ	262.13	
3. ಭಾಲ್ಕಿ	193.10	
4. ಬೀದರ್	251.45	
5. ಹುಮ್ನಾಬಾದ್	421.33	
ಒಟ್ಟು ಮೊತ್ತ	1273.97	ಲಕ್ಷ ರೂ.

ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯ ವ್ಯವಸ್ಥೆಯನ್ನು ಸರ್ಕಾರದ ಆದೇಶದಂತೆ ಕೈಗೊಳ್ಳಲಾಯಿತು. ಆದರೆ ಕೆ.ಇ.ಬಿ.ಯು, ಎನ್.ಟಿ.ಪಿ.ಸಿ. ಎಫ್.ಸಿ.ಎಲ್. ಮುಂತಾದವುಗಳಿಗೆ ವಿದ್ಯುತ್ ಖರೀದಿ ಬಗ್ಗೆ ಕೋಟ್ಯಾಂತರ ರೂ.ಗಳ ಬಾಕಿ ಕೊಡಬೇಕಾಗಿದುದ್ದರಿಂದ ಆಗಸ್ಟ್ 96ರಿಂದ ಒಂದು ಅಶ್ವ ಶಕ್ತಿಗೆ ರೂ. 100 ರಂತೆ ನಾಮಿನಲ್ ದರವನ್ನು ನಿಗಧಿಪಡಿಸಬೇಕಾದಂತ ಪರಿಸ್ಥಿತಿಯು ಉಂಟಾಯಿತು ಹಾಗೂ ಈ ದರವನ್ನು ಜುಲೈ 97 ರಿಂದ ಒಂದು ಅಶ್ವ ಶಕ್ತಿಗೆ ರೂ. 300.00 ರಂತೆ ನಿಗಧಿಪಡಿಸಲಾಯಿತು. ಜುಲೈ 98 ರಿಂದ ವಿದ್ಯುತ್ ದರಗಳನ್ನು ಪರಿಷ್ಕರಿಸಿದಾಗ, ನೀರಾವರಿ ಪಂಪು ಸೆಟ್ಟುಗಳ ಬಳಕೆದಾರರಿಗೆ ವಿದ್ಯುತ್ ದರಗಳನ್ನು ಹೆಚ್ಚಿಸದೇ, ಪ್ರತಿ ಅಶ್ವಶಕ್ತಿಗೆ ರೂ. 300.00 ರ ವಿದ್ಯುತ್ ದರವನ್ನು ಮುಂದುವರಿಸಲಾಗಿದೆ. 30.6.96 ರವರೆಗೆ ರೈತರು ಕೊಡಬೇಕಾಗಿದ್ದ ಬಾಕಿ ಹಣದ ಮೇಲಿನ ಬಡ್ಡಿಯನ್ನು ಮನ್ನಾಮಾಡಲಾಯಿತು. ಆದರೆ ಹಣಕಟ್ಟದೇ ಇರುವ ರೈತರ ಜಮೀನಿನಿಂದ ಪಂಪು ಸೆಟ್ಟುಗಳನ್ನು ಕಿತ್ತುಕೊಂಡು ಹೋಗುವ ವ್ಯವಸ್ಥೆಯನ್ನು ಜಾರಿಗೊಳಿಸಿಲ್ಲ.

ಮಂಡಳಿಯ ಆದಾಯವನ್ನು ಉತ್ತಮಗೊಳಿಸುವ ಉದ್ದೇಶದಿಂದ ಹಣ ಬಾಕಿ ಉಳಿಸಿಕೊಂಡಿರುವ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯ ನಿಲುಗಡೆಯನ್ನು ಜಾರಿಗೊಳಿಸಲಾಗುತ್ತಿದೆ. ಮಂಡಳಿಯ ಹಣಕಾಸು ಪರಿಸ್ಥಿತಿಯು ಹದಗೆಟ್ಟಿರುವುದರಿಂದ ರೈತರ ಸಹಕಾರ ಅಗತ್ಯವಾಗಿದೆ.

ನೈವೇಲಿ ಲಿಗ್ನೈಟ್ ಕಾರ್ಪೋರೇಷನ್‌ಗೆ ಪಾವತಿ ಮಾಡಬೇಕಾದ ಶುಲ್ಕ.

958(1364) ಶ್ರೀಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ ಕೇಂದ್ರ ಸರ್ಕಾರ ಸ್ವಾಮ್ಯದ ಕೈಗಾರಿಕೆಗಳಿಂದ ಮಂಡಳಿ ನಿಗಮಗಳಿಂದ ಹಾಗೂ ಕೇಂದ್ರ ಸರ್ಕಾರ ಕಛೇರಿಗಳಿಂದ ಇಲ್ಲಿಯವರೆವಿಗೆ ಬರಬೇಕಾದ ಬಾಕಿ ಹಣದ ಮೊತ್ತವೆಷ್ಟು (ಪ್ರತಿಯೊಂದು ಸಂಸ್ಥೆಯಿಂದ ಬರಬೇಕಾದ ಬಾಕಿಯನ್ನು ವಿವರವಾಗಿ ತಿಳಿಸುವುದು)

ಆ) ಮೇಲ್ಕಂಡ ಹಣವು ಎಷ್ಟು ಅವಧಿಯಿಂದ ಬಾಕಿ ಉಳಿದಿದೆ ಇದರ ಮೂಲಾಂತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಇದೇ ಸಮಯದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯು ನೈವೇಲಿ ಲಿಗ್ನೈಟ್ ಕಾರ್ಪೋರೇಷನ್‌ಗೆ ಕೊಡಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು; ಎಷ್ಟು ಅವಧಿಯಿಂದ ಈ ಬಾಕಿಯನ್ನು ಉಳಿಸಿಕೊಳ್ಳಲಾಗಿದೆ;

ಈ) ಈ ಬಾಕಿ ಹಣವನ್ನು ಪಾವತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ರಾಜ್ಯ ವಿದ್ಯುತ್ ಮಂಡಳಿಗೆ ಹಣ ಬಾಕಿ ಉಳಿಸಿಕೊಂಡಿರುವುದಕ್ಕಾಗಿ ಕೇಂದ್ರ ಸರ್ಕಾರ ಸ್ವಾಮ್ಯದ ಉದ್ದಿಮೆಗಳು, ಮಂಡಳಿ, ನಿಗಮಗಳಿಗೆ ಬಾಕಿ ಹಣವನ್ನು ಕಟ್ಟುವರೆವಿಗೆ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಲು ಸರ್ಕಾರ ಇದುವರೆವಿಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

ಋ) ಮೇಲ್ಕಂಡ ವಿಷಯದ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಂಡು ಅದರಿಂದ ಪಾವತಿಯಾಗುವ ಹಣವನ್ನು ಎನ್.ಎಲ್.ಸಿ. ಇವರಿಗೆ ಪಾವತಿ ಮಾಡುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ದಿನಾಂಕ 1-12-98 ರ ಅಂತ್ಯದಲ್ಲಿದ್ದಂತೆ ಕ.ವಿ. ಮಂಡಳಿಗೆ ಕಳಕಂಡ ಕೇಂದ್ರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳಿಂದ ಸಂಸ್ಥೆಗಳಿಂದ ಬರಬೇಕಾದ ಬಾಕಿಯ ವಿವರ ಈ ರೀತಿ ಇದೆ.

			(ಕೋಟಿ ರೂ.ಗಳಲ್ಲಿ)
1.	ಕೆ.ಐ.ಓ.ಸಿ.ಎಲ್.	-	310-37
2.	ವಿ.ಐ.ಎಸ್.ಎಲ್.	-	145.90
3.	ಬಿ.ಜಿ.ಎಂ.ಎಲ್.	-	26.07
4.	ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್	-	2.55
5.	ಸಿಮೆಂಟ್ ಕಾರ್ಪೋರೇಷನ್ ಇಂಡಿಯಾ ಕರ್ನಾಟಾ	-	2.46
	ಒಟ್ಟು ಮೊತ್ತ		487.00

ಇವುಗಳಲ್ಲದೆ ಕಳಕಂಡ ಸರ್ಕಾರಿ ಸ್ವಾಮ್ಯದ ಮಂಡಳಿಗಳಿಂದಲೂ ಹೆಚ್ಚಿನ ಪ್ರಮಾಣದ ಬಾಕಿ ಬರಬೇಕಾಗಿದೆ. (31-12-98 ರ ಅಂತ್ಯದಲ್ಲಿದ್ದಂತೆ)

		(ಕೋಟಿ ರೂ.)
ಬೆಂಗಳೂರು ಜಲಮಂಡಳಿ	-	128.60
ಕರ್ನಾಟಕ ಪಟ್ಟಣ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	-	188.89

ಅಲ್ಲದೇ ರಾಜ್ಯ ಸರ್ಕಾರದ ಸ್ವಾಮ್ಯ ಹೊಂದಿರುವ ಕೈಗಾರಿಕೆಗಳು, ಇಲಾಖೆಗಳು ಏತ ನೀರಾವರಿ ಯೋಜನೆಗಳು ಇತ್ಯಾದಿಗಳಿಂದ 31-12-98 ರ ಅಂತ್ಯದಲ್ಲಿದ್ದಂತೆ ಒಟ್ಟು 25.87 ಕೋಟಿ ರೂ.ಗಳ ಬಾಕಿ ಬರಬೇಕಾಗಿದೆ.

ಇ) ಕೇಂದ್ರ ಸರ್ಕಾರ ಸ್ವಾಮ್ಯದ ಕೈಗಾರಿಕೆ ಸಂಸ್ಥೆಗಳಿಂದ ಬರಬೇಕಾದ ಬಾಕಿಯ ಅವಧಿ ಈ ರೀತಿ ಇದೆ.

1.	ಕೆ.ಐ.ಓ.ಸಿ.ಎಲ್.	- ಅಕ್ಟೋಬರ್ 85	ರಿಂದ ಬಾಕಿಯಿದೆ
2.	ವಿ.ಐ.ಎಸ್.ಎಲ್.	- ಮಾರ್ಚ್ 94	--"--
3.	ಟಿ.ಬಿ.ಎಂ.ಎಲ್.	- ಅಕ್ಟೋಬರ್ 85	--"--
4	ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್	- ಜೂನ್ 93	--"--
5.	ಸಿಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ	1993	--"--

ಅಲ್ಲದೆ ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು, ಇಲಾಖೆಗಳು, ಏತ ನೀರಾವರಿ ಯೋಜನೆಗಳು ಹಾಗೂ ಇತರ ಮಂಡಳಿಗಳಿಂದ ಬರಬೇಕಾದ ಬಾಕಿಯು ಸುಮಾರು ಎರಡು ವರ್ಷಗಳಿಗಿಂತ ಹಿಂದಿನಿಂದಲೂ ಬಾಕಿ ಇರುತ್ತದೆ.

ಬಾಕಿ ವಸೂಲಾತಿಗಾಗಿ ಮಂಡಳಿಯಲ್ಲಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಗ್ರಾಹಕರು ಮಂಡಳಿಗೆ ಕೊಡಬೇಕಾದ ಬಾಕಿ ಮೊತ್ತವನ್ನು ಪಾವತಿಸಲು ಒತ್ತಾಯಿಸುತ್ತಾ, ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿದೆ.

2) ಮಂಡಳಿಯು ಬಾಕಿ ವಸೂಲಾತಿಗಾಗಿ ವಿಶೇಷ ಪಡೆಗಳನ್ನು ರಚಿಸಿ, ಬಾಕಿದಾರರು ವಿದ್ಯುತ್ ಸ್ಥಗಿತಗೊಳಿಸುವಿಕೆ ಕಾರ್ಯಾಚರಣೆಯನ್ನು ಹಾಗೂ ಅದರ ಮೇಲುಸ್ತುವಾರಿಯನ್ನು ವ್ಯಾಪಕವಾಗಿ ನಡೆಸುವಂತೆ ವ್ಯವಸ್ಥೆ ಮಾಡಿದೆ. ಅದಾಗ್ಯೂ ಬಾಕಿ ಇದ್ದ ಸಂದರ್ಭದಲ್ಲಿ ಕೆ.ಇ.ಬಿ. ರಿಕವರಿ ಆಫ್ ಡ್ಯೂಸ್ ಆಕ್ಟ್ 1976ರ ಪ್ರಕಾರ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

3) ವಿಭಾಗ ವ್ಯಾಪ್ತಿಯಲ್ಲಿ ಕಂದಾಯ ವಸೂಲಾತಿ ಮೇಲ್ವಿಚಾರಣೆಗಾಗಿ ಒಬ್ಬ ಲೆಕ್ಕಾಧಿಕಾರಿಯನ್ನು ನೇಮಿಸಿ ವಸೂಲಾತಿಯನ್ನು ತೀವ್ರಗೊಳಿಸಲಾಗಿದೆ.

4) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ಬಾಕಿ ಬಗ್ಗೆ ಸರ್ಕಾರದಲ್ಲಿನ ಸಂಬಂಧಪಟ್ಟ ಇಲಾಖೆಯೊಂದಿಗೆ ಉನ್ನತಮಟ್ಟದಲ್ಲಿ ವ್ಯವಹರಿಸುತ್ತಿದೆ.

ಈ) ಕ.ವಿ. ಮಂಡಳಿಯು ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯಿಂದ ಖರೀದಿಸಿದ ವಿದ್ಯುತ್‌ಗಾಗಿ ನೀಡಬೇಕಾದ ಬಾಕಿಯು 1999ರ ಫೆಬ್ರುವರಿ ಅಂತ್ಯದಲ್ಲಿದ್ದಂತೆ ರೂ. 90 ಕೋಟಿ ಮಾತ್ರ. ಈ ಬಾಕಿಯು 1998-99 ರ ಅವಧಿಗೆ ಸಂಬಂಧಪಟ್ಟಿರುತ್ತದೆ.

ಹಾಗೂ ಕರ್ನಾಟಕ ಸರ್ಕಾರ ನೈವೇಲಿ ಲಿಗ್ನೈಟ್ ಸಂಸ್ಥೆಗೆ ನೀಡಬೇಕಾದ ಬಾಕಿಯನ್ನು ಆದಷ್ಟು ಬೇಗ ತೀರಿಸಲು ಕಾರ್ಯ ತಂತ್ರವನ್ನು ರೂಪಿಸುತ್ತಿದೆ.

ಊ) ಕೇಂದ್ರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು ನಿಗಮ ಮಂಡಳಿಗಳು ಕ.ವಿ. ಮಂಡಳಿಗೆ ಪಾವತಿ ಮಾಡಬೇಕಾದ ಬಾಕಿಯ ಮಸೂಲಾತಿ ಬಗ್ಗೆ ಅವುಗಳ ನೌಕರರ ಕಲ್ಯಾಣವನ್ನು ಗಮನಿಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತಹ ಉಗ್ರ ಕ್ರಮವನ್ನು ಕೈಗೆತ್ತಿಕೊಳ್ಳುವುದು ಕಷ್ಟಕರವಾಗಿದೆ.

ಋ) ಈ ವಿಷಯದ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸರ್ಕಾರದಲ್ಲಿನ ಸಂಬಂಧಪಟ್ಟ ಇಲಾಖೆಗಳೊಂದಿಗೆ ಉನ್ನತ ಮಟ್ಟದಲ್ಲಿ ವ್ಯವಹರಿಸುತ್ತಿದೆ. ಅಲ್ಲದೇ ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆ: ಕೈಗಾರಿಕೆಗಳಿಂದ ಬರಬೇಕಾದ ಬಾಕಿಯ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಾಕಿಯ ಪಾವತಿಗೆ ವ್ಯವಸ್ಥೆ ಮಾಡಲು ಒತ್ತಾಯಿಸಲಾಗುತ್ತಿದೆ. ಇದರ ಜೊತೆಗೆ ನೈವೇಲಿ ಲಿಗ್ನೈಟ್ ಸಂಸ್ಥೆಗೆ ನೀಡಬೇಕಾದ ಬಾಕಿಯನ್ನು ಆದಷ್ಟು ಬೇಗ ತೀರಿಸಲೂ ಸಹ ಕಾರ್ಯತಂತ್ರವನ್ನು ರೂಪಿಸುತ್ತಿದೆ.

ಹುಬ್ಬಳ್ಳಿ ನಗರದಲ್ಲಿ ನಡೆದ ಗೋಲಿಬಾರ್ ಘಟನೆ.

959(1082) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಮಹಾನಗರದಲ್ಲಿ 1994ರ ಆಗಸ್ಟ್ ತಿಂಗಳಲ್ಲಿ ನಡೆದ ಗೋಲಿಬಾರ್ ಘಟನೆಯ ಕುರಿತಂತೆ ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಶ್ರೀ ರಾಜಶೇಖರಮೂರ್ತಿ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು, ವರದಿಯನ್ನು ಸದನಕ್ಕೆ ಎಂದು ಸಲ್ಲಿಸಲಾಗುವುದು;

ಇ) ವರದಿಯ ಆಧಾರದ ಮೇಲೆ ಯಾರಾದರೂ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :—

ಅ) ಹೌದು

ಆ) ಇ) ವರದಿಯು 2 ಸಂಪುಟಗಳಲ್ಲಿ ಇದ್ದು 800 ಪುಟಗಳನ್ನು ಒಳಗೊಂಡಿದ್ದು, ವರದಿಯನ್ನು ಪರಿಶೀಲಿಸುತ್ತಿದ್ದು ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಪರಿಶೀಲಿಸಿದ ನಂತರ ಸೂಕ್ತ ತೀರ್ಮಾನ ಕೈಗೊಂಡು ತಂತರ ಸದನದಲ್ಲಿ ಮಂಡಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಆದರೆ ಮೆ: ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯು ಕ.ವಿ. ಮಂಡಳಿಯಿಂದ ಬರಬೇಕಾದ ಬಾಕಿಯ ಮೊತ್ತ ರೂ. 2 ಕೋಟಿ ಎಂದು ಉಳಿಸಿದ್ದು ಅದರ ವಿವರಗಳು ಕೆಳಕಂಡಂತಿವೆ.

1)	ಚಾಲ್ತಿ ತಿಂಗಳ ವಿದ್ಯುತ್ ಬಾಕಿ	ಇಲ್ಲ		
2)	ಮಂಡಳಿಯಿಂದ ಪಾವತಿಯಾಗಬೇಕಾಗಿರುವ ಹಿಂದಿನ ಬಾಕಿ	ರೂ.	90	ಕೋಟಿ
3)	ಹಿಂದಿನ ಬಾಕಿಗೆ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯು ಕೇಳಿರುವ ಬಡ್ಡಿ	ರೂ.	123	ಕೋಟಿ
4)	ಏಪ್ರಿಲ್ 98 ರಿಂದ ಜಾರಿಗೆ ಬರುವಂತೆ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯು ಈಗ ವಿದ್ಯುತ್ ಜಕಾತಿ ದರವನ್ನು ಹೆಚ್ಚಿಸಿದ್ದು, ಜಕಾತಿ ದರ ವ್ಯತ್ಯಾಸವನ್ನು ಕೇಳುತ್ತಿರುವುದನ್ನು ಮಂಡಳಿಯು ಇನ್ನೂ ಅನುಮೋದಿಸಬೇಕಾಗಿರುತ್ತದೆ.	ರೂ.	62	ಕೋಟಿ
5)	ನೈವೇಲಿ ಲೆಗ್ನೈಟ್ ಸಂಸ್ಥೆಯವರು ಕೇಳುತ್ತಿರುವ ಪ್ರಸರಣಾ ವೆಚ್ಚ	ರೂ.	1	ಕೋಟಿ
6)	ಫೆಬ್ರವರಿ ಮಾಹೆಯಲ್ಲಿ ಬಿಡುಗಡೆ ಮಾಡಿರುವ ಕೇಂದ್ರೀಯ ಮತ್ತು ಹೊಂದಾಣಿಕೆ ಹಣ ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಸಂಸ್ಥೆಯವರು ಇನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು.	ರೂ.	12	ಕೋಟಿ
	ಒಟ್ಟು ಮೊತ್ತ	ರೂ.	288	ಕೋಟಿ

ಈ) ಕ.ವಿ. ಮಂಡಳಿಯು ನೈವೇಲಿಗೆ ಲಿಗ್ನೈಟ್ ಕಾರ್ಪೋರೇಷನ್‌ಗೆ 1997-98 ಮತ್ತು 1998-99 ರಲ್ಲಿ ವಿದ್ಯುತ್ ಖರೀದಿ ಬಿಲ್ಲು ಮೊಬಲಗು 383 .89 ಕೋಟಿ ರೂ. ಪಾವತಿ ಮಾಡುವುದರ ಜೊತೆಗೆ 121.17ಕೋಟಿ ರೂ. ಕೇಂದ್ರೀಯ ಹೊಂದಾಣಿಕೆ ಸೇರಿ ಹಳೇ ಬಾಕಿಗೆ ಪಾವತಿ ಮಾಡಿರುತ್ತದೆ. ಇಷ್ಟಲ್ಲದೆ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಮಂಡಳಿಗೆ ಬರಬೇಕಾದ ಬಾಕಿಯನ್ನು ಪಾವತಿ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದು ನೈವೇಲಿ ಲಿಗ್ನೈಟ್ ಸಂಸ್ಥೆಯು ಮಂಡಳಿಗೆ ವಿದ್ಯುತ್ ನಿಲುಗಡೆ ಮಾಡದೇ ವಿದ್ಯುತ್ ಸರಬರಾಜು ಮಾಡುವಂತೆ ಕೋರಲಾಗಿದೆ.

ಅಬಕಾರಿ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು.

960(1379) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಬಕಾರಿ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಉಪ-ನಿರೀಕ್ಷಕರ ಹುದ್ದೆಗಳು ಭಾರೀ ಪ್ರಮಾಣದಲ್ಲಿ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಇರುವಾಗ ಬಡ್ತಿಯನ್ನು ಮಾನದಂಡವಾಗಿ ಪರಿಗಣಿಸಲಾಗುವುದೇ?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಅಬಕಾರಿ ನಿರೀಕ್ಷಕರ 17 ಹುದ್ದೆಗಳು ಖಾಲಿ ಇರುತ್ತದೆ.

ಅಬಕಾರಿ ಉಪ-ನಿರೀಕ್ಷಕರುಗಳ 319 ಹುದ್ದೆಗಳು ಖಾಲಿ ಇರುತ್ತವೆ.

ಆ) ಅಬಕಾರಿ ನಿರೀಕ್ಷಕರ ಹುದ್ದೆಗಳನ್ನು ಪದೋನ್ನತಿ ಮೂಲಕ ಪರಿಶೀಲಿಸಿ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಖಾಲಿ ಇರುವ 319 ಅಬಕಾರಿ ಉಪ-ನಿರೀಕ್ಷಕರ ಪೈಕಿ 100 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಿದೆ. ಉಳಿದ ನಿಯಮಾನುಸಾರ ಮುಂಬಡ್ತಿ ಮೂಲಕ ಹುದ್ದೆಗಳನ್ನು ತುಂಬಲು ಪರಿಶೀಲನೆಯಲ್ಲಿದೆ.

ಇ) ಇಲಾಖಾ ವಿಚಾರಣೆ ಬಾಕಿ ಇರುವ ಪ್ರಕರಣಗಳಲ್ಲಿ ಅಂತಿಮ ತೀರ್ಮಾನ ಹೊರಡಿಸುವವರೆಗೆ ಬಡ್ತಿಗೆ ಪರಿಗಣಿಸಲಾಗುವುದಿಲ್ಲ.

ಮದ್ಯ ಮಾರಾಟ ಲೈಸೆನ್ಸ್ ವಿವರಗಳು.

961(1380) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ, 1998-99ನೇ ಸಾಲಿನಲ್ಲಿ, ಯಾವ ಯಾವ ಮದ್ಯ ಮಾರಾಟದ ಸನ್ನದು ಮಂಜೂರು ಮಾಡಲಾಗಿದೆ ಅವುಗಳ ಸಂಖ್ಯೆ ಎಷ್ಟು? (ಮದ್ಯವಾರು ವಿವರ ಒದಗಿಸುವುದು.

ಅ) ಸಾರಾಯಿಯನ್ನು ಬಾಟ್ಲಿಂಗ್ ಮುಖಾಂತರ ಮಾರಾಟ ಮಾಡುವ ವ್ಯವಸ್ಥೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ಖಾಸಗಿಯವರಿಗೂ ಸಹ ಅನುಮತಿ ನೀಡಲಾಗುವುದೇ?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ರಾಜ್ಯದಲ್ಲಿ, 1998-99ನೇ ಸಾಲಿಗೆ ಈ ಕೆಳಗಿನಂತೆ ಮದ್ಯದಂಗಡಿ ಸನ್ನದುಗಳನ್ನು ನೀಡಲಾಗಿದೆ.

ಸಿಎಲ್ - 1	(ಸಗಟು)	-	339
ಸಿಎಲ್ - 2	(ಚಿಲ್ಲರೆ)	-	3797
ಸಿಎಲ್ - 1	(ಕ್ಲಬ್‌ಗಳು)	-	137
ಸಿಎಲ್ - 7	(ಹೋಟೆಲ್ ಮತ್ತು	-	339
	ಬೋರ್ಡಿಂಗ್ ಹೌಸ್)	-	115
ಸಿಎಲ್ - 8	(ಮಿಲಿಟರಿ ಕ್ಯಾಂಟೀನ್)	-	48
ಸಿಎಲ್ - 9	(ಬಾರ್‌ಗಳು)	-	3348

ಮೇಲ್ಕಂಡ ಸನ್ನದು ಪೈಕಿ 1998-99ನೇ ಸಾಲಿನಲ್ಲಿ ನೀಡಲಾದ ಹೊಸ ಸನ್ನದುಗಳ ಸಂಖ್ಯೆ ಎಂದರೆ ಸಿಎಲ್ - 1=1, ಸಿಎಲ್ - 2=1, ಸಿಎಲ್ - 4=3, ಸಿಎಲ್ - 7=13 ಮತ್ತು ಸಿಎಲ್ - 9=53. ಉಳಿದವು 1998-99ಕ್ಕೆ ಮುಂಚೆ ಇದ್ದ ಸನ್ನದುಗಳು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಮುಧೋಳದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಕೆಯಲ್ಲಿ ವಿಳಂಬ.

964 (1360) ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಧೋಳ ಕ್ಷೇತ್ರಕ್ಕೆ 20 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಪೂರೈಕೆಯಾಗಿದ್ದರೂ ಸಹ ಅದನ್ನು ಅಳವಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದಲ್ಲಿ, ಅದಕ್ಕೆ ಕಾರಣವೇನು ಹಾಗೂ ಎಂದು ಅಳವಡಿಸಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಹೌದು

ಆ) ಮುಧೋಳ ಸ್ಟೇಷನ್ನಿನಲ್ಲಿ 110 : 11 ಕೆ.ವಿ. 10 ಎಂ.ವಿ.ಎ. ಸಾಮರ್ಥ್ಯದ ಎರಡು ಪರಿವರ್ತಕಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ ಒಂದು 10 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು 20 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕದ ಮೂಲಕ ಬದಲಾಯಿಸಲಾಗುತ್ತಿದೆ. 20 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕವನ್ನು ಈಗಾಗಲೇ ಒದಗಿಸಿದ್ದು, ಅದರ ಜೋಡಣೆಯ ಕಾರ್ಯವೂ ಸಹಾ ಮುಗಿದಿದೆ. ಈ ಕಾರ್ಯಕ್ಕೆ ಬೇಕಾಗಿರುವ ಕೆಲವು ಸಾಮಗ್ರಿಗಳನ್ನು ಮುಖ್ಯವಾಗಿ 110 ಕೆ.ವಿ. ಸರ್ಕ್ಯೂಟ್ ಬ್ರೇಕರ್, 110 ಕೆ.ವಿ. ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳು ಮತ್ತು 11 ಕೆ.ವಿ. ಸ್ವಿಚ್‌ಗೇರ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಪರಿವರ್ತಕವನ್ನು ಅಳವಡಿಸಿ ಮತ್ತು ಚಾಲನೆಗೊಳಿಸಲು ದೀರ್ಘ ಅವಧಿಯವರೆಗೆ ವಿದ್ಯುತ್ ಸ್ಥಗಿತ (ಲೈನ್ ಕ್ಲಿಯರ್) ಗೊಳಿಸಬೇಕಾಗಿರುತ್ತದೆ. ಬೇಸಿಗೆಯ ಕಾಲ ಪ್ರಾರಂಭವಾಗಿದ್ದು, ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯು ಅತ್ಯಂತ ಜಾಸ್ತಿಯಾಗಿದ್ದು, ಈಗ ವಿದ್ಯುತ್ ಸ್ಥಗಿತಗೊಳಿಸುವುದು ಕಷ್ಟಕರವಾಗುತ್ತದೆ. ಏಪ್ರಿಲ್-99ರ ಮಧ್ಯಭಾಗದ ನಂತರ ನೀರಾವರಿ ಪಂಪುಸೆಟ್ಟುಗಳ ಬಳಕೆಯು ಕಡಿಮೆಗೊಳ್ಳುವುದರಿಂದ, ಆ ವೇಳೆಯಲ್ಲಿ ವಿದ್ಯುತ್ ಸ್ಥಗಿತಪಡಿಸಿ (ಲೈನ್ ಕ್ಲಿಯರ್) ಪರಿವರ್ತಕದ ಚಾಲನೆಯ ಕೆಲಸವನ್ನು ಚುರುಕುಗೊಳಿಸಲಾಗುವುದು.

ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿ.

966 (1448) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಹಿಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳು ಯಾವುವು? ಸಂತೇಮಾರನಹಳ್ಳಿ ಕ್ಷೇತ್ರದ ಯಾವ ಪ್ರದೇಶ ಈ ಅಚ್ಚುಕಟ್ಟಿಗೆ ಸೇರಿದೆ ಕ್ಷೇತ್ರದ ವ್ಯಾಪ್ತಿಗೆ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ. (ವಿವರ ಒದಗಿಸುವುದು)

ಆ) ಮಲೆನಾಡು ಅಭಿವೃದ್ಧಿ ಯೋಜನೆ ಅಡಿ ಚಾಮರಾಜನಗರ ತಾಲ್ಲೂಕು ಮತ್ತು ಸಂತೇಮಾರನಹಳ್ಳಿ ಕ್ಷೇತ್ರದ ಅಭಿವೃದ್ಧಿ ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಹಣ ಮಂಜೂರಾಗಿದೆ (ವಿವರ ನೀಡುವುದು).

ಇ) ಚಾಮರಾಜನಗರ ತಾಲ್ಲೂಕು ಸುವರ್ಣಾವತಿ ಮತ್ತು ಹಿಪ್ಪಳ್ಳಿ ಅಣೆಕಟ್ಟುಗಳು, ಕಾವೇರಿ ಬಲಾನಯನ ವ್ಯಾಪ್ತಿಗೆ ಒಳಪಡುತ್ತವೆಯೇ ಇಲ್ಲದಿದ್ದಲ್ಲಿ, ಒಳಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು).

ಶ್ರೀ ಕೆ. ವೆಂಕಟೇಶ್ (ಕಾಡಾ ರಾಜ್ಯ ಸಚಿವರು) :—

ಅ) ಕಾವೇರಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿನ ಕಬಿನಿ, ಹಾರಂಗಿ, ಹೇಮಾವತಿ ಮತ್ತು ಕೃಷ್ಣರಾಜಸಾಗರ, ಈ ನಾಲ್ಕು ಬೃಹತ್ ನೀರಾವರಿ ಹಾಗೂ ನುಗು, ತಾರಕ, ಗುಂದಾಲ್, ಮಾಟಿಹೊಳೆ, ಕಣ, ಭೈರಮಂಗಲ, ಮಾರ್ಕೋನಹಳ್ಳಿ ಮತ್ತು ಮಂಚನಬೆಲೆ ಈ ಎಂಟು ಮಧ್ಯಮ ನೀರಾವರಿ ಯೋಜನೆಗಳ ಪ್ರದೇಶಗಳು, ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು, ಮೈಸೂರು ಇದರ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಸಂತೇಮಾರನಹಳ್ಳಿ ಕ್ಷೇತ್ರದಲ್ಲಿನ ಕಬಿನಿ ಯೋಜನೆಯ ಅಚ್ಚುಕಟ್ಟು ಪ್ರದೇಶ ಮಾತ್ರ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಗಳು, ಇದರ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

ಸದರಿ ಕ್ಷೇತ್ರದ ವ್ಯಾಪ್ತಿಗೆ ವರ್ಷವಾರು ಮಂಜೂರಾದ ಹಣ ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ವರ್ಷ	ಹೊಲಗಾಲುವೆ	ವಾರಾಬಂದಿ	ಆಯಕಟ್ಟು ರಸ್ತೆ
1992-93	3.07	1.86	4.82
1993-94	2.05	4.10	6.99
1994-95	--	3.02	8.27
1995-96	--	--	6.17
1996-97	15.88	--	7.23
1997-98	--	--	18.82

ಆ) ರೂ. ಲಕ್ಷಗಳಲ್ಲಿ

ವರ್ಷ	ಚಾಮರಾಜನಗರ ತಾಲ್ಲೂಕು	ಸಂತೇಮಾರನ ಹಳ್ಳಿ ಕ್ಷೇತ್ರ
1993-94	57.850	--
1994-95	94.158	--
1995-96	92.390	20.70
1996-97	55.059	30.64
1997-98	84.260	31.77
1998-99	142.950	49.69

೪) ಚಾಮರಾಜನಗರ ತಾಲ್ಲೂಕು ಸುವರ್ಣಾವತಿ ಮತ್ತು ಚಿಕ್ಕಹೊಳೆ ಆಣೆಕಟ್ಟುಗಳು ಕಾವೇರಿ ಜಲಾನಯನ ವ್ಯಾಪ್ತಿಗೆ ಒಳಪಡುತ್ತದೆ. ಆದರೆ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು, ಮೈಸೂರು ಇವರ ಕಾರ್ಯವ್ಯಾಪ್ತಿಗೆ ಬರುವುದಿಲ್ಲ.

ನೀರಾವರಿ ಯೋಜನೆಗಳಿಗೆ ಹಣದ ಸಹಾಯ.

969(1362) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(a) The names of the major & medium irrigation projects taken up under financial assistance by Rural Infrastructure Development fund of NABARD;

(b) Project wise details may be furnished regarding estimate cost; yearwise and total financial assistance obtained from RIDF and financial assistance given by State Government; expenditure incurred on each project yearwise and time scheduled for the completion of each project;

(c) The conditions setforth by NABARD for the repayment of the loan?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. Votehole	1. ವೋಟೆಹೊಳೆ ಯೋಜನೆ
2. Lower Mullamari	2. ಮುಲ್ಲಾಮಾರಿ ಕೆಳದಂಡೆ ಯೋಜನೆ
3. Amarja	3. ಅಮರ್ಜ ಯೋಜನೆ
4. Chulkinala	4. ಚುಲ್ಕಿನಾಲಾ ಯೋಜನೆ
5. Maskinala	5. ಮಸ್ಕಿನಾಲಾ ಯೋಜನೆ
6. Manchanabele	6. ಮಂಚನಬೆಲೆ ಯೋಜನೆ
7. Bennithora	7. ಬೆನ್ನಿತೋರ ಯೋಜನೆ

(b) Statement enclosed

ಪಟ್ಟಿಲಗತ್ತಿಸಿದೆ

(c) RIDF-1

1. Rate of Interest: At 13% interest per annum and interest shall be charged with quarterly rest on the outstanding loans as at the end of each quarter is 31st March, 30th June, 30th September and 31st December.

2. Repeyment of loans: Repayment schedule is given in each drawals separately and shall be paid in full in equal annual instalments within five years from the sate of drawals including a grace period of 2 years.

RIDF-II:

1. Rate of Interest: Rate of is at 12% per annum or any other rate as specified by NABARD from time to time.

2. Repayment of loans: Repayment procedure is same as for RIDF I repayment starts from 3rd year of drawal date.

ಆರ್.ಐ.ಡಿ.ಎಫ್-1 ವರ್ಷವಾರು ಶೇಕಡ 13 ಬಡ್ಡಿ ಬಡ್ಡಿಯನ್ನು ತ್ರೈಮಾಸಿಕ ಮರುಪಾವತಿ ಮಾಡಬೇಕಾಗಿರುತ್ತದೆ. 5 ವರ್ಷಗಳಲ್ಲಿ ಮರುಪಾವತಿಯನ್ನು ಸಮನಾದ ವರ್ಷದ ಕಂತುಗಳಲ್ಲಿ ಸಾಲ ತೆಗೆದುಕೊಂಡ ವರ್ಷದಿಂದ 5 ವರ್ಷಗಳೊಳಗೆ ಅಂದರೆ 2 ವರ್ಷ ರಿಯಾಯಿತಿ ಕಾಲಾವಧಿ ಸೇರಿ.

ಆರ್.ಐ.ಡಿ.ಎಫ್-11 ವರ್ಷವಾರು ಶೇಕಡ 12 ಬಡ್ಡಿ ಆಥವಾ ನಬಾರ್ಡ್‌ನವರಿಂದ ಆಯಾ ಸಮಯಕ್ಕೆ ವಿಧಿಸುವ ವಿಶಿಷ್ಟ ಬಡ್ಡಿ ಸಾಲ ಮರುಪಾವತಿಯ ಕ್ರಮವು ಆರ್.ಐ.ಡಿ.ಎಫ್-1ರಡಿಯಲ್ಲಿ ತಿಳಿಸಿರುವಂತೆ ಮರು ಪಾವತಿಯ ಸಾಲ ತೆಗೆದುಕೊಂಡ ದಿನಾಂಕದಿಂದ 3 ವರ್ಷದ ನಂತರ ಶುರುವಾಗಲಿದೆ.

ANNEXURE

(Rs.in lakhs)

Details		Votehole	Lower Mullamari	Amarja	Chulki nala	Maski nala	Mancha-nabele	Benithora
1		2	3	4	5	6	7	8
Estimated cost		4750	10000	8225	5350	2995	6240	15680
Yearwise total financial	1995-96	155	461	470	320	24	398	--
Assistance obtained	1996-97	372	1167	1235	625	210	574	732
from RIDF	1997-98	--	1280	579	608	321	--	884
	1998-99	--	312	--	--	156 end of 1/99	--	713 end of 1/99
	Total:	527	3220	2284	1553	711	972	2329
Financial Assistance given by State Govt.,		857	1972	2075	1800	853	1574	5186
Expenditure incurred	1995-96	536	978	662	546	131	453	1270
on each project (after	1996-97	512	1390	1336	693	446	1072	1132
posing to Nabard	1997-98	132	1784	1322	1310	599	789	3051
	1998-99 (as on 2/99)	204	1040	1039	804	388	232	2062
	Total:	1384	5192	4359	3353	1564	2546	7515
Time schedule for complection each project		1999-2000	1999-2000	1999-2000	1999-2000	1999-2000	1999-2000	1999-2000

ಮದೂರು ತಾಲ್ಲೂಕಿನಲ್ಲಿ ಸಬ್-ಸ್ಟೇಷನ್.

970(1390) ಶ್ರೀ ಎಂ. ಮಹೇಶ್ ಚಂದ್ (ಮದ್ದೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮದ್ದೂರು ತಾಲ್ಲೂಕು ಒಂದು ದೊಡ್ಡ ತಾಲ್ಲೂಕು ಆಗಿರುವುದರಿಂದ ಈಗಿರುವ ಒಂದು ಸಬ್-ಸ್ಟೇಷನ್ ಜೊತೆಗೆ ಮತ್ತೊಂದು ಸಬ್-ಸ್ಟೇಷನ್‌ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವರೇ? ಹಾಗಿದ್ದಲ್ಲಿ ಇದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವರೇ?

ಆ)ಮದ್ದೂರಿನಲ್ಲಿದ್ದ ಸ್ಟೋರ್ ಪರ್ಚೇಸನ್ನು ಮಂಡ್ಯಕ್ಕೆ ವರ್ಗಾಯಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಮಂಡ್ಯಕ್ಕೆ ವರ್ಗಾಯಿಸಿದ ಸ್ಟೋರ್ ಪರ್ಚೇಸ್‌ನ್ನು ಪುನಃ ಮದ್ದೂರಿಗೆ ವರ್ಗಾಯಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಮದ್ದೂರು ತಾಲ್ಲೂಕಿನಲ್ಲಿ ಪ್ರಸ್ತುತ ಮೂರು ಉಪ ವಿದ್ಯುತ್ ಕೇಂದ್ರಗಳು -ಕೊಪ್ಪ, ಮದ್ದೂರು ಹಾಗೂ ದುಂಡನಹಳ್ಳಿಗಳಲ್ಲಿ- ಕಾರ್ಯನಿರ್ವಹಿಸುತ್ತಿದೆ. ಇದೇ ತಾಲ್ಲೂಕಿನ ಕೆ.ಎಂ. ದೊಡ್ಡಿಯಲ್ಲಿ ಸುಮಾರು 223 ಲಕ್ಷ ರೂ. ವೆಚ್ಚದಲ್ಲಿ 66 : 11 ಕೆ.ವಿ., 6.3 ಎಂ.ವಿ.ಎ. ಸಾಮರ್ಥ್ಯದ ಉಪ-ವಿದ್ಯುತ್ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. ಈ ಕಾಮಗಾರಿಯನ್ನು ಅಕ್ಟೋಬರ್ 1999ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) ಮದ್ದೂರಿನಲ್ಲಿ ಮಂಡಳಿಯ ಉಗ್ರಾಣವನ್ನು ಸಮೀಪದಲ್ಲಿನ ಮಂಡ್ಯದ ವಿಭಾಗೀಯ ಉಗ್ರಾಣದೊಂದಿಗೆ ವಿಲೀನಗೊಳಿಸಲಾಗಿದ್ದು, ಮದ್ದೂರು ಉಪ-ವಿಭಾಗದ ಸಾಮಗ್ರಿಗಳ ಅವಶ್ಯಕತೆಯನ್ನು ಮಂಡ್ಯದಿಂದಲೇ ಪೂರೈಸಲು ವ್ಯವಸ್ಥೆ ಮಾಡಲಾಗಿದೆ.

ಇ) ಉಪ-ವಿಭಾಗೀಯ ಕೇಂದ್ರಗಳಲ್ಲಿ ಸಾಮಗ್ರಿಗಳ ವಿತರಣೆಯನ್ನು ಉತ್ತಮಗೊಳಿಸುವುದು, ಹಾಲಿ ಇರುವ ಸಿಬ್ಬಂದಿಯನ್ನು ಮಂಡಳಿಯ ಇನ್ನಿತರ ಅತ್ಯವಶ್ಯಕ ಕಾರ್ಯಗಳಲ್ಲಿ ತೊಡಗಿಸುವುದು, ಇತ್ಯಾದಿ ಆಡಳಿತಾತ್ಮಕ ಅನುಕೂಲತೆಗಳಿಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಈ ವಿಲೀನದಿಂದಾಗಿ ಸಾರ್ವಜನಿಕರಿಗೆ ಒದಗಿಸುವ ಸೇವೆಯಲ್ಲಿ ಯಾವುದೇ ರೀತಿಯ ಕುಂದುಕೊರತೆಯೂ ಉಂಟಾಗದಂತೆ ಮಂಡಳಿಯು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿರುತ್ತದೆ. ಅಲ್ಲದೆ, ಈ ಉಗ್ರಾಣವನ್ನು ವಿಲೀನಗೊಳಿಸುವ ಮುನ್ನ ಈ ವಿಷಯವನ್ನು ಸಮಿಸ್ತಾರವಾಗಿ ಪರಿಶೀಲಿಸಿ, ವಿಲೀನಗೊಳಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಉಗ್ರಾಣವನ್ನು ಪುನಃ ಮದ್ದೂರಿಗೆ ವರ್ಗಾಯಿಸುವ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.

ನೀರಾವರಿ ಕಛೇರಿ ಸ್ಥಳಾಂತರ.

971(1397) ಡಾ: ಎಂ. ಮಹೇಶ್‌ಚಂದ್ (ಮದ್ದೂರು) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮದ್ದೂರು ತಾಲ್ಲೂಕಿನಲ್ಲಿ ವಿಶ್ವೇಶ್ವರಯ್ಯ ಆಧುನೀಕರಣ ಯೋಜನೆಗೆ ರೂ. 5 ಕೋಟಿಗಳ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡ ಮೇಲೆ ಮದ್ದೂರಿನಲ್ಲಿದ್ದ ಈ ಕಛೇರಿಯ ಕಿರುಗಾವರಿಗೆ ಸ್ಥಳಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಪುನಃ ಸದರಿ ಕಛೇರಿಯನ್ನು ಮದ್ದೂರಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1.ಬಂದಿದೆ.

2. ನಂಜಾಪುರ ಏತ ನೀರಾವರಿ ಯೋಜನೆ ಪುರಿಗಾಲಿ ಏತ ನೀರಾವರಿ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ನೀರಿನ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ಮದ್ದೂರಿನಲ್ಲಿದ್ದ ಒಂದು ಉಪ ವಿಭಾಗವನ್ನು ಕಿರುಗಾವಲಿಗೆ ಸ್ಥಳಾಂತರಿಸಲಾಗಿದೆ. ಈ ಉಪವಿಭಾಗವು ಪ್ರಮುಖ ನೀರಾವರಿ ಕಾಮಗಾರಿಗಳನ್ನು 1999-2000ನೇ ಇಸವಿಯಲ್ಲಿ ನಿರ್ವಹಿಸಬೇಕಾಗಿರುವುದರಿಂದ ಈ ಉಪ ವಿಭಾಗವನ್ನು 1-4-99 ರಿಂದ ಉಳಿಸಿಕೊಳ್ಳಲಾಗುವುದೆಂದು, ಇಲ್ಲದಿದ್ದಲ್ಲಿ, ಮತ್ತೊಂದು ಉಪವಿಭಾಗವನ್ನು ಮದ್ದೂರಿಗೆ ಸ್ಥಳಾಂತರಿಸಲಾಗುವುದು.

ಪೋಲೀಸ್ ಇಲಾಖೆಯ ಸಿ ಅಂಡ್ ಆರ್ ನಿಯಮಗಳು.

972(1412) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೆಪ್ಟೆಂಬರ್ 94ರ ಸಿ ಅಂಡ್ ಆರ್ ರೂಲ್ಸ್ ಪ್ರಕಾರವಾಗಿ ಪೊಲೀಸ್ ಇಲಾಖೆಯಲ್ಲಿ ನೇಮಕಾತಿಗಳು ನಡೆಯುತ್ತಿದೆಯೇ;

ಆ) ಈ ಅಧಿಸೂಚನೆ ಮೇರೆಗೆ ನೇಮಕಾತಿಯಲ್ಲಿ ಶೇ. 15 ರಷ್ಟನ್ನು ಸಿ.ಎ.ಆರ್. ಡಿ.ಎ.ಆರ್.ನಲ್ಲಿರುವ ಅರ್ಹ ಅಭ್ಯರ್ಥಿಗಳಿಗಾಗಿ ಮೀಸಲಿಡಲಾಗಿದೆಯೇ;

ಇ) ಹಾಗಿದ್ದಲ್ಲಿ, ನೇರ ನೇಮಕಾತಿಯಲ್ಲಿ ಭರ್ತಿ ಮಾಡಲಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

ಈ) ಸಿ.ಎ.ಆರ್. ಮತ್ತು ಡಿ.ಎ.ಆರ್.ನಲ್ಲಿರುವ ಅರ್ಹ ಅಭ್ಯರ್ಥಿಗಳಿಗಾಗಿ ಕಾಯ್ದಿರಿಸಲಾದ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಹೌದು

ಆ) ಹೌದು

ಇ) ನೇರ ನೇಮಕಾತಿ ಮೂಲಕ ಒಟ್ಟು 4,499 ಸಿವಿಲ್ ಪೊಲೀಸ್ ಪೇದೆಗಳನ್ನು 1994ರ ನಂತರ ತುಂಬಲಾಗಿದೆ.

ಈ) ಸಿ.ಎ.ಆರ್ ಮತ್ತು ಡಿ.ಎ.ಆರ್.ನಲ್ಲಿರುವ ಅಭ್ಯರ್ಥಿಗಳಿಗಾಗಿ ಒಟ್ಟು 355 ಹುದ್ದೆಗಳನ್ನು ಮೀಸಲಿಡಲಾಗಿದೆ.

ಸ್ವಾತಂತ್ರ ಹೋರಾಟಗಾರರಿಗೆ ಮಾಸಾಶನ.

972(1346) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ವಿಮೋಚನೆಗೆ ಹೋರಾಟ ಮಾಡಿದ ಸಂತ್ರಸ್ತರಿಗೆ ಮಾಸಾಶನ ಕೊಡುತ್ತಿದ್ದುದು ನಿಜವೆ.

ಆ) ಹಾಗಿದ್ದಲ್ಲಿ ಅದನ್ನು ಈಗ ನಿಲ್ಲಿಸಲು ಕಾರಣವೇನು.

ಇ) ಇದನ್ನು ಪುನರ್ ಪರಿಶೀಲಿಸಿ ಕೊಡಲು ನಿರ್ಧಾರ ತೆಗೆದುಕೊಳ್ಳಲಾಗುವುದೆ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ಹೌದು

ಆ) ಗೋವಾ ಗೌರವಧನ ಮಂಜೂರಾತಿ ಯೋಜನೆಯು ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣದ ಮೇರೆಗೆ ದಿನಾಂಕ : 19-4-95 ರಿಂದ ಜಾರಿಗೆ ಬರುವಂತೆ ಈ ಯೋಜನೆಯನ್ನು ಸರ್ಕಾರವು ಹಿಂತೆಗೆದುಕೊಂಡಿದೆ.

ಇ) ಇಲ್ಲ.

ತುಂಗಾ ಮೇಲ್ದಂಡೆ ಯೋಜನೆ.

974(1468) ಶ್ರೀ ಕುನಾಮೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಂಗಾ ಮೇಲ್ದಂಡೆ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಯಿತು?

2. ಸದರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ಹಾಗೂ ಆ ಬಗ್ಗೆ ಈವರೆಗೆ ಮಾಡಿದ ವೆಚ್ಚ ಎಷ್ಟು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

ಅ) 1991ರಲ್ಲಿ ಪ್ರಾರಂಭಿಸಲಾಯಿತು.

ಆ) ಸದರಿ ಯೋಜನೆಯ ಅಂದಾಜು ವೆಚ್ಚ ಮೊತ್ತ ರೂ.27141 ಲಕ್ಷಗಳು. ಇಲ್ಲಿಯವರೆಗೆ (2/99ರಅಂತ್ಯದವರೆಗೆ) ಭರಿಸಲಾದ ವೆಚ್ಚ ರೂ.2961.18 ಲಕ್ಷಗಳು.

ವರಾಹಿ ಮೂಲ ಯೋಜನೆಯ ಅಂದಾಜು.

976(1472) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವರಾಹಿ ಮೂಲ ಯೋಜನೆಯ ಡ್ಯಾಮಿನ ಅಂದಾಜು ಪಟ್ಟಿ ತಯಾರಿಸಲಾಗುದೆಯೇ?

2. ಹಾಗಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

3. ವರಾಹಿ ಮೂಲ ಯೋಜನೆಯ ಡ್ಯಾಮಿನ ಟೆಂಡರ್ ಯಾವಾಗ ಕರೆಯಲಾಗುವುದು ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

1. ತಯಾರಿಸಲಾಗಿದೆ. Estimate has been prepared

2. 1992-93ನೇ ಸಾಲಿನ ದರಪಟ್ಟಿಯಂತೆ ರೂ. 122.50 ಕೋಟಿಗಳು
Rs. 122.50 Crores based on 1992-93 S.R.

3. ಅರಣ್ಯ ಭೂಮಿ ಬಿಡುಗಡೆ ಪ್ರಸ್ತಾವನೆಗೆ ಕೇಂದ್ರ ಪರಿಸರ ಮಂತ್ರಾಲಯದಿಂದ ಅನುಮೋದನೆ ದೊರೆತ ನಂತರ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

After the proposal of Forest Clearance by the Ministry of Environment & Forest is approved, action will be taken to start the work.

ವರಾಹಿ ಯೋಜನೆಗೆ ಭೂಸ್ವಾದೀನ ಮತ್ತು ನೀಡಿದ ಪರಿಹಾರ.

977(1473) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವರಾಹಿ ಯೋಜನೆಯಡಿ ಭೂಸ್ವಾದೀನ ಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎಷ್ಟು (ಪರಿಹಾರದ ವಿವರ ತಿಳಿಸಲಾಗುವುದು)?

2. ರೈತರಿಂದ ಪರಿಹಾರದ ಬಗ್ಗೆ ಆಕ್ಷೇಪಣಾ ಅರ್ಜಿಗಳು ಬಂದಿದೆಯೇ?

3. ಹಾಗಿದ್ದಲ್ಲಿ ಆ ಬಗ್ಗೆ ಪರಿಹಾರ ಪಡೆದುಕೊಂಡ ರೈತರ ಸಂಖ್ಯೆ ಎಷ್ಟು ಅವರು ಕಳೆದುಕೊಂಡ ಜಮೀನಿನ ವಿಸ್ತೀರ್ಣವೆಷ್ಟು (ಭೂಮಿ ಕಳೆದುಕೊಂಡವರ ವಿಳಾಸ ಮತ್ತು ಪರಿಹಾರ ಪಡೆದುಕೊಂಡವರ ವಿಳಾಸ ತಿಳಿಸುವುದು)?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ವರಾಹಿ ಎಡದಂಡೆ ನಾಲೆಯ ಮತ್ತು ಜಾಕ್‌ವೆಲ್ ನಿರ್ಮಾಣದ ಕುರಿತು 101-20 ಎಕರೆ ಪಟ್ಟಾ ಜಮೀನಿನ ಭೂ ಸ್ವಾಧೀನತೆಯ ಅವಶ್ಯಕತೆಯಿರುತ್ತದೆ. 94.00 ಎಕರೆ ಪಟ್ಟಾ ಜಮೀನು ಅಂತಿಮ ಅವಾರ್ಡ್ ಆಗಿರುತ್ತದೆ. ಈ ಪೈಕಿ 82-33 ಎಕರೆ ಜಮೀನುಗಳು ಕಂದಾಯ ಇಲಾಖೆಯಿಂದ ನೀರಾವರಿ ಇಲಾಖೆಗೆ ಹಸ್ತಾಂತರಿಸಲ್ಪಟ್ಟಿದೆ. ಇನ್ನು ಬಾಕಿ ಉಳಿದ 7.20 ಎಕರೆ ಪಟ್ಟಾ ಜಮೀನಿಗೆ ಭೂ ಸ್ವಾಧೀನತೆಯ ಬಗ್ಗೆ ಕಂದಾಯ ಇಲಾಖೆಯ ಸೂಚನೆಯಂತೆ ಮರು ಪ್ರಸ್ತಾವನೆಯನ್ನು ಈ ವಲಯಕ್ಕೆ ಸಂಬಂಧಿಸಿದ ವರಾಹಿ ವಿಭಾಗದಿಂದ ಕಳುಹಿಸುವಂತೆ ಸೂಚಿಸಲಾಗಿದೆ.

Patta land to an extent of 101.20 acres is required to be acquired for Varahi L.I.S. works. Final award is passed for 94 acres till todate. Out of this 82.33 acres of Patta land by Revenue authorities. Further submission of revised acquisition proposals for 7.20 acres of patta land to the revenue authorties as per their instructions is under process.

2. ರೈತರಿಂದ ಪರಿಹಾರದ ಬಗ್ಗೆ ಆಕ್ಷೇಪಣಾ ಅರ್ಜಿಗಳು ಯಾವುದೂ ಬಂದಿರುವುದಿಲ್ಲ.
No such objections are received from any Farmer.

3. ಉದ್ಭವಿಸುವುದಿಲ್ಲ. Does not arise

ಸಚಿವರುಗಳ ಪ್ರಯಾಣ ಹಾಗೂ ಇತರ ಭತ್ಯೆಗಳು.

981(257) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1998ನೇ ಜನವರಿಯಿಂದ ಡಿಸೆಂಬರ್ 1998ರವರೆಗೆ ರಾಜ್ಯದ ಕ್ಯಾಬಿನೆಟ್ ಹಾಗೂ ರಾಜ್ಯ ಸಚಿವರುಗಳು ಪಡೆದ ಪ್ರಯಾಣಭತ್ಯೆ, ದಿನಭತ್ಯೆ ಎಷ್ಟೆಷ್ಟು?

ಆ) ಮೇಲ್ಕಂಡ ಅವಧಿಯಲ್ಲಿ ಅಯಾ ಸಚಿವರುಗಳ ಕಛೇರಿ ಮತ್ತು ಮನೆಗಳ ದೂರವಾಣಿಗಳಿಗೆ ಖರ್ಚಾದ ಹಣ ಎಷ್ಟೆಷ್ಟು? (ಪ್ರತಿಯೊಬ್ಬ ಮಂತ್ರಿಗಳ ಮತ್ತು ರಾಜ್ಯ ಮಂತ್ರಿಗಳ ಖರ್ಚನ್ನು ಪ್ರತ್ಯೇಕವಾಗಿ ಒದಗಿಸುವುದು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು)

-ಅ) ರೂ.2,09,01,874-00

-ಆ) ಮಾಹಿತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಸಚಿವರುಗಳ ಕಛೇರಿ ಮತ್ತು ನಿವಾಸದ ದೂರವಾಣಿ ಕರೆಗಳಿ ವೆಚ್ಚದ ವಿವರ
ಜನವರಿ 1998 ರಿಂದ ಡಿಸೆಂಬರ 1998 ರವರೆಗೆ

ಕ್ರಮ ಸಂಖ್ಯೆ	ಸಚಿವರುಗಳ ಹೆಸರು	ಕಛೇರಿ ದೂರವಾಣಿ ಸಂಖ್ಯೆ	ವೆಚ್ಚ	ನಿವಾಸ ದೂರವಾಣಿ ಸಂಖ್ಯೆ	ವೆಚ್ಚ
1	2	3	4	5	6
	<u>ಶ್ರೀಯುತರುಗಳಾದ</u>				
1)	ಜೆ.ಹೆಚ್. ಪಟೇಲ್ ಮುಖ್ಯಮಂತ್ರಿಗಳು	2253414	1,06,374-00	2252572	3,92,292-00
		2253424	3,07,840-00	2252574	2,65,717-00
		2253454	2,59,352-00	2252573	3,57,570-00
				2258928	5,48,059-00
				2251449	6,84,147-00
				2253719	2,52,736-00
				2253742	5,31,135-00
2)	ಸಿದ್ದರಾಮಯ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು	2250637	2,42,109-00	2254384	2,012-00
				2204929	3,83,612-00
3)	ಎಂ.ಪಿ. ಪ್ರಕಾಶ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವರು	2252536	2,46,287-00	2255801	1,78,284-00
				2254967	4,79,306-00
4)	ಡಿ. ಮಂಜುನಾಥ್ ಅರಣ್ಯ ಸಚಿವರು	2252163	1,37,333-00	2205797	1,15,110-00
				2269682	23,418-00
5)	ಪಿ.ಜಿ.ಆರ್. ಸಿಂಧ್ಯಾ ಗೃಹ ಸಚಿವರು	2255023	1,58,076-00	2255285	3,87,151-00
				2205196	40,053-00
6)	ಸಿ. ಬೈರೇಗೌಡ ಕೃಷಿ ಮತ್ತು ತೋಟಗಾರಿಕೆ ಸಚಿವರು	2259183	1,52,652-00	2203092	1,49,101-00
				2257986	5,12,426-00

1	2	3	4	5	6
7)	ಎಂ.ಸಿ. ನಾಣಯ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು	2251798	77,318-00	2252297 2257064	3,35,785-00 14,414-00
8)	ಹೆಚ್.ಜಿ.ಗೋವಿಂದೇಗೌಡ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು	2254661	1,70,780-00	2281022 2252448	5,90,314-00 16,775-00
9)	ಬಿ. ಸೋಮಶೇಖರ್ ಕಂದಾಯ ಸಚಿವರು	2256063	80,309-00	2253727 2253725	38,043-00 17,695-00
10)	ತಿಪ್ಪೆಸ್ವಾಮಿ ಸಣ್ಣ ನೀರಾವರಿ ಮತ್ತು ಭೂಜಲ ಅಭಿವೃದ್ಧಿ ಸಚಿವರು	2251496	3,27,221-00	2205779 2258472	5,41,570-00 21,030-00
11)	ಹೆಚ್.ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	2251652	2,69,614-00	2259186 2257602	2,34,214-00 4,80,758-00
12)	ಎಸ್.ಎಸ್. ಪಾಟೀಲ್ ಸಹಕಾರ ಸಚಿವರು	2269128	4,92,886-00	2257737 2251575	1,77,872-00 2,68,419-00
13)	ಎ.ಬಿ.ಪಾಟೀಲ್ ಗಣಿ ಮತ್ತು ಭೂವಿಜ್ಞಾನ ಮತ್ತು ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು	2259182	2,91,289-00	3414288 3414056	92,936-00 21,574-00
14)	ಬಿ. ಬಸವಣ್ಣಪ್ಪ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು	2252292	2,75,108-00	3448613 3418614	1,17,876-00 1,61,485-00
15)	ಕೆ.ಎಂ. ಕೃಷ್ಣಾರೆಡ್ಡಿ ಸಮಾಜ ಕಲ್ಯಾಣ ಸಚಿವರು	2253751	2,34,098-00	34110580 3413394	69,668-00 64,880-00

1	2	3	4	5	6
16)	ಕೆ.ಎನ್, ನಾಗೇಗೌಡ ಬೃಹತ್ ನೀರಾವರಿ ಸಚಿವರು	2252475	4,25,576-00	3340970 3344823	1,06,745-00 64,880-00
17)	ಎಂ.ಎಸ್ ಪಾಟೀಲ್ ನಗರಾಭಿವೃದ್ಧಿ ಪ್ರಾಧಿಕಾರಗಳ ಮತ್ತು ನಗರ ಯೋಜನೆ ಸಚಿವರು	2253578	4,34,764-00	2203018 2205781	1,96,636-00 4,87,039-00
18)	ಬಿ.ಎನ್. ಬಚ್ಚೇಗೌಡ ಸಾರಿಗೆ ಸಚಿವರು	2258489	1,87,677-000	2232794	74,453-00
19)	ಬಸವರಾಜ ಪಾಟೀಲ್ ಅಟ್ಟೂರ ಸಣ್ಣ ಕೈಗಾರಿಕಾ ಸಚಿವರು	2251772	91,601-00	3411703 3418586	72,638-00 20,552-00
20)	ಬಿ.ಎ. ಮೊಯಿಯುದ್ದೀನ್ ಉನ್ನತ ಶಿಕ್ಷಣ ಸಚಿವರು	2253835	5,30,619-00	3411388 3410334	1,84,781-00 2,39,989-00
21)	ಉಮೇಶ್ ಕತ್ತಿ ಲೋಕೋಪಯೋಗಿ ಸಚಿವರು	2257285	3,55,264,00	3334336 3338936	2,11,720-00 68,291-00
22)	ಸಿ.ಎಂ. ಉದಾಸಿ ಜವಳಿ ಸಚಿವರು	2252332	3,45,653-00	3338255 3335978	12,436-00 3,58,590-00
23)	ಎಂ.ವಿ. ಗುತ್ತೇದಾರ್ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು	2253671	4,68,722-000	3303058 3389820	5,47,379-00 20,902-00
24)	ಹೆಚ್.ಡಿ. ರೇವಣ್ಣ ಮಸತಿ ಸಚಿವರು	2254429	1,51,785-00	2205155 2205255	5,43,022-00 6,46,704-00
25)	ಲೀಲಾದೇವಿ ಆರ್. ಪ್ರಸಾದ್ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು	2256365	2,86,7044-00	3343502	2,68,668

1	2	3	4	5	6
26)	ಆರ್. ರೋಷನ್‌ಬೇಗ್ ಪ್ರವಾಸೋದ್ಯಮ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು	2258004	1,69,420-00	3310136	3,13,344-00
27)	ಡಿ.ಟಿ. ಜಯಕುಮಾರ್ ತೋಟಗಾರಿಕಾ ರಾಜ್ಯ ಸಚಿವರು	2252021	2,19,845-00	3343220	1,95,596-00
28)	ಜಯವಂತ ಸುಬ್ರಾಯ ಅಮ್ಮಾಂ ರಾಜ್ಯ ಸಚಿವರು	2251958	1,34,375-00	3414595	19,428-00
29)	ಬಿ. ಮುನಿಯಪ್ಪ ಮುದ್ದಪ್ಪ ಮುದರಾಯ ರಾಜ್ಯ ಸಚಿವರು	2251568	3,70,794-00	3418925	4,48,695-00
30)	ಮೀರಾಬುದ್ದೀನ್ ಪಟೇಲ್ ಪೌರಾಡಳಿತ ರಾಜ್ಯ ಸಚಿವರು	2256774	7,47,871-00	3431303	5,05,518-00
31)	ಕೆ. ಜಯಪ್ರಕಾಶ್ ಹೆಗಡೆ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು	2251324	2,04,380-00	5254292	2,09,719-00
32)	ಅನಂತಕುಮಾರ್ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು	2259181	56,063-00	3347643	80,735-00
33)	ಪರಿಷತ್ತಿನ ದರ್ಜಾವಾಪುರ ಇಂದಿನ ರಾಜ್ಯ ಸಚಿವರು	2252193	2,49,657-00	3434633	27,950-00
34)	ಸಚ್ಚಿದಾನಂದ ಸಣ್ಣ ಉಳಿತಾಯ ರಾಜ್ಯ ಲಾಟರಿ ರಾಜ್ಯ ಸಚಿವರು	2255704	4,05,498-00	3402591	2,47,231-00
35)	ಡಾ. ನಾಗಪ್ಪ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು	2258094	2,65,554-00	3480198	64,581-00

1	2	3	4	5	6
36)	ವಿ. ಸೋಮಣ್ಣ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ನೈರ್ಮಲ್ಯ ಮಂಡಳಿಯ ರಾಜ್ಯ ಸಚಿವರು	2251176	78,514-00	3402916	1,44,628-00
37)	ಎಂ. ವರದೇಗೌಡ ಉದ್ಯೋಗ ಮತ್ತು ತರಬೇತಿ ರಾಜ್ಯ ಸಚಿವರು	2258583	2,00,901-00	6690585	1,00,339-00
38)	ಡಾ: ಎಂ. ಶಂಕರ್ ನಾಯಕ್ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು	2253747	2,53,156-00	3410436	1,11,750-00
39)	ಕೆ. ವೆಂಕಟೇಶ್ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು	2252636	2,75,414-00	6715822	1,99,860-00
40)	ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು	2253651	4,65,477-00	3412133	43,683-00
41)	ಆರ್. ಕೃಷ್ಣಪ್ಪ ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯಗಳ ರಾಜ್ಯ ಸಚಿವರು	2251639	3,22,247-00	3330402	1,77,898-00
42)	ಶಿವಣ್ಣಗೌಡ ಬಸವರಾಜ್ ನೀಲಪ್ಪ ಬಂದೀಪಾಟೀ ಮತ್ತು ಗೃಹ ರಕ್ಷಣದಳ ರಾಜ್ಯ ಸಚಿವರು	2253728	3,30,012-00	3431215	2,64,337-00
43)	ಬಿ.ಬಿ. ನಿಂಗಯ್ಯ ಪಶುಸಂಗೋಪನಾ ರಾಜ್ಯ ಸಚಿವರು	2255171	3,07,266-00	5538325	2,09,242-00

1	2	3	4	5	6
44)	ನಾಗವ್ಯಸಾಲೋನಿ ಬೃಹತ್ ನೀರಾವರಿ ಮತ್ತು ಮಧ್ಯಮ ನೀರಾವರಿ ರಾಜ್ಯ ಸಚಿವರು	2256993	1,03,116-00	3414334	16,876-00
45)	ಎಂ.ಸಿ. ಮನಗೂಳಿ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು	2258089	2,95,750-00	3416042	1,428-00
46)	ಹೆಚ್. ಶಿವಪ್ಪ ಸಣ್ಣ ಮತ್ತು ಸಹಕಾರ ಸಣ್ಣ ಉದ್ದಿಮೆಗಳ ರಾಜ್ಯ ಸಚಿವರು	2259388	2,07,172-00	3410112	66,922-00
47)	ಡಿ. ನಾಗರಾಜಯ್ಯ ರೇಷ್ಮೆ ರಾಜ್ಯ ಸಚಿವರು		2200631		
48)	ಅಮರನಾಥ ಶೆಟ್ಟಿ ಕಾರ್ಮಿಕ ರಾಜ್ಯ ಸಚಿವರು		2252021		
49)	ಡಿ.ನಾರಾಯಣ ದಾಸ್ ಸಮಾಜ ಕಲ್ಯಾಣ ರಾಜ್ಯ ಸಚಿವರು		2200633	ಈ ಸಚಿವರುಗಳು 1999ನೇ ಸಾಲಿನಲ್ಲಿ ನೇಮಕವಾಗಿದ್ದುದರಿಂದ ಉತ್ತರ ಉದ್ಭವಿಸುವುದಿಲ್ಲ	
50)	ಅಶ್ವತ್ಥನಾರಾಯಣರೆಡ್ಡಿ ಗೃಹ ರಾಜ್ಯ ಸಚಿವರು		2200634		
51)	ಬಿ.ಎಲ್. ಶಂಕರ್ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು		2200406		

ಕಾವೇರಿ 4ನೇ ಯೋಜನೆಯ 2ನೇ ಹಂತಕ್ಕೆ ಟೆಂಡರ್.

982(258) ಶ್ರೀ ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೆಂಗಳೂರು ಜಲಮಂಡಲಿ ಕಾವೇರಿ 4ನೇ ಹಂತ ಎರಡನೇ ಫೇಸ್‌ಗೆ ಟೆಂಡರ್‌ನ್ನು ಯು.ಕೆ ಬೈಮಾಟರ್ ಸಮೂಹಕ್ಕೆ ನೀಡಿರುವುದು ನಿಜವೇ?

2. ಹಾಗಿದ್ದಲ್ಲಿ, ಈ ಟೆಂಡರ್ ನೀಡಲು ಸರ್ಕಾರ ಅನುಸರಿಸಿದ ವಿಧಿವಿಧಾನಗಳೇನು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

1) ಹೌದು. ಸರ್ಕಾರ ದಿನಾಂಕ 8.3.99ರ ಆದೇಶದಲ್ಲಿ ಸಂಸ್ಥೆಯೊಂದಿಗೆ ನೀರಿನ ಶುಲ್ಕ ಮತ್ತು ಇತರೆ ಹಣಕಾಸಿನ ವಿಷಯಗಳಲ್ಲಿ ಸಮಾಲೋಚಿಸಿ ಯಾವುದೇ ಒಪ್ಪಂದವನ್ನು ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಮುನ್ನ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕೆಂದು ಸರ್ಕಾರವು ಬೆಂಗಳೂರು ಜಲ ಮಂಡಳಿಗೆ ನಿರ್ದೇಶಿಸಿರುತ್ತದೆ.

ಅ) ಈ ಯೋಜನೆಯನ್ನು 'ಬೂಟ್' ಆಧಾರದ ಮೇಲೆ ಕಾರ್ಯಗತಗೊಳಿಸಲು ಉತ್ಸುಕರಾಗಿರುವ ಟೆಂಡರ್‌ದಾರರನ್ನು ಗುರ್ತಿಸಲು ಆಹ್ವಾನ ನೀಡಿತ್ತು. ಒಟ್ಟು 12 ಸಂಸ್ಥೆಗಳು ತಮ್ಮ ಇಚ್ಛೆಯನ್ನು ಸೂಚಿಸಿ ವಿವರಗಳನ್ನು ನೀಡಿದವು. ಟೆಂಡರ್‌ನಲ್ಲಿ ಪ್ರಕಟಿಸಿದ್ದ ಪೂರ್ವ ಅರ್ಹತಾ ಆಧಾರದ ಮೇಲೆ 8 ಸಂಸ್ಥೆಗಳನ್ನು ಅಂತಿಮ ಪಟ್ಟಿಯಲ್ಲಿ ಸೇರಿಸಲಾಯಿತುಯ ಟೆಂಡರ್‌ಗಳನ್ನು 7 ಸಂಸ್ಥೆಗಳು ಮಾತ್ರ ಖರೀದಿಸಿದವು ಹಾಗೂ ಕೇವಲ 3 ಸಂಸ್ಥೆಗಳು ಮಾತ್ರ ತಮ್ಮ ಟೆಂಡರ್‌ಗಳನ್ನು ಸಲ್ಲಿಸಿದವು. ಸಲ್ಲಿಸಿದ ಟೆಂಡರ್‌ಗಳನ್ನು ಅವರುಗಳು ಬೂಟ್ ಬಾಟ ಆಧಾರದ ಮೇಲೆ ಕೈಗೊಂಡಿರುವ ಯೋಜನೆಗಳು, ತಾಂತ್ರಿಕ ಚಾಲನ ಮತ್ತು ನಿರ್ವಾಹಣಾ ಸಾಮರ್ಥ್ಯ, ಹಾಗೂ ಹಣಕಾಸು ಹೊಂದಿಸುವಿಕೆ, ನೀರಿನನ ದರಗಳ ಆದಾರದ ಮೇಲೆ ಬೆಂಗಳೂರು ಜಲ ಮಂಡಳಿಯು ವಿಶ್ಲೇಷಿಸಿ, ಸರ್ಕಾರಕ್ಕೆ ವಿವರಗಳನ್ನು ಸಲ್ಲಿಸಿತು. ವಿಶ್ಲೇಷಣೆಯ ಆಧಾರದ ಮೇಲೆ ಬೈವಾಟರ್ ಸಂಸ್ಥೆಯು ಅತಿ ಗರಿಷ್ಠ ಅಂಕ ಪಡೆದ ಬಿಡ್ಡರ್ ಎಂದು ಪರಿಗಣಿಸಲಾಗಿದೆ.

ಅನಧಿಕೃತ ಮನೆ ನಿರ್ಮಿಸಿರುವ ನಿವಾಸಿಗಳಿಗೆ ವಿದ್ಯುತ್ ಅಳವಡಿಸಿಕೊಡುವುದು.

984(933) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರದೇಶದಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಿರುವ ನಿವಾಸಿಗಳಿಂದ ವಿದ್ಯುತ್ ಅಳವಡಿಸಿ ಕೊಡುವ ಬಗ್ಗೆ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಹಸಿರು ಕಾರ್ಡ್ ವಿತರಣೆಯಲ್ಲಿ ತಾರತಮ್ಯ.

986(939) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಹಸಿರು ಕಾರ್ಡ್ ವಿತರಣೆ ಮಾಡುವಾಗ ತಾರತಮ್ಯ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹಸಿರು ಕಾರ್ಡ್ ಪಡೆಯುವವರಿಗೆ ಇರಬೇಕಾದ ವಾರ್ಷಿಕ ವರಮಾನವೆಷ್ಟು.

ಇ) ಪಡಿತರ ಚೀಟಿ ವಿತರಣೆಯಲ್ಲಿ, ತಾರತಮ್ಯ ಮಾಡುತ್ತಿರುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಇಲ್ಲ

ಆ) ಗ್ರಾಮಾಂತರ ಪ್ರದೇಶದಲ್ಲಿ ವಾರ್ಷಿಕ ರೂ. 3,400-00 ಹಾಗೂ ನಗರ ಪ್ರದೇಶದಲ್ಲಿ, ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ ವಾರ್ಷಿಕ ರೂ. 11,850-00

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗೃಹಮಂಡಳಿ ವತಿಯಿಂದ ಹೊಸ ಬಡಾವಣೆ.

987(943) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಮಗಳೂರು ನಗರದಲ್ಲಿ ಕರ್ನಾಟಕ ಗೃಹ ಮಂಡಳಿವತಿಯಿಂದ ಹೊಸ ಬಡಾವಣೆ ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಡಾವಣೆಯಲ್ಲಿ ಪೋಲೀಸ್ ಠಾಣೆ ಪ್ರಾರಂಭಮಾಡಲು ಸಾರ್ವಜನಿಕರಿಂದ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಪೋಲೀಸ್ ಠಾಣೆ ಪ್ರಾರಂಭ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು)

ಅ) ಹೌದು

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಮಾರ್ಜಕ ಸಂಸ್ಥೆ ಮೊಹರು ಮತ್ತು ಚಿಹ್ನೆಯ ದುರುಪಯೋಗ.

990(109) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಮೊಹರು ಮತ್ತು ಚಿಹ್ನೆಯನ್ನು ದುರುಪಯೋಗಪಡಿಸಿಕೊಂಡು ನಕಲಿ ಗಂಧದ ಎಣ್ಣೆ ಮತ್ತು ಲೇಪನಗಳನ್ನು ಮಾರಾಟ ಮಾಡುವ ವ್ಯಾಪಕ ಜಾಲಾ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಈ ಹಿನ್ನಲೆಯಲ್ಲಿ, ಯಾರನ್ನಾದರೂ ಬಂಧಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಬಂಧಿಸಲ್ಪಟ್ಟವರು ಯಾರು ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ತಿಪ್ಪಗೊಂಡನಹಳ್ಳಿ ಜಲಾಶಯದ ದಂಡೆಯ ಮೇಲೆ ಡಿ.ಎಲ್.ಎಫ್ ಸಂಸ್ಥೆಗೆ ವರತಿ ಸಮುಚ್ಚಯ ಕಟ್ಟಲು ಅನುಮತಿ.

991(458) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತಿಪ್ಪಗೊಂಡನಹಳ್ಳಿ ಜಲಾಶಯದ ದಂಡೆಯ ಮೇಲೆ ಡಿ.ಎಲ್.ಎಫ್, ಸಂಸ್ಥೆಗೆ ವಸತಿ ಸಮುಚ್ಚಯ ಕಟ್ಟಲು ಯಾವಾಗ ಅನುಮತಿ ನೀಡಲಾಯಿತು.

2. ಈ ವಸತಿ ಸಮುಚ್ಚಯ ನಿರ್ಮಾಣ ಕುರಿತು ಬೆಂಗಳೂರು ಜಲಮಂಡಳಿ, ಪರಿಸರವಾದಿಗಳು ನಾಡಿನ ಹಿರಿಯ ಚಿಂತಕರು ವ್ಯಕ್ತಪಡಿಸಿರುವ ಅಡ್ಡಿ ಆತಂಕ ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ, ತಿಪ್ಪಗೊಂಡನಹಳ್ಳಿ ಕೆರೆ ಯಾವುದೇ ರೀತಿಯಿಂದ ಕಲುಶಿತವಾಗದಿರಲು ಸರ್ಕಾರ ಹಿಂದೆ ನೀಡಿದ್ದ ಆದೇಶವನ್ನು ಹಿಂದಕ್ಕೆ ಪಡೆಯಲು ತೆಗೆದುಕೊಂಡ ಕ್ರಮಗಳು.

ಶ್ರೀ ವಿ. ಸೋಮಣ್ಣ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :—

1. ಸರ್ಕಾರ ದಿನಾಂಕ : 26.9.91ರ ಆದೇಶದಲ್ಲಿ ಅನುಮತಿಯನ್ನು ನೀಡಲಾಯಿತು.

2. ಹೌದು

3. ಸರ್ಕಾರದ ಪರಿಶೀಲನೆಯಲ್ಲಿದೆ.

ಪೋಲೀಸ್ ಇಲಾಖೆಯ ವನಿತ ಸಹಾಯವಾಣಿ.

993(1404) ಶ್ರೀ ವಿ. ಶಿವರಾಜ್ (ಯಲಹಂಕ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೋಲೀಸ್ ಇಲಾಖೆಯು ವನಿತಾ ಸಹಾಯವಾಣಿಯನ್ನು ಪ್ರಾರಂಭಿಸಿದ ದಿನಾಂಕ ಯಾವುದು; ಸದರಿ ವಿಬಾಗಕ್ಕೆ ಯಾವ ಯಾವ ಸೌಲಭ್ಯ ನೀಡಲಾಗಿದೆ;

ಆ) ಸದರಿ ವಿಭಾಗಕ್ಕೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಇತ್ಯರ್ಥವಾದ ಪ್ರ ಕರಣಗಳ ಸಂಖ್ಯೆ ಎಷ್ಟು;

ಇ) 1999ರ ಫೆಬ್ರುವರಿ ಕೊನೆ ವಾರದಲ್ಲಿ ದಾಖಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳ ವಿಲೇವಾರಿಗೆ ತೆಗೆದುಕೊಂಡ ಕ್ರಮಗಳಾವುವು; (ವಿವರ ನೀಡುವುದು)

ಈ) ಇತ್ಯರ್ಥಗೊಂಡ ಪ್ರಕರಣಗಳಲ್ಲಿ ಕೊಂದರೆ ಮರುಕಳಿಸಿದಲ್ಲಿ ಯಾವ ರೀತಿಯಲ್ಲಿ ಪರಿಹಾರ ಸರ್ಕಾರ ದೊರಕಿಸಿಕೊಡುವುದು.

ಉ) ಯಾವ ಯಾವ ರೀತಿಯ ದೂರುಗಳನ್ನು ಈ ವಿಭಾಗದಲ್ಲಿ ದಾಖಲಿಸಿಕೊಳ್ಳಲಾಗುವುದು;

ಊ) ಸರಕಾರಿ ಕಛೇರಿಗಳಲ್ಲಿ ಮಹಿಳೆಯರಿಗೆ ಆಡಳಿತಾತ್ಮಕ ವಿಷಯದಲ್ಲಿ ನೀಡಬಹುದಾದ ಕಿರುಕುಳ ಮಾನಸಿಕ ಹಿಂಸೆ ಇದರ ವ್ಯಾಪ್ತಿಯಲ್ಲಿ ಬರುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ದಿನಾಂಕ : 23-1-99ರಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್‌ರವರ ಕಛೇರಿಯ ಆವರಣದಲ್ಲಿ ವನಿತಾ ಸಹಾಯವಾಣಿ ಪ್ರಾರಂಭಿಸಲಾಗಿದೆ. ವನಿತಾ ಸಹಾಯವಾಣಿಯನ್ನು 80 ಸಹಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಾರಂಭಿಸಲಾಗಿದೆ. ಪೊಲೀಸ್ ಇಲಾಖೆಯು ಸಹಯೋಗ ಮಾತ್ರ ಒದಗಿಸಿದ್ದು ಬೇರೆ ಯಾವ ರೀತಿಯ ವ್ಯವಸ್ಥೆ ಮಾಡಿರುವುದಿಲ್ಲ.

ಅ) ಮಾಹಿತಿ ಕರೆಗಳು	-	2662
ಆ) ನಿರ್ದಿಷ್ಟ ಸಮಸ್ಯೆಗಳ ಕರೆಗಳು-		272
	-	2934

272 ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿದೆ.

ಇ) ದಿನಾಂಕ: 22-2-99 ರಿಂದ 28-2-99ರವರೆಗೆ ಒಟ್ಟು 32 ಪ್ರಕರಣ ದಾಖಲಾಗಿದ್ದು, ಈ ಎಲ್ಲಾ ಪ್ರಕರಣಗಳು ವಿಲೇವಾರಿಯಾಗಿದೆ.

ಈ) ಇತ್ಯರ್ಥಗೊಂಡ ಪ್ರಕರಣಗಳಲ್ಲಿ ತೊಂದರೆ ಮರುಕಳಿಸಿದಲ್ಲಿ ವನಿತಾ ಸಹಾಯವಾಣಿ ಪುನರ್ ಸಲಹೆ ನೀಡುವುದು ಹಾಗೂ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವುದು.

ಬೆಂಗಳೂರು ನಗರ ಪೊಲೀಸರು ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ಸೂಕ್ತ ರೀತಿಯಲ್ಲಿ ಸ್ಪಂದಿಸಲು ಮತ್ತು ಈ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕರ ಸಹಯೋಗವನ್ನು ಪಡೆದುಕೊಳ್ಳಿಸುವುದಕ್ಕಾಗಿ ಈ ಸಹಾಯ ವಾಣಿಯನ್ನು ಪ್ರಾರಂಭಿಸಿದ್ದಾರೆ. ತೊಂದರೆಗೆ ಒಳಗಾದ ಮಹಿಳೆಯರಿಗೆ ಸಾರ್ವಜನಿಕ ಸೇವಾ ಸಂಸ್ಥೆಗಳು ಮತ್ತು ಸ್ವಯಂ ಸೇವಕರ ನೆರವಿನಿಂದ ಈ ಕೆಳಕಂಡ ನೆರವು ನೀಡಲಾಗುತ್ತದೆ.

1) ಕೌಟುಂಬಿಕ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಸೂಚಿಸುವುದು.

2) ಸಂಕಷ್ಟದಲ್ಲಿರುವ ಮಹಿಳೆಯರಿಗೆ ತಕ್ಷಣ ಹೊಂದಿದ ಸ್ವಯಂ ಸೇವಕರ : ಪೊಲೀಸ್ ಸಹಾಯವನ್ನು ದೊರಕಿಸಿಕೊಡುವುದು.

3) ಕೌಟುಂಬಿಕ ಕಲಹದಿಂದಾಗಿ ದಿಕ್ಕು ತಪ್ಪಿದ ಮಹಿಳೆಯರಿಗೆ ತಾತ್ಕಾಲಿಕ ನೆಲೆಯನ್ನು ಒದಗಿಸುವುದು.

ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ಸೂಕ್ತ ಸಹಾಯವನ್ನು ನೀಡುವುದು ಸಹ ಈ ಸಹಾಯವಾಣಿಯ ಉದ್ದೇಶವಾಗಿದೆ. ಈ ಮಹಿಳೆಯರೂ ಯಾವುದೇ ರೀತಿಯ ಶೋಷಣೆ, ಹಿಂಸೆಯ ಬಗ್ಗೆ ದೂರನ್ನು ನೀಡಬಹುದು. ಅಂತಹ ದೂರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಸದರಿಗೆ ಸೌಲಭ್ಯ.

995(1301) ಶ್ರೀ ಶಿವಾನಂದ ನಾಯಕ (ಬಿಟ್ಟಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದ ಸಂಸತ್ ಸದಸ್ಯರುಗಳಿಗೆ ರಾಜ್ಯ ಸರ್ಕಾರವು ಒದಗಿಸಿರುವ ಸೌಲಭ್ಯಗಳು ಯಾವುವು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ದಿನಾಂಕ 26-06-1993ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 153 ಶಿವಾನೀ 93 ರಲ್ಲಿ ಸಂಸತ್ ಸದಸ್ಯರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1) ಸಂಸತ್ ಸದಸ್ಯರುಗಳು ಸಂದರ್ಶನ ಮತ್ತು ಕಾರ್ಯಕಲಾಪಗಳನ್ನು ನಿರ್ವಹಿಸಲು ಒಂದು ಕೊಠಡಿ;

2) ಒಬ್ಬ ಶೀಘ್ರಲಿಪಿಗಾರರು;

3) ವಾಹನ ಹಾಗೂ ವಾಹನ ಚಾಲಕರು.

ವಿದ್ಯುತ್ ಸಂಪರ್ಕ ಸಕ್ರಮ.

996(783) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಯಾವ ದಿನಾಂಕದವರೆಗೆ ಸಕ್ರಮಗೊಳಿಸಲಾಗುವುದು, ಇದರಿಂದ ಸರ್ಕಾರಕ್ಕೆ ಆದ ನಷ್ಟ ಅಥವಾ ಲಾಭವೆಷ್ಟು?

ಆ) ಈ ರೀತಿ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ವಿದ್ಯುತ್ ಸಂಪರ್ಕ ವ್ಯವಸ್ಥೆಗಳಲ್ಲಿ ಆಗುವ ತೊಂದರೆಗಳ ಬಗ್ಗೆ ಸರ್ಕಾರ ಮಹಿಸಿರುವ ಪರ್ಯಾಯ ವ್ಯವಸ್ಥೆಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂದನ ರಾಜ್ಯ ಸಚಿವರು) :—

ಅ) ಅಕ್ರಮವಾಗಿ ಸಂಪರ್ಕಗಳನ್ನು ಪಡೆದ ನೀರಾವರಿ ಪಂಪ್‌ಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲು ನಿಗದಿಪಡಿಸಲಾಗಿದ್ದ ಅಂತಿಮ ದಿನಾಂಕ: 26-3-99. ಈ ಸಕ್ರಮೀಕರಣದ ಬಾಬ್ತು ಮಂಡಡಳಿಯು 26-3-99ರ ಅಂತ್ಯಕ್ಕೆ, ಒಟ್ಟು 34.77 ಕೋಟಿ ರೂ.ಗಳ ಶಲ್ಕವನ್ನು ವಸೂಲು ಮಾಡಲಾಗಿದೆ. ಈ ಮೊತ್ತವು ಸಕ್ರಮೀಕರಣದ ಬಗ್ಗೆ ವಸೂಲು ಮಾಡಿದ ಹಣವಾದ್ದರಿಂದ ಇದರಲ್ಲಿ, ಲಾಭ ಅಥವಾ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮಂಡಳಿಯು ವಿದ್ಯುತ್ ಮಾರ್ಗಗಳ ಬಲವರ್ಧನೆ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರ ಮೂಲಕ ಅಕ್ರಮ ನೀರಾವರಿ ಪಂಪುಸೆಟ್ಟುಗಳ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ಸಂಪರ್ಕ ವ್ಯವಸ್ಥೆಗಳಲ್ಲಿ ಆದ ತೊಂದರೆಯನ್ನು ನಿವಾರಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

ಅಂತರ್ಜಲ ಅಭಿವೃದ್ಧಿ.

997(1437) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

ಆ) ಈ ಕಾರ್ಯಕ್ರಮಗಳಿಗೆ 1996-97, 1997-98 ಮತ್ತು 1998-99 ಸಾಲಿನಲ್ಲಿ ಒದಗಿಸುದ ಯೋಜನಾ ವೆಚ್ಚವೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) ಖರ್ಚಾದ ಹಣವೆಷ್ಟು?

ಶ್ರೀ ತಿಪ್ಪಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಅಂತರ್ಜಲ ಅಭಿವೃದ್ಧಿ ಸಲುವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಅಂತರ್ಜಲ ಕೃತಕ ಮರು ಪೂರ್ಣಕ್ಕೆ ರಚನೆಗಳಾದ ಅಣ್ಣಗೋಡಿ, ಇಂಗು ಬಾವಿ, ಕೃತಕ ಹೈಕ್ ಹಾಗೂ ಗೋಕಟ್ಟೆಗಳಲ್ಲಿ ಹೂಳೆತ್ತುವ ನಿರ್ಮಾಣದ ಕಾರ್ಯಕ್ರಮಗಳನ್ನು ಪ್ರಯೋಗಾತ್ಮಕವಾಗಿ ಹಮ್ಮಿಕೊಂಡಿದೆ.

ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ - 1

ಕಳೆದ 3 ವರ್ಷಗಳಿಂದ ಆಂತರ್ಜಲ ಅಭಿವೃದ್ಧಿಗೆ ಜಿಲ್ಲಾವಾರು ಒದಗಿಸಿದ ಹಣ ಮತ್ತು ಖರ್ಚುಗಳ ವಿವರ

(ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	96-97	ಖರ್ಚಾದ ಹಣ	97-98	ಖರ್ಚಾದ ಹಣ	98-99	ಖರ್ಚಾದ ಹಣ	ಷರಾ
1.	ಬೆಂಗಳೂರು	7.00	7.00	39.38	39.38	18.315	--	
2.	ಬಿಜಾಪುರ	--	--	5.35	5.35		--	
3.	ಬೆಳಗಾವಿ	1.00	1.00	--	--	25.99	--	
4.	ಬೀದರ್	--	--	3.50	3.50	7.88	--	
5.	ಬಳ್ಳಾರಿ	2.00	2.00	2.22	2.22	10.91	--	
6.	ಚಿತ್ರದುರ್ಗ	2.90	2.90	3.60	3.60	28.06	--	
7.	ಚಿಕ್ಕಮಗಳೂರು	1.98	1.98	5.95	5.95	--	--	
8.	ಧಾರವಾಡ	2.00	2.00	0.95	0.95	--	--	
9.	ದಕ್ಷಿಣ ಕನ್ನಡ	1.00	1.00	3.00	3.00	--	--	
10.	ಗುಲ್ಬರ್ಗ	--	--	2.00	2.00		--	
11.	ಹಾಸನ	--	--	2.50	2.50	6.55	--	
12.	ಕೋಲಾರ	8.00	8.00	19.60	19.60	--	--	
13.	ಮಂಡ್ಯ	--	--	2.00	2.00	--	--	
14.	ಮೈಸೂರು	3.77	3.77	5.25	5.27	16.805	--	
15.	ರಾಯಚೂರು	1.00	1.00	2.00	2.00	--	--	
16.	ಶಿವಮೊಗ್ಗ	3.65	3.65	--	--	4.00	--	
17.	ತುಮಕೂರು	--	--	4.20	4.20	20.72	--	
18.	ಉತ್ತರ ಕನ್ನಡ	2.00	2.00	--	--	--		
	ಒಟ್ಟು	36.30	36.30	96.16	96.16	139.23		

ಕಾರಾಗೃಹದಲ್ಲಿ ಖೈದಿಗಳ ಶೋಷಣೆ.

998(1438) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಬಂಧೀಖಾನೆ, ಗೃಹರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ವಿವಿಧ ಕಾರಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳ ಒಟ್ಟು ಸಂಖ್ಯೆ ಎಷ್ಟು; ಆ ಪೈಕಿ ಮಹಿಳಾ ಕೈದಿಗಳ ಸಂಖ್ಯೆ ಎಷ್ಟು;

ಆ) ಕೋರ್ಟಿನಲ್ಲಿ ತನಿಖೆ ಎದುರುಸುತ್ತಿರುವ ಆರೋಪಿಗಳ ಸಂಖ್ಯೆ ಎಷ್ಟು;

ಇ) ಇವರಲ್ಲಿ ಮಹಿಳಾ ಕೈದಿಗಳ ಸಂಖ್ಯೆ ಎಷ್ಟು;

ಈ) ಪ್ರತಿ ಕೈದಿಗಳಿಗೆ ಸರ್ಕಾರ ಮಾಡುತ್ತಿರುವ ವೆಚ್ಚವೆಷ್ಟು;

ಉ) ವಿವಿಧ ಕಾರಾಗೃಹಗಳಲ್ಲಿ ಜೈಲರುಗಳು ಕೈದಿಗಳನ್ನು ಶೋಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು;

ಶ್ರೀ ಬಸವರಾಜ್ ನೀಲಗಪ್ಪ ಶಿವಣ್ಣನವರ್ (ಬಂಧೀಖಾನೆ, ಗೃಹರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :—

ಅ) ದಿನಾಂಕ: 15-03-99 ರಂದು ರಾಜ್ಯದ ವಿವಿಧ ಕಾರಾಗೃಹದಳಗಳಲ್ಲಿ ಒಟ್ಟು 1377 ಶಿಕ್ಷೆ ಅನುಭವಿಸುತ್ತಿರುವ ಕೈದಿಗಳು ಇದ್ದು ಅವರಲ್ಲಿ 27 ಮಹಿಳಾ ಕೈದಿಗಳು ಇರುತ್ತಾರೆ.

ಆ) ದಿನಾಂಕ :15-03-99 ರಂದು 6907 ಜನ ತನಿಖೆ ಎದುರಿಸುತ್ತಿರುವ ಖೈದಿಗಳು ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಇದ್ದರು. ಅವರಲ್ಲಿ 230 ಜನ ಮಹಿಳಾ ಖೈದಿಗಳು.

ಈ) ಪ್ರತಿ ಖೈದಿಗೆ ದಿನಕ್ಕೆ ಸರಾಸರಿ ಆಡಳಿತಾತ್ಮಕ ವೆಚ್ಚ 70.86 ರೂ.ಗಳು ಹಾಗೂ ಆಹಾರ ವೆಚ್ಚ ರೂ. 17.80 ರೂ.ಗಳು.

ಉ) ಅಂತಹ ಯಾವುದೇ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ನೀರಾವರಿ ಯೋಜನೆಗಳು.

1001(394) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. 1978 ಇಸವಿಯಿಂದ ಈವರೆವಿಗೂ ಎಷ್ಟು ಬೃಹತ್ ನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೆತ್ತಿಕೊಂಡಿದೆ. ಈ ಯೋಜನೆಗಳಾವುವು?

2. ಈ ಯೋಜನೆಗಳಿಗೆ ಅಂದಾಜು ಮಾಡಲಾದ ವೆಚ್ಚವೆಷ್ಟು ಹಾಗೂ ಈ ಯೋಜನೆಗಳನ್ನು ಎಷ್ಟು ವರ್ಷದಲ್ಲಿ ಮುಗಿಸಲು ಯೋಜಿಸಲಾಗಿತ್ತು?

3. ಈ ಯೋಜನೆಗಳಿಗೆ 1978 ರಿಂದ ಪ್ರತಿ ವರ್ಷ ಒದಗಿಸಲಾದ ಹಣವೆಷ್ಟು?

4. ಈ ಯೋಜನೆಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ ಹಾಗೂ ಈ ಯೋಜನೆಗಳು ಪೂರ್ಣಗೊಳ್ಳು ಬೇಕಾಗುವ ಕಾಲಾವಧಿ ಎಷ್ಟು? (ಯೋಜನಾವಾರು ವಿವರ ನೀಡುವುದು)

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :—

1. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

Details enclosed in Annexure - 1

2. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

Details enclosed in Annexure - 1

3. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

Details enclosed in Annexure - 1

4. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

Details enclosed in Annexure - 1

ಅನುಬಂಧ-1

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಅಂದಾಜಿನ ಮೊತ್ತ	ಪೂರ್ಣಗೊಳಿಸಲು ಯೋಜಿಸಲಾಗಿದ್ದ ವರ್ಷ ಮತ್ತು ಬೇಕಾಗುವ ಅವಧಿ.	ಈಗ ಪೂರ್ಣಗೊಳಿಸಲು ಬೇಕಾಗಿರುವ ಹಣ
1.	ಭೀಮಾ ಏತ ನೀರಾವರಿ	153.00	ಈ ಯೋಜನೆಗಳು ಕೃಷ್ಣಾ ಕೊಳ್ಳದಲ್ಲಿ ಬರುತ್ತಿದ್ದು	147.31
2.	ದೂದಗಂಗಾ	110.00	ಇವುಗಳ ಕ್ಯಾಚಕಲ್ ಕಾಮಗಾರಿಗಳನ್ನು 2000ನೇ	98.21
3.	ಕೃಷ್ಣಾ ಮೇಲ್ದಂಡೆ ಯೋಜನೆ-2	750.00	ಇಸವಿಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.	2786.17
4.	ತುಂಗಾ ಮೇಲ್ದಂಡೆ	271.41		846.22
5.	ಮಾರ್ಕಂಡೇಯ	134.53		125.87
6.	ರಾಮಥಾಲ ಏತ ನೀರಾವರಿ	98.54		98.54
7.	ಸಿಂಗಟಾಲೂರು	102.26		101.16
8.	ಡಿ.ಡಿ. ಆರ್‌ಸ್ ಕಾಲುವೆ	18.50	ಈ ಯೋಜನೆಯನ್ನು 2000ನೇ ಇಸವಿಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.	26.99
9.	ಕೆ.ಆರ್.ಎಸ್. ಆಧುನೀಕರಣ	14.80	ಈ ಯೋಜನೆಯನ್ನು 2000ನೇ ಇಸವಿಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.	107.65
10.	ಯಗಚಿ	35.38	ಈ ಯೋಜನೆಯನ್ನು 2000ನೇ ಇಸವಿಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.	135.92
11.	ವರಾಹಿ	9.43	ಈ ಯೋಜನೆಯು ಪಶ್ಚಿಮಾಭಿಮುಖ ನದಿಯ ಯೋಜನೆಯಾಗಿದ್ದು ಇದನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿ ನಿರ್ಬಂಧ ಇರುವುದಿಲ್ಲ, ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದ ಅನುಮತಿ ದೊರೆತ ನಂತರ ಯೋಜನೆಯನ್ನು ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗುವುದು.	104.08

Grants provided from 1978 to 1999

(Rs. in crores)

Projects	1978	1979	1980	1981	1982	1983	1984	1985	1986	1987	1988
1. Bhima Left	0.00	0.00	0.00	0.00	0.00	0.00	0.00	0.00	0.00	0.00	0.20
2. Dudhganga	0.00	0.00	0.00	0.00	0.00	0.00	0.00	0.00	0.00	0.00	1.75
3. UKP-2	0.00	0.00	0.00	0.00	0.00	0.00	0.00	0.00	0.00	0.00	0.00
4. UTP	0.00	0.00	0.00	0.00	0.00	0.00	0.00	0.00	0.00	0.00	0.25
5. D.D Urs Canal	0.00	0.20	0.40	0.80	0.80	2.00	2.20	3.00	2.50	2.50	5.00
6. KRS Modn.	0.00	0.00	0.00	0.50	0.40	0.30	2.00	3.00	2.00	2.50	5.00
7. Yagachi	0.00	0.00	0.00	0.00	0.00	0.00	0.25	1.50	0.50	1.00	2.499
8. Varahi	0.00	0.00	0.00	0.65	0.84	0.52	0.50	0.50	0.46	0.24	0.50
9. Markandeya	0.00	0.00	0.00	0.00	0.00	0.00	0.00	0.00	0.00	0.00	0.25
10. Ramthal	0.00	0.00	0.00	0.00	0.00	0.00	0.00	0.01	0.01	0.01	0.49
11. Singathur	0.00	0.00	0.00	0.00	0.00	0.00	0.00	0.00	0.00	0.00	0.00

Projects	1989	1990	1991	1992	1993	1994	1995	1996	1997	1998	1999
1. Bhima Left	0.20	0.10	0.05	0.00	0.30	3.00	1.50	1.50	1.00	4.00	0.50
2. Dudhganga	1.00	0.50	1.00	1.00	2.00	4.00	3.00	3.00	3.00	3.00	1.00
3. UKP-2	0.00	0.00	0.00	0.00	0.00	0.00	0.00	0.00	0.00	0.00	0.00
4. UTP	0.25	0.10	0.05	2.00	2.50	2.00	4.00	7.50	8.00	10.00	4.50
5. D.D Urs Canal	3.55	5.00	5.00	5.00	8.00	12.00	25.00	32.00	32.00	40.00	45.00
6. KRS Modn.	5.00	3.50	1.00	5.00	6.00	14.00	25.00	32.00	32.00	40.00	45.00
7. Yagachi	1.35	3.00	5.00	6.00	15.00	20.00	25.00	25.00	25.00	15.00	15.00
8. Varahi	0.50	0.20	1.00	0.49	040	4.25	10.65	5.00	3.00	3.00	1.00
9. Markandeya	0.30	0.10	0.05	0.00	0.50	1.00	0.50	0.50	0.50	1.00	1.00
10. Ramthal	0.50	0.10	0.05	0.00	0.10	0.10	0.50	1.00	0.50	0.50	0.20
11. Singathur	0.00	0.00	0.00	0.00	0.00	0.50	0.10	0.10	0.10	0.20	0.20

ಸ್ವಾತಂತ್ರಯೋಧರ ಮಕ್ಕಳಿಗೆ ಉದ್ಯೋಗದಲ್ಲಿ ಆದ್ಯತೆ.

1002 (1477) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಉದ್ಯೋಗ ಕೊಡುವಾಗ ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ಆದ್ಯತೆ ಕೊಡಬೇಕೆಂದು ಸರ್ಕಾರ ಸುತ್ತೋಲೆ ಹೊರಡಿಸಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳು ಯಾವುದು;

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :—

ಅ) ಇದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಉದ್ಭವಿಸುವುದಿಲ್ಲ

Modernisation of State Intelligence Wing.

1003 (1479) Sri. N. Yogish Bhat, (Mangalore) :— Will the Home Minister be pleased to state:

a) What action has been taken by the Government for modernising the State Intelligence Wing, and what action has been taken in respect of Dakshina Kannada District in this regard?

b) Action taken for improvement of Police quanters at Nehru Maidan and Shakti Nagar and also action taken to provide basic facilities.

c) What are the septs taken by the Government for the construction of New Police Station Buildings for Kadri and Urva?

Sri P.G.R. Sindya (Home Minister) :—

a) Modernisation has been effected in infrastructure facilities like computerisation, Vehicles etc.,

Equipments have been purchased to State Intelligence Wing. For Dakshina Kannada District no specific equipment was purchased.

b) Details have been furnished in the Annexure.

1) Land has been sanctioned in 1974 in Sy. No.268/3A divided from Sy.No.266/3 A A2 measuring 0.31 acres in Khadri village for construction of Kadri Police Station Building.

2) Land has been sanctioned in 1988 measuring 0.40 acres in Sy.No. 126/21.1A 3 in Derebail village for the construction of Urva Police Station Building.

c) Due to paucity of funds, construction of new buidings for the police Stations could not be taken up so far.

ANNEXURE

Sl. No.	Year	Construction undertaken	Sanctioned Amount Rs.
1.	1994-95	Repairs to 140 Police quarters at Mangalore. (Roofing, drainage, and water supply works etc.,)	15,00,000-00
2.	1995-96	Repairs to 52 quarters and Electricity work for 48 quarters at Mangalore	6,82,231-00
3.	1996-97	Reparis to 68 quarters at Mangalore	22,31,560-00
4.	1997-98	Drainage work and repairs to 20 quarters at Mangalore	1,00,000-00
5.	1998-99	1. New toilets to the 106 quarters at Mangalore	6,50,000-00
		2. Repair works to the quarters at Mangalore as well as Shakthinagar.	17,00,000-00

ಮಂಗಳೂರು ನಗರದಲ್ಲಿ ಕಳಪೆ ಮಟ್ಟದ ಪಡಿತರ ಆಹಾರ ಪದಾರ್ಥಗಳ ವಿತರಣೆ.

1004(1480) ಶ್ರೀ ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮಂಗಳೂರು ನಗರದಲ್ಲಿ ಕಳಪೆ ಮಟ್ಟದ ಅಕ್ಕಿಯನ್ನು ಪಡಿತರ ವ್ಯವಸ್ಥೆಯ ಮೂಲಕ ವಿತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳು ಯಾವುವು?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಹೌದು

ಆ) ಕಳೆದ 6 ತಿಂಗಳುಗಳಿಂದ ಕೇಂದ್ರ ಸರ್ಕಾರವು ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಸರಬರಾಜು ಮಾಡಿರುವ ಅಕ್ಕಿಯ ಗುಣಮಟ್ಟವು ಕಳಪೆಯಾಗಿರುತ್ತದೆ. ಈ ಮಾದರಿಯ ಸ್ವಲ್ಪ ಪ್ರಮಾಣದ ಅಕ್ಕಿಯ ಗುಣಮಟ್ಟ, ಶೇಖರಣೆಯಲ್ಲಿ ಸಮಸ್ಯೆಗಳಾಗಿರುವುದರಿಂದ ಸಾರ್ವಜನಿಕರು ಈ ಅಕ್ಕಿಯನ್ನು ಸ್ವೀಕರಿಸಲು ಹಿಂಜರಿಯುತ್ತಿರುವುದು ಕಂಡುಬಂದಿರುತ್ತದೆ. ಈ ಮಾದರಿಯ ಸ್ವಲ್ಪ ಪ್ರಮಾಣದ ಅಕ್ಕಿಯ ಗುಣಮಟ್ಟ, ಶೇಖರಣೆಯಲ್ಲಿ ಸಮಸ್ಯೆಗಳಾಗಿರುವುದರಿಂದ ಸಾರ್ವಜನಿಕರು ಈ ಮಾದರಿಯ ಅಕ್ಕಿಯನ್ನು ಎತ್ತುವಳಿ ಮಾಡಲಾರದೆಂದು ಸೂಚನೆ ನೀಡಲಾಗಿದೆ. ಭಾರತ ಆಹಾರ ನಿಗಮದಿಂದ ಒದಗಿಸುವ ಅಕ್ಕಿಯ ಗುಣಮಟ್ಟ ಶೇಖರಣೆಯಲ್ಲಿದ್ದಲ್ಲಿ, ಅಂತಹ ಅಕ್ಕಿಯ ಮಾದರಿಯನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆ ಅಕ್ಕಿಯ ಗುಣಮಟ್ಟ ನಿಗಧಿತ ಪಿಎಫ್ಎ ಗುಣಮಟ್ಟಕ್ಕೆ ಇದೆಯೆ ಎಂಬುದನ್ನು ವಿಶ್ಲೇಷಿಸಲಾಗುತ್ತಿದೆ. ಅಲ್ಲದೆ ಈ ಕಳಪೆ ಗುಣಮಟ್ಟದ ಅಕ್ಕಿಯನ್ನು ಭಾರತೀಯ ಆಹಾರ ನಿಗಮದಿಂದ ಕೊಳ್ಳುವಾಗಲೇ ತಿರಸ್ಕರಿಸಲು ಸಗಟು ನಾಮಿನಿದಾರರಿಗೆ ತಿಳಿಸಲಾಗಿದೆ.

4. ವರದಿಗಳನ್ನೊಪ್ಪಿಸುವುದು

ಶ್ರೀ ಸೊಮ್ಮಾಡಾಯಳ್ :— ಅಧ್ಯಕ್ಷರೇ ಸಾರ್ವಜನಿಕ ಉದ್ದಿಮೆಗಳ ಅಧ್ಯಕ್ಷನಾದ ನಾನು 1979-80ನೇ ಸಾಲಿನ ವರದಿಯನ್ನು ಸಭೆಯ ಮುಂದೆ ಹೊಂದಿಸುತ್ತೇನೆ.

ಅಧ್ಯಕ್ಷರು :— ಮಂದಿಸಲಾಯಿತು. ಈಗ ಶೂನ್ಯವೇಳೆ.

(ಶ್ರೀಮತಿ ಬಿ.ಟಿ ಲಲಿತಾನಾಯಳ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

5 ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ :— ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಗೋದಾವರಿ ಡೈವರ್ಷನ್ ಸ್ಕೀಂ ಕುರಿತು ಹೇಳಿಕೆ ನೀಡಿರುವುದು.-

+ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬುನಾಯ್ಡು ಗೋದಾವರಿ ಡೈವರ್ಷನ್ ಸ್ಕೀಂ ಬಗ್ಗೆ ಹೇಳಿಕೆ ನೀಡಿದ್ದಾರೆ ಏನೂಂದರೆ ಅದಕ್ಕೊಂದು ಅಥಾರಿಟಿ ಕ್ರಿಯೇಟ್ ಮಾಡಿ ಆದಷ್ಟು ಬೇಗನೆ ಗೋದಾವರಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕೆಂಬುದು. ಅದರಲ್ಲಿ ನಮ್ಮದೂ ಇಂಟರೆಸ್ಟ್ ಇದೆ. ಬಚಾವತ್ ಅವಾರ್ಡ್ ಪ್ರಕಾರ ಗೋದಾವರಿ ನೀರು ನಮ್ಮ ನಾಲೆಗೂ ಬರಬೇಕು 1978ರಲ್ಲಿ ಚೆನ್ನಾರೆಡ್ಡಿ ಮತ್ತು ಶ್ರೀಮಾನ್ ದೇವರಾಜಅರಸರ ಮಧ್ಯೆ ಕರಾರು ಆಗಿ ನಾವು ಎಷ್ಟು ನೀರು ಉಪಯೋಗ ಮಾಡಬೇಕು ಮತ್ತು ಪೊಲ್ಲಾವರಂ ನದಿಯನ್ನು ಡೈವರ್ಟ್ ಮಾಡಿದರೆ ನಮಗೆ ಅನುಕೂಲವಾಗುತ್ತದೆ ಎಂದು ಒಪ್ಪಿಕೊಂಡಿದ್ದರು. ಅದರ ಪ್ರಕಾರವೇ ನಮಗೂ ಸುಮಾರು 21 ಟಿಎಂಸಿ ನೀರು ಬರಬೇಕು, ಎರಡು ಟಿಎಂಸಿ ನೀರು ರಿಜನರೇಶನ್‌ಗೆ. ಆ ಪ್ರಕಾರ ಒಟ್ಟು 23 ಟಿಎಂಸಿ ನೀರು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಅವರು ಈಗ ತರಾತುರಿಯಲ್ಲಿ ಕೇಂದ್ರ ಸರ್ಕಾರಕ್ಕೆ ಹೋಗಿ ಅದನ್ನು ಅಪ್ರೂವ್ ಮಾಡಿಕೊಂಡು ಬರಬೇಕೆಂದಿದ್ದಾರೆ. ಅದಕ್ಕಾಗಿ ನಮ್ಮ ಸರ್ಕಾರದಲ್ಲಿ ಇದರ ಬಗ್ಗೆ ಮಾಹಿತಿ ಇದೆಯಾ? ಅಥವಾ ನೀವೇನಾದರೂ ಇದರ ಬಗ್ಗೆ ಕ್ರಮ ಜರುಗಿಸಿದ್ದೀರಾ? ಈ ಅಥಾರಿಟಿ ಮಾಡುವ ಬಗ್ಗೆ ನಿಮ್ಮನ್ನೇನಾದರೂ ಕೇಳಿದ್ದಾರಾ? ಎಂಬ ವಿವರಣೆಗಳನ್ನು ಕೊಟ್ಟರೆ ಒಳ್ಳೆಯದು ಇಲ್ಲಾಂದರೆ ಅವರು ತಕ್ಷಣ ಮಾಡಿಕೊಳ್ಳುವ ಸಾಧ್ಯತೆ ಕೂಡ ಇದೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ಎತ್ತಿರುವ ವಿಚಾರ ಬಹಳ ಮಹತ್ತರವಾದುದು. ಗೋದಾವರಿ ಡೈವರ್ಶನ್ ಅಂದರೆ ಪೊಲ್ಲಾವರಂ ಡೈವರ್ಶನ್ ಸ್ಕೀಂ ಬಂದಾಗ ಮಾತ್ರ ನಮಗೆ ಬರುತ್ತದೆ. ಪೊಲ್ಲಾವರಂ ಸ್ಕೀಂನಲ್ಲಿ 80 ಟಿಎಂಸಿ ನೀರಿದೆ, ಕರ್ನಾಟಕದ ಶೇರು ತಾವು ಹೇಳಿದ ಹಾಗೆ 21 ಪ್ಲಸ್ ಎರಡು ಒಟ್ಟು 23 ಟಿಎಂಸಿ, ಆಂಧ್ರ 45 ಟಿಎಂಸಿ, ಮಹಾರಾಷ್ಟ್ರ 12 ಟಿಎಂಸಿ ನಾವೂ ಕೂಡ 23 ಟಿಎಂಸಿಗೆ ಖಾಗ್ನ ಭೀಮಾ ಪ್ರೋ ಮುಂತಾದವುಗಳಿಗೆ ಮಾಸ್ಟರ್ ಪ್ಲಾನ್ ಮಾಡಿಕೊಂಡಿದ್ದೇವೆ. ಎರಡು ಟಿಎಂಸಿ ಖಾಗ್ನಗೆ, 9 ಟಿಎಂಸಿ ಭೀಮಾ ಪ್ರೋಗೆ ಇಟ್ಟಿರುವುದು. ಈಗಾಗಲೇ ಸಿಡಬ್ಲ್ಯುಸಿ ಕ್ಲಿಯರೆನ್ಸ್‌ಗಾಗಿ ನಾವು ಕಾಯುತ್ತಿದ್ದೇವೆ. ನಾವು ಕೂಡ ಅನೇಕ ಪತ್ರಗಳನ್ನು ಬರೆದಿದ್ದೇವೆ. ಪೊಲ್ಲಾವರಂ ಡೈವರ್ಶನ್ ಸ್ಕೀಂ ತಂದರೆ ನಮಗೆ ಅನುಕೂಲವಾಗುತ್ತದೆಯೆಂದು ಕೇಂದ್ರವನ್ನು ಅನೇಕ ಸಲ ಒತ್ತಾಯಿಸಿದ್ದೇವೆ. ಇದಕ್ಕೆ ಎರಡು ಸಾವಿರ ವರ್ಷದ ಟೈಂಬೌಂಡ್ ಇಲ್ಲ. ಗೋದಾವರಿ ಡೈವರ್ಶನ್ 'ಎ' ಸ್ಕೀಂ ಒಳಗಡೆ ಬರುವುದಿಲ್ಲ. 'ಬಿ' ಸ್ಕೀಮಿನಲ್ಲಿ ಬರುತ್ತದೆ.

ಆದರೂ ಕೂಡ ಇದು ಬಹಳ ಮಹತ್ವ ಇದೆ. ಗೋದಾವರಿ ಸ್ಕೀಮಿನಲ್ಲಿ ಪೊಲ್ಲಾವರಂ ಡೈವರ್ಶನ್ ಸ್ಕೀಂ ಮಾಡಬೇಕೂಂತ ಒತ್ತಾಯ ಮಾಡಿದ್ದೇವೆ. ಮೊನ್ನೆ ಕೂಡ ಕಾರ್ಯದರ್ಶಿಗಳ ಸಭೆ ನಡೆದು ಅದಕ್ಕೆ ಸೆಂಟ್ರಲ್ ವಾಟರ್ ಕಮೀಶನ್ ಕಾರ್ಯದರ್ಶಿಯೂ ಬಂದಿದ್ದರು. ನಾನು ಅಲ್ಲಿ ಭಾಷಣ ಮಾಡುವಾಗಲೇ ಹೇಳಿದೆ; ಗಂಗಾಕಾವೇರಿ ಸೇರಿಸುವುದಕ್ಕಿಂತ ಬಚಾವತ್ ಮತ್ತಿತರ ಅವಾರ್ಡ್ಸ್‌ನಲ್ಲಿ ಡೈವರ್ಶನ್ ಸ್ಕೀಮ್ಸ್ ಯಾವುಯಾವುದು ಕೊಟ್ಟಿದ್ದಾರೆ ಅವುಗಳನ್ನು ಕೇಂದ್ರ ಸರ್ಕಾರ ಕೂಡಲೇ ಕ್ಲಿಯರೆನ್ಸ್ ಕೊಡಬೇಕೆಂದು ಒತ್ತಾಯಮಾಡಿದೆ. ಆ ರೀತಿ ಮತ್ತೊಂದು ಸಲ ನಾವು ಒತ್ತಾಯಮಾಡಿ ಪೊಲ್ಲಾವರ ಸ್ಕೀಮನ್ನು ಕೇಂದ್ರ ಜಸ ಆಯೋಗ ಕ್ಲಿಯರ್ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇವೆ. ಸಾಧ್ಯವಾದರೆ ಮುಖ್ಯಮಂತ್ರಿಗಳಿಂದ ಪ್ರಧಾನಮಂತ್ರಿಗಳಿಗೆ ಕಾಗದ ಬರೆಸಿ ಸಿಡಬ್ಲ್ಯುಯಿಂದ ಕ್ಲಿಯರೆನ್ಸ್ ಬರುವಂತೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಅವರೇ ಕೊಟ್ಟಿರುವ ಈ ಪುಸ್ತಕದಲ್ಲಿ, ಇದು 1996 ರಲ್ಲಿ ಪ್ರಕಟಿಸಿರುವುದು, ಅದರಲ್ಲಿ ಏನು ಹೇಳಿದ್ದಾರೆ ಅಂದರೆ,

"Under the Godavari Water Tribunal Award 80 TMC of Godavari water is being diverted to River Krishna through Pollavaram project. Out of these waters, Karnataka is entitled to use additional 21 TMC of water in Krishna basin. Considering 2 TMC of regenerated water, Karnataka's share thus comes to 757 TMC in Krishna basin. As per the Agreement dated 4.8.78 between the Hon'ble Chief Ministers of Andhra Pradesh and Karnataka, the Government of Andhra Pradesh was to seek clearance from the Central Water Commission for the Pollavaram Project within three months.....

1978ರಲ್ಲಿ ಏನು ಕರಾರು ಆಗಿತ್ತು ಅದರ ಮೂರು ತಿಂಗಳೊಳಗಾಗಿ ತೆಗೆದುಕೊಳ್ಳಬೇಕಾಗಿತ್ತು

``....from the date of agreement between the Chief Ministers of Godavari Basin States, Karnataka can utilise its share of water as soon as the Central Water Commission grants clearance to Pollavaram Project without waiting for its implementation. Though Godavari Water Disputes Tribunal gave its report on 27.11.1979, it is a matter of great concern to note....."

ಎಂದು ನೀವೇ ಹೇಳಿದ್ದೀರಿ. ಅದಕ್ಕೆ ನಾನು ಹೇಳುತ್ತೇನೆ. (ಬ) ಸ್ಕೀಮಿನಲ್ಲಿರುವುದರಿಂದ ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಮಧ್ಯೆ ಆದ ಒಪ್ಪಂದ, ಈಗಾಗಲೇ ಪ್ರಾರಂಭ ಮಾಡಬೇಕಾಗಿತ್ತು. ಹಾಗ್ನ ಸೇಡಂ ತಾಲ್ಲೂಕಿನಲ್ಲಿರುವ ಒಂದು ಯೋಜನೆ. ಭೀಮಾ ಪ್ಲೋ ಯಾದಗಿರಿಯಲ್ಲಿ ಬರುವ ಯೋಜನೆ. ಭೀಮಾ ಪ್ಲೋ ಅನ್ನು ಬದಲಾಯಿಸಿ ಬೇರೆ ದಿಸ ಮಾಡಬೇಕೆಂಬುದು ನಿಮ್ಮ ಯೋಜನೆ ಮೈನರ್ ಇರಿಗೇಶನ್ ಕೆಳಗಡೆ. ಆದರೆ, ಆಂಧ್ರಪ್ರದೇಶದ ಮುಖ್ಯಮಂತ್ರಿ ಈಗಾಗಲೇ ಅದಕ್ಕೊಂದು ಅಥಾರಿಟಿ ರಚಿಸಿ ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳನ್ನು ಮೊಬಲೈಸ್ ಮಾಡುತ್ತೇನೆ ಎಂದು ಅಸೆಂಬ್ಲಿಯಲ್ಲಿ ಹೇಳಿದ್ದಾರೆ. ನನ್ನ ಹತ್ತಿರ ತಾಖತ್ ಇದೆ, ನಾನು ಭಾರತ ಸರ್ಕಾರಕ್ಕೆ ಹೋಗಿ ಇದನ್ನು ಮಾಡಿಕೊಂಡು ಬರುತ್ತೇನೆಂದು 24ನೇ ತಾರೀಖು ಅಸೆಂಬ್ಲಿಯಲ್ಲೇ ಹೇಳಿದ್ದಾರೆ

"A High Power Body, Godavari Water Utilisation Authority, is being set up with Chief Minister as Chairman to study how best Godavari Waters can be harnessed and to formulate action plan for the purpose. Mr. Naidu said, the new body would begin functioning tomorrow and prepare the action plan by April end. Seeking the cooperation of the Opposition, he told them, we in the Government have the will; we have achieved the impossible and this will be no exception, he challenged and said that "T will get it done within no time"

ಆದಕ್ಕೇ ನಾವು ಇದು ಕ್ಲಿಯರಾಗುವವರೆಗೂ ಏನೂ ಕೆಲಸ ಮಾಡುವುದಿಲ್ಲ ಅಂದರೆ ನಮಗೆ ಬರುವ ನೀರಿಗೆ ತೊಂದರೆಯಾಗುತ್ತದೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕೆ.ಎಸ್. ನಾಗೇಗೌಡ :— ಅಧ್ಯಕ್ಷರೇ ಅವರು ಹೇಳಿದಂತೆ ನಾವು ಈಗಾಗಲೇ ಹಾಗ್ನದ ಎರಡು ಟಿಎಂಸಿ ನೀರು ಬಳಸಿಕೊಳ್ಳಲು ಪ್ರಾಜೆಕ್ಟ್ ವರದಿ ತಯಾರಿಸಿಕೊಂಡು ಟೆಕ್ನಿಕಲ್ ಕಮಿಟಿ ಮುಂದೆ ಇಟ್ಟುಕೊಂಡು ಸ್ಕ್ರಾಂಕ್ಷನ್ ಮಾಡಿಕೊಳ್ಳಲು ತಯಾರಿ ಮಾಡಿಕೊಂಡಿದ್ದೇವೆ. ಎರಡನೆಯದು ಭೀಮಾಪ್ಲೋ ಕೂಡ 9 ಟಿಎಂಸಿ ಒಳಗಡೆ ಅನೇಕ ಬ್ಯಾರೇಜ್‌ಗಳನ್ನು ಪ್ರಪೋಸ್ ಮಾಡಿ ನಿರ್ಮಿಸುವುದಕ್ಕೆ ಇನ್‌ವೆಸ್ಟಿಗೇಶನ್ ಎಲ್ಲ ಮಾಡಿ ಎಸ್ಟಿಮೇಟ್ ಮಾಡಿಕೊಂಡಿದ್ದೇವೆ. ನಾವೂ ಕೈಕಟ್ಟಿ ಕುಳಿತುಕೊಂಡಿಲ್ಲ. ಕೇಂದ್ರ ಜಲ ಆಯೋಗದವರಿಗೆ ಪೊಲ್ಲಾವರಂ ಪ್ರಾಜೆಕ್ಟ್ ಅನ್ನು ಕ್ಲಿಯರ್ ಮಾಡಿಕೊಡಬೇಕೆಂದು ಬೇಕಾದಷ್ಟು ಸಲ ಕೇಳುತ್ತಿದ್ದೇವೆ. It is not only between the Andhra pradesh and Karnataka. But also Maharashtra ಮೂರು ರಾಜ್ಯಗಳೂ ಕೂಡಬೇಕಾಗುತ್ತದೆ. ಸಾಧ್ಯವಾದರೆ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗುವ ಸಂದರ್ಭದಲ್ಲಿ ವಾಜಪೇಯಿಯವರನ್ನು

ಮೀಟ್ ಮಾಡಿಸಿ. ಹೇಳಬೇಕಾಗುತ್ತದೆ. ನಮಗೇ ಬೇಕು ಅದು. ಹತ್ತಾರು ವರ್ಷಗಳಿಂದ ಪೊಲ್ಲಾವರಂ ಸ್ಕೀಂ ಕೊಡಬೇಕೆಂದಿರುವ ದಾಖಲೆಗಳನ್ನು ಅವರೇ ಓದಿದರು. ಮುಖ್ಯಮಂತ್ರಿಗಳು ಮಾಡಿಕೊಂಡಿರುವ ಒಪ್ಪಂದ ಮಾಡಬೇಕು, ಆಗ ನಮಗೆ 23 ಟಿಎಂಸಿ ನೀರು ಬರುತ್ತದೆ.

5.40 ಪಿ.ಎಂ.

ಎಲ್ಲಾ ಪ್ರಾಜೆಕ್ಟ್ ಪ್ರಿಪೇರ್ ಮಾಡಿಕೊಂಡಿದ್ದೇವೆ. ನಾನು ಮುಖ್ಯಮಂತ್ರಿಗಳ ಜೊತೆ ದೆಹಲಿಗೆ ಹೋಗಿ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಈ ಸ್ಕೀಮ್‌ನ್ನು ಕ್ಲಿಯರ್ ಮಾಡಿಕೊಡಿ ಎಂದು ಕೇಳುತ್ತೇವೆ.

ಅ) ಟಿ.ಸಿ.ಹೆಚ್. ತೇರ್ಗಡೆಯಾದಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ವಿತರಣೆಯಾಗದಿರುವುದು.

+ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಛೇರ್ಮನ್ ಅವರೇ, ಟಿ.ಸಿ.ಎಚ್. ಪರೀಕ್ಷೆಯಲ್ಲಿ ಪಾಸಾದಂತಹ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಇನ್ನೂ ಬರಲಿಲ್ಲ. ಈಗಾಗಲೇ ಶಿಕ್ಷಕರ ನೇಮಕಾತಿಗಾಗಿ ಕಾಲ್‌ಫರ್ ಮಾಡಿದ್ದಾರೆ. ನಾಳೆಯೇ ಕೊನೆಯ ದಿನಾಂಕ ಆದರೆ ಈ ಸಾರಿ ಪರೀಕ್ಷೆಯಲ್ಲಿ ಪಾಸಾಗಿರತಕ್ಕಂಥ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್ ಕೊಡಲು ಅನಾವಶ್ಯಕವಾದಂತಹ ವಿಳಂಬವನ್ನು ಮಾಡುತ್ತಿದ್ದಾರೆ. ಮಲ್ಲೇಶ್ವರಂನಲ್ಲಿರತಕ್ಕಂಥ ಎಸ್.ಎಸ್.ಎಲ್.ಸಿ. ಬೋರ್ಡ್‌ನ ಕಛೇರಿಯ ಕಟ್ಟಡದಲ್ಲಿ ಈಗ ಪೋಲೀಸ್ ಠಾವಲಿನಲ್ಲಿ ಕಛೇರಿ ಕೆಲಸ ನಡೆಯುತ್ತಿದೆ. ಸಾಕಷ್ಟು ಶಾಂತಿ ಭಂಗ ಆಗುವಂತಹ ಪರಿಸ್ಥಿತಿ ಕೂಡ ನಿರ್ಮಾಣ ಆಗಿದೆ. ಇಡೀ ರಾಜ್ಯದ ಮೂಲೆ ಮೂಲೆಗಳಿಂದ ಬಂದಂತಹ ವಿದ್ಯಾರ್ಥಿಗಳು ಮಾರ್ಕ್ಸ್ ಕಾರ್ಡ್‌ನ್ನು ಪಡೆಯಲು ಕೇಳಿದರೆ ಅಲ್ಲಿರತಕ್ಕಂಥ ಅಧಿಕಾರಿಗಳು ಸರಿಯಾದಂತಹ ಉತ್ತರವನ್ನು ಕೊಡುತ್ತಿಲ್ಲ. ಕಛೇರಿಯಲ್ಲಿ ಸಮರ್ಪಕವಾಗಿರತಕ್ಕಂಥ ಕೆಲಸ ಅಲ್ಲಿ ನಡೆಯುತ್ತಾ ಇಲ್ಲ. ಹೀಗಾಗಿ ಆ ವಿದ್ಯಾರ್ಥಿಗಳು ತುಂಬಾ ತೊಂದರೆಗೆ ಒಳಗಾಗಿದ್ದಾರೆ. ಆ ಮಾರ್ಕ್ಸ್ ಕಾರ್ಡ್ ಸಿಗುವವರೆಗೆ ಟಿ.ಸಿ.ಎಚ್.ಗೆ ಏನು ಕಾಲ್‌ಫರ್ ಮಾಡಿದ್ದಾರೆ, ಅದಕ್ಕೆ ನಾಳೆಯೇ ಕೊನೆಯ ದಿನಾಂಕ, ಅದನ್ನು ಸರ್ಕಾರ ಮುಂದೆ ಹಾಕುತ್ತದಾ? ಈ ಸಾರಿ ಶಿಕ್ಷಕರಾಗಿ ಆಯ್ಕೆ ಆಗಲಿಕ್ಕೆ ಅವರಿಗೂ ಒಂದು ಅವಕಾಶವನ್ನು ನಿರ್ಮಾಣ ಮಾಡುತ್ತೀರಾ? ಅಥವಾ ನಾಳೆಯ ಒಳಗಾಗಿ ಮಾರ್ಕ್ಸ್ ಕಾರ್ಡ್ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೀರಾ? ಏನು ಮಾಡುತ್ತೀರಿ? ಸರ್ಕಾರ ಇದರ ಬಗ್ಗೆ ಗಮನಹರಿಸಿದೆಯೇ ಎನ್ನುವಂತಹದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಆ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ನಾವು ನೋಡಿಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :— ನಾಳೆಯೇ ಲಾಸ್ಟ್ ಡೇಟ್ ಇದೆ.

ಛೇರ್ಮನ್ :— ಮಾನ್ಯ ಮಂತ್ರಿಗಳು ಮಾತು ಕೊಟ್ಟಿದ್ದಾರೆ. ನಾಳೆಯೇ ಲಾಸ್ಟ್‌ಡೇಟ್ ಅಂತೆ, ಅದಕ್ಕೆ ಸ್ವಲ್ಪ ಏನಾದರೂ ಹೇಳಿ.

ಶ್ರೀ ಆರಗ ಜ್ಞಾನೇಂದ್ರ :— ಅದನ್ನು ಪರಿಶೀಲನೆ ಮಾಡುತ್ತೇನೆ.

೪) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಸ್ಥಾಪನೆ ಬಗ್ಗೆ ವಕೀಲರಿಂದ ಆಮರಣ ಉಪವಾಸ.

ಶ್ರೀ ಅಶೋಕ್ ಹಟ್ಟಿ (ಹುಬ್ಬಳ್ಳಿ) :— ಮಾನ್ಯ ಅಧ್ಯಕ್ಷರೆ, ಕಳೆದ ಐದು ದಿವಸಗಳಿಂದ ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ವಕೀಲರು ಆಮರಣ ಉಪವಾಸ ಕುಳಿತಿದ್ದಾರೆ. ಶ್ರೀಮತಿ ಕುಲಕರ್ಣಿ ಹಾಗೂ ಪಾಟೀಲ್ ಎಂದು ಹೇಳಿ ಇಬ್ಬರು ಆಮರಣ ಉಪವಾಸ ಕುಳಿತಿದ್ದಾರೆ. ಅವರ ಜೊತೆ ವಕೀಲರೂ ಕುಳಿತಿದ್ದಾರೆ. ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಹೈಕೋರ್ಟ್ ಪೀಠ ಕೊಡಬೇಕು ಎಂದು ಹೇಳಿ ಅವರು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರಲ್ಲೂ ಸಹ ಕುಲಕರ್ಣಿ ವಕೀಲರ ಪರಿಸ್ಥಿತಿ ಚಿಂತಾಜನಕ ಆಗಿದೆ. ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಛೇರ್ಮನ್ :— ಮಾನ್ಯ ಮಂತ್ರಿಗಳು ಉತ್ತರ ಕೊಡುವ ಮೊದಲು ಮಾನ್ಯ ಚಂದ್ರಕಾಂತ್ ಬೆಲ್ಲದ್ ಅವರೂ ಕೇಳಲಿ. ಆನಂತರ ನೀವು ಉತ್ತರ ಕೊಡಿ.

ಶ್ರೀ ಅಶೋಕ್ ಹಟ್ಟಿ (ಹುಬ್ಬಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭ ಮಾಡಬೇಕೆಂದು ಕಳೆದ ಐದು ದಿವಸಗಳಿಂದ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದ ವಕೀಲರು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಶ್ರೀಮತಿ ಕುಲಕರ್ಣಿ ಮತ್ತು ಶ್ರೀ ಪಾಟೀಲ್ ಎಂಬ ಇಬ್ಬರು ವಕೀಲರು ಆಮರಣ ಉಪವಾಸ ಕುಳಿತಿದ್ದಾರೆ. ಅವರ ಜೊತೆ ಇತರ ವಕೀಲರು ಸತ್ಯಾಗ್ರಹ ಮಾಡುತ್ತಿದ್ದಾರೆ. ಶ್ರೀಮತಿ ಕುಲಕರ್ಣಿಯವರ ಪರಿಸ್ಥಿತಿ ಚಿಂತಾಜನಕವಾಗಿದೆ. ಇದರ ಬಗ್ಗೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ ಎಂದು ಕೇಳಬಯಸುತ್ತೇನೆ.

ಶ್ರೀ ಚಂದ್ರಕಾಂತಗುರಪ್ಪ ಬೆಲ್ಲದ್ (ಧಾರವಾಡ) :— ಮಾನ್ಯ ಛೇರ್ಮನ್‌ರವರೆ, ಧಾರವಾಡದ ವಕೀಲರ ಸಂಘದವರು ಧಾರವಾಡ ಹುಬ್ಬಳ್ಳಿ ಮಹಾನಗರದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆಗೆ ಆಗ್ರಹಪಡಿಸಿ ಆಮರಣ ಉಪವಾಸ ಮಾಡುತ್ತಿದ್ದಾರೆ. ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಬಿ.ಟಿ. ಹಿರೇಮಠ್, ಶ್ರೀಮತಿ ಕುಲಕರ್ಣಿ ರವರುಗಳು 27ನೇ ತಾರೀಖಿನಿಂದ ಆಮರಣ ಉಪವಾಸ ಕುಳಿತಿದ್ದಾರೆ. ಅಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕೆಂದು ಅವರು ಅನೇಕ ವರ್ಷಗಳಿಂದ ಒತ್ತಾಯ ಮಾಡಿಕೊಂಡು ಬಂದಿದ್ದಾರೆ. ಹದಿನೆಂಟು ವರ್ಷಗಳ ಹಿಂದೆಯೇ ಆಗಿನ ಹೈಕೋರ್ಟ್‌ನ ಮುಖ್ಯ ನ್ಯಾಯ

ಮೂರ್ತಿಗಳಾಗಿದ್ದ ಶ್ರೀ ಶ್ರೀ ಬಿ.ಎಂ. ಚಂದ್ರಶೇಖರ್‌ರವರು ಹೈಕೋರ್ಟ್‌ನ ಅಭಿಪ್ರಾಯದಂತೆ ಧಾರವಾಡ ಹುಬ್ಬಳ್ಳಿಗಳಲ್ಲಿ ಹೈಕೋರ್ಟ್‌ನ ಪೀಠದ ಸ್ಥಾಪನೆಗಾಗಿ ಕಟ್ಟಡ ಮತ್ತು ಇನ್ನಿತರ ಅವಶ್ಯಕತೆಗಳನ್ನು ಪರಿಶೀಲನೆ ಮಾಡಿದ್ದು 1981ರಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹೈಕೋರ್ಟಿನ ಪೀಠದ ಬಗ್ಗೆ ಸಮಾಲೋಚಿಸಿ ಪ್ರಸ್ತಾವನೆಯನ್ನು ಕಳಿಸಿದ್ದರು ಸಹ ವ್ಯರ್ಥವಾಗಿದೆ. ರಾಜ್ಯದ ಈ ಪ್ರಸ್ತಾವನೆಯ ನಂತರ ಹಲವಾರು ರಾಜ್ಯಗಳಲ್ಲಿ, ತೀಗಾಗಲೇ ಇಂಥ ಪೀಠಗಳನ್ನು ಸ್ಥಾಪಿಸಲಾಗಿದೆ. ಮಹಾರಾಷ್ಟ್ರದ ಔರಂಗಾಬಾದ್ ಮತ್ತು ತಮಿಳುನಾಡಿನ ಮಧುರೈ ಇದಕ್ಕೆ ಉದಾಹರಣೆಗಳಾಗಿದೆ. ವಿವಿಧ ರಾಜ್ಯಗಳಲ್ಲಿ ಬೇಡಿಕೆಯಾದ ಹೈಕೋರ್ಟ್ ಪೀಠದ ಹೆಚ್ಚಿನ ಅವಶ್ಯಕತೆಯ ಬಗ್ಗೆ ವರದಿ ಸಲ್ಲಿಸಲು ಕೋರಿ ಕೇಂದ್ರ ಸರ್ಕಾರ ಮಾನ್ಯ ನ್ಯಾಯಮೂರ್ತಿ ಜಸ್‌ವಂತ್‌ಸಿಂಗ್‌ರವರ ನೇತೃತ್ವದಲ್ಲಿ ಆಯೋಗ ನೇಮಿಸಿತ್ತು. 1985 ರಲ್ಲಿ ಆಯೋಗವು ಅಧ್ಯಾಯನ ನಡೆಸಿ ಹೈಕೋರ್ಟ್ ಪೀಠವನ್ನು ಸ್ಥಾಪಿಸಲು ಎಲವು ಅವಶ್ಯಕತೆಗಳ ಬಗ್ಗೆ ಪಟ್ಟಿ ಮಾಡಿದೆ. ಅದರ ಪ್ರಕಾರ ಧಾರವಾಡ ಮತ್ತು ಹುಬ್ಬಳ್ಳಿ ಮಹಾನಗರವು ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ ಕರ್ನಾಟಕದ ಅತ್ಯಂತ ಸೂಕ್ತ ಸ್ಥಳವೆಂದು ನಿರ್ವಿವಾದವೆಂದು ಜಸ್‌ವಂತ್‌ಸಿಂಗ್ ನೇತೃತ್ವದ ಆಯೋಗದವರು ವರದಿ ಕೊಟ್ಟಿರುತ್ತಾರೆ. 1954 ರಲ್ಲೂ ಸಹ ಕರ್ನಾಟಕದ ಆಡಳಿತ, ಹಣಕಾಸಿನ ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ ಇತರೆ ವಿಚಾರಗಳ ಬಗ್ಗೆ ವರದಿ ಸಲ್ಲಿಸಲು ಆಗಿನ ಮೈಸೂರು ಸರ್ಕಾರದ ಶ್ರೀಯುತ ಎಂ. ಶೇಷಾದ್ರಿ, ಮಾಜಿ ಸಚಿವರು ಮತ್ತು ಶ್ರೀ ಟಿ.ಎನ್. ಮುದಲಿಯಾರ್, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಇವರುಗಳನ್ನು ಒಳಗೊಂಡ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಆ ಸಮಿತಿಯವರು ಸಹ 26-10-1954 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ಇವೆಲ್ಲವು ಸಹ ಉತ್ತರ ಕರ್ನಾಟಕದ ಧಾರವಾಡ ಮತ್ತು ಹುಬ್ಬಳ್ಳಿ ಸಕಲ ಅನುಕೂಲಗಳನ್ನು ಹೊಂದಿದ ರಾಜ್ಯದ ಎರಡನೇ ರಾಜ್ಯಧಾನಿಯಾಗಿದ್ದು ಹೈಕೋರ್ಟ್ ಪೀಠವನ್ನು ಸ್ಥಾಪಿಸಲು ಎಲ್ಲ ಸೌಲಭ್ಯವನ್ನು ಹೊಂದಿರುವ ಸ್ಥಾನ. ಅಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆ ಬಹಳ ಅವಶ್ಯಕತೆಯಾಗಿದೆ. ಇದು ಮೂವತ್ತು ವರ್ಷಗಳ ಬೇಡಿಕೆಯಾಗಿದೆ. ಸರ್ಕಾರ ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಅಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾವ್) ಮಾನ್ಯ ಛೇರ್ಮನ್‌ರವರೆ, ನಮಗೆ ಅಲ್ಲಿ ಹೋಗಲು ಜನರು ಬಿಡುತ್ತಿಲ್ಲ. ಮಂತ್ರಿಗಳು ಬಂದರೆ ಘೇರಾವ್ ಮಾಡಲು ಪ್ರಾರಂಭ ಮಾಡಿದ್ದಾರೆ. ನ್ಯಾಯಾಧೀಶರು ಬಂದರೆ ಘೇರಾವ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ತಾವು ಅದೇ ಜಿಲ್ಲೆಯವರಾಗಿದ್ದು ಇದರ ಬಗ್ಗೆ ಕಳ್ಳನೆ ಇಲ್ಲವೆಂದರೆ ತಾವು ದಯಮಾಡಿ ಕ್ಷಮಿಸಬೇಕು, ತಾವು ಹಿರಿಯರಾಗಿದ್ದೀರಿ, ಸಚಿವರಾಗಿದ್ದೀರಿ, ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕು. ಈ ಕೆಲಸವನ್ನು ದಯಮಾಡಿ ಮಾಡಿಕೊಡಬೇಕು. ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವ ಬೇಡಿಕೆ ಸುಮಾರು

1972ನೇ ಇಸವಿಯಿಂದಲೇ ಇದೆ. ಹೈಕೋರ್ಟ್ ಪೀಠಕ್ಕೆ ಒತ್ತಾಯಿಸಿ ಆಮರಣ ಉಪವಾಸ ಮಾಡುತ್ತಿರುವುದಲ್ಲದೆ ಹುಬ್ಬಳ್ಳಿ ತಹಶೀಲ್ದಾರರರ ಕಛೇರಿಯಲ್ಲಿ, ಇಬ್ಬರು ಆಮರಣ ಉಪವಾಸ ಕುಳಿತುಕೊಂಡಿದ್ದಾರೆ. ಪತ್ರಿಕೆಯನ್ನು ಮತ್ತು ವಕೀಲರ ಸಂಘದವರು ನೀಡಿರುವ ನೋಟೀಸನ್ನು ತಮಗೆ ಕಳಿಸಿಕೊಡುತ್ತೇನೆ, ದಯಮಾಡಿ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಗಳಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸಬೇಕೆಂದು ಮಾನ್ಯ ಕಾನೂನು ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಶಿವಾನಂದ ಪಾಟೀಲ್ (ತಿಕೋಟ) :— ಮಾನ್ಯ ಛೇರ್ಮನ್‌ರವರೆ, ಮಾನ್ಯ ಬೆಲ್ಲದ್‌ರವರು ಮಾತನಾಡುತ್ತ ಜಸವಂತ್‌ಸಿಂಗ್ ಆಯೋಗದವರು ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ ಧಾರವಾಡದಲ್ಲಿ ಮಾಡಬೇಕೆಂದು ಹೇಳಿದ್ದಾರೆಂದು ಹೇಳಿದರು. ಆದರೆ ಅದು ಸರಿಯಲ್ಲ. ಜಸವಂತ್‌ಸಿಂಗ್ ಆಯೋಗದವರು ಬಿಜಾಪುರದಲ್ಲಿ ಹೈಕೋರ್ಟ್ ಪೀಠ ಮಾಡಬೇಕೆಂದು ಹೇಳಿದ್ದಾರೆ. ಹುಬ್ಬಳ್ಳಿ ಧಾರವಾಡದಲ್ಲಿ ಮಾಡಬೇಕೆಂದು ಹೇಳಿಲ್ಲ. ಬೇಕಾದರೆ ಮಾನ್ಯ ಸದಸ್ಯರು ಆಯೋಗದ ವರದಿಯನ್ನು ತೆಗೆದು ನೋಡಬಹುದು. ಉತ್ತರ ಕರ್ನಾಟಕದಲ್ಲಿ ಎಲ್ಲಾದರೂ ಒಂದು ಕಡೆ ಹೈಕೋರ್ಟ್ ಪೀಠ ಆಗಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಉತ್ತರ ಕರ್ನಾಟಕವೆಂದರೆ ಕೇವಲ ಹುಬ್ಬಳ್ಳಿ ಧಾರವಾಡಗಳು ಮಾತ್ರ ಅಲ್ಲ. ಜಸವಂತ್‌ಸಿಂಗ್ ಆಯೋಗದ ವರದಿಯ ಪ್ರಕಾರ ಇದು ಬಿಜಾಪುರದಲ್ಲಿ ಆಗಬೇಕು. ದಯಮಾಡಿ ಅದನ್ನು ತರ್ಜುಮೆ ಮಾಡಿ ಹೈಕೋರ್ಟ್ ಪೀಠವನ್ನು ಬಿಜಾಪುರದಲ್ಲಿ ಸ್ಥಾಪನೆ ಮಾಡುವಂತೆ ಹೇಳಿ. ಏಕೆಂದರೆ ಈಗಾಗಲೇ ನೈರುತ್ಯ ರೈಲ್ವೆ ವಲಯವು ಹುಬ್ಬಳ್ಳಿ ಧಾರವಾಡ ಎಂಬುದು ಸರಿಯಲ್ಲ. ಬಿಜಾಪುರದ ಬಗ್ಗೆ ಸಹ ತಾವು ಗಮನ ಹರಿಸಬೇಕು.

ಶ್ರೀ ಪಿ.ಹೆಚ್. ಪೂಜಾರಿ (ಬಾಗಲಕೋಟೆ) :— ಮಾನ್ಯ ಛೇರ್ಮನ್‌ರವರೆ, ಇದಕ್ಕೆ ಪೂರಕವಾಗಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭ ಮಾಡುವ ಬಗ್ಗೆ ಸರ್ಕಾರ ಅತ್ಯಂತ ನಿರ್ಲಕ್ಷ್ಯ ವಹಿಸುತ್ತಿದೆ. ಹುಬ್ಬಳ್ಳಿಯಲ್ಲಿ ಆಗಲಿ ಅಥವಾ ಬಿಜಾಪುರದಲ್ಲಾಗಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕು. ಆ ಮೂಲಕ ಅಲ್ಲಿನ ಬಡ ಕಕ್ಷಿದಾರರಿಗೆ ಅನುಕೂಲ ಮಾಡಿಕೊಡಬೇಕು ಎಂಬ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ಮಾಡಿಕೊಂಡು ಬಂದಿದೆ. ಇದರ ಜೊತೆಗೆ ಬಾಗಲಕೋಟೆ, ಹಾವೇರಿ, ಗದಗಿಗಳಲ್ಲಿ ಕೆಲ್ಲಾ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಬೇಕು. ಇದುವರೆಗೆ ಅಲ್ಲಿ ಜಿಲ್ಲಾನ್ಯಾಯಾಲಯಗಳನ್ನು ಮಾಡುತ್ತಿಲ್ಲ. ನ್ಯಾಯಾಂಗದ ವ್ಯವಸ್ಥೆಯನ್ನು ಮಾಡುವಲ್ಲಿ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆಯೆಂದು ಆರೋಪ ಮಾಡುತ್ತಿದ್ದೇನೆ. ಈ ನಿಟ್ಟಿನಲ್ಲಿ ದಯಮಾಡಿ ಸರ್ಕಾರಕ್ಕೆ ಆದೇಶ ಕೊಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) :— ಮಾನ್ಯ ಛೇರ್ಮನ್‌ರವರೆ, ನಾನು ಎಲ್ಲರಪರವಾಗಿ ಮಾತನಾಡುತ್ತಿದ್ದೇನೆ. ಇವತ್ತು ಸಂಬಂಧಪಟ್ಟ ಸಚಿವರು ಇಲ್ಲಿ

ಇಲ್ಲ, ಬೇರೆಯವರು ಯಾವುದೋ ಉತ್ತರವನ್ನು ಕೊಟ್ಟರೆ ಏನು ಪ್ರಯೋಜನ? ಆದ್ದರಿಂದ ಇದರ ಬಗ್ಗೆ ನಿರ್ದಿಷ್ಟವಾದ ಉತ್ತರ ಕೊಡುವುದಿದ್ದರೆ ಕೊಡಲಿ, ಇಲ್ಲದಿದ್ದರೆ ಕೊಡುವುದು ಬೇಡ.

ಛೇರ್ಮನ್ :— ನಿಮ್ಮ ಹೆಸರು ಇಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ :— ನಾನು ಹೇಳುವುದು ಏನೆಂದರೆ ನಾನು ಎಲ್ಲರ ಪರವಾಗಿ ಮಾತನಾಡುತ್ತೇನೆ. ನಾನು ಹೇಳುವುದು ಏನೆಂದರೆ ಸಂಬಂಧಪಟ್ಟ ಸಚಿವರು ಇಲ್ಲ, ಸಂಬಂಧಪಟ್ಟ ಅಧಿಕಾರಿಗಳು ಇಲ್ಲ. ಯಾರೋ ಒಬ್ಬರು ಉತ್ತರ ಹೇಳಿದರೆ ಸರ್ಕಾರದಲ್ಲಿ ಸಚಿವರು ಇದ್ದಾರೆ. ಯಾರೊ ಒಬ್ಬರು ಎಂದು ನಾನು ಹೇಳುವುದಿಲ್ಲ. ಆದರೆ ಹಾರಿಕೆಯ ಉತ್ತರ ಕೊಟ್ಟರೆ ಏನು ಉಪಯೋಗ ನಿರ್ದಿಷ್ಟವಾದಂತಹ ಸ್ಟೇಟ್‌ಮೆಂಟ್ ಮಾಡುತ್ತಾರೆಂದರೆ ದಯವಿಟ್ಟು ಮಾಡಲಿ. ಇಲ್ಲದಿದ್ದರೆ ಮಾಡುವುದು ಬೇಡ.

ಛೇರ್ಮನ್ :— ಅವರು ಯಾವ ಉತ್ತರ ಕೊಡುತ್ತಾರೆ ನೋಡೋಣ.

ಶ್ರೀ ಮಂಜುನಾಥ ಡಿ. ಕುನ್ನೂರ್ :— ಮಾನ್ಯ ಮುಖ್ಯಮಂತ್ರಿಗಳು ಇಲ್ಲವೇ ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಹೇಳಿದರೆ ಬಹಳ ಒಳ್ಳೆಯದು.

ಶ್ರೀ ಎಸ್.ಎಸ್. ಪಾಟೀಲ್ :— ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೇನೆ.

ಶ್ರೀ ಮಂಜುನಾಥ ಡಿ. ಕುನ್ನೂರ್ :— ತಾವು ಮಾಡಿಸುತ್ತೇವೆಂದು ಭರವಸೆ ಕೊಟ್ಟರೆ ನಮ್ಮದೇನೂ ಅಭ್ಯಂತರ ಇಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :— ಅವರು ನಿರ್ದಿಷ್ಟವಾಗಿ ಉತ್ತರ ಕೊಡಲಿ. ಪರಿಶೀಲಿಸುತ್ತೇವೆಂದು ಹೇಳುವುದು ಬೇಡ. ಮಾಡುತ್ತಿದ್ದರೆ ಹೇಳಲಿ, ಇಲ್ಲದಿದ್ದರೆ ಉತ್ತರ ಬೇಡ.

ಶ್ರೀ ಎಸ್.ಎಸ್. ಪಾಟೀಲ್ :— ಯಾರೋ ಉತ್ತರ ಕೊಡುತ್ತಾರೆಂದು ಹೇಳುತ್ತೀರಿ. ಯಾರು ಉತ್ತರ ಕೊಟ್ಟರೂ ಸರ್ಕಾರದ ಪರವಾಗಿ ಕೊಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ :— ಅದರಿಂದ ಏನು ಉಪಯೋಗ? ಉತ್ತರ ಕರ್ನಾಟಕದ ಅಭಿವೃದ್ಧಿಗೂ ಅನ್ಯಾಯ ಮಾಡುತ್ತೀರಿ.

ಛೇರ್ಮನ್ :— ನೀವು ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಉತ್ತರವನ್ನು ನಾವು ಸರ್ಕಾರದ ಪರವಾಗಿ ಕೊಡುತ್ತೇವೆ. ಇದು ಸರ್ಕಾರದ ಪರವಾಗಿ ಕೊಟ್ಟಂತಹ ಉತ್ತರ.

ಶ್ರೀ ಗೋವಿಂದ ಎಂ. ಕಾರಜೋಳ :— ಸರ್ಕಾರದ ಪರವಾಗಿ ಪರಿಶೀಲಿಸುತ್ತೇವೆಂದರೆ ಉತ್ತರ ಅಲ್ಲ. ನಾವು ಮಾಡುತ್ತೇವೆ, ಮಾಡೇ ತೀರುತ್ತೇವೆ ಎಂದು ಹೇಳಿದರೆ ಉತ್ತರ ಅದು. ಇಲ್ಲದಿದ್ದರೆ ಉತ್ತರವಲ್ಲ ಅದು.

ಶ್ರೀ ಎಸ್.ಎಸ್. ಪಾಟೀಲ್ :— ನನಗೂ ಒಂದು ಜವಾಬ್ದಾರಿ ಇದೆ, ಸುಮ್ಮನೇ ಏನಾದರೂ ಕೇಳಿ ಕುಳಿತುಕೊಳ್ಳುವುದಕ್ಕೆ ಇಚ್ಛೆ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ :— ಇಷ್ಟು ದಿವಸ ನೀವು ಏನು ಹೇಳಿದ್ದೀರಿ, ಸದನದಲ್ಲಿ ಸುಮ್ಮನೆ ಹೇಳಿದ್ದೀರಿ. ಉತ್ತರ ಕರ್ನಾಟಕದ ಬಗ್ಗೆ ಯಾವುದೇ ನಿರ್ದಿಷ್ಟವಾದಂತಹ ಹೇಳಿಕೆ ಮಾಡಿಲ್ಲ.

(ಗೊಂದಲ)

ಛೇರ್ಮನ್ :— ದಯಮಾಡಿ ಕುಳಿತುಕೊಳ್ಳಿ

ಶ್ರೀ ಗೋವಿಂದ ಎಂ. ಕಾರಜೋಳ :— ಆಗುವುದಿಲ್ಲ ಮೇಡಂ.

ಛೇರ್ಮನ್ :— ಅವರು ಉತ್ತರ ಕೊಡುವುದು ಬೇಡವಾ?

ಶ್ರೀ ಗೋವಿಂದ ಎಂ. ಕಾರಜೋಳ :— ಆ ರೀತಿ ಉತ್ತರ ಬೇಡ. ಕಾನೂನು ಸಚಿವರಾದರೂ ಉತ್ತರ ಕೊಡಲಿ. ಕಾನೂನು ಸಚಿವರೇ ಬಂದು ಉತ್ತರ ಕೊಡಲಿ.

ಛೇರ್ಮನ್ :— ನಿಮಗೆ ಉತ್ತರ ಬೇಡ, ಆದರೆ ಅವರು ಕೇಳುತ್ತಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಏನು ಸರ್ಕಾರ ಉತ್ತರ ಕೊಡುತ್ತದೋ ಅದರ ಮೇಲೆ ಮಾತನಾಡಿ. ದಯವಿಟ್ಟು ಅವರು ಉತ್ತರ ಕೊಡುವುದಕ್ಕೆ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಛೇರ್ಮನ್‌ರವರೆ, ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸುವ ವಿಷಯದಲ್ಲಿ ಮೊದಲಿನಿಂದಲೂ ನಮ್ಮ ಸರ್ಕಾರ ಉತ್ಸುಕದಿಂದಿದೆ. ಬಹುಶಃ ಇದಕ್ಕಾಗಿ ನಾವು ಪ್ರಾರಂಭದಿಂದಲೂ ಪ್ರಯತ್ನಿಸಿರುವುದು ಗೊತ್ತಿದೆ. ಸದರಿ ಬೇಡಿಕೆ ಇಟ್ಟಿರುವವರಲ್ಲಿ ನಿಮ್ಮ ಪೈಕಿ ನಾನೂ ಒಬ್ಬನಾಗಿದ್ದೇನೆ. ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವಿದ್ದಿದ್ದರೆ ಇಷ್ಟೊತ್ತಿಗೆ ಸ್ಥಾಪನೆಗೊಂಡು ಕಾರ್ಯ ಕೂಡ ಪ್ರಾರಂಭವಾಗುತ್ತಿತ್ತು. ತಮಗೆ ಗೊತ್ತಿರುವಂತೆ ಅಲ್ಲೊಂದು ಹೈಕೋರ್ಟ್ ಪೀಠ ಸ್ಥಾಪಿಸುವ ಹಿನ್ನೆಲೆಯಲ್ಲಿ ಈಗಾಗಲೇ ಅದಕ್ಕೆ ಜಾಗಕೊಡುವುದಾಗಲಿ ಇನ್ನಿತರ ಏನೇನು ವ್ಯವಸ್ಥೆಗಳನ್ನು ಮಾಡಬೇಕೋ ಎಲ್ಲವನ್ನೂ ಸರ್ಕಾರದವರಾದ ನಾವು ಮಾಡಿದ್ದೇವೆ. ಇವೊತ್ತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಒಪ್ಪಿಗೆಯಿಲ್ಲದೆ ಹೈಕೋರ್ಟ್ ಪೀಠವನ್ನು ಸ್ಥಾಪಿಸುವುದಕ್ಕೆ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಸಾಧ್ಯವಿಲ್ಲ. ಆ ಕಾರಣದಿಂದಾಗಿ ಪುನಃ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು,

ಮುಖ್ಯಮಂತ್ರಿಗಳು, ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು ಹಾಗೂ ನಾನು ಹೋಗಿ ಹೈಕೋರ್ಟ್ ಪೀಠ ಸ್ಥಾಪಿಸುವ ದಿಸೆಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತೆ ಅವರೊಂದಿಗೆ ಮಾತನಾಡುತ್ತಿದ್ದು ಏನಾದರೂ ಮಾಡಿ ಅವರನ್ನು ಒಪ್ಪಿಸುವಂಥ ಪ್ರಯತ್ನ ಹಾಗೂ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ. ಈ ಕುರಿತ ನಿರ್ಧಾರ ಕೇವಲ ಸರ್ಕಾರದ ಮೇಲಿಲ್ಲ. ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ. ಹಿರೇಮಠ ಅವರನ್ನು ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಬಳಿ ಕರೆದುಕೊಂಡು ಹೋಗಿ ಚರ್ಚಿಸಿರುವ ವಿಷಯ ತಮಗೂ ಗೊತ್ತಿದೆ. ಈ ನಿರ್ಧಾರವನ್ನು ಕೇಂದ್ರ ಸರ್ಕಾರವೇ ಕೈಗೊಳ್ಳಬೇಕು.

ಶ್ರೀ ಅಶೋಕ ಕಾಟ್ವೆ :— ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಸರ್ಕಾರಕ್ಕೆ ಅಧಿಕಾರವಿಲ್ಲ, ಅದು ತಮಗೂ ಗೊತ್ತಿದೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಸರ್ಕಾರ ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ....

ಶ್ರೀ ಎಸ್.ಎಸ್. ಪಾಟೀಲ್ :— ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ ಸರ್ಕಾರದ ಅಧಿಕಾರದ ವ್ಯಾಪ್ತಿಯಲ್ಲಿ ಅವಕಾಶವಿದ್ದರೆ ನಾಳೆಯೇ ಚಾಲೂ ಮಾಡಿಸುತ್ತೇವೆ. ಅದು ಸರ್ಕಾರದ ಅಧಿಕಾರದ ವ್ಯಾಪ್ತಿಯಲ್ಲಿಲ್ಲ. ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟಿನ ಕನ್ಸೆಂಟ್ ಈ ವಿಚಾರದಲ್ಲಿ ಬೇಕೇ ಬೇಕು. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವಿಲ್ಲ. ನಾವು ರಾಜ್ಯ ಸರ್ಕಾರದ ವತಿಯಿಂದ ಅಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ನಿಟ್ಟಿನಲ್ಲಿ ಅಗತ್ಯವಾದ ಎಲ್ಲವನ್ನೂ ತಯಾರಿಸಿಕೊಟ್ಟಿದ್ದೇವೆ. ನಾಳೆ ಅಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾದರೂ ಕೂಡ ಪೂರ್ವಭಾವಿಯಾಗಿ ಅದಕ್ಕೆ ಬೇಕಾದಂಥ ಎಲ್ಲಾ ವ್ಯವಸ್ಥೆಯನ್ನೂ ತಯಾರು ಮಾಡಿದ್ದೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ಹೇಗೆ ಮೊದಲು ಸರ್ಕ್ಯೂಟ್ ಬೆಂಚ್ ಸ್ಥಾಪನೆಯಾಗಿ ನಂತರ ಹೈಕೋರ್ಟ್ ಆಗಿ ಮಾಡಿದ್ದಾರೋ ಅದೇ ತರಹ ಇಲ್ಲಿಯೂ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ.

ಶ್ರೀ ಎಸ್.ಎಸ್. ಪಾಟೀಲ್ :— ತಾವು ವಯವಿಟ್ಟು ಕೇಳಬೇಕು. ನಾನೂ ಕೂಡ ನಿಮಷ್ಟೇ ಆತುರನಾಗಿದ್ದೇನೆ. ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ. ಹಿರೇಮಠ ಅವರನ್ನು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಬಳಿಗೆ ಕರೆದುಕೊಂಡು ಹೋಗಿ ಮಾತನಾಡಿ ಈ ಕುರಿತು ನೀವು ಆಮರಣಾಂತ ಉಪವಾಸ ಕುಳಿತುಕೊಳ್ಳಬೇಡಿ, ನಾವು ಪ್ರಯತ್ನ ಮಾಡುತ್ತೇವೆಂದು ಹೇಳಿ ವಿನಂತಿಸಿಕೊಂಡೆವು.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ :— ಸರ್ಕ್ಯೂಟ್ ಬೆಂಚನ್ನಾದರೂ ಮಾಡುತ್ತೇವೆಂಬ ಆಶ್ವಾಸನೆ ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಆ ರೀತಿ ಆಶ್ವಾಸನೆ ಕೊಡುವುದಕ್ಕಾಗುವುದಿಲ್ಲ. ಅದು ನಮ್ಮ ಕೈಯಲ್ಲಿಲ್ಲ. ಸರ್ಕಾರದ ಕೈಯಲ್ಲಿ ಅಧಿಕಾರವಿದ್ದರೆ ನಾಳೆಯೇ ಮಾಡುತ್ತೇವೆ. ಆದುದರಿಂದ, ಸರ್ಕಾರದ ಪರವಾಗಿ ಈ ಸದನದ ಮೂಲಕ ನಾವು ವಕೀಲರ ಸಂಘದವರನ್ನು ಹಾಗೂ ಅಲ್ಲಿ ಅಮರಣಾಂತ ಉಪವಾಸ ಕುಳಿತಿರುವವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ದಿಸೆಯಲ್ಲಿ ನಾವು ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ದಯವಿಟ್ಟು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ, ಶ್ರೀ ಅಶೋಕ ಕಾಟ್ವೆ ಹಾಗೂ ಶ್ರೀ ಮಂಜುನಾಥ ಸಿ. ಕುನ್ನೂರ್, ಇವರುಗಳು ಸದನದ ಬಾವಿಯಲ್ಲಿ ಬಂದು ನಿಂತು ಸರ್ಕ್ಯೂಟ್ ಬೆಂಚ್ ಮಾಡಬೇಕು ಎಂದು ಒಕ್ಕೊರಲಿನಿಂದ ಕೂಗುತ್ತಿದ್ದರು)

ಶ್ರೀ ಎಸ್.ಎಸ್. ಪಾಟೀಲ್ :— ಸರ್ಕ್ಯೂಟ್ ಬೆಂಚ್ ಮಾಡುವಂಥ ಅಧಿಕಾರ ಸರ್ಕಾರಕ್ಕಿದ್ದರೆ ಖಂಡಿತವಾಗಿಯೂ ಪ್ರಾರಂಭ ಮಾಡುತ್ತೇವೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಮಾನ್ಯ ಸದಸ್ಯರುಗಳಾದ ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ, ಶ್ರೀ ಅಶೋಕ್ ಕಾಟ್ವೆ ಹಾಗೂ ಶ್ರೀ ಮಂಜುನಾಥ ಸಿ. ಕುನ್ನೂರ್ ಇವರುಗಳು ಧರಣಿ ಕೈಬಿಟ್ಟು ತಂತಮ್ಮ ಆಸನಗಳಿಗೆ ಮರಳಿದರು)

ಉಳ್ಳಾಲ ಕ್ಷೇತ್ರದ ತುಕ್ಕೋಟಿನ್ ಶ್ರೀಮತಿ ಫತೀಜಾಬಿ ಮಹಮದ್, ಮತ್ತಿತರು ಶಿವಮೊಗ್ಗದ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ ಬರುವಾಗ ಮಂಡಗದ್ದೆ ಬಳಿ ಅರಣ್ಯ ಸಿಬ್ಬಂದಿಗಳು ಗುಂಡು ಹಾರಿಸಿರುವುದು.

+ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಛೇರ್ಮನ್‌ರವರೆ, ದಿನಾಂಕ 28-1-98 ರಂದು ನನ್ನ ಕ್ಷೇತ್ರದ ವ್ಯಾಪ್ತಿಗೆ ಸೇರುವ ತುಕ್ಕೋಟ್‌ನ ಶ್ರೀಮತಿ ಫತೀಜಾಬಿ ಮಹಮದ್, ಮಹಮದ್ ರಫಿ ಮತ್ತು ಮಹಮದ್ ಸಲೀಂ ಎಂಬುವವರು ಶಿವಮೊಗ್ಗದ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರ ಕಾರ್ಯದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ಸು ಶಿವಮೊಗ್ಗ ತಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರ ಕಾರ್ಯದಲ್ಲಿ ಪಾಲ್ಗೊಳ್ಳಲು ತೆರಳಿ ವಾಪಸ್ಸು ಶಿವಮೊಗ್ಗ ಜಿಲ್ಲೆಯ ಮಂಡಗದ್ದೆ ಬಳಿ ಬರುತ್ತಿರುವಾಗ ಅರಣ್ಯ ಸಿಬ್ಬಂದಿಗಳು ಯಾವುದೋ ವಿಚಾರದ ಸಂಬಂಧವಾಗಿ ಅನಪೇಕ್ಷಿತ ಇವರ ಮೇಲೆ ಗುಂಡು ಹಾರಿಸಿದ್ದರಿಂದ ಅವರು ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡಿರುವ ವಿಷಯವನ್ನು ಕಳೆದ ಅಧಿವೇಶನದ

ಸಮಯದಲ್ಲಿ ಗಮನಸೆಳೆಯುವ ಸೂಚನೆ ಮೂಲಕ ಉಲ್ಲೇಖಿಸಿದ್ದೆ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ನಾಣಯ್ಯನವರು ಉತ್ತರ ಕೊಡುತ್ತಾ ಸರ್ಕಾರದಿಂದ ಲೋಪವಾಗಿದ್ದು ಅವರಿಗೆ ಸರ್ಕಾರದಿಂದ ಪೂರ್ಣ ಪ್ರಮಾಣದ ಪರಿಹಾರ ಕೊಡುತ್ತೇವೆ ಮತ್ತು ಔಷಧಿಗೆ ಎಷ್ಟು ಹಣ ಖರ್ಚಾಗಿದೆಯೋ ಅದೆಲ್ಲವನ್ನೂ ಕೊಡುತ್ತೇವೆಂಬ ಭರವಸೆ ನೀಡಿದ್ದರು. ಒಂದು ವರ್ಷ ಕಳೆದರೂ ಇದುವರೆವಿಗೂ ಯಾವುದೇ ಹಣ ಅವರಿಗೆ ಪಾವತಿಯಾಗಲಿಲ್ಲ. ಔಷಧಿಗಾಗಿ ಖರ್ಚು ಮಾಡಿದ 24,000 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಮನೆಯಲ್ಲಿ ಬೀಡಿ ಕಟ್ಟಿ ಜೀವನೋಪಾಯ ಸಾಗಿಸುತ್ತಿದ್ದ ಆ ಮಹಿಳೆ ಇಂದು ತನ್ನ ಎರಡೂ ಕಣ್ಣುಗಳನ್ನು ಕಳೆದುಕೊಂಡಿರುವುದರಿಂದ ನಿತ್ಯದ ಕೆಲಸ ಮಾಡುವುದಕ್ಕಾಗದೆ ಬಹಳ ತೊಂದರೆಯಲ್ಲಿದ್ದಾರೆ. ನಾನು ಮೊನ್ನೆ ದಿವಸ ಅವರ ಮನೆಗೆ ಹೋದಂಥ ಸಂದರ್ಭದಲ್ಲಿ 'ನನಗೆ ನೀವು ಸರ್ಕಾರದಿಂದ ಯಾವುದೇ ಪರಿಹಾರ ದೊರಕಿಸಿಕೊಡುವುದು ಬೇಡ, ಕಳೆದುಕೊಂಡಿರುವ ಕಣ್ಣುಗಳನ್ನು ಸರ್ಕಾರದಿಂದ ನನಗೆ ಕೊಡಿಸಿಕೊಡಿ, ಅಷ್ಟೇ ಸಾಕು' ಎಂದರು. ನಾನು ಸರ್ಕಾರಕ್ಕೆ ಕೇಳುತ್ತಿರುವುದೇನೆಂದರೆ, ಆರ್ಥಿಕ ಇಲಾಖೆಯಿಂದ ಯಾವಾಗ ಕ್ಲಿಯರೆನ್ಸ್ ಬರುತ್ತದೆ? ಕ್ಲಿಯರೆನ್ಸ್ ಬರುವವರೆಗಾದರೂ ಏನಾದರೂ ಪರಿಹಾರ ಕೊಡುತ್ತೀರಾ? ಪರಿಹಾರ ಕೊಡದಿದ್ದರೆ ಅವರು ತಮ್ಮ ನಿತ್ಯ ಕಾಯಕದಲ್ಲಿ ತೊಡಗಿಕೊಳ್ಳಲು ನಿಮ್ಮ ಇಲಾಖೆಯ ಸಿಬ್ಬಂದಿಗಳ ಕಣ್ಣುಗಳನ್ನಾದರೂ ತೆಗೆದು ಅವರಿಗೆ ಕೊಡಿ, ಆಷ್ಟಾದರೆ, ಸಾಕು. ನೀವು ಪರಿಹಾರ ಕೊಡುವುದೇನೂ ಬೇಡ. ಪರಿಹಾರ ಕೊಡುವುದಿದ್ದರೆ ಯಾವಾಗ ಕೊಡುತ್ತೀರಿ? ಕಳೆದ ಸಲದ ಅಧಿವೇಶನದ ಸಂದರ್ಭದಲ್ಲೂ ಕೂಡ ಆ ತರಹದ್ದೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಮಾತನಾಡುತ್ತಾ ಯಾವ ವಿಚಾರವನ್ನು ಪ್ರಸ್ತಾಪಿಸಿದ್ದಾರೋ ಅದಕ್ಕೆ ಸಂಬಂಧಿಸಿದಂತೆ ಏನಾದರೂ ಪರಿಹಾರ ಕೊಡುವುದಾಗಿ ಈಗಾಗಲೇ ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟಿದ್ದರು. ಕಣ್ಣುಗಳನ್ನು ಕಳೆದುಕೊಂಡವರ ಔಷಧಿ ಖರ್ಚಿಗಾಗಿ ಈಗಾಗಲೇ 24,000 ರೂಪಾಯಿಗಳನ್ನು ಕೊಡಲಾಗಿದೆಯೆಂದು ಮಾನ್ಯ ಸದಸ್ಯರು ಹೇಳಿರುವುದರಿಂದ ಕಾಯ್ದೆಯಡಿ ಸರ್ಕಾರದಿಂದ ಅವರಿಗೆ ಎಷ್ಟು ಹಣಕಾಸಿನ ಸೌಲಭ್ಯ ಒದಗಿಸಿಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ :— ಒಂದು ವರ್ಷ ಕಳೆಯಿತು, ಅವರು ಊಟ ಮಾಡುವುದು ಬೇಡವೇ? ಮನೆಯಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅವರಿಗೆ ಕಣ್ಣುಗಳಿಲ್ಲ, ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡಿರುವುದರಿಂದ ನಿಮ್ಮ ಇಲಾಖಾ ಸಿಬ್ಬಂದಿಯಿಂದ ಕಣ್ಣುಗಳನ್ನು ತೆಗೆದು ಅವರಿಗೆ ಕೊಟ್ಟುಬಿಡಿ. ಅವರು ಬೀಡಿ ಕಟ್ಟಿಕೊಂಡು ಜೀವನೋಪಾಯ ಮಾಡಲಿ. ನಾನು ಸರ್ಕಾರಕ್ಕೆ ಎರಡು ಸಲ ಈ ವಿಷಯವಾಗಿ ಕೇಳುತ್ತಿರುವುದರಿಂದ, ತಾವು ದಯವಿಟ್ಟು ಆ ವ್ಯವಸ್ಥೆಯನ್ನಾದರೂ ಮಾಡುತ್ತೀರಾ?

ಛೇರ್ಮನ್ :— ತಾವು ಸರ್ಕಾರದ ಗಮನ ಸೆಳೆದಿದ್ದೀರಿ, ಸಚಿವರು ಆ ಕುರಿತು ಕ್ರಮ ಕೈಗೊಳ್ಳುವುದಾಗಿ ಹೇಳಿರುವುದರಿಂದ ಇನ್ನು ಹೆಚ್ಚಿನ ಚರ್ಚೆ ಬೇಡ.

ಉ) ಕಮಲಾಪುರದಲ್ಲಿ ಗಂಡೋರಿ ನಾಲಾಯೋಜನೆ ಕುರಿತು.

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಸನ್ಮಾನ್ಯ ಛೇರ್ಮನ್‌ರವರೆ, ಗುಲ್ಬರ್ಗ ಜಿಲ್ಲೆಗೆ ಸೇರಿರುವ ನನ್ನ ಮತಕ್ಷೇತ್ರವಾದ ಕಮಲಾಪುರದಲ್ಲಿ ಗಂಡೋರಿ ನಾಲಾ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರ 1995-96ರಲ್ಲಿ ಉತ್ತರ ಕೊಟ್ಟಿದ್ದು ಕ್ರಿ.ಶ. 2000 ಇಸವಿಯೊಳಗೆ ಯೋಜನೆ ಮುಗಿಯುವುದಾಗಿ ತಿಳಿಸಿತ್ತು. ಯೋಜನೆಯ ಕಾರ್ಯದ ಗುತ್ತಿಗೆ ವಹಿಸಿಕೊಂಡಿರುವ ಗುತ್ತಿಗೆದಾರರಿಗೆ ಕೊಡಬೇಕಾಗಿರುವ ಸುಮಾರು ಏಳು ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಇರುವುದರಿಂದ ಆ ಹಣ ಪಾವತಿಯಾಗದಿರುವುದರಿಂದ ಅವರುಗಳು ಕಂಗಾಲಾಗಿದ್ದಾರೆ. ಕೆಲಸ ನಿಲ್ಲಿಸಿರುವುದರಿಂದ ಯೋಜನೆ ಬಹಳ ಕುಂಠಿತಗೊಂಡಿದೆ. ಕಮಲಾಪುರ ಕ್ಷೇತ್ರದಲ್ಲಿ ರೈತರ ಪರವಾಗಿರುವ ಗಂಡೋರಿ ನಾಲಾ ಪ್ರಾಜೆಕ್ಟ್ ಒಂದೇ ಇದ್ದು ಪ್ರಸಕ್ತವರ್ಷ ಇದಕ್ಕಾಗಿ ಐವತ್ತು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಮಾನ್ಯ ಸಚಿವರು ಗುಲ್ಬರ್ಗಾದಲ್ಲಿ ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾರೆ. ಆದರೂ ಇದುವರೆವಿಗೂ ಒಂದು ಕೋಟಿ ರೂಪಾಯಿಯಷ್ಟು ಹಣ ಮಾತ್ರ ಬಿಡುಗಡೆಯಾಗಿದ್ದು, ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಏಳು ಕೋಟಿ ರೂಪಾಯಿಗಳು ಬಾಕಿ ಇರುವುದರಿಂದ ಅವರುಗಳು ಕೆಲಸ ನಿಲ್ಲಿಸಿದ್ದು, ಹಣ ಬಾರದೆ ಕಂಗಾಲಾಗಿರುವುದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಹಾಗೂ ಯೋಜನೆಯನ್ನು ಯಾವಾಗ ಮುಗಿಸುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ಮಾನ್ಯ ಛೇರ್ಮನ್‌ರವರೆ, ಗಂಡೋರಿ ನಾಲಾ ಸುಮಾರು 103 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು ಎಂಟು ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡಲು ಉದ್ದೇಶಿಸಲಾಗಿದೆ. ಮಾನ್ಯ ಸದಸ್ಯರು ಹೇಳಿರುವಂತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಇದುವರೆವಿಗೂ ಸುಮಾರು 21 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಇದರಲ್ಲಿ ಕ್ರಿಟಿಕಲ್ ವರ್ಕ್ಸ್ ಇದ್ದು ಕ್ರಿ.ಶ. 2000 ಇಸವಿಯೊಳಗೆ ಮುಗಿಯುತ್ತದೆ. ಇದಕ್ಕಾಗಿ 50 ಕೋಟಿ ರೂಪಾಯಿಗಳು ಬೇಕಾಗುವುದರಿಂದ ಈ ಕುರಿತು ಮಾಯ ಮುಖ್ಯಮಂತ್ರಿಗಳ ಹತ್ತಿರ ಚರ್ಚಿಸಿದ್ದು ಸದರಿ ಯೋಜನೆಯನ್ನು ಹೊಸದಾಗಿ ರಚನೆಯಾಗುವ ಕರ್ನಾಟಕ ನೀರಾವರಿ ನಿಗಮದಡಿ ತೆಗೆದುಕೊಳ್ಳಬೇಕೆನ್ನುವ ಒಂದು ಯೋಚನೆ ಇದೆ. ಎರಡನೆಯದಾಗಿ, ಭಾರತ ಸರ್ಕಾರದವರು ಎ.ಐ.ಡಿ.ಪಿ.ಯಡಿ ಶೇಕಡ 50 ರಷ್ಟು ಸಾಲ ಕೊಡುತ್ತಿದ್ದು ಈ ಯೋಜನೆಯಡಿ ಗಂಡೋರಿ ನಾಲಾ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿದ್ದೇವೆ. ಇನ್ನೊಂದು ವಾರದಲ್ಲಿ ಈ ಕುರಿತು ತೀರ್ಮಾನ ಮಾಡಲಿದ್ದೇವೆ. ಇವೊತ್ತು ಸಂಜೆ 5.00 ಗಂಟೆಗೆ ಈ ಕುರಿತು

ಏರ್ಪಡಿಸಿದ್ದ ಸಭೆಯನ್ನು ಮುಖ್ಯಮಂತ್ರಿಗಳು ಮುಂದೂಡಿದ್ದಾರೆ. ಅಲ್ಲಿನ ಯೋಜನೆಗೆ ಇದುವರೆವಿಗೂ 21 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿ ಕೆಲಸಮಾಡಿದ್ದು ಯೋಜನೆ ಪೂರ್ಣಗೊಳಿಸಲು ಇನ್ನೂ 30-40, ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದಾದ್ದಿಂದ ಬರುವ 2-3 ವರ್ಷಗಳಲ್ಲಿ ಮುಗಿಸಿಕೊಡುತ್ತೇವೆ. ಕರ್ನಾಟಕ ನೀರಾವರಿ ನಿಗಮದಡಿ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಮುಖ್ಯಮಂತ್ರಿಯವರಿಗೆ ಒಪ್ಪಿಸುತ್ತೇನೆಂಬ ಮಾತನ್ನು ಹೇಳುತ್ತಿದ್ದೇನೆ.

ಉ) ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ ಗ್ರಾಮಗಳಿಗೆ ಸೌಲಭ್ಯ.

ಶ್ರೀ ಶಿವಶಂಕರಪ್ಪ ರಾಚಪ್ಪ ಕಾಶಪ್ಪನವರ್ (ಹುನಗುಂದ) :— ಮಾನ್ಯ ಛೇರ್ಮನ್‌ರವರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಲ್ಲಿ ಸುಮಾರು 35 ಗ್ರಾಮಗಳು ಜಲಾವೃತವಾಗಿ ಮುಳುಗಡೆಯಾಗಿದ್ದು ಮನೆ, ಮಠ, ಆಸ್ತಿ ಜಮೀನುಗಳನ್ನು ಕಳೆದುಕೊಂಡು ಸಂತ್ರಸ್ತರಾದ ಜನರಿಗೆ ಯೋಜನೆಯಿಂದ ಏನಾದರೂ ಲಾಭ ಸಿಗಬೇಕೆಂಬ ದೃಷ್ಟಿಯಿಂದ ನಾನು ಸನ್ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರನ್ನು ಹಿಂದೆ ಅನೇಕ ಬಾರಿ ಭೇಟಿ ಮಾಡಿ ಅವರ ಗಮನ ಸೆಳೆದಿದ್ದೆ. ನಾಲ್ಕೂವರೆ ಟಿ.ಎಂ.ಸಿ. ನೀರು ಸಂಗ್ರಹದ ರಾಮ್‌ತಾಳ್ ಮೇಜರ್ ಲಿಫ್ಟ್ ಇರಿಗೇಶನ್‌ಗೆ ಸಂಬಂಧಿಸಿದಂತೆ ಬಚಾವತ್ ಆಯೋಗದ ತೀರ್ಪಿನಲ್ಲಿರುವುದನ್ನು ಬದಲಿಸಿ ಮರೋಳ್ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ತೀರ್ಮಾನಿಸಿ ಆ ಕುರಿತ ಫ್ರಿಲಿಮಿನರಿ ರಿಪೋರ್ಟ್ ಅನ್ನು ಸರ್ಕಾರ ಈಗಾಗಲೇ ತರಿಸಿದೆ. ಆದರೆ, ಆ ಯೋಜನೆ 'ಬ' ಸ್ಕೀಮಿನಲ್ಲಿರದೆ 'ಎ' ಸ್ಕೀಮೀನಲ್ಲಿ ಬರುವುದರಿಂದ ಇದುವರೆವಿಗೂ ಆ ಯೋಜನೆಯನ್ನು ಪ್ರಾರಂಭಿಸಿರುವುದಿಲ್ಲ. ಯೋಜನೆಯಿಂದ ಸಂತ್ರಸ್ತರಾದ ಜನರಿಗೆ ಅನ್ಯಾಯವಾಗಿರುವುದರಿಂದ ತಕ್ಷಣವೇ ಮರೋಳ್ ಏತನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಸ್ಪಷ್ಟ ನಿಲುವನ್ನು ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ರಾಮತಾಳ್ ಏತ ನೀರಾವರಿ ಯೋಜನೆಯಲ್ಲಿ ಬಚಾವತ್ ತೀರ್ಪಿನಲ್ಲಿ 4 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು 22,260 ಹೆಕ್ಟೇರ್‌ಗೆ ನೀರು ಕೊಡಬೇಕೆಂದು ಹೇಳಿ 98 ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ಈಗಾಗಲೇ ಪ್ರತಿಯೊಂದು 'ಎ' ಸ್ಕೀಮ್‌ನೊಳಗಡೆ ಮಾಡಿ ಫೈನಲ್ ಸ್ಟೇಜ್‌ನಲ್ಲಿರತಕ್ಕಂಥ ಈ ಸ್ಟೇಜ್‌ನಲ್ಲಿ ಇದನ್ನು ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ತಾವು ಏನು ಕೇಳಿದ್ದೀರಿ. ಮುರಗೋಳ್ ಏತನೀರಾವರಿ ಅದರ ಬಗ್ಗೆ ನಾನು ಈಗಾಗಲೇ ತಮಗೆ ಎರಡು ಮೂರು ಸಾರಿ ಹೇಳಿದ್ದೆ. 'ಬ' ಸ್ಕೀಮ್‌ನಲ್ಲಿ ತೆಗೆದುಕೊಳ್ಳೋಣ ಎಂದು ಹೇಳಿ. ನಮಗೆ ಇರತಕ್ಕಂಥ

ಅಲ್ಪಕಾಲಾವಧಿಯಲ್ಲಿ ಅದನ್ನು 'ಎ' ಸ್ಕೀಮ್‌ನಲ್ಲಿ ಸೇರಿಸಿ ಪ್ರತಿಯೊಂದು ಮುಗಿದಿದೆ. ಆಲಮಟ್ಟಿ ರೈಟ್ ಬ್ಯಾಂಕ್ ಕೆನಾಲ್ ಇರುವುದರಿಂದ ಇದನ್ನು ಮಾಡಿಫಿಕೇಶನ್ ಮಾಡುವುದಕ್ಕೆ ಆಗುವುದಿಲ್ಲ. ಮುರಗೋಳ್ ಏತನೀರಾವರಿಯನ್ನು ಕೈಗೆತ್ತಿಕೊಳ್ಳುವುದಕ್ಕೆ ಯಾವ ರೀತಿ ಮಾಡಬೇಕೆಂದು ಯೋಚನೆ ಮಾಡೋಣ. ಚೇಂಜ್ ಅಂತೂ ಮಾಡುವುದಕ್ಕೆ ಆಗುವುದಿಲ್ಲ ಈ ಸ್ಟೇಜ್‌ನಲ್ಲಿ.

ಛೇರ್ಮನ್ :— ಮತ್ತೆ ಚರ್ಚೆ ಬೇಡ ಬಿಡಿ ಅದರ ಮೇಲೆ. ಸುರೇಶ್ ಕುಮಾರ್ ಇಲ್ಲ. ಮಾನ್ಯ ಪ್ರತಾಪ್ ಚಂದ್ರಶೆಟ್ಟಿಯವರೇ ತಾವು ಮಾತನಾಡಿ.

(ಗೊಂದಲ)

ಛೇರ್ಮನ್ :— ತಾವು ಹಿರಿಯ ಸದಸ್ಯರಿದ್ದೀರಿ. ಶೂನ್ಯ ವೇಳೆಯಲ್ಲಿ ಇನ್ನು ಎಷ್ಟು ಉತ್ತರ ಸಿಗುತ್ತದೆ? ತಾವೇ ಹೇಳಿ.

(ಗೊಂದಲ)

ಶ್ರೀ ಕೆ.ಎಸ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ...

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಕ್ರಿಯಾಲೋಪ ಎತ್ತಬಾರದು ಶೂನ್ಯ ವೇಳೆಯಲ್ಲಿ ಎನ್ನುವುದು ಗೊತ್ತು. ತಾವು ಅವರ ಹೆಸರನ್ನು ಕರೆದು ಮಾತನಾಡಿ ಎಂದು ಪ್ರತಾಪಚಂದ್ರಶೆಟ್ಟಿಯವರಿಗೆ ಹೇಳಿದ ಮೇಲೆ ಮತ್ತೆ ಒತ್ತಡಕ್ಕೆ ಮಣಿದು ಮತ್ತೆ ಉತ್ತರ ಕೊಡಿ ಎಂದರೆ ಈ ಸಭೆಯ ಗೌರವ ಎನಾಗುತ್ತದೆ?

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಸದಸ್ಯರಾದ ಕಾಶಪ್ಪನವರು ಅರ್ಥ ಮಾಡಿಕೊಳ್ಳಬೇಕು 729 ಟಿ.ಎಂ.ಸಿ. ನೀರಿಗೆ ಒಂದು ಮಾಸ್ಟರ್ ಪ್ಲಾನ್ ಮಾಡಿದ್ದೇವೆ. ಆ ಮಾಸ್ಟರ್ ಪ್ಲಾನ್ ಅನ್ನು ಸೆಂಟ್ರಲ್ ಗೌರ್ನಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. ಇದು ಇಂಟರ್‌ಸ್ಟೇಟ್ ಡಿಸ್‌ಪ್ಯೂಟ್ ಇರತಕ್ಕಂಥ ರಿವರ್. 4.5 ಟಿ.ಎಂ.ಸಿ. ನೀರನ್ನು ನಾವು ಈಗಾಗಲೇ ಅದಕ್ಕೆ ಸೇರಿಸಿ ರಾಮತಾಳ್ ಏತ ನೀರಾವರಿ ಯೋಜನೆಯನ್ನು ಕೇಂದ್ರ ಸರ್ಕಾರದ ಕ್ಲಿಯರೆನ್ಸ್‌ಗೆ ಕಳುಹಿಸಿಬಿಟ್ಟಿದ್ದೇವೆ. ಈ ಸ್ಟೇಜ್‌ನಲ್ಲಿ ಅದನ್ನು ಚೇಂಜ್ ಮಾಡಿ ಎಂದರೆ ಅದು ಸಾಧ್ಯವಾಗುವುದಿಲ್ಲ. ನಾನು ಮರೋಳ್ ಬಗ್ಗೆ ಪರಿಶೀಲನೆ ಮಾಡುತ್ತೇನೆ ವಿನಹಃ ರಾಮತಾಳ್ ಬದಲಾವಣೆ ಇಲ್ಲ.

ಎ) ಸಮುದ್ರದ ಕೊರೆತಕ್ಕೆ ನದಿ ತಡೆಗೋಡೆ ಹೂಳು ಎತ್ತುವುದರ ಕುರಿತು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಈ ಸಣ್ಣ ನೀರಾವರಿ ಇಲಾಖೆಯಿಂದ ಕೆಲವು ಕಾಮಗಾರಿಗಳು ಆಗದೇ ಹಣ ಪಾವತಿ ಮಾಡತಕ್ಕಂಥ ಕೆಲಸ ನಡೆಯುತ್ತಿದೆ. ಸಮುದ್ರದ ಕೊರೆತ, ನದಿ ತಡೆ ಗೋಡೆ, ಹೂಳು ಎತ್ತುವುದು, ಕಿಂಡಿ ಅಣೆಕಟ್ಟುಗಳನ್ನು ಮಾಡತಕ್ಕಂಥಾದ್ದು ಇಂತಹ ಕೆಲವು ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆ ಮಾಡುತ್ತಿದೆ. ಆದರೆ ಸಮುದ್ರದ ಕೊರತೆಗೆ ಸಣ್ಣ ತಡೆಗೋಡೆಗಳನ್ನು ನಿರ್ಮಿಸುವಲ್ಲಿ ಸ್ಪ್ರಿಪ್ ವರ್ಕ್ ಎಂದು ಹೇಳುವಂತಾದ್ದು ಹಾಕಿರತಕ್ಕಂಥ ಕಲ್ಲುಗಳು ಮುಚ್ಚಿ ಹೋಗಿದೆ, ಕೊಚ್ಚಿ ಹೋಗಿದೆ ಎಂದು ಭಾವಿಸಬಹುದು. ಎನ್ನತಕ್ಕಂಥ ಆಧಾರದ ಹಿನ್ನೆಲೆಯಲ್ಲಿ ಅಂದಾಜು ಪಟ್ಟಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸತಕ್ಕಂಥ ವ್ಯವಸ್ಥೆಯಾಗಿದೆ. ಇದರಿಂದ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗುತ್ತಿದೆ. ಇದರ ಬಗ್ಗೆ ವಿಚಾರವನ್ನು ನಾನು ಕಳೆದ ಬಾರಿ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಆದರ ಬಗ್ಗೆ ತನಿಖೆಯನ್ನು ಮಾಡಿಸುತ್ತೇವೆ ಎನ್ನತಕ್ಕಂಥ ಭರವಸೆ ಕೊಟ್ಟರು ಇದುವರೆಗೂ ತನಿಖೆ ಆಗಿಲ್ಲ. ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಆಗಿಲ್ಲ. ಎರಡನೆಯದು 50 ಸಾವಿರ ರೂಪಾಯಿಗಳ ಒಳಗಿನ ಕಾಮಗಾರಿಗಳನ್ನು ಟೆಂಡರ್ ಇಲ್ಲದೆ ಕೆಲಸವನ್ನು ಸ್ಥಳೀಯ ಅಧಿಕಾರಿಗಳು ಸ್ಥಳೀಯ ಕಛೇರಗಳಿಂದ ಮಾಡಿಸತಕ್ಕಂಥಾದ್ದು ಇತ್ತು. ಈ ಕೆಲಸಗಳು ಆಗದೇ ಬಿಲ್ಲುಗಳನ್ನು ಪಾವತಿಸಿದೆ ಎನ್ನತಕ್ಕಂಥ ವಿಚಾರವನ್ನು ಉಡುಪಿ ಜಿಲ್ಲಾ ಪಂಚಾಯತಿ ಸಭೆಯಲ್ಲಿ ನಿರ್ಣಯ ಮಾಡಿದೆವು ಇದರ ಬಗ್ಗೆ ಸಹ ತನಿಖೆ ಆಗಿಲ್ಲ. ಆ ನಂತರ ಕಳಪೆ ಮ್ಯಾಟನ್ನು ಉಪಯೋಗಿಸುತ್ತಿದ್ದೇವೆ ಎನ್ನತಕ್ಕಂಥ ಅಪಾದನೆಯನ್ನು ಮಾಡಿದ್ದೆ. ಇದರ ಬಗ್ಗೆ ಸಹ ತನಿಖೆ ಮಾಡಲಿಲ್ಲ. ಮತ್ತು ಕಿಂಡಿ ಅಣೆಕಟ್ಟಿಗೆ ಉಪಯೋಗಿಸತಕ್ಕಂಥಾ ಪೈಂಟ್ ಏನು ಇದೆ ಸುಮಾರು 400 ಪಟ್ಟು ದುಬಾರಿ. ಇದರ ಬಗ್ಗೆ ಸಹ ಅಪಾದನೆಯನ್ನು ಮಾಡಿದೆವು. ಇದರ ಬಗ್ಗೆ ಸಹ ತನಿಖೆ ಆಗಿದೆ. ಆದರೆ ವರದಿ ಆಗಿಲ್ಲ ಕ್ರಮ ಆಗಿಲ್ಲ. ಇದರ ಅರ್ಥ ಏನೆಂದರೆ ಇದಕ್ಕೆ ಸಂಬಂಧಪಟ್ಟಂತಹ ಸಚಿವರು ಯಾರಿದ್ದಾರೆ ಅವರು ನಿಷ್ಕ್ರಿಯರಾಗಿದ್ದಾರೆ. ಇಲ್ಲವಾದರೆ ಅವರು ಸಹ ಈ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿದ್ದಾರೆ. ಎನ್ನತಕ್ಕಂಥ ಎರಡೇ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅವರು ನಿಷ್ಕ್ರಿಯರಾಗಿರಬೇಕು. ಇಲ್ಲದಿದ್ದರೆ ಅವರೂ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿರಬೇಕು. ನನಗೆ ಗೊತ್ತಿದೆ ತಾವು ಏನು ಉತ್ತರ ಕೊಡುತ್ತೀರಿ ಎಂದು ವರದಿ ತರಿಸುತ್ತೇನೆ, ಪರಿಶೀಲಿಸುತ್ತೇನೆ, ಕ್ರಮ ಕೈಗೊಳ್ಳುತ್ತೇನೆಂದು. ಈ ಉತ್ತರದಿಂದ ಆಗುವುದಿಲ್ಲ. ನಾನು ಮಾಡಿರತಕ್ಕಂಥಾ ಅಪಾದನೆ ಸತ್ಯವಾದಲ್ಲಿ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಒಂದು ವೇಳೆ ಇದಕ್ಕೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಜವಾಬ್ದಾರಿ ಇರಬೇಕು. ನೀವೂ ಸಹ ಈ ಬಗ್ಗೆ ಹಾರಿಕೆ ಉತ್ತರ ಕೊಟ್ಟರೆ ನೀವೂ ಸಹ ಈ ಅಪಾದನೆಗಳಿಂದ ಮುಕ್ತರಾಗುವುದಿಲ್ಲ. ಮಾನ್ಯ ಅಧ್ಯಕ್ಷಣೆಯವರೇ, ಹಿಂದೆ ದೇವರನ್ನು ಅನುಗ್ರಹಿಸಬೇಕಾದರೆ ಯಾಗ, ಯಜ್ಞ, ಹೋಮ, ಜಪ ತಪ ಎಲ್ಲಾ ಮಾಡಬೇಕಂತೆ ಈಗ ಮಾನ್ಯ ಮಂತ್ರಿಗಳಿಂದ ಏನಾದರೂ ಸಿದ್ಧಿ ಮಾಡಿಕೊಳ್ಳಬೇಕಾದರೆ ಅಥವಾ ಏನಾದರೂ ತನಿಖೆ ಮಾಡಿಸಿಕೊಳ್ಳಬೇಕಾದರೆ ನಾವು ಏನು ಮಾಡಬೇಕು ಎನ್ನತಕ್ಕಂಥಾದ್ದನ್ನು ಅವರು ಹೇಳಬೇಕು.

ಶ್ರೀ ಎಂ.ಎಸ್. ಪಾಟೀಲ್ (ಸಹಕಾರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ನೇರವಾಗಿ ಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ. ನೀವೂ ಭಾಗಿಗಳಾಗಿದ್ದೀರಿ ಎಂದು ತಮಗೆ ಏನಾದರೂ ಆಧಾರ ಇದ್ದರೆ ತಾವು ಹೇಳಿದರೆ ಒಳ್ಳೆಯದು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :— ನಾನು ಏನು ಹೇಳಿದೆ ಅಂದರೆ ಮಂತ್ರಿಗಳು ಒಂದು ನಿಷ್ಠೆಯರಾಗಿರಬೇಕು ಇಲ್ಲದಿದ್ದರೆ ಯಾವ ಮಂತ್ರಿಗಳು ಇದರಲ್ಲಿ ಇದ್ದಾರೆ, ಅವರೂ ಸಹ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿರಬೇಕು.

ಶ್ರೀ ಎಂ.ಎಸ್. ಪಾಟೀಲ್ :— ಅದಕ್ಕೆ ಏನಾದರೂ ಆಧಾರಗಳು ಇದ್ದರೆ ಕೊಡಿ, ಸುಮ್ಮನೆ ಆಪಾದನೆ ಮಾಡುವುದು ಸರಿಯಲ್ಲ. ಆಪಾದನೆ ಮಾಡುವಾಗ ಜವಾಬ್ದಾರಿಯುತವಾಗಿ ಮಾಡಬೇಕಾಗುತ್ತೆ. ಈಗ ಅವರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಖಂಡಿತವಾಗಿ ಯಾರ್ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳುತ್ತೇವೆ.

6.10 ಪಿ.ಎಂ.

ಎ) ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಗೆ ಚುನಾವಣೆ.

+ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್) :— ಮಾನ್ಯ ಛೇರ್ಮನ್‌ರವರೇ, ಮೊನ್ನೆ ಮಾರಾಟ ಮಹಾ ಮಂಡಲದಲ್ಲಿ 14ನೇ ತಾರೀಖು ನಿರ್ದೇಶಕರ ಚುನಾವಣೆ ಇತ್ತು. 14 ನೇ ತಾರೀಖು ಚುನಾವಣೆ ಇದ್ದರೆ 13ನೇ ತಾರೀಖು ಚುನಾವಣಾ ಪಟ್ಟಿ ತಯಾರಾಗುತ್ತದೆ. ಮೊದಲು ಮಾಡಿದ ಪಟ್ಟಿಯೇ ಬೇರೆ. 13ನೇ ತಾರೀಖು ಮಾಡಿದ ಪಟ್ಟಿಯಿಂದಾಗಿ ಹೆಚ್ಚಾದ 200 ರಷ್ಟು ಜನ ಬೇರೆ ಕಡೆಯಿಂದ ಬಂದು ಓಟು ಹೇಗೆ ಹಾಕಬೇಕು? 14ನೇ ತಾರೀಖು ಓಟು ಆಯಿತು. ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ವ್ಯವಸ್ಥಿತವಾಗಿ ಚುನಾವಣೆ ಆಯಿತು. ಈಗ ಹಾಲಿ ಇದ್ದಂತಹ ಅಧ್ಯಕ್ಷರು, ಜನರಲ್ ಮ್ಯಾನೇಜರ್ ಮತ್ತು ಷಣ್ಮುಗಪ್ಪ ಎಂಬ ನಿರ್ದೇಶಕರು ಸೇರಿಕೊಂಡು ಮನಸ್ಸಿಗೆ ಬಂದಂತೆ ಅಮೆಂಡ್‌ಮೆಂಡ್ ಮಾಡಿಕೊಂಡಿದ್ದಾರೆ. ಒಂದೇ ವರ್ಷದಲ್ಲಿ ಮೂರು ಜನರಲ್ ಬಾಡಿ ಮೀಟಿಂಗ್‌ಗಳಾಗಿವೆ. ತಮಗೆ ಬೇಕಾದಂತೆ ಅಮೆಂಡ್‌ಮೆಂಟ್ ಮಾಡಿಕೊಂಡು ಕಳೆದ 12 ವರ್ಷಗಳಿಂದ ಚುನಾವಣೆ ಅಲ್ಲಿ ಆಗಿಲ್ಲ. ನಾನು 35 ವರ್ಷಗಳಿಂದ ಅಲ್ಲಿ ಡೈರೆಕ್ಟರ್ ಆಗಿದ್ದೇನೆ. ಅದಕ್ಕಾಗಿ ನಾನು ಈ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ನನಗೆ ಒಂದು ರೀತಿಯಿಂದ ಅಸಮಾಧಾನವಾಗುತ್ತಿದೆ. ಇವತ್ತು ಆ ಮಹಾ ಮಂಡಲಿ ಮಾರಾಟಕ್ಕೆ ಹೋಗತಕ್ಕಂಥ ಪರಿಸ್ಥಿತಿ ಇದೆ. 22 ಕೋಟಿ ರೂಪಾಯಿಗಳ ನಷ್ಟವನ್ನು ಅದು ಅನುಭವಿಸಿದೆ. ಇವತ್ತು ಅದರ ಪರಿಸ್ಥಿತಿ ಅಲ್ಲಿಯ ನೌಕರರಿಗೆ ಸಂಬಳ ಕೊಡಲಾಗದಂತೆ ಇದೆ. ಅಪೆಕ್ಸ್ ಬ್ಯಾಂಕ್‌ನಲ್ಲಿ ಮಂಡಲಿಯ ಬಿಲ್ಡಿಂಗ್ ಒಂದನ್ನು ಅಡವು ಇಟ್ಟಿದ್ದಾರೆ. ಇನ್ನೊಂದು ಬಿಲ್ಡಿಂಗ್ ಅನ್ನು ಅಡವು ಇಡಲು ರೆಡಿ ಆಗಿದ್ದಾರೆ. ಇನ್ನೊಂದು ಸ್ವಲ್ಪ ದಿವಸವಾದರೆ ಅಲ್ಲಿರತಕ್ಕಂಥ

ನೌಕರರು ಬೀದಿ ಪಾಲಾಗುತ್ತಾರೆ, ಅವರಿಗೆ ಸಂಬಳವೂ ಕೂಡ ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ 14 ನೇ ತಾರೀಖು ಚುನಾವಣೆ ಆಗಿ ನಿನ್ನೆ 29ನೇ ತಾರೀಖು ಅಧ್ಯಕ್ಷರ ಚುನಾವಣೆ ಇತ್ತು. ಆ ಚುನಾವಣೆ ನಡೆಯಬಾರದೆಂದು ಸರ್ಕಾರದಿಂದ ರಿಟರ್ನಿಂಗ್ ಆಫೀಸರ್ ಮೇಲೆ ಒತ್ತಡ ಮತ್ತು ಆದೇಶಗಳು ಬಂದವು. ಎರಡರ ಫಲಿತಾಂಶ ಕೋರ್ಟ್ ಆದೇಶಿಸಿದರು ಪ್ರಕಟಿಸದೇ ಹಾಗೇ ಇರಿಸಿದರು. ಪ್ರತಿ ಹಂತದಲ್ಲಿ ಸರ್ಕಾರದಿಂದ ಒತ್ತಾಯ ಇತ್ತು. ವಿಶೇಷವಾಗಿ ಟಿಎಪಿಸಿಎಂಎಸ್, ಕುಂದಾಪುರದಲ್ಲಿ 1 ಲಕ್ಷ 63 ಸಾವಿರ ರೂಪಾಯಿಗಳು ಬಾಕಿ ಇದೆ ಎಂದು ಹೇಳಿ ದಿನಾಂಕ 20ರಂದು ಅವರಿಗೆ ನೋಟೀಸ್ ಕೊಡುತ್ತಾರೆ. 1993ರಲ್ಲೇ ಕೋರ್ಟಿನಲ್ಲಿ, ಈ ನಿರ್ದೇಶಕರ ಬಾಕಿ ಇಲ್ಲ ಎಂದು ತೀರ್ಮಾನವಾಗಿದೆ. ಸರ್ಕಾರದಿಂದ ಒತ್ತಾಯ ಮಾಡಿಸಿ ಹೇಳಿ ಅವನ ನಾಮಿನೇಷನ್ ಪೇಪರ್ ಅನ್ನು ರಿಜೆಕ್ಟ್ ಮಾಡಿಸಿದರು. ಅದಕ್ಕಾಗಿ ಅವರು ಕೋರ್ಟಿಗೆ ಹೋದರು. ಕೋರ್ಟಿನಿಂದ ಅವನ ನಾಮಿನೇಷನ್ ಅಕ್ಸೆಪ್ಟ್ ಆಯಿತು. ಚುನಾವಣೆ ಕೂಡ ಆಯಿತು. ಚುನಾವಣೆಯಲ್ಲಿ ಅವ ಗೆದ್ದು ಬಂದ. ಗೆದ್ದ ನಂತರ ಅವನನ್ನು ಪುನಃ ಅರಿಸುಬಾರದು ಎಂಬ ಉದ್ದೇಶದಿಂದ ಅಲ್ಲಿಯ ಜನರಲ್ ಮ್ಯಾನೇಜರ್ ಅವನ ಚುನಾವಣೆಯ ಫಲಿತಾಂಶ ಪ್ರಕಟಿಸಬಾರದೆಂದು ಪುನಃ ಕೋರ್ಟಿಗೆ ಹೋದರು.

ಛೇರ್ಮನ್ :— ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ಅದನ್ನು ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ದಯವಿಟ್ಟು ನಾನು ಪೂರ್ತಿ ಹೇಳುವುದನ್ನು ಕೇಳಿ. ನಾನು ಅರ್ಧ ವಿಷಯ ಮಾತ್ರ ಹೇಳಿದರೆ ಸಾಕೇ? ತಾವು ಬೇಡ ಎನ್ನುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಛೇರ್ಮನ್ :— ಬಹಳ ಹೊತ್ತು ಪ್ರಸ್ತಾಪಿಸಲು ತೆಗೆದುಕೊಳ್ಳಬೇಡಿ, ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಈ ವಿಷಯವೇ ಆ ರೀತಿ ಇದೆ. ತಾವು ಇದಕ್ಕೆ ಒಂದು ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಆಗ ಪೂರ್ತಿ ವಿಷಯ ಚರ್ಚೆ ಮಾಡೋಣ. ಇಲ್ಲದಿದ್ದರೆ ಸಾಧ್ಯವಾ ಹೇಳುವುದಕ್ಕಾಗುತ್ತದೆ? ಹೇಳಬೇಕಾದುದನ್ನು ನಾನು ಹೇಳಲೇಬೇಕಲ್ಲವೇ? ವಿಷಯ ಒಂದೇ ನಿಮಿಷದಲ್ಲಿ ಹೇಳಿ ಎಂದರೆ ನಾನು ಹೇಗೆ ಹೇಳುವುದಕ್ಕಾಗುತ್ತದೆ?

ಛೇರ್ಮನ್ :— ಅದನ್ನು ಸಂಕ್ಷಿಪ್ತವಾಗಿ ಬೇಗ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಚೇರ್ಮನ್‌ರವರೇ, ದಯವಿಟ್ಟು ನನಗೆ ಇದನ್ನು ಪೂರ್ಣವಾಗಿ ಪ್ರಸ್ತಾಪಿಸಲು ತಾವು ಇನ್ನೆ ಅವಕಾಶ ಮಾಡಿಕೊಡಬೇಕು. ಹೊನ್ನೆ ಕೋರ್ಟಿನಿಂದ ತೀರ್ಮಾನ ಬಂತು ಆದರೆ ಫಲಿತಾಂಶ ಬಂತು. 27ನೇ ತಾರೀಖು

ಫಲಿತಾಂಶ ಬಂತು. 29ನೇ ತಾರೀಖು ಚುನಾವಣೆಯಲ್ಲಿ ಭಾಗವಹಿಸುವುದಕ್ಕಾಗಿ ಆತ ಊರಿಗೆ ವಾಪಸ್ ಹೋಗಿ ಬರುತ್ತಿದ್ದ. ಆತ ಬೆಳಿಗ್ಗೆ 7 ಗಂಟೆಗೆ ಬಸ್ ಬರುತ್ತದೆ ಎಂದು ನನಗೆ ಹೇಳಿದ್ದ. 7 ಗಂಟೆಗೆ ಬಸ್ಸಿಗೆ ಅವನನ್ನು ಕರೆತರಲು ನಾನು ನನ್ನ ಕಾರನ್ನು ಕಳುಹಿಸಿದ್ದೆ. ಆ ಬಸ್ಸು ಐದೂವರೆ ಗಂಟೆಗೆ ಬಂದಿದೆ. 5-6 ಗೂಂಡಾಗಳು ಅವನಿಗೆ ಕುತ್ತಿಗೆ ಹಿಡಿದು ಹೊಡೆದು, ಅವನನ್ನು ಹಿಸುಕಿ ಫಜೀತಿ ಮಾಡಿ, 12 ಗಂಟೆಯ ವೇಳೆಗೆ ಹೊಸೂರು ರಸ್ತೆಯಲ್ಲಿ ಒಂದೆಡೆ ಕೂಡಿ ಹಾಕಿದ್ದಾರೆ. 12 ಗಂಟೆಗೆ ಈ ರೀತಿ ಘಟನೆ ಆಗಿದ್ದು ನನಗೆ ಗೊತ್ತಾಗಿಲ್ಲ. ನಾನೂ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಲು ಹೋಗಿದ್ದೆ. ನಾನೂ ಮೀಟಿಂಗ್‌ನಲ್ಲಿದ್ದೆ. ನಾನು ಏಕೋ ಅವನು ಬಂದಿಲ್ಲ ಎಂದುಕೊಂಡು ಸುಮ್ಮನಿದ್ದೆ. ನಾನೇನೂ ಚುನಾವಣೆಯಲ್ಲಿ ನಿಂತಿರಲಿಲ್ಲ, ಅದನ್ನು ನಾನು ಒಪ್ಪುತ್ತೇನೆ. ಒತ್ತಾಯ ಮಾಡಿ ಅವನನ್ನು ಚುನಾವಣೆಗೆ ಬರಗೊಡಲಿಲ್ಲ. ಅವನನ್ನು ಕಿಡ್‌ನ್ಯಾಪ್ ಮಾಡಿದರು. ಅವನನ್ನು ಕಿಡ್‌ನ್ಯಾಪ್ ಮಾಡಿದ್ದರೂ ಕೂಡ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ, ಸಂಶಯವೂ ಕೂಡ ಇರಲಿಲ್ಲ. ನಾನು ಅದರ ಬಗ್ಗೆ ಮೀಟಿಂಗ್‌ನಲ್ಲಿ ಯಾವ ಆಕ್ಷೇಪವನ್ನೂ ಕೂಡ ಎತ್ತಿರಲಿಲ್ಲ. ಅಲ್ಲಿ ಏನಾಯಿತು ಎಂದರೆ, ಯಾವಾಗ ನಾನು ಮೀಟಿಂಗ್ ಮುಗಿಸಿ ಮನೆಗೆ ಹೋದನೋ, 12 ಗಂಟೆಗೆ ಅವನನ್ನು ಎಲ್ಲಿಗೆ ಎಳೆದುಕೊಂಡು ಹೋಗಿದ್ದರೋ ಅಲ್ಲಿಂದ ಅವನನ್ನು ವಾಪಸ್ ತಂದು ಅವನಿಗೆ ಹೊಡೆದು ಅಲ್ಲಿ ಕೂರಿಸಿ ಹೋಗಿದ್ದರು. ಅವನು ನನ್ನ ಮನೆಗೆ ಬಂದು ಅಳಲು ಶುರು ಮಾಡಿದ. ಸಾರ್ ನಾನು ಬಡವ, ಬಡಬ್ರಾಹ್ಮಣ, ನನ್ನ ಗತಿ ಹೀಗಾಗಿದೆ, ನನ್ನನ್ನು ಹೊಡೆದರು, ಕೂಡಹಾಕಿದರು, ಗುದ್ದಿದರು, ನನಗೆ ಮೀಟಿಂಗ್ ಬರಲು ಬಿಡಲಿಲ್ಲ, ನನ್ನ ಗತಿ ಈ ರೀತಿಯಾಗಿದೆ, ನಾನು ರಾಜೀನಾಮೆ ಕೊಟ್ಟು ಬೆಂಗಳೂರಿಗೆ ಹೋಗುತ್ತೇನೆ, ನಾನು ಇನ್ನೆಂದಿಗೂ ಬರುವುದಿಲ್ಲ, ನನ್ನಿಂದ ತಪ್ಪಾಗಿದೆ ಎಂದು ಆತ ಅಳಲು ಶುರು ಮಾಡಿದ. ನಾನು ಏಕಪ್ಪ ನಿನಗೆ ಏನಾಯಿತು ಎಂದಾಗ ಆತ ನಡೆದ ವಿಷಯ ತಿಳಿಸಿದ.

ಛೇರ್ಮನ್:— ನೀವು ಪ್ರಸ್ತಾಪ ಮಾಡಿದ್ದು ಆಯಿತಲ್ಲಾ. ಅದನ್ನೇ ಬಹಳ ಕಥೆ ಮಾಡಿಕೊಂಡು ಹೇಳಬೇಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:— ನಾವು ಪೂರ್ತಿಯಾಗಿ ಹೇಳಬಾರದು ಎಂದರೆ ಹೇಗೆ? ನಾವು ಇಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿರುವಂತಹ ಉದ್ದೇಶ ಹೇಗೆ ಈಡೇರುತ್ತದೆ.

ಛೇರ್ಮನ್:— ನೀವು ಪ್ರಸ್ತಾಪ ಮಾಡಿದ್ದು ಆಯಿತಲ್ಲಾ, ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:— ನಾನು ಪೂರ್ತಿ ಹೇಳುವುದು ಬೇಡವೇ? ನಾನು ಪೂರ್ತಿ ಹೇಳದೇ ಅವರು ಉತ್ತರ ಕೊಡುತ್ತಾರಾ? ನಾನು ಹೇಳದೇ ಅವರು

ಉತ್ತರ ಕೊಡುತ್ತಾರೆ ಎನ್ನುವುದಾದರೆ ಅವರು ಉತ್ತರ ಕೊಡಲಿ ಬಿಡಿ. ನಮಗೆ ಪೂರ್ತಿ ಪ್ರಸ್ತಾಪಿಸಲು ಬಿಡದೇ ಇದ್ದರೆ ಹೇಗೆ? ಅವನಿಗೆ ಹಿಡಿದು ಹೊಡೆದು ಮಾಡಿದಾಗ ಆತ ಅಳುತ್ತಾ ಹೋಗಿ ಅದರ ಬಗ್ಗೆ ಕಂಪ್ಲೇಂಟ್ ಮಾಡಿದ್ದಾನೆ.

ಛೇರ್ಮನ್ :— ತಾವು ಕಳುಹಿಸಿದ ನೋಟೀಸ್ ಅನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಸರ್ಕಾರ ಏನು ಉತ್ತರ ಹೇಳುತ್ತದೋ ಕೇಳೋಣ ಇರಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಅಲ್ಲಿ ಒಬ್ಬ ಚುನಾಯಿತ ಪ್ರತಿನಿಧಿಯೊಬ್ಬ ಹೊಡೆದು ಕೂಡಿ ಹಾಕಿದ್ದಾರೆ.

(ಗೊಂದಲ)

ಛೇರ್ಮನ್ :— ನೀವು ಪ್ರಸ್ತಾಪ ಮಾಡಿ ಆಯಿತಲ್ಲಾ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಇದರ ಬಗ್ಗೆ ಸಿಓಡಿ ತನಿಖೆ ಮಾಡಬೇಕು. ಈ ಚುನಾವಣೆಯನ್ನು ರದ್ದುಪಡಿಸಬೇಕು. ಚುನಾವಣೆಯನ್ನು ರದ್ದುಪಡಿಸುವುದಲ್ಲದೇ ಪುನಃ ಅವನಿಗೆ ಚುನಾವಣೆಯಲ್ಲಿ ಭಾಗವಹಿಸುವ ವ್ಯವಸ್ಥೆ ಮಾಡಿಕೊಡಬೇಕು, ಇದು ಸರ್ಕಾರದ ಜವಾಬ್ದಾರಿ. ಸರ್ಕಾರ ಅದನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತೊಂದು ಹೇಳಿಕೆಯೊಂದನ್ನು ನಾನು ನೋಡಿದ್ದೇನೆ. ಇದು ಅನ್ಯಾಯ, ಗುರುಪಾದಪ್ಪನವರು ಸುಳ್ಳು ಹೇಳಿದ್ದಾರೆ. ಎಂದು ಹಾಲಿ ಇರತಕ್ಕಂಥ ಅಧ್ಯಕ್ಷರು ಇವತ್ತು ಒಂದು ಅಪಾದನೆಯನ್ನು ಮಾಡಿದ್ದಾರೆ.

ಛೇರ್ಮನ್ :— ಮಾನ್ಯ ಸಚಿವರು ಉತ್ತರ ಕೊಡಲಿ ಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಆ ಪತ್ರವನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಅವನು ಈ ಪತ್ರ ಬರೆದಿದ್ದಾರೆ, ಚುನಾವಣೆ ಆಗುತ್ತಿತ್ತು.

ಶ್ರೀ ಕೆ. ಶ್ರೀನಿವಾಸಗೌಡ :— ಛೇರ್ಮನ್‌ರವರೇ, ನಾನು ಮಹಾ ಮಂಡಳಿಯ ಅಧ್ಯಕ್ಷನಾಗಿರುವುದರಿಂದ ನನಗೂ ಕೂಡ ತಾವು ಮಾತನಾಡಲು ಅವಕಾಶ ಕೊಡಬೇಕು..

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ನಾನು ಮಾತನಾಡಿದ ಮೇಲೆ ನೀವು ಮಾತನಾಡಿ..

(ಗೊಂದಲ)

ಛೇರ್ಮನ್ :— ಮಾನ್ಯ ಮಂತ್ರಿಗಳು ಉತ್ತರ ಹೇಳಿಬಿಡಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :—.....ಇದರ ಬಗ್ಗೆ ಸಿಓಡಿ ತನಿಖೆ ಮಾಡಬೇಕು..

(ಗೊಂದಲ)

ಛೇರ್ಮನ್ :— ಮಾನ್ಯ ಶ್ರೀನಿವಾಸಗೌಡರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಕೆ. ಶ್ರೀನಿವಾಸಗೌಡ :— ಛೇರ್ಮನ್‌ರವರೇ, ದಯವಿಟ್ಟು ನಾನು ಹೇಳುವುದನ್ನು ಹೇಳಿ. ಮಾನ್ಯ ಸದಸ್ಯರು ನನ್ನ ಮೇಲೆ ನೇರವಾಗಿ ಆರೋಪ ಮಾಡಿರುವುದರಿಂದ ನನಗೆ ಮಾತನಾಡಲು ಅವಕಾಶ ಕೊಡಬೇಕು. ನಾನೂ ಕೂಡ ಈ ಮನೆಯ ಸದಸ್ಯನಾಗಿದ್ದೇನೆ. ನಾನು ಮಾತನಾಡಿದ ಮೇಲೆ ಸರ್ಕಾರ ಏನು ಉತ್ತರ ಕೊಡುತ್ತದೋ ಅದನ್ನು ಕೊಡಲಿ.

(ಗೊಂದಲ)

ಛೇರ್ಮನ್ :— ಶ್ರೀನಿವಾಸಗೌಡರೇ, ನಿಮಗೆ ಮಾತನಾಡಲು ಅವಕಾಶ ಇಲ್ಲ.

(ಗೊಂದಲ)

ಶ್ರೀ ಬಿ.ಬಿ. ಶಿವಕುಮಾರ್ :— ಮಾನ್ಯ ಛೇರ್ಮನ್‌ರವರೇ, ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಯಾರ ಮೇಲೆ ಆರೋಪ ಮಾಡಿದ್ದರೋ ಅವರೂ ಕೂಡ ಈ ಸದನದ ಗೌರವಾನ್ವಿತ ಸದಸ್ಯರಾಗಿದ್ದಾರೆ. ಮಾನ್ಯ ಮಂತ್ರಿಗಳು ಮೊದಲು ಸರ್ಕಾರದ ಪರವಾಗಿ ಉತ್ತರ ಕೊಡಲಿ. ಮಾನ್ಯ ಸದಸ್ಯರ ಆರೋಪಕ್ಕೆ ಶ್ರೀನಿವಾಸಗೌಡರೂ ಕೂಡ ಉತ್ತರಿಸಲು ತಾವು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀಗುರುಪಾದಪ್ಪ ನಾಗಮಾರಪಲ್ಲಿ :— ನಾನು ಯಾರ ಹೆಸರನ್ನೂ ಕೂಡ ಹೇಳಿಲ್ಲ, ನಾನು ಅಧ್ಯಕ್ಷ ಎಂದು ಮಾತ್ರ ಉಲ್ಲೇಖಿಸಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ :— ಹೆಸರು ಹೇಳದಿದ್ದರೂ ಸಹಾ ಅಧ್ಯಕ್ಷ ಎಂದು ಹೇಳಿದ್ದೀರಿ. 'ಅಧ್ಯಕ್ಷ' ಎಂದರೆ ನಾನೇ.

ಛೇರ್ಮನ್ :— ಆಯಿತು, ತಾವು ಹೇಳಬೇಕಾಗಿರುವುದನ್ನು ಒಂದೇ ನಿಮಿಷದಲ್ಲಿ ಹೇಳಿಬಿಡಿ.

ಶ್ರೀ ಕೆ. ಶ್ರೀ ನಿವಾಸಗೌಡ :— ಆಯಿತು. ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ಹೇಳಿದಂತೆ ನಮ್ಮ ಮಹಾ ಮಂಡಲದಲ್ಲಿ 18 ಕೋಟಿ ರೂಪಾಯಿಗಳ ನಷ್ಟವಾಗಿದೆ. ಅವರು ಅಧ್ಯಕ್ಷರಾಗಿದ್ದಾಗಲೇ 101/2 ಕೋಟಿರೂಪಾಯಿಗಳ ನಷ್ಟವಾಗಿತ್ತು. ಅವರು ಮೂರು ವರ್ಷಗಳ ಕಾಲ ಇದ್ದರು. ಆಗಿನ ಆಡಳಿತ ಮಂಡಲಿಯ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಒಬ್ಬರು ಇವರ ಕಾಲದಲ್ಲಿ ಇವರಿಗೇ ಗೊತ್ತಿಲ್ಲದಂತೆ ಶೇಕಡ

4 ರಷ್ಟು ಬಡ್ಡಿಯ ದರ ಇಟ್ಟಿದ್ದಂತಹ ಒಂಭತ್ತು ಕೋಟಿ ಬೆಲ್ಲದ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿದ್ದರು. ನಾನು ಹಿಂದೆ ಐದು ವರ್ಷ ಕಾಲ ಇದ್ದಾಗ ಸುಮಾರು ಒಂದು ಕೋಟಿ ಬೆಲ್ಲದ ಲಾಭವಾಗಿತ್ತು. ಅದರೆ ಇವರ ಕಾಲದಲ್ಲಿ ಮೂರು ವರ್ಷಗಳಲ್ಲಿ ಹತ್ತೂವರೆ ಕೋಟಿ ರೂಪಾಯಿಗಳು ನಷ್ಟವಾಯಿತು. ಇದಾದ ಮೇಲೆ ಹತ್ತು ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿದ್ದರಿಂದ ಹಣದ ಅಭಾವವಾಯಿತು. ಇದರಿಂದ ಸ್ವಲ್ಪ ಮಟ್ಟಿನ ತೊಂದರೆಯಾಗಿದೆಯೇ ವಿನ: ಇವರು ಹೇಳಿದಂತೆ ಬಿಲ್ಡಿಂಗ್ ಅನ್ನು ಅಡವು ಇಟ್ಟಿಲ್ಲ. ಮಹಾಮಂಡಲಿಗೆ ಸುಮಾರು 250 ಕೋಟಿ ರೂಪಾಯಿಗಳ ಆಸ್ತಿ ಇದೆ. ನಾವೇನೂ ಅಷ್ಟಾಗಿ ಹೆದರಿಕೊಳ್ಳಬೇಕಾಗಿಲ್ಲ. ಮಾನ್ಯ ಸದಸ್ಯರು ಜುನಾವಣೆ ವಿಷಯ ಪ್ರಸ್ತಾಪ ಮಾಡಿದರು. 14ನೇ ತಾರೀಖು ನಿರ್ದೇಶಕರ ಜುನಾವಣೆ ಇತ್ತು. ಕಡೆಯ ದಿವಸ ಅಂದರೆ 13ನೇ ತಾರೀಖು ಹೈಕೋರ್ಟ್‌ನಿಂದ ಎಲ್ಲರಿಗೂ ಓಟು ಹಾಕುವ ಅವಕಾಶ ಕೊಡಬೇಕೆಂಬ ಡೈರೆಕ್ಷನ್ ಬಂದಿತು. ಯಾರ್ಯಾರು ವ್ಯಾಪಾರ ಮಾಡಿರುತ್ತಾರೋ ಅವರಿಗೇ ಓಟು ಮಾಡಲು ಅವಕಾಶ ಮಾಡಿಕೊಡಬೇಕೆಂದು ಮೊದಲು ತಕರಾರು ಆಗಿತ್ತು. ಜನರಲ್ ಬಾಡಿ ಮಾಡಿದ್ದೆವು. ಇವರೂ ಕೂಡ ಇದರಲ್ಲಿ ಒಬ್ಬ ಸದಸ್ಯರಾಗಿ ಜಾಯಿನ್ ಆಗಿದ್ದರು. ಅಡಳಿತ ಮಂಡಳಿ ಯಾವ ಒಂದು ತೀರ್ಮಾನ ಮಾಡಿದ್ದೇವೋ ಆ ತೀರ್ಮಾನಕ್ಕೆ ಇವರೂ ಕೂಡ ಒಬ್ಬ ಸದಸ್ಯರಾಗಿ ಜಾಯಿನ್ ಆಗಿದ್ದರು. ಆಡಳಿತ ಮಂಡಳಿ ಯಾವ ಒಂದು ತೀರ್ಮಾನ ಮಾಡಿದ್ದೇವೋ ಆ ತೀರ್ಮಾನಕ್ಕೆ ಇವರೂ ಕೂಡ ಒಬ್ಬ ಭಾಗಿಗಳಾಗಿದ್ದಾರೆ. ಅದನ್ನೇ ಈಗ ಇವರು ಪ್ರಶ್ನೆ ಮಾಡುತ್ತಿದ್ದಾರೆ. ಅವರು ಹೇಳಿದಂತೆ ಜುನಾವಣೆಯಲ್ಲಿ ಏನೂ ಅಂತಹ ಅವ್ಯವಹಾರ ನಡೆದಿಲ್ಲ. ಪಣ್ಣಾಳ್ಳ ಎಂಬುವರ ಹೆಸರನ್ನು ಹಿಡಿದು ಅವರು ಹೇಳಿದ್ದಾರೆ. ನಾನೂ ಕೂಡ ಜುನಾವಣೆಗೆ ನಿಂತಿದ್ದೆ. ನಾವು ಜುನಾವಣೆಯ ಕಡೆಗೆ ಗಮನ ಕೊಟ್ಟಿದ್ದೆವು. ತಿಮೊಗ್ಗದಲ್ಲಿ ಮೂರೇ ಮೂರು ಓಟು ಇತ್ತು. ಆ ಮೂರು ಓಟಿನಲ್ಲಿ ಎರಡು ಓಟು ಅವರ ಕ್ಯಾಂಡಿಡೇಟ್‌ಗೇ ಬರುವಂತೆ ಇವರು ಒಂದು ಓಟು ಬೋಗಸ್ ಮಾಡಿಸಿದರು. ನನಗೆ ಇದು ಗೊತ್ತೇ ಇರಲಿಲ್ಲ. ಒಬ್ಬ ಎಂಎಲ್‌ಸಿಯಾದ ಶಾಂತವೀರಪ್ಪಗೌಡ ವಿರುದ್ಧ ಇವರು ಆ ಕೆಲಸ ಮಾಡಿದರು. ನಾನು ಇದು ನ್ಯಾಯವಲ್ಲ, ಏನು ಗುರುಸಾದಪ್ಪನವರೇ, ನೀವು ಈ ರೀತಿ ಮಾಡಿದ್ದೀರಿ ಎಂದು ನೇರವಾಗಿ ಅವರಿಗೆ ಹೇಳಿದಾಗ ಇವರಿಗೆ ಸಿಟ್ಟು ಬಂದಿತು. ಕಡೆಗೆ ಎಲೆಕ್ಷನ್ ಆಫೀಸರ್‌ಗಳು ಅದನ್ನು ಪೋಸ್ಟ್‌ಪೋನ್ ಮಾಡಿದರು. ಈ ಕುಂದಾಪುರದ ಮನುಷ್ಯನ ಮುಖ ಕೂಡ ನನಗೆ ಪರಿಚಯವಿಲ್ಲ. ಅವನು ಜುನಾವಣೆಗೆ ಬಂದಾಗ ಆಪ್ಲಿಕೇಷನ್ ಹಾಕಿಕ್ಕೆ ದಿವಸ ಸಹ ಛೇಂಬರ್‌ಗೆ ಬಂದಿದ್ದ. ಅವನನ್ನು ಆಗ ನೋಡಿದ್ದು ಬಿಟ್ಟರೆ ಮತ್ತೆ ಜಾಸ್ತಿ ಅವನನ್ನು ನೋಡೇ ಇಲ್ಲ. ಆ ರೀತಿ ಏನಾದರೂ ಯಾರಾದರೂ ಹೊಡೆದಿಟ್ಟರೆ ಸಿಟ್ಟಿ ತನಿಖೆ ಅಥವಾ ಸಿಬಿಐ ತನಿಖೆಯಾದರೂ ಮಾಡಲಿ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಛೇರ್ಮನ್:— ಮತ್ತೆ ಇದನ್ನು ಚರ್ಚೆ ಮಾಡುವುದು ಬೇಡ. ಸದನವನ್ನು ರಣರಂಗ ಮಾಡಬೇಡಿ. ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :— ಒಮ್ಮೆ ಅವರು ಗೆದ್ದಿದ್ದಾರೆ. ಇದು ಮೊದಲಿನಿಂದಲೂ ನಮ್ಮ ನಮ್ಮಲ್ಲೇ ಬಂದಿದ್ದು.

(ಗೊಂದಲ)

ಛೇರ್ಮನ್ :— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ನಾನು ಬೋರ್ಡ್‌ನಲ್ಲಿ ಇದ್ದೆ. ಏನೇನು ಆಗಿದೆ ಎಂದು ಸಿಓಡಿ ಎನ್‌ಕ್ವೈರಿ ಮಾಡಿ ಎಲ್ಲ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಎನ್. ಸುರೇಶ್ ಕುಮಾರ್ :— ವಿಧಾನಸಭೆ ವೇದಿಕೆ ಸದಸ್ಯರ ಪರಸ್ಪರ ಪರಿಷತ್ತು ವೇದಿಕೆಯಾಗಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಸದಸ್ಯರು ಒಬ್ಬರ ಮೇಲೆ ಒಬ್ಬರು ಆರೋಪ ಮಾಡಿದ್ದಾರೆ. ನೋಟೀಸ್ ಕೊಡದೆ ಆರೋಪ ಮಾಡಿರುವುದರಿಂದ ತಾವು ಇದನ್ನು ರಿಜೆಕ್ಟ್ ಮಾಡಬೇಕು ಇದಕ್ಕೆ ಉತ್ತರ ಕೊಡಬಾರದು. ಅವರು ಮಾತನಾಡಿರುವುದು ರೆಕಾರ್ಡ್‌ಗೆ ಹೋಗಿಲ್ಲ.

ಶ್ರೀ ಜೆ.ಡಿ. ಬಾಸರಾಜ್ :— ತಾವು ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿರಿ, ಇಬ್ಬರಿಗೂ ತಾವೇ ಮಾತನಾಡಲು ಅನುಮತಿ ಕೊಟ್ಟಿರುವುದರಿಂದ ಸರ್ಕಾರದ ಪರವಾಗಿ ಪೀಠಕ್ಕೆ ಕೊಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :— ಸನ್ಮಾನ್ಯ ಸಭಾಧ್ಯಕ್ಷರೆ, ಅವರು ಇಲ್ಲಿ ಕೇಳಿರತಕ್ಕಂಥದ್ದನ್ನು ಇಲ್ಲಿ ಹಾಕಿದ್ದಾರೆ. ಇಲ್ಲಿ ಅವರು ಶೂನ್ಯ ವೇಳೆಯಲ್ಲಿ ಕೇಳಿರತಕ್ಕಂಥ ವಿಷಯ ಬೇರೆ ಮತ್ತು ಬೇರೆ ಬೇರೆ ವಿಷಯ ಗಂಟಿಕ್ಕಿಬಿಟ್ಟು ಮಾತನಾಡಿದ್ದಾರೆ. ದಿನಾಂಕ : 29.3.99 ರಂದು ನಡೆದ ಕರ್ನಾಟಕ ರಾಜ್ಯ ಸರ್ಕಾರ ಪುರಸ್ಕೃತ ಮಂಡಲದ ಚುನಾವಣೆಯಲ್ಲಿ ಭಾಗವಹಿಸಲು ಬರುತ್ತಿದ್ದ ಜಗದೀಶ್ ಅಡಿಯಪ್ಪ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಲ ಇವರನ್ನು ಅನಂದರಾವ್ ವೃತ್ತದಲ್ಲಿ, ಅಪರಿಚಿತರು ಅಪಹರಿಸಿ ಕಾರಿನಲ್ಲಿ ಕರೆದುಕೊಂಡು ಹೋಗಿ ಇವರ ಮೇಲೆ ಹಲ್ಲೆ ನಡೆಸಿ ಇವರ ಬಳಿ ಇದ್ದ ಹಣವನ್ನು ಕಿತ್ತುಕೊಂಡು ಇವರು ಮಹಾಮಂಡಳದ ಚುನಾವಣೆಯಲ್ಲಿ ಮತ ಚಲಾಯಿಸುವುದಕ್ಕೆ ತಡೆದಿದ್ದಾರೆ. ಈ ಬಗ್ಗೆ ಶ್ರೀ ಜಗದೀಶ್ ಅಡಿಯಪ್ಪರವರು ಉಷ್ಣಾರಪೇಟೆ ಪೋಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ. ಮೇಲ್ಕಂಡ ವಿಷಯವನ್ನು ಇಂದಿನ ವಿಧಾನಸಭೆಯ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದು.

ಅವರ ವಿಷಯ ಇಷ್ಟೆ. ಅವರು ಈಗಾಗಲೇ ಕಂಪ್ಲೇಂಟ್ ಕೊಟ್ಟಿದ್ದಾರೆ. ಕಂಪ್ಲೇಂಟ್ ಬಗ್ಗೆ ವಿಚಾರಣೆ ಮಾಡಿ ಅದರ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಸಿಎಂ ಎನ್ಕ್ವೈರಿ ಮಾಡಿಸಿ, ಇಲ್ಲ, ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದು ಮಹತ್ವದ ವಿಷಯ ಇದೆ. ಒಬ್ಬರ ಮೇಲೆ ಒಬ್ಬರ ಆಪಾದನೆಯಾಗಿದೆ. ಇದರ ಬಗ್ಗೆ ನಾಳೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಟ್ಟರೆ ಸವಿಸ್ತಾರವಾಗಿ ಹೊರಗಡೆ ಬರುತ್ತದೆ.

ಧೇರ್ಮನ್ :— ನೀವು ಪರಸ್ಪರ ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸವಿಸ್ತಾರವಾದ ಚರ್ಚೆ ಮಾಡಬೇಕು. ಎಲ್ಲರೂ ಒಪ್ಪುವುದಾದರೆ ಅದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡೋಣ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ರಾಜಕೀಯ ಕ್ಷೇತ್ರದಲ್ಲಿ, ಸಹಕಾರ ಕಡಿಮೆ, ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಜಾಸ್ತಿ ಎನ್ನುವುದು ಇಷ್ಟು ಗೊತ್ತಾಗುತ್ತಿದೆ, ಇದನ್ನು ಬಹಳ ದುಃಖದಿಂದ ಹೇಳುತ್ತಿದ್ದೇವಿ.

(ಈ ಹಂತದಲ್ಲಿ ಅಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :— ಇದು ಬಹಳ ಮಹತ್ವದ ವಿಷಯ ದಯವಿಟ್ಟು ಅರ್ಧಗಂಟೆ ಚರ್ಚೆಗೆ ಕಾಲಾವಕಾಶ ಮಾಡಿಕೊಡಿ.

ಅಧ್ಯಕ್ಷರು :— ತಮಗೆ ಮತ್ತು ಶ್ರೀನಿವಾಸಗೌಡರಿಗೆ ನಾಳೆ ಸಮಯ ನೋಡಿಕೊಂಡು ಅವಕಾಶ ಮಾಡಿಕೊಡುತ್ತೇನೆ.

ಐ) ರಾಷ್ಟ್ರದಲ್ಲಿ ಒಂದಂಕ ಲಾಟರಿ ನಿಷೇಧ ಕುರಿತು.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸಭಾಧ್ಯಕ್ಷರೆ, ಹೊಂಬೆಯಾ ಪಿಶಾಚಿ ಎಂದರೆ ಬಂದೆ ಗಾಬರಿಯಾಗುತ್ತೆ, ಎಂದು ಒಂದು ಗಾದೆ ಇದೆ. ಕರ್ನಾಟಕದಲ್ಲಿ, ಇಡೀ ದೇಶದಲ್ಲಿ ಸಿಂಗಲ್ ಡಿಜಿಟ್ 2ನೇ ಅಕ್ಟೋಬರ್ 1997ನೇ ಇಸವಿಗೆ ಗಾಂಧಿ ಜಯಂತಿ ದಿವಸ ಇಡೀ ರಾಷ್ಟ್ರದಲ್ಲಿ ಸಿಂಗಲ್ ಡಿಜಿಟ್ ಲಾಟರಿ ಪಿಡುಗನ್ನು ನಿಲ್ಲಿಸಲಾಯಿತು. ಆದರೆ ಬೆಂಗಳೂರಿನಲ್ಲಿ ಕಳೆದ ಒಂದು ವಾರದಿಂದ ಒಂಬತ್ತು ಲಾಟರಿ ಪಿಡುಗು, ಸಾಮ್ರಾಜ್ಯ ಕಾಯಿಲೆ ಬಹಳ ವ್ಯಾಪಕವಾಗಿ ಇಷ್ಟು ಜನರಿಯುತ್ತಿದೆ. ಬೆಂಗಳೂರಿನಲ್ಲಿ ಸಿಂಗಲ್ ಡಿಜಿಟ್ ಲಾಟರಿ ನಡೆಯುತ್ತಿರುವುದು, ಸಿಟಿ ಬೆಳಿ, ಜಯಲಕ್ಷ್ಮಿ, ಸುಬ್ಬಲಕ್ಷ್ಮಿ, ಕಲಾ ಬೆಳಿ ಮತ್ತು ರಾಜಲಕ್ಷ್ಮಿ ಇವು ಲಾಟರಿ ಹೆಸರುಗಳು. ಇವು ಲಾಟರಿಗಳು ಇನ್ಫೆಕ್ಟ್ ಲಾಟರಿ ಒಂದು ನಡೆಯುತ್ತಿದೆ. ಸರ್ಕಾರದ ಅಧಿಕೃತ ಮಾಹಿತಿ ಈ ಲಾಟರಿಗಳು ಪ್ರತಿ ದಿವಸ ಸಂಜೆ ಮೂರು ಗಂಟೆಗೆ ಲಾಟರಿ ಡ್ರಾ ಮಾಡುತ್ತಿದ್ದಾರೆ. ಸರ್ಕಾರದ ಅಧಿಕೃತ ಮಾಹಿತಿಯನ್ವಯವೇ ಲಾಟರಿಯವರು ನಾಲ್ಕು ಡಿಜಿಟ್ಟಿನ ಫಲಿತಾಂಶ ಪ್ರಕಟ ಮಾಡುತ್ತಾರೆ. ಆದರೆ ಆ ಫಲಿತಾಂಶ ಎಷ್ಟು

ಅಂತಿಗಳು ಹಮ್ಮಿ ಮೂರನೇ ಅಂತ ಮಾತ್ರ ಇವರಿಗೆ ಬಹುಮಾನಕ್ಕೆ ಅರ್ಹವಾದುದು. ಹೈಕೋರ್ಟ್ ಒಂದು ಡೈರೆಕ್ಷನ್ ಕೊಟ್ಟಿದೆ. ಸಿಂಗಲ್ ಡಿಜಿಟ್ ಮತ್ತುಡಬ್ಬಲ್ ಡಿಜಿಟ್ ಲಾಟರಿ ಮತ್ತು ಇನ್‌ಸ್ಟಂಟ್ ಲಾಟರಿಯನ್ನು ಯಾರೇ ಆಗಲಿ ನಡೆಸುವುದಕ್ಕೆ ಕೊಡಬಾರದೆಂದು ಹೈಕೋರ್ಟ್ ಹೈಕ್ಷನ್ ಇದೆ. ಈ ಡೈಕ್ಷನ್ ಇದ್ದರೂ ಕೂಡ ಬೆಂಗಳೂರಿನಲ್ಲಿ ಹಾಡುಹಗಲೇ ಧೈರ್ಯವಾಗಿ ಒಂದಂಕಿ ಲಾಟರಿಯನ್ನು ನಡೆಸುತ್ತಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ ಬೆಂಗಳೂರಿನ ಮೆಜೆಸ್ಟಿಕ್ ಸುತ್ತಮುತ್ತ, ರಾಜಾಜಿನಗರದಲ್ಲಿ, ಮಲ್ಲೇಶ್ವರಂನಲ್ಲಿ ಮತ್ತು ಚಿಕ್ಕಪೇಟೆಯಲ್ಲಿ ಒಂದಂಕಿ ಲಾಟರಿ ಮಾರಾಟ ನಡೆಯುತ್ತಿದ್ದು ಇದರಿಂದಾಗಿ ಅನೇಕ ಯುವಕರ ಜೀವನವನ್ನು ಸೂರೆಗೊಳ್ಳಲಾಗುತ್ತಿದೆ. 9 ಗಂಟೆಯಾದ ಮೇಲೆ ಆಟೋ ರಿಕ್ಷಾ ಡ್ರೈವರ್‌ಗಳೂ ಕೂಡ ಪ್ರಯಾಣಿಕರಿಗೆ ಸಿಗದೇ ಒಂದಂಕಿ ಲಾಟರಿಯನ್ನು ಅಲ್ಲಿಗೆ ಹೋಗಿ ಆಡುತ್ತಿದ್ದಾರೆ. ಆದುದರಿಂದ ಸರ್ಕಾರ ಕೂಡಲೇ ಒಂದಂಕಿ ಲಾಟರಿಯನ್ನು ಪ್ರತಿಬಂಧಿಸಬೇಕು. ನನಗೆ ತಿಳಿದಿರುವ ಹಾಗೆ 1997 ರಲ್ಲಿ ಪ್ರತಿ ಅರ್ಧ ಗಂಟೆ ಮತ್ತು ಒಂದು ಗಂಟೆಗೆ ಲಾಟರಿ ಡ್ರಾಗಳು ಆಗುತ್ತಿತ್ತು. ಆದೇ ಪರಿಸ್ಥಿತಿ ಇಂದು ಬೆಂಗಳೂರಿನಲ್ಲಿ ಬರುವುದರಲ್ಲಿದೆ. ಪೋಲೀಸ್ ಅಧಿಕಾರಿಗಳೂ ಕೂಡ ಇದಕ್ಕೆ ಸೂಕ್ತವಾದ ರಕ್ಷಣೆಯನ್ನು ಕೊಡುತ್ತೇವೆ ಎನ್ನುವ ಧೈರ್ಯವನ್ನು ಇವೊತ್ತು ತೋರಿಸುತ್ತಿದ್ದಾರೆ. ನಾನು ಅಧ್ಯಕ್ಷರಲ್ಲಿ ಕೇಳಿಕೊಳ್ಳುವುದೇನೆಂದರೆ ಮತ್ತೆ ಒಂದಂಕಿ ಲಾಟರಿಯ ಸಾಂಕ್ರಾಮಿಕ ರೋಗದ ಪಿಡುಗಿಗೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ. ಲಕ್ಷಾಂತರ ಕುಟುಂಬಗಳು ಇದರಿಂದಾಗಿ ಹಾಳಾಗುವುದಕ್ಕೆ ದಾರಿ ಮಾಡಿಕೊಡಬೇಡಿ. ಇದು ನನ್ನ ಪ್ರಾಮಾಣಿಕವಾದ ಕಳಕಳಿ. ಇದಕ್ಕೆ ಸರ್ಕಾರ ಪ್ರತಿಕ್ರಿಯಿಸಬೇಕೆಂದು ತಿಳಿಸಿಕೊಳ್ಳುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈ ಹಿಂದೆ ಹಲವಾರು ಬಾರಿ ಚರ್ಚೆಯಾಗಿ ನಿಷೇಧ ಮಾಡಲಾಗಿತ್ತು. ಆದರೆ, ಈಗ ಆ ಲಾಟರಿ ಇನ್ನೊಂದು ಸ್ವರೂಪದಲ್ಲಿ ಬಂದಿದೆ. ಈ ಪಿಡುಗು ಬೆಂಗಳೂರಿಗೆ ಮಾತ್ರ ಸೀಮಿತವಾಗಿರದೇ ಎಲ್ಲಾ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದೆ. ಈ ಒಂದಂಕಿ ಲಾಟರಿ ಕೋಲಾರ ಮತ್ತು ತಿಪ್ಪಗೊಂಡನಹಳ್ಳಿಯಲ್ಲೂ ಕೂಡ ನಡೆಯುತ್ತಿದೆ. ಇದರಿಂದಾಗಿ ಲಕ್ಷಾಂತರ ಯುವಕರು ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಂಡು ಆ ಹಣವನ್ನು ಮತ್ತೆ ಗಳಿಸುವುದಕ್ಕಾಗಿ ಬೇರೆ ಬೇರೆ ಸ್ಥಳೀಯ ಅಪ್ರಾಮಾಣಿಕ ಕೆಲಸಗಳಲ್ಲಿ ತೊಡಗಿ ದರೋಡೆ ಮತ್ತು ಕಳ್ಳತನಗಳನ್ನು ಮಾಡುವ ಹಂತಕ್ಕೆ ಬರುತ್ತಿದ್ದಾರೆ. ಇದು ಬೇರೆ ಬೇರೆ ರೂಪಗಳಲ್ಲಿ ಲಾಟರಿ ಬರುವುದರಿಂದ ಸರ್ಕಾರ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಹಿಂದೆ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಒಂದಂಕಿ ಲಾಟರಿಯನ್ನು ನಿಷೇಧ ಮಾಡಲಾಯಿತು. ಆದರೆ ಈಗ ನಾಲ್ಕು ಅಂಕಿ ಲಾಟರಿ ಫಲಿತಾಂಶವೆಂದು ಪ್ರಚಾರ ಆಗುತ್ತಿದೆ ಆದ ಅಂಚೆಪತ್ರಿಕೆಗಳಲ್ಲಿ ಒಂದು ಅಂಕೆ ಇಟ್ಟುಕೊಂಡು ಲಾಟರಿಯನ್ನು ನಡೆಸುತ್ತಿದ್ದಾರೆ. ಪೋಲೀಸರಿಗೂ ಈ ಸುದ್ದಿ ಬಹಳ ಗೊತ್ತಿದೆ. ಇದನ್ನು ತಡೆಗಟ್ಟಿದಲ್ಲಿ ಭಾರಿ ಅನಾಹುತವೇ ಆಗುವುದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಲಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಒಂದಂಕಿ ಲಾಟರಿಯನ್ನು ಮಾಡುತ್ತಿದ್ದವರನ್ನು ಸುಮಾರು ಹತ್ತು ಬಾರಿಯೇ ಅರೆಸ್ಟ್ ಮಾಡಿದ್ದಾರೆ. ಪೋಲಿಸ್‌ನವರು ಅರೆಸ್ಟ್ ಮಾಡಿದಾಗ ಸ್ವಲ್ಪ ದಂಡ ಹಾಕಿ ಅವರನ್ನು ಬಿಟ್ಟುಬಿಡುತ್ತಾರೆ. ಬಿಡುಗಡೆಯಾಗಿ ಮತ್ತೆ ಅದೇ ದಂಧೆಯನ್ನು ಮುಂದುವರಿಸುವ ವ್ಯಕ್ತಿಗಳ ಬಗ್ಗೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕ್ರಮ ತೆಗೆದುಕೊಳ್ಳದಿದ್ದರೆ ಇಂದು ಬಡತನ ರೇಖೆಯಲ್ಲಿರುವ ಜನರು ಇದರಿಂದಾಗಿ ಸರ್ವನಾಶವಾಗಿಬಿಡುತ್ತಾರೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್ ಶ್ರೀರಾಮರೆಡ್ಡಿ ಮತ್ತು ಪುಟ್ಟಣ್ಣಯ್ಯನವರು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದು ಗಂಭೀರವಾದ ವಿಷಯವೇ ಆಗಿದೆ. ನಾನು ಅದಕ್ಕೆ ಸಂಬಂಧಪಟ್ಟಂತೆ ಸುದೀರ್ಘವಾದ ಹೇಳಿಕೆಯನ್ನು ಕೊಡುವುದಕ್ಕೆ ಗೃಹ ಮಂತ್ರಿಗಳಿಗೆ ಹೇಳುತ್ತೇನೆ. ಇದನ್ನು ನಾಳೆಯೇ ಕೊಡುವುದಕ್ಕೆ ಹೇಳುತ್ತೇನೆ. ಏಕೆಂದರೆ ಇದರಿಂದಾಗಿ ಅನೇಕ ಯುವಕರು ಬಲಿಯಾಗುತ್ತಿದ್ದಾರಲ್ಲದೇ ಇದು ಬೆಂಗಳೂರಿನಲ್ಲಿ ಮಾತ್ರವಲ್ಲದೇ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದೆ. ನಾಳೆಯೇ ಸಂಬಂಧಪಟ್ಟ ಮಂತ್ರಿಗಳಿಂದ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ನಾನು ಒಂದು ಮುಖ್ಯವಾದ ಅಂಶವನ್ನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ ಬೆಂಗಳೂರಿನಲ್ಲಿ ವೇಣುಗೋಪಾಲ್ ಶೆಟ್ಟಿ, ರಾಜ್ ಕುಮಾರ್ ಪೈ ಮತ್ತು ಆರ್.ಪಿ. ಸುರಾನ ಎಂಬ ಮೂವರು ವ್ಯಕ್ತಿಗಳು ಇಡೀ ರಾಜ್ಯದಲ್ಲಿ ಈ ಒಂದಂಕಿ ಲಾಟರಿಯನ್ನು ಬೇರೆ ಸ್ವರೂಪದಲ್ಲಿ ನಡೆಸುತ್ತಿದ್ದಾರೆ. ಇವರ ಸ್ಕೀಂ ಪ್ರಕಾರ ನಾನು 8 ಕಡೆ ಲಾಟರಿ ದಂಧೆಯನ್ನು ನಡೆಸಿದರೆ ನನಗೆ ಒಂದು ಮೊಬೈಲ್ ಕೊಡುತ್ತಾರೆ, ನಿಜವಾಗಿ ಲಾಟರಿ ಅರುಣಾಚಲಪ್ರದೇಶದಲ್ಲಿ ನಡೆಯಬೇಕು, ಆದರೆ ಅದು ಅಲ್ಲಿ ನಡೆಯುವುದಿಲ್ಲ, ಆದರೆ ಈ ಮೂವರುಗಳೇ ಒಂದು ರೂಮಿನಲ್ಲಿ ಕುಳಿತುಕೊಂಡು ಅರುಣಾಚಲಪ್ರದೇಶದಿಂದ ಲಾಟರಿ ಬಂದಿತು ಎಂಬಂತೆ ಫಲಿತಾಂಶವನ್ನು ಪ್ರಕಟಿಸುತ್ತಿದ್ದಾರೆ. ಇವರು ಈ ರೀತಿ ಮಾಡಿ ಕಾನೂನಿನ ಕಣ್ಣಿಗೆ ಮಣ್ಣೆರಚಿ ವಿರಾಜಿಸುತ್ತಿದ್ದಾರೆ. ಇಂದು ಈ ಲಾಟರಿ ಮಾಫಿಯಾ ಗ್ಯಾಂಗ್ ಏನಿದೆ ಇದರ ವಿರುದ್ಧವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ. ಮಂಜುನಾಥ್ :— ನಾಳೆ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

ಜ) ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್ ವಿಧಾನಸಭಾ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ಮತ್ತು ಸವಣೂರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ

ಬಗ್ಗೆ ನಾನು ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಕಳೆದ ವರ್ಷಕೂಡ ಕೇಳಿದಾಗ ಏಪ್ರಿಲ್ ಒಳಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಹೇಳಿದ್ದರು. ಈಗಾಗಲೇ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪೈಪ್‌ಲೈನ್ ಕೂಡ ಅಲ್ಲಿ ಬಂದು ಬಿದ್ದಿದೆ. 3 ಕೋಟಿ 64 ಲಕ್ಷ ರೂಪಾಯಿಗಳ ಪೈಪ್‌ಲೈನ್‌ಗಳನ್ನು ಈಗ ಹಾಕುವುದಕ್ಕೆ ತರಿಸಿದ್ದಾರೆ. ಆದರೆ ಅಲ್ಲಿ ಜಲ ಶುದ್ಧೀಕರಣ ಘಟಕವನ್ನು ಕಟ್ಟಬೇಕಾಗಿದೆ. ಇದರ ಬಗ್ಗೆ ಈಗಾಗಲೇ ಲೋಯೆಸ್ಟ್ ಟೆಂಡರ್ ಕೂಡ ಬಂದಿದೆಯೆಂದು ಹೇಳಿದ್ದಾರೆ. ಅಲ್ಲಿ ಜಲ ಶುದ್ಧೀಕರಣ ಘಟಕವಾದರೆ ಇನ್ನು ಎರಡೂರು ತಿಂಗಳಲ್ಲಿ ನೀರನ್ನು ಬಿಡುವುದಕ್ಕೆ ಸಾಧ್ಯವಾಗುತ್ತದೆಯಾದ ಕಾರಣ ಜಲ ಶುದ್ಧೀಕರಣ ಘಟಕವನ್ನು ಮೊದಲು ಕಟ್ಟಬೇಕು. ಏಕೆಂದರೆ ಇಂದು ಸವಣೂರಿನಲ್ಲಿ ಒಂದು ತಿಂಗಳಿಗೊಮ್ಮೆ ಕುಡಿಯುವ ನೀರನ್ನು ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೆಣ್ಣು ಮಕ್ಕಳು ಮತ್ತು ಸಾರ್ವಜನಿಕರು ಬೀದಿಗೆ ಇಳಿದಿದ್ದಾರೆ. ಆದುದರಿಂದ ಲೋಯೆಸ್ಟ್ ಟೆಂಡರ್ ಯಾರು ಹಾಕಿದ್ದಾರೋ ಅವರಿಗೆ ಅಥವಾ ಯಾರಿಗಾದರೂ ಕೆಲಸಕೊಟ್ಟು ಜಲ ಶುದ್ಧೀಕರಣ ಘಟಕವನ್ನು ಸರ್ಕಾರ ಬೇಗ ಕಟ್ಟಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ :— ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಎಂ.ಎಸ್. ಪಾಟೀಲರ ಗಮನಕ್ಕೆ ತಂದು ಅಲ್ಲಿ ಶೀಘ್ರದಲ್ಲಿಯೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

(ಓ) ವಿಟ್ಲ ಕ್ಷೇತ್ರದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಶನ್ ತೆರೆಯುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ವಿಧಾನಸಭಾ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಬಿ.ಸಿ. ರೋಡ್ ಅಭಿವೃದ್ಧಿ ಹೊಂದುತ್ತಿದೆ. ರಾಷ್ಟ್ರೀಯ ಹೆದ್ದಾರಿ 48 ಇದರ ಮಧ್ಯೆಯಲ್ಲಿ ಹಾದುಹೋಗುತ್ತಿದೆ. ತಾಲ್ಲೂಕಿನ ಹಲವಾರು ಗ್ರಾಮಗಳು ಇದಕ್ಕೆ ಸಂಪರ್ಕ ಹೊಂದಿರುವುದರಿಂದ ಜನಸಂಚಾರ ಮತ್ತು ವಾಹನ ಸಂಚಾರ ಜಾಸ್ತಿಯಾಗುತ್ತಿದೆ. ಈಗಿರುವ ಅಲ್ಲಿಯ ಪೋಲಿಸ್ ಠಾಣೆಯ ಪೋಲಿಸರಿಗೆ ಟ್ರಾಫಿಕ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಅಲ್ಲಿಗೆ ಟ್ರಾಫಿಕ್ ಪೋಲೀಸ್ ಠಾಣೆ ಬೇಕು ಎಂದು ವರದಿಯನ್ನೂ ಕೂಡ ಕಳುಹಿಸಲಾಗಿದೆ. ರೋಟರಿಯವರು ನಡೆಸಿದ ಅದಾಲತ್‌ನಲ್ಲಿ ಕೂಡ ಅಲ್ಲಿಗೆ ಟ್ರಾಫಿಕ್ ಪೋಲೀಸ್ ಸ್ಟೇಶನ್ ಬೇಕೆಂದು ಮನವಿಯನ್ನೂ ಕೂಡ ಕೊಡಲಾಗಿದೆ. ಆದುದರಿಂದ ಬಿ.ಸಿ. ರೋಡ್‌ಗೆ ಒಂದು ಟ್ರಾಫಿಕ್ ಪೋಲೀಸ್ ಸ್ಟೇಶನ್ ಮಂಜೂರು ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಗೃಹ ಸಚಿವರಿಗೆ ಸದರಿ ವಿಷಯವನ್ನು ತಿಳಿಸಿ ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸುವುದಕ್ಕೆ ನಾನು ವಿರ್ಪಾಡು ಮಾಡುತ್ತೇನೆ.

(ಬಿ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಗಲಭೆಯಿಂದ ನೊಂದ ಜನರಿಗೆ ಸಮರ್ಪಕವಾಗಿ ಪರಿಹಾರ ಕಾರ್ಯ ನಡೆದಿಲ್ಲದಿರುವ ಬಗ್ಗೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಗಲಭೆಯಿಂದಾಗಿ ನೊಂದ ಜನರಿಗೆ ಪರಿಹಾರ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ. ಅಲ್ಲಿ ಸಾಕಷ್ಟು ನಷ್ಟವಾಗಿದೆ. ಇತ್ತೀಚೆಗೆ ಅಲ್ಲಿಗೆ ಮಂತ್ರಿಗಳೂ ಕೂಡ ಭೇಟಿ ಕೊಟ್ಟಿದ್ದರು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಭೇಟಿ ಕೊಟ್ಟಿದ್ದರು. ಹಾಗೆ ಮುಖ್ಯಮಂತ್ರಿಗಳು ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅಂಗಡಿಗಳು ಸುಟ್ಟು ಹಲವಾರು ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸಿರುವುದನ್ನು ಕಂಡು ಇಂಥ ವ್ಯಾಪಾರಿಗಳಿಗೆ 2 ಲಕ್ಷ ರೂಪಾಯಿಗಳ ಸಾಲವನ್ನು ಬಡ್ಡಿರಹಿತವಾಗಿ ಕೊಡಲು ಪ್ರಯತ್ನ ಪಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ಕೂಡ ನೊಂದ ಜನರ ವರದಿ ಸರ್ಕಾರಕ್ಕೆ ಬಂದಿದೆ. ಇದರ ಬಗ್ಗೆ ಸ್ಪಂಧಿಸಿ ಎರಡು ಲಕ್ಷ ರೂಪಾಯಿಗಳ ಬಡ್ಡಿರಹಿತ ಸಾಲವನ್ನು ಕೊಡುವುದಕ್ಕೆ ಸರ್ಕಾರ ಕೂಡಲೇ ಆದೇಶವನ್ನು ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ಸಾಲ ಕೊಡಿಸುವ ವಿಷಯದ ಬಗ್ಗೆ ತಿಳಿಸಿ ತುರ್ತಾಗಿ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

ಅ) ಮಿಲಿಟರಿ ಹೋಟೆಲ್‌ಗಳವರು ಬ್ರಾಂದಿ ಮತ್ತು ವಿಸ್ಕಿ ಮಾರಾಟ ಮಾಡಲು ಲೈಸೆನ್ಸ್ ತೆಗೆದುಕೊಳ್ಳಬೇಕೆಂದೂ ಮತ್ತು ಇಂತಿಷ್ಟೇ ಸಮಯದೊಳಗೆ ಮಾರಾಟ ಮಾಡಬೇಕೆಂದು ನಿಗಧಿ ಮಾಡುವುದು.

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ನಾನು ಬ್ರಾಂದಿ ಶಾಪ್‌ಗಳ ಬಗ್ಗೆ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಬ್ರಾಂದಿ ಶಾಪ್‌ಗಳನ್ನು ತೆರೆಯಲು ಲೈಸೆನ್ಸ್ ಕೊಟ್ಟು ಕೆಲವು ಕಡೆ ತೆರೆಯಲಾಗುತ್ತದೆ. ಮುನಿಸಿಪಾಲಿಟಿಗೆ ಅರ್ಜಿ ಹಾಕಿದರೆ ಅವರಿಗೆ ಮಿಲಿಟರಿ ಹೋಟೆಲ್ ಎಂದು ಹೇಳಿ ಲೈಸೆನ್ಸ್‌ನ್ನು ಕೊಡುತ್ತಾರೆ. ನಿಜವಾಗಿಯೂ ಕೇವಲ ಬ್ರಾಂದಿ ಮತ್ತು ವಿಸ್ಕಿ ಮಾರಾಟ ಮಾಡುವ ಅಂಗಡಿಗಳಿಗೆ ಹಾಗು ಮಾರಾಟದ ಸಮಯವನ್ನು ನಿಗಧಿ ಮಾಡಿದ್ದೀರಿ. ಆದರೆ ಮಿಲಿಟರಿ ಹೋಟೆಲ್‌ಗಳವರಿಗೆ ಸಮಯ ನಿಗಧಿಯನ್ನು ಮಾಡಿಲ್ಲ. ಇವರು 24 ಗಂಟೆ ನಡೆಸಿದರೂ ಕೂಡ ಯಾವುದೇ ಅಭ್ಯಂತರ ಇರುವುದಿಲ್ಲ. ಇದಕ್ಕೆ ಕಾರಣ ಅದು ಹೋಟೆಲ್ ಎಂಬುದೇ ಆಗಿದೆ. ಈ ಮಿಲಿಟರಿ ಹೋಟೆಲ್‌ನಲ್ಲಿ ಪ್ರತಿನಿತ್ಯ ಬೆಳಗಿನಿಂದ ರಾತ್ರಿ ಮತ್ತು ರಾತ್ರಿಯಿಂದ ಬೆಳಿಗ್ಗೆ ಈ ಬ್ರಾಂದಿ

6.40 ಪಿ.ಎಂ.

ಮತ್ತು ವಿಸ್ಕಿ ಮಾರಾಟವಾಗುತ್ತಿದೆ. ಇದರ ಪರಿಣಾಮವಾಗಿ ಸರ್ಕಾರಕ್ಕೆ ಬರುವ ಉತ್ಪತ್ತಿ ಹೋಗುತ್ತದೆಯಲ್ಲದೇ ಈಗ ನೀವೇನು ಬ್ರಾಂದಿ ಮತ್ತು ವಿಸ್ಕಿಯನ್ನೇ ಮಾರಲು ಲೈಸೆನ್ಸ್

ತೆಗೆದುಕೊಂಡಿದ್ದಾರೆ. ಅವರಿಗೆ ಮಾತ್ರ ಸಮಯವನ್ನು ನಿಗಧಿ ಮಾಡಿರುವುದರಿಂದ ಅವರು ಆ ಸಮಯಕ್ಕೆ ಮುಚ್ಚುವುದರಿಂದ ಅವರ ವ್ಯಾಪಾರ ಕೂಡ ಹಾಳಾಗುತ್ತದೆ. ಇನ್ನು ಇದರ ಜೊತೆಗೆ ರಸ್ತೆಯ ಮಧ್ಯೆ ಎಲ್ಲೆಂದೆರಲ್ಲಿ ಡಾಬಾಗಳು ತಲೆ ಎತ್ತುತ್ತಿವೆ. ಸುಮಾರು 250 ಕಿ.ಮೀ. ವ್ಯಾಪ್ತಿಯೊಳಗೆ ನಾವು ಓಡಾಡುತ್ತಿರುತ್ತೇವೆ ಎಂದರೆ ಒಂದು ಬಾರಿ ನಾವು ಬೆಂಗಳೂರಿಗೆ ಬಂದು ಒಂದು ವಾರದ ನಂತರ ಅದೇ ರಸ್ತೆಯಲ್ಲಿ ಹೋದರೆ ಮತ್ತೆ ಎರಡು ಡಾಬಾಗಳು ತಲೆ ಎತ್ತಿರುತ್ತವೆ. ಈ ಡಾಬಾಗಳಲ್ಲೂ ಕೂಡ ಮದ್ಯ ಮಾರಾಟವಾಗುತ್ತಿರುವುದು ನಗ್ನ ಸತ್ಯವಾಗಿದೆ. ಇದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಈ ವಿಚಾರ ಅಧಿಕಾರಿಗಳ ಗಮನಕ್ಕೆ ಇನ್ನೂ ಬಂದಿಲ್ಲವೆ? ಅಥವಾ ಅಧಿಕಾರಿಗಳ ಗಮನಕ್ಕೆ ಬಂದಿದ್ದರೂ ಕೂಡ ಅದು ನಡೆಯುತ್ತಿದೆಯೆ? ಇದರ ಬಗ್ಗೆ ಮಂತ್ರಿಗಳು ಹೇಳಬೇಕು. ಇನ್ನು ನನ್ನ ಒಂದು ಸಲಹೆ ಇದೆ. ಏನೆಂದರೆ ಯಾವ ಮಿಲಿಟರಿ ಹೋಟೆಲ್‌ಗಳವರು ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಮಾಡಿದರೆ ಬಹುಶಃ ಸ್ವಲ್ಪ ಕಂಟ್ರೋಲ್ ಆಗಬಹುದು. ಇವರಿಗೆ ಸಮಯವನ್ನೂ ಕೂಡ ನಿಗಧಿ ಮಾಡಬೇಕಾಗುತ್ತದೆ. ಇದರಿಂದಾಗಿ ಸರ್ಕಾರಕ್ಕೆ ಉತ್ಪತ್ತಿ ಬರುತ್ತದೆ. ಈಗೇನು ಲೈಸೆನ್ಸ್ ಇಲ್ಲದೇ ಈ ರೀತಿ ನಡೆಯುತ್ತಿದೆ ಇದರ ಬಗ್ಗೆ ಅಧಿಕಾರಿಗಳು ನಿಗಾವಹಿಸಿ ಒಂದೆರಡು ಹೋಟೆಲ್‌ಗಳನ್ನು ಬಂದ್ ಮಾಡಿದರೆ ಬೇರೆಯವರಿಗೆ ಇದು ಎಚ್ಚರಿಕೆಯಾಗುತ್ತದೆ. ಇನ್ನು ಇಂದು ಹೈವೇಗಳಲ್ಲಿ ಡಾಬಾಗಳು ಏನು ತಲೆ ಎತ್ತುತ್ತಿವೆ ಇದರ ಬಗ್ಗೆ ಸರ್ಕಾರ ಗಮನ ಕೊಟ್ಟು ಕಂಟ್ರೋಲ್ ಮಾಡಬೇಕು. ಏಕೆಂದರೆ ಇಂದು ಎಲ್ಲೆಂದರಲ್ಲಿ ತಲೆ ಎತ್ತಿ ಸುಮಾರು ಒಂದು ಕಿ.ಮೀ.ಗೆ ನಾಲ್ಕೈದು ಡಾಬಾಗಳು ಇವೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇಂದು ಹಾಸನ ಜಿಲ್ಲೆಯೊಂದರಲ್ಲಿಯೇ ಸುಮಾರು 102 ಮಿಲಿಟರಿ ಹೋಟೆಲ್‌ಗಳಿವೆ. ಇಲ್ಲಿ ಬ್ರಾಂದಿ ಮತ್ತು ವಿಸ್ಕಿಯನ್ನು ಸಮಯ ನಿಗಧಿಯಿಲ್ಲದೇ ಮಾರುತ್ತಿದ್ದಾರೆ. ಇನ್ನು ಬಾಕಿ ಎಷ್ಟಿವೆ ಎಂಬ ಬಗ್ಗೆ ನಮಗೆ ಲೆಕ್ಕ ಸಿಕ್ಕಿಲ್ಲ. ಆದುದರಿಂದ ಇದರ ಬಗ್ಗೆ ಮಂತ್ರಿಗಳು ಸರಿಯಾದ ನಿಲುವು ತೆಗೆದುಕೊಂಡಿರುವ ಬಗ್ಗೆ ಹೇಳಿಕೆಯನ್ನು ಇಲ್ಲಿ ಕೊಡಬೇಕು.

ಶ್ರೀ ಜಯವಂತ್ ಸುಬ್ಬರಾಯ (ಅಬಕಾರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಿಲಿಟರಿ ಹೋಟೆಲುಗಳನ್ನು ತೆರೆಯುವುದಕ್ಕೆ ಆಯಾಯ ಲೋಕಲ್ ಅಥಾರಿಟಿಗಳಿಂದ ಸೂಕ್ತವಾದ ಸನ್ನದುಗಳನ್ನು ಪಡೆಯಬೇಕಾಗುತ್ತದೆ. ಇಂಥ ಹೋಟೇಲುಗಳಲ್ಲಿ ಬ್ರಾಂದಿ ವಿಸ್ಕಿ ಮಾರಾಟ ಮಾಡುವುದು ನಮ್ಮ ಇಲಾಖೆಯ ಗಮನಕ್ಕೆ ಬಂದಿದೆ. ಈಗಿನ ಅಬಕಾರಿ ಕಾಯಿದೆಯ ಕಲಂ ನಂ. 32 ಮತ್ತು 34 ರ ಉಲ್ಲಂಘನೆ ಆಗುತ್ತದೆ. ಇಂಥ ಉಲ್ಲಂಘನೆಗೆ 3 ವರ್ಷಗಳ ಶಿಕ್ಷೆ ಮತ್ತು ದಂಡ ವಿಧಿಸುವ ಅವಕಾಶ ಅಬಕಾರಿ ಕಾಯಿದೆಯಡಿ ಇರುತ್ತದೆ. ಅನೇಕ ಪ್ರಸಂಗಗಳಲ್ಲಿ ಅಬಕಾರಿ ಇಲಾಖೆಯವರು ಪತ್ತೆಹಚ್ಚಿ ಇವರ ವಿರುದ್ಧ ಅಬಕಾರಿ ಕಾಯಿದೆಯಡಿ ಕ್ರಮ ಜರುಗಿಸಿದ್ದಲ್ಲದೇ ಇಂಥ ಮಾಂಸಹಾರಿ ಹೋಟೆಲುಗಳ ಲೈಸೆನ್ಸ್‌ನ್ನು ರದ್ದುಪಡಿಸಲು ಸಹ ಲೋಕಲ್ ಅಥಾರಿಟೀಸ್‌ಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಮಾಂಸಹಾರಿ ಹೋಟೆಲುಗಳಲ್ಲಿ ಮದ್ಯವನ್ನು ಅನೈತಿಕವಾಗಿ ಮಾರಾಟ ಮಾಡುವ ಮತ್ತು ವಿಶೇಷವಾದ ದೂರುಗಳು ಇರುವಂಥ ಹುಬ್ಬಳ್ಳಿ ಬೆಳಗಾಂ ಧಾರವಾಡ ಹಾಸನ ಮಂಗಳೂರು

ಬೆಂಗಳೂರು ಶಿವಮೊಗ್ಗ ಭದ್ರಾವತಿ ನಗರಗಳಲ್ಲಿ ಹಾಗೂ ಹೆದ್ದಾರಿಗಳಲ್ಲಿ ಇರತಕ್ಕಂಥ ಡಾಬಾಗಳ ಮೇಲೆ ವಿಶೇಷವಾಗಿ ದಾಳಿಗಳನ್ನು ನಡೆಸಲಾಗುತ್ತಿದೆ. ಈ ವಿಷಯವಾಗಿ ಯಾರಿಂದಲಾದರೂ ದೂರುಗಳು ಬಂದರೆ ಅಥವಾ ಸುಳಿವುಗಳು ಸಿಕ್ಕಿದಾಗ ನಮ್ಮ ಇಲಾಖೆಯ ಅಧಿಕಾರಿಗಳು ಅಲ್ಲಿ ದಾಳಿ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜು :— ಹೇಗೆ ಆಗಿದೆ ಏನು ಆಗಿದೆ ಎಂದು ಇಲಾಖೆಯ ನೀತಿಯನ್ನು ಹೇಳುತ್ತಿದ್ದಾರೆ. ಯಾರಿಗಾದರೂ ನೀವು ಒಂದು ದಿವಸ ಶಿಕ್ಷೆ ಮಾಡಿರತಕ್ಕಂಥದ್ದು ಇದೆಯೇ? ಒಬ್ಬರಿಗೆ ಯಾರಿಗಾದರೂ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬಂದು ಕೂರಿಸಿ ಶಿಕ್ಷೆ ಮಾಡಿರುವುದು ಯಾವುದಾದರೂ ಇದ್ದರೆ ಹೇಳಿ ನೋಡೋಣ. ಎಲ್ಲಾ ಕುಡಿದುಕೊಂಡು, ತಿಂದುಕೊಂಡು ಹೊಡೆದುಕೊಂಡು ಹೋಗುತ್ತಾರೆ. ಹೇಳುವವರು, ಕೇಳುವವರು ಯಾರೂ ಇಲ್ಲ. ಮೈಸೂರಿನಿಂದ ಬೆಂಗಳೂರು ರಸ್ತೆಯಲ್ಲಿ ಕನಿಷ್ಟ 150 ಡಾಬಾಗಳು ಇವೆ. ಅಲ್ಲಿ ಏನು ನಡೆಯುತ್ತಿದೆ? ಹಾನೂನು ಏನು? ವ್ಯವಸ್ಥೆ ಏನು? ಡಾಬಾದ ಒಳಗೆ ಏನೇನು ನಡೆಯುತ್ತದೆ ಎನ್ನುವುದನ್ನು ಒಬ್ಬರೂ ಕೇಳುವವರೂ ಇಲ್ಲ. ಇವರು 3 ವರ್ಷ ಶಿಕ್ಷೆ ಇತ್ಯಾದಿ ಇಲಾಖೆಯ ನೀತಿಯನ್ನು ಹೇಳುತ್ತಿದ್ದಾರೆ. ಇದನ್ನು ಯಾರಿಗೋಸ್ಕರ ಹೇಳುತ್ತಿದ್ದೀರಿ? ನೀವು ನಮಗೆ ಉಪದೇಶ ಹೇಳುವುದು ಬೇಡ. ದಯವಿಟ್ಟು ತಪ್ಪು ಮಾಡಿದ ಯಾರಿಗಾದರೂ ಒಬ್ಬರಿಗೆ ಶಿಕ್ಷೆ ನೀಡಿರುವುದನ್ನು ಹೇಳಿ.

ಶ್ರೀ ಜಯವಂತ್ ಸುಬ್ಬರಾಯ (ಅಬಕಾರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಕಳೆದ 4 ವರ್ಷಗಳ ಅಂಕಿಸಂಖ್ಯೆಗಳನ್ನು ನಾವು ನೋಡಿದಾಗ ದೂರು ಮತ್ತು ಧಾಳಿಗಳ ಮೂಲಕ ನಮ್ಮ ರಾಜ್ಯದಲ್ಲಿ ನಾವು ಉತ್ತಮ ಸಾಧನೆಯನ್ನು ಮಾಡಿದ್ದೇವೆ. ಇಂಥ ಪ್ರಕರಣಗಳನ್ನು ಹಿಡಿದು ಸರ್ಕಾರಕ್ಕೆ ಆದಾಯ ಬರುವಲ್ಲಿ ಎಲ್ಲಾ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ್ದೇವೆ. 1995-96 ರಲ್ಲಿ 11 ಕೋಟಿ ರೂಪಾಯಿಗಳ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡಿದ್ದೇವೆ. 1996-97 ರಲ್ಲಿ 19 ಕೋಟಿ ರೂಪಾಯಿಗಳು ಜಮಾ ಆಗಿದೆ. 1997-98 ರಲ್ಲಿ 23 ಕೋಟಿ ರೂಪಾಯಿಗಳು ಜಮಾ ಆಗಿದೆ. 1998-99 ರಲ್ಲಿ ಕೂಡ 25 ಕೋಟಿ ರೂಪಾಯಿಗಳನ್ನು ಈ ಆಕ್ರಮ ವ್ಯವಹಾರ ಮಾಡಿರುವವರಿಂದ ವಸೂಲಿ ಮಾಡಿ ಜಮಾ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :— ನಾನು ಆದಾಯದ ಬಗ್ಗೆ ಕೇಳಲಿಲ್ಲ. ಶಿಕ್ಷೆ ಯಾರಿಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ಅದನ್ನು ಬಿಟ್ಟು ನೀವು ಆದಾಯದ ಬಗ್ಗೆ ಹೇಳಬೇಡಿ. ಅದನ್ನಾರು ಈಗ ಕೇಳಿದವರು.

ಶ್ರೀ ಜೈವಂತ್ ಸುಬ್ಬರಾಯ (ಅಬಕಾರಿ ಸಚಿವರು) :— ಕಳೆದ ನಾಲ್ಕಾರು ವರ್ಷಗಳ ಅಂಕಿ ಅಂಶಗಳನ್ನು ನೋಡಿದಾಗ ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವುದು ಗೊತ್ತಾಗುತ್ತದೆ. ಆದಾಯ ಜಾಸ್ತಿಯಾಗಿರುವುದೇ ಇಂಥ ಅನಧಿಕೃತ ವ್ಯವಹಾರಗಳನ್ನು ಮಾಡುತ್ತಿರುವುದನ್ನು ನಾರು ಮುಟ್ಟುಗೋಲು ಹಾಕಿಕೊಂಡಿದ್ದರಿಂದಾಗಿದೆ.

ಇನ್ನು ಶಿವಪ್ಪನವರು ಮಾತನಾಡಿ ಮಿಲಿಟರಿ ಹೋಟೆಲ್‌ಗಳವರಿಗೂ ಲೈಸೆನ್ಸ್ ಕೊಡಬೇಕು ಎಂದಿದ್ದಾರೆ. ಅದರ ಬಗ್ಗೆ ನಾವು ಯೋಚನೆ ಮಾಡಿದ್ದೇವೆ. ಮಿಲಿಟರಿ ಹೋಟೆಲ್‌ಗಳು ಇರುವಂಥ ಸ್ಥಳಗಳು ಪ್ರವಾಸೋದ್ಯಮದ ಅಡಿಯಲ್ಲಿ ಬರುವಂಥವುಗಳಿದ್ದರೆ ಆ ಪ್ರವಾಸೋದ್ಯಮ ಅಭಿವೃದ್ಧಿ ಮಾಡುವ ಸಲುವಾಗಿ ಸ್ಥಳಗಳನ್ನು ನಿಗಧಿ ಮಾಡಿದ್ದರೆ ಅವರಿಗೂ ಕೂಡ ನಾವು ಉತ್ತೇಜನವನ್ನು ಕೊಡುತ್ತಿದ್ದೇವೆ. ನೀವೂ ಕೂಡ ಸರ್ಕಾರದ ಒಪ್ಪಿಗೆಯನ್ನು ಪಡೆದುಕೊಂಡು ನಿಯಮಾವಳಿ ಪ್ರಕಾರ ರೆಸ್ಟೋರೆಂಟ್‌ಗಳನ್ನು ತೆರೆದು ನಡೆಸಬಹುದು ಎಂದು ಹೇಳಿದ್ದೇವೆ. ಇನ್ನು ಅನಧಿಕೃತ ಮಿಲಿಟರಿ ಹೋಟೆಲ್‌ಗಳನ್ನು ಕಡಿಮೆ ಮಾಡುವುದಕ್ಕೆ ಮತ್ತು ಸರ್ಕಾರದ ಬೊಕ್ಕಸಕ್ಕೂ ಕೂಡ ಯಾವುದೇ ತೊಂದರೆಯಾಗದಂತೆ ಮತ್ತು ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ನಮ್ಮಲ್ಲಿ ಜಾರಿ ಮತ್ತು ತನಿಖಾ ಇಲಾಖೆ ಕೂಡ ನಮ್ಮಲ್ಲಿದೆ.

ಶ್ರೀ ವಾಟಾಳ್ ನಾಗರಾಜ್:— ಪ್ರವಾಸಿ ಕೇಂದ್ರವಾದ ಮಹದೇಶ್ವರ ಬೆಟ್ಟದಲ್ಲಿ ಸಾರಾಯಿ ಅಂಗಡಿಯನ್ನು ತೆರೆಯಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಇದಕ್ಕೆ ಅಲ್ಲಿಯ ಜನಗಳ ಪ್ರತಿಭಟನೆ ಇದೆ. ಪ್ರವಾಸಿ ಕೇಂದ್ರವಿದ್ದರೂ ಕೂಡ ಶಾಲಾ ಕಾಲೇಜುಗಳ ಹತ್ತಿರ, ದೇವಸ್ಥಾನಗಳ ಹತ್ತಿರ ತೆಗೆಯಬಾರದು ಎಂದು ಇದೆ. ಆದರೂ ಕೂಡ ಯಡಿಯೂರಿನಲ್ಲಿ ದೇವಸ್ಥಾನದ ಹತ್ತಿರ ಸಾರಾಯಿ ಅಂಗಡಿ ಇದೆ. ಬಾರ್ ಕೂಡ ಇದೆ. ಇದನ್ನು ತಾವು ನೋಡಬೇಕು. ಏಕೆಂದರೆ ಅಬಕಾರಿ ಇಲಾಖೆ ಅಧಿಕಾರಿಗಳು ಇಡೀ ರಾಜ್ಯವನ್ನೇ ದಾರಿ ತಪ್ಪಿಸಿರುವಾಗ ಇನ್ನು ನಿಮ್ಮನ್ನು ದಾರಿ ತಪ್ಪಿಸದೇ ಇರುತ್ತಾರೆಯೇ?

(೫) ಬಿಜಾಪುರ ನಗರ ಸಭೆಯಿಂದ ಲೀಸ್‌ನಲ್ಲಿರತಕ್ಕಂಥ ಪ್ರಾಪರ್ಟಿಗಳಿಗೆ ಅವರು ಟ್ರಾನ್ಸ್ಫರ್ ಮಾಡುವುದಕ್ಕೆ ಮತ್ತು ಕಟ್ಟಡಗಳನ್ನು ಕಟ್ಟಲು ಪ್ರಪೋಸಲ್ ಸರ್ಕಾರಕ್ಕೆ ಬಂದಿರುವುದು.

ಶ್ರೀ ಶಿವಾನಂದ ಪಾಟೀಲ್:— ಅಧ್ಯಕ್ಷರೆ, ಕಳೆದ ಮೂರು ವರ್ಷಗಳಲ್ಲಿ ಬಿಜಾಪುರ ನಗರಸಭೆಯಿಂದ ಲೀಸ್ ನಲ್ಲಿರತಕ್ಕಂಥ ಪ್ರಾಪರ್ಟಿಗಳಿಗೆ ಅವರು ಟ್ರಾನ್ಸ್ಫರ್‌ಶನ್ ಮಾಡುವುದಕ್ಕಾಗಲಿ ಅಥವಾ ಅವರ ಕಟ್ಟಡಗಳನ್ನು ಕಟ್ಟುವ ಸಲುವಾಗಿ ಕಳೆದ ಮೂರು ವರ್ಷಗಳ ಹಿಂದೆಯೇ ಒಂದು ಪ್ರಪೋಸಲ್ ಸರ್ಕಾರಕ್ಕೆ ಬಂದಿದೆ. ಸನ್ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಅಧಿಕಾರ ವಹಿಸಿಕೊಂಡಮೇಲೆ ಅದಂಥ ಈ ವಿವಾದ ಅವರ ಅಧಿಕಾರಾವಧಿ ಮುಗಿಯುತ್ತ ಬಂದರೂ ಸದರಿ ವಿವಾದವನ್ನು ಬಗೆಹರಿಸಿಲ್ಲ. ಈ ಸಮಸ್ಯೆ ಏನಾದರೂ ಬಗೆಹರಿಸಿದರೆ ವಾರ್ಷಿಕವಾಗಿ 30 ರಿಂದ 35 ಲಕ್ಷ ರೂಪಾಯಿಗಳ ಆದಾಯ ನಗರಸಭೆಗೆ ಬರುತ್ತದೆಂದು ನಮಗನಿಸುತ್ತದೆ. ಇದು ಮಾನ್ಯ ಸಚಿವರಿಗೂ ಗೊತ್ತಿದೆ. ತಿಂಗಳಲೇ ಡಾ ತಿಮ್ಮಯ್ಯ ಕಮೀಷನ್ ವರದಿಯಂತೆ ಹಣವನ್ನು ನಗರಸಭೆಗಳಿಗೆ ಕೊಡುತ್ತಿದ್ದಾರೆ. ಮತ್ತು ಅಕ್ಟ್ರಾಯ ಗ್ರ್ಯಾಂಟ್ ಇಂಟ್ರಡ್ಯೂಸ್ ಮಾಡಬೇಕೆಂದು ಕೂಡ ಇದ್ದೀರಿ. ಯಾವ ನಗರಸಭೆ ತನ್ನದೇ ಆದಂಥ ಆದಾಯ ಹೊಂದಿದೆ, ಆದಕ್ಕೆ ಕೇವಲ ತಾವು ಒಂದು ನಿರ್ಣಯ ತೆಗೆದುಕೊಂಡರೆ 35 ರಿಂದ 40 ಲಕ್ಷ ರೂಪಾಯಿಗಳಷ್ಟು ನಗರಸಭೆಗೆ ಆದಾಯ ಬರುತ್ತದೆ. ಇದರ ಬಗ್ಗೆ ಕಳೆದ ಮೂರು ವರ್ಷದಿಂದ ಸನ್ಮಾನ್ಯ

ಪೌರಾಡಳಿತ ರಾಜ್ಯ ಸಚಿವರು ನಿರ್ಣಯ ತೆಗೆದುಕೊಳ್ಳದೆ ತಮ್ಮಲ್ಲಿಯೇ ಇಟ್ಟುಕೊಂಡು ಕುಳಿತಿದ್ದಾರೆ. ದಯವಿಟ್ಟು ಇದರ ಬಗ್ಗೆ ಯೋಗ್ಯವಾದ ನಿರ್ಣಯ ತೆಗೆದುಕೊಂಡು ನಗರಸಭೆಗೆ ಆದಾಯ ಬರುವ ಹಾಗೆ ಹಾದಿಯನ್ನು ಕಂಡುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಪೌರಾಡಳಿತ ರಾಜ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ತರಹ ಇನ್ನೊಂದು ರೇಡಿಯೋ ಶಾಪಿಂಗ್ ಕಾಂಪ್ಲೆಕ್ಸ್ ಎಂದು ಒಂದು ಇದ್ದು ಅದಕ್ಕೆ ಮೊನ್ನೆಯ ದಿವಸ ಮಾನ್ಯ ಪೌರಾಡಳಿತ ರಾಜ್ಯ ಸಚಿವರೇ ಲಿಖಿತ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಕೂಡ ಒಂದು ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಕಳೆದ ಎರಡು ವರ್ಷದಿಂದ ಅವರ ಕಚೇರಿಯಲ್ಲಿ ಫೈಲು ಬಿದ್ದಿದೆ. ಮಾನ್ಯ ಮಂತ್ರಿಗಳ ಕಚೇರಿಯಲ್ಲಿ ಒಂದೊಂದು ಸಬ್ಜೆಕ್ಟಿನ ಮೇಲೆ ನಿರ್ಣಯ ತೆಗೆದುಕೊಳ್ಳಬೇಕಾದರೆ ಎರಡೆರಡು ವರ್ಷ ಆಗುತ್ತದೆ ಇದರಿಂದ ಜನರಿಗೆ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತೀವ್ರ ಗಮನಹರಿಸಬೇಕು.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಬಿಜಾಪುರ) :— ಮಾನ್ಯ ಅಧ್ಯಕ್ಷರು, ಈ ಲೀಸ್ ಸಮಸ್ಯೆ ನನ್ನ ಕ್ಷೇತ್ರದಲ್ಲಿ ಕೂಡ ಇದೆ. 30 ವರ್ಷ, 60 ವರ್ಷ ಮತ್ತು 90 ವರ್ಷ ಹೀಗೆ ಮೂರು ರೀತಿಯ ಲೀಸ್ ಇದೆ. ಆದರೆ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಆರ್ಥಿಕ ಇಲಾಖೆಯಲ್ಲಿ ಇದೆ ಎನ್ನುವ ಉತ್ತರವನ್ನು ಲಿಖಿತ ಮೂಲಕ ನನಗೆ ಕೊಟ್ಟಿದ್ದಾರೆ. ಈ ರೀತಿಯ ಪ್ರಾಪರ್ಟಿಗಳು ಸುಮಾರು ನಾಲ್ಕೈದು ಸಾವಿರ ನಗರದ ಮಧ್ಯದಲ್ಲಿ ಬರುತ್ತದೆ. ಇವತ್ತು ಅಲ್ಲಿ ಕಟ್ಟಡ ರಿಪೇರಿ ಮಾಡಲು ಅವಕಾಶ ಕೊಡುತ್ತಿಲ್ಲ, ಕಟ್ಟಡ ಕಟ್ಟಲಿಕ್ಕೆ ಅವಕಾಶ ಕೊಡುತ್ತಿಲ್ಲ. ಯಾರಾದರೂ ತಮ್ಮ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿ ತನಗೆ ಸಂಬಂಧಿಸಿದ ಕಟ್ಟಡವನ್ನು ಮಾರಾಟ ಮಾಡಿ ಸಾಲ ತೀರಿಸಿಕೊಳ್ಳಬಹುದು ಎಂದು ಅಂದುಕೊಂಡರೆ ಅದಕ್ಕೂ ಕೂಡ ಅವಕಾಶ ಇಲ್ಲ. ಆದ್ದರಿಂದ ಸರ್ಕಾರ ತೀವ್ರಗತಿಯಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. (ಪೌರಾಡಳಿತ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಬಿಜಾಪುರ ಮುನ್ಸಿಪಾಲಿಟಿಯಲ್ಲಿ 1,051 ಲೀಸ್ ಪ್ರಾಪರ್ಟಿಗಳು ಇವೆ. 30 ವರ್ಷ, 50 ವರ್ಷ ಮತ್ತು 90 ವರ್ಷ ಇದಕ್ಕೆ ಕೊಟ್ಟಿರುವ ಅವಧಿ ಏನು ಇದೆ ಅದು 1996ಕ್ಕೆ ಮುಗಿದಿದೆ. ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸುಮಾರು 3 ವರ್ಷದಿಂದ ಸರ್ಕಾರದಲ್ಲಿಯೇ ಪೆಂಡಿಂಗ್‌ನಲ್ಲಿ ಇದೆ. ಎಂದು ಮಾನ್ಯ ಸದಸ್ಯರಾದ ಶ್ರೀ ಪಿಣಾಸಂದ ಪಾಟೀಲರು ಹೇಳಿದರು. ಬಿಜಾಪುರ ಮುನ್ಸಿಪಾಲಿಟಿಯಿಂದ ದಿನಾಂಕ 22-1-1999ರಲ್ಲಿ ಸರ್ಕಾರಕ್ಕೆ ಪ್ರಪೋಸಲ್ ಬಂದಿದೆ. ಅದನ್ನು 24-2-1999ರಂದು ಹಣಕಾಸು ಇಲಾಖೆಗೆ ಕಳುಹಿಸಲಾಗಿದೆ. ಆದರಲ್ಲಿ ಟೆಕ್ನಿಕಲ್‌ಆಗಿ ಕೆಲವು ಇನ್‌ಫಾರ್ಮೇಷನ್‌ಗಳನ್ನು ಕೇಳಿದ್ದಾರೆ. ಅದಕ್ಕೆ ಕಾರ್ಪೋರೇಷನ್ ಕಮೀಷನರ್ ಅವರನ್ನು ಕರೆಸಿ ಕೂಡಲೇ ಮೀಟಿಂಗ್ ಮಾಡಿ ಇದರ ಬಗ್ಗೆ ಡಿಸ್ಪೆಡ್ ಮಾಡಬೇಕೆಂದು ನಿರ್ಧರಿಸಿದ್ದೇವೆ. ಹಣಕಾಸು ಇಲಾಖೆಯಿಂದ ಕಳುಹಿಸಿದಂಥ

ಪ್ರಪೋಸಲ್ ಬಂದ ಕೂಡಲೆ ಅಂದರೆ 15 ದಿವಸದ ಒಳಗಾಗಿ ಮಾಡುತ್ತೇವೆ. ಹಾಗೆಯೇ ರೇಡಿಯೋ ಶಾಪಿಂಗ್ ಕಾಂಪ್ಲೆಕ್ಸ್ ಬಗ್ಗೆ ಹೇಳಿದ್ದು ಅದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರ ಜೊತೆ ಮಾತನಾಡಿದ್ದೇನೆ. ಅದನ್ನು ಕೂಡ 15 ದಿವಸದ ಒಳಗಾಗಿ ಅಪ್ರೂವ್ ಮಾಡಿಕೊಡುತ್ತೇವೆ.

(ಖ) ಜನವಾಹಿನಿ ಪತ್ರಿಕೆಯಲ್ಲಿ ಶಾಸಕರ ಭವನದ ಬಗ್ಗೆ ಬರೆದಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಕ್ಷೇತ್ರ) ಮಾನ್ಯ ಅಧ್ಯಕ್ಷರೆ, ಇವತ್ತು ಜನವಾಹಿನಿ ಪತ್ರಿಕೆಯಲ್ಲಿ ಬಂದಂಥ ಒಂದು ನ್ಯೂಸ್ ಕಾಲಂನ್ನು ತಮ್ಮಗಮನಕ್ಕೆ ತರಬಯಸುತ್ತೇನೆ. ಆ ಪತ್ರಿಕೆಯವರು ಶಾಸಕರ ಭವನದ ಬಗ್ಗೆ ಬಹಳ ಗಂಭೀರವಾಗಿ ಬರೆದಿದ್ದಾರೆ. ಅವರು ದಿವಸದಿಂದ ದಿವಸಕ್ಕೆ ನಮ್ಮ ಬಗ್ಗೆ ಹೀಗೆ ಬರೆಯುತ್ತಾ ಹೋದರೆ ಸಾರ್ವಜನಿಕರ ದೃಷ್ಟಿಯಲ್ಲಿ ನಾವು ಕೇವಲ ಮೋಜು ಮಾಡಲಿಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದೇವೆ ಎನ್ನುವ ಭಾವನೆ ಬರುವ ರೀತಿಯಲ್ಲಿ ನಮ್ಮ ಪತ್ರಿಕಾ ಗೆಳೆಯರು ಬರೆಯುತ್ತಾ ಹೋದರೆ ಬಹುಶಃ ನಮ್ಮ ಸ್ಥಿತಿ ಏನಾಗುತ್ತೋ ಗೊತ್ತಿಲ್ಲ. ಶಾಸಕರ ಭವನದಲ್ಲಿ ಅವ್ಯವಹಾರ ಕೂಡ ಆಗಿದೆ ಎಂದು ಅವರು ಹೇಳಿದ್ದಾರೆ. ನಂತರ ಇವರಿಗೆ ಹೆಲ್ತ್ ಕ್ಲಬ್ ಬೇಕೇ? ಬೆಳಿಗ್ಗೆ ವಾಕ್ ಹೋದರೆ ಬೊಜ್ಜು ಕರಗಿಸಬಹುದು. ಎನ್ನುವ ಮಟ್ಟಕ್ಕೆ ಬರೆಯುವುದು ಇದು ಸಭೆಗೆ ಘನತೆ ತರುತ್ತದೆಯೇ ಇಲ್ಲವೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಶಾಸಕರ ಭವನ ತಮ್ಮ ಆಡಳಿತ ವ್ಯಾಪ್ತಿಗೆ ಬರುವುದರಿಂದ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಲಿಲ್ಲ. ತಾವು ಏನಾದರೂ ಅವಕಾಶ ಕೊಟ್ಟರೆ ಇದನ್ನು ಬೇರೆ ರೀತಿಯಲ್ಲಿ ಕೇಳಬೇಕೆಂದು ಇದ್ದೆ. ಇದಕ್ಕೆ ನಿಮ್ಮ ಮಾರ್ಗದರ್ಶನ ಬೇಕು. ಇಂಥದಕ್ಕೆ ಎಲ್ಲಾದರೂ ಒಂದು ಕಡೆ ನಾವು ಉತ್ತರ ಹೇಳಬೇಕಾಗುತ್ತದೆ. ನಾವೆಲ್ಲ ವಿಲನ್ ತರಹ ಕಾಣುವ ಹಾಗೆ ಬರೆದರೆ ಹೇಗೆ? ನಾವು ಮನೆ ಕೆಲಸವನ್ನು ಬಿಟ್ಟು, ನಮಗೆ ಬರಬೇಕಾದ ಆದಾಯಗಳನ್ನು ಬಿಟ್ಟು, ಒಬ್ಬಿಬ್ಬರು ಶ್ರೀಮಂತರು ಇರಬಹುದು, ಈ ರೀತಿ ಬರೆದರೆ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. 'ಫೈವ್ ಸ್ಟಾರ್ ಹೋಟೆಲಿಗೆ ಕಡಿಮೆ ಇಲ್ಲದಂತೆ ಶಾಸಕರ ಭವನವನ್ನು ಕೊಡಲಾಗಿದೆ, ಇಡೀ ಏರಿಯಾವನ್ನು ಪ್ಯೂರಿಫೈ ಮಾಡುವಂಥ ಪ್ಯೂರಿಫೈಯರ್ಸ್ ಹಾಕಿದ್ದೀರಿ, ಶಾಸಕರ ಭವನಕ್ಕೆ ಕಬ್ಬನ್ ಪಾರ್ಕಿನಿಂದ ನೇರವಾಗಿ ಆಕ್ಸಿಜನ್ ಬರುತ್ತದೆ. ಒಂದು ಸ್ಟೀಲ್ ಅಲ್ಯೂಮಿನಿಯಂ ಬೀಡಿಂಗ್ ಹಾಕಿ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮೋಜು ಮಾಡುತ್ತಾರೆ' ಇಂಥವುಗಳನ್ನು ಬರೆದುಕೊಂಡು ಹೋದರೆ ನಮ್ಮ ಸ್ಥಿತಿ ಏನು? ತಾವು ನಮ್ಮ ರಕ್ಷಣೆಗೆ ಬರಬೇಕು. ಬಹುಶಃ ಇದಕ್ಕೆ ಸರ್ಕಾರದಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲವೆಂದು ನನ್ನ ಭಾವನೆ. ಇದರ ಬಗ್ಗೆ ಯಾವುದಾದರೂ ಒಂದು ದಿವಸ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು :— ನಾನೂ ಸಹ ಈ ಪತ್ರಿಕೆಯಲ್ಲಿ ಬಂದ ವರದಿಯನ್ನು ಓದಿದೆ. ನಮ್ಮ ಆಫೀಸಿನಿಂದ ಅದಕ್ಕೆ ರಿಪ್ಲೈ ಕಳುಹಿಸುತ್ತೇವೆ. ತಪ್ಪು ತಿಳುವಳಿಕೆಯಿಂದ ಬರೆದಿದ್ದರೆ

ವಾಸ್ತವಾಂಶ ಏನು ಇದೆ ಅದನ್ನು ಬರೆದು ಪ್ರಕಟಣೆ ಮಾಡಿ ಎಂದು ಅವರಿಗೆ ಹೇಳುತ್ತೇವೆ. ಅವರು ಪ್ರಕಟಣೆ ಮಾಡದೇ ಹೋದರೆ ಏನು ಮಾಡಬೇಕೆಂದು ನಂತರ ನಿರ್ಧರಿಸಬಹುದು.

(ಗ) ಕೇಂದ್ರ ಸರ್ಕಾರ ರೇಷ್ಮೆ ಆಮದು ನೀತಿಯಿಂದ ರಾಜ್ಯದ ಕೃಷಿಯ ಮೇಲೆ ಬೀರಿರುವ ಪರಿಣಾಮ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಇತ್ತೀಚಿನ ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿಯಿಂದ ಈಗಾಗಲೇ ನಮ್ಮ ರಾಜ್ಯದ ಕೃಷಿಯ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ ಎನ್ನುವುದು ನಿರ್ವಿವಾದ ಸಂಗತಿ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. `The recent development of entry of international silk into Indian market has posed a serious challenge to the sericulture industry as never before. Indeed it poses a threat to the survival of sericulture. My Government, therefore, urges the Government of India to consider withdrawal of the notification permitting import of silk '. ಈಗ ಕೇಂದ್ರ ಸರ್ಕಾರದ ರೇಷ್ಮೆ ಆಮದು ನೀತಿ ಏನು ಬಂದಿದೆ, ಅದು ಬಂದಾದ ನಂತರದ ಪರಿಸ್ಥಿತಿಯನ್ನು ಗಮನಿಸಿದಾಗ ಇಲ್ಲಿಯ ರೇಷ್ಮೆ ಕೃಷಿಯ ಮೇಲೆ ತೀವ್ರತರವಾದಂಥ ಪರಿಣಾಮ ಆಗಿದೆ ಇದನ್ನು ಮಾನ್ಯ ರೇಷ್ಮೆ ರಾಜ್ಯ ಸಚಿವರು ಕೂಡ ಒಪ್ಪಿಕೊಳ್ಳುತ್ತಾರೆ. ಮಾನ್ಯ ಸಚಿವರು ಮೊನ್ನೆ ತುಮಕೂರಿನಲ್ಲಿ ಮಾಡಿರತಕ್ಕಂಥ ಹೇಳಿಕೆಯನ್ನು ನೋಡಿದಾಗ ಬಹುಶಃ ಈಗಲೇ ನಮ್ಮ ರೇಷ್ಮೆ ಬೆಳೆಗಾರರಿಗೆ ಸಾಕಷ್ಟು ಬಿಸಿ ಮುಟ್ಟಿದೆ ಎನ್ನುವುದು ಅವರ ಹೇಳಿಕೆಯಿಂದ ಗೊತ್ತಾಗುತ್ತದೆ. ಮತ್ತು 'ಇವತ್ತು ರೇಷ್ಮೆ ಬೆಳೆಯತಕ್ಕಂಥ ಪ್ರದೇಶದಲ್ಲಿರತಕ್ಕಂಥ ಶಾಸಕರ ಸಭೆಯನ್ನು ಕರೆದು ಕೇಂದ್ರ ಸರ್ಕಾರದ ಆಮದು ನೀತಿಯನ್ನು ವಾಪಾಸ್ಸು ತೆಗೆದುಕೊಳ್ಳಬೇಕು ಎನ್ನುವ ಒತ್ತಾಯ ಸರ್ಕಾರದಿಂದ ತರುತ್ತೇವೆ' ಎಂದು ಮಾನ್ಯ ರಾಜ್ಯಪಾಲರ ಭಾಷಣ ಮೂಲಕ ಹೇಳಿಕೆಯನ್ನು ಕೊಟ್ಟಿದ್ದೀರಿ, ಇದನ್ನು ಹೇಳಿದ ಮೇಲೆ ಸರ್ಕಾರದಿಂದ ಕೈಗೊಂಡಿರುವ ಕ್ರಮ ಏನು? ಮತ್ತು 'ನಾನು ರೇಷ್ಮೆ ಬೆಳೆ ಬೆಳೆಯತಕ್ಕಂಥ ಪ್ರದೇಶದಲ್ಲಿನ ಶಾಸಕರ ಸಭೆಯನ್ನು ಕರೆಯುತ್ತೇನೆಂದು' ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದು ಆ ಸಭೆಯನ್ನು ಕರೆಯುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿದಂತೆ ಅದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ? ಈ ಒಂದು ನೀತಿಯನ್ನು ವಾಪಾಸ್ಸು ತೆಗೆದುಕೊಳ್ಳುವ ದಿಶೆಯಲ್ಲಿ ತಮಗೆ ಏನಾದರೂ ಭರವಸೆ ಇದೆಯೇ? ಕೇಂದ್ರ ಸರ್ಕಾರದ ವಾಣಿಜ್ಯ ಸಚಿವರು ರಾಜಕೀಯ, ವೈಯಕ್ತಿಕ ಪ್ರತಿಷ್ಠೆಯನ್ನು ಮಾಡಿಕೊಂಡು ಕೆಲವರ ಮೇಲೆ ಯುದ್ಧೋನ್ಮಾದರಾಜ್ಯದ ರೇಷ್ಮೆ ಬೆಳೆಗಾರರನ್ನು ಪಣವಾಗಿ ಇಟ್ಟುಕೊಂಡಿದ್ದಾರೆ. ಇದು ಸರಿಯಲ್ಲ. ಆದ್ದರಿಂದ ತಕ್ಷಣ ಸೂಕ್ತ ಕ್ರಮ ಕೈಗೊಂಡು ಈ ರೇಷ್ಮೆ ಆಮದು

ನೀತಿಯನ್ನು ಮಾಪಾಸ್ಸು ತೆಗೆದುಕೊಳ್ಳತಕ್ಕಂಥ ದಿಶೆಯಲ್ಲಿ ಸರ್ಕಾರ ಚಿಂತನೆಯನ್ನು ಮಾಡಬೇಕು, ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರುತ್ತೇನೆ.

+ ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಹೊರದೇಶದಿಂದ ತರತಕ್ಕಂಥ ರೇಷ್ಮೆಯಿಂದ ನಮ್ಮ ರಾಜ್ಯದ ಮತ್ತು ರಾಷ್ಟ್ರದ ರೇಷ್ಮೆ ಬೆಳೆಗಾರರಿಗೆ ಹೊಡೆತ ಬೀಳುತ್ತಿದೆ, ಅದಕ್ಕೆ ಸರ್ಕಾರದ ವತಿಯಿಂದ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಎನ್ನತಕ್ಕಂಥ ಪ್ರಸ್ತಾವನೆಯನ್ನು ಸ್ನೇಹಂತರಾದಂಥ ಶ್ರೀ ಮುದ್ದಹನುಮೇಗೌಡರು ಮಾಡಿದ್ದಾರೆ. ಹೊರದೇಶದಿಂದ ರೇಷ್ಮೆಯನ್ನು ತರಿಸತಕ್ಕಂಥ ನೀತಿ ಈಗಾಗಲೇ 3 ಹಂತದಲ್ಲಿ ಬದಲಾವಣೆ ಆಗಿರತಕ್ಕಂಥದ್ದಾಗಿದೆ. 18-10-1998 ಕ್ಕಿಂತ ಹಿಂದೆ 100 ಕೆ.ಜಿ. ರೇಷ್ಮೆ ಉಡುಪನ್ನು ಹೊರದೇಶಕ್ಕೆ ಕಳುಹಿಸಿದರೆ 125 ಕೆ.ಜಿ. ರೇಷ್ಮೆಯನ್ನು ಆಮದು ಮಾಡಿಕೊಳ್ಳಬಹುದಾಗಿತ್ತು, ಪುನಃ 125 ಕೆ.ಜಿ. ರೇಷ್ಮೆಯಲ್ಲಿ ಬಟ್ಟೆ ತಯಾರು ಮಾಡಿ ಅದನ್ನು ಹೊರದೇಶಕ್ಕೆ ಕಳುಹಿಸುವುದು ಆ ನೀತಿನಿಯಮದ ಪ್ರಕಾರ ಆಮದು ಮತ್ತು ರಫ್ತು ಪ್ರೋಸೀಜರ್ ಇತ್ತು. ಇದರಿಂದ ಒಂದು ವರ್ಷಕ್ಕೆ ಸುಮಾರು 926 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಅಂದರೆ 8-10-1998ರಲ್ಲಿ ಒಂದು ಆದೇಶ ಮಾಡಿದರು. ಆ ಆದೇಶದ ಪ್ರಕಾರ ಅದು ಸರ್ಕಾರಿ ಸಂಸ್ಥೆಗಳಲ್ಲಿ ಲೆಕ್ಕ ಇಟ್ಟುಕೊಂಡು ತಂದುಕೊಡತಕ್ಕಂಥ ಒಂದು ವ್ಯವಸ್ಥೆ ಇತ್ತು. ಅನಂತರ 30-10-1998 ರಲ್ಲಿ ಎಸ್.ಐ.ಎಲ್.ಓ. ಎನ್ನುವಂಥ ಒಂದು ಆದೇಶವನ್ನು ಕೇಂದ್ರ ಸರ್ಕಾರವು ಹೊರಡಿಸಿತು. ಆ ಆದೇಶದ ಪ್ರಕಾರ ಯಾವುದೇ ಮನುಷ್ಯ ಯಾವುದೇ ವಸ್ತುವನ್ನು ಎಷ್ಟು ಕಳುಹಿಸುತ್ತಾನೋ, ಕಳುಹಿಸಿದಂಥ ಬೆಲೆಯಲ್ಲಿ 30 ಪರ್ಸೆಂಟ್‌ನಷ್ಟು ರೇಷ್ಮೆಯನ್ನು 40 ಪರ್ಸೆಂಟ್‌ನ್ನು ಸುಂಕ ಕಟ್ಟುವುದರ ಮುಖಾಂತರ ಯಾರು ಬೇಕಾದರೂ ತರಿಸಿಕೊಳ್ಳಬಹುದು ಎನ್ನುವ ಆದೇಶವನ್ನು ಮಾಡಿದರು. ಆ ಆದೇಶ ಮಾಡಿದ ನಂತರ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಉತ್ಪತ್ತಿ ಆಗುತ್ತಿದ್ದ ರೇಷ್ಮೆಯ ಬೆಲೆ ಮತ್ತು ಗೂಡು ದಿನೇದಿನೇ ಇಳಿಮುಖವಾಗುತ್ತಾ ಬಂತು. ಅಂದಾಜು ಪ್ರಕಾರ ವರ್ಷಕ್ಕೆ ಐದು ಸಾವಿರದಿಂದ 6 ಸಾವಿರ ಟನ್ ರೇಷ್ಮೆ ರಾಜ್ಯದಲ್ಲಿ ಬರುತ್ತಿದ್ದು ಅದರಲ್ಲಿ ಸುಮಾರು 3 ಸಾವಿರ ಟನ್ನಿನಷ್ಟು ಬಂದಿದೆ ಎಂದು ತಿಳಿದುಬಂದಿದೆ. ಹಾಗೆಯೇ 150 ರಿಂದ 160 ರೂಪಾಯಿಗಳು ಇದಂಥ ರೇಷ್ಮೆ ಗೂಡಿನ ಬೆಲೆ 130 ರಿಂದ 135 ರೂಪಾಯಿಗಳಿಗೆ ಇಳಿದಿದೆ, ಸಿಲ್ಕಿನ ಬೆಲೆ 1450 ರಿಂದ 1300 ರೂಪಾಯಿಗಳಿಗೆ ಇಳಿದಿದೆ. ಹೀಗೆ ದಿನೇದಿನೇ ರಾಜ್ಯದಲ್ಲಿ ಬೆಳೆಯತಕ್ಕಂಥ ರೇಷ್ಮೆಯ ಬೆಲೆ ಇಳಿಮುಖವಾಗುತ್ತಿದೆ. ನಮ್ಮ ರಾಜ್ಯ ಸರ್ಕಾರದ ವತಿಯಿಂದ ಮಾನ್ಯ ಮುಖ್ಯಮಂತ್ರಿಯವರು ದಿನಾಂಕ : 22-10-1998 ಮತ್ತು 31-10-1998 ರಲ್ಲಿ 'ಕೇಂದ್ರ ಸರ್ಕಾರ ಇತ್ತೀಚೆಗೆ ತಂದಂಥ ರೇಷ್ಮೆ ಆಮದು ನೀತಿಯನ್ನು ತೆಗೆದುಹಾಕಬೇಕು, ತೆಗೆಯದಿದ್ದರೆ ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಬೆಳೆಯುತ್ತಿರತಕ್ಕಂಥ ರೇಷ್ಮೆ ಬೆಳೆಗಾರರಿಗೆ, ರೇಷ್ಮೆಯಲ್ಲಿ ತೊಡಗಿರತಕ್ಕಂಥ ಕಾರ್ಮಿಕರಿಗೆ ತೊಂದರೆಯಾಗುತ್ತದೆ' ಎನ್ನುವುದನ್ನು ಮಾನ್ಯ ಪ್ರಧಾನಮಂತ್ರಿಯವರಿಗೆ ಮತ್ತು ಸಂಬಂಧಪಟ್ಟ ಸಚಿವರಿಗೆ ಮನವರಿಕೆ ಮಾಡಿಕೊಡುವುದರ ಮೂಲಕ ಈಗಾಗಲೇ ಕ್ರಮ

ತೆಗೆದುಕೊಳ್ಳಲಾಗಿದೆ. ಈ ವಿಚಾರವಾಗಿ ಕೇಂದ್ರ ಸರ್ಕಾರವು ಸಹ 18-1-1998 ರಲ್ಲಿ ನಮ್ಮ ರಾಜ್ಯದ ಮತ್ತು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಸಭೆ ಮಾಡುವುದರ ಮೂಲಕ, ಆ ಸಭೆಯಲ್ಲಿ ಈ ಸಿಲ್ಕನ್ನು ತರಿಸಬೇಕೇ ಅಥವಾ ಬೇಡವೇ ಎನ್ನುವ ಬಗ್ಗೆ ಚಿಂತನೆ ನಡೆಯುತ್ತಿದೆ ಎಂದು ತಿಳಿದುಬಂದಿದೆ. ಈ ಕಾರಣಕ್ಕೆ ನಮ್ಮ ರಾಜ್ಯದಲ್ಲಿಯ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗುವುದನ್ನು ತಪ್ಪಿಸುವ ದಿಕ್ಕಿನಲ್ಲಿ ನಮ್ಮ ರಾಜ್ಯದ ಮತಿಯಿಂದ ಅತೀ ಹೆಚ್ಚಿನ ಜಾಗ್ರತೆವಹಿಸುವುದರ ಮುಖಾಂತರ ಕೆ.ಎಸ್.ಐ.ಸಿ. ಮತ್ತು ಕೆ.ಎಸ್.ಎಂ.ಬಿ. ಇವುಗಳ ಮುಖಾಂತರ ಗೂಡನ್ನು, ಸಿಲ್ಕನ್ನು ಕೊಂಡುಕೊಳ್ಳತಕ್ಕಂಥದ್ದರಲ್ಲಿ, ಮತ್ತು ಅದರಲ್ಲಿ ಅಲ್ಪಸ್ವಲ್ಪ ಕಂಟ್ರೋಲ್ ಮಾಡುವುದರಲ್ಲಿ ಯಶಸ್ವಿಯಾಗಿದ್ದೇನೆ. ಕೇಂದ್ರ ಸರ್ಕಾರ ಹೊರದೇಶದಿಂದ ಸಿಲ್ಕನ್ನು ತರಿಸಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಪಾಸ್ಸು ತೆಗೆದುಕೊಳ್ಳದೇ ಹೋದಂಥ ಪಕ್ಷದಲ್ಲಿ ಇಡೀ ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇರತಕ್ಕಂಥ ರೇಷ್ಮೆ ಬೆಳೆಗಾರರಿಗೆ ತುಂಬಾ ಅನಾಹುತವಾಗುತ್ತದೆ ಎನ್ನುವುದನ್ನು ಪಕ್ಷಾತೀತವಾಗಿ ಎಲ್ಲ ಸದಸ್ಯರೂ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಟ್ಟಿರುವುದರಿಂದ, ಅವರು ಏನಾದರೂ ಸದರಿ ಆಮದು ನೀತಿಯನ್ನು ಮಾಪಾಸ್ಸು ತೆಗೆದುಕೊಳ್ಳದಿದ್ದರೆ, ನಾವೆಲ್ಲರೂ ನಮ್ಮ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗುವುದರ ಮೂಲಕ ಮತ್ತು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಅವರ ಆಮದು ನೀತಿಯನ್ನು ಮಾಪಾಸ್ಸು ತೆಗೆದುಕೊಳ್ಳುವುದಕ್ಕೆ ಒತ್ತಡ ಹಾಕೋಣವೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ಹೇಳಬಯಸುತ್ತೇನೆ.

ಶ್ರೀ ಡಿ.ಎಸ್. ಮಾದಪ್ಪ :— ಮಾನ್ಯ ಅಧ್ಯಕ್ಷರೆ, ಅಕ್ಟೋಬರ್ ತಿಂಗಳಿನಲ್ಲಿ ನನ್ನ ಮನೆ ಮೇಲೆ ನಡೆದ ಹಲ್ಲೆಗೆ ನಾನು ಎರಡು ಗಮನ ಸೆಳೆಯುವ ಸೂಚನೆ ಕೊಟ್ಟರೂ ಸಹ ನನಗೆ ಅವಕಾಶ ಸಿಗಲಿಲ್ಲ.

ಅಧ್ಯಕ್ಷರು :— ನೀವು ನೀಡಿದ ಗಮನ ಸೆಳೆಯುವ ಸೂಚನೆಯನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಲು ನಾನು ಸೂಚಿಸಿದ್ದೆ. ನೀವು ಬಂದು ಅದು ಬೇಡ ಇನ್ನೊಂದು ವಿಚಾರ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಿರಿ. ಆ ಮೇಲೆ ನೀವು ಬಂದು ನನಗೆ ಭೇಟಿ ಆಗಲಿಲ್ಲ. ಈಗ ಮಾನ್ಯ ಗೃಹಸಚಿವರು ಕೂಡ ಸದನದಲ್ಲಿ ಇಲ್ಲ. ನಾಳೆ ತೆಗೆದುಕೊಳ್ಳೋಣ.

(6) ಮಂತ್ರಿಗಳ ಹೇಳಿಕೆ

ಟಿ.ಸಿ.ಹೆಚ್. ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸುವುದು.

ಶ್ರೀ ಕೆ. ಜಯಪ್ರಕಾಶ್ (ಬಂದರು ಮತ್ತು ಮೀನುಗಾರಿಕೆ ಸಚಿವರು) (ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಟಿ.ಸಿ.ಹೆಚ್. ನಲ್ಲಿ ಕ್ರಮಬದ್ಧವಾಗಿದ್ದು ಎಲ್ಲಾ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಿದ್ದು ಅವರುಗಳ ಅಂಕಪಟ್ಟಿಯನ್ನು ನೀಡಲು ಕೂಡ ವ್ಯವಸ್ಥೆ ಮಾಡಲಾಗಿದೆ. ಈ ಹಿಂದೆ

ಇದ್ದಂಥ ಅನಧಿಕೃತ ಟಿ.ಸಿ.ಹೆಚ್. ಕಾಲೇಜುಗಳಲ್ಲಿ ಕೆಲವೊಂದು ವಿದ್ಯಾರ್ಥಿಗಳ ಅಂತರಿಕ ಅಂಕದ ಮಾಹಿತಿಯನ್ನು ಕಾಲೇಜಿನವರು ಸರಿಯಾಗಿ ನೀಡದೇ ಇದ್ದುದರಿಂದ ಅವರುಗಳ ಅಂಕಪಟ್ಟಿಯನ್ನು ನೀಡಲು ತೊಂದರೆ ಆಗಿದೆ. ಅವರೆಲ್ಲರಿಗೂ ಅಂಕಪಟ್ಟಿಯನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ಇಂಥ ವಿದ್ಯಾರ್ಥಿಗಳು ಅಂದರೆ ಅಂಕಪಟ್ಟಿ ಇಲ್ಲದವರು ಶಿಕ್ಷಕರ ನೇಮಕಾತಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು ಅಂಕಪಟ್ಟಿ ದೊರೆತ ನಂತರ ಅವುಗಳನ್ನು ಸಲ್ಲಿಸಬಹುದಾಗಿದೆ.

ಅಧ್ಯಕ್ಷರು :— ಜಗನ್ನಾಥ ಶೆಟ್ಟಿ ಆಯೋಗದ ಬಗ್ಗೆ ಶಿವಾನಂದ ನಾಯ್ಕ್ ಮಾತನಾಡುತ್ತೀರಾ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೆ, ಇವತ್ತು ಸದನದಲ್ಲಿ ಮಾನ್ಯ ಗೃಹ ಸಚಿವರು ಇಲ್ಲ, ಕಾನೂನು ಸಚಿವರು ಕೂಡ ಇಲ್ಲ. ಪ್ರಸ್ತಾಪ ಮಾಡಬೇಕೆಂದು ಹೇಳಿದರೆ ಶ್ರೀ ಶಿವಾನಂದ ನಾಯ್ಕ್ ಅವರು ಪ್ರಸ್ತಾಪ ಮಾಡುತ್ತಾರೆ. ಆದರೆ ಸರ್ಕಾರದ ಕಡೆಯಿಂದ ಖಚಿತ ಉತ್ತರ ಕೊಡುವವರು ಯಾರೂ ಇಲ್ಲ.

ಅಧ್ಯಕ್ಷರು :— ಡಿ. ಮಂಜುನಾಥ ಸಾಹೇಬರೆ, ತಾವು ಅದನ್ನು ನೋಟ್ ಮಾಡಿಕೊಳ್ಳಿ. ನಾಳೆಯೇ ನಿಮ್ಮ ಗೃಹಮಂತ್ರಿಗಳು ಅಥವಾ ಕಾನೂನು ಸಚಿವರು ಇದರ ಬಗ್ಗೆ ಒಂದು ಹೇಳಿಕೆಯನ್ನು ನೀಡಲಿ.

ಅಧ್ಯಕ್ಷರು :— ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವುದು.

(ಸದನವು ಸಂಜೆ 7 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 31ನೇ ಮಾರ್ಚ್ 1999ರ ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1999

(1999 ರ ಕರ್ನಾಟಕ ವಿಧಾನ ಸಭಾ ವಿಧೇಯಕ ಸಂಖ್ಯೆ 4)

1999-2000ನೇ ಭಾಗದ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1999-2000ನೇ ಭಾಗದ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು.–ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1999–2000ನೇ ಹಣಕಾಸು ವರ್ಷಕ್ಕಾಗಿ 6,935,76,39,000 ರೂಪಾಯಿಗಳ ನೀಡಿಕೆ.– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1999-2000ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಆರು ಸಾವಿರದ ಒಂಬೈನೂರ ಮುವತ್ತೈದು ಕೋಟಿ, ಎಪ್ಪತ್ತಾರು ಲಕ್ಷ ಮತ್ತು ಮುವತ್ತೊಂಬತ್ತು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕುದು ಮತ್ತು ಉಪಯೋಗಿಸತಕ್ಕುದು.

3. ಧನವಿನಿಯೋಗ.– ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	2		3	4	5
1	ವ್ಯವಸಾಯ	ರಾಜಸ್ವ	101,14,06,000	8,10,000	101,22,16,000
	(ಮ.ಪ್ರ.ಆ.ಮಂ. ಹೊರತುಪಡಿಸಿ)	ಬಂಡವಾಳ	4,04,40,000	-	4,04,40,000
2	ತೋಟಗಾರಿಕೆ	ರಾಜಸ್ವ	30,62,13,000	4,05,000	30,66,18,000
		ಬಂಡವಾಳ	18,33,000	-	18,33,000
3	ಪಶು ಸಂಗೋಪನೆ	ರಾಜಸ್ವ	47,19,35,000	2,26,000	47,21,61,000
		ಬಂಡವಾಳ	-	-	-
4	-ಮೀನುಗಾರಿಕೆ	ರಾಜಸ್ವ	7,68,43,000	-	7,68,43,000
		ಬಂಡವಾಳ	2,32,64,000	-	2,32,64,000
5	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು	ರಾಜಸ್ವ	12,77,87,000	-	12,77,87,000
	(ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)	ಬಂಡವಾಳ	11,49,88,000	-	11,49,88,000
6	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	6,72,33,000	-	6,72,33,000
		ಬಂಡವಾಳ	-	-	-
7	ಚಿಕ್ಕಪುಟ್ಟ ಉದ್ಯಮಗಳು	ರಾಜಸ್ವ	30,68,56,000	-	30,68,56,000
		ಬಂಡವಾಳ	4,02,29,000	-	4,02,29,000
8	ರೇಷ್ಮೆ ವ್ಯವಸಾಯ	ರಾಜಸ್ವ	45,00,00,000	7,000	45,00,07,000
		ಬಂಡವಾಳ	10,00,000	-	10,00,000
9	ಸಕ್ಕರೆ	ರಾಜಸ್ವ	2,62,48,000	-	2,62,48,000
		ಬಂಡವಾಳ	66,66,000	-	66,66,000

1	2		3	4	5
10	ಲೇಖನ ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	20,05,22,000	-	20,05,22,000
11	ಉನ್ನತ ಶಿಕ್ಷಣ	ರಾಜಸ್ವ	137,03,58,000	-	137,03,58,000
		ಬಂಡವಾಳ	-	-	-
12	ಯುವಜನಸೇವೆ	ರಾಜಸ್ವ	12,82,59,000	-	12,82,59,000
13	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	6,08,45,000	13,000	6,08,58,000
		ಬಂಡವಾಳ	66,66,000	-	66,66,000
14	ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ	ರಾಜಸ್ವ	841,22,90,000	-	841,22,90,000
15	ವರ್ಧಮಾನ ವೃತ್ತಿಗಳು, ಫಾರ್ಮಾಟ ಮತ್ತು ಇತರ ಸೇವೆಗಳ ಮೇಲಿನ ತೆರಿಗೆಗಳು	ರಾಜಸ್ವ	25,32,23,000	3,000	25,32,26,000
16	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	ರಾಜಸ್ವ	419,34,14,000	95,99,000	420,30,13,000
		ಬಂಡವಾಳ			
17	ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು	ರಾಜಸ್ವ	3,99,96,000	-	3,99,96,000
		ಬಂಡವಾಳ	4,06,46,000	-	4,06,46,000
18	ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿಗಳು ವಿಮೆ ಮತ್ತು ವಿಜ್ಞಾನೆ ಮತ್ತು ಲಕ್ಷ್ಮಾಡಳಿತ	ರಾಜಸ್ವ	63,32,94,000	2,000	63,32,96,000
		ಬಂಡವಾಳ	10,00,000	-	10,00,000
19	ಇತರೆ ವಿವಿಧ ಸೇವೆಗಳು	ರಾಜಸ್ವ	14,33,000	-	14,33,000
		ಬಂಡವಾಳ	33,000	-	33,000
20	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ರಾಜಸ್ವ	108,85,61,000	1,00,000	108,86,61,000
		ಬಂಡವಾಳ	5,00,000	-	5,00,000
21	ಅರಣ್ಯ	ರಾಜಸ್ವ	103,57,44,000	4,00,38,000	107,57,82,000
		ಬಂಡವಾಳ	16,67,000	-	16,67,000
22	ರಾಜ್ಯದ ಅಬಕಾರಿ	ರಾಜಸ್ವ	13,34,19,000	-	13,34,19,000
		ಬಂಡವಾಳ	99,99,000	-	99,99,000

1	2		3	4	5
23	ಸಾರಿಗೆ ಸೇವೆಗಳು	ರಾಜಸ್ವ	31,02,75,000	-	31,02,75,000
		ಬಂಡವಾಳ	-	-	-
24	ಆರಕ್ಷಕ ಸೇವೆಗಳು	ರಾಜಸ್ವ	228,48,41,000	-	228,48,41,000
		ಬಂಡವಾಳ	5,03,28,000	-	5,03,28,000
25	ಬಂದೀಖಾನೆಗಳು ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ	ರಾಜಸ್ವ	23,26,29,000	-	23,26,29,000
		ಬಂಡವಾಳ	13,33,000	-	13,33,000
26	ವಾರ್ತಾ ಮತ್ತು ಪ್ರಚಾರ	ರಾಜಸ್ವ	5,67,03,000	-	5,67,03,000
27	ಪ್ರವಾಸೋದ್ಯಮ	ರಾಜಸ್ವ	3,79,95,000	-	3,79,95,000
28	ವೈದ್ಯಕೀಯ ಶಿಕ್ಷಣ	ರಾಜಸ್ವ	67,34,29,000	1,000	67,34,30,000
29	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	245,30,67,000	-	245,30,67,000
		ಬಂಡವಾಳ	38,26,95,000	-	38,26,95,000
30	ವಸತಿ (ಸರ್ಕಾರಿ ವಸತಿ ಗೃಹಗಳ ಹೊರತು)	ರಾಜಸ್ವ	62,69,96,000	-	62,69,96,000
		ಬಂಡವಾಳ	4,60,29,000	-	4,60,29,000
31	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	ರಾಜಸ್ವ	222,04,58,000	-	222,04,58,000
		ಬಂಡವಾಳ	5,83,61,000	-	5,83,61,000
32	ಬೆಂಗಳೂರು ಅಭಿವೃದ್ಧಿ	ರಾಜಸ್ವ	33,76,33,000	-	33,76,33,000
		ಬಂಡವಾಳ	69,29,31,000	-	69,29,31,000
33	ಸಣ್ಣ ನೀರಾವರಿ	ರಾಜಸ್ವ	24,32,60,000	-	24,32,60,000
		ಬಂಡವಾಳ	39,62,94,000	3,33,000	39,66,27,000
34	ಭಾರಿ ಮತ್ತು ಮಧ್ಯಮ ನೀರಾವರಿ	ರಾಜಸ್ವ	195,55,96,000	-	195,55,96,000
		ಬಂಡವಾಳ	689,68,10,000	1,76,65,000	691,44,75,000
35	ರಾಜ್ಯ ವಿಧಾನ ಮಂಡಲ	ರಾಜಸ್ವ	9,02,40,000	45,61,000	9,48,01,000

1	2		3	4	5
36	ನ್ಯಾಯ ಪರಿಪಾಲನೆ	ರಾಜಸ್ವ	38,59,32,000	-	38,59,32,000
37	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	ರಾಜಸ್ವ	3,24,94,000	2,68,44,000	5,93,38,000
38	ಸಚಿವಾಲಯ	ರಾಜಸ್ವ	21,01,50,000	-	21,01,50,000
39	ಜಿಲ್ಲಾಡಳಿತ	ರಾಜಸ್ವ	47,64,39,000	8,000	47,64,47,000
		ಬಂಡವಾಳ	-	-	-
40	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	23,85,85,000	8,88,03,000	32,73,88,000
41	ಯೋಜನೆ	ರಾಜಸ್ವ	7,07,10,000	-	7,07,10,000
		ಬಂಡವಾಳ	1,67,000	-	1,67,000
42	ಹಿಂದುಳಿದ ಪ್ರದೇಶಗಳ ಅಭಿವೃದ್ಧಿ	ರಾಜಸ್ವ	34,85,65,000	-	34,85,65,000
43	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ರಾಜಸ್ವ	96,82,13,000	6,06,000	96,88,19,000
		ಬಂಡವಾಳ	6,67,000	-	6,67,000
44	ಕಟ್ಟಡಗಳು	ರಾಜಸ್ವ	9,40,10,000	1,67,000	9,41,77,000
		ಬಂಡವಾಳ	24,44,83,000	21,66,000	24,66,49,000
45	ರಸ್ತೆಗಳು ಮತ್ತು ಸೇತುವೆಗಳು	ರಾಜಸ್ವ	91,99,76,000	-	91,99,76,000
		ಬಂಡವಾಳ	49,94,50,000	-	49,94,50,000
46	ರೇವು ಮತ್ತು ಜಲಸಾರಿಗೆ ಸೇವೆಗಳು	ರಾಜಸ್ವ	1,93,29,000	-	1,93,29,000
		ಬಂಡವಾಳ	1,16,66,000	-	1,16,66,000
47	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	149,87,07,000	-	149,87,07,000
48	ಭೂ ಕಂದಾಯ ಇತ್ಯಾದಿ	ರಾಜಸ್ವ	83,53,51,000	42,66,000	83,96,17,000
		ಬಂಡವಾಳ	67,24,000	-	67,24,000

1	2		3	4	5
49	ಮುದ್ರಾಂಕಗಳು ಮತ್ತು ನೋಂದಣಿ	ರಾಜಸ್ವ	9,39,82,000	-	9,39,82,000
50	ಮತೀಯ ಮತ್ತು ಧರ್ಮಾದಯ ಸಂಸ್ಥೆಗಳು ಇತ್ಯಾದಿ	ರಾಜಸ್ವ	5,24,52,000	-	5,24,52,000
51	ವಕ್ಫ್	ರಾಜಸ್ವ	2,23,98,000	-	2,23,98,000
52	ಸಹಕಾರ	ರಾಜಸ್ವ	17,75,13,000	9,000	17,75,22,000
		ಬಂಡವಾಳ	4,59,24,000	-	4,59,24,000
53	ಕ್ರಮಪಡಿಸಿದ ಮಾರುಕಟ್ಟೆಗಳು	ರಾಜಸ್ವ	11,23,01,000	-	11,23,01,000
54	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ	ರಾಜಸ್ವ	82,07,51,000	-	82,07,51,000
		ಬಂಡವಾಳ	60,62,73,000	-	60,62,73,000
55	ಗ್ರಾಮೀಣ ಅಭಿವೃದ್ಧಿ	ರಾಜಸ್ವ	210,68,44,000	-	210,68,44,000
56	ಕಾರ್ಮಿಕ	ರಾಜಸ್ವ	32,59,72,000	2,000	32,59,74,000
57	ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಕಲ್ಯಾಣ	ರಾಜಸ್ವ	123,37,87,000	-	123,37,87,000
		ಬಂಡವಾಳ	19,43,29,000	-	19,43,29,000
58	ಮಹಿಳಾ ಮತ್ತು ಮಕ್ಕಳ ಕಲ್ಯಾಣ	ರಾಜಸ್ವ	71,50,46,000	-	71,50,46,000
		ಬಂಡವಾಳ	1,67,000	-	1,67,000
59	ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ	ರಾಜಸ್ವ	2,86,15,000	-	2,86,15,000
60	ಮಲೆನಾಡು ಪ್ರದೇಶ ಅಭಿವೃದ್ಧಿ ಕಾಡಾ ಸೇರಿದಂತೆ	ರಾಜಸ್ವ	13,33,20,000	-	13,33,20,000
61	ಜವಳಿ	ರಾಜಸ್ವ	4,20,02,000	-	4,20,02,000
		ಬಂಡವಾಳ	63,99,000	-	63,99,000

1	2		3	4	5
62	ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು	ರಾಜಸ್ವ	32,91,02,000	-	32,91,02,000
63	ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ (ಯೋಜನೆಯಿಂದ)	ರಾಜಸ್ವ	3,76,48,000	-	3,76,48,000
		ಬಂಡವಾಳ	-	-	-
64	ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	66,22,000	-	66,22,000
		ಬಂಡವಾಳ	-	-	-
65	ಉದ್ಯೋಗ ಮತ್ತು ತರಬೇತಿ	ರಾಜಸ್ವ	12,23,20,000	2,000	12,23,22,000
		ಬಂಡವಾಳ	-	-	-
66	ಪೌರಾಡಳಿತ	ರಾಜಸ್ವ	1,02,000	-	1,02,000
		ಬಂಡವಾಳ	-	-	-
67	ಮೂಲಭೂತ ಸೌಕರ್ಯ ಅಭಿವೃದ್ಧಿ	ರಾಜಸ್ವ	-	-	-
		ಬಂಡವಾಳ	39,99,60,000	-	39,99,60,000
70	ಋಣಭಾರ ಕಡಿಮೆ ಮಾಡಲು ಅಥವಾ ನಿವಾರಿಸಲು ವಿನಿಯೋಗ	ರಾಜಸ್ವ	-	78,74,83,000	78,74,83,000
71	ಬಡ್ಡಿ ಸಂದಾಯ	ರಾಜಸ್ವ	-	701,97,99,000	701,97,99,000
72	ಅಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಮುಂಗಡ ಮತ್ತು ಅಂತರ ರಾಜ್ಯ ತೀರಿಕೆ	ಬಂಡವಾಳ	-	614,55,61,000	614,55,61,000
		ಒಟ್ಟು ಜಮ್ಮಾ	5,520,81,60,000	1,414,94,79,000	6,935,76,39,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1999-2000ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ಪಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಮತ್ತು ಯೋಜನಾ ಸಚಿವರು.

ಯಾಕೂಬ್ ಪರೀಫ್,
ಕಾರ್ಯದರ್ಶಿ

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ಧನವಿನಿಯೋಗ ವಿಧೇಯಕ, 1999

(1999ರ ವಿಧಾನ ಸಭೆ ವಿಧೇಯಕ ಸಂಖ್ಯೆ 11)

1998-99ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ಅಧಿನಿಯಮ.

1998-99ನೇ ಭಾಗದ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ವೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಏವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು.– ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1998–99ನೇ ಹಣಕಾಸು ವರ್ಷಕ್ಕಾಗಿ ₹13,42,44,000 ರೂಪಾಯಿಗಳ ನೀದಿಕೆ.– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1998-99ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ಪೂರೈಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಮೊತ್ತದಲ್ಲಿ ಎಂಟುನೂರ ಹದಿಮೂರು ಕೋಟಿ ನಲವತ್ತೆರಡು ಲಕ್ಷದ ನಲವತ್ತನಾಲ್ಕು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕುದು ಮತ್ತು ಉಪಯೋಗಿಸತಕ್ಕುದು.

3. ಧನವಿನಿಯೋಗ.– ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ವ್ಯಪ್ತವಾದುದನ್ನು	
1	2		3	4	5
1	ಕೃಷಿ	ರಾಜಸ್ವ	9,78,46,000	-	9,78,46,000
		ಬಂಡವಾಳ	36,00,000	-	36,00,000
2	ತೋಟಗಾರಿಕೆ	ರಾಜಸ್ವ	8,90,73,000	-	8,90,73,000
3	ಪಶು ಸಂಗೋಪನೆ	ರಾಜಸ್ವ	25,00,000	-	25,00,000
		ಬಂಡವಾಳ	1,03,43,000	-	1,03,43,000
4	ಮೀನುಗಾರಿಕೆ	ಬಂಡವಾಳ	4,00,00,000	-	4,00,00,000
5	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು	ರಾಜಸ್ವ	9,59,30,000	-	9,59,30,000
	(ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)	ಬಂಡವಾಳ	33,80,14,000	-	33,80,14,000
6	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	2,96,90,000	-	2,96,90,000
		ಬಂಡವಾಳ	6,20,95,000	-	6,20,95,000
8	ರೇಷ್ಮೆ ವ್ಯವಸಾಯ	ರಾಜಸ್ವ	1,41,91,000	-	1,41,91,000
		ಬಂಡವಾಳ	51,39,000	-	51,39,000
9	ಸಕ್ಕರೆ	ರಾಜಸ್ವ	27,99,000	-	27,99,000
		ಬಂಡವಾಳ	17,28,53,000	-	17,28,53,000
10	ಲೇಖನ ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	78,00,000	-	78,00,000

1	2		3	4	5
11	ಉನ್ನತ ಶಿಕ್ಷಣ	ರಾಜಸ್ವ	[illegible]	-	15,72,00,000
12	ಯುವಜನ ಸೇವೆಗಳು	ರಾಜಸ್ವ	97,00,000	-	97,00,000
13	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	87,83,000	-	87,83,000
15	ವರಮಾನ ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು	ರಾಜಸ್ವ	6,10,00,000	-	6,10,00,000
17	ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು	ಬಂಡವಾಳ	50,00,000	-	50,00,000
18	ಸಣ್ಣ ಉಳಿತಾಯ, ರಾಜ್ಯ ಲಾಟರಿ ವಿಮೆ ಮತ್ತು ಖಜಾನೆ ಮತ್ತು ಲೆಕ್ಕಾದಳಿಕ	ರಾಜಸ್ವ	18,14,72,000	-	18,14,72,000
19	ಇತರೆ ವಿವಿಧ ಸೇವೆಗಳು	ಬಂಡವಾಳ	12,00,00,000	-	12,00,00,000
20	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	74,00,000	-	74,00,000
21	ಅರಣ್ಯ	ರಾಜಸ್ವ	4,29,05,000	-	4,29,05,000
22	ರಾಜ್ಯದ ಅಬಕಾರಿ	ರಾಜಸ್ವ	15,00,,000	-	15,00,,000
23	ಸಾರಿಗೆ ಸೇವೆಗಳು	ರಾಜಸ್ವ	3,00,000	-	3,00,000

1	2		3	4	5
24	ಪೋಲೀಸ್ ಸೇವೆಗಳು	ರಾಜಸ್ವ	1,94,00,000	-	1,94,00,000
		ಬಂಡವಾಳ	8,12,50,000	-	8,12,50,000
25	ಬಂದೀಖಾನೆ, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಮುಂತಾದವುಗಳು	ರಾಜಸ್ವ	56,00,000	-	56,00,000
28	ವೈದ್ಯಕೀಯ ಶಿಕ್ಷಣ	ರಾಜಸ್ವ	11,87,00,000	-	11,87,00,000
29	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	8,52,40,000	-	8,52,40,000
30	ವಸತಿ (ಸರ್ಕಾರಿ ವಸತಿ ಗೃಹಗಳನ್ನು ಹೊರತು ಪಡಿಸಿ)	ರಾಜಸ್ವ	95,50,000	-	95,50,000
		ಬಂಡವಾಳ	5,91,50,000	-	5,91,50,000
31	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	ರಾಜಸ್ವ	9,00,000	-	9,00,000
33	ಸಣ್ಣ ನೀರಾವರಿ	ಬಂಡವಾಳ	8,08,00,000	-	8,08,00,000
34	ಭಾರಿ ಮತ್ತು ಮಧ್ಯಮ ನೀರಾವರಿ	ಬಂಡವಾಳ	48,11,07,000	-	48,11,07,000
36	ನ್ಯಾಯ ಪರಿಪಾಲನೆ	ರಾಜಸ್ವ	2,50,000	-	2,50,000
37	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕ ಸೇವಾ ಆಯೋಗ	ರಾಜಸ್ವ	84,00,000	-	84,00,000
38	ಸಚಿವಾಲಯ	ರಾಜಸ್ವ	1,59,53,000	-	1,59,53,000

1	2		3	4	5
39	ವೆಲ್ಲಾ ಅಡಳಿತ	ರಾಜಸ್ವ	1,62,79,000	-	1,62,79,000
40	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	3,17,24,000	-	3,17,24,000
41	ಯೋಜನೆ ಮತ್ತು ಸಾಂಖ್ಯಿಕ ಪರಿಷತ್ತು	ರಾಜಸ್ವ	7,50,000	-	7,50,000
	(ಪರಿಶಿಷ್ಟ ಮತ್ತು ಎಂಎಡಿಪಿ ಹೊರತು)	ಬಂಡವಾಳ	58,49,000	-	58,49,000
44	ಇತರೆಗಳು	ಬಂಡವಾಳ	54,33,02,000	-	54,33,02,000
45	ರಸ್ತೆ ಮತ್ತು ಸೇತುವೆಗಳು	ಬಂಡವಾಳ	5,20,00,000	-	5,20,00,000
46	ಬಂದರು ಮತ್ತು ಜಲಸಾರಿಗೆ ಸೇವೆಗಳು	ಬಂಡವಾಳ	50,00,000	-	50,00,000
47	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	397,00,00,000	-	397,00,00,000
48	ಭೂ ಕಂದಾಯ ಇತ್ಯಾದಿಗಳು	ರಾಜಸ್ವ	8,49,88,000	-	8,49,88,000
50	ಮಹೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ	ರಾಜಸ್ವ	10,00,000	-	10,00,000
51	ವಕ್ಫ್	ರಾಜಸ್ವ	10,00,000	-	10,00,000
52	ಸಹಕಾರ	ಬಂಡವಾಳ	40,76,08,000	-	40,76,08,000
53	ನಿಯಂತ್ರಿತ ಪ್ರಾಧಿಕಾರಗಳು	ರಾಜಸ್ವ	75,00,000	-	75,00,000

1	2		3	4	5
54	ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ	ರಾಜಸ್ವ	15,77,85,000	-	15,77,85,000
		ಬಂಡವಾಳ	18,00,00,000	-	18,00,00,000
56	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	1,75,37,000	-	1,75,37,000
57	ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕಲ್ಯಾಣ	ರಾಜಸ್ವ	57,99,000	-	57,99,000
61	ವಸ್ತ್ರೋದ್ಯಮಗಳು	ರಾಜಸ್ವ	6,95,22,000	-	6,95,22,000
		ಬಂಡವಾಳ	6,31,68,000	-	6,31,68,000
		ರಾಜಸ್ವ	541,79,66,000	-	541,79,66,000
		ಬಂಡವಾಳ	271,62,78,000	-	271,62,78,000
		ಒಟ್ಟು ಮುಂದೆ	813,42,44,000	-	813,42,44,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1998-99ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಬೇಡಿಕೆಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205(1)(ಎ)ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ,
ಉಪ ಮುಖ್ಯಮಂತ್ರಿಗಳು

ಯಾಕೂಬ್ ಪರೀಫ್,
ಕಾರ್ಯದರ್ಶಿ

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999

(1999ರ ವಿಧಾನ ಸಭಾ ವಿಧೇಯಕ ಸಂಖ್ಯೆ 6)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಿಲಿ,-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು 1999ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ.- 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ 25),-

(1) 2ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ,

(i) (ಸಿ) ಖಂಡದಲ್ಲಿ "ಟೀ" ಎಂಬ ಪದದ ತರುವಾಯ, "ಬೀಡಿ ಎಲೆಗಳು, ಕಚ್ಚಾ ಗೋಡಂಬಿ, ಬೌಬೀನ್, ಮರ, ಹುಣಸೆ ಹಣ್ಣು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ಎಫ್-1ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,- "(ಎಫ್-1ಬಿ) "ಬ್ರಾಂಡ್ ಹೆಸರು" ಎಂದರೆ, ನೋಂದಾಯಿತವಾಗಿರಲಿ ಅಥವಾ ನೋಂದಾಯಿತವಾಗಿಲ್ಲದಿರಲಿ, ಎಂದರೆ,

ಒಬ್ಬ ವ್ಯಕ್ತಿಯ ಗುರುತಿನ ಸಹಿತವಾದ ಅಥವಾ ಯಾವುದೇ ಗುರುತು ಇಲ್ಲದೆ ಅಂಥ ಹೆಸರನ್ನು ಅಥವಾ ಗುರುತನ್ನು ಬಳಸುವ ಆ ವ್ಯಕ್ತಿಯ ಮತ್ತು ಉತ್ಪನ್ನದ ನಡುವಿನ ವ್ಯಾಪಾರ ವ್ಯವಹಾರದಲ್ಲಿ ಒಂದು ಸಂಬಂಧವನ್ನು ತಿಳಿಸುವ ಉದ್ದೇಶಕ್ಕಾಗಿ ಅಥವಾ ತಿಳಿಸುವುದಕ್ಕಾಗಿ ಒಂದು ಉತ್ಪನ್ನದ ಸಂಬಂಧದಲ್ಲಿ ಬಳಸುವ ಒಂದು ಸಂಕೇತ, ಮೋನೋಗ್ರಾಮ್, ಲೇಬಲ್, ಸಹಿ ಅಥವಾ ಸೃಷ್ಟಿತ ಶಬ್ದಗಳು ಅಥವಾ ಬರಹವಾಗಿರುವ ಬ್ರಾ ್ಂಡ್ ಹೆಸರು ಮತ್ತು ವ್ಯಾಪಾರ ಹಾಗೂ ವ್ಯಾಪರಿ ಗುರುತುಗಳ ಅಧಿನಿಯಮ, 1958ರ (1958ರ ಕೇಂದ್ರ ಅಧುನಿಯಮ 43) ಅಡಿಯಲ್ಲಿ ನೋಂದಾಯಿತವಾದ ಒಂದು ಹೆಸರು ಅಥವಾ ವ್ಯಾಪಾರ ಗುರುತು (ಟ್ರೇಡ್‌ಮಾರ್ಕ್) ಒಳಗೊಳ್ಳುತ್ತದೆ."

(iii) (ಕೆ) ಖಂಡದ ಅಪವಾದದ ಪರಂತುಕದಲ್ಲಿ "ರಬ್ಬರ್" ಎಂಬ ಪದದ ಮತ್ತು "ಅಥವಾ ಕಾಫಿ" ಎಂಬ ಪದದ ಮೊದಲು, "ಚಾಬೀನೆ, ಮರ, ಕಚ್ಚಾಗೋಡಂಬಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) 5ನೇ ಪ್ರಕರಣದಲ್ಲಿ,

(i) (1-ಸಿ) ಉಪ-ಪ್ರಕರಣದ ತರುವಾಯ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

"(ಡಿ) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಚಿನ್ನ, ಬೆಳ್ಳಿಯ ಮತ್ತು ನಾಣ್ಯದ ಸಂಬಂಧದಲ್ಲಿ, ಒಬ್ಬ ವ್ಯಾಪಾರಿಯು [illegible] ಪ್ರತಿಯೊಂದು ಹಂತದಲ್ಲಿ, ಅಂಥ ಸರಕುಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ವರ್ಷದಲ್ಲಿ ತೆರಿಗೆಗೆ ಗುರಿಯಾಗತಕ್ಕ ವ್ಯಾಪಾರ [illegible] ಮೇಲೆ ಶೇಕಡಾ ಎರಡರಷ್ಟು ದರದಲ್ಲಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು"

(ii) (3)ನೇ ಉಪ-ಪ್ರಕರಣದಲ್ಲಿ, (ಎ) ಖಂಡದಲ್ಲಿ,-

(ಎ) ಮೂರನೇ ಪರಂತುಕದಲ್ಲಿ, "ವ್ಯಾಪಾರ ಮತ್ತು ವ್ಯಾಪಾರಿ ಗುರುತುಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೋಂದಾಯಿತವಾದ ಹೆಸರು ಅಥವಾ ವ್ಯಾಪಾರ ಗುರುತು (ಟ್ರೇಡ್ ಮಾರ್ಕ್)" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ "ಬ್ರಾ ್ಂಡ್ ಹೆಸರು ಅಥವಾ ವ್ಯಾಪಾರ ಗುರುತು (ಟ್ರೇಡ್ ಮಾರ್ಕ್)" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಮೂರನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಒಂದನೇ ಏಪ್ರಿಲ್ 1992 ರಂದು ಜಾರಿಗೆ ಬಂದಿರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಮೂವತ್ತೊಂದನೇ ಮಾರ್ಚ್ 1999ರಂದು ಜಾರಿಗೆ ಬಂದಿರುವಂತೆ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ :-

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ಉಣ್ಣೆ ಬ್ಲಾಂಕೆಟ್‌ಗಳ, ಉಣ್ಣೆಯ ಶಾಲುಗಳ ಮತ್ತು ಶಾಡಿ ಬ್ಲಾಂಕೆಟ್‌ಗಳ ಮಾರಾಟಕ್ಕೆ ಸಂಬಂಧಪಟ್ಟಂತೆ ವ್ಯಾಪಾರಿಯ ವಹಿವಾಟಿನ ಮೇಲೆ, ಅಂಥ ವಹಿವಾಟಿನ ಮೇಲೆ ಅಂಥ ವ್ಯಾಪಾರಿಯು ತೆರಿಗೆಯನ್ನು ಸಂಗ್ರಹಿಸಿರದಿದ್ದರೆ, ಸಂದಾಯ ಮಾಡತಕ್ಕದ್ದಲ್ಲ".

(iii) (4)ನೇ ಉಪ-ಪ್ರಕರಣದಲ್ಲಿ,

(ಎ) ಮೂರನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಎರಡನೇ ಏಪ್ರಿಲ್ 1992 ರಿಂದ ಜಾರಿಗೆ ಬಂದಿರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ :-

"ಮತ್ತು ಪರಂತು, ನಾಲ್ಕನೇ ಅನುಸೂಚಿಯ ಕ್ರ.ಸಂ. 5ರ (ಎ) ಬಾಬಿನ ಉಪ-ಬಾಬು (1) ರಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಅಂತಹ ಮಾರಾಟವು ರಾಜ್ಯದಲ್ಲಿ ಕೊನೆಯ ಖರೀದಿಯಲ್ಲದಿರುವುದರಿಂದ ಒಂದನೇ ಏಪ್ರಿಲ್ 1992 ರಂದು ಮತ್ತು ಮೊದಲು ಈ ಅಧಿನಿಯಮದ ಮೇರೆಗೆ ಖರೀದಿಯ ಮೇಲೆ ತೆರಿಗೆ ವಿಧಿಸಲಾಗದಿರುವ ಅಥವಾ ವಿಧಿಸದಿರುವ ಸರಕುಗಳ ಸಂಬಂಧದಲ್ಲಿ ಸದರಿ ದಿನಾಂಕದಂದು ಅಂತಹ ಸರಕುಗಳ ದಾಸ್ತಾನು ಹೊಂದಿರುವ ವ್ಯಾಪಾರಿಯನ್ನು 1ನೇ ಏಪ್ರಿಲ್ 1992ರಂದು ಸರಕುಗಳ ಅಂತಹ ದಾಸ್ತಾನು ರಾಜ್ಯದಲ್ಲಿ ಅಥವಾ ಇತರ ರೀತಿಯಲ್ಲಿ ಕೊನೆಯ ಖರೀದಿಯ ಲಕ್ಷಣಗಳನ್ನು ಹೊಂದಿರುವ ಅಂಶವನ್ನು ಪರಿಗಣಿಸದೆ ಅಂತಹ ಸರಕುಗಳ ಮೇಲೆ ಒಂದನೇ ಏಪ್ರಿಲ್ 1992ರಂದು ಅನ್ವಯವಾಗುವ ದರಗಳಲ್ಲಿ ತೆರಿಗೆ ವಿಧಿಸುವುದಕ್ಕೆ ಬದ್ಧವಾಗಿರುವ ರಾಜ್ಯದಲ್ಲಿ ಕೊನೆಯ ಖರೀದಿದಾರನೆಂದು ಭಾವಿಸತಕ್ಕದ್ದು".

(ಬಿ) ಹಾಗೆ ಸೇರಿಸಿದ ನಾಲ್ಕನೇ ಪರಂತುಕದ ನಂತರದ, ಈ ಮುಂದಿನ ಪರಂತುಕವನ್ನು ಒಂದನೇ ಏಪ್ರಿಲ್ 1998ರಂದು ಜಾರಿಗೆ ಬಂದಿರುವಂತೆ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು 1998ರ ನವೆಂಬರ್ ಇಪ್ಪತ್ತನಾಲ್ಕರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನಾಲ್ಕನೇ ಅನುಸೂಚಿಯ ಕ್ರ.ಸಂ.6ರಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಇದನ್ನು ರಾಜ್ಯದಲ್ಲಿ ಅಂತಿಮವಾಗಿ ಖರೀದಿಸಿಲ್ಲವೆಂಬ ಕಾರಣದ ಮೇಲೆ 1998ರ ಏಪ್ರಿಲ್ ಒಂದರಂದು ಅಥವಾ ಮೊದಲು ಅದರ ಖರೀದಿಯಮೇಲೆ ಈ ಅಧಿನಿಯಮದ ಮೇರೆಗೆ ತೆರಿಗೆ ವಿಧಿಸಲಾಗಿದೆ ಅಥವಾ ವಿಧಿಸಿರುವ ಸರಕುಗಳ ಸಂಬಂಧದಲ್ಲಿ, ಸದರಿ ದಿನಾಂಕದಂದು ಅಂತಹ ಸರಕುಗಳ ದಾಸ್ತಾನು ಹೊಂದಿರುವ ವ್ಯಾಪಾರಿಯನ್ನು, 1998ರ ಮಾರ್ಚ್

ಮೂವತ್ತರಂದು ಹೊಂದಿರುವ ಅಂತಹ ಸರಕುಗಳ ದಾಸ್ತಾನು ರಾಜ್ಯದಲ್ಲಿ ಅಥವಾ ಇತರ ರೀತಿಯಲ್ಲಿ ಅಂತಿಮ ಖರೀದಿಯ ಲಕ್ಷಣವನ್ನು ಹೊಂದಿರುವ ವಿಷಯವನ್ನು ಪರಿಗಣಿಸದ ಅಂತಹ ಸರಕುಗಳ ಮೇಲೆ 1998ರ ಮಾರ್ಚ್ ಮೂವತ್ತೊಂದರಂದು ಅನ್ವಯವಾಗುವ ದರಗಳನ್ನು ತೆರಿಗೆ ವಿಧಿಸಲು ಬದ್ಧನಾಗಿರುವ ರಾಜ್ಯದಲ್ಲಿ ಅಂತಿಮ ಖರೀದಿದಾರನೆಂದು ಭಾವಿಸತಕ್ಕದ್ದು".

(3) 5-ಎ ಪ್ರಕರಣದ ವಿವರಣೆ 1ರಲ್ಲಿ "ಒಳಗೊಳ್ಳುವುದಿಲ್ಲ" ಎಂಬ ಪದದ ಮೊದಲು 'ಸಿಮೆಂಟ್' ಪದವನ್ನು ಸೇರಿಸತಕ್ಕದ್ದು.

(4) ಪ್ರಕರಣ 6-ಬಿಯ ಉಪ-ಪ್ರಕರಣದ ಮೊದಲನೇ ಪರಂತುಕದಲ್ಲಿ ಖಂಡ (xii) ರ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ,-

(xiii) ಒಂದು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಕಡಿಮೆ ಇರದ ಆದರೆ ಸಾವಿರ ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಹಿವಾಟು ಹೊಂದಿರುವ ಒಬ್ಬ ವ್ಯಾಪಾರಿಗೆ ಸಂಬಂಧಿಸಿದಂತೆ, ಯಾವುದೇ ವರ್ಷದಲ್ಲಿನ ವ್ಯಾಪಾರವನ್ನು ಆರಂಭಿಸಿದ ಮೊದಲನೇ ದಿನಾಂಕದಿಂದ ಲೆಕ್ಕಹಾಕಲಾದ, ಎಲ್ಲಾ ಸರಕುಗಳಲ್ಲಿ, ಐದು ಲಕ್ಷ ರೂಪಾಯಿಗಳಿಗೆ ಮೀರದ ಒಟ್ಟು ವಹಿವಾಟು".

(5) 12ನೇ ಪ್ರಕರಣದಲ್ಲಿ,

(i) (4)ನೇ ಉಪ-ಪ್ರಕರಣದಲ್ಲಿ ;

(ಎ) (ಎ) ಉಪಖಂಡದಲ್ಲಿ ".....ಷ್ಟನ್ನು ಮೀರದ" ಎಂಬ ಪದಗಳ ನಂತರ "ಆದರೆ ಅರ್ಧದಷ್ಟಕ್ಕಿಂತ ಕಡಿಮೆ ಇರದ " ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (ಸಿ) ಖಂಡದಲ್ಲಿ 'ಅರ್ಧದಷ್ಟನ್ನು ಮೀರದ" ಎಂಬ ಪದಗಳ ನಂತರ "ಅರ್ಧಕ್ಕಿಂತ ಕಡಿಮೆ ಇರದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಉಪಪ್ರಕರಣ 5ರಲ್ಲಿ,-

"ಎರಡು ವರ್ಷಗಳ" ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ "ಮೂರು ವರ್ಷಗಳ" ಎಂಬ ಪದಗಳನ್ನು ಒಂದನೇ ಏಪ್ರಿಲ್ 1997ರಿಂದ ಪರಿಣಮಿಸುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

(6) 12-ಬಿ ಪ್ರಕರಣದಲ್ಲಿ,

(i) ಪರಂತುಕವನ್ನು ಹೊರತುಪಡಿಸಿ, ಉಪ-ಪ್ರಕರಣ (4)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"(4) ವರ್ಷಾಂತ್ಯದಲ್ಲಿ ಯಾವುದೇ ತಿಂಗಳಿಗೆ ಅಥವಾ ತ್ರೈಮಾಸಿಕಕ್ಕೆ ಅಥವಾ ಇಡೀ ವರ್ಷಕ್ಕೆ ಯಾವನೇ ವ್ಯಾಪಾರಿ ಮುಂಗಡವಾಗಿ ಸಂದಾಯ ಮಾಡಿರುವ ಒಟ್ಟು ತೆರಿಗೆಯ ಮೊಬಲಗು ಸಂದರ್ಭಾನುಸಾರ ಆ ತಿಂಗಳು ಅಥವಾ ತ್ರೈಮಾಸಿಕ್ಕೆ ಅಥವಾ ಇಡೀ ವರ್ಷಕ್ಕೆ ಸಂದಾಯ ಮಾಡಬೇಕಾದ ತೆರಿಗೆಗಿಂತ ಅಥವಾ ಅಂತಿಮವಾಗಿ ಇಡೀ ವರ್ಷಕ್ಕೆ ನಿರ್ಧರಿಸಿದ ತೆರಿಗೆಗಿಂತ ಶೇಕಡ ಹದಿನೈದಕ್ಕಿಂತ ಹೆಚ್ಚಾಗಿ, ಕಡಿಮೆಯಾಗಿತ್ತೆಂದು ಕಂಡುಬಂದಲ್ಲಿ, ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ತೆರಿಗೆಯ ಜೊತೆಗೆ, ಹಾಗೆ ಕಡಿಮೆ ಸಂದಾಯ ಮಾಡಿದ ತೆರಿಗೆಯ ಅರ್ಧದಷ್ಟಕ್ಕೆ ಕಡಿಮೆಯಲ್ಲದ ಆದರೆ ಯಾವ ಮೊಬಲಗು ಸಂದರ್ಭಾನುಸಾರ, ಆ ತಿಂಗಳು ಅಥವಾ ತ್ರೈಮಾಸಿಕ ಅಥವಾ ಇಡೀ ವರ್ಷಕ್ಕಾಗಿ ಸಂದಾಯ ಮಾಡಬೇಕಾದ ತೆರಿಗೆಗಿಂತ ಕಡಿಮೆ ಬೀಳುವುದೋ ಆ ಮೊಬಲಗಿನ ಒಂದೂವರೆಯಷ್ಟನ್ನು ಮೀರದ ಮೊತ್ತವನ್ನು ದಂಡನೆಯ ರೂಪದಲ್ಲಿ ಸಂದಾಯ ಮಾಡಲು ಅಂತಹ ವ್ಯಾಪಾರಿಗೆ ನಿರ್ದೇಶಿಸಬಹುದು".

12-ಸಿ ಪ್ರಕರಣದಲ್ಲಿ,

(i) (1)ನೇ ಉಪ-ಪ್ರಕರಣದ ನಂತರ, ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

"(1-ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾವ ವ್ಯಾಪಾರಿಯ ಒಟ್ಟು ವಹಿವಾಟು ಒಂದು ವರ್ಷದಲ್ಲಿ ಏಳು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆಯಲ್ಲವೋ ಅವನ ಸಂದರ್ಭದಲ್ಲಿ, ನಿರ್ಧರಣ ಪ್ರಾಧಿಕಾರಿಯು, ಈ ಮುಂದಿನ ಷರತ್ತಿಗೊಳಪಟ್ಟು ಅವನ ಹಾಜರಾತಿಯನ್ನು ಅಥವಾ ಲೆಕ್ಕಪತ್ರಗಳನ್ನು ಹಾಜರುಪಡಿಸುವುದನ್ನು ಅಗತ್ಯಪಡಿಸದ 12ನೇ ಪ್ರಕರಣದ (1)ನೇ ಉಪ-ಪ್ರಕರಣದ ಅನುಸಾರವಾಗಿ ಸಲ್ಲಿಸಿರುವ ವಿವರಪಟ್ಟಿಕೆಯ ಆಧಾರದ ಮೇಲೆ ವ್ಯಾಪಾರಿಯನ್ನು ನಿರ್ಧರಿಸತಕ್ಕದ್ದು,-

(i) ಅಂತಹ ವ್ಯಾಪಾರಿಯು ಘೋಷಿಸಿರುವಂತೆ ವರ್ಷಕ್ಕೆ ಸಂದಾಯ ಮಾಡಬೇಕಾದ ತೆರಿಗೆಯು, ನಿಕಟ ಹಿಂದಿನ ವರ್ಷಕ್ಕೆ ನಿರ್ಧರಿಸಿರುವ ತೆರಿಗೆಗಿಂತ ಕಡಿಮೆ ಇರಕೂಡದು ಮತ್ತು ಹಾಗೆ ನಿರ್ಧರಿಸಲಾದ ತೆರಿಗೆಯ ಶೇಕಡ ಹದಿನೈದಕ್ಕಿಂತ

ಕಡಿಮೆ ಇರಕೂಡದು ಅಥವಾ ಹಿಂದಿನ ವರ್ಷಕ್ಕೆ ನಿರ್ಧರಿಸಲಾದ ತೆರಿಗೆಯ ಮೇಲೆ ಶೇಕಡ ಹದಿನೈದಕ್ಕಿಂತ ಕಡಿಮೆ ಇರದಂತೆ ಆ ವರ್ಷಕ್ಕೆ ತೆರಿಗೆ ನಿರ್ಧರಿಸಲು ನಿಗದಿಪಡಿಸಬಹುದಾದಂತಹ ನಮೂನೆ ಮತ್ತು ರೀತಿಯಲ್ಲಿ ವ್ಯಾಪಾರಿಯು ಅವನ ಸಮ್ಮತಿ ನೀಡಿರಬೇಕು.

(ii) ಅಂತಹ ವ್ಯಾಪಾರಿಯು ವರ್ಷದಲ್ಲಿ ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಥವಾ ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 74) ಉಪಬಂಧಗಳ ಮೇರೆಗೆ ನಿಗದಿಪಡಿಸಿರುವ ಯಾವುದೇ ಶಾಸನಬದ್ಧ ನಮೂನೆಗಳನ್ನು ಉಪಯೋಗಿಸಿರಕೂಡದು ;

(iii) ವರ್ಷದ ಮೊದಲನೇ ದಿನದಂದು ದಾಸ್ತಾನಿನಲ್ಲಿರುವ ಸರಕು, ಈ ಅಧಿನಿಯಮ ಅಥವಾ ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956ರ ಉಪಬಂಧಗಳ ಮೇರೆಗೆ ಮಾಡಿರುವ ಘೋಷಣೆಗಳಿಗೆ ಪ್ರತಿಯಾಗಿ ಮಾಡಿರುವ ಖರೀದಿಗೆ ಸಂಬಂಧಿಸಿರಕೂಡದು.

(ii) ಉಪ-ಪ್ರಕರಣ (2)ರಲ್ಲಿ, "ಉಪ-ಪ್ರಕರಣ (1)" ಎಂಬ ಪದಗಳು, ಅಂಕಿ ಮತ್ತು ಆವರಣಗಳ ನಂತರ "ಅಥವಾ ಉಪ-ಪ್ರಕರಣ (1-ಎ)" ಎಂಬ ಪದಗಳು, ಅಂಕಿ, ಅಕ್ಷರ ಮತ್ತು ಆವರಣಗಳನ್ನು ಸೇರಿಸತಕ್ಕದ್ದು.

(iii) ಉಪ-ಪ್ರಕರಣ (3)ರಲ್ಲಿ, "ಉಪ-ಪ್ರಕರಣ (3)" ಎಂಬ ಪದಗಳು, ಅಂಕಿ ಮತ್ತು ಆವರಣಗಳ ನಂತರ "ಅಥವಾ ಉಪ-ಪ್ರಕರಣ (1-ಎ)" ಎಂಬ ಪದಗಳು, ಅಂಕಿ, ಅಕ್ಷರ ಮತ್ತು ಆವರಣಗಳನ್ನು ಸೇರಿಸತಕ್ಕದ್ದು.

(iv) ಉಪ-ಪ್ರಕರಣ (5)ರಲ್ಲಿ "ಉಪ-ಪ್ರಕರಣ (1)" ಎಂಬ ಪದಗಳು, ಅಂಕಿ ಮತ್ತು ಆವರಣಗಳ ನಂತರ "ಮತ್ತು ಉಪ-ಪ್ರಕರಣ (1-ಎ)" ಎಂಬ ಪದಗಳು, ಅಂಕಿ, ಅಕ್ಷರ ಮತ್ತು ಆವರಣಗಳನ್ನು ಸೇರಿಸತಕ್ಕದ್ದು.

(8) 17ನೇ ಪ್ರಕರಣದಲ್ಲಿ,

(i) ಉಪ-ಪ್ರಕರಣ (4)ರಲ್ಲಿ ;

(ಎ) (i) ನೇ ಖಂಡದಲ್ಲಿ "ಬಿಯರು ಸೇರಿದಂತೆ ಮದ್ಯ" ಎಂಬ ಪದಗಳ ತರುವಾಯ "ಒಂದು ಸ್ಟೀಟ್ ಮೀಟ್ ಸ್ಟಾಲ್ ಅಥವಾ ಐಸ್‌ಕ್ರೀಮ್ ಪಾರ್ಲರನ್ನು ನಡೆಸುತ್ತಿರುವ ಒಬ್ಬ ವ್ಯಾಪಾರಿ" ಎಂಬ ಪದಗಳನ್ನು ಸೇರಿಸತಕ್ಕದ್ದು ;

(ಬಿ) ಖಂಡ (1)ರಲ್ಲಿ "ಎಪ್ಪತ್ತೈದು ಲಕ್ಷ ರೂಪಾಯಿಗಳು" ಮತ್ತು "ಶೇಕಡ ನಾಲ್ಕು" ಎಂಬ ಪದಗಳ ಬದಲಾಗಿ "ಒಂದು ನೂರು ಲಕ್ಷ ರೂಪಾಯಿಗಳು ಮತ್ತು ಶೇಕಡ ಎರಡು" ಎಂಬ ಪದಗಳನ್ನು ಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಸಿ) (ii) ನೇ ಖಂಡದಲ್ಲಿ "ರೆಸ್ಟೋರೆಂಟ್ ನಡೆಸುವಾತ" ಎಂಬ ಪದಗಳ ತರುವಾಯ "ಅಥವಾ ಒಂದು ಸ್ಟೀಟ್ ಮೀಟ್ ಸ್ಟಾಲ್ ಅಥವಾ ಐಸ್‌ಕ್ರೀಮ್ ಪಾರ್ಲರನ್ನು ನಡೆಸುತ್ತಿರುವ ಒಬ್ಬ ವ್ಯಾಪಾರಿ" ಎಂಬ ಪದಗಳನ್ನು ಸೇರಿಸತಕ್ಕದ್ದು,

(ii) ಉಪ-ಪ್ರಕರಣ (6)ರ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(7) ಉಪ-ಪ್ರಕರಣ (6)ರಲ್ಲಿ ಏನೇ ಇದ್ದರೂ, ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 74)ರ ಮೇರೆಗೆ ನೋಂದಾಯಿಸಿರುವ ಮತ್ತು ಅವನು ಖರೀದಿಸಿರುವ ಸರಕುಗಳ ಸಂಬಂಧದಲ್ಲಿ, ಕಾಮಗಾರಿಗಳ ಕರಾರಿನ ನಿರ್ವಹಣೆಗಾಗಿ ಅಂತಹ ಸರಕುಗಳನ್ನು ಉಪಯೋಗಿಸುವ ಉದ್ದೇಶಕ್ಕಾಗಿ ಸದರಿ ಅಧಿನಿಯಮದ ಅಡಿಯಲ್ಲಿನ 'ಸಿ' ನಮೂನೆಯಲ್ಲಿ ಘೋಷಣೆ ಸಲ್ಲಿಸಿರುವ ವ್ಯಾಪಾರಿಗೆ ಅನ್ವಯವಾಗತಕ್ಕದ್ದಲ್ಲ".

(9) ಪ್ರಕರಣ 19-ಎ ಯಲ್ಲಿ,

(i) ಉಪ-ಪ್ರಕರಣ (1)ರ ಪರಂತುಕದಲ್ಲಿರುವ (ii) ಮತ್ತು (iii)ನೇ ಖಂಡಗಳಿಗೆ ಕ್ರಮವಾಗಿ (iii) ಮತ್ತು (iv)ನೇ ಖಂಡಗಳಿಗೆ ಮರುಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರುಸಂಖ್ಯೆ ನೀಡಲಾದ (iii) ನೇ ಖಂಡಕ್ಕೆ ಮೊದಲು ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ :-

"(ii) ಕಾಲಕಾಲಕ್ಕೆ ಕಮೀಷನರು ಅಧಿಸೂಚಿಸಬಹುದಾದ ವ್ಯಾಪಾರಿಗಳ ಸಂಬಂಧದಲ್ಲಿ ಅಂತಹ ಕಡಿತಗಳನ್ನು ಮಾಡತಕ್ಕದ್ದಲ್ಲ ; ಅಥವಾ"

(ii) ಉಪ-ಪ್ರಕರಣ (2)ರ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಯಾವುದೆಂದರೆ,-

"(2-ಎ) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ತರುವಾಯ ಹತ್ತು ದಿನಗಳಿಗೆ ಮೀರಿ ಕಡಿತ ಮಾಡಿಕೊಂಡ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಕಡಿತವನ್ನು ಮಾಡುವ ಪ್ರಾಧಿಕಾರಿಯು, ಹಾಗೆ ತಪ್ಪುವುದು ಮುಂದುವರಿದ ಅವಧಿಯೊಳಗೆ 13ನೇ ಪ್ರಕರಣದ (ii)ನೇ ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಂಡನೆಗೆ ಸಮನಾದ ಮೊತ್ತವನ್ನು ದಂಡನೆ ರೂಪವಾಗಿ ಸಂದಾಯ ಮಾಡತಕ್ಕದ್ದು."

(10) 19ಎ ಎ ಪ್ರಕರಣದಲ್ಲಿ,

(i) (1)ನೇ ಉಪ-ಪ್ರಕರಣದ ಪರಂತುಕದಲ್ಲಿ,

(ಎ) (ಎಎ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(ಎಎಎ) ಕಾಲಕಾಲಕ್ಕೆ ಕಮೀಷನರನು ಅಧಿಸೂಚಿಸ ಬಹುದಾದಂತೆ ವ್ಯಾಪಾರಿಗಳ ಸಂಬಂಧದಲ್ಲಿ ಅಂಥ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ."

(ಬಿ) (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"(ಬಿ) ಈ ಉಪ-ಪ್ರಕರಣದಲ್ಲಿ ಹೇಳಿದ ಪ್ರಾಧಿಕಾರಗಳು ಯಾವುದೇ ಸರಕಗಳನ್ನು ಖರೀದಿಸಿದ್ದರೆ, ಸದರಿ ಸರಕುಗಳು ತೆರಿಗೆಯಿಂದ ವಿನಾಯಿತಿಗೊಳಿಸಲ್ಪಟ್ಟಿದ್ದ ಕಾರಣದಿಂದ ಅಥವಾ ಸದರಿ ಸರಕುಗಳು ಮೊದಲಿನ ಮಾರಾಟಗಾರನಿಂದ ತೆರಿಗೆಗೊಳಪಟ್ಟಿದ್ದವೆಂಬ ಆಧಾರದ ಮೇಲೆ ಮಾರಾಟ-ವ್ಯಾಪಾರಿಯಿಂದ ತೆರಿಗೆಗೆ ಗುರಿಯಾಗ ತಕ್ಕದಲ್ಲವೆಂಬ ಕಾರಣದಿಂದಾಗಲಿ, ತೆರಿಗೆಗೆ ಗುರಿಯಾಗದಿದ್ದಲ್ಲಿ ಅಥವಾ ಯಾವುದೇ ಸರಕುಗಳ ಮಾರಾಟ-ವ್ಯಾಪಾರಿಯು ಸಂದಾಯ ಮಾಡತಕ್ಕ ತೆರಿಗೆಯನ್ನು, ರಾಜ್ಯ ಸರ್ಕಾರವು ತನ್ನ ಕೈಗಾರಿಕಾ ನೀತಿಗನುಸಾರವಾಗಿ ಮುಂದೂಡಿದ್ದರೆ ಅಥವಾ ವಿನಾಯತಿ ಗೊಳಿಸಿದ್ದರೆ ಮತ್ತು ವ್ಯಾಪಾರಿಯು ಸಲ್ಲಿಸಿದ ಅರ್ಜಿಯನ್ನು ಅದನ್ನು ಸ್ವೀಕರಿಸಿದ ಒಂಂದು ತಿಂಗಳೊಳಗೆ ಕರನಿರ್ಧರಣಾ ಪ್ರಾಧಿಕಾರಿಯು ವಿಲೇ ಮಾಡತಕ್ಕದ್ದಾಗಿದ್ದು ಅದರ ಮೇಲೆ ಸಂದರ್ಭಾನುಸಾರ ಮೇಲ್ಕಂಡಂತೆ ಪ್ರಮಾಣ ಪತ್ರ ನೀಡಿ ಅಥವಾ ಅಂಥ ಪ್ರಮಾಣಪತ್ರ ನೀಡಿಕೆಗೆ ವ್ಯಾಪಾರಿಯು ಅರ್ಹನಾಗಿಲ್ಲವೆಂದು ಅವನಿಗೆ ತಿಳಿಸಿ, ಆ ಪ್ರದೇಶದ ಕರ ನಿರ್ಧರಣಾ ಪ್ರಾಧಿಕಾರಿಯು ಹಾಗೆ ಪ್ರಮಾಣೀಕರಿಸಿದ್ದರೆ, ಈ ಪ್ರಕರಣದ ಅಡಿಯಲ್ಲಿ ಯಾವುದೇ ಮೊಬಲಗನ್ನು ಕಡಿತ ಮಾಡಿಕೊಳ್ಳತಕ್ಕದ್ದಲ್ಲ."

(ii) (2)ನೇ ಉಪ-ಪ್ರಕರಣದ ತರುವಾಯ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ ,:-

"(2-ಎ) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾದ ತರುವಾಯ, ಹತ್ತು ದಿನಗಳಿಗೆ ಮೀರಿ ಕಡಿತ ಮಾಡಿಕೊಂಡ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಕಡಿತ ಮಾಡಿಕೊಳ್ಳುವ ಪ್ರಾಧಿಕಾರಿಯು, 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ii)ನೇ ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಂಡನೆಗೆ ಸಮನಾದ ಮೊಬಲಗನ್ನು ದಂಡನೆ ರೂಪವಾಗಿ ಹಾಗೆ ತಪ್ಪುವುದು ಮುಂದುವರಿದ ಅವಧಿಯಲ್ಲಿ ಸಂದಾಯ ಮಾಡತಕ್ಕದ್ದು."

11. 20ನೇ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣಕ್ಕೆ ಪರಂತುಕವನ್ನು ಹೊರತುಪಡಿಸಿ, ಈ ಮುಂದಿನ ಉಪ-ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"(1) ಡೆಪ್ಯುಟಿ ಕಮೀಷನರ್‌ನ ದರ್ಜೆಗೆ ಮೇಲ್ಪಟ್ಟ ದರ್ಜೆಯಲ್ಲದ ಯಾವೊಬ್ಬ ಅಧಿಕಾರಿಯಿಂದ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಜಾರಿಗೊಳಿಸಲಾದ ಒಂದು ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅದನ್ನು ಆಕ್ಷೇಪಿಸಿ, ಜಂಟಿ ಕಮೀಷನರ್‌ಗೆ ಅಪೀಲು ಮಾಡಿಕೊಳ್ಳಬಹುದು."

12. 21ನೇ ಪ್ರಕರಣದಲ್ಲಿ,

(i) ಶೀರ್ಷಿಕೆಯಲ್ಲಿ, "ಡೆಪ್ಯುಟಿ ಕಮೀಷನರ್ ಮತ್ತು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) (1)ನೇ ಉಪ-ಪ್ರಕರಣವನ್ನು ಬಿಟ್ಟು ಬಿಡತಕ್ಕದ್ದು.

(iii) (2)ನೇ ಉಪ-ಪ್ರಕರಣದಲ್ಲಿ, "ಅವನಿಗೆ ಅಧೀನವಾದ ವಾಣಿಜ್ಯ ತೆರಿಗೆಗಳ ಅಸಿಸ್ಟೆಂಟ್ ಕಮೀಷನರ್‌ನು" ಎಂಬ ಪದಗಳಿಗೆ "ಡೆಪ್ಯುಟಿ ಕಮೀಷನರ್ ದರ್ಜೆಗಿಂತ ಮೇಲ್ದರ್ಜೆಯಲ್ಲದ ಯಾವೊಬ್ಬ ಅಧಿಕಾರಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ವಿವರಣೆಯಲ್ಲಿ, "ಡೆಪ್ಯುಟಿ ಕಮೀಷನರ್ ಅಥವಾ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು.

13. 21ನೇ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

"21-ಎ. ಕೆಲವು ಪ್ರಕರಣಗಳಲ್ಲಿ ಮರುಸಂದಾಯದ ಮುಂದೂಡಿಕೆ. 20, 21 ಅಥವಾ 22-ಎ ಪ್ರಕರಣಗಳ ಅಡಿಯಲ್ಲಿ ಜಾರಿಗೊಳಿಸಿದ ಆದೇಶದಿಂದ, ಯಾವೊಬ್ಬ ವ್ಯಕ್ತಿಗೆ, ಯಾವುದೇ ಮೊಬಲಗು ಮರುಸಂದಾಯವಾಗಬೇಕಿದ್ದರೆ ಅಂಥ ಮರು ಸಂದಾಯವನ್ನು 22ನೇ ಪ್ರಕರಣ ಅಥವಾ 24ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶದ ವಿರುದ್ಧ ಒಂದು ಅಪೀಲನ್ನು ಮಾಡಿಕೊಳ್ಳುವುದಕ್ಕಾಗಿ ನಿಗದಿಪಡಿಸಿದ ಅವಧಿಯು ಮುಕ್ತಾಯವಾಗುವುದರೊಳಗೆ ಮಾಡತಕ್ಕದ್ದಲ್ಲ."

14. 22-ಎ ಪ್ರಕರಣದಲ್ಲಿ, (3)ನೇ ಉಪ-ಪ್ರಕರಣದಲ್ಲಿ, (ಬ) ಖಂಡಕ್ಕೆ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"ವಿಷಯವು 22ನೇ ಪ್ರಕರಣದ ಅಡಿಯಲ್ಲಿ ಒಂದು ಅಪೀಲಿಗೆ ಒಳಪಟ್ಟಿದ್ದಾಗಿರುತ್ತದೆ ಅಥವಾ ಉಚ್ಚ ನ್ಯಾಯಾಲಯದಲ್ಲಿ ಪರಿಷ್ಕರಣೆಗೆ ಒಳಪಟ್ಟಿದ್ದಾಗಿರುತ್ತದೆ ; ಅಥವಾ"

15. 22-ಬಿ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ, "ಎರಡು ವರ್ಷಗಳೊಳಗೆ" ಎಂಬ ಪದಗಳಿಗೆ ಅವು ಬರುವ ಎರಡು ಸ್ಥಳಗಳಲ್ಲಿ "ಮೂರು ವರ್ಷಗಳೊಳಗೆ" ಎಂಬ ಪದಗಳನ್ನು 1997ರ ಏಪ್ರಿಲ್ ಮೊದಲನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಪ್ರತಿಯೋಜಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

16. 28ನೇ ಪ್ರಕರಣದಲ್ಲಿ, (3-ಎ) ಉಪ ಪ್ರಕರಣದಲ್ಲಿ,

(i) (i)ನೇ ಖಂಡ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ,-

"ಪರಂತು, ಆ ಅಧಿಕಾರಿಯು ಅಂಥ ಸರಕುಗಳ ಮೇಲೆ ವಿಧಿಸಲಾಗುವ ತೆರಿಗೆಯ ಮೊಬಲಗಿನ ಮೂರುಪಟ್ಟಿಗೆ ಸಮನಾಗಿದೆ ಎಂದು ಅಭಿಪ್ರಾಯಪಡುವ ಅಂಥ ಪರಿಮಾಣದ ಸರಕುಗಳನ್ನು ತಡೆಹಿಡಿಯಬೇಕೆಂದು ಆದೇಶಿಸತಕ್ಕದ್ದು.

(ii) (iv) ನೇ ಖಂಡದಲ್ಲಿ,

(ಎ) "ಆ ವ್ಯಕ್ತಿಯ ಮೇಲೆ ಜಾರಿಗೊಳಿಸಿದ ..... ದಿನಗಳೊಳಗೆ" ಎಂಬ ಪದಗಳ ತರುವಾಯ, "ಅಪೀಲು ಜಂಟಿ ಕಮೀಷನರ್‌ಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (ಎ) ಮತ್ತು (ಬಿ) ಉಪ ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

17. 28-ಎ ಪ್ರಕರಣದಲ್ಲಿ, (7)ನೇ ಉಪ ಪ್ರಕರಣದಲ್ಲಿ (ಎ) ಖಂಡಕ್ಕೆ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(ಎ) ಈ ಪ್ರಕರಣದ ಅಡಿಯಲ್ಲಿ ದಂಡ ವಿಧಿಸುವಿಕೆಯಿಂದ ಬಾಧಿತನಾದ ವ್ಯಕ್ತಿಯು, ಆ ವ್ಯಕ್ತಿಯ ಮೇಲೆ ಜಾರಿಗೊಳಿಸಲಾದ ದಂಡದ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಆ ಪ್ರದೇಶದ ಅಪೀಲು ಜಂಟಿ ಕಮಿಷನರ್‌ಗೆ ಅಪೀಲು ಮಾಡಿಕೊಳ್ಳಬಹುದು.

ಪರಂತು, ಬಾಧಿತನಾದ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿನ ಒಬ್ಬ ನೋಂದಾಯಿತ ವ್ಯಾಪಾರಿಯಾಗಿದ್ದಲ್ಲಿ, ಅಂಥ ವ್ಯಕ್ತಿಯು ತಾನು ನೋಂದಾಯಿತನಾದ ಪ್ರದೇಶದ ಯುಕ್ತ ಅಪೀಲು ಜಂಟಿ ಕಮಿಷನರ್‌ಗೆ ಅಪೀಲು ಮಾಡಿಕೊಳ್ಳಬಹುದು".

18. 28.ಎಎಎ ಪ್ರಕರಣದ (5)ನೇ ಉಪ ಖಂಡದಲ್ಲಿ,

(i) (i) ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು.

(ii) (ii) ನೇ ಖಂಡಕ್ಕೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(ii) ಡಪ್ಯುಟಿ ಕಮಿಷನರ್‌ನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಯಾವುಬ್ಬ ಅಧಿಕಾರಿಯು ಜಂಟಿ ಕಮಿಷನರನಿಗೆ ಅಪೀಲು ಮಾಡಿಕೊಳ್ಳಬಹುದು."

19. 29ನೇ ಪ್ರಕರಣದ (1) ಉಪ ಪ್ರಕರಣದಲ್ಲಿ "ದಂಡನೆಗೆ ಗುರಿಯಾಗತಕ್ಕದ್ದು" ಎಂಬ ಪದಗಳಿಗೆ" (ಸಿ) ಖಂಡದಲ್ಲಿ ಉಲ್ಲೇಖಿಸಲಾದುವನ್ನು ಉಲ್ಲಂಘಿಸುವ ಪ್ರಕರಣದಲ್ಲಿ ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಸಾದಾ ಕಾರವಾಸಕ್ಕೆ ಅಥವಾ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದೆ ಆದರೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡಕ್ಕೆ ಮತ್ತು ಅಥವಾ ಅವೆರಡಕ್ಕೂ ಗುರಿಯಾಗತಕ್ಕದ್ದು ಮತ್ತು ಇತರ ಪ್ರಕರಣಗಳಲ್ಲಿ ದಂಡನೆಗೆ ಗುರಿಯಾಕಗತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

20. 38ನೇ ಪ್ರಕರಣದ, (2)ನೇ ಉಪ ಪ್ರಕರಣದ (ಎ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ,-

> "(ಎ-1) ಪರಿಶೀಲನೆಯ ಸಮಯದಲ್ಲಿ ಅಥವಾ ಸಮೀಕ್ಷೆಯ ಅವಧಿಯಲ್ಲಿ ಕಂಡುಬಂದ ಸರಕುಗಳ ವಿವರಣಾ ಪಟ್ಟಿಯ ಆಧಾರದ ಮೇಲೆ ನೋಂದಣಿಯ ಉದ್ದೇಶಕ್ಕಾಗಿ ವಹಿವಾಟುಗಳ ಅಂದಾಜು".

21. ಎರಡನೇ ಅನುಸೂಚಿಯಲ್ಲಿ,-

(i) 2ನೇ ಅಂಕಣದ "ಎ" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಿಗೆ, "ಗ್ಲೂ ಮತ್ತು" ಎಂಬ ಪದಗಳ ತರುವಾಯ, "ಅಂಟು ಪದಾರ್ಥ ದ್ರಾವಣ, ಗಮ್ ಪೆಸ್ಟ್, ಲ್ಯಾಪಿಂಗ್ ಕಾಂಪೌಂಡ್, ಲಿಕ್ವಿಡ್ ಎಂ- ಸೀಲ್ ಎಪೋಕ್ಸಿ, ಶೆಲ್ಲಾಕ್, ವಲ್ಕನೈಸಿಂಗ್ ದ್ರಾವಣ ಮತ್ತು ಅಡೆಸಿವ್ ಟೇಪುಗಳು, ಸೆಲ್ಫ್ ಅಡೆಸಿವ್ ಟೇಪುಗಳು, ಗಮ್ ಟೇಪುಗಳು, ಗಮ್ಡ್ ಟೇಪುಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) "ಎ" ಭಾಗದ 5ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ, (vi) ಬಾಬಿನ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ :-

(vii)	ಅಲ್ಯೂಮಿನಿಯಂ ಪಾಯಿಲ್ಸ್, ಅಲ್ಯೂಮಿನಿಯಂ ಆಕ್ಸೈಡ್, ಅಲ್ಯೂಮಿನಿಯಂ ಗ್ರೇನ್ಸ್, ಅಲ್ಯೂಮಿನಿಯಂ ಪೌಡರ್, ಅಲ್ಯೂಮಿನಿಯಂ ಟೇಪ್‌ಗಳು.	ಶೇಕಡಾ ಹತ್ತು.
(iii)	"ಬಿ" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು,-	
	"1-ಎ. ಬೊಂಬಿನಿಂದ ತಯಾರಿಸಿದ ವಸ್ತುಗಳು ಪೀಠೋಪಕರಣಗಳನ್ನು ಹೊರತುಪಡಿಸಿ	ಶೇಕಡಾ ಸಾಲ್ಕು"

(iv) "ಬ" ಭಾಗದ 11ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡಲಾಗಿದೆ ;

(v) "ಸಿ" ಭಾಗದ 2ಎ ಕ್ರಮಸಂಖ್ಯೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ :-

"2-ಎ (i) ಬೆತ್ತ ಇಡಿಯಾದ ಅಥವಾ ಸೀಳಿದ	ಶೇಕಡಾ ನಾಲ್ಕು"
(ii) ಪೀಠೋಪಕರಣದ ಹೊರತಾಗಿ ಬೆತ್ತದಿಂದ ಮಾಡಿದ ವಸ್ತುಗಳು	ಶೇಕಡಾ ನಾಲ್ಕು"

(vi) "ಸಿ" ಭಾಗದ 15ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ :-

"15-ಎ ಫೋಟೋ ಫ್ರೇಮುಗಳು ಮತ್ತು ಫೋಟೋ ಮೌಂಟುಗಳು	ಶೇಕಡಾ ಹತ್ತು"

(vii) "ಸಿ" ಭಾಗದ 20ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ, (iii) ನೇ ಉಪ ಬಾಬಿನ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(iv) ಕಂಪ್ಯೂಟರ್ ಕ್ಲೀನಿಂಗ್ ಕಿಟ್	ಶೇಕಡಾ ನಾಲ್ಕು"

(viii) "ಸಿ" ಭಾಗದ 25-ಎ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

"25-ಬಿ. ಹತ್ತು ಹಾಸಿಗೆಗಳು, ಹತ್ತಿ ದಿಂಬುಗಳು, ಹತ್ತಿ ಕ್ಲಿಟ್ಟ್‌ಗಳು ಮತ್ತು ಹತ್ತಿ ಬಟ್ಟೆಯಿಂದ ತಯಾರಿಸಿದ ಕವರುಗಳು	ಶೇಕಡಾ ನಾಲ್ಕು"

(xi) "ಇ" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ "28ನೇ ಸಂಖ್ಯೆ" ಎಂಬ ಪದಗಳಿಗೆ "42-ಎ ಕ್ರಮಸಂಖ್ಯೆ" ಎಂಬ ಪದಗಳನ್ನು ಯೋಜಿಸತಕ್ಕದ್ದು ;

(x) "ಎಫ್" ಭಾಗದ 10-ಎ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು :-

"10-ಎ. ಅರಣ್ಯ ಉತ್ಪನ್ನಗಳು ಎಂದರೆ :-

(i) ನಕ್ಸ್ ವೊಮಿಕಾ, ರಟಾ, ಸೋಪ್‌ನಟ್, ಅಂಟ್ವಾಳ, ಹಲೀಲಾ, ಹರ್ದಾ ಹಣ್ಣುಗಳು ಮತ್ತು ಬೀಜಗಳು, ಕಾಡು ಸೀಗೆ ತೊಗಟೆ, ಮರಡಿ ದೇವಿ ದೇವಿ, ಮೈರೋಬಲನ್ಸ್ ತೊಗಡೆ, ರಾಸಾ ಹುಲ್ಲು, ತಮಾಲ ಪತ್ರ. ಶೇಕಡಾ ನಾಲ್ಕು"

(xi) "ಎಫ್" ಭಾಗದ 11ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ "ಫ್ರುಟ್ ವೆರ್ ಪಾಲಿಷರುಗಳು" ಎಂಬ ಪದಗಳ ತರುವಾಯ "ಷೂ ಕೇರ್ ಕಿಟ್, ಷೂ ಲೇಸ್‌ಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xii) "ಜಿ" ಭಾಗದ 2ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ "ಹೌಸ್ ಹೋಲ್ಡ್ ಗ್ಲಾಸ್‌ವೇರ್" ಎಂಬ ಪದಗಳ ತರುವಾಯ "ಗ್ಲಾಸ್ ಮೀರರ್" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xiii) "ಎಚ್" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ ಬಾಬು ಸಂಖ್ಯೆ 1 (i) ರಲ್ಲಿ, "ಕರ್ಟನ್ ರಾಡುಗಳು" ಎಂಬ ಪದಗಳ ತರುವಾಯ "ವೆನೆಷಿಯನ್ ಬ್ಲೈಂಡ್‌ಗಳು, ವರ್ಟಿಕಲ್ ಬ್ಲೈಂಡ್‌ಗಳು, ಎಮರಿ ಬಟ್ಟೆ, ಎಮರಿ ಪೇಸ್ಟ್, ಎಮರಿ ಪೌಡರ್, ಕೋಟೆಡ್ ಅಬ್ರೆಸಿವ್ಸ್" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xiv) "ಎಚ್" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ :-

"1-ಎ. ಕರಕುಶಲ ವಸ್ತುಗಳು ಎಂದರೆ ಹಿತ್ತಾಳೆ, ಕಂಚು, ತಾಮ್ರ ಮತ್ತು ಇನ್ನಿತರ ಲೋಹಗಳಿಂದ ಮಾಡಿದ ವಸ್ತುಗಳು, ಬಿದರಿವೇರ್, ಕೈಯಿಂದ ಮಾಡಿದ ಪಾಟರಿ ವಸ್ತುಗಳು, ಕಲ್ಲು ಕೆತ್ತಿದ ಅಮೃತ ಶಿಲೆ, ಕಟ್ಟಿಗೆಯಿಂದ ಕೆತ್ತಿದ ವಸ್ತುಗಳು, ಹಸ್ತದಿಂದ ಮಾಡಿದ ದೀಪಗಳು, ಕಲಾಕೃತಿಗಳು, ಡೋಕಾ ಏಟಿಮ್‌ಗಳು, ತೆಂಗಿನ ಚಿಪ್ಪಿನ ವಸ್ತುಗಳು, ಶಂಖ ಮತ್ತು ಚಿಪ್ಪಿನ ವಸ್ತುಗಳು, ತಾಳೆಯ ಎಲೆಯ ವಸ್ತುಗಳು, ಪೇಷಿಯರ್ ಮೆಷ್ ವಸ್ತುಗಳು, ಸ್ಟೋಪ್ಟೋನ್ ವಸ್ತುಗಳು, ಸ್ಪಾ ವಸ್ತುಗಳು, ಕಟ್ಟಿಗೆಯ ಕೆತ್ತನೆಗಳು ಮತ್ತು ಕಟ್ಟಿಗೆಯ ಮೂರ್ತಿಗಳು ಮತ್ತು ಉಡನ್ ಇನ್‌ಲೇಡ್ ವಸ್ತುಗಳು ಶೇಕಡಾ ಹತ್ತು"

(xv) "ಎಚ್" ಭಾಗದ 3ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ :-

"ಹೊಟ್ಟು ಎಂದರೆ ಗೋಡಂಬಿ ಹೊಟ್ಟು, ಗೋಡಂಬಿ ಚಿಪ್ಪು ತೆಂಗಿನ ಚಿಪ್ಪಿನ ಹೊಟ್ಟು, ತೆಂಗಿನ ಚಿಪ್ಪು, ಕಾಫಿ ಹೊಟ್ಟು, ಶೇಂಗಾ ಹೊಟ್ಟು, ಶೇಂಗಾ ಸಿಪ್ಪೆ, ಮೆಕ್ಕೆ ಜೋಳದ ಹೊಟ್ಟು ಶೇಕಡಾ ನಾಲ್ಕು"

(xvi) "ಎಂ" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ನಂತರ, ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ,-

"1-ಎ. ಮುಸುಕಿನ ಜೋಳದ ಉತ್ಪನ್ನಗಳು ಎಂದರೆ, ಮುಸುಕಿನ ಜೋಳದ ಸ್ಟಾರ್ಚ್,ದ್ರವ ಗ್ಲೂಕೋಸ್, ಡೆಕ್ಸ್ಟ್ರೋಸ್ ಮೋನೋಹೈಡ್ರೇಟ್, ಮಾಲ್ಟೋಡೆಕ್ಸ್ಟ್ರೀನ್, ಗ್ಲೂಕೋಸ್ "ಡಿ", ಮುಸುಕಿನ ಜೋಳದ ಗ್ಲುಟೀನ್, ಮುಸುಕಿನ ಜೋಳದ ಜರ್ಮ್, ಮುಸುಕಿನ ಜೋಳದ ಎಣ್ಣೆ, ಹೈಡ್ರೋಲ್, ಕಾರ್ನ್ ಸ್ಟೀಪ್ ಲಿಕ್ಕರ್ ಶೇಕಡಾ ನಾಲ್ಕು"

(xvii) "ಓ" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು :-

"1-ಎ; ಎಣ್ಣೆಗಳು, ಎಂದರೆ, ಅಗರ ಬತ್ತಿ ಎಣ್ಣೆ, ಸಿಟ್ರೋಡರ್ ಎಣ್ಣೆ, ಸಿಟ್ರೋನೆಲ್ಲಾ ಎಣ್ಣೆ, ಲವಂಗದ ಎಣ್ಣೆ, ದವನ ಎಣ್ಣೆ, ಲೆಮನ್ ಗ್ರಾಸ್ ಎಣ್ಣೆ, ನೈಸರ್ಗಿಕ ಅವಶ್ಯಕ ಎಣ್ಣೆ, ಬೇವಿನ ಎಣ್ಣೆ, ರಬ್ಬರ್ ಬೀಜದ ಎಣ್ಣೆ, ನೀಲಗಿರಿ ಎಣ್ಣೆ, ಅನುಸೂಚಿಯಲ್ಲಿ ಬೇರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಶೇಕಡಾ ಹತ್ತು",

(xviii) "ಓ" ಭಾಗದ 3ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ (i)ನೇ ಬಾಬಿನಲ್ಲಿ "ಅದರ" ಎಂಬ ಪದಗಳ ನಂತರ "ಲೆನ್ಸ್ ಕೇರ್ ದ್ರಾವಕ" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xix) "ಪ" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ (i) ನೇ ಬಾಬಿನಲ್ಲಿ "ಮತ್ತು ಪೈಮರ್‌ಗಳು" ಎಂಬ ಪದಗಳ ನಂತರ, "ಲೈಟ್ ಮಿನರಲ್ ಎಣ್ಣೆ, ಮೆಟಲ್ ಪಾಲಿಷಿಂಗ್ ಮಿಶ್ರಣ, ಪಾಟೀಸ್" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xx) "ಪ" ಭಾಗದ 6ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ "ಆಸ್‌ಬೆಸ್ಟಸ್" ಎಂಬ ಪದಗಳ ನಂತರ, "ಸಿಮೆಂಟ್ ಗ್ರಿಲ್ಸ್, ಪಿಚ್ ಫೈಬರ್ ಪೈಪ್" ಎಂಬ ಪದಗಳನ್ನು ಸೇರಿಸತಕ್ಕದ್ದು.

(xxi) "ಎಸ್" ಭಾಗದ 1ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು :-

"1(1) ಮರಳು, ಜೇಡಿಮಣ್ಣು, ಫೈರ್‌ಕ್ಲೇ, ಕಲ್ಲಿದ್ದಲು ಬೂದಿ, ಕಲ್ಲಿದ್ದಲು ಬಾಯ್ಲರ್ ಬೂದಿ, ಕಲ್ಲಿದ್ದಲು ಸಿಂಡರ್ ಬೂದಿ, ಕಲ್ಲಿದ್ದಲು ಪೌಡರ್, ಕ್ಲಿಂಕರ್ ಶೇಕಡಾ ನಾಲ್ಕು"

(xxii) "ಎಸ್" ಭಾಗದ 4ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, "ಟ್ಯಾಂಪೋನ್ಸ್", ಎಂಬ ಪದಗಳ ನಂತರ "ಬೇಬಿ ಡಯಾಪರ್‌ಗಳು, ಬೇಬಿ ನ್ಯಾಪೀಗಳು, ಡಿಸ್‌ಪೋಸಬಲ್ ಡಯಾಪರ್‌ಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xxiii) "ಎಸ್" ಭಾಗದ 9ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ (iv) ನೇ ಬಾಬಿನಲ್ಲಿ "ಲಾಂಡ್ರಿ ಬ್ಲೈಟ್‌ನರ್ಸ್" ಎಂಬ ಪದಗಳ ನಂತರ "ಸ್ಟೇನ್ ಬಸ್ಟರ್ಸ್, ಸ್ಟೇನ್ ರಿಮೂವರ್ಸ್" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xxiv) "ಎಸ್" ಭಾಗದ 15ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ನಂತರ,

(ಎ) (i)ನೇ ಬಾಬಿನ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ.- (i-ಎ) "ಕ್ಲಿಪ್ ಬೋರ್ಡ್‌ಗಳು, ಕ್ಲಚ್ ಪೆನ್ಸಿಲ್, ಬ್ಲಾಕ್ ಲೆಡ್, ಡೇಟ್ ಸ್ಟ್ಯಾಂಪ್‌ಗಳು, ಡಸ್ಟರ್‌ಗಳು, ಇಂಡೆಕ್ಸ್ ಫೈಲ್ ಕ್ಲಿಪ್‌ಗಳು, ಪೋಕರ್‌ಗಳು, ಎಲ್ಲಾ ವಿಧದ ಕಚೇರಿ ಫೈಲುಗಳು, ಪೇಪರ್ ಕಟ್ಟರ್, ಬ್ಲಾಕ್‌ಬೋರ್ಡ್, ಬ್ಲಾಕ್ ಬೋರ್ಡ್ ಡಸ್ಟರ್‌ಗಳು ಶೇಕಡಾ ನಾಲ್ಕು"

(ಬಿ) ಬಾಬು (ii)ರ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು :-

(ii-ಎ) "ಪೇಪರ್ ಪಿನ್‌ಗಳು, ಪೆನ್ಸ್ ಸ್ಟ್ಯಾಂಡ್‌ಗಳು, ಪೆನ್ಸಿಲ್ ಲೆಡ್, ಪೆನ್ಸಿಲ್ ಶಾರ್ಪನರ್‌ಗಳು, ಪರ್ಮನೆಂಟ್ ಮಾರ್ಕರ್‌ಗಳು, ರೀಫಿಲ್ ಲೆಡ್‌ಗಳು, ಸ್ಟ್ಯಾಂಪ್‌ಪ್ಯಾಡ್‌ಗಳು, ಸ್ಪೆಷಲರ್ ಪಿನ್‌ಗಳು, ಎಲ್ಲಾ ವಿಧದ ರೂಲರ್‌ಗಳು, ಗಲ್ಲಿ ಪಿನ್‌ಗಳು ಮತ್ತು ಪಿನ್ ಸ್ಟಡ್‌ಗಳು ಶೇಕಡಾ ನಾಲ್ಕು"

(xxv) "ಎಸ್" ಭಾಗದ 18ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, "ಸೀಮೆಎಣ್ಣೆ ಸ್ಟವ್‌ಗಳು" ಎಂಬ ಪದಗಳ ನಂತರ ಮತ್ತು "ಬಾರ್ ಬೆಕ್ಯೂ, ಚಾರ್ ಕೋಲ್ ಓವನ್, ತಂದೂರ್ ಸ್ಟವ್‌ಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

(xxvi) "ಎಸ್" ಭಾಗದ 21ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, "ಬೆಲ್ಸ್‌ಗಳು" ಎಂಬ ಪದಗಳ ನಂತರ, "ಟೆಲೋನಟ್ ಪ್ಯಾರಾ ಪಿನ್ ಗಾಡ್ ಡ್ರೆಸ್ಸಿಂಗ್", ಅಲ್ಯಾಸೌಂಡ್ ಜೆಲ್ಲಿ, ಪಿಂಚರ್ಸ್ (ಉಕ್ಕಿನ), ಮೆಡಿಸನಲ್ ಆಕ್ಸಿಜನ್, ಮೆಡಿಕಲ್ ಕಿಟ್, ಮೆಡಿಕಲ್ ಡಿಸ್‌ಪೋಸಬಲ್ ಇಂಟ್ರಾವೀನಸ್ ಅಡ್‌ಮಿನಿಸ್ಟ್ರೇಷನ್ ಸೆಟ್, ಥರ್ಮೋಮೀಟರ್, ಮೆಜ್ಯಾನಿಕಲ್ ನೇಸಲ್, ಫಿಲ್ಟರ್‌ಗಳು, ಇನ್‌ಸ್ಟ್ರುಮೆಂಟ್ ಸ್ಟೆರಿಲೈಸರ್, ಇಂಜಕ್ಷನ್ ನೀಡಲ್‌ಗಳು, ಹಾಸ್ಪಿಟಲ್ ವೇರ್‌ಗಳು, ಜಿವ್ಲೋನ ಪ್ಲಾಸ್ಟರ್ ಆಫ್ ಪ್ಯಾರೀಸ್ ಬ್ಯಾಂಡೇಜ್, ಫಿಕ್ಸೆಡ್ ಪಾರ್ಟಿಯಲ್ ಡೆಂಚರ್‌ಗಳು, ಎನಾಮಲ್ಡ್ ಐರನ್ ಟ್ರೇಗಳು, ಮತ್ತು ಬೇಸಿನ್‌ಗಳು, (ಆಸ್ಪತ್ರೆಗಳಲ್ಲಿ ಬಳಸುವ) ಇಸಿಜಿ ರೆಕಾರ್ಡಿಂಗ್ ಚಾರ್ಟ್, ಇಸಿಜಿ ಜೆಲ್ಲಿ, ಡ್ರಿಪ್ ಸೆಟ್, ಡಿಸ್‌ಪೋಸಬಲ್ ಹೈಪೋಡರ್ಮಿಕ್ ನೀಡಲ್‌ಗಳು, ಕಾಟನ್‌ಬಡ್‌ಗಳು, ಬೆಡ್ ಎಲಿವೇಟರ್‌ಗಳು, ಅಬ್‌ಸಾರ್ಬೆಂಟ್ ಕಾಟನ್ ರೋಲ್‌ಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

(xxvii) "ಟಿ" ಭಾಗದ 1-ಎ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, "ಕಾಲರ್ ಬೋನ್‌ಗಳು" ಎಂಬ ಪದಗಳ ನಂತರ ಈ ಮುಂದಿನದನ್ನು ಸೇರಿಸಬಹುದು, ಎಂದರೆ :-

"ಹಾರ್ನ್ ಬಟನ್‌ಗಳು, ಇಂಡೆಂಟ್ ಹುಕ್‌ಗಳು / ಐಗಳು, ಜೀನ್ಸ್ ಬಟನ್‌ಗಳು, ನಿಟ್ಟಿಂಗ್ ಪಿನ್‌ಗಳು, ಲಾಂಗ್ ಸ್ಟ್ರಿಚ್ ಕಿಟ್‌ಗಳು, ಎಂಎಸ್ ಕೋಟೆಡ್ ಬಟನ್‌ಗಳು / ಸ್ಟಾರ್‌ಗಳು, ಜೆಪ್ ಪಾಸ್‌ನರ್‌ಗಳು, ಜಿಪ್ಪರ್‌ಗಳು, ಕಫ್‌ಲಿಂಕ್‌ಗಳು, ಕ್ರೋಫ್ ಹುಕ್‌ಗಳು. ಶೇಕಡಾನಾಲ್ಕು"

(xxviii) "ಟ" ಭಾಗದ 5ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು :-

"5 (i)	ಬ್ರಾಂಡ್ ಹೆಸರಿನಲ್ಲಿ ಮಾರಾಟವಾಗುವ ಟೀ	ಶೇಕಡಾ ಹತ್ತು"
(ii)	ಮೇಲಿನದನ್ನು ಹೊರತುಪಡಿಸಿದ ಟೀ	ಶೇಕಡಾ ಹತ್ತು"

(xxix) "ಟ" ಭಾಗದ ಹನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ (v) ಉಪ ಬಾಬಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು :-

"(vi)	ಜೇಡಿ ಮಣ್ಣಿನಿಂದ ತಯಾರಿಸಲಾದ ವಿಣುಗೆರೆಯುವ ಹೆಂಚುಗಳೂ ಸೇರಿದಂತೆ ಛಾವಣಿ ಹೆಂಚುಗಳು ಮತ್ತು ಜೇಡಿ ಮಣ್ಣಿನ ಅಲಂಕಾರಿಕ ಹೆಂಚುಗಳು	ಶೇಕಡಾ ನಾಲ್ಕು"

(xxx) 'ಟ' ಭಾಗದ 10-ಎ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ "ಹ್ಯಾಮರುಗಳು" ಎಂಬ ಪದದ ತರುವಾಯ "ಕ್ರೋ ಹ್ಯಾಮರ್, ಹ್ಯಾಂಡ್ ಪೋರ್ಜ್" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xxxi) "ಡಬ್ಲ್ಯೂ" ಭಾಗದ 4-ಎ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ "ಸಿಂಥಟಿಕ್ ಸಾಮಗ್ರಿಗಳು" ಎಂಬ ಪದಗಳತರುವಾಯ "ಅಲ್ಯೂಮಿನಿಯಂನಿಂದ ತಯಾರಾದ ನೀರಿನ ತೊಟ್ಟಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು ;

(xxxii) "ಡಬ್ಲ್ಯೂ" ಭಾಗದ 7ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ "ಹ್ಯಾಸುರಿನಾ" ಎಂಬ ಪದಗಳ ತರುವಾಯ "ಹಲ್ವಾಸಾ" ಎಂಬ ಪದವನ್ನು ಸೇರಿಸತಕ್ಕದ್ದು.

22. ನಾಲ್ಕನೇ ಅನುಸೂಚಿಯಲ್ಲಿ 6ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ "ಈ ಅಧಿನಿಯಮದ ಅಡಿಯಲ್ಲಿ ರಾಜ್ಯದಲ್ಲಿ ತೆರಿಗೆಗೆ ಹೊಣೆಗಾರನಾದ ಮೊದಲನೇ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿಮುಂಚಿನ ವ್ಯಾಪಾರಿಯು ಮಾಡಿದ ಮಾರಾಟ" ಎಂಬ ಪದಗಳಿಗೆ "ಈ ಅಧಿನಿಯಮದ ಅಡಿಯಲ್ಲಿ ರಾಜ್ಯದಲ್ಲಿ ತೆರಿಗೆಗೆ ಹೊಣೆಗಾರನಾದ ಕೊನೆಯ ವ್ಯಾಪಾರಿಯು ಮಾಡಿದ ಮಾರಾಟ" ಎಂಬ ಪದಗಳನ್ನು ಸೇರಿಸತಕ್ಕದ್ದು.

23. ಐದನೇ ಅನುಸೂಚಿಯಲ್ಲಿ,

(i) 7ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"7-ಎ. ಆಯುಕ್ತರಿಂದ ಮಾನ್ಯತೆ ಪಡೆದ ಗುಡಿ ಕೈಗಾರಿಕೆ ಸಹಕಾರ ಸಂಘಗಳ ಸದಸ್ಯರಿಂದ ಉತ್ಪಾದಿಸಲಾದ ವಸ್ತುಗಳು."

(ii) 10ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"10-ಎ. ಬಯೋಗ್ಯಾಸ್ ಸ್ಟೋವ್‌ಗಳು, ಬಯೋಗ್ಯಾಸ್ ಲ್ಯಾಂಪುಗಳು, ಬಯೋ ಮಾಸಗ್ಯಾಸ್ ಗ್ಯಾಸಿಫೈಯರ್‌ಗಳು, ಬಯೊ ಮಾಸ್‌ಗ್ಯಾಸ್ ಸ್ಥಿರಯಂತ್ರಗಳು ಮತ್ತು ಬಯೋಮಾಸ್‌ಗ್ಯಾಸ್ ಎಂಜಿನ್‌ಗಳು ಮತ್ತು ಅವುಗಳ ಭಾಗಗಳು."

(iii) 31ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"31-ಎ ಗೋಬರ್‌ಗ್ಯಾಸ್ ಸ್ಟವ್‌ಗಳು ಮತ್ತು ಗೋಬರ್‌ಗ್ಯಾಸ್ ಲ್ಯಾಂಪ್‌ಗಳು"

(iv) 42ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"42-ಎ. ಆಯುಕ್ತರಿಂದ ಅಂಗೀಕರಿಸಲ್ಪಟ್ಟ ಪ್ರಾಮಾಣಿಕ ಉತ್ಪಾದಕನು ಮಾರಾಟ ಮಾಡಿದಾಗ, ನಿಯಮಿಸಲಾದ ಹರಹು ಮತ್ತು ಪರಿಮಿತಿಗಳಿಗೆ ಅನುಗುಣವಾಗಿರುವ, ನಿಯಮಿಸಲಾದ ಗ್ರಾಮ ಕೈಗಾರಿಕೆಗಳ ವಸ್ತುಗಳು."

(v) 49ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"49-ಎ. ಮನುಷ್ಯ ಮತ್ತು ಜೈವಿಕ ನಿರರ್ಥಕ ವಸ್ತುಗಳಿಂದ ಮಾಡಿದ ಘನರೂಪದ ಇಂಧನ"

3. 1957ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 22) 1957ರ ಕರ್ನಾಟಕ ಅಧಿನಿಯಮ ಸಂಖ್ಯೆ 22ರ ತಿದ್ದುಪಡಿ.

(1) 5(ಎ) ಪ್ರಕರಣದ (2)ನೇ ಉಪ ಪ್ರಕರಣದಲ್ಲಿ (ಬಿ) ಖಂಡದ ಉಪಖಂಡಕ್ಕೆ ಈ ಮುಂದಿನದನ್ನು ..... ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು .-

"ರಾಷ್ಟ್ರೀಯ ಉಳಿತಾಯ ಪತ್ರದ ಆರನೇ ನೀಡಿಕೆ, ಏಳನೇ ನೀಡಿಕೆ ಮತ್ತು ಎಂಟನೇ ನೀಡಿಕೆಗೆ ವಂತಿಗೆಯಾಗಿ"

2. "15ನೇ ಪ್ರಕರಣದಲ್ಲಿ "ಆರು ವರ್ಷಗಳನ್ನು ಮೀರಿ" ಎಂಬ ಪದಗಳ ತರುವಾಯ ಈ ಮುಂದಿನದನ್ನು 1987ರ ಏಪ್ರಿಲ್ ಮೊದಲನೆಯ ದಿನದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

"ನಿಯಮಿಸಲಾದ ನಮೂನೆಯಲ್ಲಿರುವ, ನಿಯಮಿಸಲಾದ ವಿಧಾನದಲ್ಲಿ ಪರಿಶೀಲಿಸಲಾದ ಹಾಗೂ ನಿಯಮಿಸಬಹುದಾದಂತಹ ಇತರ ವಿವರಗಳನ್ನು ಒಳಗೊಂಡಿರುವ ನಷ್ಟದ ವಿವರ ಪಟ್ಟಿಕೆಯನ್ನು 18ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಗಿಂತ ಮುಂಚಿತವಾಗಿ ಸಲ್ಲಿಸಲಾಗಿದೆ ಅಥವಾ ಕೃಷಿ ವರಮಾನ ತೆರಿಗೆ ಸಹಾಯಕ ಆಯುಕ್ತರು ಅಥವಾ ಸಂದರ್ಭಾನುಸಾರ ಕೃಷಿ ವರಮಾನ ತೆರಿಗೆ ಉಪ ಆಯುಕ್ತರು ನೀಡಿದಂಥ ವಿಸ್ತರಿಸಲಾದ ಅವಧಿಯೊಳಗೆ ಸಲ್ಲಿಸಲಾಗಿದೆ ಎಂಬ ತೃಪ್ತಿಗೆ ಒಳಪಟ್ಟಿದೆ ಮತ್ತು 18ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿರುವುದು ಯಾವುದೂ ಈ ಬಗ್ಗೆ ಅನ್ವಯಿಸತಕ್ಕದ್ದಲ್ಲ".

3) 66ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

4. 1958ರ ಕರ್ನಾಟಕ ಮನೋರಂಜನಾತೆರಿಗೆ ಅಧಿನಿಯಮದಲ್ಲಿ (1958ರ ಕರ್ನಾಟಕ ಅಧಿನಿಯಮ 30) 1958ರ ಕರ್ನಾಟಕ ಅಧಿನಿಯಮ 3ರ ತಿದ್ದುಪಡಿ.

(1) 2ನೇ ಪ್ರಕರಣದಲ್ಲಿ (ಇ) ಖಂಡದ ಉಪ ಖಂಡ (iii)ರ ತರುವಾಯ ಈ ಮುಂದಿನದನ್ನು 1997ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ :-

"ವಿವರಣೆ : ಅಂಗೀಕೃತ ಆಟ ಅಥವಾ ಕ್ರೀಡೆ, ಎಂದರೆ ಕ್ರಿಕೆಟ್, ಹಾಕಿ, ಫುಟ್‌ಬಾಲ್, ಬಾಸ್ಕೆಟ್ ಬಾಲ್, ಟೆನ್ನಿಸ್, ಗಾಲ್ಫ್, ಬಿಲಿಯರ್ಡ್ಸ್, ಸ್ನೂಕರ್, ವಾಲಿಬಾಲ್, ಬ್ಯಾಡ್‌ಮಿಂಟನ್, ಕಬಡ್ಡಿ, ಈಜು, ಅಥ್ಲೆಟಿಕ್ಸ್, ಬೇಸ್‌ಬಾಲ್, ವೈಟ್ ಲಿಫ್ಟಿಂಗ್ ಮತ್ತು ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಇತರ ಆಟ ಅಥವಾ ಕ್ರೀಡೆ".

(2) 7ನೇ ಪ್ರಕರಣದಲ್ಲಿ-

(i) (1)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು 1997ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ :-

(i) "ವಿನಾಯಿತಿಗಳು.- (1) ರಾಜ್ಯ ಸರ್ಕಾರವು ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತೃಪ್ತಿಗೆ ಒಳಪಟ್ಟು, ವಾಸ್ತವಿಕ ವೆಚ್ಚಗಳನ್ನು ಕಳೆದ ತರುವಾಯ ಮನೋರಂಜನೆಯ ಪೂರ್ಣ ಒಟ್ಟು ಉತ್ಪತ್ತಿಗಳನ್ನು ರಾಜ್ಯದಲ್ಲಿ ಅಂಗೀಕೃತ ಆಟ ಅಥವಾ ಕ್ರೀಡೆಯ ಪರೋಪಕಾರಿ, ಧಾರ್ಮಿಕ, ಧರ್ಮಾದಾಯ ಅಥವಾ ಅಭಿವೃದ್ಧಿಗೆ

ವಿನಿಯೋಗಿಸಲಾಗುತ್ತಿದೆ ಎಂಬುದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಯಾವುದೇ ಮನೋರಂಜನೆಯ ಪ್ರವೇಶಕ್ಕಾಗಿ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರದಲ್ಲಿ ತೀಕಡಾ 50 ರಷ್ಟನ್ನು ಮೀರದಂತೆ ಇಳಿತಾಯ ನೀಡಬಹುದು"

ಪರಂತು, ರಾಜ್ಯ ಸರ್ಕಾರವು ವಿಶೇಷ ಸಂದರ್ಭಗಳಲ್ಲಿ ಯಾವುದೇ ಮನೋರಂಜನೆಯ ಮೇಲೆ ಸಂದಾಯವಾಗತಕ್ಕ ಮನೋರಂಜನಾ ತೆರಿಗೆಗೆ ಪೂರ್ಣ ವಿನಾಯಿತಿ ನೀಡಬಹುದು.

ವಿವರಣೆ : "ಧರ್ಮಾದಾಯ ಉದ್ದೇಶಗಳಲ್ಲಿ, ಬಡವರಿಗೆ ನೆರವು, ವೈದ್ಯಕೀಯ ನೆರವು ಮತ್ತು ಶಿಕ್ಷಣಾಭಿವೃದ್ಧಿ ಅಥವಾ ಲಾಭಕ್ಕಾಗಿ ಮಾಡಿದ ಯಾವುದೇ ಕಾರ್ಯಚಟುವಟಿಕೆಯನ್ನು ಒಳಗೊಂಡಿರದ ಸಾರ್ವಜನಿಕ ಉಪಯೋಗದ ಇತರ ಯಾವುದೇ ಉದ್ದೇಶವು ಸೇರುತ್ತದೆ. ಆದಾಗ್ಯೂ ಸಂಪೂರ್ಣ ಅಥವಾ ಸಾಕಷ್ಟು ಧಾರ್ಮಿಕ ಸ್ವರೂಪದ ಯಾವುದೇ ಉದ್ದೇಶವನ್ನು ಇದು ಒಳಗೊಳ್ಳುವುದಿಲ್ಲ."

"(1ಎ) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಒಂದು ಸಂಸ್ಥೆಯು ಒಂದು ಚಲನ ಚಿತ್ರ ಪ್ರದರ್ಶನವನ್ನು ಶೈಕ್ಷಣಿಕ ಚಲನಚಿತ್ರ ಅಥವಾ ಮಕ್ಕಳ ಚಲನಚಿತ್ರವೆಂಬುದಾಗಿ ಪ್ರಮಾಣೀಕರಿಸಿದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತಹ ಯಾವುದೇ ಅವಧಿಯೊಳಗೆ ಸಂದಾಯವಾಗತಕ್ಕ ಮನೋರಂಜನಾ ತೆರಿಗೆಯ ದರದಲ್ಲಿ ವಿನಾಯಿತಿ ಅಥವಾ ಇಳಿತಾಯ ನೀಡಬಹುದು."

(3) 8-ಬಿ ಪ್ರಕರಣದ (1)ನೇಯ ಉಪ ಪ್ರಕರಣದಲ್ಲಿ "ಉಪ ಆಯುಕ್ತರು" ಎಂಬ ಪದಗಳಿಗೆ "ಜಂಟಿ ಆಯುಕ್ತರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 1979ರ ಕರ್ನಾಟಕ ಭೋಗಭೂಮಿಗಳ ಹೊರೆ ತೆರಿಗೆ ಅಧಿನಿಯಮದಲ್ಲಿ (1979ರ ಅಧಿನಿಯಮ ಸಂಖ್ಯೆ 22).- 1979ರ ಕರ್ನಾಟಕ ಅಧಿನಿಯಮ ಸಂಖ್ಯೆ 22ರ ತಿದ್ದುಪಡಿ.

(1) 2ನೇ ಪ್ರಕರಣದಲ್ಲಿ,-

(i) (1ಎ) ಉಪ ಪ್ರಕರಣದ ವಿವರಣೆಯಲ್ಲಿ "ರಾಜ್ಯ ಸರ್ಕಾರ" ಎಂಬ ಪದಗಳು ಬರುವ ಎರಡು ಕಡೆಗಳಲ್ಲೂ ಅವುಗಳಿಗೆ "ಆಯುಕ್ತರು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (5ಬಿ) ಉಪ ಪ್ರಕರಣದಲ್ಲಿ "ಅಂಥ ವಿವಾಹ ಅಥವಾ ಆರತಕ್ಷತೆ ಅಥವಾ ಅದಕ್ಕೆ ಸಂಬಂಧಪಟ್ಟ ಕಾರ್ಯಗಳು ನಿಜುತವಾಗಿ ನಡೆದಿರಲಿ ಅಥವಾ ನಡೆಯದಿರಲಿ" ಎಂಬ ಪದಗಳಿಗೆ "ಮತ್ತು ವಿಚಾರಗೋಷ್ಠಿ, ಸಮಾವೇಶ, ಚಿಂತನಕೂಟಗಳು, ಸಭೆಗಳು ಅಥವಾ ಪ್ರದರ್ಶನ ಹಾಗೂ ಮಾರಾಟ ಅಥವಾ ನಿಯತವಾಗಿ ಸಮಾರಂಭಗಳನ್ನು ನಡೆಸಲಾಗುತ್ತಿರುವ ಆಯುಕ್ತರಿಂದ ನಿರ್ದಿಷ್ಟಪಡಿಸಬಹುದಾದಂತಹ ಇತರ ಸಭಾಂಗಣವು (ಹಾಲ್) ಸೇರುತ್ತದೆ." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (6)ನೇ ಉಪ ಪ್ರಕರಣಕ್ಕೆ ಈ ಮುಂದಿನ ಉಪ ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(6) ಒಂದು ಹೋಟೆಲ್ ಅಥವಾ ವಿವಾಹ ಸಭಾಂಗಣದ ಸಂಬಂಧದಲ್ಲಿ ಮಾಲೀಕ ಎಂದರೆ ಕಾನೂನಿನ ಮೂಲಕ ಅಂಗೀಕೃತವಾದ ಒಂದು ಹೋಟೆಲು ಅಥವಾ ವಿವಾಹ ಸಭಾಂಗಣದ ಮೇಲೆ ಯಾವುದೇ ಸಾಮರ್ಥ್ಯದಲ್ಲಿ ಮಾಲೀಕತ್ವ ಪಡೆದಿರುವ ಅಥವಾ ಹೊಂದಿರುವ ಯಾರೇ ವ್ಯಕ್ತಿ ಮತ್ತು ಇದರಲ್ಲಿ ತತ್ಕಾಲದಲ್ಲಿ ಹೋಟೆಲು ಅಥವಾ ವಿವಾಹ ಸಭಾಂಗಣದ ಆಡಳಿತವನ್ನು ವಹಿಸಿಕೊಂಡಿರುವ ವ್ಯಕ್ತಿಯು ಸೇರುತ್ತಾನೆ."

(2) 3ನೇ ಪ್ರಕರಣದಲ್ಲಿ (1-ಎ) ಉಪ ಪ್ರಕರಣಕ್ಕೆ (1ಬಿ) ಎಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಅದಕ್ಕೆ (1ಬಿ) ಉಪ ಪ್ರಕರಣ ಎಂಬುದಾಗಿ ಮರು ಸಂಖ್ಯೆ ನೀಡುವುದಕ್ಕೆ ಮೊದಲು ಈ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) (1)ನೇ ಉಪ ಪ್ರಕರಣದ ಅಡಿ ವಿಧಿಸಲಾದ ತೆರಿಗೆಯನ್ನು ಪ್ರತಿಯೊಬ್ಬ ಮಾಲೀಕನೂ ಸಂದಾಯ ಮಾಡತಕ್ಕದ್ದು."

(3) 3ಸಿ. ಪ್ರಕರಣಕ್ಕೆ ಅದರ (1)ನೆಯ ಉಪ ಪ್ರಕರಣ ಎಂಬುದಾಗಿ ಪುನರ್ ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಪುನರ್ ಸಂಖ್ಯೆ ನೀಡಲಾದ (1)ನೇ ಉಪ ಪ್ರಕರಣದಲ್ಲಿ,-

(ಎ) "ಐದು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ;

(ಬಿ) (ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು.

(ii) ಹಾಗೆ ಮರುಸಂಖ್ಯೆ ನೀಡಲಾದ (1)ನೆಯ ಉಪ ಪ್ರಕರಣದ ತರುವಾಯ ಈ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :-

"(2) (1)ನೇ ಉಪ ಪ್ರಕರಣದಡಿ ವಿಧಿಸಲಾದ ತೆರಿಗೆಯನ್ನು ಪ್ರತಿಯೊಬ್ಬ ಮಾಲೀಕನು ಸಂದಾಯ ಮಾಡತಕ್ಕದ್ದು."

6. **ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 27) 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ**

(1) 3ನೇ ಪ್ರಕರಣದಲ್ಲಿ (4)ನೇ ಉಪ-ಪ್ರಕರಣದ ನಂತರ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ :

"(4-ಎ) ಉಪ-ಪ್ರಕರಣ (2) ಮತ್ತು (3)ರಲ್ಲಿ ಏನೇ ಇದ್ದರೂ, ಒಬ್ಬ ವ್ಯಾಪಾರಿಯು, ಎರಡು ವಿವಿಧ ಸ್ಥಳೀಯ ಪ್ರದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ವ್ಯಾಪಾರ ಸ್ಥಳವನ್ನು ಹೊಂದಿರುವ ಮತ್ತೊಬ್ಬ ವ್ಯಾಪಾರಿಯಿಂದ ಅದೇ ಸ್ಥಳೀಯ ಪ್ರದೇಶದೊಳಗೆ

ಯಾವುದೇ ಅನುಸೂಚಿತ ಸರಕನ್ನು ಖರೀದಿಸಿದಲ್ಲಿ ಮಾರಾಟ ಮಾಡುವ ವ್ಯಾಪಾರಿಯಿಂದ ಪಡೆಯಲಾದ ನಿಗದಿತ ನಮೂನೆಯಲ್ಲಿ ಒಂದು ಘೋಷಣೆಯನ್ನು ಅಂತಹ ವ್ಯಾಪಾರಿಯು ನಿರ್ಧಾರಣಾ ಪ್ರಾಧಿಕಾರಿಗೆ ಸಲ್ಲಿಸಿದ ಹೊರತು, 3ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕ್ಲೇಮು ಸಲ್ಲಿಸಲು ಅರ್ಹನಾಗಿರತಕ್ಕದ್ದಲ್ಲ."

(2) 5ನೇ ಪ್ರಕರಣದಲ್ಲಿ,-

(i) 6ನೇ ಉಪ-ಪ್ರಕರಣದಲ್ಲಿರುವ "ಎರಡು ವರ್ಷಗಳು" ಎಂಬ ಪದಗಳಿಗೆ ಬದಲಾಗಿ "ಮೂರು ವರ್ಷಗಳು" ಎಂಬ ಪದಗಳನ್ನು ಒಂದನೇ ಏಪ್ರಿಲ್, 1997ರಿಂದ ಪರಿಣಮಿಸುವಂತೆ ಪ್ರತ್ಯಾಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

(ii) 6ನೇ ಉಪ-ಪ್ರಕರಣದ ನಂತರ ಈ ಮುಂದಿನ ಪರಂತುಕವನ್ನು ಸೇರಿಸಲಾಗಿದೆಯೆಂದು ಮತ್ತು ಯಾವಾಗಲೂ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಯಾವುದೆಂದರೆ-

"ಪರಂತು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1977ರ ಪ್ರಾರಂಭಕ್ಕೆ ಮೊದಲು ಇತ್ಯರ್ಥದಲ್ಲಿದ್ದ ಯಾವುದೇ ವರ್ಷಕ್ಕೆ ಸಂಬಂಧಿಸಿದ ನಿರ್ಧಾರಣಾ ಪ್ರಕ್ರಿಯೆಗಳು, ಅಂತಹ ಪ್ರಾರಂಭಕ್ಕೆ ಮೊದಲು 1ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿರುವ ವಿವರಣ ಪಟ್ಟಿಕೆಗಳ ಸಂಬಂಧದಲ್ಲಿ, ಅಂತಹ ಪ್ರಾರಂಭದಿಂದ ಮೂರು ವರ್ಷಗಳ ಅವಧಿಯೊಳಗಾಗಿ ಪೂರ್ಣಗೊಳ್ಳತಕ್ಕದ್ದು."

(3) 11-ಎ ಪ್ರಕರಣದ (9)ನೇ ಉಪ-ಪ್ರಕರಣದಲ್ಲಿ, "ವಿಸಾಯಿತಿ ನೀಡುವುದು ಅಥವಾ ಕಡಿಮೆಗೊಳಿಸುವುದು ಎಂಬ ಪದಗಳ ನಂತರ "ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(4) 15-ಬಿ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಎರಡು ಸ್ಥಳಗಳಲ್ಲಿ "ಎರಡು ವರ್ಷಗಳು" ಎಂಬ ಪದಗಳು ಬರುವೆಡೆಗಳಲ್ಲಿ ಅವುಗಳಿಗೆ ಬದಲಾಗಿ "ಮೂರು ವರ್ಷಗಳು" ಎಂಬ ಪದಗಳನ್ನು ಒಂದನೇ ಏಪ್ರಿಲ್ 1997ರಿಂದ ಪರಿಣಮಿಸುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

(5) 18-ಎ ಪ್ರಕರಣದಲ್ಲಿ (3)ನೇ ಉಪ-ಪ್ರಕರಣದ ನಂತರ ಈ ಮುಂದಿನ ಉಪ-ಪ್ರಕರಣಗಳನ್ನು ಸೇರಿಸತಕ್ಕದ್ದು, ಯಾವುದೆಂದರೆ-

"(3-ಎ) ಸಾಗಿಸುವವನಿಗೆ ಅಥವಾ ಸರಕು ರಕ್ಷಕನಿಗೆ ಸರಕುಗಳನ್ನು ಬಟವಾಡೆ ಮಾಡಿದಾಗ, ಸರಕುಗಳ ರವಾನೆಯು ಅಂತಹ ಬಟವಾಡೆ ಸಮಯದಲ್ಲಿ

ಪ್ರಾರಂಭವಾಗಿದೆಯೆಂದು ಮತ್ತು ಅಂತಹ ಸಾಗಿಸುವ ಅಥವಾ ಸರಕು ಸಂರಕ್ಷಕನಿಂದ ಬಿಟವಾಡೆ ತೆಗೆದುಕೊಂಡಾಗ ಕೊನೆಗೊಳ್ಳುತ್ತದೆಯೆಂದು ಭಾವಿಸತಕ್ಕದ್ದು. ಸಾಗಣೆಗಾಗಿ ಸರಕನ್ನು ಯಾರಿಗೆ ಬಿಟವಾಡೆ ಮಾಡಲಾಗಿದೆಯೋ ಆ ಸಾಗಿಸುವವನು ಅಥವಾ ಸರಕು ಸಂರಕ್ಷಕನು ಅವನಿಂದ ಬಿಟವಾಡೆ ತೆಗೆದುಕೊಳ್ಳುವುದಕ್ಕಿಂತ ಮೊದಲು ಸದರಿ ಸರಕುಗಳನ್ನು ಯಾವುದೇ ಕಚೇರಿ, ಅಂಗಡಿ, ಉಗ್ರಾಣ, ನೌಕೆ, ರಿಸೆಪ್ಟಕಲ್, ವಾಹನ ಅಥವಾ ವ್ಯಾಪಾರದ ಯಾವುದೇ ಇತರ ಸ್ಥಳ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳದಲ್ಲಿ ಇಟ್ಟಾಗ, ಈ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ಹೊಂದಿದ ಯಾವೊಬ್ಬ ಅಧಿಕಾರಿಯು, ಅಂತಹ ಕಛೇರಿ, ಅಂಗಡಿ, ಉಗ್ರಾಣ, ನೌಕೆ, ರಿಸೆಪ್ಟಕಲ್, ವಾಹನ ಅಥವಾ ಇತರ ವ್ಯಾಪಾರ ಸ್ಥಳಗಳ ಅಥವಾ ಕಟ್ಟಡ ಅಥವಾ ಸ್ಥಳಕ್ಕೆ ಪ್ರವೇಶಿಸಲು ಮತ್ತು ಶೋಧನೆ ನಡೆಸಲು ಮತ್ತು ಸರಕುಗಳನ್ನು ಪರೀಕ್ಷಿಸಲು ಮತ್ತು ಅಂತಹ ಸರಕುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕದ್ದು. ಸರಕು ಸಾಗಿಸುವವನು ಅಥವಾ ಸರಕು ಸಂರಕ್ಷಕ ಅಥವಾ ಸರಕುಗಳ ಮತ್ತು ದಾಖಲೆಗಳ ಪ್ರಭಾರ ವ್ಯಕ್ತಿಯು ಅಂತಹ ಪರೀಕ್ಷೆ ಮತ್ತು ಪರಿಶೀಲನೆಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು ಮತ್ತು ಹಾಗೆ ಅಗತ್ಯವಿದ್ದಲ್ಲಿ, ಉಪ-ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಮಾರಾಟದ ಬಿಲ್, ಡೆಲಿವರಿ ನೋಟ್ ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸರಕುಗಳ ಸಂಬಂಧದಲ್ಲಿ ನಿಗದಿಪಡಿಸಬಹುದಾದಂತಹ ವಿವರಗಳನ್ನೊಳಗೊಂಡ ಒಂದು ಘೋಷಣೆಯನ್ನು ನೀಡತಕ್ಕದ್ದು ಮತ್ತು ಅವನ ಹೆಸರು ಮತ್ತು ವಿಳಾಸ ಮತ್ತು ಸರಕು ಸಾಗಿಸುವವನು ಅಥವಾ ಸರಕು ಸಂರಕ್ಷಕ ಮತ್ತು ಸರಕು ಪಡೆಯುವವನ ಹೆಸರು ಮತ್ತು ವಿಳಾಸವನ್ನು ನೀಡತಕ್ಕದ್ದು.

(3-ಬ) ಯಾವುದೇ ಕಚೇರಿ, ಅಂಗಡಿ, ಉಗ್ರಾಣ, ನೌಕೆ, ರಿಸೆಪ್ಟಕಲ್, ವಾಹನ ಅಥವಾ ವ್ಯವಹಾರದ ಸ್ಥಳ ಅಥವಾ ಒಬ್ಬ ಸಾಗಿಸುವವನು ಅಥವಾ ಸರಕು ರಕ್ಷಕನು ತನಗೆ ಸಾಗಣೆ ಮಾಡಲು ನೀಡಲಾದ ಸರಕುಗಳನ್ನು ಇಡುವ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸಲು ಮತ್ತು ತನಿಖೆ ನಡೆಸಲು ಅಧಿಕಾರ ಹೊಂದಿದ ಯಾವೊಬ್ಬ ಅಧಿಕಾರಿಗೆ ಅಂಥ ಸಾಗಿಸುವವನು ಅಥವಾ ಸರಕು ರಕ್ಷಕನು ಸರಕುಗಳ ಮಾಲೀಕನ ಜೊತೆಗೆ ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿಸಿಕೊಳ್ಳಲು ಒಳಸಂಚು ಮಾಡಿದ್ದಾನೆಂದು ಅನುಮಾನಪಡಲು ಕಾರಣಗಳಿದ್ದಲ್ಲಿ, ಅವನು ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಅಥವಾ ಆ ಸಾಗಿಸುವವನ ಅಥವಾ ಸರಕು ರಕ್ಷಕನ ಇತರ ದಸ್ತಾವೇಜುಗಳನ್ನು ಅವನು ಅವಶ್ಯಕತೆವೆಂದು ಭಾವಿಸಿದಂತೆ ವಶಪಡಿಸಿಕೊಳ್ಳಬಹುದು ಮತ್ತು ಅವುಗಳಿಗೆ ರಸೀದಿಯನ್ನು ಕೊಡತಕ್ಕದ್ದು. ಅಭಿಗ್ರಹಿಸಿದ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ಅಂಥ ಅಧಿಕಾರಿಯು ಅವುಗಳ ಪರಿಶೀಲನೆಗಾಗಿ, ಅಥವಾ ವಿಚಾರಣೆಗಾಗಿ ಅಥವಾ ಈ ಅಧಿನಿಯಮದ

ಮೇರೆಗೆ ವ್ಯವಹರಣೆಗಾಗಿ ಅಗತ್ಯವಾದಷ್ಟು ಸಮಯದವರೆಗೆ ತನ್ನಲ್ಲಿ ಇಟ್ಟುಕೊಳ್ಳಬಹುದು.

ಪಂರತು, (3-ಎ) ಅಥವಾ (3ಬಿ) ಉಪ-ಪ್ರಕರಣದ ಮೇರೆಗೆ ಮಾಡಲಾದ ಎಲ್ಲಾ ಶೋಧನೆ ಮತ್ತು ಅಭಿಗ್ರಹಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ದಂಡಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು :

ಮತ್ತು ಪರಂತು, ಹಾಗೆ ಅಭಿಗ್ರಹಿಸಲಾದ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ಅಂಥ ಅಧಿಕಾರಿಯು ಅಭಿಗ್ರಹಣದ ದಿನಾಂಕದಿಂದ ಒಂದು ನೂರಾ ಎಂಬತ್ತು ದಿನಗಳಿಗೆ ಮೀರಿದ ಅವಧಿಗೆ ತನ್ನಲ್ಲಿ ಇಟ್ಟುಕೊಳ್ಳಲು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ಹೊರತು ಮತ್ತು ಮೇಲಾಧಿಕಾರಿಯ ಅನುಮೋದನೆಯನ್ನು ಪಡೆದ ಹೊರತು ತನ್ನಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ ಮತ್ತು ಅಂಥ ಅನುಮೋದನೆಯು ಯಾವುದೇ ಸಂದರ್ಭದಲ್ಲಿ ಒಂದು ಬಾರಿಗೆ ಅರವತ್ತು ದಿನಗಳಿಗೆ ಮೀರದಂತೆ ಇರತಕ್ಕದ್ದಲ್ಲ.

(3-ಸಿ) ಚೆಕ್ ಪೋಸ್ಟ್ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಯು ಅಥವಾ ಈ ಮೊದಲು ಹೇಳಿದಂತೆ ಅಧಿಕೃತಗೊಂಡ ಅಧಿಕಾರಿಯು, ಸರಕು ವಾಹನವನ್ನು ನಿಲ್ಲಿಸಿದ ಮೇಲೆ ಅಥವಾ ಉಗ್ರಾಣವನ್ನು ಪರಿಶೋಧಿಸಿದ ಮೇಲೆ ಸಾಗಣೆಯಲ್ಲಿರುವ ಸರಕುಗಳ ಜೊತೆಯಲ್ಲಿನ ದಸ್ತಾವೇಜುಗಳಲ್ಲಿ ಒದಗಿಸಲಾದ ವಿವರಗಳ ಖಚಿತತೆಯ ಬಗ್ಗೆ ಅಥವಾ (2)ನೇ ಉಪ-ಪ್ರಕರಣದ ಉಲ್ಲಂಘನೆಯ ಬಗ್ಗೆ ಒದಗಿಸಲಾದ ಕಾರಣದ ಪರ್ಯಾಪ್ತತೆಯ ಬಗ್ಗೆ ಮತ್ತಷ್ಟು ತನಿಖೆಯು ಅಗತ್ಯವೆಂದು ಅವನು ಅಭಿಪ್ರಾಯಪಟ್ಟಲ್ಲಿ, ಅವನು ವಿವರಗಳನ್ನು ಪರಿಶೀಲಿಸಬಹುದು ಅಥವಾ ಪರಿಶೀಲನೆಗಾಗಿ ಬೇರೊಬ್ಬ ಅಧಿಕಾರಿಗೆ ಉಲ್ಲೇಖಿಸಬಹುದು ಮತ್ತು ಅಂಥ ಪರಿಶೀಲನೆಯು ಯುಕ್ತ ಸಮಯದೊಳಗೆ ಪೂರ್ಣಗೊಳ್ಳುವ ಸಂಭವವಿಲ್ಲದಿದ್ದಲ್ಲಿ, ಅವನು ಲಿಖಿತದ ಮೂಲಕ ಸಾಗಿಸುವವನಿಗೆ ಅಥವಾ ಸಾರಿಗೆ ವಾಹನದ ಅಥವಾ ಉಗ್ರಾಣದ ಪ್ರಭಾರದಲ್ಲಿರುವ ವ್ಯಕ್ತಿಗೆ ಅಥವಾ ಈ ವಿಷಯವನ್ನು ಪರಿಶೀಲನೆಗಾಗಿ ಉಲ್ಲೇಖಿಸಿದ ಅಂಥ ಅಧಿಕಾರಿಯು ಅನುಮತಿಸುವವರೆಗೆ ಸರಕುಗಳನ್ನು ವಹಿಸಿಕೊಡಬಾರದೆಂದು ನಿರ್ದೇಶಿಸಬಹುದು ಮತ್ತು ನಿಲ್ಲಿಸಲಾದ ಯಾವುದೇ ವಾಹನವನ್ನು ಮುಂದಕ್ಕೆ ಹೋಗಲು ಅನುಮತಿಸಬಹುದು.

(3-ಡಿ) (3-ಸಿ) ಉಪ-ಪ್ರಕರಣದ ಅಡಿಯಲ್ಲಿ ಪರಿಶೀಲನೆಯನ್ನು ಉಪ-ಪ್ರಕರಣದ ಅಡಿಯಲ್ಲಿ ನಿರ್ದೇಶನಗಳನ್ನು ನೀಡಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು ಮತ್ತು ಅಂಥ ಪರಿಶೀಲನೆಯು, ಮೇಲೆ ಹೇಳಿದ ಅವಧಿಯೊಳಗೆ ಪೂರ್ಣಗೊಳ್ಳದಿದ್ದಲ್ಲಿ, ಅಂಥ ಆದೇಶವನ್ನು ನೀಡಿದ ಅಧಿಕಾರಿಯು ಅಥವಾ ಸಂದರ್ಭಾನುಸಾರ, ವಿಷಯದ ಪರಿಶೀಲನೆಗಾಗಿ

ಉಲ್ಲೇಖಿಸಲಾದಂಥ ಅಧಿಕಾರಿಯು, ಪರಿಶೀಲನೆಯನ್ನು ಪೂರ್ಣಗೊಳಿಸುವುದಕ್ಕಾಗಿ ಬೇಕಾಗಬಹುದಾದಂಥ ಅವಧಿಯವರೆಗೆ ವಿಸ್ತರಿಸುವಂತೆ ತನ್ನ ನಿಕಟ ಹಿರಿಯ ಅಧಿಕಾರಿಗೆ ಲಿಖಿತದಲ್ಲಿ ಕೋರುವ ಮೂಲಕ ಒಪ್ಪಿಗೆಯನ್ನು ಪಡೆಯತಕ್ಕದ್ದು. ಆದಾಗ್ಯೂ, ಅಂಥ ವಿಸ್ತರಣೆಯು ಒಂದು ಬಾರಿಗೆ ಹದಿನೈದು ದಿನಗಳಿಗೆ ಮೀರಿದ ಅವಧಿಗೆ ಅನುಮತಿ ನೀಡತಕ್ಕದ್ದಲ್ಲ.

(3-ಇ) ಅಂಥ ಪರಿಶೀಲನೆಯಿಂದಾಗಿ, (2)ನೇ ಉಪ-ಪ್ರಕರಣದಲ್ಲಿರುವುದನ್ನು (3)ನೇ ಉಪ-ಪ್ರಕರಣದ ಅಡಿಯಲ್ಲಿ ದಂಡನೀಯವಾದ ರೀತಿಯಲ್ಲಿ ಪಾಲಿಸಿರುವುದಿಲ್ಲವೆಂದು ವಿಷಯವನ್ನು ಉಲ್ಲೇಖಿಸಲಾದ ಅಂಥ ಅಧಿಕಾರಿ ಅಥವಾ ಇತರ ಅಧಿಕಾರಿಯು ಅಭಿಪ್ರಾಯಪಟ್ಟಲ್ಲಿ ಸರಕು ಸಾಗಣೆಯ ಅಬಿರಕ್ಷೆಯಲ್ಲಿರುವ ಅಂಥ ಸರಕುಗಳ ವಿರುದ್ಧ ಅಥವಾ ವಾಹನದ ಅಥವಾ ಉಗ್ರಾಣದ ಪ್ರಭಾರದಲ್ಲಿರುವ ವ್ಯಕ್ತಿಯ ವಿರುದ್ಧ ಈ ಪ್ರಕರಣದ (3) ಮತ್ತು (4)ನೇ ಉಪ-ಪ್ರಕರಣಗಳಿಗನುಸಾರವಾಗಿ ಮುಂದುವರಿಯಬಹುದು.

(3ಎಫ್) ಚೆಕ್‌ಪೋಸ್ಟ್‌ನ ಪ್ರಭಾರದಲ್ಲಿರುವ ಅಧಿಕಾರಿಯು ಅಥವಾ ಅಧಿಕೃತಗೊಂಡ ಯಾವೊಬ್ಬ ಅಧಿಕಾರಿಯು, ಈ ಪ್ರಕರಣದ ಯಾವುವೇ ಉಪಬಂಧಗಳಲ್ಲಿ ಉಲ್ಲಂಘನೆಗಾಗಿ, ಒಂದು ನೋಟೀಸನ್ನು ನೀಡಿದ್ದರೆ, ಅಂಥ ನೋಟೀಸಿಗನುಸಾರವಾಗಿ ಹೆಚ್ಚಿನ ವ್ಯವಹರಣೆಯನ್ನು, ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ಅಂಥ ರೀತಿಯಲ್ಲಿ, ಈ ಉದ್ದೇಶಕ್ಕಾಗಿಯೇ ಕಮೀಷನರ್ ಅವರಿಂದ ಅಧಿಕೃತಗೊಂಡ ಯಾವೊಬ್ಬ ಅಧಿಕಾರಿಯಿಂದ, ಅದು ಯಾವ ಹಂತದಲ್ಲಿ ಬಾಕಿ ಉಳಿದಿತ್ತೋ ಅಲ್ಲಿಂದ ಮುಂದುವರಿಸಬಹಬುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 25), ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ 27) ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ (ಹೋಟೆಲ್‌ಗಳು, ವಸತಿ ಗೃಹಗಳು ಮತ್ತು ಮದುವೆ ಸಭಾಂಗಣಗಳು) ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958ನ್ನು (1958ರ ಕರ್ನಾಟಕ ಅಧಿನಿಯಮ 30), ತಿದ್ದುಪಡಿ ಮಾಡುವುದು ಮತ್ತು ಬಜೆಟ್ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯವೆಂದು ಭಾವಿಸಲಾಗಿದೆ. ತತ್ಪರಿಣಾಮವಾದ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನ ಕ್ರಮದಿಂದ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಸಿದ್ಧರಾಮಯ್ಯ
ಉಪ ಮುಖ್ಯಮಂತ್ರಿಗಳು

ಯಾಕೂಬ್ ಹುದೀಫ್
ಕಾರ್ಯದರ್ಶಿ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ

ಖಂಡ 3 : ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ, 1957ರ 15ನೇ ಪ್ರಕರಣವು, ನಷ್ಟಕ್ಕೆ ಸಂಬಂಧಿಸಿದಂತೆ ಸಂದರ್ಭಾನುಸಾರ ವರಮಾನ ತೆರಿಗೆಯ ಅಸಿಸ್ಟೆಂಟ್ ಕಮೀಷನರ್ ಅಥವಾ ಕೃಷಿ ವರಮಾನ ತೆರಿಗೆಯ ಡೆಪ್ಯುಟಿ ಕಮೀಷನರ್ ಮುಂದೆ ಸಲ್ಲಿಸಲಾದ ವಿವರಪಟ್ಟಿಗೆ ಸಂಬಂಧಿಸಿದ ನಮೂನೆ ಮತ್ತು ಕಾರ್ಯವಿಧಾನ ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸುವ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 6 : ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ 18-ಎ ಪ್ರಕರಣದ (3-ಎ) ಮತ್ತು (3-ಎಫ್) ಉಪ-ಪ್ರಕರಣಗಳಲ್ಲಿ,

(i) ಘೋಷಣೆಯಲ್ಲಿ ಒಳಗೊಂಡಿರಬೇಕಾದ ವಿವರಗಳ ಸಂಬಂಧದಲ್ಲಿ,

(ii) ಚೆಕ್‌ಪೋಸ್ಟ್‌ನ ಪ್ರಭಾರದಲ್ಲಿರುವ ಅಧಿಕಾರಿಯು ಮುಂಗಾಣಿಸಬಹುದಾದ ಮತ್ತಷ್ಟು ಘಟನಾವಳಿಗಳಿಗೆ ಸಂಬಂಧಿಸಿದ ಷರತ್ತುಗಳು ಮತ್ತು ವಿಧಾನದ ಬಗ್ಗೆ ಉಪಬಂಧ ಕಲ್ಪಿಸಲು

- ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಅನುಬಂಧ

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957

(1957ರ ಕರ್ನಾಟಕ ಅಧಿನಿಯಮ, 25)

ಉದ್ಧೃತ ಭಾಗ

2. ಪರಿಭಾಷೆಗಳು :- xx xx xx

(1)(ಸಿ) "ಕೃಷಿಯ ಉತ್ಪನ್ನ ಅಥವಾ ತೋಟಗಾರಿಕೆಯ ಉತ್ಪನ್ನ" ವು ಟೀ ಮತ್ತು ಕೇವಲ ಸ್ವಚ್ಛಗೊಳಿಸುವುದು, ವರ್ಗೀಕರಿಸುವುದು, ವಿಂಗಡಿಸುವುದು ಅಥವಾ ಒಣಗಿಸುವುದನ್ನು ಹೊರತುಪಡಿಸಿ, ಬಳಕೆಗೆ ಯೋಗ್ಯಗೊಳಿಸುವುದಕ್ಕಾಗಿ ಯಾವುದೇ ಭೌತಿಕ, ರಾಸಾಯನಿಕ ಅಥವಾ ಇತರ ಸಂಸ್ಕರಣೆಗೆ ಒಳಪಡಿಸಲಾದಂಥ ಉತ್ಪನ್ನವನ್ನು ಒಳಗೊಳ್ಳುವುದಾಗಿ ಭಾವಿಸತಕ್ಕುದಲ್ಲ ;

(ಎಫ್ 1ಬಿ) "ಬ್ರಾಂಡ್ ಹೆಸರು" ಎಂದರೆ, ವ್ಯಾಪಾರ ಮತ್ತು ವ್ಯಾಪಾರ ಗುರುತು ಅಧಿನಿಯಮ 1958 (1958 ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೋಂದಾಯಿತವಾದ ಹೆಸರು ಅಥವಾ ವ್ಯಾಪಾರ ಗುರುತು.

xx xx xx

(ಕೆ) ಖಂಡಕ್ಕೆ ಹೊರತುಪಡಿಸಿ :- ಪರಂತು, ಕೃಷಿಕನು ಒಂದು ಕಂಪನಿಯಾಗಿರುವಲ್ಲಿ ಮತ್ತು ಅದು ಸ್ವತಃ ನೇರವಾಗಿ ಅಥವಾ ಇತರ ರೀತಿಯಲ್ಲಿ ಸಾಗುವಳಿ ಮಾಡಿದ ಭೂಮಿಯಲ್ಲಿ ಬೆಳೆದ, ಮೇಣಸು, ಯಾಲಕ್ಕಿ, ರಬ್ಬರ್ ಅಥವಾ ಕಾಫಿಯನ್ನು ಮಾರಾಟ ಮಾಡುತ್ತಿದ್ದಲ್ಲಿ, ಅಂಥ ಕಂಪನಿಯನ್ನು, ಅಂಥ ಉತ್ಪನ್ನದ ಮಾರಾಟಕ್ಕೆ ಸಂಬಂಧಿಸಿದಂತೆ ವಹಿವಾಟಿನ ಸಂಬಂಧದಲ್ಲಿ ವ್ಯಾಪಾರಿಯೆಂದು ಭಾವಿಸತಕ್ಕದ್ದು.

5. ಸರಕುಗಳ ಮಾರಾಟ ಅಥವಾ ಖರೀದಿಯ ಮೇಲೆ ತೆರಿಗೆ ವಿಧಿಸುವುದು.-

xx xx xx

(3)ನೇ ಉಪ ಪ್ರಕರಣದ (ಎ) ಖಂಡಕ್ಕೆ ಮೂರನೇ ಪರಂತುಕ:- ಮತ್ತು ಪರಂತು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳನ್ನು ವ್ಯಾಪಾರ ಮತ್ತು ವ್ಯಾಪಾರಿ ಗುರುತುಗಳು ಅಧಿನಿಯಮ 1958ರ (1957ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ನೋಂದಾಯಿಸಲಾದ ಯಾವನೇ ಇತರ ವ್ಯಾಪಾರಿಯ ಹೆಸರನ್ನು ಅಥವಾ ಟ್ರೇಡ್ ಮಾರ್ಕ್‌ನೊಡನೆ ಉತ್ಪಾದಿಸಲಾಗಿದ್ದಲ್ಲಿ ಅಥವಾ ತಯಾರಿಸಲಾಗಿದ್ದಲ್ಲಿ. xx xx

12.ಬಿ. ಮುಂಗಡವಾಗಿ ತೆರಿಗೆಯ ಸಂದಾಯ .-

xx xx xx

(4) ಯಾವೊಬ್ಬ ವ್ಯಾಪಾರಿಯು, ಯಾವುದೇ ತಿಂಗಳಿಗಾಗಿ ಅಥವಾ ತ್ರೈಮಾಸಿಕಕ್ಕಾಗಿ ಅಥವಾ ಸರಾಸರಿ ಒಂದು ವರ್ಷಕ್ಕಾಗಿ ಮುಂಗಡವಾಗಿ ಸಂದಾಯ ಮಾಡಿದ ತೆರಿಗೆ ಮೊಬಲಗು ಸಂದರ್ಭಾನುಸಾರ ಆ ತಿಂಗಳಿಗಾಗಿ ಅಥವಾ ತ್ರೈಮಾಸಿಕಕ್ಕಾಗಿ ಅಥವಾ ವರ್ಷಕ್ಕಾಗಿ ತೆರಿಗೆಯು, ಅಂತಿಮವಾಗಿ ತೆರಿಗೆ ನಿರ್ಧಾರ ಮಾಡಲಾದಂತೆ, ಸಂದಾಯ ಮಾಡತಕ್ಕ ತೆರಿಗೆಗೆ ಶೇಕಡಾ ಹದಿನೈದಕ್ಕಿಂತ ಹೆಚ್ಚು ಕಡಿಮೆಯಾಗಿದೆ ಎಂದು ವರ್ತದ ಕೊನೆಯಲ್ಲಿ ಕಂಡುಬಂದರೆ, ತೆರಿಗೆ ನಿರ್ಧಾರಣೆ ಪ್ರಾಧಿಕಾರಿಯು, ಅಂಥ ವ್ಯಾಪಾರಿಯು ತೆರಿಗೆಗೆ ಹೆಚ್ಚಿಗೆಯಾಗಿ ದಂಡ ರೂಪದಲ್ಲಿ, ಸಂದರ್ಭಾನುಸಾರ ಆ ತಿಂಗಳಿಗಾಗಿ ಅಥವಾ ತ್ರೈಮಾಸಿಕಕ್ಕಾಗಿ ಅಥವಾ ಇಡೀ ವರ್ಷಕ್ಕಾಗಿ ಸಂದಾಯ ಮಾಡತಕ್ಕ ತೆರಿಗೆಗೆ ಹಾಗೆ ಕಡಿಮೆಯಾಗಿರುವ ಎಷ್ಟು ತೆರಿಗೆಯ ಮೊಬಲಗಿನ ಒಂದೂವರೆ ಪಟ್ಟಿಗೆ ಮೀರದಂತೆ, ತೆರಿಗೆಯನ್ನು ಸಂದಾಯ ಮಾಡುವಂತೆ ನಿರ್ದೇಶಿಸಬಹುದು.

17. **ತೆರಿಗೆಯ ಬಗ್ಗೆ ರಾಜಿ .-** xx xx

xx xx xx

(4) (i) (1) ರಿಂದ (3)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನಿಯಮಿಸಬಹುದಾದಂತಹ ಷರತ್ತುಗಳಿಗೆ ಒಳಪಟ್ಟು ಮತ್ತು ಅಂತಹ ಸಂದರ್ಭಗಳಲ್ಲಿ ಆ ಪ್ರದೇಶದ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು, ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ಕ್ರಮದಲ್ಲಿ ಅವನು ಖರೀದಿಸಿದ ಸರಕುಗಳನ್ನು ಮರು ಮಾರಾಟ ಮಾಡುವುದರಲ್ಲಿ ತೊಡಗಿರುವ, ಹೋಟೆಲು ನಡೆಸುವವನನ್ನು ಅಥವಾ ಉಪಹಾರ ಗೃಹವನ್ನು ನಡೆಸುವವನನ್ನು ಹೊರತುಪಡಿಸಿ ಇತರ ಹೋಟೆಲು ನಡೆಸುವವನು ಅಥವಾ ಉಪಹಾರ ಗೃಹವನ್ನು ನಡೆಸುವವನು ಅಥವಾ ಎಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಮೀರದ ವಹಿವಾಟು ನಡೆಸುತ್ತಿರುವ, ಬೀರ್ ಒಳಗೊಂಡಂತೆ ಮದ್ಯದ ಮಾರಾಟ ಮಾಡುವಲ್ಲಿ ತೊಡಗಿದ ಒಬ್ಬ ವ್ಯಾಪಾರಿಯು xx xx

19.ಎಎ. **ಇತರ ಸಂದರ್ಭಗಳಲ್ಲಿ ಮೂಲದಲ್ಲಿ ತೆರಿಗೆ ಕಡಿತ ಮಾಡಿಕೊಳ್ಳುವುದು .-**

xx xx xx

(ಬಿ) ಈ ಉಪ ಪ್ರಕರಣದಲ್ಲಿ ಹೇಳಿದ ಪ್ರಾಧಿಕಾರಗಳು ಯಾವುವೇ ಖರೀದಿಗಳನ್ನು ಮಾಡಿದ್ದರೆ, ಸದರಿ ಸರಕುಗಳು ತೆರಿಗೆಯಿಂದ ವಿನಾಯಿತಿಗೊಳಿಸಲ್ಪಟ್ಟ ಕಾರಣದಿಂದಾಗಲಿ ಅಥವಾ ಮೊದಲಿನ ಮಾರಾಟಗಾರನಿಂದ ತೆರಿಗೆಗೆ ಈಗಾಗಲೇ ಸದರಿ ಸರಕುಗಳು ಗುರಿಯಾಗಿದ್ದವೆಂಬ ಕಾರಣದಿಂದ ವ್ಯಾಪಾರಿಯು ತೆರಿಗೆಗೆ ಬದ್ಧನಾಗಿಲ್ಲದಿದ್ದರೆ, ತೆರಿಗೆಗೆ ಬದ್ಧನಾಗತಕ್ಕದ್ದಲ್ಲ ಮತ್ತು ವ್ಯಾಪಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಈ ಪ್ರದೇಶದ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ಹಾಗೆಂದು ಪ್ರಮಾಣೀಕರಿಸಿದ್ದರೆ, ಈ ಉಪ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಂದು ಅರ್ಜಿಯನ್ನು, ಮೇಲ್ಕಂಡಂತೆ ಸಂದರ್ಭಾನುಸಾರ ಪ್ರಮಾಣ ಪತ್ರವನ್ನು ನೀಡುವ ಮೂಲಕ ಅಥವಾ ವ್ಯಾಪಾರಿಯು ಅಂಥ ಪ್ರಮಾಣ ಪತ್ರ ನೀಡಿಕೆಗೆ ಅರ್ಹನಾಗಿಲ್ಲವೆಂಬುದನ್ನು ತಿಳಿಸುವ ಮೂಲಕ ಅದನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ವಿಲೇ ಮಾಡತಕ್ಕದ್ದು.

20. ಅಪೀಲುಗಳು.- (1) ಯಾವನೇ ವ್ಯಕ್ತಿಯು,-

(i) ವಾಣಿಜ್ಯ ತೆರಿಗೆ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ, ಅವನಿಗೆ ಬಾಧಕವಾಗುವ ಆದೇಶವನ್ನು ಆಕ್ಷೇಪಿಸುವ ಯಾವನೇ ವ್ಯಕ್ತಿಯು ; ಮತ್ತು

(ii) ವಾಣಿಜ್ಯ ತೆರಿಗೆಗಳ ಸಹಾಯಕ ಕಮೀಷನರನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ, ಭಾಧಕವಾಗುವ ಆದೇಶವನ್ನು ಆಕ್ಷೇಪಿಸುವ ಯಾವನೇ ವ್ಯಕ್ತಿಯು ಜಂಟಿ ಕಮೀಷನರನಿಗೆ ಅಪೀಲನ್ನು ಮಾಡಿಕೊಳ್ಳಬಹುದು.

21. ಡೆಪ್ಯುಟಿ ಕಮೀಷನರ್‌ಗಳ ಮತ್ತು ಜಂಟಿ ಕಮೀಷನರ್‌ಗಳ ಪುನರೀಕ್ಷಣ ಅಧಿಕಾರಗಳು .- (1) ಡೆಪ್ಯುಟಿ ಕಮೀಷನರನು ತಾನಾಗಿಯೇ, ಅವನಿಗೆ ಅಧೀನನಾದ ವಾಣಿಜ್ಯ ತೆರಿಗೆ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಆದೇಶದ ಅಥವಾ ದಾಖಲು ಮಾಡಿದ ವ್ಯವಹರಣೆಯ ದಾಖಲೆಯನ್ನು ಅದು ರಾಜಸ್ವದ ಹಿತಾಸಕ್ತಿಗೆ ಬಾಧಕವಾಗಿರುವಷ್ಟರ ಮಟ್ಟಿಗೆ ಅಂಥ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಅಥವಾ ಅಂಥ ವ್ಯವಹರಣೆಯ ಕ್ರಮಬದ್ಧತೆಯ ಬಗ್ಗೆ ಅವನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಅವನು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು.

(2) ಜಂಟಿ ಕಮೀಷನರನು ತಾನಾಗಿಯೇ ಅವನಿಗೆ ಅಧೀನನಾದ ವಾಣಿಜ್ಯ ತೆರಿಗೆ ಸಹಾಯಕ ಕಮೀಷನರನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಆದೇಶ ಅಥವಾ ದಾಖಲಿಸಿದ ವ್ಯವಹರಣೆಯ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು.

xx xx xx

ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ 'ದಾಖಲೆಗಳು' ಎಂಬುದು ಉಪ ಕಮೀಷನರನು ಅಥವಾ ಜಂಟಿ ಕಮೀಷನರನು ಪರೀಕ್ಷಿಸುವ ಸಮಯದಲ್ಲಿ ದೊರೆಯುವ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಒಳಗೊಂಡಿರತಕ್ಕದ್ದು.

22ಎ. ಕಮೀಷನರ್ ಮತ್ತು ಅಡಿಷನಲ್ ಕಮೀಷನರುಗಳ ಪುನರೀಕ್ಷಣಾ ಅಧಿಕಾರಗಳು.- (1) xx

xx xx xx

(3ಬಿ) 22ನೇ ಪ್ರಕರಣದ ಅಡಿ ಅಥವಾ ಉಚ್ಚ ನ್ಯಾಯಾಲಯದ ಪುನರೀಕ್ಷಣ ಆದೇಶಗಳಿಗೆ ವಸ್ತು ವಿಷಯವಾಗಿರುವ ಆದೇಶದ ಮೇಲ್ಮನವಿ ; ಅಥವಾ

22ಬಿ. ಕೆಲವು ವ್ಯವಹರಣೆಗಳ ಸಂಬಂಧದಲ್ಲಿ ಆದೇಶಗಳನ್ನು ಹೊರಡಿಸುವುದಕ್ಕೆ ಸಂಬಂಧಪಟ್ಟಂತೆ ಪರಿಮಿತಿ .- (1) 12ಎ, 21 ಮತ್ತು 22ಎ ಪ್ರಕರಣಗಳಲ್ಲಿ ಏನೇ ಇದ್ದರೂ, 12ಎ ಪ್ರಕರಣದ ಅಡಿ ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸಿದ್ದರೆ ಅಥವಾ 21 ಅಥವಾ 22ಎ ಪ್ರಕರಣಗಳ ಅಡಿ ಯಾವುದೇ ದಾಖಲೆಗಳನ್ನು ತರುವಂತೆ ಕರೆ ನೀಡಿದರೆ, ಸಂದರ್ಭಾನುಸಾರ ಅಂಥ ವ್ಯವಹರಣೆಗಳನ್ನು ಪ್ರಾರಂಭಿಸಿದ ಅಥವಾ ದಾಖಲೆಗಳನ್ನು ತರುವಂತೆ ಕರೆ ಕಳುಹಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗಾಗಿ ಪ್ರಾಧಿಕಾರಗಳು ಸದರಿ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಆದೇಶಗಳನ್ನು ಹೊರಡಿಸತಕ್ಕದ್ದು :

ಪರಂತು, ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭಕ್ಕೆ ಮೊದಲು ಪ್ರಾರಂಭಿಸಲಾದ ವ್ಯವಹರಣೆ ಅಥವಾ ಕೋರಲಾದ ದಾಖಲೆಗಳ ಸಂಬಂಧದಲ್ಲಿ, ಹಾಗೆ ಅಧಿನಿಯಮವು ಪ್ರಾರಂಭವಾದಂದಿನಿಂದ ಎರಡು ವರ್ಷಗಳ ಅವಧಿಯೊಳಗಾಗಿ ಆದೇಶಗಳನ್ನು ಹೊರಡಿಸತಕ್ಕದ್ದು.

28ಎ. ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ತಪಾಸಣೆ ಮತ್ತು ಸಾಗಣೆಯಲ್ಲಿ ಇರುವಾಗ ಸರಕುಗಳ ತಪಾಸಣೆ .- (1) xx xx

xx xx xx

(7)(ಎ) ಈ ಪ್ರಕರಣದ ಮೇರೆಗೆ ದಂಡವನ್ನು ವಿಧಿಸುವುದರಿಂದ ಬಾಧಿತನಾದ ವ್ಯಕ್ತಿಯು,

(i) ವಾಣಿಜ್ಯ ತೆರಿಗೆಗಳ ಡೆಪ್ಯುಟಿ ಕಮಿಷನರ್ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಕಮಿಷನರನು ದಂಡವನ್ನು ವಿಧಿಸಿದಾಗ ಆ ಪ್ರದೇಶದ ವಾಣಿಜ್ಯ ತೆರಿಗೆಗಳ ಜಂಟಿ ಕಮಿಷನರನಿಗೆ ಮತ್ತು

(ii) ಇತರ ಸಂದರ್ಭಗಳಲ್ಲಿ ವಾಣಿಜ್ಯ ತೆರಿಗೆಗಳ ಸಂಬಂಧಿಸಿದ ಪ್ರದೇಶದ ಡೆಪ್ಯುಟಿ ಕಮಿಷನರಿಗೆ

ಅವನಿಗೆ ದಂಡದ ನೋಟೀಸನ್ನು ನೀಡಿದ ಮೂವತ್ತು ದಿನಗಳ ಒಳಗೆ ಅಪೀಲು ಮಾಡಿಕೊಳ್ಳಬಹುದು.

29. ಅಪರಾಧಗಳು ಮತ್ತು ದಂಡನೆಗಳು.- (1) xx xx

(ಎ) xx xx

(ಬಿ) xx xx

(ಸಿ) xx xx

(ಡಿ) xx xx

(ಇ) xx xx

(ಎಫ್) xx xx

ದೋಷಸಿದ್ಧಿಯಾದ ಮೇಲೆ ಐದು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡನೆಗೆ ಬದ್ಧರಾಗಿರತಕ್ಕದ್ದು.

5(3) (ಎ) ಪ್ರಕರಣದ ಮೇರೆಗೆ ರಾಜ್ಯದಲ್ಲಿ ಮೊದಲನೇ ಆಥವಾ ಕ್ರಮಾನುಗತ ವ್ಯವಹಾರಿಗಳಲ್ಲಿ ಅತಿ ಮುಂಚಿನವನ ಮೇಲೆ ಯಾವ ಸರಕುಗಳ ಮಾರಾಟದ ಮೇಲೆ ಏಕ ಹಂತ ತೆರಿಗೆಯನ್ನು ವಿಧಿಸಬಹುದೋ ಆ ಸರಕುಗಳು :-

ಕ್ರಮ ಸಂಖ್ಯೆ	ಸರಕುಗಳ ವಿವರಣೆ	ತೆರಿಗೆಯ ದರ
1	2	3
1.	ಗೋಂದು, ಗ್ಲೂ ಮತ್ತು ರೆಸಿನ್ ಸೇರಿದಂತೆ ಎಲ್ಲಾ ರೀತಿಯ ಅಂಟುಗಳು	ಶೇಕಡಾ ಹತ್ತು
	ಭಾಗ ಬಿ	
11.	ಚಿಪ್ಪು-ಬೆಳ್ಳಿ ಮತ್ತು ಸಾಣ್ಯಗಳು	ಶೇಕಡಾ ಒಂದು
	ಭಾಗ ಇ	
1.	ಐದನೇ ಅನುಸೂಚಿಯ ಕ್ರಮಸಂಖ್ಯೆ 28ರ ಅಡಿಯಲ್ಲಿ ಬರುವ ಖಾದ್ಯ ತೈಲವನ್ನು ಹೊರತುಪಡಿಸಿ ಖಾದ್ಯ ತೈಲಗಳು	
	(i) ಸಾನ್ ರಿಫೈಂಡ್	ಶೇಕಡಾ ಎರಡು
	(ii) ರಿಫೈಂಡ್	ಶೇಕಡಾ ಎರಡು
	(iii) ಹೈಡ್ರೋಜನೇಟೆಡ್ ಎಣ್ಣೆಗಳು ಮತ್ತು ಕುಂಕ್ಕಿಂಗ್ ಮೀಡಿಯಂ	ಶೇಕಡಾ ನಾಲ್ಕು
	ಭಾಗ ಎಫ್	
	xx xx xx	
10ಎ.	ಅರಣ್ಯ ಉತ್ಪನ್ನಗಳು ಎಂದರೆ, ನಕ್ಷವಾಮಿಕಾ, ರೀಟಾ, ಸೀಗೆಕಾಯಿ, ಅಂಟುವಾಳ	ಶೇಕಡಾ ನಾಲ್ಕು
11	ಪಾರಂಪರಿಕ ವಾಲೀಕುಗಳು	ಶೇಕಡಾ ಹತ್ತು
	ಭಾಗ ಜಿ	
	xx xx xx	
1.	ಗಾಜಿನ ಪೀಠೆಗಳು, ಟೇಬಲು ಮತ್ತು ಗಾಜಿನ ಗೃಹ ಬಳಕೆಯ ವಸ್ತುಗಳನ್ನು ಹೊರತುಪಡಿಸಿ, ಗಾಜಿನ ಪೀಠೆಗಳು ಮತ್ತು ಎಲ್ಲಾ ವಸ್ತುಗಳು	ಶೇಕಡಾ ಹತ್ತು

1	2	3
	ಭಾಗ ಹೆಚ್	
1.	ಕಬ್ಬಿಣದ ಸಾಮಾನುಗಳು, ಎಂದರೆ,- (i) ಮೂಲ ಲೋಹ ಅಥವಾ ಅವುಗಳ ಮಿಶ್ರ ಲೋಹಗಳಿಂದ ತಯಾರಿಸಿದ ಬೋಲ್ಟುಗಳು, ಡೋಲ್ಟನ್‌ಗಳು ನಟ್ಟುಗಳು, ರಿವಿಟ್‌ಗಳು, ಹಿಂಜ್‌ಗಳು, ಸ್ಕ್ರೂಗಳು, ಸ್ಕ್ರೂಹುಕ್‌ಗಳು, ಸ್ಕ್ರೂರಿಂಗ್‌ಗಳು, ಸ್ಕ್ರೂ ಸ್ಟಡ್ಡಿಂಗ್‌ಗಳು, ಸೆಲ್ಫ್ ಟ್ಯಾಪಿಡ್ ಸ್ಕ್ರೂಗಳು, ಡೋರ್ ಕ್ಲೋಸರ್‌ಗಳು, ಚಕ್ರಗಳು, ಬ್ಲಾಕುಗಳು, ಕ್ಲಾಂಪುಗಳು, ಗನ್‌ಮೆಟಲ್ ಫಿಟಿಂಗ್‌ಗಳು, ವರದಿಯ ಸಲಾಕಿಗಳು, ರುಬ್ಬುವ ಕಲ್ಲುಗಳು, ಬೀಗ ಮತ್ತು ಎಲ್ಲಾ ರೀತಿಯ ಬೀಗದ ಕೈಗಳು ವಾಶರ್‌ಗಳು, ಸ್ಪ್ರಿಂಗ್‌ಗಳು, ಸ್ಪ್ರಿಂಗ್ ವಾಶರ್‌ಗಳು, ಪ್ಯಾನಲ್ ಪಿನ್ನುಗಳು, ಗ್ಲಾಸ್ ಉಲ್, ಸ್ಟೀಲ್ ಉಲ್, ಅಬ್ರೆಸೀವ್ಸ್, ಮೊಳೆಗಳು, ತಂತಿ ಮೊಳೆಗಳು.	ಶೇಕಡಾ ಹತ್ತು
	ಭಾಗ ಓ	
3.	ಆಪ್ಟಿಕಲ್ ವಸ್ತುಗಳು, ಎಂದರೆ,- (i) ಬೈನಾಕ್ಯುಲರ್‌ಗಳ, ಅಪೇರಾ ಗ್ಲಾಸ್‌ಗಳು, ಟೆಲಿಸ್ಕೋಪ್‌ಗಳು ಮೈಕ್ರೋಸ್ಕೋಪ್‌ಗಳು ಮತ್ತು ಅವುಗಳಿಗೆ ಸಂಬಂಧಿಸಿದ ಭಾಗಗಳು ಮತ್ತು ಬಿಡಿ ಭಾಗಗಳು	ಶೇಕಡಾ ಹತ್ತು
	ಭಾಗ ಪಿ	
1.	(i) ವೈಟುಗಳು, ಬಣ್ಣಗಳು, ವಾರ್ನಿಶಗಳು, ಪಿಗ್ಮೆಟುಗಳು, ಪಾಲಿಶ್‌ಗಳು, ಇಂಡಿಗೋ, ಎನಾಮಲ್, ಪಟ್ಟಿ, ಬೇಲ್‌ಆಯಿಲ್, ವೈಟ್ ಆಯಿಲ್, ಟರ್‌ಪೆಂಟೈನ್ (ಎಲ್ಲಾ ವಿಧಾವಾದ), ಥಿನ್ನರ್‌ಗಳು, ಮತ್ತು ಕೆಳಕಂಡ ಬಾಬು (ii)ರ ಅಡಿಯಲ್ಲಿ ಒಳಗೊಂಡವುಗಳನ್ನು ಹೊರತುಪಡಿಸಿ ಪೈಮರುಗಳು	ಶೇಕಡಾ ಹತ್ತು
	xx xx xx	
6.	ಪೈಪುಗಳು, ಟ್ಯೂಬ್‌ಗಳು ಮತ್ತು ಕಬ್ಬಿಣದ ಜೋಡಣೆಗಳು (ನಾಲ್ಕನೇ ಅನುಸೂಚಿಯಲ್ಲಿ ಅಡಿಯಲ್ಲಿ ಒಳಗೊಳ್ಳದ) ಸಿಮೆಂಟು, ಸ್ಪೋನ್‌ವೇರ್ ಮತ್ತು ಆ್ಯಸ್‌ಬೆಸ್ಟಾಸ್‌ಗಳು	ಶೇಕಡಾ ಹತ್ತು
	ಭಾಗ ಎಸ್	
1.	ಮರಳು	ಶೇಕಡಾ ನಾಲ್ಕು
	xx xx xx xx	
4.	ಸ್ಯಾನಿಟರಿ ಟವಲ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು, ಬೆಲ್ಟ್‌ರಹಿತ ನ್ಯಾಪ್‌ಕಿನ್‌ಗಳು ಮತ್ತು ಟಾಂಪೋನ್‌ಗಳು	ಶೇಕಡಾ ಹತ್ತು
	xx xx xx xx	

1	2	3
9.	(iv) ಡಿಟರ್‌ಜಂಟ್ ಕೇಕ್‌ಗಳು, ಡಿಟರ್‌ಜೆಂಟ್ ಪೌಡರ್‌ಗಳು, ಡಿಟರ್‌ಜಂಟ್ ಲಿಕ್ವಿಡ್‌ಗಳು ಮತ್ತು ಲಾಂಡ್ರಿ ಬ್ಲೆಟ್‌ನರ್‌ಗಳು	ಶೇಕಡಾ ಹತ್ತು
	xx xx xx xx	
18.	ಸ್ಪವ್‌ಗಳು, ಎಂದರೆ, ಗ್ಯಾಸ್‌ಸ್ಟವ್‌ಗಳು ಮತ್ತು ಸೀಮೆಎಣ್ಣೆ ಸ್ಟವ್‌ಗಳು ಮತ್ತು ಅವುಗಳಿಗೆ ಸಂಬಂಧಿಸಿದ ಭಾಗಗಳು ಮತ್ತು ಬಿಡಿ ಭಾಗಗಳು	ಶೇಕಡಾ ಹತ್ತು
	xx xx xx xx	
21.	ಸರ್ಜಿಕಲ್ ಮತ್ತು ದಂತ ಚಿಕಿತ್ಸಾ ಸಾಧನ ಸಲಕರಣೆಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳೂ ಒಳಗೊಂಡಂತೆ ಟೂಲ್‌ಗಳು ಮತ್ತು ಎಡ್ಜ್‌ಗಳು ಮತ್ತು ಯಂತ್ರೋಪ ಸಾಧನಗಳು, ಸಿರಂಜುಗಳು ಮತ್ತು ಸೂಜಿಗಳು, ಶಸ್ತ್ರ ಚಿಕಿತ್ಸಾ ಕೊಠಡಿಯ ಸಲಕರಣೆಗಳು, ನೆರಳುಸಹಿತ ಬಲ್ಬುಗಳು ಮತ್ತು ಟ್ಯೂಬ್‌ಗಳು, ಶಸ್ತ್ರಚಿಕಿತ್ಸೆಗಾಗಿ ಮತ್ತು ಪರೀಕ್ಷೆಗಳನ್ನು ನಡೆಸಲು ವಿಶೇಷವಾಗಿ ತಯಾರಿಸಲಾದ ಟೇಬಲ್‌ಗಳು ಮತ್ತು ಕ್ವಾರಟ್‌ಗಳು ಮತ್ತು ಸಕ್ಷನ್ ಸಾಧನಗಳು, ಸ್ಟಾಂಡ್‌ಗಳು, ಸ್ಟೆಚರ್‌ಗಳು, ಟ್ರಾಲಿಗಳು, ದಂತಚಿಕಿತ್ಸಾ ಕುರ್ಚಿಗಳು, ಪ್ರಯೋಗಶಾಲಾ ಸಲಕರಣಗಳು, ಬಿ.ಪಿ. ಸಲಕರಣೆಗಳು, ಸರ್ಜಿಕಲ್ ಕಾಟನ್‌ವಾಲ್, ಎನಿಮಾ ಹ್ಯಾನ್‌ಗಳು, ಬೆಡ್‌ಪ್ಯಾನ್‌ಗಳು, ಕಿಡ್ನಿ ಟ್ರೆಯಾಸ್‌ಗಳು ಮತ್ತು ಅಂಥ ಇತರ ಆಸ್ಪತ್ರೆ ಸಾಮಾನುಗಳು, ಸರ್ಜಿಕಲ್ ಗ್ಲೋವ್‌ಗಳು, ಆಪ್ರನ್ಸ್‌ಗಳು, ಶಸ್ತ್ರ ಚಿಕಿತ್ಸಾ ಸೂಟ್‌ಗಳು, ರಬ್ಬರ್ ಶೀಟ್‌ಗಳು, ಕ್ಯಾತಟರ್‌ಗಳು, ಐ.ವಿ. ಸೆಟ್‌ಗಳು ಮತ್ತು ಅಂಥವೇ ವಸ್ತುಗಳು, ಸಿರಿಪಿಕಲ್ಲಾರ್‌ಗಳು, ಸೊಂಟದ ಪಟ್ಟಿಗಳು (ಅಬ್ಡೋಮಿನಲ್ ಬೆಲ್ಟ್‌ಗಳು) ಮತ್ತು ಅಂಥವೇ ವಸ್ತುಗಳು	ಶೇಕಡಾ ಹತ್ತು
	ಭಾಗ ಟ	
	xx xx xx xx	
1-ಎ	ಟೈಲರಿಂಗ್ ಸಾಮಗ್ರಿಗಳು ಎಂದರೆ, ಸೂಜಿಗಳು, ಕತ್ತರಿಗಳು, ಹುಕ್‌ಗಳು, ಗುಂಡಿಗಳು, ಜಿಪ್‌ಗಳು, ಬಕಲ್‌ಗಳು, ಅಳತೆ ಪಟ್ಟಿ ಮತ್ತು ಕಡ್ಡಿ, ಕಾಲರ್ ಮತ್ತು ಕಾಲರ್ ಬೋನ್‌ಗಳು	ಶೇಕಡಾ ನಾಲ್ಕು
	xx xx xx xx	
5.	ಚಹಾ	ಶೇಕಡಾ ಹತ್ತು
	xx xx xx xx	
10ಎ	ಸ್ಪಾನರ್‌ಗಳು, ಸ್ಕ್ರೂಡ್ರೈವರ್‌ಗಳು, ಪ್ಲೈಯರ್ಸ್, ಕಟಿಂಗ್ ಪ್ಲೈಯರ್‌ಗಳು, ಸುತ್ತಿಗೆಗಳು ಮತ್ತು ಅದೇ ರೀತಿಯ ಅಂತಹ ಉಪಕರಣಗಳು (ಕೈಯಿಂದ ನಡೆಸುವ)	ಶೇಕಡಾ ಹತ್ತು

1	2	3
	ಭಾಗ ಮಟ್ಟಿಗೆ	
	xx xx xx xx	
4ಎ	ಫೈಬರ್ ಗ್ಲಾಸ್, ಪ್ಲಾಸ್ಟಿಕ್ ಅಥವಾ ಸಿಂಥಟಿಕ್ ವಸ್ತುವಿನಿಂದ ಮಾಡಲಾದ ನೀರು ಸಂಗ್ರಹಣಾ ಟ್ಯಾಂಕ್‌ಗಳು	ಶೇಕಡಾ ಹತ್ತು
7.	ಸೌದೆ. ನೀಲಗಿರಿ, ಸರ್ವೆಮರವನ್ನೊಳಗೊಂಡ ಎಲ್ಲಾ ರೀತಿಯ ಮರಗಳು, ಬಾಗಿಲು ಚೌಕಟ್ಟುಗಳು, ಕಿಟಕಿ ಚೌಕಟ್ಟುಗಳು ಮತ್ತು ಬಾಗಿಲುಗಳನ್ನೊಳಗೊಂಡಿ ಯಾವುದೇ ಆಕಾರ, ನಮೂನೆ ಅಥವಾ ಗ್ರಾತದ ಚೌಬೀನೆ	ಶೇಕಡಾ ಹತ್ತು

ಸಾಲನೇ ಅನುಸೂಚಿ

ಯಾವ ಸರಕುಗಳಿಗೆ ಸಂಬಂಧಿಸಿದಂತೆ 5 (4)ನೇ ಪ್ರಕರಣದ ಮೇರೆಗೆ ಏಕರೂಪ ತೆರಿಗೆಯನ್ನು ವಿಧಿಸಬಹುದೋ ಆ ಘೋಷಿತ ಸರಕುಗಳು.

ಕ್ರಮ ಸಂ.	ಸರಕುಗಳ ವಿವರಣೆ	ವಿಧಿಸುವಿಕೆಯ ಹಂತ	ತೆರಿಗೆಯ ದರ
6.	ಹತ್ತಿ ಎಂದರೆ, ದೇಶಿಯ ಅಥವಾ ಆಮುದು ಮಾಡಿಕೊಂಡು ಜಿನ್ ಮಾಡಿರಲಿ, ಬೇಲ್ ಮಾಡಿರಲಿ ಪ್ರೆಸ್ ಮಾಡಿರುವ ಅಥವಾ ಬೇರೇ ರೀತಿಯಲ್ಲಿರುವ, ಅದರಿಂದ ತಯಾರಿಸಿದ ಎಲ್ಲಾ ಬಗೆಯ ಹತ್ತಿ. ಆದರೆ ಹತ್ತಿ ಜುಂಗನ್ನು ಒಳಗೊಂಡಿರವುದಿಲ್ಲ.	ಈ ಅಧಿನಿಯಮದ ಮೇರೆಗೆ ರಾಜ್ಯದಲ್ಲಿ ತೆರಿಗೆಗ ಹೊಣೆಗಾರನಾದ ಮೊದಲನೇ ಅಥವಾ ಕ್ರಮಾನುಗತ ಅತಿ ಮುಂಚಿನ ವ್ಯಾಪಾರಿಯಿಂದ ಏರೀದಿ	ಶೇಕಡಾ ನಾಲ್ಕು

ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದ 1957ರ (1957ರ ಕರ್ನಾಟಕ ಅಧಿನಿಯಮ 22) ರ ಉದ್ಧೃತ ಭಾಗ

xx xx xx

5-ಕ. ವಿಮಾ ಕಂತುಗಳು, ಭವಿಷ್ಯನಿಧಿ ಬಗ್ಗೆ ವಂತಿಗೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿನಾಯಿತಿ-(1)

(2) (iv) , ರಾಷ್ಟ್ರೀಯ ಉಳಿತಾಯ ಪತ್ರದ ಆರನೇ ಮಾಲಿಕೆಗೆ ಮತ್ತು ರಾಷ್ಟ್ರೀಯ ಉಳಿತಾಯ ಪತ್ರದ ಏಳನೇ ಮಾಲಿಕೆಗೆ ವಂತಿಗೆಯಾಗಿ.

xx xx xx

15. ನಷ್ಟವನ್ನು ಮುಂದಕ್ಕೆ ಒಯ್ಯುವುದು.-ಯಾವನೇ ವ್ಯಕ್ತಿಯು ಯಾವುದೇ ವರ್ಷದಲ್ಲಿ ಕೃಷಿ ಆದಾಯದಲ್ಲಿ ನಷ್ಟವನ್ನು ಅನುಭವಿಸಿದಲ್ಲಿ ಆ ನಷ್ಟವನ್ನು ಮುಂದಿನ ವರ್ಷಕ್ಕೆ ಒಯ್ಯತಕ್ಕದ್ದು ಮತ್ತು ಅದನ್ನು ಆ ವರ್ಷದ ಕೃಷಿ ಆದಾಯದ ಬಗ್ಗೆ ವಜಾವನ್ನು ಮಾಡತಕ್ಕದ್ದು ಮತ್ತು ಅದನ್ನು ಪೂರ್ಣವಾಗಿ ಹಾಗೆ ವಜಾವಟ್ಟು ಮಾಡಲಾಗದಿದ್ದರೆ ಹಾಗೆ ವಜಾವಟ್ಟು ಮಾಡಿಲ್ಲದ ನಷ್ಟದ ಮೊಬಲಗನ್ನು ಮುಂದಿನ ವರ್ಷಕ್ಕೆ ಒಯ್ಯತಕ್ಕದ್ದು ಮತ್ತು ಹಾಗೆಯೇ ಮಾಡಿಕೊಂಡು ಹೋಗತಕ್ಕದ್ದು. ಆದರೆ ಯಾವುದೇ ನಷ್ಟವನ್ನು ಆರು ವರ್ಷಗಳಿಗಿಂತ ಹೆಚ್ಚಾಗಿ ಮುಂದಕ್ಕೆ ಒಯ್ಯುತಕ್ಕದ್ದಲ್ಲ.

xx xx xx

66. ಕೃಷಿ ಆದಾಯ ತೆರಿಗೆಯ ರಾಜೆ.-(1) xx xx xx

ಪರಂತು, ಪ್ರತಿ ಎಕರೆಗೆ ಅಂಥ ಭೂಮಿಗೆ ಸಂಬಂಧಿಸಿದಂತೆ ಕಾಫಿಯ ಸರಾಸರಿ ಉತ್ಪತ್ತಿ 600 ಕಿಲೋಗ್ರಾಂಗಳನ್ನು ಮೀರಿದ್ದಲ್ಲಿ ಅಂತಹ ಹಿಡುವಳಿದಾರನು (1)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಒಂದೇ ಗಂಟಿನ ಜೊತೆಗೆ ಅಂತಹ ಹೆಚ್ಚು ಉತ್ಪತ್ತಿಯ ಪ್ರತಿ ಟನ್ನಿಗೆ 400 ರೂ.ಗಳ ದರದಲ್ಲಿ ಹೆಚ್ಚಿನ ಒಂದೇ ಗಂಟನ್ನು ಸಂದಾಯ ಮಾಡತಕ್ಕದ್ದು.

ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ (1979ರ ಕರ್ನಾಟಕ ಅಧಿನಿಯಮ 27) ಉದ್ಧೃತ ಭಾಗ

5. ವಿವರ ಪಟ್ಟಿಕೆಗಳು ಮತ್ತು ಕರ ನಿರ್ಧಾರಣೆ.- (1) xx xx xx

(2) xx xx xx

(3) xx xx xx

(4) xx xx xx

(5) xx xx xx

(6) ಯಾವುದೇ ವರ್ಷದ ಬಗ್ಗೆ ಈ ಪ್ರಕರಣದಡಿ ಯಾವ ಕರ ನಿರ್ಧಾರಣೆಯನ್ನು, ಆ ವರ್ಷದ ಬಗ್ಗೆ 5ನೇ ಪ್ರಕರಣದಡಿ ವಿವರಣ ಪಟ್ಟಿಕೆಯನ್ನು ಒಬ್ಬ ವ್ಯಾಪಾರಿಯು ಸಲ್ಲಿಸಲಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ತರುವಾಯ ಮಾಡತಕ್ಕದ್ದಲ್ಲ.

xx xx xx

11ಎ. ತೆರಿಗೆಯಿಂದ ವಿನಾಯಿತಿ ನೀಡಲು ಅಥವಾ ಕಡಿಮೆ ಮಾಡಲು ರಾಜ್ಯ ಸರ್ಕಾರದ ಅಧಿಕಾರ.-(1) ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿ ಸಂದಾಯ ಮಾಡತಕ್ಕ ತೆರಿಗೆಯಿಂದ ವಿನಾಯಿತಿ ಅಥವಾ ಕಡಿಮೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಭಾವಿಸಿದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ನಿರ್ಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಮತ್ತು ಅಂತಹ ಅವಧಿಯ ಬಗ್ಗೆ ಹಾಗೆ ಮಾಡಬಹುದು.

xx xx xx

15-ಬಿ. ಕೆಲವು ವ್ಯವಹರಣೆಗಳ ಸಂಬಂಧದಲ್ಲಿ ಆದೇಶಗಳನ್ನು ಹೊರಡಿಸುವ ಬಗ್ಗೆ ಇರುವ ಪರಿಮಿತಿ.-(1) 6ಮತ್ತು 15ನೇ ಪ್ರಕರಣದಲ್ಲಿ ಏನೇ ಇದ್ದರೂ 6ನೇ ಪ್ರಕರಣದಡಿ ಯಾವುದೇ ವ್ಯವಹರಣೆಯನ್ನು ಪ್ರಾರಂಭಿಸಿರುವಲ್ಲಿ ಅಥವಾ 15ನೇ ಪ್ರಕರಣದ ಅಡಿ ಯಾವುದೇ ದಾಖಲೆಗಳನ್ನು ಕೋರಿಕೊಂಡಿರುವಲ್ಲಿ ಸದರಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವು ಅಂತಹ ವ್ಯವಹರಣೆಗಳನ್ನು ಪ್ರಾರಂಭಿಸಲಾದ ಅಥವಾ ಸಂದರ್ಭಾನುಸಾರ ದಾಖಲೆಗಳನ್ನು ಕೋರಿದ ದಿನಾಂಕದಿಂದ 2 ವರ್ಷಗಳ ಅವಧಿಯೊಳಗೆ ಆದೇಶಗಳನ್ನು ಹೊರಡಿಸತಕ್ಕದ್ದು :

ಪರಂತು, ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ 1997ರ ಪ್ರಾರಂಭದ ದಿನಾಂಕಕ್ಕೆ ಮೊದಲು ಪ್ರಾರಂಭಿಸಲಾದ ವ್ಯವಹರಣೆಗಳು ಅಥವಾ ಕೋರಲಾದ ದಾಖಲೆಗಳ ಸಂಬಂಧದಲ್ಲಿ ಅಂತಹ ಪ್ರಾರಂಭದಿಂದ 2 ವರ್ಷಗಳ ಅವಧಿಯೊಳಗೆ ಆದೇಶಗಳನ್ನು ಹೊರಡಿಸತಕ್ಕದ್ದು.

ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿಗೃಹಗಳು) ಅಧಿನಿಯಮ, 1979ರ (1979ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಉದ್ಧೃತ ಭಾಗ

2. xx xx xx

(1-ಎ) xx xx xx

ವಿವರಣೆ:-ವಿವಾಹ ಸಭಾಂಗಣಕ್ಕಾಗಿ ಯಾವುದೇ ಚಾರ್ಜುಗಳನ್ನು ವಿಧಿಸಲಾಗಿದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅಂತಹ ಪ್ರಶ್ನೆಯನ್ನು ರಾಜ್ಯ ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

xx xx xx

(5-ಬಿ) "ವಿವಾಹ ಸಭಾಂಗಣ (ಹಾಲ್)" ಎಂದರೆ ವಿವಾಹ ಅಥವಾ ಆರತಕ್ಷತೆ ಅಥವಾ ಅದಕ್ಕೆ ಸಂಬಂಧಪಟ್ಟ ಕಾರ್ಯಗಳಿಗಾಗಿ ಸ್ಥಳಾವಕಾಶದ ವ್ಯವಸ್ಥೆಯನ್ನು ಮಾಡಲಾಗಿರುವ, ಅಂತಹ ವಿವಾಹ ಅಥವಾ ಆರತಕ್ಷತೆ ಅಥವಾ ಅದಕ್ಕೆ ಸಂಬಂಧಪಟ್ಟ ಕಾರ್ಯಗಳು ನಿಯತವಾಗಿ ನಡೆದಿರಲಿ ಅಥವಾ ನಡೆದಿಲ್ಲದಿರಲಿ, ಕಲ್ಯಾಣ ಮಂಟಪ, ಶಾದಿಮಹಲ್, ಸಮುದಾಯ ಸಭಾಂಗಣ, ಒಂದು ಕಟ್ಟಡ ಅಥವಾ ಅದರ ಭಾಗ.

(6) ಒಂದು ಹೋಟೆಲಿಗೆ ಸಂಬಂಧಿಸಿದಂತೆ "ಮಾಲೀಕ" ಎಂಬುದು ತತ್ಕಾಲದಲ್ಲಿ ಹೋಟೆಲಿನ ವ್ಯವಸ್ಥಾಪನೆಯ ಪ್ರಭಾರವನ್ನು ಹೊಂದಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

xx xx xx

3-ಸಿ. ವಿವಾಹ ಸಭಾಂಗಣಗಳ ಚಾರ್ಜುಗಳ ಮೇಲಿನ ತೆರಿಗೆಯನ್ನು ವಿಧಿಸುವುದು ಮತ್ತು ವಸೂಲು ಮಾಡುವುದು.-ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಒಂದು ವಿವಾಹ ಸಭಾಂಗಣದಲ್ಲಿ ಒದಗಿಸಲಾದ ಭೋಗ ವಸ್ತುಗಳಿಗೆ ವಿಧಿಸಲಾಗುವ ಚಾರ್ಜುಗಳು ಒಂದು ದಿನಕ್ಕೆ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ ಇರುವಲ್ಲಿ ಅಂತಹ ಚಾರ್ಜುಗಳ ಮೇಲೆ ಈ ಮುಂದಿನ ದರಗಳಲ್ಲಿ ತೆರಿಗೆಯನ್ನು ವಿಧಿಸಿ ವಸೂಲು ಮಾಡತಕ್ಕದ್ದು, ಎಂದರೆ :-

(ಎ)	ವಿವಾಹ ಸಭಾಂಗಣದ ಚಾರ್ಜುಗಳು ಪ್ರತಿದಿನಕ್ಕೆ ಐದು ಸಾವಿರ ರೂ.ಗಳಿಗೆ ಕಡಿಮೆಯಿಲ್ಲದಂತೆ ಆದರೆ ಹತ್ತು ಸಾವಿರ ರೂ.ಗಳಿಗಿಂತ ಕಡಿಮೆ ಇರುವಲ್ಲಿ	ಅಂತಹ ಚಾರ್ಜುಗಳ ಶೇಕಡಾ ಐದರಷ್ಟು

ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958ರ (1958ರ ಕರ್ನಾಟಕ ಅಧಿನಿಯಮ ಸಂಖ್ಯೆ 30) ಉದ್ಧೃತ ಭಾಗ

xx xx xx

7. ವಿನಾಯಿತಿಗಳು :- (1) ರಾಜ್ಯ ಸರ್ಕಾರವು ಆದೇಶದ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಯಾವುದೇ ಮನೋರಂಜನೆಯ ಪ್ರವೇಶಕ್ಕಾಗಿನ ಸಂದಾಯಗಳ ಮೇಲೆ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆ ದರದಲ್ಲಿ,-

(ಎ) ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಯು, ಶೈಕ್ಷಣಿಕ ಚಲನಚಿತ್ರ ಅಥವಾ "ಮಕ್ಕಳ ಚಲನಚಿತ್ರ" ಎಂಬುದಾಗಿ ಪ್ರಮಾಣೀಕರಿಸಲಾದ ಚಲನಚಿತ್ರವೊಂದರ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಆರು ತಿಂಗಳಿಗೆ ಮೀರದಂಥ ಅವಧಿಗಾಗಿ ವಿನಾಯಿತಿಗೊಳಿಸಬಹುದು ಅಥವಾ ಕಡಿಮೆ ಮಾಡಬಹುದು. ಆದರೆ ಒಂದು ಸಾರಿ ಆರು ತಿಂಗಳಿಗೆ ಮೀರದಂತೆ, ಸರ್ಕಾರವು ಇನ್ನೊಂದು ಅವಧಿಗಾಗಿ ಅಂತಹ ವಿನಾಯಿತಿಯನ್ನು ಅಥವಾ ಇಳಿತಾಯವನ್ನು ವಿಸ್ತರಿಸಬಹುದು ; ಅಥವಾ

(ಬಿ) ಪರೋಪಕಾರಿ, ಧಾರ್ಮಿಕ ಅಥವಾ ಧರ್ಮಾದಾಯ ಉದ್ದೇಶಗಳಿಗಾಗಿ ವಿನಿಯೋಗಿಸಲಾದ ಅಂತಹ ಒಟ್ಟು ಉತ್ಪನ್ನಗಳ ಶೇಕಡಾ 5ರಷ್ಟನ್ನು ಮೀರದಂತಿರುವ ವಾಸ್ತವಿಕ ವೆಚ್ಚವನ್ನು ಕಳೆದ ನಂತರದ ಮನೋರಂಜನೆಯ ಒಟ್ಟು ಉತ್ಪನ್ನವನ್ನು ರಾಜ್ಯ ಸರ್ಕಾರವು ತೃಪ್ತಿಪಟ್ಟರೆ ವಿನಾಯಿತಿಗೊಳಿಸಬಹುದು ಅಥವಾ ಕಡಿಮೆ ಮಾಡಬಹುದು.

xx xx xx

೫-ಬಿ-ಅಪೀಲುಗಳು :- (1) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಜಾರಿಗೊಳಿಸಲಾದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅವನು ಅದನ್ನು ಆಕ್ಷೇಪಿಸಿದರೆ ಆ ಪ್ರದೇಶದ ಅಧಿಕಾರ ವ್ಯಾಪ್ತಿಯನ್ನು ಡೆಪ್ಯೂಟಿ ಕಮಿಷನರ್‌ಗೆ ಅಪೀಲು ಮಾಡಿಕೊಳ್ಳಬಹುದು.

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1999

(1999ರ ವಿಧಾನಸಭಾ ವಿಧೇಯಕ ಸಂಖ್ಯೆ 9)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತಪಡಿಸಬಹುದಾದಂತೆ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ.- ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 25) 13-ಎ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

"13-ಎಎ ಸ್ವತ್ತಿನ ಮೇಲೆ ಮೊದಲನೇ ಚಾರ್ಜ್ (ಹೊಣೆ) :- ತತ್ಕಾಲದ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ವಿರೋಧವಾದುದು ಏನೇ ಇದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ವ್ಯಾಪಾರಿ ಅಥವಾ ಯಾವೊಬ್ಬ ಇತರ ವ್ಯಕ್ತಿಯಿಂದ ಬಾಕಿ ಇರುವ ತೆರಿಗೆ ಅಥವಾ ಯಾವುದೇ ಇತರ ಮೊಬಲಗು, ಅಂಥ ವ್ಯಾಪಾರಿಯ ಅಥವಾ ವ್ಯಕ್ತಿಯ ಸ್ವತ್ತಿನ ಮೇಲೆ ಮೊದಲ ಚಾರ್ಜ್ (ಹೊಣೆ) ಆಗಿರತಕ್ಕದ್ದು.

3. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ :- ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 27) II-ಎ ಅಧ್ಯಾಯದ ತರುವಾಯ ಈ ಮುಂದಿನ ಅಧ್ಯಾಯ ಹಾಗೂ ಪ್ರಕರಣಗಳನ್ನು ಸೇರಿಸತಕ್ಕದ್ದು ಎಂದರೆ :-

"ಅಧ್ಯಾಯ-II-ಬಿ"

4.ಇ (1) ಪರಿಭಾಷೆಗಳು :- ಈ ಅಧ್ಯಾಯದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿಸೂಚಿತ ಸರಕುಗಳು" ಎಂದರೆ, ಈ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ವೈಕಿಯಿಂದ ಕಾಲಕಾಲಕ್ಕೆ ರಾಜ್ಯ ಸರ್ಕಾರದಿಂದ ಅಧಿಸೂಚಿಸಲಾಗುವ ಸರಕುಗಳು.

(ಬಿ) "ವ್ಯಕ್ತಿ" ಎಂಬುದರಲ್ಲಿ ಯಾವುದೇ ಕಂಪನಿ ಅಥವಾ ಅಸೋಸಿಯೇಷನ್ ಅಥವಾ ನಿಗಮಿತವಾಗಿರಲಿ ಅಥವಾ ಅಲ್ಲದಿರಲಿ, ವ್ಯಕ್ತಿಗಳ ನಿಕಾಯ ಮತ್ತು ಒಂದು ಹಿಂದೂ ಅವಿಭಕ್ತ ಕುಟುಂಬ, ಫರ್ಮ್, ಸಂಘ, ಕ್ಲಬ್, ಒಬ್ಬ ವ್ಯಕ್ತಿ, ಕೇಂದ್ರ ಸರ್ಕಾರ ಅಥವಾ ಯಾವುದೇ ಇತರ ರಾಜ್ಯದ ಸರ್ಕಾರ, ಕೇಂದ್ರಾಡಳಿತ ಪ್ರದೇಶ ಅಥವಾ ಸ್ಥಳೀಯ ಪ್ರಾಧಿಕಾರ ಒಳಗೊಳ್ಳುತ್ತವೆ.

(ಸಿ) "ಖರೀದಿ ಮೌಲ್ಯ" ಎದರೆ, ದರಪಟ್ಟಿಯಿಂದ ಖಚಿತಪಡಿಸಿಕೊಳ್ಳಲಾದ ಅಧಿಸೂಚಿತ ಸರಕುಗಳ ಮೌಲ್ಯ, ಮತ್ತು ವಿಮಾ ಮೌಲ್ಯ, ಸೀಮಾ ಸುಂಕ, ಕೌಂಟರ್ ವೇಲಿಂಗ್, ಸುಂಕಗಳ ಮಾರಾಟ ತೆರಿಗೆ, ಸಾಗಣೆ ಫೀಜು, ಹಾಸಲು ವೆಚ್ಚ ಮತ್ತು ಅಂಥ ಸರಕುಗಳ ಮೇಲೆ ಪ್ರಾಸಂಗಿಕವಾಗಿ ವಿಧಿಸಲಾದ ಎಲ್ಲಾ ಇತರೆ ಚಾರ್ಜ್‌ಗಳನ್ನು ಒಳಗೊಳ್ಳುತ್ತದೆ :

ಪರಂತು, ದರಪಟ್ಟಿಯು ಲಭ್ಯವಿಲ್ಲದ್ದರಿಂದಾಗಿ ಅಥವಾ ದರಪಟ್ಟಿಯನ್ನು ಹಾಜರುಪಡಿಸದಿದ್ದುದರಿಂದಾಗಿ, ಅಧಿಸೂಚಿತ ಸರಕುಗಳ ಖರೀದಿ ಮೌಲ್ಯವನ್ನು ಖಚಿತಪಡಿಸಿಕೊಳ್ಳಲಾಗದಿದ್ದಲ್ಲಿ ಅಥವಾ ಹಾಜರುಪಡಿಸಿದ ದರಪಟ್ಟಿಯು ಸುಳ್ಳೆಂದು ರುಜುವಾತಾಗಿದ್ದಾಗ ಅಥವಾ ಅಧಿಸೂಚಿತ ಸರಕುಗಳನ್ನು ಖರೀದಿಯ ಹೊರತಾಗಿ ಇತರ ರೀತಿಯಲ್ಲಿ ಪಡೆದುಕೊಂಡಿದ್ದರೆ, ಆಗ ಖರೀದಿ ಮೌಲ್ಯವು, ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿರುವ ಅದರ ಮೌಲ್ಯ ಅಥವಾ ಬೆಲೆ ಆಗಿರತಕ್ಕದ್ದು.

4. ಜಿ. ತೆರಿಗೆ ವಿಧಿಸುವಿಕೆ :- (1) 3ನೇ ಪ್ರಕರಣದಲ್ಲಿ ಅಥವಾ 4-ಬಿ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ಅಧಿಸೂಚಿತ ಸರಕುಗಳನ್ನು ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ತಂದಾಗ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 25) 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳಿಗೆ ಮೀರದ ಅಂಥ ದರಗಳಲ್ಲಿ ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ವಿಧಿಸಿದ ತೆರಿಗೆಯನ್ನು, ಅಧಿಸೂಚಿತ ಸರಕುಗಳನ್ನು ಸ್ಥಳೀಯ ಪ್ರದೇಶದೊಳಗೆ ತರುವ ಅಥವಾ ತರುವಂತೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು ತನಗಾಗಿ ಆಗಲೀ ಅಥವಾ ತನ್ನ ಮೂಲಕರ್ತನಿಗೆ ಆಗಲಿ ಅಥವಾ ಅಂಥ ಸರಕುಗಳು ಸ್ಥಳೀಯ ಪ್ರದೇಶದೊಳಗೆ ಪ್ರವೇಶಿಸಿದಾಗ ಅವುಗಳನ್ನು ವಶಾವಣೆಗೆ ತೆಗೆದುಕೊಳ್ಳುವ ಅಥವಾ ವಶಾವಣೆಗೆ ತೆಗೆದುಕೊಳ್ಳಲು ಹಕ್ಕುಳ್ಳ ಇತರ ವ್ಯಕ್ತಿಯು, ಸಂದಾಯ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದಲ್ಲಿ ಅಥವಾ (2)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಧಿಸೂಚಿತ ಸರಕುಗಳನ್ನು ಸ್ಥಳೀಯ ಪ್ರದೇಶದೊಳಗೆ ತರುವ ಅಥವಾ ತರುವಂತೆ ಮಾಡುವ ಯಾವನೇ ವ್ಯಕ್ತಿಯ ಮೇಲೆ, ಈ ಅಧಿನಿಯಮದ (3)ನೇ ಪ್ರಕರಣದ ಅಥವಾ 4-ಬಿ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅಥವಾ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 25) ಅಡಿಯಲ್ಲಿ ಅಂಥ ಸರಕುಗಳ ಮೇಲೆ ತೆರಿಗೆ ಸಂದಾಯ ಮಾಡಲು ಬದ್ಧನಾಗಿದ್ದರೆ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಮತ್ತು ಅವನಿಂದ ವಸೂಲಾಗತಕ್ಕದ್ದಲ್ಲ.

4-ಜೆಜ್. ವಿವರಣ ಪಟ್ಟಿಗಳನ್ನು ಸಲ್ಲಿಸುವುದು ಮತ್ತು ತೆರಿಗೆ ನಿರ್ಧಾರಣೆ :-

(1) ವಿವರಣ ಪಟ್ಟಿಗಳನ್ನು ಸಲ್ಲಿಸುವುದಕ್ಕೆ, ತೆರಿಗೆ ನಿರ್ಧರಣೆ, ದಂಡನೆಗಳನ್ನು ವಿಧಿಸುವುದಕ್ಕೆ ಸಂಬಂಧಪಡುವವರ ಮಟ್ಟಿಗೆ 5 ಮತ್ತು 7ನೇ ಪ್ರಕರಣದ ಉಪಬಂಧಗಳು ಯಥೋಚಿತ ಬದಲಾವಣೆಗಳೊಂದಿಗೆ, ಈ ಅಧಿನಿಯಮದ ಅಡಿಯಲ್ಲಿ ನೊಂದಾಯಿತ ವ್ಯಾಪಾರಿಯಾಗಿರುವ ಅಥವಾ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಅಡಿಯಲ್ಲಿ ನೋಂದಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಅನ್ವಯವಾಗತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಹಾಗೆ ಉಲ್ಲೇಖಿಸಲಾದವುಗಳನ್ನು ಹೊರತುಪಡಿಸಿ, ಇತರ ವ್ಯಕ್ತಿಗಳ ಸಂದರ್ಭದಲ್ಲಿ,-

(ಎ) ವಿವರಣಪಟ್ಟಿಯನ್ನು ನಿಯಮಿಸಲಾದ ನಮೂನೆಯಲ್ಲಿ ದ್ವಿಪ್ರತಿಯಲ್ಲಿ ಭರ್ತಿ ಮಾಡಿ, ಸರಕುಗಳು ಯಾವ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಮೂಲಕ ಪ್ರವೇಶಿಸುತ್ತವೆಯೋ, ಅದರ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಅಥವಾ ಸರಕುಗಳು ಪ್ರವೇಶಿಸುವ ಸ್ಥಳೀಯ ಪ್ರದೇಶದ ಮೇಲೆ ಅಥವಾ ಅಂಥ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಸ್ಥಳೀಯ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ತೆರಿಗೆ ನಿರ್ಧರಣಾ ಪ್ರಾಧಿಕಾರಿಯ ಮುಂದೆ ಸಲ್ಲಿಸತಕ್ಕದ್ದು ಮತ್ತು ಸಂದಾಯ ಮಾಡತಕ್ಕ ತೆರಿಗೆಯನ್ನು ನಗದಾಗಿ ಅಥವಾ ಕ್ರಾಸ್ ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು,

(ಬಿ) 5ನೇ ಪ್ರಕರಣದ (3), (4) ಮತ್ತು (5)ನೇ ಉಪ-ಪ್ರಕರಣಗಳ ಉಪಬಂಧಗಳು, ಅವು ತೆರಿಗೆ ನಿರ್ಧರಣೆ ಮತ್ತು ದಂಡನೆಗಳಿಗೆ ಸಂಬಂಧಪಡುವವರ ಮಟ್ಟಿಗೆ, ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

4-ಐ. ತೆರಿಗೆ ಮತ್ತು ದಂಡನೆಗಳನ್ನು ವಿಧಿಸುವುದು ಮತ್ತು ಸಂಗ್ರಹಣೆ :- ಈ ಅಧಿನಿಯಮದ ಎಲ್ಲ ಉಪಬಂಧಗಳು, ತೆರಿಗೆ ಪ್ರಾಧಿಕಾರಿಗಳಿಗೆ ಸಂಬಂಧಪಡುವವ್ಯರ ಮಟ್ಟಿಗೆ ತೆರಿಗೆ ಮತ್ತು ದಂಡನೆಗಳ ಸಂಗ್ರಹಣೆ ಮತ್ತು ವಸೂಲಿ ಹಾಗೂ ಅಪೀಲುಗಳು, ಪುನರೀಕ್ಷಣೆ, ಅಪರಾಧಗಳು ಮತ್ತು ಅಭಿಯೋಜನೆಗಳು, ಈ ಅಧ್ಯಾಯದ ಅಡಿಯಲ್ಲಿ ತೆರಿಗೆ ವಿಧಿಸುವ ಸಂಬಂಧದಲ್ಲಿ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 25) ಮತ್ತು ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ 27) ತಿದ್ದುಪಡಿ ಮಾಡುವುದು ಮತ್ತು ಬಜೆಟ್ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯವೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಶಾಸನ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ

ಖಂಡ-3 : ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ 4 ಹೆಚ್ ಪ್ರಕರಣದ (2)ನೇ ಉಪ ಪ್ರಕರಣವು ವಿವರ ಪಟ್ಟಿಕೆಗಳನ್ನು ಮತ್ತು ತೆರಿಗೆ ನಿರ್ಧಾರಣೆಯನ್ನು ಸಲ್ಲಿಸುವ ನಮೂನೆಯನ್ನು ಗೊತ್ತುಪಡಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯ ಮಂತ್ರಿಗಳು

ಯಾಕೂಬ್ ಹರೀಫ್
ಕಾರ್ಯದರ್ಶಿ

KARNATAKA LEGISLATIVE ASSEMBLY
TENTH ASSEMBLY

(EIGHTH SESSION)
THE KARNATAKA STAMP (SECOND AMENDMENT) BILL, 1999.

(L.A.BILL No. 7 of 1999)

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the Fiftieth year of the Republic of India, as follows:-

1. **Short title and commencement** .- (1) This Act may be called the Karnataka Stamp Second Amendment) Act, 1999.

(2) It shall come into force with effect from 1st day of April, 1999.

2. **Amendment of section 2.**- In section 2 of the Karnataka Stamp Act, 1957 (Karnataka Act 34 of 1957) (hereinafter referred to as the principal Act), in sub-section (1),-

(i) for clause (d) the following shall be substitued, namely:-

" (d) "Conveyance" includes,-

(i) a conveyance on sale,
(ii) every instrument,
(iii) every decree or final order of any civil court,
(iv) every order made by the High Court under section 394 of the Companies Act, 1956 in respect of amalgamation of companies.

by which property, whether moveable or immovable or any estate is transferred to, or vested in, any other person, and which is not otherwise specifically provided for by the schedule."

(ii)after clause (m) the following shall be inserted, namely:-

"(mm) "Market Value" in relation to any property which is the subject matter of an instrument, means the price which such property would have fetched if sold in open market on the date of execution of such instrument or the consideration stated in the instrument whichever is higher:

Provided that notwithstanding anything contained in this Act or in the Articles, in respect of an instrument executed by or on behalf of or in favour of the State Government or the Central Government or a local Authority or other Authority constituted by or under any law for the time being in force or a Body incorporate wholly owned or controlled by the Central Government or the State Government, the market value of the property shall be the value of consideration for such conveyance as set forth in the instrument.".

3. Insertion of new section.- After section 3B of the principal Act, the following shall be inserted, namely:-

"3C. Limit on levy of additional stamp duty.- Notwithstanding anything contained in any other law for the time being in force, no instrument shall be charged with any duty in the form of additional stamp duty under such other law, exceeding the maximum amount duty with which such instrument is chargeable under of this Act.".

4. **Amendment of section 9.**- In sub-section (1) of section (9) of the principal Act, after the proviso to clause (a), the following shall be inserted, namely:-

"Provided further that the State Government may in public interest reduce or remit, by notification till the end of 31st March 2001, the stamp duty payable on any instrument, to be specified therein, executed by a new Tiny

and Small Scale Industrial unit as defined under the new Industrial Policy of the Government of Karnataka dated Fifteenth March1996."

5. Amendment of section 10.- In section 10 of the principal Act, after sub-section (2) the following shall be inserted, namely:-

"(3) Subject to the rules made under clause (b) of sub-section (1), the Chief Controlling Revenue Authority or any other officer empowered by the State Government in this behalf may authorise any person, body or organisation, including Post Offices and Banks, to use machine for making impression of stamps indicating the payment of stamp duty on the instrument.".

6. Omission of sections 28A and 28B.- Sections 28A and 28B of the principal Act shall be omitted.

7. Amendment of section 44.- In sub-section (2) of section 44 of the principal Act, for the words and figures "section 34 or section 39" the words "any of the provisions of this Act" and for the words "within three months of the order of charging the same" the words "within six months from the date of registration of the instrument or the order charging the same" shall be substituted.

8. Amendment of section 45A.- In section 45A of the principal Act, Explanation shall be omitted.

9. Amendment of section 45B.- In section 45B of the principal Act,-

(i) in sub-section (1), at the end the following words shall be added namely:-

" and to publish the estimated market value in such manner as may be prescribed".

(ii) sub-section (3) shall be omitted.

10. Amendment of section 48.- In section 48 of the principal Act,-

(i) in clause (1), for the words " two months" the words "six months" shall be substituted.

(ii) in clauses (2) and (3), for the words " six months" wherever they occur the words "one year" shall be substituted.

11. Amendment of section 50.- In section 50 of the principal Act, for the words " six months" wherever it occurs the words "one year" shall be substituted.

12. Substitution of section 51. For section 51 of the principal Act, the following section shall be substituted, namely:-

" **51. Allowance for spoiled or misused Stamps how to be made.-** In any case in which allowance is made for spoiled or misused stamps, the Deputy Commissioner may, after deducting twenty paise for each rupee or a fraction thereof, give in lieu thereof,

(a) other stamps of the same description; or

(b) if required and if he thinks fit, stamps of any, other description; or

(c) at his discretion the value in money equal to the discounted value.".

13. Amendment of section 52.- Section 52 of the principal Act, shall be renumbered as sub-section (1) thereof and in sub-section (1) as so

-numbered, in clause (c) for the words " six months " the words "one year" shall be substituted; and

(ii) after sub-section (1) as so renumbered, the following shall be inserted, namely:-

"(2) An appeal shall lie against the orders of the Deputy Commissioner within sixty days from the date of the order passed under this chapter to the Chief Controlling Revenue Authority.".

14. Amendment of Schedule.- In the Schedule to the principal Act,-

(1) in Article 5,-

(a) in clause (d), after the brackets, words and figures "(Karnataka Act 27 of 1966)", a comma, the words, figures and brackets "Municipal Corporation constituted under the Karnataka Municipal Corporation Act, 1976, (Karnataka Act 24 of 1976), Municipal Councils or Town Panchayats constituted under the Karnataka Municipalities Act, 1964 (Karnataka Act 22 of 1964), Urban Development Authorities constituted under the Karnataka Urban Development Authorities Act, 1987 (Karnataka Act 34 of 1987), Grama Panchayats, Taluk Panchayats and Zilla Panchayats constituted under the Karnataka Panchayat Raj Act, 1993 (Karnataka Act 14 of 1993)" shall be inserted.

(b) after clause (d) the following clause shall be inserted, namely:-

"(da)	Where any instrument of Lease-cum-sale effected by the Bangalore Development Authority constituted under the Bangalore Development Authority Act, 1976 (Karnataka Act 12 of 1976), the Karnataka Housing Board	The duty payable shall be as a conveyance [No.20(3)] for the market value equal to the security deposit and the amount of average annual rent reserved under such agreement."

constituted under the Karnataka Housing Board Act, 1962 (Karnataka Act 10 of 1963) pertaining to premises of a Flat or Apartments.

(c) in cluase (f) after the word "property" the words "situated in Karnataka State" shall be inserted.

(2) in Article 6,-

(i) for the words "pawn, pledge or hypothecation", wherever they occur the words "pawn or pledge" shall be substituted.

(ii) in clause (2),

(a) after the words "property" the words "whether attested or unattested" shall be omitted.

(b) in column (3), in the proviso the word "hypothection" shall be omitted.

(iii) after clause (2), the following shall be inserted, namely:-

"**Exemption.**- Instruments of pawn or pledge of goods, if unattested.

Note: "Goods" for the purpose of exemption means raw materials and stock in trade only.".

(3) in Article 20;-

(a) in clause (1), for the first proviso, the following shall be substituted, namely.-

"Provided that in respect of any instrument of conveyance effected by the house building co-operative societies, registered under the Karnataka Co-operative Societies Act, 1959 (Karnataka Act 11 of 1959) in so far as it relates to allotment of buildings or sites to their members, the duty shall be payable at the rates specified above on the amount or value of consideration for such conveyance as set forth in the instrument.".

(b) for clause (3), the following clauses shall be substituted, namely:-

"(3) Where any instrument of conveyance is effected by the Bangalore Development Authority constituted under Bangalore Development Authority Act, 1976 (Karnataka Act 12 of 1976), the Karnataka Housing Board constituted under the Karnataka Housing Board Act, 1962 (Karnataka Act 10 of 1963) pertaining to premises of Flat or Apartment.	The duty shall be payable at the rates specified under clause (2) of Article 20 on the amount or value of consideration as set forth in the instrument:
	Provided that in any case where Lease-cum-sale Agreement i executed and is stamped with the ac valorem duty required for suc agreement under item (da) of Artic 5 and in furtherance of suc agreement a conveyance subsequently executed, the duty c such conveyance shall not exce rupees fifty or the difference of t duty payable on such conveyan

	and the duty already collected on the security deposit under item (da) of Article 5, whichever is greater.
(4) If relating to an order made by the High Court under section 394 of the Companies Act, 1956 in respect of amalgamation of Companies.	Ten rupees for every rupees one thousand or part thereof, on the market value of the property of the transferor company, located in State of Karnataka, and transferred to the Transferee company on amalgamation.

Exemption.- Amalgamation of sick companies with others, under the orders of Board of Industrial Finance and Reconstruction (BIFR).

(5) If relating to industrial machinery	Two rupees for every rupees one hundred or part thereof.

Exemption.- (i) Sale of industrial machinery by the manufacturer or his authorised agent.

(ii) Industrial machinery not exceeding the value of rupees twenty-five thousand.

(6) If relating to Assignment of receivables by the originator to the special purpose vehicle (SPV), or by whatever name they are called, in the process of securitisation.	One rupee for every one thousand rupees or part thereof subject to a maximum of rupees one lakh."

(4) in Article 27, in clause (b),-

(a) for item (ii), the following shall be substituted, namely:-

(ii) If possession is not given and not being a Hypothecation.	The same duty as a Bond (No.12) for the amount of the further charge secured by such instrument, subject to a maximum of rupees three lakhs.

(b) after item (ii), the following shall be inserted, namely:-

"(iii) for Hypothecation	Same duty as sub-clause (d) of Article No.34 for the amount of the further charge secured by such instrument.".

(5) for Article 28, the following shall be substituted, namely:-

"28. Gift-Instrument of- not being a settlement (No 48) or will or transfer (No.52)	
(a) Where the donee is not a family member of the donor.	The same duty as a Conveyance (Article No.20) for a market value equal to the market value of the property which is the subject matter of gift: Provided that where an instrument of gift contains any provision for the revocation of the gift, the value of the property which is the subject matter of the gift, shall for the purposes of duty be determined as if no such

	provision were contained in the instrument.
(b) Where the donee is a member of the family of the donor.	Rupees one thousand.

Explanation.- Family in relation to the donor for this purpose means Husband, Wife, Sons and Daughters.

(6) in Article 30,-

(i) to clause (1) after sub-clause (c) after first proviso the following proviso shall be deemed to have been inserted with effect from the first day of April, 1998, namely:-

"Provided further that the duty in respect of an instrument of lease chargeable under Article30(a)(iv), Article 30(b)(ii) and Article 30(c)(ii), effected by the Bangalore Development Authority constituted under the Bangalore Development Authority Act, 1976 (Karnataka Act 12 of 1976), the Urban Development Authority constituted under the Karnataka Urban Development Authorities Act, 1987 (Karnataka Act 34 of 1987) the Karnataka housing Board Act, 1962 (Karnataka Act 10 of 1963) the Improvements Board constituted under the Karnataka Improvements Boards Act, 1976 (Karnataka Act 11 of 1976), Department of Mines and Geology, the Forest Department, Karnataka Industrial Area Development Board established under the Karnataka Industrial Area Development Board Act, 1966 (Karnataka Act 18 of 1966), the Karnataka Small Scale Industries Development Corporation, the Karnataka State Industrial Investment Development Corporation, Karnataka State Electronics Development Corporation, registered as a company under the Companies Act, 1956 (Central Act 1 of 1956), the Karnataka Agricultural Produce Market Committee constituted under the Karnataka Agricultural Produce Marketing (Regulation) Act, 1966 (Karnataka Act 27 of 1966) and other authorities as may be specified by the Government shall be payable as a conveyance under clause (1) of Article 20 for a market value equal to the

total rent to be paid through the lease period, or as a conveyance under clause (1) of Article 20 for a market value equal to the amount of premium or money advanced or fine where no rent is reserved, or as a conveyance under clause (1) of article 20 for a market value equal to the amount of premium or money advanced or fine together with the total rent as set forth in the lease deed as the case may be.".

(ii) for clause (1) the following shall be substituted, namely:-

"(1) including an under lease or sub-lease and any agreement to let or sub-let,-

(a) Where by such lease, the rent is fixed and no premium is paid or delivered-	
(i) where the lease purports to be for a term of loss than one year.	The same duty as a Bond (No.12) for the total amount of rent payable under such lease.
(ii) where the lease purports to be for a term of not less than one year, but not more than five years.	The same duty as a Bond (No.12) for the amount or value of the average annual rent reserved.
(iii) where the lease purports to be for a term of not less than five years, but not exceeding ten years.	The same duty as a Conveyance (Article No.20) for a market value equal to twice the amount or value of the average annual rent reserved.
(iv) where the lease purports to be for a term exceeding ten years, but not exceeding twenty years.	The same duty as a conveyance (Article 20) for an amount equal to three times the amount or value of the average annual rent reserved.
(v) where the lease purports to be	The same duty as a conveyance

for a term exceeding twenty years, but not exceeding thirty years.	(Article 20) for an amount equal to four times the amount or value of the average annual rent reserved.
(vi) where the lease purports to be for a term exceeding thirty years or in perpetuity or does not purports to be for any definite term	The same duty as a Bond (Article No.12) for an amount equal to the market value of the property.
(b) Where the lease is granted for a fine or premium or for money advanced and where no rent is reserved-	
(i) where the lease purports to be for a term not exceeding thirty years.	The same duty as a conveyance (Article 20), for the amount or value of such fine or premium or advance as setforth in the lease.
(ii) where the lease purports to be for a term exceeding thirty years or in perpetuity or does not purports to be for any definite term.	The same duty as a Bond (Article No.12), for the amount or value of such fine or premium or advance, as setforth in the lease or for an amount equal to the market value of the property, whichever is higher.".
"(c) Where the lease is granted for a fine or premium or for money advanced in addition to rent reserved,-	
(i) where the lease purports to be	The same duty as a conveyance

for a term not exceeding thirty years.	(Article 20), for the amount or value of such fine or premium or advance, as setforth in the lease, in addition to duty which would have been payable on such lease, if no fine or premium or advance had been paid or delivered.
(ii) where the lease purports to be for a term exceeding thirty years or in perpetuity or does not purport to be for any definite term.	The same duty as a Bond (Article No.12), for the amount or value of such fine or premium or advance as setforth in the lease or for an amount equal to the market value of the property whichever is higher.".

Provided that, in any case when an agreement to lease is stamped with the advalorem stamp required for a lease and a lease in pursuance of such agreement is subsequently executed, the duty on such lease shall not exceed rupees fifty.

Provided further that the duty in respect of an instrument of lease chargeable under Article 30(a),[(v) and (vi)], Article 30(b)(ii) and Article 30(c)(ii), effected by the Bangalore Development Authority constituted under the Bangalore Development Authority Act, 1976 (Karnataka Act 12 of 1976), the Urban Development Authority constituted under the Karnataka Urban Development Authorities Act, 1987 (Karnataka Act 34 of 1987) the Karnataka Housing Board, constituted under the Karnataka Housing Board Act, 1962 (Karnataka Act 10 of 1963) the Improvements Board constituted under the Karnataka Improvements Boards Act, 1976(Karnataka Act 11 of 1976), Department of Mines and Geology, the Forest Department, Karnataka Industrial Area Development Board established under the Karnataka Industrial Area Development Board Act, 1966 (Karnataka Act 18 of 1966), the Karnataka Small Scale Industries Development Corporation, the Karnataka State Industrial Investment Development Corporation, Karnataka State

Electronics Development Corporation, registered as a company under the Companies Act, 1956 (Central Act 1 of 1956), the Karnataka Agricultural Produce Market Committee constituted under the Karnataka Agricultural Produce Marketing (Regulation) Act, 1966 (Karnataka Act 27 of 1966) and other authorities as may be specified by the Government, shall be payable as the case may be in the following manner;

(a) as per item No.(v) of sub-clause (a) of clause (1), where by such lease the rent is fixed and no premium is paid.

(b) as per item No.(i) of sub-clause (b) of clause (1) where the lease is granted for a fine or premium or money advanced and where no rent is reserved.

(c) as per item No.(i) of sub-clause (c) of clause (1) where the lease is granted for a fine or premium or money advanced in addition to rent reserved.

" Provided also that the duty in respect of an instrument of lease executed in favour of the wife,husband, father, mother, son,daughter, brother, or sister in relation to the person shall be rupees one thousand.".

(7) in Article 34,-

(i) for the words "pawn, pledge or hypothecation", the words "pawn or pledge" shall be substituted.

(ii) in clause (b), after the words "aforesaid" the words "and not being a hypothecation" shall be inserted.

(iii) for clause (c) the following shall be substituted, namely:-

'c) When a collateral or auxiliary or additional or substituted security, or by way of further assurance for the above mentioned purpose, where the

principal or primary security is duly stamped.	
(i) for every sum secured not exceeding Rs.1,000.	Three rupees and fifty paise.
(ii) for every Rs.1,000 or part thereof, secured in excess of Rs.1,000.	Three rupees and fifty paise subject to a maximum of Rupees Three lakhs.
(d) For hypothecation of movable property.	Ten rupees for every ten thousand rupees or part thereof advanced, subject to a maximum of rupees ten thousand.".

(8) (a) for Article 39 except the proviso, the following shall be substituted, namely:-

"**Partition**- Instrument of, as defined by section 2(1)(k)	
(a) Where the property involved in the partition is converted for non-agricultural purpose or is meant for non-agricultural use.	
(1) If the property is situated in the jurisdiction of Municipal Corporation or Urban Development Authorities or Municipal Councils or Town Panchayats.	Rupees One thousand for each share.
(2) If the property is situated in the areas other than those mentioned in	Rupees five hundred for each share.

sub-clause (1) above.

(b) Where the property involved in the partition is agricutural land	Rupees two hundred fifty for each share.
(c)Where the property involved in the partition belongs to both the categories mentioned in sub-clause (a) and (b) above.	Aggregate of the duties described in sub-clause (a) and (b) above for each share.

(b) in the proviso to Article 39,-

(i) in clause (a), for the words "three rupees", the words "fifty rupees" shall be substituted.

(ii) clause (b) shall be omitted.

(iii) in clause (c) for the words "three rupees" the words "fifty rupees" shall be substituted.

(9) in Article 41,-

(a) for clause (ea), the following shall be substituted, namely:-

"(ea) When given to a promoter or developer by whatever name called for construction development on, or sale, or transfer (in any manner whatsoever) of, any immovable property situated in Karnataka State.	(i) Four rupees for every hundred or part thereof, on the market value of the property which is the subject matter of the instrument subject to a maximum of rupees four lakhs. (ii) If such market value is not setforth, then a fixed amount of rupees four lakhs.

Provided that where an agreement is executed between the same parties, in respect of same property and is stamped in accordance with Article 5(f) and in furtherance of such agreement if a power of attorney is subsequently executed, the duty on such power of attorney shall be in accordance with clause (f) of this Article".

wazzu (b) for clause (eb) the following shall be substituted:-

"(eb)	When given to person other than the father, mother, wife or husband, sons, daughters, brothers, sisters in relation to the executant authorising such person to sell immovable property situated in Karnataka State.	Two rupees for every one hundred rupees or part thereof on the market value of the property which is the subject matter of power of Attorney: provided that the duty paid on such instrument is adjustable towards the duty payable on the instrument of sale or transfer executed subsequently in favour of either the Attorney holder or any other person".

(10) in Article 45, for clauses (a) and (b), the following shall be substituted, namely.-

(a) where the release is not between the family members. .	
(i) where the release is not for any consideration.	The same duty as a Bond (No.12), for such amount or value of the property as setforth in the instrument or on such average amount or value of the comparable properties, whichever is

	higher.
(ii) if the release is for consideration	The same duty as a conveyance (Article No.20), for a market value equal to the amount of the consideration.
(b) where the release is between the family members.	Rupees one thousand.

Explanation.- Family in relation to a person for this purpose means father, mother, husband, wife,sons,daughters, brothers and sisters.".

(11) in Article 48, for clause (A) the following shall be substituted, namely:-

A. Instrument of (including a deed of dower)	
(i) where the disposition is not for the purpose of distributing the property of the settlor among his family.	The same duty as a Conveyance (Article No.20) for a market value equal to the market value of the property, which is the subject matter of settlement. Provided that where an agreement to settle is stamped with the stamp duty required for an instrument of settlement, and an instrument of settlement in pursuance of such agreement is subsequently executed, the duty on such instrument shall not

exceed rupees fifty.

(ii) Where the deposition is for the purpopse of distributing the property of the settler among his family	Rupees One thousand

Explanation.- Family in relation to the Settler for this purrpose means husband, wife, sons and daughters.

Exemption.- Deed of dower executed on the occasion of a marriage between muhammadans.

(12) in Article 52 for clause (a) the following clause shall be substituted, namely:-

"(a) of debentures, being markatable securities, whether the debenture is liable to duty or not	Fifty paise for every rupees one hundred or part thereof subject to a maximum of one thousand rupees for a considerable equal to the face value of the debenture".

15. **Transitional provision.**- Duty paid on any instrument referred to in the second proviso after sub-clause (c), of Article 30 of the Schedule as inserted by this Actm at the rates specified therein during the period from the first day of April, 1998 and till the commencement of this Act, shall be deemed to be the proper duty.

STATEMENT OF OBJECTS AND REASONS

To give effect to the proposals made in the Budget Speech, it is considered necessary to amend the Karnataka Stamp Act, 1957 and some consequential amendments are also proposed.

Hence the Bill.

FINANCIAL MEMORANDUM

There will be an approximate revenue loss to the extent of Rupees 1.5crores by the proposed amendment.

MEMORANDUM REGARDING DELEGATED LEGISLATION

Clause 9: In sub-section (1) of section 45B sought to be amended by this clause, the State Government is empower to make rules providing for the manner of publication of the estimated market value determined by the Committee.

The proposed delegation of legislative power is normal in character.

B.SOMASHEKAR,
Minister for Revenue.

YAKUB SHARIFF,
Secretary.

ANNEXURE

EXTRACT FROM KARNATAKA STAMP ACT, 1957
(Karnataka Act No. 34 of 1957)

xx xx

2. Definitions.

xx xx

(d) **"conveyance"** includes a conveyance on sale and every instrument by which property, whether movable, or immovable is transferred inter-vivos and which is not otherwise specifically provided for by the Schedule.

xx xx xx

9 :- Power to reduce, remit or compound duties .-

(a) reduce upto fifty per cent in the whole or any part of the State of Karnataka, if in the opinion of the State Government it is necessary in public interest so to do, the duties with which any particular class of instruments, or any of the instruments belonging to such class, or any instruments when executed by or in favour of any particular class of persons, or by or in favour of any members of such class, are chargeable; and

xx xx

44 :- Power to revenue authority to refund penalty or excess duty in certain cases .-

* * *

(2) Where in the opinion of the Chief Controlling Revenue Authority, stamp duty in excess of that which is legally chargeable has been charged and paid under Section 34 of Section 39, such authority may, upon application in writing made within three months of the order charging the same, refund the excess:

Provided that with the sanction of the State Government the Chief Controlling Revenue Authority may make the refund after the period specified in sub-section (1) or (2).

xx xx

45B :- Constitution of a Committee for estimation of property.—(1) Subject to such rules as may be prescribed, the State Government shall, by

notification, constitute for each Taluk or any part thereof one or more committees consisting of such number of members, as may be prescribed, to estimate the market value of any property or of such properties in any area in the prescribed manner and at prescribed intervals.

(2) The Committee shall follow such procedures as may be prescribed.

(3) The State Government shall, by notification, publish the market value estimated under sub-section(1).

48. Application for relief under Section 47 when to be made .- (1) The application for relief under section 47 shall be made within the following periods, that is to say,-

(1) in the cases mentioned in clause (c)(5), within two months of the date of the instrument;

(2) in the case of a stamped paper on which no instrument has been executed by any of the parties thereto, within six months after the stamp has been spoiled;

(3) in the case of a stamped paper in which an instrument has been executed by any of the parties thereto, within six months after the date of the instrument or, if it is not dated, within six months after execution thereof by the person by whom it was first or alone executed:

xx xx

50. Allowance for mis-used stamps .- (a) When any person has inadvertently used for an instrument chargeable with duty, a stamp of a description other than that prescribed for such instrument by the rules made under this Act, or a stamp of greater value than was necessary or has inadvertently used any stamp for an instrument not chargeable with any duty; or

(b) When any stamp used for an instrument has been inadvertently rendered useless under Section 15, owing to such instrument having been written in contravention of the provisions of Section 13;

the Deputy Commissioner may, on application made within six months after the date of the instrument, or, if it is not dated, within six months after the execution thereof by the person by whom it was first or alone executed, and upon the instrument, if chargeable with duty, being re-stamped with the proper duty, cancel and allow as spoiled the stamp so misused or rendered useless.

51:- Allowance for spoiled or misused stamps how to be made.- In any case in which allowance is made for spoiled or misused stamps, the Deputy Commissioner may give in lieu thereof ---

(a) other stamps of the same description and value; or

(b) if required and he thinks fit, stamps of any other description to the same amount in value; or

(c) at his discretion, the same value in money deducting ten paise for each rupee or fraction of a rupee.

52. Allowance for stamps not required for use.- When any person is possessed of a stamp or stamps which have not been spoiled or rendered unfit or useless for the purpose intended, but for which he has no immediate use, the Deputy Commissioner shall repay to such person the value of such stamp or stamps in money, deducting ten paise for each rupee or portion of a rupee, upon such person delivering up the same to be cancelled, and proving to the Deputy Commissioner's satisfaction---

(a) that such stamp or stamps were purchased by such person with a bona fide intention to use them and

b) that he has paid the full price thereof; and

(c) that they were so purchased within the period of six months next preceding the date on which they were so delivered:

Provided that, where the person is a licensed vendor of stamps, the Deputy Commissioner may, if he thinks fit, make the repayment of the sum actually paid by the vendor without any such deduction as aforesaid.

xx xx

SCHEDULE

Article No.	Description of Instrument	Proper stamp-duty
(1)	(2)	(3)
xx	xx	xx
5.	**Agreement or its record or Memorandum if an Agreement-** xx xx **Art. 5(d).-**if relating to a transaction of lease-cum-sale in connection with the allotment of a building thereon, effected by the Bangalore Development Authority constituted under the Bangalore Development authority Act, 1976 (Karnataka Act 12 of 1976), the City Improvement Trust Board, Mysore, constituted under the Karnataka Housing Board Act, (1962, (Karnataka Act 10 of 1963), the Improvement Boards constituted under the Karnataka Improvement Boards Act, 1976 (Karnataka Act	

11 of 1976) House Building Co-operative Societies registered under the Karnataka Co-operative Societies Act, 1959 (Karnataka Act 11 of 1959) or the allotment of Industrial sheds and plots by the Karnataka Industrial Areas Development Board established under the (Karnataka Act 18 of 1966), the Karnataka Small Scale Industries Development Corporation, the Karnataka State Industrial Investment and Development Corporation and the Karnataka State Electronics Development Corporation, registered as a Company under the Companies Act, 1956 (Central Act 1 of 1966) or the allotment of land or sites with or without building to the market functionaries in the yard by the agricultural produce market committees constituted under the Karnataka Agricultural Produce Marketing (Regulation) Act, 1966 (Karnataka Act 27 of 1966) and such other authorities as may be specified by the Government.	
5(f). If relating to giving authority or power to a promoter or developer by whatever name called, for construction or, development of, or sale or transfer (in any manner whatsoever) of any immovable property.	Four rupees for every hundred rupees or part thereof on the market value of the property which is the subject matter of agreement, subject to a maximum of rupees four lakhs.

xx	xx
Art.6. Agreement relating to deposit of title deeds, pawn, pledge or hypothecation, that is to say, any instrument evidencing an agreement relating to,-	
(2) the pawn, pledge or hypothecation of moveable property, whether attested or unattested, where such pawn, pledge or hypothecation has been made by way of security for the repayment of money advanced or to be advanced by way of loan or an existing or future debt.-	

	(a) if such loan or debt is repayable not more than three months from the date of such instrument: (b) if such loan or debt is repayable on demand for more than three months from the date of instrument evidencing agreement. Provided that where a fresh instrument of hypothecation pawn or pledge of movable property is executed for securing repayment of money already advanced by way of loan between the same parties and for same purpose and for the same amount and the duty in respect of earlier instrument has been paid. then the duty chargeable on such fresh instrument is chargeable as per clause (i) of Article 5 of this Schedule. xx xx	Twenty five paise for every hundred rupees or part thereof. Fifty paise for every hundred rupees or part thereof subject to a maximum of rupees two lakhs. xx
	20. Conveyance.- xx xx **Art.20(1)** Provided that the duty in respect of any instrument of conveyance effect by the Bangalore Development Authority constituted under the Bangalore Development Authority Act, 1976 (Karnataka Act 12 of 1976) the City Improvement Trust Board, Mysore constituted under the City of Mysore Improvement Act, 1903 (Mysore Act 3 of 1903) the Karnataka Housing Board constituted under the Karnataka Housing Board Act, 1962 (Karnataka Act 10 of 1963), the Improvement Boards constituted under the Karnataka Improvement Boards Act, 1976 (Karnataka Act 11 of 1976) House Building Co-operative Societies registered under the Karnataka Co-operative Societies Act, 1959 (Karnataka Act 11 of 1959), in so far as it relates to allotment of building sites to its members or conveyance effected by the Karnataka Industrial Areas Development Board established under the Karnataka Industrial Areas Development Act, 1966 (Karnataka Act 18 of 1966), the Karnataka Small Scale Industries Development Corporation, the Karnataka	

	State Industrial Investment and Development Corporation and the Karnataka State Electronics Development Corporation registered as a company under the Companies Act, 1956 (Central Act 1 of 1956) so far as it relates to industrial sheds and plots allotted by them or conveyance effected by the Karnataka Agricultural Produce (Regulation) Act, 1966 (Karnataka Act 27 of 1966) so far as it relates to sale or lease cum sale of land or site with or without building, to market functionaries in the yard and such other authorities as may be specified by the Government shall be payable at the rates specified above on the amount or value of consideration for such conveyance as set forth in the instrument.	

xx	xx	xx
	Art.27 Further charge-Instrument of- that is to say, any instrument imposing a further charge on mortgaged property-	
	(a) when the original mortgage is one of the description referred to in clause (a) of Article No.34 (that is with possession):	The same duty as a Conveyance (No.20) for a market value equal to the amount of the further charge secured by such instrument.
	(b) When such mortgage is one of the description referred to in clause (b) of Article No.34 (that is, without possession)-	
	(i) if at the time of execution of the instrument of further charge possession of the property is given or agreed to be given under such instrument;	The same duty as a Conveyance (No.20) for a market value equal to the total amount of the charge (including the original mortgage and any further charge already made) less the duty already paid on such original mortgage and further charge.
	(ii) if possession is not given	The same duty as a Bond (No 12) for the amount of the further charge secured by such instrument.

	Art.28 Gift-Instrument of- not being a settlement (No.48) or will or transfer (No.52)	The same duty as a Conveyance (No.20) for market value equal to the market value of the property which is the subect matter of gift: Provided that where an instrument of gift contains any provision for the revocation of the gift, the value of the property which is the subject matter of the gift, shall for the purposes of duty be determined as if no such provision were contained in the instrument.
	Hiring- Agreement or agreement for service-see Agreement (No.5)	

	Art. 30 Lease of immoveable property.-(1) Including an under-lease or sub-lease and any agreement to let or sub-let.	
	(a) where by such lease the rent is fixed and no premium is paid or delivered-	
	(i) where the lease purports to be for a term of less than one year.	The same duty as a Bond (No.21) for the whole amount payable or deliverable under such lease.
	(ii) where the lease purports to be for a term of not less than one year but not more than five years.	The same duty as a Bond (No.12) for the amount or value of the average annual rent reserved.
	(iii) where the lease purports to be fore a term of not less than five years but not exceeding ten years.	The same duty as a Conveyance (No.20) for a market value equal to the amount or value of the average annual rent reserved.
	(iv) where the lease purports to be with or without a renewal	Rupees five for every hundred or part thereof on the market

	clause, contingent or otherwise, for a period in excess of ten years or in perpetuity, or does not purport to be for any definite period. (b) for sub-clauses (b) and (c), the following shall be substituted, namely:-	value of the property which is the subject matter of lease.
	"(b) Where the lease is granted for a fine or a premium or for money advanced and where no rent is reserved,-	
	(i) where the lease purports to be for a term not exceeding ten years.	The same duty as a conveyance (clause (1) of Article 20) for a market value equal to the amount or value of such fine or premium or advance as setforth in the lease.
	(ii) Where the lease purports to be with or without a renewal clause contingent or otherwise for a period in excess of ten years, or in perpetuity, or does not purport to be for any definite period.	Rupees five for every hundred or part thereof of the market value of the property which is the subject matter of lease.
	(c) Where the lease is granted for a fine or premium or for money advanced in addition to rent reserved,-	
	(i) where the lease purports to be for a term not exceeding ten years.	The same duty as a conveyance (clause (1) of Article 20) for a market value equal to the amount or value of such fine or premium or advance as setforth in the lease, in addition to the duty which would have been payable on such lease if no fine or premium or advance has been paid or delivered.
	(ii) Where the lease purports to be with or without a renewal clause	Rupees five for every hundred or part thereof on the market value of the property which is the subject matter of lease:

	contingent or otherwise for a period in excess of ten years, or in perpetuity or does not purport to be for any definite period.	Provided that in any case when an agreement to lease is stamped with advalorem stamp required for a lease and a lease in pursuance of such agreement is subsequently executed the duty on such lease shall not exceed rupees fifteen.
	xx xx	xx
	Art. 34. Mortgage deed.-not being an agreement relating to Deposit of title deeds, pawn, pledge or hypothecation (No.6) Bottomry Bond (No.31), Mortgage of a Crop (No.35), Respondentia Bond (No.46), or Security Bond (No.47)-	
	(a) When possession of the property or any part of the property comprised in such deed is given by mortgagor or agreed to be given.	The same duty as conveyance (No.26) for a market value equal to the amount secured by such deed.
	(b) When possession is not given or agreed to be given as aforesaid.	Rupees three for every hundred rupees or part thereof for the amount secured by such deed subject to a maximum of rupees three lakhs.
	Explanation.- A mortgagor who gives to the mortgagee a power of attorney to collect rents, or a lease of the property mortgaged or part thereof is deemed to give possession thereof within the meaning of this Article.	
	(c) When a collateral or auxiliary or additional or substituted security, or by way of further assurance for the above mentioned purpose where the principal or primary security is duly stamped for every sum secured not exceeding Rs.1000 and for every Rs.1000 or part thereof, secured in excess of	Three rupees and fifty paise.

	Rs.1000.	
	Art. 39. Partition-Instrument of- as defined by sec.2(1)(k)	The same duty as a Bond (No.12) for the amount of the market value of the separated share of shares of the property subject to a maximum of rupees twenty five thousand.
xx	xx	xx
41	**Power of Attorney.-**	
	xx xx	
	(ea) When given to a promoter or developer by whatever name called for construction development on, or sale, or transfer (in any manner whatsoever) of, any immovable property.	The same duty as a conveyance under Article 20. Provided that where the agreement is executed between the same parties, in respect of same properties and is stamped in accordance with Article 5(f) and in furtheranceof such agreement if a power of attorney is subsequently executed the duty on such power of attorney shall be in accordance with clause (f) of this Article.
	(eb) When given to a person other than the father,mother, wife or husband, son or daughter in relation to the executant authorising such person to sell immoveable property.	Two rupees for every one hundred rupees or part thereof on the market value of the property which is the subject matter of power of attorney: Provided that the duty paid on such instrument is adjustable towards the duty payable on the instrument of sale or transfer executed subsequently in favour of either the attorney holder or

		any other person.".
	Art. 45 Release.- that is to say, any instrument (not being such a release as is provided for by section 24), where by a person renounces a claim upon another person or against any specified property:	
	(a) on the amount or value of the claim as set-forth in the release deed or on the average value of the claim in the vicinity, whichever is higher.	The same duty as a Bond (no.12) for such amount or value as set forth in the release deed or on the average value of the claim in the vicinity whichever is higher.
	(b) if the claim is for consideration.	The same duty as Conveyance (No.20) for market value equal to the amount, of the consideration.
	(c) Release of mortgage rights or lien.	Same duty as bond (no.12) subject to a maximum of rupees one hundred.
	Art. 48. Settlement.-	
	A. Instrument of (including a deed of dower)	The same duty as a conveyance (No.2) for a market value equal to the market value of the property which is the subject matter of settlement. Provided that, where an agreement to settle is stamped with the stamp required for an instrument of settlement, and an instrument of settlement in pursuance of such agreement is subsequently executed, the duty on such instrument shall not exceed three rupees.
	Exemption.	

	Deed of dower executed on the occasion of a marriage between Muhammadans. see also Trust (No.54).	
	B. Revocation of	The same duty as a Conveyance (No.20) for a sum equal to the amount or value of the property concerned in the instrument of revocation, but not exceeding two hundred rupees.
	Art. 52. Transfer- (Whether with or without consideration)-	
	(a) of debentures, being marketable securities, whether the debenture, is liable to duty or not;	One half of the duty payable on a Conveyance (No.20) for a consideration equal to the face amount of the debenture.

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1999

(1999ರ ವಿಧಾನಸಭಾ ವಿಧೇಯಕ ಸಂಖ್ಯೆ-5)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, -

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು 1999ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಬಾವಿಸತಕ್ಕದ್ದು.

2. 10ನೇ ಪ್ರಕರಣದ ತಿದ್ದುಪಡಿ :- ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) 10ನೇ ಪ್ರಕರಣದಲ್ಲಿ (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ).-

(1) ಪ್ರಾರಂಭದ ಪ್ಯಾರಾದಲ್ಲಿ, -

(ಎ) ಬಾಬು (i)ರಲ್ಲಿ, "ಶೇಕಡಾ ಐದು"ಎಂಬ ಪದಗಳಿಗೆ "ಶೇಕಡಾ ಮೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಬಾಬು (ii)ರಲ್ಲಿ "ಶೇಕಡಾ ಎಂಟು" ಎಂಬ ಪದಗಳಿಗೆ "ಶೇಕಡಾ ಆರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (ಬ) ಖಂಡದಲ್ಲಿ "ಶೇಕಡಾ ಐದು ಅಥವಾ ಸಂದರ್ಭಾನುಸಾರ ಶೇಕಡಾ ಎಂಟು" ಎಂಬ ಪದಗಳಿಗೆ ಶೇಕಡಾ ಮೂರು ಅಥವಾ ಸಂದರ್ಭಾನುಸಾರ ಶೇಕಡಾ ಆರು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. **ಅನುಸೂಚಿ ತಿದ್ದುಪಡಿ :-** ಮೂಲ ಅಧಿನಿಯಮದ ಅನುಸೂಚಿಯಲ್ಲಿ 'ಎ' ಭಾಗದಲ್ಲಿ,

(ಎ) 3ನೇ ಬಾಬಿನಲ್ಲಿ (1)ನೇ ಉಪಬಾಬು ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ವಾಹನಗಳ ಸರಕು ಸಹಿತ ತೂಕ

(ಬ)	1,000 ಕೆ.ಜಿ.ಗಳನ್ನು ಮೀರಿದ, ಆದರೆ 3,000 ಕೆ.ಜಿ.ಗಳನ್ನು ಮೀರದ್ದು	600-00
(ಸ)	1,000 ಕೆ.ಜಿ.ಗಳನ್ನು ಮೀರಿದ, ಆದರೆ 5,500 ಕೆ.ಜಿ.ಗಳನ್ನು ಮೀರದ್ದು	1,000-00
(ಡ)	5,500 ಕೆ.ಜಿ.ಗಳನ್ನು ಮೀರಿದ, ಆದರೆ 9,000 ಕೆ.ಜಿ.ಗಳನ್ನು ಮೀರದ್ದು	1,400-00
(ಇ)	9,000 ಕೆ.ಜಿ.ಗಳನ್ನು ಮೀರಿದ, ಆದರೆ 12,000 ಕೆ.ಜಿ.ಗಳನ್ನು ಮೀರದ್ದು	1,800-00
(ಎಫ್)	12,000 ಕೆ.ಜಿ.ಗಳನ್ನು ಮೀರಿದ, ಆದರೆ 15,000 ಕೆ.ಜಿ.ಗಳನ್ನು ಮೀರದ್ದು	2,000-00
(ಜಿ)	15,000 ಕೆ.ಜಿ.ಗಳನ್ನು ಮೀರಿದ, ಆದರೆ +15,000 ಕೆ.ಜಿ.ಗಳನ್ನು ಮೀರಿದ ಪ್ರತಿ	2,000-00 250-00 ಕೆ.ಜಿ.ಗಳಿಗೆ ಅಥವಾ ಅದರ ಭಾಗಕ್ಕೆ 75-00

(ಬ) 4ನೇ ಬಾಬಿನಲ್ಲಿ (4)ನೇ ಉಪಬಾಬಿನಲ್ಲಿ (ಎ) ಮತ್ತು (ಬ) ಖಂಡಗಳಲ್ಲಿ, (3)ನೇ ಅಂಕಣದಲ್ಲಿ "600" ಮತ್ತು "525" ಎಂಬ ಅಂಕಿಗಳಿಗೆ "700" ಮತ್ತು "625" ಎಂಬ ಅಂಕಿಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಸ) 7ನೇ ಬಾಬಿನಲ್ಲಿ (ಬ) ಖಂಡದಲ್ಲಿ, 3ನೇ ಅಂಕಣದಲ್ಲಿ "500" ಎಂಬ ಅಂಕಿಗಳಿಗೆ "1000" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಹನ್ನೆರಡು ಕೋಟಿ ರೂಪಾಯಿಗಳಷ್ಟು ಅಂದಾಜು ಒಟ್ಟು ನಷ್ಟ ಉಂಟಾಗುವುದು.

ಬಿ.ಎನ್. ಬಚ್ಚೇಗೌಡ,
ಸಾರಿಗ ಸಚಿವರು.

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) ಉದ್ಧೃತ ಭಾಗ.

* * * * * * * * *

10ನೇ ಪ್ರಕರಣ - ವಾಹನ ಪಡೆ ಒಡೆಯನ ಸಂದರ್ಭದಲ್ಲಿ ತೆರಿಗೆಯನ್ನು ವಿಧಿಸುವುದು ಇತ್ಯಾದಿ:- 3,6 ಮತ್ತು 7ನೇ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ವಾಹನ ಪಡೆಯ ಒಡೆಯನು ಒಡೆಯನಾಗಿರುವ ಸಾರ್ವಜನಿಕ ಸೇವಾ ವಾಹನಗಳ ಹಾಸಲು ಮತ್ತು ಸಾಗಣೆ ಬಾಡಿಗೆಗಳಿಂದ ಬಂದ ಒಟ್ಟು ಆದಾಯದ ಮೇಲೆ ಈ ಮುಂದಿನ ದರದಂತೆ ತೆರಿಗೆಯನ್ನು ವಿಧಿಸತಕ್ಕದ್ದು.

(i) ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 14) 2ನೇ ಪ್ರಕರಣದ (4)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಒಂದು ನಗರದ ನಗರ ಪರಿಮಿತಿಗಳೊಳಗೆ ಮತ್ತು ನಗರದ ಪರಿಮಿತಿಗಳಿಂದ ಇಪ್ಪತ್ತೈದು ಕಿ. ಮೀ. ತ್ರಿಜ್ಯದೊಳಗೆ ಪ್ರವರ್ತಿಸುವ ಸಾರ್ವಜನಿಕ ಸೇವಾ ವಾಹನಗಳ ಸಂಬಂಧದಲ್ಲಿ ಶೇಕಡಾ ಐದು ಮತ್ತು

(ii) ಇತರ ಪ್ರಕರಣಗಳಲ್ಲಿ ಶೇಕಡಾ ಎಂಟು -

(ಎ) * * * * * *

(ಬಿ) ಅಂಥ ಪ್ರಾರಂಭಿಕ ಘೋಷಣೆಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ತೆರಿಗೆ ನಿರ್ಧರಣೆ ಪ್ರಾಧಿಕಾರಿಯು ಅಂಥ ಘೋಷಣೆಯ ಆಧಾರದ ಮೇಲೆ ಈ ಪ್ರಕರಣದ (ಎ) ಖಂಡದ ಮೇರೆಗೆ ಸದರಿ ವರ್ಷಕ್ಕಾಗಿ ಘೋಷಿಸಿದ ಹಾಸಲುಗಳು ಮತ್ತು ಸಾಗಣೆಗಳ ರೂಪದಲ್ಲಿ ಬಂದ ಅಂದಾಜು ಆದಾಯದ ಶೇಕಡಾ ಐದರಷ್ಟನ್ನು ಅಥವಾ ಸಂದರ್ಭಾನುಸಾರ ಶೇಕಡಾ ಎಂಟರಷ್ಟನ್ನು ಅಂಥ ವಾಹನ ಪಡೆಯ ಒಡೆಯನು ತಾತ್ಕಾಲಿಕವಾಗಿ ಸಂದಾಯ ಮಾಡತಕ್ಕ ತೆರಿಗೆಯ ಮೊಬಲಗೆಂದು ನಿರ್ಧರಿಸತಕ್ಕದ್ದು ಮತ್ತು ವಾಹನ ಪಡೆಯ ಒಡೆಯನಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಆ ವರ್ಷಕ್ಕಾಗಿನ ತೆರಿಗೆಯ ತಾತ್ಕಾಲಿಕ ತೆರಿಗೆ ನಿರ್ಧರಣೆಯ ಪ್ರಮಾಣ ಪತ್ರವನ್ನು ಕೊಡುವ ಮೂಲಕ ಅದನ್ನು ತಿಳಿಸತಕ್ಕದ್ದು.

ಅನುಸೂಚಿ

ಭಾಗ 'ಎ'

(ಪ್ರಕರಣ 3(1)ನ್ನು ನೋಡಿ)

ಬಾಬು ಸಂಖ್ಯೆ	ವಾಹನಗಳ ವರ್ಗ	ತ್ರಿಆಯಂ ಟೈರುಗಳನ್ನು ಜೋಡಿಸಿರುವ ವಾಹನಗಳಿಗೆ ತ್ರೈಮಾಸಿಕ ತೆರಿಗೆ ರೂ.ಗಳಲ್ಲಿ
(1)	(2)	(3)
* *	* *	* * *
3.	ಸಂಚಾರಿ ಫಲಹಾರ ವಾಹನ, ಸಂಚಾರಿ ಗ್ರಂಥಾಲಯ ವಾಹನ, ಸಂಚಾರಿ ಕಾರ್ಯಾಗಾರ, ಸಂಚಾರಿ ಆಸ್ಪತ್ರೆ, ಕ್ಷಕಿರಣ ವಾಹನ, ಕ್ಯಾಷ್ ವಾಹನ, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ಬಳಸುವ ಕ್ಯಾಂವರ್ ವ್ಯಾನ್ ಸೇರಿದಂತೆ ಸರಕು ವಾಹನಗಳು.	
	(1) ವಾಹನಗಳ ಸರಕು ಸಹಿತ ತೂಕ	
	(ಎ) * * * *	
	(ಬಿ) 1000 ಕೆಜಿಗಳನ್ನು ಮೀರಿದ ಆದರೆ 3000 ಕೆಜಿಗಳನ್ನು ಮೀರದ್ದು	400-00
	(ಸಿ) 3000 ಕೆಜಿಗಳನ್ನು ಮೀರಿದ ಆದರೆ 5500 ಕೆಜಿಗಳನ್ನು ಮೀರದ್ದು	800-00
	(ಡಿ) 5500 ಕೆಜಿಗಳನ್ನು ಮೀರಿದ ಆದರೆ 9000 ಕೆಜಿಗಳನ್ನು ಮೀರದ್ದು	1,200-00
	(ಇ) 9000 ಕೆಜಿಗಳನ್ನು ಮೀರಿದ ಆದರೆ 12,000 ಕೆಜಿಗಳನ್ನು ಮೀರದ್ದು	1,600-00
	(ಎಫ್) 12,000 ಕೆಜಿಗಳನ್ನು ಮೀರಿದ ಆದರೆ 15,000 ಕೆಜಿಗಳನ್ನು ಮೀರದ್ದು	1,800-00
	(ಜಿ) 15,000 ಕೆಜಿಗಳನ್ನು ಮೀರಿದ + 15,000 ಕೆಜಿಗಳನ್ನು ಮೀರಿದ ಪ್ರತಿ 250 ಕೆಜಿಗಳಿಗೆ ಅಥವಾ ಅದರ ಭಾಗಕ್ಕೆ 75-00	1,800-00

4.	(1)	* *	* *
	(2)	* * *	* *
	(3)	* *	* *
	(4)	ಆರು ಜನ ಪ್ರಯಾಣಿಕರನ್ನು ಒಯ್ಯಲು ಅನುಮತಿಸಲಾದ ವಾಹನಗಳು (ಮೋಟಾರು ಕ್ಯಾಬ್‌ಗಳು ಮತ್ತು ಮ್ಯಾಕ್ಸಿ ಕ್ಯಾಬ್)	
	(ಎ)	ಆರು ಚದರ ಮೀಟರುಗಳನ್ನು ಮೀರದ ವಿಸ್ತೀರ್ಣವನ್ನು ಹೊಂದಿರುವುದು ಪ್ರತಿ ಚದರ ಮೀಟರಿಗೆ	600-00
	(ಜಿ)	ಆರು ಚದರ ಮೀಟರು ಮೀರಿದ ನೆಲ ವಿಸ್ತೀರ್ಣವನ್ನು ಹೊಂದಿರುವುದು, ಪ್ರತಿ ಚದರ ಮೀಟರಿಗೆ	525-00
		* **	* **
7.	(ಎ)	* *	* **
	(ಬಿ)	ಮೋಟಾರು ವಾಹನಗಳು (ಪ್ರವಾಸಿಗರನ್ನು ಕೊಂಡೊಯ್ಯುವ ಪ್ರವರ್ತಕರಿಗಾಗಿ ಅಖಿಲಭಾರತ ಪರ್ಮಿಟ್) ನಿಯಮಗಳು 1993ರ ಅಡಿಯಲ್ಲಿ ಮಂಜೂರು ಮಾಡಲಾದ ಪರ್ಮಿಟುಗಳನ್ನು ಹೊಂದಿರುವ, ಬಾಡಿಗೆಗಾಗಿ ಅಥವಾ ಸಂಭಾವನೆಗಾಗಿ ಓಡಿಸಲಾಗುವ ಹನ್ನೆರಡಕ್ಕಿಂತ ಹೆಚ್ಚು ಪ್ರಯಾಣಿಕರನ್ನು (ಚಾಲಕ ಮತ್ತು ನಿರ್ವಾಹಕ ಅಥವಾ ಅಟೆಂಡೆಂಟ್‌ನನ್ನು ಹೊರತುಪಡಿಸಿ) ಕೊಂಡೊಯ್ಯಲು ಅನುಮತಿಸಲಾದ ಮೋಟಾರು ವಾಹನಗಳು - ಪ್ರತಿ ಪ್ರಯಾಣಿಕರಿಗೆ.	500-00

ಕಾಸೂಸಂ. 7439, ಸ.ಶಾ.ಮು.ತುಮಕೂರು. 350 ಪುಸ್ತಕಗಳು ದಿ : 2-12-2000

(B) 025218

ಮುದ್ರಕರು : ಸಹಾಯಕ ನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ, ತುಮಕೂರು